ಬೇರು ನೀರು

ಅಮೆರಿಕದಲ್ಲಿ ನಮ್ಮ ಬದುಕು



ಸಂಪಾದಕರು :

ಗುರುಪ್ರಸಾದ್ ಕಾಗಿನೆಲೆ

ತ್ರಿವೇಣಿ ಶ್ರೀನಿವಾಸರಾವ್

ಜ್ಯೋತಿ ಮಹಾದೇವ್

ಕನ್ನಡ ಸಾಹಿತ್ಯ ರಂಗ, ಯುಎಸ್‌ಎ

SREEKANTHA BABU
June 2013.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಕನ್ನಡ ಸಾಹಿತ್ಯ ರಂಗ ಪುಸ್ತಕಮಾಲೆ – 6

ಬೇರು ಸೂರು

ಅಮೆರಿಕದಲ್ಲಿ ನಮ್ಮ ಬದುಕು

ಪ್ರಧಾನ ಸಂಪಾದಕ

ಗುರುಪ್ರಸಾದ್ ಕಾಗಿನೆಲೆ

ಸಹ ಸಂಪಾದಕರು

ತ್ರಿವೇಣಿ ಶ್ರೀನಿವಾಸರಾವ್

ಜ್ಯೋತಿ ಮಹಾದೇವ್

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ
3ನೇ ಬ್ಲಾಕ್ ಜಯನಗರ,
ಬೆಂಗಳೂರು–560 011.

ಸಹಯೋಗ:
ಕನ್ನಡ ಸಾಹಿತ್ಯ ರಂಗ
ನ್ಯೂ ಜೆರ್ಸಿ, ಯು.ಎಸ್.ಎ.

BERU SOORU - a collection of Kannada essays, edited by Guruprasad Kaginele (6th book in the series of Kannada Saahithya Ranga Pustakamale); published by Vasantha Prakashana, No. 360, 10th 'B' Main, Jayanagar 3rd Block, Bangalore-560 011, India (Telephone : 080-22443996, e-mail: vasantha_prakashana@rediffmail.com). in association with Kannada Saahitya Ranga, Inc., No. 194, Schanck Road, Freehold, NJ 07728, USA.

First published: 2013

Paper used: 70 GSM Maplitho

Pages: xviii+496 = 514

Price: ₹ 380


ಪ್ರಕಾಶನ:
ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ,
ಜಯನಗರ 3ನೇ ಬ್ಲಾಕ್,
ಬೆಂಗಳೂರು – 560 011.

ಸಾಹಿತ್ಯ ಸಲಹೆಗಾರರು:
ಎಸ್. ದಿವಾಕರ್

ಸಹಯೋಗ:
ಕನ್ನಡ ಸಾಹಿತ್ಯ ರಂಗ
ನಂ. 194, ಶ್ಯಾಂಕ್ ರೋಡ್,
ಫ್ರೀಹೋಲ್ಡ್, ನ್ಯೂಜೆರ್ಸಿ, 07728, ಯು.ಎಸ್.ಎ.

ಮುಖಪುಟ ವಿನ್ಯಾಸ:
ಅಪಾರ (ರಘು), ಬೆಂಗಳೂರು

ಮುದ್ರಣ:
ಶ್ರೀರಂಗ ಪ್ರಿಂಟರ್ಸ್ ಪ್ರೈ. ಲಿ., ಬೆಂಗಳೂರು



ಗೌರವ ಸಮರ್ಪಣೆ

ಸುಮಾರು ಅರವತ್ತು ವರ್ಷಗಳ ಕಾಲ ಸಂಗೀತ ಸರಸ್ವತಿಯ
ಸೇವೆ ಮಾಡಿ ಧನ್ಯಲೋಕ ಸೇರಿದ

ಎನ್.ಎಸ್. ರಾಮನ್

ನನ್ನ ಅಣ್ಣ ಹಾಗೂ ನನ್ನ ಪ್ರೀತಿಯ ಗುರು

ಯಾವ ಬಿರುದು, ಪ್ರಶಸ್ತಿಗಳಿಗಾಗಿ ಆಸೆ ಪಡದೆ, ಸದಾ ಕಾಲ ನಗುಮುಖದಿಂದ ಎಲ್ಲರೊಡನೆ ಸಲಿಗೆಯಿಂದ ಬೆರೆಯುತ್ತಾ, ಸಾರ್ಥಕ ಜೀವನ ಸಾಗಿಸಿದ ಇವರ ಸವಿ ನೆನಪಿನ ಕಾಣಿಕೆಯಾಗಿ ಈ ಪುಸ್ತಕ ನಿಮ್ಮ ಕೈ ಸೇರಿದೆ. ಆದರದಿಂದ ಸ್ವೀಕರಿಸುವಿರೆಂದು ನಂಬಿದ್ದೇನೆ.

ವೃತ್ತಿಯಲ್ಲಿ ನಾನೊಬ್ಬ ಇಂಜಿನಿಯರ್. ಈಗ ನಿವೃತ್ತ. ನನಗೆ ಸಂಗೀತ, ಸಾಹಿತ್ಯಗಳಲ್ಲಿ ಅಭಿರುಚಿ ಉಂಟಾಗಲು ಮಾರ್ಗದರ್ಶನ ಮಾಡಿದವರು ನನ್ನ ಅಣ್ಣ ಹಾಗೂ ಗುರು ರಾಮನ್. ಅವರ ಒಡನಾಟದಿಂದ ಅನೇಕ ವಿದ್ವಾಂಸರ, ಸಾಹಿತಿಗಳ ಮತ್ತು ಹಿರಿಯರ ಪರಿಚಯವಾಗಿ ನನ್ನ ಬಾಳು ಹಸನಾಗಿದೆ. ಈ ಪುಸ್ತಕ ನನ್ನ ಅಣ್ಣನ ಪ್ರೀತಿಗೆ ನಾನು ಸಲ್ಲಿಸುತ್ತಿರುವ ಒಂದು ಕಿರು ಕಾಣಿಕೆ.

ವತ್ಸ ಕುಮಾರ್

ಕೃತಜ್ಞತೆಗಳು

ನಮ್ಮ ಈ ಸಂಕಲನವನ್ನು ಪ್ರಾಯೋಜಿಸಿದ

ವತ್ಸ ಕುಮಾರ್ ಅವರಿಗೆ

ಕನ್ನಡ ಸಾಹಿತ್ಯ ರಂಗದ ಹೃತ್ಪೂರ್ವಕ ಕೃತಜ್ಞತೆಗಳು.

ಸಂಪಾದಕ ಮಂಡಲಿ

ಎಚ್. ವೈ. ರಾಜಗೋಪಾಲ್
ಎಂ. ಎಸ್. ನಟರಾಜ
ನಾಗ ಐತಾಳ (ಆಹಿತಾನಲ)
ನಳಿನಿ ಮೈಯ

ಸಂಪಾದಕ ಸಮಿತಿ

ಗುರುಪ್ರಸಾದ್ ಕಾಗಿನೆಲೆ
ತ್ರಿವೇಣಿ ಶ್ರೀನಿವಾಸರಾವ್
ಜ್ಯೋತಿ ಮಹಾದೇವ್

ಆರನೆಯ ವಸಂತ ಸಾಹಿತ್ಯೋತ್ಸವ,
ಮೇ ೧೮–೧೯, ೨೦೧೩
ಹ್ಯೂಸ್ಟನ್, ಟೆಕ್ಸಾಸ್

ಅನುಕ್ರಮಣಿಕೆ

ಅನುಬಂಧಗಳು

ಹತ್ತು ವರುಷ...

‘ಕನ್ನಡ ಸಾಹಿತ್ಯ ರಂಗ’ದ ಕಲ್ಪನೆ ನಮ್ಮ ಮನಸ್ಸಿನಲ್ಲಿ ಮೂಡಿ, ಅದು ಅಸ್ತಿತ್ವಕ್ಕೆ ಬಂದು ಹತ್ತು ವರ್ಷಗಳಾದವು. ಒಂದು ಸಂಸ್ಥೆಯ ಜೀವಿತದಲ್ಲಿ ಹತ್ತು ವರ್ಷ ಏನೂ ಹೆಚ್ಚಲ್ಲ, ಆದರೆ ನಮಗೆ ಈ ಮೊದಲ ಹತ್ತು ವರ್ಷಗಳು ಬಹು ಮುಖ್ಯವಾದ ವರ್ಷಗಳಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ ಇಂಥ ಒಂದು ಸಂಸ್ಥೆ ಅಮೆರಿಕದಲ್ಲಿ ಸಾಧ್ಯ ಎಂಬುದನ್ನು ಈ ವರ್ಷಗಳು ಸ್ಪಷ್ಟವಾಗಿ ತೋರಿಸಿವೆ.

ಇಲ್ಲಿ, ಅಮೆರಿಕದಲ್ಲಿ, ನಮ್ಮ ಹೊರ ಜಗತ್ತಿನೊಡನೆ ನಮ್ಮ ಸಂವಹನವೆಲ್ಲ ಇಂಗ್ಲಿಷಿನಲ್ಲಿಯೇ ನಡೆಯುತ್ತಿರುವಾಗ, ಇಲ್ಲಿಯೇ ಹುಟ್ಟಿ ಬೆಳೆದ ನಮ್ಮ ಮಕ್ಕಳಿಗೆ ಕನ್ನಡದ ನಿಕಟ ಸಂಪರ್ಕ, ಅದನ್ನು ಬಳಸುವ ಸಾಮರ್ಥ್ಯ ಏನೂ ಇಲ್ಲದೇಹೋಗುವ ಸಂಭವವೇ ಹೆಚ್ಚಾಗಿರುವಾಗ, ನಾವೇಕೆ ಕನ್ನಡಕ್ಕೆ ಅಂಟಿಕೊಂಡಿರಬೇಕು ಎಂಬ ಪ್ರಶ್ನೆಯನ್ನು ಹಲವರು ಕೇಳಬಹುದು. ಆದರೆ ಅಂಥ ಪ್ರಶ್ನೆಯನ್ನು ಕೇಳದೆ, ಅದಕ್ಕೆ ಬದಲು ಕನ್ನಡದ ಬಾಂಧವ್ಯ ಉಳಿಸಿಕೊಳ್ಳುವುದರಲ್ಲಿ ಒಂದು ದೊಡ್ಡ ಪ್ರಯೋಜನವನ್ನು ಕಾಣುವ ಜನ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಎಂಬುದು ಕನ್ನಡ ಸಾಹಿತ್ಯ ರಂಗಕ್ಕೆ ಸಿಕ್ಕಿರುವ ಬೆಂಬಲದಿಂದ ರುಜುವಾತಾಗಿದೆ.

ಈ ಕಳೆದ ಹತ್ತು ವರ್ಷಗಳಲ್ಲಿ ಕಸಾರಂ ಐದು ವಸಂತ ಸಾಹಿತ್ಯೋತ್ಸವಗಳನ್ನು ನಡೆಸಿ, ಈಗ ಆರನೆಯದನ್ನು ನಡೆಸುತ್ತಿದೆ. ಪ್ರತಿಬಾರಿಯೂ ಅಮೆರಿಕದ ಕನ್ನಡಿಗರ ಬರಹಗಳನ್ನೊಳಗೊಂಡ ಪುಸ್ತಕಗಳನ್ನು ಹೊರತಂದಿದೆ. ಇವುಗಳಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೆಲವೇ ವಿನಾಯಿತಿಗಳ ಹೊರತು, ಎಲ್ಲ ಲೇಖನಗಳೂ ರಚನೆಗಳೂ ಇಲ್ಲಿನವರೇ ಬರೆದಿರುವುದು. ಇಲ್ಲಿನ ಕನ್ನಡಿಗರನ್ನು ಬರೆಯಲು ಉತ್ತೇಜಿಸುವುದು, ಅವರಿಗೊಂದು ಸುಭದ್ರವಾದ, ಸತ್ವಯುತವಾದ ವೇದಿಕೆಯನ್ನು ಕಲ್ಪಿಸುವುದು ನಮ್ಮ ರಂಗದ ಮುಖ್ಯ ಉದ್ದೇಶಗಳಲ್ಲಿ ಒಂದು. ಅನೇಕರು ತಮ್ಮ ಮೊಟ್ಟಮೊದಲ ಲೇಖನಗಳನ್ನು ನಮ್ಮ ಪುಸ್ತಕಗಳಲ್ಲಿ ಪ್ರಕಟಿಸಿ, ನಮ್ಮ ವಸಂತೋತ್ಸವದ ವೇದಿಕೆಯ ಮೇಲೆ ಓದಿ ಸಾರ್ಥಕತೆಯ ಅನುಭವದಲ್ಲಿ ಹಿಗ್ಗಿದ್ದಾರೆ. ಅವರ ಹಿಗ್ಗು ನಮ್ಮದೂ ಆಗಿದೆ.

ಅಮೆರಿಕಾದಲ್ಲಿ ನಮ್ಮ ಬದುಕನ್ನು ಕುರಿತ ಈ ಪುಸ್ತಕ ನಮ್ಮ ಇಲ್ಲಿನ ವಲಸೆಗಾರ ಜೀವನದ ಹಲವು ಮುಖಗಳನ್ನು ತೋರಿಸುತ್ತದೆ. ಒಂದು ಹೊಸ ಸಮಾಜದ ಅವಶ್ಯಕತೆಗಳು, ಅದು ಅನುಭವಿಸುವ ಅಡ್ಡಿ ಆತಂಕಗಳು, ಅದು ಕಂಡುಕೊಳ್ಳುವ

ಪರಿಹಾರಗಳು – ಇವನ್ನೆಲ್ಲ ಇಲ್ಲಿನ ಲೇಖನಗಳು ಪ್ರತಿಫಲಿಸಿವೆ. ಮನೆಯ ಗೀಳು (nostalgia) ಎಂಬುದು ವಲಸೆಗಾರರಿಗೆ ತಪ್ಪಿದ್ದಲ್ಲ; ಅದನ್ನು ಹೀಗಳೆಯುವುದಾಗಲೀ ಅದು ಇಲ್ಲವೇ ಇಲ್ಲ ಎಂಬಂತೆ ಸೋಗುಹಾಕುವುದಾಗಲೀ ಸರಿಯಲ್ಲ. ಆದರೆ ಅದೊಂದೇ ಭಾವನೆಯಲ್ಲಿ ತೊಳಲಾಡುತ್ತ, ಬಿಟ್ಟು ಬಂದ ಪರಿಚಿತ ಸಮಾಜ ಸಂಸ್ಕೃತಿಗಾಗಿ ಹಂಬಲಿಸುತ್ತ, ಇಲ್ಲಿನ ಪ್ರಪಂಚದಿಂದ ದೂರವಾಗುವ ಪ್ರವೃತ್ತಿಯೂ ಸರಿಯಲ್ಲ. ನಮ್ಮ ಕನ್ನಡಿಗ ಸಮಾಜ ಬಹಳ ಸಮರ್ಥವಾಗಿ ಇಲ್ಲಿನ ಸಮಾಜಕ್ಕೆ ಹೊಂದಿಕೊಳ್ಳುತ್ತಿರುವಾಗಲೇ ತನ್ನ ಮೂಲ ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಂಡಿದೆ ಎಂಬುದನ್ನು ಇಲ್ಲಿನ ಲೇಖನಗಳು ಸ್ಪಷ್ಟವಾಗಿ ತಿಳಿಸುತ್ತವೆ. ಮುಂದಿನ ತಲೆಮಾರುಗಳಲ್ಲಿ ಭಾರತೀಯ ಸಂಸ್ಕೃತಿಯ ಅಂಶ ಕಡಿಮೆಯಾಗುತ್ತ ಹೋಗಬಹುದು ಎಂಬ ಅರಿವೂ ನಮಗಿದೆ.

ವಲಸೆಗಾರ ಜೀವನದ ಬಗ್ಗೆ ಇತರೆಡೆಗಳಲ್ಲಿ ಕೆಲವು ಲೇಖನಗಳು ಇದುವರೆಗೆ ಬಂದಿವೆ, ನಿಜ. ಆದರೆ, ಈ ರೀತಿ ಅನೇಕರ ಅನುಭವಗಳನ್ನು ಸಮಗ್ರವಾಗಿ ತೋರುವ ಸಂಕಲನ ಇದುವರೆಗೆ ಬಂದಿಲ್ಲ, ಇದೇ ಮೊದಲು ಎಂದು ನಮ್ಮ ಅನಿಸಿಕೆ. ಇದು ಸಾಮಾನ್ಯ ಓದುಗರಿಗೆ ಮಾತ್ರವಲ್ಲದೆ, ಇತಿಹಾಸಜ್ಞರಿಗೂ, ಮಾನವಶಾಸ್ತ್ರಜ್ಞರಿಗೂ ಒಂದಲ್ಲ ಒಂದು ರೀತಿಯಲ್ಲಿ ಉಪಯುಕ್ತವಾಗಬಹುದು ಎಂಬುದು ನಮ್ಮ ನಂಬಿಕೆ.

ನಮ್ಮ ಇತರ ಪುಸ್ತಕಗಳನ್ನು ಪ್ರೀತಿಯಿಂದ ಬರಮಾಡಿಕೊಂಡಿರುವ ಕನ್ನಡಿಗರು ಇದನ್ನೂ ಹಾಗೆಯೇ ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

– ಎಚ್.ವೈ. ರಾಜಗೋಪಾಲ್

ಅಧ್ಯಕ್ಷ, ಕಸಾರಂ ಆಡಳಿತ ಮಂಡಲಿ

ಬೆರಗು ದೈನಿಕವಾಗುವ ರೂಪಾಂತರ – ನಮ್ಮ ಮಾತು

ಅಮೆರಿಕಾದ ಏಕೈಕ ರಾಷ್ಟ್ರೀಯ ಕನ್ನಡ ಸಾಹಿತ್ಯ ಸಂಸ್ಥೆ, 'ಕನ್ನಡ ಸಾಹಿತ್ಯ ರಂಗ'ದ 2013ನೆಯ ವರ್ಷದ ಪ್ರಕಟಣೆ 'ಬೇರು ಸೂರು – ಅಮೆರಿಕಾದಲ್ಲಿ ನಮ್ಮ ಬದುಕು' ಎಂಬ ಪುಸ್ತಕವನ್ನು ನಿಮ್ಮ ಮುಂದಿಡುತ್ತಿದ್ದೇವೆ. ಕನ್ನಡ ಸಾಹಿತ್ಯ ರಂಗದ ದಶಮಾನೋತ್ಸವ ಎಂಬುದು ಕೂಡ ಈ ವರ್ಷದ ಹೆಗ್ಗಳಿಕೆಯ ಮಾತಾಗಿದೆ. 2003ರಲ್ಲಿ ಆರಂಭವಾದ ಕನ್ನಡ ಸಾಹಿತ್ಯ ರಂಗದ ಆಶಯ ಇರುವುದು ಅಮೆರಿಕೆಯಲ್ಲಿ ಕನ್ನಡದ ಓದನ್ನು ಮತ್ತು ಬರಹವನ್ನು ಉತ್ತೇಜಿಸುವುದು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ರಂಗದಿಂದಾಗಿರುವ ಕೆಲಸಗಳನ್ನು ನಮ್ಮವರೇ ಆದ ರಾಜಗೋಪಾಲ್ ಅವರು ಬೇರೊಂದು ಲೇಖನದಲ್ಲಿ ಬರೆದಿದ್ದಾರೆ. ಪ್ರತಿ ಎರಡು ವರ್ಷಕ್ಕೊಮ್ಮೆ ಆಗುವ ಸಮ್ಮೇಳನದ ಜತೆಗೆ ಒಂದು ಪುಸ್ತಕ ಕೂಡ ಪ್ರಕಟವಾಗುತ್ತದೆ. ಅದೇ ನಿಟ್ಟಿನಲ್ಲಿ ಈ ಪುಸ್ತಕವೂ ಬೆಳಕು ಕಾಣುತ್ತಿದೆ.

ಈ ಪುಸ್ತಕದಲ್ಲಿ ವಿವಿಧ ಹಿನ್ನೆಲೆಯ ಲೇಖಕರು ವಿವಿಧ ಸ್ತರದಲ್ಲಿ ಅಮೆರಿಕಾ ಹೇಗೆ ಅವರಿಗೆ ಕಾಣಿಸಿದೆ ಎಂಬುದನ್ನು ದಾಖಲಿಸಿದ್ದಾರೆ. ಇಲ್ಲಿ ದಶಕಗಳ ಹಿಂದೆ ಬಂದ ಹಿರಿಯರಿದ್ದಾರೆ. ಇತ್ತೀಚೆಗೆ ಬಂದ ಕಿರಿಯರಿದ್ದಾರೆ. ವೃತ್ತಿಪರರಿದ್ದಾರೆ, ಗೃಹಿಣಿಯರಿದ್ದಾರೆ, ವೈದ್ಯರುಗಳಿದ್ದಾರೆ, ಉದ್ಯೋಗಪತಿಗಳಿದ್ದಾರೆ, ಶಿಕ್ಷಣತಜ್ಞರಿದ್ದಾರೆ. ಕೆಲವರನ್ನು ಹೊರತುಪಡಿಸಿ ಇಲ್ಲಿ ಎಲ್ಲರಿಗೂ ಅಮೆರಿಕಾ ಕರ್ಮಭೂಮಿ ಎಂಬುದು ಗಮನಿಸಬೇಕಾದ ಅಂಶ. ಹೀಗೆ ಕೆಲಸದ ಮೂಲಕ ಅನಾವರಣಗೊಳ್ಳುವ ಈ ಪ್ರಪಂಚದ ಹೊರಗಿರುವ ಕಲಾಪ್ರಕಾರಗಳೆಲ್ಲವೂ (ಸಾಹಿತ್ಯ, ಸಂಗೀತ, ರಂಗಭೂಮಿ, ಚಿತ್ರಕಲೆ – ಯಾವುದೇ ಇರಲಿ) ಇಲ್ಲಿರುವವರೆಲ್ಲರಿಗೂ ಹವ್ಯಾಸವಾಗಿಯೇ ಆರಂಭವಾಗುವುದು. ನಂತರದ ಬೆಳವಣಿಗೆಗೆ ಅಮೆರಿಕಾ ವೇದಿಕೆ, ಸ್ಫೂರ್ತಿ ಮತ್ತು ರೂಪಕ.

ಅಮೆರಿಕಾ ಪ್ರತಿಯೊಬ್ಬ ವಲಸೆಗಾರರಿಗೂ ಕೊನೆಯ ತಾಣ. ಭಾರತದಿಂದ ಫಿಜಿಯವರೆಗೆ ಬಹಳ ದೇಶಗಳಿಂದ ಜನ ಅಮೆರಿಕಾಕ್ಕೆ ವಲಸೆ ಬಂದಿದ್ದಾರೆ. ಹಾಗೆ ಬಂದ ಮೊದಲ ಸಂತತಿ ತಾವು ತಮ್ಮ ಜೀವನದಲ್ಲಿ ಗಳಿಸಿದ ಅತ್ಯಮೂಲ್ಯ ಆಸ್ತಿಯಾದ ತಮ್ಮ ಮಕ್ಕಳು ಮತ್ತು ಆ ಮೂಲಕ ಮುಂದಿನ ಸಂತತಿಯನ್ನೆಲ್ಲ ಅಮೆರಿಕಾದ ಮಡಿಲಲ್ಲಿ ಬಾಳು ಹಸನು ಮಾಡಿಕೊಳ್ಳುತ್ತಾರೆ, ಹಸನು ಮಾಡಿಕೊಳ್ಳಬೇಕು ಎಂಬ ಆಶಯದಿಂದ ಬಿಟ್ಟುಹೋಗುತ್ತಾರೆ. ಮೊದಲ ಪೀಳಿಗೆ ಎರಡು ಸೂಟ್‌ಕೇಸ್ ಹಿಡಿದುಕೊಂಡು ಇಲ್ಲಿಗೆ ಬಂದು ಇಲ್ಲಿ ಮನೆ, ಮಠ ಕಟ್ಟಿಕೊಂಡು ಇಲ್ಲಿ ಸರ್ವಸ್ವವನ್ನೂ ಉಳಿಸಿ, ಅಳಿದು ಹೋಗುವುದು ಒಂದು ವಿಸ್ಮಯದ ಸಂಗತಿ.

ಕೇವಲ ಒಂದು ಕೆಲಸವನ್ನು ಹುಡುಕಿಕೊಂಡು ಬಂದು ಈ ದೇಶವನ್ನೇ ನಮ್ಮ ಸೂರಾಗಿ ಕಟ್ಟಿಕೊಳ್ಳುವ ಈ ಕ್ರಿಯೆಯಲ್ಲಿ ಇಲ್ಲಿರುವ ವಲಸಿಗರ ಬದುಕು ಅರಳುತ್ತದೆ. ಆದ್ದರಿಂದ ನಮ್ಮ ಅನುಭವಗಳು ಕೇವಲ ನಮ್ಮ ವೃತ್ತಿ ತಂದುಕೊಟ್ಟದ್ದು ಮಾತ್ರ ಅಲ್ಲ. ನಮ್ಮ ವಯಸ್ಕ ಬದುಕಿನ ಬಹಳಷ್ಟು ಸಮಯವನ್ನು ನಮ್ಮ ನಮ್ಮ ಕೆಲಸಗಳಲ್ಲಿ ಕಳೆಯುವ ನಾವು, ಎಲ್ಲಿ ವೃತ್ತಿಯನ್ನು ಕಂಡುಕೊಳ್ಳುತ್ತೀವೋ ಅಲ್ಲಿಯೇ ಬದುಕನ್ನೂ ಕಟ್ಟಿಕೊಳ್ಳುತ್ತೇವೆ. ಹಾಗಾಗಿ ಇದೇ ನಮ್ಮ ಬದುಕು.

ಇಲ್ಲಿನ ಲೇಖಕರಿಗೆ ಅಮೆರಿಕ ಕಾಣಿಸುವ ವಿಸ್ಮಯಗಳು ಹಲವು. ಅಮೆರಿಕಾಕ್ಕೆ ಬರುವುದೇ ಬೆರಗಾಗಿ ಕೆಲವರಿಗೆ ಕಾಣಿಸಿದ್ದರೆ, ಇಲ್ಲಿ ಮಕ್ಕಳನ್ನು ಬೆಳೆಸುವುದು, ದೇವಸ್ಥಾನ ಕಟ್ಟಿಸುವುದು–ನಡೆಸುವುದು, ಸಂಸ್ಕೃತ–ಕನ್ನಡಗಳ ಪಾಠ ಮಾಡುವುದು, ಸಂಗೀತ ಶಾಲೆಗಳನ್ನೂ ಕಾರ್ಯಕ್ರಮಗಳನ್ನೂ ನಡೆಸುವುದು, ವಲಸೆಗಾರ ಭಾರತೀಯರ ಸಂಘ ಕಟ್ಟುವುದು, ಉದ್ಯಮಿಯಾಗುವುದು, ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪನ, ನಾಟಕ ಮಾಡಿಸುವುದು, ಇಲ್ಲಿನ ವೈದ್ಯಪದ್ಧತಿ, ಗೃಹಿಣಿಯಾಗಿ ತಮ್ಮದೇ ಅಸ್ತಿತ್ವವನ್ನು ಕಂಡುಕೊಳ್ಳುವುದು, ಅಲ್ಲಲ್ಲಿ ಕಾಣುವ ಜನಾಂಗದ್ವೇಷ– ಎಲ್ಲವೂ ಹೊಸನೆಲದಲ್ಲಿ ಹೊಸದಾಗಿಯೇ ಕಾಣಿಸುತ್ತದೆ. ಇದು ಎಲ್ಲಿದ್ದರೂ ಆಗುವ ಅನುಭವವೂ ಅಲ್ಲವೇ? ಎಲ್ಲಿದ್ದರೂ ಕಾಲದ ಪ್ರವಾಹದಲ್ಲಿ ನಮಗೊದಗುವ ಈ ಬೆರಗುಗಳು ಬದುಕು ಮೂಡಿಸುವ ಬೆರಗಲ್ಲವೇ? ಅಮೆರಿಕಾ ಕಾಣಿಸಿದ ಬೆರಗು ಮಾತ್ರವೇ? ಈ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳುವುದು ಸಾಧುವೇ ಆದರೂ, ಇಲ್ಲಿ ಜೀವಿಸಿರುವುದರಿಂದ ಮಾತ್ರ ನಮಗೆ ಇದನ್ನು ಬರೆಯಲು ಸಾಧ್ಯವಾಗಿದೆ. ಬೆರಗು ದೈನಿಕವಾಗುವ ರೂಪಾಂತರ ಕ್ರಿಯೆ ಅಮೆರಿಕಾ ನಮ್ಮೆಲ್ಲರಿಗೆ ಕಲಿಸುವ ದೊಡ್ಡ ಪಾಠ. ಸೂಕ್ಷ್ಮವಾಗಿ ಗಮನಿಸಿದಲ್ಲಿ ಇಲ್ಲಿನ ಬಹುತೇಕ ಲೇಖನಗಳಲ್ಲಿ ಈ ಕ್ರಿಯೆ ಪಕ್ಕಾಗಿ ಹಾಸುಹೊಕ್ಕಿರುವುದು ಕಾಣುತ್ತದೆ.

ಇಲ್ಲಿ ಕೆಲವು ಹಿರಿಯರು ಬರೆದಿರುವ ಅವರ ಸಮಗ್ರ ಆತ್ಮಚರಿತ್ರೆಯಂಥ ಲೇಖನಗಳು ಬಹಳ ಕುತೂಹಲಕಾರಿಯಾಗಿವೆ. ನಾಲ್ಕು ದಶಕಗಳ ಹಿಂದೆ ಇಲ್ಲಿ ಬಂದದ್ದು, ಮೊದಲು ಸಂಸಾರ, ಮಕ್ಕಳ ಓದು ಇವೆಲ್ಲದರ ಕಡೆ ಗಮನ. ನಂತರ ಸಾಂಘಿಕ ಚಟುವಟಿಕೆಗಳು. ಅವರ ಇಲ್ಲಿನ ಸಾಂಘಿಕ ಚಟುವಟಿಕೆಗಳು ವಾರಾಂತ್ಯದ ಪಾರ್ಟಿಗಳಿಂದ ಹಿಡಿದು ನೆಲಮಾಳಿಗೆಯ ಸಾಹಿತ್ಯ, ಸಂಗೀತದ ಚರ್ಚೆಗೆ ಮುಂದುವರೆದು, ಉತ್ತರ ಅಮೆರಿಕಾದಲ್ಲಿನ ಮೊದಲ ದೇವಸ್ಥಾನವನ್ನು ಕಟ್ಟಿ, ಅಕ್ಕ–ನಾವಿಕದಂತಹ ಸಂಸ್ಥೆಗಳನ್ನು ಕಟ್ಟುವವರೆಗೆ, ಎರಡೆರಡು ವಿಶ್ವಕನ್ನಡ ಸಮ್ಮೇಳನಗಳು ನಡೆಯುವಷ್ಟು ವಿಸ್ತಾರವಾಗಿ ಬೆಳೆದಿರುವುದನ್ನು ಗಮನಿಸಿದಾಗ ಉಭಯದೇಶಗಳ ಬದಲಾದ, ಬದಲಾಗುತ್ತಿರುವ ರಾಜಕೀಯ ಮತ್ತು ಸಾಂಸ್ಕೃತಿಕ ಆದ್ಯತೆ ಮತ್ತು ಅವುಗಳ ಪೂರೈಕೆಗಳ ಪರಿಚಯವಾಗುತ್ತದೆ. ಕಾಲಾನುಕ್ರಮಣಿಕೆಯಲ್ಲಿ ಈ ಲೇಖನಗಳನ್ನು ಓದಿಕೊಂಡು ಬಂದಲ್ಲಿ ವಲಸೆಗಾರರಿಗೆ 'ಕನ್ನಡ' ಎಂಬುದು ಭಾಷೆಯಿಂದ

ಪ್ರಜ್ಞೆಯಾಗುವುದು, ವೈಯಕ್ತಿಕ ನೆಲೆಯಿಂದ ಸಾಂಘಿಕವಾಗುವುದು, ಆ ದೆಸೆಯಿಂದ ಭೌಗೋಳಿಕ ಗೆರೆಗಳನ್ನು ಅಳಿಸಿ ನಿಜವಾದ 'ಡಯಸ್ಪೊರ'ವಾಗುವತ್ತ ಹೆಜ್ಜೆ ಹಾಕಿರುವುದನ್ನೂ ನಾವು ಕಾಣಬಹುದು. ಕನ್ನಡ ಡಯಾಸ್ಪೊರ ಬೆಳೆದಿರುವ ಈ ಮುಖ್ಯ ಕಾಲಘಟ್ಟದಲ್ಲಿ ವಲಸಿಗರು ಅಮೆರಿಕಾ ಎಂಬ ನಾಡಿನಲ್ಲಿ ಕನ್ನಡ ಎಂಬ ಪ್ರಜ್ಞೆಯನ್ನು ಬೆಳೆಸಿದ ಬಗೆ ಮುಂದೊಂದು ದಿನ ಆಸಕ್ತರಿಗೆ ಅಧ್ಯಯನಕ್ಕೆ ವಸ್ತುವೂ ಆಗಬಹುದು. ಅಂತೆಯೇ, ಈ ಅನುಭವ ಕಥನಗಳು ಕನ್ನಡಿಗರ ಲೇಖನಿಯಿಂದ ಬಂದ ಮಾತ್ರಕ್ಕೆ ಕನ್ನಡಿಗರಿಗೇ ಅನನ್ಯವಾಗಿರಬೇಕಾದ್ದಿಲ್ಲ. ಭಾರತದ ಯಾವುದೇ ವಲಸಿಗರಿಗೆ ಆಗಬಹುದಾದ, ಆಗಿರಬಹುದಾದ ಭಾವ-ಚಿಂತನ-ಸ್ಫುರಣಗಳಿಗೆ ಇಲ್ಲಿ ಅಕ್ಷರರೂಪ ಒದಗಿದೆಯಷ್ಟೇ.

ಅಷ್ಟೇ ಮುಖ್ಯವಾದ ಗ್ರಹೀತವೆಂದರೆ, ಇಲ್ಲಿನ ಲೇಖನಗಳಿಗೆ ಸಮಕಾಲೀನ ಕನ್ನಡದ ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರಜ್ಞೆಯ ಹೊರೆ ಅಥವಾ ಹಂಗಿಲ್ಲ. ಇದ್ದರೂ ಅಂತರ್ಜಾಲದ ಜಾಲತಾಣಗಳು, ಪತ್ರಿಕೆಗಳ ಲೇಖನಗಳು ಪೂರೈಸುವ ಮೇಲ್ಪದರದ ಅರಿವು ಮಾತ್ರ ಇರಬಹುದು. ಕರ್ನಾಟಕದಲ್ಲಿರುವ ಕನ್ನಡಿಗರ ಸ್ಥಿತಿಯೂ ಇದಕ್ಕಿಂತ ಬಹಳ ಹೊರತಾಗಿಲ್ಲ ಎಂಬ ಮಾತುಗಳನ್ನು ಕೇಳಿದಾಗ ಅಥವಾ ಹಾಗೆಂದು ಓದಿದಾಗ ಇದು ಕನ್ನಡದ್ದೇ ಸಾಂಸ್ಕೃತಿಕ ಪ್ರಜ್ಞೆಯ ಆದ್ಯತೆಯ ವಿಸ್ತರಣೆಯಾ ಎಂದು ಕೂಡ ನಾವು ಒಮ್ಮೆ ಕೇಳಿಕೊಳ್ಳಬೇಕಾಗಿದೆ.

ಹಾಗೆಂದು ಇಲ್ಲಿರುವ ಲೇಖನಗಳು ವಲಸಿಗರನ್ನು ಸದಾ ಕಾಡುವ ಹಳಹಳಿಕೆ ಮಾತ್ರ ಅಲ್ಲ. ನಾಸ್ಟಾಲ್ಜಿಯಾ ಇದ್ದೇ ಇರುತ್ತದೆ. ಅದಿಲ್ಲದೇ ವಲಸೆಪ್ರಜ್ಞೆಯೇ ಇರಲು ಸಾಧ್ಯವಾಗದು. ಆದರೆ, ಅದನ್ನು ಕೆಲವಾದರೂ ಲೇಖನಗಳು ಮೀರಿವೆ ಎಂಬುದು ಗಮನಿಸಬೇಕಾದ ಸಂಗತಿ. ಇಲ್ಲಿಗೆ ಬಂದದ್ದಾಯಿತು, ಇದ್ದಿದ್ದಾಯಿತು. ಹೌದು ನಮ್ಮ ಬೇರು ಕನ್ನಡದ್ದು ಎಂಬ ಅರಿವು ನಮಗಿದೆ. ಆದರೆ ಅಮೆರಿಕಾದಲ್ಲಿ ಇಷ್ಟು ವರ್ಷ ಜೀವಿಸಿದ್ದರಿಂದ ಈ ದೇಶ ನಮಗೆ ಕೊಟ್ಟದ್ದೆಷ್ಟು, ನಾವು ಕೊಟ್ಟದ್ದೆಷ್ಟು, ಕಳೆದದ್ದೆಷ್ಟು ಎಂದು ಸಮಚಿತ್ತದಿಂದ ನೋಡುವ ಅನೇಕ ಲೇಖನಗಳು ಇಲ್ಲಿವೆ ಎಂದು ನಾವು ಭಾವಿಸುತ್ತೇವೆ.

ಈ ನಿಟ್ಟಿನಲ್ಲಿ ಗಮನಿಸಬೇಕಾದ 'ಅಮೆರಿಕಾ ಒಂದು ವಿಶಿಷ್ಟವಾದ ರಾಷ್ಟ್ರವೇ?' ಎಂಬ ಲೇಖನದ ಬಗ್ಗೆ ಎರಡು ಮಾತು. ವಲಸಿಗರಾಗಿ ಇಲ್ಲಿ ಬಂದು ಅಮೆರಿಕಾದಲ್ಲಿ ಪ್ರಜಾಪ್ರಭುತ್ವವನ್ನು ಕಟ್ಟಿ ಬೆಳೆಸಿದ ಮೂಲಪುರುಷರ ಮಾದರಿ ಇಡೀ ವಿಶ್ವಕ್ಕೇ ಮಾದರಿಯಾಗಬೇಕು ಅಥವಾ ಮಾದರಿ ಮಾಡಬೇಕು ಮತ್ತು ಈ ಹಂಬಲದಲ್ಲಿ ಇದು ಅಮೆರಿಕಾದ ಮ್ಯಾನಿಫೆಸ್ಟ್ ಡೆಸ್ಟಿನಿಯಾಗುವುದು (ಅಭಿವ್ಯಕ್ತ ವಿಧಿ) ಮತ್ತು ಬೇರೆ ಎಲ್ಲರೂ ತಮ್ಮ ಮಾದರಿಯನ್ನು ಅನುಕರಿಸಬೇಕು, ಹಾಗೆ ಮಾಡುವುದು ನಮ್ಮ ದೇವರು ತಮಗೆ ವಹಿಸಿದ ಜವಾಬ್ದಾರಿ, ತಮ್ಮ ಕರ್ತವ್ಯ ಎಂದು ತಿಳಿದು ಆ ಪ್ರಕ್ರಿಯೆಯಲ್ಲಿ ಅಮೆರಿಕಾದ ಮೂಲನಿವಾಸಿಗಳ ಕುಲವನ್ನೇ ನಾಶಮಾಡಿ ನಂತರ ರಿಸರ್ವೇಶನ್‌ಗಳಲ್ಲಿ ಉಳಕೊಂಡ

ಅವರನ್ನು ಅದೇ ಅಮೆರಿಕಾದ ಪೌರರನ್ನಾಗಿ ಮಾಡಿದ ವಿರೋಧಾಭಾಸದ ಚರಿತ್ರೆಯನ್ನು ಹೇಳುತ್ತದೆ. ಹಾಗೆಯೇ ಮೆಕ್ಸಿಕೋದ ಭಾಗಗಳ ಆಕ್ರಮಣ. ವಾಲ್ಟ್ ವ್ಹಿಟ್ಮನ್‌ನ 'What has miserable, inefficient Mexico - with her superstition, her burlesque upon freedom, her actual tyranny by the few over the many -what has she to do with the great mission of peopling the new world with a noble race? Be it ours, to achieve that mission!' ಎಂಬ ಸಾಲುಗಳು ಉಲ್ಲೇಖವಾಗಿರುವುದು ಗಮನಿಸಬೇಕಾದ್ದು. ವಲಸೆ, ಆಕ್ರಮಣಶೀಲತೆಯಾಗಿ ಮಾರ್ಪಾಡಾಗುವ ಮತ್ತು ಆ ಆಕ್ರಮಣಶೀಲತೆ ಇನ್ನೂ ಮುಂದುವರೆದಿರುವ ಅಮೆರಿಕಾದ ಈ ಚರಿತ್ರೆ ನಮ್ಮ ಮುಂದಿನ ಸಂತತಿಯನ್ನು ಇಲ್ಲಿ ಬೆಳೆಯಲು ಬಿಡುತ್ತಿರುವ ನಮ್ಮ ಮೊದಲ ಪೀಳಿಗೆಯ ಅರಿವಿನಲ್ಲಿರಬೇಕಾದ ಸಂಗತಿ ಎಂದು ಈ ಲೇಖನ ನಿರ್ಮಮವಾಗಿ ಮಂಡಿಸುತ್ತದೆ. ಚರಿತ್ರೆಯ ವಿವಿಧ ಘಟ್ಟಗಳ ಉಲ್ಲೇಖ ಮತ್ತು ಪೂರಕವಾದ ವಿಶ್ವಸಾಹಿತ್ಯದ ಆಳವಾದ ಅಧ್ಯಯನದಿಂದ ಹುಟ್ಟಿರುವ ಈ ಲೇಖನ ನಿಜಕ್ಕೂ ಅಮೆರಿಕಾದ ಈ 'ವಿಶಿಷ್ಟತೆ'ಯನ್ನು ಪ್ರಶ್ನಿಸುತ್ತದೆ. ಅಮೆರಿಕಾದಲ್ಲಿನ ನಮ್ಮ 'ಅನುಭವ'ಗಳನ್ನು ಹೇಳುವ ಇತರ ಲೇಖನಗಳ ಜತೆಗೆ ಅಮೆರಿಕಾ ನಮ್ಮ ಅನುಭವಕ್ಕೆ ಹೇಗೆ ಬಂದಿದೆ ಎಂಬ ಅಂಶವನ್ನು ಲೇಖಕರು ವಿದ್ವತ್ಪೂರ್ಣವಾಗಿ ಮಂಡಿಸಿದ್ದಾರೆ. ಇದು ನಮ್ಮ ಬೇರಿನ ಜತೆಗೆ ನಮ್ಮ ಮುಂದಿನ ತಳಿಗಳು ಬಿಳಲು ಬಿಡಬೇಕಾದ ನೆಲದ ಚರಿತ್ರೆಯನ್ನು ಹೇಳುತ್ತದೆ. ಸೂರಿನಿಂದ ಇಳಿಯುವ ಬಿಳಲಿಗೆ ಈ ನೆಲದ ಚರಿತ್ರೆ ಗೊತ್ತಿರಬೇಕಾದ ಅಗತ್ಯವನ್ನು ಈ ಲೇಖನ ಹೇಳುತ್ತದೆ.

ಮರುವಲಸೆ ಈ ದಿನಗಳಲ್ಲಿ ನಾವು ಕಾಣುತ್ತಿರುವ ಇನ್ನೊಂದು ಕ್ರಿಯೆ. ಒಂದು ಕಾಲದಲ್ಲಿ ಅಮೆರಿಕಾಕ್ಕೆ ವಲಸೆ ಬಂದವರು ವಾಪಸ್ಸು ತಾಯ್ನಾಡಿಗೆ ಹೋದ ಉದಾಹರಣೆಗಳು ವಿರಳವಾಗಿದ್ದವು. ಆದರೆ ಮೊದಲೇ ಹೇಳಿದ ಉಭಯ ರಾಷ್ಟ್ರಗಳ ಬದಲಾದ ಆದ್ಯತೆಗಳ ಕಾರಣದಿಂದ ಈ ದಿನಗಳಲ್ಲಿ ಭಾರತಕ್ಕೆ ವಾಪಸ್ಸು ಹೋಗಿ ನೆಲೆಸುವುದು ಸಾಧ್ಯವಾಗಿದೆ. ವಾಪಸ್ಸಾದ ಈ ಲೇಖಕರಿಗೆ ಭಾರತ ಬೇರೆಯಾಗಿ ಕಾಣಿಸಿದೆ. ಹೀಗೆ ಕಾಣಿಸಿರುವುದಕ್ಕೆ ಅವರಿದ್ದು ಬಂದ ಅಮೆರಿಕಾವಾಸವೇ ಕಾರಣ ಎಂದು ಬೇರೆ ಹೇಳಬೇಕಿಲ್ಲ. ಹೆಚ್ಚು ವಿವರಕ್ಕೆ ಹೋಗದೇ ಅಥವಾ ಅವರ ದೃಷ್ಟಿಯನ್ನು ಪ್ರಶ್ನಿಸದೇ ಅದನ್ನು ಒಂದು ಅಭಿಪ್ರಾಯ ಎಂದು ನಾವು ಪರಿಭಾವಿಸಿದಲ್ಲಿ ಆ ಲೇಖಕರಿಗೆ ಹೀಗೆ ಯಾಕೆ ಅನಿಸಿದ್ದಿರಬಹುದು ಎಂಬ ಪ್ರಶ್ನೆಗೆ ಉತ್ತರ ದೊರಕಬಹುದು.

ಕೆಲವು ಲೇಖಕರು ತಮ್ಮ ಅಭಿವ್ಯಕ್ತಿಗೆ ಸಣ್ಣಕಥೆಯನ್ನು ಮಾಧ್ಯಮವಾಗಿ ಉಪಯೋಗಿಸಿಕೊಂಡಿದ್ದಾರೆ. ಅವನ್ನೂ ಇಲ್ಲಿ ಪ್ರಕಟಿಸಿದ್ದೇವೆ.

ವಿವಿಧ ಲೇಖಕರು ಬರೆದಾಗ ಎದ್ದು ಕಾಣುವ ಲೇಖನಗಳ ವಸ್ತು, ವಿಷಯ, ಗಾತ್ರ ಹಾಗೂ ಗುಣಮಟ್ಟದ ಅಸಮತೋಲನ ಈ ಸಂಗ್ರಹದಲ್ಲಿಯೂ ಕಾಣುತ್ತದೆ. ಮೊದಲೇ

ಹೇಳಿದ ಹಾಗೆ ಕನ್ನಡ ಸಾಹಿತ್ಯ ರಂಗದ ಉದ್ದೇಶವೇ ಅಮೆರಿಕದಲ್ಲಿ ಕನ್ನಡದ ಓದನ್ನು ಬರಹವನ್ನು ಪೋಷಿಸುವುದು. ಇಲ್ಲಿ ಕೆಲವರು ಮೊದಲ ಬಾರಿಗೆ ಲೇಖನವನ್ನು ಬರೆದಿದ್ದಾರೆ, ಇನ್ನೂ ಕೆಲವರು ನುರಿತ ಬರಹಗಾರರಿದ್ದಾರೆ. ಎಲ್ಲ ಸೇರಿ ಒಂದು ಕಾಲಘಟ್ಟದ ಕೊಲ್ಯಾಜನ್ನು ಕೊಟ್ಟಿದ್ದರೆ, ಆ ಮಟ್ಟದಲ್ಲಿ ಓದುಗರನ್ನು ಈ ಲೇಖನಗಳು ಮುಟ್ಟಿದ್ದರೆ, ನಮ್ಮ ಪ್ರಯತ್ನ ಸಾರ್ಥಕವೆಂದು ನಂಬುತ್ತೇವೆ.

ಇಂಥ ಪುಸ್ತಕವೊಂದು ಪ್ರಕಟವಾಗುತ್ತಿದೆ ಎಂಬ ಪ್ರಕಟಣೆ ಹೊರಟ ತಕ್ಷಣ ನಮಗೆ ಸಿಕ್ಕ ಪ್ರತಿಕ್ರಿಯೆಗಳು ಅಭೂತಪೂರ್ವವಾದದ್ದು. ಬಂದ ಎಲ್ಲ ಬರಹಗಳಲ್ಲಿ ಈ ಸಂಗ್ರಹಕ್ಕೆ ಯೋಗ್ಯವಾದವುಗಳನ್ನು ಆಯ್ಕೆ ಮಾಡಿದ ಸಂಪಾದಕ ಮಂಡಳಿಯ ಎಲ್ಲರಿಗೂ ಧನ್ಯವಾದಗಳು.

ಈ ಪುಸ್ತಕವನ್ನು ಪ್ರಾಯೋಜಿಸಿದ ವತ್ಸಕುಮಾರ್ ಅವರಿಗೆ,

ನಮಗೆ ಈ ಪುಸ್ತಕವನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟ ಕನ್ನಡ ಸಾಹಿತ್ಯ ರಂಗಕ್ಕೆ,

ಪ್ರಕಾಶನದ ಎಲ್ಲ ಕಾರ್ಯದಲ್ಲಿ ನೆರವಾದ ವಸಂತ ಪ್ರಕಾಶನದ ಮುರಳಿಯವರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ,


ಮುದ್ರಿಸಿಕೊಟ್ಟ ಶ್ರೀರಂಗ ಪ್ರಿಂಟರ್ಸ್ ಪ್ರೈ. ಲಿ., ನ ಬಾಲಕೃಷ್ಣರವರಿಗೆ,

ಮತ್ತು ಎಂದಿನಂತೆ ಅಂದವಾದ ಮುಖಪುಟ ರಚಿಸಿಕೊಟ್ಟ ಅಪಾರ ಅವರಿಗೆ,

– ಮನಃಪೂರ್ವಕ ಧನ್ಯವಾದಗಳು.

ಗುರುಪ್ರಸಾದ ಕಾಗಿನೆಲೆ
ತ್ರಿವೇಣಿ ಶ್ರೀನಿವಾಸರಾವ್
ಜ್ಯೋತಿ ಮಹಾದೇವ್

ಹಡ್ಸನ್ ತೀರದಲ್ಲಿ ಕನ್ನಡಿಗ



– ಎಚ್.ಕೆ. ಚಂದ್ರಶೇಖರ್

ಬೆಂಗಳೂರಿನಿಂದ ಅಮೆರಿಕಕ್ಕೆ

1969ರ ಜನವರಿ ಕಡೆಯ ವಾರದಲ್ಲಿ ನಾವು ನಾಲ್ಕು ಮಂದಿ (ಇಬ್ಬರು ಪುಟ್ಟ ಹೆಣ್ಣು ಮಕ್ಕಳು–ಸುಜನಾ ಮತ್ತು ಸುಮನಾ, ಶ್ರೀದೇವಿ ಮತ್ತು ನಾನು) ವಾಷಿಂಗ್ಟನ್ ಡಲ್ಲೆಸ್ ವಿಮಾನ ನಿಲ್ದಾಣದಿಂದ ಬಸ್ ಒಂದರಲ್ಲಿ ಕೂತು ದಕ್ಷಿಣ ವಾಷಿಂಗ್ಟನ್ನಿನ ಡುಪಾಂಟ್ ಸರ್ಕಲ್ ಬಳಿ ಹೊಟೇಲೊಂದರಲ್ಲಿ ಇಳಿದೆವು. ಹೊಟೇಲಿನ ರಿಜಿಸ್ಟ್ರೇಷನ್ ಡೆಸ್ಕ್ ಬಳಿ ನಿಂತು ನಮ್ಮ ಪಾಸ್‌ಪೋರ್ಟ್, ಇತರ ಮುಖ್ಯ ಪತ್ರಗಳು ತುಂಬಿದ್ದ ಕಂದುಬಣ್ಣದ ಝಿಪ್ಪರ್ ಹಾಕಿದ್ದ ಪಾಕೆಟ್ ಚೀಲ ಹುಡುಕಿಯೇ ಹುಡುಕುತ್ತೇನೆ– ಕಾಣಿಸುತ್ತ ಇಲ್ಲ! ಆಗ ರಾತ್ರಿ ಹನ್ನೊಂದು ಮೀರಿತ್ತು. ಜನಸಂದಣಿ ಇರಲಿಲ್ಲ. ಸಧ್ಯ ಆ ರಿಸೆಪ್ಷನಿಸ್ಟ್ ನಮ್ಮ ಕಳವಳ ನೋಡಿ, ಕತೆ ಕೇಳಿ ಮರುಗಿ ಆ ರಾತ್ರಿ ಇರಲು ಹತ್ತು ಡಾಲರು ಬಾಡಿಗೆ ಕೇಳಿ ಕೋಣೆ ಸೇರಿಸಿದ. ಮಕ್ಕಳಿಗೆ ಆಗ ನಿದ್ದೆ ಮುಗಿದು ಎಚ್ಚರಗೊಂಡಿದ್ದ ಸಮಯ. ನಾವು ತಲುಪಿಕೊಂಡದ್ದು ಹಳೆಯ ಕಾಲದ ಘನವಾದ ಹೊಟೇಲು– ಒಳಗೆ ಭಾರೀ ಲಾಬಿ ಇದ್ದು ರಿಜಿಸ್ಟ್ರೇಷನ್ ಡೆಸ್ಕ್‌ನ ಎರಡೂ ಕಡೆಯಿಂದ ಬಹು ಎತ್ತರದಲ್ಲಿದ್ದ ಎರಡನೆ ಮಹಡಿಗೆ ಸಾಲು ಮೆಟ್ಟಲು– ಯಾವುದೋ ಭಾರಿ ಅರಮನೆಯಲ್ಲಿದ್ದಂತೆ. ಮಕ್ಕಳಿಗಂತೂ ಹಿಗ್ಗು. ಈ ಮೆಟ್ಟಲ ಸಾಲು ಹತ್ತಿ ಆ ಸಾಲಿನಿಂದ ಓಡುತ್ತ ಹಾಡುತ್ತ ಇಳಿಯುವ ಆಟ ಆಡಿದ್ದೂ ಆಡಿದ್ದೇ! ಕಡೆಗೂ ಕೋಣೆ ಸೇರಿ ಎಲ್ಲರೂ ರಾತ್ರಿ ಕಳೆದಿದ್ದಾಯಿತು.

ಬೆಳಗ್ಗೆ ಎದ್ದು ಸಿದ್ಧವಾಗಿ ಸಮೀಪದ ರೆಸ್ಟೋರಾಂಟ್ ಒಂದಕ್ಕೆ ನುಗ್ಗಿದೆವು. ಆ ಕಾಲದಲ್ಲಿ ಪ್ರವಾಸಿಗರಿಗೆ ಭಾರತ ಸರಕಾರ ಒಬ್ಬರಿಗೆ ಎಂಟು ಡಾಲರು ಮಾತ್ರ ಕೈಯಲ್ಲಿ ಕೊಂಡುಹೋಗಲು ಬಿಡುತ್ತಿತ್ತು. ನನ್ನ ಕಿಸೆಯಲ್ಲಿ ಇದ್ದ ಮೂವತ್ತೆರಡು ಡಾಲರಿನಲ್ಲಿ ಆಗಲೇ ಹತ್ತು ಕಳೆದಿದ್ದೆ. ಎರಡೋ ಮೂರೋ ಡಾಲರಿನಲ್ಲಿ ಫಲಾಹಾರ ಮುಗಿಸಿ ಹೊಟೇಲಿಗೆ ವಾಪಸಾಗಿ ನನ್ನ ಬಳಿ ಇದ್ದ ಬದರಿರಾವ್ ಎಂಬೊಬ್ಬರ ವಿಳಾಸಕ್ಕೆ ಫೋನ್ ಮಾಡಿದೆ. ಅವರಿಗೆ ನಾವು ಬರುವುದು ಮೊದಲೇ ಗೊತ್ತಿತ್ತು. ಕೂಡಲೆ ಅವರು ಕಾರಿನಲ್ಲಿ ಬಂದು ನಮ್ಮನ್ನು ಮನೆಗೆ ಕರೆದುಕೊಂಡು ಹೋದರು. ಆಗ್ಗೆ ವಾಷಿಂಗ್ಟನ್‌ನಲ್ಲಿ ಇದ್ದ ಜಗನ್ನಾಥನ್ ಅವರಿಗೆ (ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದವರು) ಫೋನಿನಲ್ಲಿ ಕರೆದು ನಮ್ಮ ಪರಿಸ್ಥಿತಿಯನ್ನು ವಿವರಿಸಿದರು. ಜಗನ್ನಾಥನ್

ಪಾಸ್‌ಪೋರ್ಟ್ ಇದ್ದ ಪ್ಯಾಕೆಟ್ ಹುಡುಕಲು ಬಸ್ ಕಂಪನಿಯಲ್ಲಿ ವಿಚಾರಿಸುವುದಾಗಿ ಹೇಳಿ ನಂತರದಲ್ಲಿ ನಾವು ತಾತ್ಕಾಲಿಕವಾಗಿ ಒಂದು ತಿಂಗಳು ಇರಲು ಹದಿನಾರನೆಯ ರಸ್ತೆ ಮತ್ತು ಕೆ ಸ್ಟ್ರೀಟ್ ಮೂಲೆಯಲ್ಲಿದ್ದ ಮೆಲ್ಬರ್ನ್ ಹೌಸ್ ಎಂಬಲ್ಲಿ ಒಂದು ಸ್ಟುಡಿಯೊ ಅಪಾರ್ಟ್‌ಮೆಂಟ್ ಗೊತ್ತು ಮಾಡಿಸಿಕೊಟ್ಟರು. ಮರುದಿನವೇ ಹೊಟೇಲ್ ಬಿಟ್ಟು ತಂದಿದ್ದ ಪೆಟ್ಟಿಗೆಗಳೊಂದಿಗೆ ಅಪಾರ್ಟ್‌ಮೆಂಟ್ ಸೇರಿದೆವು. ಆ ದಿನ ಸೋಮವಾರವಾದದ್ದರಿಂದ ಶ್ರೀದೇವಿ ಹದಿಮೂರನೆಯ ರಸ್ತೆಯಲ್ಲಿದ್ದ ಮಕ್ಕಳ ಆಸ್ಪತ್ರೆಯಲ್ಲಿ ಎಳೆಯ ಯುವಕ ಯುವತಿಯರ ವಿಷಯಕ ಫೆಲೋಷಿಪ್ ಪ್ರಾರಂಭಿಸಿಕೊಂಡು ಮುಂಗಡವಾಗಿ ಮೊದಲ ತಿಂಗಳ ಸಂಬಳ ತಂದಿದ್ದರಿಂದ ನಮ್ಮ ಪರಿಸ್ಥಿತಿ ವಿಶೇಷವಾಗಿ ಸುಧಾರಿಸಿತು.

ಪಾಸ್‌ಪೋರ್ಟ್‌ಗಳಿಲ್ಲದೆ ಇರುವುದಾದರೂ ಹೇಗೆ? ಪುನಃ ಜಗನ್ನಾಥನ್ ಅವರ ಸಹಾಯ ಪಡೆದು ಅರ್ಜಿಗಳನ್ನು ಸ್ಥಳೀಯ ಪೋಸ್ಟ್ ಆಫೀಸಿನಲ್ಲಿ ಸಲ್ಲಿಸಿದೆವು. ಎರಡು ವಾರಗಳ ನಂತರ ಒಂದು ಬೆಳಗ್ಗೆ ಜಗನ್ನಾಥನ್ ಅವರೇ ಬಂದು ನನ್ನ ಕಂದು ಬಣ್ಣದ ಕೈಚೀಲವನ್ನು ತಲುಪಿಸಿದರು. ಅವರಿಗೂ ಅದು ಆಶ್ಚರ್ಯದ ಸಂಗತಿಯಾಗಿತ್ತು. ಬಸ್ಸಿನಲ್ಲಿ ನಾವು ಕೂತ ಸೀಟಿನ ಹಿಂಬದಿಯಲ್ಲಿ ನುಸುಳಿ ಕೆಳಗೆ ಬಿದ್ದಿದ್ದ ಕೈಚೀಲವನ್ನು ಯಾರೋ ಭಾರತೀಯ ಎಂಬೆಸಿಯ ವಿಳಾಸ ಬರೆದು ಅಂಚೆಪೆಟ್ಟಿಗೆಯಲ್ಲಿ ಹಾಕಿದ್ದರು!

ಮೆಲ್‌ಬರ್ನ್ ಹೌಸ್ ಸ್ಟುಡಿಯೊ ವಾಸಗೃಹದಲ್ಲಿ ನಾವಿದ್ದದ್ದು ನಾಲ್ಕೈದು ವಾರ ಮಾತ್ರ. ನಮಗಂತೂ ಎಲ್ಲವೂ ಹೊಸದು– ಮನೆಯಲ್ಲೇ ಭಾರೀ ರೆಫ್ರಿಜಿರೇಟರ್ ಇದೆ... ಭಗ್ಗನೆ ಹತ್ತಿಕೊಳ್ಳುವ ಅಡುಗೆಯ ಸ್ಟೋವ್‌ಗಳು... ತಣ್ಣನೆಯ, ಬಿಸಿನೀರಿನ ನಲ್ಲಿಗಳು... ಥಂಡಿಯಾಗಿ ಬಿಸಿನೀರಿನ ತುಂತುರುಸ್ನಾನ! ಸಮೀಪದ ಗ್ರೋಸರಿ ಅಂಗಡಿಗಳಲ್ಲಿ ಎಲ್ಲ ಸಿದ್ಧವಸ್ತುಗಳು... ನಾವು ಬಿಟ್ಟು ಬಂದದ್ದು ಅರುವತ್ತರ ದಶಕದ ಬೆಂಗಳೂರು – ಮನೆಯಲ್ಲಿ ಸೌದೆ, ಬೆರಣಿ, ಹಂಡೆ, ಒರಳುಕಲ್ಲು... ಉಗ್ರಾಣದಲ್ಲಿ ಶುದ್ಧಿಮಾಡಿರದ ದಿನಸಿ ಮೂಟೆಗಳು– ಆ ಜಂಜಾಟವೆಲ್ಲಿ, ಇಲ್ಲಿಯ ನಿರಾತಂಕ ಜೀವನವೆಲ್ಲಿ! ಬಹುಬೇಗ ಸುಖಜೀವನಕ್ಕೆ ಹೊಂದಿಕೊಂಡೆವು. ನಾವಿದ್ದ ಮುಖ್ಯರಸ್ತೆ ಹದಿನಾರನೆಯ ರಸ್ತೆಯಾದ್ದರಿಂದ ಅದು ದಕ್ಷಿಣದಿಕ್ಕಿನಲ್ಲಿ ಸ್ಕಾಟ್ ಸ್ಮಾರಕ ದಾಟಿ ನೇರವಾಗಿ ಶ್ವೇತಭವನದೆಡೆ ಚಾಚಿತ್ತು. ಶ್ವೇತಭವನದೆದುರು ಅಡ್ಡಲಾಗಿ ಪೆನ್ಸಿಲ್ವೇನಿಯ ರಸ್ತೆ, ಅಲ್ಲಿಂದ ಎಡಕ್ಕೆ ನಡೆದರೆ ಭವ್ಯವಾದ ಕ್ಯಾಪಿಟಲ್ ಭವನ, ಬಲಕ್ಕೆ ಮಾಲ್ ಮತ್ತು ವಾಷಿಂಗ್ಟನ್ ಸ್ಮಾರಕ ಮತ್ತು ಅದ್ಭುತ ಸ್ಮಿತ್ಸೋನಿಯನ್ ಪ್ರದರ್ಶನ ಗೃಹಗಳು. ಮಕ್ಕಳನ್ನು ಜತೆಮಾಡಿಕೊಂಡು ಹತ್ತಿರದ ಪೊಟೋಮ್ಯಾಕ್ ನದೀತೀರ, ಉಳಿದೆಲ್ಲ ಸ್ಮಾರಕಗಳು ಎಲ್ಲವನ್ನೂ ನಡೆನಡೆದೇ ಸುತ್ತಿದೆವು. ನಮ್ಮ ದಾತೃಗಳು ಜಗನ್ನಾಥನ್ ಮತ್ತು ಪದ್ಮಾ, ಬದರಿರಾವ್ ದಂಪತಿಗಳು ನಮ್ಮನ್ನು ಮಕ್ಕಳಂತೆ ಕಂಡು ಯಾವ ತೊಂದರೆಯೂ ಕಾಣದಂತೆ ನೋಡಿಕೊಂಡರು. ಜಗನ್ನಾಥನ್ ನನ್ನನ್ನು ಒಬ್ಬ ಆಟೋಡೀಲರ್ ಬಳಿ ಕರೆದುಕೊಂಡು ಹೋಗಿ ಚೌಕಾಸಿ ಮಾಡಿ ಎರಡೇ ಬಾಗಿಲಿನ ಪ್ಲಿಮತ್ ವ್ಯಾಲಿಯೆಂಟ್ ಕಾರನ್ನು ಕಂತಿನ ಸಾಲದೊಂದಿಗೆ ಕೊಡಿಸಿದರು. ಇನ್ನು ನಮಗೆ ಗರಿ ಬಂದಹಾಗಾಯಿತು

ಬೇರು ಸೂರು

– ಊರೆಲ್ಲ ಸುತ್ತಿ ನೋಡಬೇಕಾದದ್ದೆಲ್ಲ ಪುನಃ ಪುನಃ ನೋಡಿ ಹಿಗ್ಗಿದೆವು.

ಫೆಬ್ರುವರಿ ಕಡೆಯ ವಾರ ಕೆಲವೇ ಮೈಲಿಗಳ ದೂರದಲ್ಲಿನ ನೆರೆಯ ಊರಾದ ಸಿಲ್ವರ್ ಸ್ಪ್ರಿಂಗ್‌ನಲ್ಲಿ ಎರಡು ಬೆಡ್‌ರೂಮ್‌ಗಳ ಮನೆ ಬಾಡಿಗೆಗೆ ಹಿಡಿದು ತಲುಪಿಕೊಂಡಿದ್ದಾಯಿತು. ಮಕ್ಕಳು ಸ್ಥಳೀಯ ಶಾಲೆಗೆ ಸೇರಿದರು. ಶ್ರೀದೇವಿ ಬಸ್ ಹಿಡಿದು ವಾಷಿಂಗ್ಟನ್ ಮಕ್ಕಳ ಆಸ್ಪತ್ರೆಗೆ ಹೋಗಿಬರಲು ಆರಂಭಿಸಿದಳು. ನನಗೆ ಓಡಾಡಲು ಕಾರ್ ಇತ್ತಲ್ಲ... ನಾನು ಇಲ್ಲಿಯ ವೈದ್ಯಪದ್ಧತಿಗೆ ಹೊಸಬನಾಗಿದ್ದು ನನ್ನ ಕಿವಿ ಮೂಗು ಗಂಟಲ ಪರಿಣತಿಯ ಅಕ್ಯಾಡೆಮಿಯ ಬೋರ್ಡ್ ಒಂದು ವರ್ಷ ಇಂಟರ್ನ್ ಆಗಿರಲೇಬೇಕೆಂದು ಒತ್ತಾಯ ಮಾಡಿದ್ದರಿಂದ ಹತ್ತಿರದ ಬೆಥೆಸ್ಡ ಎಂಬ ಊರಿನಲ್ಲಿದ್ದ ಸಬರ್ಬನ್ ಆಸ್ಪತ್ರೆಯಲ್ಲಿ ಒಂದು ವರ್ಷ ಆ ಅನುಭವವನ್ನೂ ಪಡೆದದ್ದಾಯಿತು. ನಾನು ಈ ದೇಶಕ್ಕೆ ಬರುವ ಮೊದಲೇ ಬ್ರಿಟನ್ನಲ್ಲಿ ನಾಲ್ಕೂವರೆ ವರ್ಷ ಕಳೆದು ಅಲ್ಲಿ ಕಿವಿ ಮೂಗು ಗಂಟಲು ತಜ್ಞನಾಗಲು ಬೇಕಾದ ಪರೀಕ್ಷೆಗಳನ್ನು ಮುಗಿಸಿದ್ದೆ. ಆದರೆ ಇಲ್ಲಿಯ ಕ್ರಮ ಮೀರುವಂತಿಲ್ಲದೆ ಒಂದು ವರ್ಷದ ಇಂಟರ್ನ್‌ಗಿರಿಯನ್ನೂ ಮಾಡಿದ್ದಾಯಿತು. ಜತೆಗೆ ಇಲ್ಲಿಯ ಬೋರ್ಡ್‌ನೊಡನೆ ಪತ್ರವ್ಯವಹಾರ ನಡೆಸಿದಾಗ ಸುಮಾರು ಎರಡು ವರ್ಷದ ಮಟ್ಟಿಗಾದರೂ ನಾನಾರಿಸಿದ ವಿಶೇಷ ಪರಿಣತಿಯ ವಿಭಾಗದಲ್ಲಿ ರೆಸಿಡೆಂಟ್ ವೈದ್ಯನಾಗಿರಬೇಕೆಂದು ಆದೇಶ ನೀಡಿತು. ಸರಿ, ಅವರೇ ಕಳಿಸಿದ ವಿದ್ಯಾಸಂಸ್ಥೆಗಳ ಪಟ್ಟಿಯಲ್ಲಿ ನ್ಯೂಯಾರ್ಕ್ ವಿಶ್ವವಿದ್ಯಾಲಯದ ವೈದ್ಯಕೇಂದ್ರವನ್ನು ಆರಿಸಿಕೊಂಡು ಅರ್ಜಿ ಕಳಿಸಿದೆ. ಮರುಟಪಾಲಿನಲ್ಲಿಯೇ ನ್ಯೂಯಾರ್ಕ್ ಸಂಸ್ಥೆಯ ಚೇರ್ಮನ್ ಡಾಕ್ಟರ್ ಡೇಲಿ ತಮ್ಮನ್ನು ಸಂಧಿಸಲು ಆಹ್ವಾನ ಕಳಿಸಿದ್ದರು.

1970ರ ಜನವರಿಯಲ್ಲಿ ಬಸ್ಸಿನಲ್ಲಿ ನ್ಯೂಯಾರ್ಕ್‌ಗೆ ಪ್ರಯಾಣಮಾಡಿ ಚೇರ್ಮನ್ ಡೇಲಿಯವರ ಕಚೇರಿಯಲ್ಲಿ ಕಾಣಿಸಿಕೊಂಡೆ. ಸುಮಾರು ಎರಡು ಗಂಟೆ ಪ್ರಶ್ನೋತ್ತರಗಳ ನಂತರ ಸದ್ಯದ ಇಂಟರ್ನ್‌ಗಿರಿ ಮುಗಿದ ಮಾರನೆ ದಿನವೇ– ಎಂದರೆ ಮಾರ್ಚ್ 1, 1970ರ ದಿನ ಈ ವೈದ್ಯಕೇಂದ್ರದಲ್ಲಿ ರೆಸಿಡೆನ್ಸಿ ಆರಂಭಿಸಬೇಕೆಂದು ಆಹ್ವಾನಿಸಿದರು. ಇಲ್ಲಿ ಇರಲು ಮನೆ ಹುಡುಕಬೇಕಾಗಿಲ್ಲವೆಂದೂ ಹತ್ತಿರದ ಸ್ಟೈವೆಸೆಂಟ್ ಟೌನ್ ನಗರ ವಿಭಾಗದಲ್ಲಿ ಎರಡು ಬೆಡ್‌ರೂಮ್‌ಗಳ ಅಪಾರ್ಟ್‌ಮೆಂಟನ್ನು ತಮ್ಮ ಕಾರ್ಯದರ್ಶಿ ಕಾದಿರಿಸಿರುತ್ತಾರೆಂದು ಹೇಳಿ ನನ್ನನ್ನು ಬೀಳ್ಕೊಟ್ಟರು.

ಸುಮಾರು ಅದೇ ಸಮಯಕ್ಕೆ ಶ್ರೀದೇವಿಯ ವಾಷಿಂಗ್ಟನ್ ಫೆಲೋಷಿಪ್ ಮುಗಿಯುವುದಿತ್ತು. ನಾವು ಸಂಸಾರಸಮೇತ ನ್ಯೂಯಾರ್ಕ್‌ಗೆ ಬಂದೊಡನೆ ನಮ್ಮ ವೈದ್ಯಕೇಂದ್ರದಲ್ಲಿ ಮಕ್ಕಳ ವಿಭಾಗದ ರೆಸಿಡೆನ್ಸಿಗೆ ಆರಿಸಿಕೊಂಡರು. ಶ್ರೀದೇವಿಯೂ ಬ್ರಿಟನ್‌ನಲ್ಲಿ ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಪರಿಣತಿ ಪಡೆದಿದ್ದುದರಿಂದ ಇಲ್ಲಿ ಒಂದೇ ವರ್ಷದ ರೆಸಿಡೆನ್ಸಿ ಮುಗಿಸಿ ಬೋರ್ಡ್ ಪರೀಕ್ಷೆಗೆ ಕೂರಬಹುದೆಂದು ನಿರ್ಧಾರಕ್ಕೆ ಬಂದಿದ್ದರು.

ಬೇರು ಸೂರು

ನಮ್ಮ ಸ್ಟೈವೆಸೆಂಟ್ ಟೌನ್‌ನ ಅಪಾರ್ಟ್‌ಮೆಂಟ್ ಇದ್ದದ್ದು ಒಂದನೇ ಅವೆನ್ಯು ಮತ್ತು ಹದಿನಾಲ್ಕನೆಯ ಅಡ್ಡರಸ್ತೆ ಸೇರುವ ಜಾಗದಲ್ಲಿ. ವೈದ್ಯಕೇಂದ್ರದ ಬೆಲ್‌ವ್ಯು ಆಸ್ಪತ್ರೆ ಇರುವುದು ಒಂದನೆಯ ರಸ್ತೆ ಮತ್ತು 26–27ನೇ ರಸ್ತೆಗಳು ಸಂಧಿಸುವ ಕಡೆ. ಹಳೆಯ ಬೆಲ್‌ವ್ಯು ಆಸ್ಪತ್ರೆಯ ಮುಂದಿನ ವಿಶಾಲ ಬಯಲಿನಲ್ಲಿ ಒಂದು ವಿಲಕ್ಷಣ ಆರು ಮಹಡಿಗಳೆತ್ತರದ ಕಾರ್ ಪಾರ್ಕ್ ಕಟ್ಟಿದ್ದರು. ಅಲ್ಲಿಯೇ ನನ್ನ ಕಾರನ್ನು ಸದಾ ಪುಕ್ಕಟೆ ನಿಲ್ಲಿಸಿಕೊಂಡಿರಬಹುದಾಗಿತ್ತು. (ಈಗ ಆ ಕಾಂಕ್ರೀಟ್ ಪೆಡಂಭೂತವನ್ನು ತೆಗೆದುಹಾಕಿ ಭವ್ಯವಾದ ಭಾರೀ ಗಾಜಿನ ಗೋಡೆಗಳ ಬೆಲ್‌ವ್ಯು ಸ್ವಾಗತಭವನ ಕಟ್ಟಿದ್ದಾರೆ).

ನಾನು ಆಸ್ಪತ್ರೆಯಲ್ಲಿ ಕೆಲಸ ಆರಂಭಿಸಿದಾಗ ನೂರು ವರ್ಷಕ್ಕೂ ಮಿಕ್ಕು ಚಾಲ್ತಿಯಲ್ಲಿದ್ದ, ಹಳೆಯ ಕಾಲದ –ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವಂತೆ– ನಲುವತ್ತು ಐವತ್ತು ಮಂಚಗಳನ್ನು ಹಾಕಿದ ಭಾರೀ ವಾರ್ಡ್‌ಗಳು, ಕಿರುಕೋಣೆಗಳು, ಮೂಗಿಗೆ ಬಡಿಯುತ್ತಿದ್ದ ವಿವಿಧ ದ್ರಾವಕಗಳು– ಎಲ್ಲ ಇದ್ದು ನನಗೇನೂ ಆಧುನಿಕತೆಯ ಅನುಭವ ಆಗಲಿಲ್ಲ. ಸಧ್ಯ, ಆಗಲೇ ಹದಿನಾರು ಮಹಡಿಗಳ ಭಾರೀ ಕಟ್ಟಡವೊಂದನ್ನು ಹಳೆಯ ಆಸ್ಪತ್ರೆಯ ಪೂರ್ವಕ್ಕೆ ನದೀತೀರದಲ್ಲಿ ಕಟ್ಟಿದ್ದರು. ಒಂದು ವರ್ಷದೊಳಗೆ ಆಸ್ಪತ್ರೆಯ ಎಲ್ಲ ಇಲಾಖೆಗಳೂ ಹೊಸ ಬೆಲ್‌ವ್ಯುಗೆ ಸೇರಿಕೊಂಡಿದ್ದಾಯಿತು. ಈ ಕಟ್ಟಡ ಆ ಕಾಲಕ್ಕೆ ಅತ್ಯಾಧುನಿಕವಾಗಿದ್ದು ಬಹು ಆಕರ್ಷಕ ಆಸ್ಪತ್ರೆಯಾಗಿ ಪರಿಣಮಿಸಿತು. ಇದಕ್ಕೆ ಉತ್ತರದಲ್ಲಿದ್ದ ವಿಶ್ವವಿದ್ಯಾಲಯ ಆಸ್ಪತ್ರೆಯಲ್ಲೂ, ದಕ್ಷಿಣಕ್ಕಿದ್ದ ವೆಟರನ್ ಆಸ್ಪತ್ರೆಯಲ್ಲೂ ನಾವು ಕೆಲಸ ಮಾಡುತ್ತಿದ್ದೆವು.

ರೆಸಿಡೆನ್ಸಿ ಕಳೆದ ನಂತರ ಬೋರ್ಡ್ ಪರೀಕ್ಷೆ ಮುಗಿಸಿ ನನ್ನ ಚೇರ್ಮನ್ ಒತ್ತಾಯಕ್ಕೆ ಮಣಿದು ನ್ಯೂಯಾರ್ಕ್ ವಿಶ್ವವಿದ್ಯಾಲಯ ಆಸ್ಪತ್ರೆಯಲ್ಲಿಯೇ ಪ್ರಾಕ್ಟೀಸ್ ಆರಂಭಿಸಿಕೊಂಡೆ. 1974ರಲ್ಲಿ ಮೂರನೆಯ ಮಗಳು ಸುಚರಿತ ಹುಟ್ಟಿದ ನಂತರದಲ್ಲಿ ಕ್ವೀನ್ಸ್ ವಿಭಾಗದ ಜಮೈಕ ಎಸ್ಟೇಟ್ಸ್‌ನಲ್ಲಿ ಮನೆ ಕೊಂಡು ಜರುಗಿಕೊಂಡೆವು. ಶ್ರೀದೇವಿ ಕ್ವೀನ್ಸ್‌ನಲ್ಲಿಯೇ ಪ್ರಾಕ್ಟೀಸ್ ಆರಂಭಿಸಿಕೊಂಡಳು. ನಾನಂತೂ ಕಾರಿನಲ್ಲಿ ಬೆಳಗಿನ ಕಾರುಗಳ ಮೆರವಣಿಗೆ ಆರಂಭವಾಗುವ ಮೊದಲೇ ಸೇತುವೆಯ ಮೂಲಕವೋ ಇಲ್ಲವೆ ಪೂರ್ವನದೀತಳದಲ್ಲಿ ಸಾಗುವ ಸುರಂಗಮಾರ್ಗವಾಗಿಯೋ ಮ್ಯಾನ್‌ಹ್ಯಾಟನ್ ಸೇರಿಕೊಳ್ಳುವ ಒತ್ತಡಕ್ಕೆ ತಲೆ ಕೊಟ್ಟಿದ್ದಾಯಿತು. ಹಿಂತಿರುಗಿ ಮನೆಗೆ ಬರುವಾಗಲೂ ಇದೇ ಕೋಲಾಹಲ... ಕಿಕ್ಕಿರಿದು ಮಂದಗತಿಯಲ್ಲಿ ಸಾಗುವ ಕಾರಿನ ಮಂದೆ ಸೇರಿ ಮನೆ ತಲುಪಿಕೊಳ್ಳಲು ಒಂದೊಂದು ಬಾರಿ ಎರಡು ಗಂಟೆಗಳೇ ಹಿಡಿದದ್ದುಂಟು. ದೂರ ಅಷ್ಟೇನೂ ಇಲ್ಲದಿದ್ದರೂ (ಸುಮಾರು 12 ಮೈಲಿ) ಕೆಲವು ಬಾರಿ ಇಂಥ ಅನುಭವ ತಲೆ ಚಿಟ್ಟು ಹಿಡಿಸಿಬಿಡುತ್ತದೆ. ಹೆದ್ದಾರಿ ಮುಗಿಸಿ ಮನೆಯ ಕಡೆ ಸಾಗುವ ಕಿರುದಾರಿಯಲ್ಲಿ ಸಧ್ಯ ಬದುಕಿದೆನೇ ಎಂದು ವೇಗ ಹೆಚ್ಚಿಸುವುದೂ ಉಂಟು. ಅಂಥ ಒಂದು ಸಂದರ್ಭದಲ್ಲಿ ಕಿರುದಾರಿಯಲ್ಲಿ ಸಾಗುತ್ತ ಬಂದಿದ್ದೇನೆ. ಹಿಂದೆ ಬರುತ್ತಿದ್ದ ಇನ್ನೊಂದು ಕಾರಿನ ಚಾಲಕ ಇದ್ದಕ್ಕಿದ್ದಂತೆ ನನ್ನ ಕಾರಿನ ಎಡ ಹಿಂಭಾಗಕ್ಕೆ ಬಡಿದ ರಭಸಕ್ಕೆ ನನ್ನ ಕಾರು ಅತಿ

ವೇಗದಿಂದ ಬಲಕ್ಕಿದ್ದ ಹುಲ್ಲುಗಾವಲ ಮೇಲೆ ನುಗ್ಗಿ ಮರಕ್ಕೆ ಢಿಕ್ಕಿ ಹೊಡೆಯಿತು. ಅನಾಹುತ ಗಮನಕ್ಕೆ ಬಂದೊಡನೆ ಭದ್ರವಾಗಿ ಸ್ಟಿಯರಿಂಗ್ ವ್ಹೀಲ್ ಹಿಡಿದು ಕಾಲುಗಳನ್ನು ಮೇಲೆತ್ತಿ ಆದದ್ದಾಗಲಿ ಎಂದು ಕ್ಷಣಗಳನ್ನು ಕಳೆದಿದ್ದೆ. ಕಾರು ನಿಂತುಹೋಗಿ ಎಲ್ಲ ಬಾಗಿಲುಗಳೂ ಬಿಗಿದು ನನಗೆ ಹೊರಗೆ ಬರುವುದೇ ಅಸಾಧ್ಯವಾಯಿತು. ಕಿಟಿಕಿ ಗಾಜುಗಳನ್ನು ಇಳಿಸಲೂ ಸಾಧ್ಯವಾಗುತ್ತ ಇಲ್ಲ! ಆ ಹೊತ್ತಿಗೆ ಕಾರ್ ಬಳಿ ಬಂದ ಇಬ್ಬರು ನನ್ನ ಸ್ಥಿತಿ ನೋಡಿ ಹಿಂದಿನ ಬಲಬಾಗಿಲ ಕಿಟಿಕಿ ಒಡೆದು ಬಾಗಿಲನ್ನು ಆಚೆಗೆ ಎಳೆದು ಕಾರೇನಾದರೂ ಸ್ಫೋಟಿಸೀತು ಎಂಬ ಭಯದಿಂದ ನನ್ನನ್ನು ಆತುರವಾಗಿ ಆಚೆಗೆ ಎಳೆದುಕೊಂಡರು. ಅಷ್ಟರಲ್ಲಿಯೇ ಅಲ್ಲಿನ ಮನೆಯವರೊಬ್ಬರು ಫೋನ್ ಮಾಡಿದ್ದು, ಆಂಬುಲೆನ್ಸ್ ಒಂದು ಧಾವಿಸಿತ್ತು. ನನ್ನನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿಕೊಂಡು ಹೋದರು. ಆಸ್ಪತ್ರೆಯಲ್ಲಿ ಕತ್ತಿಗೊಂದು ಕಾಲರ್ ಬಿಗಿದು ಹತ್ತಾರು ಎಕ್ಸ್‌ರೇಗಳು, ರಕ್ತ, ಮೂತ್ರಪರೀಕ್ಷೆ ಎಲ್ಲವನ್ನೂ ಮಾಡಿ ಏನೂ ಅಪಾಯವಾಗಿಲ್ಲವೆಂದು ತಿಳಿದನಂತರ ಮನೆಗೆ ಹೋಗಲು ಬಿಟ್ಟರು. ಆ ವೇಳೆಗೆ ಪೊಲೀಸರಿಂದ ವಾರ್ತೆ ತಿಳಿದು ಶ್ರೀದೇವಿ ಆಸ್ಪತ್ರೆಗೆ ಬಂದಿದ್ದಳು.

ಇದು ನನ್ನ ಮೊದಲ ಕಾರ್ ಅನಾಹುತವೇನೂ ಅಲ್ಲ. ಹಿಂದೆ 1964ರಲ್ಲಿ ನಾನು ಸ್ಕಾಟ್‌ಲೆಂಡಿನಲ್ಲಿದ್ದಾಗ ಒಂದು ಆಸ್ಟಿನ್ ಮಿನಿ ಕಾರು ಇಟ್ಟುಕೊಂಡಿದ್ದೆ. ಒಂದು ನವೆಂಬರ್ ಬೆಳಗ್ಗೆ ಎಡಿನ್‌ಬರೊ ಕಡೆ ಚಲಿಸುತ್ತ ಇದ್ದಕ್ಕಿದ್ದಂತೆ ದಟ್ಟವಾದ ಮಂಜು ಕವಿದಿದ್ದುದು ಕಂಡೆ. ಕಾರು ಆ ಮಂಜಿನ ರಾಶಿಯೊಳಗೆ ಚಲಿಸಿದಂತೆ ಮುಂದೆ ಹತ್ತು ಅಡಿಗಳೂ ಕಾಣದಷ್ಟು ದಟ್ಟವಾಗಿತ್ತು. ಸುಮಾರು ಒಂದು ಗಂಟೆ ನಿಧಾನವಾಗಿ ತೆವಳುತ್ತ ಬಂದಂತೆ ದೂರದಲ್ಲಿ ಪ್ರಖರವಾದ ಬೆಳಕು ಕಾಣಿಸಿತು. ಮಂಜಿನ ರಾಶಿ ತಟಕ್ಕನೆ ಮುಗಿದು ಬಿಸಿಲಿನಿಂದ ಹೊಳೆಯುತ್ತಿದ್ದ ರಸ್ತೆ ಕಣ್ಣಿಗೆ ಬಿದ್ದಿತು. ಸಧ್ಯ, ಹಿಂಸೆ ಕಳೆಯಿತು ಎಂದು ವೇಗ ಸ್ವಲ್ಪ ಹೆಚ್ಚಿಸಿದೊಡನೆ ಕಾರು ಗಾಜಿನಂತಿದ್ದ ದಾರಿಯ ಮೇಲೆ ಗಿರಗಿರನೆ ತಿರುತಿರುಗಿ ಎಡಕ್ಕಿದ್ದ ಕಬ್ಬಿಣದ ತಂತಿಬೇಲಿಗೆ ಬಡಿದು ಹಿಂದುಮುಂದಾಗಿ ನಿಂತುಕೊಂಡಿತು. ನನ್ನ ಅದೃಷ್ಟಕ್ಕೆ ಆ ಬೇಲಿ ಭದ್ರವಾಗಿ ಇತ್ತಲ್ಲ! ಇಲ್ಲದಿದ್ದರೆ ಅಲ್ಲಿಂದ ನೇರವಾಗಿ ಕೆಳಗೆ ಐನೂರು ಅಡಿ ಪ್ರಪಾತದಲ್ಲಿ ಉತ್ತರ ಸಮುದ್ರ! ಮೂರು ತಿಂಗಳ ನಂತರ ಅಲ್ಲಿನ ಕೌಂಟಿ ಅಧಿಕಾರಿಗಳು ನಾನು ಅವರ ಬೇಲಿಯನ್ನು ನೆಗ್ಗಿಸಿ ಹಾಳುಮಾಡಿದ್ದಕ್ಕೆ ಮೂವತ್ತೇಳು ಪೌಂಡುಗಳ ದಂಡ ಕೊಡೆಂದು ನೋಟೀಸ್ ಕಳಿಸಿದ್ದರು!

ಹಿಂದೂ ದೇವಾಲಯ

1970ರ ಸೆಪ್ಟೆಂಬರ್ ತಿಂಗಳಿನ ಒಂದು ದಿನ ಆಗ್ಗೆ ಯುನೈಟೆಡ್ ನೇಷನ್ಸ್‌ನಲ್ಲಿ ಉನ್ನತ ಹುದ್ದೆಯಲ್ಲಿದ್ದ (ಅಂಡರ್–ಸೆಕ್ರೆಟರಿ ಜನರಲ್) ಸಿ.ವಿ. ನರಸಿಂಹನ್ ಅವರು

ನಮ್ಮಲ್ಲಿ ಕೆಲವರನ್ನು ಸಭೆಗೆ ಕರೆದರು. ಆ ವೇಳೆಗೆ ಆಗ್ಗೆ ನಿರ್ಮಾಣಗೊಂಡಿದ್ದ ಮತ್ತು ಆರೆಂಟು ಸ್ಥಳೀಯ ಅಮೆರಿಕನ್ನರನ್ನು ಹೊಂದಿದ್ದ ದೇವಾಲಯ ಸಮಿತಿಯೊಂದು ಕ್ವೀನ್ಸ್ ವಿಭಾಗದ ಫ್ಲಷಿಂಗ್ ಕೌಂಟಿಯ ಬೌನ್ಸ್ ರಸ್ತೆಯಲ್ಲಿದ್ದ ಹಳೆಯ ಗ್ರೀಕ್ ಆರ್ಥೊಡಾಕ್ಸ್ ಚರ್ಚ್ (Greek Orthodox Church) ಒಂದನ್ನು ಪಡೆದು ಅದನ್ನು ಹಿಂದೂ ದೇವಾಲಯವಾಗಿ ಪರಿವರ್ತಿಸಿತ್ತು. ಮರದ ಹಲಗೆಗಳಿಂದ ಓರೆಕೋರೆಯಾಗಿ ಕಟ್ಟಿದ್ದ ಈ ಮಂದಿರದ ಒಳಗೆ ಒಂದು ಮೆಟ್ಟಲ ಮೇಲಿನ ಹಂತದಲ್ಲಿ ವಿಗ್ರಹಗಳನ್ನು ಕೂಡಿಸಿದ್ದರು. ಸುಮಾರು ಐವತ್ತು ಮಂದಿ ನೆಲದ ಮೇಲೆ ಕೂರಬಹುದಾದ ಜಾಗ, ಸಭೆಯಲ್ಲಿ ಯುನೈಟೆಡ್ ನೇಷನ್ಸ್‌ನಲ್ಲಿಯೇ ಉದ್ಯೋಗದಲ್ಲಿದ್ದ ಇನ್ನಿಬ್ಬರು ಅಲ್ಲದೆ ಕನ್ನಡ ತಮಿಳು ತೆಲುಗು ಮಾತನಾಡುವ ನಾವು ನಾಲ್ಕಾರು ಮಂದಿ ಇದ್ದೆವು ಆಗ್ಗೆ ಪಡೆದುಕೊಂಡ ಜಾಗದಲ್ಲಿ ಇದ್ದ ಕಟ್ಟಡಗಳನ್ನು ನೆಲಸಮ ಮಾಡಿ ಒಂದು ಸುಂದರ ದ್ರಾವಿಡ ಶೈಲಿಯ ದೇವಸ್ಥಾನವನ್ನು ಕಟ್ಟುವ ಬಗ್ಗೆ ಚರ್ಚೆ ನಡೆದಿತ್ತು. ಮುಂದಿನ ಸಭೆಗಳಲ್ಲಿ ದೇವಸ್ಥಾನವನ್ನು ಕುರಿತಾದ ಮೂಲಸ್ವರೂಪಕ್ಕೆ ಮದರಾಸಿನ ಸ್ಥಪತಿಗಳೊಬ್ಬರಿಂದ ರಚಿತವಾದ ನಕ್ಷೆಗಳನ್ನು ಪರಿಶೀಲಿಸಿ ಉಳಿದ ಭಾಗಗಳನ್ನು ಕಟ್ಟಲು ಅಮೆರಿಕನ್ ಕಂಟ್ರಾಕ್ಟರುಗಳೊಂದಿಗೆ ಮಾತುಕತೆ ಅಲ್ಲದೆ ಈ ಯೋಜನೆಗೆ ತಗಲುವ ಅಪಾರ ಹಣವನ್ನು ಬ್ಯಾಂಕುಗಳಿಂದ ಸಾಲವಾಗಿ ಪಡೆಯಲು ಸನ್ನಾಹ – ಈ ಎಲ್ಲದರ ಬಗ್ಗೆ ಚರ್ಚೆ ಬಹು ಉತ್ಸಾಹದಿಂದ ನಡೆಯುತ್ತಿತ್ತು. ಅಮೆರಿಕ ಖಂಡದಲ್ಲಿ ಇದೇ ಮೊದಲ ಹಿಂದೂ ದೇವಾಲಯ. ಹಿಂದೂ ಟೆಂಪಲ್ ಆಫ್ ನಾರ್ತ್ ಅಮೆರಿಕ (Hindu Temple of North America) ಎಂಬ ಹೆಸರಿನಲ್ಲಿ ನ್ಯೂಯಾರ್ಕ್ ಸಂಸ್ಥಾನದ ರಿಜಿಸ್ಟ್ರೇಷನ್ ಪಡೆದುಕೊಂಡಿತು.

ಹೀಗೆ ಆರಂಭವಾದ ದೇವಾಲಯದ ಕೆಲಸ ಭಾರತೀಯ ಮತ್ತು ಅಮೆರಿಕನ್ ಕುಶಲ ಕಾರ್ಮಿಕರಿಂದ ಸಂಪೂರ್ಣವಾದದ್ದು 1977ರ ವೇಳೆಗೆ. ಸಹಸ್ರಾರು ಜನರ ಸಮ್ಮುಖದಲ್ಲಿ ಕುಂಭಾಭಿಷೇಕ ನಡೆದು ಭಾರತೀಯರಿಗೆ ಒಂದು ಉತ್ತಮ ಧಾರ್ಮಿಕ, ಸಾಂಸ್ಕೃತಿಕ ನೆಲೆಯಾಗಿ ಪರಿಣಮಿಸಿತು. ಮೊದಲ ಹತ್ತು ವರ್ಷಗಳಲ್ಲಿ ನಾನು ಸಾಂಸ್ಕೃತಿಕ ವಿಭಾಗದಲ್ಲಿ ಉಪಾಧ್ಯಕ್ಷನಾಗಿದ್ದು ಆಗ್ಗೆ ಸುಪ್ರಸಿದ್ಧರಾಗಿದ್ದ ಭಾರತೀಯ ಸಂಗೀತ ಮತ್ತು ನೃತ್ಯಕಲಾವಿದರನ್ನು ರಂಗದ ಮೇಲೆ ತರುವ ವಿಶೇಷ ಸಂತೋಷದ ಕೆಲಸವನ್ನು ಮಾಡಲು ಸಾಧ್ಯವಾಯಿತು.

ಹಾಗೆ ದಯಮಾಡಿಸಿದ ಅನೇಕ ಹಿರಿಯ ಸಂಗೀತಗಾರರು ನಮ್ಮ ಮನೆಯಲ್ಲಿಯೂ ಕಚೇರಿಗಳನ್ನು ನಡೆಸುವ ಪರಿಪಾಠ ಇಟ್ಟುಕೊಂಡಿದ್ದೆವು. ಆ ಕಾಲಕ್ಕೆ ಭಾರತೀಯ ಕಾರ್ಯಕ್ರಮಗಳನ್ನು ಪ್ರಾಯೋಜಿಸಲು ಮುಂದೆ ಬರುತ್ತಿದ್ದ ಸಂಸ್ಥೆಗಳು ಬೆರಳೆಣಿಸುವಷ್ಟು ಇದ್ದವು. ನಮ್ಮ ಮನೆಯಲ್ಲಿ ಎಂ.ಎಲ್. ವಸಂತಕುಮಾರಿ, ಡಿ.ಕೆ. ಪಟ್ಟಮ್ಮಾಳ್, ಡಿ.ಕೆ ಜಯರಾಮನ್, ಗಂಗೂಬಾಯಿ ಮತ್ತು ಕೃಷ್ಣಾ ಹಾನಗಲ್, ಪರ್ವೀನ್ ಸುಲ್ತಾನಾ,

ಮಹಾರಾಜಪುರಂ ಸಂತಾನಂ, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಕೊಳಲು ಸುರೇಶ್, ಭೀಮಸೇನ ಜೋಷಿ ಮತ್ತಿತರ ಮಹತ್ವದ ಕಲೆಗಾರರು ಸಂಗೀತದ ಹೊನಲನ್ನು ಹರಿಸಿ ಹೋಗಿದ್ದಾರೆ. ಕರ್ನಾಟಕದ ಖ್ಯಾತ ಸುಗಮ ಸಂಗೀತಗಾರರಾದ ಅನಂತಸ್ವಾಮಿ ಮತ್ತು ಅಶ್ವಥ್ ನಮ್ಮ ಮನೆಯಲ್ಲಿ ಹಾಡಿ ನಮ್ಮನ್ನು ತಣಿಸಿದ್ದಾರೆ.

ಕಾಲ ಕಳೆದಂತೆ ಆದಾಯ ಹೆಚ್ಚುತ್ತ ಬಂದು, ದೇವಾಲಯದ ಕಾರ್ಯಸಮಿತಿ ಅನೇಕ ಯೋಜನೆಗಳನ್ನು ಹಾಕಿಕೊಂಡು ಆಧುನಿಕ ಸಲಕರಣೆಗಳಿಂದ ಸಜ್ಜಾಗಿರುವ ಸುಂದರ ಸಭಾಮಂದಿರ ಮತ್ತಿತರ ಉಪಯುಕ್ತ ಕಟ್ಟಡಗಳನ್ನು ನಿರ್ಮಿಸಿ, ಧಾರ್ಮಿಕ ಶಿಕ್ಷಣ, ಸ್ಥಳೀಯ ಜನಸಮೂಹಕ್ಕೆ ಸ್ವಯಂಸೇವಕರಿಂದ ಸೇವೆ, ಹಿಂದೂ ಹಬ್ಬವಿಶೇಷಗಳಲ್ಲಿ ಪ್ರಚಂಡ ಸಮಾರಂಭಗಳು– ಎಲ್ಲ ನಿರ್ವಹಿಸುತ್ತಿದೆ. ಈಚೆಗೆ ದೇವಾಲಯ ಪ್ರದೇಶವನ್ನು ವಿಶೇಷವಾಗಿ ವಿಸ್ತರಿಸಲಾಗಿದೆ.

ಕನ್ನಡದ ಕೆಲಸ

ನಮ್ಮ ಜಮೈಕ ಎಸ್ಟೇಟ್ಸ್ ಮನೆಯಲ್ಲಿ ಭಾರತದಿಂದ ಬಂದ ಅನೇಕ ಸುಪ್ರಸಿದ್ಧ ಸಂಗೀತಗಾರರ ಕಾರ್ಯಕ್ರಮಗಳನ್ನಿಟ್ಟುಕೊಳ್ಳುವ ಸುಯೋಗ ದೊರೆತದ್ದರ ಬಗ್ಗೆ ಈಗ ತಾನೆ ಹೇಳಿದೆ. ಹಾಗೆಯೇ ವೈಯಕ್ತಿಕವಾಗಿ ನನಗೆ ದೊರೆತ ಇನ್ನೊಂದು ಸುಯೋಗ ಎಂದರೆ ನಮ್ಮ ಕರ್ನಾಟಕದಿಂದ ಬಂದ ಅನೇಕ ಗಣ್ಯ ಸಾಹಿತಿಗಳನ್ನು ಸ್ವಾಗತಿಸಿ ಸಮಾರಂಭಗಳನ್ನು ಇಟ್ಟುಕೊಳ್ಳುವ ಅವಕಾಶ ಒದಗಿದ್ದು. ಎ.ಎನ್. ಮೂರ್ತಿರಾಯರು, ಶಿವರಾಮ ಕಾರಂತರು, ಪುತಿನ, ನಿಟ್ಟೂರರು, ಎಲ್. ಗುಂಡಪ್ಪನವರು, ಗೊರೂರರು, ದೇಜಗೌ, ಮರುಳಸಿದ್ಧಯ್ಯ, ಪ್ರಭುಶಂಕರ – ಮುಂತಾದ ಮಹನೀಯರೆಲ್ಲ ನಮ್ಮ ಮನೆಗೆ ದಯಮಾಡಿಸಿ ಹೋಗಿದ್ದಾರೆ.

ಭಾರತೀಯರು ಈ ದೇಶಕ್ಕೆ ಹೆಚ್ಚುಹೆಚ್ಚಾಗಿ ವಲಸೆ ಬರುತ್ತಿರುವುದೇ 1965ರ ಈಚೆಗೆ. ಆ ವರ್ಷ ವಲಸೆಗಾರರ ಬಗ್ಗೆ ಇದ್ದ ನಿರ್ಬಂಧಗಳನ್ನು ಸಡಿಲಿಸಿದ್ದರಿಂದ ಅಲೆಅಲೆಯಾಗಿ ಜನ ಬರಲು ಆರಂಭಿಸಿದರು. ಕನ್ನಡ ನಾಡಿನಿಂದ ಸಹಸ್ರಾರು ಮಂದಿ ವಲಸೆ ಬಂದಿದ್ದಾರೆ. ನ್ಯೂಯಾರ್ಕ್ ನಗರ ಪ್ರದೇಶದಲ್ಲಿ 1971ರ ವೇಳೆಗೆ ನೂರಾರು ಮಂದಿ ಕನ್ನಡಿಗರಿದ್ದು ನಮ್ಮಲ್ಲಿ ಕೆಲವರಿಗೆ ಸಂಘವೊಂದನ್ನು ಸ್ಥಾಪಿಸುವ ಬಯಕೆ ತಲೆದೋರಿತು. 1972ರ ಗಣೇಶನ ಹಬ್ಬದ ದಿನ ನಾವು ಆರೆಂಟು ಮಂದಿ ಸಭೆ ಸೇರಿ ಸಂಘವೊಂದನ್ನು ಸ್ಥಾಪಿಸುವ ಬಗ್ಗೆ ಚರ್ಚಿಸಿ ಮುಂದೆ ಪದೇ ಪದೇ ಕಲೆತು 1973ರ ಜನವರಿ ಸಂಕ್ರಾಂತಿಯ ದಿನ ಶ್ರೀದೇವಿಯನ್ನು ಅಧ್ಯಕ್ಷ ಸ್ಥಾನಕ್ಕೆ ಚುನಾಯಿಸಿ 'ನ್ಯೂಯಾರ್ಕ್ ಕನ್ನಡ ಕೂಟ'ವನ್ನು ಆರಂಭಿಸಿಯೇ ಬಿಟ್ಟೆವು. ಈ ಮೊದಲು ಮಿಚಿಗನ್‌ನ ಆನ್ ಆರ್ಬರ್ ವಿಶ್ವವಿದ್ಯಾಲಯದ ಕೆಲವು ಮಂದಿ ಕನ್ನಡಿಗರು 'ಪಂಪ' ಎಂಬ ಹೆಸರಿನ ಸಂಸ್ಥೆಯನ್ನು ನಡೆಸಿದ್ದುಂಟು. ನ್ಯೂಯಾರ್ಕ್ ಕನ್ನಡ ಕೂಟ ನ್ಯೂಯಾರ್ಕ್ ಸಂಸ್ಥಾನದಿಂದ ಅಧಿಕೃತ ರಿಜಿಸ್ಟ್ರೇಷನ್

ಪಡೆದು ಅಮೆರಿಕದಲ್ಲಿ ಆರಂಭವಾದ ಪ್ರಪ್ರಥಮ ಕನ್ನಡ ಸಂಘ. ಒಂದು ರಚನಾಂಗ ಸಿದ್ಧಪಡಿಸಿ ಸಂಕೇತಗೀತೆಯೊಂದನ್ನು (ಕುವೆಂಪು ಅವರ 'ಎಲ್ಲಾದರು ಇರು') ಆರಿಸಿಕೊಂಡು ವಿಶೇಷ ಉತ್ಸಾಹದಿಂದ ಅನೇಕಾನೇಕ ಕಾರ್ಯಕ್ರಮಗಳನ್ನು ಯೋಜಿಸಿಕೊಂಡೆವು. ವಸಂತೋತ್ಸವ, ವನವಿಹಾರ, ಕನ್ನಡ ಗಾಯಕರ ದಿನ, ಕನ್ನಡ ರಂಗಭೂಮಿಯ ದಿನ– ಹೀಗೆಲ್ಲ. ಒಂದು ಅನಿಯತಕಾಲಿಕ ಕೈಬರಹದ ಪತ್ರಿಕೆ 'ಸುದ್ದಿಸಾರಂಗಿ'ಯನ್ನು ಆರಂಭಿಸಿ ನಾನು ನಾಲ್ಕು ವರ್ಷಗಳ ಕಾಲ ಅಧ್ಯಕ್ಷ ಪದವಿಯಲ್ಲಿದ್ದಾಗ ತಪ್ಪದೆ ದ್ವೈಮಾಸಿಕವಾಗಿ ನಡೆಸಿಕೊಂಡು ಬಂದೆವು. ಅನಂತರದಲ್ಲಿಯೂ ವರ್ಷಕ್ಕೆರಡು ಬಾರಿಯಾದರೂ ಪತ್ರಿಕೆ ಪ್ರಕಟಗೊಂಡಿದೆ. ಕನ್ನಡ ಗ್ರಂಥಾಲಯ ನಿರ್ಮಿಸಿಕೊಂಡೆವು. ಆಗಮಿಸಿದ ಕನ್ನಡ ಸಾಹಿತಿಗಳಿಗೆ ಸನ್ಮಾನ ನೀಡುವ, ಪ್ರಮುಖ ಕನ್ನಡ ಕಲಾವಿದರಿಂದ ಕಾರ್ಯಕ್ರಮಗಳನ್ನು ಏರ್ಪಡಿಸುವ ಕೆಲಸವನ್ನು ಬಹು ಉತ್ಸಾಹದಿಂದ ಮಾಡಿದೆವು. ನಾವು ನ್ಯೂಯಾರ್ಕ್‌ನಲ್ಲಿ ಕೂಟ ಆರಂಭಿಸಿದಂತೆ ಸಮೀಪದ ಫಿಲಡೆಲ್ಫಿಯದಲ್ಲಿ 'ತ್ರಿವೇಣಿ,' ವಾಷಿಂಗ್ಟನ್‌ನಲ್ಲಿ 'ಕಾವೇರಿ,' ಬಾಸ್ಟನ್ ನಗರದಲ್ಲಿ 'ನ್ಯೂ ಇಂಗ್ಲೆಂಡ್ ಕನ್ನಡ ಕೂಟ,' ಕೆನಡಾದ ಮಾಂಟ್ರಿಯಾಲ್ ಮತ್ತು ಟೊರಾಂಟೊಗಳಲ್ಲಿ ಸಂಘಗಳು ನಿರ್ಮಾಣವಾದವು. ದೇಶದ ವಿವಿಧ ನಗರಗಳಲ್ಲಿ ಸಮಯ ಕಳೆದಂತೆ ಕನ್ನಡ ಸಂಘಗಳು ಏರ್ಪಟ್ಟವು. 1973ರಲ್ಲಿ ಪ್ರಥಮ ಬಾರಿಗೆ ಕೆ.ಎಸ್. ಸುಬ್ಬನರಸಿಂಹ ವಿರಚಿತ 'ಪಿಕ್‌ಪಾಕೆಟ್' ಎಂಬ ನಾಟಕವನ್ನು ರಂಗದಮೇಲೆ ತಂದೆವು. ಇದೇ ಅಮೆರಿಕದಲ್ಲಿ ಪ್ರದರ್ಶಿಸಿದ ಪ್ರಪ್ರಥಮ ಕನ್ನಡ ನಾಟಕವಾಗಿ ಪರಿಣಮಿಸಿದೆ. 1975ರಲ್ಲಿ ನಾನು ಅಧ್ಯಕ್ಷನಾಗಿದ್ದಾಗ ಕೈಲಾಸಂ ನಾಟಕವೊಂದನ್ನು ಸಿದ್ಧಪಡಿಸಿ ಈಶಾನ್ಯ ಅಮೆರಿಕದ ಎಲ್ಲ ಕೂಟಗಳಲ್ಲೂ ವಾರಾಂತ್ಯಗಳಲ್ಲಿ ಪ್ರದರ್ಶಿಸಿದೆವು. ಆ ಸಮಯದಲ್ಲಿ ನಾನು, ನ್ಯೂಯಾರ್ಕ್‌ನಲ್ಲಿ ಬರಲಿದ್ದ 'ಅಮೆರಿಕ ದ್ವಿಶತಾಬ್ಧಿಯ ವರ್ಷ – 1976'ರಲ್ಲಿ ಈಶಾನ್ಯ ಅಮೆರಿಕ ಕನ್ನಡ ಸಮ್ಮೇಳನವೊಂದನ್ನು ನಡೆಯಿಸುವ ಅಭಿಲಾಷೆ ಸೂಚಿಸಿದೆ. ಎಲ್ಲರ ಸಹಕಾರ ಪಡೆದು 1976ರ ಜುಲೈನಲ್ಲಿ ಪ್ರಥಮ ಈಶಾನ್ಯ ಕನ್ನಡ ಸಮ್ಮೇಳನವನ್ನು ವಿಜೃಂಭಣೆಯಿಂದ ನಡೆಸಿದೆವು. ಇದೇ, ಭಾರತದಾಚೆ ನಡೆದ ಪ್ರಪ್ರಥಮ ಕನ್ನಡ ಸಮ್ಮೇಳನವಾಗಿ ದಾಖಲಾಗಿದೆ. ಅನಂತರದ ವರ್ಷಗಳಲ್ಲಿ ಫಿಲಡೆಲ್ಫಿಯ, ವಾಷಿಂಗ್ಟನ್, ಮಾಂಟ್ರಿಯಾಲ್ ಮತ್ತು ಬಾಸ್ಟನ್ ನಗರಗಳಲ್ಲಿ ಇಂಥ ಸಮ್ಮೇಳನಗಳು ನಡೆದಿವೆ. ಐದನೆಯ ಸಮ್ಮೇಳನಕ್ಕೆ ನಾನು ಮೂರ್ತಿರಾಯರನ್ನು ಅಧ್ಯಕ್ಷರಾಗಲು ಬೇಡಿದ್ದೆ. ನಮ್ಮ ದುರದೃಷ್ಟಕ್ಕೆ ಆ ಸಮಯದಲ್ಲಿ ಅವರಿಗೆ ದೇಹಾಲಸ್ಯವುಂಟಾಗಿ ಬೆಂಗಳೂರಿನಿಂದ ಪ್ರಯಾಣಿಸಲು ಸಾಧ್ಯವಾಗಲಿಲ್ಲ. ಅವರಿಂದ ರಚಿತವಾದ 'ಪೂರ್ವಸೂರಿಗಳೊಡನೆ' ಎಂಬ ಪುಟ್ಟ ಗ್ರಂಥವೊಂದನ್ನು ಆ ಸಂದರ್ಭದಲ್ಲಿ ನಮ್ಮ ಪ್ರಕಟಣೆಯಾಗಿ ಗಿರೀಶ್ ಕಾರ್ನಾಡ್ ಅವರು ಉದ್ಘಾಟಿಸಿದರು. ಈ ಪುಸ್ತಕವೇ ಈ ದೇಶದಲ್ಲಿ ಪ್ರಕಟವಾದ ಪ್ರಪ್ರಥಮ ಗ್ರಂಥವಾಗಿ ಮನ್ನಣೆ ಪಡೆದಿದೆ. ಸಭಾಧ್ಯಕ್ಷರಾಗಿ ಎ.ಕೆ. ರಾಮಾನುಜನ್ ಅವರು ಮತ್ತು ಗಣ್ಯ ಅತಿಥಿಗಳಾಗಿ ಎಸ್.ಎನ್. ಶ್ರೀಧರ್ ದಯಮಾಡಿಸಿದ್ದರು.

ಬೇರು ಸೂರು

ಐದನೆಯ ಸಮ್ಮೇಳನದಲ್ಲಿ ಕನ್ನಡ ಇಲ್ಲಿ ಉಳಿಯುವ ಬಗ್ಗೆ ಚರ್ಚೆ ನಡೆಸಿದೆವು. ಆ ವೇಳೆಗಾಗಲೇ ಮಕ್ಕಳು ಮನೆಯಲ್ಲಿ ಕನ್ನಡ ಮಾತಾಡುವುದಿಲ್ಲ... ತಂದೆ ತಾಯಿ ಮನೆಯಲ್ಲೂ ಇಂಗ್ಲಿಷ್ ಬಳಸುತ್ತ ಮಕ್ಕಳ ಕಿವಿಗೆ ಕನ್ನಡ ಬೀಳದಂತೆ ಆಗಿದೆ... ಜನಜೀವನದಲ್ಲಿ ಉದ್ಯೋಗಪರಿಸರದಲ್ಲಿ ಶಾಲೆಯಲ್ಲಿ ಎಲ್ಲೆಲ್ಲೂ ಇಂಗ್ಲಿಷ್ ಹಾಸುಹೊಕ್ಕಾಗಿ ಹರಡಿ ಕನ್ನಡದ ಬಳಕೆ ಸೊರಗುತ್ತ ಬಂದಿದೆ... ಈ ಮಾತುಗಳು ಕೇಳಿಬಂದವು. ಎಂಭತ್ತರ ದಶಕದಲ್ಲಿ ಮಾಂಟ್ರಿಯಾಲ್ ನಗರದಲ್ಲಿ ಕನ್ನಡ ಸಮ್ಮೇಳನ ಜರುಗಿದಾಗಲೂ ಇದೇ ಚರ್ಚೆ. ಕನ್ನಡ ಸಂಘದ ಪದಾಧಿಕಾರಿಗಳೂ ತಮಗೆ ಸುಲಭವಾಗಿ ಮಾತಾಡಲು ಬರುವ ಇಂಗ್ಲಿಷ್ ಭಾಷೆಯನ್ನೆ ಕನ್ನಡದ ವೇದಿಕೆಯ ಮೇಲೂ ಬಳಸಲು ಆರಂಭಿಸಿದ್ದು ಕನ್ನಡದ ಉಳಿವಿನ ಬಗ್ಗೆ ತೀವ್ರ ಅನುಮಾನ ಬರಲು ಕಾರಣವಾಯಿತು. ಇದೇನಿದು ಹೆಸರುಗಳನ್ನೇ ಬದಲಾಯಿಸಿಕೊಳ್ಳುತ್ತಿದ್ದಾರಲ್ಲ! ಹರಿ ಹ್ಯಾರಿ ಆದ, ಸಂಪತ್ತು ಸ್ಯಾಮ್ ಆದ, ನೀಲಕಂಠನಂತೂ ನೀಲ್ ಕ್ಯಾಂಟ್ ಆಗಿ ಹೋದನೇ?

ಪ್ರಯತ್ನವೇನೋ ಮಾಡಿದೆವು. ನಮ್ಮ ಕೂಟಗಳಲ್ಲಿ ಕನ್ನಡ ಕಲಿಕೆಯ ಅವಕಾಶಗಳು, ವಚನಗಳ, ದಾಸರಪದಗಳ ಗಾಯನಸ್ಪರ್ಧೆ ಇತ್ಯಾದಿ. ಕನ್ನಡದ ಹಿರಿಯರು ಬಂದಿದ್ದಾಗ ಅವರಲ್ಲಿ ಪರಿಹಾರ ಕೇಳಿದೆವು. ಮಕ್ಕಳನ್ನು ಬೇಸಗೆಯಲ್ಲಿ ಕನ್ನಡ ನಾಡಿಗೆ ರವಾನಿಸಿ, ಕನ್ನಡ ಕೇಳಿ ಕೇಳಿ ಕಲಿಯಲೆಂದು ಹವಣಿಸಿದೆವು. ಅಮೆರಿಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪೌರ್ವಾತ್ಯ ವ್ಯಾಸಂಗ ವಿಭಾಗಗಳಿದ್ದು ಅಲ್ಲಿ ನಮ್ಮ ಯುವಜನರು ಕನ್ನಡ ಕಲಿಯುವ ಅವಕಾಶ ಇದ್ದರೂ ಅಂಥ ಅವಕಾಶಗಳನ್ನು ಉಪಯೋಗಿಸಿಕೊಳ್ಳುವವರು ಬಹುಮಟ್ಟಿಗೆ ಇಲ್ಲಿ ಬೆಳೆಯುತ್ತಿರುವ ಸ್ಥಳೀಯ ಅಮೆರಿಕನ್ನರು ಮಾತ್ರ. ಅಯೋವ ವಿಶ್ವವಿದ್ಯಾಲದವರು ತಮ್ಮ 2000ನೇ ವರ್ಷದ ವಿಕಾಸ ಯೋಜನೆಯಲ್ಲಿ ಕನ್ನಡವನ್ನು ಆರಿಸಿಕೊಂಡು ಪೀಠವೊಂದರ ಸ್ಥಾಪನೆಗೆ ಅಣಿಯಾದರು. ಅದಕ್ಕೆ ತಗಲುವ ಒಂದೂಕಾಲು ಮಿಲಿಯ ಡಾಲರುಗಳಲ್ಲಿ ಹತ್ತರಲ್ಲಿ ಒಂದು ಪಾಲೂ ಕೂಡಿಲ್ಲದೆ ಅವರು ಆ ಯೋಜನೆಯನ್ನು ಕೈಬಿಟ್ಟರು. ಆಗ ಸಂಗ್ರಹವಾದ ಹಣದ ಒಂದು ಭಾಗದಲ್ಲಿ ಅಯೋವಾ ವಿಶ್ವವಿದ್ಯಾಲಯದವರು ಈ ಯೋಜನೆಗೆ ಮುಖ್ಯ ಕಾರಣರಾದ ಡಾ. ಯು.ಆರ್. ಅನಂತಮೂರ್ತಿಯವರ ಹೆಸರಿನಲ್ಲಿ ಒಂದು ದತ್ತಿಯನ್ನು (U.R. Anantha murthy Fund for Karnataka Culture) ಸ್ಥಾಪಿಸಿ ಅದನ್ನು ಕರ್ನಾಟಕ ಮತ್ತು ಕನ್ನಡದ ಬಗ್ಗೆ ಭಾಷಣಗಳು, ಸಂಕಿರಣಗಳು, ಶಿಬಿರಗಳು ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲು ಉಪಯೋಗಿಸುತ್ತಿದ್ದಾರೆ.

ನಾವು ಮೊದಲ ಪೀಳಿಗೆಯ ಜನರಿರುವವರೆಗೆ ಕನ್ನಡ ಉಳಿಯುತ್ತದೆ ಎಂದರೂ ನಂತರದಲ್ಲಿ? ಈಗಾಗಲೇ ಎರಡನೆ ಪೀಳಿಗೆಯ ಅನೇಕ ಯುವಜನರು ಪರಭಾಷೀಯರನ್ನು ಮದುವೆಯಾಗಿ ಕನ್ನಡ ಸಂಪೂರ್ಣವಾಗಿ ಮರೆಯಾಗಿ

ಹೋಗಿರುವುದನ್ನು ನೋಡಿದ್ದೇವೆ. ಈ ಸನ್ನಿವೇಶದಲ್ಲಿ ಕನ್ನಡದ ಉಳಿವು ಹೇಗೆ ನಡೆದೀತು ಎಂಬ ಪ್ರಶ್ನೆಗೆ ನಾನು ಕನ್ನಡ ಸಾಹಿತ್ಯ ಪರಿಷತ್ತು ವಜ್ರೋತ್ಸವ ನಡೆಸಿದಾಗ ಪ್ರಕಟವಾದ ಕೌಸ್ತುಭ ಸಂಚಿಕೆಯಲ್ಲಿ ಉತ್ತರಿಸಲು ಪ್ರಯತ್ನಿಸಿದ್ದೆ. ಇಲ್ಲಿ ನೆಲೆಸಿರುವ ಇಟಾಲಿಯನ್, ಜರ್ಮನ್, ಪೋಲಿಷ್ ಇತ್ಯಾದಿ ಜನಾಂಗಗಳ ಮೂರು ನಾಲ್ಕನೆಯ ಪೀಳಿಗೆಯ ಯುವಜನರನೇಕರು ತಮ್ಮ ಮೂಲವನ್ನು ಹುಡುಕಿಕೊಂಡು ಪೂರ್ವಜರ ನಾಡಿಗೆ ತೆರಳಿ ವ್ಯಾಸಂಗ ಮಾಡಿದಂತೆ ನಮ್ಮ ಮುಂದಿನ ಪೀಳಿಗೆಯ ಜನ ಮಾಡದೆ ಇದ್ದಾರೇ? ಸಮೃದ್ಧವಾಗಿ ಬೆಳೆದಿರುವ ಕನ್ನಡ ಸಾಹಿತ್ಯ ಸಂಸ್ಕೃತಿ ಪ್ರಕಾರಗಳು ಕೆಲವರನ್ನಾದರೂ ಆಕರ್ಷಿಸದೆ ಬಿಡವು ಎಂದು ಸೂಚಿಸಿದ್ದೆ.

ಇದು ಹೇಗಾದರೂ ಇರಲಿ. ವರ್ಷಗಳು ಕಳೆದಂತೆ ದೇಶದಲ್ಲಿ ಚಾಲ್ತಿಯಲ್ಲಿರುವ ಕನ್ನಡ ಕೂಟಗಳನ್ನು ಒಂದೇ ಛತ್ರ ಸಂಸ್ಥೆಗೆ ಒಳಪಡಿಸಿ ಬೃಹತ್ ಸಮ್ಮೇಳನಗಳು ಇಲ್ಲಿ 2000ದ ಈಚೆಗೆ ನಡೆಯುತ್ತ ಬಂದಿವೆ. ಇಂಥ ಬೃಹತ್ ಸಮ್ಮೇಳನಗಳಲ್ಲಿ ಕನ್ನಡ ಸಾಹಿತ್ಯವನ್ನೇ ಕುರಿತ ವೈಚಾರಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯ ಇಲ್ಲದ್ದು ಕಂಡ ನಮ್ಮಲ್ಲಿ ಕೆಲವರು ಅದಕ್ಕಾಗಿಯೇ ಸಂಸ್ಥೆಯೊಂದನ್ನು ಆರಂಭಿಸಲು ತೊಡಗಿದೆವು. ಇದರ ಫಲವಾಗಿ 2003ರಲ್ಲಿ ಎಚ್.ವೈ. ರಾಜಗೋಪಾಲ್ ಅವರ ನೇತೃತ್ವದಲ್ಲಿ 'ಕನ್ನಡ ಸಾಹಿತ್ಯ ರಂಗ' ಆರಂಭವಾಯಿತು. ಈ ಹತ್ತು ವರ್ಷಗಳಲ್ಲಿ ಸಾಹಿತ್ಯ ರಂಗ ಉತ್ಕೃಷ್ಟ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಿದೆ. ಉತ್ತಮ ದರ್ಜೆಯ ಸಮ್ಮೇಳನಗಳು ನಡೆದಿವೆ. ಶ್ರೇಷ್ಠ ಸಾಹಿತಿಗಳು ಕನ್ನಡ ನಾಡಿನಿಂದ ಬಂದು ನಮ್ಮೊಡನೆ ಸಮಾಲೋಚಿಸಿದ್ದಾರೆ. ಕನ್ನಡ ಸಾಹಿತ್ಯದ ಬಗ್ಗೆ ಸಾಹಿತ್ಯ ರಂಗದ ವತಿಯಿಂದ ಅನೇಕ ನಗರಗಳಲ್ಲಿ ಶಿಬಿರವೊಂದು ನಡೆದಿದೆ. ಗಮನಾರ್ಹ ಪುಸ್ತಕಗಳ ಪ್ರಕಟಣೆ ರಂಗದ ಇನ್ನೊಂದು ವೈಶಿಷ್ಟ್ಯ. ಈ ಸಂಸ್ಥೆಯ ಆಡಳಿತ, ಕಾರ್ಯನಿರ್ವಾಹಕ ಮಂಡಲಿಗಳಲ್ಲಿ ಪದಾಧಿಕಾರಿಯಾಗಿ ಕೆಲಸ ಮಾಡಿದ್ದು ನನಗೆ ಸಂತೋಷ ತಂದಿದೆ.

ಈ ಭಾರೀ ಸಂಘಗಳೇ ಅಲ್ಲದೆ, ಅನೇಕ ನಗರಗಳಲ್ಲಿ ಆಸಕ್ತ ಮಂದಿ ಸ್ಥಳೀಯ ಗೋಷ್ಠಿಗಳನ್ನು ನಡೆಸಿದ್ದಾರೆ. ನ್ಯೂಜೆರ್ಸಿ ಭಾಗದಲ್ಲಿ ಸುಮಾರು 15 ವರ್ಷಗಳ ಹಿಂದೆ ಆರಂಭವಾದದ್ದು, ದಿವಂಗತ ಕವಿ, ವಿಮರ್ಶಕ ಪಿ. ಶ್ರೀನಿವಾಸರಾವ್ ನೆನಪಿನಲ್ಲಿ 'ಪ್ರಸ್ತಾಪ' ಎಂಬ ಗೋಷ್ಠಿ. ಇದನ್ನು ರೂಪಿಸಿದವರು ಎಚ್.ವೈ. ರಾಜಗೋಪಾಲ್. ಈವರೆಗೆ ಸುಮಾರು ಅರುವತ್ತು ಸಭೆಗಳು ನಡೆದು ಉದ್ದಾಮ ಸಾಹಿತಿಗಳನ್ನು, ಕಲಾವಿದರನ್ನು ಹತ್ತಿರದಿಂದ ನೋಡುವ ಕೇಳುವ ಅಪೂರ್ವ ಅವಕಾಶ ಲಭಿಸಿದೆ. ಇನ್ನೊಂದು, ನ್ಯೂಜೆರ್ಸಿಯಲ್ಲಿ ಹನ್ನೊಂದು ವರ್ಷಗಳಿಂದ ನಡೆದು ಬಂದಿರುವ ಅನಿಯತಕಾಲಿಕ 'ಕಗ್ಗ' ಸಂಸ್ಥೆ. ಕನ್ನಡದ ಶ್ರೇಷ್ಠ ಗ್ರಂಥಗಳನ್ನು ಓದುವ, ಚರ್ಚಿಸುವ ಗೆಳೆಯರ ಬಳಗಕ್ಕೆ ಪಾಠಕನಾಗಿ ನಾನು ಭಾಗವಹಿಸುತ್ತ ಬಂದಿದ್ದೇನೆ.

ಮೇಲೆ ಕಾಣಿಸಿದಂತೆ ಕನ್ನಡ ಸಂಘಟನೆಯ ಕಾರ್ಯವೇ ಅಲ್ಲದೆ ಅಷ್ಟಿಷ್ಟು

ಬರವಣಿಗೆಯ ಕೆಲಸವನ್ನೂ ಮಾಡಲು ಸಾಧ್ಯವಾಗಿದೆ. 'ಸುದ್ದಿ ಸಾರಂಗಿ' ಪತ್ರಿಕೆ ಮತ್ತು 'ಅಮೆರಿಕನ್ನಡ' ಪತ್ರಿಕೆಗಳಲ್ಲಿ, ಸಾಹಿತ್ಯ ರಂಗದ ಕೆಲವು ಪ್ರಕಟಣೆಗಳಲ್ಲಿ, ಅನೇಕ ಸಮ್ಮೇಳನ ವಿಶೇಷ ಸಂಚಿಕೆಗಳಲ್ಲಿ ಹಾಗೂ ಬಿಡಿಬರಹಗಳಾಗಿ ಪ್ರಕಟಿಸಿದ ಲೇಖನಗಳಲ್ಲದೆ 2002ರಲ್ಲಿ ಒಂದು ಕಿರುಪುಸ್ತಕ 'ಭಾರತದ ಬೃಹತ್ ಬೇಲಿ'ಯನ್ನು ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದೆ. ಈ ಪುಸ್ತಕದ ವಿಷಯ ಎರಡು ಮಾತು ಬರೆಯಲು ಇಷ್ಟಪಡುತ್ತೇನೆ. 2002ರ ಆದಿಭಾಗದಲ್ಲಿ ನ್ಯೂಯಾರ್ಕ್‌ನಲ್ಲಿ ನಮ್ಮ ಮನೆಯ ಬಳಿಯ ಸಾರ್ವಜನಿಕ ಗ್ರಂಥಭಂಡಾರದಲ್ಲಿ ಕಣ್ಣು ಹಾಯಿಸುತ್ತಿದ್ದಾಗ ಅಲ್ಲಿ ಒಬ್ಬ ಇಂಗ್ಲಿಷ್ ಲೈಬ್ರೇರಿಯನ್ ಬರೆದ 'ದ ಗ್ರೇಟ್ ಹೆಡ್ಜ್ ಆಫ್ ಇಂಡಿಯ' (The Great Hedge of India) ಎಂಬ ಪುಸ್ತಕ ಕಾಣಿಸಿತು. ಅದನ್ನು ಪಡೆದು ಓದಿದಾಗ ನನಗೆ ಮೈ ಜುಮ್ಮೆಂದಿತು. 19ನೆಯ ಶತಮಾನದಲ್ಲಿ ಉಪ್ಪಿನ ಮೇಲೆ ಸುಂಕ ಹೇರಿ ಅದರ ಕಳ್ಳ ಸಾಗಾಣಿಕೆ ತಪ್ಪಿಸುವುದಕ್ಕಾಗಿ ಭಾರತದ ನಡುವೆ 2500 ಮೈಲಿ ಉದ್ದದ ಮುಳ್ಳುಬೇಲಿಯೊಂದನ್ನು ಬ್ರಿಟಿಷರು ನಿರ್ಮಿಸಿದ್ದರು. ಉಪ್ಪಿನ ಮೇಲಿನ ಅಮಾನುಷ ಕಂದಾಯ ಮತ್ತು ಅದರ ಸುಲಿಗೆಗಾಗಿ ನಿರ್ಮಿಸಿದ ಬೇಲಿಯಿಂದ ಲಕ್ಷಾಂತರ ಮಂದಿ ಸತ್ತರು. ಈ ಕಠೋರ ಸತ್ಯ ನಾನು ಕೇಳಿದ ಯಾರಿಗೂ ತಿಳಿದಿರಲಿಲ್ಲವಾಗಿ ಈ ಕಥಾನಕವನ್ನು ರಚಿಸಿದೆ. ಶ್ರೀ ಯು.ಆರ್. ಅನಂತಮೂರ್ತಿಗಳು ನನ್ನ ಪುಸ್ತಕಕ್ಕೆ ಪ್ರಬುದ್ಧ ಮುನ್ನುಡಿ ಬರೆದರು, ಮೆಚ್ಚಿದರು. ಶ್ರೀ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಬೆನ್ನುಡಿ ಬರೆದು ಹರಸಿದರು, ಅಲ್ಲದೆ ಪುಸ್ತಕ ಪ್ರಕಟಣೆಗೆ ಆದ್ಯಂತ ನೆರವಾದರು. ಈಚೆಗೆ ಶ್ರೀ ಎಚ್.ಎಸ್. ವೆಂಕಟೇಶಮೂರ್ತಿಗಳು ಈ ಪುಸ್ತಕದ ಬಗ್ಗೆ ಪ್ರಬಂಧವೊಂದನ್ನು ಬರೆದು ತಮ್ಮ 'ಎದುರೀಜು' ಎಂಬ ಪ್ರಬಂಧ ಸಂಕಲನದಲ್ಲಿ ಪ್ರಕಟಿಸಿದ್ದಾರೆ, ಮೆಚ್ಚುಗೆ ಸೂಚಿಸಿದ್ದಾರೆ.

ಸಂಗೀತ ಸಂಸ್ಥೆ

ಕರ್ಣಾಟಕ ಸಂಗೀತಕ್ಕೆ ಪ್ರಧಾನ ವೇದಿಕೆಯೊಂದನ್ನು ಸ್ಥಾಪಿಸುವ ಆಸೆಯಿಂದ 1975ರಲ್ಲಿ ನಾವು ಕೆಲವರು – ಮದರಾಸಿನ ಪಿ.ರಾಜಗೋಪಾಲನ್, ರಾಮಚಂದ್ರನ್, ಸೂರಿ ಸುಬ್ಬನ್, ರಘುಪತಿ ಶರ್ಮ ಮತ್ತು ನಾನು ತಿಂಗಳಿಗೆರಡು ಬಾರಿ ಸಭೆ ಸೇರಿ ಚರ್ಚಿಸಿ ಕರ್ಣಾಟಕ ಮ್ಯೂಸಿಕ್ ಅಸೋಸಿಯೇಷನ್ ಆಫ್ ನಾರ್ತ್ ಅಮೆರಿಕ ಎಂಬ ಸಂಸ್ಥೆಯನ್ನು 1976ರಲ್ಲಿ ಆರಂಭಿಸಿದೆವು. ಕರ್ಣಾಟಕ ಸಂಗೀತ ಶ್ರೇಷ್ಠರನ್ನು ವರ್ಷಕ್ಕೊಂದು ಅಥವ ಎರಡು ಬಾರಿ ಕರೆಸಿ ದೇಶದ ಎಂಟು ಹತ್ತು ವಿವಿಧ ಮುಖ್ಯ ನಗರಗಳಲ್ಲಿ ಕಚೇರಿಗಳನ್ನು ಏರ್ಪಡಿಸುವುದು, ಯೋಗ್ಯ ಸಂಭಾವನೆ ನೀಡುವುದು, ಬಂದವರ ವಸತಿ ಊಟೋಪಚಾರ ನೋಡಿಕೊಳ್ಳುವದು ಎಲ್ಲವನ್ನೂ ನಿಷ್ಕರ್ಷಿಸಿ ಕ್ರಮದ ಬಗ್ಗೆ ತಿಳುವಳಿಕೆ ನೀಡುವ ಕಿರುಪತ್ರವೊಂದನ್ನು ತಯಾರಿಸಿದೆವು. ರಾಜಗೋಪಾಲನ್

ಅಧ್ಯಕ್ಷರಾಗಿ, ನಾನು ಉಪಾಧ್ಯಕ್ಷನಾಗಿ, ಸೂರಿ ಸುಬ್ಬನ್ ಖಜಾಂಚಿಯಾಗಿ ಮೊದಲ ಹತ್ತು ವರ್ಷಗಳು ಸಂಸ್ಥೆಯನ್ನು ನಡೆಸಿಕೊಂಡು ಬಂದೆವು. ಸಂಸ್ಥೆಯ ಆರಂಭದ ಕಚೇರಿ ನಡೆಸಿ ಕೊಟ್ಟ ಎಂ. ಎಲ್. ವಿ. ಅವರೇ 1984ರಲ್ಲಿ ನಡೆದ ಪುರಂದರದಾಸರ 500ನೆಯ ಜನ್ಮದಿನಕ್ಕೂ ಬಂದು ನ್ಯೂಯಾರ್ಕ್‌ನಲ್ಲಿ ಅದ್ಭುತ ಸಂಗೀತ ಕಾರ್ಯಕ್ರಮ ನೀಡಿದರು. ಇಂದಿಗೂ ಈ ಸಂಸ್ಥೆ ಕರ್ನಾಟಕ ಸಂಗೀತಕ್ಕೆ ಘನವಾದ ವೇದಿಕೆ ನೀಡುತ್ತ ಬಂದಿದೆ.

ಭಾರತೀಯರ ರಾಜಕೀಯ ಪ್ರಜ್ಞೆ

ಇಲ್ಲಿನ ಪ್ರಜಾಪ್ರಭುತ್ವದ ತಂತ್ರ ನಮಗೆ ಹೊಸದಾಗಿ ಕಂಡ ಮೊದಲ ವರ್ಷಗಳಲ್ಲಿ ನಮ್ಮ ಜನ ಅಲ್ಲೊಬ್ಬರು ಇಲ್ಲೊಬ್ಬರು ಸ್ಥಳೀಯ ಚುನಾವಣೆಗಳಲ್ಲಿ ನಿಲ್ಲುತ್ತಿದ್ದರು. ಆ ಸಮಯದಲ್ಲಿ ಇಲ್ಲಿನ ಶಾಸನ ಸಭೆಗಳಾದ ಸೆನೆಟ್ ಮತ್ತು ಕಾಂಗ್ರೆಸ್ ಪ್ರತಿನಿಧಿಗಳು ಕೆಲವರು ನಮ್ಮನ್ನು ಉದ್ದೇಶಿಸಿ ಮಾತನಾಡಿ ರಾಜಕೀಯದಲ್ಲಿ ಬರಿಯ ಬಾಯಿಮಾತಲ್ಲಿ ಉಮೇದುವಾರರಿಗೆ ಉತ್ತೇಜನ ಕೊಟ್ಟರೆ ಸಾಲದು, ನಾವು ಅವರ ಪ್ರಚಾರ ಕಾರ್ಯಕ್ಕೆ ಉದಾರವಾಗಿ ಧನ ಸಹಾಯ ಮಾಡಬೇಕು, ನಾವು ಬೆಂಬಲಿಸುವ ಪಕ್ಷದ ನಿಲುವು ತಿಳಿದಲ್ಲದೆ ಚುನಾವಣೆಗಳಲ್ಲಿ ಕೆಲಸ ಮಾಡುವುದಕ್ಕೆ ಅರ್ಥವಿಲ್ಲ ಎಂದು ಹೇಳಿದರು. ಕಾಂಗ್ರೆಸ್‌ಮನ್ ಜೊಸೆಫ್ ಅಡಾಬೋ ಮತ್ತು ಗ್ಯಾರಿ ಆಕರ್‌ಮನ್ ಭಾರತೀಯರ ಗುಂಪುಗಳಿಗೆ ತಮ್ಮ ಡೆಮೊಕ್ರಾಟಿಕ್ ಪಕ್ಷದ ನಿಲುವನ್ನು ಕುರಿತು ಉಪದೇಶಿಸುತ್ತ ನಮ್ಮನ್ನು ಆ ಪಕ್ಷ ಸೇರಲು ಬಹುವಾಗಿ ಓಲೈಸುತ್ತಿದ್ದರು. ಈ ರಾಜಕೀಯ ಪ್ರಜ್ಞೆ ನಮ್ಮಲ್ಲಿ ಊರ್ಜಿತವಾಗಲು ಒಂದು ಇಂಡಿಯನ್ ಫ಼ೋರಂ ಫ಼ಾರ್ ಪೊಲಿಟಿಕಲ್ ಎಜುಕೇಶನ್ (Indian Forum for Political Education) ಎಂಬ ಸಂಸ್ಥೆಯೊಂದನ್ನು ನಾವು ನಾಲ್ಕಾರು ಮಂದಿ (ಟಾಮಸ್ ಅಬ್ರಹಾಮ್, ಪ್ರಿಸಿಲ ಪರಮೇಶ್ವರನ್, ಕೇರಳದ ಇನ್ನಿಬ್ಬರು ಮತ್ತು ನಾನು) ಸೇರಿ 1980ರಲ್ಲಿ ಆರಂಭಿಸಿದೆವು. ಸಂಸ್ಥೆಯ ಉಪಾಧ್ಯಕ್ಷನಾಗಿ ಕೆಲವು ವರ್ಷಗಳು ಕೆಲಸ ಮಾಡಿದೆ. ಆಗ ಮತದಾರರ ನೋಂದಾವಣಿ (Voter Registration Drive) ನಡೆಸಿದ್ದೆವು. ಈಗಲೂ ಈ ಸಂಸ್ಥೆ ಉಪಯುಕ್ತ ವೇದಿಕೆ ನೀಡುತ್ತಿದೆ.

ಕರ್ನಾಟಕ ವೈದ್ಯರ ಒಕ್ಕೂಟ

ಈ ದೇಶದಲ್ಲಿ ಒಟ್ಟು ವೈದ್ಯರ ಸಂಖ್ಯೆ 650,000 ಇದ್ದು, ಭಾರತೀಯ ವೈದ್ಯರ ಸಂಖ್ಯೆ ಇದರಲ್ಲಿ ಸುಮಾರು ಶೇಕಡ 10ರಷ್ಟು. ಕನ್ನಡಿಗ ವೈದ್ಯರ ಸಂಖ್ಯೆಯೂ ದೊಡ್ಡದೇ. 1975ರಲ್ಲಿಯೇ ಫ಼ಿಲಡೆಲ್ಫಿಯದಲ್ಲಿ ಬೆಂಗಳೂರು ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಒಂದು ಸಮೂಹವನ್ನು ಕೂಡಿಸಿದ್ದರು. ನಾನು ಅಲ್ಲಿಗೆ ಹೋಗಿದ್ದೆ. ನಂತರದಲ್ಲಿ 1976ರಲ್ಲಿ ನ್ಯೂಯಾರ್ಕ್ ನಗರದಲ್ಲಿಯೇ ಕರ್ನಾಟಕದ ಎಲ್ಲ ವೈದ್ಯಕೀಯ ಮತ್ತು ದಂತವೈದ್ಯರ

ಸಂಘವೊಂದಕ್ಕೆ ನಾವು ನಾಲ್ಕೈದು ಮಂದಿ ನಾಂದಿ ಹಾಕಿದೆವು. ಅದು ಕ್ರಮೇಣ ಬೆಳೆಯುತ್ತ ಬಂದು ಈಗ ದೇಶದ ಉದ್ದಗಲದಲ್ಲಿ ವ್ಯಾಪಿತವಾಗಿದೆ. ಬೇರೆಬೇರೆ ನಗರಗಳಲ್ಲಿ (ಷಿಕಾಗೊ, ಅಟ್ಲಾಂಟಿಕ್ ಸಿಟಿ, ನ್ಯೂಯಾರ್ಕ್, ಮಯಾಮಿ, ಆರ್ಲ್ಯಾಂಡೊ, ಲಾಸ್ ವೇಗಸ್–ಇತ್ಯಾದಿ) ವಾರ್ಷಿಕ ಸಮ್ಮೇಳನಗಳಲ್ಲಿ ವೈದ್ಯಕೀಯ ಶಿಕ್ಷಣವನ್ನೂ ನೀಡುತ್ತ ಸಂತೋಷ ಸಮಾರಂಭಗಳನ್ನು ಸಂಭ್ರಮದಿಂದ ಏರ್ಪಡಿಸುತ್ತ ಬಂದಿದೆ. ಬೆಂಗಳೂರಿನಲ್ಲೂ ಅನೇಕ ಬಾರಿ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಸ್ಥಳೀಯ ವೈದ್ಯರ ಸಹಕಾರದೊಂದಿಗೆ ನಡೆಸಿದೆ. ನಮ್ಮ ಕರ್ಣಾಟಕ ವೈದ್ಯಸಮೂಹದ ಪ್ರಗತಿಯನ್ನು ನೋಡುತ್ತಲೇ ಉದ್ಭವವಾದದ್ದು ಅಮೆರಿಕದ ಭಾರತೀಯ ವೈದ್ಯರ ಸಂಘ. ಈ ಸಂಘ ಪ್ರಚಂಡವಾಗಿ ಬೆಳೆದು ಅಮೆರಿಕದ ಹಿರಿಯ ವೈದ್ಯ ಸಂಘಕ್ಕೆ ಭಾರತೀಯ ವಕ್ತಾರನಾಗಿದ್ದು ಇಲ್ಲಿ ಭಾರತೀಯ ವೈದ್ಯರ ಕಾಳಜಿ ವಹಿಸಿ ಕೆಲಸ ಮಾಡುತ್ತಿದೆ.

ನ್ಯೂಯಾರ್ಕ್ ಭಾರತೀಯ ಸಂಸ್ಥೆಗಳ ಒಕ್ಕೂಟ

ವಿಶಾಲ ನ್ಯೂಯಾರ್ಕ್ ನಗರ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಅನೇಕಾನೇಕ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಸ್ಥೆಗಳನ್ನು ಒಂದುಗೂಡಿಸಿ ವರ್ಷಂಪ್ರತಿ ಭಾರತೀಯ ಸ್ವಾತಂತ್ರ್ಯ ದಿನ ಆಚರಿಸುತ್ತ, ಅಂದು ಪೆರೇಡ್ ಒಂದನ್ನು ನಡೆಸುವುದೇ ಅಲ್ಲದೆ ಇಲ್ಲಿ ನೆಲೆಸಿದ ಭಾರತೀಯರ ಕೊರತೆ ಕಾಳಜಿಗಳನ್ನು ಉದ್ದೇಶಿಸಿ ಪರಿಹಾರ ನೀಡಲು ಶ್ರಮಿಸುವ ಸಂಸ್ಥೆ 'ಭಾರತೀಯ ಜನಾಂಗಗಳ ಒಕ್ಕೂಟ' 1980–81ರಲ್ಲಿ ಆರಂಭವಾಯಿತು. ಈ ಒಕ್ಕೂಟಕ್ಕೆ 1982ರಲ್ಲಿ ನಾನು ಅಧ್ಯಕ್ಷನಾಗಿ ಆರಿಸಿ ಬಂದೆ. ಆ ವರ್ಷ ಪ್ರಥಮ ಬಾರಿಗೆ ಪಾಶ್ಚಿಮಾತ್ಯ ಸಂಗೀತದ ಉತ್ಕೃಷ್ಟ ನಿರ್ದೇಶಕ ಝುಬೆನ್ ಮೆಹ್ತಾ ಅವರು ಗ್ರ್ಯಾಂಡ್ ಮಾರ್ಷಲ್ ಆಗಿಯೂ, ನಾನು ಮಾರ್ಷಲ್ ಆಗಿಯೂ ಮ್ಯಾಡಿಸನ್ ಅವೆನ್ಯುನಲ್ಲಿ ಪರೇಡಿನಲ್ಲಿ ನಡೆದೆವು. ಬೃಹತ್ತಾದ 'ಇಂಡಿಯ ಡೇ ಪೆರೇಡ್' ಪ್ರತಿವರ್ಷವೂ ನಡೆಯುತ್ತ ಬಂದಿದೆ.

1982ರಲ್ಲಿ ಭಾರತೀಯರ ಆತಂಕಗಳಲ್ಲಿ ಇದ್ದ ಒಂದು ಮುಖ್ಯ ವಿಷಯವೆಂದರೆ ಸ್ಥಳೀಯ ಅಮೆರಿಕನ್ ಜನ ಅವರ ಬಗ್ಗೆ ಅಲ್ಲಲ್ಲಿ ತೋರಿಸುತ್ತಿದ್ದ ಭೇದಭಾವ ಒಮ್ಮೊಮ್ಮೆ ಹಿಂಸೆಯಲ್ಲಿ ಪರ್ಯವಸಾನವಾಗುತ್ತಿದ್ದುದೇ ಆಗಿತ್ತು. ಇದಲ್ಲದೆ ಆಗಿನ ವಲಸೆಗಾರರ ಮೇಲಿನ ನಿರ್ಬಂಧಗಳಲ್ಲಿ ಹತ್ತಿರದ ಸಂಬಂಧಿಗಳಿಗೆ ವೀಸಾ ಕೊಡದೆ ಉಂಟಾಗುವ ಕಷ್ಟಸ್ಥಿತಿಯೂ ಸೇರಿತ್ತು. ಇಂಥ ಸಮಸ್ಯೆಗಳಿಗೆ ಪರಿಹಾರ ಕೇಳುವ ಉದ್ದೇಶದಿಂದ ನಾನು ಆಗ್ಗೆ ಮೇಯರಾಗಿದ್ದ ಎಡ್ ಕಾಚ್ ಅವರನ್ನು ಟೌನ್ ಹಾಲ್ ಸಭೆಯೊಂದಕ್ಕೆ ಬಂದು ಭಾರತೀಯರನ್ನು ಸಂಧಿಸಿರೆಂದು ಪ್ರಾರ್ಥಿಸಿದ್ದೆ. 1982 ಅಕ್ಟೋಬರ್ 8ರಂದು ನ್ಯೂಯಾರ್ಕ್ ಕ್ವೀನ್ಸ್ ವಿಭಾಗದಲ್ಲಿ ಬೃಹತ್‌ಸಭೆಯೊಂದನ್ನು ಏರ್ಪಡಿಸಿದ್ದೆವು. ನಾನು ನೀಡಿದ ಬಿನ್ನವತ್ತಳೆಗೆ ಸೂಕ್ತ ಉತ್ತರಗಳನ್ನು ಕೊಟ್ಟು ನಂತರ ನೆರೆದಿದ್ದ ಜನರೊಂದಿಗೆ ಸಂಭಾಷಣೆ ನಡೆಸಿದರು. ಈ ಸಭೆಯ ನಂತರ ಭಾರತೀಯರ ವಸತಿಗಳಿದ್ದ ಕಡೆಗಳಲ್ಲಿ

ಪೊಲೀಸ್ ಪಹರೆ ಹೆಚ್ಚಿತು. ಜನಾಂಗದ್ವೇಷದ ಪ್ರಕರಣಗಳ ವಿರುದ್ಧ ಕಾನೂನು ಬಲಪಡಿಸಲಾಯಿತು. ನಾನು ಅಧ್ಯಕ್ಷನಾಗಿದ್ದಾಗಲೇ ವಲಸೆ ಬರಲು ಇದ್ದ ಅಡಚಣೆಗಳನ್ನು ಉದ್ದೇಶಿಸಿ ಮಾತನಾಡಲು ಕಾಂಗ್ರೆಸ್‌ಮನ್ ಆಕರ್ಮನ್ ಮತ್ತಿತರ ಸ್ಥಳೀಯ ಶಾಸಕರೊಂದಿಗೆ ಸಭೆ ಸೇರಿಸಿದ್ದೆವು.

1983ರಲ್ಲಿ ಮೇಯರ್ ಅವರ ಜನಾಂಗ ಸಭೆಯ ಭಾರತೀಯ ಪ್ರತಿನಿಧಿಯಾಗಿರಲು ನಗರ ಸಭೆಯ ಕಚೇರಿಯಿಂದ ಕರೆ ಬಂತು. ತಿಂಗಳಿಗೊಂದು ಬಾರಿ ಸೇರುವ ಜನಾಂಗ ಸಭೆಯಲ್ಲಿ ವಿವಿಧ ಜನಸಮೂಹಗಳ ಅಗತ್ಯಗಳು ಕುಂದು ಕೊರತೆಗಳನ್ನು ಮೇಯರ್ ಗಮನಕ್ಕೆ ತರಲು ಅವಕಾಶವಿತ್ತು. ಹಾಗೆಯೇ ವಿವಿಧ ಜನಾಂಗಗಳ ಹಿರಿಮೆಯನ್ನು ಎತ್ತಿ ಹಿಡಿಯುವ ಏನಾದರೊಂದು ಕಾರ್ಯಕ್ರಮ ಹಾಕಿಕೊಳ್ಳಿರೆಂದು ಆದೇಶ ನೀಡಿದ್ದರು. ಫೆಬ್ರವರಿ 11, 1984ರ ದಿನ ಮೊದಲ ಬಾರಿಗೆ ನಡೆದ ಜನಾಂಗಗಳ ಪತ್ರಿಕಾಗೋಷ್ಠಿ ಸಿಟಿ ಹಾಲ್‌ನ ಭವ್ಯ ಸಭಾಂಗಣದಲ್ಲಿ ನಡೆಯಿತು. ನಾನು ಆ ಸಭೆಯಲ್ಲಿ ಮೇಯರ್ ಅವರನ್ನು ಉದ್ದೇಶಿಸಿ 'ಗಾಂಧೀಜಿ ಈ ಶತಮಾನದಲ್ಲಿ ಜೀವಿಸಿದ್ದ ಜಗತ್ಪ್ರಸಿದ್ಧ ಮಹಾಪುರುಷರು. ಅಂಥವರ ಸ್ಮಾರಕವನ್ನು ಪ್ರಪಂಚದಲ್ಲೇ ಅತ್ಯುನ್ನತ ಸ್ಥಾನ ಗಳಿಸಿರುವ ನ್ಯೂಯಾರ್ಕ್ ಮಹಾನಗರದಲ್ಲಿ ನಾವು ನಿರ್ಮಿಸಬೇಡವೇ? ಏನೆನ್ನುತ್ತೀರಿ?' ಎಂದೆ. ಮೇಯರ್ ಕಾಚ್ ಮಹಾ ಹುರುಪಿನ ವ್ಯಕ್ತಿ. 'ಅಗತ್ಯವಾಗಿ ಮಾಡೋಣ. ಮಹಾತ್ಮರ ಸ್ಮರಣೆಗಾಗಿ ಸೂಕ್ತ ಸ್ಮಾರಕ ನಿರ್ಮಿಸೋಣ. ಕೂಡಲೆ ಹರ್ಬ್ ರಿಕ್‌ಮನ್‌ರೊಂದಿಗೆ (ರಿಕ್‌ಮನ್ ಅವರು ಮೇಯರ್ ಅವರ ಕಾರ್ಯದರ್ಶಿಗಳಲ್ಲೊಬ್ಬರು) ಚರ್ಚಿಸಿ ಸರಿಯಾದ ಸಲಹೆಗಳನ್ನು ತನ್ನಿ' ಎಂದರು.

ಮೊದಲು ನಗರಸಭೆಗೆ ಎರಡು ಯೋಜನೆಗಳನ್ನು ಮಂಡಿಸಿ ಕಾಗದ ಬರೆದೆ. ಒಂದು: ಯಾವುದಾದರೂ ದೊಡ್ಡ ರಸ್ತೆಗೆ ಮಹಾತ್ಮಾ ಗಾಂಧಿ ಅವೆನ್ಯು ಎಂದು ಹೆಸರಿಡುವುದು; ಎರಡನೆಯದು, ಯಾವುದಾದರೊಂದು ಪ್ರಮುಖ ಸ್ಥಳದಲ್ಲಿ ಪೂರ್ಣ ಗಾಂಧಿ ಪ್ರತಿಮೆಯ ನಿರ್ಮಾಣ. ನಾಮಕರಣಕ್ಕೆ ಒದಗುವ ಅವೆನ್ಯು ಯಾವುದೂ ಇಲ್ಲ, ಪ್ರತಿಮೆಗಾದರೆ ಜಾಗ ಹುಡುಕಬಹುದು ಎಂದು ತಿಳಿಯಿತು. ಪ್ರತಿಮೆ ರಚಿಸುವವರು ಯಾರು? ರೇಖಾಚಿತ್ರಗಳು ನೋಡಲು ಸಿಗುತ್ತವೆಯೇ? ಹಣ ಭರಿಸುವ ಬಗೆ ಹೇಗೆ? – ಎಲ್ಲ ಪ್ರಶ್ನೆಗಳು ಎದುರಾದವು. ನಮಗೆ ಆಗ ಒದಗಿದ ಶಿಲ್ಪಿಗಳು ಯಾರೂ ಪೂರ್ಣಪ್ರತಿಮೆಯ ಹೊಣೆ ಹೊರಲು ಒಪ್ಪಲಿಲ್ಲ. ಒಂದು ದಿನ ಸ್ಟೇಟನ್ ಐಲೆಂಡಿನಲ್ಲಿ (ಇದು ನ್ಯೂಯಾರ್ಕ್ ನಗರದ ಒಂದು ಭಾಗ) ಆಗ ತಾನೇ ಆರಂಭಿಸಿಕೊಂಡಿದ್ದ 'ಗಾಂಧಿ ಪ್ರತಿಷ್ಠಾನ ಸಂಸ್ಥೆ'ಯ ರೂವಾರಿ ಯೋಗೇಶ್ ಕೊಠಾರಿ (ಈತ ಮಹಾತ್ಮರ ದೂರದ ಸಂಬಂಧಿ) ಅಹಮದಾಬಾದಿನಲ್ಲಿ ಗಾಂಧಿ ಪ್ರತಿಮೆಗಳನ್ನು ಮಾಡುವುದರಲ್ಲಿ ಪ್ರಸಿದ್ಧ ಹೆಸರಾಗಿದ್ದ ಕಾಂತಿಭಾಯಿ ಪಟೇಲ್ ಅವರ ವಿಷಯವನ್ನು ನಮ್ಮ ಗಮನಕ್ಕೆ ತಂದರು. ಕೊಠಾರಿಯ ಮೂಲಕ ಈ ಕೆಲಸವನ್ನು ಪಟೇಲರಿಗೆ ಒಪ್ಪಿಸಿದ್ದಾಯಿತು. ಇಲ್ಲಿ ಸ್ಥಾಪನೆಗೆ ಮತ್ತು ಪ್ರತಿಮೆಯ ತಯಾರಿಗೆ ತಗಲುವ ಕಾಲು ಮಿಲಿಯ ಡಾಲರುಗಳಲ್ಲಿ ದೊಡ್ಡ ಪಾಲನ್ನು ಸ್ಥಳೀಯ ಉದ್ಯಮಿ ಮೋಹನ್ ಮುರ್ಜಾನಿಯವರಿಂದ

ಪಡೆಯಲಾಯಿತು. ಈ ಯೋಜನೆಗೆ ಗಾಂಧಿ ಪ್ರತಿಷ್ಠಾನ ಪ್ರಚಾರ ಮಾಡಿ ದೇಶದ ವಿವಿಧ ಭಾಗಗಳಿಂದ ಕಲೆ ಹಾಕುತ್ತಿದ್ದ ಹಣ ಮತ್ತು ನಾವು ಕೆಲವರು ಹಾಕಿದ ಹಣ ಎಲ್ಲವೂ ಸೇರಿತ್ತು.

ನಗರ ಸಭೆ ಪ್ರತಿಮಾನಿರ್ಮಾಣಕ್ಕೆ ಸ್ಥಳ ಹುಡುಕಲು ಆರಂಭಿಸಿತ್ತು. ಇಲ್ಲಿ ಸ್ಥಳೀಯ ಕಮ್ಯೂನಿಟಿ ಬೋರ್ಡ್‌ಗಳು ಯಾವ ಯೋಜನೆ ಬಂದರೂ ಅವರ ವಿಶೇಷ ಸಮಿತಿಗಳಲ್ಲಿ ಚರ್ಚಿಸಿ ಒಪ್ಪಿಗೆ ಕೊಡಬೇಕಾಗಿದ್ದುದರಿಂದ ಇದೊಂದು ಆತಂಕದ ವಿಷಯವಾಗಿತ್ತು. ದಕ್ಷಿಣ ನ್ಯೂಯಾರ್ಕ್‌ನಲ್ಲಿ ಐದು ಬೋರ್ಡ್‌ಗಳು ನಕಾರ ಸೂಚಿಸಿದ್ದವು. ಕಡೆಗೆ ನ್ಯೂಯಾರ್ಕ್ ನಗರಮಧ್ಯದ ಯೂನಿಯನ್ ಸ್ಕ್ವೇರ್ ಪಾರ್ಕ್‌ನ ಆಗ್ನೇಯ ಮೂಲೆಯಲ್ಲಿ ಒಂದು ತ್ರಿಕೋಣಾಕಾರ ವ್ಯಾಪ್ತಿಯನ್ನು ಪಾರ್ಕ್ಸ್ ಕಮಿಷನರ್ ಆರಿಸಿದರು. ಅಲ್ಲಿನ ಕಮ್ಯೂನಿಟಿ ಬೋರ್ಡ್ ಬಹುವಾಗಿ ಚರ್ಚಿಸಿದನಂತರ ಒಪ್ಪಿಗೆ ಕೊಟ್ಟಿತು. ಬೋರ್ಡ್‌ನಲ್ಲಿ ಪ್ರತಿಭಟನೆ ಸೂಚಿಸಿದ ಒಬ್ಬ ಮಹಿಳೆಯಂತೂ ನಾಝಿ ಮುಖಂಡರು ಜ್ಯೂಯಿಷ್ ಮಂದಿಯ ಸರ್ವನಾಶಕ್ಕೆ ತೊಡಗಿದ್ದಾಗ ಗಾಂಧಿ ಏಕೆ ತಪ್ಪಿಸಲು ಪ್ರಯತ್ನಿಸಲಿಲ್ಲ ಎಂದು ಆಪಾದಿಸಿದಳು. ಸೆನೆಟರ್ ಮೊಯ್ನಿಹಾನ್ ಮತ್ತು ಪಾರ್ಕ್ಸ್ ಕಮಿಷನರ್ ಹೆನ್ರಿ ಸ್ಟರ್ನ್ ಅವರ ಬೆಂಬಲದಿಂದ ಕಡೆಗೂ ಬೋರ್ಡ್ ಅನುಮತಿ ದೊರಕಿತು.

ಪ್ರತಿಮೆ ವಿಮಾನದಲ್ಲಿ ಸಾಗಿ ಬಂದು ನ್ಯೂಜರ್ಸಿಯಲ್ಲಿ ಮುರ್ಜಾನಿಯವರ ಬಟ್ಟೆಯ ಗಡಂಗು ತಲುಪಿತ್ತು. ಪಾರ್ಕ್ಸ್ ಇಲಾಖೆಯವರು ಪ್ರತಿಮೆಯ ನಿವೇಶನವನ್ನು ಸಿದ್ಧಪಡಿಸಲು ತೊಡಗಿದರು. ಅಕ್ಟೋಬರ್ 2, 1986 – ಮಹಾತ್ಮರ 117ನೆಯ ಜನ್ಮದಿನ ಯೂನಿಯನ್ ಸ್ಕ್ವೇರ್ ಪಾರ್ಕಿನಲ್ಲಿ ಎಂಟೂವರೆ ಅಡಿ ಉದ್ದದ, ಕೈಯಲ್ಲಿ ದಂಡ ಹಿಡಿದು ನಿಂತ, ಗಾಂಧಿ ಪ್ರತಿಮೆಯನ್ನು ಮಾರ್ಟಿನ್ ಲೂಥರ್ ಕಿಂಗ್ ಅವರ ಅನುಯಾಯಿಯಾಗಿದ್ದ ಬೇಯಾರ್ಡ್ ರಸ್ಟಿನ್ ಅವರು ಅನಾವರಣ ಮಾಡಿದರು. ಅನೇಕ ಅಮೆರಿಕನ್ ರಾಜಕೀಯ ಮುಖಂಡರು, ಭಾರತ ಸರಕಾರದ ಪ್ರತಿನಿಧಿಗಳು ಹಾಜರಿದ್ದ ಈ ಸಮಾರಂಭಕ್ಕೆ ಸಾವಿರಕ್ಕೂ ಮಿಕ್ಕು ಜನ ಬಂದಿದ್ದರು. ನನ್ನ ಭಾಷಣದಲ್ಲಿ ಈ ಪ್ರತಿಮೆ ನ್ಯೂಯಾರ್ಕ್ ನಗರಕ್ಕೆ ಭಾರತೀಯರ ಕೊಡುಗೆ ಎಂದು ನಿವೇದಿಸಿಕೊಂಡೆ.

ಗಾಂಧಿ ಪ್ರತಿಮೆಯ ಯೋಜನೆ ಆರಂಭವಾದ ದಿನದಿಂದ ಪ್ರತಿಮೆಯ ಅನಾವರಣ ನಡೆದ ದಿನದ ವರೆಗೆ– ಸುಮಾರು ಎರಡೂವರೆ ವರ್ಷಗಳು ಬಿಡುವಿಲ್ಲದ, ಅನೇಕ ಬಾರಿ ಆತಂಕಭರಿತ, ದಿನಗಳಾಗಿದ್ದವು. ಸರಕಾರದಲ್ಲಿ ಯೋಜನೆಯ ಬಗ್ಗೆ ವಿವಿಧ ಏಜೆನ್ಸಿಗಳಲ್ಲಿ ನಡೆಯುವ ವಾದವಿವಾದಭರಿತ ಕಲಾಪಗಳನ್ನು ಹತ್ತಿರದಿಂದ ನೋಡುವ ಮತ್ತು ಭಾಗಿಯಾಗುವ ಅಪೂರ್ವ ಅವಕಾಶ ನನಗೆ ಒದಗಿತ್ತು. ಎಲ್ಲಿ ಯಾವ ಕಾರಣಕ್ಕೆ ಈ ಮಹತ್ವದ ಕಾರ್ಯ ನಿಂತುಹೋಗಿಬಿಡುವುದೋ ಎಂದು ಮನಸ್ಸನ್ನು ಕೊರೆಯುತ್ತಲೇ ಇತ್ತು. ಕಡೆಯ ತಿಂಗಳುಗಳಲ್ಲಿ ಯೋಗೇಶ್ ಅವರು ಸಂದಾಯವಾಗುತ್ತಿದ್ದ ಹಣಕಾಸಿನ ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟಿರದೆ ಹಣ ದುರುಪಯೋಗವಾಗಿರಬಹುದಾದ ವಿಷಯ

ತಿಳಿದೊಡನೆ ಮೇಯರ್ ಕಾಚ್ ಸಮಾರಂಭಕ್ಕೆ ಬರದೆ ನಿಂತರು. ನನ್ನನ್ನು ಸಮಾರಂಭ ಹೇಗೆ ನಡೆಯಿತೆಂದು ಪ್ರಶ್ನಿಸಿದ ಮೇಯರ್ ಮಾರನೆಯ ವರ್ಷ ಗಾಂಧಿ ಜಯಂತಿಯ ದಿನ ಪ್ರತಿಮೆಯ ಬಳಿ ಸೇರಿದ್ದ ನೂರಾರು ಮಂದಿಯನ್ನು ಉದ್ದೇಶಿಸಿ ಭಾಷಣ ಮಾಡಿದರು.

ಮೇಯರ್ ಕಾಚ್ ಹನ್ನೆರಡು ವರ್ಷಗಳ ಕಾಲ ನಗರಪಿತೃವಾಗಿದ್ದು ಅವರು ಅಧಿಕಾರ ವಹಿಸಿಕೊಳ್ಳುವ ವೇಳೆಗೆ ನಗರ ಸರಕಾರ ದಿವಾಳಿಯಾಗುತ್ತಿದ್ದುದನ್ನು ತಪ್ಪಿಸಿ ನಗರದ ವಿವಿಧ ಭಾಗಗಳನ್ನು ಶುಚಿಪಡಿಸಿ ಕಾಲು ಮಿಲಿಯ ಹೊಸ ವಾಸಗೃಹಗಳನ್ನು ನಿರ್ಮಿಸಿ ಪ್ರಖ್ಯಾತರಾದರು. ಕಾಚ್ ಮಹಾ ವಿನೋದಪ್ರಿಯ. ಅವರಿದ್ದ ಗ್ರೇಸೀ ಮ್ಯಾನ್‌ಶನ್‌ನಲ್ಲಿ ನಡೆಯುತ್ತಿದ್ದ ಸಂತೊಷಕೂಟಗಳಲ್ಲಿ ಗಟ್ಟಿಯಾಗಿ ನಗುತ್ತ ಎಲ್ಲರೊಡನೆ ಹರಟುತ್ತಿದ್ದರು. ಈಚೆಗಷ್ಟೇ ನಿಧನರಾದ ಕಾಚ್ ಅವರನ್ನು ಸಾವಿರಾರು ಮಂದಿ ನೆರೆದ ಸ್ಮರಣ ಸಭೆಯಲ್ಲಿ ಸ್ಮರಿಸಿದ ಈಗಿನ ಮೇಯರ್ ಬ್ಲೂಮ್‌ಬರ್ಗ್ ಅವರು ಕಾಚ್ ಅವರ ಅಸಾಧಾರಣ ಜೀವನೋತ್ಸಾಹ, ತಮ್ಮ ನಗರದ ಬಗ್ಗೆ ಎಣೆಯಿಲ್ಲದ ಪ್ರೇಮ, ಅವರು ತೋರುತ್ತಿದ್ದ– ನ್ಯೂಯಾರ್ಕಿಗರಿಗೆ ಸಹಜವಾದ –ಸೊಕ್ಕಿನ ನಡವಳಿಕೆ ಎಲ್ಲವನ್ನೂ ಪ್ರಶಂಸಿಸಿದರು. ಮೇಯರ್ ಕಾಚ್ ಅವರು ನನ್ನೊಡನೆ ಭಾರತವನ್ನು ಸಂದರ್ಶಿಸುವ ಆಸೆ ಇದೆ ಎನ್ನುತ್ತಿದ್ದರು, ಆದರೆ ಅದು ಕೈಗೂಡಲಿಲ್ಲ. ನಮ್ಮ ಊಟದ ರುಚಿ ನೋಡುವ ಇಷ್ಟ ವ್ಯಕ್ತಪಡಿಸಿದ ಅವರನ್ನು ಎರಡು ಬಾರಿ ಕೆಲವೇ ಆಪ್ತರೊಂದಿಗೆ ಭಾರತೀಯ ರೆಸ್ಟೋರಾಂಟ್‌ಗಳಿಗೆ ಒಯ್ದಿದ್ದೆ.

ಎಂಭತ್ತರ ದಶಕದಲ್ಲಿಯೇ ನ್ಯೂಯಾರ್ಕ್ ಗವರ್ನರ್ ಆಗಿದ್ದ ಮಾರಿಯೊ ಕೋಮೋ ಅವರ ಕಚೇರಿಯಿಂದ ನನಗೆ ಅವರ ಏಷಿಯನ್ ಅಮೆರಿಕನ್ ಕೌನ್ಸಿಲ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ಆಹ್ವಾನ ಬಂದಿತ್ತು. ಆಗ್ಗೆ ಇನ್ನೂ ನಾಶವಾಗದೆ ಉಳಿದಿದ್ದ ವರ್ಲ್ಡ್ ಟ್ರೇಡ್ ಸೆಂಟರಿನ 57ನೆ ಮಹಡಿಯ ಅವರ ಕಚೇರಿಯಲ್ಲಿ ಸೇರುತ್ತಿದ್ದೆವು. ಈ ಸಭೆಗಳಲ್ಲಿ ಏಷಿಯನರು – ಮುಖ್ಯವಾಗಿ ಚೀಣೀಯರು – ಎದುರಿಸುತ್ತಿದ್ದ ಭೇದಭಾವವನ್ನು ಕುರಿತ ಚರ್ಚೆ ಮತ್ತು ಪರಿಹಾರ, ಬೊಂಬಾಯಿ ಮತ್ತು ನ್ಯೂಯಾರ್ಕ್ ಸೋದರ ನಗರಗಳು ಎಂದು ಘೋಷಿಸುವುದೇ? ಮುಂತಾದ ವಿಷಯಗಳನ್ನು ಕುರಿತ ಚರ್ಚೆ ನಡೆಯುತ್ತಿತ್ತು. ನಮ್ಮ ಭಾರತೀಯ ದಿನದ ಪೆರೇಡ್‌ಗೂ ಅವರು ಬರುತ್ತಿದ್ದುದುಂಟು. ನನ್ನೊಂದಿಗೆ ನಮ್ಮ ಪೆರೇಡ್‌ನಲ್ಲಿ ಕಾಣುತ್ತಿದ್ದ ಅಶಿಸ್ತಿನ ಬಗ್ಗೆ ಹಾಸ್ಯ ಮಡುತ್ತಿದ್ದುದು ನನಗೆ ನೆನಪಿದೆ.

ಗಾಂಧಿ ಪ್ರತಿಮೆಯ ನಿರ್ಮಾಣದ ವಿಷಯವಾಗಿ ವಿವರಗಳು ಮರೆಯುವ ಮೊದಲೇ ಒಂದು ವಿಸ್ತಾರವಾದ ಕನ್ನಡ ಲೇಖನ ರಚಿಸಿ ಆಗ್ಗೆ ಪ್ರಕಟವಾಗುತ್ತಿದ್ದ 'ಅಮೆರಿಕನ್ನಡ' ಪತ್ರಿಕೆಯಲ್ಲಿ 1987ರಲ್ಲಿ ಪ್ರಕಟಿಸಿದ್ದೆ. ನಂತರದಲ್ಲಿ ಪ್ರೊ. ಮೂರ್ತಿರಾಯರು ಅದರ ಇಂಗ್ಲಿಷ್ ಭಾಷಾಂತರ ಮಾಡಿ ನನಗೆ ಕಳಿಸಿಕೊಟ್ಟರು. ಬಂದ ದಿನವೇ ಅದನ್ನು ನನ್ನ ಕೈಪೆಟ್ಟಿಗೆಯಲ್ಲಿ ಹಾಕಿಕೊಂಡು ನಗರದ ಭಾರತೀಯ ಇಂಗ್ಲಿಷ್

ಪ್ರಕಟಣೆಗಳಿಗೆ ತಲುಪಿಸಲು ಕಾರಿನಲ್ಲಿಟ್ಟುಕೊಂಡಿದ್ದೆ. ಆ ಸಂಜೆ ಲಿಂಕನ್ ಸೆಂಟರ್ ಬಳಿಯ ಹೈಸ್ಕೂಲ್ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮವೊಂದನ್ನು ಕೇಳಿ ರಸ್ತೆಯ ಬದಿ ನಿಲ್ಲಿಸಿದ್ದ ಕಾರಿನಲ್ಲಿ ಟ್ರಂಕ್ ತೆಗೆದು ನೋಡುತ್ತೇನೆ – ಯಾರೋ ಬೀಗ ಮುರಿದು ಕೈಪೆಟ್ಟಿಗೆ ಹಾರಿಸಿಕೊಂಡು ಹೋಗಿದ್ದಾರೆ! ಆ ಕಾಲದಲ್ಲಿ ಲಿಂಕನ್ ಸೆಂಟರ್ ಪಶ್ಚಿಮಕ್ಕೆ ಮಾದಕವಸ್ತುಗಳ ಮಾರಾಟದ ಕೇಂದ್ರವೊಂದಿತ್ತು. ನಾನು ರಸ್ತೆಯ ಬದಿಯಲ್ಲಿ ಎಡೆ ಇದ್ದದ್ದು ಕಂಡು ಕಾರ್ ನಿಲ್ಲಿಸಿಕೊಂಡದ್ದು ಭಾರೀ ಪ್ರಮಾದವಾಗಿ ಪರಿಣಮಿಸಿತು. ಸರಿ, ಮಾರನೆಯ ದಿನ ಬೆಳಗ್ಗೆ ಆರು ಗಂಟೆಗೇ ಆ ಜಾಗಕ್ಕೆ ಬಂದು ಅಲ್ಲಿ ಸುತ್ತ ಮುತ್ತ ಇದ್ದ ಎಲ್ಲ ಕಸಕಡ್ಡಿ ತುಂಬುವ ಪೀಪಾಯಿಗಳನ್ನು ಹುಡುಕಿ ಹುಡುಕಿ ಸಾಕಾದೆ. ಕದ್ದವನು ತನಗೆ ಬೇಕಾದದ್ದು ಪೆಟ್ಟಿಗೆಯಲ್ಲಿಲ್ಲವೆಂದು ಕಂಡೊಡನೆ ಅಲ್ಲಿಯೇ ಕಸದ ಪೀಪಾಯಿ ಒಂದರಲ್ಲಿ ಬಿಸಾಡಿರಬಹುದು ಎಂಬ ನಿರೀಕ್ಷೆ! ಮೂರ್ತಿರಾಯರ ಲಕೋಟೆ ಜತೆ ಗಾಂಧಿ ಪ್ರತಿಮೆಯ ಅನಾವರಣದ ದಿನ ತೆಗೆದ ಚಿತ್ರಗಳೆಲ್ಲವೂ ಕಳೆದುಹೋದವು. ನನಗೆ ಈ ಅನಾಹುತದಿಂದ ಚೇತರಿಸಿಕೊಳ್ಳಲು ತಿಂಗಳುಗಳೇ ಬೇಕಾದವು.

ಅಮೆರಿಕದಲ್ಲಿ ವೈದ್ಯಕೀಯ ಉದ್ಯೋಗ

ಈ ದೇಶದಲ್ಲಿರುವ ಸುಮಾರು ಆರೂವರೆ ಲಕ್ಷ ವೈದ್ಯರಲ್ಲಿ ಸುಮಾರು ಶೇಕಡ ಹತ್ತರಷ್ಟು ಭಾರತೀಯರಿದ್ದಾರೆ. ಸಾಮಾನ್ಯವಾಗಿ ಎಲ್ಲ ಪ್ರಮುಖ ನಗರ ವೈದ್ಯಕೇಂದ್ರಗಳಲ್ಲೂ ಭಾರತೀಯ ವೈದ್ಯರನ್ನು ನೋಡಬಹುದು. ಬಹುಮಂದಿ ಶಿಕ್ಷಣವೇತ್ತರು. ಇಲ್ಲಿನ ಜನಸಾಮಾನ್ಯರು ಭಾರತೀಯ ವೈದ್ಯ ಹೆಚ್ಚು ಅನುಕಂಪ, ತಾಳ್ಮೆ ಉಳ್ಳವನಾಗಿರುತ್ತಾನೆಂದು ನಂಬಿರುವುದು ಉಂಟು. ಈ ದೇಶದ ವಿವಿಧ ಭಾಗಗಳಲ್ಲಿ ನಮ್ಮವರು ಪ್ರಖ್ಯಾತ ತಜ್ಞರೆಂದು ಹೆಸರು ಪಡೆದಿರುವುದು ನಿಜವಾದರೂ ಕೆಲವಾರು ಮಂದಿ ಬಿರುಕಿನಲ್ಲಿ ನುಸುಳಿಹೋಗಿದ್ದಾರೆ– ಅಲ್ಲಲ್ಲಿ ಇನ್ನೂ ಇರುವ ವರ್ಣವಿಭೇದದ ಧೋರಣೆಯೋ, ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವ ಕಡಮೆಯಿದ್ದೋ ಇಲ್ಲವೆ ವೈಯಕ್ತಿಕ ಅದಕ್ಷತೆಯೋ – ಏನಾದರೂ ಕಾರಣಕ್ಕೆ. ಅನೇಕರು ಇಲ್ಲಿಯ ಅಸಾಧಾರಣ ಪದವೀವೃದ್ಧಿಯ ಅವಕಾಶಕ್ಕೆ ಹೊರತಾಗಿದ್ದು ನರಳಿದ್ದಾರೆ. ಅರ್ಹತೆಗೆ ಈ ದೇಶ ತೋರಿಸುವ ಮರ್ಯಾದೆ ಮತ್ತು ಸನ್ಮಾನ ನಾನು ಇನ್ನೆಲ್ಲೂ ಕಂಡಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ನಾನು ವೈದ್ಯಕೀಯ ಪ್ರಾಕ್ಟೀಸ್ ಜತೆಗೆ 35 ವರ್ಷಗಳಿಂದ ನಮ್ಮಲ್ಲಿ ತರಪೇತಿಗೆ ಬರುವ ವೈದ್ಯರಿಗೆ ಮೂಲವಿಜ್ಞಾನದ ವಿಷಯಗಳ ಪಾಠ ಹೇಳಿರುವುದಕ್ಕೆ ಕೃತಜ್ಞತೆ ತೋರಿಸಲು 2005ರಲ್ಲಿ ನ್ಯೂಯಾರ್ಕ್ ವಿಶ್ವವಿದ್ಯಾಲಯ ನನ್ನ ಹೆಸರಿನಲ್ಲಿ ದತ್ತಿ ಇಟ್ಟು ಲೆಕ್ಚರರ್‌ಷಿಪ್ ಆರಂಭಿಸಿದೆ. ಇದರ ವತಿಯಲ್ಲಿ ಪ್ರತಿವರ್ಷವೂ ಹೊರಗಿನಿಂದ ತಜ್ಞರು ಬಂದು ಭಾಷಣಮಾಡಿ ಹೋಗುತ್ತಾರೆ.

ನನ್ನ ಅಲೆಮಾರಿತನವನ್ನು ಕುರಿತು

ಅರುವತ್ತರ ದಶಕದ ಆದಿಭಾಗದಲ್ಲಿ ಭಾರತ ಬಿಟ್ಟು ಬ್ರಿಟನ್ನಿನಲ್ಲಿ ನಾಲ್ಕೈದು ವರ್ಷ ಇದ್ದದ್ದಾಯಿತು. ಆ ಅವಕಾಶ ಉಪಯೋಗಿಸಿಕೊಂಡು ಯೂರೋಪಿನ ಅನೇಕ ನಗರಗಳನ್ನು ನೋಡಿದೆವು. ಬೆಂಗಳೂರಿನಲ್ಲಿ ಮೂರು ವರ್ಷಗಳನ್ನು ಕಳೆದು ಈ ಕಡೆಗೆ ವಲಸೆ ಬಂದೆವು (1976ರಲ್ಲಿ ನಾವು ನಾಲ್ಕು ಮಂದಿಯೂ ಅಮೆರಿಕ ಪೌರತ್ವ ಪಡೆದುಕೊಂಡೆವು. ನಮ್ಮ ಕಡೆಯ ಮಗಳು ನ್ಯೂಯಾರ್ಕ್‌ನಲ್ಲಿಯೇ ಹುಟ್ಟಿದವಳು. ಆದ್ದರಿಂದ ಅವಳು ಜನ್ಮತಃ ಇಲ್ಲಿನ ಪೌರಳೇ). ಉದ್ಯೋಗದ ಆರಂಭ ವರ್ಷಗಳಲ್ಲಿ ತಜ್ಞರ ಸಮ್ಮೇಳನಗಳಲ್ಲಿ ಭಾಗವಹಿಸುವ ಉದ್ದೇಶದಿಂದ ಕೆನಡ, ಇಸ್ತಾಂಬುಲ್, ಮಾಸ್ಕೋ, ಸೇಂಟ್ ಪೀಟರ್ಸ್‌ಬರ್ಗ್ ನಗರಗಳನ್ನು ಮಕ್ಕಳ ಜತೆ ಸುತ್ತಿದೆವು. ಎಂಭತ್ತರ ದಶಕದಲ್ಲಿ ದಕ್ಷಿಣ ಅಮೆರಿಕದಲ್ಲಿ ಮೂರು ಬಾರಿ ಪ್ರವಾಸ ಮಾಡಿದೆವು. ಒಂದು ಸಲ ಅಮೆಝಾನ್ ನದಿ ಆರಂಭವಾಗುವ ಬ್ರೆಝಿಲ್‌ನ ಮನಾಗುವ ಎಂಬ ಸ್ಥಳಕ್ಕೆ ಹಾರಿ ಸಣ್ಣ ಹಡಗಿನಲ್ಲಿ ಹೊರಟು ಅಮೆಝಾನ್ ನದಿಯ ಅಟ್ಲಾಂಟಿಕ್ ಮುಖದವರೆಗೂ ಯಾತ್ರೆ ಮಾಡಿದೆವು. ಇನ್ನೊಂದು ಬಾರಿ ಪನಾಮ ಕಾಲುವೆಯನ್ನು ದಾಟಿ ಬಂದದ್ದಾಯಿತು. 1996ರಲ್ಲಿ ಬೋನಸ್ ಐರ್ಸ್‌ನಿಂದ ಹೊರಟು ದಕ್ಷಿಣ ಅಮೆರಿಕದ ಪ್ರದಕ್ಷಿಣೆ ಮಾಡಿ ಚಿಲಿಯ ಫ್ಲಿಯೋರ್ಡ್‌ಗಳನ್ನು ನೋಡಿ ಅಚ್ಚರಿಪಟ್ಟು ಉತ್ತರದ ವಾಲ್ಪರೈಸೊ ತಲುಪಿ ನ್ಯೂಯಾರ್ಕ್‌ಗೆ ವಾಪಸಾದೆವು. 2000ದ ಈಚೆಗೆ ಚೈನಾ, ಜಪಾನ್, ಆಸ್ಟ್ರೇಲಿಯ ಮತ್ತು ನ್ಯೂಝೀಲೆಂಡ್ ಪ್ರವಾಸ ಮಾಡಿದ್ದಾಯಿತು. ಆಸ್ಟ್ರೇಲಿಯದ ಸಿಡ್ನಿಯಲ್ಲಿ ಅಲ್ಲಿಯ ಕರ್ಣಾಟಕ ಸಂಘದವರು ನಮ್ಮನ್ನು ಬರಮಾಡಿಕೊಂಡರು. 2002ರಲ್ಲಿ ಮಗಳು ಡಾಕ್ಟರ್ ಸುಜನಾ ಜತೆ ದಕ್ಷಿಣ ಅಮೆರಿಕದ ನಿಕರಾಗುವ ದೇಶದ ಹಿನೊಟೇಗ ಎಂಬ ಬೆಟ್ಟದ ಮೇಲಿನ ಹಳ್ಳಿಯಲ್ಲಿ ಚಿಕಿತ್ಸೆಯ ಮತ್ತು ಆಪರೇಷನ್ ಕ್ಯಾಂಪ್ ಮಾಡಿದೆವು. ನಮ್ಮ ಅಕಾಡೆಮಿ 2003ರಲ್ಲಿ ನನಗೆ ಸಾರ್ವಜನಿಕ ಸೇವಾಪ್ರಶಸ್ತಿ ನೀಡಿತು. 2007ರಲ್ಲಿ ಕ್ಯಾಂಬೋಡಿಯದ ಅದ್ಭುತ ಅಂಗ್‌ಕೋರ್‌ವಾಟ್ ಅರಣ್ಯ ದೇಗುಲಗಳನ್ನು ನೋಡಿ ಮೈನವಿರೆದ್ದಿತು.

1992ರಲ್ಲಿ ಪ್ರಥಮ ಬಾರಿಗೆ ಅಂಟಾರ್ಕ್ಟಿಕ ನೋಡಲು ಅಮೆರಿಕದ ಮಂದಿಗೆ ಅವಕಾಶ ಕಲ್ಪಿಸಿದರು. ನ್ಯಾಷನಲ್ ಜಿಯೋಗ್ರಾಫ್ಲಿಕ್ ಪಂಗಡದವರ ಜತೆ ಅಂಟಾರ್ಕ್ಟಿಕ್ ಪೆನಿನ್ಸುಲಾವನ್ನು ಮಂಜುಗಡ್ಡೆ ಕತ್ತರಿಸುತ್ತ ಮುಂದೆ ಹೋಗುವ ಸಣ್ಣ ಹಡಗಿನಲ್ಲಿ ಐದು ದಿನ ಸುತ್ತಿದೆವು. ನಂತರದಲ್ಲಿ ದಕ್ಷಿಣ ಅಮೆರಿಕದ ತುತ್ತತುದಿಯಲ್ಲಿರುವ ಟಿಯೆರಾ ಡೆಲ್ ಫ್ಯೂಯೇಗೊ ಭೂಭಾಗಕ್ಕೆ ಬಂದು ನೋಡಿದರೆ ಕಣ್ಣಿಗೆ ಮನಸ್ಸಿಗೆ ಹಿತವಾಗಿ ಆನಂದಕೊಡುವ ಹಸುರಿನ ರಾಶಿ, ಚಿಲಿಪಿಲಿಗುಟ್ಟುವ ಮುದ್ದಾದ ಪುಟ್ಟ ಹಕ್ಕಿಗಳು! ಆಲಾಸ್ಕದಲ್ಲಿಯಾದರೋ ನೋಟ ಇದಕ್ಕಿಂತ ಭಿನ್ನವಾದದ್ದು ಮತ್ತು ವೈವಿಧ್ಯ ಬಹು ರಮಣೀಯ.

ಬೇರು ಸೂರು

ಆಗೀಗ ಅನಾಹುತಗಳನ್ನು ದಾಟಿದ್ದೂ ಉಂಟು. 1983ರಲ್ಲಿ ಸ್ವಿಟ್ಜರ್ಲೆಂಡಿನ ಆಲ್ಪ್ಸ್ ಶ್ರೇಣಿಯ ಝರ್ಮಾಟ್‌ನಲ್ಲಿ ಸ್ಕೀ ಮಾಡುವ ಸಲುವಾಗಿ ಮನೆಯವರೆಲ್ಲ ಹೋಗಿದ್ದೆವು. ಝರ್ಮಾಟ್‌ನಲ್ಲಿ ಹೊಟೇಲ್ ಬಾಗಿಲಿಂದಲೇ ಒಂದೂವರೆ ಮೈಲಿ ದೂರದಲ್ಲಿರುವ ರೈಲ್ವೇ ಸ್ಟೇಷನ್‌ವರೆಗೂ ಸ್ಕೀ ಮೇಲೆಯೇ ಹೋಗಿ ಅಲ್ಲಿ ಬೆಟ್ಟದ ರೈಲು ಹತ್ತಿ ಹನ್ನೊಂದೂವರೆಸಾವಿರ ಅಡಿ ಎತ್ತರದ ಗೋರ್ನರ್‌ಗ್ರಾಟ್ ಶಿಖರ ತಲುಪಿಕೊಂಡೆವು. ಅಲ್ಲಿಂದ ಸ್ಕೀ ಮೇಲೆ ಜಾರುತ್ತ ಬಂದಿದ್ದೇವೆ. ನನ್ನ ಬಲಕ್ಕಿದ್ದ ಮಗಳು ಸುಜನಾ ಸ್ಕೀ ಹಾದಿಯ ಬಲಕ್ಕೆ ಹೊಸದಾಗಿ ಮಂಜು ಸುರಿದು ಗಟ್ಟಿಹಾದಿಯಂತೆಯೇ ಕಾಣುತ್ತಿದ್ದ ಮಂಜಿನ ರಾಶಿಯೊಳಗೆ ಜಾರಿ ಮುಳುಗಿ ಹೋಗುತ್ತಿದ್ದಾಳೆ! ಎದೆಯವರೆಗೂ ಕುಸಿದಿದ್ದ ಹುಡುಗಿಯ ಕೈ ಹಿಡಿದು ಬಲವೆಲ್ಲ ಕೊಟ್ಟು ಎಳೆದುಕೊಂಡ ನಂತರವೇ ಸರಾಗವಾಗಿ ಉಸಿರಾಡಿದೆ. ಸಧ್ಯ, ಬಚಾವಾಗಿ ಸ್ಕೀಗಳನ್ನು ಸರಿಯಾಗಿ ಬಿಗಿದುಕೊಂಡು ಎಚ್ಚರದಿಂದ ಇಳಿಯುತ್ತ ಬಂದು ಊರು ಸೇರಿದೆವು.

ಇನ್ನೊಂದು ಬಾರಿ 1994ರಲ್ಲಿ ಮೆಕ್ಸಿಕೊಗೆ ಸೇರಿದ ಕಾಬೋ ಸೆಂಟ್ ಲೂಕಾಸ್ ಎಂಬಲ್ಲಿ ಸಮುದ್ರದ ಅಂಚಿನ ಬಂಡೆಗಳ ಮರೆಯಲ್ಲಿ ಕೂತು ಯಾವುದೋ ಪುಸ್ತಕ ಓದುತ್ತಿದ್ದೆ. ಇದ್ದಕ್ಕಿದ್ದಂತೆ ಭಾರೀ ಅಲೆಯೊಂದು ನುಗ್ಗಿ ನನ್ನನ್ನು ಅನಾಮತ್ ಎತ್ತಿಕೊಂಡು ತೀರದಿಂದ ಮೂವತ್ತು ಅಡಿಗಳ ದೂರದಲ್ಲಿ ಬಿಸಾಡಿತು! ನನ್ನ ಕೈಕಾಲು ಬಡಿದಾಟ ನೋಡಿದ ಕೋಸ್ಟ್ ಗಾರ್ಡ್ ಧಡಾರನೆ ನೀರಿಗೆ ಬಿದ್ದು ಕಾಣುತ್ತಿದ್ದ ನನ್ನ ಬಲಹಸ್ತದ ಗುರುತು ಹಿಡಿದು ಮುಳುಗಿ ಕೈ ಹಿಡಿದು ಮೇಲೆಳೆದು ಈಜಿ ತಂದು ದಡಕ್ಕೆ ಹಾಕಿದ!

2009ರಲ್ಲಿ ಯೂರೋಪಿನ ಮೆಡಿಟೆರೇನಿಯನ್ ಜಹಜು ಪ್ರವಾಸಕ್ಕೆಂದು ರಾತ್ರಿಯೆಲ್ಲ ವಿಮಾನಪ್ರಯಾಣ ಮಾಡಿ ಬೆಳಗ್ಗೆ ಬಾರ್ಸಿಲೋನ ತಲುಪಿಕೊಂಡಿದ್ದೆವು. ಸಾಮಾನುಗಳನ್ನು ಸಾಗಿಸಿಕೊಂಡು ಅವರ ಭವ್ಯ ನೂತನ ಏರ್‌ಪೋರ್ಟ್ ಒಳಗೆ ಬಂದು ನಮ್ಮನ್ನು ಜಹಜಿಗೆ ಕರೆದುಕೊಂಡುಹೋಗುವ ಬಸ್ಸಿಗಾಗಿ ಕಾಯುತ್ತ ಕೂರಬೇಕಾಯಿತು. ಉಸ್ಸಪ್ಪ ಎಂದು ಕತ್ತಿನಲ್ಲಿಯೇ ಜೋತಾಡುತ್ತಿದ್ದ ನನ್ನ ಕೈಚೀಲವನ್ನು ಎದುರಿಗೆ ಬಂಡಿಯ ಮೇಲೆ ಇಟ್ಟಿದ್ದ ಪೆಟ್ಟಿಗೆಗಳ ಮೇಲೆ ಇಟ್ಟು ಆ ಕಡೆ ಈ ಕಡೆ ನೋಡುವಷ್ಟರಲ್ಲಿ ಕೈಚೀಲ ಇದ್ದ ಕಡೆ ಇಲ್ಲ! ಯಾರೋ ಲಪಟಾಯಿಸಿದ್ದರು! ಪಾಸ್‌ಪೋರ್ಟ್‌ಗಳು, ಹಣ ಎಲ್ಲ ಮಾಯ! ಸರಿ, ಇನ್ನು ಜಹಜಿನ ಒಳಗೆ ಹೋಗುವಂತಿಲ್ಲ. ಪೋಲೀಸರಿಗೆ ವರದಿ ಮಾಡಿ ಸಮೀಪದ ಹೊಟೇಲೊಂದರಲ್ಲಿ ಇಳಿದುಕೊಂಡು ಮಾರನೆ ದಿನ ಅಮೆರಿಕನ್ ಕಾನ್ಸುಲೇಟ್‌ನಲ್ಲಿ ಎಮರ್ಜೆನ್ಸಿ ಪಾಸ್‌ಪೋರ್ಟ್‌ಗಳನ್ನು ಪಡೆದುಕೊಂಡೆವು. ಖರ್ಚಿಗೆ ಕಿಸೆಯಲ್ಲಿ ಪ್ಲಾಸ್ಟಿಕ್ ಕಾರ್ಡ್ ಇತ್ತಲ್ಲ! ರೋಂ ನಗರಕ್ಕೆ ಹೋಗುವ ಏರೋಪ್ಲೇನ್ ಹತ್ತಿ ಅಲ್ಲಿಂದ ಚಿಕ್ಕ ವಿಮಾನದಲ್ಲಿ ಕೂತು ನೇಪಲ್ಸ್ ತಲುಪಿಕೊಂಡು ಆ ವೇಳೆಗೆ ಅಲ್ಲಿ ಸೇರಿದ್ದ ಜಹಜನ್ನು ಇನ್ನುಳಿದ ಎಂಟು ದಿನದ ಪ್ರವಾಸಕ್ಕೆ ಸೇರಿಕೊಂಡೆವು!

ಕೇಪ್ ಟೌನ್‌ನಿಂದ ಕೈರೋವರೆಗೆ ಒಂದು ತಿಂಗಳ ಪ್ರವಾಸ 2003ರಲ್ಲಿ

ಮಾಡಿದಾಗ ನೋಡಿದ ಅದ್ಭುತ ಅರಣ್ಯ ಪ್ರಾಣಿಗಳು, ವಿಕ್ಟೋರಿಯ ಜಲಪಾತ, ಗಾಂಧಿಗೆ ಕಿರಕುಳ ಕೊಟ್ಟ ಸ್ಮಟ್ಸ್ ಪ್ರತಿಮೆ, ಮತ್ತು ಕಡೆಯದಾಗಿ ನೈಲ್ ಸಾಂಸ್ಕೃತಿಕ ಪ್ರವಾಸ, ಅಲ್ಲದೆ ಜೋರ್ಡನ್‌ನಲ್ಲಿ ಸಿಲ್ಕ್ ರೋಡ್‌ನಲ್ಲಿರುವ ಪೆಟ್ರ ಶಿಲೆಯ ಮನೆಗಳು ಎಲ್ಲ ಅಸಾಧಾರಣ ಅನುಭವ ನೀಡಿದವು.

ಅಮೆರಿಕಕ್ಕೆ ಬಂದು 43 ವರ್ಷಗಳೇ ಕಳೆದಿವೆ. ಸುತ್ತಣ ಪ್ರಪಂಚವನ್ನು ನೋಡಲು ಈ ದೇಶದಲ್ಲಿ ನೆಲೆಸಿದ್ದರಿಂದಲೇ ಸಾಧ್ಯವಾಗಿದೆ ಎಂದು ತಿಳಿದಿದ್ದೇನೆ. ಇಲ್ಲಿ ನನ್ನ ಉದ್ಯೋಗ ಜೀವನದಿಂದ ನಿವೃತ್ತನಾಗುತ್ತಿರುವಂತೆ ನಮ್ಮ ನಗರದ ಅಸಾಧಾರಣ ನೋಟದ, ಕಲಿಕೆಯ ಅವಕಾಶಗಳನ್ನು ಉಪಯೋಗಿಸಿಕೊಳ್ಳುತ್ತಿರುವುದು ಮನಸ್ಸಿಗೆ ಹರ್ಷ ತಂದಿದೆ. ಮೂವರು ಹೆಣ್ಣುಮಕ್ಕಳೂ ತೊಂಬತ್ತರ ದಶಕದಲ್ಲಿ ಮದುವೆಯಾಗಿ ಅವರವರ ಮನೆಗಳಲ್ಲಿ ಮಕ್ಕಳೊಂದಿಗೆ ನೆಮ್ಮದಿಯ ಜೀವನ ನಡೆಸಿದ್ದಾರೆ. ಅವರೆಲ್ಲರಿಗೂ ಭಾರತ ಯಾವಾಗಲಾದರೂ ಹೋಗಿ ಇದ್ದು ಸುಖಿಸಬಹುದಾದ ಸ್ಥಳ. ನನ್ನಂತೆ ಅವರು ಕನ್ನಡನಾಡಿನಲ್ಲಿ ಇದ್ದು ಶಾಶ್ವತವಾಗಿ ಅದರ ಭಾಗವಾಗುವ ಚೈತನ್ಯ ಪಡೆದಿಲ್ಲ. ಆದರೆ ಆ ನಾಡು ಎಂದಿಗೂ ಅವರ ಹೃದಯದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿದೆ.

ಇರುವುದೆಲ್ಲವ ಬಿಟ್ಟು ಇರದುದರೆಡೆಗೆ...



– ವೈಶಾಲಿ ಹೆಗಡೆ

ಎಲ್ಲಿಂದ ಎಲ್ಲಿಗೆ ಬಂದರೂ ಏನು ಸಾಧಿಸಿದರೂ ಸದಾ ಒಂದು ಅವ್ಯಕ್ತ, ಅಗೋಚರ ಗುರಿಯೆಡೆ ಭರವಸೆಯ ಮಿಣುಕು ದೀಪವ ಹಿಡಿದು ಸಾಗುತ್ತಲೇ ಇರುವುದು ಬದುಕು. ಕಳೆದುಕೊಂಡದ್ದು, ಪಡೆದುಕೊಂಡದ್ದು, ಬಿಟ್ಟು ಬಂದದ್ದು, ಹಿಡಿಯಹೊರಟಿದ್ದು ಎಲ್ಲವನ್ನೂ ಒಟ್ಟುಗೂಡಿಸಿದ ಮೊತ್ತದಲ್ಲಿ ಗುರಿಯ ರೂಪುರೇಷೆಗಳು ಬದಲಾಗುತ್ತಲೇ ಇರುವುದೇ ಜೀವನದ ನಿತ್ಯನೂತನದ ರಹಸ್ಯವೇನೋ.

'ಇಲ್ಲಿಲ್ಲದ್ದು ಅಲ್ಲೇನಿದೆ; ಈಗ ಇಲ್ಲಿ ಎಲ್ಲವೂ ಇದೆ, ನೀವಿನ್ನೂ ಅಲ್ಲಿರುವುದು ಯಾಕೆ?' 'ಮನೆ ತಗೊಂಡಿರಂತೆ, ಅಲ್ಲೇ ತಳ ಊರುವ ನಿರ್ಧಾರವೇ? ಭಾರತಕ್ಕೆ ಹಿಂತಿರುಗಿ ಬರುವ ಯೋಚನೆಯಿಲ್ಲವೇ?' ಅನ್ನುವ ಭಾರತದಿಂದ ಬರುವ ಆತ್ಮೀಯರ ಪ್ರಶ್ನಾರ್ಥಕ ಚಿಹ್ನೆಗಳ ನಡುವೆ, 'ನಿಮ್ಮ ಮಕ್ಕಳನ್ನು ಅಲ್ಲಿಯವರಿಗೆ ಮದುವೆ ಮಾಡಿಬಿಡಬೇಕಾಗುತ್ತೆ ಬೇಗ ವಾಪಾಸ್ ಬರದಿದ್ದರೆ', 'ನೀವು ಅಮೆರಿಕನ್ನರಾಗಿಬಿಟ್ಟಂತಿದೆ' ಎಂಬಿತ್ಯಾದಿ ಕುಹಕದ ನುಡಿಗಳೂ ಕರ್ಣಪಟಲಗಳನ್ನು ಅಪ್ಪಳಿಸಿ ಹೋಗಿದ್ದಿವೆ. ಈ ಪ್ರಶ್ನೆಗಳಿಗೆ ಉತ್ತರವಿದೆಯೇ? ಉತ್ತರ ಕಂಡುಕೊಳ್ಳಬೇಕೇ? ಯಾಕಾಗಿ? ಇದು ನನ್ನದಲ್ಲದ, ನನ್ನವರೆಂಬವರಿಲ್ಲದ ನೆಲದ ತುಂಡು ಎಂದೆಲ್ಲ ಅನಿಸುತ್ತಿದ್ದ ದಿನಗಳಿದ್ದವು. ನನ್ನವರೆನ್ನುವ ಪದವೇ ಸಾಪೇಕ್ಷವಾದುದು. ಇದು ಅನುಭವಕ್ಕೆ ಬಂದ ಸತ್ಯ. ಅದು ಗಂಡ–ಹೆಂಡತಿ, ಮಕ್ಕಳು, ಅಪ್ಪ–ಅಮ್ಮರಂತೆ ಸಮಗ್ರ ಸಂಬಂಧದ ಗ್ರಹಿಕೆ ನೀಡುವ ಪದವಲ್ಲ. ನೆರವಿಗಾದವರು, ನಗುವಿಗಾದವರು ಎಲ್ಲ ನನ್ನವರೆ ಇಲ್ಲಿ. ಇಂದು ಜಗವೊಂದು ದೇಶ–ವಿದೇಶಗಳೆಂಬ ಸ್ಪಷ್ಟ ಗೆರೆಗಳ ನಡುವೆ ಹಂಚಿಕೊಂಡು ಬಿಡಿಬಿಡಿಯಾಗಿ ಉಳಿದಿಲ್ಲ. ಗೆರೆಗಳ ಮೇಲೆಲ್ಲಾ ಬಣ್ಣ ತುಂಬಿ ಬಿಟ್ಟಿರುವ ಅಂತರ್ಜಾಲವೆಂಬ ಮಹಾ ರಂಗೋಲಿ ಈ ಪ್ರಾದೇಶಿಕ ಗೆರೆಗಳನ್ನು ಮಸುಕಾಗಿಸುತ್ತಿದೆ. ಇವೆಲ್ಲ ಸುಸ್ಪಷ್ಟವಾಗಿ ತೋರುತ್ತಿದ್ದ ಕಾಲವೊಂದಿತ್ತು. ಬಹಳ ಹಳೆಯದೇನಲ್ಲ. ಕೇವಲ ಹತ್ತು ವರ್ಷಗಳಷ್ಟು ಹಿಂದಿನದು. ನನ್ನ ಅಮೆರಿಕೆಯ ಅನುಭವಕ್ಕೆ ನಾಂದಿ ಹಾಡಿದ್ದ ಕಾಲ.

ಮನೆಯ ಮೊದಲ ಮಗಳೆಂದು ಇಂಜಿನಿಯರಿಂಗ್ ಮೆಟ್ಟಿಲಿಳಿಯುತ್ತಿದ್ದಂತೆ ಮದುವೆ ಮನೆಯ ಮೆಟ್ಟಿಲು ಹತ್ತುವಂತಾಗಿತ್ತು. ಅಮೆರಿಕೆಯ ಹುಡುಗ, ಆಗಲೇ ಇಲ್ಲಿನ

ವಿಶ್ವವಿದ್ಯಾಲಯಗಳಲ್ಲಿ ಓದುವ ಕನಸಿಗೆ ಪೂರಕವೂ ಆಗಿದ್ದ. ನಿಶ್ಚಿತಾರ್ಥ ಮುಗಿಸಿ 10 ತಿಂಗಳಿಗೆ ಮತ್ತೆ ಬಂದು ಮದುವೆಯಾಗಬೇಕಿದ್ದವನು, ನಮ್ಮಿಬ್ಬರ ನಡುವಿನ ಅಂತಾರಾಷ್ಟ್ರೀಯ ಕರೆಗಳ ಖರ್ಚಿಗೆ ಬೆಚ್ಚಿಬಿದ್ದು ಮೂರೇ ತಿಂಗಳಿಗೆ ಹಿಂತಿರುಗಿ ಬಂದು ಮದುವೆಯಾದ. ರಜವಿಲ್ಲದೆ ರಜ ಹಾಕಿ ಬಂದಿದ್ದ ಅವನೋ ಮದುವೆ ಮುಗಿಸಿ ಹತ್ತುದಿನಕ್ಕೆಲ್ಲ ಹೊರಟು ನಿಂತಿದ್ದ. ಎರಡು ತಿಂಗಳ ನಂತರ ನನ್ನ ಒಂಟಿ ಪಯಣ. ಚಿಕ್ಕ ಊರಿನ ಗಟ್ಟಿಗಿತ್ತಿ ಹುಡುಗಿ ನಾನು. ವಿಮಾನ ಹತ್ತುವ ತವಕವಿದ್ದರೂ ಆತಂಕವೇನೂ ಇರಲಿಲ್ಲ. ಆದರೂ ವಿಮಾನ ಹತ್ತಿ ಗೊತ್ತಿದ್ದವರು ನನ್ನ ಚಿಕ್ಕ ಊರಲ್ಲಿದ್ದಿದ್ದು ಕಡಿಮೆಯೇ. ಒಬ್ಬೊಬ್ಬರದು ಒಂದೊಂದು ಸಲಹೆ. 'ಅಲ್ಲಿ ಅವಲಕ್ಕಿ, ಬೇಳೆ ಎಲ್ಲ ಸಿಗುವುದಿಲ್ಲವಂತೆ, ಸಿಕ್ಕರೂ ಅಂಗಡಿ ದೂರ ದೂರವಂತೆ. ಅಂಗಡಿ ಹುಡುಕಿ ಸಂಸಾರ ಸಾಗಿಸುವವರೆಗೆ ಎಲ್ಲ ಸ್ವಲ್ಪ ಸ್ವಲ್ಪ ತೆಗೆದುಕೊಂಡು ಹೋಗುವುದು ಒಳ್ಳೆಯದು.' 'ಅಲ್ಲಿ ಸೀರೆ ಎಲ್ಲ ಯಾರೂ ಉಡುವುದಿಲ್ಲವಾದ್ದರಿಂದ ಮದುವೆ ಸೀರೆಗಳನೆಲ್ಲ ಇಲ್ಲಿಯೇ ಬಿಟ್ಟುಹೋಗು.' ಎಂಬೆಲ್ಲ ಸಲಹೆಗಳ ನಡುವೆ, ನನ್ನ ಸೂಟ್ಕೇಸ್ ಪ್ಯಾಕ್ ಮಾಡಲೆಂದೇ, ನಮ್ಮ ಮನೆಯಲ್ಲಿ ಸುಪ್ರಸಿದ್ಧ ಪ್ಯಾಕರ್ ಚಿಕ್ಕಪ್ಪ, ಊರಿನಿಂದ ಬಂದಿಳಿದಿದ್ದರು.

ನಾನೇ ಮಲಗಿಕೊಂಡರೂ ಹಿಡಿಸುತ್ತಿದ್ದ ಗುಡಾಣ ಸೂಟ್ಕೇಸಿಗೆ ಅರಿಶಿನ ಕುಂಕುಮ ಹಾಕಿ ಕೆಳಗೊಂದು ತೆಳ್ಳನೆಯ ಟವೆಲ್ ಹಾಸಿ ತುಂಬುವ ಕಾರ್ಯಕ್ರಮ ಆರಂಭವಾಯಿತು. ಅವರೆಲ್ಲರ 'ಸೂಟ್ಕೇಸ್ ಭರೋ' ಉತ್ಸಾಹ ನೋಡಿದಾಗ ಹೊರಟಿದ್ದು ನಾನೋ, ನನ್ನ ಮನೆ ಮಂದಿಯೋ ತಿಳಿಯುತ್ತಿರಲಿಲ್ಲ. ಬಟ್ಟೆಬರೆಗಳ ನಡುವೆ ಅಮ್ಮ ಊರಿನ ಜೋನಿಬೆಲ್ಲವನ್ನು ಒಂದು ಸ್ಟೀಲ್ ಪಾತ್ರೆಯಲ್ಲಿ ತುಂಬಿ ಅದಕ್ಕೊಂದು ನನ್ನ ಹಳೆ ಚೂಡಿದಾರಿನ ಪ್ಯಾಂಟ್ ಸುತ್ತಿ, ನಡುವೆಲ್ಲೋ ನಿಲ್ಲಿಸಿದರು. ತುಪ್ಪದ ಡಬ್ಬಿಗೂ ಅದೇ ಗತಿ. ಕೊನೆಗೆ ಉಪ್ಪಿನಕಾಯಿ ಬಾಟಲಿಗಳ ಸರದಿ. ಇನ್ನೊಂದು ಸೂಟ್ಕೇಸಿನಲ್ಲಿ ಬಟ್ಟೆಮೆತ್ತೆಗಳ ನಡುವೆ ಮುರಿಯದಂತೆ ಚಕ್ಕುಲಿ, ಬೂಂದಿಲಾಡುಗಳ ಹಾಸಿಗೆ. ಇದ್ದರೇನೂ ಹಾಳಲ್ಲ ಬಿಡು ಎನ್ನುತ್ತಾ ಕಟ್ಟಿದ ಚಿಕ್ಕ ಚಿಕ್ಕ ಪೊಟ್ಟಣಗಳಲ್ಲಿ, ತೊಗರಿಬೇಳೆ, ಹೆಸರುಬೇಳೆ, ಅವಲಕ್ಕಿ, ಹುರಿದವಲಕ್ಕಿ, ಒಗ್ಗರಣೆ ಅವಲಕ್ಕಿ. ಮತ್ತೊಂದು ಮೂಲೆಯಲ್ಲಿ ಸಾರಿನ ಪುಡಿ, ಚಟ್ನಿಪುಡಿ, ಪಲ್ಯದ ಪುಡಿ, ಅರಿಶಿನ, ಮೆಣಸಿನ ಪುಡಿ, ಬ್ಯಾಡಿಗೆ ಮೆಣಸಿನ ಪೊಟ್ಟಣಗಳಿಗೆ ಮಲಗಲು ಜಾಗ. ಎಲ್ಲ ತುಂಬಿದ ಮೇಲೆ ವಿಚಾರ ಬಂದಿದ್ದು ತೂಕ ನೋಡಿಯೇ ಇಲ್ಲವಲ್ಲ! ಸರಿ, ನಮ್ಮ ಮನೆಯಿಂದ ಅನತಿ ದೂರದಲ್ಲಿದ್ದ ಶಂಶಾದ್ ಗುಜರಿ ಅಂಗಡಿಗೆ ಕಾಕ ಸೂಟ್ಕೇಸ್ ಎತ್ತಿ ಒಯ್ದು ಕಾಟ ಹಚ್ಚಿದರು. ಆರೆಂಟು ಕೆಜಿ ಹೆಚ್ಚು. ಇನ್ನೊಂದು ಸೂಟ್ಕೇಸಿನ ಕತೆಯೂ ಅದೇ. ಸರಿ ಮತ್ತೆ ಎಲ್ಲ ಪುಟಪುಟನೆ ಹೊರಬಂದು ತಮಗೆ ವಿಮಾನಯಾನ ಲಭ್ಯವೋ ಇಲ್ಲವೋ ಎನ್ನುತ್ತಾ ಸಮಸ್ತ ಸಾಂಬಾರ ದಿನಸಿಗಳೆಲ್ಲ ಕಾಯುತ್ತ ಕೂತವು. ಅಂತೂ ಮೂರು ದಿನಗೂಡಿ, ಅಳೆದು ಸುರಿದು, ಎತ್ತಿ, ತೂಗಿ, ಮನೆಯಲ್ಲಿದ್ದವರಲ್ಲದೆ, ಮನೆಗೆ ಬಂದವರಿಂದಲೂ ಸೂಟ್ ಕೇಸ್ ಎತ್ತಿಸಿ ಅಂತೂ ವಿಮಾನ ಹತ್ತುವ ಮೊದಲೇ ಅದರ ಹಿಡಿ ಕಿತ್ತು ಬರುವುದೇನೋ ಎಂಬಲ್ಲಿವರೆಗೆ

ತುಂಬಿಸಿದ್ದಾಯಿತು. ಬಂತು ಹೊರಡುವ ದಿನ. ಮುಂಬೈವರೆಗೆ ಬೀಳ್ಕೊಡಲು ಬಂದ ಅಪ್ಪ ಅಮ್ಮ, ಅಲ್ಲಿಂದ ನಡುರಾತ್ರಿಯಲಿ ನನ್ನ ಪಯಣ.

ಇನ್ನೇನು ಹೊರಡಬೇಕು, ಹೊರಡುವ ಹೊತ್ತಲ್ಲಿ ಅಮ್ಮನ ಗಲಾಟೆ. ಅಮ್ಮನ ಆಣತಿಯೇನೆಂದರೆ ನಾನು ಮಹಾ ಬೇಜವಾಬ್ದಾರಿಯವಳಾದ್ದರಿಂದ ಮದುವೆಯ ಒಡವೆ ಬಂಗಾರವೆಲ್ಲ ಮೈಮೇಲೆ ಹೇರಿಕೊಂಡೆ ಹೋಗುವುದು ಒಳ್ಳೆಯದು, ಇಲ್ಲವಾದರೆ ನಾನೆಲ್ಲೋ ಬ್ಯಾಗ್ ಮರೆತರೆ ಏನು ಗತಿ? ನಾನೋ, ಜೀನ್ಸು ಟಿ ಶರಟು ಧರಿಸಿ ವಿದೇಶಿ ನೆಲದಲ್ಲಿ ಕಾಲಿಡುವಾಗ, ಅವರಿಗೆ ನಾನು ವಿದೇಶಿಯಂತೆ ಕಾಣಸದಿರಲಿ ಎಂಬ ಮುಂಜಾಗ್ರತೆಯಲ್ಲಿ ತಯಾರಾಗಿದ್ದೆ. ಈಗ ಅಮ್ಮನ ಅಬ್ಬರದ ಆಜ್ಞೆ, ಆಹಾ ನನ್ನ ಅವತಾರವೋ! ನೀಲಿ ಲೇವೈಸ್ ಟಿ ಶರ್ಟಿನ ಮೇಲೆ, ಎರಡೆಳೆಯ ಕರಿಮಣಿ ಸರ, ಒಂದು ಬಂಗಾರದ ಪದಕದ ಮುತ್ತಿನ ಉದ್ದದ ಮಾಲೆ, ಒಂದು ಬಂಗಾರದ ನೆಕ್ಲೆಸ್, ಇನ್ನೊಂದು ಮಧ್ಯಮಗಾತ್ರ ಸರದಂತ ನೆಕ್ಲೆಸ್, ಎರಡೂ ಕೈಗೆ ನಾಲ್ಕು ನಾಲ್ಕು ಬಂಗಾರದ ಬಳೆಗಳು. 3 ಉಂಗುರಗಳು, ದಪ್ಪನೆಯ ಜುಮುಕಿಯಂತಹ ಕಿವಿಯೋಲೆ. ನಾನು ಹಾಕಿಕೊಂಡಿದ್ದ ಕಿವಿಯೋಲೆಯನ್ನು ಬಿಚ್ಚಿ ಇತರ ಚಿಕ್ಕ ಒಲೆಗಳೊಂದಿಗೆ ಪೊಟ್ಟಣ ಕಟ್ಟಿ, ನನ್ನ ಪಾಸ್ಪೋರ್ಟ್ ಇಟ್ಟುಕೊಂಡಿದ್ದ ಚಿಕ್ಕ ಪೌಚಿಗೆ ರವಾನೆ. ಇನ್ನು ವಂಕಿಯನ್ನೂ ಏರಿಸಿಕೊಂಡು ಹೋಗೆಂದರೆ ಎಲ್ಲ ಇಲ್ಲೇ ಬಿಟ್ಟು ಹೋಗುತ್ತೇನೆ ಎಂದು ಹಠ ಹಿಡಿದದ್ದಕ್ಕೆ, ಅಮ್ಮ ವಂಕಿ ಹಿಂತಿರುಗಿಸಿ ಒಯ್ದಳೆ ವಿನಃ ನಾನು ಬ್ಯಾಗಿನಲ್ಲಿಟ್ಟುಕೊಳ್ಳಲು ಬಿಡಲಿಲ್ಲ, ಅಷ್ಟೊಂದು ಕುಖ್ಯಾತಿಯಿದೆ ನನಗೆ. ನನಗಂತೂ ಈ ವಿಚಿತ್ರ ವೇಷದೊಂದಿಗೆ ಅದೃಶ್ಯವಾಗಿಬಿಡಲೇ ಎನಿಸುತ್ತಿತ್ತು. ಹೊರಡುವ ಹೊತ್ತಲ್ಲಿ ಅಮ್ಮ ಎಬ್ಬಿಸಿದ ಈ ಮುಜುಗರದ ತೆರೆಯಿಂದಾಗಿ, ಮನೆಬಿಡುತ್ತಿರುವ ಸಂಕಟ ಮರೆತು ಹುಚ್ಚಾಪಟ್ಟೆ ಅಳುವುದು ತಪ್ಪಿತು ಎಂಬುದೇ ಸಮಾಧಾನ.

ನನ್ನ ಕಾಯ್ದಿರಿಸಿದ ಜಾಗಕ್ಕೆ ಹೋಗಿ ಕೂತು, ಯಾರಾದರೂ ನುರಿತ ಪ್ರಯಾಣಿಕರು ದೊರೆತರೆ ಒಳ್ಳೆಯದು ಎಂದುಕೊಳ್ಳುತ್ತಿರುವಾಗ, ಪಕ್ಕದಲ್ಲಿ ಒಬ್ಬ ಸುಮಾರು ನನ್ನದೇ ವಯಸ್ಸಿನ ಹುಡುಗ. ಮೇಲಿಂದ ನನ್ನ ನವರಾತ್ರಿ ಸ್ಪೆಷಲ್ ಅಲಂಕಾರ ಬೇರೆ. ಮತ್ತೊಮ್ಮೆ ಅಮ್ಮನನ್ನು ಮನಸಾರೆ ಮನಸಲ್ಲೇ ಬೈದೆ. ಅವನು ಇಲ್ಲಿ ಯಾವುದೊ ವಿಶ್ವವಿದ್ಯಾಲಯಕ್ಕೆ ಉನ್ನತ ವ್ಯಾಸಂಗಕ್ಕೆ ಹೊರಟವ. ಅವನಿಗೂ ಮೊದಲ ವಿಮಾನ ಪ್ರಯಾಣ. ನನ್ನ ಪರದಾಟಗಳಂತೆ ಅವನೂ ಲೈಟು, ಸೀಟು, ಎಂದೆಲ್ಲ ಓದ್ದಾಡುತ್ತಿದ್ದ. ಅಂತೂ ನಾವು ನಾವೇ ನಮ್ಮ ಪೆದ್ದುತನಗಳಿಗೆ ನಗುತ್ತ ಸುಧಾರಿಸಿಕೊಂಡಿದ್ದೆವು. ಫ್ರಾಂಕ್‌ಫರ್ಟ್ ತಲುಪಿ ಅಮೆರಿಕೆಯ ವಿಮಾನ ಹತ್ತುವಷ್ಟರಲ್ಲಿ ಪಕ್ಕದಲ್ಲಿದ್ದವರ ಸಹಾಯ ಮಾಡಬಲ್ಲೆ ಎಂಬಷ್ಟು ಕಲಿತಿದ್ದೆ. ಕಿವಿ ಡಬ್ಬಾಗಿಸ್ಕೊಂಡು, ಹಗಲು ರಾತ್ರಿಗಳ ಲೆಕ್ಕತಪ್ಪಿ, ವಿಮಾನದೊಳಗಿನ ಚಳಿಗೆ ಉಪಾಯ ಎಂದುಕೊಂಡು ಪದೇ ಪದೇ ಕೊಳಕು ರುಚಿಯ ಉಗುರುಬೆಚ್ಚಗಿನ ಟೀ ಕುಡಿದು ನಿದ್ದೆಗೆಟ್ಟು, ಅರೆಪಿರ್ಕಿಯಂತಾಗಿ ಮೊಟ್ಟಮೊದಲು ನಾನು ಇಲ್ಲಿ ಪಾದಾರ್ಪಣೆ

ಮಾಡಿದ್ದು ಸಿನ್ಸಿನಾಟಿಯಲ್ಲಿ. ಅಲ್ಲಿನ ಇಮಿಗ್ರೇಶನ್ ಆಫೀಸರ್ ನನ್ನ ನಖಶಿಖಾಂತ ನೋಡಿ, ಏನು, ಎತ್ತ ಎಲ್ಲ ವಿಚಾರಿಸಿ ಹೊರಬಿಟ್ಟಾಗ ದೇಶ ದೇಶಗಳ ನಡುವಣ ಸ್ಪಷ್ಟ ಗೆರೆಯ ಅನುಭವವಾಗಿತ್ತು. ಸಾಗರೋಲ್ಲಂಘನ ಮಾಡಿದೆನೆಂಬ ಹೆಮ್ಮೆಯಾಗಿತ್ತು. ಅದೇ ಉತ್ಸಾಹದಲ್ಲಿ ನಾನು ನನ್ನ ಗಜಗಾತ್ರದ ಎರಡು ಸೂಟ್ಕೇಸ್ ಎತ್ತಿ ಗಾಡಿ ತುಂಬಿಸಿ ದೂಡಿಕೊಳ್ಳುತ್ತ ಹೊರಬಂದರೆ, ನಸುನಗುತ್ತ ನಿಂತಿದ್ದ ಗಂಡ, ಪೂರ್ವ ಪಶ್ಚಿಮಗಳ ಅಸಂಬದ್ಧ ಸಮಾಗಮದಂತಿದ್ದ ನನ್ನನ್ನು ನೋಡಿ ಬಿದ್ದು ಬಿದ್ದು ನಗತೊಡಗಿದ. ಆಗ ಅಮ್ಮನನ್ನು ಸಶಬ್ದವಾಗಿ ಬೈದುಕೊಂಡೆ.

ಆರಂಭವಾಗಿತ್ತು ಅಮೆರಿಕೆಯ ಹೊಸ ಅನುಭವ. ಅದೂ ಒಂದು ವಿಚಿತ್ರ ಕಥೆ. ನಾನು ಬಂದಿಳಿದದ್ದು ಸಿನ್ಸಿನಾಟಿಯಾದರೂ, ಕೊನೆಗಳಿಗೆಯಲ್ಲಿ, ನನ್ನವನ ಕೆಲಸ ಬದಲಾವಣೆಯಾಗಿ ಮೇರಿಲ್ಯಾಂಡ್ ರಾಜ್ಯಕ್ಕೆ ಬರಬೇಕಾದ್ದರಿಂದ, ನನ್ನ ವಿಮಾನಪ್ರಯಾಣ ಬದಲಾಯಿಸಲಾಗದೆ, ಸಿನ್ಸಿನಾಟಿಯಿಂದ ವಾಷಿಂಗ್ಟನ್ ಡಿ.ಸಿ.ವರೆಗೆ ನಮ್ಮ ರಸ್ತೆಯಾನವಾಗಿತ್ತು. ಅಂದಿಗೂ ಇಂದಿಗೂ ನನ್ನ ಮೆಚ್ಚಿನ ಇಲ್ಲಿನ ಸುವ್ಯವಸ್ಥೆಯೆಂದರೆ ರಸ್ತೆಗಳು. ಹಸಿರು ಕಾನಿನ ನಡುವೆ ಹರಿವ ಕಪ್ಪು ಕಾಳಿಂಗನಂಥ ರಸ್ತೆಗಳು. ಶುದ್ಧ ಸುಸ್ಪಷ್ಟ ದಾರಿಸೂಚಿಗಳು. ಸಿನ್ಸಿನಾಟಿಯಿಂದ ವಾಷಿಂಗ್ಟನ್ ಡಿ.ಸಿ.ವರೆಗಿನ ಆ ಪ್ರಯಾಣ ಇಂದಿಗೂ ನಿಚ್ಚಳ ನನ್ನ ನೆನಪಲ್ಲಿ. ರಸ್ತೆ ಇಕ್ಕೆಲಗಳ ಹಸಿರು, ಅಲ್ಲಲ್ಲಿ ನಡುನಡುವೆ ಕಾಣುವ ಗದ್ದೆ, ಬಯಲು, ಮೇಯುವ ದನಕರು. ಎಲ್ಲೆಲ್ಲೂ ರಸ್ತೆಪಕ್ಕದಲ್ಲಿ ಊರಿಲ್ಲ ಯಾಕೆ ಎಂದು ಬಗೆಹರಿಯದ ಪ್ರಶ್ನೆ. ಆ ಎರಡು ದಿನಗಳಲ್ಲಿ, ಬರ್ಗರ್, ಪಿಜ್ಜಾ, ಬರಿಟೋ, ಆಮ್ಲೆಟ್– ಏನು ತಿಂದರೂ ವಾಕರಿಕೆ ಬಂದಂತಾಗಿತ್ತು. ಚಹಾ, ಕಾಫಿ ಹೋಗಲಿ, ಇಲ್ಲಿನ ಮಿಲ್ಕ್ ಶೇಕ್ ಕೂಡ ರುಚಿಸಿರಲಿಲ್ಲ. ನನಗಂತೂ ಈ ದೇಶದಲ್ಲಿ ಹೇಗೆ, ಏನು ತಿಂದು ಬದುಕಿರಲಿ ದೇವರೇ ಎಂದು ಅಳುವೇ ಬಂದಂತಾಗುತ್ತಿತ್ತು. ಆಗ ಇನ್ನೊಮ್ಮೆ ಅನಾವರಣವಾಗಿತ್ತು ದೇಶ ದೇಶಗಳ ನಡುವಿನ ಗೆರೆ.

ಕೊನೆಗೆ ಡಿ.ಸಿ. ತಲುಪಿದಾಗ ಅವ ನೇರ ನನ್ನನ್ನು ತಂದು ನಿಲ್ಲಿಸಿದ್ದು ಉಡುಪಿ ರೆಸ್ಟೋರಾಂಟಿನ ಬಾಗಿಲಿಗೆ. ಎರಡು ದಿನದಿಂದ ಸರಿಯಾದ ಊಟ ಸಿಕ್ಕರೆ ಸಾಕು ಎಂದವಳು ಈಗ ಏನು ಬೇಕೋ ತಿನ್ನು ಎಂದ. ಒಳ ಹೋದಾಗ ನಾನು ಆರ್ಡರ್ ಮಾಡಿದ್ದು 'ಮೊಸರನ್ನ'. ಅಮೃತದಂತಿತ್ತು ಆ ಮೊಸರನ್ನ. ಅಲ್ಲಿ ನಾವು ಬಿಡಾರ ಹೂಡುವವರೆಗೆ, ಸುಮಾರು ಹತ್ತು ದಿನ ಕಂಪನಿಯವರೇ ನೀಡಿದ ಹೋಟೆಲ್ಲಿನಲ್ಲಿ ವಸತಿ. ಪಕ್ಕದಲ್ಲಿದ್ದಿದ್ದು ಒಂದು ಸಬ್ ವೇ, ಪ್ರತಿ ಮಧ್ಯಾಹ್ನ ಮತ್ತದೇ ಬೇಸರ ಅದೇ ಸ್ಯಾಂಡ್ ವಿಚ್ ಅದೇ ಏಕಾಂತ. ಮನೆಯಿಂದ ತಂದ ಚಕ್ಕುಲಿ, ಉಂಡೆ, ಅವಲಕ್ಕಿಗಳೆಲ್ಲ ಖಾಲಿಯಾಗತೊಡಗಿದವು. ರಾತ್ರಿ ಊಟ ಮಾತ್ರ ತಪ್ಪದೆ ಸಿಲ್ವರ್ ಸ್ಪ್ರಿಂಗಿನ ಬಾಂಬೆ ರೆಸ್ಟೋರಾಂಟಿನಲ್ಲಿ. ನಡುವೆ ಒಂದೆರಡು ಬಾರಿ ದೊಡ್ಡಮ್ಮನ ಮಗಳು ಅಲ್ಲಿಯೇ ಹತ್ತಿರದಲ್ಲಿದ್ದವಳು, ಅನ್ನ, ಹುಳಿ, ಗೊಜ್ಜು ತಂದಿದ್ದಳು.

ಬೇರು ಸೂರು

ಹನ್ನೊಂದನೇ ದಿನ ಅಂತೂ ಮನೆ ಗೊತ್ತು ಮಾಡಿ ಸ್ಟೋರೇಜಿನಲ್ಲಿದ್ದ ಪಾತ್ರೆ-ಪಡಗಗಳನೆಲ್ಲ ತರಲೆಂದು ಹೊರಟಾಗ ಕೊನೆಗೂ ಅಮೆರಿಕೆಯಲ್ಲಿ ಸಂಸಾರ ಆರಂಭವಾಗಲಿದೆ ಎನಿಸತೊಡಗಿತ್ತು. ಇಲ್ಲಿನ ಹೊಸ ತಂತ್ರಜ್ಞಾನಕ್ಕೆಲ್ಲ ಹೊಸಬಳು ಆಗ. ಸ್ಟೋರೇಜ್ ಎಂಬ ಕಲ್ಪನೆಯೇ ವಿಚಿತ್ರವಾಗಿತ್ತು. ಅದೊಂದು ಚಿಕ್ಕ ಗೋಡೌನಿನಂತ ಜಾಗದಲ್ಲಿ ಹೇಳು ಕೇಳುವವರಿಲ್ಲ. ಏನು ಬೇಕಾದರೂ ತುಂಬಿಡು, ತೆಗೆದುಕೋ. ಎಂಥ ಅವ್ಯವಸ್ಥೆಯಾದ ವ್ಯವಸ್ಥೆ ಎಂದೆನಿಸಿದ್ದನ್ನು ಬಾಯ್ಬಿಟ್ಟು ಕೇಳಿದ್ದೆ. ಹೀಗೆ ಬೇಕಾಬಿಟ್ಟಿ ಗೋಡೌನು, ಕಳ್ಳತನವಾಗುವುದಿಲ್ಲವೆ ಎಂದಿದ್ದಕ್ಕೆ ನನ್ನ ಗಂಡ ಉದ್ದದೊಂದು ಬುರುಡೆ ಬಿಟ್ಟಿದ್ದ. ‘ಇಲ್ಲಿ ತಮ್ಮ ವಸ್ತುಗಳನ್ನು ಇಟ್ಟಿರುವವರೆಲ್ಲರ ಭಾವಚಿತ್ರ ಒಂದು ಕಂಪ್ಯೂಟರಿನಲ್ಲಿದೆ, ಅವರು ಬಂದು ಹಲೋ ಎಂದು ಮುಗುಳುನಗಬೇಕು ಹಾಗೂ ಒಂದು ರಹಸ್ಯ ಸಂಖ್ಯೆ ಒತ್ತಬೇಕು ಆಗ ಮುಖ್ಯ ಬಾಗಿಲು ತೆರೆದುಕೊಳ್ಳುತ್ತದೆ. ಅಂದಹಾಗೆ ನಿನ್ನ ಭಾವಚಿತ್ರವನ್ನೂ ಕೊಟ್ಟಿದ್ದೇನೆ. ಒಳ ಹೋಗಿ ನಮ್ಮ ಸಂಖ್ಯೆಯ ಸ್ಟೋರೇಜಿಗೆ ನಾವೇ ಹಾಕಿರುವ ಬೀಗ ತೆಗೆದರೆ ಆಯ್ತು.’ ಕೊನೆಯದೊಂದು ವಾಕ್ಯ ಬಿಟ್ಟರೆ ಉಳಿದದ್ದೆಲ್ಲ ಸುಳ್ಳೆಂದು ನನಗೆಲ್ಲಿ ತಿಳಿದಿತ್ತು. ನಾನು ಪ್ರತಿ ಬಾರಿ ಸ್ಟೋರೇಜಿಗೆ ಹೋದಾಗಲೂ ಮುಖ್ಯ ಬಾಗಿಲಿನ ಕೋಡ್ ಒತ್ತುವ ಮೊದಲು, ಹಲೋ ಎಂದು ಇಷ್ಟಗಲ ಹಲ್ಲು ಬಿಟ್ಟು ನಗುತ್ತಿದ್ದೆ. ಹೌದು ಮತ್ತೆ ಸರಿಯಾಗಿ ನಗದಿದ್ದರೆ, ಗೇಟ್ ತೆರೆಯದೆ ಹೋದರೆ? ಕೊನೆಗೊಂದು ದಿನ ಅದೆಲ್ಲ ಸುಳ್ಳು, ಆದ್ರೆ ನೀನು ಹಲೋ ಎಂದು ಹಲ್ಲು ಬಿಡುವಾಗ ಭಾರೀ ಮಜಾ ಇರುತ್ತಿತ್ತು ಎಂದು ತನ್ನ ಪ್ರಾಕ್ಟಿಕಲ್ ಜೋಕಿಗೆ ತಾನೊಬ್ಬನೇ ನಕ್ಕಿದ್ದ. ಈಗ ಅದನ್ನು ನೆನಪಿಸಿಕೊಂಡರೂ ನನಗೇನೂ ನಗು ಬರುವುದಿಲ್ಲ.

ಇಂಥ ಹಲವಾರು ಪ್ರಾಕ್ಟಿಕಲ್ ಜೋಕುಗಳು ಬಾಕಿಯಿದ್ದವು. ನಮ್ಮ ಅಪಾರ್ಟ್ಮೆಂಟ್ ಕಾಂಪ್ಲೆಕ್ಸ್ ಇದ್ದಿದ್ದು ಒಂದು ಪುರಾತನ ಸ್ಮಶಾನದ ಮೇಲೆ. ಗೆಟ್ಟಿಸ್ ಬರ್ಗ್ ಯುದ್ಧದಲ್ಲಿ ಸತ್ತವರನ್ನೆಲ್ಲ ಇಲ್ಲಿ ಹೂಳಿದ್ದರು, ಈಗ ಸ್ಥಳಾಂತರಿಸಲಾಗಿದೆ, ಆದರೂ ಒಂದೆರಡು ಉಳಿದಿರುತ್ತವೆ ಎಂದಿದ್ದ. ಭೂತ ಪ್ರೇತಗಳಲ್ಲಿ ನಂಬಿಕೆಯಿಲ್ಲದಿದ್ದರೂ ಭೀಭತ್ಸ ಭಯವಾಗಿತ್ತು. ಅದೂ ಸುಳ್ಳೆಂದು ಕೆಲದಿನಗಳ ಮೇಲೆ ತಿಳಿದಿತ್ತು. ಆ ಒಂದು ವರ್ಷದಲ್ಲಿ ಇಂಥ ಹಲವಾರು ಹಾಸ್ಯಾಸ್ಪದ ಘಟನೆಗಳಾಗಿವೆ. ಈಗೆಲ್ಲ ನಿಜವೇ ಹೇಳಿದರೂ ಜೋಕ್ ಇರಬಹುದೇನೋ ಎನಿಸುತ್ತೆ.

ಬದುಕು ಅಂದಿನಿಂದ ಇಂದಿನವರೆಗೆ ಕೇವಲ ಒಂದು ದಶಕದಲ್ಲಿ ವಾಮನ ಹೆಜ್ಜೆಯಿಟ್ಟಂತೆ ಬದಲಾಗಿದೆ. ನನ್ನ ಕಣ್ಣೆದುರೇ ಮಗುಚಿಕೊಳ್ಳುತ್ತಿರುವ ಜೀವನಕ್ರಮ, ನೆರೆಹೊರೆಯ ಸಂಬಂಧ, ಸುತ್ತಲಿನ ಆತ್ಮೀಯತೆ, ದೇಶವಲ್ಲದ ದೇಶವನ್ನು ನನ್ನದಾಗಿಸಿವೆ. ಅಲ್ಲಿ ಇಲ್ಲಿಯದನ್ನು, ಇಲ್ಲಿ ಅಲ್ಲಿಯದನ್ನು ದಿನವೂ ತಂದು ನಿಲ್ಲಿಸುತ್ತವೆ. ಎಡವಿ ಬಿದ್ದರೆ ಸಿಗುವ ಭಾರತೀಯ ದಿನಸಿ ಅಂಗಡಿಗಳು, ತಿಂಡಿ ತಿನಿಸುಗಳು, ಬಟ್ಟೆಬರೆಗಳು, ಆಫೀಸಿನಲ್ಲಿ ಗಟ್ಟಿ ಬಿಡಿ, ಗುಟ್ಟು ಮಾತನ್ನು ಆಡಲು ಆಗದಷ್ಟು ತುಂಬಿರುವ

ಭಾರತೀಯ ಸಹೋದ್ಯೋಗಿಗಳು ಒಂದೆಡೆಯಾದರೆ, ಇಲ್ಲಿನಂತೆ ಅಂಗಡಿ ಮುಂಗಟ್ಟುಗಳಿಗೆ, ಪೆಟ್ರೋಲ್ ಪಂಪ್‌ಗಳಿಗೆ, ನಿತ್ಯನೂತನ ಇಲೆಕ್ಟ್ರಾನಿಕ್ ಗೆಡ್ಜೆಟ್ಟುಗಳಿಗೆ ತೆರೆದುಕೊಂಡಿರುವ ಭಾರತ. ನಾವು ಬೆಳಗ್ಗೆದ್ದು ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ ಎಂದು ಅಲ್ಲಿನ ದಿನಪತ್ರಿಕೆಯನ್ನು ಮಗುಚಿದರೆ, ರಾಜ್ಯದ ರಸ್ತೆಯಲ್ಲಿನ ಹೊಂಡಗಳಿಗಿಂತ ಇಲ್ಲಿನ ರಾಜಕೀಯ ವಿದ್ಯಮಾನದ ಬಗ್ಗೆ ಅಲ್ಲಿಯೇ ಹೆಚ್ಚು ತಲೆಕೆಡಿಸಿಕೊಳ್ಳುತ್ತಾರೆ. ಹೊಸ ಕನ್ನಡ ಸಿನಿಮಾ ಯಾವುದೆಂದು ನಾವು ಪ್ರಶ್ನೆ ಕೇಳಿದರೆ, ಹೊಸ ಹಾಲಿವುಡ್ ಸಿನಿಮಾವನ್ನು ಅಲ್ಲಿ ಆಗಲೇ ನೋಡಿ ಮುಗಿಸಿರುತ್ತಾರೆ.

ಇವೆಲ್ಲ ಬಾಹ್ಯ ಜೀವನಶೈಲಿಯ ಪೂರಕ ಬೆಳವಣಿಗೆಗಳು. ಆದರೆ ಆಂತರಿಕ ಸಂತೃಪ್ತಿಗೆ ಬೇಕಿರುವುದು ಆತ್ಮೀಯತೆಯ ಒಂದು ವರ್ತುಲ. ಇಬ್ಬರೇ ಒಂಟಿಬಡಕರಂತೆ ಊರು ಸುತ್ತುವಾಗ ಸಾಂಸ್ಕೃತಿಕ ಕೊಂಡಿ, ತಳಪಾಯದ ಅನಿವಾರ್ಯತೆ ಅರಿವಿಗೆ ಬರುವುದಿಲ್ಲ. ನಮ್ಮದೇ ಸಂಸಾರವೆಂಬ ಪುಟ್ಟ ಪ್ರಪಂಚ ನಿರ್ಮಾಣವಾಗುತ್ತ, ನನ್ನವರೆಂಬುವರು ಬೇಕು, ನನ್ನಂತಿರುವವರು ಬೇಕು, ನನ್ನತನವನ್ನು ಗಟ್ಟಿಗೊಳಿಸುವ ವ್ಯವಸ್ಥೆ ಬೇಕು ಎಂಬ ಕನವರಿಕೆ ಆರಂಭವಾಗತೊಡಗುತ್ತದೆ. ಆಗ ನೆರವಿಗೆ ಬಂದಿದ್ದು ಇಲ್ಲಿನ ಕನ್ನಡ ಕುಟುಂಬಗಳು, ಕನ್ನಡ ಸಂಘಗಳು. ಕನ್ನಡ, ಭಾರತೀಯ ಸ್ನೇಹಿತರೂ ಮಕ್ಕಳು ಮರಿ ಎಂದು ದ್ವಿಗುಣಗೊಳ್ಳುತ್ತ ನಿಧಾನಕ್ಕೆ ನಮ್ಮದೇ ಒಂದು ಸಾಂಸ್ಕೃತಿಕ ಸಮತೋಲಿತ ಸಮಾಜದ ಭಾಗವಾಗತೊಡಗಿದ್ದು ಅರಿವಿಗೆ ಬರಲಿಲ್ಲ. ನಾವು ಇಲ್ಲಿನ ಮುಖ್ಯವಾಹಿನಿಯಲ್ಲಿ ಬೆರೆತರೂ ಕಮಲದೆಲೆಯ ಮೇಲಿನ ನೀರ ಗುಳ್ಳೆಗಳಂತೆ ಇರುವುದಕ್ಕೆ ನಮ್ಮ ಮೂಲಬೇರಿನ ಅವ್ಯಾಹತ ಕನವರಿಕೆಯೇ ಕಾರಣವೇನೋ. ಎಲ್ಲ ಬಿಟ್ಟು ಬದುಕು ಅರಸುತ್ತ ಹೊಸದನ್ನು ಒಪ್ಪಿಕೊಳ್ಳುವ ಹುಮ್ಮಸ್ಸಿನಲ್ಲಿ ಬಂದ ನಮಗೆ ನಮ್ಮ ನೆಲದ ಸೊಗಡನ್ನು ಇಲ್ಲಿಯೂ ಬಿತ್ತಿ ಬೆಳೆಸುವ ತವಕ ಮಾತ್ರ ಹೋಗಲಿಲ್ಲ. ಕಳಕೊಂಡಿದ್ದೇನು ಎಂದು ಸ್ಪಷ್ಟವಾಗಿ ಅರಿವಾದಾಗ ಆಗುವ ಸಂಕಟದ ಮಜಲು ಎಲ್ಲ ಇದ್ದವರಿಗೆ ಅರಿವಾಗಲಾರದು. ಅದರಲ್ಲೂ, ಭಾಷೆ, ದೇಶ, ಆಚರಣೆ, ಆರೋಗಣೆಗಳ ವ್ಯತ್ಯಯ ಹುಟ್ಟಿಸುವ ನಿರಂತರ ಹುಡುಕಾಟ ಒಂದು ಬಗೆಯಲ್ಲಿ ಜೀವನೋತ್ಸಾಹದ ಹುಟ್ಟೂ ಹೌದು.

ಪ್ರತಿ ಬಾರಿ ಭಾರತ ಪ್ರವಾಸದಿಂದ ಬಂದಾಗಲೂ ಕೆಲದಿನಗಳವರೆಗೆ ಆವರಿಸಿಕೊಳ್ಳುವ ಖಾಲಿತನ, ವರ್ಷದಿಂದ ವರ್ಷಕ್ಕೆ ಕಡಿಮೆಯಾದರೂ ಅದು ಎಂದಾದರೂ ಮಾಯವಾಗುವುದೋ ತಿಳಿಯೆ. ಆದರೆ ಆ ಖಾಲಿತನವೇ ಹೊಸದನ್ನು ಕೆದಕುವುದು; ಇಲ್ಲಿನ ಬದುಕನ್ನು ತುಂಬಿಕೊಳ್ಳುವ ನವ ಆವೇಗಕ್ಕೆ ಕಾರಣವಾಗುವುದು. ಅಂತೆಯೇ ಇಲ್ಲಿನ ಜೀವನ ಈಗ ಮುಂಚಿನಂತೆ ಅತಂತ್ರವೆನಿಸುವುದಿಲ್ಲ. ನಮ್ಮ ಅಸ್ತಿತ್ವವೊಂದು ಇಲ್ಲಿ ನಿರ್ಮಾಣವಾಗಿದೆಯೆಂದೋ, ಹೊಸ ಸಂಬಂಧ, ಸ್ನೇಹಿತರು ಎಂದು ನಮ್ಮದೇ ಹೊಸಬಳಗ ಬೆಳೆಸಿಕೊಂಡಿರುವದಕ್ಕೋ ಅಥವಾ ತಂತ್ರಜ್ಞಾನದ

ಕೃಪೆಯಿಂದ ಬೆರಳಂಚಲ್ಲಿರುವ ಮನೆಮಂದಿಯೋ ದೇಶ ದೇಶಗಳ ನಡುವೆ ಅಸಹಾಯ ನೀರವತೆಯ ದೂರವಿಲ್ಲ. ಆದರೂ ನಮ್ಮ ಸಂಕಟಕ್ಕೆ ನೀವಿಲ್ಲ, ನಿಮ್ಮ ಸಂತಸದಲ್ಲಿ ನಾವಿಲ್ಲ ಎಂಬ ಅಮ್ಮನ ಮಾತು ಸತ್ಯಸ್ಯ ಸತ್ಯ. ಸ್ಕೈಪ್‌ನಲ್ಲಿ ಕಣ್ಣೀರು ಒರೆಸಲಾಗದು. ಫೇಸ್ಬುಕ್ನಲ್ಲಿ ಎಣ್ಣೆ ಹನಿಸಲಾಗದು. ಆದರೆ ನಿರಂತರ ಅಲೆದಾಟದಲ್ಲಿ ಅಮ್ಮನೆಲ್ಲಿದ್ದರೂ ಬೇಕೆಂದರೆ ಕಣ್ಣೀರು ಒರೆಸುವ, ಎಣ್ಣೆ ಹನಿಸುವ ಕೈಗಳಿವೆ ತಾನೇ. ಅದೇ ಬದುಕಿನ ಪರಿಪಾಠ.



ಅಲ್ಲಿದೆ ನಮ್ಮನೆ, ಇಲ್ಲಿ ಬಂದೆ ಸುಮ್ಮನೆ

– ಸುಧೀಂದ್ರ ಬುಧ್ಯ

ಇನ್ನೂ ಚೆನ್ನಾಗಿ ನೆನಪಿದೆ, ಅದಾಗ ನಾನು ಮೂರನೇ ತರಗತಿ ಓದುತ್ತಿದ್ದೆ. ಶಾಲೆ ಮುಗಿಸಿ ಸಂಜೆ ಮನೆಗೆ ಬರುವ ವೇಳೆಗೆ ಜೀನ್ಸ್ ಪ್ಯಾಂಟ್, ಟೀ ಶರ್ಟ್ ತೊಟ್ಟ ಯುವಕನೊಬ್ಬ ನನ್ನ ಅಜ್ಜಯ್ಯ, ದೊಡ್ಡಮ್ಮ ಇಬ್ಬರನ್ನೂ ಮಧ್ಯದಲ್ಲಿ ಕೂರಿಸಿ, ಅವರ ಸುತ್ತ ಮನೆಯವರನ್ನೆಲ್ಲಾ ನಿಲ್ಲಿಸಿ, ಕೈಯಲ್ಲಿ ಹ್ಯಾಂಡಿ ಕ್ಯಾಮ್ ಹಿಡಿದು, 'ಪ್ಲೀಸ್ ಲುಕ್ ಸ್ಟ್ರೈಟ್ ಅಂಡ್ ಸ್ಮೈಲ್' ಎಂದು ಕ್ಯಾಮೆರಾ ಕೈ ತಿರುಗಿಸುತ್ತಿದ್ದ. ಆತ 'ಸ್ಮೈಲ್' ಎಂದಿದ್ದಕ್ಕೆ ನಿಂತವರೂ, ಕೂತವರೂ ಮುಖವರಳಿಸಿ ಆತನನ್ನೇ ನೋಡುತ್ತಿದ್ದರು. ಹೆಗಲಿಗೆ ಜೋತುಬಿದ್ದ ಚೀಲವನ್ನು ಬಿಸಾಡಿ ಅಮ್ಮನ ಹತ್ತಿರ ಬಂದೊಡನೆ, ಅಮ್ಮ ಒಂದು ಪೆನ್ಸಿಲ್ ಕೈಗಿಟ್ಟು, ಜೊತೆಗೆ ಒಂದೆರಡು ಚಿನ್ನಾರಿ ಪೇಪರ್ ಸುತ್ತಿದ್ದ ಬೆಳ್ಳುಳ್ಳಿ ಪಟಾಕಿಯಂಥವನ್ನು ಕೊಟ್ಟು, 'ತೆಗೊ, ಫಾರಿನ್ ಚಾಕೋಲೇಟ್, ಅಮೇರಿಕದ್ದು' ಎಂದು ಸಂಭ್ರಮಿಸಿದ್ದಳು. ಜೊತೆಗೆ 'ನೀನೂ ಚೆನ್ನಾಗಿ ಓದಿದರೆ ಹಾಗೆ ಅಮೇರಿಕಕ್ಕೆ ಹೋಗಬಹುದು' ಎಂಬ ಆಸೆ ಹುಟ್ಟಿಸಿಬಿಟ್ಟಳು. ಹಾಗೆ ನನಗೆ ಪರಿಚಯವಾದದ್ದು 'ಅಮೇರಿಕ'. ಮನೆಗೆ ಬಂದಿದ್ದವನು ವಾರಿಗೆಯಲ್ಲಿ ನನಗೆ ಮಾವನೆಂದೂ, ಆತ ಇಂಜಿನಿಯರಿಂಗ್ ಓದಿ, ಅಮೇರಿಕದಲ್ಲಿ ಕೆಲಸ ಗಿಟ್ಟಿಸಿ, ನಾಲ್ಕಾರು ವರ್ಷ ಅಲ್ಲಿದ್ದು, ಇದೀಗ ರಜೆಯ ಮೇಲೆ ಬಂದಿರುವ ಕಥೆಯನ್ನು ಅಮ್ಮ ಸಂಭ್ರಮದಿಂದ ಹೇಳುವಾಗ, ಚಿನ್ನಾರಿ ಪೇಪರಿನೊಳಗಿದ್ದ ಚಾಕೋಲೇಟ್ ನನ್ನ ಗಂಟಲಿಗಿಳಿಯುತ್ತಿತ್ತು.

ನಂತರ ಬಿಡಿ, ಊಟ ಮಾಡಿ ಮಲಗಿದ್ದ ಮಾವನಿಗೆ ಸೊಳ್ಳೆಗಳು ಕಚ್ಚಿ, ಅದರಿಂದ ಅಲರ್ಜಿಯಾಗಿ ಮುಖವೆಲ್ಲಾ ಊದಿಕೊಂಡು ನಂತರ ನಮ್ಮ ಫ್ಯಾಮಿಲಿ ಡಾಕ್ಟರ್ ಹೊಳ್ಳರನ್ನು ಕರೆಸಿ ಆಂಟಿಹಿಸ್ಟಮಿನ್ ಇಂಜೆಕ್ಷನ್ ಕೊಡಿಸುವ ತನಕ ಮನೆಮಂದಿಗೆಲ್ಲಾ ಗಾಬರಿ. ನಾವು ಹುಡುಗರು ಮಾತ್ರ, 'ಸೊಳ್ಳೆ ಕಚ್ಚಿದರೆ ಹೀಗೆಲ್ಲಾ ಆಡಬೇಕಾ' ಎಂದು ಮುಸಿಮುಸಿ ನಕ್ಕಿದ್ದೆವು. ಮಾವ ಕೊಟ್ಟ ಫಾರಿನ್ ಪೆನ್ಸಿಲ್ಲನ್ನು ಅಮ್ಮ ಮರುದಿನವೇ ನನ್ನಿಂದ ಕಸಿದುಕೊಂಡು, 'ಇದನ್ನು ನೀನು ದೊಡ್ಡವನಾದ ಮೇಲೆ ಉಪಯೋಗಿಸಿದರಾಯಿತು' ಎಂದು ಬೀರುವಿನಲ್ಲಿ ಇರಿಸಿದ್ದಳು. ಮೊನ್ನೆ ಅಮೇರಿಕದಿಂದ ನಾನೂ ನನ್ನ ಅಕ್ಕನ ಮಕ್ಕಳಿಗೆ, ನೆಂಟರ ಹುಡುಗರಿಗೆಂದು ಪೆನ್ಸಿಲ್ ಸೆಟ್ ತೆಗೆದುಕೊಂಡು ಹೋಗಿ ಕೊಡುವಾಗ ಅಮ್ಮ ಬೀರುವಿನಲ್ಲಿಟ್ಟಿದ್ದ ಸುಮಾರು 15 ವರ್ಷಗಳ ಹಿಂದೆ ಮಾವ ತಂದುಕೊಟ್ಟಿದ್ದ ಪೆನ್ಸಿಲ್ ಕಾಣಿಸಿತು. ಅಮ್ಮನಿಗೆ ಅದನ್ನು ತೋರಿಸಿ ಹೇಳಿದ್ದೆ: 'ಅಮ್ಮ,

ನಾನಿನ್ನೂ ದೊಡ್ಡವನಾಗಿಯೇ ಇಲ್ಲ, ಅದಕ್ಕೇ ಪೆನ್ಸಿಲ್ ಇಲ್ಲೇ ಇದೆ.' ಇಬ್ಬರೂ ಹದಿನೈದು ವರ್ಷ ಹಿಂದೆ ಹೋಗಿ ಎಲ್ಲವನ್ನೂ ನೆನಪು ಮಾಡಿಕೊಂಡು ನಕ್ಕು ಹಗುರಾದೆವು.

ಹೀಗೆ ಅಪರೂಪಕ್ಕೆ ಬಂದು ಹೋದ ಫಾರಿನ್ ಮಾವನಿಂದ ಪರಿಚಯವಾದ 'ಅಮೇರಿಕ' ಎಂಬ ಪದ ನಂತರ ನಮ್ಮ ಕುತೂಹಲಗಳಲ್ಲಿ ಒಂದಾಗಿ ಹೋಯಿತು. ಪೇಪರ್ ಓದುವಾಗ, ವಿದೇಶ ಪುಟದಲ್ಲಿ ಅಮೇರಿಕ ಎಂಬ ಪದ ಸಿಕ್ಕರೆ, ಅರೆರೆ ಫಾರಿನ್! ಎಂದು ಮನದಲ್ಲೇ ಅಂದುಕೊಂಡು ಅಮೇರಿಕದ ಸುದ್ದಿ ಓದುವುದು ಅಭ್ಯಾಸವಾಯಿತು. ಶಾಲೆಯ ತನಿಖೆಗೆ ಬಂದಿದ್ದ ಶಿಕ್ಷಣಾಧಿಕಾರಿಗಳು ಮುಂದಿನ ಸಾಲಿನಲ್ಲಿ ಕೂತಿದ್ದ ನನ್ನನ್ನು, 'ಮುಂದೆ ಏನಾಗಬೇಕು ಅಂತ ಆಸೆ ನಿನಗೆ' ಎಂದಾಗ, ಕೈಯಿಂದಲೇ ವಿಮಾನ ಹಾರುವುದನ್ನು ತೋರಿಸಿ, 'ಅಮೇರಿಕಕ್ಕೆ ಹೋಗ್ತೀನಿ' ಎಂದು ಹೇಳಿದ್ದೆ. ಹೈಸ್ಕೂಲು ಸೇರುವ ಹೊತ್ತಿಗೆ, ನಾಗತಿಹಳ್ಳಿಯವರು 'ಅಮೇರಿಕ ಅಮೇರಿಕ' ಎಂಬ ಸಿನಿಮಾ ಮಾಡಿಬಿಟ್ಟರು. ಹಟ ಹಿಡಿದು ಮನೆ ಮಂದಿಯನ್ನೆಲ್ಲಾ ಕರೆದುಕೊಂಡು ನಮ್ಮೂರಿನ ಸಂಜಯ ಥಿಯೇಟರಿನಲ್ಲಿ ಚಿತ್ರ ನೋಡುವಾಗ ಅಮ್ಮ ಕಿವಿಯಲ್ಲಿ, 'ನೀನೂ ಚೆನ್ನಾಗಿ ಓದಿದರೆ ಅಮೇರಿಕಕ್ಕೆ ಹೋಗಬಹುದು' ಎಂದು ಪುನರುಚ್ಚರಿಸಿದ್ದಳು. ಆ ಮಾತು ತಲೆಯಲ್ಲೇ ನಿಂತುಬಿಟ್ಟಿತು.

ಹೀಗೆ ಬಾಲ್ಯದಲ್ಲಿ ಮೋಡಿ ಮಾಡಿದ ಅಮೇರಿಕ ನಂತರವೂ ಸುಪ್ತ ಮನಸ್ಸಿನ ಈಡೇರದ ಬಯಕೆಗಳಲ್ಲಿ ಒಂದಾಗಿಯೇ ನನ್ನೊಂದಿಗೆ ಬೆಳೆಯಿತೆನ್ನಿ. ನಂತರ ಶಾಲೆಯ ಓದು ಮುಗಿದು, ಪಿಯುಸಿಯನ್ನು ದಾಟಿ ಇಂಜಿನಿಯರಿಂಗ್ ಸೇರಿದ್ದೂ ಆಯಿತು. ಮಂಡ್ಯದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿಗೆ 'ಪೀಪಲ್ ಎಜುಕೇಶನ್ ಸೊಸೈಟಿ ಇಂಜಿನಿಯರಿಂಗ್ ಕಾಲೇಜು' ಎನ್ನುವ ಬದಲಿಗೆ 'ಪೂರ್ ಇಂಗ್ಲೀಷ್ ಸ್ಪೀಕಿಂಗ್ ಇಂಜಿನಿಯರಿಂಗ್ ಕಾಲೇಜು' ಎಂದು ಎಲ್ಲರೂ ಅಣಕಿಸಲು ಕಾರಣವಿತ್ತು. ಈ ಕಾಲೇಜಿಗೆ ಸೇರುತ್ತಿದ್ದವರಲ್ಲಿ ಬಹುಪಾಲು ಮಂಡ್ಯದ ಸುತ್ತ ಮುತ್ತಲ ಊರುಗಳವರು, ಅದರಲ್ಲೂ ಹಳ್ಳಿಯಿಂದ ಬರುತ್ತಿದ್ದ ಹುಡುಗರು. ಬುದ್ಧಿವಂತಿಕೆಯಲ್ಲಿ ಯಾರಿಗೂ ಕಮ್ಮಿಯಿಲ್ಲದಿದ್ದರೂ ಇಂಗ್ಲೀಷ್ ವಿಷಯಕ್ಕೆ ಬಂದರೆ ನಮ್ಮಲ್ಲಿ ಇದ್ದಕ್ಕಿದ್ದಂತೆ ಕನ್ನಡ ಪ್ರಜ್ಞೆ ಜಾಗೃತವಾಗಿ ಬಿಡುತ್ತಿತ್ತು. ಹೋಗ್ಲಾ, ಬಾರ್ಲಾ ನಿರರ್ಗಳವಾಗಿ ನಮ್ಮ ಮಾತುಗಳಲ್ಲಿ ಬಳಕೆಯಾಗುತ್ತಿತ್ತೇ ವಿನಃ ಇಂಗ್ಲೀಷ್ ಮಾತಿನಿಂದ ದೂರವೇ. ತರಗತಿಯ ಪಾಠವೊಂದು ಇಂಗ್ಲೀಷಿನಲ್ಲಿ ಆಗುತ್ತಿತ್ತು ಎಂಬುದು ಬಿಟ್ಟರೆ ಉಳಿದಂತೆ ಉಪನ್ಯಾಸಕರೂ 'ಸಿರಿಗನ್ನಡಂ ಗೆಲ್ಗೆ' ಎಂದವರೇ. ಕೊನೆಗೆ ಆರನೇ ಸೆಮಿಸ್ಟರ್‌ಗೆ ಬರುವ ಹೊತ್ತಿಗೆ, ಅನೇಕ ಕಂಪನಿಗಳು ಕ್ಯಾಂಪಸ್ ಇಂಟರ್ವ್ಯೂಗೆ ಬರುತ್ತವೆಂದೂ, ನಾವು ಸಂದರ್ಶನಕ್ಕೆ ತಯಾರಾಗಬೇಕಿದ್ದರೆ ಇಂಗ್ಲೀಷ್‌ನಲ್ಲೇ ಮಾತನಾಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕೆಂದೂ, ಕಂಪನಿಗಳು ಮೊದಲು ಇಂಗ್ಲೀಷ್ ಸಂವಹನ ಕೌಶಲವನ್ನು ನೋಡುತ್ತವೆಂದೂ ನಮ್ಮ ಪ್ಲೇಸ್ಮೆಂಟ್ ಆಫೀಸರ್ ಹೇಳಿದ್ದರಿಂದ ಎಲ್ಲರಿಗೂ ವಿಚಿತ್ರ ನಡುಕ ಪ್ರಾರಂಭವಾಗಿ, ಮಾತುಗಳೇ

ಬಾರದ ಮೂಕರಂತೆ ಮನದಲ್ಲೇ ಹೇಳಬೇಕಾದ ವಾಕ್ಯವನ್ನು ಇಂಗ್ಲೀಷಿನಲ್ಲಿ ಕಟ್ಟುತ್ತಾ ತಡವರಿಸಿದ್ದಿದೆ. ಕೊನೆಗೆ ಹಾಗೂ ಹೀಗೂ ಒಂದಿಷ್ಟು ಇಂಗ್ಲೀಷ್ ಸಂವಹನ ಕಲಿತಿದ್ದರ ಫಲವಾಗಿ, ಕ್ಯಾಂಪಸ್ ಇಂಟರ್ವ್ಯೂನಲ್ಲಿ ಆಪ್ಟಿಟ್ಯೂಡು, ಕಾನ್ವರ್ಸೇಷನ್ ಇಂಗ್ಲೀಷು ಎಂಬೆಲ್ಲಾ ಟೆಸ್ಟುಗಳನ್ನು ಪಾಸುಮಾಡಿ, ಅಮೇರಿಕ ಮೂಲದ ಕಂಪನಿಯೊಂದು ವರ್ಷಕ್ಕಿಂತಿಷ್ಟು ಲಕ್ಷ ಎಂಬ ಆಫರ್ ಲೆಟರ್ ಕೈಗಿತ್ತು ಹೋದ ಮೇಲೆ ಮನದಲ್ಲೇ ಹುದುಗಿದ್ದ ಅಮೇರಿಕದ ಆಸೆಗೆ ರೆಕ್ಕೆ ಪುಕ್ಕ ಬಂತು.

ಹಾಗಂತ ಅಮೇರಿಕಕ್ಕೆ ಹಾರುವ ಆಸೆ ಕೆಲಸಕ್ಕೆ ಸೇರಿ ಮೊದಲ ಮೂರುವರ್ಷ ಈಡೇರಲೇ ಇಲ್ಲ. ನಾಲ್ಕನೆಯ ವರ್ಷ ಹಾಗೂ ಹೀಗೂ ವೀಸಾಕ್ಕೆ ಅರ್ಜಿ ಹಾಕಲು ಮ್ಯಾನೇಜರ್ ಹುಕುಂ ನೀಡಿದ್ದರಿಂದ, ಕೊನೆಗೂ ಅನುಮತಿ ಕೋರಿ ಅರ್ಜಿ ಸಲ್ಲಿಸಿ, ಅದಕ್ಕೆ ಬೇಕಾದ ಮಾಹಿತಿಯನ್ನೆಲ್ಲಾ ನೀಡಿ, ಅಮೇರಿಕ ವೀಸಾಗೆ ಎಂದು ಹೇಳಿ ಡಿ.ವಿ.ಜಿ. ರಸ್ತೆಯ ಜಿ.ಕೆ ವೇಲ್ ಸ್ಟೂಡಿಯೋನಲ್ಲಿ 'ಏನ್ರೀ, ಎಷ್ಟು ಹೇಳಿದ್ರೂ ಕತ್ತು ವಾರೆ ಮಾಡ್ತೀರಾ' ಎಂದು ಆತನಿಂದ ಬೈಸಿಕೊಂಡು, ನಾಲ್ಕಾರು ಸಾರಿ ಆತನೇ ಬಂದು ತಲೆಯನ್ನು ಅತ್ತಿಂದಿತ್ತ ಸರಿಸಿ, ನೆಟ್ಟಗೆ ಮಾಡಿ ಫೋಟೋ ತೆಗೆದುಕೊಟ್ಟಿದ್ದ. ಚೆನ್ನೈನ ಅಮೇರಿಕನ್ ಕಾನ್ಸುಲೇಟಿನಲ್ಲಿ ಸಂದರ್ಶನಕ್ಕೆ ಸಮಯವೂ ನಿಕ್ಕಿಯಾಗಿತ್ತು. ಸ್ನೇಹಿತರು ಎಲ್ 1 ವೀಸಾದ ರಿಜೆಕ್ಷನ್ ರೇಟ್ ಜಾಸ್ತಿಯಿದೆಯೆಂದೂ, ಅದರಲ್ಲೂ ಚೆನ್ನೈನ ಸಂದರ್ಶಕರು ಸುಮ್ಮನೆ ವೀಸಾಕ್ಕೆ ಒಪ್ಪಿಗೆಯ ಮುದ್ರೆ ಒತ್ತುವವರಲ್ಲವೆಂದೂ, ಎಲ್ಲದಕ್ಕೂ ಸಿಡುಕುತ್ತಾರೆಂದು ಹೇಳಿದಾಗ ಸಣ್ಣಗೆ ಬೆವತಿದ್ದೆ. ಅತ್ತ ಚೆನ್ನೈ ತಲುಪಲು ಕಂಪನಿಯವರು ವಿಮಾನವನ್ನೇನೋ ವ್ಯವಸ್ಥೆ ಮಾಡಿದರು. ಮೊದಲೆಲ್ಲೂ ವಿಮಾನದಲ್ಲಿ ಹೋದ ಅನುಭವವಿರಲಿಲ್ಲ, ಹೇಗಿದ್ದೀತೋ ಏನೋ ಎಂಬ ಆತಂಕದಿಂದಲೇ ಬ್ಯಾಗು ತುಂಬುವಾಗ, ಅಮ್ಮ ಪುಟ್ಟ ಪೊಟ್ಟಣವೊಂದನ್ನು ಜೇಬಿಗೆ ತುರುಕಿದ್ದಳು. 'ಮೊದಲಿಗೆ ವಿಮಾನದಲ್ಲಿ ಹೋಗುತ್ತಿದ್ದೀಯಾ, ರಾಯರ ಮಂತ್ರಾಕ್ಷತೆ ಇಟ್ಟಿದ್ದೀನಿ' ಎಂದು ಗಲ್ಲ ತಟ್ಟಿಕೊಂಡಳು. ರಾಯರ ಮಂತ್ರಾಕ್ಷತೆ ಜೇಬಿಗೆ ಬಂದಮೇಲೆ 'ಗುರುರಾಯ, ನೀನೇ ಎಲ್ಲವನ್ನೂ ನಿರ್ವಿಘ್ನವಾಗಿ ನಡೆಸಪ್ಪ' ಎಂದು ಚೆನ್ನೈಗೆ ಹೊರಟೆ.

ಮರುದಿನ ಕಾನ್ಸುಲೇಟಿಗೆ ಹೋದರೆ, ಬಾಗಿಲಲ್ಲೇ ಅಡಿಯಿಂದ ಮುಡಿಯವರೆಗೆ ಪರೀಕ್ಷಿಸಿದ ಅಲ್ಲಿನ ಸೆಕ್ಯೂರಿಟಿಯವರಿಗೆ ಜೇಬಿನಲ್ಲಿದ್ದ ಪುಟ್ಟ ಮಂತ್ರಾಕ್ಷತೆ ಪೊಟ್ಟಣ ಕಣ್ಣಿಗೆ ಬಿತ್ತು ನೋಡಿ. ದೇವರ ಪ್ರಸಾದವೆಂದರೂ ಆತ ಕೇಳದೆ, ಅದನ್ನು ಅನುಮಾನದಿಂದಲೇ ಪರೀಕ್ಷಿಸಿ ಕಸದ ಬುಟ್ಟಿಗೆ ಎಸೆದುಬಿಟ್ಟ! ಶಕುನ ಸರಿಯಿಲ್ಲವೆಂದು ಗೊಣಗುತ್ತಲೇ ಒಳಗೆ ಹೋದರೆ, ಗಾಬರಿಯಾಗಿದ್ದು ದಿಟ. ಅರೆರೆ ಇಷ್ಟೆಲ್ಲಾ ಮಂದಿ ಪ್ರತಿದಿನವೂ ಇಲ್ಲಿ ವೀಸಾಕ್ಕೆ ಅಕ್ಷರಶಃ ಭಿಕ್ಷುಕರಂತೆ ಸಾಲಿನಲ್ಲಿ ನಿಲ್ಲುತ್ತಾರೆಯೇ? ಕೆಲಸಕ್ಕೆಂದು ಹೋಗುವ ಯುವಕ, ಯುವತಿಯರು, ಗಂಡನೊಂದಿಗೆ ಹಾರಲು ಸಿದ್ಧವಾಗಿರುವ ಕಂಕುಳಲ್ಲಿ ಮಗುವನ್ನು ಎತ್ತಿಕೊಂಡ ಮಹಿಳೆಯರು, ಮಗಳದ್ದೋ ಸೊಸೆಯದ್ದೋ ಬಾಣಂತನಕ್ಕೆ ಹೊರಟಿರುವ

ಅಜ್ಜಿಯರು... 'ಅಬ್ಬಾಬ್ಬಾ ಹಿರಿಯಣ್ಣನೇ, ನಿನ್ನ ಮಹಿಮೆ ಅಪಾರ' ಎಂದು ಸರತಿ ಸಾಲಿನಲ್ಲಿ ನಿಂತರೂ, ಕಾಲುಗಳೇಕೋ ಗೊತ್ತಿಲ್ಲದೆಯೇ ಕಂಪಿಸಿ, ಎದೆಬಡಿತ ಜೋರಾಗತೊಡಗಿತ್ತು. 'ನೆಕ್ಸ್ಟ್, ಮಿಸ್ಟರ್ ಬುಧ್ಯ' ಎಂದಾಗ ಸಂದರ್ಶನದ ಕಿಟಕಿಯ ಮುಂದೆ ನಿಂತು ಉಗುಳು ನುಂಗುತ್ತಾ, ಹತ್ತೂ ಬೆರಳುಗಳನ್ನು ಸ್ಕ್ಯಾನಿಂಗ್ ಯಂತ್ರದ ಮೇಲೆ ಒತ್ತಿ ಹಿಡಿದಿರುವಾಗಲೇ, 'ನೀನೇ ಏಕೆ ಅಮೇರಿಕಕ್ಕೆ ಹೋಗಬೇಕು, ನಿನ್ನ ಕೌಶಲದವರನ್ನು ಅಲ್ಲೇ ನಿನ್ನ ಕಂಪನಿ ತೆಗೆದುಕೊಳ್ಳಬಹುದಲ್ಲ. ಸಾರಿ ನಿನ್ನ ವೀಸಾ ಅರ್ಜಿಯನ್ನು ತಿರಸ್ಕರಿಸಲಾಗಿದೆ' ಎಂದು ಮುಖಕ್ಕೆ ಹೊಡೆದ ಹಾಗೆ ಸಂದರ್ಶಕ ಹೇಳಿಬಿಟ್ಟ. ಅಮೇರಿಕಕ್ಕೆ ಹೋಗಬೇಕೆಂಬ ಕನಸಿನ ಬಲೂನು ಆ ಕ್ಷಣದಲ್ಲೇ ಸಿಡಿದು ಚೂರಾಗಿತ್ತು. ರಾಯರ ಅಕ್ಷತೆಯನ್ನು ಕಸದ ಬುಟ್ಟಿಗೆ ಹಾಕಿದ್ದ ಸೆಕ್ಯುರಿಟಿಯವನಿಗೆ ಶಾಪ ಹಾಕುತ್ತಾ ಕಾನ್ಸುಲೇಟಿನಿಂದ ಹೆಜ್ಜೆ ಹೊರಗಿಟ್ಟಿದ್ದೆ.

ವೀಸಾ ತಿರಸ್ಕಾರವಾಗಿದ್ದು ಕೇಳಿ ಮ್ಯಾನೇಜರ್ ಮೈಯೆಲ್ಲಾ ಮುಳ್ಳಾದವನ ಹಾಗೆ ಒಮ್ಮೆ ಮುಖ ಕಿವುಚಿದ. 'ನೀನು ಸರಿಯಾಗಿ ಅವರ ಪ್ರಶ್ನೆಗೆ ಉತ್ತರಿಸಲಿಲ್ಲವೇನೋ' ಎಂದು ಅನುಮಾನದಿಂದ ನೋಡಿದ. ಇತ್ತ ಮನೆಯಲ್ಲಿ ಅಮ್ಮ, 'ರಾಯರ ಇಚ್ಛೆ ಇಲ್ಲಾ ಅಂತ ಕಾಣತ್ತೆ, ಹಾಳಾದವನು ರಾಯರ ಮಂತ್ರಾಕ್ಷತೆ ಕಸದ ಬುಟ್ಟಿಗೆ ಎಸೆದನೆ? ಅವನಿಗೇನೋ ಕಾದಿದೆ' ಎಂದು ಶಪಿಸುತ್ತಲೇ ದೇವರ ಮನೆಯಲ್ಲಿದ್ದ ರಾಯರಿಗೆ ವೀಸಾ ತಿರಸ್ಕಾರವಾದದ್ದನ್ನು ಒಪ್ಪಿಸಿದ್ದಳು. ಅಪ್ಪ, 'ಒಳ್ಳೆಯದೇ ಆಯಿತು' ಎಂದು ನಿಟ್ಟುಸಿರುಬಿಟ್ಟರು. ಆದರೆ ನನ್ನ ಮನದ ಬಯಕೆ ಮಾತ್ರ ಕರಗಲಿಲ್ಲ. ಈ ಐಟಿ ಕ್ಷೇತ್ರದಲ್ಲಿರುವವರ ಸಮಸ್ಯೆಯೇ ಅದು. ಸ್ನೇಹಿತರೆಲ್ಲಾ ಒಟ್ಟಿಗೆ ಸೇರಿದಾಗ ಎದುರಾಗುವ ಎರಡು ಪ್ರಶ್ನೆಗಳೆಂದರೆ, 'ನಿನ್ನ ವಾರ್ಷಿಕ ಗಳಿಕೆ ಎಷ್ಟು?' ಮತ್ತು 'ವಿದೇಶಕ್ಕೆ ಹೋಗಿ ಬಂದೆಯಾ?' ವಯಸ್ಸು 26 ದಾಟುತ್ತಿದ್ದಂತೆ ಮತ್ತೊಂದು ಪ್ರಶ್ನೆಯೂ ಇದಕ್ಕೆ ಸೇರಿಕೊಳ್ಳುತ್ತದೆ- 'ಮದುವೆ ಯಾವಾಗ?' ಉಫ್! ಈ ಮೂರು ಪ್ರಶ್ನೆಗಳಿಗೆ ಉತ್ತರಿಸುವುದೆಂದರೆ ಇರಿಸುಮುರಿಸು. ಈ ಮೂರು ಪ್ರಶ್ನೆಗಳಿಗೂ ನನ್ನಲ್ಲಿ ಹೇಳಿಕೊಳ್ಳುವ ಉತ್ತರವಿಲ್ಲದಿರುವಾಗ ಈ ವೀಸಾ ತಿರಸ್ಕಾರ ಗಾಯದ ಮೇಲೆ ಬರೆಯೆಳೆದಂತೆ ಮತ್ತಷ್ಟು ಬೇಸರ ಮೂಡಿಸಿದ್ದು ಸತ್ಯ.

ಸದ್ಯ, ಈ ಎಪಿಸೋಡು ಆದ ತಿಂಗಳ ಅವಧಿಯಲ್ಲೇ ನಮ್ಮ ಮ್ಯಾನೇಜರ್, 'ಮಿಸ್ಟರ್ ಬುಧ್ಯ, ವಿ ಹ್ಯಾವ್ ಅಪ್ಲೈಡ್ ಫಾರ್ ಯುವರ್ ಹೆಚ್ 1 ಪಿಟೀಷನ್ ಆನ್ ಕ್ಲೈನ್ಸ್ ರಿಕ್ವೆಸ್ಟ್' ಎಂದು ಟೀಂ ಮೀಟಿಂಗಿನಲ್ಲಿ ಉಸುರಿದ. ಮನದಲ್ಲೇ ರಾಯರಿಗೊಂದು ಅಭಿಷೇಕ ಮಾಡಿಸುತ್ತೇನೆ ಎಂದುಕೊಂಡು ಕುಪ್ಪಳಿಸಿದ್ದೆ. ಈ ಬಾರಿ ಹೆಚ್ 1 ಕೆಟಗರಿಯಲ್ಲಿ ಅರ್ಜಿ ಸಲ್ಲಿಸುತ್ತಿರುವುದರಿಂದ ವೀಸಾ ಸಿಕ್ಕೇ ಸಿಗುತ್ತದೆಂಬ ಖಾತ್ರಿಯಿತ್ತು. ಸರಿ ವಾರದಲ್ಲೇ ಪೇಪರ್ ವರ್ಕ್ ಮುಗಿಸಿ, ಅಮೇರಿಕದಲ್ಲಿ ಕೆಲಸ ಮಾಡಬೇಕಾದ ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸಲು ಶುರುವಿಟ್ಟಿದ್ದೂ ಆಯಿತು. ಲೈಬ್ರರಿಗೆ ಹೋದರೆ, ಅಮೇರಿಕದ ಪ್ರವಾಸ

ಕಥನಗಳು ಧಾರಾಳವಾಗಿ ಸಿಕ್ಕವು. 'ಸಿನ್ಸಿನಾಟಿಯಲ್ಲಿ ಕರಿಬೇವಿನ ಸೊಪ್ಪು' ಎಂಬ ಪುಸ್ತಕವೂ ಸೇರಿದಂತೆ ಎಲ್ಲವನ್ನೂ ಹರಡಿಕೊಂಡು ಕೂತಿದ್ದಾಯಿತು. ನನ್ನ ಜೊತೆಗೆ ಅಮ್ಮ, ಅಪ್ಪನೂ ಕೂತು ಓದಲು ಶುರುವಿಟ್ಟರು. ಅಮ್ಮನದೋ ಮಧ್ಯೆ ಮಧ್ಯೆ ನಾನಾ ಪ್ರಶ್ನೆ. 'ಅಲ್ಲಿ ಯಾರೂ ನಡೆದು ಓಡಾಡುವುದೇ ಇಲ್ಲವಂತೆ, ಎಲ್ಲರಲ್ಲೂ ಕಾರಿರುತ್ತದಂತೆ, ಅಡುಗೆ ಮನೆಯಲ್ಲಿ ಗ್ಯಾಸ್ ಸಿಲಿಂಡರ್ ಬದಲು ಎಲೆಕ್ಟ್ರಿಕ್ ಸ್ಟವ್ ಬಳಸುತ್ತಾರಂತೆ, ಟಾಯ್ಲೆಟಿನಲ್ಲಿ ತೊಳೆದುಕೊಳ್ಳಲು ನೀರೇ ಬಳಸುವುದಿಲ್ಲವಂತೆ, ಹೌದಾ? ಥೂ ಅಸಹ್ಯ' ಎಂದು ಕೂತಲ್ಲೇ ಮೂಗು ಮುಚ್ಚಿಕೊಂಡಿದ್ದಳು. ನನಗೋ ಅಮ್ಮನ ಪ್ರಶ್ನೆಗಳಿಂದ ರೇಗಿಹೋಗಿ 'ನನಗೇನು ಗೊತ್ತಮ್ಮ, ನಾ ಹೋಗಿ ಬಂದು ಹೇಳುತ್ತೇನೆ, ನೀರಿಗೆ ಸಮಸ್ಯೆಯಾದರೆ ನಾವೂ ಇಲ್ಲಿ ಹಾಗೆಯೇ ಮಾಡಬೇಕು, ಈಗ ಸುಮ್ಮನಿರು' ಎಂದು ಗದರಿದ್ದೆ.

ಕೊನೆಗೂ ಈ ಬಾರಿ ಸಂದರ್ಶಕರು ಹೆಚ್ಚು ಪ್ರಶ್ನೆ ಕೇಳದೆ, 'ವೀಸಾ ಮುದ್ರೆಯೊತ್ತಿದ್ದ ಪಾಸ್ ಪೋರ್ಟ್ ಇನ್ನು ನಾಲ್ಕುದಿನದಲ್ಲಿ ನಿಮಗೆ ತಲುಪಲಿದೆ, ಹ್ಯಾವ್ ಎ ನೈಸ್ ಟೈಮ್ ಇನ್ ಯು.ಎಸ್.' ಎಂದಾಗ ಬಹುದಿನದ ಬಯಕೆ ಈಡೇರಿದ ಖುಷಿ ಒಂದೆಡೆಯಾದರೆ, ಪರದೇಶದ ಜೀವನದ ಬಗೆಗಿನ ಆತಂಕ ಮತ್ತೊಂದೆಡೆ. ಸರಿ, ಹೊರಡುವ ದಿನ ನಿಶ್ಚಯವಾದ ಮೇಲೆ ಶುರುವಾಯಿತು ನೋಡಿ ತಯಾರಿ! ಅಕ್ಕಂದಿರು ಚಟ್ನಿಪುಡಿ, ಸಾರಿನ ಪುಡಿ, ಸಾಂಬಾರು ಪುಡಿ ಎಂದು ಕೆಲಸ ಹಂಚಿಕೊಂಡರು. ಅಮ್ಮ ಉಪ್ಪಿಟ್ಟು, ದೋಸೆ, ಅವಲಕ್ಕಿ, ಸಾರು, ಹುಳಿ, ಪುಳಿಯೋಗರೆ ಇತ್ಯಾದಿಗಳನ್ನು ಹೇಗೆ ಮಾಡುವುದು ಎಂದೆಲ್ಲಾ ಬರೆಯಲು ಕುಳಿತಳು. ಪುಸ್ತಕದ ಮೊದಲ ಪುಟದಲ್ಲೇ 'ಓಂ ಶ್ರೀ ರಾಘವೇಂದ್ರಾಯ ನಮಃ' ಎಂಬುದನ್ನು ದೊಡ್ಡಕ್ಷರದಲ್ಲಿ ಬರೆದಳು, ಕೆಳಗೆ ಸೂಚನೆ ಎಂದು ಬರೆದು, 'ಅಡುಗೆ ಮಾಡುವಾಗ ಮತ್ತ್ಯಾವುದೇ ಕೆಲಸ ಮಾಡದೆ, ಅಡುಗೆ ಮನೆಯ ಕಡೆಯೇ ಗಮನ ಇಡುವುದು. ಕುಕ್ಕರ್ ಇಡುವ ಮೊದಲು ಪಾತ್ರೆಯ ಬುಡದಲ್ಲಿ ನೀರು ಹಾಕಿರುವುದನ್ನು ಖಾತ್ರಿ ಮಾಡಿಕೊಳ್ಳುವುದು' ಎಂದು ಬರೆದು ಎರಡೆರಡು ಬಾರಿ ತಿದ್ದಿದಳು. ನಂತರ ಒಂದೊಂದೇ ಪದಾರ್ಥಗಳ ವಿವರ ಬರೆದು ಮುಗಿಸಿದಳು. ನನಗೋ ನಗು, 'ಅಲ್ಲಮ್ಮ, ಹೀಗೆ ನಿನಗೆ ಗೊತ್ತಿರುವ ಅಡುಗೆಗಳನ್ನೆಲ್ಲಾ ಮೊದಲೇ ಬರೆದಿದ್ದರೆ, ಗೀತಾಬುಧ್ಯರ ಪಾಕಶಾಸ್ತ್ರ ಎಂಬ ಕೃತಿ ತರಬಹುದಿತ್ತಲ್ಲಮ್ಮ' ಎಂದು ಛೇಡಿಸಿದ್ದೆ. ಅಪ್ಪನಿಗೋ ಮೊದಲಿನಿಂದಲೂ ವೈದ್ಯ ವಿಜ್ಞಾನದ ಬಗ್ಗೆ ಕಾಳಜಿ. ಅವರ ಡಿಪಾರ್ಟ್ಮೆಂಟ್ ಆದ ಆರೋಗ್ಯ ಮತ್ತು ಹಣಕಾಸಿನ ಜವಾಬ್ದಾರಿ ಹೊತ್ತು, ಅಮೇರಿಕಕ್ಕೆ ತೆಗೆದುಕೊಂಡು ಹೋಗಬೇಕಾದ ಮಾತ್ರೆಗಳ ಪಟ್ಟಿ ಮಾಡಿದರು. ಮನೆಯ ವೈದ್ಯ ಡಾ॥ ಹೊಳ್ಳರಿಂದ ಬೇಧಿಯಾದರೆ, ವಾಂತಿಯಾದರೆ, ಮೈ ಕೈ ನೋವಿಗೆ, ಜ್ವರಕ್ಕೆ, ಕಿವಿ ನೋವಿಗೆ ಎಂದೆಲ್ಲಾ ಹತ್ತಾರು ಮಾತ್ರೆ ಬರೆಸಿಕೊಂಡು ತಂದು ಪ್ಯಾಕ್ ಮಾಡಿಟ್ಟರು. ಜೊತೆಗೆ ಒಂದು ಚೀಟಿಯಲ್ಲಿ ಪ್ರತಿ ಮಾತ್ರೆಗೂ ಟಿಪ್ಪಣಿ– ಬೇಧಿ ತೀರಾ ನೀರಾದರೆ, ನಾಲ್ಕು

ಬಾರಿಗಿಂತ ಹೆಚ್ಚಾದರೆ, ಹೊಟ್ಟೆ ತೊಳಸಿದರೆ ಎಂದೆಲ್ಲ ಬರೆದು ಅದನ್ನು ಓದಿ ಹೇಳಿದಾಗ, ಅಮ್ಮ 'ಈ ವಿಷಯದಲ್ಲಿ ನಿಮ್ಮಪ್ಪ ಅನುಭವಸ್ಥರಪ್ಪ' ಎಂದು ನಕ್ಕಿದ್ದರು. ನನಗೂ ನಗು ತಡೆಯಲಾಗಿರಲಿಲ್ಲ.

ಇನ್ನು ಈಗಾಗಲೇ ಅಮೇರಿಕಕ್ಕೆ ಹೋಗಿಬಂದ ಸ್ನೇಹಿತರು 'ಏನಿಲ್ಲದಿದ್ದರೂ ಔಷಧಿ, ಕುಕ್ಕರ್ ತೆಗೆದುಕೊಂಡು ಹೋಗು ಮಾರಾಯ, ಉಳಿದದ್ದು ಅಲ್ಲೇ ತೆಗೆದುಕೊಳ್ಳಬಹುದು' ಎಂದರೂ, ಅಮ್ಮ ಕೈಹಿಡಿಯುವ ಬಟ್ಟೆಯಿಂದ ಹಿಡಿದು, ಸೂಜಿ ದಾರದವರೆಗೆ ಎಲ್ಲವನ್ನೂ ಪ್ಯಾಕ್ ಮಾಡುತ್ತಿದ್ದರೆ ನನಗೋ ಲಗೇಜಿನ ತೂಕ ಮಿತಿಮೀರುತ್ತದೆ, ಸುಮ್ಮನೇ ಹೆಚ್ಚು ಹಣ ಕೊಡಬೇಕಲ್ಲ ಎಂಬ ದಿಗಿಲು, ನೀನೇನು ನನ್ನನ್ನು ಪರದೇಶಕ್ಕೆ ಕಳುಹಿಸುತ್ತಿದ್ದೀಯೋ, ಬೇರಾವ ಗ್ರಹಕ್ಕೆ ಸಾಗಹಾಕುತ್ತಿದ್ದೀಯೋ ಎಂದು ರೇಗುತ್ತಿದ್ದೆ. 'ಆದರೂ, ಒಂದು ಚಿಕ್ಕ ಬಕೇಟ್ ಮತ್ತು ನೀರಿನ ತಂಬಿಗೆ ಕೊಂಡೊಯ್ದರೆ, ಪೇಪರ್ ಸಹವಾಸ ತಪ್ಪುತ್ತೆ' ಎಂದಾಗ ಅಲ್ಲಿದ್ದವರೆಲ್ಲರೂ ಹೊಟ್ಟೆಹುಣ್ಣಾಗುವಷ್ಟು ನಕ್ಕಿದ್ದೆವು. ಕೊನೆಗೂ ಪ್ಯಾಕಿಂಗ್ ಮುಗಿದು, ಮನೆ ಮುಂದಿದ್ದ ಹಳೆ ಪಾತ್ರೆ ಸಾಮಾನಿನ ಸಾಬರ ಅಂಗಡಿಯ ದೊಡ್ಡ ತೂಗುಯಂತ್ರದಲ್ಲಿ ಬ್ಯಾಗುಗಳನ್ನು ತೂಗಿ ಅವು 23ಕೆ.ಜಿ. ಮೀರದಂತೆ, ಆಗಲೇ ತುಂಬಿದ್ದರಲ್ಲಿ ಬೇಡದ್ದನ್ನು ತೆಗೆದು ಕಾರುಹತ್ತಿದ್ದರೂ ಅಮ್ಮ, ಒಂದಿಲ್ಲೊಂದನ್ನು ಬ್ಯಾಗಿಗೆ ತುಂಬುವುದು ಮಾತ್ರ ಬಿಟ್ಟಿರಲಿಲ್ಲ. ಉಫ್! ಎರಡು ದೊಡ್ಡ ಚೆಕ್ ಇನ್ ಬ್ಯಾಗುಗಳು, ಮತ್ತೊಂದು ಕ್ಯಾಬಿನ್ ಬ್ಯಾಗು, ಬಗಲಿಗೊಂದು ಲ್ಯಾಪ್ ಟಾಪ್ ಇಟ್ಟ ಬ್ಯಾಗು ಎಲ್ಲವನ್ನೂ ಲಗೇಜು ಹೊರುವ ಕೂಲಿಗಳಂತೆ ಹೊತ್ತು ವಿಮಾನ ನಿಲ್ದಾಣದ ಒಳಹೊಕ್ಕರೆ 'ಹ್ಯಾಪಿ ಜರ್ನಿ' ಎಂದು ಕೈ ಬೀಸುತ್ತಿದ್ದವರ ಕಣ್ಣುಗಳಲ್ಲಿ ನೀರು ಜಿನುಗುತ್ತಿತ್ತು.

ತ್ರಾಸವಾಗಿದ್ದೇ ಅದು, ಸುಮಾರು 22 ಘಂಟೆಯ ಪ್ರಯಾಣ. ಅಂಗಾತ ಮಲಗಲಾಗದ ಆಯಾಸ, ನಿದ್ದೆಯ ಚಕ್ರ ಬದಲಾಗಿ ಹಗಲಲ್ಲೇ ತೂಕಡಿಸುವ ಸ್ಥಿತಿ. ಫ್ರಾಂಕ್ ಫರ್ಟ್, ನೆವಾರ್ಕ್‌ಗಳಲ್ಲಿನ ಭದ್ರತಾ ತಪಾಸಣೆ. ಈ ಭದ್ರತಾ ತಪಾಸಣೆಗಳಂತೂ ಎಂಥವರಿಗೂ ಸಾಕಪ್ಪ ಸಾಕು ಎನಿಸಿಬಿಡುತ್ತದೆ. ನನ್ನ ಸ್ನೇಹಿತ ಕೂಡ ಅವನು ಭದ್ರತಾ ಸಿಬ್ಬಂದಿಗಳಿಂದ ಹೈರಾಣಾದ ಪ್ರಸಂಗ ವಿವರಿಸಿದ್ದ. ಆಗಿದ್ದಿಷ್ಟೇ. ಬ್ಯಾಗಿನಲ್ಲಿದ್ದ ಚಟ್ನಿ ಪುಡಿ ಆತನನ್ನು ನಾಲ್ಕು ಗಂಟೆ ಭದ್ರತಾ ಸಿಬ್ಬಂದಿಯ ಮುಂದೆ ಕೂರುವಂತೆ ಮಾಡಿತ್ತು. ಓರ್ವ ಅಧಿಕಾರಿ ಬಂದು ಚಟ್ನಿಪುಡಿಯನ್ನು ಮೂಸಿ ನೋಡಿ ಏನೇನೋ ಗೊಣಗಿ ನಡೆದರೆ, ನಂತರ ಬಂದವ ಮತ್ತೊಮ್ಮೆ ಆ ವಾಸನೆ ಗ್ರಹಿಸುತ್ತಾ, ಏನಿದು? ಎಂಬಂತೆ ನೋಡಿದ್ದನಂತೆ. ಹೀಗೆ ಚಟ್ನಿಪುಡಿಯ ಪರಿಶೀಲನೆಗೆ ಅಧಿಕಾರಿಗಳ ಪಥಸಂಚಲನೆ ನಡೆದಿರುವಾಗ ಕೊನೆಗೆ ರೋಸಿಹೋದ ಸ್ನೇಹಿತ, 'ನೀವೇ ಚಟ್ನಿಪುಡಿ ಇಟ್ಟುಕೊಳ್ಳಿ ನನ್ನನ್ನು ಬಿಟ್ಟುಬಿಡಿ' ಎಂದು ಕೈ ಮುಗಿದಿದ್ದ.

ಸರಿ, ಎರಡು ಕಡೆ ಭದ್ರತಾ ಸಿಬ್ಬಂದಿಯಿಂದ ಪಾರಾಗಿ ಕೊನೆಗೂ ಸಿನ್ಸಿನಾಟಿಯಲ್ಲಿ ಬಂದಿಳಿದೆ ನೋಡಿ, ಮನಸ್ಸು ಗರಿಗೆದರಿತು. ಮತ್ತೊಮ್ಮೆ ಬ್ಯಾಗುಗಳನ್ನೆಲ್ಲಾ ತಳ್ಳಿಕೊಂಡು

ಹೊರಬಂದರೆ ಹಿಮದ ಮಳೆ, ಕೊರೆವ ಚಳಿ. ಸ್ನೇಹಿತರೊಬ್ಬರು ಅದಾಗಲೇ ಮೊದಲ ಎರಡು ದಿನ ನಮ್ಮ ಮನೆಯಲ್ಲೇ ಇರಬೇಕೆಂದು ಒತ್ತಾಯ ಮಾಡಿದ್ದರಿಂದ ಅಲ್ಲಿಗೆ ಹೋದೊಡನೆ ಬಿಸಿನೀರಿನ ಸ್ನಾನ, ಅವರ ಪತ್ನಿ ಬಡಿಸಿದ ಬಿಸಿಬಿಸಿ ಊಟಮಾಡಿ ಮೈಚೆಲ್ಲಿದರೆ ಭರ್ತಿ ನಿದ್ದೆ. ಎರಡು ದಿನ ನಿದ್ದೆಯಲ್ಲೆ ಕಳೆದು ನಂತರ ಊರಿನ ವಾಲ್ಮಾರ್ಟಿನಲ್ಲಿ ಸುತ್ತು ಬಂದು ನನ್ನದೆಂದು ಮನೆ ಹಿಡಿದು, ಬದುಕ ತೊಡಗಿದ ಮೇಲೆ ಅಮೇರಿಕ ಅರ್ಥವಾಗತೊಡಗಿತು.

'ಕಾರಿಲ್ಲದಿದ್ದರೆ ಅಮೇರಿಕದಲ್ಲಿ ಬದುಕು ನಡೆಯುವುದು ಕಷ್ಟ, ಮೊದಲು ಇಲ್ಲಿ ಡ್ರೈವಿಂಗ್ ಲೈಸೆನ್ಸ್‌ಗೆ ಅರ್ಜಿಹಾಕು' ಎಂದು ಸಹೋದ್ಯೋಗಿಯೊಬ್ಬ ಸಲಹೆ ಕೊಟ್ಟಿದ್ದ. ಆದರೆ ನನಗೆ ಮೊದಲಿಗೆ ಸಮಸ್ಯೆಯೆನಿಸಿದ್ದು ಆಹಾರದ ವಿಷಯ. ಮೊದಲೇ ಬ್ರಹ್ಮಚಾರಿ. ಮನೆಯಲ್ಲಿದ್ದಷ್ಟು ದಿನ ಅಡುಗೆ ಮನೆಕಡೆ ಸುಳಿದವನಲ್ಲ. ಹೊರಗಡೆಯ ವ್ಯವಹಾರವೆಲ್ಲವೂ ಅಪ್ಪನದು. ಬೆಂಗಳೂರು, ಚೆನ್ನೈಗಳಲ್ಲಿ ಒಂದೊಂದು ವರ್ಷವಿದ್ದೆನಾದರೂ ಊಟ ತಿಂಡಿಗಳಿಗೆ ನಾನಾ ಹೊಟೇಲುಗಳಿದ್ದವು. ಇಲ್ಲಿ ಅಡುಗೆ ಮಾಡುವುದು ಅನಿವಾರ್ಯವಾಗಿ ಅಮ್ಮನ ಅಡುಗೆ ಪುಸ್ತಕ ತೆರೆದು ಅಡುಗೆ ಪ್ರಾರಂಭಿಸಿದ್ದೂ ಆಗಿತ್ತು. ಆಗ ಅದರಲ್ಲಿ ಸುಲಭಕ್ಕೆ ಕಂಡಿದ್ದೆಂದರೆ ಉಪ್ಪಿಟ್ಟು.

ಉಪ್ಪಿಟ್ಟಿಗೂ ನನಗೂ ಯಾವ ಜನ್ಮದ ನಂಟೋ ಗೊತ್ತಿಲ್ಲ. ಈ ಹಿಂದೆ ಅಮ್ಮ ಉಪ್ಪಿಟ್ಟು ಹೇಳಿಕೊಟ್ಟದ್ದನ್ನು 'ಉಪ್ಪಿಟ್ಟಿನ ಗೀತೋಪದೇಶ'ವೆಂದು ಒಂದು ಪ್ರಬಂಧವನ್ನೇ ಬರೆದಿದ್ದೆ. ಈಗ ನನ್ನ ಗಡಿಬಿಡಿಯ ದಿನಚರಿಯಲ್ಲಿ, ವೀಕೆಂಡಿನ ಸೋಮಾರಿತನದಲ್ಲಿ ಉಪವಾಸ ಬೀಳದಂತೆ ನೋಡಿಕೊಂಡಿರುವುದೇ ಉಪ್ಪಿಟ್ಟು. ನನ್ನ ಉಪ್ಪಿಟ್ಟಿನ ಮೋಹ ಕಂಡ ಸ್ನೇಹಿತರು, 'ದಿನಾ ಉಪ್ಪಿಟ್ಟು ಹೇಗೆ ತಿಂತೀಯೋ ಮಾರಾಯ' ಎಂದು ಮುಖ ಹಿಂಡಿದ್ದಿದೆ. ಆದರೆ ಪ್ರತಿಬಾರಿ ಉಪ್ಪಿಟ್ಟು ಮಾಡುವಾಗಲೂ ನನಗೆ ನೆನಪಾಗುವವರು ದಿ। ಎಚ್. ನರಸಿಂಹಯ್ಯನವರು. ಎಚ್.ಎನ್. ಅಮೇರಿಕದಲ್ಲಿದ್ದ ಮೂರು ವರ್ಷವೂ ಮೂರು ಹೊತ್ತಿಗೂ ಉಪ್ಪಿಟ್ಟನ್ನೇ ತಿಂದು ಬದುಕಿದ್ದರು ಎಂದರೆ ನಿಮ್ಮಲ್ಲಿ ಅನೇಕರು ನಂಬಲಿಕ್ಕಿಲ್ಲ. ಆದರೆ ಅದು ಸತ್ಯ.

ಇನ್ನು ತೀರಾ ಊಟದ ವಿಷಯದಲ್ಲಿ ನಾನು ಇಕ್ಕಟ್ಟಿಗೆ ಒಳಗಾಗುತ್ತಿದ್ದದ್ದು ನನ್ನ ಸಹೋದ್ಯೋಗಿಗಳೊಂದಿಗೆ ಲಂಚ್ ಅಥವಾ ಡಿನ್ನರ್ ಪಾರ್ಟಿಗಳಿಗೆ ಹೋದಾಗ. ಬಂದ ಹೊಸತರಲ್ಲಿ ನನ್ನನ್ನು ಸ್ವಾಗತಿಸಲು ನಮ್ಮ ಮ್ಯಾನೇಜರ್ ಮೊದಲ ದಿನವೇ ಊಟಕ್ಕೆಂದು ಮೆಕ್ಸಿಕನ್ ರೆಸ್ಟೋರೆಂಟಿಗೆ ಕರೆದುಕೊಂಡು ಹೋದ. ನನಗಿನ್ನೂ ಇಲ್ಲಿಯ ಆಹಾರ ಕ್ರಮದ ಪರಿಚಯವಿರಲಿಲ್ಲ. ಬೆಂಗಳೂರಿನಲ್ಲೂ ಮೆಕ್ಸಿಕನ್, ಚೈನೀಸ್, ಥಾಯ್, ಸಬ್ ವೇಗಳು, ಮ್ಯಾಕ್ಡೊನಾಲ್ಡ್‌ಗಳು ಇವೆಯಾದರೂ ನಾನು ಎಂದಿಗೂ ಸಾರು, ಹುಳಿ, ಪುಳಿಯೋಗರೆ, ಚಿತ್ರಾನ್ನಕ್ಕೇ ಅಂಟಿಕೊಂಡವನಾದ್ದರಿಂದ ಈ ತಿನಿಸುಗಳ ಪರಿಚಯ ಅಷ್ಟೇನೂ ಇರಲಿಲ್ಲ ಬಿಡಿ. ಮೆಕ್ಸಿಕನ್ ರೆಸ್ಟೋರೆಂಟಿನಲ್ಲಿ ಚಿಪೋಟ್ಲೇ ಆರ್ಡರ್

ಮಾಡುವಾಗ ಕನಿಷ್ಠ ಪಕ್ಷ ಹತ್ತು ಬಾರಿ 'ನೋ ಮೀಟ್, ನೋ ಮೀಟ್' ಎಂದು ಹೇಳಿದ್ದೆ. ರೋಸಿಹೋದ ವೇಯ್ಟರ್, 'ಇಟ್ಸ್ ಓಕೆ. ಐ ವಿಲ್ ಎನ್ಶೂರ್ ನೋ ಮೀಟ್' ಎಂದು ಮುಖ ಸಿಂಡರಿಸಿಕೊಂಡಿದ್ದ. ನನ್ನ ಜೊತೆಯಿದ್ದ ಮ್ಯಾನೇಜರ್ ನಗುತ್ತಾ, 'ಆರ್ ಯೂ ಆನ್ ಡಯೆಟ್' ಎನ್ನಬೇಕೆ? 'ಇಲ್ಲ, ನಾವು ಭಾರತೀಯರು, ನಮ್ಮಲ್ಲಿ ಕೆಲವರು ಸಸ್ಯಹಾರಿಗಳು' ಎಂದರೆ 'ಜೀವನ ಪೂರ್ತಿ ಸಸ್ಯಹಾರವನ್ನೇ ತಿನ್ನುವುದಾ?' ಎಂದು ಹುಬ್ಬೇರಿಸಿದ್ದ.

ದಿನಕಳೆಯುತ್ತಾ, ಯಾವುದು ಸಸ್ಯಾಹಾರ, ಯಾವುದರಲ್ಲಿ ಮಾಂಸ ಬಳಸುತ್ತಾರೆ ಎಂಬುದು ಗೊತ್ತಾದ ಮೇಲೆ ಸಹೋದ್ಯೋಗಿಗಳೊಂದಿಗೆ ಊಟಕ್ಕೆ ಹೋಗುವುದು ಮುಜುಗರವಾಗಿ ಉಳಿಯಲಿಲ್ಲ. ಮನೆಯಲ್ಲಂತೂ ನಾನೇ ಬಾಣಸಿಗ. ಅಮ್ಮನ ಅಡುಗೆ ಪುಸ್ತಕ ಓದುತ್ತಾ, ಏನಾದರೂ ತಿಳಿಯದಿದ್ದರೆ ಅಮ್ಮನಿಗೆ ಕರೆಮಾಡುತ್ತಾ ಅಡುಗೆ ಕರಗತವಾಗಿ ಹೋಯಿತು. ಆದರೂ ನನ್ನ ಬೇಜವಾಬ್ದಾರಿತನದಿಂದ ಒಮ್ಮೆ ಅವಘಡವಾಗುವುದಿತ್ತೆನ್ನಿ. ಆಗಿದ್ದಿಷ್ಟೇ, ಅಂದು ಅದೇನು ಗಡಿಬಿಡಿಯಲ್ಲಿದ್ದೆನೋ ಏನೋ, ಕುಕ್ಕರ್ ಇಡುವಾಗ ಪಾತ್ರೆಯ ಬುಡದಲ್ಲಿ ನೀರು ಹಾಕದೇ, ಪಾತ್ರೆ ಇಟ್ಟು, ಮುಚ್ಚಳ ಹಾಕಿ ಬಂದು ಸ್ನೇಹಿತರೊಂದಿಗೆ ಚಾಟಿಸುತ್ತಾ ಕುಳಿತಿದ್ದೆ. ಕೆಲಕ್ಷಣದಲ್ಲೇ ಏನೋ ಲಕ್ಷ್ಮೀ ಪಟಾಕಿ ಹೊಡೆದ ಸದ್ದಾಗಿ ಅಡುಗೆ ಮನೆಯತ್ತ ಹೋಗಿ ನೋಡಿದರೆ, ಕುಕ್ಕರ್‌ನಿಂದ ಬುರುಬುರು ಹೊಗೆ, ಮನೆಯಲ್ಲಿನ ಸ್ಮೋಕ್ ಡಿಟೆಕ್ಟರ್ ಕೊಯ್ಯೋ ಎಂದು ಕಿರುಚಲು ಶುರುವಿಟ್ಟಿತು. ಮರುದಿನ ಇದನ್ನು ಕೇಳಿ ಅಮ್ಮ, 'ನೀನು ಅಡುಗೆ ಮಾಡುವುದೇ ಬೇಡ, ವಾಪಸ್ಸು ಭಾರತಕ್ಕೆ ಬಾ' ಎನ್ನಬೇಕೆ!

ಊಟ ತಿಂಡಿಯ ವಿಚಾರ ಒತ್ತಟ್ಟಿಗಿರಲಿ. ಸಿನ್ಸಿನಾಟಿಯ ಬಗ್ಗೆ ಹೇಳುವಾಗ ಫೌಂಟೈನ್ ಸ್ಕ್ವೇರ್ ಪ್ರಸ್ತಾಪವಾಗದಿದ್ದರೆ ಸಿನ್ಸಿನಾಟಿಯ ಪರಿಚಯ ಪೂರ್ತಿಯಾಗುವುದಿಲ್ಲ. ಇಲ್ಲಿ ಸಂಜೆ ರಂಗೇರುವುದೇ ಫೌಂಟೈನ್ ಸ್ಕ್ವೇರಿನಲ್ಲಿ. ಸುತ್ತಲಿನ ಗಗನ ಚುಂಬಿ ಕಟ್ಟಡ, ಮಧ್ಯೆ ಒಂದಷ್ಟು ಜಾಗ, ಅಲ್ಲಿ ಒಂದು ನೀರಿನ ಕಾರಂಜಿ, ಬಗಲಲ್ಲೇ ಒಂದು ವೇದಿಕೆ, ಮುಂದೆ ನೂರಿನ್ನೂರು ಜನ ಕೂರಬಹುದಾದಷ್ಟು ಸ್ಥಳ. ಬೇಸಿಗೆಯಲ್ಲಿ ಪ್ರತಿ ದಿನವೂ ಒಂದಲ್ಲಾ ಒಂದು ಕಾರ್ಯಕ್ರಮ. ಗುರುವಾರವಾಯಿತೆಂದರೆ ಸಲ್ಸಾ ನೃತ್ಯ. ಚಳಿಗಾಲದಲ್ಲಿ ಐಸ್ ರಿಂಕ್ ಹಾಕುತ್ತಾರಾದ್ದರಿಂದ ಸ್ಕೇಟಿಂಗಿಗೆ ಅವಕಾಶ. ಹೀಗೆ ವರ್ಷಪೂರ್ತಿ ಸದಾ ಜನರಿಂದ ತುಂಬಿರುವ ಸ್ಥಳವೆಂದರೆ ಅದು ಫೌಂಟೈನ್ ಸ್ಕ್ವೇರ್. ಈ ಸ್ಥಳ ಅನೇಕ ಅಚ್ಚರಿಗಳನ್ನು ನನ್ನ ಮುಂದೆ ತೆರೆದಿಟ್ಟಿದೆ. ಇಲ್ಲೊಬ್ಬ ಸ್ಥೂಲಕಾಯದ ವ್ಯಕ್ತಿ ಬೆಳಗ್ಗೆ 10ರಿಂದ ಸಂಜೆ 6ರ ತನಕ ನಿಂತಿರುತ್ತಾನೆ. ಆತ ಪತ್ರಿಕೆ ಮಾರುವವನು. ಅಷ್ಟೇ ಆಗಿದ್ದರೆ ನಿಮಗೆ ಹೇಳಬೇಕಾದ ಅಗತ್ಯವೇ ಇರಲಿಲ್ಲ. ಆದರೆ ಈತನ ವಿಶೇಷವೆಂದರೆ ಕನಿಷ್ಠ ಈತನಿಗೆ ಏಳೆಂಟು ಭಾಷೆ ಬರುತ್ತದಂತೆ. ಇನ್ನು ಸುಮಾರು 15 ಭಾಷೆಗಳ ಅನೇಕ ಪದಗಳು ಈತನಿಗೆ ಪರಿಚಯವಿದೆಯಂತೆ! ಮೊದಲ ಬಾರಿಗೆ ಈತನನ್ನು ನೋಡಿದಾಗ

ಈತನ ವೇಷಭೂಷಣವೇ ನನ್ನನ್ನು ಸೆಳೆಯಿತಾದರೂ, ಹತ್ತಿರ ಹೋಗುತ್ತಿದ್ದಂತೆಯೇ ಎರಡೂ ಕೈ ಜೋಡಿಸಿ ನಮಸ್ತೆ ಎಂದು ಶಿರಬಾಗಿಬಿಟ್ಟ. ಇದು ಕೇವಲ ಭಾರತೀಯರಿಗಷ್ಟೇ ಅಲ್ಲ, ಜಪಾನ್, ಕೊರಿಯಾ, ಜರ್ಮನಿ, ಫ್ರಾನ್ಸ್‌ನ ಯಾರೇ ಬಂದರೂ ಅವರ ಮುಖ ಚರ್ಯೆಯಲ್ಲೇ ಅವರು ಯಾವ ದೇಶದವರೆಂದು ಕಂಡು ಹಿಡಿದು ಅವರ ಭಾಷೆಯಲ್ಲೇ ನಮಸ್ಕಾರ ಹೇಳುತ್ತಾನೆ ಈ ಭೂಪ. ಈ ಗುಣದಿಂದಲೇ ದಾರಿಹೋಕರು ಇವನ ಬಳಿ ಪೇಪರ್ ಕೊಳ್ಳುವುದೂ ಉಂಟು.

ಇನ್ನು ನನ್ನ ಅನೇಕ ಸಂಜೆಗಳ ಬೇಸರ ಕಳೆದಿರುವುದೂ ಇದೇ ಫೌಂಟೈನ್ ಸ್ಕ್ವೇರಿನಲ್ಲೇ. ಆಫೀಸು ಮುಗಿಸಿ ಮನೆಗೆ ಬಂದವನು ಟೀ ಮಾಡಿ ಕುಡಿದು ಹೊರನಡೆದರೆ ಎಂದಿಗೂ ಫೌಂಟೈನ್ ಸ್ಕ್ವೇರಿನತ್ತ ಸುಳಿಯದೇ ವಾಪಸಾಗಿಲ್ಲ. ಒಮ್ಮೆ ಹಾಗೇ ಆಯಿತು. ಫೌಂಟೈನ್ ಸ್ಕ್ವೇರಿನ ಅಂಗಳದಲ್ಲಿ ಗ್ರೇಟರ್ಸ್ ಐಸ್ ಕ್ರೀಂ ತಿನ್ನುತ್ತ ಕುಳಿತಾಗ, ಸನಿಹ ಬಂದ ವ್ಯಕ್ತಿಯೊಬ್ಬ ನನ್ನೆದುರಿನ ಸೀಟಿನಲ್ಲಿ ಕೂರಬಹುದೇ ಎಂದು ಕೇಳಿ ಕೂತ, ಕೈನಲ್ಲಿ ನಾಲ್ಕಾರು ಪುಸ್ತಕಗಳಿದ್ದವು, ಕೂದಲೂ ಒಪ್ಪವಾಗಿರಲಿಲ್ಲ, ಹೆಚ್ಚು ಹೊತ್ತು ಕೂರುವುದು ತರವಲ್ಲವೆಂದು, ಜಾಗ ಖಾಲಿಮಾಡಲು ಮನದಲ್ಲೇ ಕಾರಣ ಹುಡುಕತೊಡಗಿದೆ. ಎದುರಿಗಿದ್ದವನು ಭಾರತೀಯ ಅಧ್ಯಾತ್ಮದ ಬಗ್ಗೆ ಮಾತು ತೆರೆದ. ಆಗ ಪುಟಪರ್ತಿ ಸಾಯಿಬಾಬಾ ತೀರಿಕೊಂಡಿದ್ದರು. ಆ ವಿಷಯ ಪ್ರಸ್ತಾಪ ಮಾಡಿದ. 'ಭಾರತದ ಸಂತರು ಹೀಗೆ ಕಣ್ಕಟ್ಟುಗಳನ್ನು ಮಾಡಿ, ಜನರನ್ನು ಸೆಳೆಯಬೇಕೇ? ಹಿಂದೂ ಧರ್ಮದ ತಿರುಳಿನಲ್ಲೇ ಜನರನ್ನು ತನ್ನತ್ತ ಆಕರ್ಷಿಸಬಲ್ಲ ಶಕ್ತಿಯಿದೆಯಲ್ಲವೇ?' ಎಂದು ಪ್ರಶ್ನಿಸಿದ. 'ಜಗತ್ತಿಗೆ ಭಾರತದ ದೊಡ್ಡ ಕೊಡುಗೆಯೆಂದರೆ ಪತಂಜಲಿಯವರ ಯೋಗ' ಎಂದ. ಬಾಬಾ ರಾಮದೇವ್, ರವಿಶಂಕರರ ಪ್ರಸ್ತಾಪ ಮಾಡಿದ. ನನಗೋ ಆಶ್ಚರ್ಯ. ಕೊನೆಗೆ, 'ತಪ್ಪು ತಿಳಿಯಬೇಡಿ, ನೀವು ಭಾರತೀಯರೆಂದು ತಿಳಿಯಿತು. ಸಾಯಿಬಾಬಾ ತೀರಿಕೊಂಡ ಸುದ್ದಿ ಓದಿದ್ದೆ. ಆದ್ದರಿಂದ ಮಾತಿಗಿಳಿದೆ. ನಿಮಗೆ ಒಳಿತಾಗಲಿ' ಎಂದು ಕೈಕುಲುಕಿ ನಡೆದ. ನಾನೇ ಈತನ ಬಗ್ಗೆ ತಪ್ಪುತಿಳಿದೆನಲ್ಲಾ ಎಂದು ಬೇಸರಿಸಿ ಮನೆಗೆ ಬಂದಿದ್ದೆ.

ಹೀಗೆ ಇಲ್ಲಿನ ಅನೇಕರು ಭಾರತದ ಬಗ್ಗೆ, ಭಾರತದ ವಿದ್ಯಮಾನಗಳ ಬಗ್ಗೆ ದೃಷ್ಟಿಹರಿಸುವ ಕುತೂಹಲಿಗಳು ಎಂಬುದು ಗೊತ್ತಾದದ್ದು ಮತ್ತೊಂದು ದಿನ. ಅಂದು ಇಂಡಿಯನ್ ಸ್ಟೋರಿಗೆ ಹೋಗಲು ಫೌಂಟೈನ್ ಸ್ಕ್ವೇರಿನ ಬಸ್ ಸ್ಟ್ಯಾಂಡಿನ ಬಳಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದೆ. ಸಾಮಾನ್ಯವಾಗಿ ಹೀಗೆ ಇಲ್ಲಿ ಬಸ್ಸಿಗೆ ಕಾಯುತ್ತಾ ನಿಂತಾಗ ಅನೇಕರು ಹಣಕ್ಕಾಗಿ ಕೈಯೊಡ್ಡುತ್ತಾರೆ. ಎರಡು ಕ್ವಾರ್ಟರ್ ಬಸ್ಸಿಗೆ ಕಮ್ಮಿಯಿದೆ, ಇದ್ದರೆ ಕೊಡುತ್ತೀರಾ, ಒಂದು ಡಾಲರ್ ಇದ್ದರೆ ಕೊಡಿ, ದೇವರು ಒಳ್ಳೆಯದು ಮಾಡುತ್ತಾನೆ ಎಂದು ಎದುರು ನಿಲ್ಲುತ್ತಾರೆ. ಅಂದು ಕೂಡ ಒಬ್ಬ ವ್ಯಕ್ತಿ ಪಕ್ಕದಲ್ಲಿ ಬಂದು ನಿಂತ, ಮುಖ ನೋಡಿ ನಕ್ಕ, ನಂತರ ಮಾತಿಗಿಳಿದ. ಆತ ಕೂಡ ನಾನು ಭಾರತೀಯ ಎಂದು ತಿಳಿದೇ ನನ್ನೊಂದಿಗೆ ಮಾತಿಗೆ ನಿಂತಿದ್ದ. ಆತ ಪ್ರಸ್ತಾಪಿಸಿದ ವಿಷಯಗಳು ಅಚ್ಚರಿ ಮೂಡಿಸಿದ್ದು

ನಿಜ. ಆಗ ದೆಹಲಿಯ ಜಂತರ್ ಮಂತರ್‌ನಲ್ಲಿ ಅಣ್ಣಾ ಚಳವಳಿ ನಡೆಯುತ್ತಿತ್ತು. ಆ ಬಗ್ಗೆ ಆತ ಪ್ರಸ್ತಾಪಿಸಿ, ಕೋಟ್ಯಂತರ ರೂ. ಹಗರಣಗಳು ಭಾರತದಲ್ಲಿ ನಡೆದಿರುವ ಬಗ್ಗೆಯೂ ಖೇದ ವ್ಯಕ್ತಪಡಿಸಿದ. ಆಡ್ವಾನಿಯವರು ಘೋಷಿಸಿದ್ದ ರಥಯಾತ್ರೆ ಬಗ್ಗೆ ಕೇಳಿ, 'ಇದು ಎಷ್ಟನೆಯದು?' ಎಂದು ನಕ್ಕ. ದೆಹಲಿ ಬಾಂಬ್ ಸ್ಫೋಟದ ಬಗ್ಗೆ ಹೇಳುತ್ತಾ 'ಭಾರತದ ವಿದೇಶಾಂಗ ನೀತಿಯೇ ಪೊಳ್ಳಾಗಿದೆಯಲ್ಲವೇ' ಎಂದು ಇತರ ದೇಶಗಳ ವಿದೇಶಾಂಗ ನೀತಿಯ ಬಗ್ಗೆ ಹೇಳಿದ. ಇಸ್ರೇಲ್ ಪ್ರಸ್ತಾಪ ಮಾಡಿದ. ಆತ ಇಷ್ಟೆಲ್ಲಾ ಮಾತನಾಡುತ್ತಿದ್ದರೆ ನಾನು ಮೂಕನಾಗಿದ್ದೆ. ಕೊನೆಗೂ ನನ್ನ ಅಲ್ಪತನ ಪ್ರದರ್ಶಿಸಿ, 'ನೀವು ಏನು ಓದಿದ್ದೀರಾ? ಏನು ಕೆಲಸ ಮಾಡುತ್ತೀರಾ? ನಾನು ಇಲ್ಲಿ ಇಂಜಿನಿಯರ್' ಎಂದು ಪರಿಚಯಿಸಿಕೊಂಡೆ. ಆತ ನಕ್ಕು, 'ನನ್ನದು ಹೇಳಿಕೊಳ್ಳುವಂತಹ ವಿದ್ಯಾರ್ಹತೆಯೂ ಅಲ್ಲ, ನೌಕರಿಯೂ ಅಲ್ಲ. ಇಲ್ಲೇ ಲಡ್ಲೋ ಅವಿನ್ಯೂನಲ್ಲಿ ವ್ಯಾಪಾರದಿಂದ ನನ್ನ ಜೀವನ ಸಾಗುತ್ತದೆ. ಭಾರತದ ಬಗ್ಗೆ ಮೊದಲಿನಿಂದಲೂ ನನಗೆ ಕುತೂಹಲವಿದೆ. ಸಾಧ್ಯವಾದರೆ ಒಮ್ಮೆ ಭಾರತಕ್ಕೆ ಹೋಗಿಬರುವಾಸೆ' ಎಂದ, ಅಷ್ಟರಲ್ಲಿ ಬಸ್ಸು ಬಂದಿತ್ತು. ಬಸ್ಸಿನಲ್ಲಿ ಕೂತರೂ ಆತನ ಮಾತುಗಳು ನನ್ನ ಕಿವಿಯಲ್ಲಿ ಮೊಳಗುತ್ತಿದ್ದವು.

ಇನ್ನು ಅಮೇರಿಕದ ಇಂಟರ್ಸ್ಟೇಟ್ ಹೈವೇಗಳು, ಅಗಲವಾದ ರಸ್ತೆಗಳು, ರಸ್ತೆ ದಾಟಲೂ ಸಿಗ್ನಲ್ಲಿಗೆ ಕಾಯುವ ಇಲ್ಲಿನವರ ಶಿಸ್ತು, ಕೆಲಸದಷ್ಟೇ ಮೋಜು ಮುಖ್ಯವೆನ್ನುವ ಇವರ ಜೀವನ ಪ್ರೀತಿ ಎಲ್ಲವೂ ಮನಸ್ಸೆಳೆದಿರುವುದು ದಿಟ. ಅಂದಹಾಗೆ ಪುಸ್ತಕ ಪ್ರಿಯನಾದ ನನಗೆ ತೀರಾ ಇಷ್ಟವಾಗಿದ್ದೇ ಇಲ್ಲಿನ ಗ್ರಂಥಾಲಯ. ಮನೆಯಿಂದ ಇಪ್ಪತ್ತು ಹೆಜ್ಜೆ ಕಿತ್ತಿಟ್ಟರೆ ವಿಶಾಲ ಗ್ರಂಥಾಲಯ ಎಡತಾಕುತ್ತದೆ. ಮೊದಲಿಗೆ ಹೀಗೂ ಗ್ರಂಥಾಲಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬಹುದಾ ಎಂಬ ಅಚ್ಚರಿಯಾಗಿತ್ತು. ನಮ್ಮೂರಿನ ಹಳೆಯ ಸಾರ್ವಜನಿಕ ಗ್ರಂಥಾಲಯ ನೆನಪಿಗೆ ಬಂದಿತ್ತು. ಅಲ್ಲಿನ ಗ್ರಂಥಪಾಲಕ ರಾಮಚಂದ್ರಪ್ಪ ಎಂಬುವವರು ಬೆಳಗ್ಗೆ ಬಂದು ಬಾಗಿಲು ತೆರೆದರೆ ಮಧ್ಯಾಹ್ನದವರೆಗೂ ತೂಕಡಿಸಿ, ಸಂಜೆ ಕೊಂಚ ಅವರಿವರೊಂದಿಗೆ ಹರಟೆ ಹೊಡೆದು, ಕಾಫಿಯ ಜೊತೆ ಕಡಲೇಕಾಯಿ ತರಿಸಿಕೊಂಡು ತಿಂದು ಹೊರಟುಬಿಡುತ್ತಿದ್ದರು. ರಾಶಿ ರಾಶಿ ಪುಸ್ತಕಗಳೇನೋ ಸರ್ಕಾರದಿಂದ ಬರುತ್ತಿತ್ತು. ಆದರೆ ಅವನ್ನು ನೀಟಾಗಿ ಜೋಡಿಸುವ, ಬೇಕಾದವರಿಗೆ ಬೇಕಾದ ಪುಸ್ತಕ ಹುಡುಕಲು ಅನುವಾಗುವಂತೆ ಸಪಾಟಾಗಿ ವ್ಯವಸ್ಥೆ ಮಾಡುವ ವ್ಯವಧಾನವಾಗಲಿ, ಶ್ರದ್ಧೆಯಾಗಲಿ, ಆಸಕ್ತಿಯಾಗಲಿ ಗ್ರಂಥಪಾಲಕರಿಗಿರುತ್ತಿರಲಿಲ್ಲ. ಇಲ್ಲಿ ಅಚ್ಚರಿಯೆನಿಸಿದ್ದೇ ಅದು. ಎಲ್ಲವೂ ಅಚ್ಚುಕಟ್ಟು, ನಗುಮೊಗದಿಂದ ಸ್ವಾಗತಿಸುವ, ನಮ್ಮ ಸಹಾಯಕ್ಕೆ ಬರುವ ಸಿಬ್ಬಂದಿಗಳು, ಇಂಥ ಲೇಖಕರ ಇಂಥ ಪುಸ್ತಕ ಬೇಕೆಂದರೆ ಕ್ಷಣಗಳಲ್ಲಿ ಅದನ್ನು ಮುಂದೆ ತಂದಿರಿಸುವ ವ್ಯವಸ್ಥೆ. ಅದ್ಭುತ!

ಇತ್ತೀಚೆಗೆ ಇದೇ ಗ್ರಂಥಾಲಯದ ಸಿನಿಮಾ ವಿಭಾಗದಲ್ಲಿ ತಡಕಾಡುತ್ತಿದ್ದೆ. ಅನೇಕ

ಭಾರತೀಯ ಸಿನಿಮಾಗಳ ಸಿ.ಡಿ.ಗಳೇನೋ ಕಣ್ಣಿಗೆ ಬಿದ್ದವು. ಹೆಚ್ಚಾಗಿ ಎಲ್ಲವೂ ಹಿಂದಿಯದ್ದಾದರೆ, ತೆಲುಗು, ತಮಿಳು, ಮಲೆಯಾಳಂ ಸಿನಿಮಾಗಳು ಇರದಿರಲಿಲ್ಲ. ಆದರೆ ನನ್ನ ಕಣ್ಣುಗಳು ಕನ್ನಡ ಸಿನಿಮಾದ ಸಿ.ಡಿ.ಗಳಿಗಾಗಿಯೇ ಅರಸುತ್ತಿದ್ದವು. ಕೊನೆಗೂ ಶೇಷಾದ್ರಿಯವರ 'ಮುನ್ನುಡಿ' ಕಣ್ಣಿಗೆ ಬಿದ್ದದ್ದೇ ಕುಣಿದುಬಿಡುವಷ್ಟು ಸಂತಸ. ಹೀಗೆ ಹೊರದೇಶದಲ್ಲಿದ್ದರೂ ನಮ್ಮ ಭಾಷೆಯ ಸಿನಿಮಾ, ಪುಸ್ತಕ, ಜನ ಕಂಡೊಡನೆ ಸಂತಸವಾಗಿಬಿಡುತ್ತದೆ ಎನ್ನುವುದಕ್ಕೆ ಹೇಳಿದೆನಷ್ಟೇ. ಅಂದಹಾಗೆ ಇದೆಲ್ಲ ಸಂತಸ, ಸಂಕಟಗಳ ಜೊತೆ ಇಲ್ಲಿನ ಕೆಲವು ಆಚರಣೆಗಳೂ ಕುತೂಹಲ ಹುಟ್ಟಿಸಿದ್ದಿದೆ. ಅದರಲ್ಲೂ ಹಾಲೋವಿನ್ ಬಗ್ಗೆ ತಿಳಿದಾಗ ನಮ್ಮ ಪಿತೃಪಕ್ಷ ಮತ್ತು ಮಹಾಲಯ ಅಮವಾಸ್ಯೆಯ ಆಚರಣೆ ನೆನಪಿಗೆ ಬಂದಿತ್ತು. ಕಣ್ಣು ಮೂಗು ಕೊರೆದ ಸಿಹಿಗುಂಬಳಗಳನ್ನು ನೋಡಿದಾಗ, ಇಲ್ಲೂ ದೆವ್ವ ಭೂತಗಳ, ಪ್ರೇತಾತ್ಮಗಳ ನಂಬಿಕೆ ಇದೆಯಾ ಎಂಬ ಅಚ್ಚರಿಯಾದದ್ದು ಸತ್ಯ. ಹಾಲೋವಿನ್ ನನಗೆ ಲೇಖನದ ವಸ್ತುವಾಗಿ ಕಂಡದ್ದರಿಂದಲೇ 'ಚಳಿಗಾಲದ ಹೊಸ್ತಿಲಲ್ಲಿ ಗುಮ್ಮ ಬಂತು ಗುಮ್ಮ' ಎಂಬ ಲೇಖನ ಬರೆಯಲು ಸಾಧ್ಯವಾಯಿತು.

ಹೀಗೆ ಪರದೇಶದ ಜೀವನ ಪ್ರಾಣ ಸಂಕಟ ಎಂದುಕೊಂಡು ಬಂದವನಿಗೆ ಸಿನ್ಸಿನಾಟಿ ಹಲವು ಅಚ್ಚರಿಗಳನ್ನು ನನ್ನ ಮುಂದೆ ಬಿಚ್ಚಿಟ್ಟಿದೆ. ಲಾಸ್ ವೇಗಸ್ಸಿನ ಜೂಜು ಅಡ್ಡೆಗಳು, ನಯಾಗರಾದ ಭೋರ್ಗರೆವ ಜಲಪಾತ, ಚಿಕಾಗೋ, ಲಾಸ್ ಏಂಜಲಿಸ್, ವಾಷಿಂಗ್ಟನ್, ನ್ಯೂಯಾರ್ಕ್ ನಗರ ಪ್ರದಕ್ಷಿಣೆಗಳು ಮನದಲ್ಲಿದ್ದ ಅಮೇರಿಕ ಎಂಬ ಕುತೂಹಲವನ್ನು ಸಾಕಷ್ಟು ತಣಿಸಿವೆ. ವರುಷಗಳು ಕಳೆದಂತೆ ಇಲ್ಲಿನ ಜನಕ್ಕೆ, ಭಾಷೆಗೆ, ಊಟ, ಉಡುಗೆಗಳಿಗೆ ಹೊಂದಿಕೊಂಡು ಬದುಕು ಸರಾಗವಾಗಿ ಸಾಗಿದರೂ, ಮನಸ್ಸು ಭಾರತದೆಡೆಗೆ ತುಡಿಯುತ್ತಲೇ ಇರುತ್ತದೆ. ಅದರಲ್ಲೂ, ಕನ್ನಡದವರು ಎದುರಾದಾಗ, ಮಾತಿಗೆ ಸಿಕ್ಕಾಗ, ಕನ್ನಡದ ಪುಸ್ತಕವೋ, ಸಿನಿಮಾವೋ ಕಣ್ಣಿಗೆ ಬಿದ್ದಾಗ, ಹೃದಯ ಆರ್ದ್ರವಾಗುತ್ತದೆ. ಸಂಜೆಯಾದರೆ ಕನ್ನಡದ ಐದಾರು ಪತ್ರಿಕೆಗಳನ್ನು ಕಂಪ್ಯೂಟರಿನಲ್ಲೇ ತಿರುವಿಹಾಕುವುದು ದಿನಚರಿಯ ಭಾಗವಾಗಿ ಹೋಗಿದೆ.

ಕಳೆದ ಮದರ್ಸ್ ಡೇಯಂದು ಹೀಗೆಯೇ, ಮನೆಯ ಬಗಲಿಗೆ ಹರಿಯುವ ಒಹಾಯೋ ನದಿಯ ದಂಡೆಯಲ್ಲಿ ಕುಳಿತಿದ್ದೆ, ನೆರೆಮನೆಯ ಸಾರಾ ಜೋಸೆಫ್ 'ಭಾರತದಲ್ಲಿ ಹೇಗೆ ಅಮ್ಮಂದಿರ ದಿನ ಆಚರಿಸುತ್ತೀರಿ?' ಎಂದು ಮಾತಿಗೆಳೆದರು, 'ನಮಗೆ ಪ್ರತಿದಿನವೂ ಅಮ್ಮಂದಿರ ದಿನವೇ' ಎಂದೆ. ನೆನಪು ಒಮ್ಮೆಲೇ ಬಾಲ್ಯಕ್ಕೆ ಜಿಗಿಯಿತು. ಜ್ಞಾಪಕ ಚಿತ್ರಶಾಲೆಯಲ್ಲಿ ಅಮ್ಮನ ಪುಟ ಸರಿಯುತ್ತಾ ಸಾಗಿತ್ತು. ಶಾಲೆಗೆ ಕೈ ಹಿಡಿದು ಕರೆದೊಯ್ಯುತ್ತಿದ್ದದ್ದು, ರಸ್ತೆ ಹೇಗೆ ದಾಟಬೇಕು ಎಂದು ಹೇಳಿಕೊಟ್ಟದ್ದು, ಸುಭಾಷ್, ಭಗತ್ ಸಿಂಗರ ವೇಷಹಾಕಿ ನಲಿದದ್ದು, ಗೆಳೆಯರ ಗುಂಪಿನಲ್ಲಿ ಜಗಳವಾಡಿ ಬಂದಾಗ 'ಇವನನ್ನೂ ಆಟಕ್ಕೆ ಸೇರಿಸಿಕೊಳ್ರೋ' ಎಂದು ಬಿಟ್ಟು ಬಂದದ್ದು, ಆಟದಲ್ಲಿ ಬಿದ್ದು

ಅಳುತ್ತಾ ಬಂದಾಗ ಎದೆಗೊತ್ತಿಕೊಂಡು ಮುದ್ದಿಸಿದ್ದು, ಜ್ವರ ಬಂದಾಗ ಹಣೆಗೆ ಒದ್ದೆಬಟ್ಟೆಯಿಟ್ಟು ರಾತ್ರಿಯಿಡಿ ಕಾದದ್ದು... ಎಲ್ಲಕ್ಕೂ ಸಾರಾ ಕಿವಿಯಾದರು. 'ಸ್ಯಾಂಡಿ ಬಂತೆಂದಾಗ, ಸಿನ್ಸಿನಾಟಿಯಲ್ಲಿ ಭೂಮಿ ನಡುಗಿದ ಸುದ್ದಿ ಭಾರತದಲ್ಲಿ ಬಿತ್ತರವಾದಾಗ, ಅಮ್ಮ ಕರೆ ಮಾಡಿ, 'ಹೇಗಿದ್ದೀಯೋ, ಬೇಗ ಬಂದುಬಿಡೋ' ಎಂದು ಬಿಕ್ಕಿದ್ದಳು' ಎಂದೆ. ನನ್ನ ಕಣ್ಣಂಚಲ್ಲಿ ನೀರು ಮೂಡಿದ್ದು ಸಾರಾ ಗಮನಕ್ಕೆ ಬಂತು. 'ಯೂ ಮಿಸ್ ಯುವರ್ ಮದರ್ ಸೊ ಮಚ್, ಗೋ ಬ್ಯಾಕ್ ಟು ಇಂಡಿಯಾ' ಎಂದರು. 'ಯೆಸ್, ಅಫ್‌ಕೋರ್ಸ್' ಎಂದೆ.

ಹೀಗೆ ವೃತ್ತಿಯ ಅನಿವಾರ್ಯತೆಯಿಂದಲೋ, ಹೊಟ್ಟೆಪಾಡಿಗೋ ಹುಟ್ಟಿದೂರಿನಿಂದ ದೂರ ಬಂದು ಪ್ರಪಂಚದ ಹಿರಿಯಣ್ಣನ ಅಂಗಳದಲ್ಲಿದ್ದರೂ, ಭೌತಿಕವಾಗಿ ದೇಹ ಮಾತ್ರ ಇಲ್ಲಿರುತ್ತದೆ, ಮನಸ್ಸು ಭಾರತದಲ್ಲಿರುವ ನಮ್ಮವರ ಸುತ್ತಲೇ ಗಿರಕಿ ಹಾಕುತ್ತದೆ. 'ಅಲ್ಲಿದೆ ನಮ್ಮನೆ, ಇಲ್ಲಿ ಬಂದೆ ಸುಮ್ಮನೆ...' ಮನದ ವೀಣೆ ಶ್ರುತಿಹಿಡಿದು ಮಿಡಿಯುತ್ತದೆ.



ನಾವು ಅಮೆರಿಕಕ್ಕೆ ಬಂದ ದಾರಿ

– ತ. ನಂ. ರಾಜಶೇಖರ

ನನ್ನ ಮೊದಲ ವಿದೇಶ ಪ್ರಯಾಣದ ಅವಕಾಶ ದೊರೆತದ್ದು 1981ರ ಫೆಬ್ರವರಿ ತಿಂಗಳಿನಲ್ಲಿ. ಆಗ ನನಗೆ 39 ವರ್ಷ ವಯಸ್ಸು. ಮದುವೆಯಾಗಿ ಮೂರು ಮಕ್ಕಳಿದ್ದರು. ದಕ್ಷಿಣ ಅಮೆರಿಕಾದ ಸುರಿನಾಮ್ ದೇಶದ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ ಹುದ್ದೆಗೆ ಆಹ್ವಾನ ಬಂದಿದ್ದು, ನನಗೂ ನನ್ನ ಕುಟುಂಬದವರಿಗೂ ಪ್ರಯಾಣದ ವ್ಯವಸ್ಥೆ ಮಾಡಲು ಒಪ್ಪಿದ್ದರು. ಸುರಿನಾಮ್ ದೇಶದ ರಾಜಧಾನಿ ಪರಮಾರಿಬೊ ನಗರದಲ್ಲಿ ವಿಶ್ವವಿದ್ಯಾಲಯದ ಕೇಂದ್ರ. ಮೊದಲಿಗೆ ನಾನೊಬ್ಬನೇ ಹೋಗಿ ಅಲ್ಲಿನ ಪರಿಸ್ಥಿತಿ, ಅನುಕೂಲಗಳನ್ನು ಪರಿಶೀಲಿಸಿ, ನಂತರ ನನ್ನ ಕುಟುಂಬದವರನ್ನು ಕರೆಸಿಕೊಳ್ಳುವ ಬಗ್ಗೆ ಯೋಚಿಸುವ ನಿರ್ಧಾರ ಮಾಡಿ, ಪ್ರಯಾಣದ ಸಿದ್ಧತೆಗೆ ತೊಡಗಿದೆ. ಆಗ ನಾನು ನೌಕರಿಯಲ್ಲಿದ್ದ ಬೆಂಗಳೂರಿನ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಕಂಪನಿಯ ಕೆಲಸಕ್ಕೆ ರಾಜಿನಾಮೆ ಸಲ್ಲಿಸಿ, ನನ್ನ ವಿಮಾನ ಪ್ರಯಾಣದ ಅವಶ್ಯಕತೆಗಳ ಬಗ್ಗೆ ಗಮನ ಹರಿಸಿದೆ.

ನನ್ನ ಪ್ರಯಾಣ ಮಾರ್ಗ ಬೆಂಗಳೂರು– ದೆಹಲಿ– ಆಮ್ಸ್ಟರ್ಡಾಮ್– ಪರಮಾರಿಬೊ. ಆಮ್ಸ್ಟರ್ಡಾಮ್‌ನಲ್ಲಿ ಒಂದು ದಿವಸ ಕಳೆಯಬೇಕಾಗಿದ್ದುದರಿಂದ, ಟ್ರಾವೆಲ್ ಏಜೆಂಟ್ ಸಹಾಯದಿಂದ ಹಾಲೆಂಡ್ ದೇಶದ ವೀಸಾ ಪಡೆದುಕೊಳ್ಳಬೇಕಾಯಿತು. ಮತ್ತೆ ಪ್ರಯಾಣದ ಆಕಸ್ಮಿಕ ಖರ್ಚಿಗೆಂದು 200 ಡಾಲರ್ ವಿದೇಶಿ ವಿನಿಮಯದ ಹಣವನ್ನು ರಿಸರ್ವ್ ಬ್ಯಾಂಕ್ ಪರವಾನಗಿ ಪಡೆದು ಕೊಂಡದ್ದಾಯಿತು. ಮುಂದಿನ ಒಂದೆರಡು ವಾರಗಳು ನನಗೆ ಬೇಕಾದ ವಸ್ತುಗಳ ಸಂಗ್ರಹಣೆ, ಬಂಧು ಮಿತ್ರರ ಬೀಳ್ಕೊಡುಗೆ ಸಮಾರಂಭ ಮುಂತಾದ ಕಾರ್ಯಕ್ರಮಗಳಲ್ಲಿ ಕಳೆದವು. ನಾನು ಹೊರಡುವ ದಿನ ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ನನ್ನ ಬಂಧು-ಮಿತ್ರರ ಒಂದು ದೊಡ್ಡ ಗುಂಪೇ ಜಮಾಯಿಸಿತ್ತು. ಎಲ್ಲರಿಗೂ ವಿದಾಯ ಹೇಳಿ, ಹೆಂಡತಿ ಮಕ್ಕಳನ್ನು ಬಿಟ್ಟು ನಾನೊಬ್ಬನೇ ವಿಮಾನ ಏರುವ ವೇಳೆಗೆ ಮನಸ್ಸು ತುಂಬಾ ಭಾರವಾಗಿ, ಒತ್ತಿ ಬರುತ್ತಿದ್ದ ದುಃಖವನ್ನು ಪ್ರಯಾಸದಿಂದ ತಡೆದು ವಿಮಾನ ಹತ್ತಿದ್ದಾಯಿತು.

ದೆಹಲಿಯಲ್ಲಿ ಒಂದು ದಿನ ಇದ್ದು ಮಾರನೆ ದಿನ ಕೆ.ಎಲ್.ಎಂ. ವಿಮಾನದಲ್ಲಿ ಆಮ್ಸ್ಟರ್ಡಾಮ್‌ಗೆ ಪ್ರಯಾಣ. ದೆಹಲಿ ಬಿಟ್ಟು ಸುಮಾರು ಒಂದು ಗಂಟೆ ಸಾಗುವಷ್ಟರಲ್ಲಿ ವಿಮಾನದಲ್ಲಿ ಏನೋ ತೊಂದರೆ ಕಾಣಿಸಿಕೊಂಡು, ಬೆಳಗಿನ ಜಾವ ಸುಮಾರು 5 ಗಂಟೆ

ಹೊತ್ತಿಗೆ ಕರಾಚಿ ವಿಮಾನ ನಿಲ್ದಾಣದಲ್ಲಿ ನಮ್ಮನ್ನೆಲ್ಲ ವಿಮಾನದಿಂದ ಇಳಿಸಿ, ಅಲ್ಲೇ ಹತ್ತಿರದ ಹೋಟೆಲೊಂದಕ್ಕೆ ಕೊಂಡೊಯ್ದು ನಮಗೆಲ್ಲ ಬೆಳಗಿನ ಉಪಾಹಾರದ ತಾತ್ಕಾಲಿಕ ವ್ಯವಸ್ಥೆ ಮಾಡಿದರು. ಕೆಲವು ಗಂಟೆಗಳು ಈ ಹೋಟೆಲಲ್ಲಿ ಕಳೆದ ನಂತರ ನಮ್ಮ ಮುಂದಿನ ಪ್ರಯಾಣಕ್ಕೆ ವಿಮಾನ ಸಿದ್ಧವಾಗಿದೆಯೆಂದು ತಿಳಿಸಿ, ವಿಮಾನ ನಿಲ್ದಾಣಕ್ಕೆ ಕರೆದೊಯ್ದರು. ಕರಾಚಿಯಿಂದ ಆಮ್ಸ್ಟರ್ಡಾಮ್‌ವರೆಗೆ ಮತ್ತೇನೂ ಅಡಚಣೆಯಿಲ್ಲದೆ ಪ್ರಯಾಣ ಸಾಗಿತು. ಆಮ್ಸ್ಟರ್ಡಾಮ್‌ನಲ್ಲಿ ಒಂದು ದಿನ ಇರಬೇಕಾಗಿದ್ದು, ವಿಮಾನ ನಿಲ್ದಾಣದ ಬಳಿಯ ಒಂದು ಹೋಟೆಲಿನಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದುದಲ್ಲದೆ, ಮಾರನೆಯ ದಿನ ಪಟ್ಟಣದ ಕೆಲವು ಪ್ರವಾಸಿ ತಾಣಗಳನ್ನು ನೋಡುವ ಅವಕಾಶವನ್ನೂ ಕಲ್ಪಿಸಿದ್ದರು.

ಆಮ್ಸ್ಟರ್ಡಾಮ್ ಒಂದು ಸುಂದರವಾದ ನಗರ; ಊರಿನ ಸುತ್ತಲೂ ರಸ್ತೆಗಳ ಜೊತೆಗೆ ನೀರಿನ ಕಾಲುವೆಗಳು. ಎಲ್ಲಿ ನೋಡಿದರೂ ಅಚ್ಚುಕಟ್ಟು, ರಸ್ತೆಗಳ ನಾಜೂಕು, ವಾಹನಗಳ ಶಿಸ್ತು ಮತ್ತು ಸದ್ದಿಲ್ಲದ ಚಾಲನೆ, ಜನರ ಸ್ನೇಹಪರ ಮುಗುಳ್ನಗೆ ಇವುಗಳನ್ನೆಲ್ಲಾ ಕಂಡು, ನಾನೆಲ್ಲೋ ಭ್ರಮಾಲೋಕದಲ್ಲಿ ಸಂಚರಿಸುತ್ತಿರಬಹುದೆಂಬ ಅನುಭವವಾಯಿತು. ಹೀಗೆ ಹಗಲೆಲ್ಲಾ ನಗರದ ಕೆಲವು ಪ್ರಮುಖ ತಾಣಗಳಲ್ಲಿ ಸುತ್ತಾಡಿ, ಸಂಜೆ ಹೋಟೆಲ್ಲಿಗೆ ಹಿಂತಿರುಗಿ ರಾತ್ರಿ ಮುಂದಿನ ಪ್ರಯಾಣಕ್ಕೆ ವಿಮಾನ ನಿಲ್ದಾಣಕ್ಕೆ ಹೊರಟಿದ್ದಾಯಿತು.

ಆಮ್ಸ್ಟರ್ಡಾಮ್‌ನಿಂದ ಪರಮಾರಿಬೊಗೆ ನೇರವಾಗಿ ಹೋಗಬೇಕಾಗಿದ್ದ ವಿಮಾನವನ್ನು ಕಾರಣಾಂತರಗಳಿಂದ ರದ್ದು ಪಡಿಸಿ, ಅರೂಬ ಮಾರ್ಗವಾಗಿ ಪರಮಾರಿಬೊ ತಲಪುವ ವ್ಯವಸ್ಥೆ ಮಾಡಲಾಯಿತು. ಅಂತೂ ನಿಗದಿಗಿಂತ ಒಂದು ದಿನ ತಡವಾಗಿ ಪರಮಾರಿಬೊ ತಲುಪಿದ್ದಾಯಿತು. ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದ ಡೀನ್ ಅವರು, ವಿಮಾನ ನಿಲ್ದಾಣದಲ್ಲಿ ನನ್ನನ್ನು ಸ್ವಾಗತಿಸಿ, ಅಂದು ರಾತ್ರಿ ಅವರ ಮನೆಯಲ್ಲಿಯೇ ನನಗೆ ವಾಸ್ತವ್ಯವನ್ನು ಕೊಟ್ಟು, ಮಾರನೆಯ ದಿನ ಮೊದಲೇ ನಿಗದಿಪಡಿಸಿದ್ದ ಅತಿಥಿಗೃಹಕ್ಕೆ ಕರೆದೊಯ್ದರು.

ಸುರಿನಾಮ್ ದಕ್ಷಿಣ ಅಮೆರಿಕಾದ ಬ್ರೆಜಿಲ್ ದೇಶದ ಉತ್ತರಕ್ಕೆ, ಅಟ್ಲಾಂಟಿಕ್ ಸಾಗರದ ದಕ್ಷಿಣಕ್ಕೆ, ಗಯಾನ ಮತ್ತು ಫ್ರೆಂಚ್ ಗಯಾನ ದೇಶಗಳ ಮಧ್ಯದಲ್ಲಿದೆ. ಇದು ಮೊದಲು ಡಚ್ ಕಾಲೊನಿ ಆಗಿ ಡಚ್ ಗಯಾನ ಆಗಿದ್ದು, 1975ರಲ್ಲಿ ಸ್ವತಂತ್ರ ರಾಷ್ಟ್ರವಾಗಿ, ಸುರಿನಾಮ್ ಹೆಸರನ್ನು ಪಡೆದಿದೆ. ಈ ದೇಶ ವಿಸ್ತೀರ್ಣದಲ್ಲಿ ಬಹುಶಃ ಅಮೆರಿಕಾದ ವಿಸ್ಕಾನ್ಸಿನ್ ರಾಜ್ಯದಷ್ಟಿದ್ದು, ಜನಸಂಖ್ಯೆ ಸುಮಾರು 500,000 ಮಾತ್ರ. ದೇಶದ ಅರ್ಧದಷ್ಟು ಜನ (ಸುಮಾರು 250,000) ಇದರ ರಾಜಧಾನಿ ಮತ್ತು ಪ್ರಮುಖ ನಗರ ಪರಮಾರಿಬೊದಲ್ಲಿ ವಾಸಿಸುತ್ತಾರೆ. ಈ ದೇಶದ ಪ್ರಮುಖ ಆರ್ಥಿಕ ಸಂಪತ್ತು ಅಲ್ಯೂಮಿನಿಯಮ್ ಅದಿರು ಮತ್ತು ಟಿಂಬರ್. ಈ ದೇಶದ ಅಧಿಕೃತ ಭಾಷೆ ಡಚ್

ಆದರೂ ಇಂಗ್ಲಿಷ್ ಭಾಷೆ ಸಾಕಷ್ಟು ಬಳಕೆಯಲ್ಲಿದೆ. ಇಲ್ಲಿನ ಆದಿವಾಸಿಗಳು ಸ್ಥಳೀಯ ಭಾಷೆಯಾದ ಟಾಕಿ-ಟಾಕಿಯನ್ನು ಬಳಸುತ್ತಾರೆ. ಹಿಂದೆ (19ನೇ ಶತಮಾನದಲ್ಲಿ) ಕೂಲಿ ಕಾರ್ಮಿಕರಾಗಿ ವಲಸೆ ಬಂದ ಭಾರತೀಯರೂ (ಬಹು ಪಾಲು ಬಿಹಾರ ಮತ್ತು ಉತ್ತರ ಪ್ರದೇಶದವರು) ಸಾಕಷ್ಟು ಜನರು ಈ ದೇಶದಲ್ಲಿ ನೆಲೆಸಿದ್ದು, ಹಿಂದೂಸ್ಥಾನಿ ಭಾಷೆ, ಹೋಳಿಯಂತಹ ಹಿಂದೂ ಹಬ್ಬ, ಹಿಂದೂ ದೇವಸ್ಥಾನಗಳು ದೇಶದ ಅವಿಭಾಜ್ಯ ಅಂಶಗಳಾಗಿವೆ.

ವಿಶ್ವವಿದ್ಯಾಲಯದಲ್ಲಿ ಅಧಿಕೃತ ಭಾಷೆ ಡಚ್ ಆದರೂ ಡಚ್ ಮತ್ತು ಇಂಗ್ಲಿಷ್ ಎರಡು ಭಾಷೆಯಲ್ಲಿಯೂ ಬೋಧಿಸುವ ಅವಕಾಶವಿದೆ. ಇಲ್ಲಿನ ಪ್ರಾಧ್ಯಾಪಕರಲ್ಲಿ ಬಹುಪಾಲು ಜನ ಹಾಲೆಂಡ್ ದೇಶದವರಾಗಿದ್ದು, ಕೆಲವು ಸುರಿನಾಮಿನವರೂ, ಬೆಲ್ಜಿಯಮ್‌ನವರೂ, ಭಾರತೀಯರೂ, ಮತ್ತು ಶ್ರೀಲಂಕದವರೂ ಇದ್ದರು. ಇಲ್ಲಿನ ವಿದ್ಯಾಭ್ಯಾಸದ ವ್ಯವಸ್ಥೆ ಹಾಲೆಂಡ್ ದೇಶದ ಮಾದರಿಯನ್ನು ಅನುಸರಿಸುತ್ತದೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ನಾನು ತೆಗೆದುಕೊಳ್ಳುತ್ತಿದ್ದ ತರಗತಿಗಳಲ್ಲಿ 10ರಿಂದ 12 ವಿದ್ಯಾರ್ಥಿಗಳಿರುತ್ತಿದ್ದರು. ಅವರ ಪೂರ್ವ ಸಿದ್ಧತೆ ಮತ್ತು ಕಲಿಯುವ ಆಸಕ್ತಿ ಪ್ರೋತ್ಸಾಹದಾಯಕವಾಗಿತ್ತು. ಅಂತೂ ಇಲ್ಲಿನ ಉದ್ಯೋಗ ವ್ಯವಸ್ಥೆಗೆ ಹೊಂದಿಕೊಳ್ಳುವುದು ಅಷ್ಟೇನೂ ಕಷ್ಟವಾಗಲಿಲ್ಲ. ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದಲ್ಲಿ ಬೆಂಗಳೂರಿನವರೇ ಆದ ಮತ್ತೊಬ್ಬ ಪ್ರಾಧ್ಯಾಪಕರು ಮತ್ತು ಇನ್ನೂ ಕೆಲವು ಭಾರತೀಯರ ಪರಿಚಯವಾಗಿ, ಬಿಡುವಿನ ವೇಳೆ ಸಮಾನ ಮನಸ್ಕರ ಜೊತೆಯಲ್ಲಿ ಕಾಲ ಕಳೆಯುವುದು ಸಾಧ್ಯವಾಗಿ ಒಂಟಿತನದ ಬವಣೆಗೆ ಕೊಂಚ ವಿರಾಮ ದೊರೆತಂತಾಯಿತು. ಆದರೂ ಮಡದಿ ಮಕ್ಕಳ ಅಗಲಿಕೆ, ಬಂಧು ಮಿತ್ರರ ನೆನಪುಗಳು ಹೃದಯದ ಭಾರವನ್ನು ಆಗಾಗ ಹೆಚ್ಚಿಸುತ್ತಿದ್ದುವು.

ಈ ಮಧ್ಯೆ, ಮಡದಿ ಮಕ್ಕಳನ್ನು ಕರೆಸಿಕೊಳ್ಳಲು ನಿರ್ಧರಿಸಿ, ಅವರ ಪ್ರಯಾಣ ವ್ಯವಸ್ಥೆಯನ್ನು ಏರ್ಪಡಿಸಲು ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ವಿನಂತಿಸಿಕೊಂಡೆ. ಮತ್ತೊಬ್ಬ ಸುರಿನಾಮ್ ಪ್ರಾಧ್ಯಾಪಕರ ಸಹಾಯದಿಂದ ಒಂದು ಬಾಡಿಗೆ ಮನೆಯನ್ನು ಗೊತ್ತು ಮಾಡಿ, ಮನೆಗೆ ಅವಶ್ಯಕವಾದ ಕೆಲವು ಪೀಠೋಪಕರಣಗಳನ್ನು ಖರೀದಿಸಿ, ಮಡದಿ ಮಕ್ಕಳ ಆಗಮನಕ್ಕೆ ತಯಾರಿ ಮಾಡಿಕೊಂಡೆ. 1981 ಏಪ್ರಿಲ್ ತಿಂಗಳ ಕೊನೆಯಲ್ಲಿ ನನ್ನ ಹೆಂಡತಿ (ಶಂಕರಿ) ಮತ್ತು ಮೂರು ಮಕ್ಕಳು (ಶಶಿ, ವೀಣ, ಹೇಮ) ಬೆಂಗಳೂರಿನಿಂದ ಹೊರಟು ದೆಹಲಿ, ಆಮ್ಸ್ಟರ್ಡಾಮ್ ಮಾರ್ಗವಾಗಿ ಪರಮಾರಿಬೊ ತಲುಪುವಂತೆ ಪ್ರಯಾಣದ ವ್ಯವಸ್ಥೆಯಾಯಿತು. ನಮ್ಮ ಮಕ್ಕಳು (ಒಂದು ಗಂಡು, ಎರಡು ಹೆಣ್ಣು) ಆಗ 10, 8, ಮತ್ತು 6 ವರ್ಷದವರಾಗಿದ್ದರು. ನನ್ನ ಮಡದಿ, ಮೂರು ಮಕ್ಕಳನ್ನು ಹಾಕಿಕೊಂಡು, ಇದೇ ಪ್ರಥಮ ಬಾರಿ ವಿಮಾನ ಹಾಗೂ ವಿದೇಶ ಪ್ರಯಾಣದ ಸಾಹಸವನ್ನು ಎದುರಿಸಬೇಕಾಯಿತು. ಜೊತೆಗೆ ದೆಹಲಿ ಮತ್ತು ಆಮ್ಸ್ಟರ್ಡಾಮ್‌ಗಳಲ್ಲಿ

ಒಂದೊಂದು ರಾತ್ರಿ ಉಳಿದು ನಂತರ ಪ್ರಯಾಣ ಮುಂದುವರಿಸಬೇಕಾಗಿತ್ತು. ನಮ್ಮೆರಡು ಕಡೆಯ ಮನೆಯವರಿಗೂ ಈ ಬಗ್ಗೆ ವ್ಯಾಕುಲ, ಭಯ ಕಾಡಿಸುತ್ತಿತ್ತು. ಆದರೆ ನನ್ನ ಮಡದಿ ಮಾತ್ರ ತಾಳ್ಮೆ ಮತ್ತು ನಿರುದ್ವೇಗದ ದೃಢ ಮನಸ್ಸಿನಿಂದ ಮಕ್ಕಳೊಂದಿಗೆ ಪ್ರಯಾಣಕ್ಕೆ ಸಿದ್ಧಪಡಿಸಿಕೊಂಡಳು. ದೆಹಲಿಯವರೆಗೆ ನನ್ನ ಮಡದಿಯ ತಾಯಿ, ತಮ್ಮ, ಅಕ್ಕ, ಮತ್ತು ಭಾವ ಜೊತೆಯಲ್ಲಿದ್ದು, ದೆಹಲಿಯಲ್ಲಿ ನನ್ನ ಮಡದಿ ಮಕ್ಕಳನ್ನು ಬೀಳ್ಕೊಟ್ಟು, ಬೆಂಗಳೂರಿಗೆ ಹಿಂದಿರುಗಿದರು. ಇನ್ನೆರಡು ದಿವಸಗಳ ಕಾಲ ನಮಗೆ ಇವರ ಸ್ಥಿತಿಗತಿಗಳ ಬಗ್ಗೆ ಯಾವುದೇ ಸಂಪರ್ಕವಿಲ್ಲದೆ, ಒಂದು ಬಗೆಯ ನಿಗೂಢ ನಿರೀಕ್ಷೆಯಲ್ಲೇ ಕಳೆಯಬೇಕಾಯಿತು. ಇವರ ವಿಮಾನ ಪರಮಾರಿಬೊ ತಲುಪುವ ಸಮಯಕ್ಕಿಂತ 2 ಗಂಟೆ ಮೊದಲೇ ನಾನು ಬಹು ತವಕದಿಂದ ವಿಮಾನ ನಿಲ್ದಾಣದಲ್ಲಿ ಚಡಪಡಿಸುತ್ತ ಇವರ ಆಗಮನಕ್ಕೆ ಕಾಯಲು ಪ್ರಾರಂಭಿಸಿದೆ. ನಿಗದಿತ ಸಮಯಕ್ಕಿಂತ ಸುಮಾರು ಅರ್ಧ ಗಂಟೆ ತಡವಾಗಿ ವಿಮಾನ ನೆಲ ಮುಟ್ಟಿತು. ಇನ್ನು ಇವರು ವಿಮಾನದಿಂದ ಹೊರಗೆ ಬಂದು ನನಗೆ ಕಾಣಿಸಿಕೊಳ್ಳುವವರೆಗೂ ಘಳಿಗೆ ಘಳಿಗೆಗೂ ನನ್ನ ಎದೆ ಬಡಿತದ ವೇಗ ಹೆಚ್ಚುತ್ತಿತ್ತು. ಕೊನೆಗೆ ನನ್ನವಳ ಮುಖ ದೂರದಿಂದ ಕಾಣಿಸಿಕೊಂಡು, ಮನಸ್ಸಿನ ದುಗುಡ, ಹೃದಯದ ಭಾರ ಹಗುರವಾಗತೊಡಗಿತು. ಇನ್ನೊಂದು ಕ್ಷಣದಲ್ಲಿ, ನನ್ನ ಮೂರು ಮಕ್ಕಳು ಮಿಂಚಿನಂತೆ ಓಡಿಬಂದು ನನ್ನನ್ನು ತಬ್ಬಿಕೊಂಡರು. ಅದೊಂದು ಅವಿಸ್ಮರಣೀಯ ಮಿಲನದ ಘಳಿಗೆ!

ಸುರಿನಾಮ್ ದೇಶವು ಸಮಭಾಜಕ ವೃತ್ತಕ್ಕೆ ಸಮೀಪವಿದ್ದು, ವರ್ಷ ಪೂರ್ತಿ ಅಷ್ಟೇನೂ ವ್ಯತ್ಯಾಸ ಕಾಣದ ಹವಾಗುಣ ಹೊಂದಿರುತ್ತದೆ. ಸರಾಸರಿ ಉಷ್ಣಾಂಶ 26–30 ಡಿಗ್ರೀ ಸೆಲ್ಸಿಯಸ್ ಮತ್ತು ತೇವಾಂಶ ಶೇಕಡ 80–90 ಇರುತ್ತದೆ. ಇದು ಅಷ್ಟೇನೂ ಮುಂದುವರೆದ ರಾಷ್ಟ್ರವಲ್ಲದಿದ್ದರೂ, ಜೀವನಾನುಕೂಲಕ್ಕೆ ಬೇಕಾದ ಸೌಲಭ್ಯಗಳೆಲ್ಲವೂ ಸಿಗುತ್ತವೆ. ನನ್ನ ಮಡದಿ ಮತ್ತು ಮಕ್ಕಳು ಈ ಹೊಸ ದೇಶ, ಪರಿಸರ, ನೆರೆಹೊರೆ, ಮತ್ತು ವಾತಾವರಣಕ್ಕೆ ಯಾವ ರೀತಿಯ ಬೇಸರವನ್ನೂ ತೋರದೆ ಬಹುಬೇಗ ಹೊಂದಿಕೊಂಡದ್ದು, ನಮ್ಮ ಇಲ್ಲಿಯ ಸುಮಾರು 21/22 ವರ್ಷದ ವಾಸ್ತವ್ಯ ಸಾಕಷ್ಟು ಶಾಂತಿ, ನೆಮ್ಮದಿಯಿಂದ ಕಳೆಯಲು ನಾಂದಿಯಾಯಿತು.

ಅವರು ಇಲ್ಲಿ ಬಂದು ಸೇರುವ ಮೊದಲೇ, ಇಲ್ಲಿನ ಶಾಲೆಗಳ ಬಗ್ಗೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸಿದ್ದೆ. ಸರ್ಕಾರಿ ಶಾಲೆಗಳಲ್ಲಿ ಉಚಿತ ಪ್ರವೇಶ ಮತ್ತು ಯಾವುದೇ ರೀತಿಯ ವಿಶೇಷ ಶುಲ್ಕವಿಲ್ಲದೆ ಉತ್ತಮ ಮಟ್ಟದ ಶಿಕ್ಷಣ ದೊರೆಯುತ್ತದೆ. ಆದರೆ, ಕಡ್ಡಾಯವಾಗಿ ಡಚ್ ಭಾಷೆಯನ್ನು ಕಲಿಯಲೇಬೇಕು. ಇದಕ್ಕೆ ಹೊರತಾಗಿ, ಎರಡು ಖಾಸಗಿ ಶಾಲೆಗಳಿದ್ದವು. ಇಲ್ಲಿ ಬರೀ ಇಂಗ್ಲಿಷ್ ಭಾಷೆಯ ವಿದ್ಯಾಭ್ಯಾಸ. ಡಚ್ ಭಾಷೆ ಕಲಿಯಬೇಕಾದ ಅಗತ್ಯವಿಲ್ಲ. ಹಾಗಾಗಿ, ನಮ್ಮ ಮನೆಗೂ ಮತ್ತು ವಿಶ್ವವಿದ್ಯಾಲಯಕ್ಕೂ ನಡುವೆ ಇದ್ದ 'ಕ್ರಿಶ್ಚಿಯನ್ ಅಕಾಡೆಮಿ' ಎಂಬ ಇಂಗ್ಲಿಷ್ ಶಾಲೆಗೆ ನಮ್ಮ ಮಕ್ಕಳನ್ನು

ಸೇರಿಸಲು ನಿರ್ಧರಿಸಿ, ಮಕ್ಕಳನ್ನು ಕರೆದುಕೊಂಡು, ಅವರ ಭಾರತದ ಶಾಲೆಗಳ ದಾಖಲೆ ಪತ್ರಗಳೊಂದಿಗೆ ಶಾಲೆಯ ಪ್ರಿನ್ಸಿಪಾಲರನ್ನು ಕಾಣಲು ಹೊರಟೆವು. ನಮ್ಮ ಮಕ್ಕಳು ಭಾರತದಲ್ಲಿ ಕನ್ನಡದ ಪರಿಸರದಲ್ಲೇ ಹೆಚ್ಚು ಬೆಳೆದದ್ದರಿಂದ, ಇಂಗ್ಲಿಷ್ ಭಾಷೆಯಲ್ಲಿ ಅಷ್ಟೇನೂ ಚುರುಕಾಗಿರಲಿಲ್ಲ. ಹಾಗಾಗಿ ಕ್ರಮವಾಗಿ 5, 3, ಮತ್ತು 2ನೇ ತರಗತಿಗಳಿಗೆ ಸೇರಿಸುವ ಬದಲು, ಅವರನ್ನು 3, 2, ಮತ್ತು 1ನೇ ತರಗತಿಗಳಿಗೆ ಮಾತ್ರ ಸೇರಿಸಿಕೊಳ್ಳಲು ಸಾಧ್ಯ ಎಂದು ಪ್ರಿನ್ಸಿಪಾಲರು ತಿಳಿಸಿದರು. ಇದರಿಂದ ನಮಗೆ ದೊಡ್ಡ ಆಘಾತವಾಗಿ, ತಕ್ಷಣ ಏನು ಮಾಡಲೂ ದಿಕ್ಕು ತೋಚದಂತಾಯಿತು. ಕೊಂಚ ಚೇತರಿಸಿಕೊಂಡ ನಂತರ ನಾನು ಪ್ರಿನ್ಸಿಪಾಲರೊಂದಿಗೆ ನಮ್ಮ ಮಕ್ಕಳ ಭವಿಷ್ಯಕ್ಕೆ ಇದರಿಂದ ತುಂಬಾ ಅನನುಕೂಲವಾಗುವುದೆಂದೂ, ನಾವು ಮನೆಯಲ್ಲಿ ಹುಡುಗರಿಗೆ ಹೆಚ್ಚಿನ ತರಬೇತಿ ಕೊಟ್ಟು ತಯಾರು ಮಾಡುವೆವೆಂದೂ, ಈಗಿನ ಪರಿಸ್ಥಿತಿಗೆ ಏನಾದರೂ ಪರಿಹಾರ ಮಾರ್ಗ ಸೂಚಿಸಬೇಕೆಂದು ಕೇಳಿಕೊಂಡೆ. ನನ್ನ ಅಹವಾಲನ್ನು ತಾಳ್ಮೆಯಿಂದ ಕೇಳಿಸಿಕೊಂಡ ಪ್ರಿನ್ಸಿಪಾಲರು, ನಮ್ಮ ಹುಡುಗರ ಪ್ರಗತಿಯನ್ನು ಆಗಾಗ ಪರೀಕ್ಷಿಸಿ, ಉತ್ತಮ ಮುನ್ನಡೆಯನ್ನು ಕಂಡರೆ ಅವರಿಗೆ ಶೈಕ್ಷಣಿಕ ವರ್ಷದ ಮಧ್ಯದಲ್ಲೇ ಮುಂದಿನ ತರಗತಿಗೆ ಬಡ್ತಿ ಕೊಡುವ ಪರಿಶೀಲನೆ ಸಾಧ್ಯವೆಂದು ತಿಳಿಸಿದರು. ಮತ್ತೆ ಬೇಸಿಗೆ ರಜೆಯ ದಿನಗಳಲ್ಲೂ ಹೆಚ್ಚು ಅಭ್ಯಾಸ ಮಾಡಿ, ಬಡ್ತಿಗೆ ಪ್ರಯತ್ನಿಸಬಹುದೆಂದು ತಿಳಿಸಿದರು. ನಮಗೆ ಬೇರೇನೂ ದಾರಿ ಕಾಣದೆ, ಈ ಶರತ್ತಿಗೆ ಒಪ್ಪಿ ನಮ್ಮ ಹುಡುಗರನ್ನು ಶಾಲೆಗೆ ಸೇರಿಸಿದ್ದಾಯಿತು.

ಮುಂದೆ ನನ್ನ ಮತ್ತು ನನ್ನ ಪತ್ನಿಯ ಪ್ರಮುಖ ಗುರಿ, ನಮ್ಮ ಮಕ್ಕಳ ವಿದ್ಯಾಭ್ಯಾಸದ ಪ್ರಗತಿಗೆ ಶ್ರಮಿಸಿ ಅವರನ್ನು ಆದಷ್ಟು ಬೇಗ ಕ್ರಮಬದ್ಧವಾದ ತರಗತಿಯ ಶ್ರೇಣಿಗಳಿಗೆ ಬಡ್ತಿ ಪಡೆಯಲು ಸಹಕರಿಸುವುದಾಯಿತು. ಪ್ರತಿದಿನ ಬಿಡುವಿನ ವೇಳೆಯಲ್ಲಿ ನಮ್ಮ ಹುಡುಗರ ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ ನಾನು ಮತ್ತು ನನ್ನ ಮಡದಿ ಬಹಳ ಕಾಳಜಿಯಿಂದ ಗಣಿತ, ವಿಜ್ಞಾನ, ಇಂಗ್ಲಿಷ್, ಮತ್ತು ಸಮಾಜಶಾಸ್ತ್ರ ಪಠ್ಯ ಪುಸ್ತಕಗಳ ಪಾಠಗಳನ್ನು, ಹೆಚ್ಚಿನ ಅಭ್ಯಾಸ ಮಾಡಲು ಅವರ ಜೊತೆಯಲ್ಲೇ ಕುಳಿತು, ಅವರೊಂದಿಗೆ ನಾವೂ ಕಲಿತು, ಅವರ ಯಶಸ್ಸಿಗೆ ಶ್ರಮಿಸಿ, ಅವರನ್ನೂ ಚೆನ್ನಾಗಿ ದುಡಿಸಿದೆವು. ಆಗಾಗ ನಾನು ಅವರ ಶಾಲೆಗೆ ಹೋಗಿ ಉಪಾಧ್ಯಾಯರುಗಳನ್ನು ಭೇಟಿಮಾಡಿ ಅವರ ಪ್ರಗತಿ, ಸಾಮರ್ಥ್ಯ, ಕೊರತೆಗಳ ಬಗ್ಗೆ ಚರ್ಚಿಸಿ, ಸಲಹೆ ಪಡೆಯುತ್ತಿದ್ದೆ. ನಮ್ಮ ಮಕ್ಕಳೂ ಸಹ ನಮ್ಮ ಈ ಪ್ರಯತ್ನಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ, ಹೆಚ್ಚು ವಿರೋಧಿಸದೆ ಕಷ್ಟಪಟ್ಟು ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿದ್ದರು. ಎರಡು ವರ್ಷಗಳ ಸತತ ಪರಿಶ್ರಮದ ಫಲಿತಾಂಶ ಯಶಸ್ವಿಯಾಗಿ, 1, 2, 3ನೇ ತರಗತಿಗೆ ಸೇರಿದ್ದ ನಮ್ಮ ಮಕ್ಕಳು ಕ್ರಮವಾಗಿ 4, 6, ಮತ್ತು 8ನೇ ತರಗತಿಗೆ ಬಡ್ತಿ ಪಡೆದು, ಅವರ ವಯಸ್ಸಿಗೆ ಸರಿಯಾದ ವರ್ಗಕ್ಕೆ ಸೇರುವಂತಾಯಿತು. ನಮ್ಮ ಮಕ್ಕಳ ಈ ಪ್ರಗತಿ ಮತ್ತು ಸಾಧನೆ ನಮಗೆ ಸದಾ ಅತ್ಯಂತ ಸಮಾಧಾನದ, ಹೆಮ್ಮೆಯ ಮತ್ತು ಸಂತೋಷದ ವಿಷಯ. ಈ ಪ್ರಯತ್ನಕ್ಕೆ ಸಕ್ರಿಯವಾಗಿ

ಸ್ಪಂದಿಸಿ ಸಹಕರಿಸಿದ ಕ್ರಿಶ್ಚಿಯನ್ ಅಕಾಡೆಮಿ ಶಾಲೆಯ ಅಧ್ಯಾಪಕ ವರ್ಗದವರಿಗೂ, ಪ್ರಿನ್ಸಿಪಾಲರಿಗೂ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳು ಸಲ್ಲಬೇಕು.

ಸುರಿನಾಮಿನಲ್ಲಿ ಎರಡು ವರ್ಷಗಳು ಕಳೆಯುತ್ತಿದ್ದಂತೆ, ನಮ್ಮ ಮಕ್ಕಳ ವಿದ್ಯಾಭ್ಯಾಸ ಮತ್ತು ಭವಿಷ್ಯದ ದೃಷ್ಟಿಯಿಂದ ನಾವು ಭಾರತಕ್ಕೆ ವಾಪಸಾಗುವುದು ಅಥವಾ ಉತ್ತರ ಅಮೆರಿಕಾದಲ್ಲಿ ಸೂಕ್ತ ಉದ್ಯೋಗದ ಅವಕಾಶಕ್ಕೆ ಪ್ರಯತ್ನ ಮಾಡುವುದೆಂದು ತೀರ್ಮಾನ ಮಾಡಿದೆವು. ಭಾರತಕ್ಕೆ ಹಿಂತಿರುಗುವುದಾದರೆ 1983ರ ಜೂನ್ ತಿಂಗಳಲ್ಲಿ ಹೊರಟರೆ, ಹುಡುಗರ ಶಾಲೆಗಳ ಪ್ರವೇಶಕ್ಕೆ ಅನುಕೂಲವಾಗಬಹುದೆಂದು, ನನ್ನ ಮಡದಿ ಮತ್ತು ಮಕ್ಕಳ ಪ್ರಯಾಣಕ್ಕೆ ಸಿದ್ಧತೆ ಮಾಡಲು ತೊಡಗಿದೆವು. ಉತ್ತರ ಅಮೆರಿಕದ (ಇಲ್ಲಿಂದಾಚೆಗೆ, ಅಮೆರಿಕ ಎಂದು ಕರೆಯುತ್ತೇನೆ) ಮಯಾಮಿ, ನ್ಯೂಯಾರ್ಕ್ ಮಾರ್ಗವಾಗಿ ಬೆಂಗಳೂರು ತಲುಪುವಂತೆ ಯೋಜಿಸಿದೆವು. ನಾನು, ನನ್ನ ಮಡದಿ ಮಕ್ಕಳ ಜೊತೆ ನ್ಯೂಯಾರ್ಕ್‌ವರೆಗೂ ಹೋಗಿ ಅಲ್ಲಿಂದ ಅವರನ್ನು ಬೀಳ್ಕೊಟ್ಟು ಮತ್ತೆ ಸುರಿನಾಮ್‌ಗೆ ವಾಪಸ್ ಬಂದು, ನನ್ನ ಉದ್ಯೋಗ ಒಪ್ಪಂದದ ಅವಧಿ ಮುಗಿಯುವ ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿಗೆ ಹಿಂದಿರುಗುವಂತೆ ಏರ್ಪಾಡು ಮಾಡಿಕೊಂಡೆ. ಸುರಿನಾಮಿನ ಅಮೆರಿಕ ದೂತಾವಾಸದಲ್ಲಿ ನಮ್ಮೆಲ್ಲರ ಪ್ರವಾಸೀ ವೀಸ ಸುಲಭವಾಗಿ ದೊರೆಯಿತು. ಹೇಗೂ ಅಮೆರಿಕ ಮಾರ್ಗದಲ್ಲಿ ಪ್ರಯಾಣ ಮಾಡುತ್ತಿರುವುದರಿಂದ, ಕೆಲವು ಪ್ರವಾಸಿ ಆಕರ್ಷಣೆಗಳನ್ನು ನೋಡಬಹುದೆಂದು, ಮಯಾಮಿಯಲ್ಲಿ 3 ದಿನ ಮತ್ತು ನ್ಯೂಯಾರ್ಕ್‌ನಲ್ಲಿ 3 ದಿನ ಉಳಿಯುವಂತೆ ವ್ಯವಸ್ಥೆ ಮಾಡಿಕೊಂಡು, ಜೂನ್ ಮಧ್ಯಭಾಗದಲ್ಲಿ ಪರಮಾರಿಬೊದಿಂದ ಮಯಾಮಿಗೆ ಪ್ರಯಾಣ ಬೆಳೆಸಿದೆವು.

ಮಯಾಮಿಯನ್ನು ಬೆಳಗಿನ ಜಾವವೇ ತಲುಪಿದ್ದರಿಂದ, ಅಂದು ಹಗಲೆಲ್ಲಾ ಮಯಾಮಿ ನಗರ ಮತ್ತು ಸಮುದ್ರ ತೀರ ಸುತ್ತಾಡಿ, ಸಂಜೆ ಟಾಂಪ ನಗರಕ್ಕೆ ಹೊರಟೆವು. ಮಾರನೆ ದಿನ ಟಾಂಪದಲ್ಲಿ 'ಬುಷ್ ಗಾರ್ಡನ್'ಗೆ ಹೋಗಿ ಅಲ್ಲಿನ ಅನೇಕ ಮನರಂಜನೆ (ಹಾವಾಡಿಗರಾಟ, ಮ್ಯಾಜಿಕ್ ಶೋದಂಥ) ಕಾರ್ಯಕ್ರಮಗಳನ್ನು ಕಂಡು ನಲಿದೆವು. ಟಾಂಪದಿಂದ ಓರ್ಲಾಂಡೊ ನಗರಕ್ಕೆ ಪ್ರಯಾಣ ಮಾಡಿ, ಅಲ್ಲಿನ ವಿಶ್ವ ವಿಖ್ಯಾತ ಆಕರ್ಷಣೆಗಳಾದ ಡಿಸ್ನಿ ವರ್ಲ್ಡ್‌ನ ಮ್ಯಾಜಿಕ್ ಕಿಂಗ್ಡಮ್ ಮತ್ತು ಎಪ್ಕಾಟ್ ಸೆಂಟರ್‌ಗಳ ನೋಟ, ಪಾಠ, ಮತ್ತು ಸಾಹಸಗಳನ್ನು ಕಂಡು ಬೆರಗಾಗಿ, ಒಂದು ಮಾಯಾಲೋಕದಲ್ಲಿ ಸಂಚರಿಸಿದ ಅನುಭವವನ್ನು ಸವಿದೆವು. ಓರ್ಲಾಂಡೊದಿಂದ ನ್ಯೂಯಾರ್ಕ್‌ನ ಜೆ.ಎಫ್.ಕೆ. ವಿಮಾನ ನಿಲ್ದಾಣಕ್ಕೆ ಬಂದೆವು.

ನ್ಯೂಯಾರ್ಕ್‌ನಲ್ಲಿ ನಾವು ಮೂರು ದಿವಸ ಇರಬೇಕಾಗಿದ್ದು, ಇಲ್ಲಿನ ವಸತಿಗಾಗಲೀ, ಓಡಾಟಕ್ಕಾಗಲೀ ಯಾವುದೇ ಮುಂಚಿನ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ವಿಮಾನ ನಿಲ್ದಾಣದ ಸಮಾಚಾರ ಕೇಂದ್ರದವರ ಸಹಾಯ ಪಡೆದು, ಸಮೀಪದಲ್ಲೇ ಇದ್ದ ಕೆನಡಿ ಹೋಟೆಲ್‌ನಲ್ಲಿ ನಮ್ಮ ವಸತಿಗೆ ವ್ಯವಸ್ಥೆ ಮಾಡಿಕೊಂಡು, ಹೋಟೆಲಿನವರೇ

ಏರ್ಪಡಿಸಿದ್ದ ವಾಹನದಲ್ಲಿ, ನಮ್ಮ ಎಲ್ಲ ಸಾಮಾನುಗಳನ್ನೂ ಹೇರಿಕೊಂಡು ಹೋಟೆಲನ್ನು ತಲುಪಿದೆವು. ನ್ಯೂಯಾರ್ಕಿನಲ್ಲಿ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ ಆಸಕ್ತಿ ಇದ್ದುದರಿಂದ, ಮಿತವ್ಯಯದಲ್ಲಿ ಸುತ್ತಾಡಲು ಏನು ಮಾಡಬಹುದೆಂದು ಯೋಚಿಸಿ, ನನ್ನಲ್ಲಿ ಅಂತಾರಾಷ್ಟ್ರೀಯ ಡ್ರೈವಿಂಗ್ ಲೈಸೆನ್ಸ್ ಇದ್ದುದರಿಂದ, ಬಾಡಿಗೆ ಕಾರಿನಲ್ಲಿ ನಾವೇ ಸುತ್ತಾಡುವುದು ಹೆಚ್ಚಿನ ಸ್ವಾತಂತ್ರ್ಯ ಮತ್ತು ಅನುಕೂಲ ಎಂದು, ನಾನು ವಿಮಾನ ನಿಲ್ದಾಣದ ಏವಿಸ್ ಕಾರ್ ಕಂಪನಿಗೆ ಹೋಟೆಲಿನ ವಾಹನದಲ್ಲಿ ಹೊರಟೆ. ನನ್ನ ಪಾಸ್ ಪೋರ್ಟ್, ವೀಸ, ಡ್ರೈವಿಂಗ್ ಲೈಸೆನ್ಸ್‌ಗಳನ್ನು ಪರಿಶೀಲಿಸಿ, ಕಾರನ್ನು ನನಗೆ ಮೂರು ದಿನಗಳ ಬಾಡಿಗೆಗೆ ಕೊಡಲು ಏವಿಸ್ ಕಂಪನಿಯವರು ಸಮ್ಮತಿಸಿ, ದಾಖಲೆಗಳನ್ನು ಸಿದ್ಧ ಪಡಿಸಿದರು. ನಾನು ನ್ಯೂಯಾರ್ಕ್ ನಗರದ ರಸ್ತೆ ನಕ್ಷೆಯನ್ನು ಕೊಂಡು, ಕಾರನ್ನು ಅತಿ ಎಚ್ಚರಿಕೆಯಿಂದ ಚಲಾಯಿಸಿಕೊಂಡು ನಿಲ್ದಾಣದ ಸಮೀಪವೇ ಇದ್ದ ಹೋಟೆಲು ತಲಪುವ ಹೊತ್ತಿಗೆ, ನನ್ನ ಮಡದಿ, ಮಕ್ಕಳು ಕಾತರದಿಂದ ಕಾಯುತ್ತಿದ್ದರು.

ಕಾರನ್ನೇನೋ ಪಡೆದದ್ದಾಯಿತು, ಇನ್ನು ನ್ಯೂಯಾರ್ಕ್ ನಗರದಲ್ಲಿ ಅಲ್ಲಿನ ಸಂಚಾರ ವ್ಯವಸ್ಥೆ, ರಸ್ತೆಗಳ ಪರಿಚಯ ಏನೂ ಇಲ್ಲದೆ, ಈ ನಗರಕ್ಕೆ ಪ್ರಥಮಬಾರಿ ಪ್ರವಾಸಿಗಳಾಗಿ ಆಗಮಿಸಿದ ಕೆಲವೇ ಗಂಟೆಗಳಲ್ಲಿ, ಸಂಸಾರ ಸಮೇತ ಕಾರನ್ನು ಚಲಾಯಿಸುವ ಸಾಹಸಕ್ಕೆ ತೊಡಗಿದೆ. ನನ್ನ ಸುರಿನಾಮ್ ಮತ್ತು ಭಾರತದ ಅನುಭವ ರಸ್ತೆಯ ಎಡಭಾಗದಲ್ಲಿ ವಾಹನಗಳನ್ನು ಚಲಾಯಿಸುವುದು. ಇಲ್ಲಿನ ಸಂಚಾರ ವ್ಯವಸ್ಥೆಯ ಪ್ರಕಾರ, ವಾಹನಗಳನ್ನು ರಸ್ತೆಯ ಬಲಗಡೆ ನಡೆಸಬೇಕು. ಇಂತಹ ಪರಿಸ್ಥಿತಿಯಲ್ಲಿ, ನ್ಯೂಯಾರ್ಕ್ ನಗರದಲ್ಲಿ ಮೂರು ದಿನಗಳು ಕಾರನ್ನು ನಡೆಸಿದ್ದು ನನ್ನ ಜೀವನದಲ್ಲೇ ನಾನು ಕೈಗೊಂಡ ಅತ್ಯಂತ ಸಾಹಸಕರ ಮತ್ತು ರೋಮಾಂಚಕಾರಿ ಕೃತ್ಯ! ಈ ಸಾಹಸದ ಕೆಲವು ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಮೊದಲ ದಿನ ಕ್ವೀನ್ಸ್, ಜಾಕ್ಸನ್ ಹೈಟ್ಸ್, ಮತ್ತು ಟೈಮ್ಸ್ ಸ್ಕ್ವೇರ್ ಭಾಗಗಳನ್ನು ನೋಡಬಹುದೆಂದು, ನ್ಯೂಯಾರ್ಕ್ ನಗರದ ನಕ್ಷೆಯನ್ನು ನೋಡಿ ನಾವು ಓಡಾಡಬೇಕಾದ ಮಾರ್ಗಗಳನ್ನು ವಿವರವಾಗಿ ಗುರುತಿಸಿಕೊಂಡು, ಏನೋ ಒಂದು ಬಗೆಯ ಭಂಡ ಧೈರ್ಯ ಮಾಡಿ ಹೊರಟೆವು. ನಾನು ಕಾರು ಚಲಾಯಿಸುವಾಗ ನಿಶ್ಶಬ್ದದಿಂದ ಇರಬೇಕೆಂದು ನನ್ನ ಮಕ್ಕಳಿಗೆ ಕಟ್ಟಪ್ಪಣೆ ಮಾಡಿದ್ದೆ. ಬಹಳ ಎಚ್ಚರಿಕೆಯಿಂದ ನಮ್ಮ ಹೋಟೆಲಿನಿಂದ ಟೈಮ್ ಸ್ಕ್ವೇರ್ ಸಮೀಪ ತಲುಪಿದ್ದಾಯಿತು. ದಾರಿಯುದ್ದಕ್ಕೂ ಬೆರಗುಗಣ್ಣುಗಳಿಂದ ನ್ಯೂಯಾರ್ಕ್ ನಗರದ ಅದ್ಭುತ ನೋಟ, ವಾಹನಸಂದಣಿ, ಜನಸಂದಣಿ, ಗಗನಚುಂಬಿ ಕಟ್ಟಡಗಳು, ಸೇತುವೆಗಳು, ಸುರಂಗಮಾರ್ಗಗಳು, ಕಣ್ಣೋರೈಸುವ–ಝುಗಝುಗಿಸುವ ವಿದ್ಯುದ್ದೀಪಗಳು, ಇವುಗಳನ್ನೆಲ್ಲ ರೆಪ್ಪೆಯಾಡಿಸದೆ ಕಣ್ತುಂಬಿಸಿಕೊಂಡೆವು. ಟೈಮ್ಸ್ ಸ್ಕ್ವೇರಿನಲ್ಲಿ, ರಾಕಫೆಲರ್ ಸೆಂಟರ್, ಬ್ರಾಡ್ ವೇ,

ಎಂಪೈರ್ ಸ್ಟೇಟ್ ಕಟ್ಟಡಗಳ ಪರಿಸರಗಳಲ್ಲೆಲ್ಲ ಸುತ್ತಾಡಿ, ಎಲ್ಲೋ ಒಂದು ಕನಸಿನ ಲೋಕದಲ್ಲಿ ವಿಹರಿಸುತ್ತಿರುವ ಅನುಭವವನ್ನು ಪಡೆದು, ಮೈ-ಮನಸ್ಸುಗಳನ್ನು ತಣಿಸಿಕೊಂಡೆವು. ಹಿಂದಿರುಗುವಾಗ, ಕ್ವೀನ್ಸ್ ಮೂಲಕ, ಜಾಕ್ಸನ್ ಹೈಟ್‌ಗೆ ಹೋಗಿ, ಅಲ್ಲಿ ಎಲ್ಲಿ ನೋಡಿದರೂ ಭಾರತೀಯರೇ ಕಾಣುತ್ತಿದ್ದುದಲ್ಲದೆ, ಅನೇಕ ಭಾರತೀಯ ಅಂಗಡಿಗಳನ್ನು ನೋಡಿ, ಭಾರತಕ್ಕೇ ಹಿಂದಿರುಗಿ ಬಂದಿದ್ದೇವೆ ಎನ್ನುವ ಭ್ರಮೆಯಿಂದ ಸಂಭ್ರಮಿಸಿದೆವು. ಅಲ್ಲೇ ಕಾಣಿಸಿಕೊಂಡ ಅನೇಕ ಭಾರತೀಯ ಉಪಾಹಾರ ಮಂದಿರಗಳಲ್ಲೊಂದರಲ್ಲಿ, ಸಂತೃಪ್ತಿಯಾದ ಭೋಜನವನ್ನು ಮಾಡಿಕೊಂಡು, ನಾವಿಳಿದುಕೊಂಡಿದ್ದ ಕೆನೆಡಿ ಹೋಟೆಲ್ ಕಡೆ ಸಾಗಿದೆವು.

ನಾವು ಆದಿನ ಹೋಟೆಲ್ ತಲುಪಿದ್ದು ಒಂದು ಅತ್ಯಂತ ಸ್ವಾರಸ್ಯಕರ ಮತ್ತು ನಮ್ಮ ಪಾಲಿಗೆ ಮರೆಯಲಾಗದ ಘಟನೆ! ಜಾಕ್ಸನ್ ಹೈಟ್ಸ್, ಕ್ವೀನ್ಸ್‌ನಿಂದ ನಾವು ಇಳಿದುಕೊಂಡಿದ್ದ ಜೆ.ಎಫ್.ಕೆ. ವಿಮಾನ ನಿಲ್ದಾಣದ ಬಳಿ ಇರುವ ಕೆನೆಡಿ ಹೋಟೆಲ್‌ಗೆ ಕಾರನ್ನು ಚಲಾಯಿಸಿಕೊಂಡು ಹೊರಟೆವು. ವಿಮಾನ ನಿಲ್ದಾಣದ ಹತ್ತಿರ ಬರುತ್ತಿದ್ದಂತೆ, ಕೊಂಚ ದೂರದಿಂದ ನಮ್ಮ ಹೋಟೆಲಿನ ಫಲಕವು ಎತ್ತರದಲ್ಲಿ ಕಾಣಿಸಿಕೊಂಡಿತು. ಆದರೆ ಹೋಟೆಲನ್ನು ತಲುಪಲು ನಾವು ಹೆದ್ದಾರಿಯಿಂದ ಯಾವ ಎಕ್ಸಿಟ್ (ಹೊರದಾರಿ) ತೆಗೆದುಕೊಳ್ಳಬೇಕೆಂದು ನಮಗೆ ತಿಳಿದಿರಲಿಲ್ಲ. ಅಂದಾಜಿನಲ್ಲಿ ಒಂದು ಸಮೀಪದ ಎಕ್ಸಿಟ್ ತೆಗೆದುಕೊಂಡು ಹೋಗಿ ನಮ್ಮ ಹೋಟೆಲ್ ಹುಡುಕಾಡಿದರೆ, ಅದರ ಪತ್ತೆಯೇ ಕಂಡು ಬರಲಿಲ್ಲ. ಪ್ರಯಾಸ ಪಟ್ಟುಕೊಂಡು ಮತ್ತೆ ಹೆದ್ದಾರಿಗೆ ಬಂದು ಮುಂದುವರೆಯುತ್ತಿದ್ದರೆ, ಮತ್ತೆ ಹೋಟೆಲ್ ಫಲಕ ಮತ್ತೊಂದು ದಿಕ್ಕಿನಲ್ಲಿ ಕಂಡಿತು. ಈ ಬಾರಿ ಮತ್ತೊಂದು ಎಕ್ಸಿಟ್ ತೆಗೆದುಕೊಂಡು ಹುಡುಕಾಡಿದೆವು. ದೂರದಿಂದ ಕಾಣುತ್ತಿದ್ದ ಹೋಟೆಲ್ ಈಗ ಮತ್ತೆ ಮಾಯವಾಗಿತ್ತು. ಹೀಗೆ ಹೆದ್ದಾರಿಯಿಂದ ನಾಲ್ಕಾರು ಬಾರಿ ನಮ್ಮ ಹೋಟೆಲ್‌ಗೆ ಹೋಗಬೇಕಾದ ಎಕ್ಸಿಟ್‌ಗಿಂತ ತೀರಾ ಮುಂದಿನದು ಇಲ್ಲವೇ ತೀರಾ ಹಿಂದಿನದನ್ನು ತೆಗೆದುಕೊಂಡು ಸುಮಾರು 1 ½ ಗಂಟೆಗಳ ಕಾಲ ಕೊಂಚ ದೂರದಿಂದ ಕಾಣಿಸುತ್ತಿರುವ ಹೋಟೆಲನ್ನು ತಲುಪಲಾರದೆ ಪೇಚಾಡತೊಡಗಿದೆವು. ಈ ಮಧ್ಯೆ ಕೆಲವು ಗ್ಯಾಸ್ ಸ್ಟೇಷನ್‌ಗಳ ಬಳಿ ನಿಲ್ಲಿಸಿ ನಮ್ಮ ಹೋಟೆಲ್ ದಾರಿಯ ಬಗ್ಗೆ ಸಹಾಯ ಪಡೆದರೂ ಹೊಟೆಲ್ ಮಾತ್ರ ನಮಗೆ ಮರೀಚಿಕೆಯಾಗಿ ಕಾಡಿಸಿತ್ತು. ಅಂತೂ ಸುಮಾರು ಎರಡು ಗಂಟೆಗಳ ನಿರಂತರ ಹೋರಾಟದ ನಂತರ ರಾತ್ರಿ ಸುಮಾರು 10 ಗಂಟೆಯ ವೇಳೆಗೆ ಹೋಟೆಲ್ ತಲುಪಿ ಸಮಾಧಾನದ ನಿಟ್ಟುಸಿರು ಬಿಟ್ಟೆವು. ಇಲ್ಲಿ ನಾವು ಅನುಭವಿಸಿದ ಮತ್ತೊಂದು (ನಮ್ಮ ಪಾಲಿಗೆ) ಸೋಜಿಗವೆಂದರೆ, ರಾತ್ರಿ 10 ಗಂಟೆಯವರೆಗೂ ಕತ್ತಲಾಗದಿದ್ದುದು. ಹೀಗೆ ಬೆಳಕಿದ್ದುದು ನಮ್ಮ ಹೋಟೆಲ್ ಹುಟುಕಾಟದ ಸಾಹಸಕ್ಕೆ ಅನುಕೂಲವೇ ಆಯಿತು!

ಮಾರನೆಯ ದಿನ ಸ್ಟಾಚ್ಯೂ ಆಫ್ ಲಿಬರ್ಟಿ ನೋಡೋಣವೆಂದು, ಬೆಳಗ್ಗೆ

ಸುಮಾರು 9 ಗಂಟೆ ಸಮಯಕ್ಕೆ ಹೋಟೆಲ್ ಬಿಟ್ಟು ಹೊರಟೆವು. ಸುಮಾರು 35–40 ನಿಮಿಷಗಳ ದಾರಿ ಸವೆಸಿದ ನಂತರ, ಮುಂದಿನ ಹಾದಿಯ ಬಗ್ಗೆ ಗೊಂದಲ ಪ್ರಾರಂಭವಾಯಿತು. ಹತ್ತಿರದ ಸಂಚಾರಿ ದೀಪದ ಸೂಚನೆಗೆ ಕಾಯುತ್ತಿರುವಾಗ, ಪಕ್ಕದಲ್ಲಿ ನಿಂತಿದ್ದ ವಾಹನದ ಚಾಲಕನಿಂದ ಸ್ಟ್ಯಾಚ್ಯೂ ಆಫ್ ಲಿಬರ್ಟಿಗೆ ಹೋಗುವ ಹಾದಿಯ ಬಗ್ಗೆ ಸಹಾಯವನ್ನು ಯಾಚಿಸಿದೆವು. ಆ ಮಹಾನುಭಾವ ತಾನೂ ಅದೇ ದಿಕ್ಕಿನಲ್ಲೇ ಹೋಗುತ್ತಿರುವುದಾಗಿಯೂ, ಅವನ ಕಾರನ್ನು ಹಿಂಬಾಲಿಸಿದರೆ ನಾವು ಸೇರಬೇಕಾದ ಗುರಿಯ ಹತ್ತಿರ ಬಂದಾಗ ನಮಗೆ ತಿಳಿಸುವುದಾಗಿಯೂ ಹೇಳಿದನು. ಸರಿ, ನ್ಯೂಯಾರ್ಕಿನ ದಟ್ಟ ವಾಹನ ಸಂಚಾರದ ಮಧ್ಯೆ, ಈ ಅಪರಿಚಿತ ಮಹಾನುಭಾವನ ಕಾರನ್ನು ಅತ್ಯಂತ ಶ್ರದ್ಧೆಯಿಂದ ಸುಮಾರು 30 ನಿಮಿಷಗಳ ಕಾಲ ಹಿಂಬಾಲಿಸಿದ ನಂತರ, ಆತ ತನ್ನ ಕಾರನ್ನು ಒಂದು ಬದಿಗೆ ನಿಲ್ಲಿಸಿ, ನಮಗೆ ಅಲ್ಲಿಂದ ಮುಂದಿನ ಕೆಲವೇ ನಿಮಿಷಗಳ ದಾರಿಯ ಬಗ್ಗೆ ವಿವರವಾಗಿ ತಿಳಿಯಪಡಿಸಿ ತನ್ನ ಮಾರ್ಗದಲ್ಲಿ ಮುಂದಿನ ಪ್ರಯಾಣ ಬೆಳೆಸಿದನು. ಈ ಆಪದ್ಬಾಂಧವನ ಮಾರ್ಗದರ್ಶನದಿಂದ ನಾವು ಮುಂದಿನ ಕೆಲವೇ ನಿಮಿಷಗಳಲ್ಲಿ ಸ್ಟ್ಯಾಚ್ಯೂ ಆಫ್ ಲಿಬರ್ಟಿಗೆ ತೆಗೆದುಕೊಳ್ಳಬೇಕಾದ ಫೆರ್ರಿ ನಿಲ್ದಾಣದ ಪರಿಸರ ತಲುಪಿದೆವು. ಮುಂದಿನ ಕೆಲವು ಗಂಟೆಗಳು ಸ್ಟ್ಯಾಚ್ಯೂ ಆಫ್ ಲಿಬರ್ಟಿಯ ಸುಂದರ ವಾತಾವರಣ, ಭವ್ಯ, ಗಂಭೀರ, ಸ್ವಾತಂತ್ರ್ಯ ಸೂಚಕ, ಹಸಿರು ವರ್ಣದ ಲಿಬರ್ಟಿ ಮೂರ್ತಿ, ಸುತ್ತಲಿನ ವೈವಿಧ್ಯಮಯ ಪ್ರವಾಸಿ ಜನಸಮೂಹವನ್ನು ನೋಡಿ ನಲಿದೆವು. ಅಂದು ಸಂಜೆ ಹಿಂದಿನ ದಿನ ಕಲಿತ ಪಾಠದಿಂದ, ಯಾವುದೇ ಗಮನಾರ್ಹವಾದ ಘಟನೆಯಿಲ್ಲದೆ ನಾವಿಳಿದುಕೊಂಡಿದ್ದ ಹೋಟೆಲನ್ನು ಸುಲಭವಾಗಿ ತಲುಪಿದೆವು.

ಮರುದಿನದ ನಮ್ಮ ಕಾರ್ಯಕ್ರಮ ಭಾರತಕ್ಕೆ ಕೊಂಡೊಯ್ಯುವ ಕೆಲವು ವಸ್ತುಗಳನ್ನು ಕೊಳ್ಳುವುದು ಮತ್ತು ನಮ್ಮ ಬಾಡಿಗೆ ಕಾರನ್ನು ಹಿಂದಿರುಗಿಸಿ, ನನ್ನ ಮಡದಿ ಮತ್ತು ಮಕ್ಕಳನ್ನು ಭಾರತದ ಪ್ರಯಾಣಕ್ಕೆ ವಿಮಾನ ನಿಲ್ದಾಣದಲ್ಲಿ ಬೀಳ್ಕೊಡುವುದು. ಈ ಯೋಜನೆಯಂತೆ, ಮರುದಿನ ನಮ್ಮ ವಸ್ತುಗಳನ್ನೆಲ್ಲ ಕ್ರಮಪಡಿಸಿಕೊಂಡು, ಹೊಟೆಲ್‌ನ ವ್ಯವಹಾರವನ್ನು ಚುಕ್ತಗೊಳಿಸಿ, ಎಲ್ಲ ಗಂಟು ಮೂಟೆಗಳನ್ನು ಕಾರಿನಲ್ಲಿ ತುಂಬಿಸಿ, ಜ್ಯಾಕ್ಸನ್ ಹೈಟ್ಸ್ ಕಡೆಗೆ ಹೊರಟೆವು. ಇಲ್ಲಿ ಒಂದೆರಡು ಗಂಟೆಗಳ ಸುತ್ತಾಡಿ, ಕೆಲವು ವಸ್ತುಗಳನ್ನು ಕೊಂಡು, ನಾವು ಮುಖ್ಯವಾಗಿ ಕೊಳ್ಳಬೇಕೆನಿಸಿದ್ದ ಮಲ್ಟಿ ಸಿಸ್ಟಮ್ ಟಿವಿ ಮತ್ತು ವಿಸಿಆರ್ ಬಗ್ಗೆ, ಯಾವುದೇ ನಿರ್ಧಾರ ಕೈಗೊಳ್ಳಲಾರದೆ ಪೇಚಾಡಲಾರಂಭಿಸಿದೆವು. ಆಗ ಅಲ್ಲಿನ ಕೆಲವು ವರ್ತಕ ವರ್ಗದವರು ಲೋಯರ್ ಮಾನ್ಹಟನ್‌ನ ಕನಾಲ್ ರಸ್ತೆಯಲ್ಲಿರುವ ಅನೇಕ ಯಹೂದಿ ವಿದ್ಯುತ್ ಉಪಕರಣಗಳ ಅಂಗಡಿಗಳಲ್ಲಿ ಉತ್ತಮ ಬೆಲೆಯಲ್ಲಿ ನಮಗೆ ಬೇಕಾದಂತಹ ವಸ್ತುಗಳು ಸಿಗುವ ಸಾಧ್ಯತೆ ಇದೆ ಎಂದು ತಿಳಿಸಿದರು. ಸರಿ, ಮತ್ತೆ ಹೊರಟೆವು ಸವಾರಿ, ಕನಾಲ್ ರಸ್ತೆಗೆ. ಅಲ್ಲಿ ಅನೇಕ ಅಂಗಡಿಗಳಲ್ಲಿ ಸುತ್ತಾಡಿ, ಕೊನೆಗೆ ಒಂದು ಕಡೆ ಟಿವಿ ಮತ್ತು ವಿಸಿಆರ್‌ಗಳನ್ನು ಖರೀದಿಸಿಯೇ ಬಿಟ್ಟೆವು. ಇವುಗಳನ್ನು ಕಾರಿನಲ್ಲಿ ಹೇರಿಕೊಂಡು ವಿಮಾನ ನಿಲ್ದಾಣದಲ್ಲಿದ್ದ

ಏವಿಸ್ ಕಾರ್ ಶಾಖೆಗೆ ನಮ್ಮ ಬಾಡಿಗೆ ಕಾರನ್ನು ಹಿಂದಿರುಗಿಸಲು ಹೊರಟೆವು.

ಆದರೆ ಸುಮಾರು ಅರ್ಧ ದಾರಿ ದಾಟುವಷ್ಟರಲ್ಲಿ ನಮ್ಮ ಕಾರಿನಲ್ಲಿ ಏನೋ ತೊಂದರೆ ಕಾಣಿಸಿಕೊಂಡು, ಮುಂದೆ ಕೆಲವು ನಿಮಿಷಗಳಲ್ಲಿ ನಿಂತೇ ಹೋಯಿತು. ಒಂದು ಘಳಿಗೆ ನಮಗೆಲ್ಲಾ ಗಾಬರಿ ಮತ್ತು ನನಗಂತೂ ತಕ್ಷಣ ಏನು ಮಾಡಬಹುದೆಂದು ದಿಕ್ಕು ತೋಚದಾಯಿತು. ನಂತರ ಕೊಂಚ ಸಮಾಧಾನದಿಂದ ಯೋಚಿಸಿ, ಹತ್ತಿರ ಕಂಡ ಒಂದು ಸಾರ್ವಜನಿಕ ಫೋನ್ ಬೂತ್‌ನಿಂದ ಏವಿಸ್ ಕಾರ್ ಶಾಖೆಗೆ ಕರೆ ಮಾಡಿ ವಿಷಯವನ್ನು ತಿಳಿಸಿದೆ. ಅವರು ಸಾವಧಾನದಿಂದ ನನ್ನ ಪರಿಸ್ಥಿತಿಯ ವಿವರಗಳನ್ನು ತಿಳಿದುಕೊಂಡು, ನನಗೆ ಗಾಬರಿಯಾಗದಿರೆಂದು ಸಂತೈಸಿ, ಕಾರನ್ನು ಈಗಿರುವ ಸ್ಥಳದಲ್ಲೇ ಬಿಡಲು ಹೇಳಿ ಆ ಸ್ಥಳದ ಸ್ಪಷ್ಟವಾದ ವಿಳಾಸವನ್ನು ಪಡೆದುಕೊಂಡರು. ನನಗೆ ಒಂದು ಟ್ಯಾಕ್ಸಿಯನ್ನು ಮಾಡಿಕೊಂಡು ಅವರ ಕಚೇರಿಗೆ ಬರುವಂತೆ ತಿಳಿಸಿದರು. ಕೊಂಚ ಪ್ರಯಾಸಪಟ್ಟಮೇಲೆ ಒಂದು ಟ್ಯಾಕ್ಸಿ ದೊರಕಿತು. ಮತ್ತೆ ನಮ್ಮ ಎಲ್ಲ ಗಂಟು ಮೂಟೆಗಳನ್ನು, ಹೊಸ ಟಿವಿ, ವಿಸಿಆರ್‌ಗಳನ್ನು ಕೆಟ್ಟು ನಿಂತಿದ್ದ ಕಾರಿನಿಂದ ಟ್ಯಾಕ್ಸಿಗೆ ಸಾಗಿಸಿ, ಜೆ.ಎಫ್.ಕೆ. ವಿಮಾನ ನಿಲ್ದಾಣದ ಸರಹದ್ದಿನಲ್ಲಿರುವ ಏವಿಸ್ ಕಚೇರಿಗೆ ದೌಡಾಯಿಸಿದೆವು. ಅಲ್ಲಿ ಟ್ಯಾಕ್ಸಿ ಚಾಲಕನ ಹಣ ಪಾವತಿಸಿ, ನಮ್ಮ ವಸ್ತುಗಳನ್ನೆಲ್ಲಾ ಕೆಳಗಿಳಿಸಿಕೊಂಡು, ನನ್ನ ಮಡದಿ ಮಕ್ಕಳನ್ನು ಅಲ್ಲಿಯೇ ಇರಲು ಹೇಳಿ ನಾನು ಏವಿಸ್ ಕಚೇರಿಗೆ ಮುಂದೇನು ಹಗರಣ ಕಾದಿದೆಯೋ ಎಂಬ ಭೀತಿಯಿಂದಲೇ ಹೊರಟೆ. ಅಲ್ಲಿದ್ದ ಏವಿಸ್ ಪ್ರತಿನಿಧಿಯು ನನ್ನನ್ನು ಮುಗುಳ್ನಗೆಯಿಂದ ಸ್ವಾಗತಿಸಿ, ನನ್ನ ಪರಿಸ್ಥಿತಿಯನ್ನು ಸಮಾಧಾನದಿಂದ ಕೇಳಿಸಿಕೊಂಡು, ನನಗೆ ಗಾಬರಿಯಾಗುವ ಅಗತ್ಯವೇನೂ ಇಲ್ಲ ಎಂದು ಧೈರ್ಯ ಹೇಳಿ, ಕೆಟ್ಟು ನಿಂತಿರುವ ಕಾರಿನ ವ್ಯವಸ್ಥೆ ಏವಿಸ್ ಕಂಪನಿಯು ನೋಡಿಕೊಳ್ಳುವುದೆಂದು ಭರವಸೆ ನೀಡಿದಳು. ನನ್ನ 3 ದಿವಸಗಳ ಕಾರಿನ ಬಾಡಿಗೆಯ ಲೆಕ್ಕವನ್ನು ಚುಕ್ತ ಮಾಡಿಸಿಕೊಂಡು, ಕಾರು ಕೆಟ್ಟು ನಿಂತಿದ್ದಕ್ಕೆ ಕ್ಷಮೆ ಯಾಚಿಸಿ, ನಮಗೆಲ್ಲರಿಗೂ ಶುಭ ಪ್ರಯಾಣವನ್ನು ಹಾರೈಸಿ ಬೀಳ್ಕೊಟ್ಟಳು. ಒಬ್ಬ ಸಾಮಾನ್ಯ ಗ್ರಾಹಕನ ಬಗ್ಗೆ ಇಷ್ಟೊಂದು ಕಾಳಜಿ ಮತ್ತು ಅನುಕಂಪದಿಂದ ವ್ಯವಹರಿಸಿ, ನನ್ನನ್ನು ಯಾವ ಇಕ್ಕಟ್ಟಿಗೂ ಸಿಕ್ಕಿಸದೆ ಬೀಳ್ಕೊಟ್ಟಿದ್ದು, ಈ ದೇಶದ ಜನರು ಮತ್ತು ವ್ಯಾಪಾರೀ ಸಂಸ್ಥೆಗಳ ಬಗ್ಗೆ ನನ್ನಲ್ಲಿ ಅತ್ಯಂತ ಗೌರವ ಭಾವ ಮೂಡಿಸಿದ್ದೇ ಅಲ್ಲದೆ, ಈ ನೆನಪು ಅಚ್ಚಳಿಯದೆ ಹೆಪ್ಪುಗಟ್ಟಿ ನಿಂತಿದೆ.

ಏವಿಸ್ ಕಚೇರಿಯಿಂದ ಅವರದೇ ಸಾರಿಗೆ ವಾಹನದಲ್ಲಿ ನಮ್ಮ ಲಗೇಜುಗಳನ್ನೆಲ್ಲ ತುಂಬಿಕೊಂಡು ಏರ್ ಪೋರ್ಟ್ ಟರ್ಮಿನಲ್‌ನ ಏರ್ ಇಂಡಿಯ ನಿರ್ಗಮನ ತಾಣಕ್ಕೆ ಬಂದು ಸೇರಿದೆವು. ಇಲ್ಲಿ ಚೆಕ್–ಇನ್ ಮಾಡುವಾಗ ನಮ್ಮ ಲಗೇಜು ಪೆಟ್ಟಿಗೆಗಳಲ್ಲದೆ, ಹೊಸದಾಗಿ ಕೊಂಡಿದ್ದ ಟಿವಿ ಮತ್ತು ವಿಸಿಆರ್‌ಗಳನ್ನೂ ಸಾಗಿಸುವ ಬಗ್ಗೆ ಮತ್ತೇನು ಅಡಚಣೆಗಳನ್ನು ಎದುರಿಸಬೇಕಾಗಬಹುದೋ ಎಂಬ ಭೀತಿ ನಮ್ಮನ್ನು ಕಾಡುತ್ತಿತ್ತು. ಆದರೆ ಆಗಿನ ಲಗೇಜ್ ಬಗ್ಗೆಯ ಔದಾರ್ಯ ನೀತಿಯಿಂದ, ಯಾವುದೇ ಹೆಚ್ಚಿನ ಶುಲ್ಕದ ನಿರ್ಬಂಧವಿಲ್ಲದೆ ನಮ್ಮೆಲ್ಲ ವಸ್ತುಗಳನ್ನೂ ಸ್ವೀಕರಿಸಿ, ನನ್ನ ಮಡದಿ ಮಕ್ಕಳ ಬೋರ್ಡಿಂಗ್

ಪಾಸ್ ನಮ್ಮ ಕೈ ಸೇರಿದಾಗ ನಿರಾಳದ ಉಸಿರು ಬಿಡುವಂತಾಯಿತು. ಆಗ ಈಗಿನ ಹಾಗೆ ಹೆಚ್ಚಿನ ಭದ್ರತಾ ನಿರ್ಬಂಧಗಳಿಲ್ಲದಿದ್ದುದರಿಂದ, ನಾನೂ ಸಹ ನನ್ನ ಮಡದಿ ಮಕ್ಕಳೊಂದಿಗೆ ಅವರು ಹೊರಡಬೇಕಾಗಿದ್ದ ನಿರ್ಗಮನದ ಗೇಟ್ ಬಳಿಯವರೆಗೂ ಹೋಗಿ, ಅವರ ಬೋರ್ಡಿಂಗ್ ಕರೆ ಬರುವವರೆಗೂ ಅವರ ಜೊತೆಯಲ್ಲೇ ಇರಲು ಸಾಧ್ಯವಾಯಿತು. ಅವರು ವಿಮಾನವನ್ನೇರುವ ಸಮಯ ಹತ್ತಿರವಾಗುತ್ತಿದ್ದಂತೆ, ನನ್ನ ಹೃದಯದ ಭಾರ ಹೆಚ್ಚಾಗತೊಡಗಿ, ಅವರ ಅಗಲಿಕೆಯನ್ನು ತಡೆಯಲು ಸಾಧ್ಯವಾಗದೆ ಕಣ್ಣಲ್ಲಿ ನೀರು ತುಂಬಿತು. ಹೇಗೋ ಸಮಾಧಾನ ಮಾಡಿಕೊಂಡು, ಅವರ ಪ್ರಯಾಣಕ್ಕೆ ಶುಭ ಕೋರಿ ಬೀಳ್ಕೊಟ್ಟದ್ದಾಯಿತು.

ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ ನನ್ನ ಸಹಪಾಠಿಯಾಗಿದ್ದ ಮಿತ್ರರೊಬ್ಬರು, ಷಿಕಾಗೊ ನಗರದ ಸಮೀಪದ ರಾಕ್ ಫೊರ್ಡ್ ಎಂಬ ನಗರದಲ್ಲಿ ವಾಸಿಸುತ್ತಿದ್ದರು. ಅವರನ್ನು ಭೇಟಿ ಮಾಡಿ ಅವರೊಂದಿಗೆ ಕೆಲವು ದಿನಗಳು ಕಳೆಯುವ ವ್ಯವಸ್ಥೆಯನ್ನು ಮೊದಲೇ ಮಾಡಿಕೊಂಡಿದ್ದೆ. ನನ್ನ ಮಡದಿ ಮಕ್ಕಳನ್ನು ಬೀಳ್ಕೊಟ್ಟ ನಂತರ, ಮೊದಲೇ ನಿಗದಿಯಾಗಿದ್ದ ನಡುರಾತ್ರಿಯ (ರೆಡ್ ಐ) ನ್ಯೂಯಾರ್ಕ್–ಷಿಕಾಗೊ ವಿಮಾನದಲ್ಲಿ ಹೊರಟು, ಷಿಕಾಗೊ ತಲುಪಿದೆ. ಮೊದಲೇ ನನ್ನ ಮಿತ್ರರು ತಿಳಿಸಿದ್ದಂತೆ ಷಿಕಾಗೊ ವಿಮಾನ ನಿಲ್ದಾಣದಿಂದ ರಾಕ್ ಫೊರ್ಡ್‌ಗೆ ಹೊರಡಲಿರುವ ಬಸ್ ಹುಡುಕಿಕೊಂಡು, ಅದರಲ್ಲಿ ಹೊರಟು ಬೆಳಗಿನ ಜಾವ ಸುಮಾರು 2 ಗಂಟೆ ಸಮಯಕ್ಕೆ ರಾಕ್ ಫೊರ್ಡ್ ತಲುಪಿದೆ. ಅಲ್ಲಿನ ಬಸ್ ನಿಲ್ದಾಣದಲ್ಲಿ ನನ್ನ ಮಿತ್ರರು ನನಗಾಗಿ ಕಾಯುತ್ತಿದ್ದು, ಅವರ ಕಾರಿನಲ್ಲಿ ತಮ್ಮ ಮನೆಗೆ ನನ್ನನ್ನು ಕರೆದೊಯ್ದರು. ನಾನು ಸುರಿನಾಮಿನಿಂದಲೇ ಅಮೆರಿಕದ ಅನೇಕ ವಿಶ್ವವಿದ್ಯಾಲಯಗಳಿಗೆ ಉದ್ಯೋಗಾಕಾಂಕ್ಷಿಯಾಗಿ ನನ್ನ ವಿದ್ಯಾಭಾಸ ಮತ್ತು ಅನುಭವಗಳ ಬಗ್ಗೆ ವಿವರಗಳನ್ನು ತಿಳಿಸಿದ್ದು, ಕೆಲವು ವಿಶ್ವವಿದ್ಯಾಲಯಗಳಿಂದ ನನ್ನ ಮನವಿಪತ್ರ ಪರೀಶೀಲನೆಯಲ್ಲಿದೆ ಎಂಬ ಪ್ರತಿಕ್ರಿಯೆ ಬಂದಿತ್ತು. ನನ್ನ ಸ್ನೇಹಿತರ ಮನೆಯಿಂದ, ಈ ಕೆಲವು ವಿಶ್ವವಿದ್ಯಾಲಯಗಳಿಗೆ ದೂರವಾಣಿಯಿಂದ ಸಂಪರ್ಕಿಸಿ, ನಾನು ಅಮೆರಿಕದಲ್ಲಿ ಕೆಲವು ದಿನಗಳು ಪ್ರವಾಸದಲ್ಲಿರುವುದಾಗಿಯೂ, ಅವರಲ್ಲಿ ನನಗೆ ಉದ್ಯೋಗದ ಸಾಧ್ಯತೆಗಳಿದ್ದರೆ, ಸಂದರ್ಶನಕ್ಕೆ ಬರಲು ಸಿದ್ಧನಿದ್ದೇನೆಂದು ತಿಳಿಸಿದೆನು. ಈ ನನ್ನ ಕರೆಗೆ, ಮಿಷಿಗನ್‌ನ ಉತ್ತರ ಪರ್ಯಾಯದ್ವೀಪದ (ಅಪ್ಪರ್ ಪೆನಿನ್ಸುಲ) ಹೂಟನ್ ನಗರದಲ್ಲಿರುವ ಮಿಷಿಗನ್ ಟೆಕ್ನಲಾಜಿಕಲ್ ಯೂನಿವರ್ಸಿಟಿಯ (ಇನ್ನು ಮುಂದೆ 'ಟೆಕ್' ಎಂದು ಸಂಬೋಧಿಸುವೆನು.) ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದವರು ಸಕ್ರಿಯವಾಗಿ ಸ್ಪಂದಿಸಿ, ನನ್ನನ್ನು ಉದ್ಯೋಗದ ಸಂದರ್ಶನಕ್ಕೆ ಆಹ್ವಾನಿಸಿದರು.

ಮರುದಿನವೇ ನಾನು ರಾಕ್ ಫೊರ್ಡ್‌ನಿಂದ ಷಿಕಾಗೊಗೆ ಹೊರಟು ಅಲ್ಲಿಂದ ವಿಮಾನದಲ್ಲಿ ಮಧ್ಯರಾತ್ರಿ 12 ಗಂಟೆ ಸುಮಾರಿಗೆ ಹೂಟನ್ ತಲುಪಿದೆನು. ವಿಮಾನ

ನಿಲ್ದಾಣದಲ್ಲಿ ಟೆಕ್‌ನ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು ನನ್ನನ್ನು ಸ್ವಾಗತಿಸಲು ಕಾಯುತ್ತಿದ್ದರು. ಅಂದು ರಾತ್ರಿ ತಮ್ಮ ಕಾರಿನಲ್ಲಿಯೇ ಹೂಟನ್ ನಗರದ ಒಂದು ವಸತಿಗೃಹಕ್ಕೆ ನನ್ನನ್ನು ಕರೆದೊಯ್ದು, ಮಾರನೆ ದಿನ ಪ್ರಾತಃಕಾಲ 8 ಗಂಟೆಗೆ ಸಿದ್ಧವಾಗಿರುವಂತೆ ತಿಳಿಸಿ ಬೀಳ್ಕೊಂಡರು. ಮರುದಿನ ನಿಗದಿಯಾಗಿದ್ದ ಸಮಯಕ್ಕೆ ಸರಿಯಾಗಿ ನಾನಿದ್ದ ವಸತಿಗೃಹದಲ್ಲಿ ಹಾಜರಾಗಿ, ಹತ್ತಿರವಿದ್ದ ಒಂದು ಉಪಾಹಾರಗೃಹದಲ್ಲಿ ಫಲಾಹಾರದ ನಂತರ ಟೆಕ್‌ನ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗಕ್ಕೆ ನನ್ನನ್ನು ಕರೆದೊಯ್ದರು. ಅಲ್ಲಿ ಮೊದಲೇ ನಿಗದಿಗೊಳಿಸಿದ್ದಂತೆ, ಮದ್ಯಾಹ್ನದವರೆಗೂ ಅನೇಕ ಪ್ರಾಧ್ಯಾಪಕರು ಒಂಟಿಯಾಗಿಯೂ ಮತ್ತು ಸಣ್ಣ ಸಣ್ಣ ಗುಂಪುಗಳಾಗಿಯೂ ನನ್ನೊಂದಿಗೆ ನನ್ನ ಉದ್ಯೋಗ ಮತ್ತು ಸಂಶೋಧನೆಗಳ ಆಸಕ್ತಿಯ ಬಗ್ಗೆ ಚರ್ಚಿಸಿದರು. ಮಧ್ಯಾಹ್ನ ಭೋಜನದ ನಂತರ ವಿಭಾಗದ ಮುಖ್ಯಸ್ಥರೊಂದಿಗೆ ನಡೆದ ಸಂದರ್ಶನದಲ್ಲಿ ಟೆಕ್, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಬಗ್ಗೆ ನನಗೆ ತಿಳಿಯಬೇಕಾದಂತ ವಿಷಯಗಳನ್ನು ತಿಳಿಸಿ, ನನ್ನ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಕೊಟ್ಟರು. ನಂತರ ಮತ್ತೊಬ್ಬ ಪ್ರಾಧ್ಯಾಪಕರು ನನ್ನನ್ನು ಹೂಟನ್ ನಗರದ ಪರಿಚಯ ಮಾಡಿಸಲು ಕರೆದೊಯ್ದರು.

ಹೂಟನ್, ಲೇಕ್ ಸುಪೀರಿಯರ್ ಬಳಿಯ ಲೇಕ್ ಪೋರ್ಟೇಜ್ ದಡದಲ್ಲಿ ಜನಸಂದಣಿಯಿಂದ ಕಲುಷಿತಗೊಳ್ಳದ ಅತಿ ರಮಣೀಯ, ನಿರ್ಮಲ, ಮತ್ತು ಪ್ರಶಾಂತವಾದ ನಗರ. ನನಗೆ ನಮ್ಮ ಭಾರತದ ಹಿಮಾಲಯ ಸಮೀಪದ ಅನೇಕ ಆಶ್ರಮಗಳಿಂದ ಕೂಡಿರುವ ಹೃಷಿಕೇಶ್ ಯಾತ್ರಾಸ್ಥಳ ನೆನಪಿಗೆ ಬಂದು, ಈ ಊರಿನ ಪರಿಸರಕ್ಕೆ ಬಹಳ ಆಕರ್ಷಿತನಾದೆ. ನಾವು ಹೂಟನ್ ನಗರವನ್ನು ಸುತ್ತಿ ಟೆಕ್‌ಗೆ ಹಿಂದಿರುಗುವಷ್ಟರಲ್ಲಿ, ನನ್ನ ಹೂಟನ್–ಮಯಾಮಿ ಪ್ರಯಾಣದ ಟಿಕೆಟ್ ಮತ್ತು ದಾರಿಯಲ್ಲಿ ಒಂದು ರಾತ್ರಿ ತಂಗಬೇಕಾಗಿದ್ದ ಸ್ಥಳದ ಹೊಟೆಲ್ ಕಾದಿರಿಸುವಿಕೆಯನ್ನು ಟೆಕ್‌ನವರು ಸಿದ್ಧಪಡಿಸಿದ್ದರು. ಇಲ್ಲಿನ ಸ್ನೇಹಮಯ ಆತಿಥ್ಯಕ್ಕೆ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿ, ಮಯಾಮಿಯ ಕಡೆ ಪ್ರಯಾಣ ಬೆಳೆಸಿದೆ. ಮಯಾಮಿ ತಲುಪಿದ ಮರುದಿನ ಪರಮಾರಿಬೊಗೆ ಹೊರಡುವ ವಿಮಾನವನ್ನು ಹಿಡಿದು ಸುರಿನಾಮ್‌ಗೆ ಹಿಂದಿರುಗಿದೆ.

ನಾನು ಸುರಿನಾಮ್ ತಲುಪಿದ ಒಂದೆರಡು ವಾರಗಳಲ್ಲಿ ಟೆಕ್‌ನವರಿಂದ ಉದ್ಯೋಗಾವಕಾಶದ ಬಗ್ಗೆ ಮಾತನಾಡಲು ಅವರನ್ನು 'ಕಲೆಕ್ಟ್ ಕಾಲ್' ಮಾಡಿ ಸಂಪರ್ಕಿಸಬೇಕೆಂಬ ತಂತಿ–ಪತ್ರ (ಟೆಲಿಗ್ರಾಮ್) ಬಂದಿತು. ಈ ಬಗ್ಗೆ ಅವರನ್ನು ಸಂಪರ್ಕಿಸಿ ಮಾತನಾಡಿದಾಗ, ಸಂದರ್ಶಕ ಪ್ರಾಧ್ಯಾಪಕ ಹುದ್ದೆಯ ಸಾಧ್ಯತೆ ಬಗ್ಗೆ ತಿಳಿಸಿ, ನನಗೂ ಈ ಹುದ್ದೆಯ ಬಗ್ಗೆ ಆಸಕ್ತಿ ಇರುವುದನ್ನು ಖಚಿತಪಡಿಸಿಕೊಂಡರು. ನಂತರ ಕೆಲವು ವಾರಗಳಲ್ಲಿ ನನ್ನ ಟೆಕ್ ಉದ್ಯೋಗ ನೇಮಕದ ಪತ್ರ ತಲುಪಿತು. ನಾನು

ಅಕ್ಟೋಬರ್‌ನಲ್ಲಿ ಭಾರತಕ್ಕೆ ಹಿಂದಿರುಗುವವನಿದ್ದೇನೆಂದೂ, ನನ್ನ ಉದ್ಯೋಗಕ್ಕೆ ಬೇಕಾದ ವೀಸ ದಾಖಲೆಗಳನ್ನು, ಭಾರತದ ವಿಳಾಸಕ್ಕೆ ಕಳಿಸಿಕೊಡಬೇಕೆಂದು ಟೆಕ್ ಅವರಲ್ಲಿ ಮನವಿಮಾಡಿಕೊಂಡೆ. ಸುರಿನಾಮಿನ ಉದ್ಯೋಗದ ಕರಾರಿನಂತೆ, ನಾನು ಮತ್ತೊಂದು ಅವಧಿಗೆ ಅಲ್ಲಿ ಮುಂದುವರಿಯಲು ಇಚ್ಛಿಸದಿದ್ದುದರಿಂದ ಅಕ್ಟೋಬರ್ 1983ರಲ್ಲಿ, ಅಲ್ಲಿಂದ ಭಾರತಕ್ಕೆ ಹೊರಡಲು ಬೇಕಾದ ದಾಖಲಾತಿಗಳು ದೊರೆತವು.

ಈ ಬಾರಿಯೂ ಸುರಿನಾಮಿನಿಂದ ನ್ಯೂಯಾರ್ಕ್ ಮಾರ್ಗವಾಗಿ ಭಾರತ ಪ್ರಯಾಣದ ಏರ್ಪಾಡು ಮಾಡಿಕೊಂಡಿದ್ದೆ. ನ್ಯೂಯಾರ್ಕ್ ರಾಜ್ಯದ ಉತ್ತರ ಭಾಗದಲ್ಲಿರುವ ಓಗ್ಡನ್ಸ್ ಬರ್ಗ್ ಎಂಬ ಊರಿನಲ್ಲಿ, ನನ್ನ ತಂಗಿಯ ಆಪ್ತ ಮತ್ತು ಬಾಲ್ಯ ಸ್ನೇಹಿತೆ (ಲಕ್ಷ್ಮಿ) ವಾಸಿಸುತ್ತಿದ್ದಳು. ನ್ಯೂಯಾರ್ಕ್‌ನಲ್ಲಿರುವಾಗ ಆಕೆಯನ್ನೂ ಭೇಟಿಯಾಗುವ ಇಚ್ಛೆಯಿಂದ, ಅವರ ಊರಿಗೆ ಸಮೀಪವಾಗಿದ್ದ ಸಿರಾಕ್ಯೂಸ್ ನಗರದ ವಿಮಾನ ನಿಲ್ದಾಣಕ್ಕೆ ಬಂದಿಳಿದೆ. ಅಲ್ಲಿ ಲಕ್ಷ್ಮಿ ಮತ್ತು ಅವರ ಪತಿ (ಗೋಪಾಲ್) ನನ್ನನ್ನು ಸ್ವಾಗತಿಸಲು ಕಾದಿದ್ದು, ಅಲ್ಲಿಂದ ಸುಮಾರು 2 ಗಂಟೆ ಅವರ ಕಾರಿನಲ್ಲಿ ಪ್ರಯಾಣ ಮಾಡಿ ಓಗ್ಡನ್ಸ್ ಬರ್ಗ್ ಊರನ್ನು ತಲುಪಿದೆವು. ಇದೂ ಒಂದು ಚಿಕ್ಕ, ಚೊಕ್ಕಟವಾದ ಸುಂದರ ನಗರ. ಅವರೊಂದಿಗೆ ಎರಡು ದಿನಗಳು ಬಹಳ ಆಹ್ಲಾದಕರವಾಗಿ ಕಳೆದು, ನ್ಯೂಯಾರ್ಕ್ ನಗರಕ್ಕೆ ಹಿಂದಿರುಗಿ, ಮುಂಬೈಗೆ ಹೊರಡುವ ಏರ್-ಇಂಡಿಯ ವಿಮಾನವನ್ನು ಹಿಡಿದು, ಬೆಂಗಳೂರಿಗೆ ಪ್ರಯಾಣ ಬೆಳೆಸಿದೆ. ಬೆಂಗಳೂರು ತಲುಪುತ್ತಿದ್ದಂತೆ, ಏನೋ ಒಂದು ಬಗೆಯ ಭಾವೋದ್ವೇಗ, ಸಂಭ್ರಮ ಮತ್ತು ಕಾತರದ ಮನಸ್ಥಿತಿ ಎದೆಯ ಬಡಿತವನ್ನು ಹೆಚ್ಚಿಸಿತ್ತು. ಬೆಂಗಳೂರನ್ನು ತಲುಪಿ, ಬಂಧು-ಮಿತ್ರರ ಮಿಲನ, ಕುಶಲೋಪರಿ, ಸಂತೋಷ ಕೂಟಗಳು ಮುಂತಾದ ಸಡಗರಗಳಲ್ಲಿ ದಿನಗಳು ಕ್ಷಣಗಳಂತೆ ಕಳೆದವು.

ಹೀಗೆ ದಿನಗಳು ಕಳೆಯುತ್ತಿದ್ದಾಗ, ಮೊದಲೇ ನಿರೀಕ್ಷಿಸುತ್ತಿದ್ದಂತೆ ಟೆಕ್‌ನಿಂದ ಉದ್ಯೋಗಕ್ಕೆ ಸಂಬಂಧಿಸಿದ ವೀಸಾ ಪಡೆಯಲು ಬೇಕಾದ ದಾಖಲಾತಿ ಪತ್ರಗಳು ನನ್ನ ಕೈ ಸೇರಿದುವು. ಸರಿ, ಇನ್ನು ನಮ್ಮ ಅಮೆರಿಕ ಪ್ರಯಾಣದ ಸಿದ್ಧತೆಯ ಪ್ರಮುಖ ಅಂಶ, ಚೆನ್ನೈ (ಆಗಿನ್ನೂ ಮದ್ರಾಸ್)ನ ಅಮೆರಿಕದ ರಾಯಭಾರಿ ಕಛೇರಿಯಿಂದ ವೀಸ ಪಡೆದುಕೊಳ್ಳುವುದಾಗಿತ್ತು. ನಾನು ವೀಸಾಗೆ ಬೇಕಾದ ದಾಖಲಾತಿಗಳ ಸಮೇತ ಚೆನ್ನೈಗೆ ಹೋಗಿ ನನ್ನ ಅಹವಾಲನ್ನು ಸಲ್ಲಿಸಿದರೆ, ಅಲ್ಲಿನ ದೂತಾವಾಸದ ಅಧಿಕಾರಿಗಳು ನನ್ನ ವೀಸ ಪತ್ರಗಳು ತಾತ್ಕಾಲಿಕ ಅಮೆರಿಕ ವಾಸಕ್ಕೆ (non-immigrant visa) ಸಂಬಂಧಪಟ್ಟಿದ್ದು, ನಾನು ಮತ್ತು ನನ್ನ ಸಂಸಾರ ಅಮೆರಿಕಕ್ಕೆ ಹೋದರೆ ಹಿಂದಿರುಗುವ ಭರವಸೆ ಇಲ್ಲವೆಂದು, ವೀಸ ಅನುಮತಿ ಕೊಡಲು ನಿರಾಕರಿಸಿದರು. ಬಂದ ದಾರಿಗೆ ಸುಂಕವಿಲ್ಲವೆಂಬಂತೆ, ನಿರಾಶೆಯಿಂದ ಬೆಂಗಳೂರಿಗೆ ಹಿಂದಿರುಗಿ, ಟೆಕ್‌ಗೆ ದೂರವಾಣಿ ಕರೆ ಮಾಡಿ ವಿಷಯವನ್ನು ತಿಳಿಸಿದೆ. ನನಗೆ ನಿರಾಶನಾಗಬಾರದೆಂದೂ, ಟೆಕ್‌ನವರು

ದೂತಾವಾಸದ ಅಧಿಕಾರಿಗಳನ್ನು ಸಂಪರ್ಕಿಸಿ ನನ್ನ ಟೆಕ್ ಉದ್ಯೋಗವನ್ನು ಖಾಯಂ ಮಾಡುವುದಿಲ್ಲವೆಂದೂ, ನನಗೆ ವೀಸಾ ಅನುಮತಿ ಕೊಡುವಂತೆ ವಿನಂತಿಸಿಕೊಳ್ಳುವರೆಂದೂ ತಿಳಿಸಿದರು.

ಇದಾದ ಕೆಲವು ದಿನಗಳ ನಂತರ ಟೆಕ್‌ನಿಂದ ಬಂದ ತಂತಿ-ಪತ್ರದಲ್ಲಿ ಅವರು ದೂತಾವಾಸದ ಕಛೇರಿಗೆ ಸಲ್ಲಿಸಿದ ಮನವಿಯ ಬಗ್ಗೆ ತಿಳಿಸಿ, ನನಗೆ ಮತ್ತೊಮ್ಮೆ ವೀಸ ಪಡೆಯಲು ಪ್ರಯತ್ನಿಸಬೇಕೆಂದು ತಿಳಿಸಿದರು. ಮತ್ತೆ ಚೆನ್ನೈಗೆ ಹೋಗಿ ವೀಸಕ್ಕೆ ಅರ್ಜಿ ಸಲ್ಲಿಸಿದರೆ, ಈ ಬಾರಿಯೂ ವೀಸ ಅನುಮತಿಯ ನಿರಾಕರಣೆಯ ನಿರಾಶೆ ಕಾದಿತ್ತು. ಮತ್ತೆ ಬೆಂಗಳೂರಿಗೆ ಬಂದು ಟೆಕ್‌ನವರನ್ನು ಸಂಪರ್ಕಿಸಿ ವಿಷಯ ತಿಳಿಸಿದೆ. ಈ ಬಾರಿಯೂ ಟೆಕ್‌ನವರು ನನಗೆ ಬೆಂಬಲವಾಗಿ, ನನ್ನ ವೀಸ ಬಗ್ಗೆ ಮಿಷಿಗನ್ ರಾಜ್ಯದ ಅಮೆರಿಕ ಸೆನೇಟರ್ ಶಿಫಾರಸನ್ನು ಪಡೆಯಲು ಪ್ರಯತ್ನಿಸುವುದಾಗಿಯೂ, ನಾನೂ ಸೆನೇಟರ್ ಕಛೇರಿಗೆ ದೂರವಾಣಿ ಮೂಲಕ ಸಂಪರ್ಕಿಸಲು ಸಲಹೆ ಮಾಡಿದರು. ಇದಾದ ಕೆಲವು ದಿನಗಳ ನಂತರ, ಟೆಕ್‌ನವರು ತಿಳಿಸಿದ್ದ ಮಿಷಿಗನ್‌ನ ಸೆನೇಟರ್ ಕಛೇರಿಯ ದೂರವಾಣಿ ಸಂಖ್ಯೆಗೆ ಕರೆಮಾಡಿದರೆ, ಅಲ್ಲಿ ನನ್ನ ಕರೆ ಸ್ವೀಕರಿಸಿದ ಉದ್ಯೋಗಿಗೆ ನನ್ನ ವಿಷಯ ಆಗಲೇ ತಿಳಿದಿದ್ದು, ನನ್ನ ಬಗ್ಗೆ ಕೆಲವು ವಾಸ್ತವಾಂಶಗಳನ್ನು ವಿಚಾರಿಸಿ, ಅದಾದ ಕೆಲವು ದಿನಗಳ ನಂತರ ಮತ್ತೊಮ್ಮೆ ವೀಸ ಕಛೇರಿಗೆ ಹೋಗಿ ಪ್ರಯತ್ನಿಸುವಂತೆ ಸಲಹೆ ಮಾಡಿದಳು. ಕೊನೆಯ ಪ್ರಯತ್ನವಾಗಿ ಮತ್ತೊಮ್ಮೆ ಚೆನ್ನೈಗೆ ಹೋಗಿ, ವೀಸ ಅಧಿಕಾರಿಯ ಮುಂದೆ ನನ್ನ ಅಹವಾಲನ್ನು ಮಂಡಿಸಿದೆ. ಈ ಬಾರಿ, ಅವರಿಗೆ ಸೆನೇಟರ್ ಶಿಫಾರಸು ಪತ್ರ ಮತ್ತು ಟೆಕ್‌ನ ಭರವಸೆ ಪತ್ರಗಳು ತಲುಪಿದ್ದು, ನನಗೂ ನನ್ನ ಮಡದಿ ಮತ್ತು ಮಕ್ಕಳಿಗೂ 'ಜೆ' ವೀಸದ ಅನುಮತಿ ದೊರೆಯಿತು.

ಇನ್ನು ಅಮೆರಿಕ ಪ್ರಯಾಣಕ್ಕೆ ಡಿಸೆಂಬರ್ 22ರಂದು ಹೊರಟು ನ್ಯೂಯಾರ್ಕ್ ಮೂಲಕ ಹೂಟನ್‌ಗೆ ಡಿಸೆಂಬರ್ 24ರಂದು ತಲಪುವಂತೆ ಪಾನ್‌ಆಮ್ ವಿಮಾನದಲ್ಲಿ ನಾನು ನನ್ನ ಸಂಸಾರ ಒಟ್ಟಿಗೆ ಪ್ರಯಾಣ ಮಾಡುವ ವ್ಯವಸ್ಥೆ ಮಾಡಿಕೊಂಡೆವು. ನಾವು ಹೊರಟ ವಿಮಾನ ನಿಗದಿಯ ಸಮಯಕ್ಕಿಂತ ಕೆಲವು ಗಂಟೆಗಳ ತಡವಾಗಿ ನ್ಯೂಯಾರ್ಕ್ ತಲುಪಿದ್ದರಿಂದ, ನಾವು ಆ ರಾತ್ರಿ ನ್ಯೂಯಾರ್ಕ್‌ನಲ್ಲೇ ಕಳೆಯಬೇಕಾಗಿ ಮಾರನೆಯ ದಿನ ಮಿನಿಯಾಪೊಲಿಸ್ ಮೂಲಕ ಹೂಟನ್ ತಲಪುವಂತೆ ನಮ್ಮ ಪ್ರಯಾಣ ಬದಲಾಯಿತು. ಮಿನಿಯಾಪೊಲಿಸ್‌ನಿಂದ ಹೂಟನ್‌ಗೆ ಹೊರಡುವ ವಿಮಾನ ಅಂದಿನ ಹವಾಮಾನದ ವೈಪರೀತ್ಯದಿಂದ ರದ್ದು ಪಡಿಸಿದ್ದರಿಂದ, ಅಂದು ರಾತ್ರಿ ಮಿನಿಯಾಪೊಲಿಸ್‌ನಲ್ಲಿಯೇ ಉಳಿಯಬೇಕಾಗಿ ಬಂದು, ಮರುದಿನ ಮುಂಜಾನೆ ಹೂಟನ್‌ಗೆ ಹೋಗುವಂತಾಯಿತು. ಕೊನೆಗೆ ಡಿಸೆಂಬರ್ 25ನೇ ತಾರೀಕು, 1983ರ ಕ್ರಿಸ್ಮಸ್ ದಿನದಂದು ಬೆಳಗ್ಗೆ ಸುಮಾರು 11 ಗಂಟೆಗೆ ಹೂಟನ್ ವಿಮಾನ ನಿಲ್ದಾಣದಲ್ಲಿ ಬಂದು ಇಳಿದೆವು.

ವಿಮಾನದಿಂದ ಹೊರ ಬಂದರೆ ನಮಗೆ ಒಂದು ವಿಸ್ಮಯ ಮತ್ತು ವಿಚಿತ್ರ

ಪ್ರಪಂಚವನ್ನು ಹೊಕ್ಕ ಅದ್ಭುತ ಮತ್ತು ಗಾಬರಿಯ ಅನುಭವವಾಯಿತು. ಸುತ್ತ ಎಲ್ಲಿ ನೋಡಿದರೂ ಹಿಮದ ರಾಶಿ ತುಂಬಿಕೊಂಡಿದ್ದು, ಭೂಮಿತಾಯಿ ಬಿಳಿಯ ವಸ್ತ್ರ ತೊಟ್ಟುಕೊಂಡಂತೆ ಎಲ್ಲೆಲ್ಲೂ ಶ್ವೇತಮಯವಾಗಿ ಕಂಡಿತು. ಜೊತೆಗೆ ಇಲ್ಲಿನ ಉಷ್ಣಾಂಶ ಸುಮಾರು –5 ಡಿಗ್ರೀ ಸೆಲ್ಷಿಯಸ್‌ನಷ್ಟಿದ್ದು, ಚಳಿಯಿಂದ ಮೈ ನಡುಕ ನಿಲ್ಲಲಾರದೆ ಚಡಪಡಿಸುವಂತಾಯಿತು. ಜೊತೆಗೆ ನಾವು ಭಾರತದಿಂದ ಹೊರಡುವಾಗ ಇಲ್ಲಿನ ಚಳಿಯ ಬಗ್ಗೆ ಅಷ್ಟು ಗಮನ ಹರಿಸದೆ, ಈ ಚಳಿಗೆ ಸರಿಯಾದ ಉಡುಪುಗಳನ್ನು ಧರಿಸಿರಲಿಲ್ಲ. ಅಂದು ವಿಮಾನ ನಿಲ್ದಾಣದಲ್ಲಿ ನಮ್ಮನ್ನು ಕಂಡವರು ಇವರು ಯಾರೋ ಬಹುಶಃ ಅನ್ಯಲೋಕದ ವಿಚಿತ್ರ ಪ್ರಾಣಿಗಳೆಂದು ತಿಳಿದಿರಲೂ ಸಾಕು! ವಿಮಾನ ನಿಲ್ದಾಣದಲ್ಲಿ ನಮ್ಮನ್ನು ಸ್ವಾಗತಿಸಲು ಟೆಕ್‌ನ ಎಲೆಕ್ಟ್ರಿಕಲ್ ವಿಭಾಗದ ಸಹಾಯಕ ಮುಖ್ಯಸ್ಥರು ಕಾಯುತ್ತಿದ್ದು, ನಮ್ಮನ್ನು ಕನ್ನಡದವರೇ ಆದ ಮತ್ತೊಬ್ಬ ಪ್ರಾಧ್ಯಾಪಕರ ಮನೆಗೆ ಕರೆದೊಯ್ದರು. ಈ ಸ್ನೇಹಿತರು ತಮ್ಮ ಮನೆಯಲ್ಲಿಯೇ ನಮಗೆಲ್ಲ ಆ ದಿನದ ಆತಿಥ್ಯವನ್ನು ಕೊಟ್ಟು, ಮಾರನೆ ದಿನ ನಮಗೆ ನಿಗದಿಯಾಗಿದ್ದ ಟೆಕ್ ವಸತಿ ಗೃಹಕ್ಕೆ ತಲುಪಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ನಮ್ಮನ್ನು ವಿಮಾನ ನಿಲ್ದಾಣದಿಂದ ಕರೆತಂದ ಟೆಕ್ ಮಿತ್ರರು, ನಮಗೆ ತಕ್ಷಣಕ್ಕೆ ಬೇಕಾಗಬಹುದಾದ ಖರ್ಚಿಗೆಂದು, ಮೊದಲೇ ಸಿದ್ಧಪಡಿಸಿಕೊಂಡು ಬಂದಿದ್ದ ಮುಂಗಡ ಹಣದ ಚೆಕ್‌ಅನ್ನು ನನ್ನ ಕೈಗೆ ಕೊಟ್ಟು ನಮ್ಮೆಲ್ಲರಿಗೂ ಶುಭ ಹೇಳಿ ನಮ್ಮನ್ನು ಬೀಳ್ಕೊಂಡರು. ಆದಿನ ಸಂಜೆಯೇ ನಮ್ಮ ಹೊಸ ಕನ್ನಡ ಮಿತ್ರರ ಸಹಾಯದಿಂದ ಸಮೀಪದ ಶಾಪಿಂಗ್ ಮಾಲ್‌ಗೆ ಹೋಗಿ ನಮ್ಮೆಲ್ಲರಿಗೂ ಅಗತ್ಯವಾಗಿ ಬೇಕಾಗಿದ್ದ ಚಳಿಗಾಲದ ಉಡುಪುಗಳನ್ನು ಕೊಂಡು, ಅವುಗಳನ್ನು ಅಲ್ಲಿಂದಲೇ ಧರಿಸಿಕೊಂಡು ಹಿಂದಿರುಗಿದೆವು! ಮಾರನೆ ದಿನ ನಮಗೆ ಆತಿಥ್ಯ ಕೊಟ್ಟಿದ್ದ ಕನ್ನಡ ಮಿತ್ರರು ನಮ್ಮನ್ನು ನಿಗದಿಯಾಗಿದ್ದ ವಸತಿಗೃಹಕ್ಕೆ ಕರೆದೊಯ್ದು ನಮಗೆಲ್ಲ ಶುಭ ಹಾರೈಸಿ ಮತ್ತೆ ಭೇಟಿಯಾಗುವ ಭರವಸೆಯನ್ನಿತ್ತು ಹಿಂದಿರುಗಿದರು. ಇದು ನಾವು ಅಮೆರಿಕಕ್ಕೆ ವಲಸೆ ಬಂದ ದಾರಿಯ ಕತೆ. ಇಲ್ಲಿಂದ ಪ್ರಾರಂಭವಾಯಿತು ನಮ್ಮ ಅಮೆರಿಕದ ಜೀವನ.

ಅಮೆರಿಕ – ಒಂದು ವಿಶಿಷ್ಟ ರಾಷ್ಟ್ರವೆ?



– ಇಂಗ್ಲೀಷ್ ಮೂಲ: ಗುಂಡು ಶಂಕರ್
ಅನುವಾದ: ಶ್ರೀಕಾಂತ ಬಾಬು. ಚಂದ್ರಶೇಖರ್

ನಾನು ಅಮೆರಿಕಕ್ಕೆ ಬಂದು ನೆಲೆಸಿ ಈಗಾಗಲೇ 30 ವರ್ಷಕ್ಕೂ ಮೇಲಾಯಿತು. ಈವರೆವಿಗೆ ನಾನು ಭಾರತಕ್ಕಿಂತ ಅಮೆರಿಕದಲ್ಲೇ ಹೆಚ್ಚು ಕಾಲವನ್ನು ಕಳೆದಿದ್ದೇನೆ. ನನ್ನ ಅನೇಕ ಸ್ನೇಹಿತರಂತೆ, ಭಾರತಕ್ಕಿಂತ ಎಲ್ಲ ರೀತಿಯಲ್ಲೂ ಉತ್ತಮವಾಗಿರುವಂತೆ ತೋರುತ್ತಿದ್ದ ಅಮೆರಿಕದಲ್ಲಿನ ಉನ್ನತ ಜೀವನವನ್ನರಸಿ ನಾನೂ ಇಲ್ಲಿಗೆ ಬಂದೆ. ಆ ಸಮಯದಲ್ಲಿ ನಮ್ಮೆಲ್ಲರಿಗೂ ಅಮೆರಿಕ ಹಾಲು–ಜೇನುಗಳ ಸಂಗಮದಂತೆ ಸುಮಧುರವೂ ಸುಂದರವೂ ಆಗಿ ಕಾಣುತ್ತಿತ್ತು. ಇಲ್ಲಿ ಉತ್ತಮ ಜೀವನವನ್ನು ನಡೆಸುವುದಷ್ಟೇ ಅಲ್ಲದೆ ಅನೇಕ ರೀತಿಯ ಸಾಧನೆಗಳನ್ನು ಮಾಡಿ ಇನ್ನೂ ಮೇಲೆ ಬರುವ ಅವಕಾಶಗಳಿರುವಂತೆ ತೋರುತ್ತಿತ್ತು. ಅಷ್ಟಲ್ಲದೆ ನಮ್ಮ ದೇಶದಲ್ಲಿದ್ದ ತಂದೆ–ತಾಯಿಗಳಿಗೆ ಒಳ್ಳೆಯ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸಾಧ್ಯವಿತ್ತು.

1970ರ ದಶಕಗಳಲ್ಲಿ ನನ್ನ ವ್ಯಕ್ತಿತ್ವ ರೂಪಿತವಾಯಿತು. ಸ್ವತಂತ್ರ ಭಾರತದ ಕನಸುಗಳು, ಸ್ವಾತಂತ್ರ್ಯ ಹೋರಾಟ ಕಾಲದ ಆದರ್ಶ ವ್ಯಕ್ತಿಗಳೆಲ್ಲಾ ಒಬ್ಬೊಬ್ಬರಾಗಿ ಮರೆಯಾಗುತ್ತಿದ್ದರು. ನನ್ನ ತಂದೆಯ ಪೀಳಿಗೆಯವರು ದೇಶದ ಸ್ವಾತಂತ್ರ್ಯಕ್ಕಾಗಿ ಜೈಲಿಗೂ ಹೋಗಿದ್ದರು. ಅವರೆಲ್ಲರಿಗೂ ನಿಧಾನವಾಗಿ ಗಾಂಧೀವಾದದ ಆದರ್ಶಗಳಲ್ಲಿ ವಿಶ್ವಾಸ ಹೋಗಿತ್ತು. ನೆಹರೂವಿನ ಸಮಾಜವಾದ, ಪಂಚವಾರ್ಷಿಕ ಯೋಜನೆಗಳು ವಿಫಲವಾಗಿದ್ದವು. ನಾವು ಕಾಲೇಜ್ ಮುಗಿಸುವ ಹೊತ್ತಿಗೆ ದೇಶದ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಒಟ್ಟು ವಾತಾವರಣ ಭ್ರಷ್ಟಾಚಾರ ಮತ್ತು ಕೋಮುವಾದಗಳಿಂದ ಹೊಲಸಾಗಿ ನಮ್ಮ ಭವಿಷ್ಯದಲ್ಲಿ ನಮಗೇ ವಿಶ್ವಾಸವಿರಲಿಲ್ಲ. ಹೀಗಾಗಿ ನಾನು ಮತ್ತು ನನ್ನಂತಹ ಅನೇಕ ತರುಣರು ಅಮೆರಿಕಕ್ಕೆ ಬರುವ ನಿರ್ಧಾರ ಮಾಡಿದ್ದೆವು. ಅದು ಅಷ್ಟೇನೂ ಸುಲಭವಾದ ನಿರ್ಧಾರವಾಗಿರಲಿಲ್ಲ.

ಈಗಲೂ ನನಗೆ ಒಮ್ಮೊಮ್ಮೆ ಇಲ್ಲಿಗೆ ಬಂದು ನನ್ನ ಹುಟ್ಟು ದೇಶಕ್ಕೆ ದ್ರೋಹ ಮಾಡಿದೆನೇನೋ ಮತ್ತು ನನ್ನ ನಿರ್ಧಾರ ಸರಿಯೆ ಎನ್ನುವ ಅನುಮಾನ ಕಾಡುತ್ತದೆ. ನನ್ನ ಪ್ರಾಮಾಣಿಕ ಅನಿಸಿಕೆಯೆಂದರೆ, ನಾನು ಭಾರತೀಯ ಮತ್ತು ಅಮೆರಿಕನ್ ಎರಡೂ ಆಗಿದ್ದೇನೆ. ಬಹುಶಃ ಸ್ವದೇಶವನ್ನು ಬಿಟ್ಟು ಪರದೇಶಕ್ಕೆ ವಲಸೆ ಹೋಗುವ ಮೊದಲ ಪೀಳಿಗೆಗಳೆಲ್ಲವೂ ಈ ರೀತಿಯ ದ್ವಂದ್ವ ಮತ್ತು ಇಬ್ಬಂದಿತನದಲ್ಲಿ

ಸಿಲುಕಿರುತ್ತಾರೆಂದೆನಿಸುತ್ತದೆ.

ನಾನು ಈ ದೇಶಕ್ಕೆ ವಲಸೆ ಬರುವ ನನ್ನ ನಿರ್ಧಾರದ ಬಗ್ಗೆ ವಿಮರ್ಶಿಸಿಕೊಂಡಾಗಲೆಲ್ಲಾ ನನ್ನ ಮನಸ್ಸಿಗೆ ಕೆಲವು ಗೊಂದಲಗಳು ಮೂಡಿ ಬಂದು ಹೋಗುತ್ತವೆ. ಆಗಾಗ್ಗೆ 'ಹೌದು, ನನ್ನ ಸ್ವದೇಶದ ಸ್ಥಿತಿ ಉತ್ತಮವಾಗಿರಲಿಲ್ಲ. ಆದರೆ ನಾನು ನನ್ನ ಹೊಸ ದೇಶ, ಅಮೆರಿಕದ ಬಗ್ಗೆ ಎಷ್ಟು ತಿಳಿದುಕೊಂಡಿದ್ದೇನೆ?' ಎಂಬ ವಿಚಾರ ಏಳುತ್ತದೆ. ಹಿಂದೆಯೇ, ಎರಡು ಮುಖ್ಯ ಪ್ರಶ್ನೆಗಳು ನನ್ನನ್ನು ಕಾಡುತ್ತವೆ:

1. ಅಮೆರಿಕ ನಿಜವಾಗಲೂ ಹಾಲು–ಜೇನುಗಳ ಸಂಗಮದಂತೆ ಸುಮಧುರವೂ ಸುಂದರವೂ ಆದ ದೇಶವೇ ಮತ್ತು ಇಲ್ಲಿ ನಿಜವಾಗಲೂ ಎಲ್ಲರಿಗೂ (ಬೇರೆಬೇರೆ ದೇಶ ಮೂಲದ ಮತ್ತು ಎಲ್ಲ ಮತದವರಿಗೂ) ಸಮಾನ ಅವಕಾಶ ಇದೆಯೇ?

2. ಅಮೆರಿಕದಲ್ಲಿ ನಿಜವಾಗಲೂ ಅತ್ಯುತ್ತಮವಾದ ಪ್ರಜಾಪ್ರಭುತ್ವವಿದೆಯೇ? ಯಾಕೆ ವಿಶ್ವದ ಇತರ ರಾಷ್ಟ್ರಗಳಿಗೆ ಅಮೆರಿಕದ ಬಗ್ಗೆ ಎರಡು ಭಿನ್ನ ರೀತಿಯ ಅಭಿಪ್ರಾಯಗಳಿವೆ?

ನಾನು ಈ ಲೇಖನದಲ್ಲಿ ಈ ಎರಡೂ ಪ್ರಶ್ನೆಗಳಿಗೆ ಉತ್ತರವನ್ನು ನನ್ನದೇ ರೀತಿಯಲ್ಲಿ ಸಕಾರಣವಾಗಿ ಪಡೆಯಲು ಪ್ರಯತ್ನಿಸಿದ್ದೇನೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಹಲವರು ಇದನ್ನು ಒಪ್ಪದೇ ಇರಬಹುದು.

ಭಾರತವನ್ನು ಬಿಟ್ಟು ಬಂದುದನ್ನು ಕುರಿತು

ಭಾರತ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದು ಮೂರು ದಶಕಗಳ ಮೇಲಾಗಿದ್ದರೂ, ಪ್ರಜಾಪ್ರಭುತ್ವದ ವ್ಯವಸ್ಥೆ ಇನ್ನೂ ಪ್ರಯೋಗಾವಸ್ಥೆಯಲ್ಲೇ ಇತ್ತು. ಭಾರತ ಅಂತರ–ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಲು ಇನ್ನೂ ಹೆಣಗಾಡುತ್ತಿತ್ತು. ಸ್ವಾತಂತ್ರ್ಯದ ನಂತರದ ವರ್ಷಗಳಲ್ಲಿ ದೊಡ್ಡ–ದೊಡ್ಡ ಕನಸುಗಳು, ಭವ್ಯಕಲ್ಪನೆಗಳು ಆ ಕಾಲದ ಮಹಾ ಪೀಳಿಗೆಗೆ ಆಶಾದಾಯಕವಾಗಿದ್ದವು. (ಅಮೆರಿಕಾದ ಪ್ರಸಿದ್ಧ ಪತ್ರಕರ್ತ ಟಾಮ್‌ಬ್ರೋಕಾ ಅಮೆರಿಕಾದ 'ಘೋರ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಬೆಳೆದು, ಎರಡನೇ ಮಹಾಯುದ್ಧದಲ್ಲಿ ಯುದ್ಧಕ್ಕೆ ಹೋದದ್ದೂ ಅಲ್ಲದೇ ತವರಿನಲ್ಲೇ ಉಳಿದು ಅಲ್ಲಿನ ಆರ್ಥಿಕ ಬೆಳವಣಿಗೆಗೆ ತಮ್ಮ ಅಮೋಘ ಸೇವೆ ಸಲ್ಲಿಸಿದ ಒಂದು ಪೀಳಿಗೆಯನ್ನು 'ಮಹಾ ಪೀಳಿಗೆ' ಎಂದು ಕರೆದಿದ್ದಾನೆ. ಅದೇ ರೀತಿ, ನಮ್ಮ ಮುಂದಿದ್ದ ಸವಾಲುಗಳನ್ನು ನಿಭಾಯಿಸಿದಲ್ಲಿ ನಾವೂ ಇಂಥ ಒಂದು ಮಹಾಪೀಳಿಗೆಗೆ ಸೇರುವ ಅವಕಾಶವಿತ್ತು.) ಆದರೆ ಮೂರು ದಶಕಗಳಲ್ಲಿ ಆಸೆಗಳೆಲ್ಲವೂ ನುಚ್ಚು ನೂರಾಗಿದ್ದವು. ನನ್ನಂತಹ ಯುವ ಪೀಳಿಗೆಗೆ ಅಲ್ಲಿನ ವ್ಯವಸ್ಥೆ ನಿರಾಶಾದಾಯಕವಾಗಿತ್ತು. ನಮ್ಮ ಜನ–ಜೀವನಕ್ಕೂ, ರಾಜಕೀಯ ವ್ಯವಸ್ಥೆಗೂ ಯಾವುದೇ ಸಂಬಂಧವಿರುವಂತೆ ತೋರುತ್ತಿರಲಿಲ್ಲ.

ಯುವಜನತೆಗೆ ಉತ್ತಮ ಕಾಲೇಜುಗಳ ಮತ್ತು ನಂತರದಲ್ಲಿ ಸೂಕ್ತ ಕೆಲಸವನ್ನು ಪಡೆಯುವ ಅವಕಾಶಗಳು ಬೇಕಿತ್ತು. ನನ್ನ ದೃಷ್ಟಿಯಲ್ಲಿ ಭಾರತ ರಾಷ್ಟ್ರೀಯ ಮಟ್ಟದಲ್ಲಿ ಮತ್ತು ಅಂತರ-ರಾಷ್ಟ್ರೀಯ ಮಟ್ಟದಲ್ಲಿ ಸೋಲುತ್ತಿರುವಂತೆ ಕಂಡಿತ್ತು. ದೇಶದ ಆರ್ಥಿಕ ಸ್ಥಿತಿ ತುಂಬಾ ದುರ್ಬಲವಾಗಿತ್ತು. ಹೊರ ದೇಶಗಳ ದೃಷ್ಟಿಯಿಂದ ಭಾರತ ಒಂದು 'ಬಡ' ರಾಷ್ಟ್ರವಾಗಿತ್ತು. ಒಟ್ಟಾರೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತ ಒಂದು ದುರ್ಬಲ ದೇಶವಾಗಿ ಕಾಣುತ್ತಿತ್ತು.

ನಮ್ಮಂತಹ ವಿದ್ಯಾವಂತ ಯುವಕರಿಗೇ ಕೆಲಸಗಳು ಸಿಗುವುದು ದುಸ್ತರವಾಗಿತ್ತು. ಒಂದೆಡೆ ಶೈಕ್ಷಣಿಕ ಸಂಸ್ಥೆಗಳು ಕಾರ್ಖಾನೆಯಂತೆ ವಿಜ್ಞಾನ ಮತ್ತು ತಂತ್ರಜ್ಞಾನದ ಪದವಿಗಳನ್ನು ದಯಪಾಲಿಸುತ್ತಿದ್ದರೂ ಅವರಿಗೆ ಸೂಕ್ತ ಕೆಲಸಗಳು ಇರಲಿಲ್ಲ. ಅವಕಾಶಗಳು ತುಂಬಾ ಕಡಿಮೆ ಇದ್ದವು. ಸ್ವಾತಂತ್ರ್ಯದ ನಂತರ ಸರಕಾರದ ರೀತಿ ನೀತಿಗಳು ಬ್ರಿಟಿಷ್ ಮಾದರಿಯನ್ನು ಅನುಕರಿಸಿ ದುರ್ಬಲರ ಶೋಷಣೆಗಳು ಯಥಾವತ್ತಾಗಿ ಮುಂದುವರಿದವು. ದೇಶದ ಬೆಳವಣಿಗೆಗೆ ಕಾರಣೀಭೂತ-ವಾಗಬಲ್ಲುದಾದ ಸೊತ್ತುಗಳನ್ನು ರಾಷ್ಟ್ರೀಕರಿಸಲಾಯಿತು. ಅವೆಲ್ಲವೂ ಸರಕಾರೀ ನಿಯಂತ್ರಣಗಳಿಗೆ ಒಳಪಟ್ಟವು. ರಷ್ಯಾದ ಸಮಾಜವಾದವನ್ನು ಆಧರಿಸಿ ತಯಾರಿಸಲ್ಪಟ್ಟ ಪಂಚವಾರ್ಷಿಕ ಕೇಂದ್ರೀಯ ಯೋಜನೆಗಳನ್ನು ಸರಕಾರೀ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಒತ್ತುಕೊಟ್ಟು ಪ್ರಾರಂಭಿಸಲಾಯಿತು. ಆದರೆ ಈ ಸಂಸ್ಥೆಗಳನ್ನು ಬೆಳೆಸುವುದರಲ್ಲಿ ಈ ಯೋಜನೆಗಳು ಸೋತವು. ಬಹುತೇಕ ಏಕಕಾಲದಲ್ಲಿ ಸ್ವಾತಂತ್ರ್ಯ ಪಡೆದ 5 ರಾಷ್ಟ್ರಗಳಲ್ಲಿ (ಭಾರತ, ಪಾಕಿಸ್ತಾನ, ದಕ್ಷಿಣ ಕೊರಿಯ, ಇಂಡೋನೇಷಿಯ ಮತ್ತು ಥಾಯ್ಲಂಡ್) ಭಾರತದ ಆರ್ಥಿಕ ಬೆಳವಣಿಗೆಯ ವೇಗ ಕೊನೆಯ ಸ್ಥಾನದಲ್ಲಿತ್ತು. ಭಾರತದ ಈ ಬೆಳವಣಿಗೆಯ ವೇಗವನ್ನು ಬಹುಕಾಲ 'Hindu rate of growth' ಎಂದು ಹಂಗಿಸಲಾಗುತ್ತಿತ್ತು. ಒಂದೇ ಒಂದು ಕ್ಷೇತ್ರದಲ್ಲಿ ಭಾರತ ಅಭಿವೃದ್ಧಿ ಸಾಧಿಸಿತು– ಅದು 'ಹಸಿರು ಕ್ರಾಂತಿ'ಯಲ್ಲಿ. ಇದರ ಮೂಲಕ ಭಾರತ ಕೃಷಿಯಲ್ಲಿ ಸ್ವಾವಲಂಬನೆಯನ್ನು ಪಡೆಯಿತು.

ಜಾಗತಿಕ ಮಟ್ಟದಲ್ಲಿ ಭಾರತ ತನ್ನನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಶೀತಲ ಯುದ್ಧದ ಪರಿಣಾಮವಾಗಿ ವಿಶ್ವವು ಇಬ್ಭಾಗವಾಗಿತ್ತು. ಆಗಷ್ಟೇ ಸ್ವಾತಂತ್ರ್ಯ ಸಂಗ್ರಾಮದಿಂದ ಹೊರಬಂದಿದ್ದ, ಆದರ್ಶಗಳ ಮುಗ್ಧತೆಯಲ್ಲಿ ಮುಳುಗಿದ್ದ ಭಾರತ, 'ಅಲಿಪ್ತ ರಾಷ್ಟ್ರಗಳ' ಆಂದೋಳನವನ್ನು ಈಜಿಪ್ಟ್ ಮತ್ತು ಯುಗೋಸ್ಲಾವಿಯಗಳ ಜೊತೆಗೆ ಪ್ರಾರಂಭಿಸಿತು. ಈ ಗುಂಪಿನಲ್ಲಿ ಶೀತಲ ಯುದ್ಧದ ಹೊರಗಿದ್ದ ಅನೇಕ ದೇಶಗಳು ತಮ್ಮ ಭವಿಷ್ಯವನ್ನು ಸೂಪರ್ ಪವರ್‌ಗಳ ಹೊರತಾಗಿ ರೂಪಿಸಿಕೊಳ್ಳಲು ಸೇರಿದವು. ನೆಹರೂರವರ ಸಲಹೆಯಂತೆ ಪಂಚಶೀಲ ತತ್ವಗಳು ಇದರ ಬುನಾದಿಯಾಯಿತು. ಪಾಕಿಸ್ತಾನ ಮತ್ತು ಚೀನಾ ಕೂಡ ಇದರ ಸದಸ್ಯರಾಗಿದ್ದವು. ಆದರೆ ವಿಶ್ವ ಸಂಸ್ಥೆಯಂತೆ

ಇದಕ್ಕೆ ಸಂಘಟನೆಯಿರಲಿಲ್ಲ. ಶಾಂತಿಯನ್ನು ಪ್ರತಿಪಾದಿಸುವ ಈ ಆಂದೋಳನ ಅಷ್ಟೇನೂ ಯಶಸ್ವಿಯಾಗಲಿಲ್ಲ. ಇದರ ಸದಸ್ಯರಾದ ಪಾಕಿಸ್ತಾನ ಅಮೆರಿಕದತ್ತ ಒಲವು ತೋರಿಸಿದರೆ, ಭಾರತದ ಮಿತ್ರತ್ವ ರಷ್ಯಾದ ಪರ ಇತ್ತು. ದುರದೃಷ್ಟವಶಾತ್ ಭಾರತ-ಪಾಕಿಸ್ತಾನ ಮೂರು ಯುದ್ಧಗಳಲ್ಲಿ ಎದುರಾಗಿವೆ, ಪಾಕಿಸ್ತಾನ ಅಮೆರಿಕದ ಶಸ್ತ್ರಾಸ್ತ್ರಗಳನ್ನು ಬಳಸಿದರೆ ಭಾರತ ರಷ್ಯಾದ ಅಸ್ತ್ರಗಳನ್ನು ಉಪಯೋಗಿಸಿತು. ಭಾರತ ಮತ್ತು ಚೀನಾ ಕೂಡ ಒಂದು ಯುದ್ಧದಲ್ಲಿ ಕಾದಾಡಿದ್ದು ಆಂದೋಳನದ ಮೂಲ ಉದ್ದೇಶವೇ ಸಫಲವಾಗಲಿಲ್ಲ.

70ರ ದಶಕದಲ್ಲಾಗಲೇ ವಿಶ್ವದಲ್ಲಿ ಭಾರತದ ಪ್ರಾಬಲ್ಯ ಕುಗ್ಗಿತ್ತು. ಇದೇ ಸಮಯದಲ್ಲಿ ನಾನು ನನ್ನ ಕಾಲೇಜನ್ನು ಆರಂಭಿಸಿದೆ. ಆದರೆ ನನ್ನ ಕಾಲೇಜ್ ಅಭ್ಯಾಸ ಮುಗಿಸುವ ಹೊತ್ತಿಗೆ ನನ್ನ ಭವಿಷ್ಯದ ಬಗ್ಗೆ ವಿಶ್ವಾಸವಿರಲಿಲ್ಲ. ಬೆಂಗಳೂರಿನ IISc ನಂತರ ಕಲ್ಕತ್ತಾದ IIMನಿಂದ ಪದವಿಯನ್ನು ಪಡೆದು ಬೆಂಗಳೂರಿನ BELನಲ್ಲಿ ಮೊದಲ ಕೆಲಸವನ್ನು ಆರಂಭಿಸಿದೆ. ಎಲೆಕ್ಟ್ರಾನಿಕ್ಸ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ವಿದ್ಯಾಭ್ಯಾಸ ಮಾಡಿದ್ದ ನನಗೆ ನನ್ನ ಕೆಲಸದಲ್ಲಿ Operations Researchನಿಂದ ಮಹತ್ವವಾದದ್ದನ್ನೇನಾದರೂ ಸಾಧಿಸಬೇಕೆಂಬ ಆಸೆ ಇತ್ತು. ಆದರೆ ಕೆಲಸದಲ್ಲಿನ ವಾತಾವರಣ ಹೊಸತನವಿಲ್ಲದೆ ಉಸಿರುಕಟ್ಟುವಂತೆ ಇತ್ತು. ಇಂಥ ಒಂದು ಸನ್ನಿವೇಶದಲ್ಲಿ ನನಗೆ ಮುಂದುವರಿಯುವುದು ಅಸಾಧ್ಯವಾಯಿತು.

1983ರ ಈ ಸಂದರ್ಭದಲ್ಲಿ ನಾನು ಭಾರತದಿಂದ ಹೊರಗೆ, ಅಮೆರಿಕಕ್ಕೆ ಬರಲು ನಿರ್ಧರಿಸಿದೆ. ಅಮೆರಿಕ ಸಾಧನೆ ಮತ್ತು ಸಾಧಿಸಿ ಮುಂದುವರಿಯಲಿಕ್ಕೆ ವಿಪುಲ ಅವಕಾಶವಿರುವ ದೇಶವೆಂದು ಮನದಟ್ಟಾಗಿತ್ತು. ಹೀಗೆ ಆರ್ಥಿಕ ಮತ್ತು ಅಭ್ಯುದಯಗಳಿಗಾಗಿ ನಾನು ಅಮೆರಿಕಕ್ಕೆ ಬರುವ ನಿರ್ಧಾರ ಮಾಡಿದೆ. ಆದರೂ ಮನಸ್ಸಿನಲ್ಲಿ ದುಗುಡ, ಭಯ, ಕಳವಳ, ಕುತೂಹಲ, ಭರವಸೆ, ಇತ್ಯಾದಿ ಭಾವನೆಗಳು ತುಂಬಿದ್ದವು. ಕೊನೆಗೂ ನಾನು ಅತೀ ಪುರಾತನವಾದ ನಾಗರೀಕತೆಯನ್ನು ಬಿಟ್ಟು ಅತ್ಯಂತ ಹೊಸ ರಾಷ್ಟ್ರಕ್ಕೆ, ಆದರೆ ಮನುಕುಲದ ಅತ್ಯುತ್ತಮ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಸಾಧಿಸಿದೆಯೆಂದು ಹೆಗ್ಗಳಿಕೆ ಗಳಿಸಿದ್ದ ಅಮೆರಿಕಕ್ಕೆ ಬಂದು ಸೇರಿದೆ.

ಅಮೆರಿಕ – ಮೊದಲ ಅನಿಸಿಕೆಗಳು

ಭಾರತದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ಭಾರತೀಯರಿಗೆ ಅಮೆರಿಕದ ಜನಜೀವನಕ್ಕೆ ಹೊಂದಿಕೊಳ್ಳುವುದರಲ್ಲಿ ಸಾಧಾರಣವಾಗಿ ಯಾವ ಅಡಚಣೆಯೂ ಕಾಣುವುದಿಲ್ಲ. ಅಮೆರಿಕದಲ್ಲಿ 80ರ ದಶಕದಲ್ಲಿ IT, Medicine ಮತ್ತು ಇತರ ವಿಷಯಗಳಲ್ಲಿ ಹೇರಳ ಅವಕಾಶಗಳಿದ್ದವು. ವಿದ್ಯಾವಂತ ಭಾರತೀಯರು ಸಾಧಾರಣ ಅಮೆರಿಕನ್ನರಿಗಿಂತ ತಾಂತ್ರಿಕ ವಿಷಯಗಳಲ್ಲಿ ಮುಂದಿದ್ದರು. ಈ ಕಾರಣಗಳಿಂದಾಗಿ 80ರ ದಶಕದ ನಂತರ ಲಕ್ಷಾಂತರ ಭಾರತೀಯರು ಅಮೆರಿಕಕ್ಕೆ ಬರಲು ಸಾಧ್ಯವಾಯಿತು.

ಬೇರು ಸೂರು

ಅಮೆರಿಕದಲ್ಲಿನ ಕೆಲಸದ ವಾತಾವರಣಕ್ಕೆ ಹೊಂದಿಕೊಳ್ಳಲಿಕ್ಕೆ ಯಾವ ತೊಂದರೆಯೂ ಇರಲಿಲ್ಲ. ಭಾರತೀಯರಿಗೆ 'American Dream'ನ್ನು ನನಸಾಗಿಸಿಕೊಂಡು ಬದುಕಲು ಅಡೆತಡೆಗಳಿರಲಿಲ್ಲ. ಒಳ್ಳೆಯ ಕೆಲಸ, ಬೆಚ್ಚನೆಯ ಮನೆ, ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಮುಂತಾದವುಗಳನ್ನು ಪಡೆಯಲು ಸಾಹಸ ಪಡಬೇಕಿರಲಿಲ್ಲ. ಕೆಲಸದಲ್ಲೂ ಕೂಡ ಪ್ರತಿಭೆಯನ್ನು ಪುರಸ್ಕರಿಸಿ ಗೌರವಿಸಲಾಗುತ್ತಿತ್ತು. ನಾನೊಬ್ಬ IT Professional ಆಗಿ ನನ್ನ ಅನುಭವವನ್ನು ಹೇಳಿಕೊಳ್ಳುತ್ತಿದ್ದರೂ ಇದು ಬಹುಶಃ ಇತರೆ ಎಲ್ಲ ವೃತ್ತಿಯವರಿಗೂ ಅನ್ವಯಿಸುತ್ತದೆ.

ನಾನು ಇಲ್ಲಿ ಒಂದು ವಿಷಯವನ್ನು ಒತ್ತಿ ಹೇಳಲೇಬೇಕು. ನನಗೆ ನನ್ನ ಪರಿಸರದಲ್ಲಿ ಹಲವಾರು ದೇಶಗಳಿಂದ (ಗ್ರೀಸ್, ರಷ್ಯಾ, ಟರ್ಕಿ ಮತ್ತು ಆಫ್ರಿಕಾ ದೇಶಗಳು) ಇಲ್ಲಿಗೆ ವಲಸೆ ಬಂದವರ ಸಂಪರ್ಕವಿತ್ತು. ಆದರೆ ಅವರೆಲ್ಲರೂ ಕಾರಣಾಂತರಗಳಿಂದ ಇಲ್ಲಿ ಸಾಧಾರಣ ಜೀವನವನ್ನು ನಡೆಸಲೂ ಕೂಡ ಬಹಳ ಹೆಣಗಾಡುತ್ತಿರುವಂತೆ ಕಾಣುತ್ತಿತ್ತು. ಹಾಗೆಂದು ಅವರ ವಿದ್ಯಾಭ್ಯಾಸ, ಕೌಟುಂಬಿಕ ಹಿನ್ನೆಲೆಗಳು ನಮಗಿಂತ ಯಾವ ರೀತಿಯಲ್ಲೂ ಕಡಿಮೆ ಇರಲಿಲ್ಲ. ಆದರೆ ಭಾರತೀಯರಾದ ನಮಗೆ ಇಲ್ಲಿನ ಜನಜೀವನಕ್ಕೆ ಹೊಂದಿಕೊಳ್ಳುವುದಷ್ಟೇ ಅಲ್ಲದೆ ಏಳಿಗೆ ಪಡೆಯುವುದು ಮತ್ತು ಕೆಲಸದಲ್ಲಿ ವೃದ್ಧಿಸುವುದು ಅತ್ಯಂತ ಸಹಜವಾಗಿ ಬಂದಿತು. ಅಮೆರಿಕದಲ್ಲಿ ಇಸ್ರೇಲಿಯರನ್ನು ಬಿಟ್ಟರೆ ಭಾರತೀಯರೇ ಅತಿ ಶ್ರೀಮಂತರು!

ಅಮೆರಿಕದಲ್ಲಿ ಜನಾಂಗ, ಜಾತಿ, ವರ್ಣಗಳ ಭೇದ ಎಲ್ಲೂ ಎದ್ದು ಕಾಣುತ್ತಿರಲಿಲ್ಲ. ಕಂಡರೂ ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಕಾಣಬರುತ್ತಿತ್ತು. ಇಲ್ಲಿನ ಪೌರ ಸ್ವಾತಂತ್ರ್ಯದ ಕಾನೂನು (1964) ಜಾರಿ ಮಾಡಿ ಕೆಲವೇ ವರ್ಷಗಳಾಗಿದ್ದರೂ ವರ್ಣ ಭೇದವನ್ನು ಕುರಿತಾದ ಕಾನೂನು ಮತ್ತು ಶಿಸ್ತಿನ ವ್ಯವಸ್ಥೆಯನ್ನು ಚೆನ್ನಾಗಿ ಪಾಲಿಸಲಾಗುತ್ತಿತ್ತು. ಅಮೆರಿಕ 'ಸಮಾನತೆ' ವಿಷಯದಲ್ಲಿ ಇನ್ನೂ ಸಾಧಿಸಬೇಕಿದ್ದರೂ ಭಾರತಕ್ಕಿಂತಾ ಖಂಡಿತಾ ಬಹಳ ಮುಂದೆ ಇತ್ತು.

ಒಟ್ಟಾರೆಯಾಗಿ ಅಮೆರಿಕದಲ್ಲಿ ಬಾಳುವುದು ಸುಗಮವಾಗಿದೆ. ಇಲ್ಲಿನ ದಿನ ನಿತ್ಯದ ಜೀವನದಲ್ಲಿ ನಮಗೆ ಇಲ್ಲಿನ ಸರಕಾರದ ಪಾತ್ರವಾಗಲೀ, ಭ್ರಷ್ಟಾಚಾರವಾಗಲೀ ಕಾಣುವುದಿಲ್ಲ. ಡ್ರೈವಿಂಗ್ ಲೈಸೆನ್ಸ್ ಪಡೆಯುವುದು, ಮನೆ ಕೊಂಡುಕೊಳ್ಳುವುದು, ಸಾಲ ಪಡೆಯುವುದು, ಸರತಿಯಲ್ಲಿ ಗ್ರೀನ್ ಕಾರ್ಡ್ ಮತ್ತು ಅಮೆರಿಕದ ಪೌರತ್ವವನ್ನು ಪಡೆಯುವುದು, ಇತ್ಯಾದಿಗಳು ಕಾನೂನು ಪ್ರಕಾರವಾಗಿ ಯಾವ ತೊಂದರೆಯೂ ಇಲ್ಲದೆ ನಡೆಯುತ್ತವೆ. ಇಲ್ಲಿನ ನ್ಯಾಯಾಂಗ ವ್ಯವಸ್ಥೆ ಕೂಡ ದಕ್ಷ ಮತ್ತು ಪರಿಣಾಮಕಾರಿಯಾಗಿದೆ. ಭಾರತದಲ್ಲಿ ಕೋರ್ಟ್ ಕೇಸುಗಳು ಇತ್ಯರ್ಥವಾಗಲು ಹಲವಾರು ವರ್ಷಗಳೇ ಬೇಕಾಗಿ, ತೀರ್ಮಾನಕ್ಕಾಗಿ ಕಾಯುತ್ತಾ ಜೀವನವೇ ದುರ್ಭರವೆನಿಸುತ್ತದೆ. ಆದರೆ ಇಲ್ಲಿ ಸಣ್ಣ ಮುನಿಸಿಪಲ್ ಕೋರ್ಟಿನಿಂದ ಹಿಡಿದು ಸುಪ್ರೀಂ ಕೋರ್ಟಿನವರೆಗೆ ಎಲ್ಲವೂ ಅಚ್ಚುಕಟ್ಟು

ಮತ್ತು ಸುವ್ಯವಸ್ಥಿತ.

ಅಮೆರಿಕದಲ್ಲಿ ನನಗೆ ಅತ್ಯಂತ ಮನಮುಟ್ಟಿದ ಅಂಶವೆಂದರೆ ಇಲ್ಲಿನ ಸರಕಾರದ ವ್ಯವಸ್ಥೆ. ಈ ಸುವ್ಯವಸ್ಥೆಯ ಕಾರಣ, ಅಮೆರಿಕದ ತನ್ನ ಇತಿಹಾಸದ ಉದ್ದಕ್ಕೂ ಸಾಮಾಜಿಕ, ರಾಜಕೀಯ ಮತ್ತು ಬೌದ್ಧಿಕ ಪ್ರಗತಿದಾಯಕ ಬದಲಾವಣೆಗಳನ್ನು ಸ್ವೀಕರಿಸುತ್ತಾ ಅವುಗಳನ್ನು ತನ್ನ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುತ್ತಿರುವುದು. ಅಮೆರಿಕನ್ನರು ಆರಂಭದಲ್ಲೇ ಯೂರೋಪಿನ ವೈಭವಶಾಲಿ ಮತ್ತು ಕುಲೀನರ ಆಡಳಿತ ಪದ್ಧತಿಯನ್ನು ತಿರಸ್ಕರಿಸಿ ಪ್ರಜಾಪ್ರಭುತ್ವವನ್ನು ಅಂಗೀಕರಿಸಿದ್ದರು. ಇದು ಪ್ರಜೆಗಳು ತಮ್ಮ ಸರಕಾರವನ್ನು ತಾವೇ ಆಯ್ದುಕೊಳ್ಳುವ ಪದ್ಧತಿ. ಅಮೆರಿಕದ ಜನತೆಗೆ ಅವರ ಸ್ವಾತಂತ್ರ್ಯವನ್ನು ಎರಡು ಆಧಾರಗಳಲ್ಲಿ ನಿಶ್ಚಿತವಾಗಿ ಪ್ರದಾನಿಸುತ್ತದೆ. ಮೊದಲನೆಯದು, 1788ರಲ್ಲಿ ರಚಿತವಾದ 'ಅಮೆರಿಕದ ಸಂವಿಧಾನ' ಮತ್ತು ಎರಡನೆಯದು 1791ರ 'ಹಕ್ಕುಗಳ ವಿಧೇಯಕ'. ಇದರಲ್ಲಿ ಸಂವಿಧಾನದ ಮೊದಲ ಹತ್ತು ತಿದ್ದುಪಡಿಗಳು ಸೇರಿವೆ.

ಅಮೆರಿಕದ ಪ್ರಜಾಪ್ರಭುತ್ವದ ವಿಶೇಷತೆಯೆಂದರೆ, ಪ್ರಬಲವಾದ ರಾಷ್ಟ್ರೀಯ ಸರಕಾರ ಮತ್ತು ಪ್ರಜೆಗಳ ಹಕ್ಕುಗಳ ಸಂರಕ್ಷಣೆ. ಈ ಸರಕಾರದ ವ್ಯವಸ್ಥೆಯಲ್ಲಿ ಮೂರು ಅಂಗಗಳು ಇರುತ್ತವೆ. ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗ. ಈ ಅಂಗಗಳ ಕರ್ತವ್ಯಗಳು ನಿರ್ದಿಷ್ಟವಾಗಿಯೂ ಒಂದಕ್ಕೊಂದು ಪೂರಕವಾಗಿ ನಾಗರಿಕರ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಸಂರಕ್ಷಿಸುತ್ತವೆ. ಈ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತರ ಧ್ವನಿಗೆ ಬಹುಸಂಖ್ಯಾತರ ಧ್ವನಿಯಷ್ಟೇ ಪ್ರಾಮುಖ್ಯ ಇರುತ್ತದೆ ಮತ್ತು ಅವರ ಹಕ್ಕುಗಳನ್ನೂ ಯಾವತ್ತೂ ಕಾಪಾಡಲಾಗುತ್ತದೆ. ಇತರ ಕೆಲವು ಪ್ರಜಾಪ್ರಭುತ್ವದ ವ್ಯವಸ್ಥೆಗಳಲ್ಲಿರುವ `Tyranny of the majority'ಯ ಲೋಪದೋಷಗಳನ್ನು ಬಹಳ ಚೆನ್ನಾಗಿ 'Bill of Rights'ನಿಂದ ಸಂರಕ್ಷಿಸಲ್ಪಟ್ಟಿದೆ.

ಅಮೆರಿಕದ ಬಗ್ಗೆ ನನ್ನ ಮೊದಲ ಅನಿಸಿಕೆಗಳನ್ನು ಹೇಳಬೇಕೆಂದರೆ, ಇದು ಖಂಡಿತಾ ಮಧು–ಕ್ಷೀರ ಮಿಶ್ರಿತ ಸುಂದರ ದೇಶ. ಇಲ್ಲಿ ಎಲ್ಲವೂ ಚೆನ್ನ, ಚೊಕ್ಕ. ಸರಕಾರ, ಕೋರ್ಟ್, ಪೋಲೀಸ್, ಸ್ಕೂಲ್ ಮತ್ತು ಆಫೀಸ್ ಕೆಲಸ, ಇತ್ಯಾದಿ. ನಾವು ನಮ್ಮ ಕೆಲಸವನ್ನು ಮಾಡಿಕೊಂಡು ಕಾನೂನು ಬದ್ಧರಾಗಿ ನಡೆದರೆ ಇಲ್ಲಿ ಸುಖ, ಸಮೃದ್ಧಿಗಳನ್ನು ಪಡೆಯುತ್ತೇವೆ. ಭಾರತಕ್ಕಿಂತ ಅಮೆರಿಕ ಎಲ್ಲ ವಿಧದಲ್ಲೂ ಉತ್ತಮವಾದ ದೇಶ.

ಅಮೆರಿಕ – ನಂತರದ ಅನಿಸಿಕೆಗಳು

ಅಮೆರಿಕದಲ್ಲಿ ನನ್ನ ವಾಸ ಮುಂದುವರಿಯುತ್ತಿದ್ದಂತೆ ಇಲ್ಲಿನ ವಿದ್ಯಮಾನಗಳನ್ನು ಹತ್ತಿರದಿಂದ ಗಮನಿಸುವ ಮೂಲಕ ಮತ್ತು ಹೆಚ್ಚಿನ ಅಭ್ಯಾಸದ ಮೂಲಕ ನನ್ನ ಮೊದಲ ಅನಿಸಿಕೆಗಳನ್ನು ಮತ್ತೆ ಮತ್ತೆ ವಿಮರ್ಶಿಸಿಕೊಳ್ಳುವ ಅವಕಾಶ ಸಿಗುತ್ತಿವೆ. ಕಳೆದ 15

ವರ್ಷಗಳಲ್ಲಿ ನನ್ನ ಮೊದಲ ಅನಿಸಿಕೆಗಳ, ಅದರಲ್ಲೂ ನಾನಂದುಕೊಂಡಿದ್ದ ಆದರ್ಶಪೂರಿತ ಅಮೆರಿಕದ ಚರಿತ್ರೆಯ ಮತ್ತು ವಿಶ್ವದಲ್ಲಿ ಅಮೆರಿಕದ ಪಾತ್ರವನ್ನು ಕುರಿತು ನನ್ನ ಅಭಿಪ್ರಾಯಗಳು ಈಗ ಬದಲಾಗಿವೆ.

ಅಮೆರಿಕ ಖಂಡಿತವಾಗಿಯೂ ತನ್ನನ್ನು ಇತರೆ ದೇಶಗಳಿಗಿಂತ ವಿಶಿಷ್ಟವೆಂದೂ ಮತ್ತು ತನಗೆ ಜಗತ್ತಿನ ಇತರ ದೇಶಗಳಲ್ಲಿ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯವನ್ನು ಸ್ಥಾಪಿಸುವ ಮತ್ತು ಸಂರಕ್ಷಿಸುವ ವಿಶೇಷ ಪಾತ್ರವಿದೆಯೆಂದು ಭಾವಿಸುತ್ತದೆ. ರಾಜ ಮನೆತನಗಳ ಅಥವಾ ವೈಭವಶಾಲಿ ಕುಲೀನರ ಆಡಳಿತದ ಚರಿತ್ರೆಯ ಸಂಕೋಲೆಗಳಿಲ್ಲದ ಈ ದೇಶ ತನ್ನನ್ನು ನಿಜವಾದ ಪ್ರಜಾಪ್ರಭುತ್ವವನ್ನು ಕಂಡುಕೊಂಡ ಮೊದಲ ಹೊಸರಾಷ್ಟ್ರವೆಂದು ಭಾವಿಸುತ್ತಾ, ತಾನು ಪ್ರಪಂಚದ ಇತರ ದೇಶಗಳಿಗಿಂತ ಭಿನ್ನ ಮತ್ತು ವಿಶೇಷವಾದದ್ದೆಂದು ಭಾವಿಸಿದೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ತನ್ನ ಚರಿತ್ರೆ ಬಹಳ ವಿಶಿಷ್ಟವಾದದ್ದೆಂದೂ ಹಾಗೂ ಇದಕ್ಕೆ ವಿಶ್ವದ ಇತರ ರಾಷ್ಟ್ರಗಳಲ್ಲಿ ಇದನ್ನು ಹರಡುವ ವಿಶೇಷ ಜವಾಬ್ದಾರಿ ತನಗಿದೆಯೆಂದು ಭಾವಿಸಿರುವ ಈ 'American exceptionalism'ನ್ನು ಇತರ ದೇಶಗಳೊಡನೆ ಇರುವ ಇದರ ಸಂಬಂಧಗಳಲ್ಲಿ ಕಾಣಬಹುದು.

ನಾನು ಅಮೆರಿಕಕ್ಕೆ ಬಂದಾಗಿನಿಂದ ಇಲ್ಲಿಯವರೆಗೂ ಈ 'American exceptionalism' ಅಥವಾ 'ಅಮೆರಿಕದ ವಿಶೇಷತೆ'ಯ ಪರಿಣಾಮಗಳನ್ನು ಗಮನಿಸುತ್ತಿದ್ದೇನೆ. ಶೀತಲಸಮರ ಮುಗಿದಿದೆ, ಆದರೆ ಇಸ್ಲಾಮಿನ ಮೂಲಭೂತವಾದಿತ್ವ ಹೆಚ್ಚಿದೆ, ಅಮೆರಿಕ ಅನೇಕ ಯುದ್ಧಗಳ ರೂವಾರಿಯಾಗಿದೆ, ವಿಶ್ವದ ಆರ್ಥಿಕಶಕ್ತಿ ಪಶ್ಚಿಮದಿಂದ ಪೂರ್ವಕ್ಕೆ ವಾಲಿದೆ. ಜಾಗತಿಕ ಮಟ್ಟದಲ್ಲಿ ಅಮೆರಿಕದ ಸ್ಥಾನ-ಮಾನ ಮೊದಲಿಗಿಂತ ಕುಗ್ಗಿದೆ. ವಸಾಹತುಶಾಹೀ ರಾಷ್ಟ್ರಗಳಿಂದ ಸ್ವತಂತ್ರವಾದ ರಾಷ್ಟ್ರಗಳು ವೇಗವಾಗಿ ಮುನ್ನಡೆಯುತ್ತಿವೆ. ಅಮೆರಿಕ ಈ ಹೊಸ ವಿಶ್ವದಲ್ಲಿ ತನ್ನ ಸ್ಥಾನವನ್ನು ಕಂಡುಕೊಳ್ಳುವಲ್ಲಿ ಹೆಣಗುತ್ತಿದೆ. 'American exceptionalism' (ಅಮೆರಿಕದ ವಿಶೇಷತೆ) ಇನ್ನೂ ಕೂಡ ಅಮೆರಿಕದಲ್ಲಿ ಉಗ್ರವಾಗಿ ಚರ್ಚಿಸಲ್ಪಡುತ್ತಿದೆ.

'American exceptionalism'ನ್ನು ಕುರಿತು ನನ್ನ ಬದಲಾದ ಅನಿಸಿಕೆಗಳನ್ನು ಈಗ ನೋಡೋಣ.

ಅಮೆರಿಕದ ವಿಶಿಷ್ಟತೆ – ಮೊಟ್ಟ ಮೊದಲ ಚಾರಿತ್ರಿಕ ನೋಟ: ಅಲೆಕ್ಸಿಸ್ ಟಾಕ್ವಿಲ್

ಅಮೆರಿಕದಲ್ಲಿ ಪ್ರಜಾಪ್ರಭುತ್ವದ ನೂತನ ವ್ಯವಸ್ಥೆಯು ಸ್ಥಾಪಿತವಾದ ಕೆಲವೇ ವರ್ಷಗಳಲ್ಲಿ ಹಲವಾರು ಹೊರ ದೇಶಗಳು ಇಲ್ಲಿನ ವ್ಯವಸ್ಥೆಯನ್ನು ಬಹಳ

ಕುತೂಹಲದಿಂದ ಗಮನಿಸುತ್ತಿದ್ದವು. ಇದು ವಿಶ್ವದ ಇತರೆ ಯಾವುದೇ ರಾಷ್ಟ್ರದ ವ್ಯವಸ್ಥೆಗಿಂತ ಭಿನ್ನವಾಗಿತ್ತು. ಫ್ರೆಂಚ್ ವಿಚಾರವಾದಿ ಮತ್ತು ಚರಿತ್ರಕಾರ Alexis Tocqueville ಈ ವ್ಯವಸ್ಥೆಯನ್ನು ಅತ್ಯಂತ ಕೂಲಂಕಷವಾಗಿ ಅಭ್ಯಾಸ ಮಾಡಿದ ಮೊದಲ ಹೊರದೇಶೀಯ. ಅವನ ಅಭಿಪ್ರಾಯ ಅಮೆರಿಕದ ವ್ಯವಸ್ಥೆಯ ಮೇಲೆ ವಿಶೇಷವಾದ ಬೆಳಕು ಚೆಲ್ಲುತ್ತದೆ. ಮೊದಲು ಅವನ ಅಭಿಪ್ರಾಯಗಳನ್ನು ಗಮನಿಸೋಣ.

ಫ್ರೆಂಚ್ ಆಂದೋಲನದ ನಂತರ 1831ರಲ್ಲಿ ಅಮೆರಿಕದ ಪ್ರಜಾಪ್ರಭುತ್ವವನ್ನು ಅಭ್ಯಾಸ ಮಾಡಲು ಅಮೆರಿಕದ ಪ್ರವಾಸ ಮಾಡಿದ ಅಲೆಕ್ಸಿಸ್ ಟಾಕ್ವಿಲ್‌ನ 'ಅಮೆರಿಕದಲ್ಲಿ ಪ್ರಜಾಪ್ರಭುತ್ವ' (Democracy in America) ಗ್ರಂಥವೇ ಅಮೆರಿಕೇತರನೊಬ್ಬನ ಸ್ವತಂತ್ರ ಅಭಿಪ್ರಾಯಗಳ ಮೊದಲ ಅಧಿಕೃತ ಪುಸ್ತಕ. ಅಲೆಕ್ಸಿಸ್ ಅಮೆರಿಕವನ್ನು ಅವನ ಸ್ನೇಹಿತನೊಬ್ಬನ ಜೊತೆಗೆ ದೀರ್ಘ ಪ್ರವಾಸವನ್ನು ಮಾಡಿದಾಗ ಅಮೆರಿಕದ ಪ್ರಜಾಪ್ರಭುತ್ವ ಇನ್ನೂ ಹಸುಳೆಯಾಗಿತ್ತು. ಅವನು ಅಮೆರಿಕದ ಮತ್ತು ಯೂರೋಪಿನ ರಾಜಕೀಯ ವ್ಯವಸ್ಥೆಗಳನ್ನು ವ್ಯಾಪಕವಾಗಿ ಅಭ್ಯಾಸ ಮಾಡಿ ತುಲನೆ ಮಾಡುತ್ತಾನೆ. ಅವನು ಈ ಗ್ರಂಥವನ್ನು ಬರೆಯುವುದರ ಮೂಲ ಉದ್ದೇಶ ಫ್ರಾನ್ಸ್‌ನಲ್ಲಿ ಒಂದು ಉತ್ತಮ ರಾಜಕೀಯ ವ್ಯವಸ್ಥೆಯನ್ನು ತರುವುದಾಗಿದ್ದಿತು. ಹಾಗಾಗಿ ಅವನ ಅಭಿಪ್ರಾಯಗಳು ಬಹಳ ಮುಖ್ಯವಾಗುತ್ತವೆ, ಜೊತೆಗೆ ಅಮೆರಿಕದ ಅಂದಿನ ರಾಜಕೀಯ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ. ಒಟ್ಟಾರೆಯಾಗಿ ಅವನು ಇಲ್ಲಿನ ವ್ಯವಸ್ಥೆಯನ್ನು ಪ್ರಶಂಸಿಸಿದರೂ ಕೆಲವು ಅಪಾಯಕಾರಿ ಅಂಶಗಳನ್ನು ಬೆಳಕಿಗೆ ತರುತ್ತಾನೆ. ನಾನು ಇಲ್ಲಿ ಕೆಲವು ಮುಖ್ಯ ಅಂಶಗಳನ್ನು ಮಾತ್ರ ತಿಳಿಸುತ್ತೇನೆ.

ಅಮೆರಿಕದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜೆಗಳು ನಿಜವಾಗಿಯೂ ಪ್ರಭುಗಳು. ಸಮಾನತೆಯ ಜೊತೆಗೆ ರಾಜಕೀಯ ಮತ್ತು ಆಡಳಿತದ ವಿಕೇಂದ್ರೀಕರಣ, ನ್ಯಾಯಾಂಗ ಮತ್ತು ಆಡಳಿತಗಳ ಸ್ವಾಯುತ್ತತೆ, ಇತ್ಯಾದಿಗಳು ಅತ್ಯಂತ ಸಮರ್ಪಕವಾಗಿದ್ದು ಯೂರೋಪಿನ ವೈಭವಶಾಲಿ ಮತ್ತು ಕುಲೀನರ ಆಡಳಿತ ಪದ್ಧತಿಗಿಂತ ಭಿನ್ನ ಮತ್ತು ಉತ್ತಮವಾದದ್ದೆಂದು ಅಭಿಪ್ರಾಯಪಡುತ್ತಾ ಅಮೆರಿಕದ ಈ ನೂತನ ಆಡಳಿತ ವ್ಯವಸ್ಥೆ ಇತಿಹಾಸದ ಉದ್ದಕ್ಕೂ ವಿವಿಧ ನಾಗರೀಕತೆಗಳು ಎದುರಿಸಬೇಕಾದ ಬಹುಮುಖ್ಯ ಸವಾಲಾದ **ಪ್ರಜಾ ಸ್ವಾತಂತ್ರ್ಯ ಮತ್ತು ಸರಕಾರದ ಪಾತ್ರದ ಸಮನ್ವಯತೆಯನ್ನು** ಪಾಲಿಸುವುದು ಹೇಗೆ? ಎನ್ನುವುದಕ್ಕೆ ಸೂಕ್ತ ಉತ್ತರವೆಂದು ಈ ರೀತಿಯ ಮೆಚ್ಚುಗೆಯ ಮಾತನಾಡುತ್ತಾನೆ: 'ಪ್ರಜಾತಂತ್ರದ ಈ ವ್ಯವಸ್ಥೆಯಲ್ಲಿ ಆನುವಂಶಿಕವಾಗಿ ಬರುವ ಅಧಿಕಾರ ವೈಭವಕ್ಕೆ ಬದಲಾಗಿ ಪ್ರತಿ ಪ್ರಜೆಯೂ ತನ್ನ ಕಾಯಕಗಳ ಮೂಲಕ ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾನೆ. ಇಲ್ಲಿ ದುಡಿಮೆಗೆ ಮಹತ್ವವಿದೆ ಹಾಗೂ ಗೌರವವಿದೆ.' ಎನ್ನುತ್ತಾನೆ. ಈ ಸಮಯದಲ್ಲಿ ಯೂರೋಪಿನಲ್ಲಿ ಕಾರ್ಮಿಕರನ್ನು ಮತ್ತು ಕಾರ್ಮಿಕರ ಕೆಲಸಗಳನ್ನು ಕುಲೀನರು ಕೀಳಾಗಿ ಕಾಣುತ್ತಿದ್ದುದನ್ನು ಇಲ್ಲಿ ನೆನೆಯಬಹುದು.

ಬೇರು ಸೂರು

ಅಲೆಕ್ಸಿಸ್ ಟಾಕ್ವಿಲ್ ಈ ವ್ಯವಸ್ಥೆಯಲ್ಲಿನ ಮತ್ತೊಂದು ಗುಣಾತ್ಮಕ ಅಂಶವನ್ನು ಹೀಗೆ ವಿವರಿಸುತ್ತಾನೆ: 'ಇಲ್ಲಿನ ವ್ಯವಸ್ಥೆಯು ಪ್ರಜೆಗಳಿಗೆ ನಾನಾ ರೀತಿಯಿಂದ (ಆಡಳಿತ ವ್ಯವಸ್ಥೆಯ ಮೂಲಕ, ರಾಜಕೀಯವಾಗಿ ಮತ್ತು ವೈಯಕ್ತಿಕವಾಗಿ) ಸಂಪರ್ಕಿಸುವ ಅವಕಾಶಗಳನ್ನು ಕಲ್ಪಿಸುತ್ತದೆ ಮತ್ತು ಅದರ ಮೂಲಕ ಸಮಾಜದಲ್ಲಿ ವೈಯಕ್ತಿಕ ಸ್ವಾರ್ಥಕ್ಕಿಂತ ಒಟ್ಟಾರೆ ಆರೋಗ್ಯಕರ ಸಮಾಜದ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಇಂಥ ವ್ಯವಸ್ಥೆಯಿಂದ ಸರಕಾರದ ಹಸ್ತಕ್ಷೇಪವಿಲ್ಲದೆ ಅತ್ಯಂತ ಚಲನಶೀಲವಾದ ಸಭ್ಯ ಸಮಾಜದ ರಚನೆ ಸಾಧ್ಯ. ಆರೋಗ್ಯಕರವಾದ ಸಮಾಜದ ಬೆಳವಣಿಗೆಯಲ್ಲಿ ಸರಕಾರದ ಪಾತ್ರ ತುಂಬಾ ಕಿರಿದಾದದ್ದು.'

ಪ್ರಜಾ ಸ್ವಾತಂತ್ರ್ಯ ಮತ್ತು ಸರಕಾರದ ಪಾತ್ರದ ಸಮನ್ವಯತೆಯ ವಿಷಯ ಅಂದಿನಿಂದ ಇಂದಿನವರೆಗೂ ಚರ್ಚಾಸ್ಪದ ವಿಷಯವೇ ಆಗಿದೆ. ಇದೊಂದು ಆರೋಗ್ಯಕರ ಪ್ರಜಾಪ್ರಭುತ್ವದ ಲಕ್ಷಣ. ಅಲೆಕ್ಸಿಸ್ ಟಾಕ್ವಿಲ್ ತನ್ನ ಅಭಿಪ್ರಾಯವನ್ನು ಮುಂದುವರಿಸುತ್ತಾ ಕೆಲವು ಎಚ್ಚರಿಕೆಯ ಮಾತನಾಡುತ್ತಾನೆ. ಅವುಗಳನ್ನು ಗಮನಿಸೋಣ:

1. ಅಮೆರಿಕದಲ್ಲಿ ತಕ್ಷಣಕ್ಕೆ ಕಾಣಬರುವುದು ಅಧಿಕಾರದಲ್ಲಿರುವ, ಜಾಣ, ಸುಂದರ, ಬಿಳಿಯ ಜನಾಂಗ. ಅವರ ಕೆಳಗೆ ನೀಗ್ರೋ ಮತ್ತು ಇಂಡಿಯನ್ (ಮೂಲ ಅಮೆರಿಕನ್) ಜನಾಂಗದವರು ಕಾಣಸಿಗುತ್ತಾರೆ. ಇವೆರಡೂ ಜನಾಂಗದವರು ಕೆಳಸ್ತರದಲ್ಲಿ, ಅಂದರೆ ಬಿಳಿಯರಿಗೆ ದಾಸರಾಗಿ, ಅವರ ದಬ್ಬಾಳಿಕೆಗೆ ಗುರಿಯಾಗಿದ್ದಾರೆ.

2. ಮಹಿಳೆಯರಿಗೆ ಈ ವ್ಯವಸ್ಥೆಯಲ್ಲಿ ಪಾತ್ರವಿಲ್ಲ. ಅವರು ಮನೆ ಕೆಲಸಗಳನ್ನು ಮಾಡಿಕೊಂಡು ತಮ್ಮ ತಮ್ಮ ಸಂಸಾರವನ್ನು ನೋಡಿಕೊಳ್ಳುವುದನ್ನು ಹೊರತುಪಡಿಸಿದಂತೆ ಅವರಿಗೆ ರಾಜಕೀಯದಲ್ಲಾಗಲೀ, ಆಡಳಿತದಲ್ಲಾಗಲೀ, ಅಥವಾ ಸಮಾಜದಲ್ಲಾಗಲೀ ಯಾವ ಪಾತ್ರವೂ ಇಲ್ಲ.

ಅಲೆಕ್ಸಿಸ್‌ನ ಹೇಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ ಎದ್ದುಕಾಣುವ ಅಂಶ ಅಮೆರಿಕದ ಪ್ರಜಾಪ್ರಭುತ್ವದ ವ್ಯವಸ್ಥೆ ಉತ್ತಮವಾಗಿದ್ದರೂ, ವಿಶೇಷವಾಗಿ ಅದು ಬಿಳಿಯ ಪುರುಷರಿಗೆ (White Men) ಅನುಕೂಲಕಾರಿಯಾಗಿದೆ. ಅಲೆಕ್ಸಿಸ್ ಈ ಮಾತನ್ನು ಹೇಳಿ ಸುಮಾರು 88 ವರ್ಷಗಳ ನಂತರ, ಅಂದರೆ, 1919ರಲ್ಲಿ ಅಮೇರಿಕದ ಸಂವಿಧಾನದ 19ನೆಯ ತಿದ್ದುಪಡಿಯ ಮೂಲಕ ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ಕೊಡಲಾಯಿತು ಎಂದು ಇಲ್ಲಿ ಗಮನಿಸಬಹುದು.

ಇನ್ನು ದಾಸ್ಯದ ವಿಷಯ. 1808ರ ಹೊತ್ತಿಗಾಗಲೇ ಅಮೆರಿಕದ ಕೆಲವು ಉತ್ತರದ ರಾಜ್ಯಗಳು ದಾಸ್ಯ ಪದ್ಧತಿಯನ್ನು ನಿಷೇಧಿಸಿದ್ದರೂ ಸಹ ಅನೇಕ ರಾಜ್ಯಗಳಲ್ಲಿ ಕೃಷಿ ಮತ್ತು ಕೈಗಾರಿಕೆಗಳನ್ನು ಅವಲಂಬಿಸಿದ ಜನರಲ್ಲಿ ದಾಸ್ಯವನ್ನು ಕುರಿತು ತೀವ್ರ

ಭಿನ್ನಾಭಿಪ್ರಾಯವಿತ್ತು. ಈ ಭಿನ್ನಾಭಿಪ್ರಾಯ ತತ್ವ ಮತ್ತು ಆದರ್ಶಕ್ಕಿಂತಾ ಹಣಕಾಸು ಮತ್ತು ಅಧಿಕಾರ ದಾಹವನ್ನು ಕುರಿತದ್ದಾಗಿತ್ತು. ದಾಸ್ಯಪದ್ಧತಿಯ ಪರ ಮತ್ತು ವಿರೋಧಿಗಳ ಘರ್ಷಣೆ ತುಂಬಾ ತೀವ್ರವಾಗಿ ಆಂತರಿಕ ಕಲಹವಾಗಿ ಮಾರ್ಪಟ್ಟಿತು. ಜಗತ್ತಿನ ಇತಿಹಾಸದಲ್ಲಿ ಒಂದು ಪುಸ್ತಕ ಸಾಹಿತ್ಯ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದ ಉದಾಹರಣೆ ತುಂಬಾ ಕಡಿಮೆ. ಆದರೆ ಹ್ಯಾರಿಯಟ್ ಬೀಚರ್ ಸ್ಟೋವ್ ಎನ್ನುವವಳ 1851ರ 'Uncle Tom's Cabin' ಎನ್ನುವ ಪುಸ್ತಕದಲ್ಲಿನ ದಾಸ್ಯ ಪದ್ಧತಿಯ ಬರ್ಬರತೆ ಮತ್ತು ಭೀಕರತೆಯ ದಾರುಣ ಚಿತ್ರಣ ದೇಶದ ಜನಾಭಿಪ್ರಾಯವನ್ನು ಸಂಗ್ರಹಿಸುವುದರಲ್ಲಿ ಸಹಕಾರಿಯಾಗಿ 1863ರಲ್ಲಿ ದಾಸ್ಯವಿಮುಕ್ತಿಯ ಉದ್ಘೋಷಣೆ (Emancipation Proclamation)ಯೊಂದಿಗೆ ಈ ಅಸಹ್ಯಪದ್ಧತಿಯನ್ನು ಬಹಿಷ್ಕರಿಸುವುದರಲ್ಲಿ ಯಶಸ್ವಿಯಾಯಿತು. ಅಮೆರಿಕದ ಅಧ್ಯಕ್ಷ ಅಬ್ರಾಹಮ್ ಲಿಂಕನ್, ಹ್ಯಾರಿಯಟ್ ಬೀಚರ್ ಸ್ಟೋವ್‌ಳನ್ನು ಮೊದಲ ಬಾರಿಗೆ ಭೇಟಿ ಮಾಡಿದಾಗ, 'ಓ, ಈ ಪುಟ್ಟ ಹೆಂಗಸೇನಾ ಇಷ್ಟು ದೊಡ್ಡ ಯುದ್ಧವನ್ನು ಶುರುಮಾಡಿದ್ದು?' ಎಂದು ಕೇಳಿದರಂತೆ. ಒಟ್ಟಿನಲ್ಲಿ, ಕೊನೆಗೆ ದೇಶದ ಆತ್ಮಸಾಕ್ಷಿಯ ವಿಜಯವಾದರೂ, ಅದಕ್ಕಾಗಿ ತೆರಬೇಕಾದ ಬೆಲೆ ಅಪಾರ. ಈ ಆಂತರಿಕ ಯುದ್ಧದಲ್ಲಿ ಮಡಿದ ಸೈನಿಕರ ಸಂಖ್ಯೆ ನಂತರದ ಎಲ್ಲಾ ಯುದ್ಧಗಳಲ್ಲಿ ಮಡಿದವರಿಗಿಂತ ಹೆಚ್ಚಾಗಿತ್ತೆಂದು ಹೇಳಲಾಗಿದೆ.

ಅಮೆರಿಕದ ದೃಷ್ಟಿಯಲ್ಲಿ ಅಭಿವ್ಯಕ್ತ ವಿಧಿ ಮತ್ತು ದೈವ ಸಂಕಲ್ಪ

ವಿಶ್ವದಲ್ಲಿ ಅಮೆರಿಕದ ನಾಯಕತ್ವದ ಸ್ಥಾನಮಾನವನ್ನು ಸ್ಥಿರಪಡಿಸಿಕೊಳ್ಳಲು ಮತ್ತು ರಕ್ಷಿಸಲು 'ಅಮೆರಿಕದ ವಿಶೇಷತೆ (American Exceptionalism)'ಯನ್ನು 19ನೆಯ ಶತಮಾನದಲ್ಲಿ ಪ್ರಚುರಪಡಿಸಲಾಯಿತು. 'ಅಮೆರಿಕದ ವಿಶೇಷತೆ' ಎಂಬ ತಾತ್ವಿಕ ಪರಿಕಲ್ಪನೆಗೆ ಇತರ ರಾಷ್ಟ್ರಗಳ ಮನ್ನಣೆ ಸಿಗಬೇಕಾಗಿದ್ದುದು ಅತ್ಯಂತ ಅವಶ್ಯಕವಾಗಿತ್ತು. ಅದಕ್ಕೆ ಪೂರಕವಾಗಲೆಂದೇನೋ ಕಳೆದ ಮೂರು ಅಂಶಗಳು ಬಹುಮುಖ್ಯವಾಗಿದ್ದವು:

1. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ – ಅಮೆರಿಕದ ಜನತೆಯ ಮತ್ತು ಅದರ ವಿವಿಧ ಸಂಸ್ಥೆಗಳ ಸಂಪನ್ನತೆ ಮತ್ತು ಧರ್ಮ ಮಾರ್ಗದ (virtue) ಅವಲಂಬನೆ,

2. ಅಭಿವ್ಯಕ್ತ ವಿಧಿ (Manifest Destiny & Mission) – ಅಮೆರಿಕದ ಈ ಅತ್ಯುತ್ತಮ ವ್ಯವಸ್ಥೆಯನ್ನು ವಿಶ್ವದ ಇತರ ರಾಷ್ಟ್ರಗಳಿಗೆ ದಯಪಾಲಿಸುವುದು ಅಮೆರಿಕದ 'ಧ್ಯೇಯ',

3. ವಿಧಿ (Destiny) – ಅಮೆರಿಕಕ್ಕೆ ಇದು ದೇವರು ವಹಿಸಿದ ಕರ್ತವ್ಯ.

ಅಮೆರಿಕದ ಈ ಚಿಂತನೆ, 19ನೆಯ ಶತಮಾನದಲ್ಲಿ ಒಂದು ಉನ್ನತ, ತಾತ್ವಿಕ ಮತ್ತು ಆದರ್ಶನೀಯ ನೆಲೆಯಲ್ಲಿ ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಮೂಲಕ ಆರಂಭವಾದದ್ದು. ಇದು ಯೂರೋಪ್ ಮೂಲದ ವೈಭವಶಾಲಿ ಮತ್ತು ಕುಲೀನರ ಹಿಡಿತದ ಆಡಳಿತಕ್ಕಿಂತ ಭಿನ್ನ ಮತ್ತು ಉತ್ತಮವಾಗಿತ್ತು. ಇದು ಈ ಖಂಡದ ವಿನೂತನ ಪ್ರಯೋಗ 'Vision of America'ವೆಂದು ಖ್ಯಾತಿಗಳಿಸಿ ಇದರ ಪರಿಶುದ್ಧತೆ ಮತ್ತು ಆದರ್ಶ ಒಂದು ಶಕ್ತಿಯಾಗಿ ಜನತೆಯನ್ನು ಒಂದುಗೂಡಿಸುವಲ್ಲಿ ಯಶಸ್ವಿಯಾಯಿತು. 19ನೆಯ ಶತಮಾನದ ಕವಿ ವಾಲ್ಟ್ ವ್ಹಿಟ್ಮನ್ ಹೀಗೆ ಹೇಳುತ್ತಾನೆ. '...the great mission of peopling the new world with a noble race? Be it ours, to achieve that mission!'

ಪೂರ್ವ ಭಾಗದಲ್ಲಿ ಆರಂಭವಾದ ಈ ಹೊಸ ದೇಶ ಅಮೆರಿಕ ಶೀಘ್ರದಲ್ಲಿ ಬಹಳ ವೇಗವಾಗಿ ಬೆಳೆಯತೊಡಗಿತು. ಇದರ ಬೆಳವಣಿಗೆಗೆ ಇನ್ನೂ ಹೆಚ್ಚಿನ ಭೂ ಪ್ರದೇಶಗಳ ಅವಶ್ಯಕತೆ ಕಾಣತೊಡಗಿತು. ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರವಿದ್ದು, ಪಶ್ಚಿಮ ಮತ್ತು ದಕ್ಷಿಣದ ಪ್ರದೇಶಗಳು ಈ ಸಂಸ್ಥಾನವನ್ನು ಸೇರಿದಲ್ಲಿ ಅಮೆರಿಕ ಒಂದು ಸಂಪದ್ಭರಿತ ರಾಷ್ಟ್ರವಾಗುವುದಕ್ಕೆ ಪ್ರಚಂಡ ಅವಕಾಶವಿತ್ತು. 'Vision of America'ದ ಹಿನ್ನೆಲೆ ಇದು. ಯೂರೋಪಿನ ಲೋಭಿ ದೇಶಗಳು ತಮ್ಮ ಸ್ವಾರ್ಥಕ್ಕಾಗಿ ಬೇರೆ ದೇಶಗಳನ್ನು ತಮ್ಮ ವಸಾಹತುಗಳನ್ನಾಗಿಸಿ ಅವುಗಳ ಮೇಲೆ ಅಧಿಕಾರ, ದಬ್ಬಾಳಿಕೆಯನ್ನು ನಡೆಸಿದರೆ, ಅಮೆರಿಕಕ್ಕೆ ಬೇರೇ ಪ್ರದೇಶಗಳು ಅಥವಾ ಭಾಗಗಳು ಬಲಾತ್ಕಾರ ರಹಿತವಾಗಿ ಸ್ವ-ಇಚ್ಛೆಯಿಂದ ಅಮೆರಿಕ ಸಂಸ್ಥಾನವನ್ನು ಸೇರುವ ಹಾಗೆ ಮಾಡಬೇಕೆಂಬುದು ಅದರ ಅಪೇಕ್ಷೆಯಾಗಿತ್ತು.

ಅಮೆರಿಕದ ವಿಶೇಷತೆಯನ್ನು ಮತ್ತು ಅದರ ಚಿಂತನೆಯನ್ನು ಒಂದು ಚಿತ್ರ ರೂಪದಲ್ಲಿ (The painting of Columbia - a personification of the US) ಹೀಗೆ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿನ ಹೆಣ್ಣು ದೇವತೆ 'ಕೊಲಂಬಿಯ' ಅಮೆರಿಕವನ್ನು ಪ್ರತಿನಿಧಿಸಿದರೆ ಅವಳ ಒಂದು ಕೈಲಿರುವ ಪುಸ್ತಕ ಜ್ಞಾನದ ಸಂಕೇತ ಮತ್ತು ಇನ್ನೊಂದು ಕೈಲಿರುವ telegraph wire, ಪ್ರಗತಿಯ ಸಂಕೇತ. ಅಜ್ಞಾನದ ಅಂಧಕಾರವನ್ನು ಬೆಳಕು ಮತ್ತು ಪ್ರಗತಿಯ ಮೂಲಕ ಹೊಡೆದೋಡಿಸುವಂತೆ ಚಿತ್ರಿಸಲಾಗಿದೆ. ಅಜ್ಞಾನ ಸಂಕೇತವಾದ ಪ್ರಾಣಿಗಳನ್ನೂ ಮತ್ತು ಸ್ಥಳೀಯ ಅಮೆರಿಕನ್ ಇಂಡಿಯನ್‌ರನ್ನೂ ಪೂರ್ವದಿಂದ ಪಶ್ಚಿಮದತ್ತ (ಬಲದಿಂದ ಎಡಕ್ಕೆ) ಓಡಿಸುವಂತೆ, ಅಗ್ರಗಾಮಿಗಳು ಅಥವಾ ಪ್ರವರ್ತಕರು ಗಾಡಿಯಲ್ಲಿ, ಅವರ ಹಿಂದೆ ರೈತಾಪಿ ಜನರು, railroad, telegraphy ಮತ್ತು ಉದ್ಯಮಶೀಲ ನಗರಗಳು, ಇತ್ಯಾದಿ ಅವುಗಳ ಹಿಂದೆ ಬರುತ್ತಿರುವಂತೆ ಚಿತ್ರಿಸಲಾಗಿದೆ.

ಬೇರು ಸೂರು



ಆದರೆ ಈ ಚಿಂತನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಕೆಲವು ದೋಷಗಳಿವೆ. ಮೇಲ್ನೋಟಕ್ಕೆ ಪ್ರಗತಿ ಮತ್ತು ಅಭ್ಯುದಯವನ್ನು ತೋರಿಸುವಂತೆ ಆದರ್ಶಯುಕ್ತವಾಗಿ ಕಾಣುವ 'ಅಮೆರಿಕದ ಗುರಿ', ಪಶ್ಚಿಮ ಮತ್ತು ದಕ್ಷಿಣದ ಭೂ ಭಾಗಗಳನ್ನು ಕಬಳಿಸಿದ ರೀತಿ ಅಮೆರಿಕದ ಗುರಿಯ ಉದ್ದೇಶವನ್ನು ಸಂದೇಹಾಸ್ಪದವಾಗಿ ನೋಡುವಂತೆ ಮಾಡುತ್ತದೆ. ಕೆಲವರು ಇದನ್ನು ಹೀಗೆಂದು ವಾದಿಸುತ್ತಾರೆ– 'villainy clad in the armor of righteous cause'.

19ನೆಯ ಶತಮಾನದಲ್ಲಿ ಆದ ಅಮೆರಿಕದ 'ವಿಸ್ತರಣೆ' 'ಅಭಿವ್ಯಕ್ತ ವಿಧಿ'ಯ ವಿಸ್ತೃತ ರೂಪ ಎಂದು ಸಮರ್ಥಿಸಿಕೊಳ್ಳಲಾಯಿತು. ಆಗ ನಡೆದ 'ವಿಸ್ತರಣೆ'ಯನ್ನು ಸೂಕ್ಷ್ಮವಾಗಿ ಗಮನಿಸೋಣ:

19ನೆಯ ಶತಮಾನದ ಆರಂಭದಲ್ಲಿ ಅಮೆರಿಕ ಪೂರ್ವಭಾಗದಲ್ಲಿ ಕೇವಲ 13 ಪ್ರಾಂತ್ಯಗಳನ್ನು ಹೊಂದಿದ್ದು ಕೆಲವೇ ವರ್ಷಗಳಲ್ಲಿ ಅಗಾಧವಾಗಿ ಬೆಳೆದು ಅಮೆರಿಕ ಸಂಯುಕ್ತ ಸಂಸ್ಥಾನವೆಂಬ ದೊಡ್ಡ ರಾಷ್ಟ್ರವಾಯಿತು. ಇದು ವಿಶ್ವ ಇತಿಹಾಸದಲ್ಲಿ ಅತ್ಯಂತ ಆಶ್ಚರ್ಯದಾಯಕವಾದ ಮತ್ತು ಕುತೂಹಲಕಾರಿಯಾದ ವಿಷಯ. ಇದು ಹೇಗೆ ಸಾಧ್ಯವಾಯಿತೆಂದು ಗಮನಿಸಿದಾಗ ಸ್ಪಷ್ಟವಾಗಿ ಗೋಚರವಾಗುವುದು ಅದು ಮಧ್ಯ ಮತ್ತು ಪಶ್ಚಿಮ ಭಾಗಗಳನ್ನು ಕಬಳಿಸಿದ ರೀತಿ. ಅದು ಖಂಡಿತವಾಗಿ

ನ್ಯಾಯಯುತವಾದದ್ದಲ್ಲ ಮತ್ತು ಪ್ರಶ್ನಾರ್ಹ. ಯಾವುದೇ ರೀತಿಯ ನಾಯಕತ್ವ, ಸಂಘಟನೆ, ಆಡಳಿತಗಳಿಲ್ಲದ ಈ ಪ್ರದೇಶಗಳನ್ನು ಬಹು ಶೀಘ್ರದಲ್ಲಿ ಅಲ್ಲಿದ್ದ ಅಮೆರಿಕನ್ ಇಂಡಿಯನ್ನರನ್ನು ಬಗ್ಗು ಬಡಿದು ನುಂಗಿಹಾಕಿತು. ಆನಂತರ ದಕ್ಷಿಣದ ಮೆಕ್ಸಿಕೊ ದೇಶದ ಒಳ್ಳೆಯ ಭಾಗಗಳನ್ನು ಯುದ್ಧದ ಮೂಲಕ ಕಬಳಿಸಿತು.

ಅಮೆರಿಕದ ವಿಶಿಷ್ಟತೆ ಕಾರ್ಯಾಚರಣೆಯಲ್ಲಿ – ಅಮೆರಿಕದ ಮೂಲ ನಿವಾಸಿಗಳು

ಅಮೆರಿಕನ್ ವಿಶೇಷತೆಯ ದುರಂತಗಳಲ್ಲಿ ಅಮೆರಿಕನ್ ಇಂಡಿಯನ್ಸ್‌ಗೆ ಆದ ಅನ್ಯಾಯ ಬಹಳ ದೊಡ್ಡದು. ಅಮೆರಿಕನ್ ಇಂಡಿಯನ್ಸ್‌ನ ಹಿನ್ನೆಲೆ ಸುಮಾರು 15,000ದಿಂದ 20,000 ವರ್ಷಗಳದು. ಕಾಲಕ್ರಮೇಣ ಇಲ್ಲಿನ ನಾಗರೀಕತೆ ವಿಶ್ವದ ಇತರ ನಾಗರೀಕತೆಗಳಂತೆ ಬೆಳೆಯಿತು. ಯೂರೋಪಿನ ಮೊದಲ ವಲಸೆಗಾರರು ಬರುವ ವೇಳೆಗಾಗಲೇ ಇಲ್ಲಿ ಕೃಷಿ, ಮತ, ಪುರಾಣ, ಇತ್ಯಾದಿಗಳ ಬೆಳವಣಿಗೆ ಆಗಿತ್ತು. ಮುಂದುವರಿದ ಕೃಷಿಗಾರಿಕೆ, ಆಹಾರದ ಸಂರಕ್ಷಣೆ, ನಗರಗಳ ಕಲ್ಪನೆ ಮತ್ತು ಯೋಜನೆಗಳಿದ್ದವೆಂದು ಪುರಾತನ ವಸ್ತು ಮತ್ತು ಸಂಶೋಧನಾ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಉದಾಹರಣೆಗೆ ಮಿಸಿಸಿಪ್ಪಿ ವ್ಯಾಲಿಯ ಕಹೋಕಿಯ ಎನ್ನುವ ಪ್ರದೇಶದಲ್ಲಿ ಕ್ರಿ.ಶ. 700 – 1400ರಲ್ಲಿ ಸುಧಾರಿತ ನಾಗರೀಕತೆ ಇತ್ತು. ಅದರಲ್ಲೂ ಕ್ರಿ.ಶ. 1050 – 1200ದ ಸಮಯದಲ್ಲಿ ಈ ನಗರವು ಸುಮಾರು ಆರು ಚದುರ ಮೈಲಿಗಳಷ್ಟಿದ್ದು 10,000 – 20,000 ಜನಸಂಖ್ಯೆಯಿತ್ತೆಂದು ಹೇಳುತ್ತಾರೆ. 120ಕ್ಕೂ ಮಿಕ್ಕಿದ ದಿಬ್ಬಗಳು ಕಾಲಕ್ರಮೇಣ ಕಟ್ಟಲ್ಪಟ್ಟವು. ಸಾಲು ಮನೆಗಳೂ, ದೊಡ್ಡ ದೊಡ್ಡ ಪ್ರಾಕಾರಗಳೂ ಇದ್ದವು ಮತ್ತು ನಗರದ ಸುತ್ತ ಇರುವ ಭೂಮಿಯನ್ನು ಕೃಷಿಗಾಗಿ ಬಳಸಲಾಗುತ್ತಿತ್ತು. ಕ್ರಿ.ಶ. 1200ರಲ್ಲಿ ಇಲ್ಲಿಯ ಅತಿ ದೊಡ್ಡ ನಗರದ ಜನಸಂಖ್ಯೆ 30,000 ಇದ್ದಿರಬಹುದೆಂದು ಅಂದಾಜು ಮಾಡುತ್ತಾರೆ. ಆನಂತರ ಇಷ್ಟು ದೊಡ್ಡ ನಗರಗಳು 19ನೆಯ ಶತಮಾನದವರೆಗೂ ಕಾಣಸಿಗುವುದಿಲ್ಲ.

ಅಮೆರಿಕನ್ ಇಂಡಿಯನ್ ಬುಡಕಟ್ಟು ಜನರ ಸಮಾಜದ ಮತ್ತು ಆಡಳಿತದ ವ್ಯವಸ್ಥೆ ಬಹಳ ಉತ್ತಮ ಮಟ್ಟದ್ದಾಗಿತ್ತು. ನಮ್ಮ ಭಾರತೀಯ ಹಳ್ಳಿಗಳ ಪಂಚಾಯತಿ ಪದ್ಧತಿಯಂತೆ, ಆಯ್ದ ಹಿರಿಯರು ಈ ಸಮುದಾಯವನ್ನು ನಡೆಸುತ್ತಿದ್ದರು. ಅವರು ಗುಂಪಿನ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು ಮತ್ತು ಜನರೂ ಕೂಡ ಅದಕ್ಕೆ ಬದ್ಧರಾಗಿ ನಡೆದುಕೊಳ್ಳುತ್ತಿದ್ದರು. ಹಿರಿಯ ನಾಯಕರಲ್ಲಿ ಯಾರಾದರೂ ಸತ್ತು ಹೋದರೆ, ಅವರ ಸ್ಥಾನವನ್ನು ಉಳಿದ ಹಿರಿಯರೊಬ್ಬರಿಂದ ತುಂಬಲಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಹಕ್ಕು ಇತ್ತು. ರಾಜನೀತಿ ಶಾಸ್ತ್ರದ ವಿದ್ವಾಂಸರಾದ ಜೀನ್ ಜಾಕ್ ರೂಸೋ (Jean Jacques Rousseau) ಅವರ ಪ್ರಕಾರ ಪ್ರಜಾಪ್ರಭುತ್ವದ

ವ್ಯವಸ್ಥೆ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆಯ ಉದಯವಾದದ್ದು ಇಲ್ಲಿಯೇ. ಯೂರೋಪಿನ ವಲಸೆಗಾರರು ಈ ವ್ಯವಸ್ಥೆಯನ್ನು ಸ್ಥಳೀಯ ಅಮೆರಿಕನ್ ಬುಡಕಟ್ಟಿನಿಂದ ಕ್ರಿ.ಶ. 1500 – 1776ರಲ್ಲಿ ತಿಳಿದುಕೊಂಡರು ಎಂದು ವಿಶ್ವಾಸದಿಂದ ಹೇಳುತ್ತಾರೆ.

'Natural freedom is the only object of the policy of the Native Americans; with this freedom do nature and climate rule alone amongst them... Native Americans maintain their freedom and find abundant nourishment... and are people who live without laws, without police, without religion.' -Jean Jacques Rousseau. (ಸ್ವಾಭಾವಿಕ, ಸರಳ ಸ್ವಾತಂತ್ರ್ಯವೊಂದೇ ಅಮೆರಿಕನ್ ಇಂಡಿಯನ್ನರ ಮೂಲಮಂತ್ರವಾಗಿತ್ತು. ಪ್ರಕೃತಿಗೆ ಮಾತ್ರ ಮಣಿಯುತ್ತಿದ್ದ ಅವರು ಸ್ವಭಾವತಃ ಸುಖಿಗಳು. ಹಾಗೆಯೇ ಯಾವ ಕಾನೂನು, ಪೋಲಿಸ್ ಅಥವಾ ಧರ್ಮದ ಹಂಗಿಲ್ಲದ ಯಾರೂ ಇಷ್ಟೇ ಸುಖಿಗಳಾಗಿರುತ್ತಾರೇನೋ.)

ಇದು ಯೂರೋಪಿನಿಂದ ವಲಸೆಗಾರರು ಇಲ್ಲಿಗೆ ಬಂದಾಗ ಇದ್ದ ನಿಜವಾದ ಅಮೆರಿಕನ್ ಇಂಡಿಯನ್ನರ ಪ್ರಪಂಚ. ಆದರೆ ನಂತರ ಬಂದ ವಲಸೆಗಾರರು ಇವರನ್ನು ನೋಡಿದ್ದ ರೀತಿಯೇ ಬೇರೆ. ‘ಕೊಲಂಬಿಯ’ ಚಿತ್ರದಲ್ಲಿ ಅಮೆರಿಕನ್ ಇಂಡಿಯನ್ನರನ್ನು ಪ್ರಾಣಿಗಳ ಜೊತೆಗೆ ಮತ್ತು ಕತ್ತಲಿನಲ್ಲಿಟ್ಟು ಅಜ್ಞಾನಕ್ಕೆ ಹೋಲಿಸಲಾಗಿದೆ. ಮತ್ತು ಕೊಲಂಬಿಯ ಅಮೆರಿಕಕ್ಕೆ ಬೆಳಕು ಮತ್ತು ಪ್ರಗತಿಯನ್ನು ತರಲು ಅವರನ್ನು ಇಲ್ಲಿಂದ ಓಡಿಸುವಂತೆ ಚಿತ್ರಿಸಲಾಗಿದೆ. ಹೀಗೆ ಹೊಸ ಅಮೆರಿಕ ತನ್ನ ಜಾಗವನ್ನು ವಿಸ್ತರಿಸಿದ ಮತ್ತು ಅಮೆರಿಕನ್ ಇಂಡಿಯನ್ನರನ್ನು ಹೊಡೆದೋಡಿಸಿದ ರೀತಿ ಅವರೇ ಹೇಳಿಕೊಂಡ ಆದರ್ಶಗಳಿಗೆ ವಿರೋಧಿಯಾಗಿ ಹೊಸ ಸಮಸ್ಯೆಗಳನ್ನು ತಂದೊಡ್ಡಿತು. ತಮ್ಮ ಈ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಹೆಣಗಾಡುತ್ತಾ ತಮ್ಮನ್ನು ಹೀಗೆ ಸಮರ್ಥಿಸಿಕೊಂಡರು: ‘ಈ ಬಡ ಅಮೆರಿಕನ್ ಇಂಡಿಯನ್ನರನ್ನು ಉಳಿಸಲು ಹಾಗೆ ಮಾಡಬೇಕಾಯಿತು. ಪೂರ್ವ ಭಾಗ ಅವರಿಗೆ ಸರಿಹೋಗುತ್ತಿರಲಿಲ್ಲ. ಅವರ ಜೀವನಕ್ರಮವನ್ನು ಮತ್ತು ಅವರನ್ನು ಉಳಿಸಿಕೊಳ್ಳಲು ಇದ್ದದ್ದು ಇದೊಂದೇ ಮಾರ್ಗ.’

ಹೀಗೆ ಓಡಿಸಲ್ಪಟ್ಟ ಇಂಡಿಯನ್ಸ್ ಅನಾಗರೀಕರಾಗಿರಲಿಲ್ಲ. ಅವರಲ್ಲಿ ಅನೇಕರು ನಾಗರೀಕರಾಗಿದ್ದರು. ಇವರನ್ನೆಲ್ಲಾ ಸಾರಾಸಗಟಾಗಿ ಅವರ ಸ್ವಂತ ನೆಲದಿಂದ ತಮ್ಮ ಸ್ವಾರ್ಥಕ್ಕಾಗಿ ಓಡಿಸಲಾಯಿತು. ಪಶ್ಚಿಮ ಭಾಗಕ್ಕೆ ತಳ್ಳಲ್ಪಟ್ಟ ಅಮೆರಿಕನ್ ಇಂಡಿಯನ್ಸ್ ತಮ್ಮ ಜೊತೆಗೆ ಪೂರ್ವಭಾಗದ ಹೊಸ ನಾಗರೀಕತೆಯನ್ನೂ ಸಹ ತೆಗೆದುಕೊಂಡುಹೋದರು ಮತ್ತು ಸ್ಥಳೀಯ ಅಮೆರಿಕನ್ ಪ್ರವರ್ತಕರಾದರು. ಅವರಿಗಾಗಿ ಮೀಸಲಾತಿ ಪ್ರದೇಶಗಳನ್ನು ಕೊಡಲಾಯಿತು. ಅತ್ಯಂತ ಹಾಸ್ಯಾಸ್ಪದ ವಿಷಯವೆಂದರೆ ಈ ದೇಶದ ಮೂಲ ಜನರಾದ ಈ ಜನಾಂಗಕ್ಕೆ 1924ರಲ್ಲಿ ಅಮೆರಿಕದ ಪೌರತ್ವವನ್ನು (US

Citizenship) ಕೊಡಲಾಯಿತು! (ಕೆಲವು ರಾಜ್ಯಗಳು ಅವರಿಗೆ ಇದಕ್ಕೂ ಮುಂಚೆಯೇ ಪೌರತ್ವ ಪ್ರದಾನಿಸಿದ್ದವು.)

ಪರಕೀಯರ ದಬ್ಬಾಳಿಕೆಗೆ ಒಳಪಟ್ಟ ಅಮೆರಿಕನ್ ಇಂಡಿಯನ್ನರ ಸ್ಥಿತಿ ಹೀನಾಯವಾಯಿತು. 17ನೆಯ ಶತಮಾನದ ಆರಂಭದಲ್ಲಿ ಅವರ ಜನಸಂಖ್ಯೆ ಸುಮಾರು 2.1 – 7 ಮಿಲಿಯನ್ ಇದ್ದದ್ದು 19ನೇ ಶತಮಾನದ ಕೊನೆಯ ವೇಳೆಗೆ ಕೇವಲ 250,000ಕ್ಕೆ ಇಳಿದಿತ್ತು. ಇದಕ್ಕೆ ಕಾರಣಗಳು ಹಲವು. ಯೂರೋಪಿನಿಂದ ಬಂದ ಹೊಸ ರೋಗ–ರುಜಿನಗಳು, ಅನಗತ್ಯ ದಬ್ಬಾಳಿಕೆ ಮತ್ತು ಯುದ್ಧಗಳಿಂದ ಅವರ ಸಂಖ್ಯೆ ಕ್ಷೀಣಿಸಿತು. ಸದ್ಯಕ್ಕೆ ಅವರ ಜನಸಂಖ್ಯೆ ಸುಮಾರು 2.5 ಮಿಲಿಯನ್ ಇದ್ದು, ಅವರನ್ನು ಕ್ಯಾಲಿಫೋರ್ನಿಯ, ಅರಿಜೋನ, ಓಕ್ಲಹೋಮ, ಮಾಂಟಾನ ಮತ್ತು ಡಕೋಟಾ ರಾಜ್ಯಗಳಲ್ಲಿ ಕಾಣಬಹುದು. ಅಮೆರಿಕನ್ ಇಂಡಿಯನ್ಸ್‌ಗೆ ಅವರದೇ ಆದ ಆಡಳಿತ ಮತ್ತು ನ್ಯಾಯಾಂಗದ ವ್ಯವಸ್ಥೆ ಇದ್ದು ಅವರು ಮುಖ್ಯ ವ್ಯವಸ್ಥೆಯಲ್ಲಿ ಪಾಲುಗಾರರಾಗಿಲ್ಲ. ಹಾಗಾಗಿ ಅವರಿಗೆ ಇನ್ನೂ ನವ ಅಮೆರಿಕದ ಮುಖ್ಯ ವ್ಯವಸ್ಥೆಯಲ್ಲಿ ಸೇರಿಕೊಂಡು ಅದರ ಭಾಗವಾಗಿ ಮುಂದುವರಿಯಲು ಸಾಧ್ಯವಾಗಿಲ್ಲ. ತಮ್ಮದೇ ನೆಲದಲ್ಲಿ ಪರಕೀಯರಂತೆ ಜೀವಿಸುತ್ತಿದ್ದಾರೆ. ಮೂಲ ಅಮೆರಿಕನ್ನರಾದ ಅವರ ಸ್ಥಿತಿ ಹೀನಾಯವಾಗಿದ್ದು, ನಿರುದ್ಯೋಗ, ಅತಿಯಾದ ಮದ್ಯಪಾನ, ಮಧುಮೇಹ, ಆತ್ಮಹತ್ಯೆ ಇತ್ಯಾದಿಗಳ ಸಂಖ್ಯೆ ಹೆಚ್ಚಾಗಿದೆ. ಇತ್ತೀಚಿನ ಒಂದು ಅಧ್ಯಯನದ ಪ್ರಕಾರ 18–24 ವಯಸ್ಸಿನ ಗುಂಪಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಅಮೆರಿಕನ್ ಇಂಡಿಯನ್ನರ ಸಂಖ್ಯೆ ಉಳಿದ ಅಮೆರಿಕನ್ನರಿಗಿಂತ ಮೂರರಷ್ಟಿದೆ.

ಅಮೆರಿಕದ ಈ ಸ್ವಾರ್ಥಪೂರಿತ ಕೃತ್ಯ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಗಿ ಉಳಿದಿದೆ. ಸದರಿ ರಾಜಕಾರಣಿಗಳು ಅವರಿಗೆ ನ್ಯಾಯ ಒದಗಿಸಲು ಹೆಣಗಾಡುತ್ತಿದ್ದಾರೆ. 2004ರಲ್ಲಿ ಸೆನೆಟರ್ ಸ್ಯಾಮ್ ಬ್ರೌನ್ ಬ್ಯಾಕ್ ಒಂದು ಗೊತ್ತುವಳಿಯನ್ನು ಮಂಡಿಸಿ ಅದರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಸ್ವಾರ್ಥಪೂರಿತ ನಿಲುವುಗಳಿಂದ ಸ್ಥಳೀಯ ಇಂಡಿಯನ್ಸ್‌ಗೆ ಆದ ಅನ್ಯಾಯಗಳಿಗಾಗಿ ಕ್ಷಮೆಯನ್ನು ಕೇಳಲಾಯಿತು. ಈ ಚರಿತ್ರಾರ್ಹ ಕ್ಷಮಾಕೇಳಿಕೆಯ ಗೊತ್ತುವಳಿಯನ್ನು ಅಧ್ಯಕ್ಷ ಬರಾಕ್ ಒಬಾಮ ಅವರು 2009ರಲ್ಲಿ ಸಹಿ ಹಾಕುವುದರ ಮೂಲಕ ಕಾನೂನನ್ನಾಗಿಸಿದರು.

ಅಮೆರಿಕದ ವಿಚಾರವಾದಿಗಳು ಅಮೆರಿಕದ ಪ್ರಜಾಪ್ರಭುತ್ವದ ಸಂವಿಧಾನಕ್ಕೆ ಸ್ಥಳೀಯ ಇಂಡಿಯನ್ಸ್‌ನ ಸಮಾಜ ವ್ಯವಸ್ಥೆಯ ಪ್ರಭಾವ ನಿರ್ವಿವಾದವೆಂದು ಭಾವಿಸುತ್ತಾರೆ. 1988ರ ಅಕ್ಟೋಬರ್‌ನಲ್ಲಿ ಕಾಂಗ್ರೆಸ್ ಒಂದು ಗೊತ್ತುವಳಿಯನ್ನು ಜಾರಿಗೊಳಿಸಿ, ಅಮೆರಿಕ ಸಂವಿಧಾನಕ್ಕೆ ಇರೋಕ್ವೋಯಿಸ್ (ಸ್ಥಳೀಯ ಅಮೆರಿಕನ್ ಇಂಡಿಯನ್ಸ್‌ನ ಒಂದು ಪಂಗಡ)ನ ಪ್ರಭಾವವನ್ನು ಗುರುತಿಸಿ ಗೌರವಿಸಿತು.

ಬೇರು ಸೂರು

ಅಮೆರಿಕದ ವಿಶಿಷ್ಟತೆ ಕಾರ್ಯಾಚರಣೆಯಲ್ಲಿ – ಮೆಕ್ಸಿಕೋದಲ್ಲಿ ಸಾಮ್ರಾಜ್ಯ ವಿಸ್ತರಣೆ

'ಅಮೆರಿಕದ ವಿಶೇಷತೆ'ಯ ಇನ್ನೊಂದು ಮುಖವನ್ನು ನೋಡೋಣ. ಇದೂ ಕೂಡ 19ನೆಯ ಶತಮಾನದ ಮಧ್ಯಭಾಗದಲ್ಲಿ ನಡೆದದ್ದು. ಅಮೆರಿಕ ಸಂಯುಕ್ತ ಸಂಸ್ಥಾನದ ಮಹತ್ವಾಕಾಂಕ್ಷೆಯ ವಿಸ್ತರಣೆಯ ಪ್ರಯೋಗ ಈಗ ದಕ್ಷಿಣ ಭಾಗದಲ್ಲಿದ್ದ ಮೆಕ್ಸಿಕೋ ಮೇಲೆ ನೆಡುತ್ತದೆ. ಮೆಕ್ಸಿಕೋ ಆಗಷ್ಟೇ, ಅಂದರೆ 1821ರಲ್ಲಿ ಸ್ಪೈನ್‌ನಿಂದ ಸ್ವಾತಂತ್ರ್ಯವನ್ನು ಪಡೆದಿತ್ತು. ಉತ್ತರ ಭಾಗದ ಟೆಕ್ಸಾಸ್ ಮತ್ತು ಕ್ಯಾಲಿಫೋರ್ನಿಯಗಳ ಮೇಲೆ ಅಮೆರಿಕದ ಆಶಾಪೂರಿತ ಕಣ್ಣು ಬೀಳುತ್ತದೆ. ಕ್ಯಾಲಿಫೋರ್ನಿಯ ಸಂಪದ್ಭರಿತವಾಗಿದ್ದು, ಅದರ ಹವಾಮಾನ ಮತ್ತು ಬಂದರುಗಳು ಸುಂದರವಾಗಿದ್ದವು. ಕ್ಯಾಲಿಫೋರ್ನಿಯ ಮತ್ತು ಓರೆಗಾನ್‌ನ ಸಮುದ್ರಭಾಗಗಳು ಪೂರ್ವ ದೇಶಗಳಾದ ಚೀನ, ಜಪಾನ್‌ಗಳೊಂದಿಗೆ ವ್ಯವಹರಿಸಲು ಸಮರ್ಪಕವಾಗಿತ್ತು.

ಜಾಸ್ತಿ ಜನಸಂಖ್ಯೆ ಇಲ್ಲದ ಈ ಭಾಗಗಳನ್ನು ಕಬಳಿಸುವ ಯೋಜನೆ ಹೀಗಿತ್ತು. ಅಮೆರಿಕದ ಪ್ರವರ್ತಕರು ಈ ಪ್ರದೇಶಗಳಿಗೆ ಮೊದಲು ಹೋಗಿ, ಅಲ್ಲಿ ನೆಲೆಯೂರಿ, ಅಲ್ಲಿನ ಜನಗಳ ಜೊತೆಗೆ ಸಮ್ಮಿಳಿಸಿ, ನಿಧಾನವಾಗಿ ಅಲ್ಲಿನ ಮೆಕ್ಸಿಕನ್ನರ, ಅಮೆರಿಕನ್ ಇಂಡಿಯನ್ನರ ಮನಸ್ಸನ್ನು ಗೆದ್ದು, ಅಮೆರಿಕ ಸಂಸ್ಥಾನಕ್ಕೆ ಆ ಪ್ರದೇಶಗಳನ್ನು ಒತ್ತುವರಿ ಮಾಡಿಕೊಳ್ಳುವುದು.

ಅಮೆರಿಕ ಸಂಯುಕ್ತ ಸಂಸ್ಥಾನ 1840ರ ದಶಕದಲ್ಲಿ ಅತ್ಯಂತ ಶೀಘ್ರವಾಗಿ ಮತ್ತು ವ್ಯಾಪಕವಾಗಿ ವಿಸ್ತಾರಗೊಂಡಿತು. 1845ರಲ್ಲಿ ಟೆಕ್ಸಾಸ್ ಪ್ರದೇಶವನ್ನು ಆಕ್ರಮಿಸಿತು. ಗ್ರೇಟ್ ಬ್ರಿಟನ್ನಿನೊಡನೆ ಸಂಧಾನ ಮಾಡಿಕೊಂಡು 1846ರಲ್ಲಿ ಓರೆಗಾನನ್ನು ಪಡೆದುಕೊಂಡಿತು. ಇದೇ ವರ್ಷದಲ್ಲಿ ಮೆಕ್ಸಿಕೋವನ್ನು ಯುದ್ಧದಲ್ಲಿ ಸೋಲಿಸಿ ಕ್ಯಾಲಿಫೋರ್ನಿಯ ಮತ್ತು ನ್ಯೂ ಮೆಕ್ಸಿಕೋ ಪ್ರದೇಶಗಳನ್ನು ಕಬಳಿಸಿಕೊಂಡಿತು. ಈ ಹಿಂದೆ ಹೇಳಿದಂತೆ ಈ ಶತಮಾನದಲ್ಲಿ ಸ್ಥಳೀಯ ಅಮೆರಿಕನ್ನರಿಂದ ವಿಶಾಲವಾದ ಪ್ರದೇಶಗಳನ್ನು ಕಿತ್ತುಕೊಂಡು ಅವರನ್ನು ಬೇಡದೇ ಇದ್ದ ಜಾಗಗಳಿಗೆ ಓಡಿಸಲಾಯಿತು.

ಮೆಕ್ಸಿಕೋ ದೇಶದಿಂದ ಅದರ ಪ್ರದೇಶಗಳನ್ನು ಅತಿಕ್ರಮಿಸುವ ವಿಷಯದಲ್ಲಿ ಸಂಯುಕ್ತ ಸಂಸ್ಥಾನದ ನಾಯಕರಲ್ಲಿ ಒಮ್ಮತವಿರಲಿಲ್ಲ. ಚರಿತ್ರಕಾರ ಥಾಮಸ್ ಹೀಟಾಲ ಹೀಗೆ ಹೇಳುತ್ತಾರೆ:

'ಅಧ್ಯಕ್ಷರುಗಳಾದ ಜಾನ್ ಟೈಲರ್, ಜೇಮ್ಸ್ ಪೋಕ್, ಅವರ ಸಲಹಾಕಾರರು ಮತ್ತು ಅವರ ಪಕ್ಷದಲ್ಲಿದ್ದ ಕಾಂಗ್ರೆಸ್, ಮೆಕ್ಸಿಕೋ ಪ್ರದೇಶಗಳನ್ನು ಅತಿಕ್ರಮಿಸುವುದನ್ನು ಪ್ರತಿಪಾದಿಸಿದರೂ, ಅವರ ಕಾರಣಗಳಲ್ಲಿ ಸಹಮತವಿರಲಿಲ್ಲ. ಅಭಿವ್ಯಕ್ತ ವಿಧಿ (Manifest Destiny)ಯನ್ನು ಹಲವು ಬಾರಿ ಪ್ರಸ್ತಾಪಿಸಿ ಸಮರ್ಥಿಸಿಕೊಳ್ಳಲಾಯಿತು. ಆದರೆ

ಅತಿಕ್ರಮಣದ ಮೂಲ ಉದ್ದೇಶ ಉತ್ತಮ ನೆಲ, ಬಂದರು, ಮಾರುಕಟ್ಟೆಗಳನ್ನು ಕಬಳಿಸುವ ಸ್ವಾರ್ಥತೆಯಿಂದ ಕೂಡಿತ್ತೇ ವಿನಹ ಅದರಲ್ಲಿ ಯಾವ ಆದರ್ಶವೂ ಇರಲಿಲ್ಲ. ಯೂರೋಪಿನ ಇತರ ಸಮ್ರಾಜ್ಯಶಾಹೀ ದೇಶಗಳಾದ ಸ್ಪೈನ್, ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾಗಳಂತೆ ಅಮೆರಿಕ ಕೂಡ ವೇಗವಾಗಿ ಬೆಳೆಯುತ್ತಿದ್ದ ತನ್ನ 13 ಕಾಲೋನಿಯ ಆಸ್ತಿ, ಅಂತಸ್ತು, ಸಂರಕ್ಷಣೆಗಳ ವಿಸ್ತರಣೆಗೆ ಮುಂದಾಯಿತು.'

ಆದರೆ ಯೂರೋಪಿಯನ್ ಸಾಮ್ರಾಜ್ಯಶಾಹೀ ದೇಶಗಳಿಗೂ ಮತ್ತು ಅಮೆರಿಕಕ್ಕೂ ಒಂದು ದೊಡ್ಡ ವ್ಯತ್ಯಾಸ ಇತ್ತು. ಅಮೇರಿಕ ಕೂಡ ಆ ದೇಶಗಳಂತೆ ಕ್ರಮವಾದ ಮತ್ತು ಅಕ್ರಮವಾದ ವಿಧಾನಗಳನ್ನು ಬಳಸಿದರೂ ಅಮೆರಿಕದ ನಾಯಕತ್ವದ ಉದ್ದೇಶ ಆಕ್ರಮಿತ ಪ್ರದೇಶಗಳನ್ನು ವಸಾಹತುಗಳನ್ನಾಗಲೀ, ಮಿಲಿಟರಿ ಆಡಳಿತಕ್ಕೆ ಒಳಪಡಿಸುವುದಾಗಲೀ ಆಗಿರಲಿಲ್ಲ. ಅವರು ಈ ಪ್ರದೇಶಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಉಳಿದ ರಾಜ್ಯಗಳ ಜೊತೆಗೆ ಸಮಾನವಾಗಿ ಸೇರಿಸಿಕೊಳ್ಳುವುದಾಗಿತ್ತು. ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಎಲ್ಲ ಜನರಿಗೆ ಸಮಾನ ಹಕ್ಕು ಮತ್ತು ಸವಲತ್ತುಗಳನ್ನು ಯಥಾವತ್ತಾಗಿ ಪ್ರದಾನಿಸಲಾಯಿತು.

ಯಥಾಪ್ರಕಾರ ಅಮೆರಿಕ ಸರಕಾರಕ್ಕೆ ಮೆಕ್ಸಿಕೋ ಮೇಲಿನ ಯುದ್ಧದ ಗುರಿ ಮತ್ತು ಸಾಧನೆಗಳ ವಿಷಯದಲ್ಲಿ ಒಮ್ಮತ ಅಭಿಪ್ರಾಯವಿರಲಿಲ್ಲ. ಆಶ್ಚರ್ಯಕರ ವಿಷಯವೆಂದರೆ ಅದು ನಾವು ಇತ್ತೀಚೆಗಷ್ಟೇ ನೋಡಿದ ಇರಾಕ್ ಮತ್ತು ಅಫ್ಘಾನಿಸ್ತಾನ್ ಯುದ್ಧಗಳ ಬಗ್ಗೆ ಇದ್ದ ಭಿನ್ನ ಮತದಂತೆ ಇತ್ತು. ಯುದ್ಧ ಆರಂಭವಾದ ಎರಡು ತಿಂಗಳಲ್ಲೇ ಮಸಾಚುಸೆಟ್ಸ್‌ನ ಕಾಂಗ್ರೆಸ್ ಪ್ರತಿನಿಧಿ ಜಾರ್ಜ್ ಆಶ್ಮನ್, ಅಧ್ಯಕ್ಷ ಜೇಮ್ಸ್ ಪೋಕ್‌ರನ್ನು ಹೀಗೆ ಥಳಿಸುತ್ತಾರೆ– 'ಆಕ್ರಮಣವನ್ನು ನಾವು ವಿರೋಧಿಸುತ್ತೇವೆ ಎಂದು ಹೇಳಿಕೊಳ್ಳುವ ನಾಟಕವನ್ನು ಇನ್ನು ನಿಲ್ಲಿಸಿ. ಮುಖವಾಡ ಕಳಚಿದೆ. ನಿಜರೂಪ ಬಯಲಾಗಿದೆ. ಅತಿಕ್ರಮಣ, ದಬ್ಬಾಳಿಕೆ, ವಸಾಹತು ನಮ್ಮ ಮುಖದ ಮೇಲೆ ರಾಚುತ್ತಿದೆ'. ಆಶ್ಮನ್‌ಗೆ ಪೋಕ್‌ನ ಬೂಟಾಟಿಕೆಯ ಆದರ್ಶ, ಮುಗ್ಧತೆ ಮತ್ತು ಅಮೆರಿಕನ್ ವಿಶೇಷತೆಯ ಮೇಲೆ ಅಸಹ್ಯವಾಗಿತ್ತು. ಅವರ ಡೆಮಾಕ್ರಟಿಕ್ ಪಕ್ಷವಂತೂ ಪೋಕ್ ಮೇಲೆ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿತ್ತು.

ಅಮೆರಿಕ ಮಿಲಿಟರಿಯ ಯುಲಿಸಿಸ್ ಗ್ರಾಂಟ್ (ನಂತರ ಇವರು ಅಮೆರಿಕದ ಅಧ್ಯಕ್ಷರೂ ಆದರು) ತಮ್ಮ ನೆನಪಿನ ಪುಸ್ತಕದಲ್ಲಿ ಮೆಕ್ಸಿಕೋ ಯುದ್ಧವನ್ನು ಕುರಿತು ಹೀಗೆ ಹೇಳುತ್ತಾರೆ, 'ನನಗೆ ತಿಳಿದಂತೆ ಅಮೆರಿಕ ಇನ್ನಾವ ಯುದ್ಧದಲ್ಲೂ ಇಷ್ಟೊಂದು ಧೂರ್ತತೆ ಮತ್ತು ನೀಚತನವನ್ನು ತೋರಿಸಿಲ್ಲ.'

ನಾವಿಲ್ಲಿ ಒಂದು ಮುಖ್ಯ ಪ್ರಶ್ನೆಯನ್ನು ಕೇಳಬೇಕಾಗಿದೆ– ಮೆಕ್ಸಿಕೋ ದೇಶಕ್ಕೆ ತನ್ನ ನೆರೆಯ ರಾಷ್ಟ್ರವಾದ ಅಮೆರಿಕದ ಜೊತೆ ಯಾವ ರೀತಿಯ ಸಂಬಂಧ ಮತ್ತು ಅಭಿಪ್ರಾಯವಿದೆ? ನನಗನ್ನಿಸುವುದು ಮೆಕ್ಸಿಕನ್ನರಿಗೆ ಒಂದೆಡೆ ಅಮೆರಿಕದ ಪ್ರಾಬಲ್ಯದ ಬಗ್ಗೆ

ಮತ್ತು ಅಲ್ಲಿನ ಸಂಸ್ಥೆ, ವ್ಯವಸ್ಥೆಗಳ ಬಗ್ಗೆ ಅಭಿಮಾನವಿದ್ದರೆ, ಮತ್ತೊಂದೆಡೆ ತನ್ನ ದೇಶದ ಭಾಗಗಳನ್ನು ಅಮೆರಿಕ ಕಬಳಿಸಿದ ರೀತಿ ಮತ್ತು ತಮ್ಮ ರಾಜಕೀಯದಲ್ಲಿ ಅದರ ಹಸ್ತಕ್ಷೇಪದ ಬಗ್ಗೆ ತೀವ್ರ ಅಸಮಾಧಾನವಿದೆಯೆಂದು. ಮೆಕ್ಸಿಕೊ ಅಥವಾ ಅದರ ಜನರ ಅಭಿಪ್ರಾಯವನ್ನು ಆ ದೇಶದ ಹಲವಾರು ಪ್ರಮುಖ ವ್ಯಕ್ತಿಗಳ ಮೂಲಕವೇ ತಿಳಿದುಕೊಳ್ಳಬಹುದು. 20ನೆಯ ಶತಮಾನದಲ್ಲಿ ಮೆಕ್ಸಿಕೋ ದೇಶದ ಗೌರವಾನ್ವಿತ ಮತ್ತು ಪ್ರತಿಷ್ಠಿತ ಬರಹಗಾರರಾದ ಕಾರ್ಲೋಸ್ ಫ್ಯೂಎಂಟೇಸ್ (Carlos Fuentes) ಅಮೆರಿಕ ಮತ್ತು ಮೆಕ್ಸಿಕೋಗಳ ಸಂಬಂಧಗಳ ಮತ್ತು ಮೂಲಭೂತ ವ್ಯತ್ಯಾಸಗಳನ್ನು ಅವರ ಪುಸ್ತಕ 'Old Gringo'ನಲ್ಲಿ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ.

ಫ್ಯೂಎಂಟೇಸ್ ಅವರಿಗೆ ಈ ಎರಡೂ ದೇಶಗಳ ಸಂಸ್ಕೃತಿ ಮತ್ತು ಇತಿಹಾಸಗಳ ಬಗ್ಗೆ ಅಪಾರವಾದ ತಿಳುವಳಿಕೆ ಇದ್ದುದರಿಂದ ಈ ಪುಸ್ತಕಕ್ಕೆ ಬಹಳ ಮಹತ್ವವನ್ನು ಕೊಡಲಾಗಿದೆ. ಪುಸ್ತಕದ ಕಥಾನಕದಲ್ಲಿ ಅಮೆರಿಕದಿಂದ ಮೆಕ್ಸಿಕೋಗೆ ಹೋಗುವ ಎರಡು ಪಾತ್ರಗಳ ಮೂಲಕ ಈ ಎರಡು ದೇಶಗಳ ರಾಜಕೀಯ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳನ್ನು ತಿಳಿಸುತ್ತಾ, ಸಾವಿರಾರು ವರ್ಷಗಳ ಸಾಂಸ್ಕೃತಿಕ ಇತಿಹಾಸವುಳ್ಳ ಮೆಕ್ಸಿಕೋಗೂ, ಕೇವಲ 200 ವರ್ಷಗಳ ಅಮೆರಿಕಕ್ಕೂ ಇರುವ ಭಿನ್ನತೆಗಳನ್ನು ಎತ್ತಿ ತೋರಿಸುತ್ತಾರೆ. ರಾಜಕೀಯವಾಗಿಯೂ, ಆರ್ಥಿಕವಾಗಿಯೂ ದಬ್ಬಾಳಿಕೆಗೆ ಗುರಿಯಾದ ಬಡ ಮತ್ತು ದುರ್ಬಲರನ್ನು ಶೋಷಣೆ ಮಾಡುತ್ತಿದ್ದ ಸಬಲ ಮೆಕ್ಸಿಕನ್ನರಿಗೆ ಮತ್ತು ಭ್ರಷ್ಟಾಚಾರಿ ಆಡಳಿತಗಾರರಿಗೆ ಸ್ವಾರ್ಥಪೂರಿತ ಅಮೆರಿಕನ್ನರ ಬೆಂಬಲವಿತ್ತು. 1914ರ ಮೆಕ್ಸಿಕೋವಿನ ಆಂತರಿಕ ಯುದ್ಧದಲ್ಲಿ, ಮೆಕ್ಸಿಕೋ ಜನತೆ ಬಂಡಾಯವೆದ್ದು ಕ್ರಾಂತಿ ಮಾಡಿ ತನ್ನದೇ ರೀತಿಯಲ್ಲಿ ತನ್ನ ಸ್ವಾತಂತ್ರ್ಯದ ಕಲ್ಪನೆ ಮಾಡಿಕೊಳ್ಳಲು ಯತ್ನಿಸಿದರೆ, ಬಲಶಾಲಿ ಅಮೆರಿಕ ತನ್ನ ಸ್ವಾರ್ಥ ಮತ್ತು ಪೂರ್ವನಿಶ್ಚಿತ ಯೋಜನೆಗಳಿಂದ ಬಂಡಾಯಕಾರರನ್ನು ಹತ್ತಿಕ್ಕಲು ಸಹಾಯಮಾಡಿ ಮೆಕ್ಸಿಕನ್ನರ ಸ್ವಾತಂತ್ರ್ಯದ ಕನಸುಗಳನ್ನು ನುಚ್ಚು ನೂರು ಮಾಡುತ್ತದೆ.

ಫ್ಯೂಎಂಟೇಸ್ ಅವರು ತಮ್ಮ ಇನ್ನೊಂದು ಪುಸ್ತಕ 'Destiny and Desire'ದಲ್ಲಿ, ಮೆಕ್ಸಿಕೋನಿಂದ ಬರುವ ಅಕ್ರಮ ವಲಸೆಗಾರರನ್ನು ತಡೆಗಟ್ಟಲು ಅಮೆರಿಕ ಮತ್ತು ಮೆಕ್ಸಿಕೋ ಮಧ್ಯೆ ಗೋಡೆಯನ್ನು ಕಟ್ಟುವ ಯೋಜನೆಯನ್ನು ಕುರಿತು ಅಮೆರಿಕದ ಮೇಲೆ ತೀವ್ರವಾಗಿ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. 'ಇದೊಂದು ಅಸಂಬದ್ಧವಾದ ನಿರ್ಧಾರ ಮತ್ತು ಇದು Berlin Wallಗಿಂತಲೂ ಕೆಟ್ಟದಾದದ್ದು ಮತ್ತು ಸ್ವಾರ್ಥಪೂರಿತವಾದದ್ದು. ಏಕೆಂದರೆ, ಅಮೆರಿಕಕ್ಕೆ ಮೆಕ್ಸಿಕೋನ ಬಡ ಕಾರ್ಮಿಕರ ಅವಶ್ಯಕತೆ ಇದೆ. ಇವರ ಬಡತನದಿಂದ ಅವರ ಸಿರಿತನ ಸಾಧ್ಯವಾಗಿದೆ' ಎನ್ನುತ್ತಾರೆ.

ಕಾರ್ಲೋಸ್ ಫ್ಯೂಎಂಟೇಸ್ ಅವರು ಜನಪ್ರಿಯಗೊಳಿಸಿದ ಪದ, 'ಪುನರ್ವಿಜಯ' (Reconquista - 'reconquest'). ಸಾಂಸ್ಕೃತಿಕವಾಗಿ ಮತ್ತು ಸಾಂಖ್ಯಿಕವಾಗಿ ದಕ್ಷಿಣದ

ರಾಜ್ಯಗಳಲ್ಲಿರುವ ಮೆಕ್ಸಿಕನ್ನರಿಂದ ಅಮೆರಿಕದ ಮೇಲೆ ಪುನರ್ವಿಜಯವನ್ನು ಸಾಧಿಸುವುದು ಸಾಧ್ಯವೆಂದು ವಾದಿಸುತ್ತಾರೆ. ಸದ್ಯದ ಲ್ಯಾಟಿನ್ ಅಮೆರಿಕನ್ನರ ಜನಸಂಖ್ಯೆ ಬಲವು ಈಗಾಗಲೇ ಅಮೆರಿಕದ ಚುನಾವಣೆಗಳಲ್ಲಿ ನಿರ್ಣಾಯಕವಾಗಿದೆ. ಬರಾಕ್ ಒಬಾಮನ ವಿಜಯಕ್ಕೆ ಮುಖ್ಯ ಕಾರಣ, ಇವರಿಂದ ಗೆದ್ದಮತಗಳು. 2010ರ U.S. ಸೆನ್ಸಸ್ ಪ್ರಕಾರ ಮೆಕ್ಸಿಕೋನಿಂದ ಪಡೆದ ದಕ್ಷಿಣದ ರಾಜ್ಯಗಳಾದ ಕ್ಯಾಲಿಫೋರ್ನಿಯ, ಅರಿಜೋನ, ನ್ಯೂ ಮೆಕ್ಸಿಕೋ, ಟೆಕ್ಸಾಸ್, ನೆವಾಡ, ಕೊಲರಾಡೋ ಮತ್ತು ಯೂಟಾಗಳಲ್ಲಿ ಮೆಕ್ಸಿಕನ್ ಮೂಲದ ಜನರೇ ಹೆಚ್ಚಾಗಿದ್ದಾರೆ. ಪ್ರಮುಖ ರಾಜನೀತಿ ಶಾಸ್ತ್ರಜ್ಞರಾದ ಸಾಮ್ಯುಯಲ್ ಹಂಟಿಂಗ್ಟನ್ ಅವರ ಪ್ರಕಾರ, ಅಮೆರಿಕದ ಮೇಲೆ ಮೆಕ್ಸಿಕನ್ನರ 'ಪುನರ್ವಿಜಯ'ವು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಂಖ್ಯಿಕವಾಗಿ ಈಗಾಗಲೇ ಆರಂಭವಾಗಿದೆ. ಮೆಕ್ಸಿಕನ್ನರಷ್ಟು ಪ್ರಬಲವಾಗಿ ಇನ್ಯಾವುದೇ ರಾಷ್ಟ್ರೀಯ ಪಂಗಡವು ತಮ್ಮ ಪೂರ್ವನೆಲದ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಿಲ್ಲ. ಅಮೆರಿಕನ್ ಮೆಕ್ಸಿಕನ್ನರು ತನ್ನ ಪೂರ್ವಿಕರ ಮೇಲಿನ ಅನ್ಯಾಯವನ್ನು ಸರಿಪಡಿಸಿಕೊಳ್ಳುವ ಕಾಲ ಬರುತ್ತದೆ. ಈ ರಾಜ್ಯಗಳಲ್ಲಿ ತಮ್ಮ ಬಹುಮತದಿಂದ ಒಂದು ರಾಜಕೀಯ ಶಕ್ತಿಯಾಗಿ ರೂಪುಗೊಂಡು 'ಪುನರ್ವಿಜಯ' ಹೊಂದುತ್ತಾರೆ.

ಯಾವುದನ್ನು ಮೆಕ್ಸಿಕನ್ನರ ಬಂದೂಕು ಸಾಧಿಸಲಾಗಲಿಲ್ಲವೋ ಅದನ್ನು ಅವರ ಮತಪೆಟ್ಟಿಗೆ ಸಾಧಿಸಲಿದೆ.

ಮೆಕ್ಸಿಕೋ ಅಷ್ಟೇ ಅಲ್ಲದೆ ದಕ್ಷಿಣ ಅಮೆರಿಕದ ಇತರ ಎಲ್ಲಾ ದೇಶಗಳೂ ಯೂರೋಪ್ ದೇಶಗಳ ವಸಾಹತುಗಳಾಗಿ ನಾನಾ ರೀತಿಯ ಸಂಕಷ್ಟಗಳಿಗೆ ಒಳಗಾಗಿವೆ. ದಕ್ಷಿಣ ಮತ್ತು ಉತ್ತರ ಅಮೆರಿಕಾದ ಚರಿತ್ರೆಯಿಂದ ನಮಗೆ ವಸಾಹತುಶಾಹಿ ಆಡಳಿತದ ಅನುಭವಗಳು ಬಹಳ ಚೆನ್ನಾಗಿ ಮನದಟ್ಟಾಗುತ್ತವೆ. ನೋಬಲ್ ಪ್ರಶಸ್ತಿ ಪಡೆದ ಖ್ಯಾತ ದಕ್ಷಿಣ ಅಮೆರಿಕದ ಲೇಖಕರಾದ ಮಾರಿಯೋ ವರ್ಗಾಸ್ ಯೋಸ (Mario Vargas Llosa–2010) ಮತ್ತು ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ್ (Gabriel Garcia Marquez-1982) ಅವರು ತಮ್ಮ ಪುಸ್ತಕಗಳಲ್ಲಿ ಯೂರೋಪಿನ ವಸಾಹತು ದೇಶಗಳಾಗಿದ್ದ ದಕ್ಷಿಣ ಅಮೆರಿಕದ ಪ್ರದೇಶಗಳಲ್ಲಿ ಹೇಗೆ ಸ್ಥಳೀಯ ಮತ್ತು ಪರಕೀಯ ಸಂಸ್ಕೃತಿಗಳ ತಿಕ್ಕಾಟ ಸ್ಥಳೀಯರಾದ ಇಂಡಿಯನ್ನರಿಗೆ ಹಾನಿಕಾರಿಯಾಯಿತೆಂದು ಬಹಳ ವಿವರವಾಗಿ ತಿಳಿಸುತ್ತಾರೆ. ಇವರಿಬ್ಬರು ಮಹಾನ್ ಸಾಹಿತಿಗಳ ಒಂದೊಂದು ಉಕ್ತಿಗಳನ್ನು ಉದಾಹರಣೆಗೆಂದು ಇಂಗ್ಲೀಷಿನಲ್ಲೇ ನಿಮಗೆ ಪ್ರಸ್ತುತಪಡಿಸುತ್ತೇನೆ.

ಯೋಸ ಹೇಳುತ್ತಾರೆ, 'The conquest of America was cruel and violent, like all conquests, of course, and we should criticize it but not forget as we do that those who committed pillage and crimes were, for the most

part, our great-grandfathers and great-great-grandfathers, the Spaniards who came to America and adopted American ways, not those who remained in their own country. Such criticism, to be just, should be self-criticism. Because when we gained our independence from Spain two hundred years ago, those who assumed power in the former colonies, instead of liberating the Indians and creating justice for old wrongs, continued to exploit them with as much greed and ferocity as the conquerors and, in some countries, decimating and exterminating them. Let us say this with absolute clarity: for two centuries the emancipation of the indigenous population has been our exclusive responsibility, and we have not fulfilled it. This continues to be an unresolved issue in all of Latin America. There is not a single exception to this ignominy and shame.'

ಯೋಸ ದಕ್ಷಿಣ ಅಮೆರಿಕದ ಇಂಡಿಯನ್ನರನ್ನು ಕುರಿತು ಹೇಳಿದರೂ, ಇದು ಉತ್ತರ ಅಮೆರಿಕದ ಇಂಡಿಯನ್ನರಿಗೂ ಮತ್ತು ಅಮೆರಿಕ ಸಂಸ್ಥಾನಕ್ಕೂ ಅನ್ವಯಿಸುವುದು. ಒಂದು ವ್ಯತ್ಯಾಸವೆಂದರೆ ದಕ್ಷಿಣ ಅಮೆರಿಕದಲ್ಲಿ ಆಡಳಿತದ ಸ್ಪಾನಿಷ್ ಜನ ಸ್ಥಳೀಯ ಇಂಡಿಯನ್ನೊರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳಸುವುದರ ಜೊತೆಗೆ ಅವರ ಬಾಂಧವ್ಯ ನಿಕಟವಾಯಿತು. ಆದರೆ ಈ ರೀತಿಯ ಸಂಬಂಧಗಳು ಉತ್ತರ ಅಮೆರಿಕದಲ್ಲಿ ಬಹಳ ಅಲ್ಪ ಪ್ರಮಾಣದಲ್ಲಿ ನಡೆಯಿತು.

ಇನ್ನು ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ್ ಕೂಡ ದಕ್ಷಿಣ ಅಮೆರಿಕದಲ್ಲಾದ ಅನಾಹುತಗಳಿಗೆ ಯೂರೋಪ್ ಮತ್ತು ಶೀತಲ ಯುದ್ಧಗಳು ಕಾರಣವೆಂದು ಹೀಗೆ ಖಂಡಿಸುತ್ತಾರೆ: 'Latin America neither wants, nor has any reason, to be a pawn without a will of its own; nor is it merely wishful thinking that its quest for independence and originality should become a Western aspiration. However, the navigational advances that have narrowed such distances between our Americas and Europe seem, conversely, to have accentuated our cultural remoteness. Why is the originality so readily granted us in literature so mistrustfully denied us in our difficult attempts at social change? Why think that the social justice sought by progressive Europeans for their own countries cannot also be a goal for Latin America, with different methods for dissimilar conditions? No: the immeasurable violence and pain of our history are the result of age-old inequities and untold bitterness, and not a conspiracy plotted three thousand leagues from our home. But many European leaders and thinkers have thought so, with the childishness of old-timers who have forgotten the fruitful excess of their youth as if it were impossible to find

another destiny than to live at the mercy of the two great masters of the world.'

ಹೊರ ದೇಶಗಳ ಬೂಟಾಟಿಕೆಯ ಆದರ್ಶಗಳಿಂದ ರೂಪಿತವಾದ ವ್ಯವಸ್ಥೆ ಬೇಡ. ಪ್ರತಿ ದೇಶಕ್ಕೂ ತನ್ನದೇ ಆದ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಅಧಿಕಾರ ಮತ್ತು ಹಕ್ಕು ಇದೆಯೆಂದು ಮಾರ್ಕ್ವೆಜ್ ಅಭಿಪ್ರಾಯ ಪಡುತ್ತಾನೆ. ಅವನ ತರ್ಕ ಪ್ರಜಾಪ್ರಭುತ್ವಕ್ಕಾಗಿ ಅರಬ್ ದೇಶಗಳಲ್ಲಾಗುವ ಹೋರಾಟವನ್ನು ನೆನಪಿಗೆ ತರುತ್ತದೆ. ಈ ದೇಶಗಳು ತಮ್ಮ ಭವಿಷ್ಯವನ್ನು ತಮ್ಮ ಚರಿತ್ರೆ, ಸಂಸ್ಕೃತಿ, ಪದ್ಧತಿಗಳಿಗನುಸಾರವಾಗಿ ತಾವೇ ಕಂಡುಕೊಳ್ಳುವುದೇ ಸರಿಯಾದ ಮಾರ್ಗ.

ಅಮೆರಿಕದ ವಿಶಿಷ್ಟತೆ – ಒಂದು ಮಿಶ್ರ ಅನುಭವಗಳ ದಾಖಲೆ

'The vision of American exceptionalism'ನಿಂದ ಜಗತ್ತಿಗೆ ಅನೇಕ ಪ್ರಯೋಜನಗಳಾಗಿವೆ. ರಾಜನೀತಿ ಶಾಸ್ತ್ರಜ್ಞರಾದ ಸಾಮ್ಯುಯಲ್ ಹಂಟಿಂಗ್ಟನ್ ಅವರ ಪ್ರಕಾರ ಅಮೆರಿಕ ಪ್ರಪಂಚದ ಒಟ್ಟಾರೆ ಪ್ರಜಾಪ್ರಭುತ್ವಕ್ಕೆ, ವ್ಯಕ್ತಿ ಸ್ವಾತಂತ್ರ್ಯಕ್ಕೆ, ಆರ್ಥಿಕ ವ್ಯವಸ್ಥೆಗೆ ಮತ್ತು ವಿಶ್ವಶಾಂತಿಗೆ ರೂವಾರಿಯಾಗಿದೆ. ಎರಡನೆಯ ವಿಶ್ವ ಯುದ್ಧದಲ್ಲಿ ನಾಜೀ ಜರ್ಮನಿಯನ್ನು ಮಣಿಸಿ ಯೂರೋಪಿನ ಪುನರ್ರಚನೆಯನ್ನು ಮಾಡುವಲ್ಲಿ ಅಮೆರಿಕದ ಪಾತ್ರ ಬಹಳ ಮಹತ್ವದ್ದು. ಯುದ್ದದ ನಂತರ ಮಾರ್ಷಲ್ ಯೋಜನೆ ಮತ್ತು NATOಗಳ ಆರ್ಥಿಕ ಸಹಾಯದ ಮೂಲಕ ಯೂರೋಪಿನ ಸುಧಾರಣೆ ಮತ್ತು ಯಶಸ್ಸಿಗೆ ಸಹಾಯಕವಾದರೆ, ಅಮೆರಿಕ ರಚಿಸಿದ ಬ್ರೆಟನ್ ಉಡ್ಸ್ ಪದ್ಧತಿಯ ಅನ್ವಯ ವಾಣಿಜ್ಯದ ಮೂಲಕ ಸುಧಾರಣೆಗೆ ಸಹಾಯಕವಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನವು ತನ್ನ ಮೂಲಭೂತ ತತ್ವಗಳಾದ ಪ್ರಜಾಪ್ರಭುತ್ವ, ಮಾನವೀಯ ಹಕ್ಕುಗಳು, ಮತ್ತು ಮಿಲಿಟರಿ ವ್ಯವಸ್ಥೆಯ ಮೂಲಕ ಶಾಂತಿಯನ್ನು ಯೂರೊಪ್ ಮತ್ತು ಏಶಿಯಾದಲ್ಲಿ ಸ್ಥಾಪಿಸುವಲ್ಲಿ ಯಶಸ್ವಿಯಾಯಿತು.

19ನೆಯ ಶತಮಾನದಲ್ಲಿ ಅಮೆರಿಕವು ಈ ಉತ್ತಮ ಅಂಶಗಳನ್ನು ಜಗತ್ತಿಗೆ ಕೊಡುವುದರ ಜೊತೆಗೆ ಕೆಲವು ಪ್ರಶ್ನಾರ್ಹವಾದ ಕೆಲಸಗಳನ್ನೂ ಮಾಡಿತು. ಮಧ್ಯ ಪ್ರಾಚ್ಯದ ಹಲವಾರು ಕೆಟ್ಟ ಸರ್ವಾಧಿಕಾರಿಗಳಾದ ಇರಾಕ್ ದೇಶದ ಸದಾಂ ಹುಸೇನ್ (ಯುದ್ಧಕ್ಕೂ ಮುಂಚೆ), ಈಜಿಪ್ಟಿನ ಹೋಸ್ನಿ ಮುಬಾರಕ್ ಮತ್ತು ಇತರ ಸರ್ವಾಧಿಕಾರದ ಸರಕಾರಗಳನ್ನು ಬೆಂಬಲಿಸುವುದರ ಜೊತೆಗೆ ಸಹಾಯವನ್ನೂ ಮಾಡಿತು. ಸದ್ಯದ ಇರಾನ್ ಸಮಸ್ಯೆಯ ಮೂಲವನ್ನೂ ಕೂಡ ಅದರ ಹಿಂದಿನ ಸರ್ವಾಧಿಕಾರಿ ಶಾಗೆ ಅಮೆರಿಕ ಬೆಂಬಲಿಸುತ್ತಿದ್ದುದನ್ನು ನೆನಪಿಸಿಕೊಳ್ಳಬಹುದು. ಪ್ರಜಾಪ್ರಭುತ್ವವನ್ನು ಮತ್ತು ವ್ಯಕ್ತಿಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಈ ವ್ಯವಸ್ಥೆಗಳನ್ನು ಅಮೆರಿಕ ಬೆಂಬಲಿಸುತ್ತಿದ್ದುದರ ಮೂಲ ಉದ್ದೇಶ ಸ್ವಾರ್ಥಪೂರಿತವಾಗಿದ್ದು ಅಲ್ಲಿ ದೊರೆಯುವ

ತೈಲಕ್ಕಾಗಿ ಮತ್ತು ತಮ್ಮ ಶಸ್ತ್ರಾಸ್ತ್ರಗಳನ್ನು ಅವರಿಗೆ ಮಾರಲು. ಆದರೆ ಇವೆಲ್ಲಕ್ಕಿಂತ ಮುಖ್ಯವಾದದ್ದು ಮಧ್ಯ ಪ್ರಾಚ್ಯದ ಸಮಸ್ಯೆಗಳ ಮೂಲವಾದ ಇಸ್ರೇಲಿನ ಅಸ್ತಿತ್ವವನ್ನು ಅಸ್ಖಲಿತವಾಗಿ ಬೆಂಬಲಿಸುತ್ತಿರುವುದು. ದಕ್ಷಿಣ ಅಮೆರಿಕದ ದೇಶಗಳ ಜೊತೆಗೂ ಕೂಡ ಇದೇ ರೀತಿಯ ಪ್ರಶ್ನಾರ್ಹವಾದ ಅಮೆರಿಕದ ವಿದೇಶಾಂಗ ನೀತಿಯನ್ನು ಗಮನಿಸಬಹುದು.

ಅಮೆರಿಕದ ವಿಶಿಷ್ಟತೆ – ಇಂದಿನ ಸ್ಥಿತಿ

ಅಮೆರಿಕದ ವಿದೇಶಾಂಗ ನೀತಿ ಹೇಗಿರಬೇಕೆನ್ನುವುದಕ್ಕೆ ಅಮೆರಿಕದ ಡೆಮಾಕ್ರಟ್ಸ್ ಮತ್ತು ರಿಪಬ್ಲಿಕನ್ ಪಕ್ಷಗಳಲ್ಲಿ ಒಮ್ಮತವಿಲ್ಲ. ಪತ್ರಕರ್ತ ಮ್ಯಾಟ್ ಟೈಬ್ಬಿ ಅವರ ಪ್ರಕಾರ, ಸದ್ಯದ ಸ್ಥಿತಿ 1960ರ ಅಮೆರಿಕಕ್ಕಿಂತ ಭಿನ್ನವಾಗಿಲ್ಲ. ಒಂದು ಕಡೆ ಸಂಪ್ರದಾಯ ಬದ್ಧ ಮಡಿವಂತರಿಗೆ 'ಅಮೆರಿಕನ್ ವಿಶೇಷತೆ'ಯ ಬಗ್ಗೆ ಆಳವಾದ ನಂಬುಗೆಯಿದ್ದು ಅದನ್ನು ಬಲವಾಗಿ ಪ್ರತಿಪಾದಿಸಿದರೆ, ಪ್ರಗತಿಪರ ಅಥವಾ ಮುರೋಗಾಮಿಗಳು ಅದರ ಉಪಯುಕ್ತತೆಯನ್ನು ಪ್ರಶ್ನಿಸುವುದರ ಜೊತೆಗೆ ಅದರಿಂದಾಗುವ ಹಾನಿಗಳ ಬಗ್ಗೆ ಸದಾ ಎಚ್ಚರಿಸುತ್ತಾರೆ. ಹೀಗಾಗಿ ಎರಡು ಪಕ್ಷಗಳೂ ಒಂದನ್ನೊಂದು ಖಂಡಿಸುತ್ತಾ ಅದರ ಅನಾಹುತಗಳ ಪಟ್ಟಿಯನ್ನು ಬೆಳೆಸಿರುವುದರಿಂದ, ನಮಗೆ ಇತ್ತೀಚಿನ ಚರಿತ್ರೆಯಿಂದ ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ನಿಖರವಾಗಿ ಹೇಳಲಾಗದ ಸ್ಥಿತಿಯಲ್ಲಿದ್ದೇವೆ. ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಅವರಿಂದ 'American exceptionalismನಲ್ಲಿ ನಂಬಿಕೆಯಿದೆಯೆ?' ಎನ್ನುವ ಪ್ರಶ್ನೆಗೆ ನೇರವಾದ ಉತ್ತರ ಸಿಗಲಿಲ್ಲ. ಅವರ ಉತ್ತರ ಹೀಗಿತ್ತು: 'ಬ್ರಿಟಿಷರು British exceptionalismನ್ನು, ಗ್ರೀಕರು Greek exceptionalismನ್ನು ನಂಬುವಂತೆ ನಾನು American exceptionalismನ್ನು ನಂಬುತ್ತೇನೆ. ಅಮೆರಿಕವು ವಿಶ್ವದ ಶಾಂತಿ ಮತ್ತು ಪ್ರಗತಿಯ ನಾಯಕತ್ವದ ಮುಂಚೂಣಿಯಲ್ಲಿ ಯಾವಾಗಲೂ ಇದೆ. ಆದರೆ ನಮ್ಮ ನಾಯಕತ್ವದ ಯಶಸ್ಸು ಪಾಲುಗಾರಿಕೆಯನ್ನು ರಚಿಸುವಲ್ಲಿದೆ. ಅಮೆರಿಕ ಒಂದೇ ವಿಶ್ವದ ಸಮಸ್ಯೆಗಳಿಗೆಲ್ಲಾ ಪರಿಹಾರ ನೀಡಲಿಕ್ಕಾಗುವುದಿಲ್ಲ.' ಒಬಾಮಾರ ಈ ಉತ್ತರವು ಅಮೆರಿಕದ ಬಲಪಂಥೀಯರಿಗೆ ಪಥ್ಯವಾಗಲಿಲ್ಲ. ಒಬಾಮಗೆ American exceptionalismನಲ್ಲಿ ನಂಬಿಕೆಯಿಲ್ಲವೆಂದು ಜರೆದರು.

'Vision of America' ಇನ್ನೂ ಜೀವಂತವಾಗಿದ್ದು ಅದು ಹೇಗೆ ತಾನು ಇತರ ದೇಶಗಳಿಗಿಂತ ಉತ್ತಮ ಮತ್ತು ತಾನೇ ನೇತಾರನೆಂದು ಅವಕಾಶ ಸಿಕ್ಕಾಗಲೆಲ್ಲಾ ಪ್ರತಿಪಾದಿಸುತ್ತಿದೆ ಎನ್ನುವುದಕ್ಕೆ, ತೀರ 2003ರಷ್ಟು ಇತ್ತೀಚೆಗೆ ಕೂಡ ಅಮೆರಿಕ ಇರಾಕ್ ವಿರುದ್ಧ ಸಾರಿದ ಸಮರವನ್ನು ನೋಡಬಹುದು. ಅಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಮತ್ತು ಮತೀಯ ದಬ್ಬಾಳಿಕೆಗಳನ್ನು ಹೊಡೆದೋಡಿಸುವ ಉದ್ದೇಶ ಮಾತ್ರವೆಂದು

ಹೇಳುತ್ತ ಯುದ್ಧವನ್ನು ಸಮರ್ಥಿಸಿಕೊಂಡಿತು. ಆದರೆ ಇರಾಕ್ ಮತ್ತು ಉಳಿದ ದೇಶಗಳ ಪ್ರಜೆಗಳು ಈ ಅಮೆರಿಕನ್ ವಿಷನನ್ನು ಎಷ್ಟರಮಟ್ಟಿಗೆ ನಂಬುತ್ತವೆ ಎನ್ನುವುದು ಪ್ರಶ್ನಾರ್ಹ. ಅಷ್ಟೇ ಏಕೆ, ಮಧ್ಯಪ್ರಾಚ್ಯ ಮತ್ತು ಹಲವು ಯೂರೋಪಿಯನ್ ದೇಶಗಳಿಗೆ ಅಮೆರಿಕದ ಮೇಲೆ ಪ್ರೀತಿ, ವಿಶ್ವಾಸಗಳಿಲ್ಲವೆಂದು ಈಗಾಗಲೇ ಜಗಜ್ಜಾಹೀರಾಗಿದೆ. ಪ್ರೀತಿ–ವಿಶ್ವಾಸಗಳ ಮಾತಿರಲಿ, ಅವು ಅಮೆರಿಕದ ಎಲ್ಲ ಕೃತ್ಯಗಳನ್ನು ಅನುಮಾನಾಸ್ಪದವಾಗಿ ನೋಡುತ್ತವೆ. ಅಮೆರಿಕದ ಆದರ್ಶಗಳು ಅಷ್ಟೊಂದು ಉನ್ನತ ಮಟ್ಟದ್ದಾಗಿದ್ದರೆ, ಯಾಕೆ ಹೀಗೆ ಅನೇಕ ದೇಶಗಳು ಇದನ್ನು ನಂಬುತ್ತಿಲ್ಲ? ಅವರ ನಂಬಿಕೆಗಳ ವಿರುದ್ಧ ಬಲಾತ್ಕಾರ ಮಾಡಲು ಅಮೆರಿಕಕ್ಕೆ ಯಾವ ಅಧಿಕಾರವಿದೆ ಮತ್ತು ಈ ಅಧಿಕಾರವನ್ನು ಕೊಟ್ಟವರಾರು?

ಸದ್ಯದಲ್ಲಿ ಇರಾಕ್ ಮತ್ತು ಅಫ್ಘಾನಿಸ್ತಾನ್‌ನಲ್ಲಿ ನಡೆದ ಯುದ್ಧಗಳಿಂದ ಅಮೆರಿಕ ಮತ್ತು ಮಧ್ಯ ಪ್ರಾಚ್ಯ ರಾಷ್ಟ್ರಗಳ ಮಧ್ಯೆ ಇರುವ ಸಮಸ್ಯೆಗಳು ನಿಚ್ಚಳವಾಗಿ ತೋರುತ್ತಿವೆ. ಇವೆರಡೂ ದೇಶಗಳ ವಿರುದ್ಧ ಸಮರ ಸಾರುವ ಮುನ್ನ ಅಮೆರಿಕದ ಗುರಿ ಅಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದಾಗಿತ್ತು. ಆದರೆ ಅಮೆರಿಕ ತನ್ನ ಗುರಿಯನ್ನು ಸಂಪೂರ್ಣವಾಗಿ ಮುಟ್ಟಿ ದೇಶದ ಜನರಿಂದ ಸ್ತುತಿಸಲ್ಪಡುವಂತೆ ತೋರುತ್ತಿಲ್ಲ. ಈ ಯುದ್ಧಗಳು ಅಲ್ಲಿ ನಡೆಯುತ್ತಿರುವಂತೆಯೇ ಮಧ್ಯ ಪ್ರಾಚ್ಯ ದೇಶಗಳಲ್ಲೆಲ್ಲಾ ಬದಲಾವಣೆಯ ಬಿರುಗಾಳಿ ಎದ್ದಿದೆ. ಈ ಬಿರುಗಾಳಿಯು ಅಮೆರಿಕನ್ ವಿಶೇಷತೆಯಿಂದಾಗಲೀ, ಅಲ್ಲಿನ ಇಸ್ಲಾಮ್ ಮೂಲಭೂತ ಪ್ರತಿಪಾದಕರಾದ ಮುಲ್ಲಾಗಳಿಂದಾಗಲೀ ಅಥವಾ ಆಲ್ ಖೈದಾದಿಂದಾಗಲೀ ಉಂಟಾದದ್ದಲ್ಲ. ಅಲ್ಲಿನ ಸಾಮಾನ್ಯ ಜನರ ಆಕ್ರೋಶದಿಂದ ಆಗುತ್ತಿರುವ ಈ ಕೋಲಾಹಲಕ್ಕೆ ಕಾರಣ ಅನೇಕ ವರ್ಷಗಳಿಂದ ದಮನಿಸಲ್ಪಟ್ಟ ಆಸೆ, ಆಕಾಂಕ್ಷೆಗಳು. ಅಲ್ಲಿನ ಜನತೆಗೆ ತಮ್ಮ ಆಡಳಿತದ ಮೇಲೆ ಮತ್ತು ಅವರನ್ನು ಹೊರಗಿನಿಂದ ನಿಯಂತ್ರಿಸುತ್ತಿರುವ ಹೊರ ದೇಶಗಳ ಮೇಲೆ ತಿರಸ್ಕಾರವಿದೆ. ಬದಲಾವಣೆಯ ಅಲೆ ಒಂದು ದೊಡ್ಡ ಪ್ರವಾಹವಾಗಿ ಆ ಪ್ರಾಂತ್ಯದಲ್ಲೆಲ್ಲಾ ಪ್ರವಹಿಸುತ್ತಿದೆ. ಇದು ಎಲ್ಲಿ ಹೋಗಿ ನಿಲ್ಲುತ್ತದೆಯೆಂದು ಯಾರೂ ಕೂಡ ಹೇಳಲಾಗುವುದಿಲ್ಲ.

ಪ್ರತಿ ದೇಶಕ್ಕೂ ತನ್ನದೇ ಆದ ರೀತಿಯಲ್ಲಿ ತಮ್ಮ ಸ್ವಾತಂತ್ರ್ಯವನ್ನೂ ಸರಕಾರವನ್ನೂ ಭವಿಷ್ಯವನ್ನೂ ರೂಪಿಸಿಕೊಳ್ಳುವ ಅಧಿಕಾರ ಮತ್ತು ಹಕ್ಕು ಇದೆ. ಇದನ್ನು ಹೊರ ರಾಷ್ಟ್ರವೊಂದು ತನ್ನ ಆದರ್ಶವೆಂದು ಹೇರಲು ಪ್ರಯತ್ನಿಸಬಾರದು. ಅಮೆರಿಕವೂ ಸಹ ಮೊದಲು ಕೆಲ ತಪ್ಪು ಹೆಜ್ಜೆಗಳನ್ನಿಟ್ಟು ಕಾಲಕ್ರಮೇಣ ಸರಿಪಡಿಸಿಕೊಂಡಿತು. ಇದೇ ರೀತಿ ಪ್ರತಿ ದೇಶವೂ ಸಹ ತಮ್ಮ ಭವಿಷ್ಯವನ್ನು ತಮ್ಮ ಚರಿತ್ರೆ, ಸಂಸ್ಕೃತಿ, ಪದ್ಧತಿಗಳಿಗನುಸಾರವಾಗಿ ತಾವೇ ಕಂಡುಕೊಳ್ಳಲು ಅವಕಾಶವನ್ನು ಕೊಡಬೇಕು ಅಲ್ಲವೆ?

ಉಪಸಂಹಾರ

30 ವರ್ಷದ ಹಿಂದೆ ಭಾರತದಲ್ಲಿ ಆರಂಭವಾದ ನನ್ನ ಈ ಯಾತ್ರೆಯಿಂದ ಈ ಎರಡೂ ದೇಶಗಳ ಬಗ್ಗೆ ಇದ್ದ ನನ್ನ ಅಭಿಪ್ರಾಯಗಳು ಬದಲಾಯಿಸುವಂತೆ ಮಾಡಿವೆ. ನಾನು ಭಾರತವನ್ನು ಬಿಡುವ ವೇಳೆಗೆ ನಾವು ನಮ್ಮ ಸ್ವತಂತ್ರ ಭಾರತವು ವಿಶ್ವದಲ್ಲಿ ಗೌರವಾನ್ವಿತ ಸ್ಥಾನಗಳಿಸಿ ಖ್ಯಾತಿಗಳಿಸುವುದೆಂದು ಆಶಿಸಿದ್ದೆವು. ಆದರೆ 70ರ ದಶಕದಲ್ಲಿ ಭಾರತ ತನ್ನ ಭವ್ಯ ಗುರಿಗಳನ್ನು ಸಾಧಿಸುವುದರಲ್ಲಿ ಯಶಸ್ವಿಯಾಗುವಂತೆ ಕಾಣುತ್ತಿರಲಿಲ್ಲ. ನಿರಾಶರಾದ ನಮಗೆ ನಮ್ಮನ್ನಾಳಿದ ಪಶ್ಚಿಮ ದೇಶಗಳನ್ನು ಕುರಿತು ಅನುಮಾನ, ಆತಂಕಗಳಿದ್ದರೂ ಅಂತಹಾ ಅಭಿಪ್ರಾಯಗಳಿಂದಲೇ ಅಮೆರಿಕವನ್ನು ನೋಡಿದಾಗ ಹಲವು ದೃಷ್ಟಿಯಿಂದ ಅದು ಸುಂದರವಾಗಿ ಕಂಡರೆ ಕೆಲವು ದೃಷ್ಟಿಯಿಂದ ಘೋರವಾಗಿ ಕಂಡಿತು. ಪ್ರಜಾಪ್ರಭುತ್ವದ ಆಡಳಿತದ ದೃಷ್ಟಿಯಲ್ಲಿ ಭಾರತ ಇನ್ನೂ ಎಳೆಯದಾಗಿದ್ದು, ಅಮೆರಿಕ ಮೊದಲ ತಪ್ಪುಗಳನ್ನು ಸರಿಪಡಿಸಿಕೊಂಡು ಒಂದು ರೀತಿಯ ಪ್ರಬುದ್ಧತೆಯನ್ನು ಪಡೆದು ಜನಾನುರಾಗಿಯಾದ ಆಡಳಿತವನ್ನು ಹೊಂದಿತ್ತು. ಇತ್ತೀಚೆಗೆ ಬಂದ ಎಲ್ಲ ವಲಸೆಗಾರರಿಗೂ ಇದರ ಉಪಯೋಗವಾಗುತ್ತಿರುವುದನ್ನು ನಾವು ಕಾಣಬಹುದು.

ಈ 30 ವರ್ಷಗಳಲ್ಲಿ ಭಾರತ ಸಾಕಷ್ಟು ಬದಲಾವಣೆಗಳನ್ನು ಕಂಡಿದೆ. ಆರ್ಥಿಕ ಸ್ಥಿತಿ ಅತ್ಯಂತ ಸುಧಾರಿಸಿದೆ. ಭಾರತದ ಇಂಜಿನೀಯರುಗಳು, ಕಂಪ್ಯೂಟರ್ ವಿಜ್ಞಾನಿಗಳು, ಡಾಕ್ಟರುಗಳು ವಿಶ್ವದಾದ್ಯಂತ ಹೆಸರು ಮಾಡುತ್ತಿದ್ದಾರೆ. ಇನ್ನು ಪ್ರಜಾಪ್ರಭುತ್ವದ ವ್ಯವಸ್ಥೆ ಬಾಲ್ಯಾವಸ್ಥೆಯನ್ನು ದಾಟಿ ಬೆಳೆಯಲು ಹೆಣಗಾಡುತ್ತಿದೆ. ಮಹಿಳೆಯರ ಸ್ಥಾನಮಾನ, ಹಿಂದುಳಿದ ಮತ್ತು ಶೋಷಿತವರ್ಗಗಳಿಗೆ ನ್ಯಾಯವನ್ನು ಕೊಡುವ ನೆಪದಲ್ಲಿ ರಾಜಕಾರಣಿಗಳು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿದ್ದಾರೆ. ವಿಶ್ವಮಟ್ಟದ ಮತ್ತು ರಾಷ್ಟ್ರಮಟ್ಟದ ದೂರದೃಷ್ಟಿಯ ನಾಯಕರಿಲ್ಲದೆ ಹಳೆಯ ಚೌಕಟ್ಟಿನ ಕೌಟುಂಬಿಕ ರಾಜಕೀಯ ವಿಷವೃತ್ತದಲ್ಲಿ ಸಿಲುಕಿ ಪ್ರಜಾಪ್ರಭುತ್ವವನ್ನು ಬೆಳೆಸಲು ಮತ್ತು ಪೋಷಿಸಲು ವಿಫಲವಾಗಿದೆ. ಈ ವಿಷಯದಲ್ಲಿ ನಮಗೆ ಭಾರತದ ಬಗ್ಗೆ ಆತಂಕವಿದ್ದು ಅಲ್ಲಿಯ ವ್ಯವಸ್ಥೆ ಶೀಘ್ರದಲ್ಲಿ ಉತ್ತಮಗೊಳ್ಳುವ ಭರವಸೆ ಇಲ್ಲ.

ಈ 30 ವರ್ಷಗಳಲ್ಲಿ ಅಮೆರಿಕ ಕೂಡ ತನ್ನ 'ವಿಶೇಷತೆ'ಯನ್ನು ಕಾಪಾಡಿಕೊಳ್ಳಲು ಪ್ರಯಾಸಪಡುತ್ತಿದೆ. ಕಳೆದ ದಶಕದಲ್ಲಂತೂ ಮಧ್ಯ ಪ್ರಾಚ್ಯ ದೇಶಗಳು ತಮ್ಮ ಸವಾಲುಗಳ ಮೂಲಕ ಅಮೆರಿಕವನ್ನು ದಂಗುಬಡಿಸಿದವು. ಇತ್ತೀಚೆಗಷ್ಟೇ ಅಮೆರಿಕವು ತನ್ನ ನೈತಿಕ ನಾಯಕತ್ವವನ್ನು ಮರಳಿ ಪಡೆಯುತ್ತಿರುವಂತೆ ತೋರುತ್ತಿದೆ. ನನ್ನ ದೃಷ್ಟಿಯಲ್ಲಿ ಅಮೆರಿಕ ತನ್ನ ಮುಂದಾಳತ್ವವನ್ನು ಉಳಿಸಿಕೊಂಡರೂ, ಅದರ ಅಧಿಕಾರದ ವ್ಯಾಪ್ತಿಯು ಮೊಟಕುಗೊಂಡು ಅದು ಇತರ ಸ್ಥಳೀಯ ಶಕ್ತಿಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಆಂತರಿಕವಾಗಿ ಪ್ರಜಾಪ್ರಭುತ್ವದ ಚೌಕಟ್ಟು ನಾನಾ ರೀತಿಯ ಪರೀಕ್ಷೆಗಳಿಗೆ ಗುರಿಯಾಗುತ್ತದೆ. ಉದಾಹರಣೆಗೆ ಬದಲಾಗುತ್ತಿರುವ ಜನಮೂಲದ ಬಲ

(ಮೆಕ್ಸಿಕನ್, ಏಶಿಯನ್, ಇತ್ಯಾದಿ) ಮತ್ತು ಉತ್ಕಟ ರಾಜಕೀಯ ಭಿನ್ನಾಭಿಪ್ರಾಯಗಳು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಒರೆಹಚ್ಚಲಿವೆ. ಕಳೆದ 30 ವರ್ಷಗಳಲ್ಲಿ ಡೆಮೊಕ್ರಾಟ್ ಮತ್ತು ರಿಪಬ್ಲಿಕನ್ ಪಕ್ಷಗಳೆರಡೂ ಆಡಳಿತ ನಡೆಸಿವೆ. ಈ ಎರಡೂ ಪಕ್ಷಗಳೂ ಬದಲಾಗುತ್ತಿರುವ ವ್ಯವಸ್ಥೆಗೆ ಹೊಂದಿಕೊಳ್ಳುವುದರ ಜೊತೆಗೆ ತೀವ್ರ ಪ್ರತಿಗಾಮಿಗಳ ಹಿಡಿತಕ್ಕೆ ಸಿಗದೆ ಬದಲಾವಣೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಈ ದೃಷ್ಟಿಯಿಂದ ಅಮೆರಿಕದ ಭವಿಷ್ಯವು ಭದ್ರವಾಗಿದೆಯೆಂದು ಭಾವಿಸಬಹುದು.

ಅಮೆರಿಕ ಆದರ್ಶ ಮತ್ತು ಸ್ವಾರ್ಥಗಳ ದಂದ್ವಕ್ಕೆ ಸಿಲುಕಿ, ಇತರ ದೇಶಗಳ ಜೊತೆಯ ಸಂಬಂಧಗಳಲ್ಲಿ ದುರದೃಷ್ಟವಶಾತ್ ಇದರ ನಿಲುವು ಆದರ್ಶಕ್ಕಿಂತ ಸ್ವಾರ್ಥಪರ ಹಿತಾಸಕ್ತಿಗಳ ಕಡೆಗೆ ವಾಲುತ್ತಿರುವಂತೆ ತೋರುತ್ತದೆ. ಇವೆರಡನ್ನೂ ಸಮನ್ವಯಗೊಳಿಸುವ ಪ್ರಯೋಗದಲ್ಲಿ ಅಮೆರಿಕ ಈವರೆಗೂ ಯಶಸ್ವಿಯಾಗಿಲ್ಲ. ಈ ಸಮಸ್ಯೆಗಳು ಮುಂದಿನ ತಲೆಮಾರುಗಳಿಗೆ ರವಾನಿಸಲ್ಪಡುತ್ತವೆ ಮತ್ತು ಈ ಪ್ರಯೋಗ ಮುಂದುವರಿಯುತ್ತದೆ.

ನಾವು ಅಮೆರಿಕ ದೇಶಕ್ಕೆ ಮೊದಲ ತಲೆಮಾರಿನವರಾಗಿ ಬಂದು ನಮ್ಮ ಮಕ್ಕಳಿಗೆ ಈ ಹೊಸ ದೇಶವನ್ನು ನಮ್ಮ ಉಯಿಲಿನ ಮೂಲಕ ಪ್ರದಾನಿಸುತ್ತಿದ್ದೇವೆ. ಅಮೆರಿಕದ ಜೊತೆಗೆ ಅದರ ಸಮಸ್ಯೆಗಳೂ ಕೂಡ ಅವರಿಗೆ ಉಡುಗೊರೆಯಂತೆ ರವಾನಿಸಲ್ಪಡುತ್ತವೆ. ಬಹುಶಃ ಇನ್ನೊಂದೆರಡು ತಲೆಮಾರುಗಳಲ್ಲಿ ಅವರು ಇಲ್ಲಿನ ಇತರ ಜನಾಂಗಗಳ ಜೊತೆಗೆ ವೈವಾಹಿಕ ಮತ್ತಿತರ ಸಂಬಂಧಗಳ ಮೂಲಕ ಬೆರೆತು ಅಮೆರಿಕದ ಮುಖ್ಯ ವಾಹಿನಿಗಳಲ್ಲಿ ಭಾಗಿಗಳಾಗಿ ನಿಜವಾದ ಅಮೆರಿಕನ್ನರಾಗುತ್ತಾರೆ. ಅಮೆರಿಕನ್ನರ ಜೊತೆಗೆ ಈ ಎಲ್ಲಾ ವಲಸೆಗಾರರಿಗೂ (ಅಮೆರಿಕನ್ನಡಿಗರೂ ಸೇರಿದಂತೆ) 'ಅಮೆರಿಕನ್ನಿನ ವಿಶೇಷತೆ'ಯ ಚರ್ಚೆಯಲ್ಲಿ ಭಾಗವಹಿಸಿ ಅದರ ಪರಿಣಾಮದಲ್ಲಿ ನಿರ್ಣಾಯಕ ಪಾತ್ರ ವಹಿಸುವ ಅವಕಾಶ ಸಿಗುತ್ತದೆ.

'ಅಮೆರಿಕದ ವಿಧಿ' ನಿಜವಾಗಿಯೂ ಅಮೆರಿಕದ 'ವಿಧಿ'ಯೇ ಆದ ಪಕ್ಷದಲ್ಲಿ, ನಮ್ಮ ಉತ್ತರಾಧಿಕಾರಿಗಳಾಗಿ ನಮ್ಮ ಸಂತಾನಗಳು ಆದರ್ಶಯುಕ್ತ American exceptionalismನ ವಕ್ತಾರರಾಗಿ ಅಮೆರಿಕದ ಭವಿಷ್ಯವನ್ನು ಧರ್ಮ ಮತ್ತು ಋಜುಮಾರ್ಗದಲ್ಲಿ ನಡೆಸಿ 'ಅಮೆರಿಕದ ವಿಧಿ'ಯನ್ನು ಸ್ವಾರ್ಥರಹಿತವಾಗಿ ರೂಪಿಸುವುದರ ರೂವಾರಿಯಾಗುತ್ತಾರೆಂದು ನನ್ನ ವಿನಮ್ರ ಬಯಕೆ.

ಬೇರು ಸೂರು



ಕಂಡದ್ದು, ಉಂಡದ್ದು, ಅನುಭವಿಸಿದ್ದು

ಡಾ॥ ಮೈ.ಶ್ರೀ. ನಟರಾಜ

ಪೀಠಿಕೆ

ಇತ್ತೀಚೆಗೆ, ಕನ್ನಡ ಕಿರುತೆರೆಯ ಖ್ಯಾತ ನಿರ್ದೇಶಕ ಟಿ.ಎನ್. ಸೀತಾರಾಮ್ ಅಮೆರಿಕಾ ಯಾತ್ರೆಯಲ್ಲಿದ್ದಾಗ, ಅವರ ಜೊತೆಯಲ್ಲಿ ಸಂವಾದ ನಡೆಸುತ್ತಿದ್ದಾಗ, ಯಾವುದೋ ಮಾತಿಗೆ ನನ್ನನ್ನು ಒಂದು ಪ್ರಶ್ನೆ ಕೇಳಿದರು: 'ನೀವು ಭಾರತದ ಪೌರತ್ವವನ್ನು ಬಿಟ್ಟುಕೊಟ್ಟು ಅಮೆರಿಕದ ಪ್ರಜೆಯಾದ ಹೊಸತರಲ್ಲಿ 'ನಾನೂ ಅಮೆರಿಕನ್ ಆಗಿಬಿಟ್ಟೆ' ಎಂಬ ಕವನವನ್ನು ಬರೆದಿದ್ದಿರಿ. ಅಲ್ಲಿ ವ್ಯಕ್ತವಾಗಿರುವ ನೋವು, ಭಾವುಕತೆ ಮುಂತಾದವು ನಿಮ್ಮಲ್ಲಿ ಇನ್ನೂ ಹಾಗೇ ಉಳಿದುಕೊಂಡಿವೆಯೇ? ಅಂಥದೇ ಮತ್ತೊಂದು ಕವನವನ್ನು ಪ್ರಾಯಶಃ ಈಗ ಬರೆಯಲಾರಿರಿ, ಅಲ್ಲವೇ?' ತಾವು ಆಡುತ್ತಿದ್ದ ಮಾತಿಗೆ ಪುಷ್ಟಿಕೊಡುವುದಕ್ಕಾಗಿ ಆ ಪ್ರಶ್ನೆಯನ್ನು ಎತ್ತಿದ್ದರು. ಆದರೆ ಆ ಪ್ರಶ್ನೆ ನನ್ನನ್ನು ಕಾಡಿತು. ಭಾವನೆಗಳು ಯಾವುದೋ ಒಂದು ಕಾಲಕ್ಕೆ ಅಥವಾ ಒಂದು ಅನುಭವಕ್ಕೆ ಮಾತ್ರ ಅನ್ವಯವಾಗುತ್ತವೆಯೇ? ಹಿಂದಿನ ಅನುಭವಗಳನ್ನು ದಾಟಿ ನಾವು ಮುಂದೆ ಹೋಗಿಬಿಡುತ್ತೇವೆಯೇ? ಎಂದೆಂದೂ ನಮ್ಮೊಡನಿರುವ ಅನುಭವಗಳು ಮತ್ತು ಅವುಗಳ ಸುತ್ತಲಿನ ಭಾವನೆಗಳು ನಮ್ಮ ಮನಸ್ಸಿನಲ್ಲೋ ಹೃದಯದಲ್ಲೋ ಬೀಡು ಬಿಟ್ಟಿರುತ್ತವೆಯೇ? ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ನನ್ನ ಅಮೆರಿಕಾ ಅನುಭವಗಳನ್ನು ಮತ್ತೊಮ್ಮೆ ಮೆಲಕು ಹಾಕಿದಾಗ, ಥಟ್ಟನೆ ನೆನಪಾದ ಹಲವು ಪ್ರಕರಣಗಳು, ವ್ಯಕ್ತಿಚಿತ್ರಗಳು ನನ್ನ ಕಣ್ಮುಂದೆ ಸುಳಿದುಹೋದವು. ಅವುಗಳಲ್ಲಿ ಕೆಲವನ್ನು ಮಾತ್ರ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಒಮ್ಮೆ ಅನುಭವಿಸಿದ ಖುಷಿ, ನೋವು, ದ್ವೇಷ, ಸ್ನೇಹ, ಕೋಪ, ತಾಪ, ಅಸೂಯೆ ಮುಂತಾದವುಗಳ ತೀವ್ರತೆ ಸಮಯ ಕಳೆದಂತೆಲ್ಲ ಕಡಿಮೆಯಾಗುತ್ತದೆ, ವಿವರಗಳು ಮಸುಕಾಗುತ್ತವೆ, ಆದರೂ ನಮಗೆ ಗೊತ್ತಿದ್ದಂತೆಯೋ ಗೊತ್ತಿರದಂತೆಯೋ ನಮ್ಮ ಜೀವನವನ್ನು ಮಾರ್ಪಡಿಸುತ್ತವೆ.

(1) ಮೊದಲ ರೋಮಾಂಚನ

ನಾನು ಅಮೆರಿಕದ ಅಂಗಳದಲ್ಲಿ ಕಾಲಿಟ್ಟ ಕೆಲ ತಿಂಗಳುಗಳಲ್ಲೇ ಅಮೆರಿಕದ ಪ್ರಜೆಯೊಬ್ಬ ಚಂದಿರನ ಮೈಮೇಲೆ ಕಾಲಿಟ್ಟಿದ್ದ! ಆಹಾ, ಎಂಥ ದೇಶ! ಅಧ್ಯಕ್ಷ ಕೆನಡಿ ತನ್ನ

ದೇಶದ ವಿಜ್ಞಾನಿಗಳಿಗೆ, ತಂತ್ರಜ್ಞರಿಗೆ ಹತ್ತು ವರ್ಷದ ಅವಧಿ ಕೊಟ್ಟು ಚಂದ್ರಗ್ರಹವನ್ನು ಮುಟ್ಟಿ ಹಿಂದಿರುಗುವ ಒಂದು ಗುರಿಯನ್ನೂ ಅದಕ್ಕೆ ತಗುಲುವ ವೆಚ್ಚದ ಸ್ವಾತಂತ್ರ್ಯವನ್ನೂ ಕೊಟ್ಟಿದ್ದ. ನಾಸಾ ಸಂಸ್ಥೆ ಆ ಆದೇಶವನ್ನು ಶಿರಸಾವಹಿಸಿ ಪಾಲಿಸಿ ಒಂದು ವಿಕ್ರಮವನ್ನು ಸಾಧಿಸಿತ್ತು. ಅಂತೂ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಮನರಂಜನಾ ಕೇಂದ್ರದಲ್ಲಿ ಕುಳಿತು ದೊಡ್ಡ ತೆರೆಯ ಮೇಲೆ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಮೊದಲ ಹೆಜ್ಜೆ ಇಟ್ಟು, 'ಮನುಷ್ಯನಿಗೆ ಒಂದು ಪುಟ್ಟ ಹೆಜ್ಜೆ, ಮನುಜಕುಲಕ್ಕೆ ಒಂದು ತ್ರಿವಿಕ್ರಮ ಹೆಜ್ಜೆ' ಎಂಬ ಘೋಷಣೆಯನ್ನು ಪುನಃಪುನಃ ಕೇಳಿ ಪುಳಕಿತನಾದ ಆ ದಿನ ನನ್ನ ಮೊಟ್ಟ ಮೊದಲ ಮರೆಯಲಾಗದ ಅಮೆರಿಕಾ ಅನುಭವ ಎಂದರೆ ಅತಿಶಯೋಕ್ತಿಯಲ್ಲ! ಅಂಥಾ ಮತ್ತೊಂದು ಅನುಭವ ಈ ನಾಲ್ಕು ದಶಕಗಳಲ್ಲಿ ಮತ್ತೊಮ್ಮೆ ಆಗಿಲ್ಲದಿರುವುದಕ್ಕೇನು ಕಾರಣ ಎಂದು ನಾನು ಹಲವು ಬಾರಿ ತಲೆಕೆಡಿಸಿಕೊಂಡಿದ್ದೇನೆ. ಅಂಥಾ ಒಂದು ಸಾಧನೆ ಮತ್ತೊಂದು ನಡೆಯಲೇ ಇಲ್ಲವೋ ಅಥವಾ ನನ್ನ ಮನಸ್ಸು ಮತ್ತೆಲ್ಲೋ ಮಗ್ನವಾಯಿತೋ, ಹೇಳುವುದು ಕಷ್ಟ.

(2) ದಾರಿ ತಪ್ಪಿಸಿದ ಮಾರ್ಗದರ್ಶಿ

ವಿದ್ಯಾರ್ಥಿ ಜೀವನದ ಹಲವು ಅನುಭವಗಳು ನನ್ನ ಮುಂದಿನ ಜೀವನವನ್ನು ರೂಪಿಸಿದವು. ಮುಂಬೈ ಐ.ಐ.ಟಿ.ಯಲ್ಲಿ ನನಗೆ ಕೊಡುತ್ತಿದ್ದ ವಿದ್ಯಾರ್ಥಿವೇತನಕ್ಕೆ ಪ್ರತಿಯಾಗಿ ನಾನು ಹೆಚ್ಚೇನೂ ಮಾಡುವ ಅಗತ್ಯವಿರಲಿಲ್ಲ. ಮಾಸ್ಟರ್ಸ್ ಪದವಿಗಾಗಿ ಮಾಡಬೇಕಾದ ಸಂಶೋಧನೆಗೆ ಏನು ಪದಾರ್ಥಗಳು ಬೇಕು ಎಂಬುದನ್ನು ಪ್ರಯೋಗದ ವಿನ್ಯಾಸದೊಂದಿಗೆ ಬರೆದುಕೊಟ್ಟರೆ ಸಾಕಿತ್ತು, ಇಲಾಖೆಯ ಜೂನಿಯರ್ ಟೆಕ್ನಿಕಲ್ ಅಸಿಸ್ಟೆಂಟುಗಳಲ್ಲಿ ಒಬ್ಬ ಬೇಕಾದ್ದನ್ನು ತರಿಸಿಕೊಡುತ್ತಿದ್ದ. ಆದರೆ, ಇಲ್ಲಿ ಹಾಗಲ್ಲ. ಪದವಿಪೂರ್ವ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಹೋಂವರ್ಕ್‌ಗಳನ್ನು ಪರೀಕ್ಷಿಸಿ ಅಂಕಗಳನ್ನು ಬರೆದಿಡುವುದು, ಒಂದೆರಡು ಸೆಮೆಸ್ಟರ್ ಕಳೆದ ಮೇಲೆ ತರಗತಿಗಳಿಗೆ ಪಾಠ ಹೇಳುವುದು, ಪ್ರಯೋಗಶಾಲೆಯ ಮೇಲ್ವಿಚಾರಣೆ, ಮುಂತಾದ ಕೆಲಸಗಳನ್ನು ಕೊಡುತ್ತಿದ್ದರು. ಇದರ ಜೊತೆಜೊತೆಗೇ ನಾವು ತೆಗೆದುಕೊಳ್ಳಬೇಕಾದ ವಿಷಯಗಳ ಕೋರ್ಸ್-ವರ್ಕ್ ಮಾಡುತ್ತಾ ಮುಂದುವರೆಯಬೇಕಿತ್ತು. ನಂತರ 'ಕಾಮ್‌ಪ್ರಿಹೆನ್ಸಿವ್' ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾದ ಮೇಲೆ ನಮ್ಮ ಸಂಶೋಧನೆಯ ವಿಷಯವನ್ನು ಆಯ್ದುಕೊಂಡು ಅದಕ್ಕೆ ಒಬ್ಬ ಮಾರ್ಗದರ್ಶಿಯನ್ನೂ ಆಯ್ದುಕೊಳ್ಳುವುದು ಮುಖ್ಯ ಹೆಜ್ಜೆ. ಮಾಡಬೇಕೆಂದಿರುವ ಸಂಶೋಧನೆಯ ಬಗ್ಗೆ ಒಂದು ಪ್ರಸ್ತಾವ (ಪ್ರಪೋಸಲ್) ಬರೆದು ಅಂಥಾ ಸಂಶೋಧನೆಯ ಫಲಿತಾಂಶವನ್ನು ನೋಡ ಬಯಸುವ ಸಂಸ್ಥೆಗಳಿಗೆ ಕಳುಹಿಸಿ, ಹತ್ತರಲ್ಲಿ ಒಂದು ಸಂಸ್ಥೆ ಆಸಕ್ತಿ ತೋರಿಸಿದರೆ ಅವರೊಂದಿಗೆ ಚರ್ಚಿಸಿ ಅವರಿಂದ ಹಣ ಪಡೆದುಕೊಂಡು ಬೇಕಾದ ವಸ್ತುಗಳನ್ನು ತರಿಸಿಕೊಂಡು, ಇಡೀ ಯೋಜನೆಯ ವಿನ್ಯಾಸ ಮಾಡಿ, ಕಾಲಕಾಲಕ್ಕೆ ಪ್ರಯೋಗದ ಫಲಿತಾಂಶಗಳನ್ನು ನಿಯತಕಾಲಿಕ ವರದಿಗಳ

ಮೂಲಕ ಕಳುಹಿಸುತ್ತಾ ಮುಂದುವರೆಯಬೇಕು. ಈ ರೀತಿ ಬರೆದು ಕಳುಹಿಸಿದ ನಮ್ಮ ಒಂದು ಪ್ರಸ್ತಾವ ಪೆನ್ಸಿಲ್ವೇನಿಯಾ ಸಂಸ್ಥಾನದ ಹೆದ್ದಾರಿಗಳ ಸಂಸ್ಥೆಯ ಪ್ರತಿನಿಧಿಗಳ ಆಸಕ್ತಿ ಮತ್ತು ಸಮ್ಮತಿಯನ್ನು ಪಡೆಯಿತು. ಪಿಟ್ಸ್‌ಬರ್ಗಿನಿಂದ ಸುಮಾರು ಅರವತ್ತು ಮೈಲಿ ದೂರದಲ್ಲಿ ಕಟ್ಟುತ್ತಿದ್ದ ಭಾರೀ 'ಇಂಟರ್‌ಛೇಂಜ್' (ಹೆದ್ದಾರಿಯ ಮೇಲೆ ಹೆದ್ದಾರಿ ಹಾಯುವ ಸ್ಥಳ) ಒಂದಿತ್ತು, ಅದು ಹಾದುಹೋಗುವ ಬಳಿಯಲ್ಲಿ ಒಂದು ಸಣ್ಣ ನದಿ ಇದ್ದು ಅಲ್ಲಿನ ಜೇಡಿಮಣ್ಣು ತನ್ನ ಮೇಲೆ ಬಂದು ಬೀಳುವ 40–50 ಅಡಿ ಎತ್ತರದ ಅಣೆಕಟ್ಟಿನ ತೂಕದ ಕಾರಣ ಎಷ್ಟು ಕುಸಿಯಬಹುದು, ಇಡೀ ಕುಸಿತ ಎಷ್ಟು ಸಮಯ ತೆಗೆದುಕೊಳ್ಳಬಹುದು, ಇವುಗಳನ್ನು ಲೆಕ್ಕಹಾಕುವುದು ಹೇಗೆ, ಮಾಡಿದ ಲೆಕ್ಕಾಚಾರ ಸರಿಯೋ ತಪ್ಪೋ ಕಂಡುಹಿಡಿಯುವುದು ಹೇಗೆ ಅದಕ್ಕೆ ಬೇಕಾದ ಅಳತೆ ಮಾಡುವ ಉಪಕರಣಗಳನ್ನು ಎಲ್ಲೆಲ್ಲಿ ಸಂಸ್ಥಾಪಿಸಬೇಕು, ಏನೇನನ್ನು ಅಳೆಯಬೇಕು ಮುಂತಾದ ವಿಷಯಗಳನ್ನು ಕುರಿತು ಸಂಶೋಧನೆ ಮಾಡಲು ಅದಕ್ಕೆ ಬೇಕಾದ ಸಿದ್ಧಾಂತ (ಥಿಯರಿ), ಅದನ್ನು ಸರಳಗೊಳಿಸಿ ಲೆಕ್ಕಾಚಾರ ಮಾಡಲು ಅದನ್ನು ಮಾದರಿಗೊಳಿಸುವುದು (ಡೆವಲಪಿಂಗ್ ಎ ಮಾಡೆಲ್), ಮತ್ತು ಅದನ್ನು ಗಣಕೀಕರಿಸಲು ತಯಾರಿಸಬೇಕಾದ ಕಂಪ್ಯೂಟರ್ ಪ್ರೋಗ್ರಾ್ಯಂಗಳನ್ನು ಬರೆದು ಅವನ್ನು ಪರೀಕ್ಷಿಸಿ ತಿದ್ದಿ ಖಾತ್ರಿಪಡಿಸಿಕೊಂಡು (ವೆರಿಫಿಕೇಶನ್ ಮತ್ತು ವ್ಯಾಲಿಡೇಶನ್), ಕ್ಷೇತ್ರದಲ್ಲಿ ಸಂಗ್ರಹಿಸಿದ ಅಳತೆಗಳನ್ನು ಉಪಯೋಗಿಸಿ ಮುಂದಿನ 20–40 ವರ್ಷಗಳಲ್ಲಿ ಆ ಬೃಹತ್ ಹೆದ್ದಾರಿಯಡಿ ಅಡಗಿರುವ ಅಣೆಕಟ್ಟು ಮತ್ತು ಅದರಡಿಯಿರುವ ಕುಸಿಯುವ ಜೇಡಿಮಣ್ಣು ಹೇಗೆ ನಡೆದುಕೊಳ್ಳುತ್ತದೆ ಎಂಬುದರ ವಿಶ್ಲೇಷಣೆಯೇ ಈ ಸಂಶೋಧನೆಯ ವಸ್ತು ಎಂದು ಸ್ಥೂಲವಾಗಿ ಹೇಳಬಹುದು.

ಪ್ರಾಜೆಕ್ಟ್ ಪ್ರಾರಂಭವಾದೊಡನೆ, ನಾನು ವಾರದಲ್ಲಿ ಎರಡೆರಡು ದಿನ 60 ಮೈಲಿ ದೂರ ವಿಶ್ವವಿದ್ಯಾಲಯಕ್ಕೆ ಸೇರಿದ ವ್ಯಾನನ್ನು ನಡೆಸಿಕೊಂಡು ಹೋಗಿ ಉಪಕರಣಗಳನ್ನು ಸಂಸ್ಥಾಪಿಸಿ ಅಳತೆಮಾಡಿ ಡೇಟಾ ಸಂಗ್ರಹಮಾಡುತ್ತಿದ್ದಾಗಿನ ಆ ದಿನಗಳು ನನ್ನ ಕಷ್ಟದ ದಿನಗಳಾಗಿದ್ದವು. ಮೊದಲನೆಯದಾಗಿ ಇಡೀ ಕ್ಷೇತ್ರದ ಮೇಲ್ಮೈ ಲಕ್ಷಣಗಳನ್ನು ಸರ್ವೇ ಮಾಡಬೇಕಾಗಿತ್ತು. ನನ್ನ ಜೊತೆ ಕೆಲಸ ಮಾಡುತ್ತಿದ್ದ ಅಮೆರಿಕನ್ ವಿದ್ಯಾರ್ಥಿ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದಿದ್ದರೂ ಅವನಿಗೆ ಸರ್ವೇ ಮಾಡಲು ಬರುತ್ತಿರಲಿಲ್ಲ. ಹೀಗಾಗಿ ಥಿಯೊಡಲೈಟ್ ನನ್ನ ಕೈಗೆ ಬಂತು ಸರ್ವೇ ರಾಡ್ ಅವನ ಕೈಗೆ. ಬಡ ಭಾರತದಿಂದ ಬಂದು ಬಿಳಿಯನ ಕೈಲಿ ಕೂಲಿ ಮಾಡಿಸಿಕೊಳ್ಳುತ್ತಿದ್ದೇನೆಂಬ ಹಮ್ಮಿನಿಂದ ನಾನು ಬಿರಿದುಹೋದೆ! (ಆದರೆ, ನನಗೆ ಸಿಗುತ್ತಿದ್ದ ವೇತನಕ್ಕಿಂತ ಹೆಚ್ಚು ಅವನಿಗೆ ಸಿಗುತ್ತಿತ್ತು ಎಂದು ನನಗೆ ತಿಳಿದಾಗ ಮಾತ್ರ ಮನಸ್ಸಿಗೆ ಕೊಂಚ ಮುಜುಗರವಾಗಿತ್ತು!) ಮಣ್ಣಿನ ಮತ್ತು ನೀರಿನ ಒತ್ತಡವನ್ನು ಅಳತೆ ಮಾಡುವ 'ಸ್ಟ್ರೆಸ್ ಮೀಟರ್' ಮತ್ತು 'ಪಿಜ಼ಾಮೀಟರ್' ಭೂತಳದ ಹಿಗ್ಗುವಿಕೆ–ಕುಸಿಯುವಿಕೆ ಮತ್ತು ಸ್ಥಾನಪಲ್ಲಟಗಳನ್ನು ಅಳೆಯುವ 'ಸ್ಲೋಪ್ ಇಂಡಿಕೇಟರ್' ಅಥವಾ 'ಇನ್‌ಕ್ಲಿನೋಮೀಟರ್' ಮತ್ತು

'ಸೆಟಲ್‌ಮೆಂಟ್ ಗೇಜ್' ಮುಂತಾದ ನಾನಾ ವಿಧವಾದ ಸಲಕರಣೆಗಳನ್ನು ಸಂಸ್ಥಾಪಿಸಿ ಅವುಗಳಿಂದ ನಿಯತಕಾಲಿಕ ಅಳತೆಗಳನ್ನು ಜಮಾಯಿಸಿದೆ (ಎಂಬ್ಯಾಂಕ್‌ಮೆಂಟ್ ಇನ್‌ಸ್ಟ್ರುಮೆಂಟೇಶನ್ ವಿಚಾರದಲ್ಲಿ ಹೆಚ್ಚಿನ ಪರಿಣತಿಯನ್ನು ಗಳಿಸಿದೆ). ನೆಲವನ್ನು ಕೊರೆಯುವ ಡ್ರಿಲ್ ರಿಗ್ ಸಿಬ್ಬಂದಿಯೊಂದಿಗೆ ವ್ಯವಹರಿಸುವುದನ್ನು ಕಲಿಯಲು ತುಂಬಾ ಶ್ರಮ ಪಡಬೇಕಾಯಿತು, ಏಕೆಂದರೆ ಅವರ ವ್ಯವಹಾರ ಕ್ರಮ ಮತ್ತು ಅವರು ಬಳಸುವ ಭಾಷೆ ಬಣ್ಣಿಸಲಸದಳ!

ಹಿಮಗಾಲವನ್ನು ಕಂಡು ಕೇಳರಿಯದ ನಾನು ಕೊರೆಯುವ ಚಳಿಯ ಆ ಪ್ರದೇಶದಲ್ಲಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಎರಡು ವರ್ಷ ಎಡೆಬಿಡದೆ ದುಡಿದು ಕೆಲಸ ಮುಗಿದ ಬಳಿಕ ನನ್ನ ಮಾರ್ಗದರ್ಶಿ (ಅಡ್ವೈಸರ್) ನಾನು ಆಯ್ದುಕೊಂಡಿರುವ ವಸ್ತು ಪಿ.ಎಚ್.ಡಿ. ದೀರ್ಘಪ್ರಬಂಧಕ್ಕೆ ಸರಿಹೋಗಲಾರದು ಎಂದು ಅಪಸ್ವರ ತೆಗೆದಾಗ ನನ್ನ ಎದೆ ಒಡೆದುಹೋಗುವುದೊಂದು ಬಾಕಿ. ಪ್ರಬಂಧ ಬರೆಯುವುದೊಂದೇ ಉಳಿದಿರುವ ಕೆಲಸ ಎಂದುಕೊಳ್ಳುತ್ತಿದ್ದಾಗ, ನಡುನೀರಿನಲ್ಲಿ ಕೈಬಿಟ್ಟಿದ್ದ ನನ್ನ ಪರಮ–ಗುರು! ಆತನಿಗೆ ಒಬ್ಬ ಬಿಟ್ಟಿ ಜೀತದ ಗುಲಾಮ–ವಿದ್ಯಾರ್ಥಿಯ ಅಗತ್ಯವಿತ್ತು, ಪ್ರಾಜೆಕ್ಟ್ ಕೆಲಸವೆಲ್ಲ ನನ್ನ ಸಂಶೋಧನೆಯ ಅಂಗವಾಗಿ ದೀರ್ಘಪ್ರಬಂಧಕ್ಕೇ ಉಪಯೋಗವಾಗುತ್ತದೆಂದು ನಂಬಿಸಿ ನನ್ನನ್ನು ದುಡಿಸಿಕೊಂಡರೆಂಬುದು ನನಗೆ ಅರಿವಾಗುವ ಹೊತ್ತಿಗೆ ಸಮಯ ಮೀರಿಹೋಗಿತ್ತು (ಈ ಯೋಜನೆಯಿಂದ ಗಳಿಸಿದ ಅನುಭವ ಮುಂದೆ ನನಗೆ ವೃತ್ತಿಯಲ್ಲಿ ತುಂಬಾ ಉಪಯೋಗವಾಯಿತು ಎಂಬುದು ನಿಜವಾದರೂ ಪದವಿಯನ್ನು ಸಮಯಕ್ಕೆ ಸರಿಯಾಗಿ ಮುಗಿಸುವ ದೃಷ್ಟಿಯಿಂದ ಅದು ತುಂಬಾ ಋಣಾತ್ಮಕವಾಗಿತ್ತು).

ಈ ಕಟು ಅನುಭವವನ್ನು ಮರೆಯಲು ನನಗೆ ಹಲವು ವರ್ಷಗಳೇ ಹಿಡಿದವು. ನಾನು ಮತ್ತೊಬ್ಬ ಪ್ರಾಧ್ಯಾಪಕರ ನಿರ್ದೇಶನದಲ್ಲಿ ನನ್ನ ಸಂಶೋಧನೆ ಮುಂದುವರೆಸಬೇಕೆಂದು ತೀರ್ಮಾನಿಸಿದಾಗ ಹಲವಾರು ಹಿತೈಷಿಗಳು ನನ್ನನ್ನು ಹುಚ್ಚನೆಂದು ಕರೆದರು. ಆ ದಿನಗಳಲ್ಲಿ ನಾನು ಅನುಭವಿಸಿದ ನೋವು ವರ್ಣಿಸಲಸದಳ. ಈ ವಿಷಯಗಳನ್ನು ಭಾರತದಲ್ಲಿರುವ ತಂದೆತಾಯಿಗಳಿಗೆ, ಅಣ್ಣ–ತಮ್ಮ, ಅಕ್ಕ–ತಂಗಿಯರಿಗೆ ವಿವರಿಸುವುದು ಕಷ್ಟವಾಗಿತ್ತು. ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲಾರರು ಎಂದು ನಾನು ಅವರಿಗೆ ವಿವರಿಸುವ ತೊಂದರೆ ತೆಗೆದುಕೊಳ್ಳಲಿಲ್ಲ. ಮತ್ತೆರಡು ವರ್ಷಗಳು ಕಷ್ಟಪಟ್ಟು ಬೇರೊಂದು ವಿಷಯದ ಮೇಲೆ ನನ್ನ ದೀರ್ಘಪ್ರಬಂಧವನ್ನು ಬರೆದು ಮುಗಿಸಿದೆ. ನನ್ನ ಹಳೇ ಗುರುವೂ ನನ್ನ ಪರೀಕ್ಷಕ ಸಮಿತಿಯಲ್ಲಿದ್ದುದರಿಂದ ಆತ ಕೊಟ್ಟ ಎಲ್ಲಾ ಹಿಂಸೆಯನ್ನೂ ಅನುಭವಿಸದೇ ವಿಧಿಯಿರಲಿಲ್ಲ. ಆ ಪ್ರಾಧ್ಯಾಪಕ ಮಹಾಶಯ ಇನ್ನೂ ಹಲವರಿಗೆ ಹೀಗೇ ಮಾಡಿ ನಡುನೀರಿನಲ್ಲಿ ಕೈಬಿಟ್ಟಿದ್ದ ಎಂಬ ವಿಷಯ ಇಡೀ ಪ್ರಾಧ್ಯಾಪಕ ವರ್ಗಕ್ಕೇ ತಿಳಿದ ವಿಷಯವಾಗಿತ್ತು, ಹೀಗಾಗಿ ಇತರ ಪರೀಕ್ಷಕರ ಸಹಾನುಭೂತಿ ನನಗೆ ದೊರಕಿತು. ಅಂತೂ ನಾನು ಎಣಿಸಿದ್ದಕ್ಕಿಂತ

ಎರಡರಷ್ಟು ಸಮಯವನ್ನು – ನನ್ನ ಜೀವಮಾನದ ಅತಿಮುಖ್ಯ ವರ್ಷಗಳನ್ನು ತೆರಬೇಕಾಯಿತು 'ಡಾಕ್ಟರ್' ನಟರಾಜ ಎಂದು ಕರೆಸಿಕೊಳ್ಳಲು! ಹಿಡಿದ ಕೆಲಸವನ್ನು ಮುಗಿಸಲೇಬೇಕೆಂಬ ಹಟದಿಂದ, ನಾನು ಅಮೆರಿಕಕ್ಕೆ ಬಂದದ್ದರ ಉದ್ದೇಶವೇ ಅದು ಎಂದು ಮನಸ್ಸನ್ನು ಗಟ್ಟಿಮಾಡಿಕೊಂಡು ಮುಂದುವರೆದೆ. ನನ್ನೊಡನೆ ಪಿ.ಎಚ್.ಡಿ. ಮಾಡಲು ಹತ್ತಾರು ದೇಶಗಳಿಂದ ಬಂದಿದ್ದ ವಿದ್ಯಾರ್ಥಿಗಳಲ್ಲಿ ಅನೇಕರು ಮಧ್ಯದಲ್ಲೇ ನಿಲ್ಲಿಸಿ (ಕೆಲವರು ಸಂಪೂರ್ಣವಾಗಿ ಕೈಬಿಟ್ಟು) ಕೆಲಸಗಳನ್ನು ಹಿಡಿದರು. ಕೆಲಸ ಹಿಡಿಯುವ ಅವಕಾಶ ನನಗೂ ಇದ್ದಿತಾದರೂ ನಾನು ವಿದ್ಯಾರ್ಥಿಯಾಗೇ ಮುಂದುವರೆದೆ. ಎದುರೀಜಿನಲ್ಲಿ ಸೋಲದೇ ಕೈಹಿಡಿದ ಕೆಲಸವನ್ನು ಸಂಪೂರ್ಣಗೊಳಿಸಿ ದಡ ಮುಟ್ಟಿದ ಇಬ್ಬರಲ್ಲಿ ನಾನೂ ಒಬ್ಬನಾಗಿದ್ದೆ!

(3) ಪ್ರೇಮ ಪ್ರಕ–ರಣ–1

ನಾನು ವಿದ್ಯಾರ್ಥಿಯಾಗಿದ್ದಾಗ ನಡೆದ ಹಲವು ಪ್ರೇಮ ಪ್ರಕರಣಗಳು ನನ್ನ ಮನಸ್ಸಿನಲ್ಲಿ ಇನ್ನೂ ಉಳಿದುಕೊಂಡಿವೆ. (ದಯವಿಟ್ಟು ಗಮನಿಸಿ, ನನ್ನ ಪ್ರೇಮ–ಪ್ರಕರಣಗಳಲ್ಲ!) ನಾನು ಓದಲು ಬಂದ ಹೊಸತರಲ್ಲಿ ನಡೆದ ಕಥೆಗಳಿವು. ಯಾರನ್ನೂ ಹೆಸರಿಸದೇ ಯಾರ ವೈಯಕ್ತಿಕ ರಹಸ್ಯಕ್ಕೂ ಭಂಗ ಬಾರದ ರೀತಿಯಲ್ಲಿ ಮತ್ತು ಯಾರ ಬಗ್ಗೆಯೂ ತೀರ್ಪು ಕೊಡದೇ ದಾಖಲಿಸಲು ಯತ್ನಿಸುತ್ತೇನೆ. ಗಂಡು–ಹೆಣ್ಣುಗಳ ನಡುವೆ ಅಷ್ಟೇನೂ ಸಲಿಗೆಯಿಲ್ಲದ ದಿನಗಳಲ್ಲಿ ಬೆಳೆದು ಈ ದೇಶಕ್ಕೆ ಬಂದವರು ನಾವು. ಮಧ್ಯಮವರ್ಗದ ಕುಟುಂಬಗಳಿಂದ ಬಂದ ನಮ್ಮಂತಹ ವಿದ್ಯಾರ್ಥಿಗಳೇ ನಮ್ಮ ಮಿತ್ರರೂ ಆಗಿದ್ದರು. ಹೆಣ್ಣಿನೊಡನೆ ಚೆಲ್ಲಾಟವಾಡಬಯಸುವ ವಯಸ್ಸು ನಮ್ಮದು. ನಮಗಾದರೋ, 'ಅರಸನ ಅಂಕೆಯಿರಲಿಲ್ಲ, ದೆವ್ವದ ಕಾಟವಿರಲಿಲ್ಲ'. ಜೊತೆಗೆ ಸ್ವಚ್ಛಂದವಾಗಿ ವರ್ತಿಸುವ ಸುಂದರ ಹುಡುಗಿಯರು ಎಲ್ಲೆಲ್ಲೂ. ಸ್ವಲ್ಪ ಯತ್ನಿಸಿದರೆ ಕೈಗೆಟಕುವ ಹ(ಹೆ)ಣ್ಣುಗಳು! ಶುಕ್ರವಾರ ಸಂಜೆ ಬಂತೆಂದರೆ ಸರಿ, ತರುಣ–ತರುಣಿಯರು ಒಟ್ಟೊಟ್ಟಾಗಿ ಪಾರ್ಟಿಸುತ್ತಾ ನರ್ತಿಸುತ್ತಾ ಪರಸ್ಪರ ಚುಂಬಿಸುತ್ತಾ ಖುಷಿ ಕೊಟ್ಟು ತೆಗೆದುಕೊಳ್ಳುವ ಕ್ಯಾಂಪಸ್ ವಾತಾವರಣದಲ್ಲಿ ಬೇಕಿದ್ದರೆ ಸಂಯಮವನ್ನು ಕಳೆದುಕೊಳ್ಳಬಹುದಾದ ಸದವಕಾಶಗಳ ನಡುವೆಯೂ ಹೋಂವರ್ಕ್ ಮಾಡುತ್ತಾ ಮನೆಯಲ್ಲೇ ಬಿದ್ದು ಮಿಲುಗಾಡುತ್ತಿದ್ದ ಭಾರತದ ಬಡ ಬ್ರಹ್ಮಚಾರಿಗಳ ಬವಣೆಯನ್ನು ಏನೆಂದು ಬಣ್ಣಿಸಲಿ? ಅನುಭವಿಸಿದವರಿಗೇ ಗೊತ್ತು ಆ ಸಂಕಟ! ಸ್ವಯಂಪ್ರೇರಿತ ಸಂಯಮವೋ ಭಾರತೀಯ ಸಮಾಜ ನಮ್ಮಮೇಲೆ ಬರೆದು ಅಂಟಿಸಿದ್ದ ಲಕ್ಷ್ಮಣ ರೇಖೆಗಳೋ, ಹೇಳುವುದು ಕಷ್ಟ! ಅಂತೂ ತೋಟದಲ್ಲಿ ನಾನಾ ಹಣ್ಣಿನ ಮರಗಳು, ಮರಗಳ ತುಂಬ ಹಣ್ಣುಗಳಿದ್ದರೂ ಯಾವ ಹಣ್ಣಿನ ರುಚಿಯನ್ನೂ ನೋಡಲಾಗದ ನಿರಾಶಾಭಾವ, ಬಲಾತ್ಕಾರದ ಬ್ರಹ್ಮಚರ್ಯವ್ರತ ಇವುಗಳನ್ನು ವರ್ಣಿಸಲು ಅಸಾಧ್ಯ. ಇರಲಿ. ಈ ನಮ್ಮ ಅವಸ್ಥೆಯ

ನಡುವೆಯೂ ಹಲವರು ತೋಟಕ್ಕೆ ನುಗ್ಗಿ ಬೇಕಾದ ಹಣ್ಣುಗಳನ್ನು ಬೇಕಾದಾಗ, ಬೇಕಾದಷ್ಟು ಮೆದ್ದವರಾದರೆ, ಮೆದ್ದವರನ್ನು ನೋಡುತ್ತಾ ಬಾಯಲ್ಲಿ ನೀರೂರಿಸಿಕೊಂಡವರು ಅನೇಕರು!

ಈ ಹಿನ್ನೆಲೆಯಲ್ಲಿ, ನಮ್ಮ ಪೈಕಿ ಒಬ್ಬ ವೀರ, ಹಲವು ಹುಡುಗಿಯರೊಂದಿಗೆ, 'ತಿಥಿ' ಮಾಡುತ್ತಿದ್ದ [ಇಲ್ಲಿ ಕೊಂಚ ಭಾಷಾಧ್ಯಯನಕ್ಕೆ ಅವಕಾಶವಿದೆ. ಇಂಗ್ಲೀಷಿನಲ್ಲಿ ಡೇಟ್ ಮಾಡುವುದು ಎಂದರೆ ಎಲ್ಲರಿಗೂ ಅರ್ಥವಾಗುತ್ತದೆ. ಆದರೆ, ತಿಥಿ ಮಾಡುವುದು ಕನ್ನಡದಲ್ಲಿ ಮತ್ತೊಂದೇ ಅ(ನ)ರ್ಥವನ್ನು ಧ್ವನಿಸುತ್ತದೆ. ಹಾಗೆ ನೋಡಿದರೆ 'ತಿಥಿ' ಎಂಬುದು ನಮ್ಮ ಪಂಚಾಂಗ ಪದ್ಧತಿಯಲ್ಲಿ 'ತಾರೀಖು' = ಇಂಗ್ಲೀಷಿನ 'ಡೇಟ್.' ಒಂದು ಹುಡುಗಿಯೊಂದಿಗೆ 'ಹೊರಗೆ ಹೋಗಲು' – 'ಗೋಯಿಂಗ್ ಔಟ್ ವಿತ್ ಎ ಗರ್ಲ್' – ಒಂದು ದಿನವನ್ನು ನಿಗದಿ ಮಾಡಿಕೊಳ್ಳುವುದೇ 'ಡೇಟ್.' 'ಹಿ ಇಸ್ ಆನ್ ಡೇಟ್' ಅನ್ನುವುದನ್ನು 'ಅವನು ತಿಥಿಯ ಮೇಲಿದ್ದಾನೆ' ಅಥವಾ 'ತಾರೀಖಿನ ಮೇಲಿದ್ದಾನೆ' ಎಂದರೆ ಯಾರಿಗೂ ಅರ್ಥವಾಗಲಾರದು. ನಾನು ಎಲ್ಲಿಂದೆಲ್ಲಿಗೋ ಬಂದೆ ಕ್ಷಮಿಸಿ. ನಮ್ಮ ಭಾಷೆಯಲ್ಲಿ ಇದನ್ನು 'ಓಡಾಡುವುದು' ಎನ್ನುತ್ತಾರೆ; ಉದಾಹರಣೆಗೆ, ಅವನು ಆ ಹುಡುಗಿಯ ಜೊತೆ (ಹಿಂದೆ?) 'ಓಡಾಡುತ್ತಿದ್ದಾನಂತೆ' ಎಂದರೆ, ಅಚ್ಚ-ಕನ್ನಡಿಗರಿಗೆ ಸುಲಭವಾಗಿ ತಿಳಿಯುತ್ತದೆ]. ಸದರಿ, ಈತ ಹಲವಾರು ಹುಡುಗಿಯರ ಜೊತೆ ಓಡಾಡುತ್ತಿದ್ದ ಎನ್ನುವುದೇ ಕನ್ನಡದಲ್ಲಿ ಸರಿಯಾದ ಮಾರ್ಗ. ಕೊನೆಗೆ ಒಬ್ಬಳೊಂದಿಗೆ ಪ್ರಣಯದಲ್ಲಿ ಸಿಕ್ಕು ಅವಳನ್ನು ಗಾಢವಾಗಿ ಪ್ರೀತಿಸಲಾರಂಭಿಸಿದ. ಅವಳನ್ನೇ ಮದುವೆಯಾಗುವುದಾಗಿ ಅವಳಿಗೆ ಒಂದು ಉಂಗುರವನ್ನೂ ನಮ್ಮೆಲ್ಲರ ಸಮಕ್ಷಮದಲ್ಲೇ ಕೊಟ್ಟೂಬಿಟ್ಟ. ಮಿತ್ರರೆಲ್ಲ ಸೇರಿ ಸಂತೋಷಕೂಟವನ್ನು ಏರ್ಪಡಿಸಿದ್ದೂ ಆಯಿತು. ಅದಾದ ಕೆಲವೇ ದಿನಗಳಲ್ಲಿ ಇವನೊಂದಿಗೆ ಓಡಾಡುತ್ತಿದ್ದ ಮತ್ತೊಬ್ಬ ಚೆಲುವೆ ಇದ್ದಕ್ಕಿದ್ದಂತೆ ಮಧ್ಯೆ ಪ್ರವೇಶಿಸಿದಳು (ಅವಳು ನಿಜಕ್ಕೂ ಚೆಲುವೆಯಾಗಿದ್ದಳು, ಇವನೊಂದಿಗೆ ಅವಳನ್ನು ಕಂಡಾಗಲೆಲ್ಲ, ನಾವೆಲ್ಲ ತುಂಬಾ ಹೊಟ್ಟೆಉರಿ ಪಡುತ್ತಿದ್ದೆವು ಎಂದು ನಿಸ್ಸಂಕೋಚವಾಗಿ ಹೇಳುತ್ತಿದ್ದೇನೆ!). ತನಗೇ ಉಂಗುರವನ್ನು ಕೊಡುತ್ತಾನೆಂದು ನಂಬಿದ್ದ ಆ ಭಗ್ನಪ್ರಣಯಿನಿ, ತನ್ನ ಸಂಕಟವನ್ನು ತಡೆದುಕೊಳ್ಳಲಾಗದೇ ಪ್ರಾಣ ಕಳೆದುಕೊಳ್ಳಲು ಯತ್ನಿಸಿ ವಿಫಲಳಾಗಿ ಮನೋವೈದ್ಯರ ತಪಾಸಣೆಗೆ ಒಳಗಾಗಿ ಸೈಕಿಯಾಟ್ರಿಕ್ ಆಸ್ಪತ್ರೆ ಸೇರಿದಳು. ನಮ್ಮಲ್ಲನೇಕರು ಆಕೆಯನ್ನು (ಹುಚ್ಚ್)ಆಸ್ಪತ್ರೆಯಲ್ಲಿ ಹೋಗಿ ನೋಡಿಯೂ ಬಂದರು.

ಒಂದು ದಿನ ನಾನು ಲಂಚ್ ತಿನ್ನಲು ನನ್ನ ಅಪಾರ್ಟ್‌ಮೆಂಟಿಗೆ ಹಿಂದಿರುಗಿದೆ. ನಮ್ಮ ಲ್ಯಾಂಡ್ ಲೇಡಿಯದೇ ಮೂರು ನಾಲ್ಕು ಮನೆಗಳು ಒಂದೇ ಸಾಲಿನಲ್ಲಿದ್ದವು. ಆಕೆಯೇ ವಾಸವಾಗಿದ್ದ ಮನೆಯ ಮೇಲ್ಭಾಗವನ್ನೂ ಭಾರತೀಯ ವಿದ್ಯಾರ್ಥಿಗಳಿಗೇ ಆಕೆ ಬಾಡಿಗೆಗೆ ಕೊಟ್ಟಿದ್ದಳು (ಅವಳಿಗೆ ಭಾರತೀಯ ಪದವಿಯೋತ್ತರ ವಿದ್ಯಾರ್ಥಿಗಳನ್ನು

ಕಂಡರೆ ಒಂದು ಬಗೆಯ ಪಕ್ಷಪಾತ, ಏಕೆಂದರೆ ಅವರುಗಳು ವಾರಾಂತ್ಯದಲ್ಲಿ ಕುಡಿದು ಗಲಾಟೆಮಾಡುವುದಾಗಲೀ ದೊಡ್ಡ ದೊಡ್ಡ ಪಾರ್ಟಿಗಳನ್ನು ಆಚರಿಸುವುದಾಗಲಿ ಕಮ್ಮಿ ಎಂಬುದನ್ನು ಅನೇಕ ವರ್ಷಗಳಿಂದ ನೋಡಿ ಅಂಥ ನಂಬಿಕೆಯನ್ನು ಬೆಳೆಸಿಕೊಂಡಿದ್ದಳು). ನಮ್ಮ ಗೆಳೆಯ ಆಕೆಯ ಮನೆಯ ಮಹಡಿಯಲ್ಲೇ ವಾಸವಾಗಿದ್ದ, ಆತನ ಸಂಗಾತಿಯೂ ಅಲ್ಲೇ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದಳು (ಅವರೀಗ ಪರಸ್ಪರ ಮಾತುಕೊಟ್ಟು ಮದುವೆಯ ಯೋಜನೆಯಲ್ಲಿ ವ್ಯಸ್ತರಾಗಿದ್ದರು). ನಮ್ಮಿಂದ ಮೂರನೆಯ ಮನೆಯೇ ನಮ್ಮ ಲ್ಯಾಂಡ್‌ಲೇಡಿಯ ಮನೆ. ಆ ಮನೆಯ ಮುಂದೆ ಪೋಲೀಸರ ವಾಹನಗಳು ಕೆಂಪು ದೀಪಗಳನ್ನು ತಿರುಗಿಸುತ್ತಾ ನಿಂತಿದ್ದವು. ಮನೆಯ ಹೊರಗಡೆ ಲ್ಯಾಂಡ್‌ಲೇಡಿ ಹಿಸ್ಟೆರಿಕಲ್ ಆಗಿ ಕಿರುಚುತ್ತಿದ್ದಳು. ಏನು ವಿಷಯವೆಂದು ನೋಡಲು ಹೋದರೆ, ತಿಳಿದದ್ದು ಇಷ್ಟು: ಸೈಕಿಯಾಟ್ರಿಕ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಗಾಗುತ್ತಿದ್ದ ನಮ್ಮ ಗೆಳೆಯನ ಮಾಜೀ ಪ್ರೇಯಸಿ ತಪ್ಪಿಸಿಕೊಂಡು ಬಂದವಳು ತನ್ನ ಪರ್ಸಿನಲ್ಲಿ ಒಂದು ಪಿಸ್ತೂಲನ್ನೂ ಅಡಗಿಸಿಕೊಂಡು ತಂದಿದ್ದಳು. ತನಗೆ ಚಿರಪರಿಚಿತವಿದ್ದ ಗೆಳೆಯನ ಮನೆಗೆ ಬಂದು ಅವನೂ ಅವನನ್ನು ಲಗ್ನವಾಗಲಿರುವ ಹುಡುಗಿಯೂ ಅಲ್ಲಿರುವುದನ್ನು ಖಾತ್ರಿಪಡಿಸಿಕೊಂಡು, ಅದು ಇದೂ ವಿಚಾರಗಳನ್ನು ಲೋಕಾಭಿರಾಮವಾಗಿ ಆಡುತ್ತ, ಇದ್ದಕ್ಕಿದ್ದಂತೆ ತನ್ನ ಪಿಸ್ತೂಲನ್ನು ಹೊರತೆಗೆದಳು. ಮುಂದಿನ ವಾರ ಮದುವೆಯಾಗಬೇಕಿದ್ದ ತರುಣಿಯ ಎದೆಗೆ ಗುರಿಯಿಟ್ಟು ಎರಡು ಗುಂಡುಗಳನ್ನು ಕೇವಲ ಮೂರು-ನಾಲ್ಕು ಅಡಿಗಳಷ್ಟೇ ದೂರದಿಂದ ಹೊಡೆದು ಆಕೆಯ ಹೃದಯವನ್ನು ಚೂರುಚೂರು ಮಾಡಿಬಿಟ್ಟಳು!

ತತ್ತರಿಸಿಹೋಗಿದ್ದ ಗೆಳೆಯನನ್ನು ಸಮಾಧಾನಪಡಿಸುವುದು ದುಸ್ಸಾಧ್ಯವಾಯಿತು. ಕೊಲೆಪಾತಕಿಯನ್ನು ಪೋಲೀಸರು ಕೊಂಡೊಯ್ಯುವಾಗ ಅವಳ ಮುಖದ ಮೇಲೆ ಯಾವ ಭಾವವೂ ಇರಲಿಲ್ಲ. ಮದುವೆಯಾಗಬೇಕಿದ್ದ ತಾರೀಕಿನಂದೇ ಮದುವೆ ನಡೆಯಬೇಕಿದ್ದ ಚರ್ಚಿನಲ್ಲೇ ಆ ತರುಣಿಯ ಅಂತಿಮಯಾತ್ರೆಯಲ್ಲಿ ನಾವೆಲ್ಲ ಪಾಲ್ಗೊಂಡೆವು. ನಮ್ಮನ್ನೆಲ್ಲಾ ನಡುಗಿಸಿಬಿಟ್ಟ ಆ ಪ್ರಕರಣ, ಅದರಿಂದುಂಟಾದ ನೋವು, ಭಯ, ಇವುಗಳು ನಮ್ಮ ವಿದ್ಯಾರ್ಥಿಜೀವನದ ಮರೆಯಲಾಗದ ಕಟು ಅನುಭವಗಳ ಸರಪಳಿಯಲ್ಲಿ ಸೇರಿಕೊಂಡವು!

(4) ಪ್ರೇಮ ಪ್ರಕ-ರಣ-2

ಮತ್ತೊಬ್ಬ ನಮ್ಮ ಮಿತ್ರ (ಮಿತ್ರ ಎನ್ನುವುದಕ್ಕಿಂತ ಪರಿಚಯದವನು ಎನ್ನಬೇಕು, ಆತ ವಿದ್ಯಾರ್ಥಿ ದೆಸೆಯಿಂದ ಮುಂದೆ ಸಾಗಿ, ಒಂದು ಕೆಲಸದಲ್ಲಿದ್ದ), ಅವನದೂ ಒಂದು ಪ್ರಣಯ ಪ್ರಸಂಗವೇ. ಆತ ಒಂದು ಬಿಳಿ ಹುಡುಗಿಯೊಂದಿಗೆ ಸಂಸಾರ ಮಾಡಿಕೊಂಡಿದ್ದ (ಮದುವೆಯಾಗದೆಯೇ ಎಂಬ ವಿಷಯವನ್ನು ಇಲ್ಲಿ ಹೇಳದೇ ವಿಧಿಯಿಲ್ಲ!).

ಅವರಿಬ್ಬರನ್ನೂ ನಾವು ಹಲವಾರು ಭಾರತೀಯ ಕಾರ್ಯಕ್ರಮಗಳಲ್ಲಿ ಮತ್ತು ಇಂಡಿಯಾ ಅಸೋಸಿಯೇಶನ್ನಿನವರು ತೋರಿಸುತ್ತಿದ್ದ ಹಿಂದೀ ಸಿನಿಮಾಗಳಲ್ಲೂ ನೋಡುತ್ತಿದ್ದೆವು. ಸಮಯ ಕಳೆಯುತ್ತ ಕಳೆಯುತ್ತ ಆಕೆಯ ಹೊಟ್ಟೆ ದೊಡ್ಡದಾಗಿದ್ದನ್ನೂ ನಾವೆಲ್ಲಾ ಕಂಡೆವು. ಏನೀತ, ಅವಳನ್ನು ಮದುವೆಯಾಗಿದ್ದಾನೋ, ಆಗುವನೋ ಮುಂತಾದ ಗುಸುಗುಸಗಳು ಭಾರತೀಯ ವಿದ್ಯಾರ್ಥಿ ವೃತ್ತಗಳಲ್ಲಿ ನಡೆದೇ ಇದ್ದವು. ಆಮೇಲೆ ನಮಗೆ ತಿಳಿದದ್ದು ಏನೆಂದರೆ, ಈ ಹುಡುಗ ಭಾರತಕ್ಕೆ ಹಿಂದಿರುಗಿ ಕನ್ಯೆಯೊಬ್ಬಳನ್ನು ವಿವಾಹವಾಗಲು ಹೊರಟಿದ್ದಾನೆ ಎಂಬ ಸುದ್ದಿ. ಅವನ ಅಂಬೋಣ ಏನೆಂದರೆ, 'ಅವಳು ಗರ್ಭನಿರೋಧಕ ಮಾತ್ರೆಗಳನ್ನು ನುಂಗುತ್ತಿದ್ದೇನೆ ಎಂದು (ಸುಳ್ಳು) ಹೇಳಿ ನನ್ನನು ಸಿಕ್ಕಿಸಿ/ದಕ್ಕಿಸಿಕೊಳ್ಳಲು ಸಂಚುಹೂಡಿದ್ದಳು. ಅಷ್ಟಕ್ಕೂ ನಾನು ಅವಳ ಗರ್ಭದಲ್ಲಿರುವ ಶಿಶುವನ್ನು ತೆಗೆಸಲು ಬೇಕಾದ ಖರ್ಚನ್ನು ಕೊಡಲು ಸಿದ್ಧನಿದ್ದೆ, ಆದರೆ ಆಕೆ ಕ್ಯಾಥೊಲಿಕ್, ಅವಳು ಬಲಾತ್ಕಾರದ ಗರ್ಭಪಾತವನ್ನು ಪಾಪವೆಂದು ಭಾವಿಸುತ್ತಾಳೆ. ಆದ್ದರಿಂದ ಆಕೆಯ ಚರ್ಚ್ ನಡೆಸುವ ಅನಾಥಾಶ್ರಮಕ್ಕೆ ತನ್ನ ಮಗುವನ್ನು ದತ್ತಕಕ್ಕೆ ಬಿಟ್ಟುಕೊಡಲು ತೀರ್ಮಾನಿಸಿದ್ದಾಳೆ.' ಅವಳನ್ನು ಇವನೇ ಕರೆದುಕೊಂಡು ಹೋಗಿ ಬಿಟ್ಟುಬಂದ. ಅಲ್ಲಿನ ಖರ್ಚುವೆಚ್ಚವನ್ನು ಈತನೇ ವಹಿಸಿಕೊಂಡ. ಆದರೆ ಆ ನವಜಾತ ಶಿಶುವನ್ನು ನೋಡುವ ಗೋಜಿಗೆ ಮಾತ್ರ ಹೋಗಲಿಲ್ಲ.

ಇದಾದ ಕೆಲವೇ ದಿನಗಳಲ್ಲಿ ಆ ಮಹಾಶಯ ಯಾವ ಹಿಂಜರಿಕೆಯೂ ಇಲ್ಲದೇ ತನ್ನ ಭಾರತೀಯ ಪತ್ನಿಯೊಂದಿಗೆ ಹಿಂದೀ ಚಿತ್ರಗಳನ್ನು ನೋಡಲು ಹಾಜರಾಗುತ್ತಿದ್ದ. ನಾನು ಓದು ಮುಗಿಸಿ ಊರು ಬಿಟ್ಟಮೇಲೆ ತಿಳಿದ ವರ್ತಮಾನ: ಇವನ ಮಗುವಿನ ತಾಯಿ, ತನ್ನ ಮಗುವನ್ನು ದತ್ತಕಕ್ಕೆ ಬಿಟ್ಟುಕೊಟ್ಟು ಕ್ಯಾಂಪಸಿಗೆ ವಾಪಸ್ ಬಂದ ಆ ಹೆಣ್ಣು, ಮತ್ತೊಬ್ಬ ಭಾರತೀಯ ವಿದ್ಯಾರ್ಥಿಯೊಂದಿಗೆ ಸ್ನೇಹ ಬೆಳೆಸಿದ್ದೇ ಅಲ್ಲದೇ ಆತನನ್ನು ಮದುವೆಯೂ ಆದಳು. ಆ ಭಾರತೀಯ ವಿದ್ಯಾರ್ಥಿಗೆ ಪಚ್ಚೆ ಪರವಾನಗಿಯ (ಗ್ರೀನ್ ಕಾರ್ಡಿನ) ಅಗತ್ಯವಿದ್ದದ್ದರಿಂದ ಅಮೆರಿಕನ್ ಪ್ರಜೆಯೊಬ್ಬಳನ್ನು ಮದುವೆಯಾಗುವುದು ಅವನಿಗೆ ಅನಿವಾರ್ಯವಾಗಿತ್ತಂತೆ. ಅವನು ಪಚ್ಚೆ ಪರವಾನಗಿ ಪಡೆದಮೇಲೆ ಅವಳೊಂದಿಗೆ ಉಳಿದನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವಷ್ಟು ಕುತೂಹಲ ನನ್ನಲ್ಲಿ ಇದ್ದಿತಾದರೂ ನನಗೆ ಅದರ ಬಗ್ಗೆ ಮಾಹಿತಿ ದೊರಕಲೇ ಇಲ್ಲವೆನ್ನಿ!

(5) ನನ್ನ ಅಮೆರಿಕನ್ ಗೆಳೆಯ ಆಂಡವನ್ ಸಾಮಿ

ನಾನು ನ್ಯೂ ಜೆರ್ಸಿಯ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ ಮೊದಲ ದಿನ, ನನ್ನ ಸೀಟಿನ ಮೇಲೆ ಒಂದು ಪತ್ರ ಬಿದ್ದಿತ್ತು, ತಮಿಳು ಲಿಪಿಯಲ್ಲಿ ಬರೆದದ್ದು! ನನಗೆ ತಮಿಳು ಓದಲು ಬರುವುದಿಲ್ಲ, ಯಾರದ್ದಿರಬಹುದು ಎಂದುಕೊಳ್ಳುತ್ತಿರುವಾಗಲೇ ಎತ್ತರದ, ತೆಳುದೇಹದ ಹಸನ್ಮುಖಿ ನನ್ನ ಮುಂದೆ ಪ್ರತ್ಯಕ್ಷನಾದ! 'ನಾನು ಆ್ಯಂಡ್ರೂ, ಆ್ಯಂಡ್ರೂ

ಸ್ಯಾಂಸನ್, ಎಲ್ಲರೂ ಆ್ಯಂಡಿ ಎಂದೇ ಕರೆಯುತ್ತಾರೆ' ಎಂದು ತನ್ನ ಪರಿಚಯ ಹೇಳಿಕೊಂಡು ನನ್ನನ್ನು 'ನಡರಾಜ' ಎಂದು ಪಕ್ಕಾ ತಮಿಳು ಶೈಲಿಯಲ್ಲಿ ಸಂಬೋಧಿಸಿ ಕೈಕುಲುಕಿದ. ನನಗಿಂತ ವಯಸ್ಸಿನಲ್ಲಿ ತುಂಬಾ ಹಿರಿಯನಂತೆ ಕಂಡರೂ ಸಮಾನ ವಯಸ್ಕನಂತೆ ನನ್ನೊಡನೆ ಮಾತಾಡಿ ನನ್ನನ್ನು ಮನೆಗೆ ಬರುವಂತೆ ಆಹ್ವಾನಿಸಿದ. ಆ್ಯಂಡಿ ದಕ್ಷಿಣ ಭಾರತದಲ್ಲಿ ಏಳೆಂಟು ವರ್ಷ ಕಳೆದು ಬಂದಿದ್ದ. ವೃತ್ತಿಯಲ್ಲಿ ಆತ ಗ್ರೌಂಡ್‌ವಾಟರ್ ಹೈಡ್ರಾಲಜಿಸ್ಟ್ (ಭೂಮಿಯಲ್ಲಿ ಕೊಳವೆ ಭಾವಿಗಳನ್ನು ಕೊರೆದು ಅಂತರ್ಜಲ-ಸಂಪನ್ಮೂಲವನ್ನು ಗುರುತಿಸುವುದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ನಿಪುಣ). ಯಾವುದೋ ಅಮೆರಿಕದ ಕ್ರೈಸ್ತ ಸಂಸ್ಥೆಯೊಂದರ ಮೂಲಕ ಆತ ದಕ್ಷಿಣ ಭಾರತದ ಹಳ್ಳಿಗಳಲ್ಲಿ ದಲಿತರಿಗೆ ಕುಡಿಯುವ ನೀರನ್ನು ಒದಗಿಸುವ ಪುಣ್ಯಕೆಲಸದಲ್ಲಿ ತೊಡಗಿಸಿಕೊಂಡಿದ್ದ. ಆತನೂ ನಾನೂ ಅನೇಕ ಪ್ರಾಜೆಕ್ಟುಗಳಲ್ಲಿ ಒಟ್ಟಾಗಿ ದುಡಿದೆವು, ಸ್ನೇಹಿತರಾದೆವು. ಈಗಲೂ ನನಗಿರುವ ಕೆಲವೇ ಅಮೆರಿಕನ್ ಮಿತ್ರರಲ್ಲಿ ಆತನೂ ಒಬ್ಬ. ಹಲವು ಕಾರಣಗಳಿಂದ ಆತ ನನ್ನ ಮನಸ್ಸಿನಲ್ಲಿ ಮನೆ ಮಾಡಿಕೊಂಡಿದ್ದಾನೆ.

ಹಲವಾರು ಮಕ್ಕಳಿದ್ದರೂ ಆತ ಮತ್ತು ಆತನ ಪತ್ನಿ ಒಂದು ಕರಿಯ ಅನಾಥ ಬಾಲಕಿಯನ್ನು ದತ್ತು ಮಾಡಿಕೊಂಡು ಸಾಕಿದ್ದನ್ನು ಕಂಡು ನಾನು ಬೆರಗಾಗಿದ್ದೆ. ಹೆತ್ತ ಮಕ್ಕಳಂತೆಯೇ ಆ ಬಾಲಕಿಯನ್ನೂ ಪ್ರೀತಿಯಿಂದ ಅವರು ಸಾಕಿದರು. ಅವಳು ಯಾರೋ ಬಿಳಿಯ ತಂದೆ ಮತ್ತು ಕರಿಯ ತಾಯಿ ಅಥವಾ ಕರಿಯ ತಂದೆ ಮತ್ತು ಬಿಳಿಯ ತಾಯಿಗೆ ಹುಟ್ಟಿದವಳು ಎಂಬುದನ್ನು ಅವಳ ಅರೆಬಿಳಿಯ ಬಣ್ಣ ಮತ್ತು ಆಫ್ರಿಕನ್ನರಿಗಿರುವಂಥ ದಟ್ಟ ಕರಿಯ ಗುಂಗುರು ಕೂದಲಿನ ಕಾರಣ ಸುಲಭವಾಗಿ ಗುರ್ತಿಸಬಹುದಾಗಿತ್ತು. ಆ ಹುಡುಗಿ ಬೆಳೆದು ಹದಿಹರೆಯದ ವಯಸ್ಸಿಗೆ ಬಂದಾಗ ಪ್ರೌಢಶಾಲೆಯಲ್ಲಿ ಬಿಳಿ ಹುಡುಗರೊಂದಿಗೆ ಬೆರೆಯಬೇಕೆಂದು ತಂದೆತಾಯಿಗಳ ಇಚ್ಛೆಯೋ ನಿರೀಕ್ಷೆಯೋ ಆಗಿದ್ದಿರಬಹುದು (ಇದು ಕೇವಲ ನನ್ನ ಊಹೆ ಮಾತ್ರ). ಆದರೆ ಆ ಹುಡುಗಿ ಕರಿಯ ಬಾಲಕರೊಂದಿಗೆ ಓಡಾಟ ಶುರುಮಾಡಿದಾಗ ಮನೆಯಲ್ಲಿ ರಂಪ ಶುರುವಾಗಿದ್ದಂತೂ ನಿಜ. ಆ ಸಂದರ್ಭಕ್ಕೆ ನಮ್ಮ ಕಂಪನಿಯ ಮತ್ತೊಂದು ಕೇಂದ್ರಕ್ಕೆ (ಬೇರೆ ಊರಿಗೆ) ನಾನು ವರ್ಗಾಯಿಸಲ್ಪಟ್ಟೆ. ಆ ಹುಡುಗಿಯನ್ನೂ ಕರೆದುಕೊಂಡು ನಾವು ಬಂದು ಸೇರಿದ ಊರಿಗೂ ಬಂದು ಆ್ಯಂಡಿ ನಮ್ಮನ್ನು ಭೇಟಿಮಾಡಿದ. ಆಗ ಎಲ್ಲಾ ಚೆನ್ನಾಗಿಯೇ ಇದ್ದಂತೆ ತೋರಿತು, ಆದರೆ ಕೆಲವೇ ದಿನಗಳಲ್ಲಿ ಆ ಹುಡುಗಿ ತನ್ನ ಪೂರ್ವವೃತ್ತಾಂತದ ಬಗ್ಗೆ ತಲೆಕೆಡಿಸಿಕೊಂಡು ಸಾಕಷ್ಟು ಗೊಂದಲಕ್ಕೀಡಾದಳಲ್ಲದೇ ಹಲವು ಕೆಟ್ಟ ಅಭ್ಯಾಸ ಮತ್ತು ಹವ್ಯಾಸಗಳಿಗೂ ತುತ್ತಾದಳು ಎಂದು ತಿಳಿಯಿತು.

ಮದುವೆ ಇಲ್ಲದೇ ಎರಡು ಮಕ್ಕಳನ್ನು (ಬೇರೆ ಬೇರೆ ತಂದೆಗಳಿಂದ) ಹೆತ್ತಳು. ಸಾಕು-ತಂದೆತಾಯಿಗಳ ಜೀವನವನ್ನು ನರಕವನ್ನಾಗಿ ಮಾಡಿಬಿಟ್ಟಳು. ಪ್ರತಿ ವರ್ಷ ಕ್ರಿಸ್ಮಸ್

ಸಮಯದಲ್ಲಿ ಆತ ತನ್ನ ಮಿತ್ರರಿಗೆಲ್ಲಾ ಕಳಿಸುತ್ತಿದ್ದ ಸಾರ್ವಜನಿಕ ಪತ್ರದಲ್ಲಿ ತನ್ನ ಮಕ್ಕಳ, ಸೊಸೆಯರ, ಮೊಮ್ಮಕ್ಕಳ ಬಗ್ಗೆ ಬರೆದು ವರದಿ ಒಪ್ಪಿಸುತ್ತಿದ್ದ. ಈ ಬಾರಿಯ ಪತ್ರದಲ್ಲಿ ಒಂದು ವಿಶೇಷ ಕಾದಿತ್ತು, ಆತನೂ ಆತನ ಪತ್ನಿಯೂ ಪರಸ್ಪರ ಅಗಲಿದ್ದರು. ಆ ದಂಪತಿಯನ್ನು ಕಣ್ಣಾರೆ ಕಂಡಿದ್ದ ನಮಗೆ ಇದು ನಂಬಲಾಗದ ಸಂಗತಿಯಾಗಿತ್ತು. ತಮಿಳುನಾಡಿನ ಹಳ್ಳಿ-ಕೊಂಪೆಗಳಲ್ಲಿ ವಿದ್ಯುತ್ ದೀಪಗಳಿಲ್ಲದೇ, ಹರಿಯುವ ನೀರಿನ ನಲ್ಲಿಯಿಲ್ಲದೇ, ತೆರೆದ ಚರಂಡಿಗಳ ಗಬ್ಬು ವಾಸನೆಯ ನಡುವೆ ಸಂಸಾರ ಮಾಡಿ ಬಂದ ದಂಪತಿ ಅವರು. ವೈದ್ಯರಿಲ್ಲದ ಹಳ್ಳಿಯ ಆಸ್ಪತ್ರೆಯಲ್ಲಿ ಸೂಲಗಿತ್ತಿಯ ಸಹಾಯದಿಂದ ಮಕ್ಕಳನ್ನು ಹೆತ್ತು ಬಂದ ಮಹಾತಾಯಿ ಆಕೆ. ಮರವನ್ನು ಕೊಯ್ದು ತೊಲೆಗಳಾಗಿ ಮಾರ್ಪಡಿಸಿ, ಕಚ್ಚಾ ಮಣ್ಣಿನ ಗೋಡೆಗಳಿಂದ ಹಳ್ಳಿಗಳಲ್ಲಿ ಚರ್ಚುಗಳನ್ನು ಕಟ್ಟಿ ದಲಿತರಿಗೆ ಕ್ರೈಸ್ತಧರ್ಮವನ್ನು ಬೋಧಿಸುತ್ತಾ ಹಲವು ವರ್ಷಗಳನ್ನು ಕಳೆದ, ಸಂತರ ಹಾಗೆ ಕಾಣುತ್ತಿದ್ದ ಆ ಗಂಡ-ಹೆಂಡತಿ ಸಾಯುವವರೆಗೂ ಜೊತೆಯಲ್ಲೇ ಇರುವವರೆಂದು ನಾನಂತೂ ಭಾವಿಸಿದ್ದೆ.

ಮುಂದಿನ ಭೇಟಿಯಲ್ಲಿ ನಮ್ಮ ಮನೆಗೆ ಬಂದಾಗ, ಆತ ಒಂದು ಮಾತೂ ಆಡದೇ ಎರಡು ದಿನಗಳನ್ನು ನಮ್ಮೊಂದಿಗೆ ಕಳೆದು ಹೋದ. ನಾವು ಒಟ್ಟಾಗಿ ಕೆಲಸದ ಮೇಲೆ ಫೀಲ್ಡ್ ವರ್ಕಿಗೆ ಹೋದಾಗಲೆಲ್ಲ, ಕ್ರೈಸ್ತ ಧರ್ಮದ ಬಗ್ಗೆ, ಮತ್ತು ದಲಿತರನ್ನು ಮತಾಂತರಿಸುವ ಬಗ್ಗೆ, ವಿವಾಹ-ವಿಚ್ಛೇದನದ ಬಗ್ಗೆ, ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಬಗ್ಗೆ, ವರ್ಣಭೇದದ ಬಗ್ಗೆ, ಹೀಗೇ ಇನ್ನೂ ಹಲವಾರು ವಿಷಯಗಳ ಬಗ್ಗೆ ನಾವಿಬ್ಬರೂ ಪರಸ್ಪರ ಮನ ನೋಯಿಸದಂತೆ ಎಚ್ಚರಿಕೆ ವಹಿಸಿ ಮಾತಾಡುತ್ತಿದ್ದೆವು. ಆದರೆ, ಈಗವನು ಮೂಕನಂತೆ ಸುಮ್ಮನಿದ್ದ. ಆತ ತಿಳಿಸಿದ ಒಂದೇ ವಿಷಯವೆಂದರೆ, ಅವನ ಮಾಜೀ ಈಗ ಚರ್ಚೊಂದರಲ್ಲಿ ಪಾದ್ರಿಣಿಯಾಗಿದ್ದಾಳಂತೆ, ಈತನಿರುವ ನ್ಯೂಜೆರ್ಸಿಗೂ, ಆಕೆ ಇರುವ ಪ್ರಾಂತ್ಯಕ್ಕೂ ಐನೂರಕ್ಕೂ ಹೆಚ್ಚು ಮೈಲಿ ದೂರವಂತೆ. ಆತ ಮಾತ್ರ ಅವಳ ಬಗ್ಗೆ ಮತ್ತೇನೂ ಮಾತಾಡಲಿಲ್ಲ, ನಾನು ಕೇಳಲೂ ಇಲ್ಲ. ಹೊರಡುವಾಗ, ನನ್ನನ್ನು ತಬ್ಬಿಕೊಂಡು ಗೊಳೋ ಎಂದು ಅತ್ತುಬಿಟ್ಟ. ಅದಾದಮೇಲೆ ಅವನ ಮನಸ್ಸು ಹಗುರವಾದಂತೆ ನನಗೆ ಭಾಸವಾಯಿತು. ಹಿಂದಿರುಗಿ, ಹಲವು ತಿಂಗಳ ನಂತರ ಆತನ ಕ್ರಿಸ್ಮಸ್ ಸಮಯದ ಸಾರ್ವಜನಿಕ ಪತ್ರ ಬಂತು, ಆತ ತನ್ನ ಹೊಸ ಪತ್ನಿಯೊಂದಿಗೆ ಸುಖವಾಗಿದ್ದಾನೆ. ತಪ್ಪದೇ ತನ್ನ ಮಕ್ಕಳ, ಸೊಸೆಯಂದಿರ, ಹೆಣ್ಣು ಮಗಳ ಮತ್ತು ಅವಳ ಇತ್ತೀಚಿನ ಸಂಗಾತಿಯ ವಿಚಾರವನ್ನೆಲ್ಲಾ ವಿವರವಾಗಿ ಬರೆದಿದ್ದ. ಅವನ ಮಾಜಿ ಅವನ ಪತ್ರಗಳಿಂದ ಎಂದೆಂದಿಗೂ ಕಳೆದುಹೋಗಿದ್ದಳು. ಈಗಲೂ ನಾವು ಸ್ನೇಹಿತರಾಗಿದ್ದೇವೆ, ಆತ ನಿಜವಾಗಿ ಒಬ್ಬ ಸಭ್ಯ, ಸಾಧು ಮತ್ತು ಸಹೃದಯಿ. ಅವನ ಮತ್ತು ಅವನ ಪತ್ನಿಯ ಇಗರ್ಜಿಯಲ್ಲಿ ಮತಾಂತರಗೊಂಡ ತಮಿಳು ದಲಿತರು ಆತನ 'ಆ್ಯಂಡ್ರೂ ಸ್ಯಾಂಸನ್' ಎಂಬ ಹೆಸರನ್ನು 'ಆಂಡವನ್ ಸಾಮಿ' ಎಂದೂ ಆತನ ಪತ್ನಿಯ ಹೆಸರನ್ನು 'ಆಂಡಾಳಮ್ಮ' ಎಂದೂ ಪರಿವರ್ತಿಸಿದ್ದರು ಎಂದು ನನಗೆ ತಿಳಿದದ್ದು ನಮ್ಮಿಬ್ಬರ

ಪರಿಚಯವಾದ ಹೊಸತರಲ್ಲಿ. ಆಗ ಆಂಡವನ್ ಮತ್ತು ಆಂಡಾಳಮ್ಮ, ಎಂತಹ 'ದಿವ್ಯ ಜೋಡಿ' ಎಂದು ಅಚ್ಚರಿಪಟ್ಟಿದ್ದೆ!

(6) ಡಾ॥ ಸುರಂಗ-ತಜ್ಞ, ಡಿ.ಇಂಜ್

ನಾನು ನೆರಳಚ್ಚಿನ ಯಂತ್ರದ ಬಳಿ ಜರ್ನಲ್ ಪೇಪರ್ ಒಂದನ್ನು ನಕಲು ಮಾಡುತ್ತಿದ್ದೆ, ಇದ್ದಕ್ಕಿದ್ದ ಹಾಗೆ ನನ್ನ ಹಿಂದಿನಿಂದ ಬಂದು ತಕ್ಷಣ ಯಂತ್ರದ ಉಪಯೋಗವನ್ನು ನಿಲ್ಲಿಸಿ ತನಗೆ ಬಿಟ್ಟುಕೊಡಬೇಕೆಂದು ಒರಟಾಗಿ ಆಗ್ರಹಿಸಿದ್ದ, ಆ ಆರಡಿ ಎತ್ತರದ ಜರ್ಮನ್ ಇಂಜಿನಿಯರ್. ಅಂತಹ ಒರಟು ವರ್ತನೆಯನ್ನು ಯಾರೂ ತೋರಿಸಿದ್ದ ನೆನಪು ನನಗಿರಲಿಲ್ಲ. ಅವನ ಕಡೆ ತಿರುಗಿ ಪ್ರಶ್ನಾರ್ಥಕವಾಗಿ ನೋಡಿದಾಗ, 'ಪೇಪರ್‌ಗಳನ್ನು ಕಾಪಿ ಮಾಡುವುದು ಒತ್ತಟ್ಟಿಗಿರಲಿ, ಕಂಪನಿಗೆ ಹಣ ತರುವ ಕೆಲಸಕ್ಕೆ ಮೊದಲು ಪ್ರಾಮುಖ್ಯ ಕೊಡಬೇಕು' ಎನ್ನುತ್ತ ನನ್ನ ಪೇಪರನ್ನು ಯಂತ್ರದಿಂದ ಹೊರತೆಗೆದು ತನ್ನ ಪೇಪರುಗಳ ಕಂತೆಯನ್ನು ಇಟ್ಟು ಗುಂಡಿ ಒತ್ತಿದ. ಸಾಲಿನಲ್ಲಿ ತಮ್ಮ ಸರದಿಗಾಗಿ ಕಾದಿದ್ದವರೆಲ್ಲ ನಿಬ್ಬೆರಗಾದರು. ನಾನು ಕೆಲಸಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಆತನೂ ನಮ್ಮ ಕಂಪನಿಗೆ ಸೇರಿಕೊಂಡಿದ್ದ, ಆದರೆ ಅವನ ಬಗ್ಗೆ ನನಗೇನೂ ತಿಳಿದಿರಲಿಲ್ಲ. ವಿಚಾರಿಸಲಾಗಿ, ಆತ ಜರ್ಮನಿಯಲ್ಲಿ ಡಾಕ್ಟರೇಟ್ ಪಡೆದ ಒಬ್ಬ ಪ್ರಸಿದ್ಧ ಇಂಜಿನಿಯರ್ ಎಂದೂ ಹಾಗೂ ಅವನು ಸುರಂಗ ಕೊರೆಯುವ ತಂತ್ರದಲ್ಲಿ ವಿಶ್ವದಲ್ಲೇ ಮುಖ್ಯನೆಂದೂ ತಿಳಿಯಿತು. ಆದರೂ ಅವನ ವರ್ತನೆಯಿಂದ ನನ್ನ ರಕ್ತ ಕುದ್ದಿತ್ತು.

ಕೆಲವು ತಿಂಗಳುಗಳ ನಂತರ, ಅವನಿಂದಾಗಿ ನಮ್ಮ ಕಂಪನಿಗೆ ಸಂದಾಯವಾಗಿದ್ದ ಪ್ರಾಜೆಕ್ಟೊಂದರಲ್ಲಿ ಸಹಾಯಕನಾಗಿ ದುಡಿಯುವ ಅವಕಾಶ ನನಗೆ ಒದಗಿತು. ಎಮ್.ಐ.ಟಿ.ಯಲ್ಲಿ ಡಾಕ್ಟರೇಟ್ ಪಡೆದಿದ್ದ ಸಿಂಗಪುರದ ಒಬ್ಬ ಚೈನೀಸ್ ಮೂಲದ ಇಂಜಿನಿಯರ್ ಮುಖ್ಯ ತಾಂತ್ರಿಕ ನಿಪುಣನಾಗಿಯೂ, ಅವನ ನಿರ್ದೇಶನದಲ್ಲಿ ಕಂಪ್ಯೂಟರ್ ಮಾಡೆಲಿಂಗ್ ಮಾಡಿ ಲೆಕ್ಕಾಚಾರ (ಇಂಜಿನಿಯರಿಂಗ್ ಕ್ಯಾಲ್ಕ್ಯುಲೇಶನ್ಸ್) ಮಾಡುವ ಸಹಾಯಕನಾಗಿ ನಾನೂ ಗೊತ್ತುಮಾಡಲ್ಪಟ್ಟೆವು. ಫಿಲಡೆಲ್ಫಿಯಾ ಬಳಿ ಕಟ್ಟಿದ್ದ ಕೇಂದ್ರ ಸರ್ಕಾರದ ಒಂದು ಸೌಧ ಎಣಿಸಿದ್ದಕ್ಕಿಂತ ಹೆಚ್ಚು ಕುಸಿಯಲು ಶುರುವಾಗಿತ್ತು. ವಿನ್ಯಾಸ ಮಾಡಿದ್ದ ಕಂಪನಿಗೂ ಕಟ್ಟಡ ನಿರ್ಮಾಣದ ಕಂಪನಿಗೂ ವಾಗ್ವಾದ ನಡೆಯುತ್ತಿತ್ತು. ವಕೀಲರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿಯನ್ನು ಬಿಗಡಾಯಿಸಿದ್ದರು. ಏತನ್ಮಧ್ಯೆ ಸೌಧದ ತಳಪಾಯವನ್ನು ಸರಿಯಾಗಿ ವಿನ್ಯಾಸ ಮಾಡಲಾಯಿತೋ ಇಲ್ಲವೋ ಮತ್ತು ಸೌಧದಡಿ ಇದ್ದ ಮಣ್ಣು ಮತ್ತದರ ಗುಣ-ದೋಷಗಳ ತಪಾಸಣೆ ಸರಿಯಾಗಿ ನಡೆದಿತ್ತೋ ಇಲ್ಲವೋ, ಕ್ಷೇತ್ರ-ಕಾರ್ಯ ಮತ್ತು ಪ್ರಯೋಗಾಲಯದಲ್ಲಿ ಸರಿಯಾದ ಪರೀಕ್ಷೆಗಳು ನಡೆದವೋ ಇಲ್ಲವೋ, ಫಲಿತಾಂಶಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಯಿತೋ ಇಲ್ಲವೋ, ಏಕೆ ಸೌಧ ಕುಸಿಯುತ್ತಿದೆ, ಇನ್ನೂ ಎಷ್ಟು

ಕುಸಿಯಬಹುದು, ಇದನ್ನು ತಡೆಗಟ್ಟುವುದು ಹೇಗೆ, ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಿದ್ದ ವಕೀಲ ಸಂಸ್ಥೆಯ ಕಡೆಯಿಂದ ನಮ್ಮ ಕಂಪನಿಯನ್ನು ಗೊತ್ತುಮಾಡಲಾಗಿತ್ತು. ಪ್ರಾಜೆಕ್ಟಿನ ವಿವರ ಇಷ್ಟೇ ಸಾಕು.

ಆಗಲೇ ಹೆಚ್ಚುಪಾಲು ಕಟ್ಟಿ ಆಗಿದ್ದ ಸೌಧದಡಿ ತಳಪಾಯವನ್ನು ನೆಲಮಾಳಿಗೆಯಿಂದ ಕೊರೆದು ಮತ್ತಷ್ಟು ಪರೀಕ್ಷೆ ಮಾಡಲು ಅನುವಾಗುವಂತೆ, ಎತ್ತೆತ್ತರದ ಕೊರೆಯುವ ಯಂತ್ರಗಳನ್ನು ಮೊಟಕುಗೊಳಿಸಿ ಮಾರ್ಪಾಟುಗಳನ್ನು ಮಾಡಿಕೊಂಡು ಮುಂದುವರೆಯಬೇಕಾಯಿತು. ತಳದಲ್ಲಿದ್ದ ಮೆತ್ತನೆಯ ಜೇಡಿಮಣ್ಣು ಸೌಧದ ಭಾರವನ್ನು ತಡೆದುಕೊಳ್ಳಲಾಗುತ್ತಿರಲಿಲ್ಲವಾಗಿ ಆಳಕ್ಕೆ ಜಡಿಯಲ್ಪಟ್ಟ ಗೂಟ-ತಳಪಾಯಗಳನ್ನು (ಪೈಲ್ ಫೌಂಡೇಶನ್) ವಿನ್ಯಾಸಮಾಡಿದ್ದರೂ ಕುಸಿತ ನಿಂತಿರಲಿಲ್ಲ. ನಮ್ಮ ಜರ್ಮನ್ ನಿಪುಣ ಜೇಡಿ ಮಣ್ಣನ್ನು ಗಟ್ಟಿಗೊಳಿಸಲು ಸಿಮೆಂಟಿನ ಮಿಶ್ರಣವನ್ನು ಬಲಾತ್ಕಾರವಾಗಿ ಚುಚ್ಚುಯಂತ್ರಗಳ ಮೂಲಕ ಪಿಚಕಾರಿ ಮಾಡುವ (ಗ್ರೌಟ್) ಸಲಹೆಯನ್ನಿತ್ತ. ಅಂಥಾ ವಿಷಯಗಳನ್ನು ಚರ್ಚಿಸಲು ಅನೇಕ ಮೀಟಿಂಗುಗಳು ನಡೆಯುತ್ತಿದ್ದವು. ಅಲ್ಲಿ ತಳಪಾಯಗಳ ವಿನ್ಯಾಸದ ಬಗ್ಗೆ, ಮಣ್ಣಿನ ಸ್ವಭಾವದ ಬಗ್ಗೆ ಇನ್ನೂ ಮುಂತಾದ ಹಲವಾರು ಸೂಕ್ಷ್ಮ ವಿಷಯಗಳ ಬಗ್ಗೆ ಚರ್ಚೆಗಳು ಘಂಟೆಗಟ್ಟಲೆ ನಡೆಯುತ್ತಿದ್ದವು. ಪ್ರತಿ ಮೀಟಿಂಗಿನಲ್ಲು ಆ ಜರ್ಮನ್ ನಿಪುಣ ಯಾರಿಗೂ ಗೊತ್ತಿರದ ಹಲವು ಹತ್ತು ವಿಧಿವಿಧಾನಗಳ ಬಗ್ಗೆ ಗಟ್ಟಿಯಾದ ಧ್ವನಿಯಲ್ಲಿ ಅರಚುತ್ತಿದ್ದ (ಆತ ಮಾತನಾಡಿದರೆ ಜಗಳ ಆಡಿದಂತೆ ಭಾಸವಾಗುತ್ತಿತ್ತು, ಪ್ರಾಯಶಃ ಅದು ಜರ್ಮನ್ ಭಾಷೆಯ ಪ್ರಭಾವವಿದ್ದಿರಬಹುದೇ? ಅಥವಾ ನಾನು ಆತನ ಬಗ್ಗೆ ಬೆಳೆಸಿಕೊಂಡಿದ್ದ ಪೂರ್ವಗ್ರಹದ ಪ್ರಭಾವ ಇದ್ದರೂ ಇರಬಹುದು!). ಅಂತೂ ಅವನು ಹೇಳಿದ್ದೇ ವೇದವಾಕ್ಯ, ಅವನು ಜರ್ಮನಿಯಲ್ಲಿ ಏನೆಲ್ಲ ಮಾಡಿದ್ದಾನೆ, ಮುಂತಾಗಿ ಅವನ ಬಗ್ಗೆ ಹೊಗಳಿಕೆಯ ಮಾತುಗಳು ಕೇಳಿಬರುತ್ತಿದ್ದವು. ಅವನ ಕೀರ್ತಿ ಹರಡಿದಷ್ಟು ಅವನಿಗೆ ಬಡ್ತಿಗಳು ದೊರೆತವು, ಪ್ರಾಜೆಕ್ಟ್ ಇಂಜಿನಿಯರ್ ಆಗಿದ್ದವನು, ಸೀನಿಯರ್ ಇಂಜಿನಿಯರ್ ಆದ, ಕೂಡಲೇ ಪ್ರಿನ್ಸಿಪಲ್ ಇಂಜಿನಿಯರ್ ಪದವಿಗೂ ಏರಿಸಲ್ಪಟ್ಟ.

ಅವನನ್ನು ಕಂಪನಿಯ ಭಾಗೀದಾರನನ್ನಾಗಿ (ಪಾರ್ಟ್‌ನರ್) ಮಾಡಿಕೊಳ್ಳುವ ಮಾತುಗಳೂ ನಡೆಯುತ್ತಿದ್ದಾಗ, ನನಗೂ ನನ್ನ ಹಿರಿಯನಿಗೂ ಅವನ ಮಾತುಗಳ ಬಗ್ಗೆ ಸಾಕಷ್ಟು ಅನುಮಾನಗಳು ಬಂದು ಅವನ ತಾಂತ್ರಿಕ ನೈಪುಣ್ಯದ ಬಗ್ಗೆ ಹಲವಾರು ಪ್ರಶ್ನೆಗಳು ಎದ್ದವು. ಸಣ್ಣಕಣಗಳ ಜೇಡಿ ಮಣ್ಣಿನೊಳಕ್ಕೆ ನುಸಿಯುವಂತೆ ಗ್ರೌಟ್ ಮಾಡುವುದು ಅಸಾಧ್ಯವಲ್ಲದಿದ್ದರೂ ದುಸ್ತರವಾದ ವಿಷಯ. ಕಣಗಳ ನಡುವೆ ನುಸಿಯುವ ಬದಲು ಮಣ್ಣನ್ನೇ ಸ್ಥಳಾಂತರಗೊಳಿಸಿ ಮತ್ತಷ್ಟು ಗೊಂದಲವನ್ನುಂಟುಮಾಡಬಹುದಾದ ಸಾಧ್ಯತೆ ಇರುತ್ತದೆ. ನಾವು ವ್ಯಕ್ತಪಡಿಸಿದ ಅಡ್ಡಿಗಳನ್ನು ಆತ ಒಂದೇ ಸಮನೆ ತಳ್ಳಿಹಾಕುತ್ತಿದ್ದ. ನಾವು ಹೇಳುವ ತುಂಬ

ಸರಳವೆನಿಸುವ ಹಲವು ಇಂಜಿನಿಯರಿಂಗ್ ಸಮೀಕರಣಗಳ ಬಗ್ಗೆ ಅವನ ಜ್ಞಾನ ತುಂಬ ಮಿತಿಯಿಂದ ಕೂಡಿದ್ದು ನಮ್ಮ ಅರಿವಿಗೆ ಬಂತು. ಅವನ ಸಲಹೆಗಳನ್ನು ನೇರ ಒಪ್ಪದೇ ಪ್ರಶ್ನಿಸಬೇಕೆಂದು ನಾವಿಬ್ಬರೂ ತೀರ್ಮಾನಿಸಿದೆವು. ಕಂಪನಿಯ ಮೇಲಧಿಕಾರಿಗಳನ್ನು ನಾವು ಗುಪ್ತವಾಗಿ ಭೇಟಿಮಾಡಿ ನಮ್ಮ ಅನುಮಾನಗಳನ್ನು ವ್ಯಕ್ತಪಡಿಸಿದೆವು. ಮುಂದೆ, ನಮ್ಮ ಮೀಟಿಂಗುಗಳಲ್ಲಿ ಸೀನಿಯರ್ ಪಾರ್ಟ್‌ನರ್ ಒಬ್ಬ ಭಾಗವಹಿಸತೊಡಗಿದ. ಮೊದಮೊದಲು ನಮ್ಮ ಬಾಯ್ಮುಚ್ಚಿಸಲು ಯತ್ನಿಸುತ್ತಿದ್ದ ಅವನ ಸ್ವಾತಂತ್ರ್ಯಕ್ಕೆ ಸ್ವಲ್ಪ ಅಡ್ಡಿ ಬಂತು. ಕೊನೆ-ಕೊನೆಗೆ ಸೀನಿಯರ್ ಪಾರ್ಟ್‌ನರ್ ನಮ್ಮ ಪರವಹಿಸಿ ಮಾತಾಡಲು ಶುರುಮಾಡಿದಾಗ, ಒಂದು ದಿನ ಅವನು ಕೋಪದಿಂದ ಕುದಿಯುತ್ತಾ ಮೀಟಿಂಗಿನಿಂದ ಹೊರನಡೆದ.

ನಮಗೆ ತಿಳಿದುಬಂದ ಮುಂದಿನ ಸುದ್ದಿ ಸ್ವಾರಸ್ಯಕರವಾಗಿತ್ತು. ಈತನ ಬಗ್ಗೆ ಅನುಮಾನ ಬಂದ ಸೀನಿಯರ್ ಪಾರ್ಟ್‌ನರ್ ನಮ್ಮ ಕಂಪನಿಯದೇ ಯೂರೋಪಿಯನ್ ಕಛೇರಿಗೆ ಫೋನಾಯಿಸಿ, ಇವನ ಹೆಸರು, ಕುಲ, ಅವನು ಪದವಿ ಪಡೆದುಕೊಂಡ ವಿಶ್ವವಿದ್ಯಾನಿಲಯ ಮುಂತಾದ ವಿವರಗಳನ್ನು ಒದಗಿಸಿ ಅವನ ಪೂರ್ವಾಪರ ಮತ್ತು ಅವನು ಎಲ್ಲೆಲ್ಲಿ ಕೆಲಸಮಾಡಿದ್ದೆನೆಂದು ತನ್ನ ರೆಸ್ಯೂಮೆಯಲ್ಲಿ ಬರೆದುಕೊಂಡಿದ್ದನೋ ಅವನ್ನೆಲ್ಲ ದೃಢೀಕರಿಸಿಕೊಳ್ಳಬೇಕೆಂದು ಆಗ್ರಹಿಸಿದ್ದರ ಮೇರೆಗೆ, ಸಾಕಷ್ಟು ವಿವರಗಳು ಹೊರಬಂದವು. ಮೊದಲನೆಯ ಬಾಂಬ್‌ಶೆಲ್ – ಇವನು ಹೆಸರು ಕೊಟ್ಟಿದ್ದ ವಿಶ್ವವಿದ್ಯಾಲಯದಲ್ಲಿ ವಿಚಾರಿಸಲಾಗಿ, ಅಂಥವನೊಬ್ಬ ಅಲ್ಲಿ ಅಧ್ಯಯನ ಮಾಡಿದನೆಂಬ ದಾಖಲೆಯೆ ಸಿಗಲಿಲ್ಲ! ಅವನು ಕೊಟ್ಟಿದ್ದ ಕಂಪನಿಗಳ ಹೆಸರಿನ ಪ್ರಕಾರ ವಿಚಾರಿಸಲಾಗಿ, ಒಂದೇ ಒಂದು ಕಂಪನಿಯಲ್ಲೂ ಆತ ಇಂಜಿನಿಯರ್ ಆಗಿ ದುಡಿದಿರಲಿಲ್ಲ! ಎಲ್ಲೋ ಒಂದಿಷ್ಟು ದಿನ ಟೆಕ್ನಿಶಿಯನ್ ಆಗಿ ಯಾವುದೋ ಕನ್ಸ್‌ಟ್ರಕ್ಷನ್ ಕಂಪನಿಯಲ್ಲಿ ಕೆಲಕಾಲ ಮಾತ್ರ ದುಡಿದು ಅಲ್ಲಿಂದ 'ಫ್ಲೈರ್' ಮಾಡಲ್ಪಟ್ಟಿದ್ದ. 'ಡಿ ಇನ್ಜ್' ಪದವಿಯನ್ನು ತನಗೆ ತಾನೇ ಕೊಟ್ಟುಕೊಂಡು ಪ್ರಮಾಣಪತ್ರವನ್ನೂ ಸಹ ತಾನೇ ಮುದ್ರಿಸಿಕೊಂಡು ತಂದಿದ್ದ. ಈ ದೇಶದ ದೊಡ್ಡ ಒಂದು ಕಂಪನಿಯಲ್ಲಿ ಸುಳ್ಳು ವಿವರಗಳನ್ನು ಕೊಟ್ಟು ದೊಡ್ಡ ದೊಡ್ಡ ಹುದ್ದೆಗೆ ಏರಿ ಕೈತುಂಬ ಸಂಬಳ ಪಡೆಯುತ್ತಿದ್ದ. ಅವನು ಹೆಚ್ಚು ಮಾತಾಡದೇ ತನ್ನ ಮೂರ್ಖತನವನ್ನು ಬಯಲುಮಾಡಿಕೊಳ್ಳದೇ ಹೋಗಿದ್ದಿದ್ದರೆ, ಪ್ರಾಯಶಃ ಕಂಪನಿಯ ಸೀನಿಯರ್ ಪಾರ್ಟ್‌ನರ್ ಆಗಿ ನಿಶ್ಚಿಂತೆಯಿಂದ ನಿವೃತ್ತನೂ ಆಗುತ್ತಿದ್ದನೋ ಏನೋ?

(7) ಗಾಡ್ ಮದರ್/ ತಾಯಿ-ದೇವಿ ಲಿಂಡಾ ವಾಂಗ್

ಆಗಿನ್ನೂ ನಮ್ಮ ಮೊದಲ ಮಗಳಿಗೆ ಎರಡು ತುಂಬಿರಲಿಲ್ಲ, ನನ್ನ ಮಡದಿಯ ಹೊಟ್ಟೆಯಲ್ಲಿ ಎರಡನೇ ಮಗಳು ಬೆಳೆಯುತ್ತಿದ್ದಳು. ನಾವಿದ್ದ ಒಂದೇ ಬೆಡ್‌ರೂಮಿನ

ಅಪಾರ್ಟ್‌ಮೆಂಟ್ ಸಾಕಾಗುವುದಿಲ್ಲವೆಂದು ಎರಡನೇ ಮಗು ಹುಟ್ಟುವ ಮೊದಲೇ ಮನೆಯೊಂದನ್ನು ಖರೀದಿಸುವ ತಯಾರಿ ನಡೆದಿತ್ತು. ಏಜೆಂಟರ ಮೂಲಕ ಉತ್ತರ ನ್ಯೂಜೆರ್ಸಿಯ ಹಲವಾರು ಮನೆಗಳನ್ನು ನೋಡಿದ್ದಾಯಿತು. ದೊಡ್ಡ ಹೊಟ್ಟೆಯನ್ನು ಹೊತ್ತುಕೊಂಡು ಓಡಾಡಿ ದಣಿಯುತ್ತಿದ್ದಳು, ನನ್ನ ಮಡದಿ. ಕೊನೆಗೆ ಚೈನೀಸ್ ದಂಪತಿ ತಾವೇ ಮೇಲುಸ್ತುವಾರಿ ಮಾಡಿ ಕಟ್ಟಿಸಿದ್ದ ನಾಲ್ಕು ಮಲಗುವ ಕೋಣೆಗಳುಳ್ಳ ಮನೆಯೊಂದನ್ನು ನೋಡಿ ಮೆಚ್ಚಿದೆವು. ಬೆಲೆಯನ್ನು ಮಾತಾಡಿ ನಿಷ್ಕರ್ಷೆಯಾದಮೇಲೆ ಕಾಂಟ್ರ್ಯಾಕ್ಟ್ ಬರೆದು ಸಹಿ ಹಾಕಿದ್ದೂ ಆಯಿತು. ಆಗ ನಾವು ವಾಸಿಸುತ್ತಿದ್ದ ಅಪಾರ್ಟ್‌ಮೆಂಟಿನ ಮಾಲೀಕರಿಗೆ ಮನೆ ಬಿಡುವ ದಿನವನ್ನು ತಿಳಿಸಿ ಇತರ ಬಾಡಿಗೆದಾರರು ಬಂದು ನೋಡಲು ಶುರುವಾಯಿತು. ನಮ್ಮಲ್ಲಿದ್ದ ಹಲವು ಸಣ್ಣ ಪುಟ್ಟ ಪದಾರ್ಥಗಳನ್ನು ಕಾರ್ಡ್‌ಬೋರ್ಡ್ ಡಬ್ಬಗಳಲ್ಲಿ ತುಂಬಿ ಪದಾರ್ಥಗಳನ್ನು ಹೊಸ ಮನೆಗೆ ರವಾನೆ ಮಾಡಲು ಒಂದು ಮೂವಿಂಗ್ ಕಂಪನಿಗೆ ವಹಿಸಿದ್ದೂ ಆಯಿತು. ಏತನ್ಮಧ್ಯೆ, ಹಲವು ತಿಂಗಳುಗಳಿಂದ ಖಾಯಿಲೆ ಮಲಗಿದ್ದ ನಮ್ಮ ತಂದೆಯವರ ಸ್ಥಿತಿ ಚಿಂತಾದಾಯಕವಾಯಿತು. 'ತಂದೆಯವರ ಪರಿಸ್ಥಿತಿ ಗಂಭೀರ' ಎಂಬ ತಂತಿ ಸಮಾಚಾರ ಬಂದ ನಲವತ್ತೆಂಟು ಘಂಟೆಗಳಲ್ಲೇ ತಂದೆಯವರು ತೀರಿಕೊಂಡಿದ್ದರು.

ಉತ್ತರಕ್ರಿಯೆಗಳು ನಡೆಯದೇ ನಿಲ್ಲುವಂಥವುಗಳಲ್ಲ, ನಿಂತಕಾಲಿನಲ್ಲಿ ಹೊರಡಲು ನಮ್ಮ ಪರಿಸ್ಥಿತಿ ಸಹಾಯಕವಾಗಿರಲಿಲ್ಲ. ಏಳುತಿಂಗಳು ಕಳೆದ ಗರ್ಭಿಣಿ ವಿಮಾನಯಾನ ಮಾಡುವಂತಿಲ್ಲ (ಅದೂ ಆ ದಿನಗಳಲ್ಲಿ ಬೆಂಗಳೂರು ಸೇರಿ ಅಲ್ಲಿಂದ ಬಸ್ಸು/ರೈಲು ಯಾ ಕಾರಿನಲ್ಲಿ ಹಾಸನ ತಲುಪಲು ಎರಡು ದಿನಗಳು ಬೇಕಾಗುತ್ತಿದ್ದವು). ಒಂದು ಪುಟ್ಟ ಮಗುವಿನ ಜವಾಬ್ದಾರಿಯೂ ಇರುತ್ತ ಮತ್ತೊಂದನ್ನು ಹೊಟ್ಟೆಯಲ್ಲಿಟ್ಟುಕೊಂಡಿರುವ ಗರ್ಭಿಣಿ ಹೆಂಡತಿಯನ್ನು ಬಿಟ್ಟು ಕನಿಷ್ಠ ಎರಡು–ಮೂರು ವಾರ ಪರದೇಶಕ್ಕೆ ಹೋದರೆ ಆ ಸಮಯದಲ್ಲಿ ಏನಾದರೂ ತುರ್ತು ಪರಿಸ್ಥಿತಿ ಎದುರಾದರೆ ನೋಡಿಕೊಳ್ಳುವವರಾರು? ನಾವಿದ್ದ ಮನೆಯನ್ನು ಖಾಲಿ ಮಾಡುವ ದಿನವೂ ನಿಗದಿಯಾಗಿ ಆಗಿತ್ತು, ಆ ಮನೆ ಮತ್ತೊಬ್ಬರಿಗೆ ಕೊಡಲ್ಪಟ್ಟಿತ್ತು. ಕೊಂಡ ಮನೆಯ ಕ್ಲೋಸಿಂಗ್ ದಿನವೂ ನಿಗದಿಯಾಗಿತ್ತು. ಆ ಚೈನೀಸ್ ದಂಪತಿ ತಾವು ಕಟ್ಟುತ್ತಿದ್ದ ನಿವೃತ್ತಿವಾಸಗೃಹವೂ ಮುಗಿದು ಅವರು ಅದನ್ನು ವಶಕ್ಕೆ ತೆಗೆದುಕೊಳ್ಳುವ ದಿನವೂ ನಿಶ್ಚಯವಾಗಿತ್ತು. ನಮಗೆ ತಮ್ಮ ಮನೆಯನ್ನು ಮಾರಿ ಅವರಿಗೆ ಬರುವ ಹಣವನ್ನು ಕಟ್ಟದೇ ಅವರು ತಮ್ಮ ನೂತನ ಗೃಹವನ್ನು ವಶಕ್ಕೆ ತೆಗೆದುಕೊಳ್ಳುವುದು ಸಾಧ್ಯವಿರಲಿಲ್ಲ.

ನನ್ನ ಗರ್ಭಿಣಿ ಹೆಂಡತಿಯನ್ನೂ ಪುಟ್ಟ ಮಗುವನ್ನೂ ಯಾರೊಂದಿಗಾದರೂ ಬಿಟ್ಟು ಹೋಗೋಣವೆಂದರೆ, ನಮ್ಮ ಹತ್ತಿರದ ಸಂಬಂಧಿಗಳು ಯಾರೂ ಇರಲಿಲ್ಲ. ನಮ್ಮ ಸ್ನೇಹಿತರೆಲ್ಲ ನಮ್ಮಂತೆಯೇ ಕಿರಿಯರು, ಅನೇಕರು ಇನ್ನೂ ಪುಟ್ಟ ಪುಟ್ಟ ಅಪಾರ್ಟ್‌ಮೆಂಟುಗಳಲ್ಲಿದ್ದವರೇ. ಅವರಿಗೇ ಜಾಗ ಸಾಲದು. ಅವರಿಗೂ ಒಂದೋ

ಎರಡೋ ಪುಟ್ಟ ಮಕ್ಕಳು, ಅಥವಾ ಗಂಡಹೆಂಡಿರಿಬ್ಬರೂ ಕೆಲಸಮಾಡುವವರು. ಭಾರತಕ್ಕೆ ಹೋಗುವ ವಿಷಯವನ್ನೇ ಕೈಬಿಡುವ ಸಲಹೆಯನ್ನು ಅನೇಕರು ಮಾಡಿದರು. ನನಗೆ ಮನಸ್ಸೊಪ್ಪದಿದ್ದರೂ ಬೇರೆ ದಾರಿ ತೋರಲಿಲ್ಲ. ಈ ಸೂತಕದಲ್ಲಿ ಗೃಹಪ್ರವೇಶವೇ ಅಂದರು ಕೆಲವರು. ತಲೆ ಕೆಟ್ಟುಹೋಗುವುದೊಂದು ಬಾಕಿ. ನನ್ನ ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರೊಂದಿಗಿದ್ದು ಈ ದುಃಖದ ಸಮಯದಲ್ಲಿ ತಾಯಿಗೆ ಎರಡು ಸಾಂತ್ವನದ ಮಾತುಗಳನ್ನಾಡಲೂ ಆಗದಿದ್ದರೆ ಏನು ಪ್ರಯೋಜನ ಎನ್ನಿಸಿ ಮನಸ್ಸಿಗೆ ತುಂಬಾ ಹಿಂಸೆಯಾಯಿತು. ನನ್ನ ಮಗುವನ್ನು ನೋಡದೇ ತಂದೆ ತೀರಿಕೊಂಡಿದ್ದರು.

ಅತ್ಯಂತ ಗೊಂದಲಮಯವಾದ ದುಃಖೀ–ಮನಸ್ಸಿನಿಂದ ನರಳುತ್ತಿದ್ದಾಗ, ಒಬ್ಬ ಹಿರಿಯ ಭಾರತೀಯ–ಸಹೋದ್ಯೋಗಿ–ಮಿತ್ರರು ತಂದೆಯವರ ಉತ್ತರಕ್ರಿಯಾ–ಕರ್ಮಗಳಲ್ಲಿ ಭಾಗಿಯಾಗುವುದು ಅಗತ್ಯವೆಂದು ಒತ್ತಾಯಪೂರ್ವಕವಾಗಿ ತಿಳಿಯಪಡಿಸಿದರು. ಇಂಥಾ ಸಂದರ್ಭದಲ್ಲಿ ತಡವಾಗಿಯಾದರೂ ಹೋಗಿ ಸೇರಿಕೊಳ್ಳುವುದು ಸರಿಯೆಂದು ಮನದಟ್ಟುಮಾಡಿಸಿದರು. ತಾವು ನನ್ನ ಸಂದರ್ಭದಲ್ಲೇ ಇದ್ದಾಗ ಅವರು ವಿದ್ಯಾರ್ಥಿಯಾಗಿದ್ದು ಹಣದ ಮುಗ್ಗಟ್ಟಿನ ಕಾರಣದಿಂದ ತಂದೆಯ ಉತ್ತರಕ್ರಿಯೆಯಲ್ಲಿ ಭಾಗಿಯಾಗದೇ ಇಂದಿಗೂ ತಪ್ಪುಭಾವನೆಯಿಂದ ನರಳುತ್ತಿರುವುದಾಗಿ ತಿಳಿಸಿದರು. ನನಗೆ ಹಣದ ತೊಂದರೆಯಿದ್ದರೆ ಅವರು ವಿಮಾನದ ಖರ್ಚನ್ನು ಸಾಲವಾಗಿ ಕೊಡಲು ಮುಂದೆ ಬಂದರು (ನಾನು ಕೂಡಿಟ್ಟಿದ್ದ ಹಣವನ್ನೆಲ್ಲಾ ಮನೆಕೊಳ್ಳಲು ಮುಂಗಡ ಕೊಡಬೇಕಾದ ಮೊಬಲಗಿನತ್ತ ಕೊಟ್ಟಾಗಿದ್ದ ವಿಷಯ ಮತ್ತು ನಮ್ಮದು 'ಒಬ್ಬನ ದುಡಿಮೆ'ಯ ಸಂಸಾರ ಎಂಬ ವಿಷಯವೂ ಅವರಿಗೆ ಗೊತ್ತಿತ್ತು). ಹೇಗಾದರೂ ಭಾರತಕ್ಕೆ ಹೋಗಲೇಬೇಕೆಂದು ನಿರ್ಧರಿಸಿದೆ. ಇನ್ನು ಮಡದಿಯನ್ನು ಒಪ್ಪಿಸುವ ಕೆಲಸ ಮಾತ್ರ ಉಳಿದಿತ್ತು, ಮಿಕ್ಕದ್ದೆಲ್ಲಾ ಹೇಗೋ ನಡೆದು ಹೋಗುತ್ತದೆ ಎಂದು ನಂಬಿಕೆಯಾಯಿತು. 'ಹೇಗೆ ತಾನೇ ನಿಮಗೆ ಮನಸ್ಸು ಬರುತ್ತದೆ, ನನ್ನನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲು?' ಎಂದು ಕೇಳಿದರೆ ಏನು ತಾನೇ ಜವಾಬು ಕೊಡಬಲ್ಲೆ? ಎಂತಹ ಇಬ್ಬಗೆ ದೇವರೇ, ದಾರಿತೋರಿಸು ಎಂದುಕೊಳ್ಳುತ್ತಾ ಅಂದು ರಾತ್ರಿಯೆಲ್ಲಾ ನಿದ್ದೆಗೆಟ್ಟೆ.

ಮುಂದೆ ನಡೆದದ್ದು ಅತ್ಯಂತ ಅನಿರೀಕ್ಷಿತವಾದ ಬೆಳವಣಿಗೆಗಳು. ಚೈನೀಸ್ ದಂಪತಿ ಕಟ್ಟುತ್ತಿದ್ದ ಮನೆ ಸಂಪೂರ್ಣ ಮುಗಿಯಲು ಮೊದಲು ಕೊಟ್ಟ ತಾರೀಕಿಗಿಂತ ಮೂರೋ ನಾಲ್ಕೋ ವಾರ ಹೆಚ್ಚು ಹಿಡಿಸುವುದೆಂದೂ ಅವರು ಪ್ಯಾಕ್ ಮಾಡಿಟ್ಟಿರುವ ಪದಾರ್ಥಗಳನ್ನು ಟೆಂಪೊರರಿ ಸ್ಟೋರೇಜಿನಲ್ಲಿ ಹಾಕಬೇಕಾಗುತ್ತದೆ ಮತ್ತು ಗಂಡ ಮಾತ್ರ ಮುಂದಿನೂರಿಗೆ ಹೋಗಿ ಹೆಂಡತಿ ಇಲ್ಲೇ ಉಳಿದುಕೊಳ್ಳಬೇಕಾಗುತ್ತದೆ ಎಂದು ತೀರ್ಮಾನಿಸಿ ಏನಾದರೂ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಾಧ್ಯವೇ ಎಂದು ವಿಚಾರಿಸಲು ನಮ್ಮೊಡನೆ ಮಾತಾಡಲು ಬಂದರು. ನಮ್ಮ ಪರಿಸ್ಥಿತಿಯನ್ನು ಅವರಿಗೆ ವಿವರಿಸಲಾಗಿ, ನಾವು ನಾಲ್ವರೂ ಕೂಡಿ ಎರಡೂ ಸಂಸಾರಗಳಿಗೆ ಅನುಕೂಲವಾಗುವ

ಒಂದು ವ್ಯವಸ್ಥೆಯನ್ನು ಕಂಡುಕೊಂಡೆವು. ಅದೇನೆಂದರೆ: ನಾನು ನನ್ನ ತಂದೆಯ ಕರ್ಮಾಂತರಗಳಿಗೆ ತಡವಾಗಿಯಾದರೂ ಹೋಗುವುದು; ನನ್ನ ಹೆಂಡತಿ ಮತ್ತು ಮಗು ನಾವು ಕೊಳ್ಳಲಿದ್ದ ಹೊಸ ಮನೆಯಲ್ಲಿ ಹಿರಿಯ ಚೈನೀಸ್ ಮಹಿಳೆ 'ಲಿಂಡಾ ವಾಂಗ್' ಅವರ ರಕ್ಷಣೆಯಲ್ಲಿ ತಂಗುವುದು. ಅವರು ತಮ್ಮ ಸಾಮಾನುಗಳನ್ನು ಅದೇ ಮನೆಯಲ್ಲಿ ಒಂದೆರಡು ಕೊಠಡಿಗಳಲ್ಲಿ ತುಂಬಿಟ್ಟುಕೊಳ್ಳುವುದು, ನಮ್ಮ ಅಪಾರ್ಟ್‌ಮೆಂಟಿನ ಪದಾರ್ಥಗಳನ್ನೂ ಸಾಗಿಸಿ ಮನೆಯ ಮತ್ತೊಂದು ಭಾಗದಲ್ಲಿ ಶೇಖರಿಸಿಟ್ಟುಕೊಳ್ಳುವುದು. ತಕ್ಷಣ ಬೇಕಾದ ಮಲಗುವ ಮಂಚ, ಹಾಸಿಗೆ ಇತ್ಯಾದಿ ಪದಾರ್ಥಗಳನ್ನು ಬಿಟ್ಟು ಮತ್ತೇನನ್ನೂ ಬಿಚ್ಚದೇ ಇರುವುದು. ಲಿಂಡಾ ಒಂದು ಕೊಠಡಿಯಲ್ಲಿ ಮಲಗುವುದು, ನನ್ನ ಮಡದಿ ಮಗು ಮತ್ತೊಂದರಲ್ಲಿ, ಅಡುಗೆ ಇತ್ಯಾದಿ ಇಬ್ಬರೂ ಬೇಕಾದಂತೆ ನೋಡಿಕೊಳ್ಳುವುದು. ಇದಷ್ಟೇ ಅಲ್ಲದೇ, ದೇವತೆಯಂತೆ ನಮ್ಮ ಜೀವನದಲ್ಲಿ ನುಸುಳಿಹೋದ ಆ ಮಹಾತಾಯಿ ನನ್ನ ಅನುಪಸ್ಥಿತಿಯಲ್ಲಿ ನನ್ನ ಮಡದಿಯನ್ನು ವೈದ್ಯರ ಬಳಿಗೆ ಎರಡು ಬಾರಿ ತಪಾಸಣೆಗೆ ಕರೆದೊಯ್ದಳು. ನಮ್ಮ ಪುಟ್ಟ ಮಗಳನ್ನು ತುಂಬಾ ಹೊಂದಿಸಿಕೊಂದು, ಹಚ್ಚಿಸಿಕೊಂಡು, ಅವಳಿಗೆ ನಿತ್ಯ ಸ್ನಾನ ಮಾಡಿಸುತ್ತ, ನನ್ನ ಮಡದಿಗೆ ಬೆನ್ನು ನೋವು ಬಂದರೆ ಅವಳಿಗೆ ಮಾಲಿಶ್ ಮಾಡುತ್ತ ಸೇವೆ ಮಾಡುತ್ತ ತಾಯಿ ತನ್ನ ಮಗಳನ್ನು ನೋಡಿಕೊಳ್ಳುವುದಕ್ಕಿಂತ ಮಿಗಿಲಾಗಿ ಸಲಹಿದಳು (ಆಕೆಗೆ ಸುಮಾರು ನನ್ನ ಮಡದಿಯ ವಯಸ್ಸಿನವಳೇ ಒಬ್ಬಳು ಮಗಳು ಇದ್ದಳು!).

ನಾನು ಬರುವುದರೊಳಗೆ ಮಗು ಆಗಿಬಿಟ್ಟರೆ ಎಂಬ ಭಯ ಆಕೆಗಿತ್ತೇಯಿತ್ತು, ಹಾಗಾಗಿ ನನ್ನ ಮಡದಿಯನ್ನು ಎದ್ದರೆ ಕೂರಿಸುತ್ತಿದ್ದಳು, ಅವಳಿಗೆ ಸಂಪೂರ್ಣ ವಿಶ್ರಾಂತಿ ಕೊಟ್ಟು ಅನೇಕ ಬಾರಿ ಅಡುಗೆಯಲ್ಲೂ ಸಹಾಯ ಮಾಡಿ, ತಾನು ಟೀ ಮಾಡಿಕೊಂಡಾಗಲೆಲ್ಲ ಅವಳಿಗೆ ಮಾಡಿಕೊಟ್ಟು, ಹಣ್ಣು ಹಂಪಲು ತಿನ್ನಿಸಿ, ಆರೈಕೆ ಮಾಡಿದಳು. ನಾನು ತಂದೆಯವರ ಕರ್ಮಗಳಲ್ಲಿ ಕೊನೆಯ ದಿನಗಳಲ್ಲಿ ಭಾಗವಹಿಸಲು ಸಾಧ್ಯವಾಯಿತು. ತಂದೆಯವರನ್ನು ವೈಕುಂಠಕ್ಕೆ ಕಳಿಸಿ ಹಿಂದಿರುಗಿದಾಗ ಲಿಂಡಾ ವಾಂಗ್ ದೀರ್ಘವಾದ ನಿಟ್ಟುಸಿರು ಬಿಟ್ಟಳು, 'ನೋಡಪ್ಪಾ, ನಿನ್ನ ಹೆಂಡತಿಯನ್ನೂ ಮಗಳನ್ನೂ ನೋಡಿಕೊಂಡಿದ್ದೇನೆ, ಯಾವ ಹೊತ್ತಿನಲ್ಲಿ ನೋವು ಕಾಣಿಸಿಕೊಳ್ಳುತ್ತದೋ, ಮಧ್ಯರಾತ್ರಿಯಲ್ಲಿ ರಸ್ತೆ ತಪ್ಪುತ್ತದೋ ಎಂದೆಲ್ಲ ಭಯಪಟ್ಟು ಆಸ್ಪತ್ರೆಗೆ ಎರಡು ಮೂರು ಬಾರಿ ಪ್ರ್ಯಾಕ್ಟೀಸ್ ರೌಂಡ್ ಮಾಡಿದ್ದೆ. ಇನ್ನು ನನ್ನ ಕೆಲಸ ಮುಗಿಯಿತು, ಮಗು ಆದಮೇಲೆ ತಿಳಿಸಿ.' ಎಂದು ಹೇಳಿ ತನ್ನ ಗಂಡ ಇದ್ದ ಊರಿಗೆ ಹೊರಟಳು. ಅವರ ಪದಾರ್ಥಗಳೆಲ್ಲ ಸಾಗಣೆಯಾದ ಮೇಲೆ, ಹೆರಿಗೆ ಸುಸೂತ್ರವಾಗಿ ಕಳೆದು ಹುಟ್ಟಿದ ನಮ್ಮ ಎರಡನೇ ಮಗಳನ್ನು ಆಕೆ ಬಂದು ನೋಡಿಕೊಂಡು ಹೋದಳು. ಯಾವ ಜನ್ಮದ ಸಂಬಂಧವೋ, ಅಂತೂ ನಮ್ಮ ಆಪತ್ಕಾಲದಲ್ಲಿ ನಮಗೊಬ್ಬಳು 'ಗಾಡ್ ಮದರ್' ಸಿಕ್ಕಿದ್ದಳು. ಪ್ರತಿ ವರ್ಷ ಮದರ್ಸ್ ಡೇ ಬಂದಾಗ ನಮಗೆ ನೆನಪಾಗುವವಳು ಆ ಮಹಾತಾಯಿ, ಲಿಂಡಾ ವಾಂಗ್!

ಬೇರು ಸೂರು

(8) ಬಾಲಂಗೋಚಿ – ವಿಧಿಯ ವಿಪರ್ಯಾಸ

ನಮ್ಮ ತಂದೆಯವರ ಅಂತ್ಯಕಾಲದಲ್ಲಿ ನೋಡಲು ಆಗದೇ ಇದ್ದದ್ದು ನನ್ನ ಮನಸ್ಸಿನಲ್ಲೇ ಉಳಿದುಹೋಗಿತ್ತು. ಹೀಗಾಗಿ, ನಮ್ಮ ತಾಯಿಯವರ ಆರೋಗ್ಯ ಕೆಟ್ಟಮೇಲೆ ಅವರನ್ನು ನೋಡಿಕೊಂಡು ಬರಲು ಒಂದೆರಡುಬಾರಿ ಹೋದೆ. ಆದರೆ, ಕೊನೆಕೊನೆಗೆ ಅವರು ನಮ್ಮನ್ನು ಗುರುತಿಸುವ ಸ್ಥಿತಿಯಲ್ಲಿರಲಿಲ್ಲ. 'ಆಲ್ಜ್‌ಹೈಮರ್ಸ್' ಕಾಯಿಲೆಗೆ ತುತ್ತಾಗಿದ್ದ ತಾಯಿಯವರ ಪರಿಸ್ಥಿತಿ ಮನಸ್ಸಿಗೆ ತುಂಬಾ ನೋವನ್ನು ಕೊಟ್ಟಿತು. ಅದಕ್ಕಿಂತಲೂ ಸಂಕಟದ ಅನುಭವ ನನಗಾದದ್ದು ಅವರು ಕೊನೆಯುಸಿರೆಳೆದಾಗ. ಆಗ ನಾವು ಮೇರಿಲ್ಯಾಂಡಿನಲ್ಲಿ ಒಂದು ಮನೆಯಿಂದ ಮತ್ತೊಂದು ಮನೆಗೆ ಬದಲಾಯಿಸಿದ್ದರಿಂದ ನಮ್ಮ ದೂರವಾಣಿ ಸಂಖ್ಯೆ ಬದಲಾಗಿದ್ದು, ಊರಿನಿಂದ ನನಗೆ ಸುದ್ದಿ ತಲುಪುವುದು ತುಂಬಾ ತಡವಾಯಿತು. ಮನೆಯವರು ದೂರವಾಣಿಯ ಯತ್ನವನ್ನು ಮಾಡಿದ್ದಿದ್ದರೆ ಬದಲಾದ ಸಂಖ್ಯೆಯ ಬಗ್ಗೆ ಗೊತ್ತಾಗುತ್ತಿತ್ತು, ಆದರೆ ಹಾಗೆ ಮಾಡದೇ ಅವರು ತಂತಿ ಕಳಿಸಿದ್ದರು. ವೆಸ್ಟರ್ನ್ ಯೂನಿಯನ್ ಮಹಾಶಯರು ತಂತಿಯ ಸಮಾಚಾರವನ್ನು ನನಗೆ ದೂರವಾಣಿಯ ಮೂಲಕ ತಿಳಿಸಲು ಯತ್ನಿಸಿ ಆ ಯತ್ನವನ್ನು ಕೈಬಿಟ್ಟು ನನ್ನ ಹಳೇ ವಿಳಾಸಕ್ಕೆ ಟಪ್ಪಾಲಿನ ಮೂಲಕ ಸುದ್ದಿ ಕಳಿಸಿದ್ದರು. ಸಾವಿನ ಸುದ್ದಿಯನ್ನು ಹೀಗೆ ಉದಾಸೀನ ಮಾಡಬಹುದು ಎಂದು ಯಾರು ತಾನೆ ಊಹಿಸಲು ಸಾಧ್ಯ? ಅದು ಮರುನಿರ್ದೇಶನಗೊಂಡು ನನ್ನನ್ನು ತಲುಪುವ ವೇಳೆಗೆ ನಮ್ಮ ತಾಯಿಯವರು ವೈಕುಂಠ ಸೇರಿದ್ದರು (ತಂತಿಯು ಲಿಖಿತರೂಪದಲ್ಲಿ ನನ್ನ ಕೈಮುಟ್ಟಿದ್ದು ಹದಿಮೂರನೆಯ ದಿವಸ!).

ಈ ಆಧುನಿಕ ಕಾಲದಲ್ಲಿ ಇಂಥಾ ಅನರ್ಥ ನಡೆಯಿತೆಂದರೆ ನಂಬುವುದೇ ಕಷ್ಟ. ನನ್ನ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ನಾನು ಎಷ್ಟು ಬೇಜವಾಬ್ದಾರಿಯವನು, 'ಇವನೇಕೆ ಹೀಗೆ ಕರ್ತವ್ಯಭ್ರಷ್ಟನಾದ?' ಎಂದೆಲ್ಲ ಯೋಚಿಸುವಂತಾಯಿತು. ಏಕೆಂದರೆ, ಹೋಗಿ ಭಾಗವಹಿಸುವುದಿರಲಿ, ನನ್ನಿಂದ ಒಂದು ತಂತಿ, ಪತ್ರ, ದೂರವಾಣಿ- ಯಾವುದೂ ಇಲ್ಲದಿದ್ದುದನ್ನು ಕಂಡು ಅವರಿಗೆಲ್ಲ ಪರಮಾಶ್ಚರ್ಯವಾಗಿತ್ತು. ನಾನು ವಿವರಣೆ ಕೊಡುವ ಹೊತ್ತಿಗೆ ಎಲ್ಲರೂ ಕರ್ತವ್ಯ ಮುಗಿಸಿಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗಿ ಆಗಿತ್ತು. ನನಗೆ ಹಣದ ಕೊರತೆಯಾಗಲೀ, ರಜೆಯ ಕೊರತೆಯಾಗಲೀ ಇರಲಿಲ್ಲ. ನಾನು ಅವರ ಸಾವಿನ ಸುದ್ದಿ ಯಾವಾಗಬೇಕಾದರೂ ಬರಬಹುದು ಎಂಬುದನ್ನು ಅರಿತು ಅದಕ್ಕೆ ಬೇಕಾದ ರಜೆಯ, ವಿಮಾನದ ಟಿಕೆಟ್ಟಿನ ಮುಂಗಡ ಏರ್ಪಾಟನ್ನೆಲ್ಲಾ ಮಾಡಿಕೊಂಡಿದ್ದೆ. ಆದರೆ, ನನ್ನ ಹಣೆಯಲ್ಲಿ ತಂದೆ-ತಾಯಿಗಳ ಅಂತಿಮ ದರ್ಶನದ ಯೋಗವಿರಲಿಲ್ಲ. ತಾಯಿಯವರ ಮೊದಲ ವರ್ಷಾಬ್ದಿಕದ ಸಂದರ್ಭದಲ್ಲಿ ಮನೆಯವರೊಂದಿಗೆ ಸೇರಿಕೊಳ್ಳುವ ಯೋಗ ದೊರಕಿದ್ದಷ್ಟೇ ಮನಸ್ಸಿಗೆ ಸಮಾಧಾನ. ಯಾರು ಯಾರ ಹೊಟ್ಟೆಯಲ್ಲಿ ಹುಟ್ಟುವರು, ಯಾರು ಯಾರ ಕೊನೆ ಗಳಿಗೆಯಲ್ಲಿ ಜೊತೆಯಲ್ಲಿರುವರು

ಮುಂತಾದ ಪ್ರಶ್ನೆಗಳಿಗೆ ಯಾರ ಬಳಿ ತಾನೆ ಉತ್ತರಗಳಿವೆ? ನಮ್ಮ ಇಬ್ಬರು ಹೆಣ್ಣು ಮಕ್ಕಳನ್ನೂ ನೋಡಿ ನಮ್ಮಮ್ಮ ಕಣ್ಮುಚ್ಚಿದರು, ನಮ್ಮ ಮಗನನ್ನು ಕಾಣಲಿಲ್ಲ. ಆದರೆ ಕೊನೆಯ ಬಾರಿ ನೋಡಿದಾಗ ನನ್ನ ಮಡದಿಯನ್ನು ಕರೆದು, 'ನೀವು ಮಕ್ಕಳಾಗುವುದನ್ನು ತಡೆಯಬೇಡಿ, ನಿಮಗೆ ಮುಂದಿನ ಮಗು ಗಂಡೇ ಆಗುತ್ತದೆ' ಎಂಬ ಭವಿಷ್ಯವಾಣಿಯನ್ನು ನುಡಿದೇ ಕಳಿಸಿಕೊಟ್ಟಿದ್ದರು!

(9) ಶಿಲಾಬಾಲಿಕೆಯೊಂದಿಗೆ ಪ್ರಣಯ!

ನನ್ನ ವೃತ್ತಿ ಮತ್ತು ವಿದ್ಯಾಭ್ಯಾಸದ ಹಿನ್ನೆಲೆಯ ಕಾರಣ ಜಿಯೋಟೆಕ್ನಿಕಲ್ ಇಂಜಿನಿಯರಿಂಗ್ (ಮೃಣ್‌ತಂತ್ರ – ನೆಲ, ನೆಲಗಟ್ಟು, ತಳಪಾಯಗಳ ವಿನ್ಯಾಸ) ಮತ್ತು ರಾಕ್ ಮೆಕ್ಯಾನಿಕ್ಸ್ (ಶಿಲಾತಂತ್ರ – ಕಲ್ಲುಬಂಡೆಗಳ ತಾಂತ್ರಿಕ ಅಧ್ಯಯನ) – ಈ ಎರಡು ವಿಷಯಗಳಲ್ಲಿ ನಾನು ತೊಡಗಿಕೊಂಡಿದ್ದೇನೆ. ಹೀಗಾಗಿ ಈ ವಿಷಯಗಳನ್ನು ಕುರಿತು ಹಲವು ತಾಂತ್ರಿಕ ಪೇಪರ್‌ಗಳನ್ನು ಬರೆದು ಪ್ರಕಟಿಸಿದ್ದೇನೆ. ನ್ಯಾಷನಲ್ ಸೈನ್ಸ್ ಫೌಂಡೇಶನ್ (ಎನ್.ಎಸ್.ಎಫ್. – ರಾಷ್ಟ್ರೀಯ ವಿಜ್ಞಾನ ಮಂಡಲಿ) ಮತ್ತು ಅಮೆರಿಕನ್ ಸೊಸೈಟಿ ಆಫ್ ಸಿವಿಲ್ ಇಂಜಿನಿಯರ್ಸ್ ತಮ್ಮ ಜರ್ನಲ್‌ಗಳಲ್ಲಿ ಪ್ರಕಟಣೆಗೆ ಬಂದ ತಾಂತ್ರಿಕ ಪ್ರಬಂಧಗಳ ಅಧೀಕ್ಷಕರಾಗಲು ಹಲವಾರು ತಾಂತ್ರಿಕ ನಿಪುಣರನ್ನು ಗುರುತಿಸುತ್ತಾರಷ್ಟೆ, ಇಂಥಾ ಸಮೀಕ್ಷಕರ ಪಟ್ಟಿಯಲ್ಲಿ ನಾನು ಕೆಲ ವರ್ಷಗಳು ಸೇರಿಸಲ್ಪಟ್ಟಿದ್ದೆ. ಇವೇ ಮುಂತಾದ ಕಾರಣಗಳಿಂದ ಕೆಲವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ತಾಂತ್ರಿಕ ಸಮ್ಮೇಳನಗಳಲ್ಲಿ ಭಾಗವಹಿಸುವ, ಪೇಪರ್‌ಗಳನ್ನು ಮಂಡಿಸುವ ಮತ್ತು ಕೆಲವು ಸೆಷನ್‌ಗಳಿಗೆ ಅಧ್ಯಕ್ಷನಾಗುವ ಸುಯೋಗವೂ ದೊರಕಿದೆ. ಹಲವು ಸಮ್ಮೇಳನಗಳಲ್ಲಿ ಭಾಗವಹಿಸಿದ ಮೇಲೆ, ಎಲ್ಲವೂ ಒಂದೇ ರೀತಿ ಅನ್ನಿಸುತ್ತವೆ, ಕೇವಲ ನಡೆಯುವ ಸ್ಥಳ ಮತ್ತು ಇಸವಿ ಮಾತ್ರ ಬೇರೆ. ಆದರೂ ಈ ಅನೇಕ ಸಮ್ಮೇಳನಗಳ ನಡುವೆ ನನಗೆ ನೆನಪಿನಲ್ಲುಳಿಯುವ ಒಂದು ಇಂಟರ್‌ನ್ಯಾಶನಲ್ ರಾಕ್ ಮೆಕ್ಯಾನಿಕ್ಸ್ ಸಿಂಪೋಸಿಯಮ್ (ಇದೊಂದು ದ್ವೈವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನ), 1999ರಲ್ಲಿ ವೈಲ್ ಎಂಬ ಪರ್ವತಪುರದಲ್ಲಿ ನಡೆದದ್ದು.

ಕೊಲರೆಡೋ ಸಂಸ್ಥಾನದ ಪರ್ವತಶ್ರೇಣಿಯಲ್ಲಿರುವ ವೈಲ್ ಎಂಬ ರಮ್ಯ ಪ್ರದೇಶವನ್ನು ನೋಡಿದವರು ಅದನ್ನು ಮರೆಯುವುದು ಕಷ್ಟ. ಸಮುದ್ರಮಟ್ಟದಿಂದ ಸುಮಾರು ಹತ್ತು ಸಾವಿರ ಅಡಿಗಳಷ್ಟು ಎತ್ತರದಲ್ಲಿರುವ ಈ ಪ್ರದೇಶವನ್ನು ತಲುಪುವ ಮಾರ್ಗವೇ ಅತ್ಯಂತ ರಮಣೀಯ. ಎಡಬಲಗಳಲ್ಲಿ ಕಂಗೊಳಿಸುವ ಪರ್ವತಶ್ರೇಣಿ, ನಡುವೆ ಮನಸೆಳೆಯುವ ಕಣಿವೆಗಳು. ದಟ್ಟವಾದ ಅರಣ್ಯ, ಪಚ್ಚೆ-ಹಸಿರಿನ ವೈಭವ, ಬೆಟ್ಟಗಳ ನಡುವೆಯಿಂದ ಝುಲ್ಲೆಂದು ಸುರಿಯುವ ಅಸಂಖ್ಯಾತ ಝುರಿಗಳಿಂದ ಕೂಡಿದ ಪ್ರಕೃತಿ ಸೌಂದರ್ಯ ಕವಿಹೃದಯವನ್ನು ಜಾಗೃತಗೊಳಿಸುತ್ತದೆ, ಮೈನವಿರೇಳಿಸುತ್ತದೆ,

ರಸಿಕರನ್ನು ಪ್ರಣಯೋನ್ಮಾದದೆಡೆಗೆ ಕೊಂಡೊಯ್ಯುತ್ತದೆ. ಸಮ್ಮೇಳನದ ಕೇಂದ್ರದಲ್ಲಿರುವ ಹೊಟೆಲ್ ಸೇರುವ ಮೊದಲೇ ಮನಸ್ಸು ಉಲ್ಲಾಸಗೊಂಡಿತ್ತು. ಮರುದಿನ ಬೆಳಿಗ್ಗೆ, ಸಮ್ಮೇಳನದ ಉದ್ಘಾಟನೆಯೊಂದಿಗೆ ಮುಖ್ಯ ಅತಿಥಿಗಳ 'ಕೀ ನೋಟ್ ಲೆಕ್ಚರ್' ಕೇಳಿದ್ದಾಯಿತು. ಸಮ್ಮೇಳನದ ಸಂಚಾಲಕರಲ್ಲೊಬ್ಬರಾದ ಕೊಲರೆಡೋ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಹಲವು ಪ್ರಕಟಣೆಗಳನ್ನು ಮಾಡುತ್ತಾ ಉದ್ಘೋಷಿಸಿದ ಒಂದು ಮಾತಿನಿಂದ ನನ್ನ ಕಿವಿಗಳು ನೆಟ್ಟಗಾದವು. ಅದೇನೆಂದರೆ: 'ಮೊದಲ ಬಾರಿಗೆ ನಾವು ಒಂದು ಹೊಸ ಸೆಷನ್ ಪರಿಕಲ್ಪಿಸಿದ್ದೇವೆ. ಈ ಸೆಷನ್ನಿನಲ್ಲಿ ಯಾರು ಬೇಕಾದರೂ ಭಾಗವಹಿಸಿ ತಾವು ನಡೆಸುತ್ತಿರುವ ಇತ್ತೀಚಿನ ಸಂಶೋಧನೆಯ ಬಗ್ಗೆ ಹಂಚಿಕೊಳ್ಳಬಹುದು. ಇದು ಸಂಶೋಧನೆಗೆ ಮಾತ್ರ ಸೀಮಿತವಲ್ಲ. ನಿಮ್ಮ ದೇಶದಲ್ಲಿ ಅಥವಾ ನೀವು ಕೆಲಸ ಮಾಡುತ್ತಿರುವ ಸಂಸ್ಥೆಯಲ್ಲಿನ ಯಾವುದೋ ಸ್ವಾರಸ್ಯಕರ ಸುದ್ದಿಯನ್ನು ಹಂಚಿಕೊಳ್ಳಬಹುದು. ಕಲ್ಲು-ಬಂಡೆಗಳಿಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಕುರಿತು ಮಾತಾಡಬಹುದು, ಬೇಕಾದರೆ ಹಾಡಬಹುದು, ಜೋಕ್ ಮಾಡಬಹುದು, ಕವಿತೆಯನ್ನು ಬೇಕಾದರೂ ಓದಬಹುದು; ಮೊದಲು ಹೆಸರು ಕೊಟ್ಟಿರಬೇಕು, ಅಷ್ಟೆ! ಫಸ್ಟ್ ಕಮ್-ಫಸ್ಟ್ ಸರ್ವ್ಡ್.'

ನನ್ನ ತಲೆಯನ್ನು ಹೊಕ್ಕಿದ್ದು ಕೊನೆಯ ಮಾತು ಮಾತ್ರ – 'ಕಲ್ಲು-ಬಂಡೆಯನ್ನು ಕುರಿತು ಕವಿತೆ!' ಮುಂದಿನ ಅತಿಥಿಯ ಮುಖ್ಯ ಭಾಷಣ ನನ್ನ ಕಿವಿಗೆ ಬೀಳಲೇ ಇಲ್ಲ. ಸಮ್ಮೇಳನದ ಕೈಚೀಲದಲ್ಲಿ ತುಂಬಿ ಕೊಟ್ಟಿದ್ದ ಲೇಖನಿ ಮತ್ತು ರೈಟಿಂಗ್ ಪ್ಯಾಡ್ ಹೊರಬಂದವು. ನಿರ್ಜೀವ ಕಲ್ಲು-ಬಂಡೆ ಸಜೀವವಾಯಿತು! ಕವಿತೆ ಹರಿಯಿತು. ಇಂಜಿನಿಯರಿಂಗ್ ಜಿಯಾಲಜಿಸ್ಟ್ (ತಾಂತ್ರಿಕ ಭೂಗರ್ಭಶಾಸ್ತ್ರಜ್ಞ) ಜೊತೆಯಲ್ಲಿ ಕ್ಷೇತ್ರ ಕೆಲಸ ನಡೆಸುವಾಗ ಕಂಡ 'ಫಾಲ್ಟ್' (ಬಂಡೆ ಇಬ್ಭಾಗಗೊಂಡು ಸೀಳಿಕೊಂಡು ಒಂದರ ಮೇಲೊಂದು ಮಂದಗತಿಯಲ್ಲಿ ಜಾರುತ್ತಾ ಮೈಗೆ-ಮೈ ಉಜ್ಜುತ್ತಾ ಒತ್ತಡವನ್ನು ಶೇಖರಿಸಿ ಮುಂದೆ ಭೂಕಂಪನಕ್ಕೆ ಕಾರಣವಾಗುವ ಪ್ರಕ್ರಿಯೆ), 'ಫೋಲ್ಡ್' (ಬಂಡೆ ಇಕ್ಕೆಲಗಳಿಂದ ಉಂಟಾಗುವ ಒತ್ತಡದಿಂದ ಬಿಲ್ಲಿನಂತೆ ಬಾಗುವಿಕೆ), ಮೇಲ್ಮೈ ಲಕ್ಷಣಗಳಲ್ಲಿ ಕಂಡು ಬರುವ ಉಬ್ಬು-ತಗ್ಗುಗಳು ಇವೇ ಮುಂತಾದ ವಿವರಗಳಿಂದ ಪ್ರಕೃತಿಯಲ್ಲಿನ ಶಿಲೆ, ಸುಂದರ ಶಿಲಾಬಾಲಿಕೆಯಂತೆ ಕಂಡು ಅವಳ ಸೌಂದರ್ಯವನ್ನು ವಿವರಿಸುವ ಒಂದು 'ತುಂಟ' ಪ್ರಣಯ ಕವಿತೆ ಹರಿದುಬಂದಿತು!

ಅಂದಿನ ಮಧ್ಯಾಹ್ನದ ಸೆಷನ್ನಿಗೆ ನೂರಾರು ಜನರು ಹಾಜರಿದ್ದರು, ಭಾಗವಹಿಸಿದವರ ಪೈಕಿ ಕವಿತೆಯನ್ನೋದುವ ಸವಾಲನ್ನು ಸ್ವೀಕರಿಸಿದ್ದವನು ನಾನೊಬ್ಬನೇ. ಕೇಳುಗರು ತನ್ಮಯತೆಯಿಂದ ಕೇಳಿದರು, ಗಂಡಸರೇ ಹೆಚ್ಚಾಗಿದ್ದ ಆ ಸಭೆ ಪ್ರಚಂಡ ಕರತಾಡನವಿತ್ತು ನನ್ನನ್ನು ಗೌರವಿಸಿತು. ಅಲ್ಪಸಂಖ್ಯೆಯಲ್ಲಿದ್ದ ಮಹಿಳೆಯರಲ್ಲಿ ಕೆಲವರ ಮುಖ ಕೆಂಪಾದ್ದನ್ನು ನಾನೇ ಗಮನಿಸಿದೆ. ಪ್ರಾಧ್ಯಾಪಕರು ನನ್ನ ಕೈಕುಲುಕಿ 'ನಾಳೆ

ರಾತ್ರಿಯ ಬ್ಯಾಂಕ್ವೆಟ್ ಸಂದರ್ಭದಲ್ಲಿ ಈ ಕವನವನ್ನು ಮತ್ತೊಮ್ಮೆ ಓದಿದರೆ ಮಿಕ್ಕವರೂ ಕೇಳಿ ಸಂತೋಷ ಪಡಬಹುದು, ಮತ್ತೆ ನಿಮ್ಮನ್ನು ಸಂಪರ್ಕಿಸುತ್ತೇನೆ' ಎಂದು ಹೇಳಿ ಹೊರಟುಹೋದರು. ಆಮೇಲೆ ನಡೆದದ್ದೇ ಬೇರೆ. ಅನೇಕರು ಈ ಕವಿತೆಯ ಬಗ್ಗೆ ಅವರಿವರಿಂದ ತಿಳಿದು ಅದರ ಪ್ರತಿಯೊಂದನ್ನು ಕೇಳಿದರು, ಅದು ಕೈಬರಹದಲ್ಲಿತ್ತು, ಹಾಗಾಗಿ ಊರಿಗೆ ಹೋಗಿ ಕಂಪ್ಯೂಟರಿಗಿಳಿಸಿ, ಇ–ಅಂಚೆಯ ಮೂಲಕ ಕಳಿಸುವುದಾಗಿ ಹೇಳಿದೆ. ಮಾರನೆಯ ಸಂಜೆ ಬ್ಯಾಂಕ್ವೆಟ್ಟಿಗೆ ಮುನ್ನ ಹೊಟೆಲಿನ ಅಂಗಳದಲ್ಲಿ ಮಿತ್ರರೊಡನೆ ನಾನು ಕುಳಿತಿದ್ದೆ, ಪ್ರಾಧ್ಯಾಪಕರು ಸ್ವಲ್ಪ ಗಂಭೀರವಾದ ಮುಖ ಮಾಡಿಕೊಂಡು ನನ್ನನ್ನು ಪಕ್ಕಕ್ಕೆಳೆದು ಹೇಳಿದರು– 'ನೀವು ದಯವಿಟ್ಟು ಕ್ಷಮಿಸಬೇಕು, ನಿಮ್ಮ ಕವಿತೆಯನ್ನು ಬ್ಯಾಂಕ್ವೆಟ್ ಸಮಯದಲ್ಲಿ ಓದುವುದು ಸಾಧ್ಯವಿಲ್ಲ. ಕಾರಣ, ಕವಿತೆಯನ್ನು ಕೇಳಿದ ಒಬ್ಬ ಮಹಿಳೆ ಅದರ ಬಗ್ಗೆ ಅಭ್ಯಂತರ ವ್ಯಕ್ತಪಡಿಸಿದಳಂತೆ. ಆ ಬಗ್ಗೆ ಸಂಚಾಲಕರಲ್ಲಿ ಸಾಕಷ್ಟು ಚರ್ಚೆಯಾಗಿ, ಅಭ್ಯಂತರ ವ್ಯಕ್ತಪಡಿಸಿದವರು ಅಲ್ಪಸಂಖ್ಯಾತರಾದಾಗ್ಯೂ, ವಿನಾ ಕಾರಣ ಇಲ್ಲದ ವಿವಾದವನ್ನು ತಡೆಯುವುದಕ್ಕಾಗಿ ನಾವು ಈ ಕ್ರಮವನ್ನು ಕೈಗೊಳ್ಳಬೇಕಾಯಿತು, ಕ್ಷಮಿಸಿ. ನಿಮ್ಮ ಕವಿತೆ ನನಗೆ ತುಂಬಾ ಇಷ್ಟವಾಯಿತು, ಖಂಡಿತಾ ನನಗೊಂದು ಪ್ರತಿಯನ್ನು ಕಳಿಸಿ.' ಎಂದು ಕೈಕುಲುಕಿ ಹೊರಟು ಹೋದರು.

ಇಂಥಾ ಅನುಭವ ನನಗೆ ಹಿಂದೆಯೂ ಆಗಿತ್ತು. ಸ್ವಲ್ಪ ನಿರಾಸೆಯಾಯಿತಾದರೂ ಅದನ್ನು ಹಚ್ಚಿಕೊಳ್ಳಲಿಲ್ಲ. ಆದರೆ, ಬ್ಯಾಂಕ್ವೆಟ್ ಮುಗಿದಮೇಲೆ, ಅನೇಕ ಜನರ ಒತ್ತಾಯದ ಮೇಲೆ ಆ ಕವಿತೆಯನ್ನು ಮತ್ತೊಮ್ಮೆ ನಾನು ಹೊಟೆಲಿನ ಬಾರಿನಲ್ಲಿ ಓದಬೇಕಾಯಿತು. ಒಂದೆರಡು ಸುತ್ತು 'ಗುಂಡು' ಹಾಕಿದ್ದವರು ಉನ್ಮತ್ತರಾಗಿ ಹೆಚ್ಚೆನಿಸುವಷ್ಟೇ ಕರತಾಡನ ಮಾಡಿದರು. ಯೂರೋಪಿನ ಮಂದಿ ಅನೇಕರು ತಮ್ಮ ಕಾರ್ಡುಗಳನ್ನು ಕೊಟ್ಟು ಪ್ರತಿಯನ್ನು ಕೋರಿದರು. ಕೆಲಸಕ್ಕೆ ಹಿಂದಿರುಗಿದ ನಂತರ ಹೇಗೋ ನಮ್ಮ ಮೇಲಧಿಕಾರಿಗಳಿಗೆ ನನ್ನ ಕವಿತೆಯ ಸುದ್ದಿ ಮುಟ್ಟಿತ್ತು! ಕೆಲವರು ಕವಿತೆಯನ್ನು ಓದಬೇಕೆಂಬ ಕುತೂಹಲವನ್ನು ವ್ಯಕ್ತಪಡಿಸಿದರೆ, ಕೆಲವರು 'ನೀನು ಪೇಪರ್ ಮಂಡಿಸಲು ಸಮ್ಮೇಳನಕ್ಕೆ ಹೋದಾಗ ನಮ್ಮ ಸಂಸ್ಥೆಯನ್ನು ಪ್ರತಿನಿಧಿಸುತ್ತಿ ಎಂಬುದನ್ನು ಮರೆಯುವಂತಿಲ್ಲ' ಎಂದು ತೆಳುತೆರೆಯ ಹಿಂದಿನ ಎಚ್ಚರಿಕೆಯನ್ನೂ ನೀಡಿದರು. ಇಷ್ಟಾದರೂ ತುಂಟ ಕವಿತೆಗಳನ್ನು ಬರೆಯುವ ಹವ್ಯಾಸ ನನಗೆ ಕಮ್ಮಿಯಾಗಿಲ್ಲ!

(10) ಮೆಗ್ಯಾಫ್ಲಿಗನ್ ಎಂಬ ಮೃತ್ಯುಂಜಯ

ನನ್ನ ಮೂರು ದಶಕಗಳ ಅಣುಶಕ್ತಿ ನಿಯಂತ್ರಣ ವೃತ್ತಿಯಲ್ಲಿ ಹಲವಾರು ಕಮೀಷನರ್‌ಗಳು ಮತ್ತು ಚೇರ್ಮನ್‌ರನ್ನು ಕಂಡಿದ್ದೇನೆ. ಅವರಲ್ಲಿ ಅನೇಕರು ತಾಂತ್ರಿಕ ತಜ್ಞರು, ಸಾರ್ವಜನಿಕ ನಿಲವಿನ ತಜ್ಞರು (ಪಬ್ಲಿಕ್ ಪಾಲಿಸಿ ಎಕ್ಸ್‌ಪರ್ಟ್ಸ್), ಮತ್ತು ಕೆಲವರು ಅಷ್ಟೇನೂ ಮೇಧಾವಿಗಳಲ್ಲದಿದ್ದರೂ ರಾಜಕೀಯ ಕಾರಣಕ್ಕಾಗಿಯೇ

ನಿಯುಕ್ತಗೊಂಡವರು. ಅವರೆಲ್ಲರ ಪೈಕಿ ನನ್ನ ಮನಸ್ಸಿನಲ್ಲಿ ಉಳಿದ ಒಬ್ಬ ವ್ಯಕ್ತಿಯ ಬಗ್ಗೆ ಮಾತ್ರ ಬರೆಯುತ್ತಿದ್ದೇನೆ. 1996ರಲ್ಲಿ ಕ್ಲಿಂಟನ್ ಅಧ್ಯಕ್ಷತೆಯಲ್ಲಿ ಅಮೆರಿಕದ ಅಣುಶಕ್ತಿ ನಿಯಂತ್ರಣ ಆಯೋಗಕ್ಕೆ ನೇಮಿಸಲ್ಪಟ್ಟ ಒಬ್ಬ ಕಮೀಷನರ್ ಎಡ್ವರ್ಡ್ ಮೆಗ್ಯಾಫ್ಲಿಗನ್. ಈತ, 2000ದಲ್ಲಿ ಕ್ಲಿಂಟನ್ನಿಂದ ಪುನಃ ನೇಮಿಸಲ್ಪಟ್ಟ, ಮತ್ತೆ ಬುಷ್ ಅಧ್ಯಕ್ಷನಾದ ಮೇಲೂ ಹಿಂದೆಂದೂ ನಡೆಯದ ಅದ್ಭುತವೋ ಎಂಬಂತೆ, ಮೂರನೆಯ ಬಾರಿಗೂ ನಿಯಮಿಸಲ್ಪಟ್ಟ ವಿಕ್ರಮ ಈತನದ್ದು. ಹತ್ತಾರು ವರ್ಷ ವಿದೇಶಾಂಗ ಇಲಾಖೆಯಲ್ಲಿ ದುಡಿದು, ಮಾಸ್ಕೋ ನಗರದಲ್ಲಿ ಅಮೆರಿಕದ ರಾಯಭಾರಿಗಳ ಕಛೇರಿಯಲ್ಲಿ ಸಹ ದುಡಿದು ಹೆಸರು ಗಳಿಸಿದ್ದ ವ್ಯಕ್ತಿ. ಅಷ್ಟೇ ಅಲ್ಲ, ಶ್ವೇತ ಭವನಕ್ಕೂ ವಿಜ್ಞಾನ ಮತ್ತು ತಾಂತ್ರಿಕ ವಿಭಾಗದ ಸಲಹೆಗಾರ ಮತ್ತು ವಿದೇಶಾಂಗ ನೀತಿಯಲ್ಲಿ ಅಮೆರಿಕಾ ತಳೆಯಬೇಕಾದ ನಿಲುವಿನ ಬಗ್ಗೆ ಸಲಹೆಗಾರನೂ ಆಗಿದ್ದವ. ಸೋವಿಯತ್ ಒಕ್ಕೂಟದ ಶಸ್ತ್ರಾಸ್ತ್ರ ಬಳಕೆಯನ್ನು ಆಳವಾಗಿ ಅಭ್ಯಸಿಸಿದ್ದ ಕಾರಣ ಈತನನ್ನು ಅಮೆರಿಕದ ರಾಷ್ಟ್ರೀಯ ಭದ್ರತಾ ಮಂಡಲಿ ಕೂಡ ತನ್ನ ಸಲಹೆಗಾರನನ್ನಾಗಿ ನಿಯಮಿಸಿಕೊಂಡಿತ್ತು.

ನಮ್ಮಗಳಂತೆ ಅಮೆರಿಕಕ್ಕೆ ವಲಸೆ ಬಂದವರ ಹೊಟ್ಟೆಯಲ್ಲಿ ಹುಟ್ಟಿ ಹೆಚ್ಚೇನೂ ವಿದ್ಯೆಯಿಲ್ಲದ ತಂದೆತಾಯಿಗಳ ದೈಹಿಕಶ್ರಮದ ದುಡಿಮೆಯ ಬಡತನದಲ್ಲೇ ಬೆಳೆದು, ಸರ್ಕಾರದ ವಿದ್ಯಾರ್ಥಿವೇತನಗಳನ್ನು ಪಡೆಯುತ್ತಾ ವಿದ್ಯೆಯಲ್ಲಿ ಮುಂದೆ ಸಾಗಿದ ಮೇಧಾವಿ ಈತ. ಹಾರ್ವರ್ಡ್ ವಿಶ್ವವಿದ್ಯಾನಿಲಯದಿಂದ ಭೌತಶಾಸ್ತ್ರದಲ್ಲಿ ಪದವಿ ಪಡೆದು ಕ್ಯಾಲ್ಟೆಕ್‌ನಿಂದ ಅದೇ ವಿಷಯದಲ್ಲಿ ಮಾಸ್ಟರ್ಸ್ ಪದವಿ ಪಡೆದು ಮುಂದೆ ಹಾರ್ವರ್ಡ್‌ನ ಕೆನಡಿ ಸ್ಕೂಲ್ ಆಫ್ ಗವರ್ನ್‌ಮೆಂಟ್‌ನಿಂದ 'ಸಾರ್ವಜನಿಕ ನಿಲವು'ನಲ್ಲಿ ಮತ್ತೊಂದು ಮಾಸ್ಟರ್ಸ್ ಪದವಿ ಪಡೆದು ಜನಸೇವೆಯೇ ಮುಖ್ಯವೆಂದು ಬಗೆದು ಸರ್ಕಾರೀ ನೌಕರನಾದ ಉದಾತ್ತ ವ್ಯಕ್ತಿ ಈತ. ರ್‍ಯಾಂಡ್ ಕಾರ್ಪೊರೇಶನ್ನಿನಲ್ಲಿ ದುಡಿದ ಈತ ಇಷ್ಟಪಟ್ಟಿದ್ದರೆ, ಖಾಸಗೀ ಸಂಸ್ಥೆಯಲ್ಲಿ ಸಾಕಷ್ಟು ಮುಂದುವರೆಯಬಹುದಿತ್ತು, ಅಥವಾ ರಾಜಕೀಯದಲ್ಲಿ, ತನ್ನ ಹುಟ್ಟೂರಾದ ಬಾಸ್ಟನ್ನಿನಲ್ಲೇ ಕಣಕ್ಕಿಳಿದಿದ್ದರೆ ತುಂಬಾ ಎತ್ತರಕ್ಕೇರುವ ಅವಕಾಶಗಳಿದ್ದವು. ಆದರೂ, ಸಮಾಜದಿಂದ ಉಪಕೃತನಾಗಿ ಸಮಾಜಕ್ಕೆ ಋಣ ತೀರಿಸಬೇಕೆಂಬ ಉನ್ನತ ಧ್ಯೇಯವನ್ನು ಹೊಂದಿದ ಆದರ್ಶವಾದಿ ಈತ. ಈತನ ಕಾರ್ಯಸರಣಿಯನ್ನು ನೋಡುವ ಸದವಕಾಶ ನನಗೆ ದೊರಕಿತ್ತು. ಆಯೋಗದ ತಾಂತ್ರಿಕವರ್ಗದ ಸದಸ್ಯನಾಗಿ ಆಗಿಂದಾಗ್ಗೆ ಆತನ ವಾದಸರಣಿ, ಕಾರ್ಯಸರಣಿಯನ್ನು ಕಂಡು ನಾನು ಪ್ರಭಾವಿತನಾದೆ.

ಅಣುಶಕ್ತಿ ನಿಯಂತ್ರಣ ಆಯೋಗದ ಪ್ರಭಾವೀ ಕಮೀಷನರ್ ಆಗಿ ಅತಿ ಹೆಚ್ಚುಕಾಲ ದುಡಿದು ಅಣುಶಕ್ತಿ ಸ್ಥಾವರಗಳ ದೈನಂದಿನ ಕಾರ್ಯಚಟುವಟಿಕೆಗಳು ಜನರ ಆರೋಗ್ಯ ಮತ್ತು ಸುರಕ್ಷಣೆಯ ಬಗ್ಗೆ ಆದ್ಯತೆ ಕೊಡಬೇಕಾದ ಬಗ್ಗೆ ಅತ್ಯಂತ ಕಾಳಜಿ ವಹಿಸುವಂತೆ ನೋಡಿಕೊಳ್ಳಲು ಶ್ರಮವಹಿಸಿದ ಕರ್ಮಯೋಗಿ ಈತ. ಆದರೆ, ಇವೆಲ್ಲಕ್ಕಿಂತ

ದೊಡ್ಡದೊಂದು ಕಾರಣಕ್ಕೆ ಈತ ನನ್ನ ಮನಸ್ಸಿನಲ್ಲಿ ಉಳಿಯುತ್ತಾನೆ. ಆಯೋಗದಲ್ಲಿ ಹತ್ತು ವರ್ಷಕ್ಕೂ ಮಿಕ್ಕು ಸೇವೆ ಸಲ್ಲಿಸಿದ ಮೇಲೆ ಆತ ಮೆಲನೋಮ ಖಾಯಿಲೆಗೆ (ಚರ್ಮದ ಕ್ಯಾನ್ಸರ್) ತುತ್ತಾಗಿ ಮೃತ್ಯುವನ್ನು ಎದುರಿಸಿದ ರೀತಿ ಮಾತ್ರ ಅಸಾಧಾರಣವಾದದ್ದು. ಮೂರು ದಶಕಕ್ಕೂ ಮೇಲ್ಪಟ್ಟು ಸರ್ಕಾರೀ ಸೇವೆಯಲ್ಲಿ ನಿರತನಾಗಿದ್ದ ಮೆಗ್ಯಾಫ್ಲಿಗನ್ ಒಳ್ಳೆಯ ನಿವೃತ್ತಿ-ವೇತನದೊಂದಿಗೆ ಮನೆಯಲ್ಲಿ ಅಥವಾ ಖಾಸಗೀ ನರ್ಸಿಂಗ್ ಹೋಂನಲ್ಲಿ ನಿರಾಳವಾಗಿ ಕಳೆದು ಕೊನೆಯುಸಿರನ್ನು ಬಿಡಬಹುದಾಗಿತ್ತು. ಆದರೆ, ಆತ ಹಾಗೆ ಮಾಡದೇ ಕೊನೆಯವರೆಗೂ ಸೇವೆಯಲ್ಲಿ ನಿರತನಾಗೇ ಇದ್ದು ಪೂರ್ಣ ಆರೋಗ್ಯವಂತರಿಗಿಂತ ಹೆಚ್ಚಿನ ಉತ್ಸಾಹದಿಂದ ದುಡಿದ. ಇಡೀ ಸಿಬ್ಬಂದಿವರ್ಗವನ್ನು ಉದ್ದೇಶಿಸಿ ಮಾತಾಡಿ, ತನಗೆ ದೊರೆತ ಅವಕಾಶಗಳಿಗಾಗಿ ಕೃತಜ್ಞತೆ ಅರ್ಪಿಸಿದ. ಇಂಥಾ ಒಂದು ತಾಂತ್ರಿಕ ನಿಪುಣರ ನಡುವೆ ದುಡಿಯುವ ಅವಕಾಶ ಮತ್ತು ತನ್ನ ಕೊನೆಯ ಹನ್ನೊಂದು ವರ್ಷಗಳ ದೇಶಸೇವೆಯನ್ನು ನಮ್ಮೊಡನೆ ಮಾಡಿದ್ದು ತನ್ನ ಅದೃಷ್ಟವೆಂದು ತಿಳಿಸಿ, ತನ್ನ ಕೊಟ್ಟಕೊನೆಯ ವಿದಾಯ ಭಾಷಣ ಮಾಡಿದ. 'ಇದೇ ನನ್ನ-ನಿಮ್ಮ ಕೊನೆಯ ಭೇಟಿ' ಎಂದು ಹೇಳಿದಾಗ ಆತನ ಗಂಟಲು ಗದ್ಗದವಾಯಿತು. ಸುಮಾರು ಎರಡು-ಮೂರು ಸಾವಿರ ಜನರು ಎದ್ದು ನಿಂತು ಕರತಾಡನ ಮಾಡುತ್ತ (ಅನೇಕರು ಕಣ್ಣೀರು ಸುರಿಸುತ್ತಾ) ಅವನನ್ನು ಮೃತ್ಯುವಿನೆಡೆಗೆ ಬೀಳ್ಕೊಟ್ಟ ದೃಶ್ಯ ಮರೆಯಲಾಗದ್ದು. ಅಮೆರಿಕನ್ ನ್ಯೂಕ್ಲಿಯರ್ ಸೊಸೈಟಿ, ನ್ಯೂಕ್ಲಿಯರ್ ಎನರ್ಜಿ ಇನ್ಸ್‌ಟಿಟ್ಯೂಟ್ ಮತ್ತು ನ್ಯೂಕ್ಲಿಯರ್ ರೆಗ್ಯುಲೇಟರಿ ಕಮೀಷನ್ ಮುಂತಾದ ಘನ ಸಂಸ್ಥೆಗಳಿಂದ ಅತ್ಯಮೋಘ ಸೇವಾ ಫಲಕಗಳನ್ನು ಪಡೆದಿದ್ದ ಮೆಗ್ಯಾಫ್ಲಿಗನ್, ಒಬ್ಬ ಆದರ್ಶವಾದಿ, ದೇಶಭಕ್ತ, ದೇಶಸೇವಾನಿರತ ಮತ್ತು ಎಲ್ಲಕ್ಕೂ ಮಿಗಿಲಾಗಿ ಒಬ್ಬ ಉತ್ತಮ ಮನುಷ್ಯ. ಆತ ನಿಜಕ್ಕೂ ಮೃತ್ಯುವನ್ನು ಕಂಡು ಬೆದರದ 'ಮೃತ್ಯುಂಜಯ'ನಾಗಿ ನನಗೆ ಗೋಚರವಾದವನು ಎನ್ನುವ ಕಾರಣಕ್ಕೆ ನನ್ನ ಮನಸ್ಸಿನಲ್ಲಿ ಉಳಿದಿದ್ದಾನೆ.

ಉಪಸಂಹಾರ


ಪ್ರಯತ್ನಪೂರ್ವಕವಾಗಿ ಕಳೆದ ಸಂಗತಿಗಳನ್ನು ಮರುಕಳಿಸಿಕೊಳ್ಳುವ ಈ ಅನುಭವ ಸರಪಳಿಯಲ್ಲಿ ಪ್ರತಿಯೊಂದು ಕೊಂಡಿಯೂ ಮತ್ತೊಂದಕ್ಕೆ ನುಲಿದುಕೊಂಡಿದೆಯೇ ಅಥವಾ ಕೆಲವು ಬಿಡಿ ಕೊಂಡಿಗಳೇ ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ. ಲೇಖನದ ಪ್ರಾರಂಭದಲ್ಲಿ ನನ್ನನ್ನೇ ನಾನು ಕೇಳಿಕೊಂಡ ಪ್ರಶ್ನೆಗಳಿಗೆ ಉತ್ತರಗಳು ಸಿಕ್ಕಿವೆಯೇ ಎಂದು ಯೋಚಿಸುವುದೂ ಸ್ವಾಭಾವಿಕವೇ. ಅನೇಕ ಅನುಭವಗಳ ಮತ್ತು ಅವುಗಳ ಸುತ್ತ ಬೆಳೆದ ಭಾವನೆಗಳೂ ತಾತ್ಕಾಲಿಕವೇ ಆದರೂ ಕೆಲವು ಘಟನೆಗಳು ಮಾತ್ರ ಅವು ನಡೆದು ಎಷ್ಟು ಕಾಲವಾಗಿದ್ದರೂ ಅವು ನಡೆದಾಗ ಉಂಟಾದ ಭಾವನೆಗಳೊಂದಿಗೆ ಮರೆಯಲಾಗದೇ ಉಳಿದುಬಿಡುತ್ತವೆ. ಉದಾಹರಣೆಗೆ, ನನ್ನನ್ನು ದಾರಿತಪ್ಪಿಸಿದ ನನ್ನ ದೀರ್ಘ-ಪ್ರಬಂಧದ

ಮಾರ್ಗದರ್ಶಿಯ ಬಗ್ಗೆ ನನಗೆ ಉಂಟಾಗಿದ್ದ ಕೋಪ, ದ್ವೇಷ ಮುಂತಾದವು ನಾನು ವಿದ್ಯಾರ್ಥಿಯಾಗಿದ್ದಾಗ ನನ್ನನ್ನು ಕಾಡಿದಷ್ಟು ಈಗ ಕಾಡುವುದಿಲ್ಲ. ಹಿಂದೆ, ಕನಸಿನಲ್ಲಿ ಅವನ ಕತ್ತು ಹಿಸುಕಿಬಿಡುತ್ತಾ ಬೆವರಿ ಎಚ್ಚರಗೊಂಡದ್ದೂ ಉಂಟು. ಅವನಿಗೆ ಟೆನ್ಯೂರ್ ಸಿಕ್ಕದೇ ಅವನು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ತೊಳಲುವಂತಾಗಲೀ ಎಂದೆಲ್ಲ ಅವನಿಗೆ ಶಾಪಕೊಡುತ್ತಿದ್ದ ಕಾಲವೂ ಇತ್ತು. ಆದರೆ, ಕಾಲರಾಯನ ಮಹಾತ್ಮೆಯಿಂದ ಈಗ ಆತ ನನ್ನ ಸ್ಮೃತಿಪಟಲದಿಂದ ಸಂಪೂರ್ಣವಾಗಿ ಮಾಯವಾಗಿ ಈಗ ಅದು ನನ್ನ ಅತೀತದ ಘಟನೆಯಾಗಿ ಮಾತ್ರ ಉಳಿದುಕೊಂಡಿದೆ. ನಾನು ಆ ಕಟು ಅನುಭವದಿಂದ ಸಂಪೂರ್ಣವಾಗಿ ಹೊರಗೆ ಬಂದಿದ್ದೇನೆ ಅನ್ನಿಸುತ್ತದೆ. ಆದರೆ, ನಮ್ಮ ತಂದೆ ತಾಯಿಗಳ ಮರಣದ ಸಮಯದಲ್ಲಿ ನಡೆದ ಘಟನೆಗಳು ಮತ್ತು ಆಗ ನಾನು ಅನುಭವಿಸಿದ ಸಂಕಟಗಳನ್ನು ಈಗಲೂ ನೆನೆದರೆ ಅದೇ ಉತ್ಕಟತೆಯುಂಟಾಗುತ್ತದೆ. ಪ್ರಾಯಶಃ ಇದು ಕರುಳಿನ ಸಂಬಂಧದ ವಿಷಯವೇ ಇರಬೇಕು.

ಸಹಪಾಠಿಗಳ ಪ್ರೇಮಪ್ರಕರಣಗಳು ನೆನಪಿನ ಬುತ್ತಿಯಲ್ಲಿರುತ್ತವೆ. ಆದರೆ ಅವು ಹೃದಯವನ್ನು ತಟ್ಟುವ ರೀತಿಯೇ ಬೇರೆ. ಎಳೆಯ ಮನಸ್ಸಿನ ಮೇಲೆ ಆ ಸಮಯದಲ್ಲಿ ಆಘಾತವೆನಿಸಿದ್ದೇನೋ ನಿಜ. ಆದರೆ ಅವು ಸ್ವಾತಂತ್ರ್ಯ ಸಿಕ್ಕ ಕೋತಿಗಳು ವನವನ್ನು ಕೆಡಿಸುವ ವಿಷಯವೆನಿಸಿ ಇಂದಿನ ಪರಿಸ್ಥಿತಿಗೆ ಹೋಲಿಸಿ ನೋಡುತ್ತ ಮನಸ್ಸು ತಣ್ಣಗಾಗುತ್ತದೆ. ಆ್ಯಂಡಿಯ ಸ್ನೇಹ ಮಾತ್ರ ನನಗೆ ಒಂದು ವಿಸ್ಮಯದ ವಿಷಯ, ಏಕೆಂದರೆ ನನಗೆ ನಿಜವಾದ ಅಮೆರಿಕನ್ ಗೆಳೆಯರ ಸಂಖ್ಯೆ ತೀರಾ ಕಮ್ಮಿ ಎನ್ನಬಹುದು. ಅಮೆರಿಕನ್ನರು ಸ್ನೇಹವನ್ನು ಒಂದು 'ಕೊಡು–ಕೊಳ್ಳು'ವಿಕೆಯ ದೃಷ್ಟಿಯಿಂದ ನೋಡುವುದೇ ಹೆಚ್ಚು. ಪ್ರಾಯಶಃ, ಆತ ಭಾರತದಲ್ಲಿ ಹಲವಾರು ವರ್ಷ ಕಳೆದುಬಂದಿದ್ದರಿಂದಲೋ ಏನೋ, ಮಾನವ ಸಂಬಂಧಗಳ ಬಗ್ಗೆ ಆತನ ದೃಷ್ಟಿಕೋನ ಭಾರತೀಯರಂತೆ ಇತ್ತು ಎನಿಸುತ್ತದೆ. ತಾನೂ ತನ್ನ ಪತ್ನಿಯೂ ಸೇರಿ ಮತಾಂತರಗೊಳಿಸಿದ್ದ ಒಬ್ಬ ಮಲಯಾಳೀ ಭೂಗರ್ಭಶಾಸ್ತ್ರಜ್ಞನನ್ನು ಕರೆಸಿಕೊಂಡು ಆತನಿಗೆ ಕೆಲಸ ಕೊಡಿಸಿ ಈ ದೇಶದಲ್ಲಿ ತಳವೂರಲು ಸಹಾಯ ಮಾಡಿದ್ದ. ಅಷ್ಟೇ ಅಲ್ಲ, ಅಮೆರಿಕನ್ನರು ವಿಯತ್ನಾಮಿನಲ್ಲಿ ನಡೆದುಕೊಂಡ ರೀತಿಯಿಂದ ಎಷ್ಟು ಬೇಸರಗೊಂಡಿದ್ದನೆಂದರೆ, ಅಮೆರಿಕಾ ನಿಲುವನ್ನು ವಿರೋಧಿಸಿ ಪ್ರತಿಭಟನೆ ನಡೆಸಿ ಹಲವು ಬಾರಿ ಸೆರೆಮನೆ ಸೇರಿದ್ದ. ವಿಯತ್ನಾಮ್ ಯುದ್ಧ ಕಳೆದ ನಂತರ ಅಲ್ಲಿಂದ ಬಂದ ನಿರಾಶ್ರಿತರಿಗೆ ಬೇರೆ ಬೇರೆ ಎಡೆಗಳಲ್ಲಿ ಆಶ್ರಯ ಕೊಡಿಸುವಲ್ಲಿ ಸಾಕಷ್ಟು ದುಡಿದಾತ, ತನ್ನ ಮನೆಯಲ್ಲೇ ಒಂದು ಕುಟುಂಬವನ್ನು ಒಂದು ತಿಂಗಳವರೆಗೂ ಉಳಿಸಿಕೊಂಡಿದ್ದ. ಈ ಎಲ್ಲ ಕಾರಣಗಳಿಂದ ನನಗೆ ಪ್ರಿಯನಾಗಿದ್ದ ಆತನ ವಿವಾಹ, ವಿಚ್ಛೇದನದಲ್ಲಿ ಕೊನೆಗೊಂಡಾಗ, ನಾನು ಮೂಕವಿಸ್ಮಿತನಾಗಿದ್ದೆ. ಹೀಗಾಗಿ ಅದು ಇಂದಿಗೂ ನನ್ನ ಮನಸ್ಸಿನಲ್ಲಿ ಉಳಿದು ಬಿಟ್ಟಿದೆ. ಇನ್ನು, ನಮ್ಮ ಕಂಪನಿಯ ಕಣ್ಣಿಗೆ ಮಣ್ಣೆರಚಿದ ಜರ್ಮನ್ ನನ್ನ ಮನಸ್ಸಿನಲ್ಲಿ ಇನ್ನೂ ಉಳಿಯಲು ಕಾರಣ ಆತ ನನ್ನನ್ನು ಹಲವು ಬಾರಿ

ಮನನೋಯಿಸುವಷ್ಟು ಕಟುನುಡಿಗಳನ್ನಾಡಿದ್ದ. ಹೇಗಾದರೂ ಅವನು ಕೆಳಗೆ ಬೀಳುವುದನ್ನು ನೋಡಿ ಸಂತಸಪಡಬೇಕೆಂಬ ಒಂದು ಕೆಟ್ಟ ಬುದ್ಧಿ ನನ್ನಲ್ಲಿ ಮನೆಮಾಡಿತ್ತೆಂದು ಕಾಣುತ್ತದೆ. ಹೀಗಾಗಿ, ಸಮಯಗಳು ಕೂಡಿಬಂದು ಅವನ ಗ್ರಹಗತಿ ಕೆಟ್ಟು, ಅಂತೂ ಅವನ ವೃತ್ತಿಪರತೆಯ ಅವಸಾನವನ್ನು ಉಂಟುಮಾಡುವುದರಲ್ಲಿ ನನ್ನದೂ ಒಂದು (ಸಣ್ಣ) ಪಾತ್ರವಿದ್ದದ್ದು ಒಳಗೊಳಗೇ ನನಗೆ ಖುಷಿಕೊಟ್ಟಿತ್ತು. ಮೆಗ್ಯಾಫ್ಲಿಗನ್ ಮೃತ್ಯುವನ್ನು ಎದುರಿಸಿದ ರೀತಿ ನನಗೆ ಅವನಲ್ಲಿ ಮೃತ್ಯುಂಜಯನನ್ನೇ ತೋರಿಸಿತು. ಜೊತೆಗೆ, ಆತನ ಆದರ್ಶ ವ್ಯಕ್ತಿತ್ವ ನನ್ನ ಮನಸ್ಸಿನ ಮೇಲೆ ಪ್ರಭಾವ ಬೀರಿದ್ದರಿಂದ ಆತನ ಚಿತ್ರ ಬಹುಕಾಲ ಉಳಿಯುವಂಥದ್ದು.

ಕಷ್ಟಕಾಲದಲ್ಲಿ ಒದಗಿ ಬಂದ ಅನಿರೀಕ್ಷಿತ ಸಹಾಯ, ನನ್ನ ಮಡದಿಯನ್ನೂ ಪುಟ್ಟ ಮಗಳನ್ನೂ ತಾಯಿಯಂತೆ ನೋಡಿಕೊಂಡ ಚೀನೀ ಮಹಿಳೆ ನನಗೆ 'ಕಾಣದ ಕೈಯಿನ' ಮಹಿಮೆಯನ್ನು ತೋರಿಸಿದ ಘಟನೆ, ಆಕೆಯಂತೂ ಎಂದೆಂದೂ ಮರೆಯಲಾಗದ ಋಣಾನುಬಂಧದ ಉದಾಹರಣೆಯಾಗಿ ಉಳಿದಿದ್ದಾಳೆ. ಮಾನವ, ಚಂದ್ರನ ಮೈಮೇಲೆ ಕಾಲಿಟ್ಟ ಘಟನೆ ಅಮೆರಿಕದ ಅದ್ಭುತ ವೈಜ್ಞಾನಿಕ ಮತ್ತು ತಾಂತ್ರಿಕ ಮುನ್ನಡೆಯಾಗಿ ಮೈನವಿರೇಳಿಸಿದ ಕ್ಷಣ. ಹಾಗೆಯೇ, ಕಲ್ಲು ಬಂಡೆಯನ್ನೂ ಪ್ರೀತಿಸುವ ನನ್ನ ತುಂಟ ಕವಿಹೃದಯ ನನ್ನೊಂದಿಗೆ ಯಾವಾಗಲೂ ಇರಲಿ ಎಂಬ ಇಚ್ಛೆಯೇ ಆ ಪ್ರಕರಣವನ್ನು ನನ್ನಲ್ಲಿ ಇನ್ನೂ ಹಸಿರಾಗಿಟ್ಟಿದೆ! ಮೇಲೆ ವಿವರಿಸಿರುವ ಅನುಭವಗಳೆಲ್ಲ ನಡೆದ ಸಂಗತಿಗಳ ಆಧಾರದ ಮೇಲೆ ಪುನರುಜ್ಜೀವಗೊಂಡವು; ಕಾಲ್ಪನಿಕ ವಿಷಯಗಳಲ್ಲ. ಅಗತ್ಯವೆನಿಸಿದಲ್ಲಿ ಹಲವು ಹೆಸರುಗಳನ್ನು ಮತ್ತು ಗೌಣ ವಿವರಗಳನ್ನು ಮಾತ್ರ ಉದ್ದೇಶಪೂರ್ವಕ ಬದಲಿಸಿದ್ದೇನೆ. ಒಟ್ಟಿನಲ್ಲಿ, ಈ ಅನುಭವ ಸರಪಳಿಯ ಕೊಂಡಿಗಳು ಹೇಗೆಹೇಗೋ ಕೂಡಿಕೊಂಡಿವೆ; ಕೆಲವು ಅಂಟಿಕೊಂಡಿವೆ, ಕೆಲವು ಒಂದನ್ನೊಂದು ಒಳಹೊಕ್ಕಿವೆ. ನಾನು ಇಂದು ಏನಾಗಿದ್ದೇನೋ ಅದಕ್ಕೆ ಅವೆಲ್ಲ ಒಂದಿಷ್ಟು ಕಾರಣಗಳಾಗಿವೆ ಎನ್ನುತ್ತಾ ಈ ಲೇಖನವನ್ನು ಮುಗಿಸುವೆ.



ಬದುಕೆ ಸಾಹಸ ಎಂಬ ತತ್ತ್ವ ನಮದೆಲ್ಲ!

– ಕುಂಭಾಸಿ ಶ್ರೀನಿವಾಸ ಭಟ್

ಕೆಲವು ವರುಷಗಳ ಹಿಂದೆ, ಲೋಕಾಭಿರಾಮವಾಗಿ ಸ್ನೇಹಿತರೊಡನೆ ಹರಟೆ ಹೊಡೆಯುತ್ತಿದ್ದಾಗ, ನಮ್ಮ ಬಾಳು ಅಮೇರಿಕಾದಲ್ಲಿ ನಡೆದು ಬಂದ ದಾರಿಯನ್ನು ಪುನರವಲೋಕಿಸುತ್ತ ಬಂದ ಭಾವನೆಗಳನ್ನು ಒಂದು ಚಿಕ್ಕ ಕವನವಾಗಿ ಬರೆದಿದ್ದೆ:

'ಬಲುದೂರ ಬಂದಿಹೆವು, ಬಹುಕಾಲ ಕಳೆದಿಹೆವು...
...ಬದುಕೆ ಸಾಹಸ ಎಂಬ ತತ್ತ್ವ ನಮದೆಲ್ಲ!'

ಬದುಕೇ ಸಾಹಸ ಎಂಬ ಮನಃಪ್ರವೃತ್ತಿಯಿಂದ ಅಮೇರಿಕಾಗೆ ಬಂದವರು ನಾವು. ಭಾರತದಲ್ಲಿದ್ದಾಗ ಪೂನಾದಲ್ಲಿ ಟಾಟಾ ಇಂಜಿನಿಯರಿಂಗ್ ಕಂಪೆನಿಯಲ್ಲಿ ಒಳ್ಳೆಯ ಕೆಲಸ, ಮೀರಾ ಹೌಸಿಂಗ್ ಸೊಸೈಟಿಯಲ್ಲಿ ಮನೆ, ಪುಟ್ಟ ಸಂಸಾರವನ್ನು ಬೇಕಾದೆಡೆ ಕರೆದುಕೊಂಡು ತಿರುಗಾಡಲು ವೆಸ್ಪಾ ಸ್ಕೂಟರ್; ಸುಖ ಜೀವನ ನಡೆಸಲು ಇನ್ನೇನು ಬೇಕು? ಆದರೂ ಜೀವನದಲ್ಲಿ ಏನಾದರೂ ಸಾಧಿಸಬೇಕು, ಎಲ್ಲರಿಗಿಂತ ವಿಭಿನ್ನವಾದ ಸಾಧನೆ ಮಾಡಿ ತೋರಿಸಬೇಕೆಂಬ ಮಹತ್ವಾಕಾಂಕ್ಷೆ, ಅಮೇರಿಕಾದ ಕಡೆ ಆಯಸ್ಕಾಂತದಂತೆ ಸೆಳೆಯುತ್ತಿತ್ತು. ಈ ಗುರಿಯನ್ನು ಇಟ್ಟುಕೊಂಡೇ ಉಚ್ಚ ವಿದ್ಯಾಭ್ಯಾಸ ಮಾಡುವ ಉದ್ದೇಶದಿಂದ ನಾವು ಅಮೇರಿಕಾಗೆ ಬಂದೆವು. ಪ್ರಾರಂಭದ ಕೆಲವು ವರುಷಗಳು ಬಹಳ ಕಷ್ಟವೆಂದೆನಿಸಿದರೂ ಮುಂದಿನ ನಮ್ಮ ಹಾಗೂ ಮಕ್ಕಳ ಭವಿಷ್ಯವನ್ನು ನೆನೆಸಿಕೊಂಡು ಛಲದಿಂದಲೇ ಹೊಸ ಪರಿಸರಕ್ಕೆ ಹೊಂದಿಕೊಳ್ಳುವ ಪ್ರಯತ್ನ ಮಾಡಿದೆವು.

ವಿಭಿನ್ನ ಪರಿಸರಗಳಿಂದ ಬಂದು, ಕರಗುವ ಕಡಾಯಿಯಲ್ಲಿ ಕರಗಿ, ಅಮೇರಿಕೀಕರಣದ ಸ್ವಪ್ನವನ್ನು ಸಾಧಿಸಲು ನಾವು ಆಗ ತೊಟ್ಟ ವೇಷಗಳು ಹಾಗೂ ಆಡಿದ ನಾಟಕಗಳನ್ನು ನೋಡಿದಾಗ ನನಗೆ ಒಮ್ಮೆ ನಗು, ಇನ್ನೊಮ್ಮೆ ಜಿಗುಪ್ಸೆ ಬರುತ್ತದೆ. ಕರ್ನಾಟಕದ ಗ್ರಾಮೀಣ ಪರಿಸರದಲ್ಲಿ ಹುಟ್ಟಿ, ಧಾರ್ಮಿಕ ಮಡಿವಂತಿಕೆಯ ವಾತಾವರಣದಲ್ಲಿ ಬೆಳೆದು, ಉದ್ಯೋಗವನ್ನರಸಿ ಅಮೇರಿಕಾಗೆ ಬಂದರೂ, ಸನ್ನಿವೇಶದ ಶಿಶುವಾಗಿ, ಇಲ್ಲಿನ ಕೃತಕ ನಡೆನುಡಿಗಳಿಗೆ ನಾನು ಇಷ್ಟು ಹೊಂದಿಕೊಳ್ಳುತ್ತೇನೆನ್ನುವ ಕಲ್ಪನೆಯೇ ನನಗಿರಲಿಲ್ಲ. ಬಾಲ್ಯದಿಂದಲೂ ಕಮ್ಯೂನಿಸಂ ಬಗ್ಗೆ ದ್ವೇಷ,

ಇಂಪೀರಿಯಲಿಸಂ ಬಗ್ಗೆ ಸಿಟ್ಟು ಇದ್ದರೂ, ಇಲ್ಲಿನ ಆಡಳಿತ, ರಾಜಕೀಯ, ಆರ್ಥಿಕ ವ್ಯವಸ್ಥೆಗಳನ್ನು ಜೀರ್ಣಿಸಿಕೊಂಡು, ಕ್ಯಾಪಿಟಲಿಸಮ್ಮನ್ನು ಇಷ್ಟು ಸಲೀಸಾಗಿ ಅನುಮೋದಿಸುತ್ತೇನೆನ್ನುವ ಭ್ರಮೆ ನನಗೆ ಕನಸಿನಲ್ಲೂ ಇರಲಿಲ್ಲ. ಹೊಸತಾಗಿ ಈ ದೇಶಕ್ಕೆ ಬಂದಾಗ, ಹಲವಾರು ಕನಸುಗಳನ್ನು ಕಟ್ಟಿಕೊಂಡು, ಇದೇ ಭೂಮಿಯ ಮೇಲಿನ ಸ್ವರ್ಗವೆಂದುಕೊಂಡು, ಇಲ್ಲೇ ನಮ್ಮ ಕನಸಿನ ರಾಜ್ಯವನ್ನು ಕಟ್ಟಿಕೊಂಡು, ಸದಾ ಸುಖಿಗಳಾಗಿ ನೆಲೆಸುತ್ತೇವೆಂದುಕೊಂಡಿದ್ದೆ. ಆದರೆ ಕೆಲವು ವರ್ಷಗಳನ್ನು ಇಲ್ಲಿನ ಔದ್ಯೋಗಿಕ, ಸಾಂಸಾರಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ಸನ್ನಿವೇಶಗಳಲ್ಲಿ ಕಳೆದಾದ ಬಳಿಕ, ನಿಜ ಪರಿಸ್ಥಿತಿಯ ಅರಿವಾಗಿ ಒಮ್ಮೊಮ್ಮೆ ದೀರ್ಘವಾಗಿ ಚಿಂತಿಸಿದಾಗ, ನನ್ನ ಆಗಿನ ಬುದ್ಧಿಯ ಪ್ರಬುದ್ಧತೆಯ ಬಗ್ಗೆ ನನಗೇ ನನ್ನ ಮೇಲೆ ಅನುಕಂಪ ಮೂಡಿ ಬರುತ್ತದೆ.

ಅಧ್ಯಾತ್ಮಕ್ಕೆ ವಾರಕ್ಕೊಮ್ಮೆ ದೇವಸ್ಥಾನ, ಲೌಕಿಕಕ್ಕೆ ಕಂಪನಿಯ ಕೆಲಸ, ಆನಂದಿಸಲು ಅಲ್ಲಲ್ಲಿ ಪಾರ್ಟಿಗಳು, ಇಷ್ಟರಲ್ಲೇ ಜೀವನದ ಐಹಿಕ ಸುಖದ ಪರಮಾವಧಿಯನ್ನು ಅನುಭವಿಸುತ್ತಿದ್ದೇನೆನ್ನುವ ಹುಚ್ಚು ಹಂಬಲದಲ್ಲಿ ಬಿಸಿ ರಕ್ತದ ತಾರುಣ್ಯ ಕಳೆಯಿತು. ಇಲ್ಲಿಗೆ ಬಂದಾಗ ನಮ್ಮ ಜೀವನದ ಒಂದೇ ಉದ್ದೇಶ ಆರ್ಥಿಕ ಸ್ವಾವಲಂಬನೆ ಹಾಗೂ ಭದ್ರತೆ. ಏತನ್ಮಧ್ಯೆ ಬೆಳೆದ ಪುಟ್ಟ ಸಂಸಾರವನ್ನು ಎಲ್ಲಾ ತರದ ಅನುಕೂಲಗಳಿಂದ, ಯಾವುದಕ್ಕೂ ಕಡಿಮೆ ಇಲ್ಲದಂತೆ ನೋಡಿಕೊಳ್ಳುವ ಒಂದೇ ಧ್ಯೇಯದಿಂದ ಹಗಲಿರುಳೆನ್ನದೇ ದುಡಿದು ಒಂದು ಹಂತಕ್ಕೆ ಬಂದೆವು. ಮಕ್ಕಳು ಬೆಳೆದು, ಮನೆ ಬಿಟ್ಟು ಉಚ್ಚ ವಿದ್ಯಾಭ್ಯಾಸಕ್ಕಾಗಿ ವಿಶ್ವವಿದ್ಯಾಲಯಗಳಿಗೆ ಹೋದ ಬಳಿಕ, ನಮ್ಮ ಬಾಳಿನ ಮೂಲಭೂತ ಅಗತ್ಯಗಳ ವ್ಯವಸ್ಥೆಯಾದಮೇಲೆ, ಜೀವನದ ಮಧ್ಯವಯಸ್ಸಿನ ಹಂತದಲ್ಲಿ ನಿಂತು, ನಡೆದು ಬಂದ ದಾರಿಯನ್ನು ಒಮ್ಮೆ ಅವಲೋಕಿಸಿದಾಗ, ಮುಂದಿರುವ ದಾರಿ ನಡೆದು ಬಂದ ದಾರಿಯಷ್ಟು ಸಲೀಸಲ್ಲ ಎನ್ನಿಸಿ, ನನ್ನ ಯೋಜನೆಗಳನ್ನು, ನಡವಳಿಕೆಗಳನ್ನು, ಮತ್ತು ಬಾಹ್ಯಪ್ರಪಂಚದ ಕಾರ್ಯಚಟುವಟಿಕೆಗಳನ್ನು ತುಲನಾತ್ಮಕ ವಿಮರ್ಶೆಗೆ ಒಳಪಡಿಸುತ್ತೇನೆ.

ಲೋಕಾಭಿರಾಮವಾಗಿ ಜೀವನವನ್ನು ಲಘುವಾಗಿ ಆನಂದಿಸುವ ಅಭ್ಯಾಸ ನನ್ನದಲ್ಲದ ಕಾರಣ, ಎರಡು ಧ್ರುವಗಳಂತೆ ವಿಭಿನ್ನವಾಗಿರುವ ಸಂಸ್ಕೃತಿಗಳ ಘರ್ಷಣೆಯಿಂದ ಜನಿಸುವ ವೈಯಕ್ತಿಕ ತಿಕ್ಕಾಟವನ್ನು, ನಾನು ಸಂಶೋಧನಾತ್ಮಕವಾಗಿ ಸಮೀಕ್ಷಿಸುತ್ತೇನೆ. ಅಮೇರಿಕದ ಜೀವನದ ಕೆಲವು ಅತಿರೇಕಗಳನ್ನು, ಭಾರತೀಯ ಜೀವನದ ಮೂಲಭೂತ ಪರಂಪರೆಗಳಿಗೆ ಹೋಲಿಸಿ, ಕುತೂಹಲದಿಂದ ವಿವೇಚಿಸಿದಾಗ, ಕಣ್ಣಿಗೆ ಹೊಡೆಯುವ ವ್ಯತ್ಯಾಸ ನನಗೆ ಕಂಡುಬರುತ್ತದೆ.

ಭ್ರಮ ನಿರಸನ

ಬಿಟ್ಟು ಬಂದ ದೇಶದಲ್ಲಿ ಸರಕಾರ, ಸಾಮಾನ್ಯ ಪ್ರಜೆಯ ವೈಯಕ್ತಿಕ ಜೀವನದಲ್ಲಿ ಬೀರುತ್ತಿದ್ದ ಪ್ರಭಾವದಿಂದ ಬೇಸತ್ತಿದ್ದ ನನಗೆ, ಇಲ್ಲಿನ ರಾಜಕೀಯ ವಾತಾವರಣದ

ತಿಳುವಳಿಕೆ ಆದಂತೆ, ಇಲ್ಲಿನ ರಾಜಕಾರಣಿಗಳ, ರಾಜಕೀಯ ವ್ಯವಸ್ಥೆಯ ಅಪರಿಪೂರ್ಣತೆಗಳು, ಹುಳುಕುಗಳು ಸ್ಪಷ್ಟವಾಗಿ ಅರ್ಥವಾಗುತ್ತಿವೆ. ಇಲ್ಲಿನ ನಾಗರಿಕರ ಸಾಮಾಜಿಕ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ಬಗ್ಗೆ ಇರುವ ಗೌರವ, ಕಾಳಜಿಗಳೆಲ್ಲಾ ಸಮಯ ಕಳೆದಂತೆ ಕಡಿಮೆ ಆಗಿ ಭ್ರಮನಿರಸನವಾದಂತೆ ಅನ್ನಿಸುತ್ತಿದೆ. ವಿದ್ಯೆ, ಸಿರಿ, ಸಂಪತ್ತುಗಳ ನಡುವೆ ಇರುವ ಭ್ರಷ್ಟತೆ, ತಾರತಮ್ಯ, ಕಾಪಟ್ಯಗಳು ಭಾರತಕ್ಕಿಂತಲೂ ಕಡಿಮೆ ಆದರೂ, ದ್ವೇಷ, ಹಿಂಸೆ, ಹೆಂಗಸರು, ಮಕ್ಕಳ, ಅನ್ಯಜನಾಂಗದವರ ಮೇಲಿನ ಹಿಂಸಾಚಾರ, ಇವುಗಳೆಲ್ಲ ನಮ್ಮ ದೇಶಕ್ಕಿಂತಲೂ ಏನೂ ಕಡಿಮೆಯಿಲ್ಲವೆಂದು ಅನ್ನಿಸುತ್ತದೆ.

ತಡೆಯಿಲ್ಲದ ವಸ್ತು ವ್ಯಾಮೋಹ, ಚರ್ವಿತ ಚರ್ವಣವಾದ ನೀರಸ ಕೃತಕ ಸಂಭಾಷಣೆಗಳು, ಮತ್ತು ಕೊನೆಯಿಲ್ಲದ ಅಜೀರ್ಣವಾಗುವಂತಹ ವಿಷಯ ಲೋಲುಪ್ತಿ, ಇವುಗಳನ್ನು ತೃಪ್ತಿ ಪಡಿಸಲು ಅಮೂಲ್ಯ ಪ್ರಕೃತಿಯ ಅಪೂರ್ವ ಸಂಪತ್ತಿನ ದುರುಪಯೋಗ, ಬೇಜವಾಬ್ದಾರಿಯುತ ಸ್ವಾರ್ಥದಿಂದ ಪ್ರಚೋದಿಸಲ್ಪಟ್ಟ ಅಹಂಕಾರ, ಸೊಕ್ಕು, ಇವುಗಳಿಂದ ಒಮ್ಮೊಮ್ಮೆ ಅಸಹ್ಯವಾಗುತ್ತದೆ. ಇವುಗಳ ಸಂದಿಗ್ಧತೆಯ ಮಧ್ಯೆ ಪರಿಸರದ ವಿಭಿನ್ನ ವಿಚಾರಗಳ ತೀವ್ರ ತಿಕ್ಕಾಟ, ದೈನಂದಿನ ಘಟನೆಗಳ ಸಂಘರ್ಷಣೆ, ಇವುಗಳನ್ನು ಎದುರಿಸಿ ಗೆದ್ದು, ವೈಯಕ್ತಿಕ ವಿಜಯವನ್ನು ನಿರೀಕ್ಷಿಸುತ್ತಿರುವ ನನಗೆ, ಅದು ಕೊನೆಗೂ ಗಗನ ಕುಸುಮವಾಗಿಯೇ ಉಳಿಯುವುದೇನೋ ಎಂಬ ಭಾವನೆ ಬರುತ್ತದೆ.

ದ್ವಂದ್ವ

ವ್ಯಕ್ತಿತ್ವದಲ್ಲಿ ವೈವಿಧ್ಯವಿದ್ದರೂ, ಪರಿಸರದ ಪ್ರಭಾವದಿಂದ ತಾತ್ಕಾಲಿಕವಾಗಿ ನಾವೆಲ್ಲರೂ ಒಂದೇ ವಿಧವಾದ ನಡವಳಿಕೆಗಳನ್ನು ಅನುಕರಿಸಲು ಸಾಧ್ಯ. ನಮ್ಮ ಪ್ರತಿ ಕಾರ್ಯಕ್ಕೂ, ಪ್ರತಿಕ್ರಿಯೆಯು ಹೇಗೆ ಸಹಜವೋ ಹಾಗೆ, ನಮ್ಮ ದಿನನಿತ್ಯದ ಜಂಜಾಟವನ್ನು ರುದ್ರ ಸಮುದ್ರದ ಅಲೆಗಳಂತೆ ಅಲ್ಲೋಲ ಕಲ್ಲೋಲ ಮಾಡಿಕೊಳ್ಳುವ ಅಥವಾ ಶಾಂತ ಸರೋವರದ ಪ್ರಶಾಂತ ವಾತಾವರಣದಂತೆ ತಿಳಿಯಾಗಿಸಿಕೊಳ್ಳುವ ಸಂಯಮ ಶಕ್ತಿ ನಮ್ಮಲ್ಲಿದೆ. ಆದರೆ ಈ ತಾತ್ಕಾಲಿಕ ಸರಳ ಸಂಯಮ, ಸಂಕೀರ್ಣತೆಯ ಮಟ್ಟಕ್ಕೆ ಮುಟ್ಟಿದಾಗ ದ್ವಂದ್ವವನ್ನು ಎದುರಿಸುತ್ತೇವೆ.

ಈ ದ್ವಂದ್ವವನ್ನು ಧೈರ್ಯವಾಗಿ ಎದುರಿಸಿ ಜಯಿಸುವುದರಿಂದಲೇ ನಮ್ಮ ಜೀವನ ಸಫಲವಾಗಲು ಸಾಧ್ಯ. ದ್ವಂದ್ವಗಳನ್ನು ಅರಿತು, ಸರಿದೂಗಿಸಿ ಸಮತೂಕಕ್ಕೆ ತರಲು ನಾವು ಹೋರಾಡಬೇಕು. ಒಮ್ಮೊಮ್ಮೆ ದ್ವಂದ್ವಗಳಾಚೆ ಹೋಗಿ ಸಮೀಕ್ಷಾಪೂರಿತ ಹಿನ್ನೋಟದಿಂದ ಅವುಗಳಲ್ಲಿರುವ ಏಕತೆಯನ್ನು ಪರಿಗ್ರಹಿಸಿ, ಅದರ ಹಿನ್ನೆಲೆಯಲ್ಲಿ ತಾರತಮ್ಯ ಸಿದ್ಧಾಂತವನ್ನು ರೂಪಿಸಿಕೊಳ್ಳುವುದು ಬುದ್ಧಿಜೀವಿಗಳ ಲಕ್ಷಣ. ದ್ವಂದ್ವಗಳಿಂದ ಗೊಂದಲಗೊಳ್ಳುವವರು ಬುದ್ಧಿಯ ಪರಿಪಕ್ವತೆ ಹಾಗೂ ಪ್ರಬುದ್ಧತೆಗಳನ್ನು

ಪಡೆದಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ನಮ್ಮ ಪೌರ್ವಾತ್ಯ ಮೌಲ್ಯಗಳ ಭದ್ರ ತಳಪಾಯದ ಮೇಲೆ ಕಟ್ಟಿದ, ಹಿತ, ಮಿತವಾದ, ನಯ ವಿನಯಗಳಿಂದ ಕೂಡಿದ, ಸಂಯಮಪೂರಿತ, ಆಸೆ ಆಕಾಂಕ್ಷೆಗಳು, ಅವಶ್ಯವಾದಷ್ಟೇ ನಿಯತವಾದ ಊಟ, ಉಡುಗೆ-ತೊಡುಗೆಗಳನ್ನು ಬಯಸಿ ಅನುಭವಿಸುವ ಮನೋನಿಯಂತ್ರಣ, ಪ್ರಬುದ್ಧ, ಮಾನಸಿಕ, ದೈಹಿಕ, ಪರಿಶ್ರಮಪೂರ್ವಕವಾದ ನಿತ್ಯವೃತ್ತಿಗಳು ನಮ್ಮ ಒಳ್ಳೆಯ ಗುಣಗಳು. ಪೂರ್ವ ಪಶ್ಚಿಮಗಳೆರಡರ ಆಚರಣೆಗಳಿಂದ ಹಂಸಕ್ಷೀರ ನ್ಯಾಯದಂತೆ ಒಳ್ಳೆಯದನ್ನು ಮಾತ್ರ ಅಳವಡಿಸಿಕೊಳ್ಳುವ ಮನೋಭಾವಗಳನ್ನು ನಾವು ಬೆಳೆಸಿಕೊಳ್ಳಬೇಕು. ಪ್ರತಿ ಕಾರ್ಯಚಟುವಟಿಕೆಗಳನ್ನೂ ಪ್ರಶ್ನಾತ್ಮಕ ದೃಷ್ಟಿಯಿಂದ ತುಲನಾತ್ಮಕವಾಗಿ ಸಂಶೋಧಿಸಿ ಅನುಸರಿಸಬೇಕು. ಮೂಢನಂಬಿಕೆಗಳನ್ನು, ಕಂದಾಚಾರಗಳನ್ನು, ಬಿಡುವುದರಲ್ಲಿ ಧೈರ್ಯದಿಂದ ವರ್ತಿಸಬೇಕು. ಹೀಗೆ ಮಾಡುವುದರಿಂದ, ಪೂರ್ವ ಪಶ್ಚಿಮವೆರಡರ ಸಿಹಿ ಕಹಿಗಳನ್ನು ಬೇವು, ಬೆಲ್ಲಗಳಂತೆ ಸವಿಯಬಹುದು.

ಪರಿಸರಕ್ಕೆ ಹೊಂದಿಕೊಳ್ಳುವುದು ಹೇಗೆ ಕಷ್ಟಕರವೋ, ಹಾಗೇ ಪರಿಸರದಿಂದ ದೂರ ನಿಂತು ಬದುಕುವುದೂ ನಮಗೆ ಅತಿ ದುಸ್ತರ. ನಾವೆಲ್ಲ ಅಪರಿಪೂರ್ಣರಾಗಿ ಹುಟ್ಟಿದ್ದರೂ ಪರಿಪೂರ್ಣತೆಯ ಗುರಿಯಿಟ್ಟು, ದೃಢ ನಿರ್ಧಾರ, ಹಾಗೂ ನಿಶ್ಚಲ ವಿಶ್ವಾಸಗಳಿಂದ ನಡೆದಾಗ, ಅಂತರಂಗ ಬಹಿರಂಗಗಳ ಸಮನ್ವಯ ಪ್ರಯತ್ನದಲ್ಲಿ ಬದುಕು ಸಫಲವಾಗುತ್ತದೆ. ದ್ವಂದ್ವಗಳ ಗೊಂದಲದ ಹಿನ್ನೆಲೆಯಲ್ಲಿಯೂ, ಜೀವನದ ಮೌಲ್ಯಗಳ ಸಮತೋಲನ ಮಾಡಿಕೊಂಡು, ಸಮರಸವನ್ನು ಕಂಡುಕೊಂಡರೆ ಜೀವನ ಸಾರ್ಥಕ. ಇಲ್ಲದಿದ್ದಲ್ಲಿ, ಅದುಮಿಡಲಾಗದ ಭಾವೋದ್ವೇಗಗಳ ತಿಕ್ಕಾಟದಿಂದ ಬಾಳು, ಪ್ರಕ್ಷುಬ್ಧ ಸಾಗರದ ಮಧ್ಯೆ, ತಿರುಗುವ ಚುಕ್ಕಾಣಿಯಿಲ್ಲದ ದೋಣಿಯಂತೆ ಪರಿತಪಿಸಿ ನಮ್ಮ ಸರ್ವನಾಶಕ್ಕೆ ಕಾರಣವಾಗುತ್ತದೆ. ಈ ಪಾಡು ನನ್ನದಾಗದಂತೆ ಪ್ರಯತ್ನಿಸಿ, ದ್ವಂದ್ವಗಳನ್ನು ಎದುರಿಸಿ ಗೆಲ್ಲುವುದೇ ನನ್ನ ಮಹತ್ವಾಕಾಂಕ್ಷೆ!

ಅಳವಡಿಕೆ

ಕನ್ನಡ ನಿಘಂಟುಗಳಲ್ಲಿ 'ಅಳವಡಿಕೆ' ಎಂಬ ಶಬ್ದಕ್ಕೆ, 'ಹೊಂದಿಕೊಳ್ಳುವಿಕೆ', 'ಸೇರಿಕೊಳ್ಳುವಿಕೆ' ಎಂಬ ಅರ್ಥವನ್ನು ಕೊಡುತ್ತಾರೆ. ಪರಿಸರಕ್ಕೆ ಹೊಂದಿಕೊಳ್ಳುವುದನ್ನು, ಪರಿಸರದೊಡನೆ ಸೇರಿಕೊಳ್ಳುವುದನ್ನು ಅಳವಡಿಕೆ ಎಂದು ಕರೆಯಬಹುದು. ಪರಿಸರ ಎಂದರೆ ಏನು? ಪರಿಸರದ ಎಲ್ಲ ಅಂಗಗಳಿಗೂ ಹೊಂದಿಕೊಳ್ಳಲು ಸಾಧ್ಯವೇ? ಅದರ ಅಗತ್ಯವಿದೆಯೆ? ಪರಿಸರದಲ್ಲಿ ಒಳ್ಳೆಯ ಹಾಗೂ ಕೆಟ್ಟ ಗುಣಗಳಿರಬಹುದು. ಇರಬಹುದೇನು, ಇದ್ದೇ ಇರುತ್ತವೆ. ಪರಿಸರದಲ್ಲಿರುವ ಎಲ್ಲಾ ಭಾಗಗಳಿಗೂ ಹೊಂದಿಕೊಂಡು ಒಂದಾಗುವ ಇಚ್ಛೆ ಕೆಲವರಿಗಿದ್ದರೂ ಅದು ಅಸಾಧ್ಯ.

ಬೇರು ಸೂರು

ಇಲ್ಲಿ ನಾವಿರುವ ಪರಿಸರವನ್ನೇ ತೆಗೆದುಕೊಳ್ಳಿ. ನಮಗೆಲ್ಲರಿಗೂ ಅನುಕರಣೀಯವಾದ ಬಹಳ ಗುಣಗಳನ್ನು ಇಲ್ಲಿನ ಸಮಾಜದಲ್ಲಿ ನೋಡಬಹುದು. ಉದಾಹರಣೆಗೆ ಕಾರ್ಯತತ್ಪರತೆ, ಸಮಯನಿಷ್ಠೆ, ಉಚ್ಚ-ನೀಚವೆಂಬ ಭೇದವಿಲ್ಲದ ವೃತ್ತಿ ಸಮಾನತೆ, ವೃತ್ತಿಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ, ನೈರ್ಮಲ್ಯ, ಆಜೀವ ಪರ್ಯಂತ ಜ್ಞಾನಾರ್ಜನೆ ಮಾಡುವ ಅಭ್ಯಾಸ, ಇನ್ನೊಬ್ಬರಿಗೆ ಸಹಾಯ ಮಾಡುವ ಮನೋಧರ್ಮ, ಇತ್ಯಾದಿ ಒಳ್ಳೆಯ ಗುಣಗಳನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕು. ಇಲ್ಲಿನ ಸಮಾಜದಲ್ಲಿ ಹಲವಾರು ದುರ್ಗುಣಗಳಿವೆ. ಉದಾಹರಣೆಗೆ, ತಡೆಯಿಲ್ಲದ ವಸ್ತು ವ್ಯಾಮೋಹ, ಅತಿಯಾದ ಸ್ವಾರ್ಥ ಭಾವನೆ, ತಾಯಿತಂದೆಗಳನ್ನೂ ದೂರದಲ್ಲಿಡುವ ಸ್ವಕೀಯತೆ (ಪ್ರೈವೆಸಿ), ಕೊನೆಯಿಲ್ಲದ, ಅಜೀರ್ಣವಾಗುವಂತಹ ವಿಷಯ ಲೋಲುಪ್ತಿ, ಆಹಾರಕ್ಕಾಗಿ ಯಾವುದೇ ಪಶು, ಪಕ್ಷಿಗಳನ್ನು ಕೊಂದು ಉಪಯೋಗಿಸುವ ಅಭ್ಯಾಸ, ಇತ್ಯಾದಿಗಳನ್ನು ನಾವು ಆದಷ್ಟು ಕಡಿಮೆ ಮಾಡಿಕೊಳ್ಳಬೇಕು. ಇದೇರೀತಿ, 'ಷಾಪಿಂಗ್' ಮಾಡುವಲ್ಲಿ, ಉಡುಗೆ ತೊಡುಗೆಗಳಲ್ಲಿ, ಊಟತಿಂಡಿ ಮತ್ತು ಪಾನೀಯಗಳಲ್ಲಿ, ಮಾತುಕತೆಗಳಲ್ಲಿ, ಸಂಯಮದಿಂದ ವರ್ತಿಸಬೇಕು. ಹುಟ್ಟಿದ ದೇಶದ ಬಗ್ಗೆ ಇರುವ ಅಭಿಮಾನ, ಆದರ, ನಿಯತ್ತು, ಕಾಳಜಿಗಳು ಅಳವಡಿಸಿಕೊಂಡ ದೇಶದ ಮೇಲೂ ಇದ್ದರೆ ಒಳ್ಳೆಯದು.

ಧರ್ಮ, ದೇವರು

ಧರ್ಮ, ದೇವರುಗಳ ಬಗೆಗಿನ ಭಕ್ತಿ, ಶ್ರದ್ಧೆಗಳು ಎಲ್ಲರಿಗೂ ಇರಬೇಕಾದರೂ ಧರ್ಮದ, ಆಚರಣೆಗಳ, ಅರ್ಥವನ್ನು ತಿಳಿದುಕೊಂಡು, ಎಲ್ಲ ಧರ್ಮಗಳ ಸಂದೇಶಗಳನ್ನು ತಿಳಿದುಕೊಂಡು, ಸಹನಶೀಲರಾಗಿದ್ದರೆ ಈ ಜಗತ್ತಿನಲ್ಲಿ ಶಾಂತಿ ನೆಲೆಸಬಹುದೆಂದು ನನಗನ್ನಿಸುತ್ತದೆ. ಈ ವಿಷಯದಲ್ಲಿ ನನಗೆ ಡಾ. ಶಿವರಾಮ ಕಾರಂತರ ಮತ್ತು ಎ.ಎನ್.ಮೂರ್ತಿರಾಯರ ಚಿಂತನೆಗಳು ಸರಿಯೆನ್ನಿಸುತ್ತವೆ. ನಾನು ಓದಿದ ಎ.ಎನ್. ಮೂರ್ತಿರಾಯರ, 'ಸಂಜೆಗಣ್ಣಿನ ಹಿನ್ನೋಟ' ಮತ್ತು ಡಾ. ಶಿವರಾಮ ಕಾರಂತರ, 'ಕಣ್ಣಿದ್ದೂ ಕಾಣರು' ಗ್ರಂಥಗಳ ಸಾರಾಂಶವನ್ನು ಉಲ್ಲೇಖಿಸುವುದು ಈ ಸಂದರ್ಭದಲ್ಲಿ ಉಚಿತವೆಂದು ನನಗೆ ಅನ್ನಿಸುತ್ತದೆ. ಎ.ಎನ್. ಮೂರ್ತಿರಾಯರ ನುಡಿ: 'ದೇವರನ್ನು ನಂಬುವುದಿಲ್ಲ ಎಂದು ನಾನೇನೂ ಪಣ ತೊಟ್ಟಿಲ್ಲ. ನನ್ನ ಅಪನಂಬಿಕೆ ಪ್ರಯತ್ನಪೂರ್ವಕವಾಗಿ ಬರಮಾಡಿಕೊಂಡಿದ್ದಲ್ಲ. ನಂಬಿಕೆ ಬರಲೊಲ್ಲದು, ಅಷ್ಟೆ! ...ಇತರರಿಗೆ ದೈವಭಕ್ತಿಯಿಂದ ಶಾಂತಿ ಬರುವುದಾದರೆ ಬರಲಿ; ಅದರಿಂದ ಉತ್ತೇಜನ ದೊರಕುವುದಾದರೆ ಅವರ ದೈವಭಕ್ತಿ ಸಂತತವಾಗಿ ಇರಲಿ ಎಂದು ಹಾರೈಸಲೂ ನಾನು ಸಿದ್ಧ. ನನಗೆ ನಂಬಿಕೆ ಬರಲೊಲ್ಲದು, ಅಷ್ಟೆ. ಅಲ್ಲದೆ, ಎಲ್ಲ ಮಾನವರಲ್ಲೂ (ದೈವಭಕ್ತರಲ್ಲೂ ಕೂಡ) ಆಗಾಗ ಕಾಣಿಸಿಕೊಳ್ಳುವ ಮಾನಸಿಕ ಹೊಯ್ದಾಟ ತಳಮಳಗಳಿಗಿಂತ ಹೆಚ್ಚಿನ ಅಶಾಂತಿಯೇನೂ ನನ್ನಲ್ಲಿ ಕಾಣಿಸುತ್ತಿಲ್ಲ! ದೇವರ ಅಸ್ತಿತ್ವದಲ್ಲೇ

ನಂಬಿಕೆಯಿಲ್ಲವಾದ್ದರಿಂದ ಅವನು ಶಿಕ್ಷಿಸಿಯಾನು ಎಂಬ ಭಯವಿಲ್ಲ; ಪೂರ್ವ ಜನ್ಮದಲ್ಲಿ ನಂಬಿಕೆಯಿಲ್ಲವಾದ್ದರಿಂದ ಮುಂದೆ ಕಷ್ಟವನ್ನು ಅನುಭವಿಸಬೇಕಾಗಬಹುದು ಎಂಬ ಶಂಕೆಯಿಲ್ಲ; ದೇಹ ಭಸ್ಮವಾದ ಮೇಲೂ ಉಳಿಯುವ ಆತ್ಮದಲ್ಲಿ ನಂಬಿಕೆಯಿಲ್ಲವಾದ್ದರಿಂದ, 'ಸತ್ತ ಮೇಲೆ ನನ್ನ ಗತಿಯೇನು' ಎಂಬ ಯೋಚನೆಗೆ ಅವಕಾಶವೇ ಇಲ್ಲ. 'ಚಿಂತೆ ಯಾಕೋ, ಮನುಜ' ಎಂದು ಹಾಡಬಹುದು! ನನಗೆ ಇದರಲ್ಲಿ ನಂಬಿಕೆ ಇಲ್ಲ, ಅದರಲ್ಲಿ ನಂಬಿಕೆ ಇಲ್ಲ, ಮತ್ತೊಂದರಲ್ಲಿ ನಂಬಿಕೆ ಇಲ್ಲ – 'ಇಲ್ಲ'ಗಳ ಪಟ್ಟಿ ದೊಡ್ಡದಾಯಿತು. ನನ್ನ ಬದುಕು 'ನ'ಕಾರದ ('ಇಲ್ಲಗಳ') ಭಜನೆಯೋ ಅಥವಾ ನನ್ನ ನಂಬಿಕೆಗೆ ಪಾತ್ರವಾಗಿರುವುದು ಏನಾದರೂ ಉಂಟೋ? ಉಂಟು. ಇಹ ಜೀವನದಲ್ಲಿ ನಂಬಿಕೆ ಉಂಟು... ಲೋಕದಲ್ಲಿ ಸಂಕಟ ಕಡಿಮೆಯಾಗುವಂತೆ, ಸಹಮಾನವರ ಬದುಕು, ಸುಖ ಸಮೃದ್ಧವಾಗುವಂತೆ ಕೈಲಾದದ್ದನ್ನು ಮಾಡುವುದು ಕರ್ತವ್ಯ ಎಂಬ ನಂಬಿಕೆಯುಂಟು... ಬದುಕಿಗಾಗಿ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ'.

ಬಾಲ್ಯದಿಂದಲೂ ಡಾ. ಕಾರಂತರ ಅಭಿಮಾನಿಯಾಗಿ ಬೆಳೆದು ಬಂದ ನನಗೆ, ಅವರ ಪ್ರಾಮಾಣಿಕತೆ ಮತ್ತು ನಿಷ್ಠುರವಾದರೂ ತಮಗೆ ಸತ್ಯವೆನ್ನಿಸಿದುದನ್ನು ಇನ್ನೊಬ್ಬರಿಗೆ ಸಂಕೋಚವಿಲ್ಲದೆ ಹೇಳುವ ಎದೆಗಾರಿಕೆಗಳು ಬಹಳ ಪ್ರಿಯವಾಗಿವೆ. ತಮಗನ್ನಿಸಿದ ಭಾವನೆಗಳನ್ನು ಡಾ. ಕಾರಂತರು ನಿರ್ದಾಕ್ಷಿಣ್ಯವಾಗಿ ಪ್ರಕಟಿಸುವ ಅಭ್ಯಾಸವುಳ್ಳವರು. ಸಂಪ್ರದಾಯವಾಗಿ ನಡೆದುಬಂದ ಕಟ್ಟು ಕಟ್ಟಳೆಗಳನ್ನು ಅಂಧರಂತೆ ಅನುಕರಿಸಿಕೊಂಡು ಬರುವ ಸ್ವಭಾವ ಕಾರಂತರದ್ದಲ್ಲ. ನೂರು ಪ್ರಶ್ನೆಗಳನ್ನು ಕೇಳದೇ ಯಾವ ಸಿದ್ಧಾಂತವನ್ನೂ ಅವರು ನಂಬುವವರಲ್ಲ. ಅವರ ಕಾದಂಬರಿ, 'ಕಣ್ಣಿದ್ದೂ ಕಾಣರು', ಅವರ ನಾಸ್ತಿಕತೆ ಆಸ್ತಿಕತೆಗಳ, ಧರ್ಮ ಮತಗಳ, ಆಚಾರ ವಿಚಾರಗಳ, ಸ್ವರ್ಗ ನರಕಗಳ, ಬಗ್ಗೆ ಇರುವ ಭಾವನೆಗಳ ಸಂಪೂರ್ಣ ವಿವೇಚನೆಯನ್ನು ಮಾಡುತ್ತದೆ. 'ನನ್ನ ಕಣ್ಣಿಗೆ ದೇವರು ಇದ್ದಾನೆ ಅಥವಾ ಇಲ್ಲ ಎಂಬ ಎರಡು ವರ್ಗದವರಲ್ಲಿಯೂ ವ್ಯತ್ಯಾಸ ಕಾಣಿಸುತ್ತಿಲ್ಲ. ಇದೆ ಎಂಬ ವಸ್ತುವಿನ ಯಾವ ಪರಿಚಯವೂ ಇಲ್ಲದ ನಂಬಿಕೆ ಏನು ಮಾಡೀತು? ಇದ್ದಾನೆ ಎನ್ನುವವರು ದೇವರು ಇದ್ದಂತೆ ವರ್ತಿಸದೆ ಇರುವುದನ್ನು ಕಂಡು ಆತ ಇದ್ದೂ ಏನೂ ಪ್ರಯೋಜನವಿಲ್ಲವೆಂಬ ಭಾವನೆಯನ್ನು ಅವರಿಂದ ನಾನು ಪಡೆಯುತ್ತಿದ್ದೇನೆ'– ಇದು ಡಾ. ಶಿವರಾಮ ಕಾರಂತರ 'ಕಣ್ಣಿದ್ದೂ ಕಾಣರು' ಕಾದಂಬರಿಯ ಮುನ್ನುಡಿಯಿಂದ ಆಯ್ದ ತಿರುಳು. ಇದಕ್ಕೆ ನನ್ನ ಮನಸ್ಸು ಸಂಪೂರ್ಣ ಒಪ್ಪಿಗೆಯನ್ನಿತ್ತಿದೆ.

ಧರ್ಮದ ಬಗ್ಗೆ ನನ್ನ ನಿಲುವು

ಇದರಿಂದ ನಾನು ನಾಸ್ತಿಕತೆಯನ್ನು ಪ್ರತಿಪಾದಿಸುತ್ತೇನೆಂದು ತಪ್ಪು ತಿಳಿಯಬಾರದು. ಧರ್ಮದ ತಿರುಳನ್ನು ಅರ್ಥಮಾಡಿಕೊಳ್ಳದೆ ಅಂಧಾನುಕರಣೆ ಮಾಡುವುದರಿಂದ

ಆಗುತ್ತಿರುವ ಅನಾಹುತಗಳನ್ನು ಪರಾಮರ್ಶಿಸಿದಾಗ ನಿಮಗೂ ನನ್ನ ಭಾವನೆಗಳು ಅರ್ಥವಾಗುತ್ತವೆ. ನಿರ್ಬಲರ, ದೀನ ದಲಿತರ, ದುಃಖಿಗಳ ಬಗ್ಗೆ ಇರುವ ಕರುಣೆಯೂ ದೈವಭಕ್ತಿಯಷ್ಟೇ ಮುಖ್ಯವಲ್ಲವೆ? ಜಗತ್ತಿನ ಹಲವಾರು ದೇಶಗಳನ್ನು ಸುತ್ತಿ, ವಿವಿಧ ಧರ್ಮಗಳ ಮೂಲ ಸಂದೇಶಗಳಿಗೂ, ನಡೆಯುತ್ತಿರುವ ಆಚರಣೆಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಿದರೆ, ಕೆಲವೊಮ್ಮೆ ಧರ್ಮಾಂಧತೆಯೇ ಯುದ್ಧಗಳಿಗೆ, ತತ್ಸಂಬಂಧವಾದ ಕೊಲೆ, ಹಿಂಸೆಗಳಿಗೆ ಹೇತುವೆಂದು ಕೊರಗುವಂತಾಗುತ್ತದೆ. ಐರ್‌ಲ್ಯಾಂಡಿನ, ಪ್ಯಾಲಸ್ಟೈನಿನ, ಇತರ ರಾಜಕೀಯ ಸಮಸ್ಯೆಗಳನ್ನು, ಪರಿಶೀಲಿಸಿದರೆ, ಧರ್ಮಾಂಧತೆಯ ಪರಿಣಾಮಗಳನ್ನು ನೋಡಿ ವ್ಯಥೆಯಾಗುತ್ತದೆ. ನಾವೆಲ್ಲರೂ ಮಾನವ ಧರ್ಮವನ್ನೂ ನಂನಮ್ಮ ಸನಾತನ ಧರ್ಮದೊಂದಿಗೆ ಅನುಸರಿಸಿದರೆ, ಆಚರಿಸಿದರೆ, ಪರಧರ್ಮ ಸಹಿಷ್ಣುತೆಯನ್ನು ತೋರಿಸಿದರೆ ನಮ್ಮ ದೇವರುಗಳು ಸಿಟ್ಟಾಗಲಾರರು ಎನ್ನಿಸುತ್ತದೆ! ಈ ವಿಷಯದಲ್ಲಿ ನನ್ನ ನಿರ್ಧಾರದ ಸಾರಾಂಶ: 'ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥ ಕೋಟಿಷು। ಪರೋಪಕಾರಂ ಪುಣ್ಯಾಯ ಪಾಪಾಯ ಪರಪೀಡನಂ॥' (ಕೋಟಿಗ್ರಂಥಗಳಲ್ಲಿ ಹೇಳಿದ ತತ್ತ್ವವನ್ನು ಅರ್ಧ ಶ್ಲೋಕದಲ್ಲಿ ಹೇಳುತ್ತೇನೆ: ಇತರರಿಗೆ ಮಾಡುವ ಉಪಕಾರ ಪುಣ್ಯ, ಇತರರಿಗೆ ಮಾಡುವ ಹಿಂಸೆ ಪಾಪ.)

ಸಂಪತ್ತು ಮತ್ತು ಪ್ರೀತಿ ವಾತ್ಸಲ್ಯಗಳ ಸಂಬಂಧ

ಇನ್ನೊಂದು, ಸದಾ ನನ್ನ ತಲೆ ತಿನ್ನುವ ವಿಷಯವೆಂದರೆ, ಪ್ರೀತಿ, ವಾತ್ಸಲ್ಯಗಳಿಗೂ ಮತ್ತು ಸಂಪತ್ತಿಗೂ ಇರುವ ಸಂಬಂಧ. ನನ್ನ ಹಲವಾರು ಸ್ನೇಹಿತರು ಭಾರತದಲ್ಲಿ ವಾಸಿಸುತ್ತಿದ್ದಾಗ ಇದ್ದಿದ್ದಕ್ಕಿಂತ ಎಷ್ಟೋ ಪಾಲು ಉತ್ತಮವಾದ ಜೀವನಮಟ್ಟವನ್ನು ಇಲ್ಲಿ ಅನುಭವಿಸುತ್ತಿದ್ದರೂ, ಸತಿ, ಪತಿಗಳ, ತಾಯಿತಂದೆಗಳ ಮತ್ತು ಮಕ್ಕಳ ನಡುವಿನ ಸಾಮರಸ್ಯ ಬಹಳ ಕಡಿಮೆಯಾಗಿ ಕಾಣುತ್ತದೆ. ನನ್ನ ಆತ್ಮೀಯ ಸ್ನೇಹಿತರ ವಿವಾಹವು, ಸಾಮರಸ್ಯವಿಲ್ಲದ ಸಂಸಾರದ ಕೊನೆಯ ಹಂತವಾದ, 'ವಿವಾಹವಿಚ್ಛೇದನ'ದಲ್ಲಿ ಅಂತ್ಯಗೊಂಡು, ಮಕ್ಕಳು, ಗಂಡ, ಹೆಂಡತಿ ಎಲ್ಲರೂ ಬೆಂದು, ಬಸವಳಿದುದನ್ನು ಎಷ್ಟೋ ಬಾರಿ ನೋಡಿ ವ್ಯಥೆಪಟ್ಟಿದ್ದೇನೆ. ಸಿರಿವಂತಿಕೆಗೂ ನೆಮ್ಮದಿಗೂ ಸರಳ ಸಂಬಂಧವಿದೆ ಎಂಬ ಹಳೆಯ ನಂಬಿಕೆ ತಲೆಕೆಳಗಾಗಿ, ಇದು ವಿಲೋಮ ಸಂಬಂಧ ಎಂಬ ಹೊಸ ಅನುಭವವಾಗಿ ಇದರಿಂದ ತಡೆಯಲಾರದ ದುಃಖವಾಗುತ್ತದೆ. ಮೂಲಭೂತ ಅಗತ್ಯಗಳು, ಉಂಡುಟ್ಟು ಮಲಗಲು ಕಡಿಮೆ ಇರದಷ್ಟು ಸಂಪತ್ತು ಆದಮೇಲೆ, ಕುಟುಂಬದ ನೆಮ್ಮದಿ ಮುಖ್ಯವೇ ಹೊರತು ವೈಯಕ್ತಿಕ ವಿಜಯ, ಸ್ಪರ್ಧಾತ್ಮಕ ಮನೋಭಾವಗಳು ಎಂದಿಗೂ ಹಿತವಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದೇನೆ. ಇದು ನನ್ನ ಸ್ವಂತ ಅಭಿಪ್ರಾಯ ಅಷ್ಟೆ.

ಬೇರು ಸೂರು

ಕುರು ಭುಂಕ್ಷ್ವ ಚ

ಇನ್ನೊಂದು ವಿಚಾರದಲ್ಲಿ ನನ್ನ ಮನವೆಂಬ ಮರ್ಕಟವು ಸ್ವಚ್ಛಂದ ವಿಹಾರ ಮಾಡಿದೆ – ಇದು ನಮ್ಮ ಪಂಚಭೌತಿಕ ಶರೀರದ ವಿವಿಧ ವಾಸನೆಗಳನ್ನು ತೃಪ್ತಿಪಡಿಸಲು, ಇಲ್ಲಿ ಯಥೇಚ್ಚವಾಗಿ ಸಿಗುವ ಸಾಧನ ಸಾಮಗ್ರಿಗಳ ಉಪಯೋಗದ ಬಗ್ಗೆ – ಇದು ಎಷ್ಟಿರಬೇಕು? ಹೇಗಿರಬೇಕು? ಯಾವ ಮಿತಿಯಲ್ಲಿರಬೇಕು? ಇದಕ್ಕೆ ನಾನು ಕಂಡುಕೊಂಡ ಉತ್ತರವನ್ನು ಸಂಕ್ಷಿಪ್ತವಾಗಿ ಹೇಳಿ ಮುಗಿಸುತ್ತೇನೆ – 'ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ' – ಎಲ್ಲವೂ ಇರಲಿ, ಆದರೆ ಹಿತಮಿತವಾಗಿರಲಿ! ಇದಕ್ಕಿಂತ ಹೆಚ್ಚು ಇದರ ಬಗ್ಗೆ ವಿವರಿಸಿ ಹೇಳಬೇಕಾದ ಅಗತ್ಯವಿಲ್ಲ! ಇದು ನನ್ನ ಕೊನೆಯ ನಿರ್ಣಯ!

ಸಾರಾಂಶ

ಹಾಗಾದರೆ ಇಲ್ಲಿನ ಪರಿಸರಕ್ಕೆ ಅಳವಡಿಸಿಕೊಳ್ಳಲು ನಾವು ಏನು ಮಾಡಬೇಕು? ಇಲ್ಲಿನವರ ಒಳ್ಳೆಯ ಗುಣಗಳಾದ ಕಾರ್ಯತತ್ಪರತೆ, ಸಮಯನಿಷ್ಠೆ, ಉಚ್ಚ–ನೀಚವೆಂಬ ಭೇದವಿಲ್ಲದ ವೃತ್ತಿ ಸಮಾನತೆ, ವೃತ್ತಿಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ, ನೈರ್ಮಲ್ಯ, ಆಜೀವ ಪರ್ಯಂತ ಜ್ಞಾನಾರ್ಜನೆ ಮಾಡುವ ಅಭ್ಯಾಸ, ಇನ್ನೊಬ್ಬರಿಗೆ ಸಹಾಯ ಮಾಡುವ ಮನೋಧರ್ಮ, ಸ್ವಯಂಸೇವಕ ಮನೋಭಾವ, ಇತ್ಯಾದಿಗಳನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕು. ಒಂದು ಸಂಸ್ಥೆ ಅಥವಾ ಕೂಟವನ್ನು ರಚಿಸಿದಾಗ ಅದರ ಬೆಳವಣಿಗೆಗಾಗಿ ಯಾವುದೇ ರಾಜಕೀಯವನ್ನು ತೋರದೆ, ಸ್ವಲಾಭಕ್ಕಿಂತ ಸಂಸ್ಥೆಯ ಶ್ರೇಯಸ್ಸು ಮುಖ್ಯವೆಂದು ದುಡಿಯುವ ಅಭ್ಯಾಸ ಇಲ್ಲಿನವರಿಂದ ಕಲಿತುಕೊಳ್ಳಬೇಕು. ವರ್ಷದಲ್ಲಿ ಕಡಿಮೆಯೆಂದರೆ ನಲವತ್ತು ಘಂಟೆಗಳ ಸಮಾಜಸೇವೆಯನ್ನು ಯಾವುದೇ ಒಳ್ಳೆಯ ಕಾರ್ಯಕ್ಕಾಗಿ ಮೀಸಲಿಡಬೇಕು.

ಗುರು, ಹಿರಿಯರ ಬಗೆಗೆ ಇರುವ ಗೌರವ, ಆದರಗಳಲ್ಲಿ, ಅತಿಥಿ, ಅಭ್ಯಾಗತರ ಉಪಚಾರದಲ್ಲಿ, ಸ್ನೇಹಿತ, ಬಂಧುಗಳ ಕಡೆಗೆ ಇರುವ ಆತ್ಮೀಯತೆಯಲ್ಲಿ ನಮ್ಮ ಒಳ್ಳೆಯ ಗುಣಗಳನ್ನೇ ಇರಿಸಿಕೊಳ್ಳಬೇಕು. ಸಿರಿ, ಸಂಪದಗಳಿಂದ ನಮಗೆ ಅಹಂಕಾರ ಬರದಿರಲಿ. ನಮ್ಮ ಮೂಲವನ್ನು ಮರೆಯದೇ, ಇಲ್ಲಿನ ದೈನಂದಿನ ವ್ಯವಹಾರಗಳನ್ನು ಸಮಾಜದ ಕಟ್ಟುಕಟ್ಟಳೆಗಳನ್ನು ಮೀರದೆ ಅನುಸರಿಸುವ ಸೌಜನ್ಯವಿರಲಿ. ಇಲ್ಲಿನ ಬ್ಯಾಲೆಗಳು, ಒಪೇರಗಳನ್ನು, ನೋಡಿ ನೀವು ಮಕ್ಕಳ ಜೊತೆಗೆ ಆನಂದಿಸಿ. ನಮ್ಮ ಇಡ್ಲಿ ದೋಸೆಗಳ ಜತೆಗೆ, ಇಲ್ಲಿನ ಪಿಜ್ಜಾ, ಬರೀಟೊಗಳನ್ನೂ ಆನಂದಿಸಿ. ನಮ್ಮ ಸಂಸ್ಕೃತಿ, ಉಡುಗೆ ತೊಡುಗೆಗಳ ಬಗ್ಗೆ ಗೌರವವಿರಲಿ, ಹಾಸ್ಯ ಬೇಡ. ಆಫೀಸಿನ ಉಡುಗೆ–ತೊಡುಗೆಗಳು, ಆಚಾರ–ವಿಚಾರಗಳು, ಸಹೋದ್ಯೋಗಿಗಳೊಂದಿಗೆ ನಡೆದುಕೊಳ್ಳುವ ಬಗೆಗಳು, ಎಲ್ಲ ಇಲ್ಲಿನಂತೆಯೇ ಇರಲಿ. ಮನೆಯಲ್ಲಿ ಆದಷ್ಟು ನಮ್ಮ ಸಂಪ್ರದಾಯವನ್ನು ಉಳಿಸಿ

ಬೆಳೆಸಿಕೊಳ್ಳಿ.

ಮಕ್ಕಳಿಗೆ ಸಮಯ, ಸಂದರ್ಭಗಳಿಗೆ ಸೂಕ್ತವಾಗಿ ನಮ್ಮ ಆಚಾರ–ವಿಚಾರಗಳ ಬಗ್ಗೆ ತಿಳಿಸಿ, ನೀವೂ ತಿಳಿದುಕೊಳ್ಳಿ. ನಮ್ಮ ಕಲಾವಿದರು, ಸಾಹಿತಿಗಳು, ಸಂಗೀತಗಾರರು ಬಂದಾಗ ಅವರು ನಡೆಸುವ ಕಾರ್ಯಕ್ರಮಗಳಿಗೆ ನೀವೂ ಹೋಗಿ, ನಿಮ್ಮ ಮಕ್ಕಳನ್ನೂ ಕರೆದುಕೊಂಡು ಹೋಗಿ, ಅವರಿಗೆ ಆದಷ್ಟು ವಿವರಿಸಿ ಹೇಳಿ. ಕಲಾವಿದರನ್ನು ನಿಮ್ಮ ಮನೆಗಳಿಗೆ ಆಹ್ವಾನಿಸಿ, ನಿಮ್ಮ ಮಕ್ಕಳಿಗೆ ಅವರೊಡನೆ ಮಾತಾಡುವ ಅವಕಾಶ ಮಾಡಿಕೊಡಿ. ಕನ್ನಡದ ಸಿನೆಮಾಗಳು, ಧ್ವನಿಸುರುಳಿಗಳು, ನಾಟಕಗಳು ಇತ್ಯಾದಿಗಳನ್ನು ತಂದು ಮನೆಯಲ್ಲಿ ಎಲ್ಲರೂ ಕುಳಿತು ನೋಡಿ ಕೇಳಿ ಆನಂದಿಸಿ. ನಮ್ಮ ಸಾಂಪ್ರದಾಯಿಕ ಉಡುಗೆ–ತೊಡುಗೆಗಳನ್ನು ಮನೆಯಲ್ಲಿ, ನಮ್ಮ ಕಾರ್ಯಕ್ರಮಗಳಲ್ಲಿ ಧಾರಾಳವಾಗಿ ಉಟ್ಟು, ತೊಟ್ಟು ಆನಂದಿಸಿ. ಎರಡು, ಮೂರು ವರ್ಷಗಳಿಗೊಮ್ಮೆಯಾದರೂ ಭಾರತವನ್ನು ಸಂದರ್ಶಿಸಿ ಬಂಧು ಮಿತ್ರರನ್ನು, ಸುಂದರವಾದ ಮಂದಿರಗಳನ್ನು, ಪ್ರಕೃತಿ ಸೌಂದರ್ಯಗಳನ್ನು ಮಕ್ಕಳಿಗೆ ತೋರಿಸಿ. ನಮ್ಮ ಅಡುಗೆಗಳ ಬಗ್ಗೆ ಅವರಿಗೆ ಆಸಕ್ತಿ ಬರುವಂತೆ ಮಾಡಿ.

ನನ್ನ ಗುರಿ ಸಾಧಿಸಿದೆನೇ? 'ಮಿಷನ್ ಅಕಾಂಪ್ಲಿಷ್ಡ್'?

ಇಷ್ಟೆಲ್ಲ ಪುರಾಣಗಳನ್ನು ಹೇಳಿದ ಮೇಲೆ, ನನ್ನ ಇತ್ತೀಚಿನ ಅನುಭವಗಳನ್ನು ಹೇಳಲೇಬೇಕು ಎಂದೆನಿಸುತ್ತದೆ. ಕಾಲಚಕ್ರ ಒಂದೇ ಸಮನೆ ಓಡುತ್ತಿದೆ. ಮಕ್ಕಳ ಹುಟ್ಟಿದಹಬ್ಬ, ಹೈಸ್ಕೂಲ್ ಗ್ರಾಜ್ಯುಯೇಶನ್, ಕಾಲೇಜ್ ಗ್ರಾಜ್ಯುಯೇಶನ್, ಮದುವೆಯ ಹತ್ತನೇ ವರ್ಷದ ಆಚರಣೆ, ಇತ್ಯಾದಿ ಘಟನೆಗಳ ಆಚರಣೆಯ ಬದಲಿಗೆ ಈಗ ಮದುವೆಯ ರಜತ ಮಹೋತ್ಸವ, ರಿಟೈರ್‌ಮೆಂಟ್ ಪಾರ್ಟಿಗಳು, ಷಷ್ಠ್ಯಬ್ಧಿ ಪೂರ್ತಿ ಶಾಂತಿ, ಸುದರ್ಶನ ಹೋಮ, ಇತ್ಯಾದಿ ಆಚಾರಣೆಗಳು ಪ್ರಾರಂಭವಾಗಿವೆ. ಮಧ್ಯವಯಸ್ಸಿನ ನನ್ನ ಮನಸ್ಸಿನ ತುಮುಲವನ್ನು, 2002ರಲ್ಲಿ ಡೆಟ್ರಾಯಿಟ್ ನಗರದಲ್ಲಿ ನಡೆದ 'ಅಕ್ಕ' ಸಮ್ಮೇಳನದ ಸ್ಮರಣ ಸಂಚಿಕೆ ಸ್ಪಂದನದಲ್ಲಿ, 'ಮಧ್ಯವಯಸ್ಸಿನಲ್ಲಿ ಮನೋದ್ವಂದ್ವ' ಎಂಬ ಲೇಖನದಲ್ಲಿ ವಿವರಿಸಿದ್ದೆ. ಚಿಕಾಗೋ ಕನ್ನಡ ಸಮ್ಮೇಳನದ ಸ್ಮರಣ ಸಂಚಿಕೆ, 'ಮಂಥನ'ದಲ್ಲಿ, 'ಅರುವತ್ತರ ಅಂಚಿನಲ್ಲಿ' ಎಂಬ ಶೀರ್ಷಿಕೆಯಲ್ಲಿ ನನ್ನ ಅನುಭವಗಳನ್ನು ಓದುಗರ ಜತೆ ಹಂಚಿಕೊಂಡಿದ್ದೆ. ನಾನು ಬದಲಾಗುತ್ತಿದ್ದೇನೆ. ಇತ್ತೀಚೆಗೆ ನಾನು ಅಂತರ್ಮುಖಿ ಆಗುತ್ತಿದ್ದೇನೆ, ವಸ್ತು ವ್ಯಾಮೋಹ ಕಡಿಮೆ ಆಗುತ್ತಿದೆ (ಶಾಪಿಂಗ್‌ಗೆ ತನ್ನ ಜತೆಗೆ ಬರುತ್ತಿಲ್ಲವೆಂದು ನಳಿನಿ ಬೇಸರಪಡುತ್ತಾಳೆ!), ಸಾಮಾಜಿಕ ಚಟುವಟಿಕೆಗಳಲ್ಲೂ ಬಹಳ ಆಯ್ದು ವಿಶೇಷ ಸಮಾರಂಭಗಳಿಗೆ ಮಾತ್ರ ಹೋಗುತ್ತೇನೆ. ಬದುಕಿನ ಮೊದಲ ಹಂತಗಳಾದ ಮೂಲಭೂತ ಸಮಸ್ಯೆಗಳು (ಊಟ, ವಸತಿ, ಸುರಕ್ಷಿತ ಜೀವನೋಪಾಯ) ಕೈಗೂಡಿ, ಇದ್ದ ಸ್ವಲ್ಪ 'ಇಗೊ' ಕಡಿಮೆ ಆಗಿ, ಈಗ ನನ್ನ ಒಲವು

ಮುಂದೇನು ಎಂದು ಯೋಚಿಸುತ್ತಿದೆ. ಭವಿಷ್ಯದ ಭಯವಿಲ್ಲದೆ ಇರುವುದರಿಂದ ಪ್ರಸ್ತುತ ನಡೆಯುತ್ತಿರುವ ದೈನಂದಿನ ಘಟನೆಗಳ ಬಗ್ಗೆ ಯೋಚನೆ ಕಡಿಮೆ ಮಾಡಿ, ಉಳಿದ ಆಯುಷ್ಯವನ್ನು ಹೇಗೆ ಸಾರ್ಥಕವಾಗಿ ಬಳಸಬೇಕೆಂದು ಯೋಜನೆ (ಯೋಚನೆ ಅಲ್ಲ!) ಮಾಡುತ್ತಿದ್ದೇನೆ.

ನನ್ನ ಕಾಲೇಜಿನ ದಿನಗಳಲ್ಲಿ ನಾನು ನೂರಾರು ಕನಸುಗಳನ್ನು ಕಂಡಿದ್ದೆ. ಸ್ನೇಹಿತರ ಜತೆ ಹರಟೆ ಹೊಡೆಯುವಾಗ, ಅಕ್ಕ, ತಂಗಿ, ತಮ್ಮಂದಿರ ಜತೆ ಮಾತಾಡುವಾಗ, ಒಬ್ಬನೇ ಮನೆಯ ಚಾವಡಿಯಲ್ಲೋ, ಬಯಲು ಗದ್ದೆಗಳ ಅಂಚಿನಲ್ಲೋ, ಗುಡಿಯ ಸಮೀಪದ ಕೆರೆಯ ದಡದಲ್ಲೋ, ಏಕಾಂತವಾಗಿ ಕುಳಿತಾಗಲೋ, ಇನ್ನಿತರ ಸಂದರ್ಭಗಳಲ್ಲಿ ನಮ್ಮ ಮುಂದಿನ ಭವಿಷ್ಯದ ಬಗ್ಗೆ ವಿವಿಧ ಸುಂದರವಾದ ಸವಿಗನಸುಗಳನ್ನು ಹೆಣೆದ ಜ್ಞಾಪಕವಿದೆ. ಸುಮಾರು ನಲವತ್ತು ವರುಷಗಳ ಹಿಂದೆ ನನ್ನ ಕಾಲೇಜಿನ ದಿನಗಳಲ್ಲಿ ನಮ್ಮ ಇಂಜಿನಿಯರಿಂಗ್ ಕಾಲೇಜಿನ ಪತ್ರಿಕೆಯಲ್ಲಿ, ದೇವರು ಧರ್ಮಗಳ ಬಗ್ಗೆ– 'ನಾವೇನು ಓದಿಲ್ಲ ವೇದ ಶಾಸ್ತ್ರದ ಕಂತೆ...' ಕವನ ಬರೆದು ನನ್ನ ಜೀವನದ ಗುರಿಯನ್ನು ನನ್ನ ಸ್ನೇಹಿತ, ಸ್ನೇಹಿತೆಯರ ಜತೆ ಹಂಚಿಕೊಂಡಿದ್ದೆ (ನಮ್ಮ ಹಿರಿಯರಿಂದ ಬೈಸಿಕೊಂಡಿದ್ದೆ). ಏಕಾಂತದಲ್ಲಿದ್ದಾಗ ನನ್ನವಳೊಡನೆ ಶ್ರೀ ಕೆ.ಎಸ್. ನರಸಿಂಹ ಸ್ವಾಮಿ ಅವರ ಭಾವಗೀತೆ, 'ಬಲು ದೂರ ಬಂದಿಹೆವು, ಉರುಳಿಹುದು ಬಹುಕಾಲ...' ಹಂಚಿಕೊಂಡಿದ್ದೇನೆ.

ನಮ್ಮ ಕನಸುಗಳಲ್ಲಿ, ಅದರಲ್ಲೂ ಪ್ರಾಮುಖ್ಯವಾದುದು ನಮ್ಮ ಸಂಸಾರ ಹೇಗೆ ಕಟ್ಟಬೇಕು, ಹೇಗೆ ಸುಖ ಅನುಭವಿಸಬೇಕು, ನಮ್ಮನ್ನು ನಂಬಿದವರನ್ನು ಹೇಗೆ ನೋಡಿಕೊಳ್ಳಬೇಕು, ಎಲ್ಲಕ್ಕಿಂತಲೂ ಮಿಗಿಲಾಗಿ ನಾನು, ನಮ್ಮೂರಿನಲ್ಲಿ ಯಾರೂ ಸಾಧಿಸದಿದ್ದ ಮಹತ್ವಾಕಾಂಕ್ಷೆಯ ಕೆಲಸಗಳನ್ನು ಮಾಡಿ ಎಲ್ಲರಿಂದಲೂ ಸೈ ಎನ್ನಿಸಿಕೊಳ್ಳಬೇಕು ಎಂಬ ಚಿಂತನೆ. ಇವೆಲ್ಲ ಕನಸಾಗಿಯೇ ಉಳಿದವೇ ಅಥವಾ ನಾನು ನನ್ನ ಬದುಕಿನಲ್ಲಿ ಏನಾದರೂ ಸಾಧಿಸಿದ್ದೇನೆಯೇ ಎಂಬ ಪ್ರಶ್ನೆ ಆಗಾಗ ಸಹಜವಾಗಿಯೇ ಕಾಡುತ್ತದೆ. ಇಂಗ್ಲಿಷಿನಲ್ಲಿ, 'ಮಿಷನ್ ಅಕಾಂಪ್ಲಿಷ್ಡ್' ಎಂಬಂತೆ ನನ್ನ ಜೀವನದ ಗುರಿ ನಾನು ಮುಟ್ಟಿದ್ದೇನೆಯೇ ಎಂಬ ಯೋಚನೆ ಆಗಾಗ ಬರುತ್ತದೆ.

ತಾಯ್ನಾಡನ್ನು ಬಿಟ್ಟು ಮೂವತ್ತೈದು ವರುಷಗಳಾದುವು. ಹುಟ್ಟೂರನ್ನು ಬಿಟ್ಟು ನಲವತ್ತೈದು ವರುಷಗಳಾದುವು. ನಮ್ಮೂರಿಗಿಂತ, ಇಲ್ಲಿ ಅಮೇರಿಕದಲ್ಲಿ ಜಾಸ್ತಿ ದಿನಗಳನ್ನು ಕಳೆದುದರಿಂದ ಇದೇ ನಮ್ಮ ತಾಯ್ನಾಡೆನ್ನಬಹುದೆ? ನಮ್ಮ ಸುಖ ನೆಮ್ಮದಿಗಳ ಪರ್ಯಟನೆಯಲ್ಲಿ ನಮ್ಮ ತಾಯ್ನಾಡನ್ನು ಮರೆತೆವೆ? ನಮ್ಮ ಭಾಷೆ ಸಂಸ್ಕೃತಿಗಳಿಂದ ನಮ್ಮ ಮಕ್ಕಳನ್ನು ದೂರವಿರಿಸಿ ಅವರಿಗೆ ಅನ್ಯಾಯ ಮಾಡಿದೆವೆ? ಅವರನ್ನು ದ್ವಂದ್ವಕ್ಕೆ ಸಿಲುಕಿಸಿದೆವೆ? ಅವರ ತಾಯಿ ಬೇರನ್ನು ಕಡಿದು ಅವರಿಗೆ ಅನ್ಯಾಯ ಮಾಡಿದೆವೆ? ಇವೆಲ್ಲ ಆಗಾಗ ತಲೆತಿನ್ನುವ ವಿಚಾರಗಳು.

ಬೇರು ಸೂರು

ನಾನೇನು ಸಾಧಿಸಿದೆ?

ಒಳ್ಳೆಯ ರೀತಿಯಲ್ಲಿ ವಿದ್ಯಾಭ್ಯಾಸ ಮುಗಿಸಿ, ಉತ್ತಮವಾದ ಕೆಲಸ ಇದ್ದರೂ ಹೊಸ ಸಾಹಸ ಮಾಡುವ ಮಹತ್ವಾಕಾಂಕ್ಷೆಯಿಂದ ಅಮೇರಿಕೆಗೆ ಬಂದೆ. ಮದುವೆಯಾದ ಮಡದಿಯ ಮನ ಒಲಿಸಿ ಇಲ್ಲೇ ನಮ್ಮ ಕನಸಿನ ರಾಜ್ಯ ಕಟ್ಟುವ ಯೋಜನೆ ಮಾಡಿದೆವು. ಉದ್ಯೋಗವನ್ನರಸಿ ಅಮೇರಿಕಾಗೆ ಬಂದು, ಸನ್ನಿವೇಶದ ಶಿಶುವಾಗಿ, ಇಲ್ಲಿನ ಪರಿಸರ, ಜೀವನ ಕ್ರಮ, ನಡೆನುಡಿಗಳಿಗೆ ಹೊಂದಿಕೊಂಡು ಇಲ್ಲಿನ ಹಾಗೂ ಭಾರತದ ಸಿಹಿ, ಕಹಿಗಳೆರಡನ್ನೂ ಅಳವಡಿಸಿಕೊಂಡು ಈ ತುಲನೆಯಲ್ಲಿ ನಮ್ಮ ಜೀವನವನ್ನು ಸಫಲ ಮಾಡಿಕೊಂಡಿದ್ದೇವೆ ಎಂದು ಅನ್ನಿಸುತ್ತದೆ. ಮಕ್ಕಳೂ ಬೆಳೆದು ಉತ್ತಮ ವಿದ್ಯಾಭ್ಯಾಸ ಹೊಂದಿ, ತಮ್ಮ ನೆಚ್ಚಿನ ಬಾಳಸಂಗಾತಿಗಳನ್ನು ಆರಿಸಿಕೊಂಡು ತಮ್ಮ ಹೊಸ ಕನಸುಗಳನ್ನು ಕಟ್ಟಿಕೊಂಡಿದ್ದಾರೆ. ಇತ್ತೀಚೆಗೆ ನಮಗೊಬ್ಬ ಮೊಮ್ಮಗನಾಗಿ ನಮ್ಮ ಕನಸುಗಳೆಲ್ಲ ನನಸಾದಂತೆ ಭಾಸವಾಗುತ್ತಿದೆ.

ಇನ್ನೂ ನಾನು ಸಾಧಿಸಬೇಕಾದುದು ಬೇಕಾದಷ್ಟಿದೆ. ಹುಟ್ಟಿದ ಮನುಷ್ಯರೆಲ್ಲ ಸುಖ ಅನುಭವಿಸುವ ಗುಣ ಉಳ್ಳವರೇ. ನಮಗೂ ಅವರೆಲ್ಲರಿಗೂ ಭೇದ ಏನು? ಮೋಕ್ಷ ಬೇಕೆಂಬ ಆಸೆ ಇಲ್ಲ, ಕಷ್ಟಪಡಬಾರದೆಂಬ ಯೋಚನೆ ಇಲ್ಲ. ಹುಟ್ಟಿದ್ದಕ್ಕೆ ನಾಲ್ಕು ಜನರಿಗೆ ಉಪಯೋಗವಾಗುವಂತಹ ಕೆಲಸ ಮಾಡಬೇಕೆಂಬ ಆಸೆ ಇದೆ. ವೃದ್ಧಾಪ್ಯದ ಬಗ್ಗೆ ಹೆದರಿಕೆ ಇಲ್ಲ. 'ವಿನಾದೈನ್ಯೇನ ಜೀವನಮ್, ಅನಾಯಾಸೇನ ಮರಣಮ್' ಎಂಬ ಧ್ಯೇಯ ವಾಕ್ಯ ಇದ್ದೇ ಇದೆ. ಬದುಕಿನ ಸುಖವನ್ನು, ದುಃಖವನ್ನು ಸಮನಾಗಿ ಕಂಡುಕೊಂಡಿದ್ದೇನೆ. ಇತರರಿಗೆ ನನ್ನ ಬಾಲ್ಯ ಜೀವನ ಕಷ್ಟಕರವಾಗಿತ್ತೆಂದು ಅನಿಸಿದರೂ, ನನಗೆ ಹಾಗೇನೂ ಅನಿಸುತ್ತಿಲ್ಲ. 'ಪುನರಪಿ ಜನನಮ್, ಪುನರಪಿ ಮರಣಂ' ಎಂಬುದರಲ್ಲಿ ನನಗೆ ಏನೂ ವ್ಯಥೆ ಇಲ್ಲ. ನನ್ನ ಪಾತ್ರ ಈ ವಿಶ್ವದಲ್ಲಿ ತೃಣ ಮಾತ್ರವೆಂದು ಮನದಟ್ಟಾಗಿದೆ. ನನ್ನ ಜೀವನದಿಂದ ನನ್ನ ಮಕ್ಕಳು, ಇತರ ಒಡನಾಡಿಗಳು ಏನಾದರೂ ಕಲಿತಿದ್ದರೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಭಾರತದಲ್ಲೇ ಉಳಿದಿದ್ದರೆ ನನ್ನ ಅನುಭವ ಬೇರೆ ಇರುತ್ತಿತ್ತು, ಆದರೆ ಇಲ್ಲಿನ ಅನುಭವಕ್ಕಿಂತ ಸುಖಕರವಾಗಿರುತ್ತಿತ್ತೆಂದು ನನಗನ್ನಿಸುವುದಿಲ್ಲ. ಜೀವನದಲ್ಲಿ ಕೆಲವೊಮ್ಮೆ ದೈನ್ಯತೆಯ ಅನುಭವವಾಗಿದೆ, ಆದರೆ ಮರಣವನ್ನು ಅನಾಯಾಸವಾಗಿ ಅನುಭವಿಸಬೇಕೆಂಬ ಯೋಜನೆ ಮಾಡಿದ್ದೇನೆ. ನಾನು ಕಂಡಿದ್ದ ಕನಸುಗಳು ನನಸಾಗಿವೆಯೆಂದು ತುಂಬಾ ಸಂತೋಷವಾಗಿದೆ. 'ಮಿಷನ್ ಅಕಾಂಪ್ಲಿಷ್ಡ್' ಎಂಬ ಫಲಕವನ್ನು ನನ್ನ ಬದುಕಿನ ಮೇಲೆ ಹಾಕಬಹುದೆಂಬ ಸಮಾಧಾನ ಆಗಿದೆ. ಇದಕ್ಕೆ ಸಹಾಯ ಮಾಡಿದ ನನ್ನ ಕುಟುಂಬದವರಿಗೂ, ಸ್ನೇಹಿತರಿಗೂ, ಗುರು, ಹಿರಿಯರಿಗೂ ಆಭಾರಿಯಾಗಿದ್ದೇನೆ.

2002ರ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನದ ಸ್ಮರಣ ಸಂಚಿಕೆ, 'ಸ್ಪಂದನ'ದ ಪ್ರಧಾನ ಸಂಪಾದಕತ್ವದ ಅನುಭವಗಳನ್ನು ಸಂಪಾದಕೀಯವಾಗಿ ದಾಖಲಿಸಿದ್ದೇನೆ.

ಬೇರು ಸೂರು

ಸ್ಮರಣಸಂಚಿಕೆಯಲ್ಲಿ ನಾನು ಬರೆದ ಶೀರ್ಷಿಕೆಯ ಕವನ, 'ಸ್ಪಂದನ' ನನ್ನ ಮನಸ್ಸಿನ ಸ್ಪಂದನವನ್ನೇ ಅಭಿವ್ಯಕ್ತಿಸುತ್ತದೆ. ನಾವು ಹುಟ್ಟಿದೂರನ್ನು ಬಿಟ್ಟು ಇಲ್ಲಿಗೆ ಬಂದು ನೆಲೆಸಿದ ಬಗ್ಗೆ ದ್ವಂದ್ವ ಬಂದಾಗ ಬರೆದ ಕವನ ನನ್ನ ಮನಸ್ಸಿನ ತುಮುಲವನ್ನು ತೋರಿಸುತ್ತದೆ. 1985ರಲ್ಲಿ 'ಅಮೇರಿಕನ್ನಡ'ದ ಮೊದಲ ಸಂಚಿಕೆಯನ್ನು ದಿವಂಗತ ಶ್ರೀ ಹರಿಹರೇಶ್ವರರು ಪ್ರಕಟಿಸಿದಾಗ, ಡಾ. ಜಯರಾಮ ಉಡುಪರು ತಮ್ಮ ಕೈಬರವಣಿಗೆಯಲ್ಲಿ ಎಲ್ಲ ಲೇಖನಗಳನ್ನು ಬರೆದು ಪ್ರಕಟಿಸಿದುದನ್ನು ನಾವು ಎಂದೂ ಜ್ಞಾಪಿಸಿಕೊಳ್ಳಬಹುದು.

ಇನ್ನೊಮ್ಮೆ ನನ್ನ ಬಾಳನ್ನು ಇಲ್ಲಿ ಪ್ರಾರಂಭಿಸುವ ಅವಕಾಶ ಸಿಕ್ಕಿದರೆ, ನನ್ನ ಮಕ್ಕಳಿಗೆ ಜಾಸ್ತಿ ಸ್ವತಂತ್ರವಾಗಿ ಬೆಳೆಯುವ ಅವಕಾಶ ಕೊಡುತ್ತಿದ್ದೇನೊ! ನಾನೂ ಇನ್ನೂ ಇಲ್ಲಿನ ಜೀವನ ಕ್ರಮಕ್ಕೆ ಜಾಸ್ತಿ ಅಳವಡಿಸಿಕೊಳ್ಳುತ್ತಿದ್ದೇನೊ! ಇದರ ಬಗ್ಗೆ ಚಿಂತಿಸಿ ಫಲವಿಲ್ಲ. 'ಬದುಕೇ ಸಾಹಸವೆಂಬ ತತ್ತ್ವ ನಮ್ಮದೆಲ್ಲ.' ಆದುದರಿಂದ ಉಳಿದ ಬದುಕನ್ನೂ ಸಾಹಸವೆಂದೇ ತಿಳಿದು ಬದುಕುತ್ತೇನೆ.



ಎರಡು ದೇಶಗಳ ಕೊಡುವಳಿ

– ಸುಧಾ ಆಚಾರ್ಯ

ಕನ್ನಡ ಸಾಹಿತ್ಯ ರಂಗದಿಂದ ಒಬ್ಬರು ನನಗೆ ಫೋನ್ ಮಾಡಿ 'ಕನ್ನಡದಲ್ಲಿ ಒಂದು ಲೇಖನ ಬರೆಯಿರಿ ಅಮೆರಿಕಾದಲ್ಲಿ ನಿಮ್ಮ ಜೀವನದ ಬಗ್ಗೆ' ಅಂದಾಗ, ನನಗೆ ಕೊಂಚ ಗಾಬರಿಯಾಯಿತು. ನ್ಯೂಯಾರ್ಕಿಗೆ ಬಂದು 43 ವರ್ಷಗಳಾದುವು. ಎಷ್ಟೋ ವರ್ಷಗಳಿಂದ ಮನಸ್ಸಿನಲ್ಲಿ ಯೋಚನೆ ಮಾಡುವುದು ಯಾವುದು ಇಂಗ್ಲಿಷ್‌ನಲ್ಲಿ, ಯಾವುದು ಕನ್ನಡದಲ್ಲಿ ಅನ್ನುವುದು ಕೂಡ ತಲೆಗೆ ಬರುವುದಿಲ್ಲ. ಇನ್ನು ಅಪ್ಪಟ ಕನ್ನಡದಲ್ಲಿ ಲೇಖನ ಬರೆಯುವುದು ಹೇಗೆ? ಆದರೆ ಹಾಗೆ ನನ್ನನ್ನು ಕೇಳಿದವರು ನನ್ನ ಹಳೆಯ ಸ್ನೇಹಿತರು. ತುಂಬಾ ವರ್ಷಗಳಿಂದ ನಮ್ಮ ಪರಿಚಯ. ಅವರು ಹೇಳಿದ ಮೇಲೆ ಧೈರ್ಯ ಮಾಡೇಬಿಡೋಣ ಅಂದುಕೊಂಡು ಪ್ರಯತ್ನಿಸುತ್ತಿದ್ದೇನೆ.

ಇಲ್ಲಿಗೆ ನಾನು ಬಂದಿದ್ದು 1969ರಲ್ಲಿ. ಈ ನಾಲ್ಕು ದಶಕಗಳಲ್ಲಿ ನನ್ನ ಪ್ರಪಂಚ ತುಂಬಾ ಬದಲಾಗಿದೆ. ಹೊರದೇಶಕ್ಕೆ ಬಂದು ನೆಲೆಸಿದಾಗ ಬದಲಾವಣೆಗಳಾಗುವುದು ಸಹಜ. ಎಲ್ಲಾ ವಿಷಯಗಳನ್ನು ಬರೆದು ಬೋರ್ ಮಾಡುವುದಿಲ್ಲ! ಕೆಲವು ಮುಖ್ಯವಾದ ಅನುಭವಗಳು ಮತ್ತು ಅವುಗಳು ಯಾವ ರೀತಿ ನನ್ನ ಮೇಲೆ ಪರಿಣಾಮ ಬೀರಿದ್ದಾವೆ ಅನ್ನುವುದರ ಬಗ್ಗೆ ಬರೆಯುತ್ತೇನೆ. ಈ ಲೇಖನದ ಪ್ರಸ್ತುತತೆಗೆ ನನಗೆ ಮುಖ್ಯ ಅನಿಸಿದ್ದು–

1. ಹೊರಗಡೆ ಕೆಲಸವೇ ಮಾಡಿಲ್ಲದವಳಿಗೆ ಇಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು ಮತ್ತು ಅದರಿಂದ ನನಗಾದ ಅನುಭವ.
2. ಸಮಾಜಸೇವಕಿಯಾಗಿ ನನ್ನ ಅನುಭವ– ಇದರಲ್ಲಿ ಸೆಪ್ಟೆಂಬರ್ ಹನ್ನೊಂದರ ತೀವ್ರ ಅನುಭವವೂ ಸೇರಿದೆ.
3. ಹೊರನಾಡಿನಲ್ಲಿ ಬಂದು ನೆಲೆಸಿರುವ ಭಾರತೀಯರಿಗೆ ಕೊಂಚ ಮೊದಲು ಬಂದು ನೆಲೆಸಿರುವಂಥ ನಮ್ಮಿಂದ ಏನು ಸಹಾಯ ಬೇಕಾಗಿದೆ ಎನ್ನುವುದರ ಬಗ್ಗೆ ಕೊಂಚ ಆಲೋಚನೆ.

ನಾನು ನನ್ನ ಬಗ್ಗೆ ಯಾವುದೇ ವಿಷಯಗಳನ್ನು ಬರೆಯಬೇಕಾದರೂ ಮೊದಲು ನಮ್ಮ ತಂದೆತಾಯಿಯರ ಪ್ರಭಾವ ಎಷ್ಟರಮಟ್ಟಿಗೆ ನನ್ನ ಮೇಲಾಗಿದೆಯೆಂದು ಹೇಳಲೇಬೇಕು. ನಮ್ಮ ತಂದೆ ಕೆ. ವಿ. ರಾವ್ ಮೈಸೂರು ಸರಕಾರದಲ್ಲಿ ಸೂಪರಿಂಟೆಂಡಿಗ್ ಇಂಜಿನಿಯರ್ ಆಗಿದ್ದರು. ಅವರದು ಮೃದು ಸ್ವಭಾವ. ಆದರೆ ಮನಸ್ಸು ಮಾಡಿದರೆ

ಏನನ್ನಾದರೂ ಸಾಧಿಸಬಹುದೆಂಬ ದೃಢ ನಂಬಿಕೆ. ಎಷ್ಟೋ ಯುವಕರನ್ನು ಹುರಿದುಂಬಿಸಿ ಮುಂದೆ ತಂದವರು. ನಮ್ಮ ಮೇಲೆ ಅವರಿಗೆ ಅಪಾರ ನಂಬಿಕೆ ಮತ್ತು ಅಭಿಮಾನ. ನಮ್ಮ ತಾಯಿ ಭಾರತೀಬಾಯಿ ಚಿಕ್ಕಂದಿನಿಂದ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ನಮ್ಮ ತಾಯಿ ಸಮಾಜಸೇವೆಯಲ್ಲಿ ಬಹಳ ಸಮಯವನ್ನು ವಿನಿಯೋಗಿಸುತ್ತಿದ್ದರೂ ನಮ್ಮನ್ನೆಂದೂ ಉದಾಸೀನ ಮಾಡಲಿಲ್ಲ. ನಮ್ಮದೇನೇ ಸಮಸ್ಯೆಗಳಿದ್ದರೂ ಅಮ್ಮನ ಬಳಿ ಅದಕ್ಕೆ ಒಂದು ಪರಿಹಾರ ಇರುತ್ತದೆ ಎನ್ನುವ ನಂಬಿಕೆ ನಮಗಿತ್ತು. ನಾವೂ ಅಮ್ಮನ ಜತೆ ಸೇರಿ ಸ್ವಯಂಸೇವಕಿಯರಾಗಿ ಅವರ ಆಲೋಚನೆಯನ್ನೂ ಅಭಿರುಚಿಯನ್ನೂ ಬೆಳೆಸಿಕೊಂಡಿದ್ದೆವು. ನಮ್ಮ ತಾಯಿಯವರು ವಿಕಲಚೇತನರಿಗೆ (mentally retarded) ಕಟ್ಟಿದ್ದ ಸಂಸ್ಥೆಯೊಂದರಲ್ಲಿ ನಾನು, ಸುಮಾರು ಇಪ್ಪತ್ತು ವರ್ಷ ವಯಸ್ಸಿನ ಈ ಅಭಾಗ್ಯರಿಗೆ 'ಬಾ ಬಾ ಚಿಟ್ಟೆ' ಹೇಳಿಕೊಟ್ಟು ಅವರು ವೇದಿಕೆಯ ಮೇಲೆ ಅದನ್ನು ಹಾಡಿ ಸಂಭ್ರಮಪಟ್ಟಾಗ ಅಚ್ಚರಿಪಟ್ಟಿದ್ದೆ. ನೊಂದ ಹೆಣ್ಣುಮಕ್ಕಳಿಗೆ ಹಾಸ್ಟೆಲ್ ಮಾಡಿ ಅವರನ್ನು ಎರಡೇ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ. ಮಾಡಿಸುವ ಸಂಸ್ಥೆಯನ್ನು ಅಮ್ಮ ಕಟ್ಟಿದ್ದಾಗ ಅಲ್ಲಿ ಅವರಿಂದ ನಾಟಕವಾಡಿಸಿ ಅವರೊಡನೆ ನಲಿದಿದ್ದೆ.

ಚಿಕ್ಕ ಮಗಳೊಂದಿಗೆ ನಾವು ಅಮೆರಿಕಾಕ್ಕೆ ಬಂದು ತಲುಪಿದಾಗ, ಹೊಸ ಊರು, ಹೊಸ ಜೀವನ, ಹೊಸ ಅನುಭವಗಳಲ್ಲಿಯೇ ಎರಡು ವರ್ಷಗಳು ಕಳೆದುಹೋದುವು. ನಾನು ಇಂಡಿಯಾದಲ್ಲಿ ಎಂದೂ ಕೆಲಸ ಮಾಡಿರಲಿಲ್ಲ. ತೌರು ಮನೆಯವರಾಗಲೀ ಅತ್ತೆಯ ಮನೆಯವರಾಗಲೀ ಹೆಣ್ಣುಮಕ್ಕಳನ್ನು ಚೆನ್ನಾಗಿ ಓದಿಸಿದರೂ ಹೆಣ್ಣುಮಕ್ಕಳಿಂದ ಕೆಲಸ ಮಾಡಿಸುವ ಅಪೇಕ್ಷೆಯನ್ನು ಹೊಂದಿರಲಿಲ್ಲ. ಅದಕ್ಕೆ ಪ್ರೋತ್ಸಾಹವನ್ನೂ ಕೊಟ್ಟಿರಲಿಲ್ಲ. ಇಲ್ಲಿಗೆ ಬಂದಾಗ ಎಂ. ಎ. ಮಾಡಿದ್ದರೂ ಕೆಲಸ ಮಾಡದೇ ಇರುವುದು ಎಷ್ಟು ದಂಡ ಅನ್ನಿಸಿತು. ಜತೆಗೆ ನಾನೇ ಸಂಪಾದಿಸುವುದು ತುಂಬಾ ಆಕರ್ಷಕವಾಗಿ ಕಂಡಿತು. ನನ್ನ ಪತಿ ಪದ್ಮನಾಭ್‌ಗೆ ನಾನು ಕೆಲಸ ಮಾಡುವುದು ಅಷ್ಟೇನು ಇಷ್ಟವಿಲ್ಲದಿದ್ದರೂ ನನ್ನ ಉತ್ಸಾಹಕ್ಕೆ ಅವರು ತಣ್ಣೀರೆರಚಲಿಲ್ಲ. ನ್ಯೂಯಾರ್ಕ್ ಟೆಲಿಫೋನ್‌ನಲ್ಲಿ ಕೆಲಸ ಮಾಡಲು ಮೊದಲು ಮಾಡಿದೆ. ಆ ಕೆಲಸಕ್ಕೆ ನನ್ನ ಇಂಗ್ಲಿಷ್ ಎಂ.ಎ. ಖಂಡಿತ ಬೇಕಿರಲಿಲ್ಲ. ಕೆಲಸ ಸುಲಭ ಅನ್ನಿಸಿದರೂ, ಹೊತ್ತುಹೊತ್ತಿಗೆ ಸರಿಯಾಗಿ ಕೆಲಸ, ಮಗಳು, ಮನೆ ನಿಭಾಯಿಸುವ ಶಿಸ್ತುಗಳನ್ನು ಕಲಿಯಲು ಮತ್ತು ನಾನಾ ತರಹೆಯ ಜೊತೆಗಾರರೊಂದಿಗೆ ಹೊಂದಿಕೊಳ್ಳಲು ಸಮಯ ಬೇಕಾಯಿತು. ನನ್ನ ಮೊದಲನೆಯ ಸಂಬಳದ ಚೆಕ್ಕನ್ನು ಮುಟ್ಟಿ ಮುಟ್ಟಿ ನೋಡಿ ಖುಷಿಪಟ್ಟೆ. ಹೊರಗೆ ಕೆಲಸ ಮಾಡುವುದರಿಂದ ನಮ್ಮ ಮನೋಭಾವ, ನಮ್ಮ ವಿಚಾರಗಳು ಬದಲಾಯಿಸುತ್ತವೆ. ಸ್ವಾಭಿಮಾನ ಹೆಚ್ಚುತ್ತದೆ, ನಮ್ಮ ಕ್ಷಿತಿಜ ದೊಡ್ಡದಾಗುತ್ತದೆ. ಹೊರಗಡೆಯ ಕೆಲಸದ ಸುಖವನ್ನು ನಾನು ಆನಂದಿಸುತ್ತಾ ಮುಂದೆ ಓದುವ ಆಸೆ ಮೊಳೆತು, ಎಂ.ಬಿ.ಎ. ಡಿಗ್ರಿ ಪಡೆದೆ. ನನ್ನ ಹಾಗೇ ನನ್ನ ಪೀಳಿಗೆಯ ಅನೇಕರ ಅನುಭವಗಳು ವಿವಿಧ ಬಗೆಯವು

ಆಗಿವೆ. ಸಂಬಳಕ್ಕೆ ದುಡಿಯಲಿ, ಉಚಿತ ಕೆಲಸವಾಗಲಿ, ಹೆಂಗಸರಿಗೆ ಯಾವುದಾದರೊಂದು ಹೊರಗಿನ ಲೋಕದ ಸಂಪರ್ಕ ಸಿಗುವುದು ಮುಖ್ಯವೆನಿಸುತ್ತದೆ ನನಗೆ. ಈ ಅನುಭವಗಳು ನಮ್ಮ ಪೀಳಿಗೆಯವರಿಗೆ ಹೊಸದಾಗಿರಬಹುದು. ಆದರೆ ನಮ್ಮ ಮುಂದಿನ ಪೀಳಿಗೆಯಲ್ಲಿ ಹುಡುಗಿಯರು ತುಂಬಾ ಓದಿ, ಒಳ್ಳೆಯ ಕೆಲಸಗಳನ್ನು ಪಡೆದುಕೊಂಡಿರುವುದು ಸರ್ವೇಸಾಧಾರಣವಾಗಿದೆ. ಇದು ನಾವೆಲ್ಲಾ ಮೆಚ್ಚಿ, ಹೆಮ್ಮೆ ಪಡಬೇಕಾದ ವಿಷಯ.

ನ್ಯೂಯಾರ್ಕಿಗೆ ಬಂದಾಗ ನನಗೆ ಏನಾದರೊಂದು ರೀತಿಯಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸಬೇಕೆಂಬ ಆಸೆ ಬಹಳವಿತ್ತು. ಆದರೆ ಯಾರಿಗೆ ಸೇವೆ ಸಲ್ಲಿಸಬೇಕು? ಅಂತಹ ಸಹಾಯ ಬೇಕಾದವರು ಯಾರೂ ಕಾಣಿಸಲಿಲ್ಲ. ನಮ್ಮವರೆಲ್ಲಾ ಉಂಡುಟ್ಟು ಚೆನ್ನಾಗಿ ನೆಲೆಸಿದವರೇ! ನಮ್ಮವರಲ್ಲದವರಿಗೂ ಸಹಾಯ ಮಾಡಬಹುದು ಎಂಬುದನ್ನು ನಾನು ಅರಿತುಕೊಳ್ಳಲಿಕ್ಕೆ ಬಹಳ ದಿನ ಬೇಕಾಯಿತು.

ಅಮೆರಿಕೆಗೆ ಬಂದಮೇಲೆ ನನಗೆ ದೊರಕಿದ ಮೊದಲನೆಯ ಅವಕಾಶದ ಬಗ್ಗೆ ಹೇಳುತ್ತೇನೆ. ಭಾರತದಲ್ಲಿ ನಾನು ಅಖಿಲ ಭಾರತೀಯ ಮಹಿಳಾ ಸಮ್ಮೇಳನದ (All India Women's Conference, AIWC) ಮುಂಬಯಿ ಶಾಖೆಯ ಆಜೀವ ಸದಸ್ಯಳಾಗಿದ್ದೆ. ಅಮ್ಮ ಬೆಂಗಳೂರಿನ ಶಾಖೆಯ ಅಧ್ಯಕ್ಷಿಣಿಯಾಗಿದ್ದರು. ಚಿಕ್ಕಂದಿನಿಂದ ಈ ಸಂಸ್ಥೆ ನನಗೆ ಪರಿಚಿತವಾಗಿತ್ತು. ಈ ಸಂಸ್ಥೆಗೆ ವಿಶ್ವಸಂಸ್ಥೆಯೊಂದಿಗೆ (United Nations, UN) ಸಮಾಲೋಚಕ ಸ್ಥಾನ (consultative status) ಇದೆ. ನಾನು ಇಲ್ಲಿಗೆ ಬರುವಾಗ ಆ ಸಂಸ್ಥೆಯವರು ವಿಶ್ವ ಸಂಸ್ಥೆಯಲ್ಲಿ ತಮ್ಮ ಪ್ರತಿನಿಧಿಯಾಗುವಂತೆ ಹೇಳಿದರು. ಆ ಸಂಸ್ಥೆಯನ್ನು ಪ್ರತಿನಿಧಿಸುತ್ತಾ ನಾನು ಪ್ರಪಂಚದ ಹಲವಾರು ಮಹಿಳಾ ಸಂಸ್ಥೆಗಳ ಪ್ರತಿನಿಧಿಗಳೊಡನೆ ಕೆಲಸ ಮಾಡಿದೆ. ಆ ಅವಧಿ ಸ್ತ್ರೀಪರ ಕೆಲಸಗಳನ್ನು ಮಾಡಲು ದಿವ್ಯವಾದ ಸಂದರ್ಭವನ್ನು ಒದಗಿಸಿಕೊಟ್ಟಿತ್ತು. ವಿಶ್ವ ಸಂಸ್ಥೆಯು ಸ್ತ್ರೀಪರ ಯೋಜನೆಗಳನ್ನು ಎಲ್ಲೆಡೆ ಹಮ್ಮಿಕೊಂಡ ಸಮಯವದು. ಎಲ್ಲ ದೇಶಗಳ ಸರಕಾರಗಳೂ ಮಹಿಳಾ ಸಂಸ್ಥೆಗಳೂ ಬಹಳ ಉತ್ಸಾಹದಿಂದ ಈ ವಿಷಯಗಳ ಬಗ್ಗೆ ಹೇಗೆ ಮುಂದುವರಿಯಬೇಕೆಂದು ಚರ್ಚೆಯ ಮೂಲಕ, ಸಂವಾದದ ಮೂಲಕ ದಾರಿ ಹುಡುಕಿಕೊಳ್ಳುತ್ತಿದ್ದ ಕಾಲ. ಎಲ್ಲೆಡೆ ಸಮ್ಮೇಳನಗಳು, ಸಮಾವೇಶಗಳು. ನನಗೆ ಮೆಕ್ಸಿಕೋದಲ್ಲಿ ನಡೆದ ಮೊದಲನೆ ಸಮ್ಮೇಳನ ಮತ್ತು ಬೇಜಿಂಗ್‌ನಲ್ಲಿ ನಡೆದ ನಾಲ್ಕನೆಯ ಅಮೋಘ ಸಮ್ಮೇಳನಗಳಲ್ಲಿ ಭಾಗವಹಿಸಲು ಅವಕಾಶ ದೊರಕಿತು. ಬೇಜಿಂಗ್ ಎನ್.ಜಿ.ಓ. (Non-Governmental Organizations) ವಿಚಾರವೇದಿಕೆಯಲ್ಲಿಯೂ (NGO Forum) ನಾನು ಪ್ರತಿನಿಧಿಸಿದ್ದೆ.

ಆ ಸಮ್ಮೇಳನದ ನಂತರ ನಾನು ಸ್ತ್ರೀಪರ ಕಾಳಜಿಗಳನ್ನು, ಧೋರಣೆಗಳನ್ನು ಪ್ರತಿನಿಧಿಸುವ NGO ಸಮಿತಿಗೆ ಅಧ್ಯಕ್ಷಿಣಿಯಾಗಿ ಆರಿಸಲ್ಪಟ್ಟೆ. ನಂತರದ ನಾಲ್ಕು

ವರ್ಷಗಳಲ್ಲಿ ಬೇಜಿಂಗ್ ಸಮ್ಮೇಳನದಲ್ಲಿ ಹೊರತಂದ ಪ್ರಣಾಳಿಕೆಗಳನ್ನು ಬೇರೆ ರಾಷ್ಟ್ರಗಳ ಸರಕಾರಗಳು ಎಷ್ಟರಮಟ್ಟಿಗೆ ಕಾರ್ಯಗತ ಮಾಡುತ್ತಿದ್ದಾರೆಂದು ಪರಿಶೀಲಿಸಿ, ಪೂರ್ಣ ಪ್ರಮಾಣದಲ್ಲಿ ಅವುಗಳ ಅಳವಡಿಕೆಗೆ ಚಳುವಳಿ ಮಾಡಿದೆವು. ಎಷ್ಟೇ ಸ್ತ್ರೀಪರ ಕಾನೂನುಗಳಿದ್ದರೂ ಬರೀ ಕಾನೂನುಗಳಿಂದ ಸಮಸ್ಯೆಗಳ ಪರಿಹಾರ ಸಾಧ್ಯವಾಗಿಲ್ಲ. ಪ್ರಪಂಚದ ಯಾವುದೇ ರಾಷ್ಟ್ರವನ್ನು ಉದಾಹರಿಸಿದರೂ ಈ ಸ್ತ್ರೀ ಪುರುಷರ ನಡುವಿನ ಅಸಮಾನತೆ ಇದ್ದೇ ಇದೆ. ಕೆಲವೊಂದು ದೇಶದಲ್ಲಿ ಇದು ಹೆಚ್ಚಿರಬಹುದು, ಇನು ಕೆಲವು ದೇಶಗಳಲ್ಲಿ ಕಡಿಮೆಯಿರಬಹುದು. ಸಮಾನ ಅವಕಾಶ, ವೇತನ, ಲೈಂಗಿಕ ಕಿರುಕುಳ ಇತರೇ ಪ್ರಕಾರಗಳಲ್ಲಿ ಇನ್ನೂ ಬಹಳ ಕೆಲಸ ಆಗಬೇಕಾಗಿದೆ. ಇಷ್ಟಲ್ಲದೆ ದೈಹಿಕವಾದ ಹಿಂಸೆ, ಬಲಾತ್ಕಾರಗಳು ಬೇರೆ. ಕಳೆದ ಡಿಸೆಂಬರಿನಲ್ಲಿ ದಿಲ್ಲಿಯಲ್ಲಿ ಇಪ್ಪತ್ತೂರು ವರ್ಷದ ತರುಣಿಯ ಮೇಲೆ ಆರು ಜನ ಪುಂಡರು ಮಾಡಿದ ಅಮಾನುಷ ಅತ್ಯಾಚಾರ ಯಾರನ್ನಾದರೂ ಅವಮಾನದಿಂದ ತಲೆತಗ್ಗಿಸುವಂತೆ ಮಾಡಿದೆ. ಈ ತಡೆಗಳು ನಮ್ಮನ್ನು ದುರ್ಬಲರನ್ನಾಗಿ ಮಾಡದೆ, ಈ ಸಂಕೀರ್ಣ ಸಮಸ್ಯೆಗೆ ಹೆಚ್ಚಿನ ಗಮನಕೊಟ್ಟು ಪರಿಹಾರವನ್ನು ಹುಡುಕುವಂತೆ ಮಾಡಬೇಕು.

ಹೊರದೇಶಕ್ಕೆ ಬಂದವರಿಗೆ ಕೆಲವು ವಿಶಿಷ್ಟವಾದ ಸಮಸ್ಯೆಗಳಿರುತ್ತವೆ. ನಮ್ಮ ದೇಶ, ನಮ್ಮ ಭಾಷೆಯನ್ನು ನೆನೆದುಕೊಳ್ಳಲು, ನಮ್ಮ ಹಳಹಳಿಕೆಯನ್ನು ಕಡಿಮೆ ಮಾಡಲು ಭಾಷಾಧಾರಿತ ಅಥವಾ ರಾಜ್ಯಾಧಾರಿತ ಸಂಸ್ಥೆಗಳನ್ನು ಆರಂಭಿಸಿದೆವು. ತಮಿಳ್ ಸಂಗಮ್, ತೆಲುಗು ಲಿಟರರಿ ಸೊಸೈಟಿ, ಮಾಹಾರಾಷ್ಟ್ರ ಮಂಡಲ್, ಕೇರಳ ಸಮಾಜಮ್, ಅಸ್ಸಾಮ್ ಅಸೋಸಿಯೇಷನ್, ಇತ್ಯಾದಿ. ನಾವಿದ್ದಲ್ಲೇ ನಮ್ಮ ಊರನ್ನು ಕಟ್ಟಿದೆವು. ಕೋಲಾಟವಾಡಿದೆವು. ನಮ್ಮ ಜನಪದ ಗೀತೆಗಳನ್ನು ಹಾಡಿದೆವು. ಗಣೇಶನ ಹಬ್ಬ ಮಾಡಿದೆವು.

ನನಗೆ ಕೆಲವು ಸಂಸ್ಥೆಗಳೊಡನೆ ಹತ್ತಿರದ ಒಡನಾಟವಿದೆ. ನಾನು ಆರಂಭಿಸಿದ ಹಲವಾರು ಸಂಸ್ಥೆಗಳಲ್ಲಿ ಎಂಟು ಸಂಸ್ಥೆಗಳು ಸೇರಿ Joint Committee of Indian Organizations ಎಂಬ ಒಂದು ಸಂಸ್ಥೆ ಆರಂಭವಾಯಿತು. ಭಾರತದ ರಾಷ್ಟ್ರೀಯ ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸುವುದರೊಂದಿಗೆ ಈ ಸಂಸ್ಥೆಯ ಚಟುವಟಿಕೆಗಳು ಆರಂಭವಾದವು. ಹೊರನಾಡಿನಲ್ಲಿ ನಾವೆಲ್ಲ ಭಾರತೀಯರು ಎಂಬ ಭಾವನೆಯನ್ನು ಮತ್ತೆ ಮತ್ತೆ ಜಾಗೃತಗೊಳಿಸಲು ಇಂಥ ಸಂಸ್ಥೆಗಳು ಬಹಳ ಸಹಾಯಕವಾಗುತ್ತವೆ. ಈ ಹೊಸ ಸಂಸ್ಥೆಯನ್ನು ನಡೆಸುವ ಅವಕಾಶ ನನಗೆ 1973–74ರಲ್ಲಿ ದೊರಕಿತು. ನಂತರದ ದಿನಗಳಲ್ಲಿ ನಾನಾ ಸಂಸ್ಥೆಗಳು Joint Committee ಯನ್ನು ಸೇರಿ, 1979ರಲ್ಲಿ ಅದು Federation of Indian Associations (FIA) ಎಂಬ ಹೊಸ ರೂಪ ತಾಳಿತು. ನಾನಾ ಸಂಸ್ಥೆಗಳ ನಾಯಕರು ಸೇರಿ ಇಲ್ಲಿ ನೆಲೆಸಿರುವ ಭಾರತೀಯರ ಪ್ರಮುಖ ಕಾಳಜಿ, ಸಮಸ್ಯೆಗಳನ್ನು ಚರ್ಚಿಸಲೆಂದು ಹಲವು ಸಮಿತಿಗಳನ್ನು ಸ್ಥಾಪಿಸಿದೆವು. ಸಾಂಸ್ಕೃತಿಕವಾಗಿ

ಭಾರತೀಯರನ್ನು ಸಂಘಟಿಸುವುದು ಬಹಳ ಮುಖ್ಯವೆಂದು ನಾವು ನಿರ್ಣಯಿಸಿದೆವು. ನಮ್ಮ ಸಂಸ್ಕೃತಿಯಲ್ಲಿನ ಅನೇಕ ಹಬ್ಬಗಳೂ, ರಾಷ್ಟ್ರೀಯ ಉತ್ಸವಗಳೂ ಇದಕ್ಕೆ ಸಹಾಯಕವಾದವು. 1981ರಲ್ಲಿ ಮೊದಲ ಬಾರಿ ಮ್ಯಾಡಿಸನ್ ಆವೆನ್ಯುನಲ್ಲಿ ಭಾರತದ ಸ್ವಾತಂತ್ರ್ಯ ದಿನಾಚರಣೆಯ ಪೆರೇಡ್ (India Day Parade) ಅನ್ನು ವಿಜೃಂಭಣೆಯಿಂದ ಮಾಡಿದೆವು.

1983–84ರಲ್ಲಿ ನಾನು FIAಗೆ ಅಧ್ಯಕ್ಷಿಣಿಯಾಗಿ ಚುನಾಯಿಸಲ್ಪಟ್ಟೆ. ಖಚಿತ ಅಭಿಪ್ರಾಯಗಳನ್ನು ಮಂಡಿಸುವ ವಿವಿಧ ಸಂಸ್ಥೆಗಳ ನಾಯಕರುಗಳ ನಡುವೆ ಒಬ್ಬ ಮಹಿಳೆ ಅಧ್ಯಕ್ಷಿಣಿಯಾಗುವುದು ಒಂದು ರೀತಿಯ ಸವಾಲಾಗಿತ್ತು. ಆದರೂ ನನ್ನ ಕರ್ತವ್ಯಗಳನ್ನು ಸಫಲವಾಗಿ ನಿರ್ವಹಿಸಿದ್ದೇನೆ ಎಂಬ ತೃಪ್ತಿ ನನಗಿದೆ. ಅದೇ ವರ್ಷ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರನ್ನು ಒಂದು ಸಭೆಯಲ್ಲಿ ಭೇಟಿ ಮಾಡಿದಾಗ ಅವರಿಗೆ ಹೊರನಾಡ ಭಾರತೀಯರ ಪರವಾಗಿ ಒಂದು ಬಿನ್ನಹ ಪತ್ರವನ್ನು ಕೊಟ್ಟೆವು. ಆ ಪಟ್ಟಿಯಲ್ಲಿ ಉಭಯ ರಾಷ್ಟ್ರಗಳ ಪೌರತ್ವ (Dual Citizenship) ಕೂಡ ಸೇರಿತ್ತು.

ಆ ವರ್ಷದ ಸ್ವಾತಂತ್ರೋತ್ಸವದ ಮೆರವಣಿಗೆಯಲ್ಲಿ ಮೊದಲನೇ ಬಾರಿ ಖ್ಯಾತ ಸಿನೆಮಾ ನಟ ಮತ್ತು ಲೋಕಸಭೆಯ ಮೆಂಬರ್ ಆದ ಸುನಿಲ್ ದತ್ ಅವರನ್ನು ಗ್ರ್ಯಾಂಡ್ ಮಾರ್ಷಲ್ ಆಗಲು ಆಹ್ವಾನಿಸಿದೆವು. ನ್ಯೂಯಾರ್ಕಿನಲ್ಲಿ ನಡೆದ ಈ ಮೆರವಣಿಗೆಯಲ್ಲಿ ಒಂದು ಲಕ್ಷ ಜನ ಸೇರಿದ್ದರು. ಆ ವರ್ಷದಿಂದ ಸಿನೆಮಾ ನಟ/ನಟಿಯರನ್ನು ಕರೆದು ಜನರನ್ನು ಉತ್ಸಾಹಿಸುವುದು FIA ಪರಂಪರೆಯಾಗಿದೆ. ಮುಂದೆ FIAಗೆ ಬಹಳ ಶಾಖೆಗಳು ಸೇರಿ ಅದು ಬಲಾಢ್ಯವಾಯಿತು. ಸ್ಯಾನ್ ಫ್ರಾನ್ಸಿಸ್ಕೊ, ಶಿಕಾಗೊ ಮುಂತಾದ ಊರುಗಳಲ್ಲಿ FIA ಶಾಖೆಗಳು ಹುಟ್ಟಿಕೊಂಡವು. ದೇಶದಲ್ಲಿದ್ದ ನಾನಾ ಕಡೆಗಿನ ಭಾರತ ಸಂಘಗಳೂ, ಈ FIA ಶಾಖೆಗಳೂ ಸೇರಿ 1980ರಲ್ಲಿ ನ್ಯೂಯಾರ್ಕಿನಲ್ಲಿ ಒಂದು ಸಮ್ಮೇಳನ ಮಾಡಿದೆವು. ಆ ಸಮ್ಮೇಳನದ ಫಲವೇ ಇವೆಲ್ಲಕ್ಕಿಂತ ಹಿರಿದಾದ National Federation of Indian-American Associationsನ ಉಗಮ.

ಈಗ ಈ ಸಂಸ್ಥೆಗಳಲ್ಲದೇ ಬೇರೆ ಅನೇಕ ಸಾಂಸ್ಕೃತಿಕ ಸಂಸ್ಥೆಗಳೂ ಹುಟ್ಟಿಕೊಂಡಿವೆ. ನಾವು ಬಂದಾಗ ನಮಗಿದ್ದ ಮಿತಿಯಲ್ಲಿ ಭಾರತೀಯರನ್ನೆಲ್ಲಾ ಒಟ್ಟುಗೂಡಿಸಲು ನಾವು ಕಟ್ಟಿದ್ದ ಸಂಘ ಸಂಸ್ಥೆಗಳು ಹಲವಾದರೆ ಈಗ ಸಾಧ್ಯತೆಗಳು, ಅವಕಾಶಗಳು ಹೇರಳವಾಗಿರುವುದರಿಂದ ಇನ್ನೂ ಹತ್ತುಹಲವು ಸಂಘ ಸಂಸ್ಥೆಗಳು ಹುಟ್ಟಿಕೊಂಡಿವೆ. ಇಂಥ ಸಂಸ್ಥೆಗಳ ಗುರಿ, ಭವಿಷ್ಯವೇನೆಂಬುವ ಪ್ರಶ್ನೆ ಮನಸ್ಸಿಗೆ ಬರುತ್ತದೆ. ಎಷ್ಟೋ ಸಂಸ್ಥೆಗಳಲ್ಲಿ ಯುವಜನರನ್ನು ತಮ್ಮತ್ತ ಆಕರ್ಷಿಸಲು ಅವರನ್ನು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನ ನಡೆದಿದೆ. ಆದರೆ, ಬೇರೆ ಸಂಸ್ಕೃತಿಯಲ್ಲಿ ಬೆಳೆಯುವ ನಮ್ಮ ಮುಂದಿನ ಪೀಳಿಗೆಯವರಿಗೆ ಸಹಜವಾಗಿಯೇ ಇಂಥ ಸಂಘ ಸಂಸ್ಥೆಗಳಲ್ಲಿ ಆಸಕ್ತಿ

ಕಡಿಮೆ. ಅವರ ಅಭಿರುಚಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು. ಆದರೂ ನಮ್ಮ ಸಂಸ್ಥೆಯ ಧೋರಣೆಗೆ ಅಪಚಾರವಾಗದಂತೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಇದು ಸವಾಲೇ ಸೈ. ಇಲ್ಲದಿದ್ದಲ್ಲಿ ಶುರುಮಾಡಿದ್ದಷ್ಟೇ ಬಂತು. ಮುಂದುವರಿಯದೇ ಕೊನೆಗೊಳ್ಳಬೇಕಾಗುತ್ತದೆ.

1989ರಲ್ಲಿ ಪ್ರಪಂಚದ ನಾನಾ ರಾಷ್ಟ್ರಗಳ ಭಾರತೀಯ ಸಂಸ್ಥೆಗಳು ನ್ಯೂಯಾರ್ಕಿನಲ್ಲಿ ಮೊಟ್ಟಮೊದಲ 'ಭಾರತೀಯ ಮೂಲದವರ ವಿಶ್ವ ಸಮ್ಮೇಳನ' (First Global Convention of People of Indian Origin) ಆಯೋಜಿಸಿದ್ದರು. ಹೊರನಾಡಿನ ಭಾರತೀಯರು ಒಂದಾಗಿ ಕೂಡಿ ಅವರ ಸಾದೃಶ್ಯ, ವೈದೃಶ್ಯಗಳನ್ನು ಚರ್ಚಿಸುವುದು, ಪರಸ್ಪರರ ಕಾಳಜಿಗಳನ್ನು ಅರಿತುಕೊಳ್ಳುವುದು ತುಂಬಾ ಮುಖ್ಯ. ಈ ಸಮ್ಮೇಳನಕ್ಕೆ ಸುಮಾರು ಎರಡು ವರ್ಷಗಳ ತಯಾರಿ ಬೇಕಾಯಿತು. ನೂರಾರು ಜನ ಉತ್ಸಾಹದಿಂದ ಗಂಟೆಗಟ್ಟಳೆ ಚರ್ಚೆಮಾಡಿ ಒಂದು ಕರಡು ಪ್ರಸ್ತಾವವನ್ನು (Draft proposal) ತಯಾರಿಸಿದೆವು. ಅದನ್ನು ಪ್ರಪಂಚದಲ್ಲಿ ಎಲ್ಲೆಲ್ಲಿ ಭಾರತೀಯರು ನೆಲೆಸಿದ್ದಾರೋ ಆ ಎಲ್ಲ ದೇಶಗಳಿಗೆ ಕೊಂಡುಹೋಗಿ ಚರ್ಚಿಸುವುದು ಎಂದು ನಿರ್ಧಾರ ಮಾಡಿದೆವು. ನನಗೆ ಕೆರಿಬಿಯನ್ ರಾಷ್ಟ್ರಗಳಿಗೆ ಹೋಗುವ ಅವಕಾಶ ದೊರೆತಿತ್ತು. ಎಷ್ಟೋ ವರ್ಷಗಳಿಂದ ಈ ದೇಶಗಳಲ್ಲಿ ನೆಲಸಿದ್ದ ಭಾರತೀಯರನ್ನು ಭೇಟಿಮಾಡುವ ಸುಯೋಗ ನನ್ನದಾಯಿತು. ಗಯಾನ, ಟ್ರನಿಡ್ಯಾಡ್ ಮತ್ತು ಟೊಬೇಗೊ, ಮತ್ತು ಬಾರ್ಬೇಡೋಸ್ ದೇಶಗಳನ್ನು ಸುತ್ತಿ, ಅಲ್ಲಿನ ಭಾರತೀಯ ಸಂಸ್ಥೆಗಳನ್ನು, ಭಾರತೀಯ ರಾಜಕಾರಣಿಗಳನ್ನು, ವಾಣಿಜ್ಯೋದ್ಯಮಿಗಳನ್ನು ಭೇಟಿ ಮಾಡಿ ನಮ್ಮ ಪ್ರಸ್ತಾವವನ್ನು ಮುಂದಿಟ್ಟು ಚರ್ಚಿಸಿದೆವು. ಅವರಿಂದ ಬಂದ ಸಲಹೆಗಳು ಅಪಾರ. ಉದಾಹರಣೆಗೆ, ನಾವು ಮೊದಲು ಈ ಸಮ್ಮೇಳನಕ್ಕೆ 'ಹೊರನಾಡಿನ ಭಾರತೀಯರ ಸಮ್ಮೇಳನ'ವೆಂದು ಹೆಸರು ಕೊಟ್ಟಿದ್ದೆವು. ಕೆರಿಬಿಯನ್‌ನವರು ಅದನ್ನು ತಿದ್ದಿ, ತಾವು ಭಾರತೀಯರಲ್ಲ, ಆದರೆ ಮೂಲತಃ ಭಾರತದಿಂದ ಬಂದವರೆಂದು ಗುರುತಿಸಿಕೊಂಡರು. ಮೊದಲ ಬಾರಿಗೆ People of Indian Origin ಎಂಬ ಶಬ್ದ ಪ್ರಯೋಗವಾಯಿತು. ನಮ್ಮ ಸಮ್ಮೇಳನದ ಹೆಸರೂ ಹಾಗೆಯೇ ಬದಲಾಯಿಸಿತು. ಮುಂದೆ ಭಾರತ ಸರಕಾರವೂ ಅದೇ ಶಬ್ದದ ಗುರುತು ಚೀಟಿಯನ್ನು ಜಾರಿಗೆ ತಂದಿದೆ.

ಭಾರತೀಯರು ಕೆರಿಬಿಯನ್ ದೇಶಗಳಿಗೆ 150–200 ವರ್ಷಗಳ ಹಿಂದೆ ಬ್ರಿಟಿಷರ ಜೀತದಾಳುಗಳಾಗಿ ಬಂದವರು. ಅವರ ಸ್ಥಿತಿ ಗುಲಾಮರಂತೆಯೇ ಇತ್ತು. ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಕಬ್ಬಿನ ಗದ್ದೆಗಳಲ್ಲಿ ಬೆನ್ನು ಮುರಿಯುವಂಥ ಕೆಲಸಮಾಡಿಕೊಂಡು ಅವರ ಜಾತಿ, ಮತ, ಸಂಸ್ಕಾರಗಳಿಗಿರಲಿ ಅವರ ಮನುಷ್ಯತ್ವಕ್ಕೇ ಬೆಲೆಯಿಲ್ಲದೆ ತೀರ ಹೀನಸ್ಥಿತಿಯಲ್ಲಿ ಜೀವನ ಮಾಡಿಕೊಂಡಿದ್ದರು. ಈಗ

ಅವರು ಗಯಾನ, ಟ್ರಿನಿಡ್ಯಾಡ್ ಮತ್ತು ಸೂರಿನಾಮ್‌ಗಳಲ್ಲಿ ಬಹುಮತದಲ್ಲಿದ್ದಾರೆ. ಈಚೆಗೆ ಅವರ ಪರಿಸ್ಥಿತಿ ಸುಧಾರಿಸುತ್ತಿದೆ. ಅವರಲ್ಲಿ ಕೆಲವರು ರಾಷ್ಟ್ರದ ಅಧ್ಯಕ್ಷ ಅಥವಾ ಪ್ರಧಾನಿಗಳೂ ಆಗಿದ್ದಾರೆ.

ಆ ರಾಷ್ಟ್ರಗಳ ಭಾರತೀಯರನ್ನು ಹತ್ತಿರದಿಂದ ನೋಡಿದಾಗ ನನ್ನ ಮನಸ್ಸಿನಲ್ಲಿ ನಮ್ಮ ಮುಂದಿನ ಪೀಳಿಗೆಯವರೂ ಹೀಗೆಯೇ ಇರುತ್ತಾರೆಯೇ ಎಂದನಿಸಿತು. ಕೆರಿಬಿಯನ್ನಿನ ಭಾರತೀಯರಿಗೆ ತಮ್ಮ ಭಾರತೀಯತೆಯ, ತಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ತುಂಬಾ ಹೆಮ್ಮೆ. ತಮಗೆ ತಿಳಿದ ಮಟ್ಟಿಗೆ ತಮ್ಮ ತಿಳುವಳಿಕೆಯ ಮಿತಿಯಲ್ಲಿ ತಮ್ಮ ತಮ್ಮ ಧರ್ಮಗಳನ್ನು ನಡೆಸಿಕೊಂಡು ಬಂದಿದ್ದಾರೆ. ಒಂದೊಂದು ಚಿಕ್ಕ ಹಳ್ಳಿಯಲ್ಲೂ ಒಂದು ದೇವಸ್ಥಾನ, ಒಂದು ಮಸೀದಿ ಇದೆ. ಭಾರತ ಅವರಿಗೆ ಒಂದು ಚೆಂದದ ಕನಸು. ಭಾರತವನ್ನು ಇನ್ನೂ 'ರಾಮರಾಜ್ಯ'ವೆಂದು ಹೆಮ್ಮೆಯಿಂದ ಹೇಳುತ್ತಾರೆ. ಅದನ್ನು ನೋಡಿ 'ಏನು ಹುಚ್ಚು ಇವರಿಗೆ' ಅನ್ನಿಸಿದರೂ, ಕಣ್ಣುಗಳು ತೇವಗೊಂಡವು.

'ನಾವೆಲ್ಲಾ ಭಾರತೀಯ ಮೂಲದವರು' ಅನ್ನುವ ಮಮಕಾರ ಎಂಥ ಭಾವನಾತ್ಮಕ ಬಳ್ಳಿ! ಎಲ್ಲರೂ ಬಹಳ ಉತ್ಸಾಹದಿಂದ ಈ ಸಮ್ಮೇಳನದಲ್ಲಿ ಭಾಗವಹಿಸಿದೆವು. ಗಯಾನದ ಚೆಡ್ಡಿ ಜಗನ್, ಟ್ರಿನಿಡ್ಯಾಡಿನ ಬಾಸುದೇವ್ ಪಾಂಡೆ, ಫ್ಲೀಜಿಯ ಮಹೇಂದ್ರ ಚೌಧರಿ ಮತ್ತು ಜಯರಾಮ ರೆಡ್ಡಿ ಮುಂತಾದವರು ಬಂದು ಭಾಗವಹಿಸಿ ಭಾಷಣ ಮಾಡಿದರು. ಭಾರತ ಸರಕಾರವೂ ಮಂತ್ರಿ ಮಾಧವರಾವ್ ಸಿಂಧ್ಯ ಮತ್ತು ಹಲವಾರು ಪ್ರತಿನಿಧಿಗಳನ್ನು ಕಳುಹಿಸಿತು. ಇಪ್ಪತ್ತೊಂಬತ್ತು ದೇಶಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಐದು ದಿನಗಳ ಸಮ್ಮೇಳನದಲ್ಲಿ ಹಲವಾರು ಮಸೂದೆಗಳನ್ನು ತಯಾರಿಸಿ ನಾನಾ ಸರಕಾರಗಳಿಗೆ ಕಳುಹಿಸಿದೆವು. Global Organization of People of Indian Origin, (GOPIO) ಸಂಸ್ಥೆಯು ನಿರ್ಮಾಣವಾಯಿತು. ಈಗ ಪ್ರಪಂಚದ ಎಷ್ಟೋ ದೇಶಗಳಲ್ಲಿ ಗೋಪಿಯೋ ಶಾಖೆಗಳಿವೆ. ಇದರಲ್ಲಿ ಒಂದು ಸ್ವಾರಸ್ಯವಾದ ವಿಷಯವೆಂದರೆ, ಈ ಸಂಸ್ಥೆ ಭಾರತದ ಹೊರಗಿರುವ ಭಾರತೀಯರನ್ನು ಒಂದುಗೂಡಿಸಲೆಂದು ಮಾಡಿದ್ದರೂ ಬೇರೆಬೇರೆ ರಾಷ್ಟದಲ್ಲಿರುವ ಈ ಭಾರತೀಯರು ಸಮ್ಮೇಳನಗಳಿಗೆ ಬಂದಾಗ ಆಯಾ ರಾಷ್ಟ್ರದ ಪ್ರತಿನಿಧಿಗಳಾಗಿಯೇ ಬರುತ್ತಾರೆ. ಪರಸ್ಪರರನ್ನು ಕಾಣುವುದೂ ಹಾಗೆಯೇ. ಎಲ್ಲರೂ ಅಮೆರಿಕೆಯಲ್ಲಿರುವ ಭಾರತೀಯರ 'ಅಮೆರಿಕನ್ ಸೊಕ್ಕನ್ನು' ದಬಾಯಿಸುತ್ತಾರೆ. ಭಾರತೀಯತೆಯನ್ನು ದೇಶದ ಹೊರಗೆ, ಪೀಳಿಗೆಗಳಾಚೆಗೆ ದಾಟಿಸುವುದು ಕಷ್ಟವೇನೋ.

1965ರ ಇಮಿಗ್ರೇಶನ್ ಸುಧಾರಣೆಯ ಅಂಗವಾಗಿ ಆರಂಭಮಾಡಿದ ಮೂರನೆಯ ಆಯ್ಕೆಯ ಕ್ರಮದಿಂದ ಇಂಜಿನಿಯರುಗಳು, ವೈದ್ಯರು, ಅಧ್ಯಾಪಕರು, ನರ್ಸುಗಳು ಮುಂತಾದವರು ಅಮೆರಿಕಾಕ್ಕೆ ಹೇರಳವಾಗಿ ಬರತೊಡಗಿದರು. ಆದರೆ ವಲಸೆ ಹೆಚ್ಚಾಗುತ್ತಿದ್ದಂತೆ ಅದಕ್ಕೆ ಅಂಟಿಕೊಂಡು ಬಂದ ಸಮಸ್ಯೆಗಳೂ ತಲೆದೋರಿದವು. ಕೆಲವರಿಗೆ ಇಲ್ಲಿರಲು ಬೇಕಾದ ವಿದ್ಯಾಭ್ಯಾಸವಾಗಲೀ ಅನುಭವವಾಗಲೀ ಇರಲಿಲ್ಲ.

ಬೇರು ಸೂರು

ಎಷ್ಟೋ ಜನ ವೀಸಾ ಇಲ್ಲದವರೂ ಇದ್ದಾರೆ. ದೇಶದ ಆರ್ಥಿಕ ಸ್ಥಿತಿ ದುರ್ಬಲವಾದಂತೆ ಭಾರತೀಯ ಸಮುದಾಯದಲ್ಲಿಯೂ ಕೆಲಸವಿಲ್ಲದವರು, ಕೆಲಸವಿದ್ದರೂ ಸಣ್ಣ ಸಂಪಾದನೆಯವರು, ಹಸಿದವರು, ಮನೆಯಿಲ್ಲದವರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೂ 2010ರ ಜನಗಣತಿಯು ಭಾರತೀಯರು ಅಮೆರಿಕೆಯಲ್ಲಿ ಎಲ್ಲರಿಗಿಂತ ಹೆಚ್ಚು ಸಂಪಾದಿಸುವರೆಂದೂ, ಶೇಕಡ ಎಪ್ಪತ್ತು ಮಂದಿ ಪದವೀಧರರೆಂದೂ ತಿಳಿಯಪಡಿಸಿದೆ. ಇದು ಭಾರತೀಯರನ್ನು 'ಮಾದರಿ ಅಲ್ಪಸಂಖ್ಯಾತ'ರಂತೆ (model minority) ತೋರಿಸಿದೆ. ಒಂದು ನಮಗೆ ನಾವೇ ತಿಳಿಯಬೇಕಾದ ಸತ್ಯವೆಂದರೆ ನಮ್ಮ 'ಮಾದರಿ ಅಲ್ಪಸಂಖ್ಯಾತ'ರ ಸ್ಟೇಟಸ್ಸಿನ ಜತೆಜತೆಗೂ ನಮ್ಮಲ್ಲಿ ಬಹಳ ಜನ ಕಷ್ಟಪಡುವವರಿದ್ದಾರೆ. ಇದನ್ನರಿತುಕೊಂಡು ನಾವು ಕೆಲವು ಸೇವಾರ್ಥ ಸಂಸ್ಥೆಗಳನ್ನು ಆರಂಭಮಾಡಿದ್ದೇವೆ. ಅವುಗಳು ಭಾರತೀಯರಿಗೆ ಮಾತ್ರವಲ್ಲದೇ ದಕ್ಷಿಣ ಏಷ್ಯಾ ಸಮುದಾಯಕ್ಕೂ ನೆರವು ಕೊಡಲು ನಿಂತಿವೆ.

ಪ್ರಪಂಚದಲ್ಲಿ ಸಮಾಜ ಹೊಸದಾಗಿರಲಿ, ಹಳೆಯದಾಗಿರಲಿ, ಜನಗಳು ಶ್ರೀಮಂತರಾಗಿರಲಿ, ಬಡವರಾಗಿರಲಿ, ಓದಿರಲಿ, ಓದಿಲ್ಲದಿರಲಿ ಸ್ತ್ರೀಯರ ಮೇಲಿನ ದೌರ್ಜನ್ಯ ಎಲ್ಲಾ ಕಡೆ ಒಂದೇ ರೀತಿ ಇದೆ. ಈ ಘೋರ ಸಮಸ್ಯೆ ಇಲ್ಲಿನ ಭಾರತೀಯ ಹೆಂಗಸರನ್ನೂ ಕಾಡುತ್ತಿದೆ. ಇಲ್ಲಿ ಪ್ರಾರಂಭವಾದ National Coalition of South Asian Organizations, (NCSO)ನಲ್ಲಿರುವ 41 ಸದಸ್ಯ ಸಂಸ್ಥೆಗಳಲ್ಲಿ 19 ಸಂಸ್ಥೆಗಳು ಅತ್ಯಾಚಾರದಿಂದ ನೊಂದ ಹೆಂಗಸರಿಗೆ ಸಹಾಯ ಮಾಡುವ ಸಂಸ್ಥೆಗಳಾಗಿವೆ. ಈ ಸಂಖ್ಯೆಯೇ ಸಾಕು, ಈ ಸಮಸ್ಯೆಯ ಗಾಢತೆಯನ್ನು ಹೇಳಲು. ಎಲ್ಲ ಕಡೆಯಲ್ಲೂ ಹೆಂಗಸರ ಮೇಲೆ ಬಲಾತ್ಕಾರವಾಗುತ್ತಿದೆ, ಅವರಿಗೆ ಸಹಾಯದ ಅತ್ಯಂತ ಅವಶ್ಯಕತೆ ಇದೆ. ಈ ಸಂಸ್ಥೆಗಳು ಮಾಡುವ ಸಹಾಯಕ್ಕೆ ನಾವೆಲ್ಲಾ ಬೆಂಬಲ ನೀಡಬೇಕು.

2000 ಇಸವಿಯಲ್ಲಿ ದಕ್ಷಿಣ ಏಷ್ಯಾದಿಂದ ವಲಸೆ ಬಂದವರಿಗೆ ಸಹಾಯಮಾಡಲು South Asian Council for Social Services (SACSS) ಎಂಬ ಸಂಸ್ಥೆಯನ್ನು ಆರಂಭಿಸಿದೆವು. ನಾನು ಇದರ Executive Director ಆಗಿದ್ದೇನೆ. ಈ ಸಂಸ್ಥೆ ಶುರುಮಾಡಿದ ಹೊಸದರಲ್ಲಿಯೇ ನ್ಯೂಯಾರ್ಕ್ ನಗರ ಸೆಪ್ಟೆಂಬರ್ 11ರ ಘಟನೆಯಿಂದ ತತ್ತರಿಸಿತು. ಮೂರುಸಾವಿರ ಜನರ ಅಪಮೃತ್ಯು- ದೊಡ್ಡವರು, ಚಿಕ್ಕವರು, ಮಕ್ಕಳು, ಗಂಡಸರು, ಹೆಂಗಸರು, ಯುವಕರು ಆ ದೇಶ – ಈ ದೇಶ ಎನ್ನುವ ವ್ಯತ್ಯಾಸ ನೋಡದೆ ಎಲ್ಲರೂ ನಿಮಿಷ ಮಾತ್ರದಲ್ಲಿ ತೀರಿಕೊಂಡರು. ಅವರ ಆಸೆಆಕಾಂಕ್ಷೆಗಳನ್ನು, ಚೊಕ್ಕ ಜೀವನಗಳನ್ನು ಸುಟ್ಟು ಭಸ್ಮಮಾಡಿದ ಭೀಕರ ಬೆಂಕಿ ವಾರಗಟ್ಟಳೆ ಕೆಟ್ಟ ಧೂಪವನ್ನು ಕಾರುತ್ತಾ ಉರಿಯುತ್ತಲೇ ಇತ್ತು.

ಆ ಅನಾಹುತದಲ್ಲಿ ಮನೆಯವರನ್ನು ಕಳೆದುಕೊಂಡ 'ದೇಸಿ' ಸಂಸಾರಗಳಿಗೆ ಸಹಾಯ ನೀಡಲು ಯಾವ 'ದೇಸಿ' ಸಂಸ್ಥೆಗಳೂ ಇರಲಿಲ್ಲ. ಸ್ಯಾಕ್ಸ್ ಈ ದೇಸಿ ಸಂಸಾರಗಳ

ಪುನರುತ್ಥಾನಕ್ಕೆ ಇನ್ನಿಲ್ಲದಂತೆ ದುಡಿದಿದೆ. ಇಂಥದ್ದೊಂದು ಸಂಸ್ಥೆಯಿದೆ ಎಂದು ಗೊತ್ತಾದ ಮೇಲೆ, ಸರಕಾರ ಈ ದುರ್ಘಟನೆಯಲ್ಲಿ ಸಂತಪ್ತರಾದ ಸಂಸಾರಗಳನ್ನು ನಮ್ಮಲ್ಲಿಗೆ ಕಳಿಸಲು ಆರಂಬಿಸಿತು. ನಾವು ಒಟ್ಟು 46 ಸಂಸಾರಗಳೊಂದಿಗೆ ಕೆಲಸಮಾಡಿದೆವು – ಗಂಡ/ಹೆಂಡತಿಯರನ್ನು ಕಳೆದುಕೊಂಡವರು, ತಂದೆತಾಯಿಯರು, ಮಕ್ಕಳನ್ನು ಕಳೆದುಕೊಂಡವರ ತೀವ್ರ ಯಾತನೆ ನೋಡಲು ತೀರ ದುಃಖವೆನಿಸುತ್ತಿತ್ತು. ಮಾನಸಿಕ ಸ್ಥೈರ್ಯವನ್ನೇ ಅವರು ಕಳೆದುಕೊಂಡಿದ್ದರು. ಪ್ರತಿಯೊಬ್ಬರ ಸನ್ನಿವೇಶಕ್ಕೆ ಅನುಕೂಲವಾಗುವಂತೆ ಅವರಿಗೆ ಪ್ರತ್ಯೇಕ ಚಿಕಿತ್ಸೆ (individual therapy), ಸಾಮುದಾಯಿಕ ಚಿಕಿತ್ಸೆ (group therapy), ಮತ್ತು ಅವರಿಗೆ ಬೇಕಾದ ಇತರ ಸಹಾಯಗಳನ್ನು ನೀಡಿದೆವು. ಇವರಲ್ಲಿ ಬೆಂಗಳೂರಿನಿಂದ ಬಂದವರು ಕೆಲವರಿದ್ದರು– 26 ವರ್ಷದ ಮೂರು ಜನ ಯುವಕರು ಮತ್ತು ಮೂವತ್ತು ವರ್ಷದ ಮಹಿಳೆ. ಬಹಳ ಜಾಣೆಯಾಗಿದ್ದ ಈಕೆ, ಅವಳ ಏಳುವರ್ಷದ ಮಗ ಮತ್ತು ಗಂಡನನ್ನು ಬಿಟ್ಟು ಇಹ ಲೋಕದಿಂದ ಮರೆಯಾದಳು. ಇಲ್ಲಿಯೇ ನೆಲಸಿದ್ದ ಇನ್ನೊಬ್ಬ ಕನ್ನಡ ಮಹಿಳೆ 10 ತಿಂಗಳ ಮಗುವನ್ನೂ, ಗಂಡನನ್ನೂ ಹಿಂದೆ ಬಿಟ್ಟು ಕಾಣದ ಲೋಕಕ್ಕೆ ಹೋಗಿಬಿಟ್ಟಳು. ಅವರ ಜೀವನದ ಈ ಕತೆಗಳು ನನ್ನ ಹೃದಯವನ್ನು ಹಿಂಡಿದವು. ಎಂಟು ಜನ counsellors ಈ ಯೋಜನೆಗೆ ಸಹಾಯ ನೀಡಿದರು. ಐದು ವರ್ಷಗಳ ಕಾಲ ನಾವು ಈ ಸಂಸಾರಗಳೊಂದಿಗೆ ಕೆಲಸಮಾಡಿದೆವು. ನೊಂದಿದ್ದ ಅವರ ಬಾಳನ್ನು ಕೊಂಚವಾದರೂ ಹದಕ್ಕೆ ತರುವುದು ನಮ್ಮ ಉದ್ದೇಶವಾಗಿತ್ತು. ನಾನು ಇನ್ನೂ ಅವರೊಡನೆ ಸಂಪರ್ಕವನ್ನಿಟ್ಟುಕೊಂಡಿದ್ದೇನೆ. ಕೆಲವರು ಹೊಸ ಸಂಸಾರಗಳನ್ನು ಪ್ರಾರಂಭಿಸಿದ್ದಾರೆ. ಮಕ್ಕಳು ಬೆಳೆದಿದ್ದಾರೆ. ಕೆಲವು ಮಕ್ಕಳು ಇನ್ನೂ ಚಿಕಿತ್ಸೆಯಲ್ಲಿದ್ದಾರೆ. ಈ ಹತ್ತು ವರ್ಷಗಳಲ್ಲಿ ಈ ಸಂಸಾರಗಳು ತೋರಿಸಿರುವ ಸಹನೆ, ಅಸಾಧಾರಣ ಜೀವನಪ್ರೀತಿ ಮತ್ತು ಮತ್ತೆ ಬದುಕು ಕಟ್ಟಿಕೊಳ್ಳಬೇಕಾದಾಗ ಅವರುಗಳು ತೋರಿಸಿರುವ ಮಾನಸಿಕ ಸ್ಥೈರ್ಯ ನನ್ನನ್ನು ಮೂಕಳನ್ನಾಗಿ ಮಾಡಿದೆ.

ಸೆಪ್ಟೆಂಬರ್ ಹನ್ನೊಂದರ ದುರಂತ SACSSಗೆ ಒಂದು ನಿರ್ದಿಷ್ಟ ಗುರಿಯನ್ನೂ ಉದ್ದೇಶವನ್ನೂ ಕಲ್ಪಿಸಿಕೊಟ್ಟಿತ್ತು. ಈಗ ನಾವು ಮಕ್ಕಳ ಸೌಖ್ಯ, ಶುಭಕ್ಕಾಗಿ, ತಂದೆತಾಯಿಯರಿಗೆ ಇಲ್ಲಿನ ಕಾನೂನುಗಳನ್ನು ತಿಳಿಸಿ, ಅವರಿಗೆ ಮಾನಸಿಕ ಉದ್ವೇಗಗಳನ್ನು, ಕೋಪತಾಪಗಳನ್ನು ನಿರ್ವಹಣೆ ಮಾಡುವ ವಿಧಾನಗಳನ್ನು ಹೇಳಿಕೊಡುವುದು, ಆರೋಗ್ಯ ವಿಮೆ ಇಲ್ಲದವರಿಗೆ ಸಹಾಯಮಾಡಿ ಅದನ್ನು ಕೊಡಿಸುವುದು, ಹಿರಿಯರಿಗೆ ಅವರಿಗೆ ಬರಬಹುದಾದಂತಹ ಮನೋರೋಗ ಬರದಂತೆಯೂ, ಜ್ಞಾಪಕಶಕ್ತಿ ಕಳೆಯದಂತೆಯೂ ಏನೇನು ಮಾಡಬಹುದೆಂದು ತಿಳಿಸಿಕೊಡುತ್ತೇವೆ. ಇಂಗ್ಲಿಷ್, ಕಂಪ್ಯೂಟರ್ ಬಳಕೆ ಇವನ್ನು ಹೇಳಿಕೊಡುತ್ತೇವೆ. ಇವುಗಳು ನಮ್ಮ ಮುಖ್ಯ ಸೇವೆಗಳು (services). ನಾವು ಸಹಾಯ ಮಾಡುವ ಜನ

ಖಂಡಿತ 'ಮಾದರಿ ಅಲ್ಪಸಂಖ್ಯಾತ' ವರ್ಗಕ್ಕೆ ಸೇರಿದವರಲ್ಲ. ಪರರ ಮನೆಗಳಲ್ಲಿ ಮನೆಗೆಲಸ ಮಾಡುವವರು, ಟ್ಯಾಕ್ಸಿಯನ್ನು ದಿನಕ್ಕೆ 12–14 ಗಂಟೆ ಕಾಲ ನಡೆಸಿ ಹೊಟ್ಟೆ ತುಂಬಿಸಿಕೊಳ್ಳುವವರು, ಕಾಫ಼ಿಅಂಗಡಿಗಳ ಹಿಂದಿನ ಅಡುಗೆಮನೆಯಲ್ಲಿ ಪುಡಿಗಾಸುಗಳಿಗೆ ಜೀತಮಾಡುವವರು, ಹೀಗೆ ಅವರ ಕೆಲಸಗಳು. ಎಷ್ಟೋ ಜನಕ್ಕೆ ಆ ಕೆಲಸವೂ ಇಲ್ಲ.

ಒಮ್ಮೆ ಬಡ ಸಂಸಾರದ ಒಬ್ಬರಿಗೆ ಕೆಟ್ಟ ಖಾಯಿಲೆ ಬಂದು ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋದಾಗ 47,000 ಡಾಲರುಗಳ ಬಿಲ್ಲುಬಂತು. ಅಷ್ಟು ದೊಡ್ಡ ಮೊತ್ತ ಕೊಡಲು ಶಕ್ತಿಯಿಲ್ಲದ ಆ ಸಂಸಾರವನ್ನು ಆಸ್ಪತ್ರೆಯವರೂ, ಬಾಕಿ ವಸೂಲಿ ಮಾಡುವ ಏಜೆನ್ಸಿಯವರೂ, ತೊಳಲಾಡಿಸುತ್ತಿದ್ದಾಗ, SACSS ಸಹಾಯ ಮಾಡಿ ಆ ಬಿಲ್ಲನ್ನು ವಜಾ ಮಾಡಿಸಿತು. ತಮ್ಮ ಮಕ್ಕಳನ್ನು ನಮ್ಮ ಸಹಾಯದಿಂದ ಸಾಕು ತಂದೆ ತಾಯಿಯರಿಂದ (foster parents) ವಾಪಸು ಪಡೆದವರ ಆನಂದ ನೋಡಿದರೆ ನಮಗೆ ನಾವು ಕೆಲಸ ಮಾಡುವುದು ಸಾರ್ಥಕವೆನಿಸುತ್ತದೆ.

ನಮ್ಮ ಜನಗಳಿಗೆ ಬೇಕಾದ ಸೇವೆಗಳು ತುಂಬಾ ಇವೆ. ಸರಿಯಾದ ಮನೆಗಳು, ಕೆಲಸಗಳು, ಆರ್ಥಿಕ ದುಃಸ್ಥಿತಿಯಲ್ಲಿರುವವರಿಗೆ ಸರಕಾರ ಆಹಾರಕ್ಕೆ ಕೊಡುವ ಸಹಾಯವನ್ನು (Food Stamps) ದೊರಕಿಸಿಕೊಡುವುದು, ವಲಸೆಯ ಸಂಬಂಧದ ಸಹಾಯ – ಮುಂತಾದುವು ಅವುಗಳ ಪೈಕಿ ಕೆಲವು. ನಮ್ಮವರು ಎಷ್ಟೋ ಜನಕ್ಕೆ ಇಂಗ್ಲಿಷಿನಲ್ಲಿ ಮಾತನಾಡಲೂ ಬರುವುದಿಲ್ಲ. ಅಂಥದ್ದರಲ್ಲಿ ಇಲ್ಲಿಯ ಜೀವನಕ್ಕೆ ಬೇಕೇಬೇಕಾದ ಅನುಕೂಲಗಳನ್ನು ಗಳಿಸಲು ಅವರಿಗೆ ಕಷ್ಟ ಸಾಧ್ಯ. ನಮ್ಮ ಸಮಾಜ ಸೇವಾ ಸಂಸ್ಥೆಗಳು ಅವರಿಗೆ ಸಹಾಯ ಮಾಡಬೇಕಾದ್ದು ಅಗತ್ಯವಾಗಿದೆ. ಈ ಸಂಸ್ಥೆಗಳು ಸಾಧಾರಣವಾಗಿ ಸಣ್ಣ ಬಡ್ಜೆಟ್‌ನಲ್ಲಿ ಸಾಕಷ್ಟು ಹಣವಿಲ್ಲದೇ ಒದ್ದಾಡುತ್ತವೆ. ಅವರಿಗೆ ನಮ್ಮ ಜನಗಳ ಬೆಂಬಲ ಅತ್ಯಗತ್ಯ. ಭಾರತದಲ್ಲಿನ ಸಂಸ್ಥೆಗಳಿಗೂ, ದೇವಸ್ಥಾನ, ಚರ್ಚುಗಳಿಗೂ ನಾವು ಮಾಡುತ್ತಿರುವ ಸಹಾಯದೊಂದಿಗೆ, ಇಲ್ಲಿಯ ನಮ್ಮವರ ಪೋಷಣೆಯೂ ನಾವೆಲ್ಲಾ ಮಾಡಬೇಕಾದ್ದೇ ಅಲ್ಲವೇ?

ಅಮೆರಿಕೆಗೆ ಬಂದಾಗ ನಮ್ಮಲ್ಲಿ ಎಷ್ಟೋ ಜನರಿಗೆ ಐದು ಹತ್ತು ವರ್ಷಗಳಾದ ಮೇಲೆ ಭಾರತಕ್ಕೆ ತೆರಳುವ ಗುರಿ ಇರುತ್ತದೆ. ನನಗದು ಮನಸ್ಸಿನಲ್ಲಿ ಸ್ಪಷ್ಟವಾಗಿಲ್ಲದಿದ್ದರೂ ಇಲ್ಲಿಯ ಜೀವನ ಒಮ್ಮೊಮ್ಮೆ ಅಲ್ಪ ಕಾಲಿಕವೆನ್ನುವ ಅನಿಸಿಕೆ ಇರುತ್ತಿತ್ತು. ಮಗಳು ಬೆಳೆಯುತ್ತಾ ಇಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಸಂತೋಷವಾಗಿದ್ದಂತೆ, ಕ್ರಮೇಣ ನೆಂಟರಿಷ್ಟರು ಇಲ್ಲಿಗೆ ಬಂದು ನೆಲೆಸಿದಾಗ, ಇಲ್ಲಿಯ ವ್ಯವಹಾರಗಳಲ್ಲಿ ನಾನು ಉತ್ಸುಕಳಾದಂತೆ, ಆ ಅನಿಸಿಕೆ ಮಾಯವಾಯಿತು. ಈ ನಾಲ್ಕು ದಶಕಗಳಲ್ಲಿ ನನಗೆ ನಾನಾ ಅನುಭವಗಳಾಗಿವೆ. ಈ ಅನುಭವಗಳಿಗೆ ನಾನು ಕೃತಜ್ಞಳಾಗಿದ್ದೇನೆ. ನಾವು ಇಲ್ಲಿಗೆ ಬಂದದ್ದರಿಂದ, ಪ್ರಪಂಚದ ಮೂಲೆಮೂಲೆಗಳಿಂದ ಬಂದವರ ಪರಿಚಯವಾಗಿದೆ. ಈ ಪ್ರಪಂಚದ ದೊಡ್ಡ ರಚನೆಯಲ್ಲಿ ನಾವು ಎಲ್ಲಿದ್ದೇವೆ ಎನ್ನುವುದರ ತಿಳಿವು ತೋರಿದೆ.

ಬೇರು ಸೂರು

ಎಷ್ಟೋ ಅವಕಾಶಗಳು ಭಾರತದಲ್ಲಿಯೇ ಇದ್ದಿದ್ದರೆ ಸಿಗುತ್ತಿರಲಿಲ್ಲವೇನೊ ಅನ್ನಿಸಿದರೂ, '...ರೆ ಪ್ರಪಂಚ'ದಲ್ಲಿ ಏನಾಗುತ್ತಿತ್ತೆಂದು ಹೇಳಲು ಅಸಾಧ್ಯ.

ಊರಿಗೆ ಹೋದಾಗ, ಅಲ್ಲಿ ಆಗಿರುವ ಪ್ರಗತಿ, ಅಭಿವೃದ್ಧಿಯನ್ನು ನೋಡಿದಾಗ, ಹೆಮ್ಮೆಯಾಗುತ್ತದೆ. ಅಲ್ಲಿಯ ಮಿತ್ರರೊಂದಿಗೆ ಮನೆಯವರೊಂದಿಗೆ ಮಾತಾಡಿದಾಗ ಕೆಲವು ವಿಷಯಗಳಲ್ಲಿ ನಮಗೆ ಒಮ್ಮತವಿಲ್ಲದಿದ್ದರೂ ಒಟ್ಟಿನಲ್ಲಿ ನಾವು ಇನ್ನೂ ಒಂದೇ ಜನವೆಂದು ಸ್ಪಷ್ಟವಾಗಿ ವಿದಿತವಾಗುತ್ತದೆ. ಅಲ್ಲಿರಲಿ, ಇಲ್ಲಿರಲಿ, ನನಗನ್ನಿಸುವುದು ಆ ದೇಶವೂ ನಮ್ಮದೇ, ಈ ದೇಶವೂ ನಮ್ಮದೇ. ನಾವು ಎರಡು ದೊಡ್ಡ ಪ್ರಜಾಪ್ರಭುತ್ವವಿರುವ ದೇಶಗಳಿಗೆ ವಾರಸುದಾರರಾಗಿರುವುದು ನನ್ನ ಮನಸ್ಸಿಗೆ ನೆಮ್ಮದಿ ನೀಡಿದೆ. ಅದು ಹೀಗೆಯೇ ಮುಂದುವರೆಯುತ್ತದೆಯೆಂದು ಆಶಿಸುತ್ತೇನೆ.

ಎಲೆ ಮರೆಯ ಕಾಯಿ ಹಣ್ಣಾದದ್ದು



– ಎಸ್.ಎನ್. ಶ್ರೀಧರ್

ಒಂದು ದಿನ ಕೋಲಾರದ ಸರ್ಕಾರಿ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ನಮ್ಮ ಸ್ಕೂಲಿನ ಕ್ವಾಡ್ರ್ಯಾಂಗಲ್‌ನಲ್ಲಿ ಇಡೀ ಸ್ಕೂಲೇ ನೆರೆದಿತ್ತು, ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿರಬೇಕು, ಒಂದೊಂದು ತರಗತಿಯವರೂ ಒಂದೊಂದು ಸಾಲಿನಲ್ಲಿ, ಒಬ್ಬರ ಹಿಂದೆ ಒಬ್ಬರು ಸಾಲಾಗಿ ಕೂತಿದ್ದರು. ಒಂದೊಂದು ಸಾಲಿನ ಮಧ್ಯೆ ಮೇಷ್ಟ್ರುಗಳು ಬೆತ್ತ ಹಿಡಿದು ಶತಪಥ ಹಾಕುತ್ತಾ ಶಿಸ್ತು ಕಾಪಾಡುತ್ತಿದರು. ಕೆ.ಜಿ.ಎಫ್.ನಲ್ಲಿ ನಡೆಯಲಿದ್ದ ಯಾವುದೋ ಇಂಟರ್–ಹೈ–ಸ್ಕೂಲ್ ಇಂಗ್ಲಿಷ್ ಡಿಬೇಟಿಗೆಂದು ನಮ್ಮ ಸ್ಕೂಲಿನಿಂದ ಸ್ಪರ್ಧಿಗಳನ್ನು ಆಯ್ಕೆ ಮಾಡಲು ಒಂದು ಕಾಂಪಿಟಿಷನ್ ನಡೆಯುತ್ತಿತ್ತು. ನನಗಾಗ ಹನ್ನೊಂದು–ಹನ್ನೆರಡು ವರ್ಷ ಇರಬಹುದು. ನಾನೆಂದೂ ಡಿಬೇಟ್–ಗಿಬೇಟ್‌ನಲ್ಲಿ ಭಾಗವಹಿಸಿರಲಿಲ್ಲ. ರಂಗಸ್ಥಳದಿಂದ ಬಹಳ ಹಿಂದೆ ಕೂತು ಮೇಷ್ಟರ ಕಿವಿ ತಪ್ಪಿಸಿ ಏನೇನೋ ಜೋಕ್ ಮಾಡಿಕೊಂಡು ಜುಜುಬಿ ಆನಂದಪಡುತ್ತಿದ್ದೆವು. ಮುಕ್ಕಾಲು ಪಾಲು ಕಾರ್ಯಕ್ರಮ ಮುಗಿದಿತ್ತು.

ಇದ್ದಕ್ಕಿದ್ದಂತೆ ನನ್ನ ಪಕ್ಕದಲ್ಲೇ ನಮ್ಮ ತಂದೆ ಪ್ರತ್ಯಕ್ಷರಾದರು. ಕೈಸನ್ನೆಯಿಂದ ಕರೆದರು. ಅವರು ಅದೇ ಶಾಲೆಯಲ್ಲಿ ಇಂಗ್ಲಿಷ್ ಮೇಷ್ಟ್ರಾಗಿದ್ದರೂ, ಕಾನ್‌ಫ್ಲಿಕ್ಟ್ ಆಫ್ ಇಂಟರೆಸ್ಟ್ ಬೇಡ ಎಂದು ನನ್ನ ಕ್ಲಾಸಿಗೆ ಪಾಠ ಮಾಡುತ್ತಿರಲಿಲ್ಲ. ಅಲ್ಲದೆ, ತಂದೆಯೆಂದರೆ ನಮ್ಮ ಮನೆಯಲ್ಲಿ ಭಯ, ಭಕ್ತಿಯ ವಿಗ್ರಹ. ಇದೇನಪ್ಪ ಗ್ರಹಚಾರ ಬಂತು ಅಂದುಕೊಂಡು ಅಂಜಂಜುತ್ತಲೇ ಎದ್ದು ಹೋದೆ. ರಂಗಸ್ಥಳದ ಕಡೆ ಕೈ ಮಾಡಿ, 'ಹೋಗು, ನೀನೂ ಮಾತಾಡು' ಎಂದರು. ನಾನು, ಎದೆ ಗಂಟಲಿಗೆ ಸಿಕ್ಕವನಂತೆ, 'ನಾನಾ?' ಎಂದೆ. 'ಹೂಂ, ನೀನೇ' ಅಂದರು. 'ನಾನೇನೂ ಪ್ರಿಪೇರ್ ಆಗಿಲ್ಲ' ಅಂದೆ. 'ಪ್ರಿಪೇರ್ ಆಗಲಿಕ್ಕೆ ಏನೂ ಇಲ್ಲ, ಇಂಪ್ರಾಂಪ್ಟು ಸ್ಪೀಚ್ ಇದು. ನೀನು ಅಲ್ಲಿಗೆ ಹೋದಮೇಲೆ ವಿಷಯ ಕೊಡುತ್ತಾರೆ' ಅಂದರು. ಬಾಯಿ ಒಣಗಿ, ಮೈ ಬೆವರಿ, ಎದೆ ನಗಾರಿಯಂತೆ ಹೊಡೆದುಕೊಳ್ಳುತ್ತಿತ್ತು. ಅವರೇ ಕರೆದುಕೊಂಡುಹೋಗಿ ಹೆಸರು ನೋಂದಾಯಿಸಿದರು. ನನ್ನ ಸರದಿ ಬಂದು ಮೈಕಿನ ಮುಂದೆ ಬಂದಾಗ ಜನರ ಸಮುದ್ರವೇ ಎದುರಾದಂತೆ ಆಯಿತು. ಏನು ವಿಷಯ ಕೊಟ್ಟರೋ, ಏನು ಮಾತಾಡಿದೆನೋ, ಹೇಗೆ ಆ ಮೂರು ನಿಮಿಷ ಕಳೆಯಿತೋ ದೇವರಿಗೂ ಗೊತ್ತೋ ಇಲ್ಲವೋ, ಅಂತೂ ನಾನು ಸೆಲೆಕ್ಟ್ ಆಗಿಬಿಟ್ಟೆ ಅಂತ ಕೇಳಿ ಸಂತೋಷದಷ್ಟೇ ಗಾಬರಿಯೂ ಆದ ಜ್ಞಾಪಕ. ಅಲ್ಲಿಂದ ಶುರುವಾಯಿತು, ನನ್ನ ಪಬ್ಲಿಕ್

ಸ್ಪೀಕಿಂಗ್ ಕೆರಿಯರ್.

ಅದಾದ ಮೇಲೆ ಶಿವಮೊಗ್ಗಾದಲ್ಲಿ, ಬೆಂಗಳೂರಿನಲ್ಲಿ, ಎಷ್ಟೋ ಡಿಬೇಟುಗಳಲ್ಲಿ ಪಾಲುಗೊಂಡು, ಹಲವಾರು ಬಾರಿ ಪ್ರೈಜ್ ಗೆದ್ದು, ರಂಗ ಕಂಪನವಂತೂ ಹೋಗುವಷ್ಟು ಆತ್ಮವಿಶ್ವಾಸ ಬಂತು. ನಂತರ, ನನ್ನ ವೃತ್ತಿಜೀವನದಲ್ಲಿ, ವಿಶ್ವವಿದ್ಯಾಲಯದ ತರಗತಿಗಳಲ್ಲಿ, ವೃತ್ತಿಪರ ಸಮ್ಮೇಳನಗಳಲ್ಲಿ, ಸಾರ್ವಜನಿಕ ಸಮಾರಂಭಗಳಲ್ಲಿ ಸಾವಿರಾರು ಭಾಷಣಗಳನ್ನು ಮಾಡಿರಬಹುದು. ಆದರೂ, ಎಷ್ಟೇ ಸಿದ್ಧತೆ ಮಾಡಿಕೊಂಡಿದ್ದರೂ, ನನ್ನ ತಯಾರಿ ಸಾಲದು ಎನ್ನುವ ಅಧೈರ್ಯ, ಅಳುಕು ಇದ್ದೇ ಇದ್ದುಬಿಟ್ಟಿದೆ. ಎಷ್ಟೇ ಮಂದಿ, ಎಷ್ಟೇ ದೊಡ್ಡವರು, ಎಷ್ಟೇ ಮನಃಪೂರ್ವಕವಾಗಿ ಪ್ರಶಂಸೆ ಮಾಡಿದರೂ, ಏನೋ, ಇದೊಂದು ಬಾರಿ ಬಚಾವ್ ಆದೆ, ಆದರೆ ನಾನು ನಿಜವಾಗಿಯೂ ಈ ಹೊಗಳಿಕೆಗೆ, ಬಹುಮಾನಕ್ಕೆ, ಗೌರವಕ್ಕೆ ಅರ್ಹನಲ್ಲ ಎನ್ನುವ ಗುಮಾನಿ ಮಾತ್ರ ಇಂದಿಗೂ ಹೋಗಿಯೇ ಇಲ್ಲ.

ಕಾಲೇಜಿಗೆ ಬಂದಾಗ ಅಲ್ಲಿ ಇನ್ನೊಂದು ಚಾಲೆಂಜ್ ಕಾದಿತ್ತು. ಇಂಗ್ಲೀಷ್ ಮೀಡಿಯಮ್‌ನಲ್ಲಿ ಓದಿ, ಒಳ್ಳೆಯ ಅಂಕಗಳನ್ನು ಗಳಿಸಿ, ಇಂಗ್ಲಿಷ್ ಆನರ್ಸ್‌ಗೆ ಅಡ್ಮಿಶನ್ ಪಡೆದುಕೊಂಡಿದ್ದರೂ, ಬೆಂಗಳೂರಿಗೆ ಬಂದಾಗ ನೀರಿನಿಂದ ಆಚೆ ಬಿದ್ದ ಮೀನಿನಂತಾಗಿದ್ದೆ. ನಾಲ್ಕೈದು ಜನರನ್ನು ಬಿಟ್ಟರೆ ನನ್ನ ಕ್ಲಾಸ್‌ಮೇಟುಗಳೆಲ್ಲ 'ಠಸ್‌ಪುಸ್' ಎಂದು ಕಾನ್ವೆಂಟ್ ಇಂಗ್ಲಿಷ್ ಆಡಿಕೊಂಡು ನನಗೆ ಇಂಗ್ಲಿಷ್ ಬರುತ್ತದೆಯೋ ಇಲ್ಲವೋ ಅನ್ನಿಸಿಬಿಟ್ಟಿದ್ದರು. ಅವರ ನೈಲಾನ್ ಸೀರೆಗಳು, ಸ್ಲೀವ್‌ಲೆಸ್ ಬ್ಲೌಸುಗಳು, ಹೈಹೀಲ್ಡ್ ಚಪ್ಪಲಿಗಳು, ನೇರಳೆ, ಪಾರದರ್ಶಕ ಗುಲಾಬಿ ಲಿಪ್ ಸ್ಟಿಕ್ಕುಗಳು, ಶ್ಯಾಂಪೂ ಮಾಡಿದ, ಬಾಬ್ ಮಾಡಿದ ರೇಶ್ಮೆ ಕೂದಲು, ಶರ್ಮಿಳಾ ಟ್ಯಾಗೋರ್ ಶೈಲಿ ಹಕ್ಕಿಗೂಡಿನ ಕೇಶವಿನ್ಯಾಸಗಳು– ಬೇಡರೆಡ್ಡಿಪಾಳ್ಯದಿಂದ ಬಂದ ಚಿದಾನಂದರೆಡ್ಡಿಯನ್ನು ಬಿಡಿ, ಶಿವಮೊಗ್ಗಾದಿಂದ ಬಂದ ನಾನು, ಚಿಕ್ಕಮಗಳೂರಿನಿಂದ ಬಂದ ದಿನೇಶ, ಭದ್ರಾವತಿಯಿಂದ ಬಂದ ಶಂಕರಸ್ವಾಮಿ, ಇವರನ್ನೂ ಹಳ್ಳಿಯ ಗುಗ್ಗುಗಳೆನ್ನಿಸಿಬಿಟ್ಟಿದ್ದವು.

ಈ ವಾತಾವರಣದಲ್ಲಿ ಪಿ. ಲಂಕೇಶ್, ಬಿ. ಚಂದ್ರಶೇಖರ, ಎಸ್. ರಾಮಸ್ವಾಮಿ, ಡಬ್ಲ್ಯೂ.ಡಬ್ಲ್ಯೂ.ಎಸ್. ಭಾಸ್ಕರ್, ಕೆ. ಮರುಳಸಿದ್ದಪ್ಪ, ವೈಎನ್‌ಕೆ, ಎನ್. ನಂಜುಂಡಸ್ವಾಮಿ, ಎಮ್.ಎನ್. ಶ್ರೀನಿವಾಸ್ ಇವರ ಅದ್ಭುತ ಪಾಂಡಿತ್ಯ, ವೈಚಾರಿಕ ಪ್ರಾಗಲ್ಭ್ಯ, ಕಿರಿಯರ ಬಗೆಗಿನ ಆಪ್ತತೆ, ವಿಶ್ವಾಸ, ತಾಳ್ಮೆಯುತ ಮಾರ್ಗದರ್ಶನ, ಧೈರ್ಯ ತುಂಬುವ ಉತ್ತೇಜನದಿಂದ, ಹಾಗೂ ಟಿ.ಎನ್. ಸೀತಾರಾಮ್, ಕಿ. ರಂ. ನಾಗರಾಜ, ಕೆ.ವಿ. ನಾರಾಯಣ, ಬಿ.ಆರ್. ಲಕ್ಷ್ಮಣರಾವ್, ಯು.ವಿ. ವಿಶ್ವನಾಥ, ಎಸ್ತರ್ ನಲ್ಲಮುತ್ತು ಅಂತಹ ಪ್ರತಿಭಾವಂತ, ಸೃಜನಶೀಲ ವ್ಯಕ್ತಿಗಳ ಸ್ನೇಹದಿಂದ ನನ್ನ ವ್ಯಕ್ತಿತ್ವವು

ಮುರುಟಿಕೊಳ್ಳುವುದರ ಬದಲು, ಕೇವಲ ಅಕಡೆಮಿಕ್ ಆಗಿಯಲ್ಲದೆ, ತಾಯ್ನುಡಿ, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಸಂಸ್ಕೃತಿ, ನಾಟಕ–ಅಭಿನಯ, ಸಂಗೀತ, ಗಮಕ, ಕಲೆ, ಸಾಮಾಜಿಕ–ರಾಜಕೀಯ ಜಾಗೃತಿ, ಇನ್ನೂ ಅನೇಕ ಆಯಾಮಗಳನ್ನು ಪಡೆದು, ಅನೂಹ್ಯವಾಗಿ ಅರಳಿದ್ದನ್ನು ನೆನೆದರೆ ಕೃತಜ್ಞತೆಯಿಂದ ತಲೆ ಬಗ್ಗುತ್ತದೆ. ಅಂತಹ ವೈಚಾರಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಭಾಗ್ಯ ನನಗೆ ದೊರೆತದ್ದು ಎಷ್ಟು ಕಾಕತಾಳೀಯ ಎಂದು ಅಚ್ಚರಿಯಾಗುತ್ತದೆ. ಒಬ್ಬ ವ್ಯಕ್ತಿಯ, ವಿದ್ಯಾರ್ಥಿಯ ವಿಕಸನದಲ್ಲಿ ಅವನ/ಳ ಪ್ರತಿಭೆಯ ಜೊತೆಗೇ, ಉದ್ದೀಪನಕಾರಿಯಾದ ಪರಿಸರದ ಪಾತ್ರ ಎಷ್ಟು ಕ್ರೂಶಿಯಲ್, ಕ್ರಿಟಿಕಲ್ ಆಗಿರುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ.

ಇಂಗ್ಲಿಷ್ ಎಮ್. ಎ.ನಲ್ಲಿ ಪ್ರಥಮ ದರ್ಜೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾದರೂ ಸ್ವಭಾವಸಿದ್ಧವಾದ ಹಿಂಜರಿಕೆ ಇದ್ದೇ ಇತ್ತು. ಹಾಗಾಗಿ ಹೈದರಾಬಾದಿನ ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶೀ ಭಾಷಾ ಸಂಸ್ಥೆಯಲ್ಲಿ (ಈಗ ವಿಶ್ವವಿದ್ಯಾಲಯ) ಕೆಲಸ ಮಾಡುತ್ತಿರುವಾಗ ನಡೆದ ಒಂದು ಸಂಗತಿ ಅಚ್ಚೊತ್ತಿದಂತಿದೆ. ಅಲ್ಲಿಗೆ ಬ್ರಜ್ ಕಾಛ್ರು ಎಂಬ ಅಮೆರಿಕಾದ ಇಲಿನಾಯ್ ವಿಶ್ವವಿದ್ಯಾಲಯದ ಪ್ರಸಿದ್ಧ ಪ್ರಾಧ್ಯಾಪಕರೊಬ್ಬರು ಸಂಶೋಧನೆಗೆಂದು ಬಂದಿದ್ದರು. ನನ್ನದೊಂದು ಸೆಮಿನಾರ್ ಬಗ್ಗೆ ಒಳ್ಳೆಯ ಪ್ರತಿಕ್ರಿಯೆಗಳನ್ನು ಕೇಳಿದ ಅವರು ತಮ್ಮ ಆಫೀಸಿಗೆ ಕರೆದು ನನ್ನ ಮುಂದಿನ ಯೋಜನೆಗಳ ಬಗ್ಗೆ ವಿಚಾರಿಸಿದರು. ನಾನು ಬೆಂಗಳೂರಿನ ಟಾಟಾ ಇನ್ಸ್ಟಿಟ್ಯೂಟಿನಲ್ಲಿ ಪಿ.ಎಚ್.ಡಿ ಮಾಡುವ ಉದ್ದೇಶ ಇದೆ ಅಂದೆ. 'ವಿದೇಶದಲ್ಲಿ ಓದುವ ಯೋಚನೆ ಇಲ್ಲವಾ?' ಎಂದು ಕೇಳಿದರು. 'ಇಲ್ಲ, ನನಗೆ ಹೇಗೆ ಅಂತಹ ಅವಕಾಶ ಸಿಕ್ಕೀತು' ಎಂದೋ ಏನೋ ಉತ್ತರಿಸಿರಬೇಕು, ಅದಕ್ಕೆ ಅವರು ಕ್ಯಾಶುಯಲ್ ಆಗಿ 'ಯಾಕೆ ಸಿಗಲಾರದು? ಈಗ (ನನ್ನ ವಿಭಾಗದ ಮುಖ್ಯಸ್ಥರಾದ) ಪ್ರೊಫೆಸರ್ ತಿಕ್ಕೂ ಅವರಿಗೆ, ಅಥವಾ (ಆ ಸಂಸ್ಥೆಯ ಅತ್ಯುನ್ನತ ಅಧಿಕಾರಿಗಳಾದ) ಪ್ರೊಫೆಸರ್ ರಮೇಶ್ ಮೋಹನ್ ಅವರಿಗೆ ಹೇಗೆ ಸಿಕ್ಕಿತು? ಅವರಿಗೇನು ಕೊಂಬಿದೆಯೇ?' ಎಂದು ಕೇಳಿದಾಗ ಸುಸ್ತಾಗಿಬಿಟ್ಟೆ. ನಾನು ಯಾವುದೋ ಬೇರೆ ಜಗತ್ತಿನವರು, ಅಂದುಕೊಂಡಿದ್ದವರನ್ನು ನನ್ನ ಸಮಾನರೋ ಎಂಬಂತೆ ಒಂದೇ ಉಸಿರಿನಲ್ಲಿ ನನ್ನೊಡನೆ ಸೇರಿಸಿದ್ದು ಕೇಳಿ ದಂಗಾಗಿ ಹೋದೆ. ಅಮೇರಿಕಾದ 'ಈಕ್ವಲ್ ಆಪರ್ಚುನಿಟಿ' ತತ್ತ್ವವನ್ನು ಪ್ರಾಯೋಗಿಕವಾಗಿ ಅನುಭವಿಸಿದ ಆ ಗಳಿಗೆ ರೋಮಾಂಚಕವಾಗಿತ್ತು. ನನ್ನಲ್ಲಿ ಆತ್ಮವಿಶ್ವಾಸ ತುಂಬಿದ ಆ ಒಂದು ಮಾತು ನನ್ನನ್ನು ನೋಡಲು ಬಂದ ಸಾವಿರಾರು ವಿದ್ಯಾರ್ಥಿಗಳೊಡನೆ ನಾನು ನಡೆದುಕೊಂಡ ರೀತಿಯನ್ನು ನಿರ್ದೇಶಿಸಿದೆ.

ಬೇರು ಸೂರು

1973ರಿಂದ '79ರ ವರೆಗೆ ಇಲಿನಾಯ್ ವಿಶ್ವ ವಿದ್ಯಾಲಯದಲ್ಲಿ ಭಾಷಾ ವಿಜ್ಞಾನ (ಲಿಂಗ್ವಿಸ್ಟಿಕ್ಸ್)ದಲ್ಲಿ ಪಿ.ಎಚ್.ಡಿ. ಮಾಡುವಾಗ ನನ್ನ ಪ್ರಾಧ್ಯಾಪಕರಿಂದ ನಾನು ಕಲಿತ ಪಾಠಗಳು ಎಲ್ಲ ಸಂಶೋಧನಾ ವಿದ್ಯಾರ್ಥಿಗಳಿಗೆ ದೊರಕಿದರೆ ಎಷ್ಟು ಅನುಕೂಲವಾಗುತ್ತದೆ ಎಂದು ಎಷ್ಟೋ ಬಾರಿ ಯೋಚಿಸಿದ್ದೇನೆ. ಅದರಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೇಳುತ್ತೇನೆ. ವಿದ್ಯಾರ್ಥಿಯಾಗಿರುವಾಗಲೇ ವಿದ್ವತ್ ಸಭೆಗಳಲ್ಲಿ ಭಾಗವಹಿಸುವುದು, ಅಲ್ಲಿ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸುವುದು, ಅವುಗಳನ್ನು ವಿದ್ವತ್ ಪತ್ರಿಕೆಗಳಿಗೆ ಪ್ರಕಟಣೆಗಾಗಿ ಕಳಿಸುವುದು; ಭಾಷಣಕ್ಕೆ, ಸಮ್ಮೇಳನಕ್ಕೆ ಬಂದ ಸಂದರ್ಶಕ ವಿದ್ವಾಂಸರೊಡನೆ ಮಾತುಕತೆ, ಸಂವಾದ, ಪತ್ರ ವ್ಯವಹಾರ ನಡೆಸುವುದು, ಅವರೊಡನೆ ಅವರ ಸಂಶೋಧನೆಯ ವಿಷಯದ ಬಗ್ಗೆಯಷ್ಟೇ ಅಲ್ಲದೆ ಅವರ ವೃತ್ತಿ ಜೀವನದ ಇತರ ಆಯಾಮಗಳ ಬಗ್ಗೆಯೂ ಮಾತುಕತೆ, ಅವರ ವೈಯಕ್ತಿಕ ಜೀವನ (ತಂದೆ–ತಾಯಿ, ಹೆಂಡತಿ–ಮಕ್ಕಳು, ಆಟಪಾಟ, ಊಟತಿಂಡಿ, ರಾಜಕೀಯ ಆಸಕ್ತಿ, ಇತ್ಯಾದಿ ವಿಷಯಗಳನ್ನು ಕುರಿತು ಐಶಾರಾಮವಾಗಿ ಮಾತನಾಡಿ ಅವರನ್ನು ಕೇವಲ 'ವಿದ್ವಾಂಸ/ಸಂಶೋಧಕ'ರನ್ನಾಗಿ ಮಾತ್ರವಲ್ಲದೆ ಒಬ್ಬ ಬಹುಮುಖ ಆಸಕ್ತಿ–ಕಾಳಜಿಗಳುಳ್ಳ ನಮ್ಮ–ನಿಮ್ಮಂತಹ ಮನುಷ್ಯರಂತೆ ವ್ಯವಹರಿಸುವುದು– ಇದೆಲ್ಲದರ ಪ್ರಾಮುಖ್ಯ ನನಗೆ ನಿಧಾನವಾಗಿ ಅರಿವಾಯಿತು. ಅದಕ್ಕೆ ಮುಂಚೆ ನಾನು ಕೇವಲ ವೃತ್ತಿ–ಕೇಂದ್ರಿತ ಸಂಬಂಧ ಮಾತ್ರ ಇಟ್ಟುಕೊಳ್ಳುವುದು ಸರಿ, ಅಥವಾ ಸಾಕು ಎಂದುಕೊಂಡಿದ್ದೆ. ಆದರೆ ಅಮೆರಿಕದಲ್ಲಿ ಶಿಕ್ಷಕ–ವಿದ್ಯಾರ್ಥಿ ಹಾಗೂ ವೃತ್ತಿಪರ ಸಂಬಂಧಗಳು ಸಾಕಷ್ಟು ಅನೌಪಚಾರಿಕವಾಗಿರುತ್ತವೆಂದು ಬೇಗನೇ ಅರಿತುಕೊಂಡೆ. ಪ್ರೊ. ಕಾಛ್ರು ಅವರ ಇನ್ನೊಬ್ಬ ಜಗದ್ವಿಖ್ಯಾತ ಮಾನಸಿಕ ಭಾಷಾವಿಜ್ಞಾನಿ ಪ್ರೊ. ಚಾರ್ಲ್ಸ್ ಆಸ್‌ಗುಡ್ ಅವರ ಮೇಲ್ಪಂಕ್ತಿ ಮಾರ್ಗದರ್ಶನ ದೊರೆತದ್ದು, ಅವರಿಬ್ಬರೂ ನನ್ನನ್ನು ಮೊದಲಿನಿಂದಲೂ ವಿದ್ಯಾರ್ಥಿಗಿಂತ ಸಹೋದ್ಯೋಗಿಯಂತೆ ಕಂಡದ್ದು ನನ್ನ ಭಾಗ್ಯ. ಇಂಥ ಅದೃಷ್ಟ ಭಾರತದಲ್ಲೂ ಎಲ್ಲ ಗ್ರಾಜುಯೇಟ್ ವಿದ್ಯಾರ್ಥಿಗಳಿಗೂ ದೊರೆತರೆ ನಮ್ಮ ಸಂಶೋಧನಾ ಸಂಸ್ಕೃತಿ ಎಷ್ಟು ಮುಂದುವರೆಯಬಹುದಲ್ಲವೆ? ಅದಕ್ಕೆ ಸೂಪರ್‌ವೈಸರ್‌ಗಳಲ್ಲಿ ಮನೋವೈಶಾಲ್ಯ ಹಾಗೂ ಇನ್‌ಸೆಕ್ಯುರಿಟಿಯ ಅಭಾವ ಬೇಕಾಗುತ್ತದೆ.

ನಾನು ಸ್ಟೋನಿಬ್ರೂಕ್ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನದ ಅಸಿಸ್ಟೆಂಟ್ ಪ್ರೊಫೆಸರ್ ಆಗಿ 1980ರಲ್ಲಿ ನೇಮಕಗೊಂಡ ಎಳಸಿನಲ್ಲೇ ನಡೆದ ಒಂದು ಘಟನೆ ನನಗೆ ಅಮೇರಿಕಾದ ಇನ್ನೊಂದು ಮುಖ್ಯ ಮೌಲ್ಯ ಹೇಗೆ ಪ್ರಾಯೋಗಿಕವಾಗಿ ಅನುಷ್ಠಾನವಾಗುತ್ತದೆ ಎಂದು ತಿಳಿಸಿಕೊಟ್ಟಿತ್ತು. ಪ್ರಾಧ್ಯಾಪಕನ ಮುಖ್ಯ ಕೆಲಸ ಸಂಶೋಧನೆ ಹಾಗೂ ಬೋಧನೆ (ಆ ಕ್ರಮದಲ್ಲಿ, ಒಳ್ಳೆಯ ವಿಶ್ವವಿದ್ಯಾಲಯಗಳಲ್ಲಿ) ಆದರೂ, ವಿಭಾಗದ ಹಾಗೂ ವಿಶ್ವವಿದ್ಯಾಲಯದ ದೈನಂದಿನ ವ್ಯವಹಾರಗಳನ್ನು

ನಿಭಾಯಿಸಲೆಂದು ಪ್ರಾಧ್ಯಾಪಕರ ಹಲವಾರು ಕಮಿಟಿಗಳಿರುತ್ತವೆ; ಆ ಕಮಿಟಿ ಕೆಲಸಗಳಲ್ಲೇ ಸಾಕಷ್ಟು ಕಾಲ ಕಳೆದುಹೋಗುತ್ತದೆ. ಮುಖ್ಯ ವಿಷಯಗಳನ್ನು ಕುರಿತ ಕಮಿಟಿಗಳನ್ನು ಹಿರಿಯ ಪ್ರಾಧ್ಯಾಪಕರು ಆರಿಸಿಕೊಂಡು, ಅವರಿಗೆ ಬೇಡವಾದ ಜವಾಬ್ದಾರಿಗಳು ಜೂನಿಯರ್ ಅಧ್ಯಾಪಕರ ಪಾಲಿಗೆ ಬೀಳುತ್ತವೆ. ಅಧ್ಯಾಪಕರ (ಫ್ಯಾಕಲ್ಟಿ) ಸೆನೆಟ್‌ನ ಮೀಟಿಂಗುಗಳಲ್ಲಿ ವಿಭಾಗವನ್ನು ಪ್ರತಿನಿಧಿಸುವುದು ಅಂತಹದೊಂದು ಕೆಲಸ. ಅದನ್ನು ನನ್ನ ತಲೆಗೆ ಕಟ್ಟಿದ್ದರು. ಅದನ್ನೂ ನಾನು, ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತೆತ್ತಿ ಒಗೆದಂತೆ, ನಿಷ್ಠೆಯಿಂದ ಮಾಡುತ್ತಿರುವಾಗ, ಒಮ್ಮೆ ಒಂದು ಸ್ಫೋಟಕ ವಿಷಯ ಚರ್ಚೆಗೆ ಬಂದುಬಿಟ್ಟಿತು.

ಒಂದು ತರಗತಿಯಲ್ಲಿ ದಕ್ಷಿಣ ಆಫ್ರಿಕಾ ಮೂಲದ ಒಬ್ಬ ಜೂನಿಯರ್ (ಅಂದರೆ–ಇನ್ನೂ ಖಾಯಂ ಕೆಲಸ, ಟೆನ್ಯೂರ್, ದೊರಕದಿದ್ದ) ಅಧ್ಯಾಪಕ, ವಿದ್ಯಾರ್ಥಿಗಳಿಗೆ 'ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿ, ಹಿಟ್ಲರ್‌ನ ನಾತ್ಸಿವಾದ, ಮತ್ತು ಇಸ್ರೇಲ್‌ನ ಝಿಯೊನಿಸಂ–ಜನಾಂಗಭೇದದ ಮೂರು ರೂಪಗಳು' ಎಂಬ ವಿಷಯದ ಬಗ್ಗೆ ಒಂದು ಪ್ರಬಂಧ ಬರೆಯಲು ಹೇಳಿದ್ದ. ಇದನ್ನು ಒಬ್ಬ ವಿದ್ಯಾರ್ಥಿಯಿಂದ ಕೇಳಿ ಅಪ್ಸೆಟ್ ಆದ ಇಸ್ರೇಲ್‌ನಿಂದ ಬಂದ ಒಬ್ಬ ವಿದೇಶಿ ವಿದ್ಯಾರ್ಥಿನಿ ನಮ್ಮ ಡೀನ್‌ಗೆ ದೂರು ಕೊಟ್ಟಿದ್ದೇ ಅಲ್ಲದೆ ಆ ಅಧ್ಯಾಪಕನನ್ನು ಕೆಲಸದಿಂದ ವಜಾ ಮಾಡಬೇಕೆಂದೂ ತಕರಾರು ಮಾಡಿದ್ದಳು. ಆಕೆಯ ಗಂಡ ಇಸ್ರೇಲಿನ ಬೇರ್–ಶಿವ ವಿಶ್ವವಿದ್ಯಾಲಯದಲ್ಲಿ ಡೀನ್ ಆಗಿದ್ದು, ನಮ್ಮಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ದೂರು ಕೊಟ್ಟ ವಿದ್ಯಾರ್ಥಿನಿ ಬೇರೆ ಯಾರೂ ಅಲ್ಲದೆ ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುತ್ತಿದ್ದ ಡಾಕ್ಟರೇಟ್ ವಿದ್ಯಾರ್ಥಿನಿಯಾಗಿದ್ದಳು. ಅವಳಿಗೆ ಬೆಂಬಲವಾಗಿ, ವಿಶ್ವವಿದ್ಯಾಲಯದ ಉಚ್ಚ ಆಡಳಿತಗಾರರು ಬಿಗಿಯಾದ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ವಿ.ವಿ.ಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದ ಯಹೂದಿ ಅಧ್ಯಾಪಕರ, ವಿದ್ಯಾರ್ಥಿಗಳ, ಅಕ್ಕಪಕ್ಕದ ಸಮುದಾಯಗಳ ತಂಡವೇ ಸಂಘಟಿಸಿತ್ತು. ಅಮೆರಿಕಾದ ವಿಶ್ವವಿದ್ಯಾಲಯಗಳಲ್ಲಿ, ನ್ಯೂಯಾರ್ಕ್ ರಾಜ್ಯದಲ್ಲಿ, ಅದರಲ್ಲೂ ನ್ಯೂಯಾರ್ಕ್ ಮಹಾನಗರದಲ್ಲಿ ಯೆಹೂದಿಗಳ ಪ್ರಭಾವ ಸಾಕಷ್ಟು ಜಾಸ್ತಿ. ಇದಕ್ಕೆ ವಿರುದ್ಧವಾಗಿ ವಿಶ್ವ ವಿದ್ಯಾಲಯವೆಂದರೆ ವಿಚಾರ ಸ್ವಾತಂತ್ರ್ಯದ ಅಭೇದ್ಯ ಕೋಟೆಯಾಗಿರಬೇಕು. ಅಲ್ಲಿ ಯಾವುದೇ ವಿಷಯವನ್ನು, ಯಾವುದೇ ದೃಷ್ಟಿಕೋನದಿಂದ, ಯಾರದೇ ಭಯ, ಮುಲಾಜಿಲ್ಲದೆ ಚರ್ಚಿಸಲು ಸಾಧ್ಯವಾಗಬೇಕು ಎಂದು ವಾದಿಸುವ ಒಂದು ಗುಂಪು ಆ ಬಡ ಅಧ್ಯಾಪಕನ ವಕಾಲತ್ತಿಗೆ ನಿಂತಿತು. ಈ ಸಂಗತಿ ಕ್ಯಾಂಪಸ್ಸಿನ ವಿದ್ಯಾರ್ಥಿ ಪತ್ರಿಕೆಗಳಲ್ಲೂ, ಬೇರೆ ಮಾಧ್ಯಮಗಳಲ್ಲೂ ಅಚ್ಚಾಗುತ್ತಾ ಹೋಗಿ, ನ್ಯೂಯಾರ್ಕ್ ಟೈಮ್ಸ್‌ನಲ್ಲಿಯೂ ಬಂತು. ಇಡೀ ಕ್ಯಾಂಪಸ್‌ನಲ್ಲಿಯೇ ವಾತಾವರಣ ಕ್ಷುಬ್ಧವಾಗಿತ್ತು.

ಅಷ್ಟರಲ್ಲಿ ಈ ವಿಷಯ ಫ್ಯಾಕಲ್ಟಿ ಸೆನೇಟ್‌ನಲ್ಲಿ ಚರ್ಚೆಯಾಗಲಿದೆಯೆಂದು ಸುದ್ದಿ

ಬಂತು. ನನ್ನ ಪಕ್ಕದ ಇಲಾಖೆಯ, ವಿ.ವಿ.ಯಲ್ಲಿ ಅತ್ಯಂತ ಪ್ರತಿಷ್ಠಿತ ಪ್ರಾಧ್ಯಾಪಕರಲ್ಲೊಬ್ಬ ನನ್ನ ಇಲಾಖೆಯ ಮುಖ್ಯಸ್ಥರನ್ನು ಭೇಟಿಮಾಡಿ ನನಗೆ ಸರಿಯಾದ ರೀತಿಯಲ್ಲಿ (ಅಂದರೆ ಶಿಸ್ತುಕ್ರಮ ಕೈಗೊಳ್ಳುವುದನ್ನು ಬೆಂಬಲಿಸಿ) ಮತ ಚಲಾಯಿಸುವಂತೆ ಹೇಳಬೇಕೆಂದು ಲಾಬಿ ಮಾಡಿದರು. ನನ್ನ ಇಲಾಖೆಯಲ್ಲಿಯೇ ಕೆಲಸ ಮಾಡುತ್ತಿದ್ದ ಒಬ್ಬ ಹಿರಿಯ ಪ್ರಾಧ್ಯಾಪಕರೂ ಸುತ್ತಿ ಬಳಸಿ ಅದೇ ಧಾಟಿಯಲ್ಲಿ ಸಲಹೆ ನೀಡಿದರು. ನಮ್ಮ ಇಲಾಖೆಯ ಮುಖ್ಯಸ್ಥರೂ (ನನ್ನ ಸ್ನೇಹಿತರು, ಅವರೂ ಯಹೂದಿಯೆ) ನನಗೆ ಇದು ತುಂಬಾ ಜಟಿಲವಾದ ಪ್ರಶ್ನೆಯೆಂದೂ ಇಂತಹ ವಿವಾದದಲ್ಲಿ (ಜೂನಿಯರ್ ಆದವರು) ಸಿಕ್ಕಿ ಹಾಕಿಕೊಳ್ಳದಿರುವುದು (ಅವರ ಭವಿಷ್ಯದ ಹಿತದೃಷ್ಟಿಯಿಂದ) ಒಳ್ಳೆಯದೆಂದೂ ಬುದ್ಧಿವಾದ ಹೇಳಿದರು.

ನಾನು ಚಿಕ್ಕವನಾಗಿದ್ದಾಗಿನಿಂದಲೂ ಒಂದು ರೀತಿಯ ರೆಬೆಲ್. ನಮ್ಮ ತಾಯಿಯೊಡನೆ ಸದಾ ತಾತ್ವಿಕ ಜಗಳಗಳಲ್ಲಿ ಬಿಸಿಬಿಸಿಯಾಗಿ ವಾದಿಸುತ್ತಾ, ಪ್ರತಿಯೊಂದು ಪದ್ಧತಿ, ಆಚರಣೆ, ಸಂಪ್ರದಾಯವನ್ನೂ 'ಇದು ಯಾಕೆ?' 'ಅದು ಹೇಗೆ?' ಎಂದು ಪ್ರಶ್ನಿಸುತ್ತಲೇ ಬೆಳೆದವನು. ಹಾಗಾಗಿ ವಿಚಾರ ಸ್ವಾತಂತ್ರ್ಯ ನನಗೆ ಉಸಿರಾಡುವ ಗಾಳಿಯಷ್ಟೇ ಆಪ್ತವಾದದ್ದು. ಆ ಮನೋಭಾವವನ್ನು ಲಂಕೇಶ್, ವೈಎನ್ಕೆ, ಕಿ.ರಂ. ನಾಗರಾಜ ಮತ್ತಿತರರ ಒಡನಾಟದಲ್ಲಿ ಇನ್ನೂ ಬೆಳೆಸಿಕೊಂಡಿದ್ದೆ. ಈ ಸ್ಪಿರಿಟ್‌ಅನ್ನು ಕಂಡುಕೊಂಡಿದ್ದ ಒಬ್ಬ ಹಿರಿಯ ಸ್ನೇಹಿತರು ನನ್ನನ್ನು ಅಮೆರಿಕಾದ ನಾಗರಿಕ ಸ್ವಾತಂತ್ರ್ಯಕೂಟ (ಅಮೆರಿಕನ್ ಕೌನ್ಸಿಲ್ ಆಫ್ ಸಿವಿಲ್ ಲಿಬರ್ಟೀಸ್)ದ ನ್ಯಾಷನಲ್ ಕಮಿಟಿ ಆನ್ ಅಕಡೆಮಿಕ್ ಫ್ರೀಡಂನ ಸದಸ್ಯರನ್ನಾಗಿ ಮಾಡಿದ್ದರು. ಅದು ನ್ಯೂಯಾರ್ಕಿನಲ್ಲಿ ನಿಯತವಾಗಿ ಸೇರುತ್ತಿತ್ತು. ಇಂತಹ ಕಾರ್ಡ್ ಕ್ಯಾರಿಯಿಂಗ್ ಸಿವಿಲ್ ಲಿಬರ್ಟೇರಿಯನ್ ಆದ ನನಗೆ ಸೆನೇಟ್‌ನಲ್ಲಿ ಬಂದಿತ್ತು ಧರ್ಮ ಸಂಕಟ.

ಅಂದಿನ ಸೆನೆಟ್ ಸಭೆಯಲ್ಲಿ ಎಂದಿಲ್ಲದ ಜನಜಂಗುಳಿ. ಗ್ಯಾಲರಿ ಶೈಲಿಯ ಹಾಲಿನ ನೂರೈವತ್ತು ಆಸನಗಳು ತುಂಬಿ ಜನ ಎರಡೂ ಪಕ್ಕದ ಮೆಟ್ಟಿಲುಗಳ ಮೇಲೆ ಕೂತಿದ್ದರು, ಎಷ್ಟೋ ಜನ ನಿಂತಿದ್ದರು. ಚರ್ಚೆ ಶುರುವಾಯಿತು. ಯಹೂದಿಗಳು ಈ ಅಧ್ಯಾಪಕನ ನಡವಳಿಕೆ ಎಷ್ಟು ಪ್ರಚೋದಕವಾಗಿಯೂ, ನಿಂದಾರ್ಹವೂ ಆಗಿದೆಯೆಂದೂ, ಇಂತಹ ಅಸಹ್ಯ ಹೋಲಿಕೆಗಳಿಂದ 'ಹಾಲೋಕಾಸ್ಟ್' (ನಾಟ್ಜಿಗಳ ಕೈಯ್ಯಲಿ ನಡೆದ ಯಹೂದಿಗಳ ನರಹತ್ಯೆ)ನಲ್ಲಿ ಸತ್ತ ಲಕ್ಷಾಂತರ ಆತ್ಮಗಳಿಗೆ ಎಂತಹ ಅಪಚಾರವಾಗಿದೆಯೆಂದೂ, ಇಂತಹ ವಿಷಪೂರಿತ ಬೋಧನೆಗಳಿಗೆ ವಿ.ವಿಗಳು ಆಸ್ಪದ ಕೊಡಬಾರದೆಂದೂ ಆವೇಶದಿಂದ, ಮನಕಲಕುವಂತೆ ಗದ್ಗದ ಸ್ವರಗಳಲ್ಲಿ ವಾದಿಸಿದರು. ಅದಕ್ಕೆ ವಿರುದ್ಧವಾಗಿ ವೈಚಾರಿಕ ಸ್ವಾತಂತ್ರ್ಯದ ವಕ್ತಾರರು 'ಅಮೇರಿಕಾದ ಸಂವಿಧಾನದಲ್ಲಿ, ಅದರಲ್ಲೂ ವಿ.ವಿ.ಯಲ್ಲಿ ವೈಚಾರಿಕ ಸ್ವಾತಂತ್ರ್ಯಕ್ಕೆ ಅನನ್ಯವಾದ ಪವಿತ್ರತೆ ಇದೆಯೆಂದೂ, ಎಷ್ಟೇ ಅಸಹ್ಯಕರವಾದರೂ, ಒಬ್ಬ ವ್ಯಕ್ತಿಯ ವಿಚಾರ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ

ಹಿಡಿಯಬೇಕಾದುದು ವಿ.ವಿಗಳ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿಯೆಂದೂ, ಇಂದು ಈ ವಿಷಯದಲ್ಲಿ ಆ ಹಕ್ಕನ್ನು, ಅಧಿಕಾರವನ್ನು ಮೊಟಕು ಮಾಡುವ ಪೂರ್ವೋದಾಹರಣೆ (ಪ್ರಿಸಿಡೆಂಟ್) ಸ್ಥಾಪಿಸಿದರೆ ನಾಳೆ ಯಾವ ಯಾವುದೋ ಕಾರಣಕ್ಕಾಗಿ ಆ ಸ್ವಾತಂತ್ರ್ಯವನ್ನು ಕತ್ತರಿಸುವುದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ; ಈ ಸ್ವಾತಂತ್ರ್ಯ ಬಹಳ ಜನ ಪೂರ್ವಜರು ದೀರ್ಘ ಕಾಲ ಹೋರಾಡಿ, ಅನೇಕ ಜೀವಗಳ ಬೆಲೆ ತೆತ್ತು ಸಂಪಾದಿಸಿದ ಹಕ್ಕು, ಅದನ್ನು ಯಾವುದೇ ಕಾರಣಕ್ಕಾಗಿ –ಎಷ್ಟೇ ಪ್ರಮುಖವಾಗಲೀ– ಬಿಟ್ಟುಕೊಡಬಾರದು' ಎಂದು ವಾದಿಸಿದರು. ಹೀಗೆ ವಾದವಿವಾದಗಳು ಎರಡೂವರೆ ಗಂಟೆ ಕಾಲ ನಡೆದ ಮೇಲೆ ಅಂತೂ ಆ ಅಧ್ಯಾಪಕನ ವರ್ತನೆಯನ್ನು ಖಂಡಿಸುವ, ಆಡಳಿತಗಾರರಿಗೆ ಅವನ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶಿಸುವ ನಿರ್ಣಯವನ್ನು ವೋಟಿಗೆ ಇಡಲಾಯಿತು.

ಈ ವಾದವನ್ನು ಕೇಳುತ್ತ ಕುಳಿತಿದ್ದ ನನಗೆ ಉಭಯಸಂಕಟ. ಒಂದು ಕಡೆ ನನ್ನ ಮೇಲೆ ಒತ್ತಾಯ ತಂದ, ಟೆನ್ಯೂರ್ (ಖಾಯಂ ಕೆಲಸ) ಕೊಡುವ ಅಥವಾ ನಿರಾಕರಿಸುವ ಸಾಧ್ಯತೆಯನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುವ ಹಿರಿಯ ಸಹೋದ್ಯೋಗಿಗಳು ಮತ್ತು ವಿ.ವಿ.ಯ ಹಿರಿಯ ಪ್ರಾಧ್ಯಾಪಕರು; ಇನ್ನೊಂದು ಕಡೆ ಒಂದು ವಿ.ವಿ.ಗೆ ಕೇಂದ್ರ ಮೌಲ್ಯವಾದ ವಿಚಾರ ಸ್ವಾತಂತ್ರ್ಯ ಹಾಗೂ ಅದನ್ನು ನೆಚ್ಚಿದ ಕಿರಿಯ ಅಧ್ಯಾಪಕನ ಭವಿಷ್ಯ. ನನ್ನ ಕಣ್ಣ ಮುಂದೆ ಸಾಕ್ರೆಟೀಸ್, ಗೆಲಿಲಿಯೋ ಮುಂತಾದವರ ಚಿತ್ರ ಬಂದು ನಿಂತಿತ್ತು. ಈಗ ನಾನು ಚಲಾಯಿಸಲಿರುವ ಮತ ಮುಂದಿನ ಸ್ವಾತಂತ್ರ್ಯಗಳನ್ನು ನಿರ್ಧರಿಸುತ್ತದೆ ಎಂದು ನೆನೆದಾಗ ಮೈ ಜುಮ್ಮೆಂದಿತು. ಹಾಗಾದರೆ ಅದಕ್ಕೆ ನನ್ನ ಭವಿಷ್ಯವನ್ನೇ ಬೆಲೆ ಕೊಡಬೇಕಾಗಬಹುದಲ್ಲಾ ಎಂದು ಸ್ವಲ್ಪ ಅಂಜಿಕೆಯಿಲ್ಲದೆ ಇರಲಿಲ್ಲ. ಕೊನೆಗೂ ಮನಸ್ಸು ಗಟ್ಟಿ ಮಾಡಿ ನಿರ್ಣಯದ ವಿರುದ್ಧ, ಅಂದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಮತ ಹಾಕಿದೆ.

ಇಲ್ಲಿ ಇನ್ನೊಂದು ಸ್ವಾರಸ್ಯ ಇತ್ತು. ನಮ್ಮ ಮತ ಗುಪ್ತ ಮತವಾಗಿರಲಿಲ್ಲ. ಸದಸ್ಯರು ಕೈ ಎತ್ತುವುದರ ಮೂಲಕ ತಮ್ಮ ಮತವನ್ನು ನಿರ್ದೇಷಿಸಬೇಕಾಗಿತ್ತು. ಸಭೆಯ ಕಾರ್ಯದರ್ಶಿ ಪ್ರತಿಯೊಂದು ಮತವನ್ನೂ ಬೆರಳು ಮಾಡಿ ಎಣಿಸಿದ. ಎಣಿಸುವಾಗ ಒಂದಲ್ಲ, ಎರಡು ಸಲ ಲೆಕ್ಕ ತಪ್ಪಿತೆಂದು ಹೇಳಿ, ಮತ್ತೆ ಕೈ ಎತ್ತುವಂತೆ, ಎತ್ತಿ ಹಿಡಿದಿರುವಂತೆ ಮಾಡಿದ. ಅಂದರೆ ಮೂರು ಬಾರಿ ಎಣಿಸುವಾಗ ಸಭೆಗೆ ಬಂದಿದ್ದ ಎಲ್ಲರಿಗೂ ಯಾರು ಹೇಗೆ ಮತ ಹಾಕಿದರು ಎನ್ನುವುದು ಅನುಮಾನಕ್ಕೆ ಆಸ್ಪದವಿಲ್ಲದಂತೆ ಗೊತ್ತಾಯಿತು. ಮನೆಗೆ ಬರುವಾಗ ನಾನು ಮಾಡಿದ್ದು ತಾತ್ವಿಕವಾಗಿ ಸರಿಯಾದರೂ ಸ್ವಹಿತ ದೃಷ್ಟಿಯಿಂದ ಸರಿಯೇ ಎಂದು ಯೋಚನೆ ಮಾಡಿದೆ. ಏನೇ ಆದರೂ, ಅಂತಃಸಾಕ್ಷಿಯಂತೂ ನಿರ್ಮಲವಾಗಿದೆಯಲ್ಲಾ ಎಂದು ಸಮಾಧಾನ ಪಟ್ಟುಕೊಂಡೆ.

ಮಾರನೆಯ ದಿನ ನನ್ನ ಮುಖ್ಯಸ್ಥರಿಗೆ ನಡೆದದ್ದನ್ನು ವಿವರಿಸಿ ಹೇಗೆ ನಾನು ನನ್ನ

ವೈಯಕ್ತಿಕ ನಂಬಿಕೆಯನ್ನು ಬಿಟ್ಟುಕೊಡಲಾಗಲಿಲ್ಲ ಎಂದು ಸ್ವಲ್ಪ ಆತಂಕದಿಂದಲೇ ಹೇಳಿದೆ. ನನ್ನ ಆತಂಕ ಅನಾವಶ್ಯಕವಾಗಿತ್ತೆಂದು ಕಾಣುತ್ತದೆ. ಏಕೆಂದರೆ ನನ್ನ ಮಾತು ಕೇಳುತ್ತಲೇ ಅವನು ತನ್ನ ಕುರ್ಚಿಯಿಂದ ಎದ್ದು ಬಂದು ನನ್ನನ್ನು ತಬ್ಬಿಕೊಂಡ. ಟೆನ್ಯೂರ್ ಅಂದರೆ ಜನಗಳಿಗೆ ಆರು ವರ್ಷ ನಿದ್ದೆ ಇರುವುದಿಲ್ಲ. ಅಂತಹದರಲ್ಲಿ ನನಗೆ ನಾಲ್ಕನೇ ವರ್ಷದಲ್ಲಿಯೇ ಟೆನ್ಯೂರ್ ಸಿಕ್ಕಿತು. ಇದು ನನ್ನ ಯೋಗ್ಯತೆಯೇನೇ ಇರಲಿ, ಅಮೆರಿಕಾದ ವಿ.ವಿ.ಗಳಲ್ಲಿ ವಿಚಾರ ಸ್ವಾತಂತ್ರ್ಯಕ್ಕೆ ಎಷ್ಟು ಬೆಲೆ ಕೊಡಲಾಗುತ್ತದೆ ಎನ್ನುವುದನ್ನು ತೋರಿಸುತ್ತದೆ.

ಇಲ್ಲಿ ನನ್ನ ಸಂಶೋಧನೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದು ಅಗತ್ಯವಾದುದರಿಂದ ತಮ್ಮ ಕ್ಷಮೆ ಬೇಡುತ್ತೇನೆ. ಒಬ್ಬ ವ್ಯಕ್ತಿಗೆ ಯಾವ ವಿಷಯಗಳಲ್ಲಿ ಆಸಕ್ತಿಯಿದೆಯೋ ಅವರ ವೃತ್ತಿಯೂ ಅದೇ ವಿಷಯಗಳಿಗೆ ಸಂಬಂಧಿಸಿದ್ದರೆ ಆ ವ್ಯಕ್ತಿಯು ಅದೃಷ್ಟಶಾಲಿಯೇ. ಅಂತಹದೊಂದು ಭಾಗ್ಯ ನನ್ನದೆನ್ನಬೇಕು. ನನಗೆ ಮೊದಲಿನಿಂದಲೂ ಭಾಷೆ ಸಾಹಿತ್ಯ, ಸಂಸ್ಕೃತಿಗಳಲ್ಲಿ ಆಸಕ್ತಿ. ಚಿಕ್ಕಂದಿನಲ್ಲಿ ಮನೆಯಲ್ಲಿ, ದೇವಸ್ಥಾನದಲ್ಲಿ ತಂದೆತಾಯಿಗಳೊಡನೆ ಸಂಜೆ ಉಪನ್ಯಾಸ, ಪುರಾಣ-ಪುಣ್ಯಕತೆ, ಹರಿಕಥೆಗಳನ್ನು ಕೇಳುವುದಕ್ಕೆ ಮಠ ಗುಡಿಗಳಿಗೆ ಹೋದಾಗ ಕನ್ನಡ, ಸಂಸ್ಕೃತಗಳ ಸೌಂದರ್ಯದ ಅನುಭವ, ಸ್ಕೂಲು-ಕಾಲೇಜುಗಳಲ್ಲಿ ದ್ವಿತೀಯ ಭಾಷೆಯಾಗಿ ಸಂಸ್ಕೃತವನ್ನು ಅಭ್ಯಾಸ ಮಾಡಿದಾಗ ಭಾಸ, ಕಾಳಿದಾಸ, ವಾಲ್ಮೀಕಿ, ಸುಭಾಷಿತಗಳ ಬಗ್ಗೆ ನಮ್ಮ ಮೇಷ್ಟ್ರುಗಳ ಸಂಭ್ರಮ, ಡಿಗ್ರಿ ಓದುವಾಗ ಇಂಗ್ಲೀಷ್ ಸಾಹಿತ್ಯದ ಮೇರುಕೃತಿಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದು, ಬೆಂಗಳೂರಿನಲ್ಲಿ ಆ ಕಾಲದ ಪ್ರಮುಖ ಕನ್ನಡ ಲೇಖಕರೊಡನೆ ಸಂಪರ್ಕಕ್ಕೆ ಬಂದುದು, ಪ್ರತಿಮಾ ನಾಟಕ ರಂಗದ ಮೂಲಕ ಪ್ರಯೋಗಶೀಲ ನಾಟಕಗಳಲ್ಲಿ ಪಾತ್ರ ಮಾಡುವ, ಒಮ್ಮೆ ಉಪನಿರ್ದೇಶಕನಾಗಿ ದುಡಿಯುವ ಅವಕಾಶ ದೊರೆತದ್ದು, ಕಿ.ರಂ. ಅವರೊಡನೆ ಅಸಂಖ್ಯ ಗಂಟೆಗಳ ಕಾಲ ಪಂಪ, ಕುಮಾರವ್ಯಾಸರನ್ನು ಓದಿ ಆನಂದಿಸಿದ್ದು - ಇವೆಲ್ಲ ಕನ್ನಡದ ಬಗ್ಗೆ ಪ್ರೀತಿ-ಅಬಿಮಾನ, ಆ ಭಾಷೆಯ ಸೌಂದರ್ಯ, ಸಂಕೀರ್ಣತೆ, ಅಭಿವ್ಯಕ್ತಿ ಸಾಧ್ಯತೆಗಳನ್ನು ಕುರಿತು ಬೆರಗು, ಆಪ್ತತೆಯನ್ನು ತಂದುಕೊಟ್ಟವು.

ಆ ಸಂದರ್ಭದಲ್ಲಿಯೇ ಇಂಗ್ಲಿಷ್ ಭಾಷೆಯ ಚರಿತ್ರೆಯ ಅಂಗವಾಗಿ ಇಂಗ್ಲಿಷ್, ಲ್ಯಾಟಿನ್, ಗ್ರೀಕ್, ಪರ್ಷಿಯನ್, ರಷ್ಯನ್, ಜರ್ಮನ್, ಫ್ರೆಂಚ್, ಇಟಾಲಿಯನ್ ಮುಂತಾದ ಯೂರೋಪಿಯನ್ ಭಾಷೆಗಳಿಗೂ, ಸಂಸ್ಕೃತಕ್ಕೂ ಹೇಗೆ ನಿಕಟವಾದ ಸೋದರ (ಸೋದರಿ) ಸಂಬಂಧವಿದೆ ಎಂಬುದನ್ನೂ, ಈ ಸಂಬಂಧಗಳು ಹೇಗೆ ನಿಯಮಬದ್ಧ ಆಗಿರುತ್ತವೆಯೆಂದೂ, ಆ ನಿಯಮಗಳನ್ನು ಭೌತಶಾಸ್ತ್ರದ ನಿಯಮಗಳಷ್ಟೇ

ಖಚಿತವಾದ ಸೂತ್ರಗಳೋಪಾದಿಯಲ್ಲಿ ನಿರೂಪಿಸಬಹುದೆಂಬುದನ್ನೂ ಅರಿತು (ಜಾನ್ ಕೀಟ್ಸ್‌ನ ಉಪಮೆಯನ್ನು ಕದ್ದು ಹೇಳಬಹುದಾದರೆ), ದುರ್ಬೀನಿನಲ್ಲಿ ಹೊಸದೊಂದು ಗ್ರಹವನ್ನು ಕಂಡುಹಿಡಿದ ವಿಜ್ಞಾನಿಯಂತೆ, ರೋಮಾಂಚನಗೊಂಡೆ. ಅಲ್ಲಿಂದ ನನ್ನ ಆಸಕ್ತಿಕೇಂದ್ರ ಸಾಹಿತ್ಯದಿಂದ ಭಾಷಾವಿಜ್ಞಾನದ ಕಡೆಗೆ ತಿರುಗಿತು, ಆದರೆ ಸಾಹಿತ್ಯದ ಒಲವು ಹೋಗಲಿಲ್ಲ. (ಈಗ ಕುಮಾರವ್ಯಾಸನ ಕನ್ನಡ ಭಾರತದ ಕೆಲವು ಭಾಗಗಳನ್ನು ಇಂಗ್ಲೀಷ್ ರೂಪಾಂತರದ ಮೂಲಕ ಭಾರತೀಯರಿಗೆ, ಹೊರಗಿನ ಪ್ರಪಂಚಕ್ಕೆ ಪರಿಚಯಿಸುವ ಮಹತ್ವಾಕಾಂಕ್ಷೆಯ ಹುಂಬತನ ಕಾಡುತ್ತಿದೆ. ಇಂಗ್ಲಿಷಿನಲ್ಲಿ ಹೇಳುತ್ತಾರಲ್ಲ, ಏಂಜೆಲ್‌ಗಳು ಕಾಲಿಡಲು ಅಂಜುವೆಡೆ ಮೂರ್ಖರು ಮುನ್ನುಗ್ಗುತ್ತಾರೆ ಅಂತ, ಹಾಗೆ.) ಈ ಎಲ್ಲ ಸಂಸ್ಕಾರಗಳೂ ಪೂರಕವಾಗಿ ಕೆಲಸ ಮಾಡುತ್ತ, ಇಂದಿನ ವಾಂಟೇಜ್ ಪಾಯಿಂಟ್‌ನಿಂದ ನೋಡಿದಾಗ ಸಹಜ, ಅನಿವಾರ್ಯ, ಸ್ವಯಂ ವೇದ್ಯ ಎನ್ನಿಸುವಷ್ಟರ ಮಟ್ಟಿಗೆ ನನ್ನ ಉನ್ನತ ಶಿಕ್ಷಣದ ಹಾಗೂ ವೃತ್ತಿಜೀವನದ ಕೇಂದ್ರ ಆಸಕ್ತಿಗಳ ಆಯ್ಕೆಯನ್ನು ನಿರ್ದೇಶಿಸಿವೆ ಎಂಬುದನ್ನು ನೆನೆದರೆ ಯಾವುದನ್ನು 'ವಿಧಿ'ಯೆಂದು ಕರೆಯುತ್ತಾರೋ ಅದರಲ್ಲಿ ಪರಿಸರದ ಪಾತ್ರ ಎಷ್ಟು ನಿರ್ಣಾಯಕವಾಗಿರುತ್ತದೆ ಎನಿಸುತ್ತದೆ. ಭಾಷೆ, ಭಾಷಾವಿಜ್ಞಾನ, ಕನ್ನಡ, ಇಂಗ್ಲಿಷ್, ಸಂಸ್ಕೃತ ಇವುಗಳು ಭಾರತೀಯ ಸಂಸ್ಕೃತಿಯಲ್ಲಿ, ಆಧುನಿಕ ಭಾರತೀಯರ ಸಂಕೀರ್ಣ, ಬಹುಭಾಷೀ ಸಂವೇದನೆಯನ್ನು ರೂಪಿಸುವಲ್ಲಿ ಎಂತಹ ಪ್ರಮುಖ ಪಾತ್ರ ವಹಿಸಿವೆಯೋ ಅಷ್ಟೇ ಮುಖ್ಯವಾಗಿ ನನ್ನ ವೈಚಾರಿಕ ಧೋರಣೆಗಳನ್ನೂ ಸಂವೇದನೆಯನ್ನೂ ರೂಪಿಸಿವೆ ಎನ್ನುವುದು ಈಗ ಸ್ಪಷ್ಟ.

ನ್ಯಾಷನಲ್ ಸೈನ್ಸ್ ಫೌಂಡೇಶನ್ (ಕೇಂದ್ರೀಯ ವೈಜ್ಞಾನಿಕ ಪ್ರತಿಷ್ಠಾನ)ದಿಂದ ಒಂದು ಅನುದಾನ ಪಡೆದು, 'ಕನ್ನಡ ಪದರಚನೆ ಮತ್ತು ಪದರಚನಾ ವಿಜ್ಞಾನ' ಎಂಬ ಬಗ್ಗೆ ನನ್ನ ಸ್ನೇಹಿತ ಮತ್ತು ಸಹೋದ್ಯೋಗಿ ಮಾರ್ಕ್ ಆರೋನಾಫ್ ಜೊತೆ ಐದು ಲೇಖನಗಳನ್ನು ಪ್ರಕಟಿಸಿದೆ. ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನಿಂದ ರಿಸರ್ಚ್ ಫೆಲೋಶಿಪ್ ಪಡೆದು ಮೈಸೂರಿನಲ್ಲಿ, ಬೆಂಗಳೂರಿನಲ್ಲಿ ಹಲವು ತಿಂಗಳ ಕಾಲ ಕನ್ನಡದ ಬಗ್ಗೆ ಅಧ್ಯಯನ ಮಾಡಿದೆ. ಕನ್ನಡ ಭಾಷೆಯನ್ನು ಆಧುನಿಕ ಭಾಷಾವಿಜ್ಞಾನದ ಚೌಕಟ್ಟಿನಲ್ಲಿ ವಿಶ್ಲೇಷಿಸಿ ನೂರಾರು ನಿಯಮಗಳನ್ನು ಒಳಗೊಂಡ ಸುಮಾರು ಒಂದು ಸಾವಿರ ಉದಾಹರಣ ವಾಕ್ಯಗಳ ಮೂಲಕ ನಿರೂಪಿಸಿರುವ ಒಂದು ಸುದೀರ್ಘ ವ್ಯಾಕರಣ ಗ್ರಂಥವನ್ನು ಬರೆದೆ. ಲಂಡನ್ನಿನಲ್ಲಿ ರಟ್ಲೆಡ್ಜ್ ಕಂಪೆನಿಯಿಂದ, 'ಕನ್ನಡ: ಡಿಸ್ಕ್ರಿಪ್ಟಿವ್ ಗ್ರಾಮರ್' ಎಂಬ ಹೆಸರಿನಲ್ಲಿ 1990ರಲ್ಲಿ ಪ್ರಕಟವಾಯಿತು. 'ಕನ್ನಡದಲ್ಲಿ ಈಗ ಲಭ್ಯವಿರುವ ಅತ್ಯುತ್ತಮವಾದ, ವಿಸ್ತಾರವಾದ, ಖಚಿತವಾದ, ಸಮಗ್ರ ವ್ಯಾಕರಣ; ಇದರಿಂದಾಗಿ ಈ ಶತಮಾನದಲ್ಲಿ ಕನ್ನಡ, ದ್ರಾವಿಡ ಭಾಷಾವಿಜ್ಞಾನದ ಸೇವೆ ಸಾರ್ಥಕವಾಯಿತು', 'ಕಿಟೆಲ್, ಸ್ಪೆನ್ಸರ್ ಇವರ ನಂತರ ಕನ್ನಡದ ಅತಿಮುಖ್ಯ ವ್ಯಾಕರಣ', ಎಂದೆಲ್ಲ ಭಾಷಾವಿಜ್ಞಾನಿಗಳಾದ ಎ.ಕೆ. ರಾಮಾನುಜನ್, ವಿಲಿಯಂ ಬ್ರೈಟ್, ಭ. ಕೃಷ್ಣಮೂರ್ತಿ,

ಡಿ.ಎನ್. ಶಂಕರ್ ಭಟ್, ಇ. ಅಣ್ಣಾಮಲೈ, ಕೆ.ವಿ. ತಿರುಮಲೇಶ್, ಆರ್. ಅಮೃತವಲ್ಲಿ, ಕೆ.ಎಸ್. ಯದುರಾಜನ್, ಕೆ.ವಿ. ನಾರಾಯಣ ಮೊದಲಾದವರು, ಕನ್ನಡದ ಹಿರಿಯ ವಿದ್ವಾಂಸರುಗಳಾದ ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯ, ಜಿ.ಎಸ್. ಶಿವರುದ್ರಪ್ಪ, ಎಲ್.ಎಸ್. ಶೇಷಗಿರಿರಾವ್ ಮುಂತಾದವರು ಪ್ರಶಂಸಿಸಿದ್ದು, ಒಂಬತ್ತು ವರ್ಷ ಕಷ್ಟಪಟ್ಟು ಬರೆದದ್ದು ಸಾರ್ಥಕವೆನ್ನಿಸಿತು.

ಮೊದಲ ಮುದ್ರಣದ ಪ್ರತಿಗಳು ತೀರಿಹೋಗಿ, 1991ರಲ್ಲಿ ಒಂದು ಭಾರತೀಯ ಆವೃತ್ತಿಯನ್ನು ದೆಹಲಿಯ ಮನೋಹರ್ ಪ್ರಕಾಶನದವರು 'ಮಾಡರ್ನ್ ಕನ್ನಡ ಗ್ರಾಮರ್' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಇದಲ್ಲದೆ ಕನ್ನಡ ಭಾಷೆಯನ್ನು ಕುರಿತು ಅದರ ವಾಕ್ಯರಚನೆ (ಸಿಂಟ್ಯಾಕ್ಸ್), ಪದವಿನ್ಯಾಸ (ಮಾರ್ಫಾಲಜಿ), ಆಧುನೀಕರಣ, ನುಡಿಪಲ್ಲಟ, ನುಡಿಬೆರಕೆ (ಕೋಡ್ ಸ್ವಿಚ್ಚಿಂಗ್ ಮತ್ತು ಮಿಕ್ಸಿಂಗ್) ಮುಂತಾದ ಸಾಮಾಜಿಕ ಭಾಷಾವಿಜ್ಞಾನಕ್ಕೆ (ಸೋಷಿಯೋ-ಲಿಂಗ್ವಿಸ್ಟಿಕ್ಸ್‌ಗೆ) ಸಂಬಂಧಿಸಿದ ಆಯಾಮಗಳನ್ನು ಕುರಿತು ಬರೆದು ಹಲವು ಅಂತಾರಾಷ್ಟ್ರೀಯ ವಿದ್ವತ್ಪತ್ರಿಕೆಗಳಲ್ಲಿ, ತಾಂತ್ರಿಕ ಪುಸ್ತಕಗಳಲ್ಲಿ ಪ್ರಕಾಶನಗೊಂಡ ಪ್ರಬಂಧಗಳ ಕನ್ನಡ ಅನುವಾದಗಳು ನನ್ನ ಆಪ್ತ ಮಿತ್ರ, ಸಹೋದ್ಯೋಗಿಗಳಾದ ಪ್ರೊ. ಕೆ.ವಿ. ನಾರಾಯಣ ಅವರ ಒತ್ತಾಸೆಯಿಂದಾಗಿ ಮೊದಲು ಹಂಪಿಯ ಕನ್ನಡ ವಿಶ್ವ ವಿದ್ಯಾಲಯದಿಂದ (1995), ಮತ್ತು ನಂತರ ಬೆಂಗಳೂರಿನ ಅಭಿನವ ಪ್ರಕಾಶನದವರಿಂದ (2011), 'ಇಂದಿನ ಕನ್ನಡ: ರಚನೆ ಮತ್ತು ಬಳಕೆ' ಎಂಬ ಹೆಸರಿನಿಂದ ಹೊರಬಂದವು.

ನನ್ನ ಎರಡನೆಯ ಮುಖ್ಯ ಸಂಶೋಧನಾ ವಿಷಯವೆಂದರೆ ಬಹುಭಾಷಿಕತೆ. ಭಾಷಾವಿಜ್ಞಾನದ ಈ ಆಯಾಮಕ್ಕೆ ಅಧ್ಯಯನಕ್ಕೆ ಭಾರತದ ದೀರ್ಘ ಹಾಗೂ ವಿಪುಲವಾದ ಅನುಭವದಿಂದ ಸಿಗಬಹುದಾದ ಲಾಭ ಅಪಾರ ಮತ್ತು ಅನನ್ಯ. ಅದರ ಹಲವು ಮುಖಗಳ ಬಗ್ಗೆ ಸಂಶೋಧನೆ ನಡೆಸಿದೆ. ಒಂದು, ಭಾರತದಲ್ಲಿ ಭಾಷಾ ಸಂಪರ್ಕ ಮತ್ತು ಸಮೀಕರಣ (ಲ್ಯಾಂಗ್ವೇಜ್ ಕಾಂಟ್ಯಾಕ್ಟ್ ಆಂಡ್ ಕನ್ವರ್ಜೆನ್ಸ್) ಪ್ರಕ್ರಿಯೆ. ಕನ್ನಡ ಮತ್ತು ಬೇರೆ ಭಾರತೀಯ ಭಾಷೆಗಳು ಸಾವಿರಾರು ವರ್ಷಗಳಿಂದ ಹೇಗೆ ಒಂದಿನ್ನೊಂದರ ಜೊತೆಗೆ ನಿಕಟವಾದ ಕೊಡು-ಕೊಳುಗಳಿಂದ ಪರಸ್ಪರ ಪ್ರಭಾವಗೊಂಡಿವೆ; ದ್ರಾವಿಡ ಭಾಷೆಗಳ ಆರ್ಯೀಕರಣ, ಆರ್ಯ ಭಾಷೆಗಳ ದ್ರಾವಿಡೀಕರಣ ಆಗಿವೆ; ಅದರಿಂದ ಇಡೀ ಭಾರತಕ್ಕೆ ಸಮಾನವಾದ ಅನೇಕ ಭಾಷಾಲಕ್ಷಣಗಳು ಹುಟ್ಟಿಕೊಂಡಿವೆ, ಒಂದು ಭಾರತೀಯ ಭಾಷೆಯಿಂದ ಇನ್ನೊಂದಕ್ಕೆ ಅನುವಾದ ಮಾಡುವುದು ಸುಗಮವಾಗಿದೆ, ಈ ಪರಸ್ಪರ ಪ್ರಭಾವದಿಂದ ಪದಸಂಪತ್ತು, ಸಂಕೀರ್ಣ ಅಭಿವ್ಯಕ್ತಿ ಸಾಧ್ಯತೆಗಳು ಹೆಚ್ಚಿವೆ, ನಿಜ. ಆದರೆ ಅದರಿಂದ ಸಮಸ್ಯೆಗಳೂ ಹುಟ್ಟಿವೆ: ಮಾರ್ಗ-ದೇಸೀ ಶೈಲಿಭೇದ, ಸ್ತರೀಕೃತ ಪ್ರಭೇದ ರಚನೆ (ಡೈಗ್ಲೋಸ್ಸಿಯ); ಬ್ರಾಹ್ಮಣ-ಬ್ರಾಹ್ಮಣೇತರರಲ್ಲಿ ಕಂಡುಬರುವ ಭಾಷಾಭೇದಗಳು, ಅವುಗಳು ಕನ್ನಡದ

ಪ್ರಮಾಣಭಾಷೆಯನ್ನು ರೂಪಿಸಿರುವುದು, ಅದರ ಪರಿಣಾಮವಾದ ಶೈಕ್ಷಣಿಕ ಸಮಸ್ಯೆಗಳು, ಇತ್ಯಾದಿ ವಿಚಾರಗಳನ್ನು ವಿಶ್ಲೇಷಿಸಿದೆ.

ಇದಕ್ಕೆ ಸಂಬಂಧಿಸಿ ನನ್ನ ಇನ್ನೊಂದು ಮುಖ್ಯ ಸಂಶೋಧನಾ ವಿಷಯವೆಂದರೆ ಬಹುಭಾಷಿಕರಲ್ಲಿ ಸರ್ವೇ ಸಾಧಾರಣವಾಗಿ ಕಾಣುವ ಭಾಷಾ ಮಿಶ್ರಣ, ಭಾಷಾ ಪಲ್ಲಟಗಳು (ಕೋಡ್ ಸ್ವಿಚ್ಚಿಂಗ್ ಆಂಡ್ ಕೋಡ್ ಮಿಕ್ಸಿಂಗ್). ಅಂದರೆ ಈಗ ನಾವು ಕನ್ನಡ ಮಾತಾಡುವಾಗ ಸಾವಿರಾರು ಇಂಗ್ಲಿಷಿನ ಪದಗಳನ್ನು, ಅವ್ಯಾಹತವಾಗಿ, ಸಾರಾ ಸಗಟಾಗಿ ಉಪಯೋಗಿಸುತ್ತೇವಲ್ಲಾ, ಆ ವಿದ್ಯಮಾನ. ಬರೀ ಪದಗಳಷ್ಟೇ ಅಲ್ಲ, ಪದಪುಂಜಗಳು, ಉಪವಾಕ್ಯಗಳು, ಪೂರ್ತಿ ವಾಕ್ಯಗಳನ್ನೇ ಉಪಯೋಗಿಸಿಬಿಡುತ್ತೇವೆ. ಎಷ್ಟೋ ಬಾರಿ ಒಂದೇ ವಾಕ್ಯದಲ್ಲಿ ಹಲವು ಬಾರಿ ಒಂದು ಭಾಷೆಯಿಂದ ಇನ್ನೊಂದಕ್ಕೆ ಬದಲುಗೊಂಡು, ಮತ್ತೆ ಹೋಗಿ, ಮತ್ತೆ ಬಂದು ಮಾಡುತ್ತೇವಲ್ಲ, ಹಾಗೆ ಮಾಡುವುದರ ವ್ಯಾಕರಣಾತ್ಮಕ, ಮನೋವೈಜ್ಞಾನಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಣಾಮಗಳೇನು? ಈ ಪ್ರಶ್ನೆಗಳನ್ನು ಕುರಿತು ನಾನು ಹಲವೆಡೆ ವಿವರವಾಗಿ ಬರೆದಿದ್ದೇನೆ. ಈ ಪ್ರಕ್ರಿಯೆಯು ವೈಯಾಕರಣಿಗಳಿಂದ, ಭಾಷಾ ಬೋಧಕರಿಂದ ಸ್ವಯಂ ನೇಮಿತ ಭಾಷಾರಕ್ಷಕರಿಂದ, ನೂರಾರು ವರ್ಷಗಳಿಂದ ಮೂದಲಿಕೆಗೆ ಒಳಗಾಗುತ್ತಾ ಬಂದಿದೆ. ಹೀಗೆ ಭಾಷೆಗಳನ್ನು ಮಿಶ್ರಮಾಡುವುದು ಅಜ್ಞಾನದ ಮತ್ತು ಸೋಮಾರಿತನದ ಕುರುಹೆಂದೂ, ಇದರಿಂದ ಭಾಷೆಯ ಸೌಂದರ್ಯವಷ್ಟೇ ಅಲ್ಲದೆ, ಭಾಷೆಯೇ ಹಾಳಾಗುತ್ತದೆ ಎಂದೂ ಇಂದಿಗೂ ಹೇಳುವವರೇ ಹೆಚ್ಚು.

ಆದರೆ, ಭಾಷಾ ಸಂಪರ್ಕದ ಪ್ರಕ್ರಿಯೆಗಳನ್ನು ಸಾವಿರಾರು ವರ್ಷದ ಚಾರಿತ್ರಿಕ ಹಿನ್ನೆಲೆಯಲ್ಲಿ, ಬೇರೆ ಬೇರೆ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ನೋಡಿದಾಗ, ಇಂತಹ ಮಿಶ್ರಣದ ರಚನಾತ್ಮಕ ಲಕ್ಷಣಗಳನ್ನು ಬಿಡಿಸಿ ನೋಡಿದಾಗ, ಇದು ಹುಚ್ಚಾಪಟ್ಟೆ ಕಲಸಿದ ಮೇಲೋಗರವಾಗಿರದೆ, ಇದಕ್ಕೆ ತನ್ನದೇ ವ್ಯಾಕರಣ ನಿಯಮಗಳಿದ್ದು, ಅದು ಒಂದು ಸಂಕೀರ್ಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಈ ಮಿಶ್ರ ಭಾಷೆಗಳು ಒಂದು ವಿಶಿಷ್ಟವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶದಲ್ಲಿ ಹುಟ್ಟಿ, ಶುದ್ಧ ಪ್ರಯೋಗಗಳು ಮಾಡದ ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತವೆ. ಉದಾಹರಣೆಗೆ, ಕನ್ನಡ–ಇಂಗ್ಲಿಷ್ ಮಿಶ್ರೆಯ ಆಡುಗರು ತಾವು ಪೂರ್ತಿ ಪಾಶ್ಚಾತ್ಯೀಕೃತರೂ (ವೆಸ್ಟರ್ನೈಸ್ಡ್) ಅಲ್ಲ, ಕೇವಲ ಸಂಪ್ರದಾಯಸ್ಥರೂ ಅಥವಾ ಗ್ರಾಮೀಣರೂ ಅಲ್ಲ, ಭಾರತೀಯತೆ (ಕನ್ನಡಿಗತನ)ವನ್ನು ಬಿಡದಂತೆ ಆಧುನಿಕತೆಯನ್ನು ಅರಗಿಸಿಕೊಂಡಿರುವ ಮಿಶ್ರ, ಸಂಕೀರ್ಣ ಚಹರೆಯನ್ನು (ಹೈಬ್ರಿಡ್ ಐಡೆಂಟಿಟಿ)ಯನ್ನು ಸಂಕೇತಿಸುತ್ತಾರೆ. ಈ ಮಿಶ್ರಣವನ್ನು ಕನ್ನಡ ಸಮಾಜದ ಸಂಕ್ರಮಣ ಸ್ಥಿತಿಯ ರೂಪಕವಾಗಿ ಟಿ.ಪಿ. ಕೈಲಾಸಂ ಅವರು ಅದ್ಭುತವಾಗಿ ಉಪಯೋಗಿಸಿಕೊಂಡರು. ಹೀಗೆ ಭಾಷೆಯ ರಚನಾತ್ಮಕ ವಿಶ್ಲೇಷಣೆ, ಸಾಮಾಜಿಕ ನಿಯೋಗ, ಸಾಂಸ್ಕೃತಿಕ ಅರ್ಥವಂತಿಕೆ,

ಜೊತೆಗೆ ಜಾಗತಿಕ ಭಾಷಾತತ್ತ್ವಕ್ಕೆ ಕನ್ನಡದ ಮಾಹಿತಿಗಳ ಕೊಡುಗೆ – ಇವೆಲ್ಲವನ್ನೂ ಏಕಕಾಲದಲ್ಲಿ ವ್ಯಂಜಿಸುವಂತೆ ಭಾಷೆಯ ಅಧ್ಯಯನ ಮಾಡುವುದು ನನ್ನ ನೆಚ್ಚಿನ ವಿಧಾನ.

ಬಹುಭಾಷಿಕತೆಗೆ ಸಂಬಂಧಿಸಿರುವ ಮತ್ತೊಂದು ಸಂಶೋಧನಾ ವಿಷಯ ಬಹುಭಾಷಿಕರು ಬಹುಭಾಷಿಕರಾಗುವ ಪ್ರಕ್ರಿಯೆ. ಈ ಅಧ್ಯಯನ ಕ್ಷೇತ್ರವು ದ್ವಿತೀಯ ಭಾಷಾ ಕಲಿಕೆ (ಸೆಕೆಂಡ್ ಲ್ಯಾಂಗ್ವೇಜ್ ಅಕ್ವಿಸಿಷನ್ ಅಥವಾ ಎಸ್.ಎಲ್.ಎ.) ಎಂದು ಪ್ರಸಿದ್ಧವಾಗಿ, ಕಳೆದ ನಲವತ್ತು ವರ್ಷಗಳಲ್ಲಿ ವಿಪುಲವಾಗಿ ಬೆಳೆದಿದೆ. ಆದರೆ ಇದರ ಸಿದ್ಧಾಂತಗಳನ್ನು ಇಂಗ್ಲೀಷನ್ನು ಎರಡನೆ ಭಾಷೆಯಾಗಿ ಕಲಿಯುವವರನ್ನೇ, ಹಾಗೂ ಆ ಭಾಷೆಯನ್ನು ತಾಯ್ನುಡಿಯಾಗಿ ಮಾತಾಡುವ ಅಮೇರಿಕಾ, ಇಂಗ್ಲೆಂಡ್, ಮುಂತಾದ ಸಂದರ್ಭಗಳಲ್ಲಿ ಕಲಿಯುವವರನ್ನೇ ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಹಾಗಾಗಿ, ಇಂಗ್ಲೀಷನ್ನು ಎರಡನೆಯ ಭಾಷೆಯಾಗಿ ಕಲಿಯುವವರಲ್ಲಿ ಮುಖ್ಯರಾದ ಭಾರತೀಯರಂತಹ ಸಮುದಾಯಗಳಿಗೆ ಅನ್ಯಾಯವಾಗಿದೆ. ಭಾರತೀಯ ಇಂಗ್ಲಿಷ್ 'ಅಪೂರ್ಣ ಕಲಿಕೆ'ಯ ಫಲ. ಕಲಿಕೆ ಒಂದು ಅಪೂರ್ಣ ಅವಸ್ಥೆಯಲ್ಲಿ ಪಳೆಯುಳಿಕೆಯಾಗಿ ಬಿಡುವ ನಿದರ್ಶನ, ಎಂದೆಲ್ಲ ಹುಚ್ಚುಹುಚ್ಚಾಗಿ ವ್ಯಾಖ್ಯಾನಿಸಿದ್ದರು. ಭಾರತೀಯ ಇಂಗ್ಲಿಷ್‌ನ ಕಲಿಕೆಯ ಮತ್ತು ಉಪಯೋಗದ ಹಿನ್ನೆಲೆ, ಸಂದರ್ಭಗಳು, ಅದನ್ನು ಯಾರು ಯಾರ ಜೊತೆ ಮಾತನಾಡುವುದಕ್ಕಾಗಿ, ಎಂತಹ ಸಂವಹನವನ್ನು ನಡೆಸುವುದಕ್ಕೆ, ಎಂತಹ ಸಾಂಸ್ಕೃತಿಕ ಅರ್ಥಗಳನ್ನು ವ್ಯಕ್ತಪಡಿಸುವುದಕ್ಕಾಗಿ ಕಲಿಯುತ್ತಾರೆ, ಅದನ್ನು ಉಪಯೋಗಿಸುವಾಗ ಹಲವು ಕಡೆ ಹೇಗೆ ಇಂಗ್ಲಿಷ್ ಒಂದೇ ಭಾಷೆಯಾಗಿರದೆ ಅದು ಭಾರತೀಯರ ಬಹುಭಾಷಾ ಸಂವಹನ ವಿನ್ಯಾಸದ ಒಂದು ಅಂಗ ಮಾತ್ರ ಆಗಿರುತ್ತದೆ, ಹೀಗೆ ಭಾರತದಂತಹ ಅತಿ ಮುಖ್ಯ ಸನ್ನಿವೇಶವನ್ನು ಕಡೆಗಣಿಸಿರುವ ಕಾರಣ, ಆಗ ಪ್ರಚಲಿತವಾಗಿದ್ದ ಸಿದ್ಧಾಂತಗಳು ದ್ವಿತೀಯ ಭಾಷಾ ಕಲಿಕೆಯ ಜಗನ್ಮಾನ್ಯ ಸಿದ್ಧಾಂತವಾಗುವುದರಲ್ಲಿ ವಿಫಲವಾಗಿವೆ ಅಂದು ಸಿದ್ಧಪಡಿಸಿದೆ. ಅವುಗಳ ಸ್ಥಾನದಲ್ಲಿ

ಬಹುಭಾಷಿಕತೆಯನ್ನು ಒಂದು ಸಂಪನ್ಮೂಲವೆಂದು ಪರಿಗಣಿಸುವ ಪರ್ಯಾಯ ಸಿದ್ಧಾಂತ ಬೇಕೆಂದು ತೋರಿಸಿದೆ. ಅದು ಅನೇಕ ಸಂಶೋಧಕರಿಗೆ ಹಿಡಿಸಿದೆ.

1995ರ ನಂತರ ನನ್ನ ಜೀವನ ಅನಿರೀಕ್ಷಿತವಾಗಿ ಬೇರೊಂದು ದಾರಿ ಹಿಡಿಯಿತು. ನಮ್ಮ ವಿ.ವಿ.ಯಲ್ಲಿ ಆಗ ಸುಮಾರು 18,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರು. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮೂಲದವರೇ ಒಂದೆರಡು ಸಾವಿರ ಇದ್ದಿರಬಹುದು. ನಾನು, ನನ್ನ ಪತ್ನಿ–ಸಹೋದ್ಯೋಗಿ ಮೀನಾ ಭಾರತೀಯ ಭಾಷೆಗಳನ್ನು ಕುರಿತು ಸಂಶೋಧನೆ ನಡೆಸುತ್ತಿದ್ದರೂ, ಒಂದೆರಡು ಅಪವಾದಗಳನ್ನು ಬಿಟ್ಟರೆ ನಮ್ಮ ವಿ.ವಿ.ಯಲ್ಲಿ ಭಾರತದ

ಬಗ್ಗೆ ತರಗತಿಗಳಾಗಲೀ, ಭಾರತವನ್ನು ಕುರಿತು ಪಾಠ ಹೇಳುವ, ಸಂಶೋಧನೆ ಮಾಡುವ ಅಧ್ಯಾಪಕರಾಗಲೀ ಇರಲಿಲ್ಲ. ಇಡೀ ಪಠ್ಯಕ್ರಮ ಪಾಶ್ಚಾತ್ಯ ಕೇಂದ್ರಿತವಾಗಿತ್ತು. ಅದರ ಬಗ್ಗೆ ನಮಗೂ ಅಸಮಾಧಾನವಿತ್ತು. ಆದರೆ, ನಾವು ನಮ್ಮ ಪಾಡಿಗೆ ನಮ್ಮ ಕೆಲಸ ಮಾಡಿಕೊಂಡು ಹೋಗುತ್ತಿದ್ದೆವು.

ನ್ಯೂಯಾರ್ಕ್ ನಗರದಲ್ಲಿ ಕನ್ನಡ ಕೂಟದ ಆಶ್ರಯದಲ್ಲಿ, 1989ರಲ್ಲಿ, ಶ್ರೀಮತಿ ಸತ್ಯ ವಿಶ್ವನಾಥ್ ಅವರ ಅಧ್ಯಕ್ಷತೆಯಲ್ಲಿ, ಒಂದು ದೊಡ್ಡ 'ಈಶಾನ್ಯ ಅಮೇರಿಕಾ ಕನ್ನಡ ಸಮ್ಮೇಳನ' ನಡೆದಾಗ, ನಾನು ಅದರ ಸಾಹಿತ್ಯಕ ಕಾರ್ಯಕ್ರಮಗಳ ಮುಖ್ಯ ಸಂಘಟಕನಾಗಿದ್ದೆ. ಶ್ರೀಮತಿ ಅನುರಾಧಾ ನಾಥ್ ಮತ್ತು ಸ್ನೇಹಿತರ ಬೆಂಬಲದಿಂದ, ಡಾ. ಶಿವರಾಮ ಕಾರಂತ್ ಅವರನ್ನು ಮುಖ್ಯ ಅತಿಥಿಗಳಾಗಿ ಕರೆಸಿ, ಒಂದು ವಿಚಾರ ಸಂಕಿರಣವನ್ನೂ, ಕನ್ನಡ ಸಾಹಿತ್ಯದ ಚರಿತ್ರೆಯನ್ನು ನಿರೂಪಿಸುವ ಒಂದು ಪುಸ್ತಕ ಪ್ರದರ್ಶನವನ್ನೂ ಏರ್ಪಡಿಸಿದ್ದೆ. ಸುಮಾರು ಒಂದು ಸಾವಿರ ಜನ ಭಾಗವಹಿಸಿದ್ದರು. ಅದರ ಯಶಸ್ಸಿನಿಂದ ಉತ್ತೇಜಿತನಾಗಿ, 1989ರಲ್ಲಿ ಕೆಲವು ಉತ್ಸಾಹಿ ಗೆಳೆಯರೊಡಗೂಡಿ 'ಇಂಡಿಯಾ ಸೊಸೈಟಿ ಆಫ್ ಸ್ಟೋನಿಬ್ರೂಕ್' ಎಂಬ ಸಂಸ್ಥೆಯನ್ನು ನಮ್ಮ ಮನೆಯಲ್ಲಿಯೇ ಶುರು ಮಾಡಿದೆವು. ವಿಶ್ವ ಮೋಹನ್ ಭಟ್, ಸೋನಾಲ್ ಮಾನ್ ಸಿಂಗ್ ಅಂತಹ ಕಲಾವಿದರಿಂದ ಕಾರ್ಯಕ್ರಮಗಳನ್ನು, ವಿದ್ಯಾ ದೆಹೇಜಿಯ ಅಂತಹ ವಿದ್ವಾಂಸರಿಂದ ಉಪನ್ಯಾಸಗಳನ್ನೂ ಏರ್ಪಡಿಸಿದ್ದೆವು. ಹೀಗೆ ನಮ್ಮದೇ ಒಂದು ಪುಟ್ಟ ಕರ್ನಾಟಕ, ಪುಟ್ಟ ಇಂಡಿಯಾ ಕಟ್ಟಿಕೊಂಡಿದ್ದೆವು.

ಸ್ಟೋನಿಬ್ರೂಕ್ ವಿ.ವಿ.ಯು ಇಂದು ಪ್ರಪಂಚದ ಅಗ್ರಮಾನ್ಯ ಸಂಶೋಧನಾ ವಿದ್ಯಾಸಂಸ್ಥೆಗಳ ಸಾಲಿಗೆ ಸೇರಿದೆ. ಐವಿ ಲೀಗ್ ವಿ.ವಿ.ಗಳಾದ ಹಾರ್ವರ್ಡ್, ಪ್ರಿನ್ಸ್‌ಟನ್‌ನಂತಹ ಗುಣಮಟ್ಟದ ಶಿಕ್ಷಕರು ಇದ್ದಾರೆ. ಐವಿ ಲೀಗ್ ಸಂಸ್ಥೆಗಳೋ ಖಾಸಗಿಯವು. ಧಾರಾಳವಾಗಿ ಫೀಸು ವಸೂಲಿ ಮಾಡಿ, ಬೇಕಾದಾಗ ಹೆಚ್ಚಿಸಬಹುದು. ಅಲ್ಲಿಗೆ ಹೋಗುವ ವಿದ್ಯಾರ್ಥಿಗಳು ಶ್ರೀಮಂತ ಕುಟುಂಬದಿಂದ ಬಂದವರು. ಅಲ್ಲಿನ ಸ್ನಾತಕರು ಕೈಗಾರಿಕೆ, ವಾಣಿಜ್ಯ ಇತರ ಲಾಭದಾಯಕ ಉದ್ಯಮಗಳಲ್ಲಿ ಯಶಸ್ಸು ಗಳಿಸಿ, ತಮ್ಮ ವಿದ್ಯಾಮಾತೃ (ಆಲ್ಮ ಮೇಟರ್)ಗೆ ಧಾರಾಳವಾಗಿ ದತ್ತಿಗಳನ್ನು ಕೊಟ್ಟು, ಅವು ಶ್ರೀಮಂತವಾಗಿವೆ. ಆದರೆ ನಮ್ಮದು ರಾಜ್ಯ ಸರ್ಕಾರ ನಡೆಸುವ ವಿ.ವಿ. ಆಗಿರುವುದರಿಂದ ಇತ್ತೀಚಿನವರೆಗೂ ಎಲ್ಲ ಮುಖ್ಯ ನಿರ್ಧಾರಗಳಿಗೂ ರಾಜ್ಯದ ವಿಧಾನ ಸಭೆ, ಪರಿಷತ್ತಿನ ಮುದ್ರೆ ಬೀಳಬೇಕಾಗಿತ್ತು. ಅಲ್ಲಿಯ ಸದಸ್ಯರಾದರೋ ನ್ಯೂಯಾರ್ಕ್ ರಾಜ್ಯದಲ್ಲಿಯೇ ಹಲವು ಪ್ರಥಮ ದರ್ಜೆಯ ಖಾಸಗಿ ವಿ.ವಿ.ಗಳು ಇರುವುದರಿಂದ (ಉದಾ: ಕೊಲಂಬಿಯ, ಎನ್.ವೈ.ಯು., ಕಾರ್ನೆಲ್), ರಾಜ್ಯ ವಿ.ವಿ.ಯು ಮಧ್ಯಮ ವರ್ಗದವರ

ಕೈಗೆಟಕುವಂತೆ ಇರಬೇಕು ಎನ್ನುವ ಕಾರಣಕ್ಕಾಗಿ ರಾಜ್ಯ ನಡೆಸುವ ಎಲ್ಲ 64 ಕಾಲೇಜಿಗೂ ವಿ.ವಿ.ಗಳಿಗೂ ಒಂದೇ ಸೂತ್ರವನ್ನು ಅನ್ವಯಿಸಿ ಅತಿ ಕಡಿಮೆ ಫೀಸು ನಿಗದಿ ಮಾಡಿದ್ದರು. ಹಾಗಾಗಿ ಅತಿ ಸಾಮಾನ್ಯ ಮಟ್ಟದ ಎರಡು ವರ್ಷದ ಕಮ್ಯೂನಿಟಿ ಅಥವಾ ವೊಕೇಷನಲ್ ಕಾಲೇಜಿಗೂ, ಐವಿ ಲೀಗ್ ದರ್ಜೆಯ ಸಂಶೋಧನೆ ನಡೆಸುವ ಜಾಗತಿಕ ಮಟ್ಟದ ವಿದ್ಯಾ ಸಂಸ್ಥೆಗಳೊಡನೆ ಪೈಪೋಟಿ ನಡೆಸುವ ಮಹತ್ವಾಕಾಂಕ್ಷೆಯುಳ್ಳ ಸ್ಟೋನಿಬ್ರೂಕ್‌ನಂತಹ ವಿ.ವಿ.ಗಳಿಗೂ ಒಂದೇ ಫೀಸು. ಅಲ್ಲದೆ ನಮ್ಮದು ಈಚೆಗೆ ಸ್ಥಾಪಿತವಾದ ಸಂಸ್ಥೆ – ಅರವತ್ತು ವರ್ಷಗಳೂ ಕಳೆದಿಲ್ಲ (ಹಾರ್ವರ್ಡ್ ಪ್ರಾರಂಭವಾಗಿದ್ದು 1630ರಲ್ಲಿ). ಹಾಗಾಗಿ ದತ್ತಿಗಳೂ ತುಂಬಾ ಕಡಿಮೆ. ಅಲ್ಲದೆ, ಅಮೇರಿಕಾದಲ್ಲಿ ಆರ್ಥಿಕ ಪರಿಸ್ಥಿತಿ ಕುಗ್ಗಿದಾಗ ರಾಜ್ಯಗಳ ಆಯವ್ಯಯವೂ ಕುಗ್ಗಿ ಅನೇಕ ರಾಜ್ಯ ಸಂಸ್ಥೆಗಳಿಗೂ ಯೋಜನೆಗಳಿಗೂ ಕತ್ತರಿ ಬೀಳುತ್ತದೆ, ಸಾವಿರಾರು ರಾಜ್ಯ ನೌಕರರು ಕೆಲಸ ಕಳೆದುಕೊಳ್ಳುವುದೂ ಉಂಟು (ಈ ಸಂದರ್ಭದಲ್ಲಿ ಟೆನ್ಯೂರ್ ಇನ್ನೂ ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತದೆ. ಪ್ರಾಸಂಗಿಕವಾಗಿ ಗಮನಿಸಬೇಕಾದ ವಿಷಯವೆಂದರೆ, ನ್ಯಾಯಾಂಗದಲ್ಲಿ ನ್ಯಾಯಾಧೀಶರು ಮತ್ತು ವಿಶ್ವ ವಿದ್ಯಾಲಯಗಳಲ್ಲಿ ಟೆನ್ಯೂರ್ ಆದ ಅಧ್ಯಾಪಕರನ್ನು ಬಿಟ್ಟರೆ ಅಮೇರಿಕಾದಲ್ಲಿ ಯಾರ ನೌಕರಿಗೂ ನಿಜವಾದ ಖಾಯಂ ಪಟ್ಟ ಇಲ್ಲ). ಇದೆಲ್ಲದರ ಫಲವಾಗಿ ನಮ್ಮ ವಿ.ವಿ.ಯು – ನಾನು ಸೇರಿಕೊಂಡ ನಂತರವಂತೂ – ಸತತವಾದ ತೀವ್ರ ಕೊರತೆಯ ಸ್ಥಿತಿಯಲ್ಲಿಯೇ ಇರುತ್ತಿತ್ತು.

1995ರಲ್ಲಿ ನಮ್ಮ ವಿ.ವಿ.ಯ ವಿದ್ಯಾರ್ಥಿ ಸಂಘ, ಕ್ಲಬ್ ಇಂಡಿಯಾದ ಕೆಲವರು, 'ಇದೇನಿದು, ಇಷ್ಟು ದೊಡ್ಡ ವಿ.ವಿ., ಇಷ್ಟೊಂದು ಭಾರತೀಯ ವಿದ್ಯಾರ್ಥಿಗಳು, ಆದರೆ ನಮ್ಮ ಸಂಸ್ಕೃತಿ, ಕಲೆ, ಭಾಷೆ, ಸಾಹಿತ್ಯ, ಧರ್ಮ, ಯಾವುದರ ಬಗ್ಗೆಯೂ ಒಂದು ಕೋರ್ಸೂ ಇಲ್ಲ, ನಮಗೆ ನಮ್ಮ ಹೆರಿಟೇಜ್ ಬಗ್ಗೆ ಕಲಿಯಲು ಅವಕಾಶವೇ ಇಲ್ಲವಲ್ಲಾ; ಏನಾದರೂ ಮಾಡಿ' ಎಂದು ಕೇಳಿದರು. 'ನಿಜವಾಗಿಯೂ ನಿಮಗೆ ಇಂಡಿಯಾದ ಬಗ್ಗೆ ಕಲಿಯಬೇಕೆಂಬ ಆಸೆ ಇದೆಯಾ? ಅದಕ್ಕಾಗಿ ಕಷ್ಟಪಟ್ಟು ಕೆಲಸ ಮಾಡಲು ತಯಾರಾಗಿದ್ದೀರಾ?' ಎಂದು ಕೇಳಿದಾಗ 'ಹೌದು' ಎಂದು ಉತ್ಸಾಹದಿಂದ ಹೇಳಿದರು. ಇದೇ ಅವಕಾಶವೆಂದು ಅವರನ್ನು ಸಂಘಟಿಸಿದೆವು. 'ನೀವು ಸುಮ್ಮನೆ ಅಲ್ಲಿ ಇಲ್ಲಿ ಬೇಡಿ ಯಾರ ಕೈಯಲ್ಲೋ ಯಾವುದೋ ಒಂದು ಕೋರ್ಸು ಹಂಗಾಮಿಯಾಗಿ ಹೇಳಿಸಿಕೊಂಡರೆ ಯಾವ ದೊಡ್ಡ ಉಪಯೋಗವೂ ಆಗುವುದಿಲ್ಲ. ದೀರ್ಘ ಕಾಲದ ಬದಲಾವಣೆ ಬೇಕಿದ್ದರೆ ಸ್ಟ್ರಕ್ಚರಲ್ ಚೇಂಜ್ ತರಬೇಕು. ಅದಕ್ಕಾಗಿ ನೀವು ನೇರವಾಗಿ ವಿ.ವಿ.ಯ ಮುಖ್ಯ ಆಡಳಿತಗಾರರಾದ ಅಧ್ಯಕ್ಷರ ಬಳಿಗೇ ಹೋಗಿ. ಅಲ್ಲಿಯೂ ಸುಮ್ಮನೆ ಹೋಗಿ ಬಂದರೆ ಸಾಲದು, ಎಲ್ಲ ಆಡಳಿತಗಾರರೂ ನಾಲ್ಕು ಒಳ್ಳೆಯ ಮಾತಾಡಿ ಮನೆಗೆ ಕಳಿಸುವುದನ್ನು ಬಲ್ಲವರಾಗಿರುತ್ತಾರೆ. ಅವರ ಮೇಲೆ ನಿಜವಾದ ಪ್ರಭಾವ ಬೀರಬೇಕಿದ್ದರೆ ಒಂದು ಲಿಖಿತ ಬೇಡಿಕೆಯನ್ನು ಕೊಡಿ.' ಎಂದು ಹೇಳಿದೆ. ಅವರನ್ನು ಮನೆಗೆ ಕರೆದುಕೊಂಡು ಬಂದು, ಊಟ ಹಾಕಿ, ಎರಡು ದಿನ ಪಟ್ಟು ಹಿಡಿದು ಕುಳಿತು ಒಂದು

ಸಾಮೂಹಿಕ ಅರ್ಜಿ (ಪಿಟಿಶನ್) ತಯಾರು ಮಾಡಿದೆವು. ಅದರಲ್ಲಿ ನಮಗೆ ಏನು ಬೇಕು? ಏಕೆ ಬೇಕು? ಅದಕ್ಕೆ ಏನು ಸಂಪನ್ಮೂಲಗಳು ಬೇಕು? ಎಂತಹ ಸಂಪನ್ಮೂಲಗಳು ಈಗಾಗಲೇ ಇವೆ? ಈ ಬೇಡಿಕೆಗೆ ಎಷ್ಟು ವಿದ್ಯಾರ್ಥಿಗಳ ಬೆಂಬಲ ಇದೆ? ನಮಗೆ ಮಾರ್ಗದರ್ಶನ ನೀಡಲು ಅಧ್ಯಾಪಕ ವರ್ಗದಲ್ಲಿ ಯಾರು ತಯಾರಾಗಿದ್ದಾರೆ? ಕೇವಲ ಭಾರತೀಯರೇ ಅಲ್ಲದೆ ವಿ.ವಿ.ಯ ಎಲ್ಲ ವಿದ್ಯಾರ್ಥಿಗಳಿಗೂ ಇದರಿಂದ ಏನು ಉಪಯೋಗ ಇದೆ? ಇದರಿಂದ ವಿ.ವಿ.ಗೆ ಯಾವ ಅನುಕೂಲ ಆಗುತ್ತದೆ? ಇತ್ಯಾದಿಗಳನ್ನೆಲ್ಲ ವಿವರವಾಗಿ, ಪ್ರೊಫೆಶನಲ್ ಆಗಿ ವಿವರಿಸಿದೆವು. ಇದಕ್ಕೆ ಸಾಧ್ಯವಾದಷ್ಟು ವಿದ್ಯಾರ್ಥಿಗಳ ಕೈಲಿ ರುಜು ಹಾಕಿಸಿ, ಎಂದು ಕೊಟ್ಟೆವು. ಕೆಲವೇ ದಿನಗಳಲ್ಲಿ ಭಾರತೀಯ ವಿದ್ಯಾರ್ಥಿಗಳ ವಾನರ ಸೇನೆ ಎಲ್ಲ ದಿಕ್ಕುಗಳಿಗೂ ಚದುರಿ 700 ಸಹಿಗಳನ್ನು ಸಂಗ್ರಹಿಸಿತು.

ವಿ.ವಿಯ ಅಧ್ಯಕ್ಷರು ವಿದ್ಯಾರ್ಥಿಗಳ ಉತ್ಸಾಹ ಸಂಘಟನೆಯಿಂದ ಪ್ರಭಾವಿತರಾದರು. ಅವರ ಸಮ್ಮತಿ ಸಿಕ್ಕಿತು (ಆರ್ಥಿಕ ನೆರವಲ್ಲ, ನೈತಿಕ ಆಶೀರ್ವಾದ), ನಮಗೆ ಅಷ್ಟೇ ಬೇಕಿತ್ತು. ನಾನು, ಮೀನಾ ನಮ್ಮ ಎಂದಿನ ಬೋಧನಾ ಜವಾಬ್ದಾರಿಗಳ ಮೇಲೆ ಹೆಚ್ಚಿನ ಕಾರ್ಯಭಾರವಾಗಿ ಒಂದೊಂದು ಕೋರ್ಸ್ ಹೇಳಿಕೊಟ್ಟೆವು. ನಾನು 'ಇಂಟ್ರೊಡಕ್ಷನ್ ಟು ಇಂಡಿಯನ್ ಸಿವಿಲೈಸೇಶನ್' ಎಂಬುವ ಕೋರ್ಸ್‌ಅನ್ನೂ, ಮೀನಾ ಪ್ರಾಥಮಿಕ ಹಿಂದೀ ಕೋರ್ಸ್‌ಅನ್ನೂ ಆಫರ್ ಮಾಡಿದೆವು. ಮೊದಲನೆಯ ಸೆಮೆಸ್ಟರ್‌ನಲ್ಲೇ ನನ್ನ ತರಗತಿಯಲ್ಲಿ 76 ಜನ, ಮೀನಾ ತರಗತಿಯಲ್ಲಿ 40 ಜನ ನೋಂದಾಯಿಸಿಕೊಂಡಿದ್ದರು. ಈ ರೀತಿಯ ವಿದ್ಯಾರ್ಥಿ ಪ್ರೇರಿತ ಶೈಕ್ಷಣಿಕ ಕ್ರಾಂತಿಯ ಸುದ್ದಿ ಕ್ಯಾಂಪಸ್‌ನಲ್ಲೆಲ್ಲ ಹಬ್ಬಿತು. ನಮ್ಮ ಪ್ರದೇಶದ ಮುಖ್ಯ ದಿನಪತ್ರಿಕೆ, ಲಕ್ಷಾಂತರ ಜನ ಓದುವ ನ್ಯೂಸ್‌ಡೇ ನಮ್ಮನ್ನೂ ವಿದ್ಯಾರ್ಥಿಗಳನ್ನೂ ಸಂದರ್ಶಿಸಿ ದೊಡ್ಡ ಚಿತ್ರದೊಡನೆ ದೀರ್ಘವಾದ ಲೇಖನವನ್ನು 'ಇಂಡಿಯಾ ಸ್ಟಡೀಸ್ ಮಲ್ಲ್‌ಡ್ ಅಟ್ ಸ್ಟೋನಿಬ್ರೂಕ್' ಎಂಬ ಶೀರ್ಷಿಕೆಯಡಿ ಪ್ರಕಟಿಸಿತು. ನಾವು ಎಲೆ ಮರೆಯ ಕಾಯಿಯಂತೆ ಇರಬೇಕೆಂದಿದ್ದವರು ಇದ್ದಕ್ಕಿದ್ದಂತೆ ಎಲ್ಲರೂ ಗುರುತು ಹಿಡಿದು ಮಾತಾಡಿಸುವವರೂ, ಅಭಿನಂದಿಸುವವರೂ ಆಗಿಬಿಟ್ಟೆವು.

ಸುದ್ದಿ ಹರಡಿದಂತೆ ಬೇಡಿಕೆಗಳೂ ಹೆಚ್ಚತೊಡಗಿದವು. ವಿದ್ಯಾರ್ಥಿಗಳು ಬೇರೆ ಬೇರೆ ಸಬ್ಜೆಕ್ಟ್ಸ್ ಮೇಲೆ ಕೋರ್ಸ್ ಬೇಕು ಎಂದು ಕೇಳಲು ತೊಡಗಿದರು (ಅದು ಬಿಡಿ, ಭಾರತೀಯ ಕಿರಾಣಿ ಅಂಗಡಿಗಳಲ್ಲಿ ನಮ್ಮನ್ನು ನೋಡಿದವರು ಪುಂಖಾನುಪುಂಖವಾಗಿ ಪುಕ್ಕಟೆ ಸಲಹೆಗಳನ್ನು ನೀಡಿದರು. ಅಕ್ಯಾಡೆಮಿಕ್ ಆಗಿ ವಿದ್ಯಾರ್ಹತೆ ಪಡೆಯದಿದ್ದವರೂ ಯಾವ ಯಾವ ವಿಷಯಗಳ ಬಗ್ಗೆಯೋ ತರಗತಿಗಳನ್ನು ಹೇಳಿಕೊಡಲು ಮುಂದೆ ಬಂದರು. ಫ್ಯಾಕಲ್ಟಿ ಹುದ್ದೆಗಳಿಗಂತೂ ಬಂದ ಅರ್ಜಿಗಳು ಅಗಣಿತ. ತಮ್ಮತಮ್ಮ ಸಂಬಂಧಿಕರ ಸಂಗೀತ, ನೃತ್ಯ, ಉಪನ್ಯಾಸಗಳನ್ನು ಏರ್ಪಡಿಸಲು ಬೇಡಿಕೆಗಳ ಮಹಾಪೂರವೇ ಬಂತು). ವಿದ್ಯಾರ್ಥಿಗಳಲ್ಲೂ ಸುತ್ತ ಭಾರತೀಯ ಸಮುದಾಯದಲ್ಲೂ

ನಾವೊಂದು ಸುಪ್ತ ಆಕಾಂಕ್ಷೆಯನ್ನು ಎಬ್ಬಿಸಿದಂತಿತ್ತು. ಈ ಬೇಡಿಕೆಯ ಒಂದು ಚಿಕ್ಕ ಭಾಗವನ್ನು ಪೂರೈಸಲೂ ಹೊರಗಿನ ಸಹಾಯವಿಲ್ಲದೆ ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿತ್ತು. ಸರ್ಕಾರದಿಂದ, ವಿ.ವಿ.ಯಿಂದ ಸದ್ಯಕ್ಕಂತೂ ಆರ್ಥಿಕ ಬೆಂಬಲವನ್ನು ಅಪೇಕ್ಷಿಸುವ ಹಾಗಿರಲಿಲ್ಲ. ಸುತ್ತಮುತ್ತಲಿನ ಊರುಗಳಲ್ಲಿನ ಯಶಸ್ವೀ ಭಾರತೀಯರು ಯಾರಾದರೂ ಧನಸಹಾಯ ಮಾಡಬಹುದೇನೋ ಎಂಬ ದೂರದ ಕನಸಿನಿಂದ ಟೆಲಿಫೋನ್ ಡೈರೆಕ್ಟರಿಯಲ್ಲಿ ಸುಮ್ಮನೆ ನೋಡುತ್ತಿದ್ದಾಗ ಡಾ. ಆರ್ಶಾದ್ ಆನಂದ್ ಎಂಬುವರ ಹೆಸರು ಕಣ್ಣಿಗೆ ಬಿತ್ತು. ಅವರ ಬಗ್ಗೆ ಕೆಲವು ದಿನಗಳ ಹಿಂದೆ ಅವರ ಎಂ.ಆರ್.ಐ. ಲ್ಯಾಬ್ ಬಗ್ಗೆ ಒಂದು ಪತ್ರಿಕಾ ಲೇಖನ ಓದಿದ ನೆನಪಿತ್ತು.

ಒಂದು ಕೈ ನೋಡೋಣ ಎಂದುಕೊಂಡು ಫೋನ್ ಮಾಡಿಯೇ ಬಿಟ್ಟೆ. ಬನ್ನಿ ಅಂದರು. ಅವರ ಆಫೀಸಿಗೆ ಹೋಗಿ ನಮ್ಮ ವಿದ್ಯಾರ್ಥಿ ಚಳುವಳಿಯ ಬಗ್ಗೆ ವಿವರಿಸಿ ಹೇಗೆ ಭಾರತೀಯ ಸಂಸ್ಕೃತಿಯ ಪರಂಪರೆಯ ಬಗ್ಗೆ ತಿಳಿದುಕೊಳ್ಳಲು ನಮ್ಮ ಯುವ ಪೀಳಿಗೆಯವರು ಹೇಗೆ ಕಾತರರಾಗಿದ್ದಾರೆ, ಆದರೆ ವಿ.ವಿ.ಯಲ್ಲಿ ಅನುಕೂಲಗಳಿಲ್ಲ, ಇದನ್ನು ಪ್ರೋತ್ಸಾಹಿಸುವುದು ನಮ್ಮ ಸಮಾಜಕ್ಕೆ ಮುಖ್ಯವಾಗಬೇಕಲ್ಲವೆ? ಈ ಚಳುವಳಿ ಯಶಸ್ವಿಯಾಗಲು ಭಾರತೀಯ ಮುಖಂಡರ ಆರ್ಥಿಕ ಬೆಂಬಲ ಅವಶ್ಯಕ ಎಂದು ವಿವರಿಸಿದೆ. ಅವರು ತುಂಬಾ ಉತ್ಸಾಹಿತರಾಗಿ, ಕೂಡಲೇ ತಮ್ಮ ತಮ್ಮ ಮನೆಯಲ್ಲಿ ತಮ್ಮ ಗೆಳೆಯರ ಮೀಟಿಂಗನ್ನು ಏರ್ಪಡಿಸಿದರು. ನಾನೂ ಮೀನಾ ಹೋಗಿ ವಿವರವಾದ ವರದಿ ನೀಡಿದೆವು. ಅಲ್ಲಿ ಬಂದಿದ್ದ ಐದಾರು ದಂಪತಿಗಳೂ ತುಂಬಾ ಉತ್ಸುಕರಾದರು. ಲಾಂಗ್ ಐಲೆಂಡಿನ ಪ್ರಮುಖ ಭಾರತೀಯರನ್ನು ಕರೆದು ಈ ಸಂಗತಿಯನ್ನು ವಿವರಿಸುವುದೆಂದೂ ಅವರ ಬೆಂಬಲವನ್ನು ಕೋರುವುದೆಂದೂ ನಿರ್ಧರಿಸಲಾಯಿತು. ಸಂಕೋಚ ಪ್ರವೃತ್ತಿಯ ನನಗೆ ಈ ಧೈರ್ಯ ಎಲ್ಲಿಂದ ಬಂತೋ ಅದು ಇಂದಿಗೂ ನನಗೆ ಸೋಜಿಗದ ಮಾತೇ.

ಇಷ್ಟರಲ್ಲಿ ಕ್ಯಾಂಪಸ್ಸಿನಲ್ಲಿ ಬೇರೆ ಬೇರೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯ ಅಧ್ಯಾಪಕರನ್ನೂ ಸಂಘಟಿಸಿದೆವು. ವಿದ್ಯಾರ್ಥಿ ಸ್ವಯಂ ಸೇವಕರ ಪಡೆಯೂ ಕಾರ್ಯಗತವಾಯಿತು. ವಿ.ವಿ.ಯ ಪ್ರೆಸಿಡೆಂಟರಿಂದ ಹಿಡಿದು ಪ್ರೊವೋಸ್ಟು, ಮುಖ್ಯ ಡೀನ್‌ಗಳು, ವೈಸ್ ಪ್ರೆಸಿಡೆಂಟುಗಳು, ಪ್ರಭಾವೀ ಪ್ರಾಧ್ಯಾಪಕರುಗಳನ್ನೂ ಸಭೆಗೆ ಕರೆದೆವು. ಹಲವಾರು ಯಶಸ್ವೀ ಭಾರತೀಯ ವೈದ್ಯರುಗಳು, ವ್ಯಾಪಾರಿಗಳು, ಎಂಜಿನಿಯರುಗಳು, ಇತ್ಯಾದಿ ಮುಖ್ಯಸ್ಥರುಗಳನ್ನೂ ಆಹ್ವಾನಿಸಿದೆವು. ಒಂದು ಭಾನುವಾರ ಬೆಳಿಗ್ಗೆ ಸುಸಜ್ಜಿತ ಸಭಾಂಗಣದ ಸ್ಟಡೀಸ್‌ನಲ್ಲಿ ಸುಮಾರು ನೂರೈವತ್ತು ಜನ ಸೇರಿದ ಸಭೆಯಲ್ಲಿ ಸ್ಟೋನಿ ಬ್ರೂಕ್‌ನಲ್ಲಿ ಇಂಡಿಯಾ ಸ್ಟಡೀಸ್ ಪ್ರೋಗ್ರಾಮ್‌ನ (ಭಾರತ ಅಧ್ಯಯನ ಕಾರ್ಯಕ್ರಮದ) ಒಂದು ಕಾಣ್ಕೆಯನ್ನು ಮಂಡಿಸಿದೆ. ಇದೊಂದು ಅದ್ಭುತ ಯಶಸ್ಸಾಯಿತು. ಕೇವಲ ವಿಚಾರ ವಿನಿಮಯಕ್ಕೆಂದು ಬಂದಿದ್ದ ಜನರು ನಿಂತಲ್ಲಿಯೇಸಾವಿರ, ಎರಡು ಸಾವಿರ, ಐದು ಸಾವಿರ ಡಾಲರುಗಳ ವಚನ ಕೊಟ್ಟು, ಒಟ್ಟು ಒಂದು ಲಕ್ಷ ಡಾಲರುಗಳ ಪ್ಲೆಡ್ಜ್ ನಿಧಿ

ಸಂಗ್ರಹವಾಯಿತು. ಸ್ಟೋನೀ ಬ್ರೂಕ್ ವಿ.ವಿ.ಯ ಇತಿಹಾಸದಲ್ಲಿಯೇ ಅಭೂತಪೂರ್ವವಾದ ದಾಖಲೆ ಇದು. ಇದರಿಂದ ಇಡೀ ಕ್ಯಾಂಪಸ್‌ನಲ್ಲಿ ಇಂಡಿಯಾ ಸ್ಟಡೀಸ್‌ನ ಪ್ರತಿಷ್ಠೆ, ಭಾರತೀಯರ ಪ್ರತಿಷ್ಠೆ, ಇಂಡಿಯಾದ ಬಗ್ಗೆ ಗೌರವ, ಅಚ್ಚರಿ ಗಗನಕ್ಕೇರಿತು.

ಇದೆಲ್ಲ ನಡೆದದ್ದು 1996ರ ಮೇ ತಿಂಗಳಲ್ಲಿ. ಆಗ ಭಾರತ ಇನ್ನೂ 'ಫ್ಯಾಷನೆಬಲ್' ಆಗಿರಲಿಲ್ಲ. 'ವೈ2ಕೆ' ಇನ್ನೂ ದೂರದಲ್ಲಿತ್ತು. ವಿ.ವಿಯ ನಿಯಮಾವಳಿಗಳನ್ನು ಸಂಶೋಧಿಸಿ ವಿ.ವಿ.ಯಿಂದ ಹೆಚ್ಚು ಆರ್ಥಿಕ ಹೂಡಿಕೆ ಇಲ್ಲದಿದ್ದರೆ ಒಂದು ರೀತಿಯ ಕೇಂದ್ರವನ್ನು ಸ್ಥಾಪಿಸುವ ವಿಧಾನ ಅಷ್ಟು ಜಟಿಲವಾಗದು ಎಂದು ಕಂಡುಕೊಂಡೆ. ಇಂಜಿನಿಯರಿಂಗ್‌ನಲ್ಲಿ ಉಪಡೀನ್ ಆಗಿದ್ದ ಗೆಳೆಯ ಪ್ರೊ. ವಿಶ್ವನಾಥ್ ಪ್ರಸಾದ್ ಅವರ ಉತ್ತಮ ಸಲಹೆಗಳಿಂದ ಇಂಡಿಯಾ ಸ್ಟಡೀಸ್‌ಗಾಗಿ ಒಂದು ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಿದೆವು. ಆ ಅರ್ಜಿ ಸಲ್ಲಿಸಿ, ಆಧಾರಗಳನ್ನೂ ತೋರಿಸಿ, ಕೇಂದ್ರಕ್ಕೆ ಅನುಮತಿಯನ್ನೂ ಪಡೆದುಕೊಂಡೆವು. ನನ್ನನ್ನು ಪ್ರಥಮ ನಿರ್ದೇಶಕನಾಗಿ ನೇಮಿಸಿದರು.

ಮೇಲೆ ವಿವರಿಸಿದ ಸಭೆಗೆ ದೊಡ್ಡ ಗಣ್ಯರನ್ನೆಲ್ಲ ಕರೆದದ್ದು ಒಳ್ಳೆಯದಾಯಿತು. ಭಾರತೀಯ ಮುಖಂಡರ ಒಂದು ಸಮಿತಿಯನ್ನು ಕಟ್ಟಿಕೊಂಡು ವಿ.ವಿ.ಯ ಅತ್ಯುನ್ನತ ಅಧಿಕಾರಿಗಳನ್ನು ಹಲವು ಬಾರಿ ಭೇಟಿ ಮಾಡಿ ನಮ್ಮ ಕೇಂದ್ರಕ್ಕಾಗಿ ಕಚೇರಿ, ಲೈಬ್ರರಿ, ಸೆಮಿನಾರ್ ರೂಮ್, ಡೈರೆಕ್ಟರರ ಆಫೀಸು, ಇತ್ಯಾದಿಗಳಿಗೆ ಒಂದು ಜಾಗ ಕೊಡಬೇಕೆಂದು ಕೇಳಿಕೊಂಡೆವು. ಅದು ಅಪ್ರೂವ್ ಆಗಿ ಕ್ಯಾಂಪಸ್ಸಿನ ಕೇಂದ್ರಸ್ಥಾನದಲ್ಲಿ ಲೈಬ್ರರಿಯೊಳಗೇ ವಿಶಾಲವಾದ ಸ್ಥಳ ಸಿಕ್ಕಿತು. 'ಸೆಂಟರ್ ಫಾರ್ ಇಂಡಿಯಾ ಸ್ಟಡೀಸ್' ಎಂಬ ಹೆಸರಿನಿಂದ ವಿ.ವಿ.ಯ ಅಂಗವಾಗಿ ಒಂದು ಹೊಸ ಘಟಕವು ಏಪ್ರಿಲ್ 26, 1997ರಂದು ವಿಧ್ಯುಕ್ತವಾಗಿ ಉದ್ಘಾಟನೆಯಾಯಿತು. ಭಾರತದ ಪ್ರಧಾನಮಂತ್ರಿಗಳ ವಿಜ್ಞಾನ ಸಲಹೆಗಾರರಾಗಿದ್ದ ಡಾ. ಅರುಣಾಚಲಂ ಅವರು ಉದ್ಘಾಟನಾ ಭಾಷಣ ಮಾಡಿದರು. ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ, 'Asians Making an Impact on Long Island' ಎಂಬ ಶೀರ್ಷಿಕೆಯಡಿ ಹಲವು ಚಿತ್ರಗಳೊಡನೆ ದೀರ್ಘ ಲೇಖನ ಪ್ರಕಟಿಸಿತು.

ನಮ್ಮ ಭಾರತೀಯ ಅಧ್ಯಯನ ಕೇಂದ್ರ ನ್ಯೂಯಾರ್ಕ್ ಪ್ರದೇಶದ ಭಾರತೀಯರ ಹೆಮ್ಮೆಯ ಸಂಸ್ಥೆಯಾಗಲು ಹೆಚ್ಚು ಕಾಲ ಹಿಡಿಯಲಿಲ್ಲ. ಅದು ಕಲಿಸುವ ವಿಷಯಗಳ ಹರಹು ಹೆಚ್ಚುತ್ತಾ ಬಂದಿತು. ಕ್ರಮ ಕ್ರಮವಾಗಿ ಭಾರತೀಯ ನಾಗರೀಕತೆ, ಸಮಕಾಲೀನ ಭಾರತ, ಹಿಂದೂ, ಇಸ್ಲಾಂ, ಸೂಫೀ, ಬೌದ್ಧ ಧರ್ಮಗಳು, ದಕ್ಷಿಣ ಏಷ್ಯಾದ ಭಾಷೆಗಳು ಮತ್ತು ಸಮಾಜ, ಸಂಸ್ಕೃತ, ಹಿಂದಿ, ಭಾರತೀಯ ಪುರಾಣಗಳು, ಮಹಾಭಾರತ ಮತ್ತು ರಾಮಾಯಣ, ಭಗವದ್ಗೀತೆ, ಶಾಸ್ತ್ರೀಯ ಸಂಗೀತ, ಭರತನಾಟ್ಯ, ಭಾರತೀಯ ಜನಪ್ರಿಯ ಸಂಸ್ಕೃತಿ, ಭಾರತದ ಸಾಹಿತ್ಯಗಳು, ಭಾರತದ ವಿದೇಶಾಂಗ ನೀತಿ, ಇತ್ಯಾದಿ ವಿಷಯಗಳನ್ನು ಕುರಿತು ಪ್ರತಿವರ್ಷ ಕಲಿಸುವ ನಿಯತಕಾಲಿಕ ತರಗತಿಗಳೂ, ಭಾರತೀಯ

ಸ್ತ್ರೀವಾದ, ಮಾನವಶಾಸ್ತ್ರ, ಇತ್ಯಾದಿ ಅನೇಕ ವಿಷಯಗಳ ಮೇಲೆ ವಿಶೇಷ ಕೋರ್ಸ್‌ಗಳನ್ನು ಪ್ರಾರಂಭಿಸಿದೆವು. ಈ ಕೋರ್ಸುಗಳು ವಿದ್ಯಾರ್ಥಿಗಳಿಗೆ ಬೇಡದ ಹೊರೆಯಾಗದೆ ಅವುಗಳು ಡಿಗ್ರಿಗೆ ಬೇಕಾದ ಕ್ರೆಡಿಟ್‌ಗಳ ಮೊತ್ತಕ್ಕೆ ಗಣ್ಯವಾಗುವಂತೆ ಮಾಡಿದೆವು. ಅಲ್ಲದೆ, ಕೋರ್ಸುಗಳೂ ವಿ.ವಿ.ಯ ಕೋರ್ ಕರಿಕ್ಯುಲಂ, ಅಂದರೆ, ಎಲ್ಲ ವಿದ್ಯಾರ್ಥಿಗಳೂ ತೆಗೆದುಕೊಳ್ಳಲೇಬೇಕಾದ ಕೆಲವು ವಿಷಯ ಭಾಗಗಳಿಗೆ ಸೇರುವಂತೆ ಅಂಗೀಕಾರ ಪಡೆದೆವು. ಹಾಗಾಗಿ, ಎಲ್ಲ ವಿದ್ಯಾರ್ಥಿಗಳೂ ಈ ಕೋರ್ಸುಗಳ ಲಾಭ ಪಡೆಯಬಹುದಾಯಿತು. ಇನ್ನೂ ಮುಂದೆ ಹೋಗಿ, ಭಾರತೀಯ ಅಧ್ಯಯನದಲ್ಲಿ 7 ಕೋರ್ಸ್‌ಗಳ ಒಂದು ವ್ಯವಸ್ಥಿತ ಪರಿಣತಿ (ಮೈನರ್) ಪಡೆಯಲು ಸಾಧ್ಯವಾಗುವಂತೆ ಮಾಡಿದೆವು. ಈ ಕೋರ್ಸುಗಳ ಸಂಖ್ಯೆ ಹೆಚ್ಚುತ್ತಾ ಬಂದು ಈಗ 25ರಿಂದ 30 ಕೋರ್ಸ್‌ಗಳನ್ನು ಹೇಳಿಕೊಡುತ್ತಿದ್ದೇವೆ. ಇವುಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಾ ಬಂದು ಈಗ ಸುಮಾರು 800ರಿಂದ 1000ದಷ್ಟಿದೆ.

ನಮ್ಮ ದೇಶದ 50ನೆ ಸ್ವಾತಂತ್ರ್ಯ ದಿನೋತ್ಸವದ ಸಂದರ್ಭದಲ್ಲಿ ಅಮೆರಿಕಾದ ಅನೇಕ ಅನಿವಾಸಿ ಭಾರತೀಯ ಸಂಘಸಂಸ್ಥೆಗಳು ವಿಧವಿಧವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು. ಕೆಲವರು ಪ್ರಸಿದ್ಧ ಸಿನಿಮಾ ನಟಿಯರನ್ನು ಕರೆಸಿದರು. ನಮ್ಮ ಕೇಂದ್ರ ಸ್ಥಾಪಿತವಾದದ್ದನ್ನು ಕೇಳಿದ ಅಸೋಸಿಯೇಷನ್ ಆಫ್ ಇಂಡಿಯನ್ಸ್ ಇನ್ ಅಮೆರಿಕ (ಎ.ಐ.ಎ.) ಎಂಬ ರಾಷ್ಟ್ರೀಯ ಸಂಸ್ಥೆಯೊಂದು ಹೊರ ದೇಶದಲ್ಲಿ ಹುಟ್ಟಿ ಬೆಳೆಯುತ್ತಿರುವ ಭಾರತ ಮೂಲದ ಯುವ ಪೀಳಿಗೆಗೆ ಮತ್ತು ಅಮೆರಿಕನ್ನರಿಗೆ ಭಾರತದ ನಾಗರೀಕತೆಯ ಉತ್ತಮ ಪರಿಚಯ ಮಾಡಿಕೊಡಲೆಂದು ಒಂದು ಪ್ರೌಢ ಗ್ರಂಥವನ್ನು ತಯಾರಿಸಲು ಆಹ್ವಾನ ನೀಡಿತು. ಒಂದೇ ವರ್ಷದ ಕಾಲಾವಕಾಶ ಇದ್ದರೂ, ಈ ಸವಾಲನ್ನು ಸ್ವೀಕರಿಸಿ ಆ ಸಂಸ್ಥೆಯ ಅಧ್ಯಕ್ಷರೂ ನಮ್ಮ ಕೇಂದ್ರದ ಪೋಷಕರೂ ಆದ ಡಾ. ನಿರ್ಮಲ್ ಮಟ್ಟು ಅವರೂ ನಾನೂ ಸಹಸಂಪಾದಕರಾಗಿ 1997ರಲ್ಲಿ ಒಂದು ಗ್ರಂಥವನ್ನು ಹೊರತಂದೆವು. ಅದೇ 'ಅನನ್ಯ: ಎ ಪೋರ್ಟ್ರೈಟ್ ಆಫ್ ಇಂಡಿಯಾ'. ಇದರಲ್ಲಿ ಭಾರತ ಅಧ್ಯಯನ ಕ್ಷೇತ್ರದಲ್ಲಿ ಪ್ರಪಂಚದ ಅಗ್ರಗಣ್ಯ ವಿದ್ವಾಂಸರಿಂದ ಹೇಳಿ ಬರೆಸಿದ 41 ಅಧ್ಯಾಯಗಳಿವೆ. ಸಿಂಧೂ ನಾಗರೀಕತೆಯಿಂದ ಹಿಡಿದು ಆರ್ಥಿಕ ಉದಾರೀಕರಣ ನೀತಿಯವರೆಗೆ, ಚರಿತ್ರೆ, ಮತಧರ್ಮಗಳು, ತತ್ತ್ವಶಾಸ್ತ್ರಗಳು, ಸಮಾಜಶಾಸ್ತ್ರ, ರಾಜಕೀಯ, ಆರ್ಥಿಕ ನೀತಿ, ಕಲೆ, ಸಂಗೀತ, ಸಾಹಿತ್ಯ, ಭಾಷೆ, ವಿಜ್ಞಾನ, ತಾಂತ್ರಿಕ ಜ್ಞಾನ, ಹೀಗೆ ಅನೇಕ ಕ್ಷೇತ್ರಗಳಲ್ಲಿ ಐದು ಸಾವಿರ ವರ್ಷಗಳ ಭಾರತದ ಸಾಧನೆಗಳ ಅಧಿಕೃತ ವಿಶ್ಲೇಷಣೆಯಿದೆ. 960 ಪುಟಗಳ ಈ ಆಧಾರಗ್ರಂಥದ ವಿವರವಾದ ವಿಮರ್ಶೆ ಬರೆದ ಮೂರು ಪ್ರಧಾನ ಮಂತ್ರಿಗಳ ವಾರ್ತಾ ಕಾರ್ಯದರ್ಶಿಯೂ ಸೂಕ್ಷ್ಮ ಸಾಹಿತ್ಯಕ ಸಂವೇದನೆಯುಳ್ಳವರೂ ಆಗಿದ್ದ ಶ್ರೀ. ಎಚ್.ವೈ. ಶಾರದಾಪ್ರಸಾದ್ ಅವರು, ಇದು ಆ ಸಂದರ್ಭದಲ್ಲಿ ಬಂದ ಅನೇಕ ಗ್ರಂಥಗಳಲ್ಲಿ ಉತ್ತಮವಾದುದು ಎಂದು ಹೇಳಿದ್ದು ನಮಗೆ ಸಂತೋಷ ತಂದಿತು. ಇತರ ವಿಮರ್ಶಕರು

ಇದನ್ನು ಮಾನ್ಯುಮೆಂಟಲ್ ಎಂದು ಕರೆದು, ಭಾರತದ ಸಂಸ್ಕೃತಿ, ನಾಗರೀಕತೆಯ ಬಗ್ಗೆ ಒಂದೇ ಒಂದು ಪುಸ್ತಕವನ್ನು ಓದುವುದಾದರೆ ಇದನ್ನು ಓದಿ ಎಂದೂ ಹೇಳಿದರು. ಇದರಿಂದ ಕೇಂದ್ರಕ್ಕೆ ಸಾಕಷ್ಟು ಗೌರವ, ಪ್ರತಿಷ್ಠೆ ಸಂದಿತು. ಸಾವಿರಾರು ಜನ ಓದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪುಸ್ತಕ ಪಕಾಶನ, ತರಗತಿಗಳನ್ನು ಹೇಳಿಕೊಡುವುದರ ಜೊತೆ ನಮ್ಮ ಕೇಂದ್ರ ಭಾರತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸರ್ವತೋಮುಖವಾದ ಯೋಜನೆಗಳನ್ನು ಹಮ್ಮಿಕೊಂಡಿದೆ. ಪ್ರತಿಷ್ಠಿತರ ಉಪನ್ಯಾಸಮಾಲೆ, ಕಲಾ ಪ್ರದರ್ಶನ ಮಾಲೆಗಳಲ್ಲಿ ಭಾರತದ ಗೌರವಾನ್ವಿತ ವಿದ್ವಾಂಸರು, ಬುದ್ಧಿಜೀವಿಗಳು, ಲೇಖಕರು, ಕಲಾವಿದರನ್ನು ಕರೆಸಿ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದ್ದೇವೆ. ಜ್ಞಾನ ಪೀಠ ಪ್ರಶಸ್ತಿ ವಿಜೇತ ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್‌ರಂತಹ ಮೇಧಾವಿಗಳು, ಉಸ್ತಾದ್ ಅಮ್ಜದ್ ಅಲಿ ಖಾನ್‌ರಂತಹ ಕಲಾವಿದರು, ಸೇರಿದಂತೆ ನೂರಾರು ಜನರಿಂದ ಕಾರ್ಯಕ್ರಮಗಳು ನಡೆದಿವೆ. ಸ್ಕೂಲ್, ಲೈಬ್ರರಿ, ಮ್ಯೂಸಿಯಮ್ಮುಗಳು, ಸಾಂಸ್ಕೃತಿಕ ಸಂಸ್ಥೆಗಳು, ಅಂತರ್-ಧರ್ಮೀಯ ಕೇಂದ್ರಗಳು, ಕೋರ್ಟು-ಕಚೇರಿಗಳು ಹೀಗೆ ಅನೇಕ ಸಂಸ್ಥೆಗಳ ಭಾರತಕ್ಕೆ ಸಂಬಂಧಿಸಿದ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಕ್ರಿಯಾಶೀಲವಾದ ಔಟ್‌ರೀಚ್ ಯೋಜನೆಯಡಿಯಲ್ಲಿ ಇನ್ನೂರೈವತ್ತಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ನಮ್ಮ ಇತರ ವಿ.ವಿ.ಗಳ ವಿದ್ಯಾರ್ಥಿಗಳಿಗಾಗಿ ನಾಲ್ಕು ಕೋರ್ಸ್‌ಗಳ ಆರು ವಾರಗಳ, ಬೇಸಿಗೆಯ 'ಸ್ಟಡೀ ಅಬ್ರಾಡ್ ಪ್ರೋಗ್ರಾಮ್'ಅನ್ನು ಬೆಂಗಳೂರಿನಲ್ಲಿ ನಡೆಸುತ್ತೇವೆ. ಈ ಕಾರ್ಯಕ್ರಮಗಳನ್ನೆಲ್ಲಾ ನಡೆಸಲು ಹಣಕಾಸು ಸಂಗ್ರಹಿಸಲು ಪ್ರತಿವರ್ಷ ಒಂದು ನಿಧಿಸಂಗ್ರಹ ಭೋಜನಕೂಟವನ್ನು ಏರ್ಪಡಿಸುತ್ತೇವೆ. ಅದಕ್ಕೆ ತಲಾ ನೂರೈವತ್ತು ಡಾಲರ್ ಸಲ್ಲಿಸಿ ಸುಮಾರು ನೂರೈವತ್ತು ಜನ ಬರುತ್ತಾರೆ. ಆ ಸಂದರ್ಭದಲ್ಲಿ ಒಂದು ವಿಶೇಷ ಪುಸ್ತಕವನ್ನೂ ಪ್ರಕಟಿಸುತ್ತೇವೆ. ಅದರಲ್ಲಿ ಭಾರತಕ್ಕೆ ಸಂಬಂಧಿಸಿದ ಯಾವುದಾದರೂ ಒಂದು ವಿಶಿಷ್ಟ ವಿಷಯವನ್ನು ಕುರಿತು ಮಾಹಿತಿ ನೀಡುವ ಅನೇಕ ಪುಟ್ಟ ಲೇಖನಗಳಿರುತ್ತವೆ. ಈ ಸಂಪುಟದ ಒಂದೊಂದು ಪುಟಕ್ಕೆ ಒಂದು ಸಾವಿರ ಡಾಲರು ಕೊಟ್ಟು ದಾನಿಗಳು ಪ್ರಾಯೋಜಕರಾಗಿರುತ್ತಾರೆ. ಹೀಗೆ ಸಂಗ್ರಹಿಸಿದ ಹಣವನ್ನು ವಿಶೇಷ ತರಗತಿಗಳನ್ನು ಕಲಿಸಲು ಅಧ್ಯಾಪಕರಿಗೆ ವೇತನಕ್ಕೂ, ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಳ್ಳಲೂ, ಸಂದರ್ಶಕ ಉಪನ್ಯಾಸಕರ, ಕಲಾವಿದರ ಗೌರವಧನಕ್ಕೂ, ಕೇಂದ್ರದ ಕಾರ್ಯದರ್ಶಿಯ ವೇತನಕ್ಕೂ, ವಿದ್ಯಾರ್ಥಿವೇತನಗಳಿಗೂ ವೆಚ್ಚಮಾಡುತ್ತೇವೆ. ಹೀಗೆ ಪ್ರತಿವರ್ಷ ಭೋಜನಕೂಟ, ಪುಸ್ತಕ ಪ್ರಕಟಣೆಗಳ ವ್ಯವಸ್ಥೆ ಮಾಡುವುದು ಅತ್ಯಂತ ಶ್ರಮದಾಯಕವೂ ಒತ್ತಡಕಾರಿಯೂ ಆಗಿದ್ದರೂ ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರ ಉತ್ಸಾಹ, ಅವಿಶ್ರಾಂತ ದುಡಿಮೆಯಿಂದ ನಮಗೆ ಹುರುಪು ಬಂದು ಮಕ್ಕಳಿಗಾಗಿ ತಂದೆತಾಯಿ ತಾವು ಪಡುವ ಕಷ್ಟಗಳನ್ನು ಸಂತೋಷದಿಂದ ವಹಿಸುವಂತೆ ನಮಗೂ

ಕಾಲಾನುಕ್ರಮದಲ್ಲಿ ಕಷ್ಟಗಳು ಮರೆತು ವಿದ್ಯಾರ್ಥಿಗಳಿಗೆ, ಸಮುದಾಯಕ್ಕೆ ಉಪಯೋಗವಾದದ್ದಷ್ಟೇ ಮುಖ್ಯವೆನಿಸುತ್ತದೆ.

ಈ ಮಧ್ಯೆ, ಇಂಡಿಯಾ ಸ್ಟಡೀಸ್‌ನ ಯಶಸ್ಸನ್ನು ಕಂಡ ಚೀನಾ, ಕೊರಿಯ, ಜಪಾನ್‌ಗಳ ಅಧ್ಯಾಪಕರು, 'ನಾವೆಲ್ಲಾ ಕೂಡಿ ವಿ.ವಿ.ಯಲ್ಲಿ ಒಂದು ಏಶಿಯನ್ ಸ್ಟಡೀಸ್ ವಿಭಾಗ ಸ್ಥಾಪಿಸಬೇಕೆಂದು ಬೇಡಿಕೆ ಮುಂದಿಡೋಣ, ಅದಕ್ಕೆ ನೀನೇ ಮುಂದಾಳಾಗಬೇಕು' ಎಂದು ಒತ್ತಾಯ ತಂದರು. ಆ ಫ್ಯಾಕಲ್ಟಿ ಸಮಿತಿಯ ಅಧ್ಯಕ್ಷನಾಗಿ ಹಲವು ವರ್ಷ ಅಧ್ಯಾಪಕರನ್ನು, ವಿದ್ಯಾರ್ಥಿಗಳನ್ನು ಸಂಘಟಿಸಿ, ನೂರಾರು ಮೀಟಿಂಗುಗಳಲ್ಲಿ ಭಾಗವಹಿಸಿ, ತಜ್ಞರ ಸಮಿತಿಗಳನ್ನು ವ್ಯವಸ್ಥೆ ಮಾಡಿ, ಸ್ಥಳೀಯ ಆಕ್ಷೇಪಣೆಗಳನ್ನು ಮೀರಿ, ಆಡಳಿತವರ್ಗದವರನ್ನು ಒಪ್ಪಿಸಲು ಐದಾರು ವರ್ಷಗಳೇ ಹಿಡಿಯಿತು. ಕೊನೆಗೂ ನಮಗೆ ಜಯ ಸಿಕ್ಕಿತು. 2002ರಲ್ಲಿ ಒಂದು ಹೊಸ ವಿಭಾಗ, ಡಿಪಾರ್ಟ್‌ಮೆಂಟ್ ಆಫ್ ಏಷಿಯನ್ ಆಂಡ್ ಏಷಿಯನ್-ಅಮೆರಿಕನ್ ಸ್ಟಡೀಸ್‌ನ ಉದ್ಘಾಟನೆಯಾಯಿತು. ನನ್ನನ್ನೇ ಸ್ಥಾಪಕ ಮುಖ್ಯಸ್ಥನನ್ನಾಗಿ ಮಾಡಿದರು. ಅಲ್ಲಿ ಈಗ ವರ್ಷಕ್ಕೆ ನೂರರಷ್ಟು ಕೋರ್ಸ್‌ಗಳ ಪಠ್ಯವನ್ನು ಕಲಿಸಲಾಗುತ್ತಿದೆ. ಜೊತೆಗೆ ವಿದ್ಯಾರ್ಥಿಗಳು ಭಾರತೀಯ ಅಧ್ಯಯನದಲ್ಲಿ ವಿಶೇಷ ಪರಿಣತಿಯೊಡನೆ ಏಷಿಯನ್ ಸ್ಟಡೀಸ್‌ನಲ್ಲಿ ಬಿ.ಎ. ಮಾಡಬಹುದು. ಮುಂದಿನ ವರ್ಷದಿಂದ ಎಂ.ಎ. ಪದವಿಯ ವ್ಯವಸ್ಥೆಯೂ ಆಗಲಿದೆ. ಮೂಲೆಗುಂಪಾಗಿದ್ದ ಭಾರತದ ಬಗ್ಗೆ, ಏಷಿಯಾದ ಬಗ್ಗೆ ವಿ.ವಿ.ಯ ಮನೋಭಾವ ಸಾಕಷ್ಟು ಬದಲಾಗಿದೆಯೆನ್ನಬಹುದು. ಆ ಸ್ಥಾನದಲ್ಲಿ ಆರು ವರ್ಷಗಳ ಸೇವೆ ಸಲ್ಲಿಸಿ, 2008ರಲ್ಲಿ ಭಾರತೀಯ ಅಧ್ಯಯನ ಕೇಂದ್ರಕ್ಕೆ ನಿರ್ದೇಶಕನಾಗಿ ಮರಳಿ ಬಂದೆ.

ಕಳೆದ ವರ್ಷ ನಮ್ಮ ಅಧ್ಯಯನ ಕೇಂದ್ರವು ರಾಜ್ಯದ ಆರ್ಥಿಕ ಏರುಪೇರುಗಳಿಂದ ಬಗ್ಗಿ ಬಾಗದೆ, ಜೊತೆಗೇ ವಾರ್ಷಿಕ ನಿಧಿಸಂಗ್ರಹಣೆಯ ಅವಶ್ಯಕತೆಗೆ ಅಡಿಯಾಳಾಗದೆ, ಸ್ವಾಯತ್ತವಾಗಿ, ಶಾಶ್ವತವಾಗಿ ತನ್ನ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗುವಂತೆ ಅದಕ್ಕೆ ಒಂದು ಭದ್ರವಾದ ಆರ್ಥಿಕ ಬುನಾದಿಯನ್ನು ಹಾಕಲು ನಿರ್ಧರಿಸಿದೆವು. ನ್ಯೂಯಾರ್ಕ್ ಪ್ರದೇಶದ ಭಾರತೀಯ ಸಮುದಾಯದ ಕೆಲವು ಅದ್ಭುತ ಕ್ರಿಯಾಶೀಲ ನಾಯಕರನ್ನು ಒಂದುಗೂಡಿಸಿ ಒಂದು ಯೋಜನೆಯನ್ನು ಮುಂದಿಟ್ಟೆವು. ಈ ಯೋಜನೆಯ ಗುರಿ: ನಮ್ಮ ಕಾರ್ಯಕ್ರಮಗಾನ್ನು ಪ್ರಸಕ್ತ ಮಟ್ಟದಲ್ಲಿ ನಡೆಸಿಕೊಂಡು ಬರಲು ಬೇಕಾದ ವರಮಾನವನ್ನು ಕೊಡುವಂತಹ ಒಂದು ಶಾಶ್ವತ ದತ್ತಿಯನ್ನು ಸ್ಥಾಪಿಸುವುದು. ಇದಕ್ಕಾಗಿ ಸುಮಾರು ಎರಡೂವರೆ ಮಿಲಿಯನ್ ಡಾಲರುಗಳನ್ನು ದಾನಿಗಳಿಂದ ಸಂಗ್ರಹಿಸಲು ನಿರ್ಧರಿಸಿದೆವು. ಅದಕ್ಕೆ ಸಮಾನವಾದ ಮೊತ್ತವನ್ನು

ಕೊಡಲು ವಿಶ್ವವಿದ್ಯಾಲಯವನ್ನು ಒಪ್ಪಿಸಿದೆವು. ಎರಡೂ ಸೇರಿ ಐದು ಮಿಲಿಯನ್ ಡಾಲರಿನ ಒಂದು ದತ್ತಿ ನಿಧಿಯ ಸ್ಥಾಪನೆಯಾಗುತ್ತದೆ. ಅದನ್ನು ಠೇವಣಿಯಾಗಿಟ್ಟು, ಅದರಿಂದ ಬರುವ ಆದಾಯದಲ್ಲಿ ಶೇಕಡಾ ಐದು ಭಾಗವನ್ನು ವಾರ್ಷಿಕ ವೆಚ್ಚಕ್ಕೆ ಉಪಯೋಗಿಸುವುದು. ಮಿಕ್ಕ ಆದಾಯ ನಿಧ್ಯ ಅಸಲಿಗೇ ಸೇರಿ, ಮುಂದಿನ ವರ್ಷಗಳಲ್ಲಿ ಬೇಕಾಗುವ ಹೆಚ್ಚಿನ ಖರ್ಚುಗಳನ್ನು ವಹಿಸಲು ಸಾಧ್ಯವಾಗುತ್ತದೆ. ಈ ನಿಧಿಯ ಅರ್ಧದಷ್ಟನ್ನು ಡಾ. ಮಟ್ಟು ಅವರೇ ನಮ್ಮ ಕೇಂದ್ರದಲ್ಲಿ ತಮ್ಮ ತಂದೆತಾಯಿಯರ ಸ್ಮರಣಾರ್ಥ ಭಾರತೀಯ ಮಾನವಿಕ ಶಾಸ್ತ್ರಗಳ ಅಧ್ಯಯನಕ್ಕೆ ಮೀಸಲಾದ ಒಂದು ಪ್ರಾಧ್ಯಾಪಕ ಪೀಠವನ್ನು ಸ್ಥಾಪಿಸುವ ಸಲುವಾಗಿ ಉದಾರವಾಗಿ ದಾನ ಮಾಡಿದ್ದಾರೆ. ಮಿಕ್ಕ ಮೊಬಲಗನ್ನು ನೀಡಲು ಹತ್ತಾರು ದಾನಿಗಳು ಮುಂದೆ ಬಂದಿದ್ದಾರೆ. ಹಾಗಾಗಿ, ಈ ಐದು ಮಿಲಿಯನ್ ಡಾಲರುಗಳ ಗುರಿಯನ್ನು ನಾವು ದಾಖಲೆ ಸಮಯದಲ್ಲಿ– ಒಂದೇ ವರ್ಷದಲ್ಲಿ –ಮುಟ್ಟಿದೆವು. ಈ ವಚನಗಳೆಲ್ಲವೂ ಸಂದಾಯವಾಗಿ ಕೇಂದ್ರವು ಆರ್ಥಿಕವಾಗಿ ತನ್ನ ಕಾಲಿನ ಮೇಲೆ ತಾನು ನಿಲ್ಲತೊಡಗಿತೆಂದರೆ ನಾನು ಸಮಾಧಾನದಿಂದ ಉಸಿರೆಳೆಯಬಹುದು.

2011ರಲ್ಲಿ ನನಗೊಂದು ಆಶ್ಚರ್ಯ ಕಾದಿತ್ತು. ನಮ್ಮ ಸ್ಟೋನಿಬ್ರೂಕ್ ಸ್ವಾಯತ್ತ ವಿಶ್ವ ವಿದ್ಯಾಲಯವಾದರೂ, ಅದು ಸ್ಟೇಟ್ ಯುನಿವರ್ಸಿಟಿ ಆಫ್ ನ್ಯೂಯಾರ್ಕ್ (ಎಸ್.ಯು.ಎನ್.ವೈ.) ವ್ಯವಸ್ಥೆಯ ಭಾಗ. ಈ ಸಿಸ್ಟಂನಲ್ಲಿ ಫುಲ್ ಪ್ರೊಫೆಸರ್ ಹುದ್ದೆಯೇ ಉಚ್ಚ ಪದವಿ. ಇದಕ್ಕಿಂತ ಹೆಚ್ಚು, ಅಸಾಮಾನ್ಯ ಸಾಧನೆಗಳನ್ನು ಮಾಡಿದವರಿಗೆ ಕೆಲವೇ ಕೆಲವರಿಗೆ ಮಾತ್ರ, ಪ್ರೊಫೆಸರ್‌ಗಿಂತ ಮೇಲಿನ ಒಂದು ಗೌರವಾನ್ವಿತ ಪ್ರಾಧ್ಯಾಪಕ (ಡಿಸ್ಟಿಂಗ್ವಿಶ್ಡ್ ಪ್ರೊಫೆಸರ್) ಎಂಬ ಶ್ರೇಣಿಗೆ ನೇಮಕ ಮಾಡುತ್ತಾರೆ. ಅದಕ್ಕೆ ಯಾರೂ ಅಪ್ಲೈ ಮಾಡಿಕೊಳ್ಳುವ ಹಾಗಿಲ್ಲ. ವಿಶ್ವ ವಿದ್ಯಾಲಯಕ್ಕೆ ವಿಶಿಷ್ಟವಾದ ಸೇವೆ ಸಲ್ಲಿಸಿದವರನ್ನು ಗೌರವಿಸಲು ಇತರ ಗೌರವಾನ್ವಿತ ಪ್ರಾಧ್ಯಾಪಕರು ನಾಮಿನೇಟ್ ಮಾಡಿ, ಅಂತಾರಾಷ್ಟ್ರೀಯ ವಿದ್ವಾಂಸರುಗಳಿಂದ ರಹಸ್ಯವಾಗಿ ಮೌಲ್ಯಮಾಪನ ಪತ್ರಗಳನ್ನು ತರಿಸಿಕೊಂಡು ಆಯ್ಕೆ ಮಾಡುತ್ತಾರೆ. ಈ ಆಯ್ಕೆಯು ಪ್ರತಿ ಕ್ಯಾಂಪಸ್ಸಿನ ಪ್ರೊವೋಸ್ಟು, ಪ್ರೆಸಿಡೆಂಟು ಸೇರಿದಂತೆ ಹಲವು ಮಟ್ಟಗಳಲ್ಲಿ ಸಮ್ಮತಿ ಪಡೆದು, ಕೊನೆಗೆ ಇಡೀ ವಿ.ವಿ.ಯ ಬೋರ್ಡ್ ಆಫ್ ಟ್ರಸ್ಟೀಸ್‌ರಿಂದ ಸಮ್ಮತಿ ಪಡೆದು, ಎಸ್.ಯು.ಎನ್.ವೈ. ಸಿಸ್ಟಮ್ಮಿನ ಚಾನ್ಸಲರ್‌ರಿಂದ ನೇಮಕಾತಿ ಪತ್ರ ಬರುತ್ತದೆ. ಇದು ಒಮ್ಮೆ ನೀಡುವ ಗೌರವ ಅಲ್ಲ, ಜೀವಮಾನದುದ್ದಕ್ಕೂ ಉಳಿಯುವ ವಿ.ವಿ.ಯ ಅತ್ಯುಚ್ಚ ಸನ್ಮಾನ ಹಾಗೂ ಅತ್ಯುನ್ನತ ಶ್ರೇಣಿಗೆ ನೇಮಕಾತಿ. ಆ ಗೌರವ ಪ್ರದಾನ ಸಮಾರಂಭದಲ್ಲಿ ಒಂದು ಚಿನ್ನದ ಪದಕವನ್ನೂ ನೀಡಲಾಗುತ್ತದೆ. ಹೋದವರ್ಷ ಭಾಷಾವಿಜ್ಞಾನಿಯಾಗಿ ಅಂತರರಾಷ್ಟ್ರೀಯ ಖ್ಯಾತಿ ಪಡೆದು, ಸೆಂಟರ್ ಫಾರ್ ಇಂಡಿಯಾ ಸ್ಟಡೀಸ್‌ಅನ್ನೂ ಏಶಿಯನ್ ಸ್ಟಡೀಸ್ ವಿಭಾಗವನ್ನೂ ಸ್ಥಾಪಿಸಿ ಬೆಳೆಸಿ,

ನಡೆಸಿದ್ದಕ್ಕಾಗಿ ಈ ಉಚ್ಚ ಗೌರವಕ್ಕೆ ನನ್ನನ್ನು ಆರಿಸಲಾಗಿದೆ ಎಂದು ನಮ್ಮ ಪ್ರೆಸಿಡೆಂಟರು ತಿಳಿಸಿದಾಗ ನನಗೆ ಹೃದಯ ತುಂಬಿ ಬಂತು. ಇಷ್ಟು ವರ್ಷ ನಾನು, ನನ್ನ ಶ್ರೀಮತಿ, ಸ್ನೇಹಿತರು, ವಿದ್ಯಾರ್ಥಿಗಳು, ನ್ಯೂಯಾರ್ಕ್ ಪ್ರದೇಶದ ಭಾರತೀಯ ಸಮುದಾಯ ಪಟ್ಟ ಕಷ್ಟ, ಮಾಡಿದ ತ್ಯಾಗಗಳಿಗೆ ಮನ್ನಣೆ ಸಿಕ್ಕಿತಲ್ಲಾ ಎಂದು ಸಮಾಧಾನವಾಯಿತು.

ಅಮೆರಿಕಾದಲ್ಲಿ ನನ್ನ ಬದುಕಿನ ಅನುಭವಗಳನ್ನು ಇಷ್ಟು ದೀರ್ಘವಾಗಿ ವಿವರಿಸುವ ಉದ್ದೇಶ್ಯ ನನಗಿರಲಿಲ್ಲ. ಏನೋ ಬರೆಯಲಿಕ್ಕೆ ಹೋಗಿ ಮನಸ್ಸು ಎಲ್ಲೆಲ್ಲಿಗೋ ಎಳೆದುಕೊಂಡು ಹೋಯಿತು. ಆದರೂ, ನನ್ನ ಅನುಭವದಿಂದ ಕೆಲವು ಪ್ರಶ್ನೆಗಳಿಗಾದರೂ ಉತ್ತರಕ್ಕೆ ಸಾಮಗ್ರಿ ಸಿಗಬಹುದೆಂದು ಅನ್ನಿಸಿದರೆ ಸಾರ್ಥಕವಾದೀತು. ಸಾಮಾನ್ಯವಾಗಿ ಬರುವ ಕೆಲವು ಪ್ರಶ್ನೆಗಳು: ಅಮೆರಿಕಾದಲ್ಲಿದ್ದುಕೊಂಡು ಕನ್ನಡಿಗರು ಏನು ಮಾಡುತ್ತಿದ್ದಾರೆ? ಅಲ್ಲಿ ಇರುವವರಿಂದ ಕರ್ನಾಟಕಕ್ಕೆ, ಭಾರತಕ್ಕೆ ಏನು ಉಪಯೋಗ? ಅಲ್ಲಿ ಅಷ್ಟು ದೀರ್ಘ ಕಾಲ ವಾಸವಾಗಿರುವಾಗ ಅವರಿಗೆ ತಾಯ್ನುಡಿಯೊಡನೆ, ಬೇರು ಸಂಸ್ಕೃತಿಯೊಡನೆ ಸಂಬಂಧ ಉಳಿದಿರುತ್ತದೆಯೇ? ಹಾಗೆಯೇ ಅಮೆರಿಕಾದಿಂದ ಕನ್ನಡಿಗರು, ಭಾರತೀಯರು ಏನು ಕಲಿತಿದ್ದಾರೆ? ಅಲ್ಲದೆ, ಅವರು ಅಮೆರಿಕಾಕ್ಕೆ ಅಥವಾ ಭಾರತಕ್ಕೆ ವಿಶಿಷ್ಟವಾದ ಏನು ಕೊಡುಗೆ ಕೊಟ್ಟಿದ್ದಾರೆ? ಭಾರತದ, ಕರ್ನಾಟಕದ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದದ್ದು ಇವರಿಗೆ ಅಮೆರಿಕಾದಲ್ಲಿ ಏಗಲು ಹೇಗೆ ನೆರವಾಯಿತು, ಅಥವಾ ಅಡ್ಡಿಯಾಯಿತೆ? ನಮ್ಮ ಸಾಂಸ್ಕೃತಿಕ ಮೌಲ್ಯಗಳು, ಶೈಕ್ಷಣಿಕ, ಸಾಮಾಜಿಕ, ಚಾರಿತ್ರಿಕ, ರಾಜಕೀಯ ಅನುಭವಗಳು, ಹೊಸ ರಾಷ್ಟ್ರದ ಧ್ಯೇಯಗಳು, ಇವುಗಳಿಗೆ ಅಮೆರಿಕದಲ್ಲಿ ಸ್ಥಾನವಿದೆಯೆ? ಅನಿವಾಸಿ ಭಾರತೀಯರ ಯುವ ಜನಾಂಗದವರಿಗೆ ಭಾರತೀಯತೆಯ ಬಗ್ಗೆ, ತಮ್ಮ ಪರಂಪರೆಯ ಬಗ್ಗೆ ಯಾವ ಮನೋಭಾವವಿದೆ? ಇಂತಹ ಇನ್ನೂ ಅನೇಕ ವಿಚಾರಗಳ ಮಂಥನಕ್ಕೆ ಈ ನಿರೂಪಣೆ ಸಾಮಗ್ರಿಯಾಗಬಹುದು ಎಂಬ ಆಶಯದೊಡನೆ, ನಿಮ್ಮ ಇಷ್ಟೊಂದು ಸಮಯವನ್ನು ಹಾಳು ಮಾಡಿದ್ದಕ್ಕೆ ಕ್ಷಮೆ ಕೇಳಿ, ವಿರಮಿಸುತ್ತೇನೆ.

ಬೇರು ಸೂರು

ಬದುಕು ಬಿಡಿಸಿಟ್ಟ ಚಿತ್ರಗಳು



– ತ್ರಿವೇಣಿ ಶ್ರೀನಿವಾಸರಾವ್

'ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ'– ಅನಿವಾಸಿತನಕ್ಕೆ ಈ ದಾಸರಪದವನ್ನು ಉದ್ಧರಿಸುವುದು ಕ್ಲೀಷೆಯೆನ್ನಿಸಿದರೂ ನಮ್ಮ ಮನಸ್ಥಿತಿಯನ್ನು ಸೆರೆಹಿಡಿಯಲು ಇದಕ್ಕಿಂತ ಉತ್ತಮ ಸಂಕೇತ ಸಿಗಲಾರದು ಅನ್ನಿಸುತ್ತದೆ. ಬಹುಶಃ ಈ ಇಬ್ಬಂದಿ ಸ್ಥಿತಿಯನ್ನು ಯಾರೊಬ್ಬರೂ ಅನುಭವಿಸದಿರಲೆಂದೇ ಹಿಂದಿನವರು ಸಾಗರೋಲ್ಲಂಘನವನ್ನು ನಿಷೇಧಿಸಿದ್ದಿರಬಹುದೇ ಎಂದು ನಾನು ಹಲವಾರು ಬಾರಿ ತಮಾಷೆಯಾಗಿಯೂ, ಗಂಭೀರವಾಗಿಯೂ ಅಂದುಕೊಂಡಿದ್ದಿದೆ. ನನ್ನ ಗೆಳತಿಯೊಬ್ಬಳು ಸುಮಾರು ವರ್ಷ ಇಲ್ಲಿ ಕಳೆದು ಭಾರತಕ್ಕೆ ಹಿಂತಿರುಗಿ ಹೋಗುವ ತಯಾರಿಯಲ್ಲಿರುವವಳು ತಿಳಿಸಿದ ವಿಷಯವಿದು– ಅವರು ಹತ್ತಾರು ವರ್ಷಗಳು ಇಲ್ಲಿದ್ದರೂ, ಮನಸ್ಸಿಗೆ ಎಷ್ಟೇ ಆಸೆಯೆನಿಸಿದರೂ ಯಾವ ಪೀಠೋಪಕರಣಗಳನ್ನೂ ಕೊಳ್ಳದೆ, ಬೆಲೆ ಬಾಳುವ ಕಾರನ್ನು ಕೊಳ್ಳುವ ಶಕ್ತಿ ಇದ್ದರೂ ಕೊಳ್ಳದೆ, ಹೇಗೂ ಎಂದಿದ್ದರೂ ನಾವು ಅಲ್ಲಿ ಹೋಗುತ್ತೇವಲ್ಲಾ, ಇಲ್ಲೇಕೆ ಇವೆಲ್ಲಾ? ಎಂದು ಇಲ್ಲಿದ್ದರೂ ಅಲ್ಲಿಯ ಕನವರಿಕೆಯಲ್ಲೇ ದಿನಗಳನ್ನು ದೂಡಿ, ಏನೇನೋ ಕಾರಣಗಳಿಂದ ಮುಂದೂಡಲ್ಪಟ್ಟು, ಕೊನೆಗೂ ಹೊರಡುವ ಘಳಿಗೆ ಬಂದಾಗಲೇ ಬಿಡುಗಡೆಯ ಭಾವವನ್ನು ಅನುಭವಿಸಿದ್ದಂತೆ! ಎಲ್ಲರೂ ಹೀಗಿರುವುದಿಲ್ಲವಾದರೂ, ಅವಳು ಹೇಳಿದ್ದು ಉತ್ಪ್ರೇಕ್ಷೆ ಎನ್ನಿಸಿದರೂ ಇಲ್ಲಿಯ ಬದುಕು – ಅಲ್ಲಿಯ ನೆನಪುಗಳ ನಡುವೆ ತಾಕಲಾಡುವ ಅನಿವಾಸಿ ಮನಸ್ಥಿತಿಗೆ ಇದೊಂದು ಸಂಕೇತದಂತೆಯೇ ನನಗೆ ತೋರಿತು.

ಇಲ್ಲಿರಲಾರದೆ, ಅಲ್ಲಿಯೂ ಹೋಗಲಾರದೆ, ಇಂದೇನೋ? ಮುಂದೇನೋ? ಎಂದು ತಲ್ಲಣಗೊಳ್ಳುವ, ಚಿತ್ತ ಬಂದಲ್ಲೆಲ್ಲಾ ಸುತ್ತಾಡಿ ದಣಿಯುವ ಅಲೆಮಾರಿ ಮನಸ್ಸನ್ನು ಒಂದೆಡೆ ನಿಲ್ಲಿಸಿ ನನ್ನನ್ನೇ ನಾನು ಕೇಳಿಕೊಳ್ಳುತ್ತೇನೆ. ನಾನು ಅಲ್ಲಿದ್ದರೆ ಏನಾಗಿರುತ್ತಿದ್ದೆ? ಇಲ್ಲಿ ಬಂದು ಏನಾದೆ? ಅಲ್ಲಿದ್ದರೆ ಇನ್ನಷ್ಟು ಒಳಿತಿನಲ್ಲಿರುತ್ತಿದ್ದೆನಾ? ಇಲ್ಲಿ ಬರಬೇಕಾಯಿತು, ಬಂದೆ, ಸರಿ. ನನಗಾದ ಕೆಡುಕೇನದರಿಂದ? ಅಲ್ಲಿದ್ದರೆ ಏನಾಗುತ್ತಿದ್ದೆನೋ ಗೊತ್ತಿಲ್ಲ, ಇಲ್ಲಿ ನಾನು ನಾನಾಗಿಲ್ಲವೇ? ಅಷ್ಟು ಸಾಲದೇ? ಭೌತಿಕ ಅನುಕೂಲಗಳಿಗಾಗಿ ಖಂಡಗಳನ್ನು ಪ್ರತ್ಯೇಕಿಸಲಾಗಿದೆಯಾದರೂ ತನ್ನಿಚ್ಛೆಯಂತೆ ವಿಹರಿಸುವ ಮನಸ್ಸಿಗೆ ಭೂಗೋಳ ಪಾಠ ಹೇಳುವವರಾದರೂ ಯಾರಿದ್ದಾರು? ದೇಶದೇಶಗಳ ನಡುವೆ ನಾವೇ ಹಾಕಿಕೊಂಡಿರುವ ಕೇವಲ ಊಹೆ ಮಾತ್ರವೇ ಹಾಕಿರುವ

ಗಡಿ ರೇಖೆಗಳನ್ನು ಅಳಿಸಿಹಾಕಿದರೆ ಕೊನೆಗುಳಿವುದು ಗೋಳಾಕಾರದ ಒಂದೇ ಭೂಮಿಯೇ ತಾನೇ?

ಅಮೆರಿಕ ಅನುಭವದ ಕುರಿತು ಬರೆಯಬೇಕೆಂದು ಕುಳಿತರೆ ಏನು ಬರೆಯಬೇಕೆಂಬುದೇ ತೋಚದಂತಾಯಿತು. ಇಲ್ಲಿಗೆ ಬಂದ ದಿನದಿಂದ ಈ ದಿನದ, ಈ ಕ್ಷಣದವರೆಗಿನ ನನ್ನ ಜೀವನದ ಘಟನೆಗಳನ್ನು ಕಣ್ಣೆದುರಿಗೆ ತಂದುಕೊಳ್ಳಲು ಯತ್ನಿಸಿದೆ. ಮನಸ್ಸಿನ ಪರದೆಯ ಮೇಲೆ ಇಲ್ಲಿ ನಾನು ಕಳೆದ ದಿನಗಳನ್ನು ಚಲನಚಿತ್ರದ ರೀಲುಗಳಂತೆ ಓಡಿಸತೊಡಗಿದೆ. ಥೇಟು, ಸಿನಿಮಾ ಸಂಕಲನಕಾರರು ಮಾಡುವಂತೆ; ಎಲ್ಲೆಂದರಲ್ಲಿ ನಿಲ್ಲಿಸುತ್ತಾ, ಇಷ್ಟವಾದ ಸನ್ನಿವೇಶಗಳನ್ನು ರಿವೈಂಡ್ ಮಾಡಿಕೊಂಡು ನೋಡುತ್ತಾ, ಯಾವುದೋ ಒಂದು ಬೇಡವೆನ್ನಿಸಿದರೆ ಅದನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಎಸೆಯುತ್ತಾ... ನಡುವಿನ ವಿರಾಮದಲ್ಲಿ ಈ ದೇಶಕ್ಕೆ ಬಂದು ನಾವು ಪಡೆದಿದ್ದೆಷ್ಟು, ಕಳೆದುಕೊಂಡಿದ್ದೆಷ್ಟು ಎಂದು ಚಿಂತಿಸತೊಡಗಿದೆ. ಬದುಕಿನ ದಾರಿ ಕವಲಾಗಿ ಒಡೆದಾಗ, ಈ ದಾರಿಯಲ್ಲಿ ಹೊರಟು ಇಷ್ಟು ದೂರ ಬಂದ ನಂತರ ಆ ದಾರಿಯಲ್ಲಿ ಹೋಗಿದ್ದರೆ ಏನಿರುತ್ತಿತ್ತು ಎಂಬುದನ್ನು ಚಿಂತಿಸುವುದೇ ಸರಿಯಲ್ಲವೆನ್ನಿಸಿತು. ಇಲ್ಲಿ ಬಂದಿದ್ದರಿಂದ ಮಾತ್ರವೇ ಗಳಿಸಿಕೊಂಡ ಸಮೃದ್ಧ ಅನುಭವಗಳು, ಗಳಿಸಿಕೊಂಡ ಸ್ನೇಹಿತರು, ಹೊಸದೊಂದೇ ಲೋಕ ಕಣ್ಣೆದುರು ಅನಾವರಣಗೊಂಡಾಗಿನ ರೋಮಾಂಚನಗಳನ್ನು ಅಲ್ಲೇ ಇದ್ದಿದ್ದರೆ ಕಳೆದುಕೊಳ್ಳುತ್ತಿರಲಿಲ್ಲವೇ? ಎಂಬ ಅನಿಸಿಕೆ. ಜೊತೆಗೆ, ಅಲ್ಲಿ ಮತ್ತೇನನ್ನೋ ಕಳೆದುಕೊಂಡ ಮತ್ತಾವುದರದೋ ಹಳಹಳಿಕೆ. ಒಟ್ಟಿನಲ್ಲಿ ಈ ಜೀವನ ಎಲ್ಲರಿಗೂ ಒಂದಲ್ಲಾ ಒಂದು ಸಮಯದಲ್ಲಿ, ಕಲಿಸುವ ಅಂತಿಮ ಪಾಠವೆಂದರೆ, ಇಲ್ಲಿ ಎಲ್ಲವೂ ಎಲ್ಲರಿಗೂ ಇಲ್ಲ: 'ಕುಛ್ ಪಾಕರ್ ಖೋನಾ ಹೈ, ಕುಛ್ ಖೋಕರ್ ಪಾನಾ ಹೈ!' ಎಂಬುದೇ ನಿಜ ಅನ್ನಿಸಿತು.

ಬಹಳಷ್ಟು ಮನೆಗಳಲ್ಲಿರುವಂತೆ, ಹುಟ್ಟಿದಾಗಲೇ ಮಕ್ಕಳಲ್ಲಿ ಅಮೆರಿಕ ಕನಸು ಹುಟ್ಟುಹಾಕುವಂತಹ ಕೌಟುಂಬಿಕ ಹಿನ್ನೆಲೆ ನಮ್ಮದಾಗಿರಲಿಲ್ಲ. ಬದಲಿಗೆ, ವಿದೇಶಯಾತ್ರೆ ಕೂಡದು ಎಂದು ನಂಬಿದ್ದಂತಹ ಕಟ್ಟಾ ಸಂಪ್ರದಾಯಸ್ಥ ಕುಟುಂಬದಲ್ಲಿ, ಹಿರಿಯರಿಂದ ಈ ನಿಟ್ಟಿನಲ್ಲಿ ಮಾರ್ಗದರ್ಶನಕ್ಕಾಗಿ ಎದುರು ನೋಡುವ ಮಾತೇ ಇರಲಿಲ್ಲ. ನಮಗೆ ತೋಚಿದಂತೆ ಸಿದ್ಧತೆಗಳನ್ನು ಮಾಡಿಕೊಂಡು, ಹಲವಾರು ಎಡರುತೊಡರುಗಳನ್ನು ಅನುಭವಿಸಿ, 2000ನೆಯ ಇಸವಿಯಲ್ಲಿ, ನ್ಯೂಯಾರ್ಕಿನ ಜಾನ್ ಎಫ್ ಕೆನಡಿ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ, ಹೊಸ ನೆಲದ ಸ್ಪರ್ಶ ನನ್ನನ್ನು ಪುಳಕಗೊಳಿಸಿತ್ತು. ಅದೇಕೆ? ಇದೇಕೆ? ಎಂದು ತಮಗೆ ಸಂಬಂಧ ಪಟ್ಟ, ಪಡದ ಎಲ್ಲದರಲ್ಲೂ ಮೂಗು ತೂರಿಸುವ ಹಿತೈಷಿಗಳೆನ್ನಿಸಿಕೊಂಡವರ ಕಣ್ಗಾವಲಿನಿಂದ ದೂರ ಬಂದ ಬಿಡುಗಡೆಯ ಭಾವ. ಜೊತೆಗೆ, ಹಿಂದುಮುಂದು ಗೊತ್ತಿಲ್ಲದ, ನಮ್ಮವರೆಂಬುವರಾರೂ ಇರದ ಪೂರ್ತಿ ಅಪರಿಚಿತವಾದ ದೇಶದಲ್ಲಿ ಮುಂದಿನ ಬದುಕು ಏನೋ ಎಂತೋ ಎಂಬ ದಿಗಿಲು. ಅಲ್ಲಿ

ಅದಾಗಲೇ ಕಟ್ಟಿಕೊಂಡಿದ್ದ ಬೆಚ್ಚನೆಯ ಪುಟ್ಟ ಗೂಡು ಖಾಲಿ ಮಾಡಿ ತಿರುಗಿ ಬರಲಾಗದ ದಾರಿ ಹಿಡಿದಾಗಿತ್ತು. ಆದರೆ ದಿನಗಳು ಕಳೆದಂತೆ ಹೊಸತನ ಮರೆಯಾಯಿತು. ಹೆಜ್ಜೆಗಳು ಸವೆದಂತೆ ಹಾದಿಯೂ ಹಳೆಯದಾಯಿತು.

ನಾವು ಮೊದಲು ವಾಸಕ್ಕೆ ತೊಡಗಿದ್ದು, ನ್ಯೂಜೆರ್ಸಿ ರಾಜ್ಯದ ಇಸೆಲಿನ್ ಎಂಬ ಊರಿನಲ್ಲಿ. 'ಗಿಲ್ ಲೇನ್' ಎಂಬ ಅಪಾರ್ಟ್‌ಮೆಂಟಿನ ಎರಡು ಕೋಣೆಗಳ ವಿಶಾಲ ಮನೆಯನ್ನು ನೋಡಿ, ಬೆಂಗಳೂರಿನ ಪುಟ್ಟಪುಟ್ಟ ಕೋಣೆಗಳಿರುವ ಮನೆಗಳನ್ನು ಕಂಡಿದ್ದ ನಾನು, ಬಾಡಿಗೆ ಮನೆಗಳು ಕೂಡ ಇಷ್ಟೊಂದು ವಿಶಾಲವಾಗಿರುತ್ತವೆಯೇ ಎಂದು ಅವಾಕ್ಕಾಗಿದ್ದೆ. ಇಪ್ಪತ್ತೈದು ಜನರನ್ನಾದರೂ ಧಾರಾಳವಾಗಿ ಕೂಡಿಸಿ ಊಟ ಬಡಿಸುವಷ್ಟು ದೊಡ್ಡದಾಗಿದ್ದ ಲಿವಿಂಗ್ ರೂಮಂತೂ ಖಾಲಿ ಹೊಡೆಯುತ್ತಿತ್ತು. ಅವುಗಳಲ್ಲಿ ತುಂಬಿಸಲು ತಕ್ಕ ಗೃಹೋಪಕರಣಗಳನ್ನು ನಾವು ಇನ್ನಷ್ಟೆ ಖರೀದಿಸಬೇಕಿತ್ತು. ಆಗಷ್ಟೆ ಸ್ವದೇಶ ತೊರೆದುಬಂದು ಮನಸ್ಸಿನ ತುಂಬಾ ತುಂಬಿದ್ದ ಶೂನ್ಯವನ್ನು ಆ ದೊಡ್ಡ ಮನೆ ಇನ್ನಷ್ಟು ಹೆಚ್ಚಿಸುತ್ತಿತ್ತು. 'ಶೂನ್ಯ' ಎಂದೆನಲ್ಲವೇ? ಆ ಸಮಯದಲ್ಲಿ ನನ್ನ ಮನಸ್ಥಿತಿಯನ್ನು ಕಟ್ಟಿಕೊಡಲು ಅದಕ್ಕಿಂತ ಸೂಕ್ತ ಪದ ನನಗೆ ಸಿಗುತ್ತಿಲ್ಲ. ಪೂರ್ತಿ ಹೊಸ ಪರಿಸರ, ಗುರುತು-ಪರಿಚಯವಿಲ್ಲದ ನೆರೆಹೊರೆ, ಕಿಟಕಿಯಿಂದ ಹೊರಗೆ ಕಣ್ಣಾಡಿಸಿದರೆ ಬೆಳಿಗ್ಗೆ, ಸಂಜೆಯ ನಿಗದಿತ ಸಮಯ ಬಿಟ್ಟರೆ ನರಪಿಳ್ಳೆಯೂ ಕಾಣಸಿಗದ ನಿರ್ಜನ ಬಯಲು! ನಾನೆಲ್ಲಿದ್ದೆ? ಅದಾವ ಮೋಹದ ಬೆನ್ನು ಹತ್ತಿ ಇಲ್ಲಿಗೆ ಬಂದೆ? ಇಲ್ಲಿಂದ ಪಾರಾಗುವುದಾದರೂ ಹೇಗೆ? ಎಂದು ಹಗಲು ರಾತ್ರಿ ಕೊರಗುತ್ತಿದ್ದ ಮನಸ್ಥಿತಿ ನನ್ನದಾಗಿತ್ತು. ಈ ನೀರವತೆಯನ್ನು ಭೇದಿಸುವಂತೆ, ಯಾವುದೋ ಮನೆಯಿಂದ ಮಗುವೊಂದು ಸಣ್ಣದನಿಯಲ್ಲಿ ಅತ್ತರೆ, 'ದೇವರೇ! ಎದೆ ಸೀಳುವ ಈ ಮೌನಕ್ಕಿಂತ ಆ ಮಗುವಿನ ಅಳುವಾದರೂ ಆಗೀಗ ಕೇಳುತ್ತಿರಲಿ' ಎಂದು ಹಾರೈಸುತ್ತಿದ್ದೆ. ಬೆಂಗಳೂರಿನ ವಠಾರದ ಮನೆಯೊಂದರಲ್ಲಿ ತುಂಬು ಜೀವಂತಿಕೆಯ ನಡುವೆ ಇದ್ದುಬಂದ ನನಗೆ ಮಲಗಿದರೆ ನಿದ್ದೆಯಲ್ಲೂ, ತರಕಾರಿಯವನ 'ಸೊಪ್ಪು ಬೇಕೇನಮ್ಮಾ?', ನೆರೆಮನೆಯಾಕೆಯ 'ಸುರಭಿಯಮ್ಮಾ, ಕಾಫಿಪುಡಿ ಇದ್ದರೆ ಕೊಟ್ಟಿರ್ತೀರಾ?', 'ಆಂಟಿ, ಸ್ವಲ್ಪ ಟಿವಿ ಹಾಕ್ತೀರಾ?' ಇತ್ಯಾದಿ ದನಿಗಳು ಬಡಿದು ಎಚ್ಚರಿಸುತ್ತಿದ್ದಂತಹ ಭ್ರಾಮಕ ಅನುಭವವಾಗುತ್ತಿತ್ತು. ಮನಸ್ಸನ್ನು ಖಿನ್ನತೆಯ ಅಧೀನವಾಗಿಸದಿರಲು ಇನ್ನಿಲ್ಲದಂತೆ ಪ್ರಯತ್ನಿಸುತ್ತಿದ್ದೆ.

ಮಕ್ಕಳು ಶಾಲೆಗೆ ಸೇರಲಾಗದೆ ಮನೆಯಲ್ಲೇ ಉಳಿದಿದ್ದರು. ಅವರಿಗೆ ಆವರೆಗೆ ಕೊಡಿಸಲಾಗಿದ್ದ ವ್ಯಾಕ್ಸಿನೇಷನ್ ದಾಖಲೆಯನ್ನು ನಾವು ಶಾಲೆಗೆ ಸಕಾಲದಲ್ಲಿ ಒಪ್ಪಿಸಲು ಸಾಧ್ಯವಾಗದ ಕಾರಣ, ಅದನ್ನು ಒದಗಿಸುವವರೆಗೆ ಅವರು ಮನೆಯಲ್ಲೇ

ಉಳಿಯಬೇಕಾಯಿತು. ಎನ್.ಆರ್.ಕಾಲೊನಿಯ ಆಚಾರ್ಯ ಪಾಠಶಾಲೆಯಲ್ಲಿ ಸುಖವಾಗಿ ಓದಿಕೊಂಡಿದ್ದ ಮಕ್ಕಳು ಇಲ್ಲಿ ಶಾಲೆ ಇಲ್ಲದೆ, ಆಡಲೂ ಜೊತೆಯ ಗೆಳೆಯರೂ ಇಲ್ಲದೆ, ಇಡೀ ದಿನ ನಾಲ್ಕು ಗೋಡೆಗಳ ನಡುವೆ ಟಿವಿಯಲ್ಲಿನ ಕಾರ್ಟೂನ್ ನೋಡುತ್ತಾ ಕಾಲ ಕಳೆಯುತ್ತಿದ್ದುದನ್ನು ನೋಡಿದಾಗ ಮನಸ್ಸಿಗೆ ಸಂಕಟವೆನ್ನಿಸುತ್ತಿತ್ತು. ಆದರೆ, ಅನಿವಾರ್ಯವಾಗಿ ಸಿಕ್ಕ ಈ ವಿರಾಮಕಾಲ ಅವರಿಗೆ ಒಳಿತನ್ನೇ ಮಾಡುತ್ತಿರುವುದನ್ನು ನಾನು ಗಮನಿಸದೆ ಹೋದೆ. ಇಂಗ್ಲೀಷು ಬರದ, ಅಚ್ಚ ಕನ್ನಡದ ವಾತಾವರಣದಲ್ಲಿ ಬೆಳೆದಿದ್ದ ಮಕ್ಕಳಿಗೆ ಟಿವಿಯ ಕಾರ್ಟೂನುಗಳೇ ಗುರುವಾಗಿ ನಿಂತು, ಅವರಿಗೆ ಅರಿವಿಲ್ಲದಂತೆ ಅವರನ್ನು ಹೊಸ ಪರಿಸರಕ್ಕೆ ಸಜ್ಜುಗೊಳಿಸತೊಡಗಿದ್ದವು. ಮುಂದೆ ಅವರ ಶಾಲೆಯ ಆರಂಭಿಕ ದಿನಗಳು ಅದರಿಂದಲೇ ಸುಗಮವಾಯಿತೆನ್ನಬಹುದು. ಬೆರಗು ಕಣ್ಣಿನ ತುಂಟ ಮಕ್ಕಳು ಬೆಳೆಯುತ್ತಿದ್ದರು, ಕಲಿಯುತ್ತಿದ್ದರು. ಪ್ರತಿದಿನವೂ ಅವರ ಪಾಲಿಗೆ ಹೊಸದು. ಅವರ ಜೊತೆಗೆ ಅಮ್ಮನಾದ ನನ್ನದೂ ನಿಲ್ಲದ ಕಲಿಕೆ, ಅಂದಿನಿಂದ ಇಂದಿನವರೆಗೂ.

ಇದೇ ದಿನಗಳಲ್ಲಿ ನಡೆದ ಘಟನೆಯೊಂದು ನೆನಪಾಗುತ್ತಿದೆ. ಒಂದು ಮಧ್ಯರಾತ್ರಿ ಗಾಢನಿದ್ದೆಯಲ್ಲಿದ್ದ ನನಗೆ ಥಟ್ಟೆಂದು ಎಚ್ಚರವಾಯಿತು. ಒಂದೇ ಲಯದಲ್ಲಿ ಬೀಳುತ್ತಿರುವ ನೀರಿನ ಹನಿಗಳ ಶಬ್ದ. ಶತ್ರು ಸೈನಿಕರ ತಲೆಯ ಮೇಲೆ ಹನಿಹನಿಯಾಗಿ ನೀರು ಬೀಳುವಂತೆ ಮಾಡುವುದರ ಮೂಲಕ ಅವರ ಮನೋಸ್ಥೈರ್ಯ ಕುಸಿಯುವಂತೆ ಮಾಡಿ, ಅವರಲ್ಲಿದ್ದ ರಹಸ್ಯಗಳನ್ನು ಹೊರತೆಗೆಯುವ ವಿಧಾನವನ್ನು ಸಿನಿಮಾಗಳಲ್ಲಿ ನೋಡಿದ್ದಂತೆ ತಟಪಟ ನೀರಿನ ಹನಿಗಳ ಕ್ಷೀಣ ಸದ್ದು. ಶಬ್ದದ ಮೂಲ, ಕಾರಣ ತಿಳಿಯಲು ನಿದ್ದೆ ಮುಸುಕಿದ ಮೆದುಳು ನಿರಾಕರಿಸಿದ್ದರಿಂದಲೋ ಏನೋ ಹಾಗೇ ನಿದ್ದೆಗೆ ಜಾರಿಬಿಟ್ಟೆ. ಮರುದಿನ ಎಂದಿನಂತೆ ಎದ್ದು ಹಾಲಿಗೆ ಬಂದರೆ ಅಲ್ಲಿ ಜಲಪ್ರಳಯದ ಸಣ್ಣ ಸ್ಯಾಂಪಲ್‌ನಂತಹ ದೃಶ್ಯ! ನಡುಮನೆ, ಅಡುಗೆಮನೆಗಳನ್ನೆಲ್ಲಾ ಆವರಿಸಿದ ಜಲಧಾರೆ ಇನ್ನೇನು ಕೋಣೆಗಳತ್ತ ನುಗ್ಗಲು ಅಣಿಯಾಗುತ್ತಿದ್ದುದನ್ನು ನೋಡಿ ಹೌಹಾರಿದೆ. ಬೆಂಗಳೂರಿನಲ್ಲಿದ್ದಾಗ ಮಳೆ ಬಂದಾಗ ಮನೆಗಳೊಳಗೆ ನೀರು ನುಗ್ಗುವುದನ್ನು ಕಂಡಿದ್ದ ನನಗೆ, ಇಲ್ಲಿ ಈ ನೀರು ಎಲ್ಲಿಂದ ಬಂದಿರಬಹುದೆನ್ನುವ ಕಾರಣ ಕೂಡ ಹೊಳೆಯಲಿಲ್ಲ. ಇನ್ನೂ ನಿದ್ದೆಯ ಮಂಪರಿನಲ್ಲಿದ್ದ ಮಕ್ಕಳನ್ನು ಎಬ್ಬಿಸಿ ಬೇರೊಂದು ಕಡೆ ಮಲಗಿಸಿದ್ದಾಯಿತು. ವಾರಾಂತ್ಯವಾದ್ದರಿಂದ ಮಕ್ಕಳ ಶಾಲೆ, ಗಂಡನ ಆಫೀಸ್ ಧಾವಂತವಿರಲಿಲ್ಲ. ಅಪಾರ್ಟ್‌ಮೆಂಟಿನ ಎಮರ್ಜೆನ್ಸಿ ನಂಬರಿಗೆ ಕರೆ ಮಾಡಿ ವಿಷಯ ತಿಳಿಸಿದೆವು. ನಿರ್ವಹಣೆಯ ಜವಾಬ್ದಾರಿ ಹೊತ್ತ ವ್ಯಕ್ತಿಯೊಬ್ಬ ಬಂದು ಮೇಲೂ ಕೆಳಗೂ ಓಡಾಡಿ ಇದೆಲ್ಲವೂ ಮೇಲಿನವನ ಕೈವಾಡವೆಂದನು. ಅರೆ, ಹೌದಲ್ಲ! 'ತೇನ ವಿನಾ ತೃಣಮಪಿ ನಚಲತಿ' ಎಂಬುದನ್ನು ನಾವರಿಯೆವೇ? ಭಾರತೀಯರಾದ ನಮ್ಮ ಮೈಗಂಟಿದ ವೇದಾಂತವನ್ನು ಈ ಅಮೆರಿಕನ್ನನ ಬಾಯಿಂದ ತಿಳಿಯಬೇಕೇ ಎಂದುಕೊಳ್ಳುತ್ತಿರುವಾಗಲೇ, ಆತ ಮುಂದುವರೆದು ಹೇಳಿದ– 'ನಿಮ್ಮ ಮನೆಯ

ಮೇಲ್ಮಹಡಿಯಲ್ಲಿ ವಾಸಿಸುತ್ತಿರುವ ಚೀನೀ ಪರಿವಾರದವರ ಅಚಾತುರ್ಯದಿಂದಾಗಿ ಈ ಅನಾಹುತ ಸಂಭವಿಸಿದೆ. ಇವತ್ತೊಂದು ದಿನ ನೀವು ಮನೆಯಲ್ಲಿ ಅಡುಗೆ ಮಾಡುವಂತಿಲ್ಲ. ಬೇರೆಲ್ಲಾದರೂ ಊಟದ ವ್ಯವಸ್ಥೆ ಮಾಡಿಕೊಳ್ಳಿ. ನಾಳೆಯೊಳಗಾಗಿ ಮನೆಯನ್ನು ಸುಸ್ಥಿತಿಗೆ ತಂದುಕೊಡುತ್ತೇವೆ' ಎಂದು ಹೇಳಿ ಹೊರಟುಹೋದ. ಇಷ್ಟೊಂದು ಅಧ್ವಾನವಾಗಿರುವ ಮನೆಯನ್ನು ಅದಾವ ರೀತಿಯಿಂದ ಮೊದಲಿನಂತೆ ಮಾಡಬಹುದು? ಮಾಡುವುದಾದರೂ ನಿಜವೇ ಎಂದು ಅನುಮಾನವಾಯಿತು.

ಕುತೂಹಲದಿಂದ ಅವನ ಬರವನ್ನು ಎದುರು ನೋಡತೊಡಗಿದೆ. ಒಂದೆರಡು ಘಂಟೆಗಳ ನಂತರ ಜೊತೆಗಾರನೊಬ್ಬನೊಂದಿಗೆ ಸುಸಜ್ಜಿತನಾಗಿ ಬಂದು ಇಬ್ಬರೂ ಕೆಲಸ ಶುರುಮಾಡಿದರು. ಅವರ ಕಾರ್ಯವೈಖರಿ, ತಂದಿದ್ದ ಪರಿಕರಗಳನ್ನು ನೋಡಿದರೆ ಇಂತಹ ಘಟನೆ ನಮಗೆ ಹೊಸದಿರಬಹುದು, ಅವರಿಗೆ ನಿತ್ಯದ ಕರ್ಮವಿರಬಹುದೇನೊ ಅನ್ನಿಸುವಂತಿತ್ತು. ಮಾತುಕೊಟ್ಟಂತೆ ದಿನದ ಅಂತ್ಯದೊಳಗೆ ಆಗಿದ್ದ ಅವ್ಯವಸ್ಥೆಯನ್ನು ಒಂದು ತಹಬಂದಿಗೆ ತಂದು, ರಾತ್ರಿಯಿಡೀ ನೀರಿಳಿದು ಬಣ್ಣಗೆಟ್ಟ ಗೋಡೆಗಳಿಗೂ ಮೊದಲಿದ್ದಂತಹ ಬಣ್ಣವನ್ನು ಕೂಡ ಲೇಪನ ಮಾಡಿ ಹೊರಟುನಿಂತರು. ಅಷ್ಟಲ್ಲದೆ ಹೋಗುವಾಗ, ಇನ್ನು ಎರಡು ದಿನದ ನಂತರ ಮತ್ತೊಮ್ಮೆ ಬಂದು ಎಲ್ಲವೂ ಸಮರ್ಪಕವಾಗಿದೆಯೇ ಎಂದು ಪರಿಶೀಲಿಸುತ್ತೇವೆಂದೂ ಅಥವಾ ಏನಾದರೂ ತೊಂದರೆಯಿದ್ದಲ್ಲಿ ನಾವೇ ಅವರ ಗಮನಕ್ಕೆ ತರಬೇಕೆಂದೂ ಹೇಳಿಹೊರಟಾಗ, ಅವರ ಕಾರ್ಯತತ್ಪರತೆಯನ್ನು ನೋಡಿ ಮನದಲ್ಲೇ ಉದ್ಗರಿಸುವಂತಾಯಿತು– 'ಇದು ಅಮೆರಿಕಾದಲ್ಲಿ ಮಾತ್ರ ಸಾಧ್ಯ!'

ಈಗ ಒಂದಲ್ಲ ಒಂದು ಕನ್ನಡ ಕಾರ್ಯಕ್ರಮಗಳು ನಡೆಯುತ್ತಲೇ ಇರುವ ನ್ಯೂಜೆರ್ಸಿಯಲ್ಲಿ ಆಗ ಇಷ್ಟೊಂದು ಕನ್ನಡ ಚಟುವಟಿಕೆಗಳು ನಡೆಯುತ್ತಿರಲಿಲ್ಲವೆಂದು ಕಾಣುತ್ತದೆ. ಇದ್ದರೂ ಹೊಸಬರಾದ ನಮಗೆ ಆ ಬಗ್ಗೆ ತಿಳಿಯುತ್ತಿರಲಿಲ್ಲವೊ, ಗೊತ್ತಿಲ್ಲ. ಏಕೆಂದರೆ, 'ಬರಹ' ಸೃಷ್ಟಿಕರ್ತ ಶೇಷಾದ್ರಿ ವಾಸು ಅವರು ನಮ್ಮದೇ ಅಪಾರ್ಟ್‌ಮೆಂಟಿನಲ್ಲಿ ವಾಸವಾಗಿದ್ದರೂ, ಆ ಬಗ್ಗೆ ನನಗೆ ತಿಳಿದಿರಲೇ ಇಲ್ಲ. ಅವರ ನೆರೆಮನೆಯಲ್ಲೇ ನಾವು ವರ್ಷಗಳ ಕಾಲ ಇದ್ದೆವೆಂಬ ವಿಷಯ ತಿಳಿದಿದ್ದು ನಾವು ಅಲ್ಲಿಂದ ಬಂದು ಶಿಕಾಗೊದಲ್ಲಿ ನೆಲೆಸಿದ ನಂತರವೇ! ಅಲ್ಲಿ ನಾವಿದ್ದ ಸಮಯದಲ್ಲಿ, ದಾವಣಗೆರೆ ಮೂಲದ ಲಿಂಗರಾಜು–ಪ್ರಭಾ ದಂಪತಿಯ ಹೊರತಾಗಿ, ನಮಗೆ ಹೆಚ್ಚು ಕನ್ನಡಿಗರ ಪರಿಚಯವೇ ಆಗಲಿಲ್ಲ. ಬಹುಶಃ, ನನ್ನವರನ್ನು ಇಲ್ಲಿಗೆ ಕರೆಸಿಕೊಂಡಿದ್ದ ಕಂಪೆನಿ ಚೆನ್ನೈ ಮೂಲದ್ದಾದ್ದರಿಂದ ಇರಬೇಕು, ಅಲ್ಲಿ ನಮಗೆ ದೊರೆತ ಸ್ನೇಹಿತರಲ್ಲೆಲ್ಲಾ ತಮಿಳು ಭಾಷಿಕರೇ ಹೆಚ್ಚು. ಒಬ್ಬಿಬ್ಬರು ತೆಲುಗರು, ಮಲೆಯಾಳಿಗಳೂ ಇದ್ದರು. ತಮಿಳರ ಹಿಂದಿ

ದ್ವೇಷದ ಬಗ್ಗೆ ಓದಿ, ಕೇಳಿ ಗೊತ್ತಿದ್ದರೂ ಅದನ್ನು ತೀರಾ ನಿಜವೆಂದು ನಂಬಿರಲಿಲ್ಲ. ಆದರೆ ಇಲ್ಲಿ, ನನ್ನ, ನನ್ನವರ ಮಾತಿರಲಿ, ಜೊತೆಗೆ ಚಿಳ್ಳೆಪಿಳ್ಳೆಗಳಾಗಿದ್ದ ನಮ್ಮ ಮಕ್ಕಳಿಗೂ ಹಿಂದಿಯೆಂದರೆ ತೀರಾ ಅಪರಿಚಿತ ಭಾಷೆಯಲ್ಲವೆಂದು ತಿಳಿದಾಗ, ದೂರದರ್ಶನದಲ್ಲಿ ಪ್ರಸಾರವಾಗುವ ಹಿಂದಿ ಕಾರ್ಯಕ್ರಮಗಳಿಂದಲೇ ನಮ್ಮಲ್ಲಿ ಬಹಳಷ್ಟು ಜನ ಹಿಂದಿ ಕಲಿತಿದ್ದಾರೆಂದು ಹೇಳಿದಾಗಲಂತೂ ಅವರಿಗೆಲ್ಲಾ ಬಹಳ ಆಶ್ಚರ್ಯವಾಗಿತ್ತು. ಜೊತೆಗೆ, ನಮ್ಮ ಮೇಲಾಗಿರುವ ಹಿಂದಿ ಹೇರಿಕೆಯ ಬಗ್ಗೆ ಕನಿಕರ ಕೂಡ.

ತಮಿಳರ ಉತ್ಕಟ ಭಾಷಾಭಿಮಾನವೂ ಇಲ್ಲಿ ನನ್ನ ಅನುಭವಕ್ಕೆ ಬಂದಿತು. ನನಗೆ ತಮಿಳು ಬರದೆಂದು ತಿಳಿದಿದ್ದರೂ ಅವರೆಲ್ಲರೂ ನನ್ನನ್ನು ತಮಿಳಿನಲ್ಲೇ ಮಾತಿಗೆಳೆಯಲು ನೋಡುತ್ತಿದ್ದರು. ನಮ್ಮ ತಮಿಳು ಗೆಳೆಯನೊಬ್ಬ ನನ್ನ ಕನ್ನಡಾಭಿಮಾನವನ್ನು ಅಣಕಿಸುತ್ತ, ನನ್ನನ್ನು ವಾಟಾಳ್ ನಾಗರಾಜ್ ಅವರಿಗೆ ಹೋಲಿಸಿ ತಮಾಷೆ ಮಾಡುತ್ತಿದ್ದ. ನಾನು ಕೂಡ ಅವನ ಹಾಸ್ಯಕ್ಕೆ ಪ್ರತಿಯಾಗಿ, 'ನಮ್ಮ ವಾಟಾಳರಿರುವ ಹೊತ್ತಿಗೆ ನೀವು ಪರಭಾಷಿಗರು ಇಷ್ಟಾದರೂ ಅಂಕೆಯಲ್ಲಿದ್ದೀರಾ, ಇಲ್ಲದಿದ್ದರೆ ನಮ್ಮ ಬೆಂಗಳೂರನ್ನು ಯಾವಾಗಲೋ ನಿಮ್ಮ ತಮಿಳುನಾಡಿಗೆ ಹೊತ್ತೊಯ್ದಿರುತ್ತಿದ್ದಿರಿ' ಎಂದು ಅವನನ್ನು ರೇಗಿಸುತ್ತಿದ್ದೆ. ತಮಿಳುನಾಡಿನ ನಾಯಕನಟರಾಗಿ ಮೆರೆಯುತ್ತಿದ್ದ ರಜನಿಕಾಂತ್, ಅರ್ಜುನ್ ಸರ್ಜಾ, ರಾಜಕಾರಣಿಯಾಗಿ ಹೆಸರುವಾಸಿಯಾಗಿರುವ ಶ್ರೀಮತಿ ಜಯಲಲಿತ ಇವರೆಲ್ಲರೂ ಕನ್ನಡಿಗರೆಂಬುದು ಅವರಿಗೆ ಬಿಸಿ ತುಪ್ಪದಂತಹ ವಿಷಯ. ಅದನ್ನೇ ನಾನು ನನ್ನ ಕನ್ನಡಾಭಿಮಾನ ಮೆರೆಯಲು ದಾಳವಾಗಿ ಉಪಯೋಗಿಸಿಕೊಳ್ಳುತ್ತಿದ್ದೆ. ಈಗಲೂ ಕೂಡ ಆ ತಮಿಳು ಮಿತ್ರ ಭೇಟಿಯಾದರೆ, 'ನೀವು ಕನ್ನಡಿಗರು, ಕಾವೇರಿ ನೀರು ಕೊಡದೆ ನಮ್ಮನ್ನು ಯಾಕಿಷ್ಟು ಸತಾಯಿಸುತ್ತೀರಿ?' ಎಂದು ಹುಸಿ ಜಗಳಕ್ಕೆ ಮುಂದಾಗುತ್ತಾನೆ. ಕನ್ನಡ ಬಿಟ್ಟು ದಕ್ಷಿಣದ ಇತರ ಭಾಷೆಗಳ ಬಗ್ಗೆ ಕಿಂಚಿತ್ತೂ ಅರಿವಿರದ ನನಗೆ ಕೆಲವಾದರೂ ತಮಿಳು ಪದಗಳ ಪರಿಚಯವಾಯಿತು. ತಮಿಳು ಅಕ್ಷರಗಳನ್ನೂ ಕಲಿಯಲು ಪ್ರಯತ್ನಿಸಿ, ಕೊನೆಗೆ ಅದು ನನ್ನಿಂದಾಗದ ಕೆಲಸವೆಂದು ಕೈಬಿಟ್ಟೆ. ತಮಿಳುನಾಡಿನ ಹಬ್ಬಗಳು, ಆಚರಣೆಗಳ ಬಗ್ಗೆಯೂ ಆಗಲೇ ತಿಳಿಯಿತು. ಇದರೊಂದಿಗೆ ನಮ್ಮದೇ ಅಪಾರ್ಟ್‌ಮೆಂಟಿನಲ್ಲಿದ್ದ ಕೆಲವು ಗುಜರಾತಿ, ಮರಾಠಿ ಗೆಳತಿಯರೊಡನೆಯೂ ಅಲ್ಪಸ್ವಲ್ಪ ಪರಿಚಯ ಬೆಳೆದು, ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಕತ್ತಲೆಯಲ್ಲಿದ್ದಂತಿದ್ದ ನನ್ನ ಪರಿಧಿ ಮೆಲ್ಲಮೆಲ್ಲನೆ ವಿಸ್ತಾರವಾಗತೊಡಗಿತು.

ನನ್ನವರಿಗೆ ಆಗ ನ್ಯೂಯಾರ್ಕಿನಲ್ಲಿ ಕೆಲಸ. ಬೆಳಗ್ಗೆ ಮೆಟ್ರೋ ಟ್ರೈನಲ್ಲಿ ಹೋದರೆ ಮನೆ ಸೇರುವುದು ರಾತ್ರಿಯೇ. ಮನೆಯಲ್ಲಿ ಡ್ರೈವಿಂಗ್ ಬರದ ನಾನು, ಜೊತೆಗೆ ಮಕ್ಕಳು. ಆಗೆಲ್ಲಾ ನನ್ನ ನೆರವಿಗೆ ಬಂದವರೆಲ್ಲ ನಮ್ಮ ಪರಭಾಷೆಯ ಸ್ನೇಹಿತರೇ! ಸ್ನೇಹ

ಚಿಗುರೊಡೆಯಲು ಭಾಷೆಯೊಂದು ಸಮಸ್ಯೆಯೇ ಅಲ್ಲವೆಂದು ಅರಿವಾಗಿದ್ದು ನನಗೆ ಆಗಲೇ. ಭಾಷೆ ಬೇರಾದರೂ ಅವರೆಲ್ಲರೂ ಸ್ನೇಹಜೀವಿಗಳು, ಹಾಸ್ಯ ಪ್ರಜ್ಞೆಯುಳ್ಳ ಸಹೃದಯರು. ಒಂದು ಮಧ್ಯಾಹ್ನ ಊಟ ಮುಗಿಸಿ ಕುಳಿತಿದ್ದೆ. ಟೆಲಿಫೋನ್ ರಿಂಗಣಿಸಿದಾಗ ತೆಗೆದುಕೊಂಡರೆ ಅದು ಮಗಳ ಸ್ಕೂಲಿನ ನರ್ಸಿನಿಂದ ಬಂದ ಕರೆ. ನನ್ನ ಮಗಳು ಸುರಭಿಗೆ ಜ್ವರ ಬಂದಿದ್ದು, ಮೈಮೇಲೆ ಸಣ್ಣಸಣ್ಣ ಗುಳ್ಳೆಗಳೇಳುತ್ತಿದ್ದು, ಅದು ಚಿಕನ್ ಪಾಕ್ಸ್‌ನ ಸೂಚನೆ ಇರಬಹುದೆಂದೂ, ಅದು ಶಾಲೆಯ ಇತರ ಮಕ್ಕಳಿಗೂ ತಗಲಬಹುದಾದ್ದರಿಂದ ಈ ಕೂಡಲೇ ಬಂದು ಮಗಳನ್ನು ಕರೆದುಕೊಂಡು ಹೋಗಬೇಕೆಂದು ಹೇಳಿ ಫೋನಿಟ್ಟುಬಿಟ್ಟರು. ನನಗೆ ಆಗ ಕಾರು ಡ್ರೈವಿಂಗ್ ಬರುತ್ತಿರಲಿಲ್ಲ. ಮನೆಗೆ ಬೇಕಾದ ದಿನಸಿಗಳನ್ನು ವಾರಕ್ಕೊಮ್ಮೆ ಎಲ್ಲರೂ ಒಟ್ಟಿಗೆ ಹೋಗಿ ತಂದುಕೊಳ್ಳುತ್ತಿದ್ದೆವು. ಹಾಲು, ಸಕ್ಕರೆ ಮತ್ತಿತರ ಅಗತ್ಯದ ವಸ್ತುಗಳು ಮನೆಯ ಹತ್ತಿರವೇ ಇರುತ್ತಿದ್ದ ಅಂಗಡಿಯೊಂದರಲ್ಲಿ ಸಿಗುತ್ತಿದ್ದುದರಿಂದ ನನಗೆ ಡ್ರೈವಿಂಗ್ ಲೈಸೆನ್ಸ್ ಪಡೆಯುವ ಅವಶ್ಯಕತೆಯೇ ಕಂಡುಬಂದಿರಲಿಲ್ಲ.

ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕೊ ತಿಳಿಯದೆ ಕಂಗಾಲಾದೆ. ಕೊನೆಗೆ ಮನೆಯ ಸಮೀಪವೇ ಇದ್ದ ನಮ್ಮ ಮಿತ್ರರೊಬ್ಬರಿಗೆ ಕರೆಮಾಡಿದೆ. ಮಧ್ಯಾಹ್ನದ ಸಮಯವಾದ್ದರಿಂದ ಅವರೂ ಕೆಲಸದ ಸ್ಥಳದಲ್ಲೇ ಇದ್ದರು. ಆದರೂ, ತಮ್ಮ ಕೆಲಸದ ನಡುವೆಯೇ ಸಮಯ ಹೊಂದಿಸಿಕೊಂಡು ಶಾಲೆಗೆ ಹೋಗಿ, ಮಗಳನ್ನು ಮನೆಗೆ ಕರೆತಂದು ಬಿಟ್ಟುಹೋದರು. ಮಗಳು ಪೂರ್ತಿ ಗುಣಹೊಂದಿ ಮತ್ತೆ ಶಾಲೆಗೆ ಹೋಗುವಂತಾಗಲು ಕೆಲವು ದಿನಗಳೇ ಬೇಕಾದವು. ನಾವು ಎದುರಿಸಿದ ಇಂತಹ ಹಲವಾರು ಸಂದಿಗ್ಧ ಸನ್ನಿವೇಶಗಳಲ್ಲಿ ನೆರವಾದವರೆಲ್ಲ ಆ ನಮ್ಮ ಪರಭಾಷೆ ಸ್ನೇಹಿತರೇ! ಈಗ ಹೆಚ್ಚಾಗಿ ಸಂಪರ್ಕದಲ್ಲಿಲ್ಲದಿದ್ದರೂ ಅವರೆಲ್ಲರ ಸಹಾಯವನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಿರುತ್ತೇನೆ.

ಇದೇ ಸಮಯದಲ್ಲಿ ನಮಗೆ ರೆಸ್ಟೋರೆಂಟಿನಲ್ಲಿ ಆದ ಇನ್ನೊಂದು ಅನುಭವವಿದು. ಮೇಲೆ ಹೇಳಿದ್ದು ಪರಭಾಷಿಗರ ಸ್ನೇಹದ ಸವಿನೆನಪಾದರೆ ಇದು ನಮ್ಮವರೇ ನಮ್ಮನ್ನು ಕಾಡಿದ ಕಹಿನೆನಪು. ಎಡಿಸನ್ನಿನ ಯಾವುದೋ ರೆಸ್ಟೋರೆಂಟಿನಲ್ಲಿ ಆರ್ಡರ್ ಮಾಡಿದ್ದ ತಿಂಡಿಗೆ ಕಾಯುತ್ತಿದ್ದಾಗ, ಇಬ್ಬರು ವಯಸ್ಸಾದ ದಂಪತಿ ನಮ್ಮತ್ತ ಬಂದರು. ನೋಡಿದರೆ ಗೌರವ ಉಕ್ಕಿಸುವಂತಿದ್ದ, ಇಳಿವಯಸ್ಸಿನ ವ್ಯಕ್ತಿಗಳವರು. ತಾವು ಕೂತಿದ್ದೆಡೆಯಿಂದ ಎದ್ದು ನಮ್ಮತ್ತ ಬಂದು 'ನೀವು ಕನ್ನಡಿಗರೇ?' ಎಂದು ತುಂಬುನಗೆಯಿಂದ ಆತ್ಮೀಯವಾಗಿ ಮಾತಿಗಿಳಿದ ಅವರನ್ನು ಕಂಡು, ನಮಗೆ ಈ ಮೊದಲೇ ಇವರು ಪರಿಚಿತರಿರಬಹುದೇನೋ ಎನ್ನುವ ಅನುಮಾನ ಮೂಡಿತು. ಆದರೆ, ನಮ್ಮ ಮಕ್ಕಳು

ಹೋದಲ್ಲಿ-ಬಂದಲ್ಲಿ ಜೋರಾಗಿ ಆಡುತ್ತಿದ್ದ ಕನ್ನಡ ಮಾತುಗಳು ನಾವು ಕನ್ನಡಿಗರೆಂದು ಜಗಜ್ಜಾಹೀರು ಮಾಡುತ್ತಿದ್ದ ಅನುಭವ ಇದ್ದಿದ್ದರಿಂದ ನಮಗೇನೂ ಆಶ್ಚರ್ಯವಾಗಲಿಲ್ಲ. ಅವರು ನಮ್ಮೊಡನೆ ಕುಳಿತು ಉಪಾಹಾರ ಸ್ವೀಕರಿಸುತ್ತಿದ್ದಾಗ ಪರಸ್ಪರ ಪರಿಚಯವಾಯಿತು. ಕೊನೆಗೂ ಕನ್ನಡಿಗರೊಬ್ಬರು ಮಾತಿಗೆ ಸಿಕ್ಕರೆಂದು ನಮಗೆ ತುಂಬಾ ಸಂತೋಷವೇ ಆಯಿತು.

ಈ ಪರಿಚಯ ಇಲ್ಲಿಗೇ ನಿಲ್ಲಲಿಲ್ಲ. ಅಂದಾದ ಪರಿಚಯದ ಎಳೆ ಹಿಡಿದು ಅವರು ನಮ್ಮ ಮನೆಗೂ ಬಂದರು. ನಮ್ಮನ್ನೂ ಅವರ ಮನೆಗೆ ಆಹ್ವಾನಿಸಿದರು. ನಾವು ಹೋಗಿರಲಿಲ್ಲ. ಹೋಗಬಾರದೆಂಬ ಉದ್ದೇಶವಿರದಿದ್ದರೂ ಏನೋ ಸಂದರ್ಭ ಒದಗಿರಲಿಲ್ಲ. ಅವರೇ ಆಗಾಗ ಬಂದುಹೋಗುತ್ತಿದ್ದರು. ಹೊಸ ದೇಶದಲ್ಲಿ ನಮ್ಮವರು ಯಾರೋ ಸಿಕ್ಕರೆಂಬ ಖುಷಿಯಲ್ಲಿಯೇ ನಾವಿದ್ದೆವು. ಆದರೆ, ನಮ್ಮ ಸಂತೋಷ ಹೆಚ್ಚು ದಿನ ಉಳಿಯಲಿಲ್ಲ. ಅವರು ಒಂದು ದಿನ ನನಗೆ, ನಮ್ಮ ಮನೆಯ ಸಮೀಪವೇ ಇದ್ದ ಹೋಟೆಲಿನಲ್ಲಿ, ಯಾವುದೋ ಮೀಟಿಂಗಿಗೆ ಬರುವಂತೆ ಆಹ್ವಾನಿಸಿದರು. ಅದಕ್ಕಿದ್ದ ಡ್ರೆಸ್ ಕೋಡ್ ಬೇರೆ ಹೇಳಿದರು. ಅವರ ಉದ್ದೇಶವೇನೆಂದು ಅರಿಯದೆ, ನಾನು ವಿವರಕ್ಕಾಗಿ ವಿಚಾರಿಸಿದೆ. ನಿಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ನಿಮಗೊಂದು ಸುಲಭ ಉಪಾಯ ತಿಳಿಸಿಕೊಡುತ್ತೇವೆ. ಅದಕ್ಕೆ ನೀವು ಮಾಡಬೇಕಾದುದು, ಇದು...ಇದು... ಇಷ್ಟೇ! ಎಂದು ಏನೇನೋ ಬ್ರೋಶರುಗಳನ್ನು, ಬಣ್ಣಬಣ್ಣದ ಹಾಳೆಗಳನ್ನು ಕೊಟ್ಟು ಘಂಟೆಗಟ್ಟಲೆ ತಲೆ ಕೊರೆಯತೊಡಗಿದರು. ನನಗೆ ಗೊತ್ತಾಯಿತು, ಹೌದು ಇದು ಇಷ್ಟೇ! ಈ ಸ್ನೇಹದ ಹಿಂದಿದ್ದ ಅರ್ಥ ಇಷ್ಟೇ ಎಂದು ನನಗೆ ತಿಳಿದುಹೋಯಿತು. ನಾವು ಬಂದಾಗ ಇಲ್ಲಿ ಪ್ರಚಲಿತವಿದ್ದ 'ಆಮ್ ವೇ' (Amway) ಎಂಬ ವ್ಯಾಪಾರಿ ಜಾಲವೊಂದರಲ್ಲಿ ನಮ್ಮನ್ನೂ ತೊಡಗಿಸುವ ತಂತ್ರವೊಂದೇ ಅವರ ಸ್ನೇಹಕ್ಕಿದ್ದ ಉದ್ದೇಶ. ಆಮೇಲೆ ಅವರಿಂದ ಬಿಡಿಸಿಕೊಳ್ಳಲು ನಾವು ಪಟ್ಟಪಾಡು ಅಷ್ಟಿಷ್ಟಲ್ಲ. ಮನೆಗೆ ಬರುವುದು, ಮಕ್ಕಳಿಗೆಂದು ಬಿಸ್ಕತ್ತು, ಸಣ್ಣಪುಟ್ಟ ಉಡುಗೊರೆಗಳನ್ನು ತರುವುದು, ನಮಗೆ ಬೇಕಿಲ್ಲದಿದ್ದರೂ ತಾಸುಗಟ್ಟಲೆ ಕುಳಿತು ನಮ್ಮನ್ನು ಪುಸಲಾಯಿಸುವುದು, ಏನೇನೋ ಆಮಿಷಗಳನ್ನೊಡ್ಡುವುದು, ಫೋನಿನ ಮೂಲಕ ನೆನಪು ಮಾಡುವುದು... ನನ್ನನ್ನು ತಮ್ಮ ಬಲೆಗೆ ಬೀಳಿಸಿಕೊಳ್ಳಲು ನಾನಾ ತಂತ್ರಗಳನ್ನೇ ಉಪಯೋಗಿಸಿದರು.

ಈ ಕಿರಿಕಿರಿಗಳನ್ನೆಲ್ಲ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಸ್ವಲ್ಪ ದಿನ ಅನುಭವಿಸಿದೆ. ಕೊನೆಗೊಂದು ದಿನ ನನ್ನ ಸ್ವಭಾವಕ್ಕೆ ವಿರುದ್ಧವಾಗಿ, 'ನೀವು ಯಾವ ಉದ್ದೇಶ ಸಾಧನೆಗಾಗಿ ನನ್ನ ಹಿಂದೆ ಬಿದ್ದಿದ್ದೀರೋ, ಅದಂತೂ ನೆರವೇರುವುದು ಸಾಧ್ಯವಿಲ್ಲ. ದಯವಿಟ್ಟು ನಿಮ್ಮ ಮತ್ತು ನನ್ನ ಸಮಯ ಹಾಳು ಮಾಡದೆ ಬೇರೆ ಯಾರನ್ನಾದರೂ ನಿಮ್ಮ ಕಾರ್ಯ ಸಾಧನೆಗೆ ಹುಡುಕಿಕೊಳ್ಳಿ' ಎಂದು ಹೇಳಿಬಿಟ್ಟೆ. 'ನೀವೊಂದು ಒಳ್ಳೆಯ ಅವಕಾಶ ಕಳೆದುಕೊಳ್ಳುತ್ತಿದ್ದೀರಿ, ನಿಮಗೆ ಎಂದು ನಿಮ್ಮ ತಪ್ಪಿನ ಅರಿವಾಗುತ್ತದೆಯೋ ಆಗ

ನಮ್ಮನ್ನು ಸಂಪರ್ಕಿಸಿ' ಎಂದು ತಮ್ಮ ಕಾರ್ಡ್ ಕೊಟ್ಟುಹೋದ ಅವರನ್ನು ಸಂಪರ್ಕಿಸುವ ಪ್ರಯತ್ನವನ್ನು ಕೂಡ ಮಾಡಲಿಲ್ಲ. ಈ ಘಟನೆಯ ನಂತರ, ಯಾರಾದರೂ ಸ್ನೇಹದಿಂದ ಬಂದು ತಾವಾಗಿ ಮಾತನಾಡಿಸಿದರೆ ಅವರನ್ನು ಮನಸ್ಸು ಅನುಮಾನದಿಂದ ನೋಡುವಂತಾಗಿಬಿಟ್ಟಿತ್ತು.

ಅದಕ್ಕೆ ಸರಿಯಾಗಿ, ನಡೆದ ಇನ್ನೊಂದು ಘಟನೆ ನನ್ನ ಅನುಮಾನಕ್ಕೆ ಮತ್ತಷ್ಟು ನೀರೆರೆಯಿತು. ಚಳಿಯಿದ್ದರೂ ಹಿತವಾದ ಬಿಸಿಲು ಬಿದ್ದಿದ್ದ ಮಧ್ಯಾಹ್ನದ ಸಮಯ. ಮನೆಯಲ್ಲಿ ಏನೋ ಮಾಡಿಕೊಳ್ಳುತ್ತಿದ್ದ ಮಕ್ಕಳಿಗೆ ಹೇಳಿ ನಾನು ನಮ್ಮ ಅಪಾರ್ಟ್‌ಮೆಂಟಿನ ಸುತ್ತಲೂ ಇದ್ದ ವಾಕ್ ವೇಯಲ್ಲಿ ನಡೆದಾಡಲು ಹೊರಟೆ. ನಾನಿನ್ನೂ ನಡೆಯಲು ಆರಂಭಿಸಿ, ಐದುಹತ್ತು ನಿಮಿಷಗಳಾಗಿರಬಹುದು, ನಡುವಯಸ್ಸಿನ ಹೆಂಗಸೊಬ್ಬರು ನಗುತ್ತಾ ಬಂದು, 'ನಾನೂ ನಿನ್ನ ಜೊತೆ ಬರಲೇ?' ಎಂದು ಕೇಳಿ ನನ್ನ ಜೊತೆ ಸೇರಿಕೊಂಡರು. ಕೂದಲನ್ನು ಬಾಬ್ ಮಾಡಿದ್ದ ನೀಳಮೂಗಿನ ಆಕೆ ಥಟ್ಟನೆ ದಿವಂಗತ ಇಂದಿರಾಗಾಂಧಿಯವರನ್ನು ನೆನಪಿಸುವಂತಿದ್ದರು. ಲೋಕಾಭಿರಾಮವಾಗಿ ಮಾತನಾಡುತ್ತಾ ದಾರಿ ಸವೆಸತೊಡಗಿದವು. ನಾವಿಬ್ಬರೂ ದಕ್ಷಿಣ ಭಾರತದ ಎರಡು ರಾಜ್ಯದವರಾದರೂ, ಇಬ್ಬರಿಗೂ ಅಲ್ಪಸ್ವಲ್ಪ ಬರುವ ಹಿಂದಿ ಭಾಷೆಯಲ್ಲಿ ನಮ್ಮ ಸಂಭಾಷಣೆ ಸಾಗಿತ್ತು.

ಆಕೆಯ ಮಾತು ಎಲ್ಲಿಂದಲೋ ಎಲ್ಲೋ ಹೊರಳಿ, ಉದ್ದೇಶಪೂರ್ವಕವಾಗಿ ಎಂಬಂತೆ ಮಾತನ್ನು ಅಧ್ಯಾತ್ಮದತ್ತ ತಂದು ನಿಲ್ಲಿಸಿದರು. ನನಗೆ ಹೇಳಲು ಏನೂ ಇಲ್ಲವಾದ ಕಾರಣ ಆಕೆಯ ಮಾತಿಗೆ ಸುಮ್ಮನೆ ಹೂಂಗುಡುತ್ತಾ, ಆಗೀಗ ಏನೋ ಒಂದು ಮಾತು ಜೋಡಿಸುತ್ತಾ ನಡೆಯುತ್ತಿದ್ದೆ. 'ಅಂದಹಾಗೆ, ನಿಮಗೆ ನಮ್ಮ ಈ ಗುರುಗಳ ಬಗ್ಗೆ ಗೊತ್ತಿದೆಯೇ? ಅವರನ್ನು ನಂಬಿದರೆ ನಿಮಗೆ ಎಲ್ಲವೂ ಒಳ್ಳೆಯದಾಗುತ್ತದೆ', ಎಂದರು, ಅದಾಗಲೇ ವಿಶ್ವವಿಖ್ಯಾತರಾಗಿದ್ದ, ದೇಶ-ವಿದೇಶಗಳಲ್ಲಿ ಭಕ್ತರನ್ನು ಪಡೆದಿದ್ದ ದೇವಮಾನವನೊಬ್ಬನ ಹೆಸರು ಸೂಚಿಸುತ್ತ. ನಾನು ಅವರ ಹೆಸರು ಕೇಳಿದ್ದೇನೆ. ಆದರೆ ಅವರ ಬಗ್ಗೆ ಹೆಚ್ಚು ತಿಳಿಯುವ ಆಸಕ್ತಿ ಇಲ್ಲವೆಂದೆ. ತಕ್ಷಣ ಆಕೆಯ ಮುಖದಲ್ಲಿ ನಗು ಅರಳಿತು. 'ನೋಡಿದೆಯಾ? ಆ ದೇವರೇ ಈ ದಿನ ನನ್ನನ್ನು ನಿನ್ನ ಜೊತೆ ಭೇಟಿ ಮಾಡಲು ಪ್ರೇರೇಪಿಸಿದ್ದಾನೆ. ಪ್ರತಿ ಗುರುವಾರ ನಮ್ಮ ಮನೆಯಲ್ಲಿ ಗುರುಗಳ ಪ್ರವಚನ, ಭಜನೆ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳಿರುತ್ತವೆ. ನಮ್ಮ ಮನೆಯಲ್ಲಿಯೂ ಆ ಗುರುಗಳಿಂದಾಗಿ ಅದೆಷ್ಟೋ ಪವಾಡಗಳು ನಡೆದಿವೆ. ತಿಂಗಳಿಗಿಷ್ಟು ವಂತಿಕೆ ನೀಡುವ ಮೂಲಕ ನೀನೂ ಅದರಲ್ಲಿ ಪಾಲ್ಗೊಳ್ಳಬಹುದು. ಬೇಕಿದ್ದರೆ ಗುರುಗಳ ಮಹಿಮೆಯನ್ನು ಸಾರುವ ಪುಸ್ತಕಗಳನ್ನು ಇಂದೇ ತಮ್ಮಲ್ಲಿ ಕೊಳ್ಳಲೂಬಹುದು' ಎಂದರು ಒತ್ತಾಯದ ದನಿಯಲ್ಲಿ. ಅಯ್ಯೋ, ಇದೆಲ್ಲಿಯ ಕರ್ಮ! ಮುಕ್ಕೋಟಿ ದೇವರುಗಳೆಲ್ಲ ಭಾರತದಲ್ಲಿ ಮಾತ್ರ ಇರುವರೆಂದುಕೊಂಡಿದ್ದರೆ, ಪರದೇಶದಲ್ಲಿ, ಈ ನಡುಮಧ್ಯಾಹ್ನದಲ್ಲಿ,

ಇದ್ದಕ್ಕಿದ್ದಂತೆ ಅಪರಿಚಿತಳೊಬ್ಬಳ ಮೂಲಕ ಇಲ್ಲೂ ಬಂದು ದರ್ಶನ ಕೊಡುತ್ತಿದ್ದಾರಲ್ಲ! ಎಂದುಕೊಂಡು, ಆ ಮಹಿಳೆಗೆ ಮನಸ್ಸಿಗೆ ಹೊಳೆದ ಸಬೂಬು ಹೇಳಿ ಅಲ್ಲಿಂದ ಕಾಲು ಕಿತ್ತೆ. ನನ್ನ ಮುಖ ನೋಡಿದ ಯಾರಿಗಾದರೂ ನಾನೊಂದು ಮುಗ್ಧ ಕುರಿಯಂತೆ ಕಾಣುತ್ತಿರಬಹುದಾ ಎಂಬ ಸಂಶಯವೂ ಕಾಡದಿರಲಿಲ್ಲವೆನ್ನಿ.

ನಾನೇ ನನ್ನ ಚಿಪ್ಪಿನೊಳಗೆ ಹುದುಗಿದಂತಿದ್ದೆನೊ, ಅಥವಾ ಯಾರಿಗೇ ಆಗಲಿ ಹೊಸದೊಂದು ದೇಶಕ್ಕೆ ಹೊಂದಿಕೊಳ್ಳಲು ಅಷ್ಟು ಸಮಯ ತಗಲುವುದೋ ಗೊತ್ತಿಲ್ಲ. ನ್ಯೂಜೆರ್ಸಿಯಲ್ಲಿ ನಾನು ಕಳೆದ ದಿನಗಳಲ್ಲಿ ಮನಸ್ಸಿಗೆ ಅಷ್ಟೇನೂ ಹಿತವಿರಲಿಲ್ಲ. ಸಿನಿಮಾಗಳಲ್ಲಿ ಮಾತ್ರ ಕಂಡಿದ್ದ ನ್ಯೂಯಾರ್ಕ್ ನಗರದಲ್ಲಿ ಓಡಾಡುವಾಗ ರೋಮಾಂಚನವಾದರೂ, ಲಿಬರ್ಟಿ ಪ್ರತಿಮೆಯೆದುರು ನಿಂತಾಗ ಭಾವೋದ್ವೇಗದಿಂದ ಕಣ್ಣೀರಿಟ್ಟರೂ, ಹೊಸದೊಂದು ಜಾಗ ನೋಡಲು ಹೋದಾಗ ಪುಳಕವೆನಿಸಿದರೂ ಅದೆಲ್ಲಾ ಮನಸ್ಸಿನ ಸಂಚಾರಿಭಾವವಾದವು; ಅರಿಯದ ಯಾವುದೋ ಬೇಸರ, ಕೊರಗು ಮಾತ್ರ ಸ್ಥಿರವಾಗುಳಿವ ಸ್ಥಾಯಿಭಾವ ಸದಾ ಇರುತ್ತಿತ್ತು. ನಾವಿಟ್ಟ ಹೆಜ್ಜೆ ತಪ್ಪಾಯಿತೇನೊ ಎನ್ನುವ ಪಶ್ಚಾತ್ತಾಪದ ಭಾವನೆಯಲ್ಲೇ ಅಲ್ಲಿದ್ದ ಬಹಳಷ್ಟು ದಿನಗಳು ಕಳೆದವು.

ಅದೇ ಸಮಯಕ್ಕೆ ಉಗ್ರರ ಅಟ್ಟಹಾಸಕ್ಕೆ ಮಣಿದು ನೆಲಕ್ಕೆ ಕುಸಿದ ಅವಳಿಗೋಪುರ ಹೆದರಿದವರ ಮೇಲೆ ಹಲ್ಲಿ ಎಸೆದಂತಾಯಿತು. ಘಟನೆ ನಡೆದ ಸ್ಥಳದಲ್ಲಿರದಿದ್ದರೂ ಅದರ ನೆರೆಯಲ್ಲಿಯೇ ನನ್ನವರ ಕಾರ್ಯಾಲಯವಿದ್ದಿದ್ದು. ಆ ಕರಾಳದಿನ ಶ್ರೀನಿ, ಎಂದಿನಂತೆಯೇ ಟ್ರೈನಿನಲ್ಲಿ ಕೆಲಸಕ್ಕೆ ಹೊರಟಿದ್ದರು. ನ್ಯೂಯಾರ್ಕ್‌ನತ್ತ ಹೊರಟಿದ್ದ ರೈಲು 'ಲಿಂಡನ್' ಎಂಬ ಜಾಗದಲ್ಲಿ ನಿಂತಾಗ, ಅಲ್ಲಿಂದ ಅದನ್ನು ಮುಂದೆ ಹೋಗಲು ಬಿಡದಿದ್ದರಿಂದ ರೈಲು ಬಂದ ದಾರಿಯಲ್ಲಿ ಹಿಂತಿರುಗಿತ್ತು. ಹೊರಟ ಸ್ವಲ್ಪ ಹೊತ್ತಿನಲ್ಲಿಯೇ ಮನೆಗೆ ಹಿಂತಿರುಗಿದ ಅವರನ್ನು ಕಂಡು ನನಗೆ ಅಚ್ಚರಿ. ನನ್ನ ಪ್ರಶ್ನೆಗೆ ಉತ್ತರಿಸುವ ಮೊದಲು ಓಡಿಹೋಗಿ ಟಿವಿ ಹಾಕಿದರು. ಅಲ್ಲಿ ತೋರಿಸುತ್ತಿದ್ದ ದೃಶ್ಯವನ್ನು ಕಂಡು ನಾವಿಬ್ಬರೂ ದಂಗುಬಡಿದು ನಿಂತೆವು. ಕೆಲವೇ ದಿನಗಳ ಹಿಂದಷ್ಟೆ ನಾವೆಲ್ಲರೂ ಅಲ್ಲಿಗೆ ಹೋಗಿದ್ದು, ನಮ್ಮ ನೆನಪಿನ ಸಂಪುಟದಲ್ಲಿ ಹೆಮ್ಮೆಯ ಚಿತ್ರಗಳಾಗಿ ಸೇರಿಹೋಗಿದ್ದ ಅವಳಿಸೋದರಿಯರು ನೆಲಕ್ಕುರುಳುತ್ತಿರುವುದನ್ನು ಕಣ್ಣುಗಳು ನಿಜವೆಂದು ನಂಬುತ್ತಿರಲಿಲ್ಲ. ಕಣ್ಣೆದುರಿಗಿದ್ದ ಕಟುವಾಸ್ತವವನ್ನು ಇಬ್ಬರೇ ಎದುರಿಸುವುದು ಅಸಾಧ್ಯವೆನ್ನಿಸಿ, ನಮ್ಮ ಅಪಾರ್ಟ್‌ಮೆಂಟಿನ ಎದುರಿನಲ್ಲೇ ಇದ್ದು, ನಡೆದೇ ಹೋಗಬಹುದಾಗಿದ್ದ, 'ಬೆಸ್ಟ್ ಬೈ' ಎಲೆಕ್ಟ್ರಾನಿಕ್ಸ್ ಮಳಿಗೆಯತ್ತ ಧಾವಿಸಿದೆವು. ಅಲ್ಲಿ ಮಾರಲು ಇಟ್ಟಿದ್ದ ಹಲವಾರು ದೊಡ್ಡದೊಡ್ಡ ಟಿವಿಗಳಲ್ಲೆಲ್ಲಾ ಜೋಡಿ ಕಟ್ಟಡಗಳು ಹೊತ್ತುರಿಯುತ್ತಿರುವ, ಜನರೆಲ್ಲ ಬೂದಿಯಲ್ಲಿ ಮುಳುಗೆದ್ದವರಂತೆ ಕಾಣುತ್ತಾ ಚೆಲ್ಲಾಪಿಲ್ಲಿಯಾಗಿ ಓಡುತ್ತಿದ್ದ, ಕಿರುಚುತ್ತಿದ್ದ ಭೀಕರ ನೋಟ!

ಅಂದು ಏನೋ ಕೊಳ್ಳಲು ಅಲ್ಲಿಗೆ ಬಂದಿದ್ದ ಜನ ಆ ಟಿವಿಗಳ ಎದುರಿನಲ್ಲಿ

ಇತಿಹಾಸದಲ್ಲಿ ಕರಿಚುಕ್ಕಿಯಾಗಿ ಉಳಿಯಲಿದ್ದ ಘಟನೆಯೊಂದಕ್ಕೆ ಸಾಕ್ಷಿಯಾಗಿ ಮರಗಟ್ಟಿ ನಿಂತಿದ್ದರು. ಕೆಲವರು ನೋವಿನಿಂದ ಅಳುತ್ತಿದ್ದರು. ಕೆಲವರು ಅಲ್ಲಿರುವ ತಮ್ಮ ಗೆಳೆಯರನ್ನೋ, ಸಂಬಂಧಿಕರನ್ನೋ ನೆನಪು ಮಾಡಿಕೊಂಡು ಅವರನ್ನು ಸಂಪರ್ಕಿಸುವ ವ್ಯರ್ಥ ಪ್ರಯತ್ನದಲ್ಲಿದ್ದರು. ದೈವಕೃಪೆಯಿಂದ ಅಂದು ದುರಂತದ ನೆರಳೂ ಕೂಡ ನಮ್ಮನ್ನು ಸೋಕಲಿಲ್ಲ. ನಾವಷ್ಟೆ ಅಲ್ಲ, ಆ ದಿನ ನ್ಯೂಜೆರ್ಸಿಯಿಂದ ನಿತ್ಯ ಕರ್ಮಕ್ಕೆಂದು ನ್ಯೂಯಾರ್ಕಿಗೆ ಹೋಗಿಬರುತ್ತಿದ್ದ ನಮ್ಮ ಹಲವಾರು ಸ್ನೇಹಿತರೂ ಕೂಡ ಅವಘಡದಿಂದ ಪಾರಾದರೂ, ಆ ಎಲ್ಲಾ ಘಟನೆಗಳೂ ನನ್ನ ಮನಸ್ಸನ್ನು ಕಲಕಿದ ಕೊಳವಾಗಿಸಿಬಿಟ್ಟವು. ಚಕ್ರವ್ಯೂಹದ ಒಳಹೊಕ್ಕು ಹೊರಹೋಗುವ ದಾರಿ ತಿಳಿಯದ ಅಭಿಮನ್ಯುವಿನ ಮನಸ್ಥಿತಿ, ಪರಿಸ್ಥಿತಿಯಲ್ಲಿ ನಾನಿದ್ದೆ ಎಂದರೆ ನಾಟಕೀಯವೆನಿಸಿದರೂ ಅದೇ ಸರಿ!

ಅದೇ ಸಮಯಕ್ಕೆ ನನಗೆ ಪರಿಚಯವಾದ ದಟ್ಸ್ ಕನ್ನಡವೆಂಬ ಅಂತರ್ಜಾಲ ತಾಣ ನನ್ನ ಪಾಲಿಗೊಂದು ವರದಾನವಾಗಿ ಪರಿಣಮಿಸಿತು. ಅಲ್ಲಿಗೆ ನಾನು ಬರೆದ ಬರಹಗಳನ್ನು ಕಳಿಸತೊಡಗಿದೆ. ಪ್ರಕಟಿಸಿದ್ದಲ್ಲದೆ, ಸಂಪಾದಕರಾದ ಎಸ್. ಕೆ. ಶಾಮಸುಂದರ್ ಅವರು ಪ್ರೋತ್ಸಾಹದ ಮಾತನಾಡಿ ಮತ್ತಷ್ಟು ಬರೆಯಬೇಕೆಂಬ ಹುರುಪು ತುಂಬುತ್ತಿದ್ದರು. ಬಹುತೇಕ ನಿಂತೇ ಹೋದಂತಿದ್ದ ನನ್ನ ಬರವಣಿಗೆ ಮತ್ತೆ ಶುರುವಾಯಿತು. ಅನೇಕ ಬರಹಗಾರರು, ಸಮಾನಮನಸ್ಕರು ಆ ತಾಣದ ಮೂಲಕ ಪರಿಚಯವಾದರು. ಆದಿನಗಳು ಇಂದಿಗೂ ಸುಂದರ ನೆನಪು. ಅನೇಕರು ಅಲ್ಲಿ ನಿಯಮಿತವಾಗಿ ಬರೆಯುತ್ತಿದ್ದರು. ಕೆಲವರು ಈಗಾಗಲೇ ಪಳಗಿದ ಲೇಖಕರಾದರೆ ಇನ್ನು ಕೆಲವರು ಹೊಸದಾಗಿ ಬರವಣಿಗೆ ಪ್ರಾರಂಭಿಸಿದವರು. ದಿವಂಗತ ಎಸ್. ಕೆ. ಹರಿಹರೇಶ್ವರ, ಎಂ. ಎಸ್. ನಟರಾಜ್, ಎಂ. ಆರ್. ದತ್ತಾತ್ರಿ, ಶ್ರೀವತ್ಸ ಜೋಶಿ, ಜ್ಯೋತಿ ಮಹಾದೇವ್... ಮುಂತಾದ ಅನೇಕ ಲೇಖಕರ ಪರಿಚಯವಾಗಿದ್ದು ಆ ತಾಣದ ಮೂಲಕವೇ. ಶಾಮ್ ಅವರ ಪ್ರೇರಣೆಯಿಂದಲೇ ಮುಂದೆ ನಾನು ಅಂಕಣಕಾರ್ತಿಯೂ ಆಗಿ, 'ತುಳಸಿವನ' ಅಂಕಣದಲ್ಲಿ ಲೇಖನಗಳನ್ನೂ ಬರೆಯತೊಡಗಿದೆ. ಈ ಅಂಕಣದಿಂದ ನನಗೆ ದೊರೆತ ಉಡುಗೊರೆಯೆಂದರೆ ಓದುಗರ ಅಪಾರಪ್ರೀತಿ ಮತ್ತು 'ತುಳಸಿಯಮ್ಮ' ಎಂಬ ಹೊಸ ಹೆಸರು!

ಹೀಗೆ, ಈ ನೆಲದಲ್ಲಿ ನನ್ನ ಮೊದಲ ದಿನಗಳ ಏಳು-ಬೀಳು, ನೋವು-ನಲಿವು, ಅಪರಿಚಿತ, ಅನಾಥ ಭಾವಗಳಿಗೆಲ್ಲಾ ಸಾಕ್ಷಿಯಾದ ನ್ಯೂಜೆರ್ಸಿಯಲ್ಲಿ ನಾವು ಹೆಚ್ಚು ದಿನ ಇರಲಿಲ್ಲ. ಅಷ್ಟರಲ್ಲಿ ಕೈಬೀಸಿ ಕರೆಯಿತು ಶಿಕಾಗೊ! ಒಂದೂವರೆ ವರ್ಷದ ಅಲ್ಲಿಯ ವಾಸ ಮುಗಿಸಿ ನಂತರ ನಾವು ಬಂದಿಳಿದಿದ್ದು ಇಲಿನಾಯ್ ರಾಜ್ಯಕ್ಕೆ. ವರ್ಷದ ಬಹುಪಾಲು ಹಿಮ ಹೊದ್ದು ಕುಳಿತಿರುವ ತಣ್ಣಗೆ ಕೊರೆಯುವ ಚಳಿಯೂರು ಶಿಕಾಗೊದಲ್ಲಿ ಬೆಚ್ಚಗಿನ

ಸ್ನೇಹ ಸಂಬಂಧಗಳು ಅರಳಿ ನಿಂತ ಪರಿಯೇ ಅದೆಷ್ಟು ಸುಂದರ. 'ಎಲ್ಲಿ ಜೀವನ ನಡೆವುದೋ ಅದೇ ನಮ್ಮೂರು; ಯಾರು ಸ್ನೇಹದಿ ಬರುವರೊ ಅವರೇ ನಮ್ಮೋರು' ಎಂದು ನಂಬಿದ ನಮ್ಮಂತಹ ಅನಿವಾಸಿಗಳಿಗೆ ಇದ್ದಲ್ಲೇ ನೆಮ್ಮದಿಯನ್ನು ಅರಸಿಕೊಳ್ಳಲು ನೆರವಾಗುವವರೆಂದರೆ ಸ್ನೇಹಿತರು ಎಂಬ ನಂಬಿಕೆ ಬಲವಾಗಿದ್ದು ಇಲ್ಲೇ.

ಶಿಕಾಗೊದ ಸಹೃದಯ, ಸ್ನೇಹಮಯ ವಾತಾವರಣ ನನ್ನ ಕ್ರಿಯಾಶೀಲತೆಗೆ ಇಂಬುನೀಡಿತೆನ್ನಬಹುದು. ನಲವತ್ತು ವರ್ಷಗಳನ್ನು ಪೂರೈಸಿ ಮುನ್ನಡೆದಿರುವ ಇಲ್ಲಿಯ ವಿದ್ಯಾರಣ್ಯ ಕನ್ನಡ ಕೂಟ ಹಲವಾರು ಕನ್ನಡ ಚಟುವಟಿಕೆಗಳನ್ನು ನಡೆಸಿಕೊಂಡುಬಂದಿರುವ ಕನ್ನಡಿಗರ ಕಣ್ಮಣಿ. ವಿದ್ಯಾರಣ್ಯದ ದ್ವೈವಾರ್ಷಿಕ ಸಂಚಿಕೆಯಾದ 'ಸಂಗಮ'ದ ಸಂಪಾದಕಿಯಾಗಿ, ಮೂರು ಅವಧಿಗೆ ಕೆಲಸ ನಿರ್ವಹಿಸುವ ಅವಕಾಶ ನನಗೆ ಸಿಕ್ಕಿತು. ಬರೆಯುವ, ಇತರರಿಂದ ಬರೆಸುವ, ಲೇಖನಗಳ ತಿದ್ದಿತೀಡುವ ಈ ಕಾಯಕದಿಂದ ದೊರೆತ ಅಕ್ಷರಸಾನ್ನಿಧ್ಯ ಮನಸ್ಸಿನ ಮುದವನ್ನು ಹೆಚ್ಚಿಸಿದ್ದನ್ನು ಮರೆಯಲಿ ಹೇಗೆ?

ಬಹುಶಃ ಅಲ್ಲಿದ್ದರೆ ಸಾಧ್ಯವಾಗದ, ಇಲ್ಲಿ ಬಂದಿದ್ದರಿಂದ ಮಾತ್ರ ಒದಗಿದ ಸುವರ್ಣಾವಕಾಶವೆಂದರೆ, ನಾಟಕಗಳಲ್ಲಿ ಅಭಿನಯಿಸಲು ಸಿಕ್ಕ ಅವಕಾಶ. ಶಾಲಾಕಾಲೇಜುಗಳಲ್ಲಿ ಎಂದೂ ಅಭಿನಯಿಸಿರದಿದ್ದರೂ ಆ ಆಸೆಯಂತೂ ಮನದ ಮೂಲೆಯಲ್ಲಿ ಸುಪ್ತವಾಗಿಯೇ ಇತ್ತೆನ್ನಬಹುದು. ನಿರ್ದೇಶಕ ಪ್ರಕಾಶ್ ಹೇಮಾವತಿಯವರ ನಿರ್ದೇಶನದಲ್ಲಿ, ಗಿರೀಶ್ ಕಾರ್ನಾಡರ 'ತಲೆದಂಡ' ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಬಣ್ಣ ಹಚ್ಚಿಕೊಂಡ ಅನುಭವವೇ ಇವತ್ತಿಗೂ ರೋಮಾಂಚನ ತರುವಂಥದು. ದತ್ತಿ ನಿಧಿ ಸಂಗ್ರಹದ ಉದ್ದೇಶದಿಂದ ಕೈಗೊಂಡ ಆ ಮಹತ್ ಯೋಜನೆಯಲ್ಲಿ ನನ್ನದೂ ಒಂದು ಅಳಿಲು ಸೇವೆಯಿತ್ತೆಂಬುದು ಹೆಮ್ಮೆಯ ವಿಚಾರ. ಪ್ರಕಾಶ್ ಹೇಮಾವತಿಯವರ ಮಹತ್ವಾಕಾಂಕ್ಷೆಯ ಪ್ರಯೋಗ 'ತಲೆದಂಡ'. ಇದು 2006, ಜೂನ್ ನಾಲ್ಕರಂದು ವಿದ್ಯಾರಣ್ಯ ಕನ್ನಡಕೂಟದಲ್ಲಿ ಪ್ರದರ್ಶನಗೊಂಡಿತು. 'ತಲೆದಂಡ' ನಾಟಕ ಪ್ರದರ್ಶನ ಕನ್ನಡ ಕೂಟದ ಇತರ ನಾಟಕಗಳಂತೆ, ಉಚಿತವಾಗಿ ಪ್ರದರ್ಶಿತಗೊಳ್ಳದೆ, ದತ್ತಿನಿಧಿಗೆ ಹಣಸಂಗ್ರಹಿಸಲೆಂದು ದರ ನಿಗದಿಪಡಿಸಲಾಗಿತ್ತು. ವಿದ್ಯಾರಣ್ಯ ಕನ್ನಡ ಕೂಟವು ಪ್ರತಿವರ್ಷ ಯಾವುದಾದರೊಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿ, ಅದರಿಂದ ಸಂಗ್ರಹವಾದ ಹಣವನ್ನು ದತ್ತಿನಿಧಿಗೆಂದು ಬಳಸಿಕೊಳ್ಳುವುದು ಹಿಂದಿನಿಂದ ನಡೆದುಬಂದಿರುವ ಪದ್ಧತಿ. ಆದರೆ ಆ ವರ್ಷ ಭಾರತದಿಂದ ಅಕ್ಕ ಸಮ್ಮೇಳನಕ್ಕೆ ಬರಬೇಕಾಗಿದ್ದ ನಿಗದಿತ ಕಲಾವಿದರು ವೀಸಾ ನಿರಾಕರಣೆಯ ಕಾರಣದಿಂದ ಬರಲಿಲ್ಲವಾಗಿ, ನಮ್ಮ ಕಾರ್ಯಕ್ರಮಕ್ಕೂ ಸಮಸ್ಯೆ ಎದುರಾಯಿತು. ಕೊನೆಗೆ, 'ಶಿಕರ' ತಂಡದಿಂದ ನಾಟಕ ಆಡಿಸಿ, ಅದರಿಂದ ಬಂದ ಹಣವನ್ನೇ ವಾರ್ಷಿಕ ದತ್ತಿನಿಧಿ ಸಂಗ್ರಹಕ್ಕೆ ಬಳಸಿಕೊಳ್ಳುವ ನಿರ್ಧಾರವಾಯಿತು. ಹಣ

ಕೊಟ್ಟು ನಾಟಕ ನೋಡಲು ಬರುವ ಪ್ರೇಕ್ಷಕರ ನಿರೀಕ್ಷೆಯೂ ಸಹಜವಾಗಿ ಹೆಚ್ಚೇ ಇರುತ್ತದಾದ್ದರಿಂದ, ತಂಡದ ಹೊಣೆಗಾರಿಕೆಯೂ ಹೆಚ್ಚಾಯಿತು. 'ತಲೆದಂಡ' ಐತಿಹಾಸಿಕ ನಾಟಕವಾದ್ದರಿಂದ ಅದಕ್ಕೆ ಬೇಕಾಗಿದ್ದ ರಂಜಸಜ್ಜಿಕೆ, ಪಾತ್ರಧಾರಿಗಳ ಉಡುಗೆ-ತೊಡುಗೆಗಳನ್ನು ಭಾರತದಿಂದಲೇ ತರಿಸಿಕೊಳ್ಳಲಾಗಿತ್ತು. ಇಪ್ಪತ್ತೈದಕ್ಕೂ ಹೆಚ್ಚು ಕಲಾವಿದರನ್ನು ಹೊಂದಿ, ದೊಡ್ಡ ಮಟ್ಟದಲ್ಲಿಯೇ ನಿರ್ಮಿಸಿದ್ದ ಆ ನಾಟಕ ನನ್ನ ಅಭಿಪ್ರಾಯದಲ್ಲಿ, ನ ಭೂತೋ ನ ಭವಿಷ್ಯತಿ! ನಾವೇ ಮತ್ತೆ ಅದನ್ನು ಮಾಡಬೇಕೆಂದು-ಕೊಂಡರೂ ಈಗಿನ ಪರಿಸ್ಥಿತಿಯಲ್ಲಿ ಆ ಆಸೆಯನ್ನು ಕಾರ್ಯಗತಗೊಳಿಸುವುದು ಅಸಾಧ್ಯವೆಂದೇ ನನಗನ್ನಿಸುತ್ತದೆ. ಹಲವಾರು ಜನರ ಶ್ರಮ, ಒಳಿತನ್ನೇನೊ ಮಾಡಬೇಕೆನ್ನುವ ಸದಾಶಯಗಳೇ ಆ ನಾಟಕದ ಯಶಸ್ಸಿನ ಹಿಂದಿದ್ದ ಪ್ರೇರಕ ಶಕ್ತಿ.

ಇದಾದ ನಂತರ, ನಾನು ಅಭಿನಯಿಸಿದ ಮತ್ತೊಂದು ನಾಟಕವೆಂದರೆ, ಕುವೆಂಪು ಅವರು ರಚಿಸಿರುವ ನಾಟಕ 'ನನ್ನ ಗೋಪಾಲ.' ಇದಕ್ಕೂ ಕೂಡ ಪ್ರಕಾಶ್ ಅವರದೇ ನಿರ್ದೇಶನ. ಕಾಡು ದಾರಿಯಲ್ಲಿ ನಡೆದು ಪ್ರತಿದಿನ ಗುರುಕುಲಕ್ಕೆ ಹೋಗಿಬರಬೇಕಿದ್ದ ಬಡಬಾಲಕನೊಬ್ಬನ ಮುಗ್ಧಭಕ್ತಿಗೆ ಒಲಿದು ದೇವರದೇವನಾದ ಗೋಪಾಲನೇ ಕಾಡಿನ ಹಾದಿಯಲ್ಲಿ ಅವನ ಜೊತೆಗಾರನಾಗಿ, ಅವನನ್ನು ರಕ್ಷಿಸುವ ಮನೋಜ್ಞ ಕಥಾವಸ್ತು ಈ ನಾಟಕದ್ದು. ಶಾಲಾಮಕ್ಕಳು ತಮ್ಮ ಶಾಲೆಗಳಲ್ಲಿ ಆಡಲು ಹೇಳಿ ಮಾಡಿಸಿದ ನಾಟಕ. ಈ ನಾಟಕದಲ್ಲಿ, ನಾನು ಬಾಲಕ ಗೋಪಾಲನ ಬಡವೆ ತಾಯಿಯಾಗಿ ಅಭಿನಯಿಸಿದೆ. ಗೋಪಾಲನ ಗುರುಗಳ ಪಾತ್ರಕ್ಕೆ ನಿತಿನ್ ಮಂಗಳವೇಢೆಯವರನ್ನು, ಬಾಲಕನ ಪಾತ್ರಕ್ಕೆ ಇಲ್ಲಿಯೇ ಹುಟ್ಟಿ ಬೆಳೆಯುತ್ತಿದ್ದ ಕನ್ನಡ ಕಂದ ಅಭಿನವ್ ರೆಡ್ಡಿಯನ್ನೂ ಪ್ರಕಾಶ್ ಆಯ್ಕೆ ಮಾಡಿದ್ದರು. ಕನ್ನಡವನ್ನು ಓದಲು, ಬರೆಯಲು ಕಲಿತಿದ್ದರೂ ಉಚ್ಚಾರಣೆಯಲ್ಲಿ ಸಹಜವಾಗಿ ಇಣುಕುವ ಅಮೆರಿಕನ್ ಉಚ್ಚಾರ ಅಭಿನವನಲ್ಲೂ ಇತ್ತು. ಕನ್ನಡದಲ್ಲೇ ಇದ್ದ ನಾಟಕದ ಸ್ಕ್ರಿಪ್ಟನ್ನು ಓದಿ, ಬಾಯಿಪಾಠ ಮಾಡಿಕೊಂಡು, ಕಠಿಣ ಪದಗಳ ಅರ್ಥ ತಿಳಿದುಕೊಂಡು, ಆದಷ್ಟು ಸಂಭಾಷಣೆಗಳು ಸಹಜವಾಗಿರುವಂತೆ ಅವನು ವಹಿಸುತ್ತಿದ್ದ ಶ್ರಮ ನನಗೆ ಮೆಚ್ಚುಗೆ ಎನ್ನಿಸುತ್ತಿತ್ತು. ಈ ನಾಟಕದಲ್ಲಿದ್ದ ಕುವೆಂಪು ಅವರ ಹಾಡುಗಳಿಗೆ ಲೇಖಕಿ ನಳಿನಿ ಮೈಯ ಅವರು ರಾಗ ಸಂಯೋಜಿಸಿದ್ದಲ್ಲದೆ, ಅದನ್ನು ನೃತ್ಯರೂಪಕ್ಕೂ ಅಳವಡಿಸಿ ನಾಟಕಕ್ಕೆ ಮತ್ತಷ್ಟು ಮೆರುಗು ತರಿಸಿದ್ದರು. ನೃತ್ಯದಲ್ಲಿ ತನ್ಮಯಿ ಕಾದಮುದ್ದಿಯ ಜೊತೆ ನನ್ನ ಮಗಳು ಸುರಭಿಯೂ ನರ್ತಿಸಿದ್ದಳು.

ನಾನು ಗಮನಿಸಿದಂತೆ, ಕನ್ನಡ ಕೂಟಗಳಲ್ಲಿ ಗಂಭೀರ ನಾಟಕಗಳಿಗಿಂತ ಹಾಸ್ಯ ನಾಟಕಗಳಿಗೆ ಬೇಡಿಕೆ ಹೆಚ್ಚು. ಸಾಲುಸಾಲು ಮನರಂಜನೆಗಳ ನಡುವೆ, ಇಲ್ಲಿಯ ಪ್ರೇಕ್ಷಕರಿಗೆ ಗಾಢ ಕಥಾವಸ್ತುವಿರುವ ನಾಟಕಗಳನ್ನು ಸಾವಧಾನದಿಂದ ವೀಕ್ಷಿಸಿ, ಆಸ್ವಾದಿಸುವ ವ್ಯವಧಾನ ಕಡಿಮೆ. ತುಂಬಾ ಆಸಕ್ತಿಯಿಂದ ಅಭ್ಯಾಸ ಮಾಡಿ ಆಡಲ್ಪಟ್ಟ ಕೆಲವು ಗಂಭೀರ ನಾಟಕಗಳಿಗೆ ವೀಕ್ಷಕರಿಂದ ಅಷ್ಟೇನೂ ಉತ್ತಮ ಪ್ರತಿಕ್ರಿಯೆ

ಬರದಿದ್ದುದನ್ನು ನೋಡಿದ್ದೇನೆ. ಹಾಗಾಗಿ, ನನ್ನ ಮೊದಲನೆಯ ನಿರ್ದೇಶನದ ಪ್ರಯತ್ನಕ್ಕೆಂದು ನಾನು ನಗೆನಾಟಕವೊಂದನ್ನು ಆಡಿಸಲು ನಿರ್ಧರಿಸಿದೆ. ನಮಗೆ ಬೇಕಾದ ನಗೆನಾಟಕಗಳನ್ನು ಹುಡುಕುವುದೂ ಕೂಡ ಒಂದು ಸಮಸ್ಯೆಯೇ! ಅಲ್ಲಿಂದ ತಂದು ಆಡಿದ ಕೆಲವು ನಾಟಕಗಳು ಇಲ್ಲಿಯ ಪರಿಸರಕ್ಕೆ ಹೊಂದದೆ ಪ್ರೇಕ್ಷಕರಿಗೆ ಅದರೊಡನೆ ತಮ್ಮನ್ನು ಸಮೀಕರಿಸುವುದು ಕಷ್ಟವೆನ್ನಿಸಬಹುದು ಎಂದು ಕೇವಲ ನನ್ನ ಗುಮಾನಿಯಷ್ಟೆ. ಇದು ನಿಜವಲ್ಲದಿರಬಹುದು. ನಮಗೆ ಬೇಕಾದ ನಾಟಕಗಳನ್ನು ನಾವು ಬರೆದುಕೊಳ್ಳುವುದೇ ಸೂಕ್ತವೇನೊ ಎಂದು ನನಗೆ ಹಲವಾರು ಬಾರಿ ಅನ್ನಿಸಿದ್ದಿದೆ. ಇಲ್ಲಿನವರು ಬರೆದ ನಾಟಕಗಳು ಇಲ್ಲಿಯ ಜನಜೀವನವನ್ನು ಪ್ರತಿನಿಧಿಸುವುದರಿಂದ ಜನರಿಗೆ ಹೆಚ್ಚು ಮೆಚ್ಚುಗೆಯಾಗುವುದು ಸಹಜ. ಅಮೆರಿಕನ್ನಡಿಗ ಲೇಖಕಿ ಶ್ರೀಮತಿ ಅಲಮೇಲು ಅಯ್ಯಂಗಾರ್, ಎಂ. ಎಸ್. ನಟರಾಜ್ ಅವರು ಬರೆದಿರುವ ಈ ರೀತಿಯ ಹಲವಾರು ನಾಟಕಗಳು ನಿಜಕ್ಕೂ ಇಲ್ಲಿಯ ನಾಟಕಪ್ರಿಯರಿಗೆ ಒಳ್ಳೆಯ ಕೊಡುಗೆಗಳೆನಿಸಿವೆ.

ನಗೆನಾಟಕಕ್ಕಾಗಿ ಹುಡುಕುತ್ತಿದ್ದಾಗ ನನ್ನ ಕೈಗೆ ಸಿಕ್ಕವರು 'ಕಂಪತಿಗಳು'. ಇದು ರಂಗಭಾಷೆಯಲ್ಲಿ ನನ್ನ ಮೊದಲ ತೊದಲು. ಅಮೆರಿಕನ್ನಡಿಗ ಲೇಖಕ ಶ್ರೀನಾಥ್ ಭಲ್ಲೆಯವರು ರಚಿಸಿದ ಈ ಪ್ರಹಸನ ಚಿಕ್ಕದಾಗಿದ್ದು, ಸರಳವಾಗಿದ್ದರಿಂದ ಇದನ್ನು ನಾನೇ ನಿರ್ದೇಶಿಸಲು ಧೈರ್ಯ ಮಾಡಿದೆ. ಪ್ರತಿ ಸಂಭಾಷಣೆಗಳು ಹಾಸ್ಯದಿಂದ ಕೂಡಿದ್ದು, ನುರಿತ ನಟವರ್ಗವೇ ಜೊತೆಗಿದ್ದುದರಿಂದ ನನಗೇನೂ ಕಷ್ಟವೆನ್ನಿಸಲಿಲ್ಲ. 'ಬಾಲ ಗೋಪಾಲ' ನಾಟಕದಲ್ಲಿ ನನ್ನ ಮಗಳು ಸುರಭಿ ಒಂದು ಸಣ್ಣ ಪಾತ್ರದಲ್ಲಿ ಅಭಿನಯಿಸಿದ್ದರೆ, 'ಕಂಪತಿಗಳು' ನಾಟಕದಲ್ಲಿನ ವೈದ್ಯನ ಪಾತ್ರದಲ್ಲಿ ನನ್ನ ಪತಿ ಶ್ರೀನಿವಾಸರಾವ್ ಅವರೇ ಮಿಂಚಿದರು. ಇದರ ನಂತರ ನಾನಾಡಿಸಿದ ಇನ್ನೊಂದು ನಗೆ ನಾಟಕ 'ನಾಮದ ಬಲ'. ಇದನ್ನು ಲೇಖಕಿ ನಳಿನಿ ಮೈಯ ಅವರು, ತಮ್ಮ ಪತಿ ಸುಬ್ರಾಯ ಮೈಯರ ನಗೆ ಲೇಖನಗಳನ್ನು ಆಧಾರವಾಗಿಟ್ಟುಕೊಂಡು ನಮಗಾಗಿಯೇ ಬರೆದುಕೊಟ್ಟರು. ಇದರಲ್ಲಿ ನಿರ್ದೇಶನವಲ್ಲದೆ ನಾನೂ ಒಂದು ಪಾತ್ರ ವಹಿಸಿದ್ದೆ. ಇದೂ ಕೂಡ ಬಹಳ ಚೆನ್ನಾಗಿಯೇ ಮೂಡಿಬಂದಿತು.

ಇಲ್ಲಿ ಆಡಲಾಗುವ ನಾಟಕಗಳಿಗೆ ರಂಗಸಜ್ಜಿಕೆ ಸಿದ್ಧಪಡಿಸುವ ಕೆಲಸ ನಿಜಕ್ಕೂ ನಮ್ಮ ಸೃಜನಶೀಲತೆಗೊಂದು ಸವಾಲು. ಇಲ್ಲಿಯ ಅನೇಕ ನಾಟಕ ತಂಡಗಳು ಅದನ್ನು ಯಶಸ್ವಿಯಾಗಿ ಸ್ವೀಕರಿಸಿವೆ ಎನ್ನಬಹುದು. ಪ್ರತಿಬಾರಿ ಭಾರತದಿಂದಲೇ ಎಲ್ಲವನ್ನೂ ತರಿಸಿಕೊಳ್ಳುವುದು ಅಸಾಧ್ಯವಾದ ಕಾರಣ ಅದನ್ನು ಇಲ್ಲಿ ಸಿಗುವ ವಸ್ತುಗಳನ್ನು ಉಪಯೋಗಿಸಿಕೊಂಡು ತಯಾರಿಸಬೇಕಾಗುತ್ತದೆ. ಇಲ್ಲಿಯ 'ಹಾಬಿ ಲಾಬಿ', 'ಮೈಕಲ್ಸ್'ನಂತಹ ಕಲಾತ್ಮಕ ವಸ್ತುಗಳನ್ನು ಮಾರುವ ಅಂಗಡಿಯೊಳಹೊಕ್ಕರೆ, ಅಲ್ಲಿ ಸಿಗುವ ಚಿಣಿಮಿಣಿ ಪದಾರ್ಥಗಳನ್ನು ಬಳಸಿ ಎಂತಹ ಐತಿಹಾಸಿಕ ನಾಟಕಗಳಿಗೂ

ಹೊಂದುವಂತಹ ಝುಗ್ಗೆನ್ನುವ ಪೋಷಾಕುಗಳನ್ನು ತಯಾರಿಸಿಕೊಳ್ಳಬಹುದು. ಈಗೀಗ ಇಲ್ಲಿ ನಾಟಕ, ನೃತ್ಯಗಳಿಗೆ ಬೇಕಾದ ದಿರಿಸುಗಳು ಸಹ ಬಾಡಿಗೆಗೆ ದೊರೆಯುವುದರಿಂದ ಬಹುಮಟ್ಟಿಗೆ ಆ ಸಮಸ್ಯೆ ಪರಿಹಾರವಾದಂತಾಗಿದೆ.

ಇಲ್ಲಿ ಎನ್ನುವುದಕ್ಕಿಂತ, ಎಲ್ಲಾ ಕಡೆಗಳಲ್ಲಿ, ಆಡುವ ನಾಟಕಗಳಿಗಿರುವ ದೊಡ್ಡ ಕಂಟಕವೆಂದರೆ ಮೈಕಾಸುರನದು. ನಮ್ಮ ಅದೃಷ್ಟ ಚೆನ್ನಾಗಿದ್ದು, ಸರಿಯಾದ ಧ್ವನಿವರ್ಧಕ ವ್ಯವಸ್ಥೆ ಲಭಿಸಿದಲ್ಲಿ ನಮ್ಮ ನಾಟಕ ಅರ್ಧ ಗೆದ್ದಂತೆಯೇ! ಇಲ್ಲದಿದ್ದರೆ, ಎಷ್ಟೇ ಮುಂಚಿತವಾಗಿ, ಪರಿಶೀಲಿಸಿ, ಮೈಕ್ ಟೆಸ್ಟ್‌ಗಳನ್ನು ಮಾಡಿಕೊಂಡಿದ್ದರೂ, ಕೊನೆಗೆ ಏನೋ ಎಡವಟ್ಟುಗಳಾದರೆ ನಮ್ಮ ಶ್ರಮವೆಲ್ಲಾ ಹೊಳೆಯಲ್ಲಿ ಹುಣಸೆಹಣ್ಣು ಕಿವಿಚಿದಂತೆಯೆ ಸರಿ. ತಿಂಗಳುಗಟ್ಟಲೆ ಕಷ್ಟಪಟ್ಟು ಅಭ್ಯಾಸ ನಡೆಸಿ, ಕಂಠಪಾಠ ಮಾಡಿಕೊಂಡ ಸಂಭಾಷಣೆಗಳು ಪ್ರೇಕ್ಷಕರಿಗೆ ತಲುಪದೆ, ನಾವಾಡುವ ಮಾತು ನಮ್ಮ ಗಂಟಲಿನಲ್ಲೆ ಉಳಿದರೆ ನಾಟಕ ಇನ್ನೇನು ಗೆದ್ದೀತು? ಆಡಿದ ಮಾತುಗಳಿಗೆ ಪ್ರೇಕ್ಷಕರ ನಗು–ಚಪ್ಪಾಳೆ–ಕೂಗು–ಕೇಕೆಗಳ ಸಹಸ್ಪಂದನ ದೊರೆತರೆ ಕಲಾವಿದರಿಗೆ ಅದರಿಂದ ದೊರೆಯುವ ಉತ್ತೇಜನ, ರೋಮಾಂಚನ ಬಹುಕಾಲ ನೆನಪಿನಲ್ಲುಳಿಯುವಂಥದ್ದು.

ಓದಿ, ಬರೆಯುವ, ಅಭ್ಯಾಸದ ಜೊತೆಗೆ ಈಚೆಗೆ ನನಗೆ ತಗಲುಹಾಕಿಕೊಂಡಿರುವ ಇನ್ನೊಂದು ಹೊಸ ಹುಚ್ಚೆಂದರೆ ಹಕ್ಕಿಗಳ ಛಾಯಾಗ್ರಹಣ. ಚಲನಶೀಲತೆಯ ಸಾಕಾರಮೂರ್ತಿಗಳಾದ ಈ ಪುಟ್ಟ ಜೀವಿಗಳನ್ನು ಕ್ಯಾಮೆರ ಕಣ್ಣಿನಿಂದ ಬಹುದೂರದಿಂದಲೇ ಹಿಂಬಾಲಿಸುತ್ತಾ, ಅವಕಾಶ ಸಿಕ್ಕೊಡನೆ ಫಕ್ಕನೆ ಸೆರೆಹಿಡಿಯುವ ರೋಚಕ ಹವ್ಯಾಸವಿದು. ಕೊರೆವ ಚಳಿಯಿರಲಿ, ಸುಡುವ ಬಿಸಿಲಿರಲಿ ಕತ್ತಿಗೆ ಭಾರದ ಲೆನ್ಸ್ ಹೊತ್ತ ಕ್ಯಾಮೆರಾಗಳನ್ನು ತಗಲಿಸಿಕೊಂಡು, ಹೊತ್ತಿನ ಅರಿವಿಲ್ಲದೆ ಪೊದೆಗಳ ಮರೆಯಲ್ಲಿ ಬೇಟೆಗಾರರಂತೆ ಕಾಯುತ್ತಾ ಕೂತಾಗ ತಾಳ್ಮೆ, ಸಹನೆಗಳ ಮಹತ್ವ ಅರಿವಿಗೆ ಬಂದಿದೆ. ಸುತ್ತಲಿನ ಹಸಿರು–ಗಿಡ–ಕಲ್ಲು–ಮಣ್ಣುಗಳೊಂದಿಗೆ ಮಿಳಿತವಾಗುವಂತಹದೇ ಬಣ್ಣದ ಉಡುಪು ಧರಿಸಿ, ತುಸುವೂ ಮಿಸುಕಾಡದೆ ಕುಳಿತಿದ್ದಾಗ ಸನಿಹ ಹಾರಿಬರುವ ಪಕ್ಷಿಗಳು ನಮ್ಮ ಇರುವಿಕೆಯನ್ನೇ ಗಮನಿಸದೆ ತಮ್ಮ ಎಂದಿನ ವ್ಯಾಪಾರಗಳಲ್ಲಿ ತೊಡಗಿಕೊಂಡಿರುವಾಗ ನಾವೂ ಪ್ರಕೃತಿಯ ಭಾಗವೇ ಆಗಿಹೋಗಿದ್ದೇವೇನೊ ಎಂಬ ದಿವ್ಯಾನುಭವವಾಗಿದ್ದಿದೆ. ದುಬಾರಿ ಲೆನ್ಸು, ಕ್ಯಾಮೆರಗಳನ್ನು ಕೊಳ್ಳುವ ಆರ್ಥಿಕ ಅನುಕೂಲ, ಮನಸ್ಸಿಗೆ ಬಂದೊಡನೆ ಎದ್ದು ಕಾಡುಹೊಕ್ಕು ಕೂರಲು ಸಿಗುವ ವಿರಾಮಕಾಲ ಇವೆಲ್ಲವೂ ಈ ದೇಶಕ್ಕೆ ಬರದಿದ್ದರೆ ಸಾಧ್ಯವಾಗುತ್ತಿತ್ತು ಎಂದು ಖಂಡಿತ ನನಗನ್ನಿಸುವುದಿಲ್ಲ.

ಬೇರು ಸೂರು


ಎಲ್ಲಾ ಬದುಕುಗಳಂತೆ ನಮ್ಮದೂ ಕಹಿ-ಸಿಹಿಗಳ ಮಿಶ್ರಣವೇ! ನಗು ಹಂಚಿಕೊಳ್ಳಲು ಜೊತೆಯಾದಂತೆ ಸಂಕಟಕ್ಕೆ ಹೆಗಲಾದವರು ನಮ್ಮ ಇಲ್ಲಿಯ ಸ್ನೇಹಿತರು. ಇಲ್ಲಿ ಎದುರಾದ ಅನಿರೀಕ್ಷಿತ ಎಡರು-ತೊಡರುಗಳನ್ನು ಎದುರಿಸಲು, ಆಗಾಗ ತಲೆ ಎತ್ತುವ ಒಂಟಿತನವನ್ನು ಎದುರಿಸಿ ನಿಲ್ಲಲು ನೆರವಾಗಿದ್ದೆಂದರೆ ಇಲ್ಲಿ ನಮಗೆ ದೊರೆತ ಸ್ನೇಹಲೋಕ. ಇವತ್ತಿಗೂ ಸ್ನೇಹಿತರ ವಿಷಯದಲ್ಲಿ ನನಗೆ ಅಚ್ಚರಿ ಮೂಡಿಸುವ ಸಂಗತಿಯೆಂದರೆ, ನೂರಾರು ಜನರನ್ನು ಭೇಟಿಯಾದರೂ, ಒಡನಾಡಿದರೂ ಎಲ್ಲರೂ ಸ್ನೇಹಿತರಾಗುವುದಿಲ್ಲ. ನಮ್ಮ ಆಸಕ್ತಿ, ಅಭಿರುಚಿಗಳಿಗೆ ಹೊಂದುವ ಕೆಲವರಷ್ಟೆ ಗೆಳೆತನದ ವರ್ತುಲಕ್ಕೆ ಬಂದು ಸೇರಿಕೊಳ್ಳುತ್ತಾರೆ. ಗೆಳತಿ ಜ್ಯೋತಿ ಹೇಳುವ, 'ಪ್ರತಿ ಸ್ನೇಹ ಸಂಬಂಧದ ಹಿಂದೆಯೂ ಜನ್ಮಾಂತರದ ಎಳೆಯೊಂದಿರುತ್ತದೆ.' ಎನ್ನುವ ಮಾತನ್ನು ನಾನಂತೂ ಗಾಢವಾಗಿ ನಂಬುತ್ತೇನೆ.

ಇಲ್ಲಂತೂ ಪ್ರತಿಯೊಬ್ಬರಿಗೂ ಅವರವರ ಆಸಕ್ತಿಗನುಗುಣವಾಗಿ ತಮ್ಮದೇ ಆದ ಒಂದು ಸ್ನೇಹವೃಂದವಿರುತ್ತದೆ. ಭಾರತದಲ್ಲಿ, ಶಾಲಾ ಕಾಲೇಜುಗಳ ಹಂತ ದಾಟಿದ ನಂತರ, ಸಂಸಾರದ ಜಂಜಡದಲ್ಲಿ ಸಿಕ್ಕು ಸ್ನೇಹದ ಸಂಕೋಲೆ ಸಡಿಲಾಗುವುದೇ ಹೆಚ್ಚಾದರೆ ಇಲ್ಲಿ ತದ್ವಿರುದ್ಧ. ಬಂಧು-ಬಾಂಧವರಿಂದ ದೂರವಿರುವುದರ ಕೊರತೆ ತುಂಬಿಕೊಳ್ಳಲೋ ಎಂಬಂತೆ ಇಲ್ಲಿ ನಾವು ಸ್ನೇಹಿತರ ಸಂಗಕ್ಕಾಗಿ ಹಾತೊರೆಯುತ್ತೇವೇನೊ ಅನ್ನಿಸುವುದಿದೆ.

ಅದಕ್ಕೆ ನಾವು ಹುಡುಕಿಕೊಳ್ಳುವ ನೆಪಗಳೂ ಹಲವಾರು. ಹುಟ್ಟುಹಬ್ಬವಾಗಬಹುದು, ವಿವಾಹ ವಾರ್ಷಿಕೋತ್ಸವವಿರಬಹುದು, ಹೊಸ ವರ್ಷ ಆಚರಣೆ, ಯಾವುದೂ ಇಲ್ಲವಾದರೆ ಸತ್ಯನಾರಾಯಣ ಪೂಜೆಯೇ ಆದೀತು. ಯುಗಾದಿ, ಗಣೇಶ, ದೀಪಾವಳಿಗಳಂತಹ ಹಬ್ಬಗಳಂತೂ ಸರಿಯೇ ಸರಿ. ಅದರ ಜೊತೆಗೆ ಇಲ್ಲಿಯ ಸ್ಥಳೀಯ ಆಚರಣೆಗಳಾದ ಥ್ಯಾಂಕ್ಸ್‌ಗಿವಿಂಗ್ ದಿನ, ಕ್ರಿಸ್‌ಮಸ್‌ಗಳಾದರೂ ಆದೀತು. ಒಟ್ಟಿನಲ್ಲಿ, ಎಲ್ಲರೂ ಒಂದೆಡೆ ಕಲೆತು, ಹಾಡಿ, ಹರಟಿ, ನಲಿಯಲು ಸಿಗುವ ಯಾವುದೇ ಅವಕಾಶವನ್ನೂ ನಾವು ವ್ಯರ್ಥವಾಗಲು ಬಿಡುವವರಲ್ಲ. ಹೊರಗೆ ಹಿಮ ಸುರಿಯುತ್ತಿದ್ದರೂ ಒಳಗೆ ಬೆಂಕಿಗೂಡಿನ ಸುತ್ತ ಸ್ನೇಹಿತರ ಗುಂಪಿನ ಜೊತೆ ಹರಟುತ್ತಾ, ನಗುತ್ತಿದ್ದರೆ ಎಷ್ಟೋ ಅರಕೆಗಳಿದ್ದರೂ ಈ ಬದುಕು ಸಹ್ಯ, ಸುಂದರ ಅನ್ನಿಸಿಬಿಡುತ್ತದೆ. ಪಾರ್ಟಿಗಳನ್ನು ಮುಗಿಸಿಕೊಂಡು ನಡುರಾತ್ರಿಯಲ್ಲಿ, ನಿದ್ದೆ ತುಂಬಿಕೊಂಡ ಕಣ್ಣುಗಳಿಂದ ಕಾರು ಚಲಾಯಿಸುವ ಕಷ್ಟವನ್ನು ತಪ್ಪಿಸಿಕೊಳ್ಳಲು 'ಸ್ಲೀಪ್ ಓವರ್ ಪಾರ್ಟಿ'ಯ ಮಜವೂ ಇದೆ. ಇಂತಹ ಪಾರ್ಟಿಗಳನ್ನು ನಾನು ಶಿವರಾತ್ರಿಯ ಜಾಗರಣೆಗೆ ಹೋಲಿಸುತ್ತೇನೆ. ರಾತ್ರಿ ಇಡೀ ಒಬ್ಬರೊಬ್ಬರ ಕಾಲೆಳೆಯುತ್ತಾ, ನಗು, ಹಾಸ್ಯ ಚಟಾಕಿ; ತೂಕಡಿಕೆ ಹೋಗಲಾಡಿಸಲು ನಡುನಡುವೆ ಕಾಫಿ-ಚಹ ಸರಬರಾಜು, ಅಗತ್ಯವಿದ್ದವರಿಗೆ ಇನ್ನಿತರ ಬಿಸಿ ಪಾನೀಯಗಳೂ ಇಲ್ಲದಿಲ್ಲ! ಬೆಳಗಿನ ಜಾವದಲ್ಲಿ ಯಾವಾಗಲೋ ಕಣ್ಣಿಗೆ ಒಂದಿಷ್ಟು ನಿದ್ದೆ

ಹತ್ತಿದರೆ ಉಂಟು, ಇಲ್ಲದಿದ್ದರೆ ಇಲ್ಲ. ಎಲ್ಲರೂ ಒಟ್ಟಿಗೆ ಸೇರಿ ಬೆಳಗಿನ ಭರ್ಜರಿ ಉಪಾಹಾರ ತಯಾರಿಸಿ, ಒಟ್ಟಿಗೆ ಸವಿದು, ಮನೆ ಕಡೆ ಮನಸ್ಸು ಹೊರಳುವ ಹೊತ್ತಿಗೆ ಆಗಲೇ ನಡು ಮಧ್ಯಾಹ್ನವೇ ಆಗಿಹೋಗಿರುತ್ತದೆ. ಇನ್ನು ಬೇಸಿಗೆಯ ಮೋಜು ಹೇಳುವುದೇ ಬೇಡ. ಹೊರಗೆ ಜಗದ ಭಾಗ್ಯದಂತೆ ಬಿಸಿಲು ಸುರಿಯುತ್ತಿದ್ದರೆ ಇಲ್ಲಿ ನಮ್ಮ ಚಟುವಟಿಕೆಗಳಿಗೆ ರೆಕ್ಕೆ ಮೂಡುತ್ತದೆ. ಯಾವುದಾದರೂ ಸುಂದರ ಜಾಗ ಅರಸಿಕೊಂಡು ಹೋಗಿ ಅಲ್ಲೇ ಬಿಡಾರ ಹೂಡಿ, ಆಡಿ, ನಲಿದು ಬಂದರೆ ಬದುಕು ಏಕತಾನತೆಯ ಪೊರೆ ಕಳಚಿಕೊಂಡು ಹೊಸದಾದ ಅನುಭವ!

ಅಮೆರಿಕದಲ್ಲಿ ಮೊದಲ ಕೆಲವು ದಿನಗಳು ನನ್ನ ಮಟ್ಟಿಗೆ ಪ್ರಯಾಸವೆನ್ನಿಸಿದರೂ, ನಂತರದ ದಿನಗಳು ಒಂದು ವ್ಯವಸ್ಥೆಯಡಿ ಸುಲಲಿತವಾಗಿಯೇ ಸಾಗಿದವು ಎನ್ನಬಹುದು. ಬಾಡಿಗೆ ಮನೆಯಿಂದ ನಮ್ಮದೇ ಆದ ಒಂದು ಪುಟ್ಟ ಮನೆಗೆ ಸ್ಥಳಾಂತರ, ಅಲ್ಲಿಂದ ಕಿತ್ತು ತಂದು ಈ ನೆಲದಲ್ಲಿ ನೆಟ್ಟ ಮಕ್ಕಳು ಹೊಸ ನೆಲಕ್ಕೆ ಅಂಟಿಕೊಂಡು ಬೆಳೆದಿದ್ದು, ಶಾಲಾಕಾಲೇಜುಗಳಲ್ಲಿ ಅವರ ಸಮಾಧಾನಕರ ಪ್ರಗತಿ, ನನ್ನ ಪುಸ್ತಕಗಳ ಪ್ರಕಟಣೆ – ಇದೂ ಇಂತಹ ಇನ್ನೆಲ್ಲವೂ ನಮ್ಮ ಬಾಳಿನ ನೆಮ್ಮದಿ ಹೆಚ್ಚಿಸಿದ ಕ್ಷಣಗಳು. ಹೀಗೆ ನಾವು ಅನಿವಾಸಿಗಳು, ಬದುಕಿನ ಸವಾಲುಗಳನ್ನು ಎದುರಿಸುತ್ತಾ, ನಮ್ಮ ದುಗುಡಗಳಿಗೆ ನಾವೇ ಸಾಂತ್ವನ ಹೇಳಿಕೊಳ್ಳುತ್ತಾ, ಬಿಟ್ಟು ಬಂದ ನಾಡಿನ ಸವಿನೆನಪುಗಳನ್ನು ಎದೆಗೂಡಿನಲ್ಲಿ ಜತನವಾಗಿ ಕಾಪಾಡಿಕೊಂಡು, ನಾವೇ ಬದುಕು ಕಟ್ಟಿಕೊಂಡ ಈ ಹೊಸ ನೆಲದಲ್ಲಿ ನೆಲೆ ಹುಡುಕಿಕೊಳ್ಳುತ್ತಾ, ಅಭದ್ರ ಮನೆ–ಮನಸ್ಸುಗಳನ್ನು ಸಾವರಿಸಿಕೊಳ್ಳುತ್ತಾ ವಿಶ್ವಮಾನವರಾಗುವ ಕನಸು ಕಾಣುತ್ತೇವೆ.



ಇಲ್ಲಿ ಜೀವನ ಅಂದ್ರೇ ಹೀಗೆ

– ವಲ್ಲೀಶ ಶಾಸ್ತ್ರಿ

'ಅಕ್ಕಿ ಯೋಗದ ಲೇಸು, ಮೆಕ್ಕೆ ಹಾಡಿಯು ಲೇಸು
ಮಕ್ಕಳನು ಹೆರುವ ಸತಿ ಲೇಸು, ಜಗಕೆಲ್ಲಾ
ರೊಕ್ಕವೇ ಲೇಸೆಂದ ಸರ್ವಜ್ಞ'

ಈ ಸರ್ವಜ್ಞ ವಚನದಷ್ಟೇ ಸತ್ಯ ನಮ್ಮ ಈ ವಲಸೆಗೆ ಕಾರಣ. ಹಣವೊಂದಿದ್ದರೆ ನಮ್ಮ ಅಪ್ಪ ಅಮ್ಮ ಊರಿಂದ ಹೊರಗೆ ಹೋಗುಕ್ಕೆ ಬಿಡುತ್ತಿದ್ದರೋ ಇಲ್ಲವೋ. ಕೆಲವರಿಗಿದು ಅನಿವಾರ್ಯ. ಕೆಲವರಿಗಿದು ಕರ್ಮ. ಯಾವ ದೇಶಾನೋ ಏನೋ... ಯಾವೂರ್ಗೆ ಬಂದು ಸೇರ್ಕೊಂಡ್ಬಿಟ್ಟಿದೀವಿ ಅಂತ ಒಮ್ಮೊಮ್ಮೆ ಅನ್ಸುತ್ತೆ. ಬೆಳಿಗ್ಗೆ ಎಬ್ಬಿಸೋಕೆ ಮನೆ ಮುಂದೆ ತರಕಾರಿಯವನ ರಾಗದ ಕೂಗಿಲ್ಲ, ಹಾಲಿನವನು ಬಂದು ಮನೆ ಕಾಲಿಂಗ್ ಬೆಲ್ ಮಾಡೋಲ್ಲ, ಕೆಲಸದವಳು ಬಂದು 'ರೂಮು ಕ್ಲೀನ್ ಮಾಡ್ಬೇಕಣ್ಣ, ಸ್ವಲ್ಪ ಏಳ್ತೀಯಾ' ಅನ್ನೋದಿಲ್ಲ. ಮೂಕಿ ಚಿತ್ರ 'ಪುಷ್ಪಕ್'ದಲ್ಲಿ ಬರುವ ಒಂದು ದೃಶ್ಯ ಜ್ಞಾಪಕಕ್ಕೆ ಬರುತ್ತೆ. ನಾಯಕ ಯಾವಾಗಲೂ ಗಿಜಿಗಿಜಿ ಶಬ್ದ ಇರೋ ಪ್ರದೇಶದಿಂದ ಬಂದು ಏನೂ ಗಲಾಟೆ ಇಲ್ಲದೇ ಇರೋ ಒಂದು ರೂಮಿನಲ್ಲಿರುತ್ತಾನೆ. ರಾತ್ರಿ ನಿದ್ದೆ ಬರಲಿಲ್ಲ ಅಂತ ಮಾರನೇ ದಿವಸ ಗಿಜಿಗಿಜಿ ಪ್ರದೇಶಕ್ಕೆ ಹೋಗಿ ಅಲ್ಲಿನ ಗಿಜಿಗಿಜಿ ಶಬ್ದಾನ ಒಂದು ಟೇಪಲ್ಲಿ ರೆಕಾರ್ಡ್ ಮಾಡಿಕೊಂಡು ಬಂದು ಅದನ್ನ ಹಾಕ್ಕೊಂಡು ಮಲಕೋತಾನೆ. ಹಾಯಾಗಿ ನಿದ್ದೆ ಬರುತ್ತೆ. ಹೊಸದಾಗಿ ಅಮೆರಿಕೆಗೆ ಬಂದಾಗ ಇದೇ ಅನುಭವ ಆಗುತ್ತೆ.

ನಮ್ಮ ಹಳ್ಳಿ ಬಿಟ್ಟು ಹೊರಟಾಗಲೇ 40 ವರ್ಷ ಆಯ್ತು. ಕರ್ನಾಟಕದಲ್ಲಿ ಬೆಂಗಳೂರು ಸೇರಿ ಬೇರೆ ಬೇರೆ ನಗರಗಳಲ್ಲಿ ಜೀವನ ಆಯ್ತು. ಅರಬ್ ದೇಶ ಆಯ್ತು, ಯುರೋಪ್ ದೇಶಗಳಾದವು; ಕಡೆಗೆ ಅಮೆರಿಕೆಗೆ ಬಂದಿದ್ದೂ ಆಯ್ತು. ಇದರ ಹಿಂದೆ ಇದ್ದಿದ್ದು ಒಂದೇ ಉದ್ದೇಶ. ತುಂಬಾ ಹಣ ಮಾಡೋದು, ಅಪ್ಪನ ಸಾಲ ತೀರಿಸೋದು ಅಂತ. ಒಂದು ವಿಚಿತ್ರ ಅಂದರೆ ನಮ್ಮಪ್ಪನ ಪ್ರತಿಕ್ರಿಯೆ ಬೇರೆ ಬೇರೆ ದೇಶಗಳಿಗೆ ಹೊರಟಾಗ ಬೇರೆ ಬೇರೆ ತರಹ ಇದ್ದಿದ್ದು. ನಮ್ಮಪ್ಪಾನೋ ಕಟ್ಟಾ ಬ್ರಾಹ್ಮಣವಾದಿ. ಅರಬ್ ದೇಶಕ್ಕೆ ಹೊರಟಾಗ, 'ಸಾಲ ತೀರ್ದೇ ಹೋದ್ರು ಪರ್ವಾಗಿಲ್ಲ, ನೀ ಮಾತ್ರ ಆ ದೇಶಕ್ಕೆ ಹೋಗ್ಬೇಡ' ಅಂತ ಕಣ್ಣೀರಿಟ್ಟಿದ್ದರು. ಯುರೋಪಿಗೆ ಹೊರಟಾಗ, 'ಪರವಾಗಿಲ್ಲ ಬಿಡು,

ಬಾಯಿಗೆ ಅಕ್ಕಿ ಕಾಳು ಹಾಕುಕ್ಕಾದರೂ ಬರೋ ಅಷ್ಟು ಹತ್ತಿರದಲ್ಲಿ ಇದೀಯ' ಅಂದ್ರು. ಅದೇ ಅಮೆರಿಕೆಗೆ ಹೊರಟಾಗ 'ದೂರವಾಗಿ ಬಿಟ್ಟೆ ಮಗು, ನನಗ್ಯಾರ್ ಅಕ್ಕಿ ಕಾಳು ಹಾಕ್ತಾರೆ' ಅಂದಿದ್ರು. ಆದರೆ ಅಮ್ಮ ಆಶಾವಾದಿ. 'ಮಗ ಹ್ಯಾಗಾದ್ರು ಮಾಡಿ ಮನೆ ಸಾಲ ತೀರ್ಸಿದರೆ ಸಾಕು. ಸಾಕಾಗಿದೆ ಈ ಸಾಲ ಹೊರೆ ಹೊತ್ಕೊಂಡು' ಅನ್ನೋ ಅಂಬೋಣ ಅಮ್ಮಂದು. ಹಾಗಾಗಿ ನನಗೂ ದೇಶ ಬಿಡೋ ದೌರ್ಭಾಗ್ಯ ದೊರೀತು. ಅರಬ್ ದೇಶದಲ್ಲಿ ಕೆಲಸ ಮಾಡಿದ್ದೂ ಆಯ್ತು, ಅವಮಾನಗಳ ಸಹಿಸ್ಕೊಂಡಿದ್ದೂ ಆಯ್ತು, ಹಣ ಮಾಡಿದ್ದೂ ಆಯ್ತು, ಸಾಲ ತೀರ್ಸಿದ್ದೂ ಅಲ್ದೇ, ಅಪ್ಪ ಅಮ್ಮಂಗೆ ಒಂದು ಸೂರು ಕಟ್ಟಿಸಿದ್ದೂ ಆಯ್ತು. ಅರಬ್ ಒಂದೇ ಅಲ್ಲ; ಇಟಲಿ, ಇಂಗ್ಲೆಂಡ್, ಸಿಂಗಪೂರ್ ದೇಶಗಳಲ್ಲೂ ಕೆಲಸ ಮಾಡಿ ಇನ್ನೇನು ಬೆಂಗಳೂರ್ಗೆ ಬಂದು ಒಳ್ಳೇ ಮನೆ ಕಟ್ಕೊಂಡು ಸೆಟ್ಲ್ ಆಗೋಣ ಅನ್ನೋ ಅಷ್ಟರ ಒಳಗೆ ಅಮೆರಿಕಾದಿಂದ ಕೆಲಸಕ್ಕೆ ಕರೆ ಬಂತು.

ಅರಬ್ ದೇಶಕ್ಕೆ ಹೊರಟಾಗ ನನ್ನ ಮನಸ್ಸಿನಲ್ಲಿದ್ದಿದ್ದೂ ಬರೆ ದುಡ್ಡು ಮಾಡ್ಕೊಂಡು ಬರಬೇಕೂ ಅಂತ. ಅಲ್ಲಿ ಸೆಟಲ್ ಆಗೋ ಪ್ರಶ್ನೆಯೇ ಬರುವುದಿಲ್ಲ ಹಾಗೂ ಮನಸ್ಸಿನಲ್ಲಿ ಸುಳಿಯುವುದೂ ಇಲ್ಲ. ಯುರೋಪಿಗೆ ಹೋದಾಗಲೂ ಅಷ್ಟೆ. ಅಮೆರಿಕಾಗೆ ಹೊರಟಾಗಲೂ ನನ್ನ ಮನಸ್ಸಿನಲ್ಲಿದ್ದಿದ್ದೂ ಅದೇ. ನನಗೆ ಬರೋ ಸಂಬಳಾನ ಆಗಿನ ಕಾಲಕ್ಕೆ ತಕ್ಕಂತೆ, 25ರಿಂದ ಗುಣಿಸಿ ಎಷ್ಟು ಲಕ್ಷ ರೂಪಾಯಿ ಅಂತ ಜಂಬದಿಂದ ಹೇಳ್ಕೊಂಡು ಇಷ್ಟು ವರ್ಷದಲ್ಲಿ ಇಷ್ಟು ಉಳಿಸ್ಬೋದು, 4–5 ವರ್ಷದಲ್ಲಿ ಬಂದ್ಬಿಡ್ತೀನಿ ಅಂತ ಆಶ್ವಾಸನೆಯನ್ನು ಅಪ್ಪ ಅಮ್ಮಂಗೆ ಕೊಟ್ಟಿದ್ದೂ ಆಯ್ತು. ಮಗಳು 5ನೇ ಕ್ಲಾಸಿಗೆ ಹೋಗೋ ಹೊತ್ತಿಗೆ ಖಂಡಿತವಾಗೂ ಬೆಂಗಳೂರಿಗೆ ಬಂದು ಸೆಟಲ್ ಆಗ್ತೀವಿ ಅಂತ, ಅಪ್ಪ ಅಮ್ಮ ಏನು, ಅತ್ತೆ ಮಾವಂಗೂ ಹುಸಿ ಭರವಸೆ ಕೊಟ್ಟಿದ್ದಾಯ್ತು. ಅರಬ್ ದೇಶಕ್ಕೆ ಹೊರಟಾಗ ನಮ್ಮ ಹತ್ತಿರದ ಸಂಬಂಧದೋರ್ಗೆ ಒಂದು ರೀತಿ ಖುಷಿ ಇತ್ತು. ಏನೋ ಅರಬ್ ದೇಶಕ್ಕೆ ಹೋಗಿ ಚಿನ್ನಾನೇ ತಂದ್ಬಿಡ್ತಾನೇ, ನಮ್ಮ ಕಷ್ಟಕ್ಕೆಲ್ಲಾ ಪರಿಹಾರ ಆಗುತ್ತೆ ಅಂತ ಇರ್ಬೇಕು. ಅದೇ ನನ್ನ ಸ್ನೇಹಿತರಲ್ಲಿ ಅರಬ್ ದೇಶಕ್ಕೆ ಹೊರಟಾಗ ಇದ್ದ ಖುಷಿ, ಅಮೆರಿಕಕ್ಕೆ ಹೊರಟಾಗ ಇರಲಿಲ್ಲ. ಇದ್ರೂ ಅವರ ಮಾತಿನ ಧಾಟಿಯಲ್ಲೇ ಹೇಳ್ತಾ ಇದ್ರು, 'ನೀನು ಬಹಳ ದೂರ ಹೋಗ್ತಾ ಇದೀಯ. ಇನ್ನೇನು ವಾಪಸ್ ಬರೋಲ್ಲಾ ಬಿಡು' ಅಂತ. ಕಮ್ಯುನಿಸ್ಟ್ ಸ್ನೇಹಿತರುಗಳಂತೂ 'ದೇಶ ದ್ರೋಹ ಮಾಡ್ತಾ ಇದ್ದೀಯ, ಬಂಡವಾಳಶಾಹಿ ದೇಶಕ್ಕೆ ಹೋಗ್ತಾ ಇದೀಯಾ' ಅಂತೆಲ್ಲಾ ಹೇಳ್ತಾ ಇದ್ರು. ನನಗೆ ಅಮೆರಿಕೆಗೆ ಹೊರಟಾಗ ಇಷ್ಟು ದೂರ ಹೋಗ್ತಾ ಇದೀನಿ, ಶಾಶ್ವತವಾಗಿ ಊರು ಬಿಡ್ತೀನಿ ಅಥವಾ ಇಷ್ಟು ವರ್ಷ ಅಮೆರಿಕೆಯಲ್ಲಿ ಇರ್ತೀನಿ ಅಂತ ಯೋಚನೇನೆ ಬಂದಿರಲಿಲ್ಲ.

'ವಲಸೆಗಾರರ ನೆಲ' ಎಂದೇ ಕರೆಯಲ್ಪಡಲಾಗುವ ಈ ದೇಶಕ್ಕೆ ವೀಸಾಗೆ ಅಂತ ಚೆನ್ನೈನಲ್ಲಿ ಗಂಟೆಗಟ್ಟಲೆ ಬೆಳಗಿನಿಂದ ಬಿಸಿಲಲ್ಲಿ ಕ್ಯೂನಲ್ಲಿ ನಿಂತು ಬೆವತುಗೊಂಡು, ಒಳಗೆ ಹೋದಾಗ, ಕೌಂಟರ್ನಲ್ಲಿ ಇರೋ ದೇಸಿ ತನ್ನ ತಾಯ್ನಾಡನ್ನೇ ಆಕ್ರಮಣಕಾರರಿಂದ

ರಕ್ಷಿಸ್ತಿರೋ ಹಾಗೆ ಒರಟಾಗಿ ನಮ್ಮ ಸರ್ಟಿಫಿಕೇಟ್ ನೋಡಿ ಗರ್ಭಗುಡಿಗೆ ಕಳಿಸಿದಾಗಲೇ ಅಮೆರಿಕಾದ ಮೊದಲ ರುಚಿ ಸಿಗುತ್ತೆ. ವೀಸಾ ಸಿಕ್ಕಿ ಮುಂದಿನ ಹೆಜ್ಜೆ ಪ್ರಾರಂಭವಾಗೋದು ವಿಮಾನದ ಬೆಲ್ಟ್ ಸೊಂಟಕ್ಕೆ ಸುತ್ಕೊಂಡು, ಕೈ ಕಾಲು ಅಲ್ಲಾಡಿಸಕ್ಕೂ ಆಗದೇ ಇರೋ ಇಕ್ಕಟ್ಟಿನಲ್ಲಿ, 16ಕ್ಕೂ ಹೆಚ್ಚು ಗಂಟೆಗಳ ಪ್ರಯಾಣ ಮಾಡಿದಾಗ. ನಂತರ ಕಡೆಗೂ ನಮ್ಮ ತಾಣಕ್ಕೆ ಬಂದು ಇಳೀತೀವಿ. ಇನ್ನೇನು ಬಂದ್ನಲ್ಲಾ ಅಂತ ಖುಷೀಲಿ ಇರೋವಾಗಲೇ ಇನ್ನೊಂದು ಕ್ಯೂ ಪ್ರಾರಂಭ. ಅದೇ immigration stamping. ಅದೆಲ್ಲಾ ಮುಗಿಸ್ಕೊಂಡು ಹೊರಗಡೆ ಬಂದು ಜಪಾನಿನ ದೊಡ್ಡ ಕಾರುಗಳಲ್ಲಿ ಕೂತು, ನಮಗೆ ಅಭ್ಯಾಸವಿರದ ಸೀಟ್ ಬೆಲ್ಟ್ ಹಾಕ್ಕೊಂಡು, ಕೇಳರಿಯದ ವೇಗದಲ್ಲಿ ಬಲ ಭಾಗದ ರಸ್ತೆಯಲ್ಲಿ ಹೋದಾಗಲೇ ಮೊದಲನೇ ಆಘಾತ. ತುಂಬಾ ದೂರ ಇಲ್ಲ, ಇಲ್ಲೇ ಇದೇ ಅಂತ ಏರ್ಪೋರ್ಟಿಂದ 2 ಗಂಟೆ ಪ್ರಯಾಣ ಮಾಡಿಸಿ, ಬರ್ತಾ ದಾರೀಲಿ 'ಪೆಟ್ರೋಲ್'ಗೆ, ಅಲ್ಲ, 'ಗ್ಯಾಸ್'ಗೆ ನಿಲ್ಲಿಸೋದು.

ಹೀಗೆ ಆಘಾತಗಳ ಮೇಲೆ ಆಘಾತ ಆಗ್ತಾ ಹೋಗುತ್ತೆ. ಇಂತಹ ಆಘಾತಗಳು ಈ ದೇಶಾನ ಧರೆಗಿಳಿದ ಸ್ವರ್ಗದಂಥ ಭಾವನೆ ಬರಿಸುತ್ವೆ. ಇಲ್ಲಿನ ಜನ ಸಣ್ಣ ಸಣ್ಣ ವಿಚಾರಗಳಿಗೆಲ್ಲಾ `Sorry', 'Excuse me' ಅಂತ ಔಪಚಾರಿಕವಾಗಿ ಮಾತನಾಡೋದು ನೋಡಿ ಇಲ್ಲಿನ ಜನ ಎಂತಹ ಗೌರವಸ್ತರು ಅನ್ನಿಸುತ್ತೆ. ಈ ಪರ್ವ 'ಮಧುಚಂದ್ರ'ದ ಪರ್ವ ಇದ್ದ ಹಾಗೆ. `Everything is Just Great' ಅನ್ನೋ ಕಾಲ. ಕಿರಾಣಿ ಅಂಗಡಿಗಳಿಗೆ ಹೋದಾಗ, ರೆಸ್ಟೋರೆಂಟ್ಗಳಿಗೆ ಹೋದಾಗ ಅಲ್ಲಿಯ ಸೈಜುಗಳನ್ನು ನೋಡಿ ಪ್ರಭಾವಿತರಾಗ್ತೇವೆ. ಕಾಫಿ ಕಪ್ ದೊಡ್ಡದು, Burger ದೊಡ್ಡದು, ಕುಡಿಯೋ cool drink ಕಪ್ ದೊಡ್ಡದು, ಕಾರು ದೊಡ್ಡದು, ರಸ್ತೆ ದೊಡ್ಡದು, ಮನೆ ದೊಡ್ಡದು, ಕಲ್ಪನೆಗೂ ಮೀರಿದಂತ ಲೋಕಕ್ಕೆ ಬಂದ ಅನುಭವ. ನಮ್ಮೂರಲ್ಲಿ ಕಂಡರಿಯದ ವೇಗದಲ್ಲಿ ಇಲ್ಲಿನ ಕಾರುಗಳನ್ನು ಡ್ರೈವ್ ಮಾಡುವಾಗ ಒಂದು ವಿಹಂಗಮ ಲೋಕಕ್ಕೇ ಕರೆದುಕೊಂಡು ಹೋಗುತ್ತೆ. ಬಿಸಿ ಬಿಸಿ ಪಿಡ್ಜಾಗಳ ಜೊತೆ ಸೋಡಾ ಕುಡೀತಾ ಇದ್ದರೆ ಅದರ ಮಜಾನೇ ಬೇರೆ.

ಬೀರ್ ಕುಡಿಯೋದು ಇಂಡಿಯಾದಲ್ಲೇ ಒಂದು ತರಹ, ಅಮೆರಿಕಾದಲ್ಲೇ ಒಂದು ತರಹ. ಇಂಡಿಯಾದಲ್ಲಿ ಬೀರ್ ಕುಡಿಯೋ ಪಾರ್ಟಿ ಅಂದರೆ ಕ್ಲಬ್ನಲ್ಲಿ ನಡೆಯೋ ಪಾರ್ಟಿಗಳು, ಬೀರ್ ಕುಡಿಯೋದು ಇಲ್ಲಿನ ಸಮಾಜದಲ್ಲಿ ಒಪ್ಪಿಕೊಂಡಂತೆ ಕಂಡು ಬಂದು ಎಲ್ಲರ ಎದುರಿಗೆ ಬೀರು ಬಾಟಲ್ಗಳನ್ನು ಎತ್ತುವಾಗ ಒಂದು ಮುಕ್ತ ವಾತಾವರಣದಲ್ಲಿ ಕುಡಿದ ಹಾಗೆ ಆಗುತ್ತೆ. ಅದೇ ನಮ್ಮೂರುಗಳಲ್ಲಿ ಬೀರ್ ಕುಡಿಯುವಾಗ ಯಾವುದೋ ಸಮಾಜಕ್ಕೆ ಒಪ್ಪದ ಕೆಲಸ ಮಾಡ್ತಾ ಇದೀವೇನೋ ಅನ್ನುವ ಭಾವನೆ. ಹೊಸದಾಗಿ ಬಂದಾಗ ಇಂತಹ ಮುಕ್ತ ವಾತಾವರಣ, ಬೀರು ಪಿಡ್ಜಾಗಳನ್ನು ಆಪ್ತ ಸ್ನೇಹಿತರನ್ನಾಗಿ ಮಾಡಿಸಿಬಿಡುತ್ತದೆ.

ಬೇರು ಸೂರು

ಆದರೆ ಕಷ್ಟ ಪ್ರಾರಂಭವಾಗೋದು ಯಾವಾಗ ಅಂದರೆ ನಮ್ಮ ಇಂಗ್ಲೀಷ್ ಬೇರೆಯವರ್ಗೆ ಅರ್ಥವಾಗದೇ ಇರೋವಾಗ, ಇನ್ನೊಬ್ಬರ ಜೊತೆಗಿನ ಸಂಭಾಷಣೆಗಳಲ್ಲಿ ತೊಡಕುಗಳು ಉಂಟಾದಾಗ. ಇಲ್ಲಿ ಇಂಗ್ಲೀಷೇ ಬೇರೆ ಭಾಷೆನೇನೋ ಅನ್ನಿಸುವಷ್ಟು ಸ್ಥಿತಿಗೆ ಬರ್ತೀವಿ. ಕಾರಣ ನಮ್ಮ ಉಚ್ಚಾರಣಾ ರೀತಿ, ಬಳಸುವ ಪದಗಳು. 'ಪೆಟ್ರೋಲ್–ಗ್ಯಾಸ್', 'ಒವರ್ ಟೇಕ್–ಪಾಸ್ ಬೈ', 'ರಬ್ಬರ್–ಎರೇಸರ್' 'ಲೆಟ್ಯೂಸ್–ಲೆಟಸ್' ಹೀಗೆ ಹಲವಾರು. ವಿಮಾನದಲ್ಲಿ ನೀವು ಕೂತರೆ ನಿಮ್ಮ ಪಕ್ಕದ ಸೀಟು ಭರ್ತಿಯಾಗೋದು ಕಟ್ಟ ಕಡೇಗೆ ಅನ್ನೋದನ್ನ ಅರಿತಾಗ ಆಫ್ರಿಕಾದಲ್ಲಿ ಗಾಂಧಿ ಎಷ್ಟು ಅಪಮಾನಗಳನ್ನ ಸಹಿಸಿಕೊಂಡಿದ್ರು ಅಂತ ಅನ್ಸುತ್ತೆ. ಇಲ್ಲಿಯೋರನ್ನ ನೋಡಿದರೆ ಸ್ವಲ್ಪ ಉದ್ಧಟರು ಅನ್ಸುತ್ತೆ. ಇಲ್ಲಿನ ಜನ ಬಹಳ ಭಿನ್ನವಾಗಿ ಕಾಣುಕ್ಕೆ ಶುರುವಾಗುತ್ತಾರೆ. ಎಲ್ಲಾ ಕೃತಕ ಅನ್ನಿಸುತ್ತೆ. ಬಹಳ ಔಪಚಾರಿಕವಾಗಿ ಕಾಣ್ತಾರೆ. ಎಲ್ಲರೂ ಮುಖವಾಡ ಹಾಕ್ಕೊಂಡಿದಾರೇನೋ ಅನ್ಸುತ್ತೆ. ನನ್ನ ಒಬ್ಬ ಸ್ನೇಹಿತ ಹೇಳುವ ರೀತಿ `Americans are friendly, but not your friend' ಅಂತ ಅರಿವಾಗ್ತಾ ಹೋಗುತ್ತೆ. ಇದರಿಂದಾಗಿ ಮನಸ್ಸಿನಲ್ಲಿ ಸಿಡುಕು, ನಿರಾಶೆ, ತವಕ, ದುಃಖ, ಅತೃಪ್ತಿ ತೋರ್ಪಟ್ಟು, ಮನಸ್ಸಿನ ತಾಳ್ಮೆಗೆಡುತ್ತೆ. ಹೊಸ ಹೊಸ ನಿಯಮ ಕಟ್ಟಳೆಗಳನ್ನು ಕಲಿಯೋದು ಕಷ್ಟವಾಗುತ್ತೆ. ಹೊಸ ಜಾಗ ಸುಖದ ಸುಪ್ಪತ್ತಿಗೆಯಲ್ಲ ಅಂತ ನಿಧಾನವಾಗಿ ಅರಿವಾಗುತ್ತಾ ಹೋಗುತ್ತೆ. ತೌರಿನ ಗಾಳಿ, ಬೆಳಕು, ಬಣ್ಣ ಮತ್ತು ಶಬ್ದಗಳಿಂದ ವಂಚಿತರಾಗ್ತೀವಿ. ಅಮೆರಿಕ ಒಂದು ಕನಸಿನ ಲೋಕ ಎನ್ನೋ ಭ್ರಮೆ ಕಡಿಮೆ ಆಗ್ತಾ ಹೋಗುತ್ತೆ. ಹಾಸ್ಯ ಪ್ರಜ್ಞೆ ಕಡಿಮೆ ಆಗ್ತಾ ಹೋಗುತ್ತೆ. ಮನ ತೌರಿಗಾಗಿ ಹಂಬಲಿಸುತ್ತೆ.

ಮುಂದಿನ ಪರ್ವ ಪ್ರಾರಂಭವಾಗುವುದು ಯಾವಾಗ ಅಂದರೆ ಯಾವಾಗ ತೌರಿನ ಮಣ್ಣಿನ ಸೊಗಡಿನ ಪರಿಮಳ ಈ ನೆಲದಲ್ಲಿ ಕಾಣಿಸುವುದಕ್ಕೆ ಶುರುವಾಗುತ್ತೋ ಆವಾಗ. ಈ ಪರ್ವದಲ್ಲಿ, ಇಲ್ಲಿ ನಡೆಯುವ ಕಾರ್ಯಗಳು ಮನಸ್ಸಿಗೆ ಹಿಡಿಸ್ತಾ ಹೋಗುತ್ವೆ. ಎಲ್ಲೋ ಬಂದು ಕಳೆದು ಹೋಗಿದೀನಲ್ಲ ಅನ್ನೋ ಭಾವನೆ ಕಮ್ಮಿ ಆಗ್ತಾ ಹೋಗುತ್ತೆ. ಕ್ರಿಕೆಟ್ ಮರೀತಾ ಹೋಗಿ ಅಮೆರಿಕನ್ ಫುಟ್ಬಾಲ್ನಲ್ಲಿ ಆಸಕ್ತಿ ಬರ್ತಾ ಹೋಗುತ್ತೆ. ಈ ಸ್ಥಿತೀಲಿ ನಮ್ಮ ಸಂಸ್ಕೃತಿಗೂ ಇಲ್ಲಿನ ಸಂಸ್ಕೃತಿಗೂ ಹೋಲಿಸಿ ನೋಡ್ತೀವಿ. ಯಾವುದು ಒಳ್ಳೇದು, ಯಾವುದು ಕೆಟ್ಟದು ಅನ್ನೋದನ್ನ ಹುಡುಕ್ತೀವಿ. ಹಾಸ್ಯ ಪ್ರಜ್ಞೆ ವಾಪಸ್ ಬರುವುದಕ್ಕೆ ಶುರುವಾಗುತ್ತೆ. ಇಲ್ಲಿಯ ಸಂಸ್ಕೃತಿನ ಅರ್ಥ ಮಾಡಿಕೊಳ್ಳೋಕೆ ಶುರುಮಾಡ್ತೀವಿ. ನಿಜ ಸ್ಥಿತಿ ಅರ್ಥವಾಗ್ತಾ ಹೋಗುತ್ತೆ. ಇಲ್ಲಿನ ಸಂಸ್ಕೃತಿ, ಕಲೆ, ನಡತೆಗಳಿಗೆ ಹೊಂದಿಕೊಂಡು ಉಚ್ಚಾರಣೆಯನ್ನೂ ಬದಲಾಯಿಸ್ಕೊಂಡು ಜೀವನ ಮಾಡುವುದನ್ನ ಕಲಿತ್ಕೋತೀವಿ. ಹೊಸ ಸಂಸ್ಕೃತಿಯ ಸಾಗರದಲ್ಲಿ ಮುಳುಗಿ ಅಲ್ಲಿಯ ಪದ್ಧತಿ, ಮೌಲ್ಯ ಮತ್ತು ನಂಬಿಕೆಗಳನ್ನ ಅನುಭವಿಸಿದಾಗಲೇ ಹೊಸ ಸಂಸ್ಕೃತಿಗೆ ಹೊಂದಿಕೊಳ್ಳುವುದು. ಹಾಗೆ ಮಾಡುವಾಗ ನಮ್ಮ ಸಂಸ್ಕೃತಿ ನಮ್ಮ ಕಣ್ಣೆದುರೇ ಅನ್ಯ ಸಂಸ್ಕೃತಿಗಳ ಪ್ರವಾಹದಲ್ಲಿ ಮರೆಯಾಗುತ್ತಿದ್ದರೂ ಅಸಹಾಯಕರಾಗಿ ನಿಲ್ಲುತ್ತೇವೆ. ನಮ್ಮ ಸಂಸ್ಕೃತಿ ಉಳಿಸ್ಕೊಳ್ಳೋ

ಪ್ರಯತ್ನದಲ್ಲಿ ಮಕ್ಕಳ ಸ್ವಾತಂತ್ರ್ಯವನ್ನೇ ಬಲಿ ತಗೆದುಕೊಳ್ಳುತ್ತೇವೆ ಅಂತ ಅನ್ಸುತ್ತೆ. ಮಕ್ಕಳನ್ನ ಅವರಿಗೆ ಇಷ್ಟವಿಲ್ಲದೆ ಹೋದರೂ, ಕನ್ನಡ ಕಲಿ, ಸಂಗೀತ, ನೃತ್ಯ, ಬಾಲವಿಹಾರ ಅಂತ ಮಕ್ಕಳ ವಾರದ ರಜೆ ದಿನಗಳನ್ನೆಲ್ಲಾ ಭರ್ತಿ ಮಾಡ್ತೀವಿ. ಮಕ್ಕಳಿಗೂ ಎಂತಹ ಒತ್ತಡ ತರ್ತೀವಿ ಅಂತ ಅನ್ಸುತ್ತೆ. ದಿನದ 24 ಘಂಟೆಗಳಲ್ಲಿ 8ರಿಂದ 10ಕ್ಕೂ ಹೆಚ್ಚು ಘಂಟೆಗಳು ಅನ್ಯ ಸಂಸ್ಕೃತಿಯ ಮಕ್ಕಳ ಜೊತೆ ಆಟ ಪಾಠ ಎಲ್ಲ ಮಾಡಿ ವಾರಾಂತ್ಯದಲ್ಲಿ ನಮ್ಮ ಸಂಸ್ಕೃತಿ ಉಳಿಸಿ ಅಂತ ಮಕ್ಕಳಿಗೆ ಪಾಠ ಮಾಡ್ತೀವಿ.

ಇಲ್ಲಿ ಬದುಕುವ ರೀತಿ ಬೇರೆ ದೇಶಗಳಿಗೆ ಹೋಲಿಸಿದರೆ ನಿರಾತಂಕ ಅನ್ನಿಸಬಹುದು. ಉಚ್ಚ ಜೀವನ ಗುಣಮಟ್ಟದಂತಹ ಕೆಲ ವಿಚಾರಗಳಲ್ಲಿ ಅದು ನಿಜವಾದರೂ, ಬಹುತೇಕ ಅಮೆರಿಕನ್ನರು ಹೆಚ್ಚು ಗಂಟೆಗಳ ಕಾಲ ಉತ್ಪಾದಕ ಕೆಲಸ ಮಾಡ್ತಾರೆ. ಇನ್ನೊಂದು ದೇಶಕ್ಕೆ ಹೋಲಿಸಿದರೆ ಇಲ್ಲಿನ ಜನಜೀವನ ಕ್ಷಿಪ್ರಗತಿಯಲ್ಲಿ ನಡೆಯುತ್ತೆ. ಈ ದೇಶದ ಉದ್ಯೋಗ ನೈತಿಕತೆ ಬಲಿಷ್ಠವಾದದ್ದು. ಇಲ್ಲಿನ ಉದ್ಯಮ ಸ್ಪರ್ಧಾತ್ಮಕವಾದದ್ದು. ಆದ್ದರಿಂದ ಬಹುತೇಕ ಉದ್ಯಮಗಳಲ್ಲಿ ನೌಕರರಿಗೆ ಸಿಗುವ ಸಂಬಳವಲ್ಲದೇ, ರಜಾ ದಿನಗಳು, ವೈದ್ಯಕೀಯ ಹಾಗೂ ದಂತ ವೈದ್ಯಕೀಯ ವಿಮೆ ಹೀಗೆ ಹಲವಾರು ಸವಲತ್ತುಗಳು ಸಿಗುತ್ತವೆ. ಒಂದು ರಸ್ತೆ ದಾಟುವುದರಿಂದ ಹಿಡಿದು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನಕ್ಕೆ ಇರುವ ಕಟ್ಟಳೆ, ನಿಯಮಗಳನ್ನು ನೋಡಿ ಆಶ್ಚರ್ಯವಾಗುತ್ತದೆ. ಇಲ್ಲಿನ ಸಂಸ್ಕೃತಿ ಒಂದು ರೀತಿಯ 'ಚರ ಸಂಸ್ಕೃತಿ'. ಇಲ್ಲಿನ ಜನ ತಮ್ಮ ವಾಸ ಸ್ಥಳಕ್ಕಾಗಲೀ, ಹುಟ್ಟೂರಿಗಾಗಲೀ ಭಾವಪರವಶರಾಗಿ ಉದ್ವೇಗಕ್ಕೆ ಒಳಗಾಗುವುದು ಕಮ್ಮಿ. ಉದ್ಯೋಗಾರ್ಥ ಊರಿಂದ ಊರಿಗೆ ಸ್ಥಳಾಂತರಿಸಲು ಸಿದ್ಧರಿರುತ್ತಾರೆ. ಇಲ್ಲಿನ ಧಾರ್ಮಿಕ ಸ್ವಾತಂತ್ರ್ಯ ಇಲ್ಲಿನ ಸಂಪ್ರದಾಯವಿದ್ದರೂ, ಯಾರು ಇಲ್ಲಿನ ಸಂಸ್ಕೃತಿಯನ್ನು ಕಷ್ಟ ಪಟ್ಟು ಕಲಿತು ಇಲ್ಲಿಯವರ ಜೊತೆ ಬೆರೀತಾರೋ ಅವರನ್ನ ಇಲ್ಲಿನ ಜನ ಗೌರವಿಸ್ತಾರೆ. ಹೀಗೆ ಜೀವನ ಸಾಗ್ತಾ ಹೊಸ ಸಂಸ್ಕೃತಿಗೆ, ಕಟ್ಟಳೆಗಳಿಗೆ, ನಿಯಮಗಳಿಗೆ, ದೈಹಿಕವಾಗಿ, ಮಾನಸಿಕವಾಗಿ, ಭಾಷಾಪೂರ್ವಕವಾಗಿ ಒಗ್ಗಿಕೊಳ್ಳುತ್ತಾ ಹೋಗುತ್ತೆ. ಇಲ್ಲಿಯ ಬದುಕು ಭಾರತೀಯ ಸಾಂಸ್ಕೃತಿಕ ಮೌಲ್ಯವೆಂಬ ಉಪ್ಪಿಲ್ಲದೇ ತಯಾರಿಸಿದ 'ಉದ್ಯೋಗಾವಕಾಶ', 'ಐಶಾರಾಮಿ ಜೀವನ', 'ಪೂರ್ಣ ಸ್ವಾತಂತ್ರ್ಯ'ಗಳೆಂಬ ಬಗೆ ಬಗೆಯ ತಿಂಡಿಗಳಿಂದ ತುಂಬಿದ ಊಟದ ತಟ್ಟೆಯಲ್ಲಿ ಮೃಷ್ಟಾನ್ನ ಭೋಜನ ಮಾಡಿದ ಹಾಗೆ ಅನ್ಸುತ್ತೆ.

ಮುಂದಿನ ಪರ್ವ 'ನೆಮ್ಮದಿ ಪರ್ವ'. ಇಲ್ಲಿನ ಸಂಸ್ಕೃತೀನ ಅರೆದು ಹುಯ್ಕೊಳ್ತೇವೆ, Super Bowl ದಿವಸದ ಪಾರ್ಟಿಗೆ ಕಾದು ಬೇರೆ ಬೇರೆ ಫುಟ್ಬಾಲ್ ತಂಡಗಳ ಮೇಲೆ ಬಾಜಿ ಕಟ್ತೇವೆ. ಬಾರ್ಬೆಕ್ಯೂ ಪಾರ್ಟಿಗಳು, ಬಿಯರ್ ಪಾರ್ಟಿಗಳು, ಮಿಡ್ಲ್ ಸ್ಕೂಲ್, ಹೈ ಸ್ಕೂಲ್ ಗ್ರ್ಯಾಜುಯೇಶನ್ ಪಾರ್ಟಿಗಳಿಗೆ ಒಗ್ಗಿ ಹೋಗ್ತೀವಿ. ಮಕ್ಕಳೆಲ್ಲಾ ನಮ್ಮ ಸಂಸ್ಕೃತಿ ಜೊತೆಗೆ ಅನ್ಯ ಸಂಸ್ಕೃತಿ ಬೆರಸ್ಕೊಂಡು ABCD (American Born Confused

Desi)ಗಳಾಗಿ ದೊಡ್ಡೋರಾಗ್ತಾರೆ. ಕೆಲಸಗಳಲ್ಲಿ ಸ್ಥಿರತೆ ಬಂದಿರುತ್ತೆ. ಇಲ್ಲಿನ ಕಟ್ಟಳೆ, ಕಾನೂನುಗಳಿಗೆ ಜೀವ ಒಗ್ಗಿ ಹೋಗಿರುತ್ತೆ. ತೌರಿಗೆ ವಾಪಸ್ ಹೋಗಬೇಕು ಅನ್ನೋ ಅನಿಸಿಕೆಗಳು ಮರೆಯಾಗ್ತಾ ಹೋಗುತ್ವೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರಾಶಸ್ತ್ಯವನ್ನ ಕೊಡ್ತೇವೆ. ತೌರಿಗೆ ಭೇಟಿ ಕೊಡೋದು ಕಡಿಮೆ ಆಗ್ತಾ ಹೋಗುತ್ತೆ. ಬಹಳಷ್ಟು ಸ್ನೇಹಿತರ ಮುಖದ ಛಾಯೆಯೇ ಮನಸ್ಸಿನಿಂದ ಮಾಯವಾಗುತ್ತೆ. ಇನ್ನೂ ಕೆಲವರ ದೂರವಾಣಿ ಸಂಪರ್ಕಾನೂ ಕಡಿದು ಹೋಗುತ್ತೆ. ಕೆಲವರಂತು ಪರಲೋಕ ಸೇರ್ಕೊರ್ತಾರೆ. ತೌರಿನ ಪ್ರಯಾಣದ ಮೂಲ ಉದ್ದೇಶ ತಂದೆ, ತಾಯಿಯರನ್ನ ನೋಡ್ಕೊಂಡು ಬರೋದು. ವಯಸ್ಸು ಆದ ಹಾಗೆ ಅವರೂ ಸ್ವರ್ಗ ಕಂಡರೆ ತೌರಿನ ಒಂದು ಕೊಂಡೀನೆ ಕಳ್ಕೊಂಡ ಹಾಗೆ ಆಗುತ್ತೆ.

ಎಲ್ಲರೂ ತಮ್ಮ ಇಲ್ಲಿನ ಬದುಕು ಹೇಗಿತ್ತು ಅಥವಾ ಹೇಗಿದೆ ಅಂತ ಎಲ್ಲಿ ನೋಡಿದರಲ್ಲಿ ಲೇಖನಗಳನ್ನ ಬರೀತಾರೆ. ತೌರಿನ ಎಷ್ಟೋ ವಿಚಾರಗಳಲ್ಲಿ ವಂಚಿತರಾಗಿ ನಮ್ಮ ನಮ್ಮ ನೋವನ್ನ ಬರ್ಕೊಳ್ತೀವಿ. ಆದರೆ ನನ್ನಂಥ ಮಧ್ಯಮ ವರ್ಗದಿಂದ, ಸಾಲದ ಹೊರೆಯ ಹಿನ್ನೆಲೆಯಲ್ಲಿ ಬಂದವರೂ ಇದ್ದಾರೆ. ಇಂತಹ ವರ್ಗದವರಿಗೆ ಇನ್ನೊಂದು ತರಹದ ನೋವು ಕಾಡುತ್ತೆ. ಅದರ ಬಗ್ಗೆ ಎಲ್ಲೂ ಓದಿದ್ದು ನೆನಪಿಲ್ಲ. ಯಾರಿಗೂ ಹೀಗೆ ಆಗಿಲ್ವೇನೋ ಗೊತ್ತಿಲ್ಲ. ಏಕೆಂದರೆ ಇದು ಸ್ವಲ್ಪ ಸೂಕ್ಷ್ಮದ ವಿಚಾರ. ಬರೀಲಿಕ್ಕಾಗಲೀ, ವಿಚಾರ ವಿನಿಮಯ ಮಾಡಿಕೊಳ್ಳಲಿಕ್ಕಾಗಲೀ ಇಷ್ಟ ಪಡುವುದಿಲ್ಲವೋ ಏನೋ. ವಿದೇಶಕ್ಕೆ ಕಾರ್ಯನಿಮಿತ್ತವೋ, ಕರ್ಮನಿಮಿತ್ತವೋ ಹೋಗಿ ನೆಲೆಸಿರೋ ಬಹುತೇಕ ಮಧ್ಯಮ ವರ್ಗದವರಿಗೆ ಈ ನೋವು ಕಾಡದೇ ಇರಲಿಕ್ಕಿಲ್ಲ ಅನ್ನುವುದು ನನ್ನ ಅನಿಸಿಕೆ.

ಇಂತಹವರ ಸಂಬಂಧಿಕರಿಗೆ, ಹತ್ತಿರದ ಸ್ನೇಹಿತರಿಗೆ ಒಂದು ಭ್ರಮೆ ಇರುತ್ತೆ. ಅಮೆರಿಕಾಗೆ ಬಂದೋರೆಲ್ಲಾ ಒಂದು ಡಾಲರ್ ಮರ ಬೆಳಿಸಿರ್ತಾರೆ, ಅಲ್ಲಾಡಿಸಿದರೆ ದುಡ್ಡು ಬೀಳುತ್ತೆ ಅಂತ. ಕಷ್ಟಕ್ಕೆ ಹಣ ಬೇಕಾದರೂ ಅಷ್ಟೆ, ಸುಖಕ್ಕೆ ಹಣ ಬೇಕಾದರೂ ಅಷ್ಟೆ; ಇವನೇ ಕರ್ಣ, ಕಿತ್ಕೊಂಡು ತಿಂತಾರೆ. ಆದರೂ ನಾವು ಕೊಟ್ಟಿದ್ದು ಸಾಲಾನೇ ಅಲ್ಲ. ಸಾಲ ಅನ್ಕೊಂಡ್ರು ಅದು ಬೆಳೆಯೋದೆ ಇಲ್ಲ. ಕೇಳಿದಾಗಲೆಲ್ಲಾ ಹಣ ಹರಿತಾ ಇದ್ರೆ ಆಪ್ತ. ಯಾವಾಗಲಾದರೂ ಒಂದು ಸಾರಿ ಆಗೊಲ್ಲ ಅಂದ್ರೆ ನಂಟೇ ದೂರ. ದೂರವಾಣಿ ಸಂಪರ್ಕಾನೂ ನಿಂತು ಹೋಗುತ್ತೆ. ಹಿಂದೆ ಕಷ್ಟದ ಕಾಲದಲ್ಲಿ ಮಾಡಿದ ಸಹಾಯಗಳೆಲ್ಲಾ ಮರೆಯಾಗಿ ಹೋಗುತ್ವೆ. ರಜಾ ದಿನಗಳಲ್ಲಿ ಖುಷಿಯಾಗಿ ಎಲ್ಲರನ್ನೂ ನೋಡಿ ಮಾತನಾಡಿಸಿಕೊಂಡು ಹೋಗೋಣ ಅಂತ ತೌರಿಗೆ ಹೋದರೆ, ಒಂದೆರಡು ಈ ರೀತಿ ನೆಂಟರೋ, ಆಪ್ತ ಸ್ನೇಹಿತರೋ ಈ ರಜಾ ಮಜಾದ ವಾತಾವರಣವನ್ನೇ ಕಲುಷಿತಗೊಳಿಸ್ತಾರೆ. ಕೆಲವರು ಕೊಟ್ಟ ಹಣ ವಾಪಸ್ ಕೊಡ್ತೀನಿ ಅಂತ ಹೇಳ್ಕೊಂಡು ವರ್ಷಾನುಗಟ್ಟಲೆ ತಳ್ತಾರೆ. ಕೆಲವರು ಹತ್ತಾರು ವರ್ಷದ ಮೇಲೆ ಕೊಡಲು ಬರುವುದು ಅಥವಾ ಹತ್ತಾರು ವರ್ಷದ ಹಿಂದೆ ಕೊಟ್ಟ ಹಣದ ಅಸಲು ಮೊತ್ತವನ್ನೇ ಕಂತಿನ

ರೂಪದಲ್ಲಿ ತೀರಿಸಲು ಬರುತ್ತಾರೆ. ಸಾಲ ವಾಪಸ್ ಕೇಳಿದರೆ ಬರೋ ಸಾಮಾನ್ಯ ಉತ್ತರಗಳು– 'ನಿಮ್ಮ 2 ಲಕ್ಷ ರೂಪಾಯಿ ಕೊಡಬೇಕು, ಮರೆತಿಲ್ಲ. ನಿಮ್ಮ 2 ಲಕ್ಷ ಕೊಟ್ಟು ಬನಶಂಕರೀಲಿ ಒಂದು ಸೈಟ್ ತಗೊಂಡಿದೀನಿ. ಒಳ್ಳೆ ಬೆಲೆ ಬಂದ್ರೆ ಮಾರ್ಬಿಟ್ಟು ನಿಮ್ಮ 2 ಲಕ್ಷ ರೂಪಾಯಿ ಕೊಟ್ಟ ಬಿಡೋಣ ಅಂತ ಅಂದ್ಕೊಂಡಿದ್ದೀನಿ.' '25 ಸಾವಿರದ ಚೀಟಿ ಹಾಕಿದೀನಿ, ಅದು ಎದ್ದ ತಕ್ಷಣ ಕೊಡ್ತೀನಿ.' 'ಸ್ವಲ್ಪ ಹಣ fixed deposit ಇಟ್ಟಿದೀನಿ, ಇನ್ನೊಂದು 6 ತಿಂಗಳಿಗೆ Mature ಆಗುತ್ತೆ.'

ಇನ್ನೊಂದು ಸಮಸ್ಯೆ, Vacationಗೆಂದು ಊರಿಗೆ ಹೊರಟಾಗ. ತೌರಿಂದ ಮೊದಲು 'ಅದನ್ನ ತಗೊಂಡ್ಬನ್ನಿ, ಇದನ್ನ ಮಗನಿಗೆ ತಗೊಂಡ್ಬನ್ನಿ' ಅಂತ ಒಂದು ಪಟ್ಟೀನೇ ತಯಾರಾಗುತ್ತೆ. ನಾವು, ವರ್ಷ ಆದ ಮೇಲೆ ಹೋಗ್ತಾ ಇದೀವಲ್ಲಾ, ಎಲ್ಲರಿಗೂ ಒಂದೊಂದು ಉಡುಗೊರೆ ತಗೊಂಡು ಹೋಗೋಣ ಅಂತ ವಾರಗಟ್ಟಲೆ ಮುಂಚೇನೆ ಅದಕ್ಕೋಸ್ಕರ ತಯಾರೀನೆ ನಡೆಸ್ತೀವಿ. ಯಾರಿಗೆ ಏನು ಕೊಡಬೇಕು ಅಂತ ಒಂದು ಪಟ್ಟೀನೇ ಶುರುವಾಗುತ್ತೆ. ಅದೇ ಒಂದು ಕಸರತ್ತು. ಅವರಿಗೆ ಅದು, ಇವರಿಗೆ ಇದು, ಆ ಮಕ್ಕಳಿಗೆ ಆ ಆಟದ ಸಾಮಾನು, ಈ ಮಗುಗೆ ಇನ್ನೊಂದು ಆಟದ ಸಾಮಾನು. ಮನೆಯಲ್ಲಿ ಒಂದು ಮಹಾಭಾರತವೇ ಆಗಿಹೋಗಿರುತ್ತೆ. ಆಯ್ತು ಇಷ್ಟು ಕಷ್ಟ ಪಟ್ಟು ಚಾಕಲೇಟ್ಗಳೇನು, ಹೊಸ ಹೊಸ Electronic ಸಾಮಾನುಗಳು, ಆಟದ ಸಾಮಾನುಗಳನ್ನು ತೆಗೆದುಕೊಂಡು ಹೋದರೂ, ವಿಮಾನ ಇಳಿದು ಮನೆ ತಲಪಿ ಸೂಟ್ಕೇಸ್ ತೆಗೆದು ಕೆಲವೇ ಗಂಟೆಯಲ್ಲಿ ಎಲ್ಲಾ ಮಾಯ. 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಇದ್ದ ಹಾಗೆ ಆಗುತ್ತೆ... 'ಅವರಿಗೆ ಚಾಕಲೇಟ್ ಸಿಗಲಿಲ್ಲ', 'ಆ Electronic ಕೆಲಸ ಮಾಡ್ತಿಲ್ಲ', 'ಅದು ಇಲ್ಲೇ Burma Bazarನಲ್ಲಿ ಸಿಗ್ತಾ ಇತ್ತು...' ...ಹೀಗೆ ಎಲ್ಲದಕ್ಕೂ ನಾವೇ ಹೊಣೆ ಆಗ್ತೇವೆ.

ಬದುಕಿನ ಇಷ್ಟು ಜಟಿಲ ಗೋಜಲುಗಳನ್ನು ನೋಡಿ ಮಾತೃಭೂಮಿಯ ಮೇಲಿನ ಪ್ರೇಮ ಇಳೀತಾ ಬರುತ್ತೆ. ಒಂದೊಂದೆ ಕೊಂಡಿಗಳು ಕಳಚಿಕೊಳ್ಳುತ್ತಾ ಬರುತ್ವೆ. ಅಮೆರಿಕೆಯನ್ನೆ ನಮ್ಮ ನೆಲೆಯನ್ನಾಗಿ ಮಾರ್ಪಡಿಸಿಕೊಳ್ತಾ ಹೋಗ್ತೇವೆ. ಪರದೇಶದಲ್ಲಿದ್ದರೂ 'ಭಾರತದ ಪ್ರಜೆಯಾಗೇ ಉಳಿತೀನಿ, ಯಾವತ್ತಾದರೂ ಒಂದು ದಿವಸ ವಾಪಸ್ಸು ಹೋಗ್ತೀನಿ' ಅಂತ ಕನಸನ್ನ ಕಟ್ಟಿಕೊಂಡು, ಪರದೇಶದ ನಾಗರೀಕನಾಗುವುದನ್ನೂ ಮುಂದೂಡ್ತಾ, ಮೊದಲು ಹೆಂಡ್ತಿ ಮಕ್ಕಳ ನಾಗರಿಕತ್ವವನ್ನು ಬದಲಾಯಿಸಿ, ತೌರಿನ ಕೊಂಡಿಗಳೆಲ್ಲಾ ಕಳಚಿಕೊಂಡ ಮೇಲೆ ತಾನೂ ಪರದೇಶದ ನಾಗರೀಕನಾಗಿ, ಪರದೇಶದಲ್ಲಿ ಅತಿ ಕಠಿಣವಾದ ವೃದ್ಧಾಪ್ಯ ಪರ್ವವನ್ನು ಪ್ರಾರಂಭಿಸುತ್ತಾನೆ ಈ ಅನಿವಾಸಿ.

ಬೇರು ಸೂರು

ನಾನೇಕೆ ವಿಶ್ವ ಮಾನವನಾಗಬೇಕು?



– ವತ್ಸ ಕುಮಾರ್

ವಲಸೆ ಬಂದದ್ದು

ಸಂಗೀತ, ಸಾಹಿತ್ಯ ಮತ್ತು ಸಂಸ್ಕೃತದ ವಾತಾವರಣವಿದ್ದ ಕುಟುಂಬದಲ್ಲಿ ಬೆಳೆದ ನನಗೆ ಚಿಕ್ಕ ವಯಸ್ಸಿನಿಂದ ಕಲೆಯಲ್ಲಿ ಆಸಕ್ತಿ. ನನ್ನ ಆಸಕ್ತಿ ಮುಂದುವರಿಯುವ ರೀತಿಯಲ್ಲಿ ಪ್ರಭಾವ ಬೀರಿದವರು ಸಂಗೀತ ಕಲಾವಿದರಾದ ನಮ್ಮ ಅಣ್ಣ ದಿವಂಗತ ರಾಮನ್. ವಿಶ್ವದ ನಾನಾ ಭಾಗಗಳಿಂದ, ನಾನಾ ಕಾರಣಗಳಿಂದ ನಾನಾ ಭಾಷೆಗಳ ನಾನಾ ವೇಷಗಳ ಸಾವಿರಾರು ಜನರು 'ಅಮೇರಿಕಾ ಈಸ್ ಎ ಲ್ಯಾಂಡ್ ಆಫ್ ಆಪರ್ಚುನಿಟೀಸ್' ಎಂಬ ಕನಸನ್ನು ಹೊತ್ತು ನೂರಾರು ವರ್ಷಗಳಿಂದ ಉತ್ತರ ಅಮೇರಿಕಾಗೆ ವಲಸೆ ಬರುತ್ತಿರುವ ಪ್ರವಾಹದ ಸೆಳೆತಕ್ಕೆ ಸಿಕ್ಕಿದವರಲ್ಲಿ ನಾನೂ ಒಬ್ಬ. ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ಹಲವಾರು ವರ್ಷಗಳ ಕಾಲ ಕೆಲಸ ಮಾಡಿ 1978ರಲ್ಲಿ ಈ ದೇಶಕ್ಕೆ ಬಂದು ಕೆಲಸ ಹುಡುಕಿಕೊಂಡು ಟೆಕ್ಸಾಸ್ ಪ್ರಾಂತಕ್ಕೆ ಬಂದಾಗ ನನಗೆ ಇಲ್ಲಿ ಪರಿಚಯವಿದ್ದ ಒಬ್ಬನೇ ವ್ಯಕ್ತಿ, ನನ್ನ ಬಾಲ್ಯಸ್ನೇಹಿತ ಕೆ.ಹೆಚ್.ಮೋಹನ್. ಹ್ಯೂಸ್ಟನ್ನಿಂದ ಲೇಕ್ ಜ್ಯಾಕ್ಸನ್‌ವರೆಗೆ ವಿಮಾನದಲ್ಲಿ ಬಂದ ನನ್ನನ್ನು ನಗು ಮುಖದಿಂದ ಸ್ವಾಗತಿಸಿ ಮೋಹನ್ ತನ್ನ ಕಾರಿನಲ್ಲಿ ಬೇ ಸಿಟಿಗೆ ಕರೆದುಕೊಂಡು ಬಂದ. 45 ನಿಮಿಷಗಳ ಕಾರಿನ ಪ್ರಯಾಣದ ಉದ್ದಕ್ಕೂ ನಮ್ಮ ವಿದ್ಯಾರ್ಥಿ ಜೀವನದ ನೆನಪುಗಳ ಮಾತು ಸಾಗಿತ್ತು. ಮಧ್ಯೆ ಮಧ್ಯೆ ನನ್ನ ಕೆಲಸದ ಬಗ್ಗೆ ಏನು ಕೇಳಿದರೂ ಮೋಹನ್ ನನ್ನ ಮಾತಿಗೆ ಗಮನ ಕೊಡದಂತೇ ಇದ್ದದ್ದು ನನ್ನನ್ನು ಯೋಚನೆಗೆ ತಳ್ಳಿದರೂ ಸಮಾಧಾನದಿಂದಿದ್ದೆ. ಬೇ ಸಿಟಿ ತಲುಪಿದ ಕೂಡಲೇ ನಮ್ಮಿಬ್ಬರಿಗೂ ಸುಧಾ ಹಾಗೂ ಕೇಸರಿನಾಥ್ ಅವರ ಮನೆಯಲ್ಲಿ ಸಂಜೆ ಊಟದ ಆಹ್ವಾನ ಬಂತು. ಆದರದಿಂದ ನಮ್ಮನ್ನು ಬರಮಾಡಿಕೊಂಡ ಕೇಸರಿನಾಥ್ ಅವರ ಮನೆಯಲ್ಲಿ ಮುಂದೆ ಹತ್ತು ವರ್ಷಗಳ ನನ್ನ ಊಟ ಉಪಚಾರ ಅನುಕೂಲವಾಗಿ ಸಾಗಿದ್ದರಿಂದ, ನನಗೆ ಅಡುಗೆ ಕಲಿಯುವ ಅವಶ್ಯಕತೆ ಬರಲಿಲ್ಲ. ಮರುದಿನ ನಾನು 'ಸೌತ್ ಟೆಕ್ಸಾಸ್ ನ್ಯೂಕ್ಲಿಯರ್ ಪ್ರಾಜೆಕ್ಟ್'ನಲ್ಲಿ ಕೆಲಸಕ್ಕೆ ಸೇರುವ ವ್ಯವಸ್ಥೆಯನ್ನು ಮೋಹನ್ ಆ ವೇಳೆಗಾಗಲೇ ಮಾಡಿದ್ದರಿಂದ ನನ್ನ ನೌಕರಿಯ ಜೀವನ ತಕ್ಷಣವೇ ಪ್ರಾರಂಭವಾಗಿ, ಮುಂದಿನ 28 ವರ್ಷಗಳ ಕಾಲ ಅವ್ಯಾಹತವಾಗಿ ಸಾಗಿತು. ನಾನು 1978ರ ಶ್ರೀ ವಿನಾಯಕ ಚತುರ್ಥಿಯ ದಿನ ಕೆಲಸಕ್ಕೆ ಸೇರಿದ್ದು. ಅದೇ

ವಾರಾಂತ್ಯದಲ್ಲಿ ಪ್ರೇರೀವ್ಯೂನ ಡಾಕ್ಟರ್ ಆರ್.ಎನ್.ಎಸ್ ರಾವ್ ಮತ್ತು ಅನಸೂಯಾ ರಾವ್ ಅವರ ಮನೆಯಲ್ಲಿ ಪ್ರತಿ ವರ್ಷದಂತೆ ನಡೆಯಲಿರುವ ವಿನಾಯಕ ಚತುರ್ಥಿ ಆಚರಣೆಯಲ್ಲಿ ಭಾಗವಹಿಸಲು ನಮಗೆ ಕರೆಯೋಲೆ ಬಂದಿದ್ದ ಕಾರಣ ನಾನು ಮತ್ತು ಮೋಹನ್ ಅಲ್ಲಿಗೆ ಬಂದೆವು. ಈ ಸಮಾರಂಭದಲ್ಲಿ ನಾನು ಸುಮಾರು 30–40 ಕುಟುಂಬಗಳನ್ನು ಪರಿಚಯ ಮಾಡಿಕೊಂಡೆ. ನನ್ನ ಹೈಸ್ಕೂಲ್ ಸಹವಾಸಿಗಳಾದ ಹರಿಪ್ರಸಾದ್ ಶಾಸ್ತ್ರಿ ಮತ್ತು ರಾಘವೇಂದ್ರ ಕಾಂಗೊವೀ ಅವರು ಸಹ ಇಲ್ಲಿ ಭೇಟಿಯಾದರು.

ಕನ್ನಡ ವೃಂದದ ಹುಟ್ಟು

ಪ್ರತಿ ವಾರಾಂತ್ಯದಲ್ಲಿ ಹ್ಯೂಸ್ಟನ್ನಿಗೆ ಬರುತ್ತಿದ್ದ ನಾನು ಮತ್ತು ಮೋಹನ್, ಸ್ನೇಹಿತರ ಮನೆಗಳಲ್ಲಿ ಬೇಬಿ ಶವರ್, ನಾಮಕರಣ, ತೊಟ್ಟಿಲು, ಹುಟ್ಟಿದ ಹಬ್ಬ, ನವರಾತ್ರಿ, ದೀಪಾವಳಿ, ಸಂಕ್ರಾಂತಿ ಮುಂತಾದ ಸಮಾರಂಭಗಳಲ್ಲಿ ಸಂತೋಷದಿಂದ ಭಾಗವಹಿಸುತ್ತಿದ್ದೆವು. ಇಂತಹ ಕಾರ್ಯಕ್ರಮಗಳಲ್ಲಿ ಊಟದ ನಂತರ ಎಲ್ಲರ ಮಾತಿನ ಸರಣಿ, ಕನ್ನಡ ನಾಡು, ನುಡಿ, ಜೀವನ, ಕನ್ನಡ ಭಾಷೆಯ ಸವಿ, ಸೊಗಸು, ಇಂಪು ಇತ್ಯಾದಿಗಳ ಕಡೆ ಹೋಗಿ ನಾವು ಕನ್ನಡವನ್ನು ಎಷ್ಟೊಂದು ಪ್ರೀತಿಸುತ್ತೇವೆ ಎಂಬ ಭಾವನೆಯನ್ನು ಮೂಡಿಸುತ್ತಿತ್ತು. ಕ್ರಮೇಣವಾಗಿ ನಮ್ಮ ಮಾತು ಗಹನವಾಗಿ ಮುಂದುವರೆದು, ಕಾಲಕ್ರಮೇಣ ಈ ವಿಷಯ ಮುಖ್ಯವೆಂದು ತೋರಿ, ಹಲವಾರು ಸ್ನೇಹಿತರು 'ನಾವೇಕೆ ಒಂದು ಕನ್ನಡ ಸಂಘವನ್ನು ಪ್ರಾರಂಭ ಮಾಡಬಾರದು' ಎಂಬ ವಿಷಯವನ್ನು ಪ್ರಸ್ತಾಪ ಮಾಡಿದರು. ಅದಕ್ಕೆ ಮತ್ತೆ ಕೆಲವು ಸ್ನೇಹಿತರು 'ಸಂಘ ಸಂಸ್ಥೆಗಳ ತಲೆನೋವು ನಮಗೇಕೆ ಬೇಕು' ಎಂದು ತಮ್ಮ ಅಸಮಾಧಾನವನ್ನು ತೋರಿದರೂ, ಬಹುಮತಗಳಿಂದಾಗಿ 1983ರ ಮೇತಿಂಗಳಲ್ಲಿ 'ಹ್ಯೂಸ್ಟನ್ ಕನ್ನಡ ವೃಂದ'ವು ಜನ್ಮ ತಾಳಿತು. ಡಾಕ್ಟರ್ ಆರ್.ಎನ್.ಎಸ್. ರಾವ್ ಅವರು ನಮ್ಮ ಮೊದಲನೆಯ ಅಧ್ಯಕ್ಷರಾಗಿ ಮತ್ತು ಶ್ರೀಮತಿ ನಳಿನಿ ಜಯರಾಂ ಅವರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ಆ ವೇಳೆಗೆ ಕನ್ನಡಿಗರಿಗೆ ಪರಿಚಿತನಾಗಿದ್ದ ನಾನು 'ಕನ್ನಡ ವೃಂದ'ದ ಮೊದಲನೆಯ ಕಾರ್ಯದರ್ಶಿಯಾಗಿ ಆರಿಸಿಬಂದೆ. ಮುಂದಿನ ಹದಿನಾಲ್ಕು ವರ್ಷಗಳ ಕಾಲ 'ಕನ್ನಡ ವೃಂದ'ದ ಕಾರ್ಯದರ್ಶಿಯಾಗಿ (ಎರಡೆರಡು ವರ್ಷಗಳ ಅವಧಿ, ಏಳುಬಾರಿ ಆಯ್ಕೆ) ಏಳು ಅಧ್ಯಕ್ಷರ (ಡಾಕ್ಟರ್ ಆರ್.ಎನ್.ಎಸ್. ರಾವ್, ನಳಿನಿ ಜಯರಾಂ, ಗೀತ ರಾಮಣ್ಣ, ಡಾಕ್ಟರ್ ಜಿ.ಎಸ್. ಗೋಪಾಲಕೃಷ್ಣ, ಡಾಕ್ಟರ್ ಕೆ.ಎಸ್. ಶಂಕರ್, ಡಾಕ್ಟರ್ ಜಗನ್ನಾಥ ರಾವ್ ಮತ್ತು ಶ್ರೀಮತಿ ಗಾಯತ್ರಿ ಕಾಂಗೋವಿ) ನಾಯಕತ್ವದಲ್ಲಿ ಕೆಲಸ ಮಾಡಿದ ದಾಖಲೆ ನನ್ನದು. 2000ನೆಯ ಇಸವಿಯ ಚುನಾವಣೆಯಲ್ಲಿ ಬಹುಮತದಿಂದ 'ಕನ್ನಡ ವೃಂದ'ದ ಅಧ್ಯಕ್ಷನಾಗಿ ಆಯ್ಕೆಯಾದ

ಮುಂದಿನ 6 ವರ್ಷಗಳ ಕಾಲ (ಎರಡೆರಡು ವರ್ಷಗಳ ಅವಧಿ, ಮೂರುಬಾರಿ ಆಯ್ಕೆ) 'ಕನ್ನಡ ವೃಂದ'ದ ಅಧ್ಯಕ್ಷನಾಗಿ ಕೆಲಸ ಮಾಡಿದೆ. ಇನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಈಗಿರುವ ಸದಸ್ಯರು 2012ರ ಏಪ್ರಿಲ್ ಚುನಾವಣೆಯಲ್ಲಿ ನನ್ನನ್ನು ಮತ್ತೆ ಆರಿಸಿ ಅಧ್ಯಕ್ಷ ಪದವಿಕೊಟ್ಟು ಗೌರವಿಸಿದ್ದಾರೆ. 2000ನೆಯ ಇಸವಿಯಿಂದ ನಾನು ವಿವಿಧ ಸಂಘಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಅಲ್ಪಸೇವೆಯ ಪರಿಚಯಮಾಡಿಕೊಡುವ ಉದ್ದೇಶದಿಂದ ಬರೆದಿರುವ ಈ ಲೇಖನ ಓದುಗರಿಗೆ ಪ್ರಿಯವಾದರೆ ನನ್ನ ಶ್ರಮ ಸಾರ್ಥಕವಾದಂತೆ.

ಕನ್ನಡ ವೃಂದದ ಬೆಳವಣಿಗೆ

'ಕನ್ನಡ ವೃಂದ' ಪ್ರಾರಂಭವಾಗುವ ಹಲವು ವರ್ಷಗಳಿಗಿಂತ ಮುಂಚೆಯೇ ಶ್ರೀಮತಿ ಗೀತ ಮತ್ತು ರಾಮಣ್ಣ ಅವರು ತಮ್ಮ ಮನೆಯಲ್ಲಿ ಶ್ರೀ ಪುರಂದರ ದಾಸರ ಆರಾಧನೆಯನ್ನು ನಡೆಸುತ್ತಲಿದ್ದರು ಮತ್ತು ಶ್ರೀಮತಿ ನೀಮ ಹಾಗೂ ಎಸ್.ಆರ್. ರಾವ್ ಅವರ ಮನೆಯಲ್ಲಿ ಯುಗಾದಿ ಹಬ್ಬ ಪ್ರತಿ ವರ್ಷವೂ ನಡೆಯುತ್ತಿತ್ತು. ಕನ್ನಡ ವೃಂದ ಪ್ರಾರಂಭವಾದ ಕೆಲವು ವರ್ಷಗಳ ನಂತರ ಈ ಎರಡೂ ಕಾರ್ಯಕ್ರಮಗಳು ವೃಂದದ ವ್ಯಾಪ್ತಿಗೆ ಒಳಪಟ್ಟವು. ಇತರ ಕನ್ನಡ ಸಂಘಗಳು ನಡೆಸುವ ಕಾರ್ಯಕ್ರಮಗಳಂತೆ ನಮ್ಮ ವೃಂದ ನಡೆಯಬೇಕು ಎನ್ನುವ ಉದ್ದೇಶದಿಂದ ಆಡಳಿತ ಮಂಡಳಿಯು ಕನ್ನಡ ರಾಜ್ಯೋತ್ಸವ, ಯುಗಾದಿ ಮತ್ತು ಶ್ರೀ ಪುರಂದರದಾಸರ ಆರಾಧನೆ ಕಾರ್ಯಕ್ರಮಗಳನ್ನು ನಮ್ಮ ವೃಂದ ನಡೆಸಬೇಕೆಂದು ತೀರ್ಮಾನಿಸಿತು. ಅಂದಿನಿಂದ ಇಂದಿನವರೆಗೆ ಈ ಕಾರ್ಯಕ್ರಮಗಳು ತಪ್ಪದೇ ನಡೆಯುತ್ತ ಬಂದಿವೆ. ಅಲ್ಲದೇ ಈ ದೇಶಕ್ಕೆ ಭೇಟಿ ಕೊಡುತ್ತಿದ್ದ ಕನ್ನಡ ನಾಡಿನ ಪ್ರಮುಖ ಸಾಹಿತಿಗಳು, ನಾಟಕಕರ್ತರು, ಸಂಗೀತ ವಿದ್ವಾಂಸರು, ವಿದೂಷಕರು, ನೃತ್ಯ ತಂಡದವರು ನಮ್ಮ ವೃಂದದ ಆಶ್ರಯದಲ್ಲಿ ಕಾರ್ಯಕ್ರಮಗಳನ್ನು ನೀಡಿ ವೃಂದದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಹಂತಹಂತವಾಗಿ ನಮ್ಮ ವೃಂದದ ಸದಸ್ಯರ ಸಂಖ್ಯೆ ಬೆಳೆಯುತ್ತಿರುವ ಕಾರಣ, ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿ, ನಡೆಸಲಾಗುತ್ತಿದೆ.

ಹ್ಯೂಸ್ಟನ್ ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನ

2000ನೆಯ ಇಸವಿ ಸೆಪ್ಟೆಂಬರ್ ತಿಂಗಳಿನಲ್ಲಿ ಹ್ಯೂಸ್ಟನ್ ನಗರದಲ್ಲಿ ನಮ್ಮ 'ಕನ್ನಡ ವೃಂದ'ವು ವಿಜೃಂಭಣೆಯಿಂದ ನಡೆಸಿದ ವಿಶ್ವಕನ್ನಡ ಸಮ್ಮೇಳನದಲ್ಲಿ ಎರಡು ಸಾವಿರಕ್ಕೂ ಹೆಚ್ಚಿನ ಕನ್ನಡಿಗರು ಭಾಗವಹಿಸಿದ್ದರು. ಶ್ರೀ ಜಯರಾಮ್ ನಾಡಿಗ್ ಅವರ ಮಾರ್ಗದರ್ಶನದಲ್ಲಿ ಉತ್ತಮವಾದ ವ್ಯವಸ್ಥೆಯಿಂದ ನಡೆದ ಈ ಸಮ್ಮೇಳನ ಒಂದು ಹೊಸ ವಿಶ್ವದಾಖಲೆಯನ್ನೇ ಸ್ಥಾಪಿಸಿದೆ. ಇದರಿಂದಾಗಿ 'ಹ್ಯೂಸ್ಟನ್ ಕನ್ನಡ ವೃಂದ'ವು

ವಿಶ್ವಮಾನ್ಯತೆಯನ್ನು ಪಡೆದಿರುವ ವಿಷಯ ಕನ್ನಡಿಗರಿಗೆ ತಿಳಿದೇ ಇದೆ. ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದ ಡಾಕ್ಟರ್ ಯು.ಆರ್. ಅನಂತಮೂರ್ತಿ ಮತ್ತು ಡಾಕ್ಟರ್ ಗಿರೀಶ್ ಕಾರ್ನಾಡ್ ಅವರು ಅಚ್ಚುಕಟ್ಟಾಗಿ ಸಡೆದ ಈ ಸಮ್ಮೇಳನವನ್ನು ಬಹಳವಾಗಿ ಮೆಚ್ಚಿಕೊಂಡು ನಮ್ಮ ವೃಂದದ ಬಗ್ಗೆ ಅಪಾರವಾದ ಪ್ರೀತಿಯ ಮಾತುಗಳನ್ನಾಡಿ ಆಶೀರ್ವದಿಸಿದ್ದಾರೆ. ಈ ಸಮ್ಮೇಳನ ಮುಕ್ತಾಯವಾದ ನಂತರ, ಸಮ್ಮೇಳನ ಸಮಿತಿಯು 'ಕನ್ನಡ ಫೌಂಡೇಶನ್' ಎಂಬ ಟ್ರಸ್ಟನ್ನು ಸ್ಥಾಪಿಸಿ ಅದರ ಹೆಸರಿನಲ್ಲಿ ಕನ್ನಡ ಸಾಹಿತ್ಯ ಸೇವೆಗೆಂದು ಹಣ ಮುಡುಪಿಟ್ಟು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಕಾರ್ಯಗಳಿಗೆ ಮಾತ್ರ ಈ ಹಣವನ್ನು ಉಪಯೋಗಿಸಬಹುದು ಎಂಬ ಜವಾಬ್ದಾರಿಯನ್ನು ವೃಂದಕ್ಕೆ ಒಪ್ಪಿಸಿದೆ.

ಮಿಸ್ಸೌರಿಯ ಡಾಕ್ಟರ್ ಹೆಚ್. ಆರ್. ಚಂದ್ರಶೇಖರ್ ಅವರು ಅತ್ಯಂತ ಶ್ರಮ ವಹಿಸಿ ತಯಾರಿಸಿದ 'ಕನ್ನಡ ಭಾಗವತ ಪುರಾಣ' ಕನ್ನಡ ಫೌಂಡೇಶನ್ ಟ್ರಸ್ಟಿನ ಸಹಾಯದಿಂದ ಬಿಡುಗಡೆಯಾಗಿ ಈಗಾಗಲೇ ಸಾಹಿತ್ಯಾಸಕ್ತರ ಕೈಸೇರಿದೆ. ಶ್ರೀ ಸುಬ್ಬಿಸುಬ್ರಮಣ್ಯಂ ಅವರ ಪ್ರಯತ್ನದಿಂದ ದಿವಂಗತ ಪದ್ಮಶ್ರೀ ಡಾಕ್ಟರ್ ರಾಜಾರಾವ್ ಅವರ 'ನಾರೀಗೀತ' 2013 ಮೇ ತಿಂಗಳಲ್ಲಿ ಹ್ಯೂಸ್ಟನ್‌ನಲ್ಲಿ ನಡೆಯಲಿರುವ ಕನ್ನಡ ವಸಂತ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಓದುಗರ ಕೈಸೇರಲಿದೆ. ಇದಕ್ಕೂ ಸಹ ಕನ್ನಡ ಫೌಂಡೇಶನ್ ಟ್ರಸ್ಟ್ ಧನಸಹಾಯ ನೀಡಿದೆ.

ಹ್ಯೂಸ್ಟನ್‌ನಲ್ಲಿ ಕನ್ನಡ ಕಲಾ ಸಮ್ಮೇಳನಗಳ ಪ್ರಾರಂಭ

ನಮ್ಮ ವಂಶಸ್ಥರು ನುಗ್ಗೇಹಳ್ಳಿಗೆ ಸೇರಿದವರು, ನಮ್ಮ ತಾಯ್ನುಡಿ ತಮಿಳಾದರೂ ಆಡುವ ಪ್ರೀತಿಯ ಭಾಷೆ ಕನ್ನಡ. ಮನೆಯಲ್ಲಿ ತಮಿಳಿಗಿಂತ ಕನ್ನಡದ ಉಪಯೋಗವೇ ಹೆಚ್ಚು. ನುಗ್ಗೇಹಳ್ಳಿಯಲ್ಲಿ ಹೊಯ್ಸಳರ ಕಾಲದ ಎರಡು ದೇವಸ್ಥಾನಗಳಿರುವ ವಿಷಯ ನನಗೆ ಬಹಳ ವರ್ಷಗಳಿಂದ ತಿಳಿದಿತ್ತು. ನಾನು ಒಮ್ಮೆ ಬೆಂಗಳೂರಿಗೆ ಹೋಗಿದ್ದಾಗ 'ಮಿಥಿಕ್ ಸೊಸೈಟಿ'ಗೆ ಹೋಗಿ ಹೊಯ್ಸಳರಿಗೆ ಸಂಬಂಧಿಸಿದ ಯಾವುದಾದರೂ ಪುಸ್ತಕಗಳಿವೆಯೇ ಎಂದು ಕೇಳಿದಾಗ ಅಲ್ಲಿದ್ದ ಲೈಬ್ರರಿಯನ್ Hoysala Architecture – Medieval Temples of Southern Karnataka built during Hoysala Rule (ISBN 81 85018 37 2) ಎಂಬ ಎರಡು ಪುಸ್ತಕಗಳನ್ನು ತಂದು ನನ್ನ ಮುಂದಿರಿಸಿದಾಗ ನನಗೆ ಬಹಳ ಆಶ್ಚರ್ಯ ಹಾಗೂ ಸಂತೋಷವಾಯಿತು. ಹಾಲೆಂಡಿನ ಡಾಕ್ಟರ್ ಜೆರಾರ್ಡ್ ಫೋಕಿಮಾ ಎಂಬ ಶಿಲ್ಪಶಾಸ್ತ್ರಜ್ಞ ಬರೆದು ಪ್ರಕಾಶಪಡಿಸಿದ್ದ ಈ ಪುಸ್ತಕಗಳಲ್ಲಿ ಕರ್ನಾಟಕದಲ್ಲಿ ಹೊಯ್ಸಳರ ಕಾಲದಲ್ಲಿ ನಿರ್ಮಿತವಾಗಿದ್ದ ನೂರೈವತ್ತು (ಹಲವಾರು ಶಿಥಿಲ) ದೇವಾಲಯಗಳ ಚರಿತ್ರೆ ಮತ್ತು ಚಿತ್ರಗಳನ್ನು ನೋಡಿದ ಮೇಲೆ ಈ ವಿಷಯದಲ್ಲಿ ನನಗಿರುವ ಅಲ್ಪ ಮಟ್ಟದ ಅರಿವಿನ ಅರ್ಥವಾಯಿತು. ಅದುವರೆಗೆ ನಾನು ಕೇವಲ

ಮೂರು ಹೊಯ್ಸಳ ದೇವಸ್ಥಾನಗಳು ಮಾತ್ರ ಇವೆ ಎಂದು ತಿಳಿದಿದ್ದೆ (ಬೇಲೂರು, ಹಳೇಬೀಡು ಮತ್ತು ಸೋಮನಾಥ ಪುರ). ನಮ್ಮ ನುಗ್ಗೇಹಳ್ಳಿ ದೇವಸ್ಥಾನಗಳ ಚಿತ್ರಗಳನ್ನು ಡಾಕ್ಟರ್ ಜೆರಾರ್ಡ್ ಫೋಕಿಮಾ ಅವರ ಪುಸ್ತಕದಲ್ಲಿ ನೋಡಿದ ಮೇಲಂತೂ ಅವರ ಬಗ್ಗೆ ನನಗೆ ತುಂಬ ಗೌರವ ಉಂಟಾಯಿತು. ಈ ಶಿಲ್ಪಶಾಸ್ತ್ರ ಪಂಡಿತ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಕಾಲದ ದೇವಸ್ಥಾನಗಳ ಬಗ್ಗೆಯೂ ಬರೆದಿರುವ ಈ ಕೆಳಕಂಡ ಪುಸ್ತಕಗಳು ಈಗ ನನ್ನಲ್ಲಿವೆ.

1. Architecture Decorated with Architecture: Later Medieval Temples of Karnataka, 1000-1300 AD
2 Calukya Architecture: Medieval Temples of Nothern Karnataka Built During the Rule of the Calukya of Kalyana and Thereafter, AD 1000-1300.

ಹ್ಯೂಸ್ಟನ್ ಮ್ಯೂಸಿಯಮ್ ಆಫ್ ಫೈನ್ ಆರ್ಟ್ಸ್ ಒಡನೆ ಹೊಸ ಸ್ನೇಹ

ನಾನು ಬೆಂಗಳೂರಿನಲ್ಲಿ ಕಂಡ ಮೇಲ್ಕಂಡ ವಿಷಯವನ್ನು ಎಲ್ಲ ಹ್ಯೂಸ್ಟನ್ ಸ್ನೇಹಿತರೊಡನೆ ಹಂಚಿಕೊಳ್ಳಬೇಕೆಂದು ಮ್ಯೂಸಿಯಂ ಆಫ್ ಫೈನ್ ಆರ್ಟ್ಸ್ ಹ್ಯೂಸ್ಟನ್‌ಗೆ ಹೋಗಿ ಸಂಬಂಧ ಪಟ್ಟ ಅಧಿಕಾರಿಗಳನ್ನು ನೋಡಿ, ಹೊಯ್ಸಳರ ಕಾಲದ ಕಲೆಗಳ ವಿಚಾರವಾಗಿ ಒಂದು ಅಂತರ ರಾಷ್ಟ್ರೀಯ ಸಮ್ಮೇಳನವನ್ನು ನಡೆಸಲು ದಯವಿಟ್ಟು ನನಗೆ ಅವಕಾಶ ಕೊಡಿ ಎಂದು ವಿನಂತಿಮಾಡಿದೆ. ಮ್ಯೂಸಿಯಮ್ಮಿನ ಸಾರ್ವಜನಿಕ ಕಾರ್ಯಕ್ರಮಗಳ ಮ್ಯಾನೇಜರ್ (Manager, Education and Public Programs) ಮಿಸ್ ಮಾರ್ಗರೆಟ್ ಮಿಂಸ್ ಅವರು ನನ್ನ ಪ್ರಾರ್ಥನೆಗೆ ಕೂಡಲೇ ಒಪ್ಪಿ ನನಗೆ ಎರಡು ದಿನಗಳ ಕಾಲ (ಶನಿವಾರ ಮತ್ತು ಭಾನುವಾರ) ಮ್ಯೂಸಿಯಮನ್ನು ಶುಲ್ಕರಹಿತವಾಗಿ ಕೊಡುವುದಾಗಿ ತಿಳಿಸಿ, ಉತ್ತಮ ದರ್ಜೆಯ ವಿದ್ವಾಂಸರನ್ನು ಕರೆತರಬೇಕು ಎಂಬ ಕಟ್ಟಳೆಯನ್ನು ಮಾತ್ರ ಮನವರಿಕೆ ಮಾಡಿಕೊಟ್ಟರು. ಇದೇ ನಾಂದಿಯಾಗಿ 2004 ನವೆಂಬರ್ 6–7ರಂದು ಕನ್ನಡ ವೃಂದದ ಆಶ್ರಯದಲ್ಲಿ 'ಹೊಯ್ಸಳ–2004' ಎಂಬ ಸಮ್ಮೇಳನವು ನಡೆದು, ಇನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಭಿಕರು ಆಗಮಿಸಿ ಈ ಸಮ್ಮೇಳನವನ್ನು ಯಶಸ್ವಿಗೊಳಿಸಿದರು.

'ಕರ್ನಾಟಕ ಹೆರಿಟೇಜ್ ಪ್ರಾಜೆಕ್ಟ್' ಎಂಬ ಶಿರೋನಾಮೆಯಲ್ಲಿ ಈ ಸಮ್ಮೇಳನಗಳು ಮುಂದುವರೆದು, ಮುಂದಿನ ನಾಲ್ಕು ಸಮ್ಮೇಳನಗಳು ಇದೇ ಮ್ಯೂಸಿಯಮ್‌ನಲ್ಲಿ ನಡೆದವು. ನಂತರ ನಾನು ಏಷಿಯಾ ಸೊಸೈಟಿಗೆ ಹೋಗಿ ನಮ್ಮ ಸಮ್ಮೇಳನಕ್ಕೆ ಆ ಸಂಸ್ಥೆಯ ಸಹಕಾರವನ್ನು ಕೇಳಿಕೊಂಡಾಗ, ಡೈರೆಕ್ಟರ್ ಮಿಸ್ ನ್ಯಾನ್ಸಿಹಾಸ್ ಎಂಬುವರು, ನಮ್ಮ ಸಮ್ಮೇಳನಕ್ಕೆ ಶುಭ ಕೋರಿ ತಮ್ಮ ಸಂಸ್ಥೆಯ ಬೆಂಬಲ ನೀಡಿದರು. ಅಂದಿನಿಂದ

ಇಂದಿನವರೆಗೆ ಏಷಿಯಾ ಸೊಸೈಟಿ 'ಕನ್ನಡ ವೃಂದ'ಕ್ಕೆ ತನ್ನ ಸಹಕಾರವನ್ನು ಮುಂದುವರೆಸಿಕೊಂಡು ಬಂದಿದೆ. ಮುಂದುವರಿಯುತ್ತಾ, ನಾನು ಹ್ಯೂಸ್ಟನ್ ಕಮ್ಯೂನಿಟಿ ಕಾಲೇಜಿನ ಸಹಕಾರ ಕೋರಲು ಹೋದಾಗ ಅಲ್ಲಿನ ಇಂಟರ್ ನ್ಯಾಷನಲ್ ಸ್ಟಡೀಸ್ ಡೈರೆಕ್ಟರ್ ಆಗಿದ್ದ ಮಿಸ್ ಜಿ.ಜಿ. ಡೋ ಎನ್ನುವವರು ನಮ್ಮ ಸಮ್ಮೇಳನದ ಬಗ್ಗೆ ಸಾವಧಾನದಿಂದ ವಿಚಾರ ಮಾಡಿ, ಹಣ ಸಹಾಯದೊಂದಿಗೆ ತಮ್ಮ ಕಾಲೇಜಿನ ವಿದ್ಯಾರ್ಥಿಗಳು ನಮ್ಮ ಸಮ್ಮೇಳನಕ್ಕೆ ಬರುವಂತೆ ಪ್ರೋತ್ಸಾಹವನ್ನು ನೀಡಿದರು. ಅಂತೂ ಇಂತೂ, ನಮ್ಮ ಹೊಯ್ಸಳ–2004 ಸಮ್ಮೇಳನಕ್ಕೆ ಈ ಎಲ್ಲ ಸಂಘ ಸಂಸ್ಥೆಗಳ ಸಹಾಯ ದೊರಕಿದ ನಂತರ, ಸಮ್ಮೇಳನವು ಯಶಸ್ವಿಯಾಗಿ ನಡೆಯಿತು ಎಂದರೆ ಅತಿಶಯೋಕ್ತಿಯಾಗಲಾರದು. ಹ್ಯೂಸ್ಟನ್ ನಗರದ ಮೇಯರ್ ಅವರು ತಮ್ಮ ಆಫೀಸಿನಿಂದ ನವೆಂಬರ್ 6, 2004 'ಹೊಯ್ಸಳರ ದಿನಾಚರಣೆ' ಎಂಬ proclamation ಘೋಷಿಸಿ ಸಮ್ಮೇಳನಕ್ಕೆ ಗೌರವ ನೀಡಿದ್ದಾರೆಂಬ ವಿಷಯಕ್ಕೆ ಎಲ್ಲ ಕನ್ನಡಿಗರೂ ಹೆಮ್ಮೆಪಡಬೇಕು. ಇದೊಂದು ಅಪೂರ್ವವಾದ ಕೊಡುಗೆ.

ಕಲ್ಚರಲ್ ಆರ್ಟ್ಸ್ ಕೌನ್ಸಿಲ್ ಆಫ್ ಹ್ಯೂಸ್ಟನ್ ಅಂಡ್ ಹ್ಯಾರಿಸ್ ಕೌಂಟಿ

ಸಮ್ಮೇಳನಗಳಿಗೆ ಖರ್ಚನ್ನು ತೂಗಿಸುವ ಜವಾಬ್ದಾರಿಯೂ ನನ್ನದೇ ಆದ ಕಾರಣ, ಧನ ಸಹಾಯವನ್ನು ಅರಸುತ್ತ ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮತ್ತು ಸಂಸ್ಥೆಗಳಿಗೆ ಸರಕಾರದಿಂದ ಧನ ಸಹಾಯ ನೀಡುವ 'ಕಲ್ಚರಲ್ ಆರ್ಟ್ಸ್ ಕೌನ್ಸಿಲ್ ಆಫ್ ಹ್ಯೂಸ್ಟನ್ ಅಂಡ್ ಹ್ಯಾರಿಸ್ ಕೌಂಟಿ' ಆಫೀಸಿಗೆ ಬಂದು, ಅಲ್ಲಿ ಗ್ರಾಂಟ್ಸ್ ಡೈರೆಕ್ಟರ್ ಮಿಸ್ಟರ್ ಜೋ ವಿಲ್ಸನ್ ಎಂಬುವರನ್ನು ಭೇಟಿ ಮಾಡಿದೆ. ಅವರು, ನಾನು 'ಕನ್ನಡ ವೃಂದ'ದ ಪರವಾಗಿ ಅರ್ಜಿ ಸಲ್ಲಿಸಿದರೆ ನಮ್ಮ ಸಂಸ್ಥೆಗೆ ಸರ್ಕಾರದಿಂದ ಹಣ ಮಂಜೂರು ಮಾಡಬಹುದಾಗಿ ತಿಳಿಸಿದರು. ಅಂತೆಯೇ ನಮ್ಮ ಅರ್ಜಿ ತಲಪಿದಾಗ ಅವರು ನನ್ನನ್ನು ಕರೆಸಿ ಎಲ್ಲ ವಿಷಯಗಳನ್ನು ಸಮಾಧಾನವಾಗಿ ಕೇಳಿ ತಿಳಿದುಕೊಂಡು, ನಮ್ಮ ವೃಂದಕ್ಕೆ ಗ್ರಾಂಟ್ಸ್ ಬರುವಂತೆ ಮಾಡಿ, ನಮ್ಮ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರೋತ್ಸಾಹಿಸುವುದಲ್ಲದೇ ನಮ್ಮ ಸಮ್ಮೇಳನಗಳ ಬಗ್ಗೆ ಸಹೃದಯದಿಂದ ಪ್ರಚಾರ ಕೂಡ ಮಾಡಿದ್ದಾರೆ. ಇಂತಹ ವ್ಯಕ್ತಿ ಸಿಕ್ಕಿದ್ದು 'ಕನ್ನಡ ವೃಂದ'ದ ಅದೃಷ್ಟ. ಜೋ ಅವರ ಸಹಾಯದಿಂದ ಹಲವಾರು ವರ್ಷಗಳು 'ಕನ್ನಡ ವೃಂದ'ಕ್ಕೆ ಗ್ರಾಂಟ್ಸ್ ದೊರಕಿ ನಾವು ಉತ್ತಮ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಾಯಿತು.

ಟೆಕ್ಸಾಸ್ ಕಮಿಷನ್ ಆನ್ ದಿ ಆರ್ಟ್ಸ್

ಇದು ನಮ್ಮ ರಾಜ್ಯದ ಒಂದು ಹಿರಿಯ ಸಂಸ್ಥೆ. ಪ್ರತಿ ವರ್ಷ Legislatureನಲ್ಲಿ, ಸದಸ್ಯರು ಚರ್ಚಿಸಿ ನಮ್ಮ ರಾಜ್ಯದ ಕಲೆ ಮತ್ತು ಸಾಹಿತ್ಯಗಳ ಪೋಷಣೆಗಾಗಿ

ಒದಗಿಸಿಡುವ ಹಣವನ್ನು ಈ ಸಂಸ್ಥೆ ಅರ್ಹತೆಯುಳ್ಳ ಕಲಾಸಂಸ್ಥೆಗಳಿಗೆ ಮಾತ್ರ ನೀಡುತ್ತಾರೆ. 'ಕನ್ನಡ ವೃಂದ'ದ ಪರವಾಗಿ ನಾನು ಅರ್ಜಿ ಸಲ್ಲಿಸಿದ ಮೂರು ತಿಂಗಳಾದರೂ ಯಾವ ಉತ್ತರವೂ ಬಾರದ ಕಾರಣ, ನಾನೇ ಆಸ್ಟಿನ್ನಿಗೆ ಹೋಗಿ ನೋಡಿಕೊಂಡು ಬರಬೇಕೆಂದು 150 ಮೈಲಿಗಳ ದೂರದಲ್ಲಿರುವ ಆಸ್ಟಿನ್ನಿಗೆ ಹೋಗಿ ಅಲ್ಲಿ ಆಫೀಸಿನ ಡೈರೆಕ್ಟರ್ ಮಿಸ್ ಅನೀನಾ ಮೋರ್ ಅವರನ್ನು ಭೇಟಿ ಮಾಡಿದೆ. ಕಾರಣಾಂತರಗಳಿಂದ ನಮ್ಮ ಅರ್ಜಿಯನ್ನು ನೋಡಲಾಗಲಿಲ್ಲವೆಂದು ವಿಷಾದಿಸಿದ ಮಿಸ್ ಮೋರ್ ಅವರು ನಮಗೆ 1500 ಡಾಲರ್‌ಗಳ ಗ್ರಾಂಟ್ ತಕ್ಷಣ ಜಾರಿಮಾಡಿದರು. ಸಧ್ಯ, ಬಂದ ಕೆಲಸವಾಯ್ತಲ್ಲ ಎಂದು ಕೂಡಲೇ ಅಲ್ಲಿಂದ ಬಂಡಿ ಬಿಟ್ಟೆ. ಇದೊಂದು ನನಗೆ ಮರೆಯಲಾಗದ ಅನುಭವ.

ಸಮ್ಮೇಳನಗಳ ಮುಂದುವರಿಕೆ

ಮರು ವರ್ಷದಲ್ಲಿ ಅಂದರೆ 2005ರಲ್ಲಿ, 'Sangama- confluence of cultures in South India during the Vijayanagar era' ಎಂಬ ಸಮ್ಮೇಳನವನ್ನು ನವೆಂಬರ್ 12 ಮತ್ತು 13ರಂದು ಮ್ಯೂಸಿಯಮ್ ಆಫ್ ಫೈನ್ ಆರ್ಟ್ಸ್ ಹ್ಯೂಸ್ಟನ್ನಿನಲ್ಲಿ ನಿರ್ವಹಿಸಿದೆ. ಒಟ್ಟು 11 ವಿದ್ವಾಂಸರಿಂದ ಕೂಡಿದ್ದ ಈ ಕಾರ್ಯಕ್ರಮದಲ್ಲಿ ಬೆಂಗಳೂರಿನಿಂದ ಮೂರು ಭಾಷಣಕಾರರು ಆಗಮಿಸಿದ್ದರು. ಹ್ಯೂಸ್ಟನ್ನಿನಲ್ಲಿ ಈ ಸಮ್ಮೇಳನ ಮುಗಿದ ನಂತರ ನ್ಯೂಯಾರ್ಕಿನ ಸ್ಟೋನಿ ಬ್ರೂಕ್ ಮತ್ತು ಲಾಸ್ ಏಂಜಲೀಸಿನ ಲಯೋಲ ಮೇರಿ ಮಾಂಟ್ ಯೂನಿವರ್ಸಿಟಿಗಳಲ್ಲಿ ಕೂಡ ಈ ಸಮ್ಮೇಳನ ನಡೆದು ಜನರ ಮೆಚ್ಚುಗೆ ಪಡೆಯಿತು. ದಕ್ಷಿಣ ಕ್ಯಾಲಿಫೋರ್ನಿಯದ 'ಸೋಕ' ಎಂಬ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿರುವ ಡಾಕ್ಟರ್ ನಳಿನಿ ರಾವ್ ಅವರು ಈ ಸಮ್ಮೇಳನಕ್ಕಾಗಿ ಬಹಳ ಸಹಾಯ ಮಾಡಿದರು. ಈ ಸಮ್ಮೇಳನದ ಅಂಗವಾಗಿ ಐಂ ಕೌಂಟಿ ಮ್ಯೂಸಿಯಮ್‌ನಲ್ಲಿ ಉತ್ತಮವಾದ ಯಕ್ಷಗಾನ ಪ್ರದರ್ಶನ ಕೂಡ ನಡೆಯಿತು. ಸಮ್ಮೇಳನದ ಮೇಲ್ವಿಚಾರಣೆಗಾಗಿ ನಾನು ಹಲವು ಬಾರಿ ಲಾಸ್ ಏಂಜಲೀಸಿಗೆ ಹೋಗಿ ಬರಬೇಕಾಯಿತು.

ಹ್ಯೂಸ್ಟನ್ ಸಮ್ಮೇಳನದ ಪೂರ್ವ ಭಾವಿಯಾಗಿ ಪದ್ಮಶ್ರೀ ಮಾಳವಿಕಾ ಸರುಕ್ಕೈ ಅವರು 2005 ನವೆಂಬರ್ 6ರಂದು ಸ್ಟಾಫರ್ಡ್ ಸೆಂಟರ್ ಎಂಬ ಸಭಾಂಗಣದಲ್ಲಿ ಅತ್ಯುತ್ತಮ ರೀತಿಯ ಭರತನಾಟ್ಯ ಪ್ರದರ್ಶನವನ್ನು ನೀಡಿ ಮುಂಬರಲಿರುವ ನಮ್ಮ ಸಮ್ಮೇಳನದ ವಿಚಾರವಾಗಿ ಮಾತನಾಡಿದರು. ಈ ಸಮ್ಮೇಳನದ ನೆನಪಿಗಾಗಿ ಡಾಕ್ಟರ್ ನಳಿನಿ ರಾವ್ ಅವರು ಪರಿಷ್ಕರಿಸಿದ 'ಸಂಗಮ' ಎಂಬ ವಿಶೇಷ ಪುಸ್ತಕವನ್ನು (ISBN 81-88629-48-0) ಹ್ಯೂಸ್ಟನ್ ಮತ್ತು ಲಾಸ್ ಏಂಜಲೀಸ್ ನಗರಗಳಲ್ಲಿ ಬಿಡುಗಡೆ ಮಾಡಲಾಯಿತು.

ಬೇರು ಸೂರು

ಭಾರತದಲ್ಲಿ ನಮ್ಮ ಸಮ್ಮೇಳನಗಳು

ಮತ್ತೊಂದು ಸಂತೋಷದ ಸುದ್ದಿ ಎಂದರೆ, ಹ್ಯೂಸ್ಟನ್ ನಗರದಲ್ಲಿ ನಡೆದ ರೀತಿಯ ಸಮ್ಮೇಳನವು ಜನವರಿ 2007ರಲ್ಲಿ ಮುಂಬೈ ನಗರದ ಸೋಫಿಯ ಕಾಲೇಜಿನಲ್ಲಿ ಪ್ರಾಂಶುಪಾಲ ಡಾಕ್ಟರ್ ಅನಿಲಾ ವರ್ಗೀಸ್ ಅವರ ಮಾರ್ಗದರ್ಶನದಲ್ಲಿ, ನಂತರ ಕಾರ್ನೆಲ್ ಯೂನಿವರ್ಸಿಟಿಯ ಪ್ರೊಫೆಸರ್ ಡಾಕ್ಟರ್ ಮೈಕಲ್ ಟಾಮ್ಲಾನ್ ಮತ್ತು ಶ್ರೀಮತಿ ಸಂಗೀತ ಜಿಂದಾಲ್ ಅವರ ಸಹಕಾರದಿಂದ ಹಂಪಿಯಲ್ಲಿ ಸಹ ನಡೆದದ್ದು ಕನ್ನಡ ವೃಂದಕ್ಕೆ ಗೌರವ ತಂದಿದೆ. ಈ ಸಮ್ಮೇಳನಗಳ ಜವಾಬ್ದಾರಿಯನ್ನು ಹೊತ್ತು ನಾನು ಮಾಡಿದ ಕೆಲಸ ಕನ್ನಡಿಗರಿಗೆ ಸ್ವಲ್ಪವಾದರೂ ಉಪಯೋಗವಾಗಿರಬಹುದು. ಮೈಸೂರಿನಲ್ಲಿ ಒಡೆಯರ ವಂಶದ ಸಮ್ಮೇಳನವನ್ನೂ, ಬೆಂಗಳೂರಿನಲ್ಲಿ ಒಂದು ಆರ್ಟ್ಸ್ ಸಮ್ಮೇಳನವನ್ನೂ ಮಾಡಬೇಕೆಂದು ಪ್ರಯತ್ನ ಮಾಡಿದೆ. ಆ ಪ್ರಯತ್ನಗಳು ನನಸಾಗುವ ಕಾಲ ಇನ್ನೂ ಸನ್ನಿಹಿತವಾಗಿಲ್ಲ.

ಏಷಿಯಾ ಸೊಸೈಟಿಯೊಡನೆ ಸಂಬಂಧ

ಈ ವೇಳೆಗೆ ಚೆನ್ನಾಗಿ ಪರಿಚಯವಾಗಿದ್ದ ಏಷಿಯಾ ಸೊಸೈಟಿಯ ಛೇರ್ಮನ್ ಚಾರ್ಲ್ಸ್ ಫಾಸ್ಟರ್ ಅವರು ನನ್ನ ಮೇಲಿನ ಅಭಿಮಾನದಿಂದ ನಮ್ಮ ಮುಂದಿನ ವರ್ಷದ Royal Legacy, Vijayanagara to Mysore ಎಂಬ ಸಮ್ಮೇಳನವನ್ನು ಡಿಸೆಂಬರ್ 2, 2006ರಂದು ಮ್ಯೂಸಿಯಂ ಆಫ್ ಫೈನ್ ಆರ್ಟ್ಸ್‌ನಲ್ಲಿ ಉದ್ಘಾಟಿಸಿದರು. ಯೂನಿವರ್ಸಿಟಿ ಆಫ್ ಹ್ಯೂಸ್ಟನ್, Dean of the College of Liberal Arts and Social Sciences, ಡಾಕ್ಟರ್ ಜಾನ್ ಆನ್ಟೆಲ್ ಅವರು ಸಮ್ಮೇಳನದ ಎರಡನೆಯ ದಿನದಂದು 'ಫೌಂಡೇಶನ್ ಫಾರ್ ಇಂಡಿಯಾ ಸ್ಟಡೀಸ್' ಎಂಬ ಸಂಸ್ಥೆಯ ಬಗ್ಗೆ ಎರಡು ಮಾತನಾಡಿ ಕನ್ನಡ ವೃಂದವು ಏರ್ಪಡಿಸುತ್ತಿರುವ ಸಮ್ಮೇಳನಗಳ ಗುಣಮಟ್ಟಗಳಿಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು. ಶ್ರೀ ಕೃಷ್ಣ ವಾವಿಲಾಲ ಎಂಬುವರಿಂದ ಸ್ಥಾಪಿತವಾದ ಈ ಸಂಸ್ಥೆ ಯೂನಿವರ್ಸಿಟಿ ಆಫ್ ಹ್ಯೂಸ್ಟನ್ ಒಡನೆ ಸಂಪರ್ಕ ಮತ್ತು ಸಹಕಾರಗಳಿಂದ ಕಳೆದ ಐದು ವರ್ಷಗಳಿಂದ ಕೆಲಸ ಮಾಡುತ್ತಿದೆ. ನಾನು ಈ ಸಂಸ್ಥೆಯ ಕಾರ್ಯದರ್ಶಿಯಾದ ಕಾರಣ ನನಗೆ ಈ ಮೂಲಕ ಹಲವಾರು ಹೊಸ ಸಂಪರ್ಕಗಳು ದೊರೆತಿವೆ. ಸಮ್ಮೇಳನದ ಸವಿ ನೆನಪಿಗಾಗಿ ಅನೇಕ ಮಾಹಿತಿಗಳಿಂದ ಕೂಡಿದ 'ಜಯ ವಿಜಯ' ಎಂಬ ಪುಸ್ತಕವನ್ನು ಹೊರತರಲಾಯಿತು. ಶ್ರೀ ಜಯಚಾಮರಾಜ ಒಡೆಯರ್ ಅವರಿಂದ ರಚಿತವಾಗಿರುವ ಕೃತಿಗಳ ಪಟ್ಟಿಯನ್ನು ಈ ಪುಸ್ತಕದಲ್ಲಿ ಸೇರಿಸಲಾಗಿದೆ. ಶ್ರೀಮತಿ ನೀಲ ಚಕ್ರವರ್ತಿಯವರು ಒಡೆಯರ್ ಅವರ ಕೆಲವು ಕೃತಿಗಳನ್ನು ಮತ್ತು ಶ್ರೀಮತಿ ರಾಜೇಶ್ವರಿ ಭಟ್ ಅವರು ದೇವೀ ಕೃತಿಗಳನ್ನು ಹಾಡಿದರು. ಮ್ಯೂಸಿಯಂನಲ್ಲಿ ದಸರಾ ಬೊಂಬೆಗಳ ಪ್ರದರ್ಶನವನ್ನು ಡಾಕ್ಟರ್ ಮಂಗಳಾ ಪ್ರಸಾದ್ ಅವರು ಏರ್ಪಡಿಸಿದ್ದರು. ಒಂದು ಕಿರು

ಪ್ರಮಾಣದ ದಸರಾ ಮೆರವಣಿಗೆ ಸಹ ನಡೆದು ಎಲ್ಲರೂ ನಲಿಯುವಂತಾಯಿತು. ಮೈಸೂರಿನ ಒಡೆಯರ್ ಮನೆತನಕ್ಕೆ ಸೇರಿದ ಶ್ರೀಮತಿ ಊರ್ಮಿಲಾ ದೇವಿಯವರು ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು, ಯೂನಿವರ್ಸಿಟಿ ಆಫ್ ಹ್ಯೂಸ್ಟನ್‌ನ Arts and History ವಿಭಾಗದ ಪ್ರೊಫೆಸರ್ ರೆಕ್ಸ್ ಕೂಂಟ್ಸ್ ಅವರು ಮುಕ್ತಾಯ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಭಾರತದ ಇತಿಹಾಸಗಳತ್ತ ಗಮನ

ಕರ್ನಾಟಕದ ಇತಿಹಾಸಕ್ಕೆ ಸಂಬಂಧ ಪಟ್ಟ ಸಮ್ಮೇಳನಗಳನ್ನು ಹಲವು ವರ್ಷಗಳ ಕಾಲ ನಡೆಸಿದ ನಂತರ, ನನಗೆ ಭಾರತದ ಪ್ರಾಚೀನ ಇತಿಹಾಸ ಮತ್ತು ಶಿಲ್ಪ ಕಲೆಗಳಿಗೆ ಹೊಂದಿಕೊಂಡ ವಿಷಯಗಳತ್ತ ಗಮನ ಸಾಗಿತು. ಕನ್ನಡಿಗರಿಗಾಗಿ ಮತ್ತು ಕನ್ನಡಕ್ಕಾಗಿ ಕೆಲಸ ಮಾಡುತ್ತಿರುವ 'ಹ್ಯೂಸ್ಟನ್ ಕನ್ನಡ ವೃಂದ'ದ ಆಶ್ರಯದಲ್ಲಿ ಇಂತಹ ಸಮ್ಮೇಳನಗಳನ್ನು ನಡೆಸುವುದು ಉಚಿತವಲ್ಲವೆಂದು, ನನ್ನ ಕೆಲಸದ ವ್ಯಾಪ್ತಿಯನ್ನು ಬದಲಾಯಿಸಿಕೊಳ್ಳಲು ಬೇರೊಂದು ಸಂಸ್ಥೆಯನ್ನು ಹುಡುಕಬೇಕಾಯಿತು. 'ಇಂಡಿಯನ್ ಪರ್ಫಾರ್ಮಿಂಗ್ ಆರ್ಟ್ಸ್ – ಸಂಸ್ಕೃತಿ' ಎಂಬ ಸಂಸ್ಥೆಯ ಸ್ಥಾಪಕರು ಮತ್ತು ಆರ್ಟಿಸ್ಟಿಕ್ ಡೈರೆಕ್ಟರ್ ಡಾಕ್ಟರ್ ರತ್ನಕುಮಾರ್ ಅವರು ನನಗೆ ಹಲವಾರು ವರ್ಷಗಳ ಪರಿಚಯದವರು. ನಾನು ಅವರೊಡನೆ ಈ ವಿಷಯನ್ನು ಪ್ರಸ್ತಾಪ ಮಾಡಿದಾಗ ಅವರು ನನ್ನನ್ನು ಸಂಸ್ಕೃತಿ ಸಂಸ್ಥೆಯ ಎಕ್ಸಿಕ್ಯುಟಿವ್ ಡೈರೆಕ್ಟರ್ ಆಗಿ ನೇಮಕ ಮಾಡಿದರು. ಇದರಿಂದಾಗಿ ನಾನು ನನ್ನ ಕಾರ್ಯ ಕ್ಷೇತ್ರವನ್ನು ವಿಸ್ತಾರಗೊಳಿಸಿ ಹೊಸ ಸಮ್ಮೇಳನಗಳನ್ನು ನಿರ್ವಹಿಸಲು ಸಾಧ್ಯವಾಯಿತು. ಸಂಸ್ಕೃತಿ ಸಂಸ್ಥೆಯ ಆಶ್ರಯದಲ್ಲಿ ಮುಂದಿನ ನಾಲ್ಕು ಸಮ್ಮೇಳನಗಳು ಮ್ಯೂಸಿಯಮ್ ಆಫ್ ಫೈನ್ ಆರ್ಟ್ಸ್ ಹ್ಯೂಸ್ಟನ್‌ನಲ್ಲಿ ನಡೆದವು. ಹೀಗೆ ನಡೆದ ಸಮ್ಮೇಳನಗಳೆಂದರೆ: Indian Paintings-the lesser known traditions (Dr. Anna Dallapiccola, Academic Advisor, March 8-9, 2008), Ajanta- Miracle in the Mountains (Dr. Walter Spink, Academic Advisor, April 18-19, 2009), Art and Literature at the Thanjavur Maratha Court- A Confluence of Cultures (Dr. Indira Peterson, Academic Advisor, July 10, 2010, Dr. John Antel, Chairman). ಇತ್ತೀಚೆಗೆ ನಡೆದ Manifestations of Shiva, (Dr. Indira V. Peterson, Academic Advisor, December 1, 2012) ಸಮ್ಮೇಳನದ ವಿಶೇಷವೆಂದರೆ ಡಾಕ್ಟರ್ ರತ್ನಕುಮಾರ್ ಅವರು ಆರ್ಟ್ಸ್ ಆಫ್ ಇಂಡಿಯಾ ಗ್ಯಾಲರಿಯಲ್ಲಿ ನಡೆಸಿಕೊಟ್ಟ ಲೆಕ್ಚರ್ ಹಾಗೂ ಮಾದರಿಗಾಗಿ ಮಾಡಿ ತೋರಿಸಿದ ಸುಂದರವಾದ ನೃತ್ಯಗಳು. ಸಮ್ಮೇಳನದ ಮುಕ್ತಾಯವಾಗಿ ರತ್ನಕುಮಾರ್ ತಂಡದವರಿಂದ 'ಶಿವೋಹಂ' ಎಂಬ ವೈಭವಯುತ

ನೃತ್ಯ ಪ್ರದರ್ಶನದಲ್ಲಿ ವೇಣುಗೋಪಾಲ್ ಜೋಸ್ಯುಲ ಅವರ ನೃತ್ಯ ಎಲ್ಲರ ಗಮನ ಸೆಳೆಯಿತು.

ಮಿಲ್ಲರ್ ಥಿಯೇಟರ್‌ನೊಡನೆ ಮೈತ್ರಿ

90 ವರ್ಷಗಳಿಂದ ಹ್ಯೂಸ್ಟನ್ ನಗರದ ಹರ್ಮನ್ ಪಾರ್ಕಿನಲ್ಲಿರುವ ಈ ಹೊರಾಂಗಣ ಒಳಾಂಗಣ ಪ್ರದರ್ಶನ ಮಂದಿರವು ಉತ್ತರ ಅಮೇರಿಕಾದಲ್ಲಿ ಬಹಳ ಪ್ರಸಿದ್ಧಿ ಹೊಂದಿದೆ. 1400 ಮಂದಿ ಒಳಾಂಗಣದಲ್ಲೂ ಹತ್ತುಸಾವಿರಕ್ಕೂ ಹೆಚ್ಚಿನ ಮಂದಿ ಹೊರಾಂಗಣದಲ್ಲೂ ಕುಳಿತು ನೋಡಬಹುದಾದ ಈ ಮಂದಿರದಲ್ಲಿ ಕಾರ್ಯಕ್ರಮ ನೀಡಲು ನೂರಾರು ಸಂಘಗಳು ಅರ್ಜಿ ಸಲ್ಲಿಸಿದರೂ ಕೇವಲ ಕೆಲವೇ ಸಂಘಗಳಿಗೆ ಮಾತ್ರ ಈ ಅವಕಾಶ ದೊರೆಯುತ್ತದೆ. 2003ರಲ್ಲಿ 'ಕನ್ನಡವೃಂದ'ದ ಅರ್ಜಿ ಸಲ್ಲಿಸಿದ ನಂತರ ನನಗೆ ಇಂಟರ್ವ್ಯೂಗೆ ಬರಬೇಕೆಂದು ಕರೆ ಬಂದಿತು. ಆರ್ಟಿಸ್ಟಿಕ್ ಡೈರೆಕ್ಟರ್ ಎಂದು ಶ್ರೀಮತಿ ಇಂದ್ರಾಣಿ ಪಾರ್ಥಸಾರಥಿಯವರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದೆ. ಹನ್ನೆರಡು ಜನರಿಂದ ಕೂಡಿದ್ದ ಬೋರ್ಡಿನವರ ಮುಂದೆ ನಮ್ಮ ಇಂಟರ್ವ್ಯೂ ನಡೆದು ನಮ್ಮ ಅರ್ಜಿ ಬಗ್ಗೆ ಮತ್ತು ನಮ್ಮ ಕಲಾ ಪ್ರದರ್ಶನದ ಶಕ್ತಿಯ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿದರು. ನಮಗೆ ಗ್ರಾಂಟ್ ಬರಬಹುದೆಂಬ ನಂಬಿಕೆ ನನಗಿರಲಿಲ್ಲ. ಆದರೆ ನಮ್ಮ ಆಶ್ಚರ್ಯಕ್ಕೆ ನಾವು ಕೇಳಿದ್ದ ಗ್ರಾಂಟ್ ಹಣ ಕೊಟ್ಟು ನಮಗೆ ಪ್ರೋತ್ಸಾಹ ಕೊಟ್ಟಿದ್ದರು ಮಿಲ್ಲರ್ ಬೋರ್ಡಿನವರು. 2003 ಏಪ್ರಿಲ್ 26ರಂದು 'ಕನ್ನಡವೃಂದ' Sights and Sounds from South India ಎಂಬ ಪ್ರದರ್ಶನವನ್ನು ಬಹಳ ಯಶಸ್ವಿಯಾಗಿ ಪ್ರದರ್ಶಿಸಿತು. ನೂರಕ್ಕೂ ಮೀರಿದ ಸಂಖ್ಯೆಯಲ್ಲಿ ಭಾಗವಹಿಸಿದ ಕಲಾವಿದರು ನಮ್ಮ ಪ್ರದರ್ಶನ ಯಶಸ್ವಿಯಾಗಲು ಸಹಾಯಕರಾಗಿದ್ದರು. ಡೈರೆಕ್ಟರ್ ಮಿಸ್ ಮೇರಿ ಲೌರಿಯವರು ನಮ್ಮ ಪ್ರದರ್ಶನವನ್ನು ಮೆಚ್ಚಿ ಮುಂಬರುವ ವರ್ಷಗಳಲ್ಲೂ ನಮಗೆ ಗ್ರಾಂಟ್ ಸಿಗುವಂಥ ಭದ್ರ ತಳಹದಿ ಹಾಕಿದ್ದರು. 2003ರ ನಂತರ ಮೂರು ವರ್ಷಗಳ ಕಾಲ ಪ್ರತಿ ವರ್ಷವೂ ತಪ್ಪದೆ ಮಿಲ್ಲರ್ ಥಿಯೇಟರ್‌ನಲ್ಲಿ ಪ್ರದರ್ಶನ ಕೊಟ್ಟು ಕನ್ನಡ ವೃಂದವು ಎಲ್ಲರಿಗೆ ಪರಿಚಿತವಾದ ಸಂಸ್ಥೆಯಾಯಿತು. ಇಲ್ಲಿ ನಾನು ನೋಡಿದ 'ಹಚ್ಚೇವು ಕನ್ನಡದ ದೀಪ' ನೃತ್ಯವು ಈಗಲೂ ನನ್ನ ನೆನಪಿನಲ್ಲಿ ಹಸಿರಾಗಿ ಉಳಿದಿದೆ. ಅಂಬಾಸೆಡರ್ ಫೋಕ್ಲೋರಿಕೋ ಎಂಬ ಮೆಕ್ಸಿಕನ್ ನೃತ್ಯಸಂಸ್ಥೆಯ ಸಹಕಾರದಿಂದ ಮೆಕ್ಸಿಕನ್ ಹಾಗೂ ಭಾರತೀಯ ನೃತ್ಯಗಳ ಪ್ರದರ್ಶನವನ್ನು ಏಕ ಕಾಲದಲ್ಲಿ ಮಾಡಿ ತೋರಿಸಿದ್ದು ಕಲಾಭಿಮಾನಿಗಳಿಗೆ ಅಚ್ಚರಿಯನ್ನುಂಟುಮಾಡಿತು.

'ಸಂಸ್ಕೃತಿ' ಸಂಸ್ಥೆಯನ್ನು ಸೇರಿದ ನಂತರ ನಾನು 'ಇನ್‌ಕ್ರೆಡಿಬಲ್ ಇಂಡಿಯಾ' ಎಂಬ ವಾರ್ಷಿಕ ಕಾರ್ಯಕ್ರಮವನ್ನು 'ಸಂಸ್ಕೃತಿ'ಯ ಆಶ್ರಯದಲ್ಲಿ ನಡೆಸುತ್ತಾ ಬಂದಿದ್ದೇನೆ. ಮಿಲ್ಲರ್ ಥಿಯೇಟರ್‌ನಲ್ಲಿ ಈಗಿರುವ ಎಕ್ಸಿಕ್ಯುಟಿವ್ ಡೈರೆಕ್ಟರ್ ಸಿ.ಸಿ. ಡಿಗಾಲ್

ಅವರು, ನಮ್ಮ ಕಾರ್ಯಕ್ರಮಗಳನ್ನು ನೋಡಿ ನಮಗೆ ಉತ್ತೇಜನ ನೀಡುತ್ತಿದ್ದಾರೆ. ಸುಮಾರು ನಾಲ್ಕರಿಂದ ಎಂಟು ಸಾವಿರ ಜನ ನೋಡಿ ಆನಂದಿಸುವ ಈ ಕಾರ್ಯಕ್ರಮಗಳು ಉತ್ತಮ ಮಟ್ಟದಲ್ಲಿರಬೇಕು ಎಂಬುದೇ ನಮ್ಮ ಉದ್ದೇಶ.

ಹ್ಯೂಸ್ಟನ್ ಮೇಯರ್ ಆಫೀಸಿನೊಡನೆ ಸಂಪರ್ಕ

ಸಿ.ಸಿ. ಡಿಗಾಲ್ ಅವರು ನನಗೆ ಹ್ಯೂಸ್ಟನ್ ನಗರದ ಮೇಯರ್ ಅವರ ಆಫೀಸಿನ ಸ್ಪೆಷಲ್ ಪ್ರಾಜೆಕ್ಟ್ಸ್ ಮುಖ್ಯಾಧಿಕಾರಿಣಿ ಮಿಸ್ ಮೆಲಿಸ್ಸಾ ಟೇಟಂ ಅವರ ಪರಿಚಯ ಮಾಡಿಕೊಟ್ಟರು. ಮೆಲಿಸ್ಸಾ ಅವರ ಸಹಾಯದಿಂದ ನಮ್ಮ ಸಮ್ಮೇಳನಗಳಿಗೆ ಹ್ಯೂಸ್ಟನ್ ನಗರಾಡಳಿತದಿಂದ ಪ್ರೋಕ್ಲಮೇಶನ್‌ಗಳನ್ನು, ಸನ್ಮಾನಪತ್ರಗಳನ್ನು ಪಡೆಯುವುದು ಸುಲಭವಾಯಿತು. ಮೆಲಿಸ್ಸಾ ಟೇಟಂ ಹ್ಯೂಸ್ಟನ್ ಪಾರ್ಕ್ಸ್ ಅಂಡ್ ರಿಕ್ರಿಯೇಶನ್ಸ್ ವಿಭಾಗದಲ್ಲಿ ನನಗೆ ಅನೇಕ ಹೊಸಬರ ಪರಿಚಯವನ್ನು ಮಾಡಿ ಕೊಟ್ಟಿದ್ದಾರೆ. ನನಗೆ ಹಲವು ಹತ್ತಾರು ರೀತಿಯಲ್ಲಿ ಈಗಲೂ ಸಹಾಯ ಮಾಡುತ್ತಿರುವ ಮೆಲಿಸ್ಸಾ ಅವರಿಗೆ ನಾನು ಚಿರಋಣಿಯಾಗಿದ್ದೇನೆ.

Houston International Festival

ವಿಶ್ವದ ಹಲವಾರು ದೇಶಗಳ, ಭಾಷೆಗಳ, ವೇಷ ಭೂಷಣಗಳ, ಉಡುಗೆ ತೊಡುಗೆಗಳ, ಆಚಾರ, ವಿಚಾರ, ಕಲೆ, ಸಾಹಿತ್ಯಗಳ ಆಗರವಾಗಿರುವ ಹ್ಯೂಸ್ಟನ್ ನಿಜಕ್ಕೂ ಒಂದು ಅಂತರ್ ರಾಷ್ಟ್ರೀಯ ನಗರವಾಗಿದೆ. ಇಲ್ಲಿ ಪ್ರತಿವರ್ಷವೂ ನಡೆಯುವ Houston International Festival (ಮಿಸ್ ಕೇಟೀ ಒಜಾರ್ನಿಕ್) ಉತ್ಸವವು ಹಲವಾರು ದೇಶಗಳ ಸಾಂಸ್ಕೃತಿಕ ಕಲೆಗಳನ್ನು ನೋಡುವ ಅವಕಾಶವನ್ನು ಕಲ್ಪಿಸುತ್ತದೆ. 2004ರಲ್ಲಿ ಈ ಉತ್ಸವದ ಸಮಿತಿಯು ಭಾರತವನ್ನು theme country ಎಂದು ಪರಿಗಣಿಸಿ ಗೌರವಿಸಿತು. ಹ್ಯೂಸ್ಟನ್‌ನಲ್ಲಿರುವ ಭಾರತ ಸರ್ಕಾರದ ಪ್ರತಿನಿಧಿ ಕೌನ್ಸಲ್ ಜನರಲ್ ಶ್ರೀ ಎಸ್. ಆರ್. ತಯಾಲ್ ಅವರ ನೇತೃತ್ವದಲ್ಲಿ ನಡೆದ ಈ ಉತ್ಸವದ ಅಂಗವಾಗಿ ಕನ್ನಡ ವೃಂದ ಏರ್ಪಡಿಸಿದ್ದ ಕರ್ನಾಟಕ ಪೆವಿಲಿಯನ್ ವಿಸ್ತಾರವಾಗಿದ್ದು ಕರ್ನಾಟಕವನ್ನು ಬಿಂಬಿಸುವ ನೂರಾರು ವಸ್ತುಗಳನ್ನು ಪ್ರದರ್ಶಿಸಿ, 'ಅತ್ಯಂತ ಆಕರ್ಷಣೀಯ ಪೆವಿಲಿಯನ್'ಎಂದು ಮೆಚ್ಚುಗೆ ಪಡೆಯಿತು. ಈ ಪೆವಿಲಿಯನ್ ಸಿದ್ಧಪಡಿಸಲು ಶ್ರಮವಹಿಸಿದ ಗೀತ, ರಾಮಣ್ಣ, ಮಧು ಸುಲ್ಲಧ್ಮಟ್, ಮಂಗಳ ಪ್ರಸಾದ್, ಮುಕುಂದ್ ಹುಕ್ಕೇರಿ, ನಟರಾಜ್ ಕಲ್ಲೂರ್, ಯಶ್ವಂತ್, ವಿವೇಕ್, ಮೀನಾ ಮತ್ತು ವಾಸು ಐತಾಳ, ಪ್ರಿಯ, ಲೀಲಾ, ರಘು ಚಕ್ರವರ್ತಿ, ಡಾಕ್ಟರ್ ಸತೀಶ್ ನಾಗರಾಜಯ್ಯ ಮುಂತಾದವರಿಗೆ ನಮ್ಮೆಲ್ಲರ ಅಭಿನಂದನೆ ಸಲ್ಲುತ್ತದೆ. ಈ ಉತ್ಸವದ ಸಮಯದಲ್ಲಿ ಏರ್ಪಡಿಸಿದ್ದ ಜಗತ್ ಪ್ರಸಿದ್ಧವಾದ ಮೈಸೂರಿನ ದಸರಾ ಮೆರವಣಿಗೆಯಂತೂ ಕಣ್ಣಿಗೆ ಹಬ್ಬ ತರುವಂತಿತ್ತು. ಅರ್ಧ ಮೈಲಿ ಉದ್ದದ ಈ

ಮೆರವಣಿಗೆಯಲ್ಲಿ ಕನ್ನಡ ವೃಂದದ ನೂರಾರು ಸದಸ್ಯರು ಭಾಗವಹಿಸಿ ಮೆರವಣಿಗೆ ವೈವಿಧ್ಯಮಯವಾಗಿರುವಂತೆ ಮಾಡಿದ್ದರು. ಬ್ಯಾಂಡ್, ಎನ್.ಸಿ.ಸಿ. ಕ್ಯಾಡೆಟ್ಸ್, ಶಿಸ್ತಿನಿಂದ ನಡೆಯುವ ಸಿಪಾಯಿಗಳು, ನೃತ್ಯ ತಂಡಗಳು, ಪೋಲಿಸ್ ಪಡೆ, ಜಟ್ಟಿ ಪೈಲ್ವಾನ್, ದಿವಾನರು, ಮಹಾರಾಜ (ವೆಂಕಟೇಶ ಗೌಡ), ಮಹಾರಾಣಿ (ರಾಜೇಶ್ವರಿ ಗೌಡ) ಅವರಿಂದ ಕೂಡಿ ಹ್ಯೂಸ್ಟನ್ ಡೌನ್ ಟೌನ್ ರಸ್ತೆಗಳಲ್ಲಿ ಮೆಲ್ಲನೆ ಸಾಗಿದ ದಸರಾ ಮೆರವಣಿಗೆ ಒಂದು ಮರೆಯಲಾಗದ ದೃಶ್ಯವಾಗಿತ್ತು. ಎರಡು ವಾರಾಂತ್ಯಗಳ ಈ ಕಾರ್ಯಕ್ರಮಕ್ಕೆ ಬೇಕಾದ ಹಣ ಮತ್ತಿತರ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ನನ್ನ ಮತ್ತು ಬಿ.ಎಸ್. ಶ್ರೀಧರ್ (ಸಧ್ಯದಲ್ಲಿ ಬೆಂಗಳೂರಿನ ವಾಸಿ) ಅವರ ಮೇಲಿದ್ದು ನಾವು ಈ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದೆವು ಎಂದು ಹೇಳಬಹುದು.

Bay City International Festival

ಮ್ಯಾಟಗೊರ್ಡ ಕೌಂಟಿಯ ಬೇ ಸಿಟಿಯಲ್ಲಿ 2004 ಮತ್ತು 2005ರಲ್ಲಿ ನಾನು ಯೋಜಿಸಿ ನಡೆಸಿದ ಅಂತರ ರಾಷ್ಟ್ರೀಯ ಉತ್ಸವದಲ್ಲಿ, ನನ್ನಂತೆಯೇ ಹಲವಾರು ದೇಶಗಳಿಂದ ವಲಸೆ ಬಂದು ಈಗ ಇಲ್ಲಿ ನೆಲೆಸಿರುವ ಕುಟುಂಬಗಳು ಭಾಗವಹಿಸಿ, ತಮ್ಮ ತಾಯ್ನಾಡಿನ ಆಚಾರ, ವಿಚಾರ, ಕಲೆ, ಸಾಹಿತ್ಯ, ಉಡುಗೆ, ತೊಡುಗೆಗಳನ್ನು ಸ್ಥಳೀಯ ಜನರು ನೋಡಿ ಪರಸ್ಪರ ಅರ್ಥಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟರು. 'ನಾವೆಲ್ಲ ಒಂದೇ ಕುಲದವರು' ಎಂಬ ಮಾತಿಗೆ ಇಂಥ ಕಾರ್ಯಕ್ರಮಗಳು ಅರ್ಥಪೂರ್ಣ ಎಂಬುದು ನನ್ನ ಅಭಿಪ್ರಾಯ. ಕಾಲದ ಕೊರತೆಯಿಂದಾಗಿ ನಾನು ಈ ಉತ್ಸವವನ್ನು ಮತ್ತೆ ಮುಂದುವರೆಸಲು ಸಾಧ್ಯವಾಗಿಲ್ಲ.

ಕಲಾವಿದರೊಡನೆ ಸ್ನೇಹ

ನಾನು ಇದುವರೆಗೆ ನಿಯೋಜಿಸಿರುವ ಎಲ್ಲ ಸಮ್ಮೇಳನಗಳಿಗೂ ಒಂದು ಹೊಸ ಮೆರುಗನ್ನು ಕೊಟ್ಟಿದ್ದೇನೆ. ಸ್ಥಳೀಯ ಚಿತ್ರಕಲಾಕಾರರಿಗೆ 'ಸಮ್ಮೇಳನದ ವಿಷಯನ್ನು ಪ್ರತಿಪಾದಿಸುವಂಥ ಹೊಸ ಚಿತ್ರವನ್ನು ನೀವು ಸಕಾಲದಲ್ಲಿ ತಯಾರು ಮಾಡಿದರೆ ಅಂಥ ಚಿತ್ರಗಳನ್ನು ನೀವು ಸಮ್ಮೇಳನದ ಅಂಗವಾಗಿ ಪ್ರದರ್ಶನ ಮಾಡಬಹುದು' ಎಂಬ ಭರವಸೆ ಕೊಟ್ಟಿದ್ದೇನೆ. ಅಂತೆಯೇ ಇದುವರೆಗೆ ನಡೆದಿರುವ ಪ್ರತಿಯೊಂದು ಸಮ್ಮೇಳನದಲ್ಲೂ 10–12 ಕಲಾವಿದರು ಭಾಗವಹಿಸಿ, ಉತ್ತಮ ರೀತಿಯ ತೈಲ ಚಿತ್ರಗಳನ್ನು, ಅಮೃತ ಶಿಲೆ, ಜೇಡಿಮಣ್ಣಿನಿಂದ ಹಾಗೂ ಲೋಹದಿಂದ ತಯಾರು ಮಾಡಿದ ಮನಮೋಹಕ ಮೂರ್ತಿಗಳನ್ನೂ ಪ್ರದರ್ಶನ ಮಾಡಿದ್ದಾರೆ. ಐವತ್ತಕ್ಕೂ ಮೀರಿ ಹೊಸ ಕಲಾಕೃತಿಗಳು ಈ ಕಲಾವಿದರಿಂದ ಹುಟ್ಟಿ ಬಂದು ಪ್ರೇಕ್ಷಕರ ಮನಸೆಳೆದಿವೆ. 2009ರಲ್ಲಿ ನಡೆದ ಅಜಂತಾ ಸಮ್ಮೇಳನದಲ್ಲಿ ಭಾಗವಹಿಸಿದ ಶಿಲ್ಪಕಲಾಕಾರ

Cuauhtemoc Murphy ಕಡೆದ An Ode to Ajanta ಬಗ್ಗೆ ಹೀಗೆ ಹೇಳುತ್ತಾನೆ 'it is done in the basso - relievo style on carrero marble'. 2004ರಲ್ಲಿ ನಾವು ನಡೆಸಿದ ಹೊಯ್ಸಳ ಸಮ್ಮೇಳನದಲ್ಲಿ ಭಾಗವಹಿಸಿದ್ದ ಕಲಾವಿದೆ ಅಲೆಕ್ಸಿಸ್ ಮೆಕಾರ್ಥಿಯ ತೈಲ ಚಿತ್ರ 'ಭಸ್ಮ ಮೋಹಿನಿ'ಈಗ ಮ್ಯೂಸಿಯಂ ಆಫ್ ಫೈನ್ ಆರ್ಟ್ಸಿನ ಕಲಾಗಾರವನ್ನು ಸೇರಿದೆ. ಹೀಗೆ ತಯಾರಿಸಿದ ಚಿತ್ರಗಳು ನಗರದ ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿ ಜನಪ್ರಿಯವಾಗಿವೆ. ಅಮಾಂಡ ಡ್ಯಾನ್ನಿಂಗ್ ತಯಾರಿಸಿದ 2 ಅಡಿ ಲೋಹದ (cold cast bronze) ಕಾಳೀಯ ಮರ್ದನ, ಗೀತಪ್ರಕಾಶ್ ಅವರ ತಂಜಾವೂರ್ ಅರಮನೆಯ ದರ್ಬಾರ್ ತೈಲ ಚಿತ್ರ, ಶರತ್ ವಲ್ಲುರಿ ಜೇಡಿಮಣ್ಣಿನಿಂದ ತಯಾರಿಸಿದ ಅಜಂತಾ ಶಿಲಾಕೃತಿಗಳು, ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದು ಕಲಾವಿದರಿಗೆ ಗೌರವ ತಂದಿವೆ.

2010ರಲ್ಲಿ ಮ್ಯಾಟಗೊರ್ಡ ಕೌಂಟಿಯ ಮ್ಯೂಸಿಯಂನಲ್ಲಿ ನಮ್ಮ ಸಮ್ಮೇಳನಕ್ಕೆ ಸಂಬಂಧಿಸಿದ 32 ಚಿತ್ರಗಳ ಪ್ರದರ್ಶನವನ್ನು ನಡೆಸಬೇಕೆಂದು ನಾನು ಡೈರೆಕ್ಟರ್ ಮಿಸ್ ಬಾರ್ಬರ ಅವರನ್ನು ಕೇಳಿಕೊಂಡಾಗ, ಅವರು ಸಂತೋಷದಿಂದ ಒಪ್ಪಿ ಮ್ಯೂಸಿಯಂ ಪ್ರದರ್ಶನ ಸಭಾಂಗಣವನ್ನು 8 ವಾರಗಳ ಕಾಲ ಬಾಡಿಗೆ ರಹಿತವಾಗಿ ಬಿಡುವು ಮಾಡಿಕೊಟ್ಟರು. ಸ್ಥಳೀಯ ಕಲಾಭಿಮಾನಿಗಳು ಈ ಪ್ರದರ್ಶನವನ್ನು ತುಂಬು ಮನಸ್ಸಿನಿಂದ ಮೆಚ್ಚಿಕೊಂಡಿದ್ದಾರೆ.

ಮಿಸ್ ಜಿ.ಜಿ. ಡೋ ಅವರ ಸಹಾಯದಿಂದ ಮತ್ತೊಂದು ಕಲಾ ಪ್ರದರ್ಶನ ಹ್ಯೂಸ್ಟನ್ ಕಮ್ಯೂನಿಟಿ ಕಾಲೇಜಿನ 3100 ಫ್ಯಾನ್ನಿನ್ ಸಭಾಂಗಣದಲ್ಲಿ ನಾಲ್ಕು ವಾರಗಳ ಕಾಲ ನಡೆದು ನೂರಾರು ಪ್ರೇಕ್ಷಕರು ಬಂದು ನೋಡಿದ ಸುದ್ದಿಯನ್ನು ದೇಸೀ ವಾರ್ತಾ ಪತ್ರಿಕೆಗಳು ಮುಕ್ತಕಂಠಗಳಿಂದ ಪ್ರಚಾರ ಮಾಡಿವೆ.

4 ವರ್ಷಗಳ ಹಿಂದೆ 'ಶುಗರ್ ಲ್ಯಾಂಡ್ ಆರ್ಟ್ಸ್ ಅಲಯನ್ಸ್' ಡೈರೆಕ್ಟರ್ ಮೆರಿಲಿನ್ ಡಿಕೆ ಅವರ ಆಹ್ವಾನದ ಮೇಲೆ ಅಲ್ಲಿ ನಾನು ನಡೆಸಿದ ಒಂದು ಸಣ್ಣ ಸಭೆಯ ಕಾರಣ ಅಲ್ಲಿನ ಹತ್ತಾರು ಕಲಾವಿದರ ಪರಿಚಯವಾಗಿ, ಮುಂದೆ ನಾವು ನಡೆಸಿದ ಎಲ್ಲ ಸಮ್ಮೇಳನಗಳಿಗೆ ಈ ಕಲಾವಿದರು ಉತ್ಸಾಹದಿಂದ ಬಂದು ಭಾಗವಹಿಸುತ್ತಿದ್ದಾರೆ. ಒಬ್ಬ ಆಂಗ್ಲ ಕಲಾವಿದೆ ಶಿವನ ಚಿತ್ರವನ್ನು, ಒಬ್ಬ ಜರ್ಮನ್ ಕಲಾವಿದ ಕೃಷ್ಣನ ತೈಲ ಚಿತ್ರವನ್ನು ಬಿಡಿಸುವುದನ್ನು, ಒಬ್ಬ ಟೆಕ್ಸಾಸ್ ಕಲಾವಿದ ಅಜಂತಾ ಚಿತ್ರವನ್ನು ಬಿಡಿಸುವುದನ್ನು ನೋಡಿ ನಾನು ಆಶ್ಚರ್ಯಪಟ್ಟಿದ್ದೇನೆ. ಈ 'ವಿಶಾಲ ಮನಸ್ಸಿನ ವಿಶ್ವ ಕಲಾವಿದರಿಗೆ' ನನ್ನ ವಿನಯ ಪೂರ್ವಕ ಪ್ರಣಾಮಗಳು.

ಸಂಗೀತ ಸರೋವರದಲ್ಲಿ

ವಿಶ್ವವಿಖ್ಯಾತ ವೇಣುವಾದಕ ಶಶಾಂಕ್ ಅವರು ಹ್ಯೂಸ್ಟನ್‌ನಲ್ಲಿ ತಮ್ಮ ಕಚೇರಿ ಪ್ರಾರಂಭಿಸುವ ಮೊದಲಿಗೆ, ಹ್ಯೂಸ್ಟನ್ ವುಮೆನ್ಸ್ ಕ್ವಾಯಿರ್‌ನಿಂದ 30 ವಾದ್ಯಗಾರ್ತಿಯರು ಬಂದು, ಭಾರತ ಮತ್ತು ಅಮೇರಿಕಾಗಳ ರಾಷ್ಟ್ರಗೀತೆಗಳನ್ನು ನುಡಿಸಿದ ನಂತರ ಎರಡು ಇಂಗ್ಲೀಷ್ ಗೀತೆಗಳನ್ನು ಪ್ರಸ್ತಾವನೆ ಮಾಡಿದ್ದನ್ನು ನೋಡಿ ಶಶಾಂಕ್ ಅವರು ಈ ಎಲ್ಲ ಕಲಾವಿದೆಯರನ್ನು ಅಭಿನಂದಿಸಿದರು. ಭಾರತೀಯ ಸಂಗೀತದ ಗಂಧವೇ ಇಲ್ಲದ ಈ ವಾದ್ಯಗಾರ್ತಿಯರು, ಶಶಾಂಕ್ ಅವರ ಮುಂದಿನ ಎರಡು ಘಂಟೆಗಳ ವೇಣುವಾದನವನ್ನು ತಾಳ್ಮೆಯಿಂದ ಕುಳಿತು ಕೇಳಿದರು.

ಮತ್ತೊಂದು ಸಂದರ್ಭದಲ್ಲಿ ಮೈಸೂರ್ ನಾಗರಾಜ್ ಮತ್ತು ಮಂಜುನಾಥ್ ಅವರ ವಯೊಲಿನ್ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿ ಬಂದಿದ್ದ ಮಿಸ್ಟರ್ ಜೋ ವಿಲ್ಸನ್ ಅವರು, ಈ ಕಲಾವಿದರನ್ನು ಶಾಲು ಹೊದಿಸಿ ಗೌರವಿಸಿ ವಿಶ್ವಾಸದ ಮಾತುಗಳನ್ನಾಡಿದ ವಿಷಯ ಬಹಳಷ್ಟು ಮಂದಿಗೆ ತಿಳಿದಿರಲಾರದು. 2002ರಲ್ಲಿ ಹ್ಯೂಸ್ಟನ್ ನಗರಕ್ಕೆ ಭೇಟಿಕೊಟ್ಟ ಶ್ರೀ ಕೆ. ಎಸ್. ನಿಸ್ಸಾರ್ ಅಹ್ಮದ್ ಅವರು ತಮ್ಮ ಕವನಗಳನ್ನು ಓದಿ ತೋರಿಸಿದರು, ಡಾಕ್ಟರ್ ಗೋಪಾಲಕೃಷ್ಣ ಅಡಿಗ ಅವರು ಭೇಟಿಕೊಟ್ಟಾಗ ಅವರಿಂದಲೇ ರಚಿತವಾಗಿರುವ ಹಲವು ಗೀತೆಗಳನ್ನು ನಾವೆಲ್ಲ ಹಾಡಿದೆವು. ಡಾಕ್ಟರ್ ಚಂದ್ರಶೇಖರ ಕಂಬಾರರು ಬಂದಿದ್ದಾಗ ಅವರ ನಾಟಕವನ್ನು ಅವರೇ ಓದಿ ತೋರಿಸಿದರು. ಇವಲ್ಲದೇ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಕನ್ನಡ ವೃಂದದ ಆಶ್ರಯದಲ್ಲಿ ನಡೆದಿವೆ.

ಸ್ವಯಂ ಸೇವಕ

ಅವಶ್ಯಕತೆ ಇರುವ ಸ್ಥಳಗಳಲ್ಲಿ ನಾನು ಸ್ವಯಂಸೇವಕನಾಗಿ ಕೆಲಸಮಾಡಿದ್ದೇನೆ. ಶ್ರೀ ಮೀನಾಕ್ಷಿ ದೇವಸ್ಥಾನದಲ್ಲಿ ಕಳೆದ 30 ವರ್ಷಗಳಿಂದ ಸೇವೆ ಸಲ್ಲಿಸಿದ್ದೇನೆ. ಈ ವರ್ಷ ಅಲ್ಲಿನ maintenance ಕೆಲಸದ ಜವಾಬ್ದಾರಿ ನನ್ನದಾಗಿದೆ. ಯುನೈಟೆಡ್ ವೇ, ಮ್ಯೂಸಿಯಮ್, ಗಾಂಧೀ ಲೈಬ್ರರಿ ಮುಂತಾದ ಸಂಸ್ಥೆಗಳಿಗೆ ಅವಶ್ಯಕತೆ ಇದ್ದಾಗ ಸೇವೆ ಸಲ್ಲಿಸುತ್ತಿದ್ದೇನೆ. ಸ್ಕೂಲ್, ಆಸ್ಪತ್ರೆ, ನ್ಯಾಯಾಲಯಗಳಲ್ಲಿ (Language interpreter) ತರ್ಜುಮೆಗಾರನಾಗಿ ಆಗಾಗ ಕೆಲಸ ಮಾಡಿದ್ದೇನೆ.

ನನ್ನ ದೃಷ್ಟಿಯಲ್ಲಿನ ವಿಶ್ವ

ಏಷಿಯಾ ಸೊಸೈಟಿಯ ಅಡ್ವೈಸರಿ ಸಮಿತಿಯಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವುದರಿಂದ, ನಾನು ಈಗ ವಿಶ್ವವನ್ನು ನೋಡುವ ದೃಷ್ಟಿ ಬದಲಾಗಿದೆ. ಕರ್ನಾಟಕ, ಭಾರತ ಇವುಗಳಿಂದ ಹೊರಗೆ ಇರುವ ಪ್ರಪಂಚವನ್ನು ನೋಡಿ ನಾವು

ಕಲಿಯಬಹುದಾದ ಅನೇಕ ವಿಷಯಗಳಿವೆ ಎಂಬ ಅರಿವು ಬಂದಿದೆ. ಹಾಲೆಂಡಿನ ಡಾಕ್ಟರ್ ಜೆರಾರ್ಡ್ ಫೋಕಿಮಾ ಬರೆದಿರುವ ನಮ್ಮ ಹೊಯ್ಸಳರ ಚರಿತ್ರೆಯನ್ನು ಓದಿ ಆಶ್ಚರ್ಯಪಟ್ಟಿದ್ದೇನೆ. ಸಿಂಗಪುರದ ಟಿಂಗ್‌ಸಂಚಾಲಿ ಭಾರತದ ಶಿಲ್ಪಕಲೆಯ ಬಗ್ಗೆ ಮಾತನಾಡುವುದನ್ನೂ, ಇಟಲಿಯಲ್ಲಿ ಹುಟ್ಟಿ ಜರ್ಮನಿಯಲ್ಲಿ ಬೆಳೆದು ಸ್ಕಾಟ್ಲೆಂಡಿನಲ್ಲಿ ಈಗ ವಾಸಮಾಡುತ್ತಿದ್ದರೂ ದಕ್ಷಿಣ ಭಾರತದ ಕುಂಭಕೋಣದಲ್ಲಿರುವ ಶ್ರೀ ಸಾರಂಗಪಾಣಿ ದೇವಸ್ಥಾನವನ್ನು ಅಧ್ಯಯನಮಾಡಿ ಅದರ ಈಗಿನ ಸ್ಥಿತಿಯ ಬಗ್ಗೆ ಕಳಕಳಿಯಿಂದ ಮಾತನಾಡುವ ಡಾಕ್ಟರ್ ಅನ್ನ ಡಲ್ಲಪಿಕ್ಕೊಲ ಅವರ ವಾಗ್ಝರಿಯನ್ನು, ಇಂಗ್ಲೆಂಡಿನ ಜಾರ್ಜ್ ಮಿಚೆಲ್ ವಿಜಯನಗರದ ಬಗ್ಗೆ ವಿಚಾರ ಮಾಡುವುದನ್ನು, ಇಂಡೋನೇಶಿಯಾದ ರಾಮ್ಲಿ ಇಬ್ರಾಹಿಂ ತಂಡದವರಿಂದ ಭರತನಾಟ್ಯ ಪ್ರದರ್ಶನವನ್ನೂ ನೋಡಿ ಬೆರಗಾಗಿದ್ದೇನೆ. ಇವರಿಗೆ ಭಾರತದ ಸಂಸ್ಕೃತಿಯ ಮೇಲೇಕೆ ಇಷ್ಟು ಪ್ರೀತಿ!

ನನ್ನ ಮೇಲಿನ ವಿಶ್ವಾಸದಿಂದ ಮಾರ್ಥಾ ಬ್ಲಾಕ್ ವೆಲ್ಡರ್ ಅವರು ಏಷಿಯಾ ಸೊಸೈಟಿಯ 60 ಮಿಲಿಯನ್ ಡಾಲರ್‌ಗಳ ಹೊಸ ಭವ್ಯ ಭವನದ ಸಲಹಾ ಸಮಿತಿಗೆ ನನ್ನನ್ನು ಆಹ್ವಾನಿಸಿದ್ದರು. 2012 ಏಪ್ರಿಲ್ ತಿಂಗಳಿನಲ್ಲಿ ಲೋಕಾರ್ಪಣೆಗೊಂಡ ಈ ಭವನ ಏಷಿಯಾದ ಎಲ್ಲ ದೇಶಗಳ ಕಲೆ, ಸಂಸ್ಕೃತಿಗಳನ್ನು ಪರಿಚಯ ಮಾಡಿಸಿಕೊಡುವಂಥ ಒಂದು ಬೃಹತ್ ಕಲಾಗಾರವಾಗಿದೆ.

ಇದುವರೆಗೆ ನಾನು ನಡೆಸಿರುವ ಎಲ್ಲ ಸಮ್ಮೇಳನಗಳಲ್ಲಿ ಮಂಡಿಸಿದ ವಿಚಾರಗಳು (ಕಾನ್ಫರೆನ್ಸ್ ಪೇಪರ್ಸ್) ಪುಸ್ತಕದ ರೂಪದಲ್ಲಿ ತರಬೇಕೆಂಬ ಆಸೆ ಇದ್ದರೂ, ಅದು ಸಾಧ್ಯವಾಗಿಲ್ಲ. ಆದರೆ ಇದುವರೆಗೆ ಪ್ರಕಾಶನವಾಗಿರುವ ಪುಸ್ತಕಗಳ ಪಟ್ಟಿ ಈ ಕೆಳ ಕಂಡಂತಿದೆ.

1. South India under Vijayanagara- Edited by Drs. Anna Dallapiccola and Anila Verghese, published by Oxford University Press (ಹ್ಯೂಸ್ಟನ್ ಮತ್ತು ಮುಂಬೈ ಸಮ್ಮೇಳನ ಆಧಾರ) (ISBN 13 978 0 19 806861 7).
2. Indian Painting: The Lesser Known Traditions (ಹ್ಯೂಸ್ಟನ್ ಸಮ್ಮೇಳನ ಆಧಾರ edited by Dr. Anna Dallapiccola and published in 2011 by Niyogi Books, Delhi.) (ISBN 978 81 89738 81 5)
3. Fifteen Golden Examples: Indian Architecture in Karnataka: Text and Photographs by Dr. Gerard Foekema, published by Simova Education and Research Pvt Ltd, Bangalore in 2005.
4. Sangama: A Confluence of Art and Culture during the Vijayanagara Period (ಹ್ಯೂಸ್ಟನ್ ಮತ್ತು ಲಾಸ್ ಏಂಜಲೀಸ್ ಸಮ್ಮೇಳನ ಆಧಾರ, edited by Dr. Nalini Rao and published by Originals, New Delhi in 2006)

(ISBN 81 88629 48 0) ತಂಜಾವೂರ್ ಸಮ್ಮೇಳನದ ಪುಸ್ತಕವನ್ನು ಪ್ರಕಾಶನ ಮಾಡಬೇಕೆಂಬ ಮನವಿಯನ್ನು ಡಾಕ್ಟರ್ ಇಂದಿರಾ ಪೀಟರ್ಸನ್ ಅವರಿಗೆ ಸಲ್ಲಿಸಿದ್ದೇನೆ.

ಮ್ಯೂಸಿಯಂನಲ್ಲಿ ಸಮ್ಮೇಳನಗಳನ್ನ ನಡೆಸುವುದೇ ಅಲ್ಲದೆ, ನಾನು ಹಲವಾರು ಸಂಗೀತ ವಿದ್ವಾಂಸರನ್ನು, ಭರತನಾಟ್ಯದಲ್ಲಿ ಪ್ರಸಿದ್ಧರಾಗಿರುವ ಕಲಾವಿದರನ್ನು ಕರೆಸಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಜವಾಬ್ದಾರಿಯನ್ನು ಕೂಡ ನಿರ್ವಹಿಸುತ್ತಿದ್ದೇನೆ. ಪದ್ಮಶ್ರೀ ಅಲಮೇಲ್ ವಳ್ಳಿ, ಶ್ರೀಮತಿ ರಮಾ ವೈದ್ಯನಾಥನ್, ಪದ್ಮ ಭೂಷಣ ಡಾಕ್ಟರ್ ಇ.ಸಿ.ಜಿ. ಸುದರ್ಶನ್, ಅಂಬಾಸಿಡರ್ ಟಿ.ಪಿ. ಶ್ರೀನಿವಾಸನ್, ಬೆಂಗಳೂರಿನ ಸ್ಟೆಮ್ ಡ್ಯಾನ್ಸ್ ಕಂಪನಿಯ ನೃತ್ಯತಂಡ... ಮುಂತಾದ ಹಲವಾರು ಕಾರ್ಯಕ್ರಮಗಳನ್ನು ನಿಯೋಜಿಸಿ ಅನೇಕ ಸಂಘ ಸಂಸ್ಥೆಗಳ ಸಹಕಾರ, ಸಹಯೋಗದಿಂದ ಯಶಸ್ವಿಯಾಗಿ ನಡೆಸಿದ್ದೇನೆ.

ಕರ್ನಾಟಕದಲ್ಲಿರುವ ನನ್ನ ಸಹೋದರ ಸಹೋದರಿಯರ ಬಗ್ಗೆ, ಶಾಲಾ ಮಕ್ಕಳ ಬಗ್ಗೆ ನನಗೆ ಚಿಂತನೆ ಇದೆ. 'ಹೊಯ್ಸಳ ಚಾರಿಟಬಲ್ ಟ್ರಸ್ಟ್'ನ ಅಧ್ಯಕ್ಷನಾಗಿದ್ದು ಮಿಡಿಗೇಶಿ ಎಂಬ ಹಳ್ಳಿಯಲ್ಲಿ (ಮಧುಗಿರಿಯ ಹತ್ತಿರ) ಮಕ್ಕಳಿಗೋಸ್ಕರ ವಿಶಾಲವಾದ ಹೊಸ ಶಾಲಾ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದೇವೆ. 500 ಮಕ್ಕಳು ಕೂಡಬಹುದಾದ ಈ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಪ್ರಸ್ತುತ 300 ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಬೆಂಗಳೂರಿನ ಕೋಟೆಯ ಶ್ರೀಮತಿ ಆರ್. ಕಲ್ಯಾಣಮ್ಮ ಮಕ್ಕಳ ಕೂಟಕ್ಕೆ ಹಲವಾರು ವರ್ಷಗಳಿಂದ ಸಹಾಯ ಮಾಡುತ್ತಿದ್ದೇನೆ.

ಈ ಲೇಖನವನ್ನು ಮುಗಿಸುತ್ತಿರುವಂತೆಯೇ, ಮುಂದಿನ ಸಮ್ಮೇಳನದ ಬಗ್ಗೆ ಡಾಕ್ಟರ್ ಡಲ್ಲಪಿಕ್ಕೊಲ ಅವರೊಂದಿಗೆ ಈಮೇಲ್ ಮೂಲಕ ವ್ಯವಹಾರ ನಡೆಸುತ್ತಿದ್ದೇನೆ. ವಿಜಯನಗರ ಪತನವಾದ ಮುಂದಿನ 300 ವರ್ಷಗಳ ಚರಿತ್ರೆ ನಮ್ಮ ಮುಂದಿನ ಸಮ್ಮೇಳನದ ಕೇಂದ್ರವಸ್ತುವಾಗಿದೆ. ಕೆಳದಿ ಮತ್ತು ಇಕ್ಕೇರಿ ನಾಯಕರಿಂದ ಕರ್ನಾಟಕದ ಚರಿತ್ರೆ ಹೇಗೆ ಬದಲಾಯಿತು, ನಾಯಕ ವಂಶದಿಂದ ಕರ್ನಾಟಕಕ್ಕೆ ಏನು ಕೊಡುಗೆ, ಇತ್ಯಾದಿ ವಿಷಯಗಳ ಬಗ್ಗೆ ವಿದ್ವಾಂಸರು ಹೊಸ ವಿಷಯಗಳನ್ನು ಮಂಡಿಸಲಿದ್ದಾರೆ.

ಕೃತಜ್ಞತೆಗಳು

ನನ್ನ ಕಾರ್ಯಗಳಿಗೆ ಸಹೃದಯತೆಯಿಂದ ಸ್ಪಂದಿಸುತ್ತಿರುವ ಎಲ್ಲ ಸ್ನೇಹಿತರಿಗೆ ನನ್ನ ಅನಂತ ಕೃತಜ್ಞತೆಗಳು. ಸಮಾಜದ ಹಲವಾರು ಗಣ್ಯವ್ಯಕ್ತಿಗಳ ಮತ್ತು ಸಂಸ್ಥೆಗಳ ಪರಿಚಯ ಮಾಡಿಸಿಕೊಡುವುದರ ಮೂಲಕ ನನ್ನ ಕಾರ್ಯಕ್ಷೇತ್ರದ ವಿಸ್ತರಣೆಗೆ ಸಹಾಯ ಮಾಡುತ್ತಿರುವ ಶ್ರೀಮತಿ ಪ್ರಭಾ ಹಾಗೂ ಶೇಷ್ ಬಾಲ (ಶುಗರ್ ಲ್ಯಾಂಡ್) ಅವರಿಗೆ ಆಭಾರಿಯಾಗಿದ್ದೇನೆ. ನನ್ನ ಬೇಡಿಕೆಗಳನ್ನು ಪೂರೈಸುತ್ತ ಹಲವಾರು ವರ್ಷಗಳ ನಿಕಟವರ್ತಿಗಳಾಗಿರುವ ಶ್ರೀಮತಿ ಅನು ಉಡುಪ (ಭಾರತ), ಮೀನಾ ಮತ್ತು ವಾಸು

ಐತಾಳ (ಕೇಟಿ), ಭರತ್ ಜಯಕೀರ್ತಿ (ದುಬೈ), ಇವರಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು. ರಾಮನ್ ಅವರ ಮಗಳು ಶ್ರೀಮತಿ, ಮಗ ಬದರಿ ನನ್ನನ್ನು ಆದರ ಗೌರವಗಳಿಂದ ನೋಡುತ್ತಾರೆ. ಇವರಿಗೆ ನಾನು ಶುಭ ಕೋರುತ್ತೇನೆ. ನಾನು ಬಯಸಿ ಬೇಡಿದ್ದಕ್ಕಿಂತ ಬಯಸದೆ ಪಡೆದದ್ದೇ ಹೆಚ್ಚು. ಅಂದು ಈ ದೇಶಕ್ಕೆ ಪರದೇಶಿಗಳಾಗಿ ಬಂದ ನಾವು, ಇಂದು ಇಲ್ಲಿನ ದೇಸಿಗಳಾದರೂ, ಹುಟ್ಟಿದ ನಾಡಿಗೂ ಸೇರಿದ ನಾಡಿಗೂ ಸಾಧ್ಯವಾದ ರೀತಿಯಲ್ಲಿ ಸಹಾಯ ಮಾಡಿದರೆ, ನಮ್ಮ ಬಾಳು ಹಸನಾದೀತು, ಎರಡೂ ನಾಡಿನ ಬೆಳಕೂ ಬೆಳಗೀತು.

ಶ್ರದ್ಧಾಂಜಲಿ

ನನ್ನ ಅಣ್ಣ ರಾಮನ್ ನನಗೆ ಗುರುವೂ ಹೌದು, ಮಾರ್ಗದರ್ಶಕರೂ ಹೌದು. ಕಲೆ ಮತ್ತು ಸಾಹಿತ್ಯಗಳಲ್ಲಿ ನನಗೆ ಅಭಿರುಚಿ ಬೆಳೆಯಲು ಅವರೇ ಕಾರಣ. ಅವರ ಒಡನಾಟದಿಂದ ನನಗೆ ಡಾಕ್ಟರ್ ಮಾಸ್ತಿ ವೆಂಕಟೇಶ ಐಯ್ಯಂಗಾರ್, ರಂ.ಶ್ರೀ.ಮುಗಳಿ, ಪು.ತಿ.ನ., ಡಿ.ಎಸ್. ಸಿದ್ದಯ್ಯ ಪುರಾಣಿಕ್, ಜಿ.ಎಸ್.ಶಿವರುದ್ರಪ್ಪ, ಡಾಕ್ಟರ್ ವಿ.ಸೀ., ದೇವುಡು ನರಸಿಂಹ ಶಾಸ್ತ್ರಿಗಳಂಥ ಮಹಾಪುರುಷರ ದರ್ಶನವಾಗಿದೆ. ಸಂಗೀತದ ಪ್ರಪಂಚದಲ್ಲಂತೂ ನಮ್ಮಣ್ಣನಿಗೆ ಪರಿಚಯವಿಲ್ಲದವರೇ ವಿರಳ. ಇವರಲ್ಲಿ ಹಲವರು ನನ್ನನ್ನು ಇಂದಿಗೂ 'ರಾಮನ್ ತಮ್ಮ' ಎಂದೇ ಗುರುತಿಸುತ್ತಾರೆ. ನನಗೂ ಅದೇ ಇಷ್ಟ. ನನ್ನ ಸಂತಸ–ಸಂಕಟಗಳಲ್ಲಿ ಸಮಪಾಲು ವಹಿಸಿ, ಯಾವಾಗಲೂ ಹಸನ್ಮುಖಿಯಾಗಿದ್ದ ರಾಮನ್ ನಮ್ಮಿಂದ ಕಣ್ಮರೆಯಾಗಿದ್ದರೂ, ನನ್ನ ಕಾರ್ಯ ಚಟುವಟಿಕೆಗಳನ್ನು ಪರೋಕ್ಷದಿಂದಲೇ ನೋಡಿ ಆಶೀರ್ವದಿಸುತ್ತಿದ್ದಾರೆ ಎಂದು ನನ್ನ ನಂಬಿಕೆ. ಇದೇ ನನ್ನ ಕೃತಜ್ಞತೆಯ ಶ್ರದ್ಧಾಂಜಲಿ.



ಕೊಟ್ಟ ಕುದುರೆಯನೇರಿ...

– ಶಶಿಕಲಾ ಚಂದ್ರಶೇಖರ

'ಕೊಟ್ಟ ಕುದರೆಯನೇರಲರಿಯದೆ ಮತ್ತೊಂದು ಕುದರೆಯ ಬಯಸುವರು ವೀರರೂ ಅಲ್ಲ, ಧೀರರೂ ಅಲ್ಲ. ಇದು ಕಾರಣ, ನೆರೆ ಮೂರು ಲೋಕವೆಲ್ಲವು ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ...'

– ಅಲ್ಲಮ.

'ನಾನಿಲ್ಲಿ ನಿಲ್ಲುವವಳಲ್ಲಾ' ಎಂದೇ, ಹವಾಮಾನ ಮಾಪಕದ ಪಾದರಸ 0 ಡಿಗ್ರಿ ಫ್ಯಾರನ್‌ಹೀಟಿಗಿಂತ ಕೆಳಗಿಳಿಯುವ ಊರಿಗೆ ಒಂದಾನೊಂದು ಕಾಲದಲ್ಲಿ ಬಂದವಳು ನಾನು. 'ನಿಲ್ಲುವವಳಲ್ಲ' ಎಂದವಳು ಇಲ್ಲೇ ನೆಲೆಯೂರಿ ನಿಂತೇಬಿಟ್ಟೆ. ಹವಾಮಾನ 0 ಡಿಗ್ರಿ ಫ್ಯಾರನ್‌ಹೀಟಿಗಿಂತ ತುಸು ಹೆಚ್ಚಾಗಿದ್ದು, ನಾನು ಮೊದಲ ಬಾರಿ ಹೆಜ್ಜೆ ಇಟ್ಟ ಊರಿಗಿಂತ ಅರ್ಧ ಮುಕ್ಕಾಲು ಅಡಿ ಹಿಮ ಕಮ್ಮಿ ಸುರಿಯುವ ಮೂರ್ನಾಲ್ಕು ಊರುಗಳನ್ನು ಸುತ್ತಿ, ಬೇರೆ ಬೇರೆ ಕೇರಿಗಳಲ್ಲಿ ಒಕ್ಕಲೆಬ್ಬಿಸಿ ಸದ್ಯಕ್ಕೆ ರಾಜಧಾನಿಯ ಸಮೀಪದೊಂದೂರಿನಲ್ಲಿ ಉಳಿದಿದ್ದೇನೆ. ದಿನ-ವಾರ-ತಿಂಗಳು-ವರ್ಷಗಳು ಕಳೆದಂತೆ ಈ ನೆಲ ನನ್ನನ್ನು ಅಪ್ಪಿಕೊಂಡಂತೆ ನಾನೂ ಈ ನೆಲವನ್ನು ಒಪ್ಪಿಕೊಂಡಿರುವೆ. ಸಂತೋಷ ನನ್ನ ಜನ್ಮ ಸಿದ್ಧ ಹಕ್ಕು ಎಂದು ನಂಬಿರುವ ನನ್ನ ಹಕ್ಕಿಗೆಂದೂ ಚ್ಯುತಿ ಬಂದಿಲ್ಲ. ವರ್ಷಗಳುದ್ದಕ್ಕೂ ಈ ನೆಲ ಹಾಗೂ ಬದುಕು ಕೊಟ್ಟಿರುವ ಸಣ್ಣ ಸಣ್ಣ ಖುಷಿಗಳ ಮೊತ್ತ ದೊಡ್ಡದು. ನನ್ನ ಮನ ಈ ನೆಲಕ್ಕೆ ಒಲಿದದ್ದು ಮತ್ತು ಒಗ್ಗಿದ್ದು; ರಸ್ತೆ ಬದಿಯ ಕಿರು ದಾರಿ, ಹಳ್ಳ ಕೊಳ್ಳಗಳಿರದ ಉದ್ದುದ್ದ ಡಾಂಬರ್ ರಸ್ತೆ ಸೌಕರ್ಯಕ್ಕಾಗಿ ಅಲ್ಲ, ಮೈಲಿ ಮೈಲಿಗಳೆತ್ತರದ ಗಾಜು/ಸ್ಟೀಲ್ ಕಟ್ಟಡ, ಕಂಡಾಕ್ಷಣ ಅಚ್ಚರಿಯ ಉದ್ಗಾರ ಹೊರ ಹೊಮ್ಮಿಸುವ ವಿಶಾಲವಾದ ದೀರ್ಘ ತೂಗು ಸೇತುವೆ ನೋಟಕ್ಕಾಗಿಯಂತೂ ಅಲ್ಲಾ! ಇವೆಲ್ಲಕ್ಕಿಂತ ಮಿಗಿಲಾಗಿ, ನನಗೆ ಹತ್ತಿರಾದ ಈ ಜನರಲ್ಲಿ, ಮಾನವೀಯತೆ ತೋರಿದ ಸಂಬಂಧಗಳಲ್ಲಿ, ನಾನು ನಂಬಿದ ಬಹುತೇಕ ಮೌಲ್ಯಗಳನ್ನು ಗೌರವಿಸುವ ಈ ಸಮಾಜದಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ ಮನುಷ್ಯರ ಮತ್ತು ಪ್ರಾಣಿಗಳ ಹಕ್ಕನ್ನು ಕಾಯುವ ವ್ಯವಸ್ಥೆ ಮತ್ತು ಆ ಹಕ್ಕುಗಳ ಸಂರಕ್ಷಣೆಗಾಗಿ ಕೆಲಸ ಮಾಡುತ್ತಿರುವ ಲಾಭರಹಿತ ಸಂಸ್ಥೆಗಳ ಇರುವಿಕೆಗಾಗಿ... ಎಂದೆಲ್ಲಾ ಯೋಚಿಸುತ್ತಾ ಕೆಲ ನಿಮಿಷ ಚಲಿಸದೆ ನಿಂತೆ.

ಬೇರು ಸೂರು

ಬೆಳಗಾಗಿ ಎದ್ದು ಯಾರ್‍ಯಾರನ್ನು ನೆನೆಯಬೇಕೋ ಅವರನ್ನೆಲ್ಲಾ ನೆನೆದು ಇಂದಿನ ಪುಟಾಣಿ ಸಾಹಸಕ್ಕೆ ಅಣಿಯಾಗತೊಡಗಿದೆ. ಗಂಡ-ಮಕ್ಕಳು, ಸ್ನೇಹಿತರು, ಅಕ್ಕ ಪಕ್ಕದವರು, ಪರಿಚಿತರು ಯಾರೂ ನನ್ನ ಜೊತೆ ಬರಲಾರೆವು ಎಂದುಬಿಟ್ಟಿದ್ದರು. ನಾನೊಬ್ಬಳೇ ಹೊರಡಲು ಸ್ವಲ್ಪ ಭಯ ಎನ್ನಿಸಿದರೂ, ಬಹಳ ವರ್ಷಗಳಿಂದ ಮಾಡಬೇಕೆಂದುಕೊಂಡಿದ್ದನ್ನು ಮಾಡಹೊರಟ ಸಣ್ಣ ಪುಳಕ ಮೈ ಮನಗಳಲ್ಲಿ ತುಂಬಿಕೊಳ್ಳಲಾರಂಭಿಸಿತು.

ಇದೆಲ್ಲಾ ಶುರುವಾಗಿದ್ದು ನನ್ನ ಸಹೋದ್ಯೋಗಿ ಪ್ಯಾಟ್ರಿಕ್ಕನ ಕುಮ್ಮಕ್ಕಿನಿಂದ. ಪ್ಯಾಟ್ರಿಕ್ ಒಬ್ಬ ರೋಡಿಯೋ, ನುರಿತ ಕುದುರೆ ಸವಾರ- ಅಶ್ವತ್ಥಾಮ! ಫಾಲ್ ಋತುವಿನಲ್ಲಿ ಜನರನ್ನು ಕುದುರೆ ಸವಾರಿಗೆ ಕರೆದೊಯ್ಯುವುದು ಅವನ 2ನೇ ಉದ್ಯೋಗ. ಅದರಿಂದ ಬರುವ ಹಣಕ್ಕಿಂತ ಅಶ್ವಪ್ರೀತಿಯ ಖುಷಿಗಾಗಿ ಮಾಡುವ ಕೆಲಸ. ಸವಾರಿ ಬಗ್ಗೆ ಬಹಳಷ್ಟು ದಿನಗಳಿಂದ ಆಸಕ್ತಿ ಇದ್ದರೂ ಭಯದಿಂದಾಗಿ ನಾನು ಅದರ ಬಗ್ಗೆ ಪ್ರಜ್ಞಾಪೂರ್ವಕವಾಗಿ ಯೋಚಿಸುವುದನ್ನು ತಡೆದಿದ್ದೆ. ನನ್ನ ಭಯಕ್ಕೆ ಮೂಲ ಕಾರಣ ಒಂದುಂಟು. ನನ್ನ ಪಾದಗಳು ಸದಾ ನೆಲವೂರಿರಬೇಕು. ಪಾದಗಳು ನೆಲಸೋಂಕಲಾರದು ಎಂದರೆ ಶರೀರದ ಎಲುಬುಗಳು ಜಲ್ಲೋದಂತಾಗಿ ದೇಹದ ಸಮತೋಲನವೇ ತಪ್ಪಿ ಹೋಗುವ ಭಯ!

ಕೆಲವರ್ಷಗಳ ಹಿಂದೆ ಮ್ಯಾಕನಾವ್ ದ್ವೀಪಕ್ಕೆ ಪ್ರವಾಸ ಹೋಗಿದ್ದಾಗ ನನ್ನ ಜೊತೆಯಲ್ಲಿದ್ದವರೆಲ್ಲಾ ಬೈಸಿಕಲ್ ತೆಗೆದುಕೊಂಡು ದ್ವೀಪ ಸುತ್ತಾಡ ಹೊರಟರು. ನನ್ನ ಎತ್ತರಕ್ಕೆ ಸರಿಯಾದ (ಸೀಟಿನ ಮೇಲೆ ಕೂತು ಕಾಲು ನೆಲ ಸೋಕುವಂತಹ) ಬೈಸಿಕಲ್ ಬಾಡಿಗೆದಾರನ ಬಳಿ ಇರಲಿಲ್ಲ. ಸೀಟಲ್ಲಿ ಕುಳಿತು ನನ್ನ ಪಾದದ ತುದಿಯಾದರೂ ನೆಲ ಸೋಕದಿದ್ದಲ್ಲಿ ನಾನು ಆ ಬೈಸಿಕಲ್ಲನ್ನು ಏರಿ ತುಳಿಯುವವಳೇ ಅಲ್ಲ. ಇದ್ದೆರಡು ಆಯ್ಕೆ ಎಂದರೆ ಅಂಗಡಿಯವ ಕೊಟ್ಟ ಬೈಕನ್ನು ತೆಗೆದುಕೊಳ್ಳಬೇಕು, ಇಲ್ಲಾ... ಎಲ್ಲರೊಡನೆ ದ್ವೀಪ ಸುತ್ತುವ ಆಸೆಯನ್ನು ಬಿಡಬೇಕು. ನನಗಾಗಿ ಯಾರೂ ತಮ್ಮ ಸವಾರಿ ಬಿಡುವವರಲ್ಲ ಎನ್ನುವುದಂತೂ ಗ್ಯಾರಂಟಿ. ಒಂದು ನೆಮ್ಮದಿಯ ಸಂಗತಿ ಎಂದರೆ ಇಡೀ ದ್ವೀಪದಲ್ಲಿ ಕಾರು ಚಾಲನೆ ನಿಷಿದ್ಧ. ಕಾಲ್ನಡಿಗೆ, ಸೈಕಲ್ ಸವಾರಿ, ಕುದುರೆಗಾಡಿ ಸವಾರಿ... ಇಷ್ಟೇ. ಸರಿ, ಸುತ್ತಾಟಕ್ಕೆ ಹೊರಟ ನಾನು ಸೈಕಲ್ ಏರುತ್ತಿದ್ದುದೇ ಏರಲು ಕಲ್ಲು, ಅಥವಾ ದಿಣ್ಣೆ ಸಿಕ್ಕಾಗ, ಇಳಿಯುತ್ತಿದ್ದುದೂ ಅಂತಹದೇ ಮತ್ತೊಂದು ಕಲ್ಲು ಸಿಕ್ಕಾಗ. ಸ್ವಚ್ಛವಾಗಿದ್ದ ನೀಲಿ ಸಮುದ್ರದ ಬಿಳೀ ಮರಳ ದಂಡೆಯ ಅಂಚಿನಲ್ಲಿ ದ್ವೀಪ ಸುತ್ತಿ ಬೈಕಿಂದ ಬೀಳದೆ ಯಾರಿಗೂ ಢಿಕ್ಕಿಸದೆ ಸವಾರಿ ಮುಗಿಸಿದ್ದೆ. ಕುದುರೆ ಸವಾರಿ? It is totally a different ball game. ಕುದುರೆ ಏರಿ ಕುಳಿತರೆ ನೇತಾಡುವ ಕಾಲುಗಳಿಗೆ ಎಂದೂ ನೆಲ ಸಿಗುವುದೇ ಇಲ್ಲ! ಬೈಸಿಕಲ್ಲಿನಲ್ಲಾದರೋ ಕಲ್ಲು ಕಂಡಲ್ಲಿ ಕೆಳಗಿಳಿಯಬಹುದು. ಬೈಸಿಕಲ್ಲಿಗೆ ನೆತ್ತಿಯಾಗಲಿ, ನೆತ್ತಿಯಡಿ ಮೆದುಳಾಗಲೀ ಇಲ್ಲ. ಪೆಡಲ್ ತುಳಿಯದಿದ್ದರೆ ನಿಲ್ಲುತ್ತೆ.

ಕುದುರೆ ಹಾಗಲ್ಲವಲ್ಲ! ಅದಕ್ಕೂ ಬುದ್ಧಿ ಇದೆ, ಸವಾರನ ನಿಯಂತ್ರಣಕ್ಕೂ ಮೀರಿ ತನ್ನದೇ ಮರ್ಜಿಯಲ್ಲಿ ಚಿಂತಿಸಬಲ್ಲ ಮೆದುಳೂ, ಮನ ಬಂದಂತೆ ಚಲಿಸುವ ಕಾಲುಗಳೂ ಇರುವುವಲ್ಲಾ! ಇದೆಲ್ಲಾ ಯೋಚಿಸಿಯೇ ಕುದುರೆ ಸವಾರಿಯಿಂದ ದೂರವಿದ್ದೆ.

ನಾನು ಫ್ಲವರ್‌ಹಿಲ್ ಎಲಿಮೆಂಟರಿ ಶಾಲೆಯಲ್ಲಿ ಪೇರೆಂಟ್ ವಾಲಂಟಿಯರ್ ಕೆಲಸ ಮಾಡುತ್ತಿದ್ದ ದಿನಗಳವು. ಮಿಸಸ್ ಲರ್ನರ್ ತನ್ನ 2ನೇ ತರಗತಿಯ ಮಕ್ಕಳಿಗೆ ಅಮೆರಿಕನ್ ಇಂಡಿಯನ್ ಜನರ ಜನಪದ ಕಥೆಯೊಂದನ್ನು ಓದುತ್ತಿದ್ದಳು. ಕುದುರೆಗಳು ಭೂಮಿಗೆ ಬಂದ ಬಗೆ ಹೇಗೆ ಎಂಬುದರ ಬಗೆಗಿನ ಕಥೆಯದು. ಮಿಸಸ್ ಲರ್ನರ್ ಅದ್ಭುತ ಕಥಾ ನಿರೂಪಕಿ. ಆ ಕಥೆಯಲ್ಲಿ ಯಾರೂ ಒಲ್ಲದ ನಿರ್ಗತಿಕ ಹುಡುಗನನ್ನು ಬೇರೆ ತಾಂಡದ (ಟ್ರೈಬ್) ಮುಖ್ಯಸ್ಥ ಕರುಣೆಯಿಂದ ಸಾಕಿ ಸಲಹುತ್ತಾನೆ. ಆ ಹುಡುಗ ತನ್ನ ಕೃತಜ್ಞತೆಯನ್ನು ತೋರಿಸಲು ಮಹತ್ತರವಾದ ಕಾಣಿಕೆಯೊಂದನ್ನು ತಾಂಡದ ಜನಗಳಿಗೆ ತಂದುಕೊಡಲು ಬಯಸುತ್ತಾನೆ. ಮುಖ್ಯಸ್ಥ ಕುದುರೆಯ ಬಗ್ಗೆ ಆ ಹುಡುಗನಿಗೆ ತಿಳಿಸಿ, ನಾವೀಗ ಸರಕುಸಾಗಣೆಗಾಗಿ ಬಳಸುತ್ತಿರುವ ನಾಯಿಗಳಿಗಿಂತ ಬಲಶಾಲಿಯಾದ ಹಾಗೂ ವೇಗವಾಗಿ ಚಲಿಸುವ ಪ್ರಾಣಿ ಅದೆಂದೂ, ಅದನ್ನು ತರುವ ಬಗೆ, ಇರುವ ಸ್ಥಳದ ವಿವರಗಳನ್ನು ಕೊಡುತ್ತಾನೆ. ಆ ಪ್ರಾಣಿಯನ್ನು ತರ ಹೊರಟವರೊಬ್ಬರೂ ಇದುವರೆಗೆ ಹಿಂತಿರುಗಿ ಬಂದಿಲ್ಲವೆಂದು ಮರೆಯದೇ ತಿಳಿಸುತ್ತಾನೆ. ಅಂತಿಮವಾಗಿ ಹುಡುಗನ ಧೈರ್ಯ, ಸ್ಥೈರ್ಯ, ಸಾಹಸ, ತಾಳ್ಮೆ, ಶ್ರದ್ಧೆಯ ಫಲವಾಗಿ ಕುದುರೆಗಳು ತಾಂಡದ ಜನರಿಗೆ ದೊರೆಯುವಂತಾಯ್ತು ಎನ್ನುವಲ್ಲಿಗೆ ಕಥೆ ಮುಗಿಯುತ್ತದೆ. ಕಥೆಯಲ್ಲಿ ಕುದುರೆಯ ಸೌಂದರ್ಯದ ವರ್ಣನೆ, ಅವುಗಳ ಚಲನೆಯ ಮನೋಹರಗತಿ ನನ್ನ ಕಣ್ಣು ಕಟ್ಟಿದವು. ಆ ಹುಡುಗ ಮೊದಲ ಬಾರಿ ಕುದುರೆ ಏರಿದ ಅನುಭವನ್ನು ವಿವರಿಸುವ ಸಾಲುಗಳಂತೂ ಆ ಅನುಭವಕ್ಕಾಗಿ ಎದುರು ನೋಡುವಂತೆ ಮಾಡಿತ್ತು. ಕಥೆ ಹೇಳುತ್ತಾ ಹೇಳುತ್ತಾ ಮಿಸಸ್ ಲರ್ನರ್ ಮಕ್ಕಳಲ್ಲಿ ಸೇವಾ ಪ್ರವೃತ್ತಿ, ತಾಳ್ಮೆ, ಸಂಯಮ, ಶ್ರದ್ಧೆ ಎಲ್ಲಾ ಗುಣಗಳನ್ನು ಉದ್ದೀಪನಗೊಳಿಸಿದ್ದಳು. ಮಕ್ಕಳು ತಾವು ಕಮ್ಯುನಿಟಿಗಾಗಿ ಈಗ ಹಾಗೂ ದೊಡ್ಡವರಾದ ಮೇಲೆ ಏನೇನು ಮಾಡಬಹುದು ಎಂಬ ಪಟ್ಟಿಯನ್ನು ಹಂಚಿಕೊಂಡಿದ್ದರು.

ತುಮಕೂರಿನ ಕಿರು ರಸ್ತೆಗಳಲ್ಲಿ ಜಟಕಾ ಎಳೆಯಲು ಹೆಣಗಾಡುತ್ತಿದ್ದ ಬಡ ಕುದುರೆಗಳನ್ನು ಮಾತ್ರ ಕಂಡಿದ್ದ ನಾನು ಈ ದೇಶದಲ್ಲಿ ಮೊದಲ ಬಾರಿ ಕುದುರೆಗಳನ್ನು ಅತೀ ಸಮೀಪದಿಂದ ಕಂಡದ್ದು ಲೆಕ್ಸಿಂಟನ್ನಿನ ಸ್ಯಾಂಚುಯರಿಯಲ್ಲಿ. ಕಟ್ಟಡದ ಒಳ ಆವರಣಕ್ಕೆ ಬರುತ್ತಿದ್ದಂತೆಯೇ ವಿಶಾಲವಾದ ಹಸಿರು ಬಯಲಿನಲ್ಲಿ ಕಂದು, ಕಡುಕಂದು, ಬಿಳೀ, ತೆಳುಜೇನು, ಕೆನೆಬಿಳುಪು ಬಣ್ಣದ ಕುದುರೆಗಳು ಸ್ವಚ್ಛಂದವಾಗಿ ಓಡುತ್ತಿದ್ದವು. ಅವುಗಳ ಓಟದ ವೇಗಕ್ಕೆ ಹಾರುತ್ತಿದ್ದ ಅವುಗಳ ಕೇಸರ, ಮುಂಗಾಲು ಎಗರಿಸಿ ಗಾಳಿ ಸೀಳಿ ಮುನ್ನುಗ್ಗುತ್ತಿದ್ದ ವೈಖರಿಗೆ ನಾ ಮನಸೋತಿದ್ದೆ. ಅಲ್ಲಿದ್ದ ಕುದುರೆಗಳು ಬೇರೆ ಬೇರೆ

ಚಾಂಪಿಯನ್‌ಶಿಪ್ ರೇಸಿನಲ್ಲಿ ಪಾರಿತೋಷಕ, ಪ್ರಶಸ್ತಿ, ದೊಡ್ಡ ದೊಡ್ಡ ಮೊತ್ತದ ಬಹುಮಾನ ಪಡೆದ ಕುದುರೆಗಳು. ಧಣಿಗಳು ಅವುಗಳನ್ನು ತಾವು ದುಡಿಸಿಕೊಂಡ ನಂತರ ಹೊಲಗಳಲ್ಲಿ ದುಡಿಸಿಕೊಳ್ಳುವವರಿಗೆ ಮಾರಿಬಿಡುವರಂತೆ. ಇನ್ನು ಕೆಲವರು ಅವುಗಳನ್ನು ಅಲಕ್ಷಿಸಿ, ಕಡೆಗಣಿಸಿ, ಸರಿಯಾಗಿ ನೋಡಿಕೊಳ್ಳದೆ ಬಿಟ್ಟುಬಿಡುವರಂತೆ. ಹಲವಾರು ವರ್ಷಗಳು ಸಾವಿರಾರು ಪ್ರೇಕ್ಷಕರ ಮನರಂಜಿಸಿ ಉತ್ತಮ ಸ್ಥಿತಿಯಲ್ಲಿದ್ದ ಇಂತಹ ಕುದುರೆಗಳನ್ನು ರಕ್ಷಿಸಲೆಂದೇ ಈ ಸ್ಯಾಂಚುಯರಿಯನ್ನು ನಿರ್ಮಿಸಿದ್ದರು. ತಮ್ಮ ವೃತ್ತಿಯನ್ನು ನಿರ್ವಹಿಸಿ, ದಣಿವಾಗಿ, ಯೌವ್ವನ ಕಳೆದು ನಿವೃತ್ತಿಯಾದ ಕುದುರೆಗಳು ತಮ್ಮ ಉಳಿದ ಆಯುಷ್ಯವನ್ನು ಗೌರವಯುತವಾಗಿ ಬದುಕಿರಲು ಮಾಡಿದ ಉತ್ತಮ ವ್ಯವಸ್ಥೆ. ಲಾಯದಲ್ಲಿ ಪ್ರತೀ ಕುದುರೆಯ ಕ್ಯಾಬಿನ್ನಿನ ಚೌಕಟ್ಟಿಗೆ, ಆ ಕುದುರೆ ಗೆದ್ದ ಚಾಂಪಿಯನ್‌ಶಿಪ್‌ನ ಹೆಸರು, ಸ್ಪರ್ಧೆಯ ವಿವರ ಹಾಕಿದ ಪಟ್ಟಿಯೊಂದನ್ನು ನೇತು ಹಾಕಿದ್ದರು. ಅಲ್ಲಿಂದ ಆಚೆ ಬಂದಾಗ, ಜೀವನದ ಉಪಯೋಗ ನಿರುಪಯೋಗಗಳ ದಿನಗಳ ನಡುವೆ ನಷ್ಟವಾಗಬಹುದಾಗಿದ್ದ ಚಾಂಪಿಯನ್‌ಗಳ ಘನತೆ ಎತ್ತಿ ಹಿಡಿದ ಸ್ಯಾಂಚುಯರಿಯ ನೆಲ ಮಂಗಳ ಎನ್ನಿಸಿತ್ತು.

ನಾವಿರುವ ಊರಿನಿಂದ ಉತ್ತರಕ್ಕೆ ಸುಮಾರು 40 ನಿಮಿಷಗಳ ದೂರದಲ್ಲಿ ಹಾರ್ಸ್ ರೆಸ್ಕ್ಯು ಶೆಲ್ಟರ್ ಒಂದಿದೆ. ಯಜಮಾನರಿಂದ ಕಡೆಗಣಿಸಲ್ಪಟ್ಟು, ದೈಹಿಕವಾಗಿ ಹಲ್ಲೆಗೊಳಗಾಗಿ ನಿತ್ರಾಣಗೊಂಡ ಕುದುರೆಗಳಿಗೆ ಆಶ್ರಯ ತಾಣ ಅದು. ಅಂತಃಕರಣ ಇರುವವರು ಈ ಆಶ್ರಯ ತಾಣದಲ್ಲಿ ಕೆಲಸ ಮಾಡಬಹುದು. ಈ ತಾಣದ ನಿರ್ವಹಣೆ, ಕೆಲಸದ ಜವಾಬ್ದಾರಿ, ವಹಿವಾಟೆಲ್ಲಾ ಸಂಪೂರ್ಣವಾಗಿ ಸ್ವಯಂಸೇವಕರಿಂದಲೇ ನಡೆಯುವುದು. ಬಹಳಷ್ಟು ಮಂದಿ ಹದಿಹರೆಯದ ಮಕ್ಕಳು ಇಲ್ಲಿ ಸ್ವಯಂ ಸೇವಕರಾಗಿ ದುಡಿಯುತ್ತಾರೆ. ನಾನೂ ಮಕ್ಕಳೂ ಕೆಲವಾರು ಘಂಟೆ ಈ ಆಶ್ರಯ ತಾಣದಲ್ಲಿ ಕುದುರೆ ಮಾಲೀಶು ಮಾಡುವುದು, ಲಾಯ ತೊಳೆಯುವುದು, ಕುದುರೆಗೆ ಮೇವುಣಿಸುವುದು ಮಾಡಿದ್ದಿದೆ.

ಕೆಲವರ್ಷಗಳ ಹಿಂದೆ ಸೈನ್ಸ್ ಜರ್ನಲ್ ಒಂದರಲ್ಲಿ 'ಹಾರ್ಸ್ ಜೀನೋಮ್' ಬಗ್ಗೆ ಸಂಶೋಧನೆ ನಡೆಸುತ್ತಿದ್ದ ಮಹಿಳಾ ವಿಜ್ಞಾನಿ ಬರೆದ ಲೇಖನದಲ್ಲಿ ರಾಣಾ ಪ್ರತಾಪ್ ಸಿಂಹನ ಕುದುರೆ ಚೇತಕ್‌ನ ತಳಿಯ ಬಗ್ಗೆ ವಿವರವಿತ್ತು. ಆ ತಳಿಯನ್ನು ಸಂರಕ್ಷಿಸುವ ಮತ್ತು ಅದನ್ನು ಇಲ್ಲಿಗೆ ತರಲು ಹೊರಟ ಅವಳ ಪ್ರಯತ್ನ, ಈ ನಿಟ್ಟಿನಲ್ಲಿ ಅವಳಿಗೆದುರಾದ ಸವಾಲು ಅಡ್ಡಿ ಎಲ್ಲದರ ಬಗ್ಗೆ ವಿವರಿಸಿದ್ದಳು. ಅಂತೂ ಇಂತೂ ಗಜಗಜ ಉದ್ದ ಎತ್ತರಕ್ಕೆ ಹಾರಿ ರಣರಂಗದಿಂದ ರಾಣಾನನ್ನು ಕಾಡಿನೊಳಕ್ಕೆ ಹೊತ್ತೊಯ್ದು ಶತ್ರುಗಳಿಂದ ರಕ್ಷಿಸಿದ ಚೇತಕ್‌ನ ಸಾಹಸ, ರಾಜ ವಧುವನ್ನು ಸ್ವಯಂವರದಿಂದ ಹೊತ್ತೊಯ್ದ ಪೃಥ್ವೀರಾಜನ ಕುದುರೆಯ ಓಟ, ಜೊತೆ ಜೊತೆಗೆ ಯುದ್ಧ ಭೂಮಿಯಲ್ಲಿ ವೀರಗಚ್ಚೆ ಹಾಕಿ ಕತ್ತಿ ಗುರಾಣಿ ಹಿಡಿದು ಶತ್ರುಗಳ ನಡುವೆ ಹೋರಾಡುತ್ತಿದ್ದ ರಾಣಿ ಚೆನ್ನಮ್ಮ ಮತ್ತು ಲಕ್ಷ್ಮಿಭಾಯಿಯನ್ನು

ಬೆನ್ನ ಮೇಲೆ ಹೊತ್ತ ಪಠ್ಯ ಪುಸ್ತಕದಲ್ಲಿನ ಕುದುರೆಯ ಚಿತ್ರಗಳನ್ನು ನಾನು ಎಂದಾದರೂ ಮರೆತೇನೆ?

ಅಕ್ಟೋಬರಿನ ಮೊದಲ ವಾರದ ದಿನ. ವರ್ಷದ ಕೊನೆ ಇನ್ನೇನು ಸಮೀಪದ ತಿರುವಿನಲ್ಲಿದೆ ಎಂದು ನೆನಪಿಸುವ ತಿಂಗಳಿದು. ಬಣ್ಣದೆಲೆಗಳು ಹಾದಿಯುದ್ದಕ್ಕೂ ಹರಡಿದ್ದವು. ತಣ್ಣನೆಯ ತಾಜಾಗಾಳಿ ಹಿತವಾಗಿ ಬೀಸುತ್ತಿತ್ತು. ಮನೆಯಿಂದ ಹೊರಟಾಗ ಬಂಗಾರ ಬಣ್ಣ ಚೆಲ್ಲುತ್ತಿದ್ದ ಸೂರ್ಯ ನಾನು ಕುದುರೆ ಸವಾರಿಯ ಜಾಗ ತಲುಪುವ ವೇಳೆಗೆ ಬೆಳ್ಳಿಯ ಬೆಳಕು ಸುರಿಸಲು ಶುರು ಮಾಡಿದ್ದ. ಸೂರ್ಯನನ್ನು ನೋಡಿದಾಗಲೆಲ್ಲ, 'ಸ್ವಾಮಿ ಮ್ಯಾಲೆ ಬಂದಾಯ್ತು, ಏಳ್ರೋ' ಎನ್ನುತ್ತಿದ್ದ ಅಜ್ಜಿಯ ಕರೆ ನೆನಪಾಗುವುದು. ಅಜ್ಜಿ ಯಾವಾಗಲೂ ಸೂರ್ಯನನ್ನು 'ಸ್ವಾಮೀ' ಎಂದೇ ಸಂಬೋಧಿಸುತ್ತಿದ್ದುದು. ಮೊದಲೆಲ್ಲ ಎಚ್ಚರಾಗುತ್ತಿದ್ದಂತೆ ಸದಾ ಕಣ್ಣೆದುರು ಬರುತ್ತಿದ್ದದ್ದು, ಕುದುರೆಗಳು ಎಳೆಯುತ್ತಿದ್ದ ರಥ ನಡೆಸುತ್ತಿದ್ದ, 'ಅಂಬಾಳ್' ನಶ್ಯದ ಕ್ಯಾಲೆಂಡರ್ ಸೂರ್ಯ. ಈ ದಿನಗಳಲ್ಲಿ ಕ್ಯಾಲೆಂಡರ್ ಸೂರ್ಯನನ್ನು ನೆನಪಿಸಿಕೊಳ್ಳಲು ಪ್ರಯತ್ನಪಟ್ಟರೆ ಕಣ್ಮುಂದೆ ಬರುವುದು ಅತ್ಯಂತ ಸುಂದರವಾದ ಬಡ್‌ವೈಸರ್‌ನ Clydesdale ಕುದುರೆಗಳು. ನಗು ಬಂತು.

ಕಾರಿನಿಂದ ಇಳಿದಿದ್ದೇ ಕಾಲುಗಳಲ್ಲಿ ಕಂಪನ. ಆ ವೇಳೆಗಾಗಲೇ ಅಲ್ಲಿ ಸುಮಾರು ಹದಿನೈದು ಜನರ ಗುಂಪು ನಿಂತಿತ್ತು. ಕಂಪಿಸುವ ಕಾಲಿಗೆ ಬುದ್ಧಿ ಹೇಳುವ ಮನ ದ್ವಂದ್ವಕ್ಕೆ ಬಿದ್ದಿತ್ತು. ಕಾರು ಹತ್ತಿ ವಾಪಸ್ಸು ಹೋಗಿಬಿಡು ಎಂದಿತು ವಿವೇಕ. ಅಷ್ಟರಲ್ಲಿ ಗೆಳತಿ 'ಹಾಯ್ ಶಾಶ್' ಎಂದು ಕೂಗಿದಳು. ಪ್ಯಾಟ್ರಿಕ್ ಉತ್ಸಾಹದಿಂದ ಎರಡೂ ಕೈ ಎತ್ತಿ ಬೀಸಿದ. ಅಲ್ಲಿದ್ದ ಬಹುತೇಕ ಜನರ ಕೈಯ್ಯಲ್ಲಿ ಹೆಲ್ಮೆಟ್‌ಗಳಿದ್ದವು. ನಿನ್ನೆ ಆಫೀಸ್ ಬಿಡುವಾಗ ಪ್ಯಾಟ್ರಿಕ್ ಕುದುರೆ ಸವಾರಿಗೆ ಬರುವಾಗ ಹಾಕಿಕೊಂಡು ಬರಬೇಕಾದ ಶೂ, ಉಡುಗೆ ಬಗ್ಗೆ ಜ್ಞಾಪಿಸಿ ಹೆಲ್ಮೆಟ್ ತರುವುದನ್ನು ಮರೆಯಬೇಡ ಎಂದಿದ್ದ. ಆದರೂ ನಾನದನ್ನು ಮರೆತಿದ್ದೆ. Anyway, ನನ್ನ ಹತ್ತಿರ ಇದ್ದದ್ದು ಸೈಕಲ್ ಹೊಡೆಯಲು ಉಪಯೋಗಿಸುವ ಮಣ ಭಾರದ ದಪ್ಪ ಹೆಲ್ಮೆಟ್. May be this is a sign to go back ಎಂದುಕೊಳ್ಳುತ್ತಾ ಗುಂಪಂತೂ ಸೇರಿದೆ. ಅಷ್ಟರಲ್ಲಿ ಕಟ್ಟೆಯ ಮೇಲೆ ನಿಂತಿದ್ದ ಪ್ಯಾಟ್ರಿಕ್ ಎಲ್ಲರನ್ನೂ ಉದ್ದೇಶಿಸಿ 'ಗುಡ್‌ಮಾರ್ನಿಂಗ್. ಸುಂದರವಾದ ಬೆಳಗಿದು. ಇಂದು ನೀವೆಲ್ಲಾ ಕುದುರೆ ಸವಾರಿಗಾಗಿ ಬಂದಿರುವುದು ಸಂತೋಷದ ಸಂಗತಿ. ನನ್ನ ಹೆಸರು ಪ್ಯಾಟ್ರಿಕ್, ಈದಿನದ ಸವಾರಿ ತಂಡದ ಜೊತೆ ನಾನೂ ನಿಮ್ಮೊಟ್ಟಿಗೆ ಬರುವೆ. ನನ್ನ ಜೊತೆಯಲ್ಲಿ ವಿಲ್ಲಿ, ಜಾನ್ ಹಾಗೂ ವಿಕ್ಟರ್ ನಿಮ್ಮ ಸಹಾಯಕ್ಕಾಗಿ ಬರಲಿದ್ದಾರೆ. ಎಲ್ಲಕ್ಕಿಂತ ಮುಖ್ಯ ವಿಷಯವೆಂದರೆ, ಕುದುರೆ 'ಪಶು' ('prey') ವರ್ಗಕ್ಕೆ ಸೇರಿದ ಪ್ರಾಣಿ. 'ಪಶು' ಎಂದರೆ ಅರಣ್ಯದಲ್ಲಿ ಈ ವರ್ಗದ ಪ್ರಾಣಿಗಳು ತಿನ್ನಲ್ಪಡುತ್ತವೆ. ಇದನ್ನು ತಡೆಯುವುದಕ್ಕಾಗಿ/ ತಪ್ಪಿಸಿಕೊಳ್ಳುವುದಕ್ಕಾಗಿ ಕುದುರೆಗಳು ಹಿಂಡಾಗಿ ನಾಯಕನೊಟ್ಟಿಗೆ ಪಯಣಿಸುತ್ತವೆ. ಸವಾರಿಯ ವೇಳೆಯಲ್ಲಿ ನೀವು ಮತ್ತು ನಿಮ್ಮ ಕುದುರೆ ಸೇರಿದಂತೆ ಇಬ್ಬರನ್ನೊಳಗೊಂಡ

ಒಂದು ಹಿಂಡು. ನೀವು ಏರುವ ಕುದುರೆ ನಿಮ್ಮ ನಾಯಕತ್ವವನ್ನು ಪರೀಕ್ಷಿಸಿ, ನೀವು ನಾಯಕತ್ವ ಪ್ರದರ್ಶಿಸದಿದ್ದಲ್ಲಿ, ತಾನೇ ನಾಯಕತ್ವ ವಹಿಸಿ ನಿಮ್ಮಿಬ್ಬರನ್ನು ರಕ್ಷಿಸುವ ಜವಾಬ್ದಾರಿ ಹೊರುವುದು. ನೀವು, ಅಂದರೆ ಕುದುರೆ ಸವಾರ, ಆತ್ಮವಿಶ್ವಾಸದೊಂದಿಗೆ ಸ್ಪಷ್ಟವಾದ ನಿರ್ದೇಶನ ಕೊಡುವುದರ ಮೂಲಕ ನೀವೇ ನಾಯಕ ಎಂದು ಪ್ರತಿಪಾದಿಸದಿದ್ದಲ್ಲಿ, ಕುದುರೆ ನೀವು ತನ್ನನ್ನು ಭೋಜನವಾಗುವುದನ್ನು ತಪ್ಪಿಸಬಲ್ಲಿರಿ ಎಂದು ನಂಬುವುದಿಲ್ಲ'. ಪ್ಯಾಟ್ರಿಕ್‌ನ ಮಾತುಗಳನ್ನು ಕೇಳುತ್ತಿದ್ದಂತೆ, 'ಶಶಿಕಲಾ, ಎದೆ ಗುಂದದಿರು'– ಎಂದು ನನಗೆ ನಾನೇ ಹೇಳಿಕೊಂಡೆ.

ಮಾತು ಮುಂದುವರೆಸಿದ ಪ್ಯಾಟ್ರಿಕ್, ಸವಾರಿ ಸಮಯದಲ್ಲಿ ಬಲಕ್ಕೆ ಹೋಗಲು, ಎಡಕ್ಕೆ ತಿರುಗಲು, ಮುಂದೆ ವೇಗವಾಗಿ ಹೋಗಲು ಲಗಾಮನ್ನು ಯಾವ ರೀತಿ ಎಷ್ಟು ಬಲ ಉಪಯೋಗಿಸಿ ಎಳೆಯಬೇಕು, ಎಂದೆಲ್ಲಾ ಸೂಚನೆ ಕೊಟ್ಟ. ಏಳಡಿ ಎತ್ತರದ ಕುದುರೆಯ ಮೇಲೆ ಕುಳಿತು ಇದನ್ನೆಲ್ಲಾ ನೆನಪಿಟ್ಟುಕೊಳ್ಳುವುದಾದರೂ ಹೇಗೆ? ನೆಲಕ್ಕೆ ಕಾಲೂರದೇ, ಹಿಡಿದುಕೊಳ್ಳಲು ಯಾವ ಆಧಾರವೂ ಇರದೆ ಸಮತೋಲನ ಕಾಪಾಡಿಕೊಳ್ಳುವುದಾದರೂ ಹೇಗೆ? ಎಂದೆಲ್ಲಾ ಗೊಂದಲದಲ್ಲಿ ಬಿದ್ದ ನನಗೆ ಮತ್ತಷ್ಟು ಗಾಬರಿ ಉಂಟು ಮಾಡಿದ್ದು ಅವನ ಮುಂದಿನ ವಾಕ್ಯಗಳು. 'ಸವಾರಿಗೆ ಮುನ್ನ ನೀವೆಲ್ಲಾ ಮುಖ್ಯವಾಗಿ ನೆನಪಿಡಬೇಕಾದ ಎರಡು ಅಂಶಗಳೆಂದರೆ–

1. ನೀವು ಸಮತೋಲನ ತಪ್ಪಿ ಬೀಳುವಿರಿ ಎನ್ನಿಸಿದರೆ ನೀವಾಗಿ ನೀವೇ ಬಿದ್ದುಬಿಡಿ, ತಪ್ಪಿದ ಸಮತೋಲನದಿಂದ ಚೇತರಿಸಿಕೊಳ್ಳಲು ಪ್ರಯತ್ನಿಸ ಬೇಡಿ. ನಿರೀಕ್ಷೆಯಂತೆ ನೀವಾಗಿ ಬಿದ್ದಲ್ಲಿ ತೀವ್ರವಾದ ಪೆಟ್ಟು ಬೀಳುವ ಸಾಧ್ಯತೆ ಕಡಿಮೆ. ತಪ್ಪಿದ ಸಮತೋಲನದಿಂದ ಚೇತರಿಸಿಕೊಳ್ಳಹೋಗಿ ಅನಿರೀಕ್ಷಿತವಾಗಿ ಬಿದ್ದರೆ ಪೆಟ್ಟಿನ ತೀವ್ರತೆ ಹೆಚ್ಚು.

2. ನಿಮ್ಮ ಕುದುರೆ ಏನಾದರೂ ನಾಯಿಯಂತೆ ಮಂಡಿಯೂರಿ ನೆಲದ ಮೇಲೆ ಕುಳಿತಿತೋ ತಕ್ಷಣ ಕುದುರೆಯ ಬೆನ್ನ ಮೇಲಿಂದ ಇಳಿದು ದೂರ ಉಳಿಯಿರಿ. ಈ ಸ್ಥಿತಿಯಲ್ಲಿ ಕುದುರೆ ತನ್ನ ಬೆನ್ನ ಮೇಲೆ ಉರುಳುವ ಸಾಧ್ಯತೆ ಇದೆ. ನೀವೇನಾದರೂ ಕೆಳಗಿಳಿಯದೇ ಕುದುರೆಯ ಬೆನ್ನ ಮೇಲೆ ಉಳಿದಿರೋ ಕುದುರೆ ತನ್ನ ಬೆನ್ನ ಮೇಲೆ ಉರುಳಿದಾಗ ನಿಮ್ಮ ಕಾಲ ಮೂಳೆ ಮುರಿಯಬಹುದು ಅಥವಾ ನೀವು ಕುದುರೆಯಡಿಯಲ್ಲಿ ಅಪ್ಪಚ್ಚಿಯಾದರೂ ಆಗಬಹುದು. ಕುದುರೆಗಳ ತೂಕ ಸುಮಾರು 800–1200 ಪೌಂಡುಗಳು. ಅತೀ ಭಾರದ ಹೇರು!'

ಅಲ್ಲಿಗೆ ಖಂಡಿತಾ ನನ್ನ ಕುದುರೆ ಸವಾರಿಯ ಇಚ್ಛಾ ಶಕ್ತಿಯಲ್ಲಿ 15 ನಿಮಿಷಗಳ ಹಿಂದೆ ಬಿಟ್ಟಿದ್ದ ಬಿರುಕು ಇನ್ನಷ್ಟು ಆಳವಾಯಿತು. ಮೆಲ್ಲಗೆ ಹೆಜ್ಜೆ ಹಿಂದೆ ಇಡತೊಡಗಿದೆ. ಶೆರಲ್ ಫಕ್ಕನೆ ಕೈ ಹಿಡಿದು 'ಹಾಗೇನೂ ಆಗೊಲ್ಲ. ನಿನ್ನ ಸಹಾಯಕ್ಕಾಗಿ ಜನರಿರುತ್ತಾರೆ. ಹೋಗಬೇಡ ನಿಲ್ಲು' ಎಂದಳು. ನನ್ನ ಪಕ್ಕ ಇದ್ದ ಕೆಂಪು ಗುಂಗುರು ಕೂದಲಿನ ಹುಡುಗಿ,

'ಇದು ನನ್ನ ಮೊದಲ ಸವಾರಿ ಕೂಡ. ಹೋಗಬೇಡ' ಎಂದಳು. ಅವಳ ಪಕ್ಕ ಇದ್ದ ಕರಿಯ ಹುಡುಗ 'ನನ್ನದೂ ಕೂಡ' ಎಂಬಂತೆ ಮುಖ ಮಾಡಿ, 'stay' ಎಂದ. 'Any questions?' ಎಂದ ಪ್ಯಾಟ್ರಿಕ್‌ನನ್ನು ಕೆಲ ಜನ ಏನೇನೋ ಪ್ರಶ್ನೆ ಕೇಳಿದರು. ಅವನೂ ಉತ್ತರಿಸಿದ. ಹೆಲ್ಮೆಟ್ ಇಲ್ಲದವರು ಈ ಪತ್ರಕ್ಕೆ ಸಹಿ ಹಾಕಿ ಎಂದು ಸೂಚಿಸಿದ. ಪತ್ರದಲ್ಲಿ 'ಕುದುರೆಯಿಂದ ಬಿದ್ದು ತಲೆ ಬಡಿದುಕೊಂಡರೆ (ಹೋಳಾದರೆ ಎಂದು ಪಿಸುಗುಟ್ಟಿತು ನನ್ನ ನಡುಗುವ ಹೃದಯ) ಸಂಸ್ಥೆ ಜವಾಬ್ದಾರಿಯಲ್ಲ. ನಮ್ಮ ಅಪಘಾತಕ್ಕೆ ನಾವೇ ಹೊಣೆಗಾರರು' ಎನ್ನುವ ಒಕ್ಕಣೆ ಓದಿ ಕಂಪಿಸುತ್ತಿದ್ದ ಕಾಲಿನ ಜೊತೆಗೆ, ಹೊಟ್ಟೆಯೂ ಅದುರ ತೊಡಗಿತು. ಸರಿ, ನನ್ನಲ್ಲಿ ಹೆಲ್ಮೆಟ್ ಇಲ್ಲ, ಸವಾರಿಯಿಂದ ಹಿಮ್ಮೆಟ್ಟಲು ಸುಲಭ ಕಾರಣ ಎಂದು ಹಿಂತಿರುಗಿದರೆ ಪ್ಯಾಟ್ರಿಕ್ ಹೆಲ್ಮೆಟ್ ಹಿಡಿದು ನಿಂತಿದ್ದ.

ಯಜಮಾನ, 'ಮೊದಲ ಬಾರಿಗೆ ಸವಾರಿ ಮಾಡುತ್ತಿರುವವರು ಈ ಬದಿಗೆ ಬಂದು ನಿಲ್ಲಿ' ಎಂದ. ಇಬ್ಬರನ್ನು ಬಿಟ್ಟರೆ ಉಳಿದವರೆಲ್ಲಾ ಒಂದೇ ಬದಿಯಲ್ಲಿದ್ದೆವು. ಬೇಲಿಯ ಒಳ ಆವರಣದಲ್ಲಿ ಕುದುರೆಗಳ ಸಾಲಿತ್ತು. ಎಡಭಾಗದ ಮೊದಲ ಕುದುರೆ ಎಲ್ಲಕ್ಕಿಂತಾ ಎತ್ತರವೂ ದೊಡ್ಡ ಗಾತ್ರದ್ದೂ ಆಗಿತ್ತು. ಅಲ್ಲಿ ನಿಂತಿದ್ದ ವಿಕ್ಟರನನ್ನು, 'ಆ ಕುದುರೆಯ ಹೆಸರೇನು?' ಎಂದೆ. ಅವನು ಉತ್ತರಿಸುವ ಮುನ್ನ ಅಲ್ಲಿದ್ದ ಮತ್ತೊಬ್ಬ ಸಿಬ್ಬಂದಿ 'Killer' ಎಂದ. ವಿಕ್ಟರ್ ನಕ್ಕ. ನಾನು ಉಗುಳು ನುಂಗಿ ದೇವರೇ ಈ ಕುದುರೆ ನನ್ನ ಪಾಲಿಗೆ ಬರದಿರಲಿ ಎಂದು ಪ್ರಾರ್ಥಿಸಿದೆ. ಪ್ರಕೃತಿಯ ಯಾವ ನಿಯಮಕ್ಕೆ ನನ್ನ ಜೀವನದ ಕರಾರು ಪತ್ರ ತಯಾರಾಗಿತ್ತೋ ಏನೋ? ನನಗೆ ಕೊಡಲ್ಪಟ್ಟ ಕುದುರೆ 'Killer'! `Really? That does it. I am not getting on that horse.' ಎಂದೆ. ವಿಕ್ಟರ್ ನಗುತ್ತಾ 'ಅವನ ಹೆಸರು 'Killer' ಅಲ್ಲ, 'Teddy', ಇಲ್ಲಿನ ಕುದುರೆಗಳಲ್ಲೆಲ್ಲಾ ಮೃದು ಸ್ವಭಾವದ ಕುದುರೆ', ಎಂದ. ಪಕ್ಕದ ಕುದುರೆಯನ್ನೇರಿ ಕುಳಿತಿದ್ದ ಶೆರಲ್, 'ಕುದುರೆಯ ಗಾತ್ರ ದೊಡ್ಡದಿದ್ದರೆ ಸವಾರನಿಗೆ ಬ್ಯಾಲೆನ್ಸ್ ಮಾಡುವುದು ಸುಲಭ. They are more stable' ಎಂದಳು. ಪ್ಯಾಟ್ರಿಕ್ 'I know Teddy very well. I was the one who chose Teddy for you. Trust me' ಎಂದ. 'Trust you?' ಪ್ಯಾಟ್ರಿಕ್ ಹೆಲ್ಮೆಟ್ ಸವರಿ, 'Yes' ಎಂದ.

ಇನ್ನು 5 ಅಡಿ ಎತ್ತರದ ನಾನು ನೆಲದಿಂದ 6+ ಅಡಿ ಮೇಲಿರುವ ಕುದುರೆಯ ಬೆನ್ನ ಏರುವ ಪರಿ? ವಿಕ್ಟರ್ ನೆಲದ ಮೇಲೆ ಒಂದು ಮಂಡಿಯೂರಿ ಕುಳಿತು ಅವನ ಮತ್ತೊಂದು ಮಂಡಿಯನ್ನು ಊರಾಗಿ ಉಪಯೋಗಿಸಿಕೊಂಡು ಜಿಗಿ ಎಂದ. ನಾನು ಸಾಧ್ಯವೇ ಇಲ್ಲಾ ಎಂದೆ. 'ಶಶೀ ಸವಾರಿ ಆಸೆ ಬಿಟ್ಟು ಕಾರನೇರಿ ಓಡಿ ಹೋಗಲು ಕಡೇ ಕ್ಷಣದ ಅವಕಾಶ' ಎಂದು ಮನ ಪಿಸುಗುಟ್ಟಿತು. ಜಿಮಿನಿ ಕ್ರಿಕೆಟ್ ತರಹ ಸದಾ ನನ್ನನ್ನು ಹಿಂಬಾಲಿಸುವ ಅಯ್ಯನವರ ಧ್ವನಿ ಮೊರೆಯಿತು, 'ಕೊಟ್ಟ ಕುದರೆಯನೇರಲರಿಯದೆ ಮತ್ತೊಂದು ಕುದರೆಯ ಬಯಸುವರು ವೀರರೂ ಅಲ್ಲ, ಧೀರರೂ ಅಲ್ಲ...' ಮನದ ದ್ವಂದ್ವಗಳನ್ನು ಗಮನಿಸುತ್ತಾ ನಿಂತಿದ್ದ ಘಳಿಗೆ ವಿಕ್ಟರ್ 4 ಮೆಟ್ಟಿಲ ಪುಟ್ಟ ಏಣಿಯನ್ನು

ತಂದಿರಿಸಿ, 'ಹಲ್ಲಣಕ್ಕೆ ಜೋತು ಬಿದ್ದಿದ್ದ ಲೋಹದ ಕುಣಿಕೆಗೆ ಬಲಗಾಲನ್ನು ತೂರಿಸಿ ಎಡಗಾಲನ್ನು ಗಾಳಿಯಲ್ಲಿ ಬೀಸಿ ಕುದುರೆಯ ಬೆನ್ನನೇರು' ಎಂದ. ವಿಕ್ಟರನ ಮಾತನ್ನು ಚಾಚೂ ತಪ್ಪದೆ ಪಾಲಿಸಿದೆ. ಟೆಡ್ಡಿ ನನ್ನ ಭಾರಕ್ಕೆ ತೊನೆದ. 1200 ಪೌಂಡ್ ತೂಕದ ಟೆಡ್ಡಿಯೇ ಸಮತೋಲನಕ್ಕಾಗಿ ಹೆಜ್ಜೆ ಆಚೀಚೆ ಹಾಕಿದ ಎಂದ ಮೇಲೆ, ವಿಕ್ಟರನ ಕಡೆ ನೋಡಿದೆ. ಅವನ ಕೊರಳ ಸರದಲ್ಲಿದ್ದ 'ಕ್ರಾಸ್' ಸೂರ್ಯನ ಕಿರಣಕ್ಕೆ ಹೊಳೆಯುತ್ತಿತ್ತು. ನಾನೇನಾದರೂ ಅವನ ಕಾಲಿನ ಮೇಲೆ ಹತ್ತಿದ್ದರೆ ಅವನ ಗತಿ ಏನಾಗುತ್ತಿತ್ತೋ? 'ಓಂ ನಮಃ ಶಿವಾಯ, ಏಸುಕ್ರಿಸ್ತ' ಎಂದು ನಿರುಮ್ಮಳದ ದೀರ್ಘ ಉಸಿರುಬಿಟ್ಟೆ.

ಕುದುರೆಯ ಬೆನ್ನನ್ನೇನೋ ಏರಿ ಆಗಿತ್ತು. ತೂಗು ಪಾದಗಳು, ಯಾವ ಆಧಾರವೂ ಇರದ ಆಕಾಶದ ಮಧ್ಯದಲ್ಲಿನ ಶರೀರ... ಓಹ್! ಗಂಟಲ ಸಿಲಿಂಡರ್‌ನಲ್ಲಿ ಸುಂಟರಗಾಳಿ ಎದ್ದ ಹಾಗಾಗಿ ಬಿದ್ದೇ ಹೋಗುವೆ ಎನ್ನಿಸತೊಡಗಿತು. ಶೆರಲ್, 'Are you ok?' ಎಂದು ಕೇಳಿದಳು. ನಿಧಾನವಾಗಿ ತಲೆಯಾಡಿಸುತ್ತಾ, 'ಸಾಧ್ಯವೇ ಇಲ್ಲಾ ನಾನು ಕೆಳಗಿಳಿಯುವೆ' ಎಂದೆ. 'Just remember what Patrick told us. Be brave, be confident and focus. You will be fine.' ಎಂದಳು. ನಾನು ವೀರಳೂ, ಧೀರಳೂ ಎಂಬುದನ್ನು ಟೆಡ್ಡಿಗೂ ಅದಕ್ಕೂ ಮಿಗಿಲಾಗಿ ನನಗೆ ನಾನೇ ಸಾಬೀತು ಪಡಿಸಿಕೊಳ್ಳಬೇಕಾದ ಘಳಿಗೆ ಇದು ಎಂದು ನೆನಪಾಯಿತು! ಶ್ಯಾಗಿ, ಮಿಸ್ಟಿ, ಲಕ್ಕಿ, ಮೂನ್‌ಶೈನ್, ಥಿಯಡೊರ್ ಎಂದೆಲ್ಲಾ ಹೆಸರಿನ ಕುದುರೆಗಳ ಸಾಲು ಮೆರವಣಿಗೆ ಹೊರಟವು.

ಪ್ಯಾಟ್ರಿಕ್ ಅವನ ಕುದುರೆ ಏರಿ ನನ್ನ ಮುಂದೆ ಬಂದ. ಅಶ್ವತ್ಥಾಮ–ಪ್ಯಾಟ್ರಿಕ್, ಕುದುರೆ ಚಲಿಸುತ್ತಿದ್ದ ಹಾಗೆ ಹಿಂದು ಮುಂದಾಗಿ ಕುಳಿತು ಸವಾರಿ ಮಾಡತೊಡಗಿದ. ಅವನ ಮುಖ ನನ್ನ ಕಡೆಗೂ ಬೆನ್ನು ಕುದುರೆ ಮುಖದ ಕಡೆಗೂ ಇತ್ತು. `Shash, relax and enjoy the ride' ಎಂದ. ನನ್ನ ಹಿಂದಿದ್ದ ಹುಡುಗಿಯ ಕುದುರೆ ಅವಸರದಲ್ಲಿದ್ದಂತಿತ್ತು. ಟೆಡ್ಡಿಯನ್ನು ದಬ್ಬಿ ಮುಂದೆ ಹೋಗುವ ಪ್ರಯತ್ನ ಮಾಡುತ್ತಿತ್ತು. ಟೆಡ್ಡಿ ಹೆಜ್ಜೆಗಳ ಹಿಂದೆ ಮುಂದೆ ಹಾಕುತ್ತಾ ಅಕ್ಕ ಪಕ್ಕ ಚಲಿಸುತ್ತಾ ಸ್ಥಿರವಾಗಿ ನಿಲ್ಲಲು ಪ್ರಯತ್ನ ಪಡುತ್ತಿತ್ತು. ಪಾಪದ ಟೆಡ್ಡಿ ಸಾಧು ಕುದುರೆ. ನಾನು ಕೂಗಿಕೊಳ್ಳತೊಡಗಿದೆ. ಆ ಕುದುರೆ ನಡೆಸುತ್ತಿದ್ದ ಹುಡುಗಿಯೂ ಮೊದಲ ಬಾರಿ ಸವಾರಳೇ, `I am so sorry! I am so sorry' ಎನ್ನತೊಡಗಿದಳು. ಸಾಲಿನ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಾ ಹಿಂದು ಮುಂದೂ ಸವಾರಿ ಮಾಡುತ್ತಿದ್ದ ಜಿಮ್ಮಿ ಆ ಕುದುರೆಯನ್ನು ಸಾಲಿನ ಮುಂಭಾಗಕ್ಕೆ ಕರೆದೊಯ್ದು. ಟೆಡ್ಡಿ ಓಡಲು ಶುರು ಮಾಡಿದ. `Teddy, life is not a race; it is a journey, no rush; take it easy. You and I can make it' ಎಂದು ಬೆನ್ನು ಸವರಿ ಮಾತನಾಡುವ ಮಟ್ಟಿಗೆ ರಿಲ್ಯಾಕ್ಸ್ ಆದೆ. ಕಣಿವೆ ಇಳಿಯುವಾಗ ಹಿಂದಕ್ಕೂ ಏರುವಾಗ ದೇಹವನ್ನು ಮುಂದಕ್ಕೂ ಬಗ್ಗಿಸುವಂತೆ ಪ್ಯಾಟ್ರಿಕ್ ಸೂಚಿಸುತ್ತಿದ್ದ. ಇಷ್ಟರಲ್ಲಿ ದಿಗಿಲೂ ಕಮ್ಮಿಯಾಗಿ ಸವಾರಿಯ ಆನಂದವನ್ನು ಸವಿಯತೊಡಗಿದೆ. ಕುದುರೆ ಸವಾರಿ ಭೀತಿಯ


ಜಾಗದಲ್ಲಿ ಪ್ರೀತಿ ಆವರಿಸಲಾರಂಭಿಸಿತು. 20 ನಿಮಿಷ ಸವಾರಿಯ ನಂತರ ಸಿಕ್ಕ ತಿರುವಿನಲ್ಲಿ ಪುಟಾಣಿ ಕೊಳವೊಂದು ಬಣ್ಣದೆಲೆಗಳನ್ನು ಹೊದ್ದು ಮಲಗಿತ್ತು. ಗಾಳಿ ಬೀಸಿ ನೀರು ಚಲಿಸಿದಾಗ ಅದು ಕೊಳ ಎಂದು ನಿಚ್ಚಳವಾಗಿ ಗುರ್ತಿಸಬಹುದಿತ್ತು. ಮುಗಿಲಿತ್ತರಕ್ಕೆ ನಿಂತ ಮರಗಳಿಂದ ಒಂದೊಂದೇ ಎಲೆಗಳು ಸದ್ದಿಲ್ಲದೆ ನಿಧಾನವಾಗಿ ಕೊಳಕ್ಕೆ ಧುಮುಕುತ್ತಿದ್ದವು. ಆ ಘಳಿಗೆ ಕಾಲ ನಿಶ್ಚಲವಾಗಿ ನಿಶ್ಶಬ್ದವಾಗಿತ್ತು. ದೃಶ್ಯವಾಗಿದ್ದುದೊಂದೇ – ದೈವತ್ವ

ಕೆಲವೊಮ್ಮೆ ಎಡಕ್ಕೆ ವಾಲುತ್ತಿರುವೆ ಎನ್ನಿಸಿ ಬಲಕ್ಕೆ ಜರುಗಿ ನೇರ ಕೂರಲು ಯತ್ನಿಸುತ್ತಿದ್ದೆ. ಅಷ್ಟರಲ್ಲಿ ಹಿಂದಿನಿಂದ `Teddy's saddle is sliding', ಎಂಬ ಶೆರಲ್‌ನ ಧ್ವನಿ ಕೇಳಿತು. ಅವಳ ನಂತರ, ಅವಳ ಮುಂದಿದ್ದ ಅಂದರೆ ನನ್ನ ಹಿಂದಿದ್ದವ ಅದೇ ವಾಕ್ಯವನ್ನು ಕೂಗಿ ಪುನರುಚ್ಚರಿಸಿದ. ನಾನೂ ಅದನ್ನೇ ಮಾರ್ದನಿಸಿದೆ. ಟೆಡ್ಡಿ? ನನ್ನ ವಾಕ್ಯ ನನ್ನ ಕಿವಿಗೆ ಬಿದ್ದಾಗಲೇ ಗೊತ್ತಾಗಿದ್ದು, ಹಲ್ಲಣ ಜರುಗಿದ್ದು ನಾನು ಕುಳಿತ ಕುದುರೆ ಟೆಡ್ಡಿಯದ್ದು! ಕಿರುಚಬೇಕೆಂದರೆ ಧ್ವನಿಯೇ ಹೊರಡಲೊಲ್ಲದು. ಅಷ್ಟರಲ್ಲಿ ಮಿಂಚಿನ ವೇಗದಲ್ಲಿ ನನ್ನ ಎಡ ಬಲಕ್ಕೆ ವಿಲ್ಲಿ, ಜಾನಿ ಪ್ರತ್ಯಕ್ಷರಾದರು. ಎಡಕ್ಕಿದ್ದ ವಿಲ್ಲಿ ನನ್ನನ್ನು ಕೆಳಗಿಳಿಯಲು ಹೇಳಿದ. ಮೊದಲೇ ಗಾಬರಿಯಿಂದ ಗಲಿಬಿಲಿಗೊಂಡಿದ್ದ ನಾನು ಕೆಳಗೆ ನೋಡಿದರೆ ಭೂಮಿ 100 ಅಡಿ ಕೆಳಗಿರುವಂತೆ ಭಾಸವಾಯ್ತು. ಕುದುರೆಯ ಬೆನ್ನಮೇಲಿಂದ ನೆಲಕ್ಕೆ ಧುಮುಕುವುದಂತೂ ದೂರದ ಮಾತು. ಕೆಳಗಿಳಿಯುವ ಸಾಧ್ಯತೆಯೇ ಇಲ್ಲಾ ಎಂದೆ. ನನ್ನ ಗಾಬರಿ ಮುಖ, ಕೆಳಗೆ ಇಳಿಯುವುದೇ ಇಲ್ಲಾ ಎನ್ನುವ ಧೃಡ ನಿರ್ಧಾರ ಕಂಡ ವಿಲ್ಲಿ ತಾನೂ ಏನೂ ಮಾಡಲೂ ತೋರದೆ ನಿಂತ!

ಅಷ್ಟರಲ್ಲಿ ಬಲಗಡೆ ಇದ್ದ ಜಾನಿ, 'cow girl' ಎಂದು ಮೆಲುವಾಗಿ ಕರೆದ. ನಿಧಾನವಾಗಿ ಅವನ ಕಡೆ ತಿರುಗಿದೆ. 'ಲೋಹದ ಕುಣಿಕೆಯ ಮೇಲೆ ಕಾಲೂರಿ ನಿಂತು ನನ್ನ ಕಡೆ ವಾಲು, ವಿಲ್ಲಿ ಕುದುರೆಯ ಹಲ್ಲಣವನ್ನು ಬಿಗಿದು ಕಟ್ಟುತ್ತಾನೆ. ಗಾಬರಿಬೇಡ, ನಿನ್ನನ್ನು ಬೀಳಗೊಡುವುದಿಲ್ಲ. ನಾನು ಹೇಳಿದಂತೆ ಮಾಡುವೆಯಾ? Please cow girl?' ಕೌ ಗರ್ಲ್? ನಾನು? ಕೌ ಗರ್ಲ್ ಎಂಬ ಪಟ್ಟ ದೊರತಿದ್ದೇ ತಡ ಮರಗಟ್ಟಿ ಹೋಗಿದ್ದ ನನ್ನ ದೇಹಕ್ಕೆ ಚಲನೆ ಬಂತು. ಕಾಲನ್ನು ಲೋಹದ ಕುಣಿಕೆ ಒತ್ತಿ ಜಾನಿಯ ಕಡೆಗೆ ವಾಲಿದೆ. ವಿಲ್ಲಿ ಚಕ್ಕೆಂದು ಹಲ್ಲಣವನ್ನು ಬಿಗಿದು ಕಟ್ಟಿದ. ಮತ್ತೆ ಕುದುರೆಗಳು ಸಾಲಾಗಿ ನಡೆಯುಲಾರಂಭಿಸಿದವು. ಇಲ್ಲಿಂದ ಮುಂದಿನ ಪಯಣ ನಿಜಕ್ಕೂ ಚೇತೋಹಾರಿಯಾಗಿತ್ತು. ಕೆಲವೊಮ್ಮೆ ಟೆಡ್ಡಿ ಖುಷಿಯಿಂದ ಓಡುತ್ತಿದ್ದ. ಅವನ ಓಟಕ್ಕೆ ನಾನೂ ದೇಹವನ್ನು ತುಸು ಏರಿಸಿ ಸವಾರಿ ಮಾಡುವುದನ್ನು ಒಗ್ಗಿಸಿಕೊಂಡೆ. ಕೆಲವೊಮ್ಮೆ ಕತ್ತನ್ನು ಎತ್ತಿ ಗತ್ತಿನಿಂದ ಎಡ ಬಲಕ್ಕೆ ತಿರುಗಿಸಿ ನಡೆಯುತ್ತಿದ್ದ. ಮೋಡಗಳೇ ಇರದ ನೀಲಿ ಆಕಾಶ, ಹಾರಾಡುತ್ತಿದ್ದ ಹಕ್ಕಿ, ವಿಶಾಲವಾದ ಬಯಲು, ಮರ ಎಲ್ಲವನ್ನೂ ದಿಟ್ಟಿಸುತ್ತಾ ಉಳಿದ ಹಾದಿಯನ್ನು ಸುಖಿಸಿದೆ. ಇಳಿಯುವಾಗ ಏಣಿಯ ಸಹಾಯವಿಲ್ಲದೆ ಎಡ

ಪಾದವನ್ನು ಲೋಹದ ಕುಣಿಕೆಯಲ್ಲಿ ಊರಿ ಬಲಗಾಲನ್ನು ಗಾಳಿಯಲ್ಲಿ ಬೀಸಿ ನೆಲಕ್ಕೆ ಚಂಗನೆ ಜಿಗಿದೆ. ವಿಲ್ಲಿ, ವಿಕ್ಟರ್, ಜಾನಿ, ಪ್ಯಾಟ್ರಿಕ್, ಶೆರಲ್ ಚಪ್ಪಾಳೆ ತಟ್ಟಿದರು. ಪ್ಯಾಟ್ರಿಕ್ `You were super, Shash' ಎಂದ. ಜಾನಿ, `You did good, cow girl' ಎಂದ `Come back again, young lady' ಎಂದು ವಿಕ್ಟರ್ ಕೈ ಬೀಸಿದ.

ಕಾರಿಗೆ ಹೋಗಿ ನಾನು ತಂದಿದ್ದ ಕ್ಯಾರೆಟ್ ಚೀಲ ಹಿಡಿದು ಬಂದೆ. ಒಂದೊಂದೇ ಕ್ಯಾರೆಟನ್ನು ಅಂಗೈಲಿ ಹಿಡಿದು ಟೆಡ್ಡಿಗೆ ತಿನ್ನಿಸಿದೆ. ಕ್ಯಾರೆಟ್ ತಿನ್ನಲು ಬಗ್ಗಿದ್ದ ಟೆಡ್ಡಿಯ ಕುತ್ತಿಗೆಯನ್ನು ಬಳಸಿ ಬಿಗಿಯಾಗಿ ಆಲಂಗಿಸಿ, ಥ್ಯಾಂಕ್ಯೂ ಟೆಡ್ಡಿ ಎಂದೆ. ಟೆಡ್ಡಿ ಕೂಡ ತನ್ನ ಮುಖವನ್ನು ನನ್ನ ಕೆನ್ನೆಗೆ ಒತ್ತಿದಂತೆ ಎನ್ನಿಸಿತು. ಮರಳಿ ಮನೆಗೆ ಬರುತ್ತಾ, ಅನಿವಾಸಿ ಬದುಕಿನಲ್ಲಿ ಭಾರದ ಹಲ್ಲಣವನ್ನು ಹೊತ್ತು ಕುದುರೆ ಹುಡುಕಾಟದಲ್ಲಿಯೇ ಉಳಿದುಬಿಟ್ಟಿದ್ದರೆ, ಜೀವನದ ಎಷ್ಟೊ ಖುಷಿಗಳಿಂದ ವಂಚಿತಳಾಗಿ ಬಿಡುತ್ತಿದ್ದೆ ಎಂದುಕೊಂಡೆ.



ಒಂದು, ಒಂದು... ಮುನ್ನೂರೊಂದು

– ಶ್ರೀನಾಥ್ ಭಲ್ಲೆ

ನಾನು ಯಾರು? ಇಲ್ಲಿಗೇಕೆ ಬಂದೆ? ನನ್ನ ಕರ್ತವ್ಯ ಏನು? ಹೋಗುವುದಾದರೂ ಎಲ್ಲಿಗೆ? ಹೇಗಿದ್ದೆ? ಹೇಗಾದೆ? ಮುಂದೇನು? ಓಹ್. ಇಷ್ಟು ಪ್ರಶ್ನೆಗಳೂ ತಲೆಯಲ್ಲಿ ಉದ್ಭವ ಆಗಿ, ಉತ್ತರ ಕಂಡುಕೊಳ್ಳಲು ಹಿಮಾಲಯದ ತುತ್ತತುದಿಗೆ ಹೋಗಿ ತಪಸ್ಸು ಮಾಡಲು ಹೊರಟಿದ್ದೇನೆ ಅಂತ ನಮ್ಮಪ್ಪನಾಣೆಗೂ ಹೇಳುತ್ತಿಲ್ಲ. ಇವಿಷ್ಟು ಪ್ರಶ್ನೆಗಳು ತಲೆಗೆ ಬಂದಿದ್ದು ಅಮೇರಿಕದಲ್ಲೇ ಫೆವಿಕಾಲ್ ಅಂಟಿಸಿಕೊಂಡು ಠಿಕಾಣಿ ಹೂಡಿರೋ ನಿಮ್ಮ ಅನುಭವಗಳನ್ನು ನಮಗೂ ತಿಳಿಸಿ ಎಂದು ಕೇಳಿದಾಗ. ಅಬ್ಬ! ಪೀಠಿಕೇನೇ 'ಫುಲ್-ಸ್ಟಾಪ್' ಇಲ್ಲದೆ 'ನಾನ್-ಸ್ಟಾಪ್' ಆದರೆ ಮುಂದೇನು ಅನ್ನೋ ಭೀತಿ ಬೇಡ. ಹದಿಮೂರು ವರ್ಷಗಳ ಅನುಭವಗಳನ್ನು ಖಂಡಿತ ಮೆಗಾ ಸೀರಿಯಲ್‌ನಂತೆ ಎಳೆದೂ ಎಳೆದೂ ಹೇಳೋಲ್ಲ. ಸಾವು, ನೋವು, ಹತಾಶೆಗಳನ್ನು ಹೆಚ್ಚು ಎಳೆಯದೆ ಸಾಧ್ಯವಾದಷ್ಟೂ ಹಾಸ್ಯಕ್ಕೇ ಒತ್ತುಕೊಡುವ ಇರಾದೆ.

'ಏನ್ಸಾರ್. ಶುರು ಮಾಡ್ತೀರೋ ಇಲ್ವೋ?' ಅಂದ್ರಾ?

ಮೊದಲ ಬಾರಿಗೆ ಅಮೇರಿಕದ ನೆಲದ ಮೇಲೆ ಕಾಲಿಡುವ ಎಲ್ಲರಿಗೂ ಒಂದೊಂದು ರೀತಿ ಅನುಭವ ಆಗಿರುತ್ತದೆ. ನಾನೇನೂ ಅದಕ್ಕೆ ಹೊರತಲ್ಲ. ನಾ ಹಾರಿ ಬಂದ ಹಾದಿ ಸ್ವಲ್ಪ ಡಿಫರೆಂಟೂ ಅನ್ನಬಹುದೇನೋ? ದಕ್ಷಿಣ ಭಾರತದ ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ಅಮೇರಿಕದ ಪೂರ್ವ ದಿಕ್ಕಿನ ವರ್ಜೀನಿಯಾ ರಾಜ್ಯದ ರಾಜಧಾನಿ ರಿಚ್ಮಂಡ್ ನಗರಕ್ಕೆ ನನ್ನ ಪಯಣ. ಯಾವ ಮಾರ್ಗ ಅಂದರೆ, ಬೆಂಗಳೂರು – ಚೆನ್ನೈ – ಸಿಂಗಪೂರ್ – ಟೈಪೆ – ಲಾಸ್ ಏಂಜಲೀಸ್ – ಮಿನಿಯಾಪೋಲಿಸ್ – ಪಿಟ್ಸ್‌ಬರ್ಗ್ – ರಿಚ್ಮಂಡ್... ಕೇವಲ ಎರಡೂವರೆ ದಿನಗಳಲ್ಲಿ ಅಮೇರಿಕದಲ್ಲಿ ನಾನು ಸೇರಬೇಕಿದ್ದ ಜಾಗಕ್ಕೆ ಸೇರಿದ್ದೆ.

ಕೇಳಿಯೇ ಸುಸ್ತಾಯ್ತೆ? ಎಂಟು ತಿಂಗಳ ಮಗನನ್ನು ಎತ್ತಿಕೊಂಡು, ಮೂರು-ನಾಲ್ಕು ಬಾರಿ ಪೂರ ಲಗೇಜನ್ನು ನಮ್ಮ ಕೈಗೆ ಕೊಟ್ಟಿದ್ದನ್ನೂ ತಳ್ಳಿಕೊಂಡು, ಲಾಸ್ ಏಂಜಲಿಸ್‌ನಲ್ಲಿ ಒಮ್ಮೆ ವಿಮಾನವನ್ನೂ ತಪ್ಪಿಸಿಕೊಂಡು, ಅಂತು ಇಂತು ಪಯಣವನ್ನು ಮುಗಿಸಿದ ನಮ್ಮನ್ನು ಅರ್ಧ-ವಿಶ್ವ ಮಾನವರು ಎಂದು ಕರೆದರೂ ಅಡ್ಡಿಯಿಲ್ಲ ಬಿಡಿ. ಹಾಂ? ಏನಂದ್ರಿ? ಇನ್ನೂ ಸ್ವಲ್ಪ ಹಾಗೇ ಮುಂದೆ ಹೋಗಿದ್ರೆ, ಬೆಂಗಳೂರೇ

ಸಿಕ್ಕಿರೋದಲ್ವೇ ಅಂದ್ರಾ? ಅದೂ ನಿಜಾ ಅನ್ನಿ.

'ಯಾರ್ ಯಾರ್ ಫೋರ್-ಹೆಡ್ ಮೇಲೆ ಏನ್ ಏನ್ ಬರೆದಿರುತ್ತೋ ಹಾಗ್ ಹಾಗ್ ಆಗುತ್ತೆ. ಅದನ್ನ ಫೋರ್-ಹೆಡ್ ಬ್ರಹ್ಮದೇವನೂ ಬದಲಿಸಲಿಕ್ಕೆ ಆಗೋಲ್ಲ'. ಏನು ವಿಪರ್ಯಾಸ ನೋಡಿ ಬರೆದವನಿಗೇ ಅಳಿಸಲು ಆಗೋಲ್ಲ. ನಾವೇ ವಾಸಿ, ಪೆನ್ಸಿಲ್ ಹಿಂದಕ್ಕೆ ರಬ್ಬರ್ (ಆಲಿಯಾಸ್ ಇರೇಸರ್) ಚುಚ್ಚಿಕೊಂಡಿರ್ತೀವಿ.

ಎಂದೂ ವಿಮಾನ ಏರದ ನಾವು, ಅರ್ಥಾತ್ ನಾನು, ನನ್ನ ಹೆಂಡತಿ ಮತ್ತು ಮಗ, ಅಂದಿನ ಕಾಲಕ್ಕೆ ಮೂರು ವಿಮಾನಗಳಲ್ಲಿ ನಡೆಯಬಹುದಾಗಿದ್ದ ಪಯಣವನ್ನು ಎಂಟು ವಿಮಾನಗಳಿಗೆ ಹಂಚಿ, ತಲೆಗೆ ಎಂಟು ನೂರು ಡಾಲರ್‌ಗಳ ಟಿಕೆಟ್‌ನಲ್ಲಿ ವಿಶ್ವವನ್ನೇ ಸುತ್ತಿದ್ದೆವು, ಕಂಪನಿ ಕೊಡಿಸಿದ ಟಿಕೇಟ್‌ನಲ್ಲಿ. ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಹಾಗಾಗಿತ್ತು. ಅದೃಷ್ಟವಶಾತ್, ಏರ್ಪೋರ್ಟ್‌ನಲ್ಲಿ ಗುರುತಿನವರು ಸಿಕ್ಕು 'ಪ್ರಯಾಣ ಸುಖವಾಗಿತ್ತೇ' ಎಂದು ಕೇಳಲಿಲ್ಲ. ಇನ್ನು ವಿಮಾನ ಹತ್ತಿದರೆ ಅಮೇರಿಕ ಬಿಟ್ಟು ಭಾರತಕ್ಕೆ ವಾಪಸ್ ಹೋದಾಗಲೇ ಎನ್ನುವಷ್ಟು ರೋಸಿ ಹೋಗಿದ್ದೆವು.

ನಮ್ಮೀ ನಿರ್ಧಾರಕ್ಕೆ ಹೆದರಿಕೊಂಡೋ/ ಕರುಣೆ ತೋರಿಯೋ ಏನೋ ಮರು ವರ್ಷವೇ ಲುಫ್ತಾನ್ಸಾ ಮೊದಲ ಬಾರಿಗೆ ಜರ್ಮನಿಯಿಂದ ಸೀದಾ ಬೆಂಗಳೂರಿಗೆ ಹಾರಿತ್ತು. ಇಲ್ಲಿಯವರೆಗೂ ಎರಡೇ ವಿಮಾನಗಳ ಪ್ರಯಾಣದ ಸುಖ(?) ಅನುಭವಿಸಿಕೊಂಡೇ ಬಂದಿದ್ದೇವೆ. ಪ್ರತಿ ಬಾರಿಯೂ ಸುಖ ಅಲ್ಲವೆಂದು ಏಕೆ ಅನ್ನಿಸಿತು ಅಂದರೆ, ಒಮ್ಮೆ ಹೀಗೆ ವಿಮಾನ ಪಯಣದಲ್ಲಿ ಹಿಂಸಾತ್ಮಕ ತಲೆನೋವು ಬಂದಿತ್ತು ಎಂದು ಗಗನಸಖಿಯನ್ನು ತಲೆನೋವಿನ ಮಾತ್ರೆ ಕೇಳಿದ್ದೆ. ಆರು ವರ್ಷ ಆಯ್ತು, ಇನ್ನೂ ಕೊಟ್ಟಿಲ್ಲ.

ಹುಟ್ಟಿದಾಗಿನಿಂದ ಬೆಂಗಳೂರಿನಲ್ಲೇ ಝೂಂಡಾ ಊರಿದ್ದ ನಾವು ಹೆಚ್ಚು ಕಮ್ಮಿ ಇಲ್ಲೂ ಅದೇ ಟ್ರೆಂಡ್‌ಅನ್ನು ಮುಂದುವರೆಸಿದ್ದೇವೆ ಎಂದರೆ ಸುಳ್ಳಲ್ಲ. ಅಂದರೆ, ರಿಚ್ಮಂಡ್ ನಗರಕ್ಕೆ ಬಂದಿಳಿದು ಪೂರ ಹದಿಮೂರು ವರ್ಷಗಳು ಒಂದೇ ಊರಿನಲ್ಲಿ ಇದ್ದೇವೆ. ಇಲ್ಲಿನ ಪ್ರತಿ ಕಾಗೆಗೂ ನಾವು ಯಾರು ಎಂದು ಗೊತ್ತು. ಪ್ರತಿ ಬಾರಿ ಅವು 'ಕಾವ್ ಕಾವ್' ಎಂದಾಗಲೂ ನನಗೆ Hi Dude ಅಂದ ಹಾಗೇ ಆಗುತ್ತೆ.

'ಪ್ರಥಮ ಚುಂಬನ...' ಈ ರೀತಿ ಆಯ್ತು. ಅಲ್ಲಿಗೆ ನಮ್ಮ ತೊಂದರೆ-ತಾಪತ್ರಯಗಳು ಶುರುವಾಯ್ತು. ಆಗಲೇ ಅರ್ಥವಾಗಿದ್ದು ಇದು ಬರೀ 'ಫ್ಲೈಯಿಂಗ್' ಕಿಸ್ಸು ಅಂತ. ಫ್ಲೈಟ್‌ನಲ್ಲಿ ಬಂದಿದ್ವಲ್ಲ, ಅದಕ್ಕೇ. ಬಾಡಿಗೆ ಮನೆ (ಅಪಾರ್ಟ್ಮೆಂಟ್) ಸಿಗುವ ಮುನ್ನ ಮೂರು ದಿನಗಳ ಕಾಲ ಒಂದು ಹೋಟಲ್‌ನಲ್ಲಿ ಇದ್ದೆವು. ಊರಿಗೆ ಹೊಸಬರಾದ ನಮ್ಮನ್ನು ನನ್ನ ಆಫೀಸಿನವರೊಬ್ಬರು ಊಟಕ್ಕೆ ಹೊರಗೆ ಕರೆದುಕೊಂಡು ಹೋದರು. ವಿದೇಶೀ ಊಟವೇ ಹೆಚ್ಚಿದ್ದ ಭಾರತೀಯ ರೆಸ್ಟೋರೆಂಟ್‌ನಲ್ಲಿ ಇಡ್ಲಿ ತರಿಸಿದೆವು. ಅಂದು, ಅತೀ ಗಟ್ಟಿ ಇಡ್ಲಿ, ಉಪ್ಪು-ಖಾರದ ಸಾರ ಇಲ್ಲದ ಸಾಂಬಾರ್ ತಿಂದ ಮೇಲೆ ಇಂದಿಗೂ ಆ

ರೆಸ್ಟೋರಾಂಟ್‌ಗೆ ಕಾಲಿಟ್ಟಿಲ್ಲ. ಹೋಟೆಲ್ ಕಥೆ ಹೀಗಾಯ್ತು. ಅದರ ಮಾರನೆಯ ದಿನ ಸ್ನೇಹಿತರೊಬ್ಬರು ಮನೆಗೆ ಊಟಕ್ಕೆ ಕರೆದುಕೊಂಡು ಹೋದರು. ಅನ್ನದ ಮೇಲೆ ಸಾರು ಬಡಿಸಿಕೊಂಡಾಗ, ಮಾತು ಬಿಟ್ಟ ಗಂಡ–ಹೆಂಡಿರಂತೆ ಬೇರೆ ಬೇರೆ ಉಳಿದ ಸಾರು–ಅನ್ನ ಕಂಡಾಗ 'ಭೋಜನಪ್ರಿಯ' ಬ್ರಾಹ್ಮಣನಿಗೆ ಎದೆಯಲ್ಲಿ ನಡುಕ ಉಂಟಾಯ್ತು. ಊರಿಂದ ಅಕ್ಕಿ ತರಿಸಿಕೊಳ್ಳಬೇಕೇನೋ ಅನ್ನಿಸಿತು.

ಬಾಡಿಗೆ ಮನೆ ಸಿಕ್ಕಿತು. ಒಳ್ಳೆಯ ಮನೆ. ಸತತವಾಗಿ ಆರೂವರೆ ವರ್ಷಗಳ ಕಾಲ ಅದೇ ಮನೆಯಲ್ಲಿದ್ದೆವು. ಹಾಗೆಂದು ನಮ್ಮ ಪುತ್ಥಳಿ ಏನೂ ಅಲ್ಲಿ ಇಟ್ಟಿಲ್ಲ, ಸುಮ್ನೆ ಹೇಳಿಕೊಂಡೆ ಅಷ್ಟೇ. ಮಾರ್ಚ್ ತಿಂಗಳ ಛಳಿಯಲ್ಲಿ ಮನೆಗೆ ಕಾಲಿಟ್ಟೆವು. ಹೊಸ ದೇಶ, ಹೊಸ ಊರು ಸ್ವಲ್ಪ ಸಾಂಪ್ರದಾಯಿಕವಾಗಿ ಹೊಸ ಮನೆಗೆ ಕಾಲಿಡಿ, ಎಲ್ಲ ಒಳ್ಳೆಯದೇ ಆಗುತ್ತೆ ಎಂದು ಊರಲ್ಲಿ ಹೇಳಿದ್ದರು.

ಅಕ್ಕಿಯ ಪಾವ್ ಒದೆಯಲ್ – ಕಾರ್ಪೆಟ್‌ನ ಭಯವು
ಹಾಲು ಕಾಯಿಸಿ ಉಕ್ಕಿಸಲ್ – ಗ್ಯಾಸ್ ಬರ್ನರ್‌ನ ಭಯವು
ಊದುಬತ್ತಿ ಹಚ್ಚಲ್ – ಕಟ್ಟಿಗೆ ಮನೆಯೆಂಬ ಭಯವು
ಏನು ಮಾಡಿದರೆ ಏನೋ ಎಂಬ – ಅಜ್ಞಾನದ ಭಯವು

ಮೊದಲ ಇರುಳು ಕಾರ್ಪೆಟ್ ಮೇಲೆ ಶಾಲು ಬಿಡಿಸಿಕೊಂಡು ಛಳಿಯಲ್ಲೇ ನಿದ್ದೆ. ಅಪಾರ್ಟ್ಮೆಂಟ್ ಆಡಳಿತವರ್ಗದವರು, Thermostatನಲ್ಲಿ ಏ.ಸಿ.ಗೆ ತಿರುಗಿಸಿದ್ದನ್ನು 'ಹೀಟ್' ಕಡೆ ತಿರುಗಿಸಬೇಕು ಎಂದೂ ಗೊತ್ತಿರಲಿಲ್ಲ. ಒಂದೇ, ಎರಡೇ? ಹೋಗ್ಲಿ ಬಿಡಿ, ಬರೀ ಗೋಳೇ ಆಯ್ತು ಅಂತೀರಾ? ನಮ್ಮ ಗೋಳು ಇನ್ನೊಬ್ಬರ ಮುಂದೆ ಹೇಳಿಕೊಂಡರೆ ಸಮಾಧಾನ ಆಗುತ್ತಂತೆ. ಹೌದೇ? ಹಾಗಿದ್ರೆ, ಕೇಳಿ. ನಮ್ಮಮ್ಮ ಹೀಗೇ ಮೂಲೆ ಮನೆ ಸುಂದ್ರಮ್ಮ ಕೇಳಿದರೂ ಅಂತ ನನ್ನ ಕಷ್ಟ ಅವರ ಮುಂದೆ ಹೇಳಿಕೊಂಡರಂತೆ. ಸುಂದ್ರಮ್ಮ ಅದಕ್ಕೆ 'ಅಲ್ಲಿಗೆ ಹೋಗೂ ಅಂತ ಯಾರು ಹೇಳಿದ್ರೋ? ಕೈಕಾಲು ತಾವೇ ಕಟ್ಟಿಹಾಕಿಕೊಂಡು ಅಯ್ಯೋ ನಾನು ಬಂಧನದಲ್ಲಿ ಇದ್ದೀನಿ ಅಂದ್ರೆ ಯಾರ ತಪ್ಪು?' ನಮ್ ಕಷ್ಟ ಅವರಿಗೆ ಸಮಾಧಾನ ತಂದಿತಲ್ಲ, ಅಷ್ಟು ಸಾಕು ನನಗೆ.

ಹಲವಾರು ದಿನಗಳ ಕಾಲ ನಮ್ಮನ್ನು ಕಾಡಿದ್ದು 'ಕಾರಿಲ್ಲದ ಪರಾವಲಂಬಿತನ' ಮತ್ತು 'ಪತ್ನಿಯ ಒಂಟಿತನ'. ವಾರಾಂತ್ಯದಲ್ಲಿ ನಮ್ಮ ಎದುರು ಮನೆಯಲ್ಲಿದ್ದ ಸ್ನೇಹಿತರು ಕಾರಿನಲ್ಲಿ 'ಇಂಡಿಯನ್ ಸ್ಟೋರ್ಸ್'ಗೆ ಕರೆದುಕೊಂಡು ಹೋಗಿ ಅವರೂ ವಾರದ ದಿನಸಿ ಖರೀದಿ ಮಾಡುತ್ತಿದ್ದರು. ಒಮ್ಮೆ ಹೀಗೆ ಒಂದು ಅನಿಸಿಕೆ ಬಂತು. ಹತ್ತಿರದಲ್ಲೇ ಇರೋ ಅಂಗಡಿಗೆ ಅವರನ್ನೇಕೆ ಕೇಳಿ ತೊಂದರೆ ಕೊಡುವುದು ಅಂತ. ಸ್ಟ್ರೋಲರ್‌ನಲ್ಲಿ ಮಗನನ್ನೂ ಕೂಡಿಸಿಕೊಂಡು ನಡೆದುಕೊಂಡು ಹೊರಟೇಬಿಟ್ಟೆವು. ಮೂರು ಮೈಲಿ ಸಾಗಿದ ಮೇಲೆ ತಿಳಿಯಿತು, ನಾವಿನ್ನೂ ಅರ್ಧ ದಾರಿಯೂ ಕ್ರಮಿಸಿಲ್ಲ ಅಂತ. ನಾಗಾಲೋಟದಲ್ಲಿ ಓಡುವ ಕಾರಿನಲ್ಲಿ ಎಲ್ಲವೂ ಸಮೀಪವೇ ಅನ್ನಿಸುತ್ತದೆ. ತೆಪ್ಪಗೆ

ಹಿಂದಿರುಗಿದೆವು ಅನ್ನಿ. ಸುಮ್ಮನೆ ಮನೆಗೆ ಹಿಂದಿರುಗಿದ್ದರೆ ಈ ಘಟನೆ ಅಷ್ಟು ನೆನಪಿನಲ್ಲಿ ಇರುತ್ತಿರಲಿಲ್ಲ. ಇನ್ನು ಹತ್ತು ನಿಮಿಷಗಳ ದೂರ ಕ್ರಮಿಸಿದರೆ ಮನೆ ಸಿಗುತ್ತದೆ ಅನ್ನುವಷ್ಟರಲ್ಲಿ, ಧೋ ಎಂದು ಮಳೆ. ಇದೊಳ್ಳೇ ಕಥೆಯಾಯ್ತಲ್ಲ ಎಂದುಕೊಂಡು, ಒಬ್ಬರ ಕೈಯಲ್ಲಿ ಸ್ಟ್ರೋಲರ್, ಮತ್ತೊಬ್ಬರು ಮಗನನ್ನು ಎತ್ತಿಕೊಂಡು ಓಡಲು ಶುರು ಮಾಡಿದರೆ, ಆ ಸ್ನೇಹಿತರ ಕಾರು ಬಂದು ನಮ್ಮ ಸಮೀಪ ನಿಲ್ಲಬೇಕೇ? ನಾವು ಅಂದು ಕಲಿತ ಪಾಠ 'ಇಲ್ಲಿ ದಾಕ್ಷಿಣ್ಯ ಪಟ್ಟುಕೊಂಡರೆ ಕೆಲಸ ಆಗೋಲ್ಲ' ಎಂದು.

ಹೊಸ ಪರಿಸರ, ಕಛೇರಿಯಲ್ಲಿ ಹೊಸ ಮುಖಗಳು. ಮುಖ ಕಂಡೊಡನೆ ನಗು ಸೂಸುವ ವದನಗಳು. ಒಂದು ದಿನ ಹೀಗೆ ಒಬ್ಬಾತ ಕೇಳಿದ Hi, how are you doing today? ನನಗೇನಾಗಿತ್ತು ಧಾಡಿ ನಿನ್ನೆ? ಚೆನ್ನಾಗಿದ್ನಲ್ಲ? ಆದರೂ 'ಚೆನ್ನಾಗಿದ್ದೀನಿ' ಅಂದೆ. ಒಮ್ಮೆ ಹೀಗೇ ಆಯ್ತು. ಯಾರೋ ಅರಿಯದೆ ನನ್ನನ್ನು ಮುಟ್ಟಿದ ಅಂತ ಕ್ಷಮೆ ಕೇಳಿದ ಕಣ್ರೀ. ಆ ಕ್ಷಣದಲ್ಲಿ ನನಗೆ ನಮ್ಮಜ್ಜಿಯ ನೆನಪಾಯ್ತು. ಅಮೇರಿಕದ ಜನ ನಮ್ಮಜ್ಜಿಯಂತೆ 'ಮಡಿ' ಅಂತ ನನಗೆ ಗೊತ್ತಿರಲಿಲ್ಲ. ಅವನು 'ಸಾರಿ' ಅಂತ ಯಾಕೆ ಕೇಳಿದನೋ ನನಗೆ ಗೊತ್ತಿಲ್ಲ. ಯಾಕೆ ಅಂದರೆ, ಕೆಲವರನ್ನು ಕೈ ತೊಳೆದು ಮುಟ್ಟಬೇಕು. ಮತ್ತೆ ಕೆಲವರನ್ನು ಮುಟ್ಟಿ ಕೈ ತೊಳೀಬೇಕು. ನಾನು ಯಾವ ಜಾತಿ ಸೇರಿದವನೆಂದು ಅವನ ಪರಿಯಿಂದ ಅರ್ಥವಾಗಲಿಲ್ಲ. ಹೋಗ್ಲಿ ಬಿಡಿ. ಇಲ್ಲಿನವರು ಮಡಿ ಮಾಡದ ಒಂದು ದಿನ ಎಂದರೆ black friday ಇರಬೇಕು. ಆ ದಿನದ ವಾತಾವರಣಕ್ಕೆ ನಮ್ಮೂರ 'ಅವೆನ್ಯೂ ರೋಡ್' ಕೂಡ ನಾಚಬೇಕು. ಅವತ್ತು ಮಾತ್ರ ಮುಟ್ಟಿದ್ದಕ್ಕೆ 'ಸಾರಿ' ಏಕೆ ಅನ್ನೋಲ್ಲ ಅಂದರೆ, ಮುಂಜಾನೆ ಎದ್ದು ಅಂಗಡಿಯ ಮುಂದೆ ಸಾಲಿನಲ್ಲಿ ನಿಂತು ಶಾಪಿಂಗ್ ಮಾಡುವುದರಿಂದ ಇನ್ನೂ ಸ್ನಾನ ಮಾಡಿರೋಲ್ಲ ನೋಡಿ, ಅದಕ್ಕೆ.

ಕಾರು ಕೊಂಡ ಮೇಲೆ ಸ್ವಲ್ಪ ಸ್ವಾತಂತ್ರ್ಯ ಬಂತು ಅನ್ನಿ. ಅಲ್ಲಿಂದ, ಒಂದೊಂದೇ ಅನಿವಾರ್ಯ ವಸ್ತುಗಳು ಮನೆಯನ್ನು ಸೇರಿದವು. ವಾರಾಂತ್ಯಗಳಲ್ಲಿ ಬೇಸರ ಕಳೆಯಲು ಹೊಸ ಜಾಗ ನೋಡುವ ಆಸಕ್ತಿಯಿಂದ ಅಲ್ಲಿ ಇಲ್ಲಿ ಓಡಾಟ. ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರು ಅನ್ನೋ ಗಾದೆ ಮಾತಿದೆ. ಕ್ರಿಸ್ಮಸ್ ಸಮಯದಲ್ಲಿ ನ್ಯೂಯಾರ್ಕ್‌ನ ಪ್ರಸಿದ್ಧ ಜೋಡಿ ಕಟ್ಟಡಗಳನ್ನು ನೋಡಿ ಬರುವ ಯೋಚನೆ ಇತ್ತು. ನಮ್ಮ ದುರಾದೃಷ್ಟ, ಸೆಪ್ಟಂಬರ್‌ನಲ್ಲೇ ಅವು ಉದುರಿ ಬೀಳಬೇಕೇ? ಅಂದು ಬಿದ್ದದ್ದು ಬರೀ ಎರಡು ಕಟ್ಟಡಗಳಲ್ಲ. ಅಮೇರಿಕದ ಆರ್ಥಿಕ ವ್ಯವಸ್ಥೆ. ಅಮೇರಿಕದವರ ಕಣ್ಣಲ್ಲಿ ಇತರ ದೇಶದವರ ಬಗೆಗಿನ ಒಂದು ಭಾವನೆ.

ನ್ಯೂಯಾರ್ಕ್ ಬದಲು ಭಾರತ ಟ್ರಿಪ್ ಹಾಕಿ ಹೋಗಿ ಬಂದೆವು. ಮೊದಲ ಬಾರಿಯ ಭೇಟಿಯ ಅನುಭವ ಒಂದು ರೀತ್ಯಾ ಮುದವಾಗಿತ್ತು. ಇನ್ನೊಂದು ರೀತಿ ಹಿಂಸೆಯೂ ಆಯಿತು. ಸೆಪ್ಟಂಬರ್ ಹನ್ನೊಂದರ ಘಟನೆಯ ನಂತರ ಹಲವಾರು ಜನರಿಗೆ ನಿಂತ ನಿಲುವಲ್ಲೇ ಕೆಲಸ ಹೋಯಿತು. ಆರ್ಥಿಕ ಸಂಕಷ್ಟದಿಂದಾಗಿ ಕೆಲಸವೂ

ಸಿಗುತ್ತಿರಲಿಲ್ಲ. ಎಷ್ಟೋ ಜನರು ವಿಮಾನ ನಿಲ್ದಾಣದಲ್ಲೇ ಕಾರುಗಳನ್ನು ಬಿಟ್ಟು ದೇಶ ಬಿಟ್ಟು ಹೋದರು. ಆ ಸಮಯದಲ್ಲೇ ನಾನು ಭಾರತಕ್ಕೆ ಭೇಟಿ ನೀಡಿದ್ದು. ಅದೂ, ನಾಲ್ಕು ವಾರಗಳ ಕಾಲ. ಉಭಯಕುಶಲೋಪರಿಯ ನಂತರದ ಗುಸು ಗುಸು ಪ್ರಶ್ನೆ, 'ನಿಮ್ಮ ಕೆಲಸಕ್ಕೆ ಏನೂ ತೊಂದರೆ ಇಲ್ಲ ತಾನೇ?' ಎಂದು. ಹಾಗಾಗಿ, ನಮ್ಮ ಜನರೊಂದಿಗೇ ಇದ್ದರೂ, ಕೆಲಸ ಏನಾಗುತ್ತೋ ಅನ್ನೋ ಭೀತಿ ಮನದಲ್ಲಿ ಇದ್ದೇ ಇತ್ತು.

ಎಲ್ಲ 'ಮೊದಲು'ಗಳ ಅನುಭವದ ನಂತರ ಬೇರೆ ರೀತಿಯ 'ಮೊದಲು'ಗಳು ಆರಂಭವಾದವು. ಊರಿಗೆ ಬಂದು ಸ್ವಲ್ಪ ಕಾಲ ತಳ ಊರಿದ ನಮಗೆ ಆಗೊಮ್ಮೆ ಈಗೊಮ್ಮೆ ಕನ್ನಡಿಗರು ಕಾಣಿಸುತ್ತಿದ್ದರು. ಜನರು ಪರಿಚಯವಾದಂತೆ ಕನ್ನಡ ಸಂಘದ ಇರವೂ ಪತ್ತೆಯಾಯಿತು. ಭಾರತದಲ್ಲಿದ್ದಾಗ ಯಾವ ಸಂಘ ಸಂಸ್ಥೆಯ ಸದಸ್ಯನೂ ಆಗಿರದಿದ್ದ ನನಗೆ ಸಹಜವಾಗಿ ಕುತೂಹಲ ಮೂಡಿತ್ತು. ಕನ್ನಡ ಸಂಘದ ಚಟುವಟಿಕೆಯಲ್ಲಿ ವೀಕ್ಷಕನಾಗಿ ಹೆಜ್ಜೆ ಇರಿಸಿದೆ.

ನನ್ನ ಜೀವನದ ಪ್ರಮುಖ ತಿರುವು ಅಮೇರಿಕದಲ್ಲೇ ಆಗಿದ್ದು ಎಂದರೆ ಅದು ಅತಿಶಯೋಕ್ತಿಯಲ್ಲ. ಮೊದಲಿಂದಲೂ ಓದುವ ಹವ್ಯಾಸ ಬೆಳೆಸಿಕೊಂಡಿದ್ದ ನನಗೆ ಬರೆಯಲು ಗೊತ್ತಿರಲಿಲ್ಲ. ಆ ದಿನಗಳಲ್ಲಿ ನನ್ನ ಬಂಧುಮಿತ್ರರೊಬ್ಬರು ದಟ್ಸ್‌ಕನ್ನಡ ವೆಬ್ ತಾಣವನ್ನು ಪರಿಚಯಿಸಿದರು. ಅಲ್ಲಿ ನನಗೆ ಭೇಟಿಯಾದ ಬರಹಗಾರರು ಹಲವಾರು. ಪ್ರತಿ ಬರಹವನ್ನು ಕೂಲಂಕಷವಾಗಿ ಗಮನಿಸತೊಡಗಿದೆ. ಮೊದ ಮೊದಲು ಪ್ರತಿಕ್ರಿಯೆ ವ್ಯಕ್ತಪಡಿಸುವುದರ ಮೂಲಕ ಬರೆಯುವ ಯತ್ನ ಮಾಡಿದೆ. ನಂತರ ಚುಟುಕುಗಳು. ಹೀಗೇ ಸಾಗಿತು ನನ್ನ ಬರವಣಿಗೆ. ಸ್ವಲ್ಪ ಹೆಚ್ಚು ''ರಿಸರ್ವ್' ಎನ್ನಬಹುದಾದ ನನ್ನ ವ್ಯಕ್ತಿತ್ವ, 'ಹಾಸ್ಯ'ವನ್ನು ಪ್ರಮುಖವಾಗಿರಿಸಿಕೊಂಡು ಬರಹವನ್ನು ಆರಂಭಿಸಿದೆ. ಸಾಹಿತ್ಯ ಕ್ಷೇತ್ರದಲ್ಲಿ ನಾನಿಂದು ಆರು ವರ್ಷದ ಕೂಸು. ಇನ್ನೂ ಹೆಚ್ಚು ಬೆಳೆಯಬೇಕೆಂಬ ಹಂಬಲ ಇದೆ. ಏನು ಮಾಡಲಿ! ನನಗೆ ಐದಡಿ ಮೇಲೆ ಬೆಳೆದು ಅಭ್ಯಾಸವಿಲ್ಲ. ಅಮೇರಿಕದ ನೆಲ ನನ್ನನ್ನು ಒಬ್ಬ ಬರಹಗಾರ ಎಂದು ಗುರುತಿಸಲು ವೇದಿಕೆಯಾಯಿತು.

'ರಿಸರ್ವ್' ಎಂದಾಗ ಈ ಘಟನೆ ನೆನಪಾಗುತ್ತದೆ. ನಮ್ಮ ದೊಡ್ಡ ಕುಟುಂಬದ (ಮೂರು ಜನ) family picture ತೆಗೆಸಿಕೊಳ್ಳೋಣ ಎಂದು ವಾಲ್-ಮಾರ್ಟ್‌ಗೆ ಹೋದೆವು. ಮೊದ ಮೊದಲು ನನ್ನ ಮಗನ ಮುಖದ ಮೇಲೆ ನಗು ತರಿಸಲು ಏನೇನೋ ಆಟವಾಡಿಸಿದಳು. ಹತ್ತು ನಿಮಿಷದಲ್ಲಿ ನನ್ನ ಮಗ (ಒಂದೂವರೆ ವರ್ಷ) ಟ್ರ್ಯಾಕ್‌ಗೆ ಬಂದ. ಆ ನಂತರ ಪೂರ ಒಂದು ಘಂಟೆ ಕಾಲ ನನ್ನ ಮುಖದ ಮೇಲೆ ನಗು ತರಿಸಲು ಆಕೆ ಪಟ್ಟ ಕಷ್ಟ ಹೇಳಲಾಗದು.

ಅಮೇರಿಕದ ನೆಲವು ನನ್ನಲ್ಲಿದ್ದ ಮತ್ತೊಂದು ಹೆಬ್ಬಯಕೆಯನ್ನು ನನಸಾಗಿಸಿತು. ನಾಲ್ಕು ಜನರ ಮುಂದೆ ಸ್ಟೇಜ್ ಮೇಲೆ ನಿಲ್ಲಬೇಕು ಎಂಬುದು. ಬಹುಶಃ 2003 ಇರಬೇಕು, ನನಗೆ ಅವಕಾಶ ದೊರೆಯಿತು. ಉಗಾದಿಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ

ಹೋಗಿದ್ದೆ. ಕಾರ್ಯಕ್ರಮ ಆರಂಭವಾಗುವ ಮುನ್ನ ಸೌಂಡ್ ಸಿಸ್ಟಮ್ ಸಿದ್ಧಪಡಿಸುತ್ತಿದ್ದರು. ಅಲ್ಲಿನವರೊಬ್ಬರು, ಪವರ್ ಕಾರ್ಡ್ ಹಿಡಿದುಕೊಳ್ಳಲು ನನ್ನ ಸಹಾಯ ಕೇಳಿದರು ಎಂದು ಸ್ಟೇಜ್ ಮೇಲೆ ಹತ್ತಿದೆ ಕಣ್ರೀ. ಏನು ಅನುಭವ ಅದು. ಸ್ಟೇಜ್ ಮೇಲೆ ನಿಂತು ನೋಡಿದರೇ, ಎಲ್ಲರೂ ನನ್ನತ್ತಲೇ ನೋಡುತ್ತಿದ್ದಾರೇನೋ ಎನಿಸುವಷ್ಟು ಹೆಮ್ಮೆ. ಅದೇ ಸಮಯಕ್ಕೆ ಯಾರೋ ಸ್ಪಾಟ್-ಲೈಟ್ ಹಚ್ಚಿದರು. ಶಾಖ ಹೆಚ್ಚಾಗಿ ಕೆಳಗೆ ಇಳಿದುಬಿಟ್ಟೆ. ಸ್ಟೇಜ್ ಮೇಲೆ ಹೋದವರು ಎಂಥ ಬಿಸಿ ಆದರೂ ತಡೆದುಕೊಳ್ಳಬೇಕು, ಕೆಳಗೆ ಇಳೀಬಾರದು ಅನ್ನೋ ಸತ್ಯ ಅರಿವಾಯಿತು.

ಈ ಘಟನೆ ನಡೆದ ಎರಡು ವರ್ಷಗಳ ನಂತರ ನಿಜಕ್ಕೂ ಒಂದು ಅವಕಾಶ ದೊರೆಯಿತು. ಗಂಡುಗಲಿಗಳ ಗುಂಪಿನಿಂದ ಒಂದು ನೃತ್ಯ ಕಾರ್ಯಕ್ರಮ. ಈ ಮುನ್ನ ಒಪ್ಪಿಗೆ ಕೊಟ್ಟು, ಆ ಹೊತ್ತಿಗೆ ಬರಲಾಗಲಿಲ್ಲ ಎಂದು ತೆರವಾದ ಜಾಗಕ್ಕೆ 'ಬರ್ತೀಯೇನಪ್ಪ' ಎಂದು ಕರೆದರು. 'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ' ಹಾಡಿಗೆ ಜೀವನದಲ್ಲಿ ಮೊದಲ ಬಾರಿಗೆ ಸ್ಟೇಜ್ ಮೇಲೆ ನೃತ್ಯ ಮಾಡಿದ್ದೆ. ಈ ವಿಷಯದಲ್ಲಿ ನನ್ನ ಮಗರಾಯ ನನಗೆ ಸೀನಿಯರ್ ಬಿಡಿ. ಸ್ಟೇಜಿನ ಅನುಭವ ಕೇವಲ ನನಗೆ ಮಾತ್ರವಲ್ಲ, ಎಂದೂ ಸ್ಟೇಜ್ ಏರದ ನನ್ನ ಧರ್ಮಪತ್ನಿಗೂ ಕೂಡ. ಇಂದು ಮೂರೂ ಜನ ಕನ್ನಡ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದಿದ್ದೇವೆ. ಇಂದು ನಮಗೆ ಸಭಾಕಂಪನವಿಲ್ಲ, ಸಭೆಗೆ ನಮ್ಮ ಬಗ್ಗೆ ಕಂಪನವಿದೆಯೋ ಗೊತ್ತಿಲ್ಲ. ಇಂದು ಹಲವಾರು ಬಾರಿ ಸ್ಟೇಜ್ ಹತ್ತಿದ್ದೇನೆ. ನಾಟಕ, ನೃತ್ಯ, ಕಾರ್ಯಕ್ರಮ ನಿರ್ವಾಹಕ ಇತ್ಯಾದಿ. ಆದರೆ ಚಿರಕಾಲ ನೆನಪಿನಲ್ಲಿ ಉಳಿಯುವಂಥದ್ದು ಎಂದರೆ, 'ಕನ್ನಡ ಸಾಹಿತ್ಯ ರಂಗ'ದ ದೆಸೆಯಿಂದ ಹಲವಾರು ಸಾಹಿತ್ಯ ಕ್ಷೇತ್ರದ ಹಿರಿಯರ ಮುಂದೆ ನನ್ನ ಕವನ ವಾಚನ ಮಾಡಿದ್ದೆ, ಪ್ರಸಿದ್ಧ ಬರಹಗಾರ ಮಿತ್ರರ ಪುಸ್ತಕ ವಿಮರ್ಶೆ ಮಾಡಿ ಅದನ್ನು ಎಲ್ಲರ ಮುಂದೆ ಓದಿದ್ದೆ.

ಹದಿಮೂರು ವರ್ಷಗಳ ಈ ಪಯಣದಲ್ಲಿ ನಾನು ಕಲಿತಿರುವ ವಿಷಯಗಳು ಅನೇಕ. ನಿತ್ಯ ಜೀವನದಲ್ಲಿ ಅನುಭವಿಸಿರುವ ಆತಂಕದ ಕ್ಷಣಗಳೂ ಅನೇಕ. ನಾವಿರುವ ವರ್ಜೀನಿಯಾ ರಾಜ್ಯದ ಒಂದು ಪ್ರತಿಷ್ಠಿತ ಇಂಜಿನೀರಿಂಗ್ ಕಾಲೇಜಿನಲ್ಲಿ ಯಾವುದೋ ತಲೆತಿರುಕ ವಿದ್ಯಾರ್ಥಿಯೊಬ್ಬ ಹಲವಾರು ಜನರನ್ನು ಗುಂಡಿಕ್ಕಿ ಕೊಂದು ತಾನೂ ಸತ್ತಿದ್ದ. ಇದು ದಿನನಿತ್ಯದ ಗೋಳು ಅನ್ನಿಸಿದರೆ ನನ್ನ ಪರಿಸ್ಥಿತಿಯೇ ಬೇರೆಯಾಗಿತ್ತು. ನನ್ನ ಸಹೋದ್ಯೋಗಿಯ ಮಗನೂ ಅದೇ ಕಾಲೇಜಿನ ವಿದ್ಯಾರ್ಥಿಯಾಗಿದ್ದು, ಆ ಘಟನೆ ನಡೆದಾಗ ಈತನ ಸ್ಥಿತಿ ವರ್ಣಿಸಲು ಅಸಾಧ್ಯ. ರಾಜ್ಯಾದ್ಯಂತ ಪೋಷಕರು ತಮ್ಮ ಮಕ್ಕಳ ಯೋಗಕ್ಷೇಮ ತಿಳಿಯಲು ಕರೆ ಮಾಡುತ್ತಿದ್ದುದರಿಂದ ನೆಟ್ವರ್ಕ್ ಬಿಜಿ ಆಗಿ, ಈತನ ಕರೆಗಳು ಅವನ ಮಗನಿಗೆ ತಲುಪುತ್ತಲೇ ಇಲ್ಲ. ಅದೇ ಸಮಯಕ್ಕೆ ಸರಿಯಾಗಿ ಮಾಧ್ಯಮದವರು 'ಕೊಲೆಗಡುಕ'ನು ಹೊರದೇಶದವನು ಎಂಬ ವಿಷಯ ಮಾತ್ರ ಹೊರಬಿಟ್ಟು ಇನ್ನೂ ಆತಂಕವನ್ನು ಹೆಚ್ಚಿಸಿದ್ದರು. ಅಪ್ಪಿ ತಪ್ಪಿ ಅವನು

ಭಾರತೀಯನಾಗಿದ್ದರೆ ಎಂಬೋ ಆತಂಕದಲ್ಲಿ ಕೆಲಸವೇ ಮಾಡಲಾಗುತ್ತಿಲ್ಲ. ಕೆಲವು ಘಂಟೆಗಳ ನಂತರ ವಿಷಯವೆಲ್ಲ ಬಹಿರಂಗವಾಗಿ ಅವನು ನಮ್ಮ ದೇಶದವನಲ್ಲ ಎಂದು ತಿಳಿದು, ಸಹೋದ್ಯೋಗಿಯ ಮಗನೂ ಕ್ಷೇಮ ಎಂದರಿತ ಮೇಲೆ ನಿರಾಳವಾಯಿತು ನಮ್ಮ ಮನ.

ದೇಶ ಬಿಟ್ಟು ಹೊರಬಂದವರಿಗೆ ಸ್ನೇಹಿತರೇ ಬಂಧುಗಳು ಅನ್ನುವ ಮಾತಿನ ಸತ್ಯವನ್ನು ನಮ್ಮ ಅನುಭವಗಳು ತಿಳಿಸಿವೆ. ಈವರೆಗೆ ನಾನು ಭಾಗವಹಿಸಿರುವ ಸತ್ಯನಾರಾಯಣ ಪೂಜೆಗಳು, ಹುಟ್ಟುಹಬ್ಬದ ಪಾರ್ಟಿಗಳು, ಸರ್ಪ್ರೈಸ್ ಪಾರ್ಟಿಗಳು ಇತ್ಯಾದಿಗಳಿಗೆ ಲೆಕ್ಕವೇ ಇಲ್ಲ. ಒಂದಿಲ್ಲೊಂದು ಸಂದರ್ಭದಲ್ಲಿ ಸ್ನೇಹಿತರನ್ನು ಭೇಟಿಯಾಗುತ್ತ, ಸಂತಸ ಹಂಚಿಕೊಂಡು, ದುಃಖದಲ್ಲಿ ಪಾಲ್ಗೊಂಡು, ನಮ್ಮದೇ ಆದ ಬಂಧುವರ್ಗ ಮಾಡಿಕೊಂಡಿದ್ದೇವೆ ಎಂದರೆ ಅತಿಶಯೋಕ್ತಿ ಅಲ್ಲ.

ಅನುಭವಗಳ ನೆನಪಿನಲ್ಲಿ ಮಿಂದು ಬರೆಯುವ ಕೈಗಳು ಸೋಲುತ್ತಿವೆ ಎನ್ನಲೇ? 'ತುಟಿ ಮೇಲೆ ಬಂದಂಥ ಮಾತೊಂದೆ ಒಂದು, ಎದೆಯಲ್ಲಿ ಉಳಿದಿದ್ದು ಮುನ್ನೂರ ಒಂದು' ಎನ್ನಲೇ? ಯಾವುದಾದರೂ ಆಗಲಿ, ಒಂದಂತು ನಿಜ. ಅನುಭವಗಳು ಪಾಠ ಕಲಿಸಿವೆ. ಸಂಕುಚಿತ ಮನೋಭಾವ ಅಳಿದು ಹೃದಯ ವಿಶಾಲವಾಗಿದೆ. ಒಲುಮೆಯ ಓದುಗರು, ನಲ್ಮೆಯ ಬರಹಗಾರರು, ಚಿಲುಮೆಯ ವೈದ್ಯರು, ಬುದ್ಧಿಜೀವಿ ಐ.ಟಿ. ಜನ, ಅನುಭವಿ ಉದ್ಯಮಿಗಳು ಎಂತೆಲ್ಲ ಹಿಂದೆಂದೂ ಇಲ್ಲದಷ್ಟು ಸ್ನೇಹಿತರು ನನಗೆ ಇಲ್ಲಿ ಸಿಕ್ಕಿದ್ದಾರೆ. 'ನೀ ಯಾರೆಂದು ಅರಿಯಲು ನನಗೆ ನಿನ್ನ ಸ್ನೇಹಿತರನ್ನು ತೋರು' ಎಂದಿದ್ದಾರೆ ಹಿರಿಯರು. ನನಗೆ ಆ ತೊಂದರೆ ಇಲ್ಲ ಬಿಡಿ.

ಧನ್ಯೋಸ್ಮಿ.

ಬೇರು ಸೂರು

ನಾನು, ನಾವು.

– ಗುರುಪ್ರಸಾದ್ ಕಾಗಿನೆಲೆ



ನಾನು ಶಾಲೆ, ಕಾಲೇಜುಗಳಿಗೆ ಹೋಗಿ ವಿದ್ಯೆ ಕಲಿತದ್ದು ಡಾಕ್ಟರಿಕೆ ಮಾಡುವುದಕ್ಕೆ. ನನ್ನ ಈ ಕೆಲಸದ ಜತೆಜತೆಗೂ ಬೆಳೆದುಕೊಂಡಿದ್ದು ಈ ಓದುವುದು, ಬರೆಯುವುದು ಎನ್ನುವ ಹವ್ಯಾಸ. ಈ ಘಟ್ಟದಲ್ಲಿ ಓದು, ಬರಹ ನನ್ನ ಇರುವಿಕೆಗೇ ಅನಿವಾರ್ಯವೆನಿಸುವಷ್ಟು ನನ್ನನ್ನು ಆವರಿಸಿಕೊಂಡಿವೆ. ನಾನು ಬರವಣಿಗೆಯನ್ನು ಆರಂಭಿಸಿದ್ದು ಕೊಂಚ ತಡವಾಗಿ. ಈ ಬರವಣಿಗೆ ಎಂಬ ಪ್ರಕ್ರಿಯೆಯ ಬೆಳವಣಿಗೆ ನನ್ನ ವ್ಯಕ್ತಿತ್ವವನ್ನು ವೈದ್ಯ ಮತ್ತೆ ಇನ್ನೊಬ್ಬ ಎಂದು ಇಬ್ಭಾಗಿಸಿ ನಾನು ನಾನಾಗಿಯೇ ಆರೋಪಿಸಿಕೊಳ್ಳಬೇಕಾದ ಸ್ಥಿತಿಯನ್ನೂ, ಅನಿವಾರ್ಯತೆಯನ್ನೂ ಸೃಷ್ಟಿಸಿದೆ. ಈ ಎರಡೂ ವ್ಯಕ್ತಿತ್ವಗಳೂ ಒಂದಕ್ಕೊಂದು ಟಕ್ಕಾಟಿಕ್ಕಿಯಾಗದೇ ಪೂರಕವಾಗಿರುವ ಹಾಗೆ ಕಾಪಾಡಿಕೊಳ್ಳುವುದು ನನ್ನ ಮಟ್ಟಿಗೆ ಒಂದು ಸವಾಲು ಮತ್ತು ಅಗತ್ಯ. ಹಾಗೆ ಕಾಪಾಡಿಕೊಂಡು ಬರುವುದು ನನ್ನ ಮನಸ್ಸಿನ ಸ್ವಾಸ್ಥ್ಯಕ್ಕೆ ಕೂಡ ಅನಿವಾರ್ಯ. ನನ್ನ ವೃತ್ತಿಯ ಅನುಭವಗಳು ನನ್ನ ಬರಹಕ್ಕೆ ಬೇಕಾದ ದ್ರವ್ಯವನ್ನು ಒದಗಿಸಬಹುದು. ಆದರೆ, ಕೆಲವೊಮ್ಮೆ ನಾನು ಬರಹಗಾರ ಎಂಬ ಪ್ರಜ್ಞೆ ನನ್ನ ವೃತ್ತಿಯ ನಡುವೆ ಕೆಲಸ ಮಾಡಲು ಶುರುಮಾಡಿದಲ್ಲಿ ನಾನು ನನ್ನ ಆ ಅರಿವನ್ನು ಪ್ರಜ್ಞಾಪೂರ್ವಕವಾಗಿ ಹತ್ತಿಕ್ಕಿಕೊಳ್ಳಬೇಕಾಗಿದೆ. ಇಲ್ಲವಾದಲ್ಲಿ ನಾನು ಸಾಂತ್ವನಗೊಳಿಸಬೇಕಾದ ರೋಗಿ ಮತ್ತು ಆತನ ಹಿತೈಷಿಗಳು ನನ್ನ ಕಥೆಯ ವಸ್ತುವಾಗಿ ರೋಚಕವಾಗಿ ಕಾಣಿಸತೊಡಗುತ್ತಾರೆ. ಆತನ ಕಷ್ಟಕಾರ್ಪಣ್ಯಗಳು, ರೋಗರುಜಿನಗಳಿರಲಿ ಸಾವು ಕೂಡ ಒಂದು ಘಟನೆಯಾಗಿ ಕಾಣಿಸಿಬಿಡುತ್ತದೆ. ರೋಗಿಯ ಶುಶ್ರೂಷೆಗೆ ಅಗತ್ಯವಿರದ ಆತನ ವೈಯಕ್ತಿಕ ಸಂಗತಿಗಳು ನನ್ನ ಕಥೆಗೆ ಪ್ರಸ್ತುತವಾಗಬಹುದೇನೋ ಎಂಬ ಹುಂಬ ಯೋಚನೆ ಬಂದು ಆತನ 'ಪರ್ಸನಲ್ ಹಿಸ್ಟರಿ'ಯನ್ನು ಆಸ್ವಾದಿಸುವ ಪರಿಸ್ಥಿತಿ ಕೂಡ ಬಂದಿದೆ.

ಬರೆಯಲೆಂದು ಕೂತಾಗ ನನ್ನ ದೈನಿಕದ ಮುಕ್ಕಾಲುವಾಸಿ ಸಮಯವನ್ನು ಆವರಿಸಿಕೊಂಡಿರುವ ನಾನಿರುವ ಪ್ರಪಂಚ– ನನ್ನ ಆಸ್ಪತ್ರೆ, ನನ್ನ ಜತೆಯ ಕೆಲಸಗಾರರು, ರೋಗಿಗಳು ಎಲ್ಲವುಗಳಿಂದ ಹೊರಗೆ ಬರಬೇಕು. ನನ್ನ ಪ್ರಪಂಚವನ್ನು ನಾನೇ ಹೊರಗಿನಿಂದ ನೋಡುವ ಸಾಪೇಕ್ಷತೆಯನ್ನು ಬೆಳೆಸಿಕೊಳ್ಳಬೇಕು. ಇಲ್ಲವಾದಲ್ಲಿ ನನ್ನ ಕೆಲಸದಿಂದ ನನಗೆ ಸಿಗುವ ಸಮಾಧಾನ, ಸಾಂತ್ವನಗಳನ್ನು ಮರೆತು ನನ್ನನ್ನು ತಳಮಳಗೊಳಿಸುವ, ಅಸ್ವಸ್ಥನಾಗಿಸುವ ಸಂಗತಿಗಳಿಗೆ ಮಾತ್ರ ಬರಹವನ್ನು ಥೆರಪಿಯಂತೆ

ಬಳಸುವ ಅಪಾಯವಿದೆ. ಇದನ್ನು ಕೂಡ ಮೀರಬೇಕಾಗಿದೆ.

ಈ ಘಟ್ಟದಲ್ಲಿ ಎರಡರಲ್ಲಿ ಒಂದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿದ್ದಲ್ಲಿ ಏನು ಮಾಡುತ್ತಿದ್ದೆ ಎನ್ನುವುದು ನಾನೇ ಉತ್ತರಿಸಲಾಗದ ಪ್ರಶ್ನೆ. ಏಕೆಂದರೆ ವೈದ್ಯನಲ್ಲದ ನಾನು ನಾನಲ್ಲ ಕೂಡ. ಇದು ಈ ಕಾಲದಲ್ಲಿ ಬರೆಯುತ್ತಿರುವ ಪ್ರತಿಯೊಬ್ಬ ವೃತ್ತಿಪರರ ಮಟ್ಟಿಗೆ ಸತ್ಯವೂ ಹೌದು.

ಸಂಸಾರೊಂದಿಗರಾದ ನಮ್ಮಂಥವರು ಕೆಲಸ, ಸಂಸಾರ ಎಂಬ ಎರಡರ ನಡುವಿನ 'ಸುರಕ್ಷಿತ ಅವಧಿ'ಯನ್ನು ನಮ್ಮ 'ಹವ್ಯಾಸ'ಗಳಿಗೆ ಮೀಸಲಿಡಬೇಕು. ನನ್ನ ಬರಹ ನನ್ನ ಇರವಿಗೆ, ನನ್ನ ಚಿತ್ತ ಸ್ವಾಸ್ಥ್ಯಕ್ಕೆ ಮುಖ್ಯ ಎಂಬುದು ನನ್ನ ಕುಟುಂಬಕ್ಕೆ ಅಸಂಗತವಾದಲ್ಲಿ 'ಬರಹಗಾರನಿಗೆ ಬದುಕು ಮುಖ್ಯವೋ ಸಾಹಿತ್ಯ ಮುಖ್ಯವೋ' ಎಂಬ ಪ್ರಶ್ನೆಗೆ ಬದುಕು ಮುಖ್ಯ ಎಂಬ ಬರಹಗಾರನ ಉತ್ತರ ಪೊಲಿಟಿಕಲಿ ಕರೆಕ್ಟ್ ಅನಿಸತೊಡಗುತ್ತದೆ. ಚಿತ್ತಸ್ವಾಸ್ಥ್ಯಕ್ಕೆಲ್ಲಿದೆ 'ಸುರಕ್ಷಿತ ಅವಧಿ' ಈ ಕಾಲದಲ್ಲಿ! ಏಕಾಂತದಲ್ಲಿ ಕವಿತೆ ಓದುತ್ತಾ ಕೂತಾಗ ಆಗುವ ಸಂತೋಷವನ್ನು ಸಂಗಾತಿಯೊಂದಿಗಾದರೂ ಹಂಚಿಕೊಳ್ಳುವುದು ಹೇಗೆ? ಆಕೆಗೆ ಅದರಿಂದ ಸಂತೋಷವಾಗಬೇಕು ಎಂದು ಅಪೇಕ್ಷಿಸುವುದೂ ಸ್ವಾರ್ಥವಲ್ಲವೇ? ಇದೇ ಏಕಾಂತ ನಟ್ಟಿರುಳ ತನಕ, ಬೆಳಗಿನಜಾವದ ತನಕ ವಿಸ್ತರಿಸಿಕೊಂಡಲ್ಲಿ ಸಿಗುವ ಸಮಾಧಿ ಸ್ಥಿತಿಗೇ ಧ್ಯಾನಸ್ಥ ಸ್ಥಿತಿ ಅನ್ನುವುದಾದರೆ ಪ್ರತಿದಿನ ಈ ಸ್ಥಿತಿಯನ್ನು ತಲುಪುತ್ತಾ ಕೂರುವುದು ಸಾಧ್ಯವೇ? ದಿನಕ್ಕಿರುವುದು ಇಪ್ಪತ್ನಾಲ್ಕೇ ಗಂಟೆ. Matter can neither be created nor destroyed, but only be replaced.

ಇಷ್ಟರ ನಡುವೆ ದೇಶದ ಹೊರಗಿರುವ ಅನಿವಾರ್ಯತೆ ನನ್ನಂಥವರಿಗೆ 'ಅನಿವಾಸಿ ಬರಹಗಾರ' ಎಂಬ ಹಣೆಪಟ್ಟಿಯನ್ನು ಲಗತ್ತಿಸಿದೆ. ಈ ಹಣೆಪಟ್ಟಿ ಹಚ್ಚಿಕೊಂಡು ಬರೆಯುವುದು ನನಗೆ ಬೇಕಾಗಿದೆಯೋ, ಇಲ್ಲವೋ ಎಂಬ ಪ್ರಶ್ನೆಗೆ ಉತ್ತರವೂ ಅಷ್ಟು ಸುಲಭವಲ್ಲ. ಬರವಣಿಗೆ ನನ್ನ ಮಟ್ಟಿಗೆ ತೀರ ಖಾಸಗಿ ವಿಷಯ. ಕಾದಂಬರಿಯಂಥ ದೀರ್ಘ ಬರವಣಿಗೆಯಲ್ಲಿ ತೊಡಗಿಕೊಳ್ಳಬೇಕಾದರೆ ಬಹಳ ದಿನಗಳ ಕಾಲ ನನ್ನ ಪಾತ್ರಗಳ ಜತೆಗೇ ಜೀವಿಸಿರುತ್ತೇನೆ. ಹೀಗಾಗಿ ಬರವಣಿಗೆಯನ್ನು ಎಂದೂ ಒಂದು ಗುಂಪಿನ ಚಟುವಟಿಕೆ ಎಂದು ಪರಿಭಾವಿಸಲು ನನಗೆ ಸಾಧ್ಯವಾಗಿಲ್ಲ. ಹೀಗಿರುವಾಗ ಪ್ರಸ್ತುತ ಸಂದರ್ಭದಲ್ಲಿ ಹೊರನಾಡ ಕನ್ನಡ ಸಾಹಿತ್ಯ ಎಂದು ನಮ್ಮನ್ನು ನಾವೇ ವರ್ಗೀಕರಿಸಿಕೊಂಡು ಒಂದು ಗುಂಪುಮಾಡಿಕೊಂಡು ಬರೆಯುವುದು ಸಾಧುವೇ ಎಂಬ ಪ್ರಶ್ನೆಯನ್ನು ಎಷ್ಟು ಬಾರಿ ಕೇಳಿಕೊಂಡರೂ ಅದನ್ನು ನಾವೇ ಉತ್ತರಿಸಿಕೊಳ್ಳಬೇಕಾಗುವ ಅನಿವಾರ್ಯತೆಯನ್ನೂ ಒಪ್ಪಿಕೊಳ್ಳಬೇಕಾಗುತ್ತದೆ.

ವೈದ್ಯನಾಗಿ ನಾನು ನನ್ನ ಸಾಹಿತ್ಯವನ್ನು ಪ್ರತ್ಯೇಕಿಸುವಂತೆ ಅಥವಾ ಒಂದಾಗಿಸಿಕೊಳ್ಳುವಂತೆ ಈ 'ಹೊರನಾಡ ಕನ್ನಡಿಗ'ನಾಗಿ ಮಾಡಲು ಸಾಧ್ಯವಾಗಿದೆಯಾ ಎಂಬ ಅನುಮಾನ ನನ್ನನ್ನು ಕಡೆಯತನಕ ಕಾಡುತ್ತಲೇ ಇರುತ್ತದೆ. ಈ ಅನುಮಾನ

ಅಮೆರಿಕಾ ನನ್ನನ್ನು ಮೂಲಭೂತವಾಗಿ ಬದಲಿಸಿಲ್ಲ ಎಂದು ನನಗೆ ನಾನೇ ಕೊಟ್ಟುಕೊಳ್ಳಬಹುದಾದ ಸಮಜಾಯಿಷಿಯೂ ಹೌದು. ಹಾಗೆಯೇ ಕನ್ನಡದಲ್ಲಿ ನಾನು ಬರೆಯುವುದನ್ನು ಮುಂದುವರಿಸಬೇಕಾದಲ್ಲಿ ನನಗೆ ಬೇಕಾದ ಒಂದು ರಕ್ಷಾಕವಚ ಕೂಡ. ಯಾವಾಗ ನನ್ನ ಮಾನಸ ಕನ್ನಡ ಪ್ರಪಂಚದಿಂದ ನಾನು ದೂರವಾಗಿದ್ದೇನೆ ಎಂದು ನನಗನಿಸಲಿಕ್ಕೆ ಶುರುವಾಗುತ್ತದೋ ಆಗ ನಾನು ಕನ್ನಡದಲ್ಲಿ ಬರೆಯುವುದೂ ಸಾಧ್ಯವಿಲ್ಲ ಎಂದು ನನಗನಿಸಿದೆ.

ನನ್ನ ಬರವಣಿಗೆಯನ್ನು ಪಕ್ಕಕ್ಕಿಟ್ಟು 'ನಮ್ಮ' ಬರವಣಿಗೆಯ ಬಗ್ಗೆ ಕೊಂಚ ನೋಡೋಣ. ಮೊದಲೇ ಹೇಳಿದಂತೆ ಈ 'ನಮ್ಮ' ಎಂಬ ಅಸ್ಮಿತೆಯ ಬಗ್ಗೆ ನನಗೆ ಅನುಮಾನವಿದೆ. ಹೀಗೆ ಪ್ರತ್ಯೇಕಿಸುವವರು ಯಾರು ಎಂದು ಕೂಡ ನನಗೆ ಗೊತ್ತಿಲ್ಲ.

ಆದರೆ ನಮ್ಮ 'ಅಮೆರಿಕಾದ ಅನುಭವಗಳನ್ನು' ದಾಖಲಿಸಬೇಕಾದರೆ ಅಮೆರಿಕಾ ಎಂಬ ಈ ದೇಶ ಕನ್ನಡ ಬರಹಗಾರ ಎಂಬ ನಮ್ಮೆಲ್ಲರ ಅಸ್ಮಿತೆಯನ್ನು ಯಾವ ರೀತಿ ರೂಪಿಸಿದೆ ಎಂದು ಕೊಂಚವಾದರೂ ನೋಡಬೇಕಾಗಿದೆ. ನನ್ನ ಮಟ್ಟಿಗೆ ನನ್ನ ಬಹಳಷ್ಟು ಬರಹಗಳಲ್ಲೂ ಅಮೆರಿಕಾ ಒಂದಲ್ಲ ಒಂದು ರೀತಿ ಬಂದುಹೋಗಿರುವುದರಿಂದ, ನನ್ನ ಕೆಲವಾದರೂ ಬರಹಗಳನ್ನು ಓದಿದವರಿಗೆ ಇವೆಲ್ಲ ಕಿಸಬಾಯಿದಾಸನ ಹಾಡಿನಂತೆ ಕಾಣಿಸಲೂಬಹುದು. ಆದರೆ, ಅಮೆರಿಕಾದ ಅನುಭವಗಳನ್ನು ಮಾತ್ರ ದಾಖಲಿಸುವ ಮಿತಿಯನ್ನು ಈ ಲೇಖನ ಸೃಷ್ಟಿಸಿರುವುದರಿಂದ ಕ್ಷಮೆಯಿರಲಿ.

ವಲಸೆ ಎನ್ನುವುದು ಒಂದು ದೀರ್ಘ ಪ್ರಕ್ರಿಯೆ. ಯಾರೇ ಎಲ್ಲೇ ವಲಸೆ ಹೋದರೂ ಜೀವಮಾನವಿಡೀ ಈ ಹೊಸಪ್ರದೇಶಕ್ಕೆ ಹೊಂದಿಕೊಳ್ಳುವ, ಬಿಟ್ಟು ಬಂದ ಊರ ನೆನವರಿಕೆ, ಕನವರಿಕೆ ಇತ್ಯಾದಿ ಹಳವಂಡಗಳು ಕಾಡುತ್ತಲೇ ಇರುತ್ತವೆ. ಹೊಸಾ ದೇಶದ ಬೆರಗು, ಅಲ್ಲಿ ಜೀವಿಸಬೇಕಾಗಿರುವ ಅನಿವಾರ್ಯತೆ, ದೂರದಲ್ಲಿರುವ ಬಂಧುವರ್ಗಕ್ಕೆ ಬೇಕಾದಾಗ ಸಹಾಯ ಮಾಡಲಾರದಿರುವ ಅಸಹಾಯಕತೆ, ಬೇರೆ ಸಂಸ್ಕೃತಿಯಲ್ಲಿ ಬೆಳೆಯುತ್ತಿರುವ ಮುಂದಿನ ಪೀಳಿಗೆ– ಇವು ಪ್ರತಿಯೊಬ್ಬರನ್ನೂ ಕಾಡೇ ಕಾಡುತ್ತವೆ. ಇದು ಸಾರ್ವತ್ರಿಕ.

ಇಂಗ್ಲಿಷಿನಲ್ಲಿ ವಲಸೆ ಸಾಹಿತ್ಯವನ್ನು ಓದಿದಾಗ ಅವುಗಳು ಹೀಗೇ ಇರಬೇಕು ಎಂದು ಫಾರ್ಮುಲಾ ಹಿಡಿದು ಬರೆಯುವಂತೆ ಬರೆಯುವಷ್ಟು ನಿರ್ದಿಷ್ಟ ಗುಣಗಳಿರುವುದನ್ನು ನಾವು ಕಾಣಬಹುದು. ಮೊಟ್ಟಮೊದಲಿಗೆ ವಲಸೆ ಎಂದ ತಕ್ಷಣ ಅದು ಪೂರ್ವದಿಂದ ಪಶ್ಚಿಮಕ್ಕೆ ಎನ್ನುವುದು ಡೀಫಾಲ್ಟ್. ಇಲ್ಲಿ ಒಬ್ಬ ಪಯಣಿಗನ ಹುಡುಕಾಟ, ನಾನ್ಯಾರು, ಎಲ್ಲಿಯವನು ಎಂಬ ಅಸ್ಮಿತೆಯ ಪ್ರಶ್ನೆ, ಹಿಂದೆ ಇದ್ದ ಮತ್ತು ಈಗ ಇರುವ ನಾಡಿನಿಂದ ತನ್ನೂರಿನ 'ಒಳ ಮತ್ತು ಹೊರ' ನೋಟ– ವಗೈರೆಗಳು ಪಶ್ಚಿಮದ ಓದುಗರಿಗೆ ಒಂದು

ಹುಲುಸಾದ ಓದನ್ನು ಒದಗಿಸಿಕೊಡುವುದಂತೂ ಗ್ಯಾರಂಟಿ. ನೈಪಾಲನಿಂದ ಜಂಪಾ ಲಹಿರಿಯವರೆಗೆ ಯಾವುದೇ ವಲಸೆ ಬರಹಗಳಲ್ಲಿರುವ ಸಾಮಾನ್ಯ ಗುಣ– ಪಶ್ಚಿಮಕ್ಕೆ ಬೇಕಾದ 'ಹೊರಗಿನವನ ಒಳನೋಟ.' ಈ ಹೊರಗಿನವನು ಕೂಡ ಪೂರಾ ಹೊರಗಿನವನಲ್ಲ. ತಮ್ಮ ಬೇರುಗಳು ಎಂದೋ ಬಿಟ್ಟು ಬಂದ ತಾವು ಹುಟ್ಟಿದ ನಾಡಿನಲ್ಲಿಯೇ ಇದೆ ಎಂದು ತಿಳಕೊಂಡಿರುವವರು. ಆದ್ದರಿಂದ ಪಶ್ಚಿಮದವರು ಹೋಗಿ ಈ ದೇಶಗಳನ್ನು ಸುತ್ತಿ ಬರೆದ ಪುಸ್ತಕಗಳು ಈ 'ಒಳನೋಟಗಳಿಲ್ಲ' ಎನ್ನುವ ಕಾರಣಕ್ಕಾಗಿ ಜನಪ್ರಿಯವಾಗುವುದು ಕಮ್ಮಿ. (ಕೆಲವೊಂದು ಅಪವಾದಗಳಿದ್ದೇ ಇರುತ್ತವೆ, ಉದಾಹರಣೆಗೆ, ಯಾನ್ ಮಾರ್ಟೆಲ್‌ನ 'ಲೈಫ್ ಆಫ್ ಪೈ'.)

ಇಲ್ಲಿ ಇನ್ನೊಂದು ಗುಣವನ್ನು ನಾವು ಗಮನಿಸಬಹುದು. ಈ ರೀತಿಯ ಇಂಗ್ಲಿಷ್ 'ಅನಿವಾಸಿ' ಬರಹಗಾರರು ನಮ್ಮ ಪುರಾಣಗಳಾದ ರಾಮಾಯಣ, ಮಹಾಭಾರತಗಳಿಂದ ಪ್ರೇರಿತಗೊಂಡಿಲ್ಲ. ಗಾಂಧೀವಾದವಾಗಲೀ, ಪೆರಿಯಾರ್ ಆಗಲೀ, ವಿವೇಕಾನಂದರ, ಪರಮಹಂಸರ ವಿಚಾರಸರಣಿಗಳನ್ನಾಗಲೀ ಓದಿ ತಮ್ಮ ಚಿಂತನ ಕ್ರಮವನ್ನು ಬೆಳೆಸಿಕೊಂಡಿಲ್ಲ. ನಿಜ ಹೇಳಬೇಕೆಂದರೆ, ಬಹಳಷ್ಟು ಮಂದಿಗೆ ಭಾರತೀಯತೆಯೆನ್ನುವ ರಾಷ್ಟ್ರೀಯತೆಯ ಯಾವ ಸೂಕ್ಷ್ಮಗಳೂ ಗೊತ್ತಿಲ್ಲ. ಕೆಲವರು ಭಾರತದಲ್ಲಿ ಹುಟ್ಟಿಯೂ ಇಲ್ಲ. (ನೈಪಾಲ ಮತ್ತು ಜಂಪಾ ಲಹಿರಿಗಳು ಭಾರತದ ಬಗ್ಗೆ ಬರೆದಾಗ ಅದು ಹೊರಗಿನ ನೋಟವೋ ಅಥವಾ ಒಳನೋಟವೋ?) ಇವರು ಬೆಳೆಯಬೇಕಾದಾಗ ಕಥಾಸರಿತ್ಸಾಗರ ಓದಿಲ್ಲ. ಬೇತಾಳ ಕಥೆಗಳೂ, ಪಂಚತಂತ್ರವೂ ಇವರಿಗೆ ಗೊತ್ತಿಲ್ಲ. 'ಹಕಲ್ಬೆರಿ ಫ಼ಿನ್' 'ಜೇನ್ ಐರ್' ಅಥವಾ 'ಓ ಹೆನ್ರಿ'ಯನ್ನು ಓದಿಕೊಂಡೇ ಬೆಳೆದವರು. ಆದರೆ, ಇವರು ಬರೆಯುವುದು ಭಾರತೀಯರ ಬಗ್ಗೆ. ಇವರಿಗಿರುವ ಹಣೆಪಟ್ಟಿ 'ಭಾರತೀಯ ಇಂಗ್ಲಿಷ್ ಬರವಣಿಗೆ' ಅಥವಾ 'ವಲಸೆ ಬರವಣಿಗೆ.'

ಈ ರೀತಿಯ ವಲಸೆ ಬರವಣಿಗೆ ಪಶ್ಚಿಮದಲ್ಲಿ ಬಹಳ ಜನಪ್ರಿಯ. ಪ್ರತಿಬಾರಿ ಬೂಕರ್ ಪ್ರಶಸ್ತಿಗೆ ಕೆಲವಾದರೂ ಇಂತಹ ಬರಹಗಾರರ ಕೃತಿಗಳು ಸೂಚಿತವಾಗಿರುತ್ತವೆ. ಬಹಳ ಬಾರಿ, ಇಂತಹ ಪ್ರಶಸ್ತಿಗಳನ್ನು ಗೆದ್ದುಕೊಂಡೂ ಇರುತ್ತವೆ. ಕೊಂಚ ಯೋಚಿಸಿದರೆ ಹೇಳಬಹುದು– ಈ ಬರಹಗಳು ಮುಖ್ಯವಾಗಿ ಪಶ್ಚಿಮ ಪ್ರಣೀತವಾದದ್ದು, ಬೇಕಾದ ವೇದಿಕೆ ಮತ್ತು ಪಾತ್ರಗಳು ಭಾರತೀಯವಾಗಿರಬಹುದು; ಭಾಷೆ, ರೂಪಕಗಳು, ತಂತ್ರ ಮತ್ತು ಬರಹದ ಸಾಧನಗಳೂ ಕೂಡ ಪಶ್ಚಿಮದ್ದೇ. ಕೊನೆಗೆ, ಎಲ್ಲವೂ ಕೊನೆಗೊಳ್ಳುವುದು ಅರಸಿ ಬಂದ ಆಶಯಗಳನ್ನು ಪೂರೈಸುವ, ಕನಸನ್ನು ನನಸಾಗಿಸುವ 'ಅಪೂರ್ವ ಪಶ್ಚಿಮ'ದಿಂದಲೇ. ಪಶ್ಚಿಮವನ್ನು ಅಪೂರ್ವವಾಗಿಸುವ ಇಂತಹ ಕೃತಿಗಳು ಬೂಕರ್ ಜ್ಯೂರಿಗೆ 'ಪೊಲಿಟಿಕಲಿ ಕರೆಕ್ಟ್' ಆದ 'ಫ಼ೀಲ್ ಗುಡ್' ಅಂಶವನ್ನು ತನ್ನಂತಾನೇ ಕೊಟ್ಟಿರುತ್ತವೆ. ಆ 'ಫ಼ೀಲ್ ಗುಡ್' ಕನಸುಗಳ ಪೂರೈಕೆಯ ಹವಣಿಕೆಯಲ್ಲಿ ಆಗುವ ಸಂಸ್ಕೃತಿಗಳ ಜಟಾಪಟಿ ಯಾವಾಗಲೂ ಬರಹಗಾರರಿಗೂ ಓದುಗರಿಗೂ ಒಂದು

ಕಾಡುವ ವಸ್ತುವಾಗಿರುತ್ತದೆ. ಜಂಪಾ ಲಹಿರಿಯ ಗೊಗೊಲ್, ಖಾಲಿದ್ ಹೊಸೀನೀಯ ಕೈಟ್ ರನ್ನರ್‌ನ ನಾಯಕ, ಭಾರತವನ್ನು ಕುರಿತು ಬರೆದಿರುವ ನೈಪಾಲರ ಪುಸ್ತಕಗಳು, ಸಲ್ಮಾನ್ ರಶ್ದೀಯ ಶಾಲೀಮಾರ್– ಎಲ್ಲರ ಕೇಂದ್ರವೂ ಒಂದೇ– ಪಶ್ಚಿಮ ಅಪೂರ್ವವಾದದ್ದು. ನಮ್ಮ ಕನಸುಗಳು ನನಸಾಗುವುದು ಇಲ್ಲಿಯೇ. ಆರ್.ಕೆ. ನಾರಾಯಣರ ಬರವಣಿಗೆ ಮಾತ್ರ ಇದಕ್ಕೆ ಅಪವಾದ.

ಇದನ್ನು ನಾವು ಗಮನಿಸುವುದು ಯಾಕೆ ಮುಖ್ಯ ಎಂದು ಒಂದು ಉದಾಹರಣೆ ಕೊಡುತ್ತೇನೆ. ನಾಲ್ಕೈದು ವರ್ಷಗಳ ಹಿಂದೆ ಬೂಕರ್ ಪ್ರಶಸ್ತಿಗೆ ನಾಮಿನೇಟ್ ಆಗಿದ್ದ ಪಾಕಿಸ್ತಾನಿ ಬರಹಗಾರ ಮೊಹ್ಸಿನ್ ಹಮೀದ್‌ರ 'ದ ರಿಲಕ್ಟಂಟ್ ಫಂಡಮೆಂಟಲಿಸ್ಟ್'ನಲ್ಲಿ ಒಂದು ಸನ್ನಿವೇಶವಿದೆ. ನಾಯಕ ಚಂಗೇಜ್ ಇಪ್ಪತ್ತೆರಡರ ಪಾಕಿಸ್ತಾನಿ. ನ್ಯೂಯಾರ್ಕಿನ ಒಂದು ಕಂಪೆನಿಯಲ್ಲಿ ಆತನಿಗೆ ಒಂದು ಉತ್ತಮ ಕೆಲಸವಿದೆ. ಅಲ್ಲಿ ಅವನಿಗೆ ಒಬ್ಬ ಬಿಳಿಯ ಗೆಳತಿಯೂ ಇದ್ದಾಳೆ. ಜೀವನ ಸುಗಮವಾಗಿ ನಡೆಯುತ್ತಿದೆ. ಅಷ್ಟರಲ್ಲಿ ನ್ಯೂಯಾರ್ಕ್‌ನಲ್ಲಿ ವರ್ಲ್ಡ್ ಟ್ರೇಡ್ ಸೆಂಟರ್ ಕುಸಿಯುತ್ತದೆ. ಯಾವುದೋ ಕೆಲಸಕ್ಕೆಂದು ಬೇರೆ ದೇಶದಲ್ಲಿದ್ದ ಆತ ನ್ಯೂಯಾರ್ಕಿನ ಈ ಕಟ್ಟಡಗಳು ಕುಸಿಯುತ್ತಿರುವುದನ್ನು ಟೀವಿಯಲ್ಲಿ ನೋಡುತ್ತಾನೆ. ಆತನಿಗೆ ಗೊತ್ತಿಲ್ಲದಂತೆ ಆತನ ತುಟಿಯ ಮೇಲೆ ಒಂದು ಮುಗುಳ್ನಗೆ ಹಾದುಹೋಗಿರುತ್ತದೆ. 'ಓ ಅಮೆರಿಕಾ, ನಿನ್ನನ್ನು ಮಂಡಿಬಗ್ಗಿಸಿ ಮಲಗಿಸಿದರಲ್ಲ' ಎಂದು ಆತನಿಗನಿಸುತ್ತದೆ. ಆತ ಒಬ್ಬ ಮುಸ್ಲಿಮ್. ಅಮೆರಿಕದ ಮತ್ತು ಮುಸ್ಲಿಮ್ ರಾಷ್ಟ್ರಗಳ ನಡುವಿನ ರಾಗದ್ವೇಷಗಳು ಪ್ರತಿಯೊಬ್ಬ ಮುಸ್ಲಿಮನಲ್ಲಿಯೂ ಹುಟ್ಟುಹಾಕಿರುವ ಭಾವನೆ ಒಂದು ಮಟ್ಟದ ಪ್ರತಿಭಟನೆ. ಈ ಪ್ರತಿಭಟನೆ ದ್ವೇಷದ ರೂಪ ಕಂಡುಕೊಂಡಾಗ ಅದನ್ನು ವಿರೋಧಿಸುವ ವಿವೇಕವನ್ನು ಕಳೆದುಕೊಂಡು ಆ ಒಂದು ಕ್ಷಣದಲ್ಲಿ ನಾಯಕ ತನಗೇ ಗೊತ್ತಿಲ್ಲದಂತೆ ಅಮೆರಿಕಾದ ಈ ಸೋಲನ್ನು ಮನಸಾರೆ ಮೆಚ್ಚಿರುತ್ತಾನೆ. ಸಾವಿರಾರು ಜನ ಮುಗ್ಧಜೀವಿಗಳು ಈ ಕೃತ್ಯದಿಂದ ಸತ್ತಿದ್ದಾರೆ ಎನ್ನುವುದು ಆತನಿಗೆ ಮುಖ್ಯವಾಗುವುದಿಲ್ಲ. ಒಳಿತು, ಕೆಡುಕುಗಳ ನಿರ್ಧಾರ ನಂತರ. ಅವಳಿ ಕಟ್ಟಡಗಳು ಉರುಳಿದಾಗ ಮೊಟ್ಟಮೊದಲಿಗೆ ಚಂಗೇಜನ ಪ್ರತಿಕ್ರಿಯೆ ಬಲವಂತವಾಗಿ ಅದುಮಿಡಬೇಕಾದ ಒಂದು ಸಣ್ಣ ಮುಗುಳ್ನಗೆಯ ಸಂಭ್ರಮ. ಒಂದು ಮಟ್ಟದಲ್ಲಿ ಪ್ರಾಮಾಣಿಕ ಅನ್ನಿಸುತ್ತದೆ, ಕೂಡ. ಈ ಪುಸ್ತಕಕ್ಕೆ ಬೂಕರ್ ಬರದೇ ಹೋದದ್ದು ಕೇವಲ ಆಕಸ್ಮಿಕ ಅಲ್ಲ.

ಇದೇ ಕಾರಣಕ್ಕೇ ನಮ್ಮ ಅರವಿಂದ ಅಡಿಗನ 'ವೈಟ್ ಟೈಗರ್'ಗೆ ಬೂಕರ್ ಪ್ರಶಸ್ತಿ ಬರುತ್ತದೆ.

ಕನ್ನಡದ ಸಂದರ್ಭದಲ್ಲಿ ಈ ರೀತಿಯ ಹೊರನಾಡ ಬರವಣಿಗೆ ಎನ್ನುವ ಒಂದು

ಪ್ರಕಾರದಡಿ ಬರೆಯಲು ಸಾಧ್ಯವೇ ಎಂದು ನಾನು ಬಹಳವಾಗಿ ಯೋಚಿಸಿದ್ದೇನೆ. ಬರಹಗಾರ ಯಾವಾಗಲೂ ಪ್ರಕಾರ, ಕಾಲಮಾನ, ಚಳುವಳಿ ಎಂದೆಲ್ಲ ಯೋಚಿಸುವುದಿಲ್ಲ. ಆದರೆ, ಯಾಕೋ ನಮಗೆ ಈ 'ಹೊರಗಿನ ಬರಹ' ಎಂಬ ಎಚ್ಚರ ಯಾವಾಗಲೂ ಇರುತ್ತದೆ ಅನಿಸುತ್ತದೆ. ಈ ಎಚ್ಚರ ಬರಹಗಾರರು ಸೃಷ್ಟಿಸಿಕೊಂಡಿರುವುದೋ, ವಿಮರ್ಶಕ ವರ್ಗ ಸೃಷ್ಟಿಸಿರುವುದೋ ಗೊತ್ತಿಲ್ಲ. ನಮ್ಮ ಬಹಳ ಮಟ್ಟಿಗಿನ ಬರಹಗಳು ಆರಂಭವಾಗಿದ್ದು ಇಲ್ಲಿನ ಸಾಂಘಿಕ ಚಟುವಟಿಕೆಗಳ ಉಪೋತ್ಪನ್ನಗಳಾಗಿ. ಅಮೆರಿಕಾದ ಕನ್ನಡ ಬರಹಗಾರರು ಬಹಳಷ್ಟು ಮಂದಿ ದೇಶ ಬಿಟ್ಟು ಬಂದಮೇಲೆ ಬರವಣಿಗೆಯನ್ನು ಪ್ರಾರಂಭಿಸಿದವರು. ದೇಶದಿಂದ ಹೊರಗೆ ಕೂತು ಕನ್ನಡದಲ್ಲಿ ಬರೆಯುವುದು ಮೊದಲು ಒಂದು ಭಾವನಾತ್ಮಕ ಕ್ರಿಯೆಯಾಗಿ ಶುರುವಾಯಿತು. ಈ ಬರಹಗಳನ್ನು ಕನ್ನಡ ಸಂಘದ ದೀಪಾವಳಿ, ಯುಗಾದಿ ಸಂಚಿಕೆಗಳಲ್ಲಿ ಪ್ರಕಟಿಸಲಾಗುತ್ತಿತ್ತು. (ಯಾವುದೇ ವಲಸೆ ಬರಹಗಳು ಆರಂಭವಾಗುವುದು ಪ್ರಾಯಶಃ ಹೀಗೇ ಇರಬಹುದು.) ಅಮೆರಿಕಾ ಶಕ್ತ ಕನ್ನಡ ಬರಹಗಾರರನ್ನು ಸೃಷ್ಟಿಸಿದೆಯೇ ಇಲ್ಲವೇ ಎಂಬ ಪ್ರಶ್ನೆಗೆ ಉತ್ತರ ಕೊಡುವ ಮುನ್ನ ಈ ಸಮುದಾಯ ಪ್ರಜ್ಞೆಯೇ ನಮ್ಮ ಸಾಹಿತ್ಯದ ಮೂಲದ್ರವ್ಯವಾದಾಗ ಬರೇ ಈ ಪ್ರಜ್ಞೆ ಸೃಜನಶೀಲ ಸಾಹಿತ್ಯವನ್ನು ಸೃಷ್ಟಿಸಬಲ್ಲುದಾ ಎಂದು ನಾವು ಕೇಳಿಕೊಳ್ಳಬೇಕು. ಸ್ಮರಣ ಸಂಚಿಕೆಗಳ ಓದುಗವರ್ಗ ಬಹಳ ಸೀಮಿತವಾದದ್ದು. ಹಾಗಾಗಿ ಈ ಬರಹಗಳನ್ನು ಕರ್ನಾಟಕದ ಸಾಮಾನ್ಯ ಜನ ಓದುತ್ತಾರೋ ಇಲ್ಲವೋ ಎಂದು ಬರಹಗಾರರು ತಲೆಕೆಡಿಸಿಕೊಳ್ಳುತ್ತಿದ್ದರೆಂಬ ನಂಬಿಕೆಯಾಗಲೀ, ಅನುಮಾನವಾಗಲೀ ನನಗಿಲ್ಲ. ಅಮೆರಿಕಾಕ್ಕೆ ಮಗನ ಮನೆಗೋ, ಮಗಳ ಬಾಣಂತನಕ್ಕೋ ಬಂದ ಕನ್ನಡ ಸಾಹಿತಿಗಳು ಕನ್ನಡ ಸಂಘಗಳ ಕಾರ್ಯಕ್ರಮಗಳಿಗೆ ಬಂದಾಗ ತಮ್ಮ ಮ್ಯಾಗಝೀನುಗಳನ್ನು, ಬರಹಗಳನ್ನು ತೋರಿಸಿ, ಓದಿ ಹೇಳಿ ಅವರ ಅಭಿಪ್ರಾಯ ಕೇಳಲಾಗುತ್ತಿತ್ತು. ಆ ಕನ್ನಡ ಲೇಖಕರು 'ಒಳ್ಳೆಯ ಪ್ರಯತ್ನ, ಹೀಗೇ ಮುಂದುವರೆಸಿ' ಎಂದೋ, 'ಇಲ್ಲಿದ್ದುಗೊಂಡು ನೀವು ಇಷ್ಟು ಕನ್ನಡದಲ್ಲಿ ಬರೆಯುತ್ತೀರಲ್ಲ, ಅದನ್ನು ಮೆಚ್ಚಬೇಕು' ಎಂದೋ ಯಾವಾಗಲೂ ಪ್ರೋತ್ಸಾಹದಾಯಕವಾಗಿಯೇ ಮಾತಾಡುತ್ತಿದ್ದರು. ಒಟ್ಟಾರೆ 'ಅಮೆರಿಕಾದಲ್ಲಿ ಕೂತು ಕನ್ನಡದಲ್ಲಿ ಬರೆಯುವ ಮಂದಿ' ಎನ್ನುವ ಒಂದು ಗುಂಪು ಬೇಕೋ, ಬೇಡವೋ, ಶುರುವಾಯಿತು. ಇಲ್ಲಿ ಲೇಖಕರಿಗೆ ದೊರೆತದ್ದು ಪ್ರೋತ್ಸಾಹವೇ ಹೊರತು ವಿಮರ್ಶೆಯಲ್ಲ. ಬಂದವರೆಲ್ಲ 'ಹೀಗೇ ಮುಂದುವರೆಸಿ' ಎಂದರೇ ಹೊರತು ಯಾರೂ ಬರಹಗಾರರ ಮಿತಿಯನ್ನು ಕುರಿತು ಕಟುವಾಗಿ ಹೇಳಲಿಲ್ಲ. ಹಾಗಾಗಿ ಬರವಣಿಗೆ ಮುಂದುವರಿಯಿತು.

ನಂತರ ಈ ಬರಹಗಳು ಪುಸ್ತಕರೂಪದಲ್ಲಿ ಪ್ರಕಟವಾಗುವ ಕ್ರಿಯೆ ಪ್ರಾರಂಭವಾಯಿತು. ಪುಸ್ತಕರೂಪಕ್ಕೆ ಬಂದಾಕ್ಷಣ ಅಲ್ಲಿಯವರೆಗೆ ಸ್ಥಳೀಯವಾಗಿದ್ದ ಈ ಚಟುವಟಿಕೆ ಸೀಮೋಲ್ಲಂಘನ ಮಾಡಿತು. ಅಂದರೆ ತಾವು ಬರೆದ ಪುಸ್ತಕಕ್ಕೆ ಕನ್ನಡದ

ಓದುಗರು ಯಾವ ರೀತಿ ಪ್ರತಿಕ್ರಿಯಿಸಬಹುದು ಎಂದು ತಿಳಿದುಕೊಳ್ಳುವ ಆಸೆಯೂ ಸಹಜವಾಗಿ ಹೆಚ್ಚಿತು. ಕರ್ನಾಟಕದಲ್ಲಿ ಪುಸ್ತಕ ಬಿಡುಗಡೆಯಾಗಲು ಶುರುವಾಯಿತು. ಈ ಬೆಳವಣಿಗೆ ಒಟ್ಟಾರೆ ಕನ್ನಡ ಪುಸ್ತಕ ಮುದ್ರಣದಲ್ಲಾದ ಬದಲಾವಣೆಯನ್ನು ಅನುಕರಿಸಿತು ಎನ್ನುವುದನ್ನೂ ನಾವು ಗಮನಿಸಬೇಕು. ಮುದ್ರಣಕ್ರಾಂತಿಯಿಂದ ಕನ್ನಡದಲ್ಲಿ ಇಂದು ಪುಸ್ತಕ ಪ್ರಕಟಣೆ ಬಹಳ ಸುಲಭವಾಗಿ ಹೋಗಿದೆ. ಹಾಗೆಯೇ ಪುಸ್ತಕದ ಮಾರುಕಟ್ಟೆ, ವಿತರಣೆ ಇವುಗಳಲ್ಲಾಗಿರುವ ಬದಲಾವಣೆಯಿಂದ ಓದುಗರೇ ಇಲ್ಲದಿದ್ದರೂ ಒಬ್ಬ ಲೇಖಕ ತನ್ನ ಪುಸ್ತಕಗಳನ್ನು ಪ್ರಕಟಿಸಬಹುದು. ಪ್ರತಿಪುಸ್ತಕಕ್ಕೊಂದು ಬಿಡುಗಡೆಯ ಸಂಭ್ರಮ. ಹಾಗಾಗಿಯೇ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಪ್ರತಿ ಭಾನುವಾರ ಬಿಜಿ.

ಇದಲ್ಲದೆ ಅಂತರ್ಜಾಲ, ಬ್ಲಾಗ್ ಬರವಣಿಗೆಗಳು, ಈ ರೀತಿಯ ಪ್ರಕಟಣಾ ಮಾಧ್ಯಮಗಳು ಜಾಸ್ತಿಯಾದ ಹಾಗೆ, ಮಹತ್ವಾಕಾಂಕ್ಷೀ ಬರಹಗಾರರ ಸಂಖ್ಯೆ ಓದುಗರ ಸಂಖ್ಯೆಗಿಂತ ಹೆಚ್ಚಾಗುತ್ತಾ ಹೋಯಿತು. ಇದು ಪ್ರಾಯಶಃ ಬರಹ ಮಾತ್ರ ಅಲ್ಲ, 2013ರಲ್ಲಿ ಎಲ್ಲ ಚಟುವಟಿಕೆಗಳಿಗೂ ಅನ್ವಯಿಸುತ್ತದೆ. ಸಾಮಾಜಿಕ ಜಾಲತಾಣಗಳು, ಯುಟ್ಯೂಬ್‌ನಂಥ- ನಿಮ್ಮ ವಿಡಿಯೋವನ್ನು ನೀವೇ ತೆಗೆದು ಜಗತ್ತಿಗೆ ತೋರಿಸಬಹುದಾದ- ಮಾಧ್ಯಮಗಳಿರುವಾಗ ಜನರ ನಾರ್ಸಿಸಿಸಮ್ ಇನ್ನೂ ಹೆಚ್ಚತೊಡಗಿದೆ. ಮನೆಯಲ್ಲಿ ಮಾಡಿದ ಅಡುಗೆ, ಹೊಸವರ್ಷದ ಮುನ್ನಾದಿನದಂದು ಆತ್ಮೀಯ ಪಾರ್ಟಿಯಲ್ಲಿ ಮಾಡಿದ ನೃತ್ಯ, ಸುಮ್ಮನೆ ಗುನುಗುನಿಸಿದ ಕಿಶೋರ್‌ಕುಮಾರನ ಹಾಡು- ಯಾವುದೂ ಖಾಸಗಿಯಾಗಿ ಉಳಿದಿಲ್ಲ. ಫೇಸ್‌ಬುಕ್‌ನ ಸಿಇಓ ಮಾರ್ಕ್ ಝಕರ್ಬರ್ಗ್ ಒಂದೆಡೆ ಹೇಳುವಂತೆ 'Social networking exploits and satisfies people's voyeuristic and narcissistic needs simultaneously. ಸಾಹಿತ್ಯದಲ್ಲಿಯೂ ಸಹಜವಾಗಿ ಬರೆದುದನ್ನು ಪ್ರಕಟಿಸಲೇಬೇಕೆಂಬ ಹಂಬಲ ಇರುವುದು ತಪ್ಪೇನಲ್ಲ. ಆದರೆ, ಪ್ರಕಟಿತ ಬರಹಗಳಿಗೆ ವಿಮರ್ಶೆ, ಪ್ರತಿಕ್ರಿಯೆ ಬರುವುದು ಫೇಸ್‌ಬುಕ್ಕಿನ ಪೋಸ್ಟಿಂಗಿಗೆ 'ಲೈಕ್ ಇಟ್' ಬರುವಷ್ಟು ಸುಲಭವಲ್ಲ. ಅಷ್ಟು ಸುಲಭವಾಗಿ ತೃಪ್ತವಾಗುವ ನಾರ್ಸಿಸಿಸ್ಟಿಕ್ ಹಂಬಲವಲ್ಲ.

ಸ್ವಲ್ಪ ದಿನಗಳಾದ ನಂತರ ಕಾಲಘಟ್ಟಕ್ಕನುಗುಣವಾಗಿ ಪ್ರಕಟವಾದ ಪುಸ್ತಕಗಳಿಗೆ ಸಹಜವಾಗಿ ಓದುಗರಿಂದ ಮತ್ತು ವಿಮರ್ಶಕರಿಂದ ಪ್ರತಿಕ್ರಿಯೆಗಳು ಬರುತ್ತಾ ಹೋದವು. ಇವು ವಸ್ತುನಿಷ್ಠವೋ, ವ್ಯಕ್ತಿನಿಷ್ಠವೋ ಹೇಳುವುದು ವಿಮರ್ಶಕರಿಗೂ, ಬರಹಗಾರರಿಗೂ ಕಷ್ಟವಾಗತೊಡಗಿತು. ಪುಸ್ತಕಕ್ಕೆ ಕೆಲವೊಮ್ಮೆ 'ಬೆಚ್ಚಗಿನ' ಪ್ರತಿಕ್ರಿಯೆಗಳು ಬಂದಾಗ ಹೊರನಾಡ ಕನ್ನಡಿಗರು- 'ನಾವಿಲ್ಲಿದ್ದುಕೊಂಡು ಇಷ್ಟು ಬರೆಯುತ್ತಿರುವುದೇ ಹೆಚ್ಚು. ನಾವೇನೂ ಅಲ್ಲಿರುವವರ ಹಾಗೆ ಬರೆಯಬೇಕಾಗಿಲ್ಲ. ನಮ್ಮನ್ನು ಕನ್ನಡದ ಮುಖ್ಯವಾಹಿನಿಯ ಬರಹಗಾರರ ಜತೆ ಹೋಲಿಸುವುದೇ ತಪ್ಪು' ಎಂದು ಸಮಜಾಯಿಷಿ

ಕೊಟ್ಟುಕೊಂಡರು. ಇದನ್ನೊಪ್ಪದ ಇನ್ನೂ ಕೆಲವರು 'ನಾವು ಯಾರಿಗೇನು ಕಡಿಮೆ? ನಮಗೆ 'ಹೊರನಾಡ ಕನ್ನಡಿಗರು' ಅನ್ನುವ ಹಣೆಪಟ್ಟಿ ಹಾಕಬೇಡಿ' ಎಂದು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೇಳಿಕೊಂಡರು. ಕರ್ನಾಟಕದ ಸಾಹಿತಿಗಳು 'ನಾವು ಹಾಗೆ ಅಂದುಕೊಂಡೇ ಇಲ್ಲವಲ್ಲ. ಹಾಗೆ, ನಿಮ್ಮನ್ನು ನೀವು ಕರಕೊಳ್ಳುವುದಕ್ಕೆ ನಿಮಗೇ ಇಷ್ಟ. ಅದೇ ನಿಮಗೆ ಒಂದು ಐಡೆಂಟಿಟಿಯನ್ನು ಕೊಡುವುದು.' ಎಂದರು. ಆದರೂ ಇದೇ ಸಾಹಿತಿಗಳು ನಮ್ಮಗಳ ಪುಸ್ತಕದ ಬಗ್ಗೆ ಮಾತಾಡುವಾಗ, ಮುನ್ನುಡಿ, ಬೆನ್ನುಡಿ ಬರೆಯುವಾಗ, 'ಅಮೆರಿಕಾದಲ್ಲಿದ್ದೂ ಕನ್ನಡದಲ್ಲಿ ಬರೆಯುವ' 'ಹೊರನಾಡ ಕನ್ನಡದ ಕ್ರಿಯಾಶೀಲ ಮನಸ್ಸು' ಎಂದೆಲ್ಲಾ ಬರೆದರು. ಆದರೆ, ನಿಜವಾದ ಸಂಗತಿಯೇನೆಂದರೆ, ಈ ರೀತಿಯ ಪ್ರತ್ಯೇಕತೆ ಇಬ್ಬರಿಗೂ ಇಷ್ಟವೇನೋ ಅನ್ನಿಸುತ್ತದೆ. ಇದೇ ಇಬ್ಬರನ್ನೂ ಏಕಕಾಲದಲ್ಲಿ ಹತ್ತಿರವಿಡುವ ಹಾಗೂ ದೂರವಿಡುವ ಸಂಗತಿಯೇನೋ ಎಂದನಿಸುತ್ತದೆ.

ಇಲ್ಲಿ ಎರಡು ರೀತಿಯ disconnect ಎದ್ದು ಕಾಣುತ್ತದೆ. ಕನ್ನಡ ನಾಡಿನಿಂದ ಹೊರಗಿರುವ ನಾವು ಕನ್ನಡದ ಸಂಸ್ಕೃತಿಯನ್ನು ವರ್ತಮಾನದಲ್ಲಿ ಜೀವಂತವಾಗಿ ಅನುಭವಿಸುತ್ತಾ ಇಲ್ಲ. ಹಾಗೆಯೇ ನಾವು ಬರೆಯುವುದನ್ನು ಓದುತ್ತಿರುವ ಓದುಗ ನಮ್ಮ ಸಂಸ್ಕೃತಿಯನ್ನು, ಪ್ರಪಂಚವನ್ನು ನೇರವಾಗಿ ಅನುಭವಿಸಿಲ್ಲ. ಹೊರಗಿನ ವಾಸ-ನೆಲ, ಸಂಸ್ಕೃತಿ, ಬರವಣಿಗೆಯ ವಸ್ತು, ಇವೆಲ್ಲದರ ಹೊರತಾಗಿಯೂ ಭಾಷೆಯಲ್ಲಿ, ತಂತ್ರದಲ್ಲಿ ಕೂಡ ಒಂದು ಖಂಡಾಂತರವನ್ನು ರೂಢಿಗೊಳಿಸಿಕೊಂಡುಬಿಟ್ಟಿರುತ್ತದೆ. ಹಾಗಾಗಿಯೇ ಎ.ಕೆ. ರಾಮಾನುಜನ್‌ರ ಭಾಷಾಂತರದಲ್ಲಿ 'ಸನ್ಯಾಸಿಯ ಕೌಪೀನ'ವು Hermit's G-string ಆಗುವುದು. ಇದರ ಜೀವಂತ ಪರಿಚಯವಿರದ ಕನ್ನಡದ ಓದುಗರಿಗೆ, ಹೊರಗಿನಿಂದ ಬರುವ ಸಾಹಿತ್ಯ 'ಹೊರಗಿನ ಬೆರಗ'ನ್ನು ತೋರಿಸುವುದಕ್ಕಷ್ಟೇ ಸೀಮಿತವಾಗಿಬಿಡುತ್ತದೆ. ಆದರೆ, ಓದುಗನಿಗೆ ಅರ್ಥವಾಗಿರದ ಅಂಶವೇನೆಂದರೆ, ಆತ ಓದುತ್ತಿರುವ ಈ ಬೆರಗು 'ಬರಹಗಾರನ ಬೆರಗು' ಕೂಡ. ಯಾಕೆಂದರೆ, ಇಲ್ಲಿ ಕೆಲಸ ಮಾಡುತ್ತಿರುವ ಮೂಲ ಮನಸ್ಸು ಕನ್ನಡದ್ದೇ. ಆದರೆ ಈ ಬೆರಗಿನಲ್ಲಿ ಸಾಮಾನ್ಯ ಕನ್ನಡ ಓದುಗ ಬಯಸುವ ಕನ್ನಡದ 'ಫೀಲ್ ಗುಡ್' ಅಂಶಗಳು ಕಡಿಮೆ.

ಬಹುತೇಕ ಹೊರಗಿನ ಬರಹಗಾರರ ಬಹುದೊಡ್ಡ ಮಿತಿಯೆಂದರೆ, ಕನ್ನಡದ ವರ್ತಮಾನದ ಸಾಹಿತ್ಯ, ಸಂಸ್ಕೃತಿ, ಸಿನೆಮಾಗಳ ಬಗ್ಗೆ ಇರುವ ಅಜ್ಞಾನ, ಅವಜ್ಞೆ. ಹಾಗೆಯೇ, ಈ ಬರಹಗಾರ ತನ್ನ ಸಾಹಿತ್ಯದ ಪರಿಕರಗಳಿಗೆ, ಕಸಬುದಾರಿಕೆಗೆ ಸ್ಫೂರ್ತಿ ಪಡಕೊಳ್ಳಬಲ್ಲ ಸಮಕಾಲೀನ ಇಂಗ್ಲಿಷ್ ಪ್ರಪಂಚದ ಬಗ್ಗೆ ಕನ್ನಡದ ಓದುಗರಿಗೂ ಒಂದು ಬಗೆಯ ತಿರಸ್ಕಾರದ ಧೋರಣೆಯಿದೆ. ಪರಸ್ಪರರ ವರ್ತಮಾನದ ಪರಿಚಯದ ಮಿತಿ ಇಲ್ಲಿನವರ ಓದನ್ನು ಕುವೆಂಪು, ಕಾರಂತ, ಪುತಿನರಿಗೆ ನಿಲ್ಲಿಸಿದರೆ, ಇನ್ನೊಬ್ಬರನ್ನು ಕಾಫ್ಕಾ, ಕಾಮು, ಹೆಮಿಂಗ್ವೇ, ಎಡ್ವರ್ಡ್ ಸೈದ್, ಎರಿಕ್ ಫ್ರಾಂಗಳಿಗೆ ನಿಲ್ಲಿಸುತ್ತದೆ. ಇಲ್ಲಿನವರಿಗೆ ಮೊಗಳ್ಳಿ, ಅಮರೇಶ, ಜಯಂತ, ವಿವೇಕ, ಸುನಂದಾ, ಸುಮಂಗಲಾ, ವಸುಧೇಂದ್ರ

ಅಥವಾ ಕನ್ನಡದ ಓದುಗರಿಗೆ ಕಿರಣ್ ದೇಸಾಯಿ, ಹರಿ ಕಂಜ್ರು, ಸುಕೇತು ಮೆಹತಾ, ರಶ್ದೀ, ಚಿತ್ರಾ, ಜಂಪಾ ಲಹಿರಿ, ಪಮುಕ್ ಯಾರೂ ಪ್ರಸ್ತುತ ಎಂದೇ ಅನ್ನಿಸುವುದಿಲ್ಲ.

ಇಲ್ಲಿರುವ ಅನೇಕ ಕ್ರಿಯಾಶೀಲ ಕನ್ನಡ ಮನಸ್ಸುಗಳ ಪ್ರಾಮಾಣಿಕತೆಯನ್ನು, ಕನ್ನಡದ ಬಗ್ಗೆ ಅವರಿಗಿರುವ ಕಾಳಜಿಯನ್ನು ಕುರಿತು ನಾನು ಮಾತನಾಡುತ್ತಿಲ್ಲ. ಅವುಗಳ ಬಗ್ಗೆ ನನಗೆ ಅನುಮಾನ ಖಂಡಿತಾ ಇಲ್ಲ. ವೈಯಕ್ತಿಕ ನೆಲೆಯಲ್ಲಿ ಎಷ್ಟೋ ಜನ ಅನೇಕ ಒಳ್ಳೆಯ ಪುಸ್ತಕಗಳನ್ನೂ ಕೊಟ್ಟಿದ್ದಾರೆ.

ನನಗೆ ಅನುಮಾನವಿರುವುದು ಒಂದೇ. ನಾವೆಲ್ಲ ಸೇರಿ 'ಅಮೆರಿಕಾ ಕನ್ನಡಿಗರ ಬರಹ' ಎಂದು ಒಂದು ಗುಂಪಿನ ನಾಮಾಂಕಿತದಡಿ ಬರೆಯುವುದು. ಕನ್ನಡದ ಶ್ರೇಷ್ಠ ಕಾದಂಬರಿಗಳ ಬಗ್ಗೆ ಒಂದು ಪುಸ್ತಕ ಮಾಡಲು ನಾವು ನಿರ್ಧರಿಸುತ್ತೇವೆ. ಈ ರೀತಿಯ ಒಂದು ಪುಸ್ತಕವನ್ನು ನಾವು ಪ್ರಕಟಿಸುತ್ತಿದ್ದೇವೆ ಎಂಬ ಒಂದೇ ಕಾರಣಕ್ಕೆ ಹತ್ತು ಹದಿನೈದು ವರ್ಷದಿಂದ ಒಂದೇ ಒಂದು ಕನ್ನಡ ಕಾದಂಬರಿಯನ್ನೂ ಓದದ ನಾವು ಇದ್ದಕ್ಕಿದ್ದ ಹಾಗೆ ಕಾದಂಬರಿಯನ್ನು ತರಿಸಿ, ಓದಿ ಬರೆಯುತ್ತೇವೆ. ಈ ರೀತಿ ಒಂದು ಕಾದಂಬರಿಯ ಜತೆಗೆ ಸಂವಾದಿಸಲು ನಮ್ಮಿಂದ ಆಗುತ್ತದೆಯಾ ಇಲ್ಲವಾ ಎಂದು ನಾವು ಯೋಚಿಸಲು ಹೋಗುವುದಿಲ್ಲ. ನಮ್ಮ ಅರ್ಹತೆ, ನಾವು ಅಮೆರಿಕಾದಲ್ಲಿರುವುದು. ನಾವು ಅಮೆರಿಕಾದಲ್ಲಿ ಇದ್ದೇವೆ ಎಂದು ಬೇರೆ ರೀತಿಯಲ್ಲಿ ಪ್ರತಿಕ್ರಿಯಿಸುತ್ತೀವಾ?

ಕಲೆಯೆಂಬುದು ಖಾಸಗಿ ನೆಲೆಯನ್ನು ತೊರೆದು ಸಾಂಘಿಕ ಚಟುವಟಿಕೆಯಾದಾಗ ಈ ಎಲ್ಲದರ ಬಗ್ಗೆ ನಮ್ಮ ತಲೆಕೆಡಿಸಿಕೊಳ್ಳಬೇಕಾಗುತ್ತದೆ. ತಂಪಾಡಿಗೆ ತಾವು ಬರೆಯುತ್ತಿರುವವರಿಗೆ ಇಂಥಾ ಪುಸ್ತಕಕ್ಕೆ ಏನಾದರೂ ಬರೆದುಕೊಡಿ ಎಂದು ಕೇಳಿದಾಗ ಆ ಪುಸ್ತಕದ ಆಶಯವೇನು? ಒಟ್ಟಾರೆ ಆಶಯವನ್ನು ನನ್ನ ಈ ಲೇಖನ ಹಾನಿಮಾಡುವುದಿಲ್ಲವಷ್ಟೆ ಎಂದೆಲ್ಲ ಯೋಚಿಸಬೇಕಾಗುತ್ತದೆ. ಇದು ನಾವೆಲ್ಲ ಕೂಡಿ ಮಾಡಬೇಕಾದ ಕೆಲಸವಾದ್ದರಿಂದ ಈ ಆಶಯವನ್ನು ನನ್ನಿಂದ ಪೂರೈಸಲಾಗುವುದೋ ಇಲ್ಲವೋ ಎಂದು ನಾವು ಯೋಚಿಸುವ ಹಾಗೂ ಇಲ್ಲ. ವಿಮರ್ಶೆಯೋ, ಸಣ್ಣಕಥೆಯೋ, ಪ್ರಬಂಧವೋ ಒಟ್ಟಾರೆ ಇದು ನನ್ನ ಪ್ರಕಾರ ಹೌದೋ ಅಲ್ಲವೋ ಎನ್ನುವುದನ್ನೂ ಯೋಚಿಸದೇ ಈ ಪುಸ್ತಕ ನಮ್ಮೆಲ್ಲರನ್ನೂ ಪ್ರತಿನಿಧಿಸುತ್ತಿರುವುದರಿಂದ ನಾನೂ ಬರೆಯಲೇಬೇಕು ಎಂಬ ಮಾಫ್ಲಿಯೊಂದಿಗೆ ಬರೆದೇಬಿಡುತ್ತೇವೆ. ನಮ್ಮಲ್ಲಿ ಇನ್ನೂ ಕೆಲವರು, 'ನಾನು ವೃತ್ತಿಪರ ಬರಹಗಾರನಲ್ಲ. ಇದು ಗೊತ್ತಿದ್ದೂ ಕೇಳುತ್ತಿದ್ದಾರೆ ಅಂದರೆ ನನ್ನಲ್ಲಿ ಏನೋ ಇದೆ ಅನ್ನುವುದನ್ನು ಇವರುಗಳು ಗುರುತಿಸಿದ್ದಾರೆ, ಆದ್ದರಿಂದ ಬರೆಯಲೇಬೇಕು' ಎಂದು ಬರೆದುಬಿಡುತ್ತೇವೆ.

ನನಗನ್ನಿಸುವುದು ಅಮೆರಿಕಾ ನಮ್ಮ ಸೃಜನಶೀಲ ಸಾಹಿತ್ಯದ ಸೃಷ್ಟಿಗೆ ವಿಶಿಷ್ಟವಾದ ಸ್ಫೂರ್ತಿಯಾಗಬೇಕು, ರೂಪಕವಾಗಬೇಕು, ಒಂದು ಪಾತ್ರವಾಗಬೇಕು. ನಿಜ, ಒಪ್ಪುತ್ತೇನೆ. ನಮ್ಮ ಬೇರೆ ಬೇರೆ ಹಿನ್ನೆಲೆ, ಈ ದೇಶ ಮತ್ತು ನಮ್ಮ ವೃತ್ತಿಗಳು ನಮಗೆ ಕೊಟ್ಟ ಅನುಭವ

ವಿಶಿಷ್ಟವಾದದ್ದು. ಈ ಅನುಭವಗಳ ಬೆಳಕಿನಲ್ಲಿ ನಮ್ಮ ಶ್ರೇಷ್ಠ ಸಾಹಿತ್ಯ ಕೃತಿಗಳ ಜತೆ ಬೇರೆ ನಿಟ್ಟಿನಲ್ಲಿಯೇ ಒಂದು ಸಂವಾದ ಸಾಧ್ಯವಾದಲ್ಲಿ ಆಗ ಈ ನಮ್ಮ ಪ್ರತಿಕ್ರಿಯೆಗಳು ಅರ್ಥಪೂರ್ಣವಾಗುತ್ತವೆ.

ಒಂದು ಸತ್ಯವೇನೆಂದರೆ, ಕನ್ನಡದ ವಿಮರ್ಶಕರಿಂದ ಹೊರನಾಡ ಗುಂಪಿನ ಬರವಣಿಗೆಗೆ ನಿಜವಾಗಿಯೂ ಸಿಕ್ಕಿರುವುದು ಒಂದಿಷ್ಟು ಕರುಣೆ, ಪ್ರೀತಿ, ಅಯ್ಯೋ–ಪಾಪ, ಮತ್ತು ರಿಯಾಯಿತಿ. 'ಅಕ್ಕ' ಸಮ್ಮೇಳನಕ್ಕೆ ಬಂದ ನಿಸಾರರು 'ನಿಮ್ಮೊಳಗಿದ್ದೂ ನಿಮ್ಮಂತಾಗದೇ' ಪದ್ಯ ಓದಿದಾಗ ಅನೇಕ ಅಮೆರಿಕನ್ನಡಿಗರು ಅದು ತಮ್ಮ ಸಂದರ್ಭಕ್ಕೆ ಬಹಳ ಪ್ರಸ್ತುತವೆಂದು ತಲೆದೂಗಿದರು. ಬರಗೂರರು 'ಕರ್ನಾಟಕ ನಿಮ್ಮ ಚರಿತ್ರೆ, ಅಮೆರಿಕ ನಿಮ್ಮ ಭೂಗೋಳ' ಎಂದಾಗ ಚಪ್ಪಾಳೆ ಹೊಡೆದರು. ಇನ್ನು ಗಂಭೀರ ಸಾಹಿತ್ಯಿಕ ಚಟುವಟಿಕೆಗಳಿಗಾಗಿಯೇ ಇರುವ ಒಂದೆರಡು ಸಂಘಟನೆಗಳ ಸಮಾರಂಭಗಳಿಗೆ ಬಂದ ಕನ್ನಡದ ಸಾಹಿತಿಗಳೇನಕರು ಈ ಬಗ್ಗೆ ಕೆಲವು 'ಒಳನೋಟ'ಗಳನ್ನು ಬಹಳ ಸೂಕ್ಷ್ಮವಾಗಿ, ಸೂಚ್ಯವಾಗಿ ಗಮನಿಸಿದ್ದರೂ 'ಆನ್ ದ ರೆಕಾರ್ಡ್' ಏನೂ ಆಗಿಲ್ಲ. ಈ ಅಸಾಹಿತ್ಯಿಕ ಭಾವನಾತ್ಮಕ ಪದರುಗಳನ್ನು, ತಂತುಗಳನ್ನು ಬಿಟ್ಟು 'ಹೊರಗಿನ' ಕೃತಿಯ ಒಳವಿಮರ್ಶೆಯಾದರೆ ಆಗ ಇಂಥ ಬರವಣಿಗೆಗಳಿಗೆ ಒಂದು ಅರ್ಥ ಬರುತ್ತದೆ. ಅಲ್ಲಿಯತನಕ, ನಾವು ಹೊರಗೆ ಕೂತು ಬರೆಯುತ್ತಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ಯಾವ ಅರ್ಥವೂ ಇಲ್ಲ.

ಇಲ್ಲಿ ಕನ್ನಡದ ಓದುಗನಿಗೆ, 'ನೀನು ಕಿರಣ್ ದೇಸಾಯಿಯ The inheritance of Loss ಓದಿದ್ದರೆ ಹೊರನಾಡ ಬರಹ ಅಥವಾ ನಾವು ಬರೆಯುತ್ತಿರುವ ಪ್ರಪಂಚದ ಅರಿವು ಇನ್ನೂ ಚೆನ್ನಾಗಿ ಆಗುತ್ತಿತ್ತು' ಎಂದು ಹೇಳುವುದು ಮೂರ್ಖತನವಾಗುತ್ತದೆ. ಕನ್ನಡದ್ದಲ್ಲದ ಪ್ರಪಂಚವನ್ನು ಕನ್ನಡಕ್ಕೆ ತರುವಾಗ (ಅದು ನೇರ ಅನುವಾದವಾಗಿಲ್ಲದಿರುವಾಗ), ನ್ಯೂಯಾರ್ಕಿನಲ್ಲಿ ಆಗುತ್ತಿರುವ ಡೇ ಟ್ರೇಡಿಂಗ್ ಕಥೆಯನ್ನು ಸಿದ್ಧಾಪುರದ ಸಂತೆಯಲ್ಲಿ ಆಗುತ್ತಿರುವ ದನದ ವ್ಯಾಪಾರದ ವಿವರದಂತೆ ಹೇಳಬೇಕಾದಾಗ, ಬರಹಗಾರ ಎದುರಿಸುವ ಸವಾಲು ಕೇವಲ ಇಂಗ್ಲಿಷಿನಲ್ಲಿ ಯೋಚಿಸಿ ಕನ್ನಡದಲ್ಲಿ ಬರೆಯುವುದಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಅದು ಬಹಳ ಜಟಿಲವಾದದ್ದು ಮತ್ತು ಕೇವಲ ದೇಶಭಾಷೆಗಳಿಗಿರುವ ಸವಾಲು. ಅದನ್ನು ಸಾಧಿಸುವಲ್ಲಿ 'ಅನಿವಾಸಿ' ಬರವಣಿಗೆಯ ಯಶಸ್ಸಿದೆ.

ಸುಕೇತು ಮೆಹತಾ ತನ್ನ 'ಮ್ಯಾಕ್ಸಿಮಮ್ ಸಿಟಿ'ಯಲ್ಲಿ ಹೇಳುತ್ತಾನೆ, 'ನನಗೆ ದೇಶಭಕ್ತಿ, ರಾಷ್ಟ್ರೀಯತೆ ಮತ್ತು ಈ ಎನ್.ಆರ್.ಐ.ಗಳೆಂಬ ಪದಗಳ ಮೇಲೆಯೇ ವಿಶ್ವಾಸವಿಲ್ಲ. ನ್ಯೂಯಾರ್ಕಿನ ನನ್ನ ಅಪಾರ್ಟ್‌ಮೆಂಟಿನ ಎದುರಿಗಿರುವ ಪಾಕಿಸ್ತಾನಿ,

ಗುಜರಾತಿನಲ್ಲಿರುವ ನನ್ನ ದೊಡ್ಡಪ್ಪನ ಮಕ್ಕಳಿಗಿಂತಾ ನನಗೆ ಹೆಚ್ಚು ಆಪ್ತನಾಗುತ್ತಾನೆ. ಈ ಕಾಲ ಹೇಗಿದೆ ಎಂದರೆ, ವಾರಾಂತ್ಯದಲ್ಲಿ ಪ್ಯಾರಿಸ್ಸಿನಲ್ಲಿ ನಡೆಯುವ ನನ್ನ ಚಿಕ್ಕಪ್ಪನ ಮಗಳ ಮದುವೆ ಮುಗಿಸಿಕೊಂಡು, ಭಾನುವಾರ ರಾತ್ರಿ ಪಿಕಡಿಲಿಯಲ್ಲಿ ಊಟ ಮಾಡಿಕೊಂಡು ಸೋಮವಾರ ಬೆಳಿಗ್ಗೆ ಮತ್ತೆ ನನ್ನ ಮಗನ ಶಾಲೆಯಲ್ಲಿರುವ ಮೀಟಿಂಗಿಗೆ ಹೋಗುತ್ತೇನೆ. ಇದು ಕಷ್ಟವೇ ಅಲ್ಲ.' ಈತನದೊಂದು ಬಹಳ ವರ್ಣರಂಜಿತ ವ್ಯಕ್ತಿತ್ವ. ಈತ ಹುಟ್ಟಿದ್ದು ಬಾಂಬೆಯಲ್ಲಿ (ಮುಂಬಯಿ ಎಂದು ಈಗಲೂ ಆತ ಕರೆಯುವುದಿಲ್ಲ). ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಈತ ನ್ಯೂಯಾರ್ಕಿಗೆ ವಲಸೆ ಹೋದ. ಅವರ ಕುಟುಂಬದ್ದು ದೊಡ್ಡ 'ವಜ್ರದ ವಹಿವಾಟು'. ಆದರೆ, ಈತನನ್ನು ಆಕರ್ಷಿಸಿದ್ದು, ಜರ್ನಲಿಸಮ್. ಬಾಂಬೆ ಸ್ಫೋಟಿಸಿದಾಗ ಬಾಂಬೆಗೆ ಬಂದು ನ್ಯೂಯಾರ್ಕ್ ಟೈಮ್ಸಿಗೆ ಒಂದು ಲೇಖನ ಬರೆದ. ನಂತರ ಯಾರೋ ಈತನನ್ನು ಬಾಂಬೆಯ ಬಗ್ಗೆ ಒಂದು ಪುಸ್ತಕ ಬರೆಯಲು ಪ್ರಾಯೋಜಿಸಲು ಸಿದ್ಧವಾದರು. ಈ ಪುಸ್ತಕವೇ 'ಮ್ಯಾಕ್ಸಿಮಮ್ ಸಿಟಿ' ನಾನು ಓದಿರುವುದರಲ್ಲೆಲ್ಲಾ ಒಂದು ನಗರದ ಬಗ್ಗೆ ಬರೆದ ಒಂದು ಉತ್ತಮ ಪುಸ್ತಕವಿದು. ಅದರಲ್ಲಿ ಆತ ಬರೆದುಕೊಳ್ಳುತ್ತಾನೆ. 'ಬಾಂಬೆ ಬಿಟ್ಟಮೇಲೆ, ನ್ಯೂಯಾರ್ಕಿನಿಂದ ಬಾಂಬೆಗೆ ವಾಪಸ್ಸಾಗುವುದು ನನಗೆ ಎಷ್ಟು ಮುಖ್ಯವೋ, ನ್ಯೂಯಾರ್ಕಿಗೆ ವಾಪಸ್ಸು ಹೋಗುವುದೂ ನನಗೆ ಅಷ್ಟೇ ಮುಖ್ಯ. ಈ ಮಾನವ ನಿರ್ಮಿತ ಭೌಗೋಲಿಕ ಬೇಲಿಗಳ ಬಗ್ಗೆ ನನಗೆ ನಂಬಿಕೆಯಿಲ್ಲ. ನಾನೊಬ್ಬ ಜಾಗತಿಕ ಪ್ರಜೆ.'

ಹಾಗೆಯೇ ಬರವಣಿಗೆಗೂ ಇದು ಅನಿವಾಸಿ ಬರಹ ಎಂಬ ಬೇಲಿಯಿರಬಾರದು. ಆ ಬೇಲಿಯ ಒಳಗೆ ನಾವು ಸುರಕ್ಷರಾಗಿದ್ದೀವಿ ಎನ್ನುವುದು ತಪ್ಪು ಕಲ್ಪನೆ, ಅದು ನಾವು ಹಾಕಿಕೊಂಡರೂ ಕೆಲಕಾಲದ ನಂತರ ನಾವು ದಾಟಲಾಗದ ಬೇಲಿಯಾಗುತ್ತದೆ. ಕನ್ನಡದ ಅನೇಕ ಸೃಜನಶೀಲ ಮನಸ್ಸುಗಳಿಗೆ ಹನೇಹಳ್ಳಿ, ಅಗ್ರಹಾರ, ಅಂಕೋಲ, ಗೋಕರ್ಣ, ಬೆಂಗಳೂರು ಅಥವಾ ಮುಂಬಯಿ, ಇತರೇ ಊರುಗಳು ಅವರ ಕಥೆ ಘಟಿಸುವ ತಾಣ ಅಷ್ಟೇ. ಒಂದು ರೂಪಕ. ಅಮೆರಿಕಾ ಇದಕ್ಕಿಂತ ಯಾಕೆ ಭಿನ್ನವಾಗಬೇಕು? ಮನುಷ್ಯ ಸಂಬಂಧದ ಮೂಲಭೂತ ಹುಡುಕಾಟ ಕಲೆಯ ಗುರಿಯಾದಲ್ಲಿ ಅದು ಎಲ್ಲಿ ನಡೆದರೆ ಏನು? ಆ ಮಟ್ಟಿಗೆ ನಾವು ಗ್ಲೋಬಲ್ ಆಗಬಹುದೇ?

ಹಾಗೆ ನಾವೂ ಯೋಚಿಸಿದಲ್ಲಿ, 'ಎ.ಕೆ. ರಾಮಾನುಜನ್ ಮತ್ತು ಗಿರಿಯವರನ್ನು ಬಿಟ್ಟು ಅಮೆರಿಕನ್ನಡಿಗರ ಕೃತಿಗಳನ್ನು ನೋಡುವುದಾದರೆ...' ಎಂಬ ಪೀಠಿಕೆಗಳು, ವ್ಯಾಖ್ಯೆಗಳು ಬರುವುದು ಕಮ್ಮಿಯಾಗಬಹುದೇನೋ.



ಧೀರ ಉದ್ಯಮಿಯ ಬಾಳಪಯಣ

– ಇಂಗ್ಲಿಷ್ ಮೂಲ: ಬಿ.ವಿ. ಜಗದೀಶ್
ಅನುವಾದ: ಎನ್.ಆರ್. ನಾಗರತ್ನ, ನಾಗಶ್ರೀ ನಟರಾಜನ್

'ಹೊಸ ದ್ವೀಪಗಳಿಗೆ ಹೊರಟಾನಾ ಬನ್ನಿ, ಅಂದದೋ ಅಂದದ...'
ಹೃದಯ ಸಮುದ್ರ (ಬಂಗಾರ ನೀರ ಕಡಲಾಚೆಗೀಚೆ ಇದೆ ನೀಲ ನೀಲ ತೀರ...)
– ದ.ರಾ. ಬೇಂದ್ರೆ

ಈ ಬಾಳು ಸುಖ-ದುಃಖಗಳ, ಒಳ್ಳೆಯದು ಕೆಟ್ಟದರ ಹೋರಾಟಗಳಿಂದ ಕೂಡಿದ ಸುಂದರ ಪಯಣ. ಮೇಲಿನ ಕವನದಂತೆ ನಮ್ಮನಮ್ಮ ಗುರಿಯನ್ನು ಮುಟ್ಟಲು ನಾವೆಲ್ಲರೂ ಈ ಪಯಣ ಹೊರಟಿದ್ದೇವೆ. ಈ ಬಾಳ ನೌಕೆಯನ್ನು ಅಲೆಗಳ ಏರಿಳಿತಗಳ ನಡುವೆಯೂ ವಿನೀತಭಾವದಿಂದ ಯಾರು ಮುನ್ನಡೆಸಬಲ್ಲರೋ ಅವರಿಗೆ ಇದು ಉತ್ಕರ್ಷದ ಹಾದಿ. ಇದೇ ನನ್ನ ಜೀವನದ ಜ್ಞಾನದಾಹವನ್ನು ತಣಿಸಿ, ಪರಮಾನಂದವನ್ನು ನೀಡಿ ಮುನ್ನಡೆಸುತ್ತಿರುವ ಗುರು. ಹೀಗೆ ಒಮ್ಮೆ ನನ್ನ ಜೀವನದ ಕೆಲವು ತುಣುಕುಗಳನ್ನು ಹೆಕ್ಕಿ ನೋಡಿದಾಗ ಮೂಡಿದ ಪ್ರತಿಮೆಗಳು ಮತ್ತಷ್ಟು ಸುಂದರವಾಗಿ ಕಂಡವು. ಆಗ, 'ಫಲಾಪೇಕ್ಷೆ ಇಲ್ಲದೆ ಕರ್ಮವನ್ನು ಮಾತ್ರ ಮಾಡು' ಎಂಬ ಶ್ರೀಕೃಷ್ಣನ ನುಡಿಗಳು ನನ್ನ ಜೀವನದಲ್ಲಿ ಸತ್ಯವಾಗಿರುವ ಅನುಭವವನ್ನು ಕಂಡೆ.

ನನ್ನಲ್ಲಿ ಮೌಲ್ಯಗಳನ್ನು ತುಂಬಿ, ವಿದ್ಯಾವಂತನನ್ನಾಗಿ ಮಾಡಲು ಯಾವ ತ್ಯಾಗಕ್ಕೂ ಹಿಂಜರಿಯದ ತಂದೆ-ತಾಯಿಯನ್ನೂ, ಪ್ರೀತಿಯ ಅಣ್ಣತಮ್ಮಂದಿರನ್ನೂ, ಜೀವನ ಪೂರ್ತಿ ಆಧಾರಸ್ಥಂಭಗಳಾಗಿ ನಿಂತಿರುವ ಹೆಂಡತಿ-ಮಕ್ಕಳನ್ನೂ ಕರುಣಿಸಿದ ಆ ಪರಮಾತ್ಮನಿಗೆ ನಾನು ಚಿರಋಣಿ. ನನ್ನ ಬದುಕನ್ನು ಸುಂದರವಾಗಿಸಿದ ಮಹನೀಯರು ಇವರು. ಈ ಜೀವನದಿಂದ ನಾನು ಕಂಡ ಎರಡು ಮುಖ್ಯ ಪಾಠಗಳೆಂದರೆ:

1. ಯಾವುದೇ ಅಡೆತಡೆಗಳು ಬಂದರೂ ಮರಳಿ ಯತ್ನವ ಮಾಡುತ್ತಾ ಮುನ್ನಡೆಯುವುದು.
2. ಜೀವನದ ಏರುಪೇರುಗಳಲ್ಲಿ ವಿಚಲಿತನಾಗದೆ ತೊಡಕುಗಳನ್ನು ಪರಿಹರಿಸಿಕೊಳ್ಳಲು ಸತತ ಪ್ರಯತ್ನ ಮಾಡುವುದು. ಸುಖ-ದುಃಖಗಳನ್ನೂ ಲಾಭ-ನಷ್ಟಗಳನ್ನೂ ಜಯಾಪಜಯಗಳನ್ನೂ ಸಮಾನವಾಗಿ ಸ್ವೀಕರಿಸಿ ಎದುರಿಸುವುದು.

ಬೇರು ಸೂರು

25 ಪೈಸೆಗೆ ಕಲಿತ ವ್ಯಾಪಾರ ಮತ್ತು ಸಂಧಾನ

'ಬಾಗಲೂರು' ಎಂಬ ಒಂದು ಸಣ್ಣಹಳ್ಳಿಯಲ್ಲಿ ವಿದ್ಯಾವಂತರ ಮನೆತನದಲ್ಲಿ ನಾನು ಹುಟ್ಟಿದೆ. ಅದು ಬೆಂಗಳೂರಿಗೆ 30 ಕಿ.ಮೀ. ದೂರವಿದ್ದರೂ ನೀರು, ವಿದ್ಯುತ್, ಹಾಗೂ ಒಳಚರಂಡಿಗಳಿಲ್ಲದ ಸಾಮಾನ್ಯ ಹಳ್ಳಿ. ಆದರೆ, ಇಂದು ಬೆಂಗಳೂರಿನ ಹೊಸ ವಿಮಾನ ನಿಲ್ದಾಣಕ್ಕೆ ಬಹಳ ಹತ್ತಿರವಿದೆ. ನನ್ನ ಅಜ್ಜ 1951ರಲ್ಲಿ ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ನೋಡಿಕೊಳ್ಳಲು ಬೆಂಗಳೂರನ್ನು ಬಿಟ್ಟು ಈ ಹಳ್ಳಿಗೆ ಬಂದು ನೆಲೆಸಿದರು. ಅಜ್ಜಿ ಬಹಳ ಹಿಂದೆಯೇ ತೀರಿಕೊಂಡಿದ್ದರು. ಆಗ ನಮ್ಮ ತಂದೆ ಸಹ ತಮ್ಮ ಉಪನ್ಯಾಸಕ ಹುದ್ದೆಯನ್ನು ತೊರೆದು ಸಂಸಾರ ಸಮೇತರಾಗಿ ಅವರೊಡನೆ ಇರಲು ಬಂದರು. ಆಗ ಆ ಹಳ್ಳಿ ಬಹಳ ಹಿಂದುಳಿದಿತ್ತು. ಇಲ್ಲಿ ಏಳನೇ ತರಗತಿಯವರೆಗೆ ಮಾತ್ರ ಶಾಲೆ. ಅದನ್ನು ಮುಗಿಸಿದ ನಾನು, ಆಗಲೇ ಸ್ನೇಹಿತರೊಡನೆ ವಾಸಿಸುತ್ತಾ ಹೈಸ್ಕೂಲ್ ಓದುತ್ತಿದ್ದ ನನ್ನ ಹಿರಿಯಣ್ಣನೊಡನೆ ಬೆಂಗಳೂರಿಗೆ ಬಂದು ಹೈಸ್ಕೂಲ್ ಸೇರಿದೆ. ಆಗ ನನಗೆ ಹತ್ತೂವರೆ ವರ್ಷ; ಕಾರಣ, ಪ್ರೈಮರಿಯಲ್ಲಿ ನನಗೆ ಸಿಕ್ಕ ಭಡ್ತಿ. ನಾವಿಬ್ಬರೂ ಗಾಂಧಿಬಜಾರಿನ ಒಂದು ಬಾಡಿಗೆ ರೂಮಿನಲ್ಲಿ ಸ್ವತಃ ಅಡುಗೆ ಮಾಡಿಕೊಂಡು ಶಾಲೆಗೆ ಹೋಗತೊಡಗಿದೆವು. ನಾನು 30 ನಿಮಿಷ ಬಸ್ಸಿನಲ್ಲಿ ಪಯಣಿಸಿ ಶೇಷಾದ್ರಿಪುರಂ ಹೈಸ್ಕೂಲಿಗೆ ಹೋಗುತ್ತಿದ್ದೆ, ಅಣ್ಣ, ನ್ಯಾಷನಲ್ ಕಾಲೇಜಿಗೆ ಹೋಗುತ್ತಿದ್ದನು. ಪ್ರತಿದಿನ ಅಣ್ಣ ಅಡುಗೆ ಮಾಡಿದರೆ ಪೇಟೆಯಿಂದ 25 ಪೈಸೆಗೆ 1/4 ಕೆ.ಜಿ. ತರಕಾರಿ, ಕರಿಬೇವು, ನಿಂಬೆ ಮೊದಲಾದುವನ್ನು ತರುವುದು ನನ್ನ ಕೆಲಸ. ಅದಕ್ಕಾಗಿ ನನ್ನೆಲ್ಲಾ ಚೌಕಾಸಿಯ ಕಲೆಯನ್ನು ಚತುರತೆಯಿಂದ ಬಳಸುತ್ತಿದ್ದೆ. ಈ ಚಿಕ್ಕ ಕೆಲಸದಿಂದ ಬೇರೆಯವರಿಗೆ ನೋವಾಗದ ರೀತಿಯಲ್ಲಿ ವ್ಯವಹರಿಸುವ ರೀತಿ, ಸ್ವತಂತ್ರವಾಗಿ ಬದುಕುವ ಧೈರ್ಯ ಕಲಿತೆ. ಜೊತೆಗೆ ಶಾಲೆಯ ಓದಿನಲ್ಲೂ ಮುಂದಿದ್ದೆ. ಹದಿಹರೆಯದ ವಯಸ್ಸಿನಲ್ಲಿ ಕೆಡುವ ಸಂದರ್ಭಗಳು ಬಹಳ, ಅದೂ ದೊಡ್ಡವರ ಕಣ್ಗಾವಲಿಲ್ಲದ ದಿನಗಳು. ಆದರೂ ಹಿರಿಯರು ಆಳವಾಗಿ ನಮ್ಮಲ್ಲಿ ಬಿತ್ತಿದ್ದ ಮೌಲ್ಯಗಳು, ತಾಯಿಯ ಹರಕೆ ಪ್ರಾರ್ಥನೆಗಳು, ಒಳ್ಳೆಯವರ ಒಡನಾಟ ನಮ್ಮನ್ನು ಕಾಯುತ್ತಿತ್ತು. ನನ್ನ ಕಿರಿತಮ್ಮ ಮುರಳಿಯೂ ಬಂದು ಸೇರುವುದರ ಜೊತೆಗೆ ಈ ಪಯಣ ಸತತ ಏಳು ವರ್ಷಗಳ ವರೆಗೆ ಸಾಗಿತು.

ವಸತಿಗೃಹದ ಜೀವನ ಪಾಠ

ಹಿರಿಯಣ್ಣ ಕೆಲಸಕ್ಕೆ ಸೇರಿದರು. ನಾನು ಮತ್ತು ತಮ್ಮ ಕಾಲೇಜಿಗೆ ಹೋಗಲಾರಂಭಿಸಿದೆವು. ಆಗ ನಮ್ಮ ತಂದೆ ನಮ್ಮಿಬ್ಬರನ್ನೂ ಹಾಸ್ಟೆಲ್ಲಿಗೆ ಸೇರಿಸಿದರು. ಅಡುಗೆ ಕೆಲಸ ತಪ್ಪಿತು. 60 ಮಕ್ಕಳ ಜೊತೆಗೆ ವಾಸ, ಹೊಸ ಕಾಲೇಜು, ಹೊಸ ಗೆಳೆಯರು, ಹೊಸ ಪರಿಸರ ತುಂಬಾ ಆನಂದ ತಂದಿತು. ಬಹುಬೇಗ ಎಲ್ಲರ ಗೆಳೆತನ ಸಂಪಾದಿಸಿದೆ. ಕೆಲವರಂತೂ ಜೀವದ-ಜೀವನದ ಗೆಳೆಯರಾದರು. ಭಗವದ್ಗೀತೆ ಪಠಣ,

ಯೋಗಾಭ್ಯಾಸ ಕಲಿತೆ. ಸಂಗೀತ, ನಾಟಕಗಳಲ್ಲಿ ಭಾಗವಹಿಸುತ್ತಿದ್ದೆ. ಹೀಗೆ ಎಲ್ಲಾ ಚಟುವಟಿಕೆಗಳಲ್ಲಿ ನಾನಿದ್ದೆ. ಎಲ್ಲಕ್ಕಿಂತ ಮಿಗಿಲಾಗಿ ಒಳ್ಳೆಯ ರುಚಿಕಟ್ಟಾದ ಊಟವನ್ನು ಬಹುವಾಗಿ ಮೆಚ್ಚುತ್ತಿದ್ದೆ; ಅದು ಇಂದಿಗೂ ಉಳಿದಿದೆ. ನಾವೆಲ್ಲಾ ಕೆಳಮಧ್ಯಮ ವರ್ಗದ ಮನೆಯಿಂದ ಬಂದವರಾದ ಕಾರಣ ಹೆಚ್ಚಿನ ಹಣ ಯಾರಲ್ಲೂ ಇರಲಿಲ್ಲ. ವಸತಿಗೃಹದ ಎರಡು ಹೊತ್ತಿನ ಊಟ ಮಾತ್ರ.

ಹಾಸ್ಟೆಲ್ ವಾಸ ನಮ್ಮನ್ನು ಶಿಸ್ತಿನ ಜೀವನಕ್ಕೆ ರೂಢಿಗೊಳಿಸಿತು. ಬೇಗ ಏಳುವುದು, ಯೋಗ–ವ್ಯಾಯಾಮ ಮಾಡುವುದು, ಅವಕಾಶವಿದ್ದಾಗ ಅವಶ್ಯವಿದ್ದವರಿಗೆ ಸಹಾಯ ಮಾಡುವುದು, ಪ್ರಾಮಾಣಿಕತೆ, ಸಹಜತೆ, ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದೇ ಮೊದಲಾದ ಶಿಸ್ತನ್ನು ಕಲಿತೆ. ನನ್ನ ಇಂಜಿನಿಯರಿಂಗ್ ಮುಗಿಯುವ ವರೆಗಿನ ಇಲ್ಲಿಯ 7 ವರ್ಷದ ಜೀವನ ಸಂತೋಷದಾಯಕವೂ ಆಗಿತ್ತು.

ತಂದೆ–ತಾಯಿ – ಮೊದಲ ಗುರುಗಳು

ನಾನು ಮನೆಯಲ್ಲಿ ತಮಾಷೆ ಮಾಡುತ್ತಾ ಎಲ್ಲರನ್ನೂ ನಗಿಸುತ್ತಾ ಸಂತೋಷವಾಗಿರುತ್ತಿದ್ದೆ. ನನ್ನ ತಂದೆ ಪ್ರೀತಿಯಿಂದ ನನ್ನನ್ನು 'ಚಳ್ಳಪಿಳ್ಳ ರಾಯ' ಎಂದು ಕರೆಯುತ್ತಿದ್ದರು. ವಾರಾಂತ್ಯಗಳಲ್ಲಿ ಮತ್ತು ರಜಾದಿನಗಳಲ್ಲಿ ಹಳ್ಳಿಗೆ ಹೋಗುವುದನ್ನೇ ಕಾಯುತ್ತಿದ್ದೆ. ಅಮ್ಮನ ಕೈಯಿಂದ ಅಭ್ಯಂಜನ, ಸ್ವಾದಿಷ್ಟ ಭೋಜನ, ಕರುಗಳೊಡನಾಟ, ತಂದೆಯವರೊಡನೆ ಹರಟೆ– ಎಲ್ಲವೂ ಪ್ರಿಯವಾಗಿದ್ದವು. ರಾಜಕಾರಣ, ಆರ್ಥಿಕ, ವ್ಯವಸಾಯ, ಯಾವುದೇ ಇರಲಿ, ತಂದೆಯವರಿಗೆ ತಿಳಿಯದ ವಿಷಯವಿಲ್ಲ. ಅವರು ವ್ಯವಸಾಯುಕ್ಕೆ ಸಂಬಂಧಿಸಿದ ಅನೇಕ ಸೇವಾಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಆ ಕಾರಣ, ಟೆನೆಸ್ಸಿ ವಿಶ್ವವಿದ್ಯಾಲಯದ ಒಬ್ಬ ಅಮೆರಿಕನ್ ಎರಡು ವಾರ ಕಾಲ ಹಾಗೂ ಒಬ್ಬ ಜಪಾನೀ ರೈತ ಒಂದು ವಾರ ನಮ್ಮ ಹಳ್ಳಿಮನೆಯ ಅತಿಥಿಗಳಾಗಿದ್ದರು. ನಮ್ಮ ತಂದೆ ರೇಶ್ಮೆ ವ್ಯವಸಾಯ, ಹೈನುಗಾರಿಕೆ ಮೊದಲಾದ ಅನೇಕ ಪ್ರಗತಿಪರ ಚಿಂತನೆಗಳನ್ನು ರಾಜ್ಯದೆಲ್ಲೆಡೆ ಬಿತ್ತುತ್ತಾ ರೈತರಿಗೆ ವ್ಯವಸಾಯದೊಡನೆ ಪರ್ಯಾಯ ವರಮಾನ ಗಳಿಸುವಲ್ಲಿ ಸಹಾಯಕರಾಗಿದ್ದರು. ಇದನ್ನು ಕಲಿಸಲು ಆಗಿನ ಶ್ರೀಲಂಕಾ ಸರಕಾರ ಅವರನ್ನು ಆಹ್ವಾನಿಸಿತ್ತು.

ಹಳ್ಳಿಯವರೆಲ್ಲಾ ತಂದೆಯವರನ್ನು 'ಜ್ಞಾನ ಭಂಡಾರ' ಎಂದು ಗೌರವಿಸುತ್ತಿದ್ದರು. ಅವರ ವಾಕ್ಪಟುತ್ವ, ಆಧ್ಯಾತ್ಮಿಕ ಜ್ಞಾನ, ಭಗವದ್ಗೀತೆಯ ಶ್ಲೋಕಗಳನ್ನು ತಮ್ಮ ಮಾತುಗಳಲ್ಲಿ ಹಾಗೂ ಭಾಷಣಗಳಲ್ಲಿ ಉದಾಹರಿಸುವ ಕಲೆ, ಹುಡುಗನಾದ ನನ್ನನ್ನು ಮಂತ್ರಮುಗ್ಧನನ್ನಾಗಿಸಿತ್ತು. 1989ರಲ್ಲಿ ಅವರು ನಮ್ಮನ್ನು ಕಾಣಲು ಅಮೆರಿಕಾಗೆ ಬಂದಾಗಿನ ಒಂದು ಘಟನೆ ಮರೆಯಲಾರೆ. ಆಗ ಹತ್ತಿರವಿದ್ದ ಒಂದು ಹಿಂದೂ ಮತ್ತು ಜೈನ ಸಮುದಾಯ ಭವನಕ್ಕೆ ಕರೆದುಕೊಂಡು ಹೋದೆ. ಕೆಲವೇ ಕ್ಷಣಗಳಲ್ಲಿ ಅಲ್ಲಿದ್ದ ಕೆಲ

ಅಪರಿಚಿತರ ಸ್ನೇಹಗಳಿಸಿ, ಗೀತೆ, ವೇದ, ಉಪನಿಷತ್ತುಗಳ ಬಗೆಗೆ ಚರ್ಚಿಸತೊಡಗಿದ್ದರು. ನಮ್ಮ ಅರಿವಿಗೆ ಬರುವ ಮೊದಲೇ, ಅಲ್ಲಿಯ ವ್ಯವಸ್ಥಾಪಕರು ನಮ್ಮ ತಂದೆಯವರನ್ನು ಮುನ್ನೂರು-ನಾಲ್ನೂರು ಜನರಿದ್ದ ಸಭೆಯಲ್ಲಿ ಗೀತೆಯ ಬಗೆಗೆ ಮಾತನಾಡಲು ಆಹ್ವಾನಿಸಿದರು. ಯಾವುದೇ ಪೂರ್ವಸಿದ್ಧತೆಯೂ ಇಲ್ಲದೆ ಸುಮಾರು ಹದಿನೈದರಿಂದ ಇಪ್ಪತ್ತು ನಿಮಿಷ ಹಿಂದೂ ಧರ್ಮ ಹಾಗೂ ಗೀತೆಯ ಪ್ರಾಯೋಗಿಕ ಉಪದೇಶವೇನು ಎಂಬುದನ್ನು ಕುರಿತು ಮಾತನಾಡಿದರು. ತಂದೆಯವರ ಈ ಗುಣಗಳು ನಮ್ಮ ಮೇಲೆ ಅಚ್ಚಳಿಯದ ಪ್ರಭಾವ ಬೀರಿವೆ ಮತ್ತು ಅವರಂತೆ ಆಗಬೇಕೆಂಬ ಹಂಬಲ ಮೂಡಿದೆ.

1989ರಿಂದ ಅವರು ಬದುಕಿದ್ದ ಏಳು ವರ್ಷಗಳಲ್ಲಿ ನನ್ನಲ್ಲಿ ಅವರ ಕೆಲವು ಗುಣಗಳನ್ನು ಕಂಡು ಹರ್ಷಿಸಿದ್ದಾರೆ. ಆದರೂ ನಾನು ಉದ್ಯಮದಲ್ಲಿ ಕಂಡ ಪ್ರಗತಿ, ಸಾವಿರಾರು ಜನರ ಜೀವನೋದ್ಧಾರಕ್ಕಾಗಿ ಮಾಡುತ್ತಿರುವ ಸ್ವಯಂಸೇವಾ ಕಾರ್ಯಗಳನ್ನು ಅವರು ನೋಡಲಾಗಲಿಲ್ಲ. 'ಇದನ್ನೆಲ್ಲಾ ನೋಡಿದ್ದರೆ ಅವರು ಎಷ್ಟು ಹೆಮ್ಮೆ ಪಡುತ್ತಿದ್ದರೋ, ಸಂತೋಷಿಸುತ್ತಿದ್ದರೋ' ಎಂದು ನಮ್ಮ ತಾಯಿ ಯಾವಾಗಲೂ ಹೇಳುತ್ತಿರುತ್ತಾರೆ. ಆದರೂ ಅವರು ಇದನ್ನೆಲ್ಲಾ ನೋಡಿ ಹರಸುತ್ತಿದ್ದಾರೆ ಎಂದೇ ಭಾವಿಸುತ್ತೇನೆ, ಆಶಿಸುತ್ತೇನೆ.

ಯು.ವಿ.ಸಿ.ಇ.ಯಲ್ಲಿನ ಹಾಗೂ ಆನಂತರದ ಹೊಸ ಬದುಕು

1974ರಲ್ಲಿ ನ್ಯಾಷನಲ್ ಕಾಲೇಜಿನಿಂದ ಬಿ.ಎಸ್ಸಿ ಮುಗಿಸಿ ಯು.ವಿ.ಸಿ.ಇ.ಯಲ್ಲಿ ಇಂಜಿನಿಯರಿಂಗಿಗೆ ಸೇರಿಕೊಂಡೆ. ಅಲ್ಲಿ ಕಲಿತ ನಾಲ್ಕು ವರ್ಷಗಳು ನನ್ನ ಜೀವನದ ಮರೆಯಲಾರದ ದಿನಗಳು. ಅನೇಕ ಪ್ರತಿಭಾವಂತರನ್ನು ಪೋಷಿಸಿದ ಆ ಕಾಲೇಜಿನಲ್ಲಿ ಬಹಳಷ್ಟು ಸೂಕ್ಷ್ಮ ಬುದ್ಧಿಯ, ವಿನಯಶೀಲರೊಡನೆ ಕಲಿಯುವುದೇ ಒಂದು ರೋಮಾಂಚಕ ಅನುಭವ. ಕರ್ನಾಟಕವೇ ಅಲ್ಲದೆ ಭಾರತದ ಪ್ರಗತಿಗೂ ಕಾರಣರಾದ, ಹಳ್ಳಿಯವರಾದ, ಕಟ್ಟಾಳು ಸರ್. ಎಮ್. ವಿಶ್ವೇಶ್ವರಯ್ಯನವರ ಕೊಡುಗೆ ನನಗೆ ಅತ್ಯಂತ ಪ್ರೇರಣಾದಾಯಕವಾಗಿತ್ತು. ನನ್ನ ಭವಿಷ್ಯ ಏನೇ ಇರಲಿ, ಕಡೆಯ ಪಕ್ಷ ಅವರ ಸಾಧನೆಯ ಶೇಕಡಾ 0.1 ಭಾಗವಾದರೂ ಸಾಧಿಸಬೇಕೆಂಬ ಛಲ ಮೂಡಿತು. ವಿದ್ಯೆಗೆ ಅತ್ಯಂತ ಮಹತ್ವ ಕೊಡುತ್ತಿದ್ದ ನನ್ನ ತಂದೆ ಮತ್ತು ತಾಯಿಯವರು ಸ್ನಾತಕೋತ್ತರ ಪದವಿಗಾಗಿ ನನ್ನನ್ನು ಬಾಂಬೆಗೆ ಕಳುಹಿಸಿಕೊಟ್ಟರು. ಕೇವಲ ಪತ್ರ ವ್ಯವಹಾರ ಮಾತ್ರ ಸಾಧ್ಯವಿದ್ದ ಆ ಕಾಲದಲ್ಲಿ ಅಷ್ಟು ದೂರದ ನಗರಕ್ಕೆ ಮಗನನ್ನು ಕಳುಹಿಸಿಕೊಡುವುದೆಂದರೆ ಬಹಳ ಧೈರ್ಯದ ಮಾತಾಗಿತ್ತು. ಅಂದಿಗಿಂತ ಇಂದು ಸಂವಹನ ಸಾಧನಗಳು ಬದುಕನ್ನು ಬಹಳಷ್ಟು ಸುಲಭವಾಗಿಸಿವೆ. ಅಲ್ಲದೆ ನನಗೆ ದೊರೆತ 400 ರೂ. ವಿದ್ಯಾರ್ಥಿ ವೇತನ ಬೆಂಗಳೂರಿನ ಎಸ್ಕಾರ್ಟ್ಸ್ ಕಂಪೆನಿಯಲ್ಲಿ ಸಿಗಬಹುದಾದ ವೇತನಕ್ಕಿಂತ ಅಧಿಕವಾಗಿತ್ತು. ಅದು ನನ್ನ ಮುಂದಿನ ಓದಿಗೆ ಹೆಚ್ಚು ಉತ್ತೇಜನಕಾರಿಯಾಗಿತ್ತು.

ಬೇರು ಸೂರು

60–70ರ ದಶಕದಲ್ಲಿ ಎಲ್ಲಾ ಕೆಳಮಧ್ಯಮ ವರ್ಗದವರ ಆರ್ಥಿಕ ಸ್ಥಿತಿ ಒಂದೇ ಆಗಿತ್ತು ಅದರಲ್ಲೂ ಹಳ್ಳಿಯ ರೈತ ವ್ಯವಸಾಯವನ್ನು ನಂಬಿ ಬದುಕಿದ್ದ. ನಮ್ಮ ಬಾಗಲೂರು ಸುತ್ತಮುತ್ತ ಯಾವುದೇ ನದಿಯಾಗಲೀ ನೀರಿನ ಸೌಕರ್ಯವಾಗಲೀ ಇರಲಿಲ್ಲ. ಮುಖ್ಯವಾಗಿ ಮಳೆಯನ್ನೇ ಅವಲಂಬಿಸಿದ್ದರು. ಮಳೆಯಾದರೆ ಮಾತ್ರ ಬೆಳೆ. ಅತಿವೃಷ್ಟಿ–ಅನಾವೃಷ್ಟಿ ಎರಡರಲ್ಲೂ ನಷ್ಟವೇ. ಬೇರೆ ಆದಾಯವಿಲ್ಲ. ಇದು ನನ್ನನ್ನು ಆರ್ಥಿಕವಾಗಿ ಹೆಚ್ಚು ಜವಾಬ್ದಾರನನ್ನಾಗಿಸಿತು. ಈ ಬದುಕು ನನಗೆ ಮಿತವ್ಯಯವನ್ನೂ ಕಲಿಸಿತು. ಯಾವುದೇ ಸಂಸ್ಥೆಯು, ಅದರ ಪ್ರಾರಂಭಿಕ ಹಾಗೂ ನಂತರದ ಹಂತಗಳಲ್ಲಿ ಲಭ್ಯವಿರುವ ಸಂಪನ್ಮೂಲದ ಸಮರ್ಪಕ ಬಳಕೆಯನ್ನು ಆಧರಿಸಿರುತ್ತದೆ. ಖರ್ಚುಗಳನ್ನು ಕಡಿತಗೊಳಿಸುವ ಅವಶ್ಯಕತೆ ಬಹಳವಿರುತ್ತದೆ. ಅಂತೆಯೇ, ನನ್ನ ಹಳ್ಳಿಯ ಬದುಕು ನನ್ನನ್ನು ಈ ವಿಷಯದಲ್ಲಿ ಹೆಚ್ಚು ಸಮರ್ಥನನ್ನಾಗಿಸಿತು. ಹಣ ಮತ್ತು ಸಂಪನ್ಮೂಲಗಳಿದ್ದರೆ ವಿಜಯಿಯಾಗಬಹುದೆನ್ನುವ ಮಾತಿಗೆ ವ್ಯತಿರಿಕ್ತವಾಗಿತ್ತು ನನ್ನ ಹಿನ್ನೆಲೆ. ಪ್ರಾರಂಭಿಕ ಉದ್ಯಮಿಯಾಗಿ ಕಡಿಮೆ ಸಾಧನ, ಗುರಿಯತ್ತ ಗಮನ, ತಂತ್ರಜ್ಞಾನ ಮತ್ತು ವ್ಯಾಪಾರದಲ್ಲಿ ಸೂಕ್ಷ್ಮಮತಿಯಿಂದ ಕೆಲಸ ಮಾಡುವುದು ಅವಶ್ಯಕವಾಗಿತ್ತು.

ಕನಸುಗಾರನ ಮೊದಲ ನನಸು

ಬಾಂಬೆಯ ವಾಸ ನನ್ನ ವೃತ್ತಿ ಜೀವನಕ್ಕೆ ಮುಖ್ಯ ತಿರುವನ್ನು ನೀಡಿತು. ಮೊದಲ ವರ್ಷದ ಅಧ್ಯಯನದ ನಂತರ 1979ರ ಬೇಸಗೆಯಲ್ಲಿ ಬೆಂಗಳೂರಿಗೆ ಹೋಗುವ ಬದಲು ಒಂದು ಸ್ಥಳೀಯ ಕಂಪೆನಿಯಲ್ಲಿ ಕೆಲಸ ಮಾಡಲು ನಿರ್ಧರಿಸಿದೆ. ಬಾಂಬೆಯ ಕೆಲವು ಕಂಪೆನಿಗಳಿಗೆ ನನ್ನನ್ನು ಇಂಟರ್ನ್ ಆಗಿ ಪರಿಚಯಿಸುವಂತೆ ನಮ್ಮ ವಿಭಾಗದ ಮುಖ್ಯ ಪ್ರೊಫೆಸರರನ್ನು ಕೇಳಿಕೊಂಡೆ. ಬೆಂಗಳೂರಿನ ಆಹ್ಲಾದಕರ ವಾತಾವರಣ ಬಿಟ್ಟು ಬಾಂಬೆಯ ಸುಡು ಬೇಸಗೆಯಲ್ಲಿ ಉಳಿಯುವ ನನ್ನ ನಿರ್ಧಾರದಿಂದ ಆಶ್ಚರ್ಯಗೊಂಡ ಗುರುಗಳು ನನ್ನನ್ನು ತಮ್ಮ ಹಳೆ ವಿದ್ಯಾರ್ಥಿಯೊಬ್ಬನ 'ಬಾಂಬೆ ಎಲೆಕ್ಟ್ರಾನಿಕ್ಸ್' ಎಂಬ ಕಂಪೆನಿಗೆ ಪರಿಚಯಿಸಿದರು. ಅದರ ಯಜಮಾನರಾದ ಡಾ. ಎಚ್. ಜೆ. ನೈನ್, 1979ರಲ್ಲೇ ನನಗೆ ಮೈಕ್ರೋಪ್ರೋಸೆಸರ್ ಮೇಲೆ ಕೆಲಸ ಮಾಡುವ ಅವಕಾಶ ಕೊಟ್ಟು ಆಶ್ಚರ್ಯಕರವಾದ ಏಳ್ಗೆಗೆ ಕಾರಣರಾದರು. ಅಂತಹ ಅತ್ಯಾಧುನಿಕ ತಂತ್ರಜ್ಞಾನದ ಮೇಲೆ ಕೆಲಸ ಮಾಡುವ ಅದೃಷ್ಟ ಹಾಗೂ ಯಶಸ್ಸು ನನ್ನದಾಯಿತು. ಮುಂದೆ 1982ರಲ್ಲಿ ಮೈಕ್ರಾನಿಕ್ಸ್ ಕಂಪೆನಿಯ ನನ್ನ ಮೊದಲ ಉದ್ಯೋಗ, ತನ್ಮೂಲಕ ಅಮೆರಿಕದ ಸಿಲಿಕಾನ್ ವ್ಯಾಲಿಯಲ್ಲಿ ಪಾದಾರ್ಪಣಕ್ಕೆ ಇದೇ ನಾಂದಿಯಾಯಿತು.

ಒಮ್ಮೆ ಹಿಂತಿರುಗಿ ನೋಡುವಾಗ, ಬಾಲ್ಯದಲ್ಲಿ ನಾನು ಪಡೆದುಕೊಂಡ ಚಾತುರ್ಯ, ಹಾಸ್ಟಲ್ ಬದುಕಲ್ಲಿ ಗಳಿಸಿದ ಒಡನಾಟ ಕಲೆ, ಹೊಸ ವಿಷಯಗಳನ್ನು ಕಲಿಯುವಲ್ಲಿ ನನ್ನಲ್ಲಿದ್ದ ಉತ್ಕಟಾಪೇಕ್ಷೆ, ಅಪಾರ ಪರಿಶ್ರಮ, ಮತ್ತು ಡಾ. ನೈನ್ ಅವರ ಬಳಿ ಕೆಲಸ

ಮಾಡುವ ಅವಕಾಶ– ಪ್ರತಿಯೊಂದೂ ಕೂಡಿ, ಬಿಂದುಗಳನ್ನು ಸೇರಿಸಿ ಮಾಡಿದ ಸುಂದರ ಚಿತ್ರದಂತೆ ಕಾಣುತ್ತಿದೆ. ಅದರಲ್ಲಿ 'ಬಾಂಬೆ ಎಲೆಕ್ಟ್ರಾನಿಕ್ಸ್'ನ ದುಡಿಮೆ ನನ್ನ ಬದುಕಿನ ಎಲ್ಲಕ್ಕಿಂತ ದೊಡ್ಡ ತಿರುವು. ಕಾರಣ, ಸ್ವಂತ ಉದ್ಯೋಗವೊಂದನ್ನು ಪ್ರಾರಂಭಿಸುವ ಕನಸು ರೂಪುಗೊಂಡದ್ದೇ ಇಲ್ಲಿ.

'ಬಾಂಬೆ ಎಲೆಕ್ಟ್ರಾನಿಕ್ಸ್'ನಲ್ಲಿ ನನ್ನ ನಿಕಟ ಸ್ನೇಹಿತ, ಮಿ. ಎ. ಕೆ. ಪೋತೆದಾರ್ ಜೊತೆಗೆ ಒಂದು ಕಂಪೆನಿ ಆರಂಭಿಸಿದೆ. ಅಲ್ಲಿ, ನಿಗದಿತ ಶುಲ್ಕ ಪಡೆದು, ಮೈಕ್ರೋಪ್ರೋಸೆಸರ್ ಬಗ್ಗೆ ಪಾಠ ಮಾಡುವುದಾಗಿತ್ತು. ನಾನು ಆ ತಂತ್ರಜ್ಞಾನದಲ್ಲಿ ಪರಿಣತನಾದುದರಿಂದ ಅಧ್ಯಾಪಕನಾಗಿಯೂ, ಪೋತೆದಾರ್ ವಿದ್ಯಾರ್ಥಿಗಳನ್ನು ಆಕರ್ಷಿಸಿ ಕರೆತರುವ ಮಾರ್ಕೆಟಿಂಗ್ ವ್ಯಾವಹಾರಿಕನಾಗಿಯೂ ಇದ್ದೆವು. ನಂತರದಲ್ಲಿ, ನಾನು ಮೈಕ್ರಾನಿಕ್ಸ್‌ನಲ್ಲಿ ದುಡಿಯುತ್ತಲೂ ವಾರದ ಕೆಲವು ದಿನ ಸಂಜೆ ಈ ಕೆಲಸ ಮಾಡುತ್ತಿದ್ದೆ. ಕಡಿಮೆ ಹಣ ತೊಡಗಿಸಿಯೂ ನನ್ನದೇ ಉದ್ಯೋಗ ಮಾಡುವ ಮೊದಲ ಅನುಭವ ಇದು. ಇಲ್ಲಿ ಹೆಚ್ಚಿನ ಹಣ ಗಳಿಸದಿದ್ದರೂ, ಸ್ವೋದ್ಯೋಗ ಮತ್ತು ಗ್ರಾಹಕರನ್ನು ಆಕರ್ಷಿಸುವ ಕಲೆಗೆ ಬೇಕಾದ ದೊಡ್ಡ ಅನುಭವ ನೀಡಿ ಮೊದಲ ಹೆಜ್ಜೆಯಾಯಿತು.

ಈ ಮೊದಲ ಪ್ರಯತ್ನ ಹಾಗೂ ಮುಂಬೈ ವಾಸ ಬೆಲೆ ಕಟ್ಟಲಾಗದ ಕೆಲವು ಪಾಠಗಳನ್ನು ನನಗೆ ಕಲಿಸಿದವು:

1. ಸಂವಹನ ಕಲೆ.
2. ಸರಳವಾಗಿ, ನೇರವಾಗಿ, ನಿರಂತರವಾಗಿ ಮಾರುವ ಕಲೆ (ಕೌಶಲವಿರಲಿ, ಸಿದ್ಧವಸ್ತುವಿರಲಿ, ಮಾರಾಟವೇ ಗುರಿ).
3. ಅಪಾರ ಪರಿಶ್ರಮಕ್ಕೆ ಪರ್ಯಾಯವಿಲ್ಲ.
4 ಎಲ್ಲರಿಗಿಂತಲೂ ಯಾವಾಗಲೂ ಭಿನ್ನವಾಗಿರುವುದು.

1982ರಲ್ಲಿ, ಬಾಂಬೆಯಲ್ಲಿ ನನ್ನ ಬದುಕು ದುಬಾರಿಯಾಗತೊಡಗಿತು. ಒಂದು ದಿನ ಸಿಲಿಕಾನ್ ವ್ಯಾಲಿಯ 'ಎಲೆಕ್ಸಿ' ಎಂಬ ಕಂಪೆನಿಯ ಜಾಹೀರಾತನ್ನು ಕಂಡೆ. ಆ ಕೆಲಸ ನನ್ನ ವಿದ್ಯೆಗೆ ಹೊಂದುವಂತಿದ್ದು ಅಮೆರಿಕೆಗೆ ಹೋಗುವ ಅವಕಾಶ ಇದ್ದ ಕಾರಣ ಸೇರಿಕೊಂಡೆ. ಸಿಲಿಕಾನ್ ವ್ಯಾಲಿಯಲ್ಲಿ ವಿಶ್ವಮಟ್ಟದ ನುರಿತ ಇಂಜಿನಿಯರ್‌ಗಳೊಡನೆ ದುಡಿಯುವ ಸಡಗರ ಮತ್ತು ಅಲ್ಲಿಯ ಉತ್ತಮ ಬದುಕು ನನ್ನನ್ನು ಅಮೆರಿಕೆಗೆ ಸೆಳೆಯಿತು. ಮತ್ತೆ ಹಿಂದಿರುಗಿ ನೋಡಲಿಲ್ಲ. 1982ರಲ್ಲಿ ಶುರುವಾದ ಈ ಪಯಣ ಇಲ್ಲಿಯವರೆಗೆ ಮರೆಯಲಾರದ ಬಾಳದಾರಿಯಾಗಿದೆ.

ಹೊಸದೇಶದಲ್ಲಿ ನೆಲೆಸಿ ಹೊಸ ಕಂಪೆನಿಗಳ ಆರಂಭಿಕ ದಿನಗಳು:

ಇಂದಿಗೂ ಪರಕೀಯವಾಗಿರುವ ಈ ದೇಶದಲ್ಲಿ ನಾನು ಕಾಲಿಡಲು ನಿರ್ಧರಿಸಿದಾಗ ಒಳಗೊಳಗೆ ಅಪಾರ ಭೀತಿ ಮತ್ತು ಕತ್ತಲೆ ಆವರಿಸಿತ್ತು. ಇವರು ನನ್ನನ್ನು ಹೇಗೆ

ಸ್ವೀಕರಿಸುತ್ತಾರೆ, ನನ್ನ ಬದುಕಿಗೂ ಆಗಿ ಮನೆಗೆ ಕಳಿಸುವಷ್ಟು ದುಡಿಯಬಲ್ಲೆನೆ, ಇವ್ಯಾವುವೂ ಸ್ಪಷ್ಟವಿರಲಿಲ್ಲ. ಮೊದಲು ಅನುಭವಿಸಿರದ ಅಪಾರ ಶೀತ ವಾತಾವರಣದಲ್ಲಿ ನಾನು ಹೊಂದಿಕೊಳ್ಳುವ ಬಗ್ಗೆ ಅನುಮಾನವಿತ್ತು. 1982ರ ಆಸುಪಾಸಿನಲ್ಲಿ ಅಮೆರಿಕೆಗೆ ಹೋಗುವವರ ಸಂಖ್ಯೆ ಬಹಳ ವಿರಳವಿತ್ತು. ಯು.ಎಸ್.ಎ.ಯಲ್ಲಿನ ಹೊಸ ಬದುಕು, 'ಎಲೆಕ್ಸಿ'ಯಲ್ಲಿನ ದುಡಿಮೆ, ಅಪಾರ ಕಲಿಕೆ ಮತ್ತು ಉದ್ವೇಗದಿಂದ ಕೂಡಿತ್ತು. ಇಲ್ಲಿಯ ಜನ ಸ್ನೇಹಪರರೂ ಸಹಾಯ ನೀಡುವವರೂ ಆದ ಕಾರಣ ಈ ಹೊಸ ಸಂಸ್ಕೃತಿಯೊಡನೆ ಬೆರೆಯಲು ನನಗೆ ಹೆಚ್ಚು ಕಾಲ ಬೇಕಾಗಲಿಲ್ಲ.

ಕಸ್ಟಮರ್ ಸಪೋರ್ಟ್ ಇಂಜಿನಿಯರ್ ಆಗಿ ಎಲೆಕ್ಸಿ ಸೇರಿದ್ದರೂ ಬಹುಬೇಗ ನನ್ನ ಯೋಗ್ಯತೆಯನ್ನು ಸ್ಥಾಪಿಸುವ ಮೂಲಕ ಸಂಶೋಧನೆ ಮತ್ತು ಅಭಿವೃದ್ಧಿ (ರಿಸರ್ಚ್ – ಡೆವೆಲಪ್‌ಮೆಂಟ್)ಗೆ ಬಡತಿ ಪಡೆದೆ. ಆದರೂ ನನ್ನದೇ ಕಂಪೆನಿ ಪ್ರಾರಂಭಿಸುವ ಕನಸು ಜೀವಂತವಾಗಿತ್ತು. ಹೊಸ ನೆಲದಲ್ಲಿ ಧನಬಲವಿಲ್ಲದ ನಾನು ಕೆಲಸ ಹಾಗೂ ಕಾರ್ಯಕ್ಷೇತ್ರವನ್ನು ಚೆನ್ನಾಗಿ ಅರಿತು ಜನಸಂಪರ್ಕವನ್ನು ಬಲಗೊಳಿಸಿಕೊಳ್ಳಲು ನಿರ್ಧರಿಸಿದೆ. IEEEಗೆ ಸ್ವಯಂಸೇವಕನಾಗಿ ಸೇರಿ ನನ್ನ ಉದ್ಯೋಗ ಕ್ಷೇತ್ರದ ಜನರ ಪರಿಚಯ ಮಾಡಿಕೊಳ್ಳುವ ಅವಕಾಶ ಪಡೆದೆ. ಸ್ಯಾನ್ ಹೋಸೆ ಸ್ಟೇಟ್ ಯುನಿವರ್ಸಿಟಿಯ ಪ್ರಾಚಾರ್ಯರಾದ ಕೆನ್ ಮೆಹಿಥಿಯ, ಎಲೆಕ್ಟ್ರಾನಿಕ್ ಡಿಸೈನ್ ಪತ್ರಿಕೆಯಲ್ಲಿ ಸಂಪಾದಕರಾದ ಡೇವ್ ಬರ್ಸ್ಕಿ, ಮತ್ತು ಎಚ್.ಪಿ.ಯಲ್ಲಿ ಉದ್ಯೋಗಿಯಾಗಿದ್ದ ಸ್ಯಾಮ್ ಸುದರ್ಶನಮ್ ಜೊತೆ ಸೇರಿ ಸಂಶೋಧಕರೂ ತಾಂತ್ರಿಕ ಮುಖಂಡರೂ ಸೇರುವ ಸಮ್ಮೇಳನಗಳನ್ನು ನಡೆಸತೊಡಗಿದೆವು. ನಾವು IEEE ಹೆಸರನ್ನು ಬಳಸಿಕೊಂಡದ್ದರಿಂದ ಬಹಳ ಯಶಸ್ವಿ ಸಮ್ಮೇಳನಗಳನ್ನು ನಡೆಸಲು ಸಾಧ್ಯವಾಯಿತು. ಆದರೂ, ನಾವು ನಾಲ್ವರೂ ಸ್ವಯಂಸೇವಕರಾಗಿ ದುಡಿದರೂ ಹಣ ಮಾಡಲಾಗಲಿಲ್ಲ. IEEE ಹೆಸರಿನ ಬದಲು ಪ್ರತಿವರ್ಷ ನಮ್ಮದೇ ತಾಂತ್ರಿಕ ಸಮ್ಮೇಳನಗಳನ್ನು ನಡೆಸಿ ಲಾಭ ಹಂಚಿಕೊಳ್ಳುವ ಪ್ರಯತ್ನ ಮಾಡೋಣವೆಂಬ ಯೋಚನೆ ಬಂತು. ಆಗ ಹುಟ್ಟಿಕೊಂಡದ್ದೇ ನಮ್ಮ ಮೊದಲ ಕಂಪೆನಿ, 'ಸಿಸ್‌ಟೆಕ್ ರಿಸರ್ಚ್'. ಪ್ರತಿಯೊಬ್ಬರೂ 5000 ಡಾಲರ್ ಹಾಕಿ ನಾವು ನಾಲ್ವರೂ ಈ ಕಂಪೆನಿಯ ಸಹಸಂಸ್ಥಾಪಕರಾದೆವು.

ನಂತರ ಮೂರು–ನಾಲ್ಕು ವರ್ಷ ಸಮ್ಮೇಳನಗಳನ್ನು ನಡೆಸಿದೆವು. IEEE ಹೆಸರಿಲ್ಲದ ಕಾರಣ ನಾವು ತೊಡಗಿಸಿದ ಹಣ ಕೂಡಾ ಬರಲಿಲ್ಲ. ಆದರೆ ನಾವೆಲ್ಲ ನಮ್ಮ ವೃತ್ತಿಗಳನ್ನು ಬಿಡದೆ ಮುಂದುವರಿಸಿದ್ದ ಕಾರಣ ಈ ನಷ್ಟದ ನೋವು ಹೆಚ್ಚು ಕಾಡಲಿಲ್ಲ. ಈ ಪ್ರಯತ್ನಗಳ ನಂತರ ಇದನ್ನು ಬಿಟ್ಟುಬಿಡಲು ನಿರ್ಧರಿಸಿದೆವು. ಆದರೆ, ಇದರಿಂದ ನಾನು ಗಳಿಸಿದ ಜ್ಞಾನವನ್ನು ವ್ಯರ್ಥವಾಗಿಸಲು ಇಚ್ಛಿಸದೆ ಜನರ ಸಂಪರ್ಕ ಜಾಲವನ್ನು ಬೆಳೆಸಲು ಬಯಸಿದೆ. ಆಗ, ಲಾಸ್ ವೇಗಾಸ್‌ನಲ್ಲಿ 'ಇಂಟರಾಪ್' ಎಂಬ ದೊಡ್ಡ ಕಂಪೆನಿ ನಡೆಸುತ್ತಿದ್ದ ಸಮ್ಮೇಳನಕ್ಕೆ ಸಲಹೆಗಾರನಾಗಿ ಒಬ್ಬನೇ ಹೋಗಬೇಕೆಂದು ನಿರ್ಧರಿಸಿದೆ. ಈ

ತಂತ್ರಜ್ಞರ ಸಮ್ಮೇಳನಕ್ಕೆ ನಾನು ಛೇರ್‌ಮನ್ ಆದೆ. ಅದಕ್ಕಾಗಿ ಒಂದು ಮೂಲವೇತನ ಹಾಗೂ ಭಾಗವಹಿಸುವ ಪ್ರತಿಯೊಬ್ಬರಿಂದ ಬರುವ ಹಣದಲ್ಲಿ ಭಾಗಶಃ ಕೊಡಬೇಕೆಂದು ಕರಾರಾಯಿತು. ಇದರಿಂದ ದೊರೆತ ಹಣಗಳಿಸುವ, ಹಾಗೂ ಬಹುಜನರನ್ನು ಅರಿಯುವ ಅನುಭವಕ್ಕೆ ಸಾಟಿಯಿಲ್ಲ. ಇದೇ ಸಮಯ ಎಲೆಕ್ಸಿ ಬಿಟ್ಟು '3ಕಾಂ'ನಲ್ಲಿ ನಾಲ್ಕು ವರ್ಷ ಕೆಲಸ ಮಾಡಿ, ನಂತರ 'ನೊವೆಲ್' ಸೇರಿದೆ. 1993ರಲ್ಲಿ ನನ್ನದೇ ಕಂಪೆನಿಯನ್ನು ತೆರೆದರೂ ಸಭೆಗಳನ್ನು ನಡೆಸಿ ಗಳಿಸಿದ ಹಣವೇ ನನ್ನ ವರಮಾನವಾಗಿತ್ತು.

'ಎಕ್ಸೋಡಸ್'– ನನ್ನ ಮೊದಲ ಕಂಪೆನಿ

ಯುಟಾದಲ್ಲಿ ಮುಖ್ಯ ಕಛೇರಿಯಿರುವ ನೊವೆಲ್‌ನಲ್ಲಿಯ ಕೆಲಸ ಸಿಲಿಕಾನ್ ವ್ಯಾಲಿಯ ಇತರ ಕಂಪೆನಿಗಳಿಗಿಂತ ಭಿನ್ನವಾಗಿತ್ತು. ಈಗ ನನ್ನ ಕಂಪೆನಿಯನ್ನು ಪ್ರಾರಂಭಿಸಲು ಸರಿಯಾದ ಸಮಯವೆಂದು ನಿರ್ಧರಿಸಿದ್ದು ನನ್ನ ಬಾಳಿನ ಹೊಸ ತಿರುವಾಗಿತ್ತು. ಆಕಸ್ಮಿಕವಾಗಿ ಒಂದು ಸಾಮಾಜಿಕ ಒಕ್ಕೂಟದಲ್ಲಿ ಕೆ. ಬಿ. ಚಂದ್ರಶೇಖರ್ ಅವರನ್ನು ಭೆಟ್ಟಿಯಾದೆ. ಅವರು, ಅತ್ಯಂತ ಕ್ರಿಯಾಶೀಲರೂ ಮತ್ತು ಉದ್ಯಮದ ದಿಗ್ಗಜರೂ ಆಗಿದ್ದರು. ಅವರು ವಿಪ್ರೋದಲ್ಲಿ 12 ವರ್ಷ ಕೆಲಸ ಮಾಡಿದ ನಂತರ ರೋಲ್ಬಾಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ನಾವಿಬ್ಬರೂ ನಮ್ಮನಮ್ಮ ಕೆಲಸಗಳಿಂದ ತೃಪ್ತರಾಗದೆ ನಮ್ಮದೇ ಕಂಪೆನಿಯನ್ನು ತೆರೆಯಬೇಕೆಂಬ ಬಲವಾದ ಹಂಬಲ ಉಳ್ಳವರಾಗಿದ್ದೆವು. ನಾವು ಪಾಲುಗಾರರಾಗಿ ದುಡಿದರೆ ಪರಸ್ಪರರ ಪೂರಕ ಸಾಮರ್ಥ್ಯದಿಂದ ಇಬ್ಬರಿಗೂ ಲಾಭವಾಗುವ ಲಕ್ಷಣಗಳು ತೋರಿದವು. ಮುಂದಿನ ಆರು ತಿಂಗಳು ನಾವು ಕಟ್ಟುವ ಸಂಸ್ಥೆಯ ಹಾಗೂ ಅದರಿಂದ ನಮಗೂ ನಮ್ಮ ಕೆಲಸಗಾರರಿಗೂ ಹೇಗೆ ಪ್ರಯೋಜನವಾಗಬೇಕೆಂಬುದರ ಬಗ್ಗೆ ಚರ್ಚಿಸಿದೆವು. ನಮ್ಮ ಕಂಪೆನಿಯು, ಅರ್ಹತೆಯನ್ನು ಗುರುತಿಸುವುದು, ಪ್ರತೀ ಕೆಲಸಗಾರನಿಗೂ ಕಾರ್ಯನಿರ್ವಾಹಕರನ್ನು ಸುಲಭವಾಗಿ ಕಾಣಬಲ್ಲ ತೆರೆದ ಕಛೇರಿ ವ್ಯವಸ್ಥೆ, ಯಾರತ್ತ ಬೆರಳೆತ್ತದೆ ಸಮಸ್ಯೆ ಪರಿಹರಿಸುವುದೇ ಮೊದಲಾದ ಮೌಲ್ಯಗಳ ಬುನಾದಿಯ ಮೇಲೆ ನಿಲ್ಲಬೇಕೆಂದು ವಿಚಾರ ಮಾಡಿದೆವು. ನಾವಿಬ್ಬರೂ ನಮ್ಮ ಉಳಿತಾಯದ ಹಣದಿಂದ ಒಟ್ಟು 50,000 ಡಾಲರುಗಳನ್ನು ತೊಡಗಿಸಿದೆವು. 1993ರ ಕೊನೆಗೆ ನಾನು ನೊವೆಲ್ಲಿನ ಆರಂಕೆಯ ಕೆಲಸವನ್ನು ಬಿಟ್ಟು ಸಂಬಳವಿಲ್ಲದ ನನ್ನ ಕಂಪೆನಿಯ ಅದೃಷ್ಟವನ್ನು ನಂಬಿ ಹೊರಟೆ. ಬಾಂಬೆಯಲ್ಲಿ ಹುಟ್ಟಿದ ನನ್ನದೇ ಕಂಪೆನಿಯ ಈ ಕನಸು ಹೊರದೇಶದಲ್ಲಿ ನನಸಾಗುವ ಹೊತ್ತು ಇದೆನ್ನಿಸಿತು.

ಮುಂದಿನ ಎರಡು ವರ್ಷಗಳ ಪಯಣ ಬಹಳ ಕಠಿಣವಾಗಿದ್ದರೂ, ನಮ್ಮ ಕಂಪೆನಿ ದಿನಕ್ಕೊಂದು ಹೆಜ್ಜೆಯಂತೆ, ಒಮ್ಮೆಗೆ ಒಬ್ಬ ಗ್ರಾಹಕನಂತೆ ಮುಂದುವರಿಯುತ್ತಿದ್ದುದು ವಿಶೇಷ ತೃಪ್ತಿಯನ್ನು ಕೊಡುತ್ತಿತ್ತು. ನಾವು ಸಿಲಿಕಾನ್ ವ್ಯಾಲಿಯ ಯಾವುದೇ ಯಶಸ್ವೀ

ಬಂಡವಾಳಗಾರರಿಗೂ ಪರಿಚಿತರಲ್ಲ ಮತ್ತು ನಾವು ಕೆಲಸ ಮಾಡುತ್ತಿದ್ದ ಹೊಸ ವಿಷಯ ಬಹಳ ಜನರಿಗೆ ಅರ್ಥವಾಗುತ್ತಿರಲಿಲ್ಲ. ನಿರಂತರ ಬಳಕೆ, ಸುರಕ್ಷತೆ ಹಾಗೂ ಅಪಾರ ಸಾಮರ್ಥ್ಯವನ್ನು ಹೊಂದಿ ಬೆಳೆಯುತ್ತಿರುವ ಎಲ್ಲಾ ಇಂಟರ್ನೆಟ್ ಕಂಪೆನಿಗಳಿಗೆ ಬೇಕಾದ ಮೂಲಭೂತ ಸೌಕರ್ಯವನ್ನು ಒದಗಿಸುವಂಥ ಅಗ್ರಗಾಮಿ ಇಂಟರ್ನೆಟ್ ಡೇಟಾ ಸೆಂಟರ್ ಕಲ್ಪನೆ ನಮ್ಮದು.

ಸಾಂಸಾರಿಕ ಜವಾಬ್ದಾರಿ ಮತ್ತು ಸ್ವಂತದ ತ್ಯಾಗ

ಪ್ರತಿಯೊಬ್ಬರಿಗೂ ಮೂವತ್ತೈದರ ಹರೆಯ ಬಹಳ ಸಂದಿಗ್ಧ ಕಾಲ. ಆಗ ನೋಡಿಕೊಳ್ಳಬೇಕಾದ ಯುವ ಸಂಸಾರ, ಬೆಳೆಸಬೇಕಾದ ಜೀವನವೃತ್ತಿ, ಗಮನಿಸಬೇಕಾದ ವಯಸ್ಸಾದ ತಂದೆ–ತಾಯಿ, ನಮ್ಮ ಕನಸುಗಳಿಗಾಗಿ ಶೇಕಡಾ ನೂರರಷ್ಟು ಬಿಡಲಾಗದ ಸಾಮಾಜಿಕ ಜೀವನ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವುದೇ ಒಂದು ಕಷ್ಟದ ಹಾಗೂ ಹೋರಾಟದ ಸಮಯ. ಆ ಕಷ್ಟದ ದಿನಗಳಲ್ಲಿ ನನಗೆ ಇಲ್ಲಿ ಹಾಗೂ ಭಾರತದ ನನ್ನವರಿಂದ ದೊರೆತ ಅಪಾರ ಬೆಂಬಲ ಇಲ್ಲದಿದ್ದರೆ, ಸ್ವಂತ ಉದ್ಯೋಗದ ನನ್ನ ಕನಸು ನನಸಾಗುತ್ತಿರಲಿಲ್ಲ. ನಮ್ಮ ಕಂಪೆನಿ ಎಕ್ಸೋಡಸ್‌ನ ಅವಶ್ಯಕತೆಗಳನ್ನು ಪೂರೈಸಲು ನಾವು ಕನ್ಸಲ್ಟಿಂಗ್ ಬಿಸಿನೆಸ್ ನಡೆಸಿದೆವು. ಆದರೂ ಅದರ ಬೆಳವಣಿಗೆಗೆ ಹೆಚ್ಚು ಹಣ ಬೇಕಿತ್ತು. ಅದಕ್ಕಾಗಿ ನಮ್ಮ ಮನೆಯನ್ನು 100,000 ಡಾಲರುಗಳಿಗೆ ಅಡವಿಟ್ಟು ಬ್ಯಾಂಕಿನಲ್ಲಿ ಸಾಲಪಡೆದೆ. ಕಂಪೆನಿ ಬೆಳೆಯುತ್ತಿದ್ದರೂ ನಮ್ಮ ಖರ್ಚು ಅದೇ ವೇಗದಲ್ಲಿ ಬೆಳೆಯುತ್ತಿತ್ತು. ಎರಡು ತಿಂಗಳಿಗೊಮ್ಮೆ ಸುಮಾರು ಇಪ್ಪತ್ತೈದು ಜನರಿಗೆ ಸಂಬಳ ಹಾಗೂ ಕಛೇರಿ ಖರ್ಚು ನೀಡಬೇಕಿತ್ತು. ನಂಬಿಕಸ್ತರಿಂದಲೂ ಸಾಲ ಪಡೆದೆವು. ನಮ್ಮ ಲೆಕ್ಕಿಗನಿಂದ ಪರಿಚಿತರಾದ ಪಾಕಿಸ್ತಾನಿಗಳ ಒಂದು ಗುಂಪಿನಿಂದ 250,000 ಡಾಲರ್ ಸಾಲ ದೊರೆಯಿತು. ನಮ್ಮ ಗ್ರಾಹಕರು ಹಾಗೂ ಕೆಲಸದ ಭಾರ ಹೆಚ್ಚುತ್ತಿದ್ದರೂ ಹಣದ ಕೊರತೆಯಿಂದಾಗಿ ಸಾಕಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತಿರಲಿಲ್ಲ. 24 ಗಂಟೆ ಪೇಜರ್ ಪಕ್ಕದಲ್ಲಿಟ್ಟುಕೊಂಡು ದುಡಿಯುತ್ತಿದ್ದೆ.

ಈ ಸಮಯದಲ್ಲೇ ನನ್ನ ಎರಡನೆಯ ಮಗ ಹುಟ್ಟಿದ. ಸೆಲ್ ಫೋನ್ ಇಲ್ಲದ ಆ ಕಾಲದಲ್ಲಿ ಗ್ರಾಹಕರ ಅವಶ್ಯಕತೆಗಳಿಗೆ ಸ್ಪಂದಿಸುವುದು ಯಾವಾಗಲೂ ಮೊದಲ ಆದ್ಯತೆಯಾಗಿತ್ತು. ಆದರೆ, ಕೆಲಸ ಮತ್ತು ಸಂಸಾರದ ಕರ್ತವ್ಯಗಳನ್ನು ಸರಿತೂಗಿಸುವುದೂ ಸಹ ಮುಖ್ಯವಾಗಿತ್ತು. ಈ ಮಧ್ಯೆ ನಮ್ಮ ಕಂಪೆನಿ ಸಾಲದ ಬಡ್ಡಿಯನ್ನು ಕಟ್ಟದ ಕಾರಣ ಬ್ಯಾಂಕಿನಿಂದ ಇನ್ನು ಕೆಲವು ತಿಂಗಳಲ್ಲಿ ಮನೆ ಹರಾಜು ಮಾಡುತ್ತೇವೆಂದು ಪತ್ರ ಬಂದಿತ್ತು. ಇದು ನನ್ನ ಜೀವನದ ದೊಡ್ಡ ಆಘಾತವಾಗಿತ್ತು. ಎರಡು ಮಕ್ಕಳ ಚಿಕ್ಕ ಸಂಸಾರ ಹಾಗೂ ಹೊಸ ಕಂಪೆನಿಯನ್ನು ನಡೆಸುವ ಹೊಣೆ ಇವೆರಡರ ನಡುವೆ ನನ್ನ ಸ್ಥಿತಿ ಡೋಲಾಯಮಾನವಾಗಿತ್ತು. ಆದರೂ ಹೆಚ್ಚೆಚ್ಚು ಗ್ರಾಹಕರು

ನೋಂದಾಯಿಸಿಕೊಂಡಂತೆ ಆತ್ಮಸ್ಥೈರ್ಯ ಹೆಚ್ಚಿ ನನ್ನ ಕನಸನ್ನೇ ಬಿಗಿಯಾಗಿ ಅಪ್ಪಿಕೊಂಡೆ. ಅದಿಲ್ಲದ ಬದುಕನ್ನು ನಾನು ಊಹಿಸಿಕೊಳ್ಳದಾದೆ. ನನ್ನ ಈ ಪಯಣದಲ್ಲಿ ನಾನು ಗೆಲುವಿನ ಗೆರೆಯನ್ನು ತಲುಪಲು ನನ್ನ ಪತ್ನಿಯ ಪ್ರೋತ್ಸಾಹ ಹಾಗೂ ಬೆಂಬಲ ಅಸಾಧಾರಣವಾದದ್ದು.

IPO ಸಂಭ್ರಮ ಮತ್ತು ಅಮೆರಿಕನ್ ಕನಸಿನ ಸಾಧನೆ

ಫೆಬ್ರವರಿ 1996ರ ಹೊತ್ತಿಗೆ ಎಕ್ಸೋಡಸ್ 3.5 ಮಿ. ಡಾಲರ್ ಹಣ ಗಳಿಸಿ ಹೂಡಿಕೆದಾರರಿಗೆ 50% ಹಿಂದಿರುಗಿಸಿತು. ನಂತರ ನಂಬಲಾಗದಷ್ಟು ಎತ್ತರಕ್ಕೆ ಇದನ್ನು ಒಯ್ಯಲು ನಿರ್ಧರಿಸಿದೆವು. ಸಿಲಿಕಾನ್ ವ್ಯಾಲಿಯ ಕೆಲವು ಉತ್ತಮ ಪ್ರತಿಭೆಗಳನ್ನು ವೇದಿಕೆಗೆ ತಂದೆವು. 1998ರಲ್ಲಿ ನಾವು ಪ್ರಪಂಚದಲ್ಲೇ ಒಂದು ಅತ್ಯಂತ ಬೆಲೆಯುತ ಕಂಪೆನಿ ಎನಿಸಿದೆವು. ಶೇಕಡಾ 40ರಷ್ಟು ಅಂತರ್ಜಾಲ ಹಾದಿಗಳು ನಮ್ಮ ಡೇಟಾ ಸೆಂಟರ್ ಮೂಲಕವೇ ಹಾದುಹೋಗುತ್ತಿದ್ದವು. ನಾವು ಹೊಂದಿದ್ದ ಗುಣಮಟ್ಟದ ಗ್ರಾಹಕರಿಂದಾಗಿ ಪ್ರೆಸಿಡೆಂಟ್ ಬಿಲ್ ಕ್ಲಿಂಟನ್, 'ಎಕ್ಸೋಡಸ್ ನಮ್ಮ ದೇಶದ ಆಸ್ತಿ' ಎಂದು ಉದ್ಗರಿಸಿದ್ದಾರೆ. ನಾವು 1998ರಲ್ಲಿ ಅತ್ಯಂತ ಯಶಸ್ವೀ IPO ಆಗಿಯೂ ಹೊರಹೊಮ್ಮಿದೆವು. ಪ್ರಪಂಚದ ಅತ್ಯಂತ ಮುಂಚೂಣಿಯಲ್ಲಿದ್ದ ಬ್ಯಾಂಕರ್ಸ್ ಗೋಲ್ಡ್‌ಮನ್ ಸ್ಯಾಕ್ಸ್ ನಮ್ಮ ಕಂಪೆನಿಯನ್ನು ಸಾರ್ವಜನಿಕ ಮಾರುಕಟ್ಟೆಗೆ ಕೊಂಡೊಯ್ದದ್ದು ನಂಬಲಸಾಧ್ಯವಾದ ಅನುಭವ.

IPOಗಾಗಿ ರೋಡ್ ಷೋ ಮಾಡುವುದೆಂದರೆ ನಿಜಕ್ಕೂ ಹೃದಯಸ್ಪರ್ಶಿ ಅನುಭವ. ಕೇವಲ ಎರಡು ವಾರಗಳಲ್ಲಿ ನಾವು ಮೂವರೂ, ಅಂದರೆ, ಕೆ.ಬಿ.ಸಿ., ನಾನು ಹಾಗೂ ನಮ್ಮ ಸಿ.ಎಫ್.ಒ. ಯುರೋಪ್ ಮತ್ತು ಉತ್ತರ ಅಮೆರಿಕಾದ್ಯಂತ ಸುತ್ತಿದೆವು. ಪ್ರತಿದಿನ ಒಂದು ನಗರದಿಂದ ಹೊರಟು ಇಡೀ ದಿನ ಅನೇಕ ನಗರಗಳನ್ನು ದಾಟಿ ರಾತ್ರಿಗೆ ಮತ್ತೊಂದು ನಗರ ತಲುಪಿ, ಮತ್ತೆ ಮರುದಿನ ಬೆಳಗ್ಗೆ ಹೊರಡುವ ಈ ಯಶಸ್ವೀ ಪಯಣ ಸಂತೋಷದ ಮೇರು ತಲುಪಿತು. ಈ ಕಾರ್ಯ ಇದುವರೆಗಿನ ಎಲ್ಲ ಅನುಭವಕ್ಕಿಂತ ಭಿನ್ನವಾಗಿತ್ತು. ಪ್ರಪಂಚದಾದ್ಯಂತ ಹೂಡಿಕೆದಾರರಿಗೆ, ನಮ್ಮ ವ್ಯಾಪಾರಕ್ಕಾಗಿ ಎಷ್ಟು ಮತ್ತು ಏತಕ್ಕಾಗಿ ಹಣ ಸಂಗ್ರಹಿಸಲಿದ್ದೇವೆ, ಹಾಗೂ ನಮ್ಮ ಶೇರುಗಳ ಬೆಲೆ ಸುಮಾರು ಎಷ್ಟು ಎಂಬುದರ ಬಗ್ಗೆ ಒತ್ತಿ ಹೇಳಿದೆವು. ಪ್ರಾರಂಭಕ್ಕೆ ಶೇರುಗಳ ಬೆಲೆ 13 ಡಾಲರ್ ಎಂದು ನಿಗದಿಪಡಿಸಿದೆವು. ನಮ್ಮ ಮಾತುಗಳಿಂದ ತೃಪ್ತರಾದ ಬಹಳಷ್ಟು ಹೂಡಿಕೆದಾರರು ಶೇರುಗಳನ್ನು ಕೊಳ್ಳುವ ಆಸಕ್ತಿ ತೋರಿದರು. ಎರಡು ವಾರಗಳ ಅಂತ್ಯಕ್ಕೆ ಪ್ರಚಾರದ ಫಲವಾಗಿ ನಮ್ಮ ಶೇರುಗಳ ಬೆಲೆ 17 ಡಾಲರ್ ಎಂದು ತಿಳಿಯಿತು. ಆದರೂ ಹೂಡಿಕೆದಾರರ ನಡುವಿನ ಪ್ರಾಮಾಣಿಕ ಸಂಬಂಧಕ್ಕಾಗಿ, ಟ್ರೇಡಿಂಗಿನ ಹಿಂದಿನ ದಿನ, ನಮ್ಮ ಶೇರುಗಳ ಬೆಲೆ 15 ಡಾಲರ್ ಎಂದು ನಿರ್ಧರಿಸಿದೆವು. 1998 ಮಾರ್ಚ್ 18ರಂದು ಮಾರುಕಟ್ಟೆಯಲ್ಲಿ ಶೇರುಗಳ ಟ್ರೇಡಿಂಗ್ ಪ್ರಾರಂಭವಾಯಿತು. IPOನಲ್ಲಿ ನಾನು ಮತ್ತು

ಕೆ.ಬಿ.ಸಿ. ಇಬ್ಬರೂ ನಮ್ಮ ಕೆಲವು ಶೇರುಗಳನ್ನು ಮಾರಿ ಬಂದ 250,000 ಡಾಲರುಗಳಿಂದ ನಮ್ಮ ಎಲ್ಲಾ ಸಾಲಗಳನ್ನು ತೀರಿಸಿದೆವು.

ಪ್ರಾರಂಭವಾಗಿ ಐದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ನಮ್ಮದೇ ಕಂಪೆನಿ EXDS ಗುರುತಿನಡಿ NASDAQ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ವ್ಯಾಪಾರ ಮಾಡುತ್ತಿದೆಯೆಂದರೆ ಇದು ನಂಬಲಾಗದ ಹಾಗೂ ವಿವರಿಸಲಾಗದ ಕ್ಷಣ. ಇದಕ್ಕಾಗಿ 1998 ಮಾರ್ಚ್ 18ರಂದು ಬೆಳಿಗ್ಗೆ ಎಲ್ಲಾ ಕೆಲಸಗಾರರಿಗೆ ಒಂದು ಚಿಕ್ಕ ಸಂತೋಷಕೂಟವನ್ನು ಏರ್ಪಡಿಸಿದ್ದೆವು. ಆದರೆ, ದೊಡ್ಡ ಗ್ರಾಹಕರೊಬ್ಬರ ಬರವಿನಿಂದಾಗಿ ಆ ಕ್ಷಣವೇ ಎಲ್ಲರೂ ಕೆಲಸಕ್ಕೆ ಹಿಂತಿರುಗಬೇಕಾಯಿತು. ನಮ್ಮಿಬ್ಬರಿಗೂ ಈ ಕಂಪೆನಿಯನ್ನು ಇನ್ನೂ ಎತ್ತರಕ್ಕೆ ಒಯ್ಯುವ ಕಲೆ ಸಾಲದೆನಿಸಿದಾಗ IBMನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬಾಕೆಯನ್ನು ಸಿ.ಇ.ಒ. ಆಗಿ ತಂದೆವು. 2000ದ ಮಧ್ಯದಲ್ಲಿ ನಾವಿಬ್ಬರೂ ಎಕ್ಸೋಡಸ್ ಬಿಟ್ಟೆವು. ಎರಡು ವರ್ಷ ಆಕೆ ಅದನ್ನು ಚೆನ್ನಾಗಿ ನಡೆಸಿದರು. ಆದರೆ ಆಕೆಯ ಸ್ವಾರ್ಥ ಹಾಗೂ ಸ್ವೋದ್ಧಾರದ ನಿರ್ಧಾರಗಳಿಂದಾಗಿ 2001ರಲ್ಲಿ ಅದು ಅವನತಿಯ ಕಡೆ ವಾಲಿತು. ಮಾರುಕಟ್ಟೆಯ ಪೈಪೋಟಿಯನ್ನು ಎದುರಿಸಲಾರದೆ ಕೊನೆಗೆ 'ಕೇಬಲ್ ಎಂಡ್ ವೈರ್‌ಲೆಸ್' ಎಂಬ ಬ್ರಿಟಿಷ್ ಕಂಪೆನಿಗೆ ನವೆಂಬರ್ 2001ರಲ್ಲಿ ಮಾರಿಹೋಯಿತು.

IPOದ ನಂತರ ಕಲಿತ ಪಾಠ

ನಮ್ಮ ಕಂಪೆನಿ ಪಬ್ಲಿಕ್ ಹೋದ ನಂತರ ನಾನು ಗಮನಿಸಿದ ಅಂಶವೆಂದರೆ ಅದುತನಕ ನಮ್ಮೊಡನೆ ಮಾತನಾಡಲು, ಒಡನಾಡಲು ಬಯಸದ ಜನರು ಯಾ ಕಂಪೆನಿಗಳು ಈಗ ಪಾಲುದಾರರಾಗಲು ಅಥವಾ ಹೂಡಿಕೆದಾರರಾಗಲು ಬಯಸಿದ್ದು. ನಾವು ಮಾಡುತ್ತಿರುವ ಕೆಲಸ ಪ್ರಯೋಜನ ಇಲ್ಲವೆಂದು ಯಾರು ಲೆಕ್ಕಕ್ಕೇ ಇಡದೆ ಕಡೆಗಣಿಸಿದ್ದರೋ ಅವರಿಗೆ ನಮ್ಮ ಗೆಲುವು ಹಾಗೂ ವಾಲ್‌ಸ್ಟ್ರೀಟ್ ಮತ್ತು ಉದ್ಯಮಿಗಳು ನಮ್ಮನ್ನು ಹೊಗಳುವುದನ್ನು ಕಂಡು ಅತ್ಯಂತ ಆಶ್ಚರ್ಯವಾಗಿತ್ತು. ಗೌರವಾನ್ವಿತ ವಾಲ್‌ಸ್ಟ್ರೀಟ್ ಪತ್ರಿಕೆಯಲ್ಲಿ 'ಅಂಡರ್ ದ ರೇಡಾರ್' ಎಂಬ ಲೇಖನ ನಮ್ಮನ್ನು ಕುರಿತಾಗಿತ್ತು. ನನ್ನನ್ನು ಅನೇಕ ಸಂಸ್ಥೆಗಳು ಉಪನ್ಯಾಸ ನೀಡಲು ಆಹ್ವಾನಿಸಿದವು. ನವದೆಹಲಿಯ ಬಿರ್ಲಾ ಕುಟುಂಬಕ್ಕೆ ನನ್ನನ್ನು ಪರಿಚಯಿಸಲಾಯಿತು. ಅವರ ಅತಿಥಿಯಾಗಿ ಅವರ ಮನೆಯಲ್ಲಿ ಅವರ ಕುಟುಂಬದವರೊಡನೆ ಊಟ ಮಾಡಿದೆ. ಪ್ರಪಂಚದ ಎಲ್ಲ ಸ್ತರದ ಜನರನ್ನು ನೋಡಿದ ಮೇಲೆ ಮಧ್ಯಮ ವರ್ಗದ ಸಾಮಾನ್ಯ ಮನುಷ್ಯನಾಗಿ ಬಾಳುವುದೇ ಹೆಚ್ಚು ಸಂತೋಷದಾಯಕವಾಗಿ ಕಂಡಿತು. ಶ್ರೀಮಂತರ ನಡುವೆ ನನಗೆ ಕೃತಕ ನೀರ್ಗುಳ್ಳೆಯಂತೆ ಭಾಸವಾಗುತ್ತಿತ್ತು.

ಬೇರು ಸೂರು

ನನ್ನ ಜ್ಞಾನ, ಅನುಭವಗಳನ್ನು ಹಂಚಿಕೊಳ್ಳಲು ಅನೇಕ ಕಡೆ ಭಾಷಣಗಳನ್ನು ಮುಂದುವರಿಸಿದೆ. ಉದ್ಯಮವನ್ನು ಬೆಳೆಸಲು ಜನರನ್ನು ಪ್ರೋತ್ಸಾಹಿಸುವುದು ಹಾಗೂ ಉತ್ತಮ ಗೆಲುವನ್ನು ಸಾಧಿಸಲು ನಾವು ಮಾಡಿದ ತಪ್ಪುಗಳನ್ನು ಅವರು ಮಾಡದಂತೆ ಎಚ್ಚರಿಸುವುದು ನನ್ನ ಕರ್ತವ್ಯವೆಂದು ಭಾವಿಸಿದೆ. ಭಾರತದಲ್ಲಿ ಹೊಸದಾಗಿ ಹುಟ್ಟುವ ಉದ್ಯಮಿಗಳಿಗೆ ಮಾರ್ಗದರ್ಶಕರ ಕೊರತೆ ಬಹಳವಾಗಿರುವುದನ್ನು ಕಂಡು ನನ್ನ ಹೆಚ್ಚಿನ ಸಮಯವನ್ನು ಅಲ್ಲಿ ಕಳೆಯುತ್ತಿದ್ದೆ.

ಶೋಕದ ದಿನಗಳು

1996ರ ಕೊನೆಯಲ್ಲಿ ನಾವು ನಮ್ಮ ತಂದೆಯವರನ್ನು ಕಳೆದುಕೊಂಡೆವು. ಅವರು ತೀರಿಕೊಳ್ಳುವ ಒಂದು ದಿನ ಮೊದಲು ಅವರನ್ನು ಕಾಣುವುದು ನನಗೆ ಸಾಧ್ಯವಾಯಿತು. ಬಾಲ್ಯದಿಂದಲೂ ನಮ್ಮ ನಡುವಿನ ಬಾಂಧವ್ಯ ವಿಶೇಷವಾದದ್ದು. ಅವರ ಆಶೀರ್ವಾದ ಸದಾಕಾಲ ನನ್ನ ಮೇಲಿರುತ್ತದೆ.

'ನೆಟ್‌ಸ್ಕೇಲರ್' – ನನ್ನ ಮುಂದಿನ ಸಂಸ್ಥೆ

'ಎಕ್ಸೋಡಸ್' ದೊಡ್ಡದಾಗಿ ಬೆಳೆದಂತೆ ನನ್ನ ಪ್ರಾರಂಭಿಕ ದಿನಗಳನ್ನು ಕಳೆದುಕೊಂಡ ಅನುಭವ ಕಾಡತೊಡಗಿತು. ಆದ್ದರಿಂದ, 1999ರಲ್ಲಿ 'ನೆಟ್‌ಸ್ಕೇಲರ್' ಎಂಬ ಸಂಸ್ಥೆಗೆ ಮೂಲಧನ ಹೂಡಿಕೆಯಿತ್ತೆ. ಅದ್ವಿತೀಯ ತಾಂತ್ರಿಕತೆ ಬಳಸಿ ಎಕ್ಸೋಡಸ್ ರೀತಿಯ ಡೇಟಾ ಸೆಂಟರನ್ನೇ ಹೆಚ್ಚು ಸಮರ್ಥವಾಗಿಸುವುದು ಈ ಸಂಸ್ಥೆಯ ಕೆಲಸವಾಗಿತ್ತು. 2000ದ ಬೇಸಗೆಯಲ್ಲಿ ಎಕ್ಸೋಡಸ್ ಬಿಟ್ಟು ನೆಟ್‌ಸ್ಕೇಲರ್‌ನ ಅಧ್ಯಕ್ಷ ಮತ್ತು ಸಿ.ಇ.ಒ. ಆದೆ. ಡಾಟ್ ಕಾಂ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾರಣ ನಾವು 37 ಮಿಲಿಯನ್ ಡಾಲರುಗಳನ್ನು ಹೂಡಿಕೆಯಾಗಿ ಪಡೆಯಲು ಸಮರ್ಥರಾದೆವು. ಆದರೆ, 9/11ರ ವಿಧ್ವಂಸಕ ಘಟನೆಯೊಡನೆ ಡಾಟ್ ಕಾಂ ಬಬ್ಲ್ ಸಹಾ ಒಡೆದು ಹೋಯಿತು. ಆಗ ಉದ್ಯಮಕ್ಕಾಗಿ ನಾವು ಯಾವ ತಂತ್ರಜ್ಞಾನವನ್ನು ಬೆಳೆಸುತ್ತಿದ್ದೆವೋ ಅದು ಅರ್ಥಹೀನವಾಯ್ತು. ಇವು ಅತ್ಯಂತ ಕಠಿಣ ಕ್ಷಣಗಳು. ಹೂಡಿಕೆದಾರರಿಗೆ ಹಣವನ್ನು ಹಿಂದಿರುಗಿಸಿ ಕಂಪೆನಿಯನ್ನು ಮುಚ್ಚಿಬಿಡುವುದೋ ಅಥವಾ ಮಾರುಕಟ್ಟೆ ಬಯಸುವ ಹೊಸ ಉತ್ಪನ್ನವನ್ನು ತರಲು ಬೇರೆ ತಂತ್ರಜ್ಞಾನದ ಮೇಲೆ ಕೆಲಸ ಮಾಡುವುದೋ ಎಂಬ ಬಗ್ಗೆ ಚಿಂತಿಸತೊಡಗಿದೆವು. ಕೊನೆಗೆ ಆಂತರಿಕ ಚರ್ಚೆ ಮತ್ತು ವಾದ-ವಿವಾದಗಳ ನಂತರ ಮಾರುಕಟ್ಟೆ ಬಯಸುವ ತಂತ್ರಜ್ಞಾನವನ್ನು ಬೆಳೆಸುವುದೆಂದು ನಿರ್ಧರಿಸಿದೆವು. 18 ತಿಂಗಳ ಕಠಿಣ ಪರಿಶ್ರಮದಿಂದ ಹೊರಬಂದ ಉತ್ಪನ್ನವೇ ಇಂದೂ ನೆಟ್‌ಸ್ಕೇಲರ್‌ನ ತಳಹದಿಯಾಗಿದೆ. ಈ ಲೇಖನವನ್ನು ಬರೆಯುವ ಹೊತ್ತಿಗೆ ನೆಟ್‌ಸ್ಕೇಲರ್ ಮಾರುಕಟ್ಟೆಯ ಮುಂಚೂಣಿಯಲ್ಲಿದ್ದು 600 ಮಿಲಿಯನ್ ಡಾಲರ್‌ಗಳ ವಾರ್ಷಿಕ ಆದಾಯ ಹೊಂದಿದೆ.

ಸಂಸ್ಥೆಯನ್ನು ಉಳಿಸುವ ಪ್ರಯತ್ನ

ಹೊಸ ತಂತ್ರಜ್ಞಾನವನ್ನು ತರಲು ಸಾಕಷ್ಟು ಸಮಯ ಬೇಕಾದ ಕಾರಣ ಕೆಲಸಗಾರರ ಸಂಖ್ಯೆಯನ್ನು ಇಳಿಸಿ, ಬ್ಯಾಂಕಿನಲ್ಲಿರುವ ಹಣವನ್ನು ಕೊನೆಯವರೆಗೆ ಬೆಳೆಸಬೇಕೆಂದು ತೀರ್ಮಾನಿಸಿದೆವು. ಸಂಸ್ಥೆಯ ಅನೇಕರ ಇಷ್ಟಕ್ಕೆ ವಿರೋಧವಾಗಿ, ಅಮೆರಿಕದ ಆಫೀಸಿನಲ್ಲಿ 50% ಜನ ಕೆಲಸಗಾರರನ್ನು ಕೈಬಿಟ್ಟು 2001ರ ಅಕ್ಟೋಬರ್‌ನಲ್ಲಿ ಬೆಂಗಳೂರಿನಲ್ಲಿ ಇಂಡಿಯಾ ಆರ್.ಎಂಡ್.ಡಿ. ಸೆಂಟರ್ ತೆರೆದೆವು. ಈ ನಿರ್ಧಾರದಿಂದ ವಿಚಲಿತರಾದ ನಮ್ಮ ಇಂಜಿನಿಯರಿಂಗ್ ವಿ.ಪಿ.ಯವರು ಆರು ತಿಂಗಳೊಳಗೆ ಸಂಸ್ಥೆಯನ್ನು ಬಿಡುವುದಾಗಿ ತಿಳಿಸಿದರು. ಕಾರಣ, ಇಂಡಿಯಾದ ಇಂಜಿನಿಯರ್‌ಗಳನ್ನು ನಂಬಿ ಗುಣಮಟ್ಟದ ಉತ್ಪನ್ನವನ್ನು ಹೊರತರಲು ಸಾಧ್ಯವಿಲ್ಲವೆಂಬುದು ಅವರ ಅಭಿಪ್ರಾಯ. ಈ ಬಿಗಿಯಾದ ವಾತಾವರಣದಲ್ಲಿ 50 ಜನರನ್ನು ಸಂಸ್ಥೆಯಿಂದ ಕೈಬಿಟ್ಟ ಬಗ್ಗೆ ನನ್ನೊಡನಿದ್ದ ನನ್ನ ತಾಯಿಯವರಿಗೂ ಸಹಾ ಬಹಳ ಬೇಸರವಾಗಿತ್ತು. ಈ ಬಗೆಯ ತೀವ್ರ ಬದಲಾವಣೆ ಮಾಡುವುದು ಮಾನಸಿಕವಾಗಿ ನನಗೂ ಹಿಂಸೆಯಾಗಿತ್ತು. 9/11ರ ನಂತರದ ಪರಿಣಾಮ ಹಾಗೂ ಆರ್ಥಿಕ ಪರಿಸ್ಥಿತಿಯಿಂದಾಗಿ ಕಂಪೆನಿಯನ್ನು ಮರೆತು ಕೆಲವು ವರ್ಷ ವಿಶ್ರಾಂತಿ ಹೊಂದಿ ನಂತರ ಏನು ಮಾಡುವುದೆಂದು ಯೋಚಿಸಲು ಅನೇಕ ಜನ ಸಲಹೆ ನೀಡಿದರು. ಸಂಸ್ಥೆಗಾಗಿ ದುಡಿಯುತ್ತಿರುವ ಉಳಿದ 50 ಜನ, ಉದ್ಯೋಗ ದೊರೆಯದ ಸಂದಿಗ್ಧ ವಾತಾವರಣ, ಉಪಯುಕ್ತ ಉತ್ಪನ್ನವನ್ನು ಕೊಡಬಲ್ಲೆ ಎಂಬ ನಂಬಿಕೆ ನನ್ನನ್ನು ನೆಟ್‌ಸ್ಕೇಲರ್‌ನಲ್ಲೇ ಉಳಿಯುವಂತೆ ಮಾಡಿತು. ಹಿಂದಿರುಗಿ ನೋಡಿದಾಗ ಬಹುಶಃ ಇದು ನನ್ನ ಉತ್ತಮ ನಿರ್ಧಾರವಾಗಿತ್ತು.

ಇಂದು ನೆಟ್‌ಸ್ಕೇಲರ್ ಅಮೆರಿಕಾದಲ್ಲಿ 1000 ಹಾಗೂ ಭಾರತದಲ್ಲಿ 1000 ಕೆಲಸಗಾರರನ್ನು ಹೊಂದಿದೆ. ನಾವು ಮಾಡಿದ ಈ ತಂತ್ರಜ್ಞಾನ ಗೂಗಲ್, ಅಮೆಝಾನ್, ಇ-ಬೇ, ಮೈಕ್ರೋಸಾಫ್ಟ್, ಸಿಟಿಬ್ಯಾಂಕ್, ಜೆ.ಸಿ.ಪೆನ್ನಿ ಮೊದಲಾದ ನಮ್ಮ ಗ್ರಾಹಕರಿಂದ ಅತ್ಯುತ್ತಮವೆಂಬ ಪ್ರಶಂಸೆಗೆ ಪಾತ್ರವಾಗಿ ಉದ್ಯಮದಲ್ಲೇ ಶ್ರೇಷ್ಠ ಪದವಿ ಗಳಿಸಿದೆ. ಪ್ರತಿದಿನ ಪ್ರಪಂಚದ ಅಂತರ್ಜಾಲ ಬಳಕೆದಾರರಲ್ಲಿ 75% ಜನ ನಮ್ಮ ಉತ್ಪನ್ನವನ್ನು ಬಳಸುತ್ತಿದ್ದಾರೆ. 'ಸಿಟ್ರಿಕ್ಸ್' ಎಂಬ ಸಂಸ್ಥೆ 325 ಮಿಲಿಯನ್ ಡಾಲರಿಗೆ ನೆಟ್‌ಸ್ಕೇಲರನ್ನು ಕೊಂಡು ಕೊನೆಯ ಪಕ್ಷ 25 ಮಿಲಿಯನೇರ್‌ಗಳನ್ನು ಸೃಷ್ಟಿಸಿದೆ. ಅಲ್ಲದೆ ಪ್ರತಿಯೊಬ್ಬ ಹೂಡಿಕೆದಾರ ನಾಲ್ಕರಿಂದ ಹತ್ತು ಪಟ್ಟು ಲಾಭ ಗಳಿಸಿದ್ದಾರೆ.

ಇದರಿಂದ, 'ಯಾವುದರಲ್ಲಾದರೂ ನಂಬಿಕೆಯಿದ್ದರೆ, ಗಂಡಾಂತರವನ್ನು ಎದುರಿಸಿ, ಧೈರ್ಯವಾಗಿ ಮುನ್ನುಗ್ಗು. ಇಲ್ಲದಿದ್ದರೆ ನಿನಗಾಗಿ ಕಾದಿದ್ದ ಯಶಸ್ಸನ್ನು ಕಳೆದುಕೊಳ್ಳುತ್ತೀಯೆ, ನಿನ್ನ ಸಾಮರ್ಥ್ಯವನ್ನು ನೀನಲ್ಲದೆ ಬೇರೆಯವರು ಅರಿಯಲಾರರು. ಬೇರೆಯವರ ಅರಿವಿಲ್ಲದ ಟೀಕೆಗಳಿಗೆ ಕಿವಿಗೊಡಬೇಡ' ಎಂಬುದನ್ನು ಕಲಿತೆ. ಒಂದುವೇಳೆ ಕೇಳಿದ್ದರೆ, ಇಷ್ಟೊಂದು ಜನ ಗ್ರಾಹಕರ ಮತ್ತು ಕೆಲಸಗಾರರ ಬದುಕಿನಲ್ಲಿ

ತಂದ ಬದಲಾವಣೆಯ ಅವಕಾಶ ಕಳೆದುಕೊಳ್ಳುತ್ತಿದ್ದೆ.

ಆಸೆ ಅಥವಾ ದುರಾಸೆ

ನೆಟ್‌ಸ್ಕೇಲರ್‌ನ ಕಠಿಣ ಸಮಯದಲ್ಲಿ 'ನಾನೇ ಧೃತಿಗೆಟ್ಟರೆ ನಮ್ಮನ್ನೇ ನಂಬಿದ ಜನರಿಗೆ ತಪ್ಪು ಸಂದೇಶವನ್ನು ಕೊಟ್ಟಂತಾಗುತ್ತದೆ' ಎಂಬುದನ್ನು ಅರಿತೆ. ನಮ್ಮ ಸಂಸ್ಥೆ ಬೇರೆಯವರ ವಶವಾದಾಗ ಪ್ರತಿಯೊಬ್ಬರ ಆಸೆಗೂ ದುರಾಸೆಗೂ ಇರುವ ಅಂತರ ತಿಳಿದೆ. ಹೂಡಿಕೆದಾರರಿಗೂ ಸಮಿತಿಯ ಸದಸ್ಯರಿಗೂ ಕೇವಲ ತಮ್ಮ ಹೂಡಿಕೆಯ ಪ್ರತಿಯೊಂದು ಪೈಸೆಗೂ ಗರಿಷ್ಠ ಲಾಭಗಳಿಸುವ ಒಲವು. ಅವರ ಶ್ರೇಯಸ್ಸಿಗೆ ಕಾರಣರಾದ ದುಡಿಮೆಗಾರರ ಬಗೆಗೆ ಎಳ್ಳಷ್ಟೂ ಗಮನವಿಲ್ಲ. ಇನ್ನು ಕೆಲಸಗಾರರ ದುರಾಸೆ ಅಥವಾ ಹಣದ ದಾಹ ಎಲ್ಲೆ ಇಲ್ಲದಷ್ಟು. 50,000 ಗಳಿಸಿದವ 100,000ಕ್ಕಾಗಿ, 100,000 ಗಳಿಸುವವ 200,000ಕ್ಕಾಗಿ, 200,000 ಗಳಿಕೆಯವ 500,000ಕ್ಕಾಗಿ, ಮತ್ತು 500,000 ಉಳ್ಳವ 1,000,000ಕ್ಕಾಗಿ ಹಂಬಲಿಸುತ್ತಾನೆ. ಕವಿ ಗೋಪಾಲಕೃಷ್ಣ ಅಡಿಗರ, 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ' ಎಂಬ ಸಾಲು ನೆನಪಾಗುತ್ತದೆ.

ನಾವು ಕಂಪೆನಿಯೊಳಗೆ ಪ್ರಾಮಾಣಿಕವಾಗಿ ಕೌಶಲ್ಯ, ಅನುಭವ ಹಾಗೂ ಸಂಸ್ಥೆಗೆ ಅವರು ನೀಡಿದ ಕೊಡುಗೆಗೆ ಅನುಸಾರವಾಗಿ ನಮ್ಮ ಕೆಲಸಗಾರರಿಗೆ ಸ್ಟಾಕ್ಸ್ ಹಂಚಿದರೂ, ಜನ ಹೋಲಿಸುವುದು ಮತ್ತು ದೂರುವುದನ್ನು ಬಿಡಲಿಲ್ಲ. ಇದು ನನಗೊಂದು ಹೊಸ ಪಾಠ, ನಿಜವಾಗಿಯೂ ಮಾನವ ನಡತೆಯ ವಿವಿಧ ಮುಖಗಳನ್ನು ಅರಿಯುವಲ್ಲಿ ಕಣ್ಣು ತೆರೆಸಿದೆ. ಒಡೆಯನಿಗೆ ಕೆಲಸಗಾರರ ಅಹವಾಲನ್ನು ಕೇಳುವ ಮತ್ತು ತನ್ನ ಮೌಲ್ಯ ಹಾಗೂ ತತ್ವಗಳಿಗೆ ಅಂಟಿಕೊಳ್ಳುವುದು ಎಷ್ಟು ಮುಖ್ಯವೋ ನಮ್ಮ ವೈಯಕ್ತಿಕ ಜೀವನದ ಶಾಂತಿ ಕೆಡಿಸುವ ಆ ಸಮಸ್ಯೆಗಳನ್ನು ಮನೆಗೆ ತಾರದಿರುವುದೂ ಅಷ್ಟೇ ಅಗತ್ಯ.

ಸಿ.ಇ.ಒ. ಪೀಠದ ಕುರೂಪ ಮುಖ

ಮಾಧ್ಯಮಗಳಲ್ಲಿ ಕಾಣುವಂತೆ ಸಿ.ಇ.ಒ. ಕೆಲಸ ಯಾವಾಗಲೂ ಸುಂದರವಾಗೇನೂ ಇಲ್ಲ. 30% ಭಾಗ ಸಿ.ಇ.ಒ. ಕೆಲಸ ಜನರ ಸಮಸ್ಯೆಗಳನ್ನು ಪರಿಹರಿಸುವುದು. ಇದು ಅತ್ಯಂತ ಹೋರಾಟದ, ಮಾನಸಿಕ ಬಲವನ್ನು ಕುಗ್ಗಿಸುವಂಥ ಕೆಲಸ. ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಸಂಸ್ಥೆಯು ಬೇರೆಯವರ ಸ್ವಾಧೀನವಾದಾಗ ಬಹಳಷ್ಟು ಕೆಲಸಗಾರರು ನನ್ನಲ್ಲಿಗೆ ಬಂದು ಹೆಚ್ಚು ಹಣ ಗಳಿಸುವ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ ನಾನು ಮನಃಶಾಸ್ತ್ರಜ್ಞನ ಪಾತ್ರ ವಹಿಸಬೇಕಾಯಿತು. ಅದೇ ಸಿ.ಇ.ಒ. ಆಗಿ ನಾನು ಮಾತ್ರ ಯಾರ ಬಳಿಗೂ ಹೋಗಲಾರೆ, ಬಹಳಷ್ಟು ವಿಚಾರಗಳನ್ನು ಚರ್ಚಿಸಲೂ ಆಗದು. ಸಿ.ಇ.ಒ. ಬಗ್ಗೆ ಎಲ್ಲರೂ ಯೋಚಿಸುವುದಕ್ಕೆ ವಿರುದ್ಧವಾಗಿ ಸ್ವತಃ ನನ್ನ

ಕುಟುಂಬದಲ್ಲಿ ಇದ್ದೂ ಸಹ ಅನೇಕ ಸಂದರ್ಭಗಳಲ್ಲಿ ನಾನು ಒಬ್ಬಂಟಿ. ಆದರೆ, ಪ್ರತಿದಿನ ಬೆಳಗ್ಗೆ ಎದ್ದ ಕೂಡಲೇ ಬೇಕಾದಷ್ಟು ಹೋರಾಟದ ಆಹ್ವಾನ ಮತ್ತು ಸಂಭ್ರಮ ನಮಗಾಗಿ ಕಾದಿರುತ್ತದೆ. ಅದೇ ನಮ್ಮನ್ನು ಮುನ್ನಡೆಸುತ್ತದೆ. ಸಿ.ಇ.ಒ. ಆಗಿ ಸಂಸ್ಥೆಯ ಮೌಲ್ಯಗಳನ್ನು ರೂಪಿಸುತ್ತಾ ಆಳವಾದ ಆನಂದವನ್ನು ಅನುಭವಿಸಿದ್ದೇನೆ.

ಜನರನ್ನು ಬಿಟ್ಟುಕೊಡುವುದು– ಸಿ.ಇ.ಒ.ನ ಅತ್ಯಂತ ಕಠಿಣತಮ ಕೆಲಸ

ಸಿ.ಇ.ಒ.ನ ಮುಂದಿರುವ ಅತ್ಯಂತ ಕಠಿಣತಮ ಕೆಲಸ ಯಾವುದು ಎಂದು ನೀವು ಕೇಳಿದರೆ, ಅದು ಸಂಸ್ಥೆಯ ಒಳಿತಿಗಾಗಿ ಜನರನ್ನು ಬಿಟ್ಟುಬಿಡುವ ನಿರ್ಧಾರ. ಇಲ್ಲದಿದ್ದರೆ ಒಂದು ಕೆಟ್ಟ ಸೇಬು ಬುಟ್ಟಿಯ ಎಲ್ಲ ಹಣ್ಣುಗಳನ್ನೂ ಕೆಡಿಸಿಬಿಡುತ್ತದೆ. ಸಂಸ್ಥೆಗೆ ಫಲದಾಯಕರಲ್ಲದ ಕೆಲಸಗಾರರನ್ನು ಮಾತ್ರವಲ್ಲದೆ ಕೆಲವೊಮ್ಮೆ ಉನ್ನತ ಹುದ್ದೆಯ ಕಾರ್ಯನಿರ್ವಾಹಕರನ್ನೂ ಸಹ ಕಳುಹಿಸಿಕೊಡಬೇಕಾಗುತ್ತದೆ. ನನ್ನ ಮೊದಲ ಕಂಪೆನಿ ಎಕ್ಸೋಡಸ್‌ನಲ್ಲಿ 'ರೋಜರ್' ಎಂಬ ಒಬ್ಬ ಕೆಲಸಗಾರನು ಬಹಳ ಪರಿಶ್ರಮಿಯೂ ಸಂಸ್ಥೆಯ ಬೆಳವಣಿಗೆಗೆ ಅಪಾರ ಕೊಡುಗೆ ಇತ್ತವನೂ ಆದ 'ರಾಬ್' ಎಂಬ ಇನ್ನೊಬ್ಬ ಕೆಲಸಗಾರನ ಮೇಲೆ ಹೊಟ್ಟೆಕಿಚ್ಚು ಪಡುತ್ತಿದ್ದನು. ಒಂದು ದಿನ ರೋಜರ್ ನನ್ನ ಆಫೀಸಿಗೆ ಬಂದು ರಾಬ್ ಮೇಲೆ ದೂರುಗಳನ್ನಿತ್ತನು. ಅವನ ಈ ವರ್ತನೆಯಿಂದ ಕೋಪಗೊಂಡ ನಾನು ಆ ಕ್ಷಣವೇ ಕೆಲಸಕ್ಕೆ ರಾಜೀನಾಮೆ ಕೊಡುವಂತೆ ಹೇಳಿದೆ. ಇದರಿಂದ ಆಘಾತಗೊಂಡ ಅವನು ತನ್ನ ಕಿವಿಯನ್ನೇ ನಂಬದಾದ. ಆದರೆ, ನನ್ನ ಎದುರೇ ರಾಜೀನಾಮೆ ಪತ್ರ ಬರೆಸಿ ಅವನನ್ನು ಕಳಿಸಿಬಿಟ್ಟೆ. ಆದರೆ, ಇದು 'ಎಚ್.ಆರ್.' ಕಾನೂನಿನ ಪ್ರಕಾರ ಸರಿಯಲ್ಲವೆಂದು ಆಮೇಲೆ ತಿಳಿಯಿತು. ಅದರ ಬದಲು, ಅಂಥವರ ಮೇಲೆ ದೂರು ದಾಖಲಿಸಿ ನಂತರ 30–45 ದಿನಗಳಲ್ಲಿ ಹೊರಹಾಕಬಹುದು.

ಎರಡನೆಯ ಉದಾಹರಣೆ, ನೆಟ್‌ಸ್ಕೇಲರ್‌ನ ಉನ್ನತ ಹುದ್ದೆಯ ನಮ್ಮ ಸೇಲ್ಸ್ ವಿ.ಪಿ.ಯನ್ನು ಕಳುಹಿಬಿಟ್ಟದ್ದು. ಗ್ರಾಹಕರ ಸ್ಥಿತಿಯನ್ನು ಅರಿಯದೆ, 3 ವಾರಗಳಾದರೂ ಯಾವುದೇ ಫಲಿತಾಂಶವನ್ನೂ ಕೊಡದೆ, ಪ್ರತಿಸಲ ಅನೇಕ ನೆಪಗಳನ್ನು ಹೇಳುತ್ತಿದ್ದನು. ಒಂದು ದಿನ ಅವನನ್ನು ನನ್ನ ಆಫೀಸಿಗೆ ಕರೆಸಿ, 'ನಿನ್ನ ಕೌಶಲ ಮತ್ತು ನನ್ನ ಕಂಪೆನಿಯ ಅವಶ್ಯಕತೆ ಒಂದಕ್ಕೊಂದು ಹೊಂದುತ್ತಿಲ್ಲ. ಆದ್ದರಿಂದ ನಾವು ಬೇರೆಯಾಗೋಣ' ಎಂದು ತಿಳಿಸಿದೆ. ವಿಚಲಿತನಂತೆ ಕಂಡ ಆತ, 'ತನ್ನ ವೃತ್ತಿಯ 20 ವರ್ಷಗಳಲ್ಲಿ ಯಾವ ಸಿ.ಇ.ಒ. ಸಹ ಈ ರೀತಿ ತಿಳಿಸಿರಲಿಲ್ಲ' ಎಂದು ದೂರಿದನು. ಆದರೂ ನಾನು ಬಿಡದೆ, 'ನಮ್ಮಿಬ್ಬರ ಪಾಲುಗಾರಿಕೆ ಸಾಧ್ಯವೇ ಇಲ್ಲ'ವೆಂದು ತಿಳಿಸಿ ಕಳಿಸಿಬಿಟ್ಟೆ. ಕೊನೆಗೆ ಬಿಟ್ಟುಹೋಗಲು ಒಪ್ಪಿದ ಆತ ಬೇರೆ ಕೆಲಸಗಾರರನ್ನೂ ತನ್ನೊಡನೆ ಒಯ್ಯಲು ಪ್ರಯತ್ನಿಸಿದ. ಆದರೆ, ನನ್ನ ಮೇಲೆ ಕೆಲಸಗಾರರಿಗೂ ಬೇರೆ ಮುಖ್ಯಸ್ಥರಿಗೂ ಅಪಾರ ನಂಬಿಕೆ ಇದ್ದ ಕಾರಣ ಅದು ನಡೆಯಲಿಲ್ಲ.

ಬೇರು ಸೂರು

ಗ್ರಾಹಕರೇ ದೇವರು – ದೇವರು ನಮ್ಮ ಮಾತನ್ನು ಕೇಳುತ್ತಾನೆ, ಅಂತೆಯೇ ಅವರೂ

ನನ್ನ ಮೊದಲ ಕಂಪೆನಿಯಲ್ಲಿದ್ದ ಪುಂಡ ಗ್ರಾಹಕನೊಬ್ಬನ ಬಗ್ಗೆ ಸ್ವಾರಸ್ಯಕರವಾದ ಸಂಗತಿ ನಡೆಯಿತು. ಬೇರೆ ಕಂಪೆನಿಗಳಂತೆ ನಾವೂ ಗ್ರಾಹಕರನ್ನು ಯಾವಾಗಲೂ ಸರಿ ಎಂದು ಭಾವಿಸಿ ಅವರ ಅವಶ್ಯಕತೆಗಳನ್ನು ಪೂರೈಸುತ್ತೇವೆ. ನ್ಯೂಯಾರ್ಕ್‌ನ 'ರಿಯಲ್‌ಟೈಂ ಕೋಟ್ಸ್'ನ ಬಾಬ್ ಎಂಬ ಗ್ರಾಹಕ ಒಬ್ಬ ಇಟಾಲಿಯನ್. ಅವನು ತುಂಬಾ ತಗಾದೆ ತೆಗೆದು ನಮ್ಮೊಡನೆ ಇದ್ದ ವ್ಯಾಪಾರ ಸಂಬಂಧವನ್ನು ದೂಷಿಸಿ ಕೆಲಸಗಾರರ ಮೇಲೆ ಕೂಗಾಡುತ್ತಿದ್ದನು. ನಮ್ಮ ಕೆಲಸಗಾರರು ಇವನ ನಿಯಂತ್ರಿಸಲಾಗದ ವರ್ತನೆಯ ಬಗ್ಗೆ ನನ್ನಲ್ಲಿ ಬಂದು ದೂರಿದರು. ಒಂದು ದಿನ ಅವನಿಗೆ ಕರೆ ಮಾಡಿ ನಮ್ಮ ಕಂಪೆನಿ ಮತ್ತು ಉತ್ಪನ್ನದ ಬಗ್ಗೆ ಏನಾದರೂ ಹೇಳುವುದಿದ್ದರೆ ನನ್ನೊಡನೆ ಮಾತನಾಡಬೇಕೆಂದೂ, ನಮ್ಮ ಉತ್ಪನ್ನದ ಒಳಿತು–ಕೆಡುಕುಗಳು ನನಗೆ ಸೇರಿದ್ದು, ಅದಕ್ಕಾಗಿ ನಮ್ಮ ಕೆಲಸಗಾರರನ್ನು ಬೈಯುವ ಅಗತ್ಯ ಇಲ್ಲವೆಂದೂ ಹೇಳಿದೆ. ನನ್ನ ಈ ನೇರ ಮಾತುಗಳ ನಂತರ ಅವನ ವರ್ತನೆಯಲ್ಲಿ ಬದಲಾವಣೆಯಾಗಿ, ರಚನಾತ್ಮಕ ಸಲಹೆಗಳನ್ನು ಕೊಡಲು ಪ್ರಾರಂಭಿಸಿದ. ಸ್ವಾರಸ್ಯವೆಂದರೆ, ಒಮ್ಮೆ ನಾನು ಅವನಿಗೆ ನಮ್ಮನ್ನು ಬಿಟ್ಟು ಬೇರೆ ವ್ಯಾಪಾರಿಯ ಹತ್ತಿರ ಹೋಗಲು ಹೇಳಿದೆ. ಆಗ ಅವನು ಅತ್ಯಂತ ವಿನೀತನಾಗಿ, 'ನಾನು ವ್ಯವಹರಿಸಿದ ಕಂಪೆನಿಗಳಲ್ಲಿ ನಿಮ್ಮದು ಅತ್ಯಂತ ಉತ್ತಮವಾದದ್ದು ಮತ್ತು ನಿಮ್ಮ ಗ್ರಾಹಕನಾಗಿಯೇ ಮುಂದುವರಿಯುತ್ತೇನೆ' ಎಂದು ತಿಳಿಸಿದನು.

ಗ್ರಾಹಕರು ಯಾವಾಗಲೂ ಸರಿ ಎಂದು ಊಹಿಸಬಾರದೆಂದು ಅರಿತೆ. ಗ್ರಾಹಕನು ನಿಮ್ಮ ಕೆಲಸಗಾರರ ಮೇಲೆ ಬೆದರಿಕೆ ಒಡ್ಡಿದರೆ, ಅರ್ಥವಿಲ್ಲದ ಕೆಲವು ತತ್ವಗಳಿಗಾಗಿ ಕಣ್ಣುಮುಚ್ಚಿ ಅನುಸರಿಸುವ ಬದಲು, ಒಡೆಯನಾಗಿ ಅವರನ್ನು ರಕ್ಷಿಸುವುದು ಬಹಳ ಮುಖ್ಯ. ಸಮಸ್ಯೆಯನ್ನು ಕಡೆಗಣಿಸಿ, ತನಗೆ ತಾನೇ ಸರಿಹೋಗುವುದೆಂಬ ಭ್ರಮೆಯನ್ನು ಬಿಟ್ಟು ಸಂದರ್ಭವನ್ನು ಹಿಡಿತಕ್ಕೆ ಒಳಪಡಿಸಿ ಸಮಸ್ಯೆಯನ್ನು ಎದುರಿಸುವುದೇ ಸರಿಯಾದ ಕ್ರಮ.

ದೈಹಿಕ ಶ್ರಮ ಸಹಜವೆಂದರೂ, ಪ್ರಯಾಣ ಮತ್ತು ಸಮಯದ ನಡುವೆ ಹೋರಾಟ

ಉದ್ಯಮಿಗಿರುವ ಒಂದು ಮುಖ್ಯ ಸಮಸ್ಯೆ ಎಂದರೆ 'ಜೆಟ್‌ಲ್ಯಾಗ್'. ಉದ್ಯಮಿಯಾಗಿ ಸ್ಥಳೀಯ ಕಾಲಮಾನಕ್ಕೆ ಅನುಸಾರವಾಗಿ ನಾನು ಪ್ರತಿಯೊಂದು ಸಭೆಯಲ್ಲೂ ಗಮನವಿಟ್ಟು ಬೆಳಗ್ಗೆಯಿಂದ ಸಂಜೆಯುವರೆಗೆ, ಜವಾಬ್ದಾರಿಯುತವಾಗಿ ಭಾಗವಹಿಸಬೇಕಿತ್ತು. ಇನ್ನೊಂದು ತುದಿಯಲ್ಲಿರುವ ವ್ಯಕ್ತಿ ನಮ್ಮನ್ನು ಮೊದಲ ಬಾರಿ

ಭೇಟಿಯಾಗುತ್ತಿರುವುದರಿಂದ ಪ್ರತಿಯೊಂದು ಮೀಟಿಂಗ್ ಆತನಿಗೆ ಹೊಸದು. ಇದನ್ನು ಸಮರ್ಪಕವಾಗಿ ನಡೆಸಲು ನಾವು ತಿನ್ನುವ ಆಹಾರ ಮತ್ತು ವ್ಯಾಯಾಮದಲ್ಲಿ ಅಪಾರ ಶಿಸ್ತಿನ ಅಗತ್ಯವಿದೆ. ಸಸ್ಯಾಹಾರಿಯಾದ ನನ್ನ ಆಹಾರ ಸೇವನೆ ಯಾವಾಗಲೂ ಮಿತವಾಗಿರುತ್ತದೆ. ಜೊತೆಗೆ, ನನ್ನ ಯೋಗ ಮತ್ತು ಧ್ಯಾನಗಳು (ಆರ್ಟ್ ಆಫ್ ಲಿವಿಂಗ್‌ನ ಸುದರ್ಶನ ಕ್ರಿಯಾ) ನನ್ನನ್ನು ದಿನ ಪೂರ್ತಿ ಚೇತೋಹಾರಿಯಾಗಿಸುವ ಸ್ವಾಭಾವಿಕ ಔಷಧಗಳು. ನಾವು ಯೋಗ ಮತ್ತು ಸುದರ್ಶನಕ್ರಿಯೆಯನ್ನು ಮಾಡಿದರೆ ಸುಮಾರು 10–12 ಗಂಟೆ ಚೈತನ್ಯಶಾಲಿಗಳಾಗಿರಬಹುದು. ಪ್ರಯಾಣ ದಿನಗಳಲ್ಲಿ ನಾನು ಇನ್ನೂ ಹೆಚ್ಚು ಪ್ರಾಮಾಣಿಕವಾಗಿ, ಹೋಟೆಲಿನ ಕೊಠಡಿಯಲ್ಲಿ ಇದ್ದರೂ ಬೆಳಗ್ಗೆ ಯೋಗ ಮತ್ತು ಧ್ಯಾನಗಳನ್ನು ಮಾಡುತ್ತೇನೆ. ಯಾವುದೇ ಔಷಧದ ಸಹಾಯವಿಲ್ಲದೆ ಎಲ್ಲಾ ಸಭೆಗಳಲ್ಲೂ ದಿನವಿಡೀ ಪೂರ್ಣ ನಿಗಾ ಮತ್ತು ಉತ್ಸಾಹದಿಂದ ಇರಬಲ್ಲೆ. ನಾನು ಮತ್ತು ನನ್ನ ಕಂಪೆನಿಯನ್ನು ಎಲ್ಲ ಕಾಲಕ್ಕೂ ಸಮರ್ಥವಾಗಿ ಪ್ರತಿನಿಧಿಸಲು ಇದು ಸಹಾಯಕವಾಗಿದೆ. ಇದರಿಂದ ದೂರದಲ್ಲಿರುವ ಕೆಲಸಗಾರರು, ಗ್ರಾಹಕರು, ಪಾಲುಗಾರರು ಮತ್ತು ಆರ್ಥಿಕ ಸಲಹೆಗಾರರು ಎಲ್ಲರಿಂದಲೂ ಗೌರವಕ್ಕೆ ಪಾತ್ರನಾಗಿದ್ದೇನೆ. ಆರೋಗ್ಯ ಮತ್ತು ಚೈತನ್ಯಯುತರಾಗಿ ಇರಲು ಬೇರೆ ಬೇರೆ ಕಾರ್ಯನಿರ್ವಾಹಕರು ಬೇರೆ ಬೇರೆ ವಿಧಾನಗಳನ್ನು ಬಳಸುತ್ತಾರೆ. ಆದರೆ, ನಾನು ನನ್ನ ಈ ವಿಧಾನವನ್ನು ಬಹಳ ಇಷ್ಟಪಡುತ್ತೇನೆ ಮತ್ತು ಪ್ರಯಾಣದಲ್ಲಿ ಇದನ್ನೇ ಪ್ರಾಮಾಣಿಕವಾಗಿ ಅನುಸರಿಸುತ್ತೇನೆ.

ಸಾಗರದಾಚೆಯ ಬಳಗ – ಅದರೊಡನೆ ಸಂಬಂಧ ಬೆಸೆಯುವ ಬಗೆ

ಅನೇಕ ಕಂಪೆನಿಯ ಮುಖ್ಯಸ್ಥರು ಸಾಗರದಾಚೆ ಆಫೀಸುಗಳನ್ನು ತೆರೆದು ಅಪರೂಪಕ್ಕೆ ಅಲ್ಲಿಗೆ ಭೇಟಿಕೊಡುವುದನ್ನು ಕಂಡಿದ್ದೇನೆ. ಪ್ರಾರಂಭದ ಕಂಪೆನಿಗಳ ದೂರದ ಆಫೀಸಿನ ಕೆಲಸಗಾರರಿಗೆ ಇದು ಕೇವಲ ಒಂದು ಕೆಲಸ, ಉದ್ಯಮದ ಬಗ್ಗೆ ಯಾವುದೇ ಆತ್ಮೀಯತೆ ಬೆಳೆಯಲಾರದು. ಆದರೆ, ಅಮೆರಿಕದ ಕೆಲಸಗಾರರಂತೆ ಇವರನ್ನೂ ಕಂಡರೆ, ಆಗಾಗ್ಗೆ ಭೇಟಿಕೊಟ್ಟರೆ, ವ್ಯವಹರಿಸಿದರೆ, ಕಂಪೆನಿಯ ಬಗ್ಗೆ ಅವರಿಗೆ ಒಂದು ಆತ್ಮೀಯ ಸಂಬಂಧ ಹಾಗೂ ನಾಯಕತ್ವದಲ್ಲಿ ಗೌರವ ಉಳಿಯುತ್ತದೆ. ಉದ್ಯಮದಲ್ಲಿ ಉತ್ತಮ ಕೆಲಸಗಾರರ ಸಂಖ್ಯೆ ಕಡೆಯ ಪಕ್ಷ 15% ಆದರೂ ಇರಬೇಕು. ಆದರೆ ನಾವು ಇಂಡಿಯಾದಲ್ಲಿ ಆಫೀಸ್ ತೆರೆದಾಗ ನಾವು ಕೊಡುವ ಸಂಬಳ ಇತರ ಕಂಪೆನಿಗಳಿಗಿಂತ ಕೇವಲ 10–20% ಕಡಿಮೆ ಇದ್ದರೂ, ಕೆಲಸಗಾರರ ಕ್ಷಮತೆ 2%ಗಿಂತ ಕಡಿಮೆ ಇತ್ತು.

ಇದರಿಂದ ಮುಖ್ಯವಾಗಿ ತಿಳಿಯುವುದೇನೆಂದರೆ, ಸ್ಥಳೀಯ ಆಫೀಸಿಗಿಂತ ದೂರದ ಆಫೀಸಿನ ಕೆಲಸಗಾರರ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ನಾವು ಅವರನ್ನು ಸರಿಯಾಗಿ ನಡೆಸಿಕೊಂಡರೆ ಕೇವಲ ಹೆಚ್ಚಿನ ಸಂಬಳಕ್ಕಾಗಿ ಅವರು ಕೆಲಸ ಬಿಡುವುದಿಲ್ಲ. ಆಗ ನಾವು

ತೊಡಗಿಸಿದ ಹಣ ಹಾಗೂ ಶ್ರಮ ತಾನಾಗಿಯೇ ಫಲ ನೀಡುತ್ತದೆ. ಪ್ರತಿಯೊಬ್ಬರಿಗೂ ತಾನು ಮುಖ್ಯ ಹಾಗೂ ವಿಶೇಷ ವ್ಯಕ್ತಿ ಎಂದು ಗುರುತಿಸಿಕೊಳ್ಳುವ ಹಂಬಲ ಇದ್ದೇ ಇರುತ್ತದೆ.

ಸತ್ಪಾತ್ರರಿಗೆ ಕೊಡುವ ದಾನದ ಆನಂದ

ಹಣವನ್ನು ದಾನ ಮಾಡಿದರೆ ಸಾಲದು, ಅದು ಹೇಗೆ ಸದುಪಯೋಗವಾಯಿತು ಎಂಬುದನ್ನು ಅರಿಯುವುದೂ ಅಷ್ಟೇ ಮುಖ್ಯ ಎನ್ನುವುದನ್ನು ನನ್ನ 15 ವರ್ಷಗಳ ಅನುಭವದಿಂದ ಕಲಿತಿದ್ದೇನೆ. ನಮ್ಮಲ್ಲಿ ಕೆಲವರು ಹಣ, ಸ್ವಯಂಸೇವೆ, ಅಥವಾ ಮಾರ್ಗದರ್ಶನ ನೀಡುವ ಮೂಲಕ ಈ ಸಮಾಜಕ್ಕೆ ಸಹಾಯ ಮಾಡುವ ಅದೃಷ್ಟವನ್ನು ಪಡೆದಿದ್ದೇವೆ. ಆದ್ದರಿಂದ ಅನೇಕ ಕಾರಣಗಳಿಗಾಗಿ ದೇಣಿಗೆ ಕೇಳಿ ನಮ್ಮಲ್ಲಿಗೆ ಬರುತ್ತಾರೆ. ಆದರೆ ನಮ್ಮ ಹೃದಯಕ್ಕೆ ಹತ್ತಿರವಾದ ಕ್ಷೇತ್ರವನ್ನು ಆರಿಸಿಕೊಂಡು ದೊಡ್ಡ ಸಹಾಯ ಮಾಡಬೇಕು. ನಾನು ಮತ್ತು ನನ್ನ ಹೆಂಡತಿ ಎರಡು ಮುಖ್ಯ ಕ್ಷೇತ್ರಗಳಾದ ಶಿಕ್ಷಣ ಮತ್ತು ಆರೋಗ್ಯವನ್ನು ಸೇವೆಗಾಗಿ ಆರಿಸಿಕೊಂಡೆವು. ಅದರಲ್ಲೂ ಶಿಕ್ಷಣದಲ್ಲಿ ಮೂಲಭೂತ ಸೌಕರ್ಯ ಮತ್ತು ಸಾಕ್ಷರತೆಗಾಗಿ ನಮ್ಮ ಹಣ ಮತ್ತು ಸಮಯವನ್ನು ನೀಡಲು ನಿರ್ಧರಿಸಿದೆವು. ನಮ್ಮ ದೇಶಕ್ಕೆ ಅತಿಮುಖ್ಯವಾದ, ಜವಾಬ್ದಾರಿಯುತ ವ್ಯಕ್ತಿಗಳ ನಿರ್ಮಾಣಕ್ಕೆ ಕಾರಣವಾದ, ಒಂದು ಒಳ್ಳೆಯ ಶಾಲೆಯ ಮೂಲಭೂತ ಸೌಕರ್ಯಗಳು, ನಾವು ಒದಗಿಸುವ ಶಾಲಾ ಕಟ್ಟಡ, ಅನೇಕ ವರ್ಷ ಸಾವಿರಾರು ಮಕ್ಕಳಿಗೆ ಉತ್ತಮ ವಾತಾವರಣದಲ್ಲಿ ಅಭ್ಯಸಿಸಲು ಸಹಕಾರಿಯಾಗುತ್ತದೆ.

ನಮ್ಮ ಹಳ್ಳಿ ಬಾಗಲೂರಿನಲ್ಲಿ ನಾವು ಪ್ರೈಮರಿ ಮತ್ತು ಹೈಸ್ಕೂಲಿನ ಕಟ್ಟಡಗಳನ್ನು ಕಟ್ಟಿಸಿದೆವು. ಪ್ರತಿಸಲ ನಾನು ಆ ಶಾಲೆಗೆ ಭೇಟಿ ಕೊಟ್ಟಾಗ ಸೋರದ, ಗದ್ದಲವಿಲ್ಲದ ಆ ಕಟ್ಟಡದಲ್ಲಿ ಸಾವಿರಾರು ಮಕ್ಕಳು ಶಿಕ್ಷಣ ಪಡೆಯುತ್ತಿರುವುದನ್ನು ಕಾಣುವುದೇ ಒಂದು ಆನಂದ. ಆ ಚಿಕ್ಕ ಮಕ್ಕಳು ನನಗೆ ಕೃತಜ್ಞತೆ ಸಲ್ಲಿಸಿದಾಗ ಸಿಗುವ ಆತ್ಮತೃಪ್ತಿ ಬೆಲೆ ಕಟ್ಟಲಾರದ್ದು. ಇದೇ ಹಾದಿಯಲ್ಲಿ ಕೆಲವು ಸ್ನೇಹಿತರೊಡನೆ ಸೇರಿ 'ಒಂದು ಸಲ ಒಂದು ಶಾಲೆ' ('ಒ.ಎಸ್.ಎ.ಎ.ಟಿ'– ವನ್ ಸ್ಕೂಲ್ ಎಟ್ ಎ ಟೈಂ) ಎಂಬ ಸೇವಾಸಂಸ್ಥೆಯಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದೇನೆ. 'ಒಸಾಟ್' ಇಂಡಿಯಾದ ಉದ್ದಗಲಕ್ಕೂ ಶಾಲೆಗಳನ್ನು ಕಟ್ಟುತ್ತದೆ. ಬಿಜಾಪುರದಲ್ಲಿ ಕಟ್ಟಿದ ಅಂತಹ ಎರಡು ಶಾಲೆಗಳ ಉದ್ಘಾಟನೆಗೆ ನಾನು ಹೋಗಿದ್ದೆ. ನಮ್ಮ ಈ ಚಿಕ್ಕ ಹಣದ ಸಹಾಯ ಅನೇಕ ಯುವಪೀಳಿಗೆಯ ಮಕ್ಕಳಿಗೆ ಆಗುವ ದೊಡ್ಡ ಪ್ರಯೋಜನವನ್ನು ಕಂಡು ಅತ್ಯಂತ ತೃಪ್ತನಾದೆ.

ನಾವು ಓದಿದ ಅನೇಕ ಶಾಲೆ, ಕಾಲೇಜುಗಳಿಗೆ ಬೌದ್ಧಿಕವಾಗಿ ಹಾಗೂ ಆರ್ಥಿಕವಾಗಿ ಸಹಾಯ ಮಾಡುವ ಅಗತ್ಯವಿದೆ. ನನ್ನ ಓದುಗರಿಗೆ ನನ್ನ ಸಲಹೆ ಏನೆಂದರೆ, ನಿಮ್ಮ ಶಾಲೆ ಮತ್ತು ಕಾಲೇಜುಗಳಿಗೆ ಹೋಗಿ, ಅತಿಥಿ ಉಪನ್ಯಾಸಕರಾಗಿ, ಅಥವಾ ವಿದ್ಯಾರ್ಥಿವೇತನ,

ಕಂಪ್ಯೂಟರ್ಸ್ ಮೊದಲಾದ ಸಹಾಯ ಮಾಡಿ. ಜ್ಞಾನವನ್ನು ಮತ್ತು ಐಶ್ವರ್ಯವನ್ನು ಅವಶ್ಯಕತೆ ಇದ್ದವರಿಗೆ ಹಂಚುವ ಆನಂದ ಕೊನೆಗೆ ಅಪಾರ ಆತ್ಮತೃಪ್ತಿಯನ್ನು ಕೊಡುತ್ತದೆ.

ಜ್ಞಾನವನ್ನು ಹಂಚಿಕೊಳ್ಳುವುದು ಎಲ್ಲಕ್ಕಿಂತ ಗೌರವಾನ್ವಿತವಾದದ್ದು

ನಾನು ಮೊದಲೇ ಹೇಳಿದಂತೆ, ದಾನವು ಕೇವಲ ಹಣಕ್ಕೆ ಸೀಮಿತವಲ್ಲ. ಅನೇಕ ವಿಧದಲ್ಲಿ ನಾವು ಬೇರೆಯವರನ್ನು ಪ್ರೇರೇಪಿಸಿ ನಮ್ಮ ಜ್ಞಾನವನ್ನು ಹಂಚಿಕೊಳ್ಳಬಹುದು. ವಿದ್ಯಾವಂತರ ಕುಟುಂಬದಿಂದ ಬಂದ ನಾನು ಯಾವಾಗಲೂ ಬೋಧಿಸುವುದರಲ್ಲಿ ಆನಂದ ಪಡೆಯುತ್ತೇನೆ. ಆದ್ದರಿಂದ 'ಸ್ವೋದ್ಯೋಗ ಮತ್ತು ಹೊಸ ಕಂಪೆನಿಗಳಿಗೆ ಹಣ ಒದಗಿಸಿಕೊಳ್ಳುವ ಮಾರ್ಗ' ಎಂಬ ವಿಷಯದ ಕುರಿತು ಎರಡು ಅವಧಿಯ ಎಮ್.ಬಿ.ಎ. ತರಗತಿಗಳಿಗೆ ಸಾಂತಾ ಕ್ಲಾರಾ ಯುನಿವರ್ಸಿಟಿಯಲ್ಲಿ ಪಾಠಹೇಳುತ್ತೇನೆ. ಇದರಿಂದ ಯುವ ಪೀಳಿಗೆಯೊಡನೆ ಬೆರೆಯುವ ಅವಕಾಶ ಸಿಕ್ಕು ನನ್ನನ್ನು ಮತ್ತಷ್ಟು ಯುವಕನ್ನಾಗಿಸಿದೆ. ಇದೇ ವಿಷಯವನ್ನು ಮೊಟಕುಗೊಳಿಸಿ ಮಿಚಿಗನ್ ಯುನಿವರ್ಸಿಟಿ, IIM ಅಹಮದಾಬಾದ್, IISC ಬೆಂಗಳೂರು ಮುಂತಾದ ಕಡೆ ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡಿದ್ದೇನೆ. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಭಾಷಣ ಮತ್ತು ಚರ್ಚೆಯ ತರಗತಿಗಳನ್ನು ತೆಗೆದುಕೊಂಡು ಅವರಿಗೆ ಸಾರ್ವಜನಿಕವಾಗಿ ಮಾತನಾಡಲು ಇರುವ ಭೀತಿಯುನ್ನು ಹೋಗಲಾಡಿಸುವ ಮತ್ತು ಕಲಿಕೆಯುನ್ನು ಇನ್ನೂ ಆನಂದದಾಯಕವಾಗಿಸುವ ಪ್ರಯತ್ನ ಮಾಡಿದ್ದೇನೆ. ಪ್ರತಿಸಲ ನಾನು ಈ ತರಗತಿಗಳನ್ನು ತೆಗೆದುಕೊಂಡಾಗಲೂ ನನ್ನ ಚೈತನ್ಯಶಕ್ತಿ ಇನ್ನೂ ಹೆಚ್ಚಿ ಇನ್ನಷ್ಟು ಉತ್ಸಾಹಿಯಾಗುತ್ತೇನೆ, ಯುವಕನಾಗುತ್ತೇನೆ. ಇದಲ್ಲದೆ, ಭವಿಷ್ಯದ ಪೀಳಿಗೆಯಿಂದ ಬಹಳಷ್ಟು ಕಲಿತಿದ್ದೇನೆ.

ಕೊನೆಯ ಚಿಂತನೆ

'ಏನು ಯೋಚಿಸುವೆಯೇ ಅದು ನೀನಾಗುವೆ. ನಿನ್ನನ್ನು ನೀನು ದುರ್ಬಲನೆಂದುಕೊಂಡರೆ ದುರ್ಬಲನಾಗುವೆ. ನಿನ್ನನ್ನು ನೀನು ಸಬಲನೆಂದುಕೊಂಡರೆ ಸಬಲನಾಗುವೆ'

–ಇದು ಸ್ವಾಮಿ ವಿವೇಕಾನಂದರ ನುಡಿ. ಈ ಜೀವನವನ್ನು ಪ್ರೋತ್ಸಾಹದಾಯಕವೂ ಆನಂದದಾಯಕವೂ ಮತ್ತು ನಿರಂತರ ಕಲಿಕೆಯ ತಾಣವಾಗಿಯೂ ಮಾಡಬಹುದು. ಅದೇ ರೀತಿ ಇದನ್ನು ಬೇಸರದ, ಧೃತಿಗೆಟ್ಟ ಮತ್ತು ಬೇರೆಯವರನ್ನು ಟೀಕಿಸುತ್ತಾ ಕಳೆವ ನಿಷ್ಪ್ರಯೋಜಕ ಬದುಕನ್ನಾಗಿಯೂ ಮಾಡಬಹುದು. ಆಯ್ಕೆ ನಮ್ಮದೇ. ಬದುಕಿನಲ್ಲಿ ಯಶಸ್ಸನ್ನು ಕಾಣಲು ನಾವು ಶ್ರೀಮಂತ ಅಥವಾ ಬಡವರಾಗಿ ಹುಟ್ಟಬೇಕಿಲ್ಲ. ಪ್ರಸಿದ್ಧ ಶಾಲಾಕಾಲೇಜುಗಳಿಗೆ ಹೋಗಬೇಕಿಲ್ಲ. ಅತಿಬುದ್ಧಿವಂತರಾಗಿ ಇರಬೇಕಿಲ್ಲ. ನಮ್ಮ ಮನಸ್ಸನ್ನು ಅದಕ್ಕಾಗಿ ಕೇಂದ್ರೀಕರಿಸಿ ಕಠಿಣ ಪರಿಶ್ರಮ ಮಾಡಿದರೆ ಏನನ್ನು ಬೇಕಾದರೂ

ಸಾಧಿಸಬಹುದು ಮತ್ತು ಯಾವುದೇ ಸಮುದಾಯದಲ್ಲೂ ದೊಡ್ಡ ಬದಲಾವಣೆ ತರಬಲ್ಲೆವು. ಪ್ರತಿಯೊಬ್ಬರೂ ಪ್ರಪಂಚವನ್ನು ಬದಲಿಸಬೇಕಾಗಿಲ್ಲ. ಬೇರೆಯವರಿಂದ ಪ್ರೇರಣೆ ಪಡೆದು ಮತ್ತು ನಮ್ಮ ಪ್ರೇರಣೆಗಾಗಿ ಕಾಯುತ್ತಿರುವವರಿಗೆ ಸಹಾಯ ಮಾಡುವುದರಿಂದ ಈ ಬದುಕು ಸದಾಕಾಲ ಒಂದು ಸುಂದರ ಪಯಣವಾದೀತು. ಅಂಥವರ ಕಲಿಕೆ ನಿಲ್ಲದು, ಹೃದಯ ಮುಪ್ಪಾಗದು.



ನಾದತರಂಗಿಣಿ

– ಎ. ಆರ್. ಚಾರ್

ನನ್ನ ಜೀವನದಲ್ಲಿ ಸಂಗೀತ ಕಾಲಿಟ್ಟಿದ್ದು ಉಷಾಳನ್ನು ನವೆಂಬರ್ 1982ರಲ್ಲಿ ಮದುವೆಯಾದಾಗಲಿಂದ (ಉಷಾ, ಸಂಗೀತಗಾರ್ತಿ ಮತ್ತು ಆಕಾಶವಾಣಿಯಲ್ಲಿ 'ಎ-ಶ್ರೇಣಿ' ಗಾಯಕಿಯೆಂದು ಮದುವೆಯಾದ ಮೇಲೆ ತಿಳಿಯಿತು!). 1983ನೆ ಇಸವಿಯಲ್ಲಿ ಉಷಾ ಕೊಲಂಬಸ್ಸಿಗೆ ಬಂದಳು. ಆಗ ನಾನು ಅಲ್ಲಿ ವಿಂಧ್ಯಾ ಕಲಾ ಕೇಂದ್ರಕ್ಕೆ ಅಧ್ಯಕ್ಷನಾಗಿದ್ದೆ. ಆಗ ಅಲ್ಲಿ ಸಾಕಷ್ಟು ಸಂಗೀತಾಭಿಮಾನಿಗಳಿದ್ದರು. ಸಂಗೀತ ಚಟುವಟಿಕೆಗಳು, ಆಗಾಗಲೊಮ್ಮೆ ಭಾರತದಿಂದ ಬಂದ ಕಲಾವಿದರು ಕೊಡುತ್ತಿದ್ದ ಕಚೇರಿಗಳಿಗಷ್ಟೇ ಸೀಮಿತವಾಗಿದ್ದವು. ಅಲ್ಲಿನ ನಮ್ಮ ಕೆಲವು ಸ್ನೇಹಿತರು 'ನಾವ್ಯಾಕೆ ಇಲ್ಲಿ ಸಂಗೀತ ಉತ್ಸವ ಮಾಡಬಾರದು?' ಎಂದು ಸವಾಲು ಹಾಕಿದರು. ಅವರ ಉದ್ದೇಶ ಅಲ್ಲಿ ಜನರಲ್ಲಿ (ದೊಡ್ಡವರು ಮತ್ತು ಚಿಕ್ಕವರು) ಸಂಗೀತ ಪ್ರಜ್ಞೆಯನ್ನು ಮೂಡಿಸುವುದೇ ಆಗಿತ್ತು. ಆ ಉದ್ದೇಶವೇ ನಾದತರಂಗಿಣಿಯ ಹುಟ್ಟಿಗೆ ಕಾರಣ ಮತ್ತು ಮುಖ್ಯ ಗುರಿಯಾಯಿತು.

1983ರ ನವರಾತ್ರಿಯಲ್ಲಿ ತ್ಯಾಗರಾಜ ಪಂಚರತ್ನ ಮತ್ತು ಪುರಂದರದಾಸರ ಹಾಡುಗಳಿಂದ ಉಷಾ ಸಂಗೀತ ಪಾಠ ಶುರು ಮಾಡಿದಳು. ಮೂರು ನಾಲಕ್ಕು ಗಂಟೆ ಸಂಗೀತಪಾಠದ ಜೊತೆಗೆ ಅನೇಕ ದಿನಗಳು ನಾನು ಊಟ ತಿಂಡಿಯನ್ನೂ ಸಂಗೀತ ಅಭ್ಯರ್ಥಿಗಳಿಗೆ ಒದಗಿಸುತಿದ್ದೆ. ಅದು ಬರೀ ಸಂಗೀತ ಪಾಠದ ಶಾಲೆಯಾಗದೆ ಒಟ್ಟು ಪ್ರೀತಿಯ ಕುಟುಂಬವಾಗಿ ಬೆಳೆಯಿತು. ವಿಂಧ್ಯಾ ಕಲಾ ಕೇಂದ್ರದ ಆಶ್ರಯದಲ್ಲಿ ಮೊದಲನೆಯ ಪುರಂದರದಾಸ ಮತ್ತು ತ್ಯಾಗರಾಜ ಆರಾಧನೆ 1984 ಜನವರಿಯಲ್ಲಿ, ಕೊಲಂಬಸ್, ಒಹಾಯೋದಲ್ಲಿ ವಿಜೃಂಭಣೆಯಿಂದ ನಡೆಯಿತು. ಕೊರೆಯುವ ಚಳಿಯಲ್ಲಿ ಕೊಲಂಬಸ್ಸಿನ ಕನ್ನಡ, ತಮಿಳು, ತೆಲುಗು, ಮಲಯಾಳಮ್, ಮರಾಠಿ, ಮತ್ತು ಗುಜರಾತಿ ಸಮೂಹ ಒಗ್ಗಟಿನಿಂದ ಈ ಉತ್ಸವಕ್ಕೆ ಸಹಕರಿಸಿ, ತುಂಬಿದ ಸಭಾಂಗಣದಲ್ಲಿ ನಡೆಯುವಂತೆ ಅಣಿ ಮಾಡಿಕೊಟ್ಟರು. ಕ್ಲೀವ್ಲೆಂಡಿನ ಸಂಗೀತಾಭಿಮಾನಿಗಳು ವಯೊಲಿನ್ ಮತ್ತು ಮೃದಂಗ ಪಕ್ಕ ವಾದ್ಯಗಾರರನ್ನು ಕರೆತಂದು ಸಹಕರಿಸಿದರು. ಪಿಟ್ಸ್‌ಬರ್ಗಿನಿಂದ ಅರ್ಚಕರನ್ನು ಕರೆಸಿದೆವು. ಕೊಲಂಬಸ್ಸಿನ ಸಂಗೀತ ಪ್ರೇಮಿಗಳು ಪ್ರೀತಿಯಿಂದ ಊಟ ತಿಂಡಿಗಳನ್ನು ತಯಾರಿಸಿ ಎಲ್ಲರನ್ನೂ ಸಂತೃಪ್ತಿ ಪಡಿಸಿದರು. ಮೊದಲಿನಿಂದ ನಮ್ಮ ಧ್ಯೇಯಗಳು, 'ಪ್ರತಿಯೊಂದು ಕಾರ್ಯಕ್ರಮವೂ ಉಚಿತವಾಗಿರಬೇಕು, ಮಕ್ಕಳ ಸಂಗೀತ

ಅಭಿವೃದ್ಧಿಗೆ ಸಹಾಯಕವಾಗಬೇಕು ಮತ್ತು ಧನಸಹಾಯ ಮಾಡುವವರು ಪೂರ್ಣ ಸ್ವ-ಇಚ್ಛೆಯಿಂದ ಮಾಡಬೇಕು' ಎಂದೇ ಆಗಿದ್ದವು.

ನಮ್ಮ ಪ್ರೀತಿಯ ಕುವರಿ ರಾಧಿಕ ಜನಿಸಿದ (1984 ಅಕ್ಟೋಬರ್) ನಂತರ 1985 ಜನವರಿಯಲ್ಲಿ ಕೊಲಂಬಸ್ಸಿನಲ್ಲಿ 2ನೇ ಸಂಗೀತ ಸಮಾರಂಭವನ್ನು ನಡೆಸಿದೆವು. ಕೆಲಸದ ಪ್ರಯುಕ್ತ ಕೊಲಂಬಸ್ಸಿನಿಂದ ವಾಷಿಂಗ್ಟನ್ನಿಗೆ ವಲಸೆ ಮಾಡುವ ಪ್ರಮೇಯ ಒದಗಿತು. ಮೊದಲು 2 ವರ್ಷ ಸ್ಥಳೀಯ ದೇವಸ್ಥಾನವೊಂದರ ತ್ಯಾಗರಾಜ ಆರಾಧನೆಯಲ್ಲಿ ಪಾಲ್ಗೊಂಡೆವು. ಆಗ ಅದನ್ನು ಅಲ್ಲಿ ಒಂದು ಚಿಕ್ಕ ಚಪ್ಪರದಲ್ಲಿ ಮಾಡುತಿದ್ದರು. ಅದು ಸಂಗೀತಕ್ಕೆ ಸಮರ್ಪಕವಾಗಿರಲಿಲ್ಲ, ಹಾಗಾಗಿ ಒಳ್ಳೆಯ ಸಂಗೀತಕ್ಕೆ ಪ್ರಾಧಾನ್ಯ ಕೊಟ್ಟು ಸಂಗೀತ ಉತ್ಸವ ಮಾಡಬೇಕೆಂದು ನಿರ್ಧರಿಸಿದೆವು. 1988 ಏಪ್ರಿಲ್‌ನಲ್ಲಿ ಬಾವೆರ್ ಡ್ರೈವ್ ಕಮ್ಯುನಿಟಿ ಸೆಂಟರ್‌ನಲ್ಲಿ ನಾದತರಂಗಿಣಿಯ ಮೊದಲನೆಯ ಪುರಂದರದಾಸ ಮತ್ತು ತ್ಯಾಗರಾಜ ಸಂಗೀತ ಉತ್ಸವವನ್ನು ನಡೆಸಿದೆವು. ನಮ್ಮ ಸ್ನೇಹಿತರು ಮತ್ತು ಇಲ್ಲಿನ ಕನ್ನಡ ಸಂಘವಾದ ಕಾವೇರಿಯ ಸದಸ್ಯರು ತುಂಬ ಸಹಾಯ ಮಾಡಿದರು. ಬೆರಳೆಣಿಸುವಷ್ಟು ಮಕ್ಕಳನ್ನು ಬಿಟ್ಟರೆ, ಮಿಕ್ಕವರೆಲ್ಲ ಹಿರಿಯರೇ ಈ ಕಾರ್ಯಕ್ರಮದಲ್ಲಿ ಹಾಡಿ ಪಾಲ್ಗೊಂಡರು. ಮೊದಲಿನಂತೆಯೇ ಎಲ್ಲ ಕಾರ್ಯಕ್ರಮಗಳೂ ಉಚಿತವಾಗಿರಬೇಕು ಮತ್ತು ಯಾರನ್ನೂ ಹಣ ಕೇಳಬಾರದು ಎಂಬ ನಿರ್ಧಾರವನ್ನು ಮುಂದುವರಿಸಿದೆವು. ಹಲವಾರು ಸ್ನೇಹಿತರೂ ಮತ್ತು ಕಲಾಭಿಮಾನಿಗಳೂ ಅವರಾಗಿಯೇ ಮುಂದೆ ಬಂದು ಸಹಾಯ ಮಾಡುತ್ತಾ ಬಂದರು. 1989 ಮತ್ತು 1990ರಲ್ಲಿ ನಾದತರಂಗಿಣಿ ಇದೇ ರೀತಿ (ಬಾವೆರ್ ಡ್ರೈವ್ ಕಮ್ಯುನಿಟಿ ಸೆಂಟರ್ ಮತ್ತು ಪೊಟೊಮ್ಯಾಕ್ ಕಮ್ಯುನಿಟಿ ಸೆಂಟರ್‌ಗಳಲ್ಲಿ) ಸಂಗೀತ ಉತ್ಸವವನ್ನು ನಡೆಸಿತು. ಹಾಡುವ ಮಕ್ಕಳ ಸಂಖ್ಯೆ ಜಾಸ್ತಿ ಆಗುತ್ತಾ ಬಂತು.

ಮೂರನೆ ವರ್ಷದ ಸಂಗೀತ ಸಮಾರಂಭ ಮುಗಿಯುವ ವೇಳೆಗೆ ದೇವಸ್ಥಾನದಲ್ಲಿ ಹೊಸ ಸಭಾಂಗಣ ಬಂದಿತ್ತು. ದೇವಸ್ಥಾನದ ಆಡಳಿತ ವರ್ಗದ ಹಿರಿಯ ಕಲಾಭಿಮಾನಿಗಳು ನಾವು ಮಾಡುತ್ತಿದ್ದ ಕಾರ್ಯಕ್ರಮಗಳನ್ನು ಬಹಳ ಮೆಚ್ಚಿಕೊಂಡು, 'ನೀವ್ಯಾಕೆ ನಮ್ಮ ದೇವಸ್ಥಾನದ ಸಭಾಂಗಣದಲ್ಲಿ ಉತ್ಸವವನ್ನು ಮಾಡಬಾರದು' ಎಂದು ಬಹಳ ಒತ್ತಾಯಮಾಡಿ ಆಹ್ವಾನಿಸಿದರು. ಅಂದಿನಿಂದ ನಾದತರಂಗಿಣಿ ಮತ್ತು ದೇವಸ್ಥಾನದ ಜಂಟಿ ಪುರಂದರದಾಸ ಮತ್ತು ತ್ಯಾಗರಾಜ ಸಂಗೀತ ಉತ್ಸವ ಪ್ರಾರಂಭವಾಯಿತು. ನಾವು ದೇವಸ್ಥಾನದಲ್ಲಿ ಉತ್ಸವ ಶುರು ಮಾಡಿದಾಗ, ದೇವಸ್ಥಾನದಲ್ಲಿ ಅಡುಗೆ ಮನೆ ವ್ಯವಸ್ಥೆ ಸರಿಯಾಗಿ ಇರಲಿಲ್ಲ. ಹಾಗಾಗಿ ನಾದತರಂಗಿಣಿ ದೊಡ್ಡ ಒಲೆ, ದೊಡ್ಡ ಪಾತ್ರೆ, ಅನಿಲದ ಸಿಲಿಂಡರ್ ಎಲ್ಲವನ್ನೂ ಖರೀದಿಸಿ, ಎಲ್ಲ ಅಡುಗೆ ಸಾಮಗ್ರಿಗಳನ್ನೂ ಕೊಂಡು ಹೋಗಿ ದೇವಸ್ಥಾನದಲ್ಲೇ ಅಡುಗೆ ಮಾಡುತ್ತಿದ್ದೆವು. ಸಂಗೀತ ನಡೆಯುತ್ತಿದ್ದಾಗ 'ನಳಪಾಕ' ಸ್ವಯಂಸೇವಕರು ಬಿಸಿ ಅಡುಗೆ ತಯಾರಿಸಿ, ಪ್ರೀತಿ,

ವಿಶ್ವಾಸದಿಂದ ಬಡಿಸುತ್ತಿದ್ದರು. ಸಂಗೀತ ಔತಣದ ಜೊತೆಗೆ ಊಟದ ರಸದೌತಣವೂ ಸೇರಿ ನಾದತರಂಗಿಣಿಯ ಕಾರ್ಯಕ್ರಮಗಳು ವಿಶಿಷ್ಟತೆಯನ್ನು ಪಡೆದವು.

ನಾದತರಂಗಿಣಿಯ ಉತ್ಸವ ಕ್ರಮೇಣ ಬೆಳೆಯುತ್ತಾ ಒಂದು ದಿನದಿಂದ ಮೂರು ದಿನಗಳಿಗೆ ಹಬ್ಬಿಕೊಂಡಿತು. 6–7 ಮಕ್ಕಳಿಂದ ಶುರುವಾದ ಉತ್ಸವ 250ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಳ್ಳುವಂತೆ ಬೆಳೆಯಿತು. ಭಾರತದಿಂದ ಬರುವ ಹಿರಿಯ ಕಲಾವಿದರೂ ಸಾಕಷ್ಟು ಹೆಚ್ಚಿದರು. ಅವರೂ ಬಂದು ಸಂಗೀತ ಕಾರ್ಯಕ್ರಮದಲ್ಲಿ ಭಾಗಿಯಾಗುವುದಕ್ಕೆ ಶುರು ಮಾಡಿದರು. ಸಂಗೀತ ಕಚೇರಿಯನ್ನು ಕೊಡುವ ಜೊತೆಗೆ ಇಲ್ಲಿನ ಮಕ್ಕಳಿಗೂ ಸಂಗೀತದಲ್ಲಿ ಸಾಕಷ್ಟು ತಯಾರಿ ನೀಡಿ, ಅವರೊಡನೆ ಬೆರೆತು, ಅವರೊಡನೆ ಜೋಡಿ ಕಾರ್ಯಕ್ರಮಗಳನ್ನು ಮಾಡಿ, ಇಲ್ಲಿನ ಮಕ್ಕಳಿಗೂ ಮತ್ತು ಜನ ಸಮೂಹಕ್ಕೂ ಉತ್ತೇಜನ ನೀಡಿ, ಸಂಗೀತ ವಾತಾವರಣದ ಅಭಿವೃದ್ಧಿಗೆ ಅನುವು ಮಾಡಿಕೊಟ್ಟರು.

ಉತ್ಸವದ ಸಮಯದಲ್ಲಿ ಸಂಗೀತ ಕಾರ್ಯಕ್ರಮಗಳಿಗೆ ಉಚಿತವಾಗಿ ಪ್ರವೇಶವಿದ್ದಿದ್ದು ಮಾತ್ರವಲ್ಲದೆ, ಉಚಿತವಾದ 'ನಳಪಾಕ' ತಂಡದ ಬಿಸಿಬಿಸಿ ಅಡುಗೆಯೂ ಎಲ್ಲರಿಗೂ ಬಹಳ ಮೆಚ್ಚಿಗೆಯಾದ ವಿಷಯ. ಮೊದಮೊದಲು ಬೆಳಿಗ್ಗೆ ಮತ್ತು ರಾತ್ರಿ ಎರಡು ವೇಳೆಯೂ ಊಟದ ವ್ಯವಸ್ಥೆ ಇದ್ದದ್ದು, ಕ್ರಮೇಣ ದೇವಸ್ಥಾನದ ಹೊಸ ವ್ಯವಸ್ಥೆಗೆ ಅನುಕೂಲ ಮಾಡಿಕೊಡಲು, ಸಾಯಂಕಾಲದ ವೇಳೆ ಮಾತ್ರ ಸೊಗಸಾದ ಹಬ್ಬದ ಊಟ ನೀಡುವ ವ್ಯವಸ್ಥೆಯಾಯಿತು. ಆದರೆ, ಕಳೆದ 2 ವರ್ಷದಿಂದ ದೇವಸ್ಥಾನದ ಹೊಸ ಆಡಳಿತ ವರ್ಗ ದೇವಸ್ಥಾನದಲ್ಲಿ 'ನಳಪಾಕ' ತಂಡ ಅಡುಗೆ ಮಾಡಲು ಬಿಡದೆ ಇದ್ದಿದ್ದರಿಂದ, ದೇವಸ್ಥಾನದವರೇ ತಯಾರಿಸಿದ ಊಟವನ್ನು ನಾವು ಖರೀದಿಸಿ, ಎಲ್ಲರಿಗೂ ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಬೇಕಾಯಿತು. 'ನಳಪಾಕ' ತಂಡದವರಿಗೂ ಮತ್ತು ನಾದತರಂಗಿಣಿ ಸಭಿಕರಿಗೂ ಆದ ನಿರಾಸೆ ಅಷ್ಟಿಷ್ಟಲ್ಲ.

ಈಚೆಗೆ ದೇವಸ್ಥಾನದ ಕಲ್ಚರಲ್ ಕಮಿಟಿಯಂತೂ ಪ್ರತಿಯೊಂದು ಹೆಜ್ಜೆಯಲ್ಲೂ ಅಡಚಣೆ ತರುತಿತ್ತು. ಪ್ರತಿ ವರ್ಷವೂ, ನಾದತರಂಗಿಣಿ ಮತ್ತು ದೇವಸ್ಥಾನ ಜೊತೆಯಾಗಿ ಕಾರ್ಯಕ್ರಮ ನಡೆಸಿಕೊಂಡು ಬಂದಿದ್ದರೂ, 25ನೇ ವರ್ಷದ ಕಾರ್ಯಕ್ರಮದಲ್ಲಿ ದೇವಸ್ಥಾನದ ಸಾಂಸ್ಕೃತಿಕ ಸಮಿತಿ ನಾದತರಂಗಿಣಿಯೊಂದಿಗೆ ಸೇರಿ ಉತ್ಸವವನ್ನಾಚರಿಸಲು ನಿರಾಕರಿಸಿತು. ದೇವಸ್ಥಾನದ ಹೊಸ ಆಡಳಿತ ವರ್ಗ ಹಾಕಿದ ಹಲವಾರು ನಿಬಂಧನೆಗಳಿಗೆ ಮನನೊಂದ ನಾದತರಂಗಿಣಿ, 25ನೇ ವಾರ್ಷಿಕ ಉತ್ಸವವನ್ನು ಬೇರೆಯ ಸಭಾಂಗಣದಲ್ಲಿ ಮಾಡಬೇಕೆಂದು ತೀರ್ಮಾನಿಸಿತ್ತು. ಆದರೆ, ಕೆಲವು ನಾದತರಂಗಿಣಿಯ ಅಭಿಮಾನಿಗಳು ಮತ್ತು ದೇವಸ್ಥಾನದ ಹಿರಿಯರು ಅದೇ ಸಭಾಂಗಣದಲ್ಲಿ 25 ವರ್ಷದ ಉತ್ಸವ ನಡೆಸಬೇಕೆಂದು ಕೋರಿದ್ದರಿಂದ, ನೊಂದ ಮನಸ್ಸಿನಿಂದಲೇ ಅಲ್ಲಿಯೇ ಉತ್ಸವವನ್ನು ಆಚರಿಸಬೇಕಾಯಿತು. ದೇವಸ್ಥಾನದ ಸಭಾಂಗಣವನ್ನು ಬಾಡಿಗೆಗೆ ತೆಗೆದುಕೊಂಡು, ಧ್ವನಿವರ್ಧಕ ಸಹಾಯವನ್ನು

ಹೊರಗಿನಿಂದ ತರಿಸಿ ಮತ್ತು ದೇವಸ್ಥಾನದವರೇ ತಯಾರಿಸಿದ ಊಟವನ್ನು ಖರೀದಿಸಿ, ನಾದತರಂಗಿಣಿ ತನ್ನ ಬೆಳ್ಳಿಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿತು.

ನಾದತರಂಗಿಣಿಯ ರಜತ ಸಮಾರಂಭಕ್ಕೆ ಕರ್ನಾಟಕದಿಂದ ಸಂಗೀತ ಕ್ಷೇತ್ರದಲ್ಲಿ ಭೀಷ್ಮರೆನಿಸಿಕೊಂಡಿರುವ ಶ್ರೀ ಆರ್. ಕೆ. ಶ್ರೀಕಂಠನ್‌ರವರಿಂದ ಹಿಡಿದು ಹಲವಾರು ಪ್ರಸಿದ್ಧ ವಿದ್ವಾಂಸರು ಆಗಮಿಸಿ ನಮ್ಮ ಕಲಾವಿದರೊಂದಿಗೆ ಬೆರೆತು, ವಿಶೇಷವಾದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಈ ಸಮಯದಲ್ಲಿ ನಾವು ಕರ್ನಾಟಕದಿಂದ ಬಂದ ಎಂ. ಎಸ್. ಶೀಲ, ಆನೂರ್ ಶಿವಕುಮಾರ್ ಶರ್ಮ, ಆನೂರ್ ದತ್ತ, ಪುಷ್ಪ ಕಾಶಿನಾಥ್ ಮತ್ತು ಕಾಶಿನಾಥ್ ಅವರುಗಳಿಗೂ ನಮ್ಮ ವಂದನೆಗಳನ್ನು ಅರ್ಪಿಸಬೇಕು. ಆನೂರ್ ಶಿವು ಮತ್ತು ಆನೂರ್ ದತ್ತರವರ 'ಲಯ ಲಹರಿ' ತಾಳ ವಾದ್ಯ ವೃಂದವಂತೂ ಅಭಿಮಾನಿಗಳಿಗೆ ತುಂಬ ಮೆಚ್ಚು.

ನಾದತರಂಗಿಣಿ, ಕಳೆದ 25 ವರ್ಷಗಳಲ್ಲಿ ಬರೀ ವರ್ಷಕ್ಕೊಮ್ಮೆ ಸಂಗೀತ ಉತ್ಸವ ಅಲ್ಲದೆ, ಹಲವಾರು ವಿಶೇಷವಾದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾ ಬಂದಿದೆ. ಏಕರಾಗ ಸಭಾ, ಜಯದೇವ ಅಷ್ಟಪದಿ, ಪಾಪನಾಶಮ್ ಶಿವಂ ಶತಮಾನ ದಿನದ ಸ್ಮರಣೆ ಕಾರ್ಯಕ್ರಮ, ವಚನಕಾರರ ವಚನಾಮೃತಧಾರೆ, ದಾಸ ಶ್ರೇಷ್ಠರ ಕೊಡುಗೆ, ರಾಮಕಥಾಸುಧಾ ಮತ್ತಿತರ ಕಾರ್ಯಕ್ರಮಗಳೇ ನಾದತರಂಗಿಣಿಯ ಕೆಲವು ಕಾಣಿಕೆಗಳು. ಚಿನ್ಮಯ ಸಭಾಂಗಣದಲ್ಲಿ 'ಕಾಂಬೋಧಿ', 'ತೋಡಿ', 'ಭೈರವಿ', 'ಮೋಹನ' – ಹೀಗೆ ಹಲವಾರು ಏಕರಾಗ ಕಾರ್ಯಕ್ರಮಗಳನ್ನು ಭಾರತದಿಂದ ಬಂದ ಶ್ರೇಷ್ಠ ಕಲಾವಿದರಿಂದ ಏರ್ಪಾಟು ಮಾಡಿತ್ತು. ಜೆ. ಎಸ್. ಎಸ್. ಸಭಾಂಗಣದಲ್ಲಿ ಪ್ರತಿ ತಿಂಗಳು 'ನಾದ ಸೌರಭ' ಸಂಗೀತ ಕಾರ್ಯಕ್ರಮಗಳು ನಡೆಯುತ್ತಾ ಬಂದಿವೆ.

ಎಂ. ಎಸ್. ನಟರಾಜರವರ ಸಾಹಿತ್ಯಕ್ಕೆ ಉಷಾ ಚಾರ್ ಸಂಗೀತ ನೀಡಿ ರೂಪಿಸಿದ 'ನವರತ್ನ ಮಾಲಿಕಾ' ಮತ್ತು 'ನವಮಣಿ ಮಾಲಿಕಾ' ಧ್ವನಿ ಸುರಳಿ; ಉಷಾ ಚಾರ್ ಸಂಗೀತದ 'ವಚನಾಮೃತಧಾರೆ' ಧ್ವನಿ ಸುರಳಿ; ಎಂ. ಎಸ್. ನಟರಾಜರವರ ಸಾಹಿತ್ಯ ಮತ್ತು ಆನೂರ್ ಶಿವು ಸಂಗೀತ ರಚನೆಯಲ್ಲಿ ಸಿದ್ಧವಾದ 'ರಾಗಮಾಲಿಕಾ ಸುಂದರ ಕಾಂಡ' ಧ್ವನಿಸುರಳಿ – ನಾದತರಂಗಿಣಿಯ ಮೂಲಕ ಹೊರಬಂದಿವೆ.

ನಾದತರಂಗಿಣಿಯ ಮೂಲೋದ್ದೇಶಗಳನ್ನು ಮತ್ತು ಹೆಮ್ಮೆಯ ಸಾಧನೆಗಳನ್ನು ಈ ರೀತಿ ಸಾರಾಂಶ ರೀತಿಯಲ್ಲಿ ತಿಳಿಸಬಹುದು:

1. ನಾದತರಂಗಿಣಿಯ ಮೂಲ ಉದ್ದೇಶ – ಇಲ್ಲಿಯೇ ಹುಟ್ಟಿ ಬೆಳೆದ ಮಕ್ಕಳಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತದ ಅಭಿರುಚಿ ಮತ್ತು ಪರಿಣಿತಿ ಬೆಳೆಸುವುದು.
   - ನಾದತರಂಗಿಣಿ ಪ್ರಾರಂಭವಾದ ಕಾಲದಲ್ಲಿ 5–6 ಮಕ್ಕಳಿದ್ದು, ಈಗ 250ಕ್ಕೂ ಹೆಚ್ಚು ಮಂದಿ ಮಕ್ಕಳು ಉತ್ಸವದಲ್ಲಿ ಪಾಲ್ಗೊಳ್ಳಲು ಮುಂದಾಗಿ ಬರುತ್ತಿದ್ದಾರೆ.

- ಕೆಲವು ಹಿರಿಯ ಮಕ್ಕಳು ಕಿರಿಯರಿಗೆ ಮಾದರಿಯಾಗಿ, ಚಿಕ್ಕ ಮಕ್ಕಳೂ ಉತ್ಸುಕರಾಗಿ ಸಂಗೀತ ಕಲಿಯಲು ಪ್ರಾರಂಭಿಸಿದ್ದಾರೆ.
- ಹಲವಾರು ಮಕ್ಕಳ ಸಂಗೀತ ರಂಗ ಪ್ರವೇಶ – ಭಾರತದ ಶ್ರೇಷ್ಠ ಪಕ್ಕವಾದ್ಯಗಾರರೊಂದಿಗೆ – ನಡೆದಿದೆ.
- ಹಲವು ಹಿರಿಯ ಮಕ್ಕಳು ಸಂಗೀತ ಕಚೇರಿಗಳನ್ನು ಕೊಡುವುದಲ್ಲದೆ, ಧ್ವನಿಸುರಳಿಗಳನ್ನು ಕೂಡ ಬಿಡುಗಡೆ ಮಾಡಿದ್ದಾರೆ.
- ಭಾರತದ ಹೆಸರಾದ ಗಾಯಕರಿಗೆ ನಮ್ಮ ಯುವ ಸಂಗೀತಗಾರರು ಪಕ್ಕವಾದ್ಯ ನುಡಿಸಿದ್ದಾರೆ.
- ಇಲ್ಲಿಯೇ ಹುಟ್ಟಿ, ಬೆಳೆದು, ಸಂಗೀತ ಕಲಿತ ಯುವ ಸಂಗೀತಗಾರರು ಭಾರತದಲ್ಲೂ ಹೆಸರಾಂತ ಸಭಾಂಗಣದಲ್ಲಿ ಕಚೇರಿ ಕೊಟ್ಟು ಪ್ರಶಂಸೆಗೆ ಒಳಗಾಗಿದ್ದಾರೆ.

2. ನಾದತರಂಗಿಣಿ ಉನ್ನತ ಮಟ್ಟದ ಸಂಗೀತ ಮತ್ತು ಧ್ವನಿ ಸುರಳಿಗಳನ್ನು ಹೊರತಂದಿದೆ.
3. ನಾದತರಂಗಿಣಿ ಬರಿಯ ಸಂಗೀತ ಕಚೇರಿ ಮಾತ್ರವಲ್ಲದೆ, ಸಂಗೀತ ಪ್ರಜ್ಞೆ ಮತ್ತು ಬೆಳವಣಿಗೆಗೆ ಪ್ರೇರಕವಾಗಿ ಬೋಧನಾತ್ಮಕವಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ.
4. ಕರ್ನಾಟಕದಿಂದ ಬರುವ ಶ್ರೇಷ್ಠ ಕಲಾವಿದರಿಗೆಲ್ಲ ವಾಷಿಂಗ್ಟನ್ ಮಾತ್ರವಲ್ಲದೆ, ಅಮೆರಿಕಾದ ಎಲ್ಲಾ ಕಡೆ, ಒಳ್ಳೆಯ ವೇದಿಕೆ ಒದಗಿಸಿ, ತುಂಬಿದ ಸಭಾಂಗಣದಲ್ಲಿ ಒಳ್ಳೆಯ ಸಂಗೀತ ಕಚೇರಿಗಳನ್ನು ಏರ್ಪಾಡು ಮಾಡಿದೆ.
5. ನಾದತರಂಗಿಣಿ, ಒಂದು ಸಾಧಾರಣ ಸಂಸ್ಥೆಯಾಗದೆ, ಒಂದು ಕುಟುಂಬವಾಗಿ 25 ವರ್ಷಗಳ ಕಾಲ ಸತತವಾಗಿ ಕಲಾಪೋಷಣೆಗೆ ಶ್ರಮಿಸಿ ಉತ್ತಮವಾದ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ.

ಕೆಲವು ಅನಿಸಿಕೆಗಳು

ನಾದತರಂಗಿಣಿ ಕಲಾ ಸೇವೆಯೊಂದನ್ನೇ ಗುರಿಯಾಗಿಟ್ಟುಕೊಂಡು ಬೆಳೆದ ನಿಸ್ವಾರ್ಥ ಕುಟುಂಬ. ಯಾರೊಬ್ಬರಿಗೂ ನಾ ಹೆಚ್ಚು ತಾ ಹೆಚ್ಚು ಎಂಬುವ ಅಭಿಪ್ರಾಯವಿಲ್ಲ. ಪ್ರೀತಿ, ಆದರ ಮತ್ತು ವಿಶ್ವಾಸದಿಂದ ಜನ ಸಮೂಹಕ್ಕೆ ಸಂಗೀತದ ಜೊತೆ ಸೊಗಸಾದ, ರುಚಿರುಚಿಯಾದ ಔತಣ ಒದಗಿಸಬೇಕೆಂಬುದು ಅದರ ಗುರಿ.

ವರ್ಷ ಪೂರ್ತಾ ಸಂಗೀತದ ಕಾರ್ಯಕ್ರಮಗಳ ಜೊತೆ, 'ಏಪ್ರಿಲ್'ನಲ್ಲಿ ನಡೆಯುವ

'ಪುರಂದರದಾಸ ತ್ಯಾಗರಾಜ' ಸಂಗೀತ ಉತ್ಸವ ಎಲ್ಲರೂ ಎದುರು ನೋಡುವಂಥ ಒಂದು ಸಂಭ್ರಮದ ಹಬ್ಬ. ಮೂರು ದಿನಗಳ ಕಾಲ ಎಳೆಯ ಮಕ್ಕಳಿಂದ ಹಿಡಿದು ವೃದ್ಧರ ವರೆಗೆ ಎಲ್ಲರೂ ಪಾಲ್ಗೊಂಡು ಕಾರ್ಯಕ್ರಮಗಳನ್ನು ಸವಿಯುತ್ತಿದ್ದರು. ಇಲ್ಲಿಯೇ ಬೆಳೆದ ಹಲವಾರು ಮಕ್ಕಳು, ಓದಿಗಾಗಿ ಬೇರೆ ಬೇರೆ ಪ್ರಾಂತ್ಯಕ್ಕೆ ತೆರಳಿದ್ದರೂ, ಉತ್ಸವದ ವೇಳೆಗೆ ಸಮಯ ಮಾಡಿಕೊಂಡು ಇಲ್ಲಿಗೆ ಬಂದು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹಲವು ಸ್ನೇಹಿತರು ಮತ್ತು ಹಿತೈಷಿಗಳು ಸಂಗೀತ ತಿಳಿಯದೆ ಇದ್ದರೂ, ಈ ಸಮಾರಂಭದಲ್ಲಿ ಪಾಲ್ಗೊಳ್ಳಬೇಕೆಂಬ ಉದ್ದೇಶದಿಂದ, 'ನಳಪಾಕ' ತಂಡದಲ್ಲಿ ಭಾಗವಹಿಸಿ, ಸೊಗಸಾದ ಊಟ ತಯಾರಿಸುತ್ತಿದ್ದರು. ಮೂರು ದಿನದ ಉತ್ಸವ ಮದುವೆ ಮನೆಯಂತೆ ಶೋಭಿಸುತಿತ್ತು.

ಇತ್ತೀಚೆಗೆ ಹಲವಾರು ಅಡಚಣೆಗಳು ಶುರುವಾದವು. 25 ವರ್ಷ ನಮ್ಮ ಸ್ನೇಹಿತರೇ ಆಗಿದ್ದು, ನಮ್ಮೊಡನೆ ಬೆರೆತು ಶ್ರಮಿಸಿದ ಕೆಲವರು, ರಾಜಕೀಯ ಒತ್ತಡಕ್ಕೆ ಮಣಿದು, ತಮ್ಮ ಧೋರಣೆಯನ್ನು ಬದಲಾಯಿಸಿದ್ದು ಶೋಚನೀಯ ಸಂಗತಿ. ಒಟ್ಟಿನಲ್ಲಿ, ಬದಲಾದ ಪರಿಸ್ಥಿತಿಯು ಪ್ರೀತಿ, ವಿಶ್ವಾಸ, ನಿಸ್ವಾರ್ಥ ಸೇವೆ ಮತ್ತು ಆದರಗಳಿಗೆ ಪ್ರತೀಕವಾದ ನಾದತರಂಗಿಣಿಯಲ್ಲಿ ಬಹಳ ನೋವನ್ನುಂಟುಮಾಡಿದೆ.

25 ವರ್ಷಗಳಲ್ಲಿ ಸತತವಾಗಿ ಏಪ್ರಿಲ್ ತಿಂಗಳಲ್ಲಿ ಉತ್ಸವ ನಡೆಸಿ ಯುವ ಪೀಳಿಗೆಯಲ್ಲಿ ಸಂಗೀತದ ಅಭಿರುಚಿ ಬೆಳೆಸಿ ಗುರಿ ಸಾಧಿಸಿ ಆಯಿತು. ಈಗೀಗ ಹಲವಾರು ಹೊಸ ಸಂಸ್ಥೆಗಳು ಬಂದು ಉತ್ಸವ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ವಾಷಿಂಗ್ಟನ್ ಪ್ರದೇಶದಲ್ಲಂತೂ, ವಿವಿಧ ರೀತಿಯ ಕಾರ್ಯಕ್ರಮಗಳಿಗೆ ಕೊರತೆಯೇ ಇಲ್ಲ. ಹೀಗಿರುವಾಗ, ನಾದತರಂಗಿಣಿಯ ಇತರೇ ಕಾರ್ಯಕ್ರಮಗಳನ್ನು ಮಾತ್ರ ಇಟ್ಟುಕೊಂಡು, ಏಪ್ರಿಲ್ ತಿಂಗಳ ಮೂರು ದಿನದ ಉತ್ಸವದಿಂದ ನಿವೃತ್ತಿಯಾಗಬಹುದಲ್ಲವೇ?



ಫ್ಲೆಂಡರ್ ಬೆಂಡರಿಂದ ಹೈ ಆರ್ಟಿಗೆ

– ಹಂ. ಕ. ಕೃಷ್ಣಪ್ರಿಯ

ಅಮೆರಿಕದಲ್ಲಿ ಕಾರುಗಳನ್ನು ಇಟ್ಟುಕೊಳ್ಳಲೇ ಬೇಕು. ಅವನ್ನು ಓಡಿಸಲೇ ಬೇಕು. ಈ ರೀತಿ ಓಡಿಸುವಾಗ, ರಸ್ತೆಯಲ್ಲಿ ನಾವು ನಮ್ಮ ಮುಂದಿರುವವರನ್ನು ಹೊಡೆದೋ, ನಮ್ಮ ಹಿಂದಿರುವವರು ನಮ್ಮನ್ನು ಹೊಡೆದೋ ಆಗುವ ಚಿಕ್ಕ ಪುಟ್ಟ ಅಪಘಾತಗಳು ಸರ್ವೇಸಾಮಾನ್ಯ. ಈ ಅಪಘಾತಗಳಲ್ಲಿ ಜಖಂ ಆಗುವ ಭಾಗಗಳು ಸಾಮಾನ್ಯವಾಗಿ ಕಾರಿನ ಇತರ ಇನ್ನೂ ಬೆಲೆಬಾಳುವ ಭಾಗಗಳನ್ನೂ, ಕಾರಿನ ಪ್ರಯಾಣಿಕರನ್ನೂ ಕಾಪಾಡಲು, ಹೊಡೆಯಲು ಬಂದ ಕಾರನ್ನು ಒಂದಷ್ಟು 'ಬಂಪ್' ಮಾಡಿ ಸಹಾಯ ಮಾಡುವ ಬಂಪರುಗಳು, ಅವುಗಳ ಹತ್ತಿರವೇ ಚಕ್ರಗಳ ಸುತ್ತ ಇರುವ, ಬೇರೆ ಹೆಚ್ಚು ಬೆಲೆಯ ಭಾಗಗಳನ್ನು 'ಫ್ಲೆಂಡ್' ಮಾಡುವ ಫ್ಲೆಂಡರುಗಳು. ಆದ್ದರಿಂದಲೇ ಇಲ್ಲಿನ ಚಿಕ್ಕ ಅಪಘಾತಗಳಿಗೆ ಪ್ರಾಸಬದ್ಧವಾಗಿ 'ಫ್ಲೆಂಡರ್ ಬೆಂಡರ್' ಎಂದು ಕರೆಯುತ್ತಾರೆ.

ಇಲ್ಲಿನ ಎಲ್ಲರಂತೆ ನಾವು ಕೂಡ, ಸಾಕಷ್ಟು ಫ್ಲೆಂಡರ್ ಬೆಂಡರುಗಳ ಅನುಭವ ಪಡೆದಿದ್ದೇವೆ. ಒಂದು ಸ್ವಲ್ಪ ಬಂಪರು ತಗ್ಗಿದರೂ, ಅದನ್ನು ಸಪಾಟು ಮಾಡದೆ, ಹೊಸ ಬಂಪರು ಹಾಕುವುದು ಇಲ್ಲಿನ ಪರಿಪಾಠ. ಬೇರೆಯವರದೇ ತಪ್ಪಾಗಿ, ಅವರ ವಿಮಾ ಕಂಪನಿಯವರು ರಿಪೇರಿಗೆ ದುಡ್ಡು ಹಾಕಿದರೆ, ಬಂಪರ್ ರಿಪೇರಿ ಮಾಡಿಸುವುದರ ಬಗ್ಗೆ ಯೋಚನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಬೇರೆ ಸಂದರ್ಭಗಳಲ್ಲಿ, ಸಾಮಾನ್ಯವಾಗಿ ಇದು ಹಲವಾರು ನೂರು ಡಾಲರುಗಳು ಕೆಲಸ ಆದ್ದರಿಂದ ರಿಪೇರಿ ಮಾಡಿಸುವುದೇ ಬೇಡವೇ ಎನ್ನುವುದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗುತ್ತದೆ. ಕಾರು ಹಳೆಯದಾದರೆ, ಹೊಸ ಬಂಪರು ಹಾಕಿಸುವ ಬೆಲೆ, ಹತ್ತಿರ ಹತ್ತಿರ ಕಾರಿನ ಬೆಲೆಯಷ್ಟೇ ಆದೀತು. ಆಗ ಹೊಸ ಬಂಪರು ಹಾಕಿಸಿ ಪ್ರಯೋಜನವುಂಟೇ ನೋಡಬೇಕು. ಮೂರು ನಾಲ್ಕು ಬಾಡಿಶಾಪುಗಳಿಂದ (ಇವು ಕಾರುಗಳ ಅಪಘಾತಗಳಿಂದ ಆಗುವ ಜಖಮ್ಮನ್ನೇ ರಿಪೇರಿ ಮಾಡುವುದರಲ್ಲಿ ವಿಶಿಷ್ಟ ಅನುಭವ ಪಡೆದಿರುವ ಅಂಗಡಿಗಳು) ಎಸ್ಟಿಮೇಟುಗಳನ್ನು ತೆಗೆದುಕೊಂಡು, ಅವುಗಳಲ್ಲಿ ಸಿಕ್ಕಾಪಟ್ಟೆ ವ್ಯತ್ಯಾಸವಿದ್ದರೆ, ಎಲ್ಲಾ ಎಸ್ಟಿಮೇಟುಗಳೂ ಒಂದೇ ಗುಣಮಟ್ಟದ ಕೆಲಸಕ್ಕಾಗಿಯೇ ನಿರ್ಧರಿಸಬೇಕು. ಎಸ್ಟಿಮೇಟು ಕೊಟ್ಟವರು ನಂಬಿಕಸ್ಥರೇ, ಎಷ್ಟು ವರ್ಷಗಳಿಂದ ಈ ಕೆಲಸ ಮಾಡುತ್ತಿದ್ದಾರೆ, ನಮಗೆ ತಿಳಿದವರು ಯಾರಾದರೂ ಅವರ ಹತ್ತಿರ ತೃಪ್ತಿಕರವಾಗಿ ಕೆಲಸ ಮಾಡಿಸಿಕೊಂಡಿದ್ದಾರೆಯೇ, ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಅವುಗಳಿಗೆ ಸರಿಯಾದ ಉತ್ತರ ತಿಳಿಯದೆ ಮನಸ್ಸಿನ

ನೆಮ್ಮದಿ ಹಾಳುಮಾಡಿಕೊಳ್ಳಬೇಕು.

ಹೋದ ಸಲ ನಮ್ಮ ಕಾರಿಗೆ ಫ್ಲೆಂಡರ್ ಬೆಂಡರ್ ಆದಾಗ ಈ ಕೆಲಸಗಳನ್ನೆಲ್ಲಾ ಮಾಡಿ, ಕಡೆಗೆ ಇಲ್ಲೇ ಹತ್ತಿರದ ಪಾಲೋ ಆಲ್ಟೋ ಊರಿನ ಒಬ್ಬ ಬಾಡಿಶಾಪಿನವನ ಹತ್ತಿರ ಈ ಕೆಲಸ ಮಾಡಿಸಿದ್ದೆವು. ಕೆಲಸ ಸಾಕಷ್ಟು ಚೆನ್ನಾಗಿಯೇ ನಡೆದಿತ್ತು. ರಿಪೇರಿಯ ಬೆಲೆ ಇದ್ದದ್ದರಲ್ಲಿ ಕಡಮೆಯದೇ ಆಗಿತ್ತು.

ಕೆಲವು ವರ್ಷಗಳಾದವು. ಕಾಲಚಕ್ರ ಉರುಳಿತು. ನಮ್ಮ ಕಾರುಗಳ ಚಕ್ರಗಳೂ ಉರುಳಿದವು. ಯಥಾಪ್ರಕಾರ ನಮ್ಮ ಕಾರಿನ ಹೊಸ ಬಂಪರು, ಅಲ್ಲಿ ಪಾರ್ಕಿಂಗ್ ಲಾಟಿನಲ್ಲಿ ಒಂದಷ್ಟು, ಇಲ್ಲಿ ಕರ್ಬಿನ ಪಕ್ಕದ ಮರಕ್ಕೆ ತೀರ ಹತ್ತಿರ ಹೋಗಿ ಒಂದಷ್ಟು, ಗೊತ್ತಿಲ್ಲದ ಕಾರುಗಳ ಜೊತೆ ಸರಸ ಆಡಲು ಹೋಗಿ ಒಂದಷ್ಟು, ಗೀರುಬಾರು, ಏರುತಗ್ಗುಗಳನ್ನು ಪಡೆಯಿತು. ಅದರ ಹಳೆಯ ಸ್ಥಿತಿಗೇ ಹಿಂತಿರುಗಿತು. ಕಾರಿನ ವಯಸ್ಸು ಹೆಚ್ಚುತ್ತಾ ಇದ್ದದ್ದರಿಂದ ಅದರ ಮೇಲೆ ಪ್ರೀತಿ ಕಡಿಮೆ ಆಗಿ, ಎಷ್ಟು ದಿನ ಇದು ಓಡುತ್ತದೆಯೋ ಓಡಲಿ, ಈ ಹಳೆಯ ಕಾರಿಗೆ ಬಂಪರು ಆರೈಕೆ ವ್ಯರ್ಥ ಎಂದುಕೊಂಡು ಹಾಗೆಯೇ ಓಡಿಸುತ್ತಿದ್ದೆವು. ಆದರೆ ನಾವು ಪ್ರಪೋಸ್ ಮಾಡಿದಾಗ, ಕಾರು ಡಿಸ್ಪೋಸ್ ಮಾಡುತ್ತದೆಯಲ್ಲವೇ? ಕಡೆಗೊಂದು ಸಲ ನಮ್ಮ ಗರಾಜಿನಿಂದ ಹೊರಕ್ಕೆ ಕಾರು ನಡೆಸುತ್ತಿದ್ದಾಗ ಬಾಗಿಲಿನ ಫ್ರೇಮಿಗೆ ಬಂಪರಿನ ಅಂಚು ಸಿಕ್ಕಿಕೊಂಡು, ಬಂಪರು ಕಾರಿನಿಂದ ಕಳಚಿಕೊಂಡು ನೆಲದ ಮೇಲೆ ಬಿದ್ದೇಬಿಟ್ಟಿತು. ಬಂಪರಿಗೇ ನಮ್ಮ ಕಾರಿನ ಲೈಸೆನ್ಸ್ ಪ್ಲೇಟೂ ಲಗತ್ತಿಸಿದ್ದರಿಂದ ಬಂಪರ್ ರಿಪೇರಿ ಅನಿವಾರ್ಯವಾಯಿತು.

ಈ ಸಲ ಹೇಗೂ ವರ್ತನೆಯ ಬಂಪರ್ ರಿಪೇರಿಯವನೇ ಇದ್ದಾನಲ್ಲ ಎಂದು ಹೆಚ್ಚು ಯೋಚನೆ ಮಾಡದೆ, ನಮ್ಮ ಪಾಲೋ ಆಲ್ಟೋದ ಬಾಡಿಶಾಪಿನವನಿಗೆ ಫೋನ್ ಮಾಡಿದೆ. ಮೊದಲ ಸಲ ಮಾಡಿದಾಗ ಫೋನ್ ಯಾರೂ ಎತ್ತಿಕೊಳ್ಳದೆ, ನನ್ನ ಕರೆ ವಾಯ್ಸ್‌ಮೇಲಿಗೆ ಹೋಯಿತು. ಅದು ಹೇಳಿದಂತೆ, ನನ್ನ ಕುಲ, ಗೋತ್ರ, ನನ್ನ ಕಾರಿನ ಕುಲ, ಗೋತ್ರ, ದೂರವಾಣಿ ಸಂಖ್ಯೆ (ನನ್ನದು, ಕಾರಿನದಲ್ಲ) ಎಲ್ಲಾ ಎರಡೆರಡು ಸಲ ಸ್ಪಷ್ಟವಾಗಿ ಹೇಳಿ ಸಂದೇಶ ಬಿಟ್ಟೆ. ಎರಡು ಮೂರು ದಿನ ಕಾದೆ. ಉತ್ತರ ಏನೂ ಬರಲಿಲ್ಲ. ಆದರೂ ಹೋದ ಸಲ ಕಡಿಮೆ ಬೆಲೆಗೆ ಕೆಲಸ ಮಾಡಿಕೊಟ್ಟನಲ್ಲಾ ಎಂಬ ವ್ಯಾಮೋಹದಿಂದ ಮತ್ತೆ ಎರಡು ಮೂರು ಸಲ ಫೋನ್ ಮಾಡಿದೆ. ಇನ್ನೇನು ಆಸಾಮಿ ಸಿಕ್ಕುವುದಿಲ್ಲ ಎಂದುಕೊಂಡು, ಒಂದು ಕಡೆಯ ಸಲ ಫೋನ್ ಮಾಡುವ ಎಂದು ಮಾಡಿದಾಗ, ಆ ಕಡೆ ಫೋನಿನಿಂದ 'ಹಲೋ, ನಾನು ಗ್ರೆಗ್ ಮಾತನಾಡುತ್ತಿದ್ದೇನೆ. ಏನು ಬೇಕಿತ್ತು?' ಎಂದು ಗಂಡು ಧ್ವನಿ ಕೇಳಿಸಿತು. ಇದುವರೆಗೂ ಆನ್ಸರಿಂಗ್ ಮಷೀನಿನ ಜೊತೆಯೇ ಸಲ್ಲಾಪ ನಡೆಸಿ ರೂಢಿಯಾಗಿದ್ದ ನನಗೆ ಸ್ವಲ್ಪ ತಬ್ಬಿಬ್ಬಾಗಿ, ಸ್ವಲ್ಪ ಸುಧಾರಿಸಿಕೊಂಡು, ಅವನಿಗೆ ಮತ್ತೆ ನನ್ನ ಬಂಪರಿನ ಪುರಾಣ ಹೇಳಿದೆ. ಕಾರು ಯಾವ ಬ್ರಾಂಡು, ಯಾವ ಮಾಡಲ್ಲು, ಯಾವ ವರ್ಷದ್ದು ಹೇಳಿದ ನಂತರ, 'ಸ್ವಲ್ಪ ಇರು, ನನ್ನ

ಪುಸ್ತಕಗಳನ್ನು ನೋಡಿ ಎಷ್ಟಾಗುತ್ತದೆ ಹೇಳುತ್ತೇನೆ,' ಎಂದ. ಎರಡು ನಿಮಿಷಗಳ ನಂತರ ಬಂದು, 675 ಡಾಲರಾಗುತ್ತದೆ ಎಂದು ಹೇಳಿದ. 'ಏನಪ್ಪಾ, ಹೋದ ಸಲ ಈ ಕಾರಿಗೇ, ಈ ಮುಂದಿನ ಬಂಪರನ್ನೇ 375 ಡಾಲರಿಗೆ ಹಾಕಿ ಕೊಟ್ಟೆಯಲ್ಲ, ಈಗ ಹೇಗೆ ಅದೇ ಕೆಲಸಕ್ಕೆ ಇಷ್ಟು ಕೇಳುತ್ತಿದ್ದೀಯ?' ಎಂದಾಗ, ತಕ್ಷಣ 'ಸರಿ, 375 ಡಾಲರಿಗೆ ಕೆಲಸ ಮಾಡಿಕೊಡುತ್ತೇನೆ,' ಎಂದು ಒಪ್ಪಿಕೊಂಡ. ನಾನೂ ಆ ಬೆಲೆಗೆ ಒಪ್ಪಿಕೊಂಡು, 'ಮುಂದಿನ ಸೋಮವಾರ, ಕೆಲಸಕ್ಕೆ ಹೋಗುವಾಗ ಬೆಳಿಗ್ಗೆ ಕಾರು ನಿನ್ನ ಶಾಪಿಗೆ ತರುತ್ತೇನೆ,' ಎಂದು ಹೇಳಿ ಫೋನಿಟ್ಟೆ.

ನನಗೆ ಸ್ವಲ್ಪ ಆಶ್ಚರ್ಯವೇ ಆಗಿತ್ತು. ಬೊಂಬಾಯಿನ ಫುಟ್‌ಪಾತುಗಳಲ್ಲಿ ಉಗುರುಕತ್ತರಿ ಮಾರುವವರು, ದೆಹಲಿಯಲ್ಲಿ ಕನಾಟ್ ಸರ್ಕಸ್ಸಿನಲ್ಲಿ ಕರ್ಚೀಫು ಮಾರುವವರು ಈ ರೀತಿ ಬೆಲೆ ಕಡಿಮೆ ಮಾಡಿಕೊಳ್ಳುವುದನ್ನು ನೋಡಿದ ಅನುಭವ ನನಗಿದೆ. ಆದರೆ ಈ ಸಂದರ್ಭದಲ್ಲಿ ಇಷ್ಟು ಬೆಲೆ ಕಡಿಮೆ ಮಾಡುವುದು ನಾನು ಹಿಂದೆ ನೋಡಿರಲಿಲ್ಲ. ಜೊತೆಗೆ ಇನ್ನೂ ಕಡಿಮೆ ಬೆಲೆಗೆ ಕೇಳಿದ್ದರೆ ಒಪ್ಪಿಕೊಳ್ಳುತ್ತಿದ್ದನೇನೋ ಎಂಬ ಬಯರ್ಸ್ ರಿಮೋರ್ಸ್ (buyer's remorse) ಸ್ವಲ್ಪ ಆಯಿತು. ಆದರೂ ಕಳೆದ ಸಲ ರಿಪೇರಿಯ ಬೆಲೆಯ ಅಂದಾಜಿಗೆ ಬೇರೆ ಬಾಡಿಷಾಪುಗಳಿಗೆ ಹೋದಾಗ ಅವರು ಸುಮಾರು 700 ಡಾಲರಿನ ಅಂದಾಜೇ ಕೊಟ್ಟಿದ್ದು ನೆನಪಿಗೆ ಬಂದು ಸಮಾಧಾನ ಮಾಡಿಕೊಂಡೆ.

ಸೋಮವಾರ ಬೆಳಿಗ್ಗೆ, ಕಾರನ್ನು ಬಾಡಿಷಾಪಿಗೆ ತೆಗೆದುಕೊಂಡು ಹೋಗಲು ಸಿದ್ಧತೆ ಮಾಡಿಕೊಳ್ಳಬೇಕಾಯಿತು. ಕಾರು ರಸ್ತೆಗಳಲ್ಲಿ ಓಡಿಸಲು ಲೈಸೆನ್ಸ್ ಪ್ಲೇಟು ಇರಲೇಬೇಕಾದ್ದರಿಂದ ಹೇಗಾದರೂ ಬಂಪರನ್ನು ಕಾರಿಗೆ ಮತ್ತೆ ಅಂಟಿಸಬೇಕಾಯಿತು. ಎಲ್ಲರ ಗರಾಜುಗಳಂತೆಯೇ ನಮ್ಮ ಗರಾಜಿನಲ್ಲೂ ಕೆಲವು ಬಂಜೀ ಕಾರ್ಡುಗಳು ಹೇಗೋ ಬಂದು ಸೇರಿಕೊಂಡಿದ್ದವು. ಎರಡು ಬಂಜೀ ಕಾರ್ಡುಗಳನ್ನು (bungee cord) ತೆಗೆದುಕೊಂಡು, ಅವುಗಳ ಒಂದು ಕೊಂಡಿ ಕಾರಿನ ಕೆಳಗಿನ ಯಾವುದೋ ಭಾಗಕ್ಕೆ ಸಿಕ್ಕಿಸಿ, ಅವನ್ನು ಬಂಪರಿನ ಸುತ್ತ ಸುತ್ತಿ ಎಳೆದು ಇನ್ನೊಂದು ಕೊಂಡಿಯನ್ನು ಕಾರಿನ ಮುಂದಿನ ಗ್ರಿಲ್ಲಿಗೆ ಸಿಕ್ಕಿಸಿದೆ. ಒಂದು ಕ್ಷಣ, 'ಯಾಕೆ ಹೀಗೆಯೇ ಕಾರು ಓಡಿಸಿ 375 ಡಾಲರು ಉಳಿತಾಯ ಮಾಡಿಕೊಳ್ಳಬಾರದು?' ಎನ್ನುವ ಯೋಚನೆ ಹೊಳೆಯಿತು. ಆದರೆ ಈ ಕಾರು ಸಾಮಾನ್ಯವಾಗಿ ಓಡಿಸುವುದು ನಾನಲ್ಲ, ನನ್ನ ಹೆಂಡತಿ ಎನ್ನುವುದು ಜ್ಞಾಪಕಕ್ಕೆ ಬಂದಿತು. ನಂತರ ಕೆಲಸಕ್ಕೆ ಹೋಗಬೇಕಾದ್ದರಿಂದ, ನನ್ನ ಸೈಕಲ್ ರ್‍ಯಾಕನ್ನು (rack) ಕಾರಿನ ಟ್ರಂಕಿಗೆ ಸಿಕ್ಕಿಸಿ ಅದರ ಮೇಲೆ ನನ್ನ ಸೈಕಲ್ ಏರಿಸುವ ಕೆಲಸದಲ್ಲಿ ತೊಡಗಿದೆ.

ಎಲ್ಲಾ ಸಿದ್ಧತೆ ಆಯಿತು. ಹುಷಾರಾಗಿ ಇಗ್ನೀಷನ್ನಿನಲ್ಲಿ ಕೀ ಹಾಕಿ ತಿರುಗಿಸಿ ಕಾರು ಸ್ಟಾರ್ಟ್ ಮಾಡಿದೆ. ಎಂದಿಗಿಂತ ಹೆಚ್ಚು ನಯವಾಗಿ ಕಾರಿಗೆ ಗ್ಯಾಸು ಕೊಟ್ಟು ಏನಾದರೂ ಬಂಪರ್ ಬೀಳುವ ಶಬ್ದ ಕೇಳುತ್ತದೆಯೇ ಎಂದು ಗಮನವಿಟ್ಟು ಕೇಳುತ್ತಾ ಕಾರನ್ನು

ನಿಧಾನವಾಗಿ ಹೊರಡಿಸಿದೆ. ಒಂದು ಮೈಲಿ ಓಡಿಸಿದ ನಂತರ ಕಾರಿನ ಮುಂದಿನಿಂದ ಏನೋ ಸದ್ದು ಕೇಳಿಸಿತು. ರಸ್ತೆಯ ಪಕ್ಕ ಹೋಗಿ ನನ್ನ ಕೆಲಸದ ಪ್ಯಾಂಟು ನೆಲಕ್ಕೆ ತಗುಲದಂತೆ ಮೇಲೆಳೆದುಕೊಂಡು ಸದ್ದು ಎಲ್ಲಿಂದ ಬರುತ್ತಿರಬಹುದು ಎಂದು ನೋಡಿದೆ. ಬಂಪರೇನೋ ಸಾಕಷ್ಟು ಸರಿಯಾಗಿಯೇ ಕಾಣುತ್ತಿತ್ತು. ಆದರೆ, ಅದರ ತಮ್ಮ ಫ್ಲೆಂಡರು ಚಕ್ರಕ್ಕೆ ತಗುಲಿದಂತೆ ಕಂಡಿತು. ಚಕ್ರ ಸುತ್ತಿದಾಗ ಅದು ಪಟಪಟ ಎಂದು ಬಡಿದುಕೊಂಡು ಮಾಡುತ್ತಿದ್ದ ಶಬ್ದವೇ ನನಗೆ ಕೇಳಿಸಿದ್ದು. ಫ್ಲೆಂಡರನ್ನು ಮುಂದಕ್ಕೆಳೆದು ಕಾರನ್ನು ನಿಧಾನವಾಗಿ ನಡೆಸುತ್ತಾ, ಅಲ್ಲಲ್ಲಿ ನಿಲ್ಲಿಸಿ ಇದೇ ಕೆಲಸವನ್ನು ಮತ್ತೆಮತ್ತೆ ಮಾಡುತ್ತಾ ಹೇಗೋ ಬಾಡಿಷಾಪು ಸೇರಿದೆ.

ಕಾರನ್ನು ಒಂದು ಚಿಕ್ಕ ಆಫೀಸಿನ ಮುಂದೆ ನಿಲ್ಲಿಸಿ ಒಳಗೆ ಹೋದೆ. ಎಲ್ಲಾ ಆಫೀಸುಗಳಲ್ಲಿರುವಂತೆ ಒಂದು ಕಂಪ್ಯೂಟರು, ಹಲವಾರು ಕಂತೆ ಕಾಗದಗಳು, ಕಾಫಿ ಲೋಟಗಳು ಇತ್ಯಾದಿಗಳ ನಡುವೆ ಒಬ್ಬಾಕೆ, ಆಫೀಸಿನ ರಿಸೆಪ್ಷನಿಸ್ಟಂತೆ ಇದ್ದವಳು, ಒಬ್ಬ ಆಜಾನುಬಾಹು ಮನುಷ್ಯ, ಸುಮಾರು ಆರೂವರೆ ಅಡಿ ಎತ್ತರದವನು, ಕಂಡರು. ಅವನು ಎಲ್ಲೋ ಹೊರಡುವ ಗಡಿಬಿಡಿಯಲ್ಲಿದ್ದಂತೆ ಕಂಡ. ಇವನೇ ಗ್ರೆಗ್ ಇರಬೇಕು – ಹೋದ ಸಲ ಬಂದಾಗ ಗ್ರೆಗ್ ಹೇಗೆ ಕಾಣುತ್ತಿದ್ದ ಎನ್ನುವುದು ನನಗೆ ಪೂರ್ತಿ ಮರೆತುಹೋಗಿತ್ತು – ಎಂದುಕೊಂಡು ನಾನು ಅವನನ್ನು ಮಾತನಾಡಿಸುವುದಕ್ಕೆ ಮೊದಲೇ, ಅವನೇ ನೀನು ಕೃಷ್ಣ ಇರಬೇಕು ಎಂದು ಮುಂದೆ ಬಂದು ಕೈ ಕುಲುಕಿದ. ಕಿಟಕಿಯ ಹೊರಕ್ಕೆ ಕಣ್ಣಾಡಿಸಿ ನನ್ನ ಕಾರು ಎಲ್ಲಿದೆ ಎಂದು ನೋಡಿಕೊಂಡ. ಆಫೀಸಿನ ಪಕ್ಕದ ಬಾಗಿಲಿನಲ್ಲಿ ತಲೆ ಹಾಕಿ ಅಲ್ಲಿದ್ದ ತನ್ನ ಕೆಲಸಗಾರನನ್ನು ಕರೆದ.

ಇಬ್ಬರೂ ಹೊರಗೆ ಬಂದು ಬಂಪರನ್ನು ಕೂಲಂಕುಷವಾಗಿ ನೋಡಿದರು. ಬಂಪರಿನ ಜೊತೆಗೆ ಅದರ ಹಿಂದಿನ ಕಾರಿನ ಜಾಗಕ್ಕೂ ಸ್ವಲ್ಪ ಜಖಂ ಆಗಿದ್ದನ್ನು ಸ್ವಲ್ಪ ತಟ್ಟಿ ನೋಡಿ, ಇದು ನನಗೆ ಗೊತ್ತಿರಲಿಲ್ಲ ಎಂದು ಗ್ರೆಗ್ ಗೊಣಗಿದ. ಏನಪ್ಪಾ, ಇವನು ಏನಾದರೂ ಮೊದಲು 'ಲೊ-ಬಾಲ್ ಮಾಡಿ ಈಗ ರಿಪೇರಿ ಬೆಲೆ ಹೆಚ್ಚು ಮಾಡುವುದರಲ್ಲಿದ್ದಾನೋ ಎಂದುಕೊಳ್ಳುತ್ತಿರುವಾಗ, 'ನನ್ನ ಕೆಲಸಗಾರ ಎಲ್ಲಾ ನೋಡಿಕೊಳ್ಳುತ್ತಾನೆ, ನೀನು ಏನೂ ಯೋಚನೆ ಮಾಡಬೇಡ,' ಎಂದು ಹೇಳಿ ದಡಬಡನೆ ಎಲ್ಲಿಗೋ ಹೊರಟ. ಕೆಲಸಗಾರ ನನ್ನನ್ನು ಒಳಗೆ ಕರೆದುಕೊಂಡು ಹೋಗಿ, ನನ್ನ ಕಾರಿಗೆ ಹಾಕಲು ಇಟ್ಟಿದ್ದ ಹೊಸ ಹಳೆಯ (ಅಂದರೆ, ನನ್ನ ಕಾರಿಗೆ ಹೊಸದು, ಬೇರೆ ಯಾವುದೋ ಹಿಂದಿನಿಂದಲೋ ಪಕ್ಕದಿಂದಲೋ ಹೊಡೆದು ಟೋಟಲ್ ಆದ ನತದೃಷ್ಟ ಕಾರಿನದಿರಬಹುದಾದದ್ದರಿಂದ ಹಳೆಯದು) ಮಾಸಲು ಕಪ್ಪು ಬಣ್ಣದ ಬಂಪರು ತೋರಿಸಿದ. 'ಏನೂ ಯೋಚನೆ ಮಾಡಬೇಡ, ಸಾಯಂಕಾಲದ ಹೊತ್ತಿಗೆ ನಿನ್ನ ಹೊಸ ಬಂಪರ್ ಭೂಷಿತ ಕಾರು ಸಿದ್ಧವಾಗಿರುತ್ತದೆ,' ಎಂದು ಭರವಸೆ ಕೊಟ್ಟ. ನಾನೂ, ನನ್ನ, ಗಾಂಧಿ ಬಜ಼ಾರಿನಲ್ಲಿ ರವಿಕೆ ಮ್ಯಾಚಿಂಗ್ ಅಂಗಡಿಯಲ್ಲಿ ವ್ಯಾಪಾರ ಮಾಡುವುದರಲ್ಲಿ

ನುರಿತ, ಹೆಂಡತಿಯನ್ನು ಜ್ಞಾಪಿಸಿಕೊಂಡು, 'ಬಂಪರು ಇದೇ ಕಪ್ಪು ಬಣ್ಣ ಇರುತ್ತದೆಯೇ? ಅದಕ್ಕೆ ನನ್ನ ಕಾರಿನ ಬಣ್ಣವನ್ನೇ ಬಳಿಯುತ್ತೀಯ ತಾನೆ?' ಎಂದು ಆತಂಕದಿಂದ ಕೇಳಿ, ಅವನಿಂದ ಬಣ್ಣ ಸ್ವಲ್ಪವೂ ನೋಡುವವರಿಗೆ ಗೊತ್ತಾಗದಂತೆ ಮ್ಯಾಚ್ ಮಾಡುತ್ತೇನೆ ಎಂಬ ಆಶ್ವಾಸನೆ ಗಿಟ್ಟಿಸಿಕೊಂಡು ನನ್ನ ಸೈಕಲ್ ಕಾರಿನಿಂದ ಇಳಿಸಿಕೊಂಡು, ರ್‍ಯಾಕನ್ನು ಕಾರಿನ ಟ್ರಂಕಿನಲ್ಲಿಟ್ಟು ಅಲ್ಲಿಂದ ಕೆಲಸಕ್ಕೆ ಹೊರಟೆ.

ಆವತ್ತು ದಿನವೆಲ್ಲಾ ಹಿನ್ನೆಲೆಯಲ್ಲಿ ಕಾರಿನ ಯೋಚನೆಯೇ. ಸಾಯಂಕಾಲ ಅದು ಮುನ್ನೆಲೆಗೆ ಬರುವ ಮೊದಲೇ ಬಾಡಿಷಾಪಿನಿಂದ ಫೋನ್ ಕರೆ ಬಂದಿತು. ನನ್ನ ಕಾರಿನ ರಿಪೇರಿ ಆಗಿದೆ ಎಂದು ತಿಳಿಯಿತು. ಸ್ವಲ್ಪ ಬೇಗನೆ ಕೆಲಸದಿಂದ ಹೊರಟು, ಬಾಡಿಷಾಪಿಗೆ ಹೋದೆ. ಅಲ್ಲಿ ಗ್ರೆಗ್ ಕಾಣಲಿಲ್ಲ. ಆಫೀಸಿಗೆ ಹೋಗಿ, ಅಲ್ಲಿ ಕೆಲಸ ಮಾಡುತ್ತಿದ್ದವಳನ್ನು ನನ್ನ ಕಾರು ರಿಪೇರಿ ಆಗಿದೆ, ತೆಗೆದುಕೊಂಡು ಹೋಗಲು ಬಂದಿದ್ದೇನೆ ಎಂದು ಹೇಳಿದೆ. ಆಗ ಒಂದೆರಡು ಚಿಕ್ಕ ತೊಂತಲು ತೋರಿತು. ಕೆಲಸಗಾರ ನನ್ನ ಹೊಸ ಬಂಪರಿನ ಕೆಲಸ ತೋರಿಸಿ, ಬಂಪರು ಹಾಕುವುದಲ್ಲದೆ, ಇನ್ನಷ್ಟು ಕೆಲಸ ಮಾಡಬೇಕಾಯಿತು ಅದಕ್ಕೆ ಇನ್ನಷ್ಟು ಹೆಚ್ಚು ದುಡ್ಡು ಆಗುತ್ತದೆ ಎಂದೆಲ್ಲಾ ಹೇಳತೊಡಗಿದ. ಈ ರೀತಿ ಹೆಚ್ಚು ಕೆಲಸ ಮಾಡಬೇಕಾದಾಗ, ಒಂದು ಸಲ ಫೋನ್ ಮಾಡಿ, ಕೇಳಿ ನಂತರ ಮಾಡುವುದು ಪರಿಪಾಠ. ಗ್ರೆಗ್ ಇಲ್ಲದೆ ಇದ್ದದ್ದರಿಂದಲೋ ಏನೋ ಅದು ಮಾಡದೆ ಅವನು ಮಾಡಬೇಕಾದ ಕೆಲಸ ಮಾಡಿದ್ದ. ನಾನು ಇದು ಮಾಡುವ ಕ್ರಮ ಅಲ್ಲ ಎಂದು ಸ್ವಲ್ಪ ಗಲಾಟೆ ಮಾಡಬಹುದಿತ್ತೇನೋ. ಆದರೆ ಹೇಗಾದರೂ ಮಾಡಿಸಬೇಕಾದ ಕೆಲಸ ಮುಗಿಸಿ ಮುಂದಿನ ಕೆಲಸಗಳಿಗೆ ಹೋಗುವ ತರಾತುರಿಯಲ್ಲಿ, ಆಗ ತಾನೇ ಅಲ್ಲಿಗೆ ಎಲ್ಲಿಂದಲೋ ಹಿಂತಿರುಗಿದ್ದ ಗ್ರೆಗ್ ಜೊತೆ, ಕೆಲಸಗಾರನ ಜೊತೆ ಸ್ವಲ್ಪ ಚೌಕಾಸಿ ಮಾಡಿ, ಅವರು ಕೇಳಿದ 450 ಡಾಲರನ್ನು 425ಕ್ಕೆ ಇಳಿಸಿದೆ.

ಇನ್ನು ಎರಡನೆಯ ತೊಂತಲು. ಅವರ ಕ್ರೆಡಿಟ್ ಕಾರ್ಡ್ ಮೆಷೀನು ಏನೋ ಕೈಕೊಟ್ಟಿತ್ತಂತೆ. ಇದು ನಿಜವೋ, ಅಥವಾ ಕ್ರೆಡಿಟ್ ಕಾರ್ಡ್ ಕಂಪನಿಗೆ ಕೊಡಬೇಕಾದ ಫೀಸು ಉಳಿಸುವ ಪ್ರಯತ್ನವೋ ತಿಳಿಯಲಿಲ್ಲ. ತಿಳಿಯುವ ದಾರಿಯೂ ಇರಲಿಲ್ಲ. ಸರಿ, ನಾನು ಹಣ, ಚೆಕ್ ಬುಕ್ಕು ತಂದಿರಲಿಲ್ಲವಾದ್ದರಿಂದ ಅಲ್ಲೇ ಹತ್ತಿರ ನನ್ನ ಬ್ಯಾಂಕಿನ ಶಾಖೆ ಇದೆಯೇ ಕೇಳಿದೆ. ಅವರು ಇದೆ ಎಂದು ಹೇಳಿದರು. ನನಗೆ ದಾರಿ ಗೊತ್ತಿಲ್ಲದೆ ಇದ್ದದ್ದರಿಂದಲೋ, ನನ್ನನ್ನು ಒಬ್ಬನನ್ನೇ ಹೋಗಲು ಬಿಟ್ಟರೆ ನಾನು ವಾಪಸ್ ಬರುತ್ತೇನೋ ಇಲ್ಲವೋ ಎಂಬ ಸಂಶಯ ಇದ್ದದ್ದರಿಂದಲೋ, ನನ್ನ ಕಾರಿನ ರಿಪೇರಿ ಕೆಲಸ ಮಾಡಿದವ ನನ್ನ ಜೊತೆ ಬ್ಯಾಂಕಿಗೆ ಬರಲು ಒಪ್ಪಿದ. ನನ್ನ ಸೈಕಲ್ಲನ್ನು ಆಫೀಸಿನ ಒಳಗಿಟ್ಟು, ಅದರ ಮೇಲೆ ಒಂದು ಕಣ್ಣಿರಲಿ ಎಂದು ಹೇಳಿ, ಅವನನ್ನು ಪಕ್ಕದಲ್ಲಿ ಕೂರಿಸಿಕೊಂಡು ಅವನು ಹೇಳಿದ ದಿಕ್ಕಿನಲ್ಲಿ ಕಾರು ನಡೆಸತೊಡಗಿದೆ.

ಮಾತು ಗ್ರೆಗ್ ಕಡೆ ಹೇಗೋ ತಿರುಗಿತು. ಕೆಲಸಗಾರ ಅವನು ಎಷ್ಟು ಒಳ್ಳೆಯ ಬಾಸ್

ಎಂದು ಹೊಗಳಲು ಆರಂಭಿಸಿದ. ಎಷ್ಟೋ ಕಡೆ ಕೆಲಸಗಾರ ಮತ್ತು ಅಂಗಡಿಗಳ ಮಾಲೀಕರ ನಡುವೆ ಇರುವ ಅಸಮಾಧಾನ, ಒತ್ತಡಗಳನ್ನು ನೋಡಿದ್ದ ನನಗೆ ಇದು ಬಹಳ ಅಸಾಮಾನ್ಯವಾಗಿ ಕಂಡಿತು. ಈಗಿನ ದೇಶದ ಆರ್ಥಿಕ ಸ್ಥಿತಿಯಿಂದ, ಪೆಟ್ರೋಲಿನ ಬೆಲೆ ಹೆಚ್ಚಾಗಿರುವುದರಿಂದ, ಜನ ಕಾರುಗಳನ್ನು ಓಡಿಸುವುದು ಕಡಿಮೆಯಾಗಿ, ಅವರ ರಿಪೇರಿ ವ್ಯಾಪಾರವೂ ಕುಗ್ಗಿದೆಯಂತೆ. ಗ್ರೆಗ್, ಅವನ ಬಾಡಿಷಾಪಿಗೆ ಹೆಚ್ಚು ಕೆಲಸ ಬರದೆ ಇದ್ದರೂ ಅವನ ಕೆಲಸಗಾರರನ್ನು ಇಟ್ಟುಕೊಳ್ಳಲು ಅವನ ಕೈಲಾದ ಪ್ರಯತ್ನ ಮಾಡುತ್ತಿದ್ದಾನಂತೆ. ನನ್ನ ಕಾರಿನ ಕೆಲಸಕ್ಕೆ ಅವನು ಕಡಿಮೆ ಬೆಲೆಗೆ ಒಪ್ಪಿದ್ದೂ ಇದಕ್ಕೇ, ಅವನು ಇದರಿಂದ ಅವನ ಸ್ವಂತಕ್ಕಾಗಿ ಏನೂ ಹಣ ಮಾಡಿಕೊಳ್ಳುತ್ತಿಲ್ಲ, ಎಲ್ಲಾ ರಿಪೇರಿ ಮಾಡುವ ಸಾಮಾನಿಗೆ, ನಮ್ಮ ಕೂಲಿಗಾಗಿ ಹಣ ತೆಗೆದುಕೊಳ್ಳುತ್ತಿದ್ದಾನೆ, ಎಂದು ಹೇಳಿದ.

ಇದೆಲ್ಲಾ ಕೇಳಿ ನನಗೆ ಮನಸ್ಸಿನಲ್ಲಿ ಗ್ರೆಗ್ ಮೇಲೆ (ಬೆಲೆ ಹೆಚ್ಚಿಸಿದ್ದರಿಂದ) ಆಗಿದ್ದ ಅಸಮಾಧಾನ ಕಡಮೆ ಆಗಿ, ಸ್ವಲ್ಪ ಗೌರವ ಹೆಚ್ಚಿತು ಎಂದೇ ಹೇಳಬೇಕು. ಕೆಲಸಗಾರ ಇನ್ನೂ ಮುಂದೆ ಮಾತು ಬೆಳೆಸುತ್ತಾ, 'ಇವತ್ತು ಬೆಳಗ್ಗೆ ಆತುರಾತುರವಾಗಿ ಗ್ರೆಗ್ ಎಲ್ಲಿಗೆ ಹೊರಟ, ಗೊತ್ತೇ? ಸ್ಯಾನ್ ಫ್ರಾನ್ಸಿಸ್ಕೋಗೆ. ಅಲ್ಲಿ ಅವನ ಸಿನಿಮಾದ ಶೂಟಿಂಗ್ ನಡೆಯುತ್ತಿದೆ,' ಎಂದ. ಅವನು ಅಂದುಕೊಂಡಂತೆ ತೋರಿದ ನನ್ನ ಆಶ್ಚರ್ಯಕ್ಕೆ ಉತ್ತರವಾಗಿ, 'ಹೌದು, ಅವನು ಸಿನಿಮಾಗಳಲ್ಲಿ ನಟಿಸುತ್ತಾನೆ. ಅಷ್ಟೇ ಅಲ್ಲ. ಅವನು ಒಳ್ಳೆಯ ಕಲಾಕಾರ ಕೂಡ. ಬಹಳ ವರ್ಣಚಿತ್ರಗಳನ್ನು ರಚಿಸಿ ಗ್ಯಾಲರಿಗಳಲ್ಲಿ ಪ್ರದರ್ಶನಗಳನ್ನಿಟ್ಟುಕೊಂಡಿದ್ದಾನೆ,' ಎಂದು ತಿಳಿಸಿದ. ಇದನ್ನು ಕೇಳಿ ನನಗೆ ಇನ್ನೂ ಆಶ್ಚರ್ಯವಾಯಿತು. ಮೊದಲಿನಿಂದಲೂ, 'ಕೆಲಸಕ್ಕೆ ಬಾರದ ಕೆಲಸಗಳ ಮೇಲೆ, ಅವುಗಳಲ್ಲಿ ತೊಡಗಿಸಿಕೊಳ್ಳುವವರ ಮೇಲೆ, ನನಗೆ ಆಸಕ್ತಿ, ಮರ್ಯಾದೆ ಇದೆ. ಗ್ರೆಗ್ ಇಂತಹವನು, ಇಂತಹ ಕೆಲಸ ಮಾಡುವವನು ಎಂದು ತಿಳಿದ ನಂತರ ನನಗೆ ಸ್ವಾಭಾವಿಕವಾಗಿಯೇ ಅವನ ಮೇಲೆ ಮರ್ಯಾದೆ ಇನ್ನೂ ಹೆಚ್ಚಿತು.

ಬ್ಯಾಂಕಿನಿಂದ ಹಣ ತಂದು ಅವನಿಗೆ ಕೊಟ್ಟು ನಮ್ಮ ವ್ಯವಹಾರ ಮುಗಿಸಿದ ನಂತರ ಅವನನ್ನೇ ನನಗೆ ಹೊಸದಾಗಿ ತಿಳಿದ ಅವನ ಹವ್ಯಾಸಗಳ ಬಗ್ಗೆ ಕೇಳಿದೆ. ಅವುಗಳ ಬಗ್ಗೆ ಒಂದೆರಡು ಮಾತು ಹೇಳಿದ. ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಇಂಡಿಪೆಂಡೆಂಟ್ ಸಿನಿಮಾಗಳಲ್ಲಿ, ಅಂದರೆ, ದೊಡ್ಡ ಸ್ಟುಡಿಯೋಗಳ ಸಂಬಂಧವಿಲ್ಲದೆ ಶೂಟ್ ಮಾಡುವ ಸಿನಿಮಾಗಳಲ್ಲಿ, ನಟಿಸುತ್ತೇನೆ. ನನ್ನ ಮನಸ್ತೃಪ್ತಿಗಾಗಿ ವರ್ಣಚಿತ್ರಗಳನ್ನು ಬಿಡಿಸುವುದೂ ಉಂಟು. ನಿನಗೆ ಆಸಕ್ತಿ ಇದ್ದರೆ ನನ್ನ ವೆಬ್‌ಸೈಟುಗಳು ಎರಡಿವೆ, ಅವನ್ನು ನೋಡು ಎಂದು ಹೇಳಿದ. ಅವನು ಹೇಳಿದ ವೆಬ್‌ಸೈಟುಗಳ ಯೂಆರೆಲ್ ಬರೆದುಕೊಂಡು ಮನೆಗೆ ಬಂದು ನೋಡಿದೆ. ಅದರಿಂದ ಅವನ ಚರಿತ್ರೆ ಇನ್ನಷ್ಟು ತಿಳಿಯಿತು.

ಗ್ರೆಗ್‌ನ ಪೂರ್ತಿ ಹೆಸರು ಗ್ರೆಗರಿ ಸ್ಕಾಟ್ ಬೆಡ್‌ಫರ್ಡ್. ಆರು ಅಡಿ ನಾಲ್ಕು ಇಂಚೆತ್ತರದ ಆಜಾನುಬಾಹು. ದಟ್ಟವಾದ ಭುಜದವರೆಗಿರುವ ಕಂದುಬಣ್ಣದ ಕೂದಲು.

ನಸುಕಂದು ಬಣ್ಣದ ಕಣ್ಣುಗಳು. ವ್ಯಾಯಾಮ ಮಾಡಿ ಪಳಗಿದ ಮೈಕಟ್ಟು. ಸುಮಾರು 40–50 ವರ್ಷ ವಯಸ್ಸು. ಅಂದರೆ ಅಮೆರಿಕದ ಅರವತ್ತರ ದಶಕದ 'ಹೂ–ಕೂಸು'ಗಳ (ಅಂದರೆ ಇಂಗ್ಲೀಷಿನಲ್ಲಿ ಫ್ಲವರ್ ಚಿಲ್ಡ್ರನ್) ತಲೆಮಾರಿಗಿಂತ ಸ್ವಲ್ಪ ಮುಂದಿನ ಕಾಲದಲ್ಲಿ ಪ್ರಾಯಕ್ಕೆ ಬಂದಾತ. ಅಂದರೆ 'ಅವ್ಯವಹಾರಿಕ' ಎಂದು ಹೇಳಬಹುದಾದ ಅವರ ಪ್ರಭಾವ ಇದ್ದೂ, ಸ್ವಲ್ಪ ಬೇರೆಯೇ ರೀತಿಯ, ವ್ಯವಹಾರಕುಶಲತೆಯನ್ನು ಒಳಗೊಂಡಿರುವ ಸ್ಟೀರಿಯೋಟೈಪಿಗೆ ಸೇರಿದವನಾಗುತ್ತಾನೆ. ಅವನು ಕಲಾಕಾರರ ಸಂಸಾರದಲ್ಲಿ ಹುಟ್ಟಿ ಬೆಳೆದವನಂತೆ. ಅವನ ತಂದೆ 30 ವರ್ಷ ಪಿಂಗಾಣಿ ಮತ್ತು ಜಲವರ್ಣಚಿತ್ರ ರಚಿಸುವ ಪಾಠ ಹೇಳಿಕೊಡುತ್ತಿದ್ದರಂತೆ.

ಅವನಿಗೆ 17 ವರ್ಷ ಆಗಿದ್ದಾಗ ಒಂದು ಹಳೆಯ, ಯಾವುದೋ ಅಪಘಾತದಲ್ಲಿ ಜಖಂ ಆದ, ಫೋಕ್ಸ್‌ವ್ಯಾಗನ್ ಬಸ್ ಕೊಂಡು ಅದನ್ನು ರಿಪೇರಿ ಮಾಡಿ, ನೋಡಲು ಅಂದವಾಗಿ ಕಾಣುವಂತೆ ಮಾಡುವುದರಿಂದ ಅವನ ಕಲಾಜೀವನ ಆರಂಭವಾಯಿತು. ಈ ರೀತಿಯ ರಿಪೇರಿ ಕೆಲಸವನ್ನು ಅವನು ಕಾರುಗಳನ್ನು ಮತ್ತೆ ಓಡಿಸಲು ಆಗುವಂತೆ ಮಾಡುವ ಪ್ರಯೋಜನಕಾರಿ ಕೆಲಸ ಮಾತ್ರ ಅಲ್ಲದೆ, ಅವನ್ನು ನೋಡಲು ಚೆನ್ನಾಗಿರುವಂತೆ ಮಾಡುವ 'ಕಸದಿಂದ ಕಲೆ'ಯ ಸಾಧನೆಯಾಗಿ ನೋಡುತ್ತಾನೆ. ಅವನ ದೃಷ್ಟಿಯಲ್ಲಿ ಈ ಕೆಲಸ ಒಂದು ರೀತಿಯ ಶಿಲ್ಪಕಲೆ.

ಇದಲ್ಲದೆ ಅವನೊಬ್ಬ ಚಿತ್ರಕಾರ ಕೂಡ. ಅವನ ಚಿತ್ರಣ ಶೈಲಿ ಅಬ್‌ಸ್ಟ್ರಾಕ್ಟ್ ಕೊಲಾಜ್ ಎನ್ನಬಹುದು. ಅಂದರೆ ನೈಜವಾಗಿ ಚಿತ್ರ ಬಿಡಿಸಬೇಕಾದ ಮಿತಿಯಿಂದ ಬಿಡುಗಡೆ ಪಡೆದು, ಸಾಮಾನ್ಯವಾಗಿ ಜನ ಚಿತ್ರಗಳಲ್ಲಿ ಬಳಸದೆ ಇರುವ, ರಸ್ತೆಯ ಟಾರು, ಮರಳು, ದಾರ ಇಂತಹ ಪದಾರ್ಥಗಳನ್ನು ಅಂಟಿಸಿ, ಬಣ್ಣ ಬಳಿಯುವುದು ಇವನ ವೈಶಿಷ್ಟ್ಯ. ಅವನು ಚೀನಾ, ಜಪಾನು ಕಡೆಯ ಬರವಣಿಗೆಯ ಅಕ್ಷರಗಳನ್ನು, ಝೆನ್ ತತ್ವಜ್ಞಾನಿಯ ಮುಖವನ್ನು, ಪುರಾತನ ಗವಿವಾಸಿಗಳನ್ನು ನೆನಪಿಸುವ ಚಿಹ್ನೆಗಳನ್ನು, ತನ್ನ ಚಿತ್ರಗಳಲ್ಲಿ ಬಳಸುತ್ತಾನೆ (ಇದನ್ನು ಓದಿ, ಕ್ಯಾಲಿಫೋರ್ನಿಯದವನು, ಇಷ್ಟೂ ಬೇಡವೇ, ಎಂದು ಅಂದುಕೊಂಡೆ!). ಅವನ ದೃಷ್ಟಿಯಲ್ಲಿ, ಅವನು ಚಿತ್ರ ಬಿಡಿಸುವ ಪ್ರಕ್ರಿಯೆಯೇ ಅವನಿಗೆ ಬಹಳ ಮುಖ್ಯವಾದದ್ದು, ನಮ್ಮ ಕುವೆಂಪು ಹೇಳಿರುವ, 'ಯಾತ್ರೆಯೇ ತೀರ್ಥಕಿಂ ಶ್ರೇಷ್ಠವೆಂದು,' ಎಂಬ ಮಾತಿಗೆ ಅನುಗುಣವಾಗಿ. ಮುಗಿಸಿದ ಚಿತ್ರ, ಅವನು ವೀಕ್ಷಕರ ಜೊತೆ ಹಂಚಿಕೊಳ್ಳುವ ಕತೆ.

ಈ ಶಿಲ್ಪ, ಚಿತ್ರಕಲೆಯ ಕೆಲಸ ಅಲ್ಲದೆ ಗ್ರೆಗ್ ಇಲ್ಲಿನ ಕ್ಲಬ್ಬುಗಳಲ್ಲಿ ಸ್ಟ್ಯಾಂಡ್ ಅಪ್ ಕಾಮಿಡಿ, ಅಂದರೆ ಪ್ರೇಕ್ಷಕರ ಎದುರು ನಿಂತು ಅವರಿಗೆ ಜೋಕುಗಳನ್ನು ಹೇಳಿ, ಅವರನ್ನು ಖುಷಿಪಡಿಸುವ ಕೆಲಸ ಮಾಡಿದ್ದಾನೆ. ನಾಟಕಗಳಲ್ಲಿ ನಟಿಸಿದ್ದಾನೆ. ಕೆಲವು ಪ್ರಸಿದ್ಧ ಸಿನಿಮಾಗಳಲ್ಲಿ ಎಕ್ಸ್‌ಟ್ರಾ ಆಗಿ ಕೆಲಸ ಮಾಡಿದ್ದಾನೆ. ಸಿನಿಮಾಗಳಲ್ಲಿ ಹಲವಾರು ಪಾತ್ರಗಳಿಗೆ ಹಿನ್ನೆಲೆ ಧ್ವನಿ ಕೊಟ್ಟಿದ್ದಾನೆ. ಈ ಊರಿನ ಟೆಲಿವಿಷನ್ ಸ್ಟೇಶನ್ ಒಂದರಲ್ಲಿ ಹವಾಮಾನದ

ವರದಿ ಒಪ್ಪಿಸುವ ವರದಿಗಾರನಾಗಿಯೂ, ಕೆಲವು ಟೆಲಿವಿಷನ್ ಅಂಕಗಳಲ್ಲಿ ನಟನಾಗಿಯೂ ಕೆಲಸ ಮಾಡಿದ್ದಾನೆ. ಇದೆಲ್ಲಾ ನೋಡಿ, 'ಎಂಥಾ ಹುತ್ತ! ಎಂಥಾ ಹಾವು!' ಎಂದು ಅಚ್ಚರಿಗೊಂಡೆ. ನೀವೂ ಅವನ ಚಿತ್ರಗಳು, ಅವನ ಕತೆ ಇನ್ನಷ್ಟು ನೋಡಬೇಕು ಅನ್ನಿಸಿದರೆ ಈ ಯೂಆರೆಲ್ಲುಗಳನ್ನು ನಿಮ್ಮ ಬ್ರೌಸರಿನಲ್ಲಿ ಹಾಕಿಕೊಂಡು ನನ್ನ ಬಾಡಿಶಾಪು ಮಾಲೀಕನ ಇತರ ಅನಿರೀಕ್ಷಿತ ಕೌಶಲ್ಯಗಳ ಕುರುಹುಗಳನ್ನು ನೋಡಬಹುದು – www.gregoryscottbedford.com ಮತ್ತು www.gregoryscottstudio.com. ನೀವು ನಮ್ಮ ಊರಿನಲ್ಲೇ ಇರುವವರಾದರೆ ನಿಮ್ಮ ಮುಂದಿನ ಫ್ಲೆಂಡರ್ ಬೆಂಡರ್ ರಿಪೇರಿಗೆ ಅವನ ಹತ್ತಿರ ಹೋಗಿ ಅವನ ನೇರ ಪರಿಚಯ ಮಾಡಿಕೊಳ್ಳಬಹುದು.



ವಿಶ್ವ ಕನ್ನಡ ಸಮ್ಮೇಳನ ಏರ್ಪಡಿಸಿ ನೋಡು!

– ಹೊನ್ನವಳ್ಳಿ ನಾಡಿಗ ರಾಮಸ್ವಾಮಿ

‘ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು’ ಎಂಬ ಗಾದೆಯಂತೆ, ಪ್ರತಿಯೊಂದು ವಿಶೇಷ ಕಾರ್ಯಕ್ರಮವನ್ನು ನಿರ್ವಹಿಸುವ ಜವಾಬ್ದಾರಿ ನಮ್ಮ ಹೆಗಲ ಮೇಲೆ ಬಂದಾಗ ಮೊದಲು ಮೂಡುವುದು ಅಜ್ಞಾತವಾದ ದಾರಿಯ ಪರಿವಿಲ್ಲದ ಭಯ. ಅಂತೆಯೆ ನಮಗೆ ಹಲವಾರು ತಿಂಗಳ ಹಿಂದೆ ದೂರವಾಣಿಯ ಕರೆ ಬಂದು ‘ನಿಮ್ಮೂರಿನಲ್ಲಿ ಈ ಬಾರಿಯ ಕನ್ನಡ ಸಮ್ಮೇಳನವನ್ನು ಏರ್ಪಡಿಸಲು ಸಾಧ್ಯವೇ?’ ಎಂದು ಹಿರಿಯರೊಬ್ಬರು ಕೇಳಿದಾಗ, ನಮಗೆ ಸಂತಸ ಮೂಡುವುದು ಸಹಜ. ಆದರೆ ಅದನ್ನು ನಿಧಾನವಾಗಿ ಆಲೋಚಿಸಿ, ಚಿಂತಿಸಿದಾಗ ಅರಿವಾಗುವುದು, ಇದರ ಹಿಂದೆ ಹುದುಗಿರುವ ಕ್ಲಿಷ್ಟವಾದ ಸಮಸ್ಯೆಗಳು. ಇದಕ್ಕಾಗಿ ಸಂಯೋಜಿಸಿದ ಸಮಿತಿ ವಿವರವಾಗಿ ಪರಿಶೀಲಿಸಿ, ಜನರ ಬೆಂಬಲ ಮತ್ತು ಸಹಕಾರದ ಆಶ್ವಾಸನೆ ಪಡೆಯುವುದು ಅತ್ಯಗತ್ಯ.

ಸಮಿತಿಯಲ್ಲಿ ಯಾರಿರಬೇಕು ಎಂಬುದು ಅತಿ ಮುಖ್ಯವಾದ ಸಂಗತಿ. ನಮ್ಮ ಹಿತೈಷಿಗಳು ಮಾತ್ರವಿದ್ದರೆ ಸಾಲದು, ನಮ್ಮ ಧ್ಯೇಯಗಳನ್ನು ಸಂಪೂರ್ಣವಾಗಿ ಅಂಗೀಕರಿಸದ ವ್ಯಕ್ತಿಗಳೂ ಇರುವುದು ಅವಶ್ಯಕವೆಂದು ಕೆಲವು ಸಮಿತಿಯ ಕಲಾಪಗಳನ್ನು ನಡೆಸಿದ ನಂತರ ಮನವರಿಕೆಯಾಯ್ತು. ಎಲ್ಲರಿಗೂ ವಿಶೇಷ ಸಂದರ್ಭದಲ್ಲಿ ತಮ್ಮ ಕೈವಾಡ ಇರಬೇಕೆಂಬ ಆಸೆ ಬರುವುದು ಸಹಜ. ಆದರೆ ಅವರ ಕೈಲಿ ಮಹತ್ತರವಾದ ಜವಾಬ್ದಾರಿಯನ್ನು ನಿರ್ವಹಿಸಲು ವೇಳೆ ಇಲ್ಲದಿರಬಹುದು, ಗಂಡಾಂತರಗಳು ತಲೆದೋರಿದಾಗ ಅದರಲ್ಲಿ ಭಾಗಿಯಾಗುವ ಮನೋಭಾವನೆ ಮಾಯವಾಗಬಹುದು, ಭಾಗಿಯಾದರೂ ಅದರ ನಿರ್ವಹಣೆಯ ಅರಿವು ಇಲ್ಲದಿರಬಹುದು. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಪುಟ್ಟದಾದ ಸಮಿತಿ ರಚಿಸುವುದು ಸೂಕ್ತ. ಗುರಿ, ಜವಾಬ್ದಾರಿಯ ವಿವರಣೆ, ಹಣ ವ್ಯವಹಾರದ ವಿಶ್ಲೇಷಣೆ ಇತ್ಯಾದಿ ಕಾನೂನಿನ ಸಂಗತಿಯ ಕಡತವನ್ನು ತಯಾರಿಸಿ ಎಲ್ಲರ ಅನುಮೋದನೆಯನ್ನು ಪಡೆಯುವುದು ತಲೆ ತಿನ್ನುವ ಸಂಗತಿ. ಇಂತಹ ಕಡತ ಆರಂಭದಲ್ಲಿ ಉಪಯೋಗಿಸುವುದು ಸಹಜ. ಆದರೆ ಅಂತ್ಯದಲ್ಲಿ ಇದರ ಅರ್ಥ–ಉಪಯೋಗ ಅತಿ ಕಡಿಮೆ. ಅದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ, ಸಿದ್ಧತೆಗಳು ಭರದಿಂದ ಸರಿದಂತೆ, ಕೊರತೆಗಳು, ಭಿನ್ನಭಾವಗಳು ಮತ್ತು ಸಾಧ್ಯತೆ–ಅಸಾಧ್ಯತೆಯ ನೆರಳಿನಿಂದ ಪ್ರಾರಂಭದಲ್ಲಿ ತೋರಿದ ಕಲಾಪಗಳು ಅನಿವಾರ್ಯವಾಗಿ ಪ್ರಮುಖ ಪಾತ್ರ ವಹಿಸುವುದಿಲ್ಲ. ಇದರ

ಅರಿವಿಲ್ಲದ ಜನರ ನಿಂದನೆಯನ್ನು ಕೇಳುವುದಕ್ಕೆ ಸಿದ್ಧವಾಗಿರಬೇಕು. ಸಂಯಮದಿಂದ ನಿಂದನೆಗಳನ್ನು, ಸಲಹೆಗಳನ್ನು ಆಲಿಸುವುದು ಅಗತ್ಯ. ತಕ್ಷಣ ಪ್ರತಿಕ್ರಿಯೆ ನೀಡುವುದು ಅನಗತ್ಯ ಮತ್ತು ಅನುಚಿತ. ತಾಳ್ಮೆ, ಸಹನಾಶಕ್ತಿ ಇಲ್ಲದಿದ್ದರೆ ಇಂತಹ ಮಹತ್ತರ ಕಾರ್ಯಕ್ಕೆ ಕೈಹಾಕುವುದು ಖಂಡಿತ ಒಳಿತಲ್ಲ. ಪ್ರತಿಭೆಯಿರುವ ಸ್ವಯಂಸೇವಕರಿಗೆ ಹೆಚ್ಚಿನ ಜವಾಬ್ದಾರಿ ನೀಡುವುದು, ಅವರ ಸಲಹೆಯನ್ನು ನಮ್ರತೆಯಿಂದ ಪ್ರೋತ್ಸಾಹಿಸುವುದು ಬಹು ಮುಖ್ಯ, ಅವರ ಕಾರ್ಯನಿರ್ವಹಣೆಯಲ್ಲಿ ಅಡ್ಡಿಬರುವುದು ಸರಿ ಅಲ್ಲ.

ಜೊತೆಯಲ್ಲಿ ಸಹಕರಿಸುವ ಜನರ ಗೌರವ ಸಂಪಾದಿಸುವುದು, ನಂಬಿಕೆಯನ್ನು ಬೆಳೆಸುವುದು ಮತ್ತು ವಿಶ್ವಾಸವನ್ನು ಬಯಸುವುದು ಕಾರ್ಯರೂಪಕ್ಕೆ ನಾಂದಿಯಾಗುತ್ತದೆ. ಗೌರವ, ಸನ್ಮಾನ ಮತ್ತು ಬಿರುದಿನ ಆಸೆ ಕಾರ್ಯಕರ್ತರಲ್ಲಿ ಮತ್ತು ಮುಖಂಡರಲ್ಲಿ ಮೂಡದಿರಲು ಅತಿ ಎಚ್ಚರಿಕೆವಹಿಸಿದರೆ ದಾರಿ ಸುಗಮವಾಗುತ್ತದೆ. ಹೆದ್ದಾರಿಯನ್ನು ಸಮೀಕ್ಷಿಸಿ, ವಿವರವಾಗಿ, ಬಹಿರಂಗವಾಗಿ ಉಲ್ಲೇಖಿಸಿ ಸಣ್ಣಪುಟ್ಟ ಬದಲಾವಣೆಗೆ ಅವಕಾಶ ಕಲ್ಪಿಸಿದರೆ ಸ್ವಯಂಸೇವಕರು ಆಚರಣೆಗೆ ತರಲು ಯತ್ನಿಸುತ್ತಾರೆ. ಪರದೆ ಹಿಂದೆ ದುಡಿಯುವ ಮನೋಭಾವನೆ ಮೂಡಿದರೆ ತಮ್ಮ ಹೆಸರು ಮುಖ್ಯವಲ್ಲ, ಕಾರ್ಯ ಯಶಸ್ಸು ಮುಖ್ಯ ಎಂಬ ಧೋರಣೆ ತಾನಾಗಿಯೆ ಬರುವುದು ಸಹಜ., ಸ್ಪರ್ಧೆ–ಹೋರಾಟದ ವಾತಾವರಣದಿಂದ ಒಗ್ಗಟ್ಟು ಸೌಹಾರ್ದತೆ, ಕೈಯಲ್ಲಿರುವ ಜವಾಬ್ದಾರಿಯನ್ನು ಪ್ರೇಕ್ಷಕರ ಮನ್ನಣೆಯನ್ನು ಹೆಚ್ಚಿಸುವ ಕಡೆ ಹೆಚ್ಚು ಗಮನ ನೀಡಿದರೆ ಎಲ್ಲವೂ ಸುಗಮವಾಗಿ ಜರುಗುತ್ತದೆ.

ಸಮ್ಮೇಳನ ನಡೆಯುವ ತಾಣದ ವಾತಾವರಣ ಹೇಗಿರಬೇಕು? ಸ್ವಚ್ಛವಾದ, ಸುಂದರವಾದ ಸ್ಥಳ, ಸಂಸ್ಕೃತಿ, ಕಲೆ, ಸಾಹಿತ್ಯಗಳ ಪ್ರತಿಬಿಂಬವಾಗಿ ಅಂದವಾಗಿ, ಗಂಭೀರವಾಗಿ ಎದ್ದು ಕಾಣುವ ಅಲಂಕಾರ ಪ್ರೇಕ್ಷಕರನ್ನು ಸೆಳೆಯುವಂತಿರಬೇಕು. ರಂಗು ರಂಗಿನ ಬಣ್ಣಗಳು, ಕಣ್ಣಿಗೆ ಹೊಡೆಯುವ ದೃಶ್ಯಗಳ ಬದಲಾಗಿ ಶಾಂತಿಯುತ ವಾತಾವರಣ, ಆಭರಣದಂತೆ ರಾರಾಜಿಸಬೇಕು. ಹೋಟೆಲ್‌ಗಳು ಸಮ್ಮೇಳನ ನಡೆಯುವ ಜಾಗದಲ್ಲೇ ಇರುವುದು ಅವಶ್ಯಕ. ಆಗಮಿಸಿರುವ ಜನರನ್ನು ಬೇರೆ ಹೋಟೆಲ್‌ಗಳಿಂದ ಸಾಗಿಸಲು ಎಂತಹ ಏರ್ಪಾಡುಗಳನ್ನು ಮಾಡಿದ್ದರೂ ಅದು ಅನೇಕ ಕಾರಣಗಳಿಂದ ಗೊಂದಲದ ವಾತಾವರಣವನ್ನು ಸೃಷ್ಟಿಸುತ್ತದೆ. ಅತಿ ಮುಖ್ಯವಾದ ಅನುಕೂಲವೆಂದರೆ, ಅಡುಗೆಮನೆ–ಊಟದ ಏರ್ಪಾಡು ಸಮ್ಮೇಳನದ ಜಾಗದಲ್ಲೆ ಇರಬೇಕು. ಇದರಿಂದ ಯಾವಾಗ ಬೇಕಾದರು ಊಟಮಾಡಲು ಜನರು ಹೋಗಬಹುದು. ನಾವು ಸಮ್ಮೇಳನದ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಮುಂಚೆ ಸಮ್ಮೇಳನ ನಡೆಸಬಹುದಾದ ಸುಮಾರು 6–7 ಸ್ಥಳಗಳನ್ನು ನೋಡಿ ಅದರಲ್ಲಿ ಇರುವ ಸಾಧಕ–ಭಾಧಕಗಳನ್ನು ವಿಮರ್ಶಿಸಿ, ಒಂದೇ ಕಟ್ಟಡದಲ್ಲಿ ಊಟ, ಮನರಂಜನೆ, ಆಟಗಳು, ತಂಗಲು ವಸತಿ ಸೌಕರ್ಯವಿರುವ ಸ್ಥಳವನ್ನು ನಿಗದಿಮಾಡಿದೆವು. ಇಂತಹ ಜಾಗ ಸಿಗುವವರೆವಿಗೂ ಸಮ್ಮೇಳನ

ನಿರ್ವಹಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು ಸೂಕ್ತವಲ್ಲ! ಊಟ-ತಿಂಡಿ, ಸದಾ ಒದಗಿಸುವ ಕಾಫಿ ಎಲ್ಲಾ ಹಂಚಿಕೆಗಳ ಯಶಸ್ವಿಗೆ ಅತಿ ಮುಖ್ಯ. ಅದರಲ್ಲಿ ಸ್ವಲ್ಪ ಕೊರತೆಯಾದರೆ, ನ್ಯೂನತೆಗಳು ತಲೆದೋರಿದರೆ ಅದರ ಪರಿಣಾಮ ವಿಪರೀತ. ಹಣಕಾಸಿನ ಅಂದಾಜು ಪಟ್ಟಿಯಲ್ಲಿ ಇದಕ್ಕೆ ಆದ್ಯತೆ ನೀಡಲೇಬೇಕು. ಇದರ ವ್ಯವಸ್ಥೆ ಸ್ವಯಂಸೇವಕರಿಗಿಂತ ನಿಜವಾದ ಕಸುಬುದಾರರು, ಕಾರ್ಯಕರ್ತರ ಮುನ್ನಡೆಯಲ್ಲಿ ನಡೆಸಬೇಕು. ಸ್ವಯಂಸೇವಕರ ನಿಲುವು, ದಕ್ಷತೆ ಇದ್ದರೂ ಸದಾ ವಿವರಗಳಿಗೆ ಗಮನ ಕೊಡುವುದು ಅಸಾಧ್ಯ.

ಇನ್ನು ಕಲಾವಿದರ ಬಗ್ಗೆ: ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಸರಳ ಸಂಗತಿ ಅಲ್ಲ. ಭಾರತದಿಂದ ಬಂದ ಕಲಾವಿದರನ್ನು ಸಜ್ಜುಗೊಳಿಸಬೇಕಾದ ಕೆಲಸ ಬಹಳ ಮುಜುಗರದ ವಿಚಾರ. ಸಕಾಲಕ್ಕೆ ಅವರ ಆಗಮನದ ವಿವರ, ಸಂಖ್ಯೆ ಇತ್ಯಾದಿ ವಿಷಯಗಳು ದೊರೆಯುವುದು ಕಷ್ಟ. ಬಂದ ನಂತರ ಅವರ ಆಗಮನದ ವೇಳೆ, ಉಪಚಾರ, ವಸತಿ ಅತಿ ಶ್ರಮ ನೀಡುವ ಸಂಗತಿ. ಕಲಾವಿದರನ್ನು ಎಚ್ಚರಿಕೆಯಿಂದ, ಸಮಾಧಾನದಿಂದ ನೋಡಿಕೊಳ್ಳುವುದು ಅತಿ ಮುಖ್ಯ. ಕಾರ್ಯಕ್ರಮದ ಮುನ್ನ ಪರದೆ ಎಳೆಯುವುದು, ಗಂಟೆ ಬಾರಿಸಿ ವೇಳೆಯ ಗಮನ ಸೆಳೆಯುವುದು ಅನಗತ್ಯವೆಂದು ನಮ್ಮ ಭಾವನೆಯಾದರೂ, ಕಳಂಕ ತರುವುದು ಸತ್ಯ. ಸಂಭ್ರಮ ಮುಗಿದ ನಂತರವೂ ಅವರಿಗೆ ನಾವು ತೋರಿಸಬೇಕಾದ ಗೌರವ, ಕೊಡಬೇಕಾದ ಸನ್ಮಾನ, ತಂಗಲು ಸ್ಥಳ ಮತ್ತು ಅವರ ಪ್ರಯಾಣದ ಜವಾಬ್ದಾರಿಯನ್ನು ದಕ್ಷತೆಯಿಂದ, ಗೆಲುವಿನಿಂದ ಮಾಡಬೇಕು. ಕಾಟಾಚಾರಕ್ಕೆಂದು ಸಲ್ಲಿಸುವ ಮನೋಭಾವನೆ ತಲೆದೋರಲೇಬಾರದು. ಅವರೆಲ್ಲರು ಬಂದ ದಿನ ಅವರನ್ನು ಎಷ್ಟು ಹಸನ್ಮುಖರಾಗಿ ಆಹ್ವಾನಿಸಿದೆವೋ, ಅದೇ ತಾಳ್ಮೆ, ಶ್ರದ್ಧೆಯಿಂದ ಬೀಳ್ಕೊಳ್ಳುವುದು ಅಗತ್ಯ. ಸಮ್ಮೇಳನದ ನಂತರ ಉಪಚಾರ ಮಾಡುವ ಕೆಲಸ ಮತ್ತು ಖರ್ಚು ನಮಗೆ ಈ ಬಾರಿ ನಮ್ಮ ಉದ್ದೇಶಕ್ಕಿಂತ ಜಾಸ್ತಿಯಾಯ್ತು. ಸುಮಾರು 35 ಕಲಾವಿದರು, ಸಮ್ಮೇಳನ ಮುಗಿದನಂತರ 2–3 ದಿನಗಳು ನಮ್ಮೂರಿನಲ್ಲಿಯೇ ಉಳಿಯಬೇಕಾಯ್ತು. ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವ ವಿಚಾರವಾಗಿ ನಾವ್ಯಾರು ಹೆಚ್ಚು ಗಮನ ನೀಡಿರಲಿಲ್ಲ. ಸಮ್ಮೇಳನ ನಡೆದ ಹೋಟೆಲ್‌ನಲ್ಲಿ ತಂಗಿಸಲು ಖರ್ಚು ಜಾಸ್ತಿ ಮತ್ತು ಊಟಕ್ಕೆ ವ್ಯವಸ್ಥೆ ಮಾಡುವುದು ಅಸಾಧ್ಯವಾದುದರಿಂದ, ಸ್ವಲ್ಪ ಕಡಿಮೆ ಬೆಲೆಗೆ ದೊರೆಯುವ ಹೋಟೆಲ್‌ನಲ್ಲಿ ತಂಗಲು ಏರ್ಪಾಡು ಮಾಡಿದೆವು. ಅಷ್ಟು ಜನರನ್ನು ಹೊಟೆಲ್ ಬದಲಾಯಿಸುವುದು, ಊಟ-ತಿಂಡಿಗೆ ಕರೆದುಕೊಂಡು ಹೋಗುವುದು, ಅವರನ್ನು ಅಂಗಡಿಗಳಿಗೆ ಕರೆದೊಯ್ಯುವುದು, ಸುಲಭದ ಕೆಲಸವಲ್ಲ. ಅದೂ ಸಾರ್ವಜನಿಕ ಸಾರಿಗೆಯ ಅನುಕೂಲವಿಲ್ಲದ ನಮ್ಮೂರಲ್ಲಿ ಸಾಹಸದ ಕೆಲಸವೇ ಆಯ್ತು. ಪ್ರತಿಯೊಬ್ಬ ಕಲಾವಿದರನ್ನು ವಿವಿಧ ದಿನ-ಅಲೌಕಿಕ ವೇಳೆಯಲ್ಲಿ ವಿಮಾನ ನಿಲ್ದಾಣಕ್ಕೆ- ಬಸ್ ಹೊರಡುವ ಸ್ಥಳಕ್ಕೆ ಸಕಾಲದಲ್ಲಿ ಕರೆದುಕೊಂಡು ಹೋಗುವುದು ಒಂದು ಸರ್ಕಸ್ ಸಾಹಸವೇ ಆಯ್ತು. ಆದರು ನಮ್ಮ ಅತಿಥಿಗಳು ನಮಗೆ

ಹೊರೆಯೆಂಬ ಭಾವನೆ ಮೂಡದಂತೆ ನಡೆದುಕೊಂಡೆವು. ನಮ್ಮ ತೊಂದರೆಯನ್ನು ಬಯಲು ಮಾಡಲಿಲ್ಲ. ಈ ಒಂದು ಜವಾಬ್ದಾರಿಯೇ ನಮಗೆ ಸುಮಾರು 8000 ಡಾಲರ್ ಖರ್ಚಾಯಿತು, ಇದು ನಮ್ಮ ಬಜೆಟ್ಟಿನಲ್ಲಿ ಇರಲಿಲ್ಲ.

ಈ ಸಂದರ್ಭಕ್ಕೆ ಯಾವ ಗಣ್ಯ ವ್ಯಕ್ತಿಗಳು ಬರಬೇಕು, ಯಾರಿಗೆ ಹೆಚ್ಚು ಮನ್ನಣೆ ಕೊಡಬೇಕು ಎಂಬ ಅಂಶವನ್ನು ಕಾರ್ಯಕರ್ತರು ಅವಲೋಕಿಸಬೇಕು. ಸಾಹಿತ್ಯ, ಕಲೆ, ಭಾಷೆ ಮುಂತಾದ ಸಮ್ಮೇಳನದಲ್ಲಿ, ಅದರಲ್ಲಿ ಆಸಕ್ತಿಯಿರುವ, ತಜ್ಞರನ್ನು, ಪ್ರೇಕ್ಷಕರನ್ನು ಆಕರ್ಷಿಸುವ ಮೇಧಾವಿಗಳನ್ನ ಮಾತ್ರ ಅಹ್ವಾನಿಸಬೇಕು. ಅಂತಹ ಗಣ್ಯ ವ್ಯಕ್ತಿಗಳು ವೇದಿಕೆಯ ಮೇಲೆ ಉಪಸ್ಥಿತರಾಗಿರಬೇಕು. ಬೇರೆಯವರಿಗೆ ಸಾಧಕರ ಸ್ವಾರ್ಥಕ್ಕೆ ಬೆಂಬಲ ನೀಡುವ, ಸಂದರ್ಭಕ್ಕೆ, ಕೇವಲ ನಿಮಿತ್ತಕ್ಕೆ ಬಂದು ಕೈಕುಲುಕಲು ಮಾತ್ರ ಆಶಿಸುವ, ನಂತರ ಅವರ ನೆಂಟರಿಷ್ಟರನ್ನು ನೋಡಲು ಬರುವ, ಹೋಟೆಲಿನಲ್ಲಿ ಹೆಚ್ಚು ಕಾಲ ಕಳೆಯುವ ಜನರನ್ನು ದೂರವಿಟ್ಟರೆ ಒಳ್ಳೆಯದು. ಆಗ ನಾವು ಆಯೋಜಿಸಿದ ನಿಮಿತ್ತಕ್ಕೆ ಅರ್ಥವಿರುತ್ತದೆ. ನಮ್ಮ ಶ್ರಮ ಹೇಗೆ, ಯಾವ ರೀತಿಯಲ್ಲಿ ವ್ಯರ್ಥವಾಗಬಹುದು, ಎಂತಹ ಅಡ್ಡಿ ಆತಂಕಗಳು ಬರಬಹುದು, ಯಾವ ವ್ಯಕ್ತಿ(ಗಳು) ನಿಮ್ಮ ನಿಲುವನ್ನು ಬಲಹೀನಗೊಳಿಸಲು ಯತ್ನಿಸಬಹುದು ಎಂಬ ಆತ್ಮಾವಲೋಕನ ಅತ್ಯಗತ್ಯ. ನಿಮಗೆ ಆತ್ಮತೃಪ್ತಿ ದೊರಕುವುದಾದರೆ, ನಿರಂತರವಾದ ಬದ್ಧಸ್ಥಿತಿ, ದ್ವೇಷ-ಸ್ವಾಭಿಮಾನ ಸ್ವಲ್ಪವೂ ಇಲ್ಲದೆ, ಈ ನಿಲುವಿನಲ್ಲಿ ಮೋಹ ಇದ್ದರೆ ಇಂತಹ ಮಹತ್ತರವಾದ ಜವಾಬ್ದಾರಿಯನ್ನು ಅನುಮೋದಿಸುವುದು ಉಚಿತ. ಅದರ ಪ್ರಗತಿಗೆ, ಆ ಸಾಹಸಕ್ಕೆ ಯಶಸ್ಸು ದೊರಕಲು ಸಹಕರಿಸುವ ಯಾವ ಕೈಪಿಡಿಯೂ ಇಲ್ಲ. ಇದ್ದರೂ ಅದು ಆ ವ್ಯಕ್ತಿಯ ನಿಲುವು ಅಥವ ಹಣ ಸಂಪಾದಿಸುವ ಮಾರ್ಗವೊಂದಿರಬಹುದೆಂದು ಸಂಶಯದಿಂದ ಅವಲೋಕಿಸಬೇಕು.

ಸರ್ಕಾರದಿಂದ ಗಣ್ಯವ್ಯಕ್ತಿಗಳನ್ನು-ಕಲಾವಿದರನ್ನು ಕಳುಹಿಸುವುದು ಒಂದು ವಿಧದಲ್ಲಿ ಅನುಕೂಲ. ಅವರ ಖರ್ಚು-ವೆಚ್ಚದ ಜವಾಬ್ದಾರಿ ಅವರದ್ದು. ಆದರೆ, ಅತ್ಯುತ್ತಮ ಕಲಾವಿದರು ಬರುವುದು ಅಸಂಭವ. ಸರ್ಕಾರದ ನಿಯಮದಂತೆ ಕಲಾವಿದರನ್ನು ಆರಿಸುವುದರಿಂದ ನಮ್ಮ ಕೈವಾಡ ಮತ್ತು ನಾವು ಸೂಚಿಸುವ ವ್ಯಕ್ತಿಗಳು ಬರುವುದಿಲ್ಲ. ಈ ಬಾರಿ ಅಕ್ಕದವರು ವಿದೇಶದಿಂದ ಬರುವ ಜನರಿಗೆ ಯಾವ ಪ್ರಯಾಣ ವೆಚ್ಚವನ್ನು ನೀಡುವುದಿಲ್ಲ ಎಂಬ ನಿರ್ಧಾರವನ್ನು ಅತಿ ಮುಂಚೆಯೇ ಮಾಡಿದ್ದರಿಂದ, ಎಲ್ಲಾ ಕಲಾವಿದರ ಆಯ್ಕೆ-ಅವರ ಪ್ರಯಾಣ ವ್ಯವಸ್ಥೆ ಒಬ್ಬ ವ್ಯಕ್ತಿಗೆ ವಹಿಸಿತ್ತು. ಆದುದರಿಂದ ನಮ್ಮ ಕೆಲಸ ಹಗುರವಾಯ್ತು. ಹೀಗೆ, ಒಬ್ಬ ವ್ಯಕ್ತಿ ಅಥವ ಸಂಸ್ಥೆ ಇಂತಹ ಜವಾಬ್ದಾರಿಯನ್ನು ವಹಿಸಿಕೊಂಡರೆ ಅನುಕೂಲ. ಆದರೆ ಇಂತಹ ವ್ಯವಸ್ಥೆಯನ್ನು ಹಲವಾರು ತಿಂಗಳ ಮುಂಚೆ ಮಾಡುವುದು ಅನುಚಿತ. ಗಮದಲ್ಲಿರಲಿ, ಆ ವ್ಯಕ್ತಿ-ಸಂಸ್ಥೆ ನಿಮ್ಮ ಕಾರ್ಯಕ್ರಮದ ಪಟ್ಟಿಯನ್ನು ತಯಾರಿಸುತ್ತದೆ, ನಿಮ್ಮ ಅನಿಸಿಕೆಗಳು ಸಫಲವಾಗುವ

ಸಾಧ್ಯತೆಯಿರುವುದಿಲ್ಲ. ಇಲ್ಲವಾದರೆ, ನಮಗಾದಂತೆ ಕೊನೆಯವರೆವಿಗೂ ಯಾರು ಬರುತ್ತಾರೆಂಬ ಶಂಕೆ. ಆದರೆ ಅವರ ವೀಸಾಗಳನ್ನು ಒದಗಿಸುವುದು ಮಹತ್ತರವಾದ ಜವಾಬ್ದಾರಿ. ಇದಕ್ಕೆ ಕಾಲಾವಕಾಶ ಮತ್ತು ಖರ್ಚು ವಿಪರೀತ. ಮೊದಲು ಕಲಾವಿದರ ಪ್ರಯಾಣ ವೆಚ್ಚವನ್ನು ತಾವು ಒದಗಿಸಿಕೊಳ್ಳುತ್ತೇವೆಂದು ಆಶ್ವಾಸನೆ ನೀಡಿದವರು ನಂತರ ಅದು ನಮ್ಮ ಜವಾಬ್ದಾರಿಯೆಂದು ವಾಗ್ವಾದ ಮಾಡುತ್ತಾರೆ!

ಚಲನಚಿತ್ರದ ಕಲಾವಿದರು ನಮಗೆ ಆಶ್ವಾಸನೆ ಕೊಟ್ಟಿದ್ದರೂ ಕೊನೆಯ ಘಳಿಗೆಯಲ್ಲಿ ನಮಗೆ ಕೈಕೊಟ್ಟರು! ಜನರು ಮೊದಲು ಬಹಿರಂಗವಾಗಿ ವಾಗ್ದಾನ ಮಾಡುವುದೊಂದು ನಂತರ ಅದನ್ನು ಪಾಲಿಸಲು ನಿರಾಕರಿಸುವುದು ವಿರಳವಲ್ಲ. ಇದಕ್ಕೆ ಕಾರ್ಯಕರ್ತರು ಎಷ್ಟೇ ಎಚ್ಚರಿಕೆ ತೆಗೆದುಕೊಂಡರೂ ಮೋಸಹೋಗುವುದು ಸತ್ಯದ ಸಂಗತಿ. ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆಯಲ್ಲಿ ಕಲಾವಿದರನ್ನು ಸರಬರಾಜು ಮಾಡುವ ಯೋಜನೆಯೊಂದಿದೆ, ಇದು ಉತ್ತಮ ಕಲಾವಿದರನ್ನು ಆಹ್ವಾನಿಸಲು ಒಳ್ಳೆಯ ಹೆದ್ದಾರಿ. ಆ ಇಲಾಖೆಯಲ್ಲಿ ನೇಮಿಸಿರುವ ಕಲಾವಿದರನ್ನು ಗುರುತಿಸಿ ಆಮಂತ್ರಣ ನೀಡಿ, ಕೇಂದ್ರ ಸರ್ಕಾರಕ್ಕೆ ಮೊರೆ ಹೋದರೆ ಖರ್ಚು ವೆಚ್ಚದ, ವೀಸ ವಿಚಾರವಾಗಿ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಯಕ್ಷಗಾನದ ತಂಡವೊಂದು ಈ ಮೂಲಕ ನಮ್ಮ ಸಮ್ಮೇಳನಕ್ಕೆ ಬಂದಿದ್ದು ಬಹಳ ಮೆರುಗು ಕೊಟ್ಟಿತ್ತು.

ಸಮ್ಮೇಳನವನ್ನು ಏರ್ಪಡಿಸಲು ಅತಿ ಮುಖ್ಯವಾದದ್ದು ಹಣ. ನಿಮ್ಮ ಅಂದಾಜು ಪಟ್ಟಿಗಿಂತ ಹೆಚ್ಚು ಖರ್ಚಾಗುವುದರಲ್ಲಿ ಸಂಶಯವೇ ಇಲ್ಲ. ಪ್ರಾರಂಭದಲ್ಲಿ ಎಲ್ಲಾ ಸಮಿತಿಯವರು ಅವರವರ ಜವಾಬ್ದಾರಿಯನ್ನು ನಿರ್ವಹಿಸಲು ಕೇಳುವ ಹಣವನ್ನು ನೀವು ಮೊದಲೇ ಚಿಂತಿಸಿ, ಅನುಮೋದಿಸಬೇಕು. ಒಪ್ಪಂದ-ಕರಾರು ಪತ್ರಕ್ಕೆ ರುಜು ಹಾಕುವ ಮುನ್ನ ಇದಕ್ಕೆ ತಗಲುವ ಖರ್ಚು ಎಲ್ಲಿಂದ ಬರುತ್ತಿದೆ ಎಂಬುದನ್ನು ಮಂಥನ ಮಾಡಿ. ಎಲ್ಲಾ ಪಾವತಿ ಮಾಡುವ ಹಣ ಸಮ್ಮೇಳನ ಮುಗಿಯುವ ಮುನ್ನ ನಿಮ್ಮಲ್ಲಿದೆಯೇ? ಎಂದು ಖಚಿತಪಡಿಸಿಕೊಳ್ಳಬೇಕು. ಕೇವಲ ಆಸೆ ತೋರಿಸುವ ದಾನಿಗಳನ್ನು ನಂಬಬೇಡಿ. ಹಣ ನಿಮ್ಮ ಕೈಯಲ್ಲಿ ಬರುವವರೆವಿಗೂ ಅವರಿಗೆ ಆಶ್ವಾಸನೆ ನೀಡಿದ ಮಾತುಗಳಿಗೆ-ಸೌಲಭ್ಯ ಒದಗಿಸುವುದಕ್ಕೆ ಮುಂದಾಗಬೇಡಿ. ಎಚ್ಚರಿಕೆ! ಈಗ ನಾವು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆ. ಹಣಕಾಸಿನ ಕೊರತೆ-ಅದರ ಜವಾಬ್ದಾರಿಯ ಒತ್ತಡವಿದ್ದರೆ ಮೂಲತಃ ಆಮಂತ್ರಣವಿತ್ತ ಸಂಘಟನೆಕಾರರು ನಿಮ್ಮ ದೂರವಾಣಿಗೆ ಬೀಗ ಹಾಕುತ್ತಾರೆ. ನಾವು ಸಲ್ಲಿಸಬೇಕಾದ ಹಣ ನಮ್ಮಲ್ಲಿಲ್ಲವಾದರೆ, ಖರ್ಚುಮಾಡಿದವರು ನಮ್ಮ ಬೆನ್ನುಹತ್ತಿದ್ದಾರೆ.

ಸಮ್ಮೇಳನಗಳನ್ನು ಏರ್ಪಡಿಸುವುದು, ನಿರ್ವಹಿಸುವುದು ಮಿಗಿಲಾಗಿ ಅದನ್ನು ಅರ್ಥಪೂರ್ಣವಾಗಿ ಮುಗಿಸುವುದು ಮಹತ್ತರ ಜವಾಬ್ದಾರಿ. ಮೊದಲು ಜನರು ನೀಡುವ ಆಶ್ವಾಸನೆಗಳು, ಪ್ರೋತ್ಸಾಹಗಳು ಕೊನೆಯವರೆಗೆ ಇರಬೇಕೆಂದು ಬಯಸುವುದು

ಅಸಹಜ. ಕಾರ್ಯಾಚರಣೆ ಚೆನ್ನಾಗಿ ನಡೆದರೆ ಎಲ್ಲರೂ ಮಿತ್ರರಾಗಿರುತ್ತಾರೆ. ನಿಂದನೆಗಳು, ಕೊರತೆಗಳು ತಲೆದೋರಿದರೆ ಟೀಕಾಕಾರರು, ವಿಮರ್ಶಕರು ಎಲ್ಲೆಲ್ಲೂ ತಲೆಯೆತ್ತುತ್ತಾರೆ.

ನೀವು ಮಾಡುವುದು ಸ್ವಾರ್ಥಕ್ಕಲ್ಲ ಕೇವಲ ಯಶಸ್ಸಿಗೆ, ಆದರೆ ನೀವು ನಿಮಿತ್ತ ಮಾತ್ರ, ಉದಾತ್ತ ಸಮಾಜಸೇವೆ ಎಂಬ ಮನೋಭಾವನೆ ಹೃದಯದ ಅಂತರಾಳದಿಂದ ಬೇರೂರಿ ಬರಬೇಕು. ಪುರುಷಯತ್ನ ಅವಶ್ಯಕವಾದರೂ, ಕೊನೆಗೆ ದೈವನಿಯಾಮಕ ಮತ್ತು ವಿಧಿಯ ಕೈವಾಡ ಇರಬಹುದೆ ಎಂದು ಸಂಶಯ ಮೂಡಬಹುದು!



ಹೊಸ ನೆಲದಲ್ಲಿ ಹೊಸ ಸಸಿಗಳು

– ಎಚ್.ವೈ. ರಾಜಗೋಪಾಲ್

ನಾವು ಎಲ್ಲೇ ಇದ್ದರೂ ಮಕ್ಕಳನ್ನು ಚೆನ್ನಾಗಿ ಬೆಳೆಸುವುದು ನಮ್ಮ ಸಾಂಸಾರಿಕ ಜೀವನದ ಮುಖ್ಯ ಕರ್ತವ್ಯಗಳಲ್ಲಿ ಒಂದು. ವಲಸೆಗಾರರ ಜೀವನದಲ್ಲಿ, ಅದರಲ್ಲೂ ನನ್ನಂತೆ ಇಲ್ಲಿಗೆ ಹಲವಾರು ದಶಕಗಳ ಹಿಂದೆಯೇ ಬಂದವರ ಜೀವನದಲ್ಲಿ, ಅದು ಇನ್ನೂ ಹೆಚ್ಚು ಪ್ರಾಮುಖ್ಯ ಎನಿಸುತ್ತದೆ. 'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಎಂಬುದರ ಜೊತೆಗೆ 'ಮಕ್ಕಳನ್ನು ಬೆಳೆಸಿ ನೋಡು' ಎಂಬುದನ್ನೂ ಸೇರಿಸಬಹುದು! ಇದಕ್ಕೆ ಮುಖ್ಯ ಕಾರಣ ನಾವು ಸ್ವದೇಶದಲ್ಲೇ ಇದ್ದಿದ್ದರೆ ಅನ್ವಯಿಸದಂಥ ಕೆಲವು ಹೊಸ ಆಯಾಮಗಳು ಪ್ರಸ್ತುತ ಸಂದರ್ಭದಲ್ಲಿ ಸೇರುತ್ತವೆ ಎಂಬುದು. ಇದರಲ್ಲಿ ಅನನ್ಯತೆಯ (identity) ಪ್ರಶ್ನೆ ಮುಖ್ಯವಾದದ್ದು. ಇದಲ್ಲದೆ, ಮಕ್ಕಳು ಬೆಳೆದಂತೆಲ್ಲ ಅವರ ವಯಸ್ಸಿಗೆ ಅನುಗುಣವಾಗಿ ಎದುರಾಗುವ ಇತರ ಪ್ರಶ್ನೆಗಳು – ಹೈಸ್ಕೂಲು ಕಾಲೇಜಿನ ಓದು, ಸ್ವಾತಂತ್ರ್ಯ, ಲೈಂಗಿಕ ಪ್ರಬುದ್ಧತೆ, ಯುವಜನರು ಪರಸ್ಪರ ಪರಿಚಯ ಮಾಡಿಕೊಳ್ಳುವುದು, ಜೊತೆಯಾಗಿ ಓಡಾಡುವುದು (dating), ಮದುವೆ, ಮೊದಲಾದವು – ಹೆಚ್ಚು ಪ್ರಾಮುಖ್ಯ ಗಳಿಸುತ್ತವೆ. ಈ ಎಲ್ಲ ವಿಷಯಗಳೂ ಮುಖ್ಯವೇ ಆದರೂ ಇಲ್ಲಿ ನಾನು ಮಕ್ಕಳ ಬಾಲ್ಯದಿಂದ ಅವರು ಹೈಸ್ಕೂಲು ಮುಗಿಸಿ ಕಾಲೇಜು ಪ್ರವೇಶದ ಸಿದ್ಧತೆ ಮಾಡಿಕೊಳ್ಳುವವರೆಗಿನ ಘಟ್ಟವನ್ನು ಮಾತ್ರ ಕುರಿತು ಹೇಳಲಿದ್ದೇನೆ. ಕಾರಣ ಈ ಘಟ್ಟ ಅವರ–ನಮ್ಮ ಜೀವನದಲ್ಲಿ ಅತಿ ಮುಖ್ಯವಾದದ್ದು. ಭಾರತದ ಸನ್ನಿವೇಶದಲ್ಲಿ ಮಕ್ಕಳು ತಾವಾಗಿ ಬೆಳೆಯುತ್ತಾರೆ; ಆದರೆ ಇಲ್ಲಿ ಅವರನ್ನು ಬೆಳೆಸಬೇಕು. ತಂದೆತಾಯಿಯರ ಹೊಣೆ ಅಲ್ಲಿಗಿಂತ ಇಲ್ಲಿ ಹೆಚ್ಚು.

ವಲಸೆ ಬಂದವರಿಗೆಲ್ಲ ತಮ್ಮ ಅನನ್ಯತೆಯ ಪ್ರಶ್ನೆ ಮುಖ್ಯವಾಗುವುದು ನಿಜವಾದರೂ ಮಕ್ಕಳನ್ನು ಬೆಳೆಸುವ ವಿಚಾರದಲ್ಲಿ ಅದು ತೋರುವಷ್ಟು ತೀವ್ರವಾಗಿ ನಮ್ಮ ಸ್ವಂತ ವಿಚಾರದಲ್ಲಿ ತೋರುವುದಿಲ್ಲ. ಕಾರಣ ನನ್ನ ತಲೆಮಾರಿನ ಅನೇಕರು ಇಲ್ಲಿ ಬರುವ ಹೊತ್ತಿಗೆ ಸುಮಾರು 25 ದಾಟಿದವರು. ಭಾರತದಲ್ಲಿ ಒಳ್ಳೆಯ ವಿದ್ಯಾರ್ಜನೆ ಮಾಡಿ ಇಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ಬಂದವರು. ಹಾಗೆ ಬಂದು ಆಮೇಲೆ ಇಲ್ಲಿ ನಿಂತವರೇ ಹೆಚ್ಚು ಮಂದಿ (ನನ್ನ ಪರಿಸ್ಥಿತಿಯೂ ಅಂಥದೇ). ಕೆಲವರು ತಮ್ಮ ಅರ್ಹತೆಗೆ ತಕ್ಕ ಉದ್ಯೋಗ ಭಾರತದಲ್ಲಿ ದೊರೆಯದೆ (ಭಾರತದಲ್ಲಿ ನಿರುದ್ಯೋಗದ ಸಮಸ್ಯೆ ಎಂದಿಗೂ ಇರುವುದೇ)

ಇಲ್ಲಿ ಬಂದವರಾಗಿರಬಹುದು. ಆದರೆ ಇತರ ಹಲವು ದೇಶಗಳಿಂದ ಇಲ್ಲಿ ಬಂದ ಜನರಂತೆ ರಾಜಕೀಯ ವಿಪ್ಲವಗಳು, ಮತೀಯ ಕಿರುಕುಳ, ಕ್ಷಾಮ ಮುಂತಾದ ಬವಣೆಗಳಿಗೆ ಸಿಕ್ಕು ಓಡಿಬಂದವರಲ್ಲ. ಒಂದು ವೇಳೆ ಅಂಥವರು ಇದ್ದರೂ ಅವರ ಸಂಖ್ಯೆ ಬಹು ಕಡಿಮೆ. ಇದರಿಂದಾಗಿ ಇಲ್ಲಿ ನೆಲೆಸಿರುವ ಭಾರತೀಯರಿಗೆ ತಮ್ಮ ಹುಟ್ಟಿನ ದೇಶದ ಬಗ್ಗೆ ಯಾವ ತೀವ್ರ ಅವಿಶ್ವಾಸವೂ ಇಲ್ಲ. ಈಗಲೂ ಸಹ, ಭಾರತದ ಆಡಳಿತದಲ್ಲಿ ಕಾಣುವ ಅತೀವ ಭ್ರಷ್ಟಾಚಾರ, ನೈತಿಕ ಪತನ, ನಾಗರಿಕ ಜೀವನದ ಮೂಲಭೂತ ಅಗತ್ಯಗಳಾದ ನೀರು, ವಿದ್ಯುತ್ತು ಇವುಗಳ ತೀವ್ರ ಕೊರತೆ, ಮಲಿನವಾದ ಪರಿಸರ, ಮಾಯವಾಗುತ್ತಿರುವ ಪ್ರಕೃತಿ ಸಂಪತ್ತು – ಇವನ್ನೆಲ್ಲ ಕಂಡರೂ ಭಾರತದ ಬಗ್ಗೆ ಒಂದು ಬಗೆಯ ಪ್ರೀತಿಯನ್ನೇ ಉಳಿಸಿಕೊಂಡಿದ್ದಾರೆ. ಇಲ್ಲಿನ ಅನೇಕರಿಗೆ ಅಲ್ಲಿ ಈಗಲೂ ತಮ್ಮ ಒಡಹುಟ್ಟಿದವರಿದ್ದಾರೆ, ಹತ್ತಿರದ ನೆಂಟರಿದ್ದಾರೆ, ಪ್ರಿಯ ಸ್ನೇಹಿತರಿದ್ದಾರೆ. ಸಾರಿಗೆ, ಸಂಪರ್ಕ ಸೌಲಭ್ಯಗಳು – ಮುಖ್ಯವಾಗಿ ವಿದ್ಯುನ್ಮಾನ ಸಾಧನಗಳು – ಹೆಚ್ಚಿರುವುದರಿಂದ, ಹಿಂದಿನ ಕಾಲದಲ್ಲಿದ್ದಂತೆ ಒಂದು ಸಲ ದೇಶ ಬಿಟ್ಟು ಹೋದರೆ ಅಲ್ಲಿಗೆ ಸ್ವದೇಶದೊಡನೆ ಸಂಬಂಧ ಮುರಿಯಿತು ಎಂಬ ಪರಿಸ್ಥಿತಿ ಈಗಿಲ್ಲ. ಈ ಕಾರಣಗಳಿಂದ ಇಲ್ಲಿನ ಭಾರತೀಯರ ಜೀವನದಲ್ಲಿ ಭಾರತ ಇಂದಿಗೂ ತುಂಬ ಜೀವಂತವಾಗಿದೆ. ಅದರ ಪ್ರಭಾವ, ಶಕ್ತಿ ಬಲವಾಗಿವೆ. ಆದ್ದರಿಂದ, ಅಲ್ಲಿ ಬೆಳೆದುಬಂದ ನನ್ನಂಥವರಿಗೆ ತಮ್ಮ ಅನನ್ಯತೆಯ ಬಗ್ಗೆ ಅಷ್ಟು ಕಳವಳ ಇಲ್ಲ. ಆದರೂ ಅದರ ಅಸ್ತಿತ್ವವನ್ನು ಕಾಪಾಡಿಕೊಳ್ಳುವ, ವೃದ್ಧಿಪಡಿಸಿಕೊಳ್ಳುವ, ಹಾಗೂ ಅದನ್ನು ತಮ್ಮ ಮಕ್ಕಳಿಗೆ ವರ್ಗಾಯಿಸುವ ಉದ್ದೇಶದಿಂದ ನಾನಾ ರೀತಿಯ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಅನೇಕ ಪ್ರಜ್ಞಾವಂತ ಭಾರತೀಯ ಮೂಲದವರು ತಮ್ಮ ತಾಯ್ನಾಡಿಗೆ ವಿವಿಧ ರೀತಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ, ಅಲ್ಲಿ ತಮ್ಮ ಹಳ್ಳಿಗಳಲ್ಲಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ವಸತಿ ಗೃಹಗಳನ್ನು ಸ್ಥಾಪಿಸಿದ್ದಾರೆ, ರಸ್ತೆ, ಬಾವಿಗಳನ್ನು ನಿರ್ಮಿಸಿದ್ದಾರೆ. ಇದಕ್ಕೆ ಕನ್ನಡಿಗರೂ ಹೊರತಲ್ಲ.

ಆದರೆ ನಮ್ಮ ಮಕ್ಕಳೂ ಸಹ ತಮ್ಮ ಅನನ್ಯತೆಯ ಬಗ್ಗೆ ಇಷ್ಟೇ ಸುಭದ್ರವಾಗಿರುತ್ತಾರೆಯೇ, ಆ ವಿಚಾರದಲ್ಲಿ ಅವರು ಎದುರಿಸುವ ಸಮಸ್ಯೆಗಳೇನು, ಅವಕ್ಕೆ ಅವರೂ, ಅವರ ತಂದೆತಾಯಿಯರಾದವರೂ ಕಂಡುಕೊಳ್ಳುವ ಪರಿಹಾರಗಳೇನು ಎಂಬುದು ಇಲ್ಲಿನ ಮುಖ್ಯ ಪ್ರಶ್ನೆ. ತಮ್ಮ ಮಕ್ಕಳ ಜೀವನ ಎಲ್ಲ ರೀತಿಯಲ್ಲೂ ಉನ್ನತಗೊಳ್ಳಬೇಕು, ಅವರು ಸುಖವಾಗಿರಬೇಕು ಎಂಬುದು ಎಲ್ಲ ದೇಶ ಸಂಸ್ಕೃತಿಗಳಲ್ಲೂ ತಂದೆತಾಯಿಯರ ಹಾರೈಕೆ. ಜೊತೆಗೆ ನಮ್ಮ ಭಾರತೀಯ ತಂದೆತಾಯಿಯರಿಗೆ ಇನ್ನೊಂದು ಅಪೇಕ್ಷೆಯೂ ಉಂಟು – ತಮ್ಮ ಮಕ್ಕಳೂ ಭಾರತವನ್ನು ತಮ್ಮಷ್ಟೇ ಪ್ರೀತಿಸಲಿ, ಅವರಲ್ಲೂ ನಮ್ಮ ಸಂಸ್ಕೃತಿ, ಧಾರ್ಮಿಕ ಸಂಪ್ರದಾಯಗಳು ಬೆಳೆದುಬರಲಿ – ಎಂಬುದು. ಈ ಬಯಕೆ ಸ್ವಾಭಾವಿಕವೇ ಹೌದು, ಆದರೆ ಅದು ವಾಸ್ತವವೆ? ಕೈಗೂಡುವಂಥದೆ? ಮಕ್ಕಳಿಂದ ಅಷ್ಟೊಂದನ್ನು ನಾವು

ನಿರೀಕ್ಷಿಸಬಹುದೆ? ಆದರೆ ಅದನ್ನು ಸಂಪೂರ್ಣವಾಗಿ ಕೈಬಿಡಲೂ ಸಲ್ಲದು. ಆದ್ದರಿಂದ ಬಹು ಮಂದಿ ತಮ್ಮ ಪರಂಪರೆಯ ಸಂಸ್ಕೃತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಹಿತವಾದ ರೀತಿಯಲ್ಲಿ ಇಲ್ಲಿನ ಸಂಸ್ಕೃತಿಯೊಡನೆ, ಸಮಾಜದ ಆಚಾರವಿಚಾರಗಳೊಡನೆ ಸಮನ್ವಯಗೊಳಿಸಿ ಮಕ್ಕಳ ಮನಸ್ಸಿಗೆ ಒಪ್ಪಿಗೆಯಾಗುವಂತೆ ಮಾಡಬೇಕೆಂದು ಬಯಸುತ್ತಾರೆ. ಈ ಮಧ್ಯಮಾರ್ಗದ ಬಯಕೆ ಸಾಧುವಾದರೂ ಬಹಳ ಕಷ್ಟಸಾಧ್ಯ. ಈ ಬಗೆಯ ಸಮನ್ವಯ ಪ್ರತಿಯೊಂದು ಸಂಸಾರವೂ ತಮಗೆ ತಾವೇ ಕಂಡುಕೊಳ್ಳಬೇಕಾದ್ದು. ಅವರವರ ಇಚ್ಛೆ ಮೌಲ್ಯಗಳನ್ನನುಸರಿಸಿ ಅವರು ತಮ್ಮ ಜೀವನ ರೀತಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಷ್ಟಾದರೂ ನಾವು ನಮ್ಮ ಮಕ್ಕಳು ಅನೇಕ ದ್ವಂದ್ವಗಳನ್ನು ಎದುರಿಸಲೇಬೇಕು.

ಈ ವಿಚಾರದಲ್ಲಿ ವಲಸೆಗಾರರಲ್ಲೇ ತಲೆಮಾರುಗಳ ಅಂತರವಿರುವುದನ್ನು ಗಮನಿಸಿದ್ದೇನೆ. ಈಗ ಸುಮಾರು 8–10 ವರ್ಷದ ಹಿಂದೆ ಬಂದವರೊಬ್ಬರು ಇಲ್ಲಿನ ಸಮಾಜಕ್ಕೆ ಹೊಂದಿಕೊಳ್ಳುವುದು ತಮಗೂ ತಮ್ಮ ಮಕ್ಕಳಿಗೂ ಏನೂ ತೊಂದರೆಯಾಗಿಲ್ಲ ಎಂದಿದ್ದರು. ಕಷ್ಟವಿಲ್ಲದಿದ್ದರೆ ಸಂತೋಷವೆ. ಆದರೆ ಎಲ್ಲರಿಗೂ ಅಷ್ಟೇ ಸುಲಭ ಎಂದು ಹೇಳಲಾರೆ.

ನಾವಿಲ್ಲಿ ಬಂದಾಗ ಇದ್ದ ಸ್ಥಿತಿಗೂ ಈಗಿರುವುದಕ್ಕೂ ಬಹಳ ವ್ಯತ್ಯಾಸಗಳಿವೆ. ಈಗ ಭಾರತೀಯರ, ಏಷ್ಯಾದ ಇತರ ದೇಶಗಳಿಂದ ಬಂದವರ, ಹಿಸ್ಪಾನಿಕ್ ಮತ್ತು ಮೆಕ್ಸಿಕನ್ ಜನರ ಸಂಖ್ಯೆ ಬಹುವಾಗಿ ಹೆಚ್ಚಿದೆ. ಇಲ್ಲಿನ ಜನಕ್ಕೆ ಭಾರತದ ಬಗ್ಗೆ ಹೆಚ್ಚು ತಿಳಿದಿದೆ. ಹಿಂದೆ ಇದ್ದ ಅದೊಂದು ಬಡ ದೇಶ ಎಂಬ ಭಾವನೆ ಹೋಗಿ ಆರ್ಥಿಕವಾಗಿ ಮುಂದೆ ಬರುತ್ತಿರುವ ರಾಷ್ಟ್ರಗಳಲ್ಲಿ ಒಂದು ಎಂಬ ತಿಳುವಳಿಕೆ ಬಂದಿದೆ. ಅಮೆರಿಕ–ಭಾರತಗಳ ವಾಣಿಜ್ಯ ಸಂಪರ್ಕ ಹೆಚ್ಚಿರುವುದು ಇದಕ್ಕೆ ಒಂದು ಮುಖ್ಯ ಕಾರಣ. ಕೆಲಸ ಕಳೆದುಕೊಂಡ ಮಾಹಿತಿ ತಂತ್ರಜ್ಞರಿಗೆ ಮಾತ್ರವಲ್ಲದೆ ಇತರರಿಗೂ ಬೆಂಗಳೂರಿನ ಹೆಸರು ಗೊತ್ತು. ಭಾರತೀಯ – ಮುಖ್ಯವಾಗಿ ಪಂಜಾಬಿ – ಊಟದ ರುಚಿ ಇಲ್ಲಿನವರ ನಾಲಿಗೆಗೆ ಹತ್ತಿದೆ. ಭಾರತೀಯ ಸಂಗೀತ ರವಿ ಶಂಕರರ ಸಿತಾರ್ ಮೂಲಕ ಪರಿಚಿತವಾಗಿದೆ. ಭಾರತೀಯ ದಿನಸಿ ಅಂಗಡಿಗಳಿಗೆ ಇಲ್ಲಿನ ಜನವೂ ಬರುತ್ತಾರೆ. ಅಲ್ಲಿ ಅವರು ಗಣೇಶ ಬೀಡಿಯನ್ನು ಕೊಳ್ಳುವುದನ್ನೂ ನೋಡಿದ್ದೇನೆ. ಭಾರತೀಯ ಮೂಲದವರು ಇಲ್ಲಿನ ಎರಡು ರಾಜ್ಯಗಳಲ್ಲಿ ಗವರ್ನರುಗಳಾಗಿದ್ದಾರೆ. ಅನೇಕ ದೊಡ್ಡ ವಾಣಿಜ್ಯ ವ್ಯವಹಾರ ಸಂಸ್ಥೆಗಳ ಅತ್ಯುಚ್ಚ ಅಧಿಕಾರಿಗಳಾಗಿದ್ದಾರೆ. ಯೋಗ ಕಲಿಸುವ ಶಾಲೆಗಳು ಎಲ್ಲೆಲ್ಲೂ ತಲೆಯೆತ್ತಿವೆ. 'ಬಾಲಿವುಡ್ ನೃತ್ಯ' ಕಲಿಸುವ ಶಾಲೆಗಳೂ ಇವೆ!

ಹಿಂದೆ, ನಾವಿಲ್ಲಿ ಬಂದಾಗ (1960ರ ದಶಕದ ಉತ್ತರಾರ್ಧದಲ್ಲಿ), ನಮ್ಮ ಮೊದಲ

ಮಗಳು ಶಾಲೆಗೆ ಹೋಗಲು ಮೊದಲಿಟ್ಟಾಗ ಇಲ್ಲಿನ ಶಾಲೆಗಳಲ್ಲಿ ಅಮೆರಿಕನ್ ಅಲ್ಲದವರು ಹೆಚ್ಚಿಗೆ ಇರುತ್ತಿರಲಿಲ್ಲ. ಶಹರಿನ ಸಮೀಪದ ಉಪನಗರಗಳ ಶಾಲೆಗಳಲ್ಲಿ ಹೆಚ್ಚಾಗಿ ಬಿಳಿಯ ಮುಖಗಳು, ಕೆಲವು ಕಪ್ಪು ಮುಖಗಳು. ಈ ದೇಶದಲ್ಲಿ 1860ರಿಂದಲೂ ನೆಲೆಸಿರುವ ಚೈನೀ ಮುಖಗಳೂ ಅಷ್ಟಾಗಿ ಕಾಣುತ್ತಿರಲಿಲ್ಲ. ನಮ್ಮ ಮಗಳು ಒಬ್ಬಳೆ ಅಲ್ಲಿ ಭಾರತೀಯಳು. ಮಕ್ಕಳು ಎಷ್ಟೇ ಒಂದಾಗಿ ಕಲೆತು ಆಡಿಕೊಂಡರೂ, ಅವರೂ ತಾರತಮ್ಯ ಮಾಡದೆ ಇರುವುದಿಲ್ಲ. ಆರೇಳು ವರ್ಷಗಳ ಮೇಲೆ ಹುಟ್ಟಿದ ನಮ್ಮ ಇನ್ನಿಬ್ಬರು ಮಕ್ಕಳು ಶಾಲೆಗೆ ಹೋಗುವಾಗಲೂ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದ್ದರೂ ಸಾಕಷ್ಟು ಆಗಿರಲಿಲ್ಲ.

ಇಲ್ಲಿನ ಅನೇಕ ಮಕ್ಕಳಿಗೆ ನಾವು ಇಂಡಿಯನ್ ಅಂದ ಕೂಡಲೆ ನಾವು 'ಅಮೆರಿಕನ್ ಇಂಡಿಯನ್' ಅಥವಾ ಅಮೆರಿಕದ ಮೂಲನಿವಾಸಿಗಳು ಎಂಬ ಭಾವನೆ ಬರುತ್ತಿತ್ತು. ನಾವು ವಾಸವಾಗಿದ್ದ ಚಾಲಿನ ಸಮೂಹದಲ್ಲೇ ಇನ್ನೊಂದು ಕಟ್ಟಡದಲ್ಲಿದ್ದ ಒಬ್ಬ ಹುಡುಗ ರಾನೀ ಎಂಬುವನು ನನ್ನ ಮಗಳನ್ನು ನೋಡಿದಾಗೆಲ್ಲ ಇಲ್ಲಿನ ಮೂಲನಿವಾಸಿಗಳು ಮಾಡುತ್ತಿದ್ದರೆಂದು ಹೇಳುವಂತೆ ಬಾಯಿ ಬಡಿದುಕೊಂಡು ಕೂಗುತ್ತಿದ್ದ. ನನ್ನ ಮಗಳು ಅವನಿಗೆ ತಾನು 'ಅಮೆರಿಕನ್ ಇಂಡಿಯನ್ ಅಲ್ಲ, ಇಂಡಿಯನ್ ಇಂಡಿಯನ್' ಎಂದು ಹೇಳುತ್ತಿದ್ದಳು. ಅವನು ಸುಮ್ಮನಾಗುತ್ತಿರಲಿಲ್ಲ. ಕಡೆಗೆ ಅವಳು 'ನಮ್ಮ ಮಾತಿನಲ್ಲಿ ನಿನ್ನ ಹೆಸರು ರಾನೀ ಎಂದರೆ ಕ್ವೀನ್ ಅಂತ. ಹುಡುಗರು ಯಾರೂ ಆ ಹೆಸರು ಇಟ್ಟುಕೊಳ್ಳುವುದಿಲ್ಲ' ಎಂದು ಗೇಲಿ ಮಾಡಿದಳು. ಆಮೇಲೆ ತೆಪ್ಪಗಾದ. ಶತಮಾನಗಳ ಹಿಂದೆ ಕೊಲಂಬಸ್ ಭಾರತಕ್ಕೆ ದಾರಿ ಹುಡುಕುವೆನೆಂದು ಹೊರಟು ಎಲ್ಲಿಗೋ ತಲುಪಿ ಅಲ್ಲಿ ತಾನು ಕಂಡವರನ್ನೇ ಇಂಡಿಯನ್ನರು ಎಂದು ತಪ್ಪಾಗಿ ಭಾವಿಸಿದ್ದರ ಫಲ ಇಂದಿಗೂ ಹೋಗಿಲ್ಲ! ನನ್ನ ಹೆಂಡತಿ ವಿಮಲ ಇಲ್ಲಿನ ಅನೇಕ ಶಾಲೆಗಳಲ್ಲಿ ಇಂಡಿಯಾ ಬಗ್ಗೆ ಮಾತಾಡಲು ಹೋಗುತ್ತಿದ್ದಳು. ಹಾಗೆ ಹೋದಾಗ ಒಂದು ಮಗು ಅವಳನ್ನು ಕೇಳಿತ್ತು: Are you dangerous? ಎಂದು. ಅದರ ಮನಸ್ಸಿನಲ್ಲಿ ವಿಮಲ ತನ್ನ ಸೆರಗಿನಲ್ಲಿ ಬಿಲ್ಲುಬಾಣಗಳನ್ನು ಮುಚ್ಚಿಟ್ಟುಕೊಂಡಿರಬಹುದು, ಅವಳ ಜೊತೆ ಇರುವುದು ತನಗೆ ಅಪಾಯವೇನೋ ಎಂಬ ಸಂದೇಹವಿತ್ತು!

ನಮ್ಮ ಮಗಳು ಮುಂದೆ ಕಾಲೇಜಿನ ಓದಿಗೆ ಇಲ್ಲಿನ ಹೆಸರಾದ ವಿದ್ಯಾ ಸಂಸ್ಥೆ ಬ್ರಿನ್ ಮಾರ್ ಕಾಲೇಜಿಗೆ (Bryn Mawr College) ಹೋದಳು. ಅಲ್ಲಿ ಸೇರಿದ್ದು ಅವಳಿಗೆ ಬಹಳ ಒಳ್ಳೆಯದಾಯಿತು. ಆ ಕಾಲೇಜು ಇಲ್ಲಿನ ಅತ್ಯುತ್ತಮ ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ ಪ್ರಪಂಚದ ಇತರ ದೇಶಗಳಿಗೂ ಹೋಗಿ ಒಳ್ಳೆಯ ವಿದ್ಯಾರ್ಥಿಗಳನ್ನು ಆರಿಸಿಕೊಂಡು ಬರುತ್ತದೆ. ಇದರಿಂದಾಗಿ ಅಲ್ಲಿ ಹೊರದೇಶದವರ, ಇತರ ಸಂಸ್ಕೃತಿಗಳ ಬಗ್ಗೆ ಒಂದು ಸ್ನೇಹಮಯವಾದ ಭಾವನೆ ಇದೆ. ಅಲ್ಲಿನ ತನ್ನ ಅನುಭವವನ್ನು ಕುರಿತು ಹೇಳುತ್ತಾ ಅಲ್ಲಿಗೆ ಹೋದಮೇಲೆಯೇ ತಾನು ಇತರರಿಗಿಂತ ಬೇರೆಯಾಗಿರುವುದು ತಪ್ಪಲ್ಲ ('It is okay to be different') ಎಂಬ ಭಾವನೆ ಮೊದಲ ಬಾರಿಗೆ ಈ ದೇಶದಲ್ಲಿ ತನ್ನ

ಮನಸ್ಸಿಗೆ ಬಂದದ್ದು ಎಂದಿರುವುದುಂಟು. ಉನ್ನತ ವ್ಯಾಸಂಗದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿರುವ ಮುಕ್ತ ಮನೋಭಾವಕ್ಕೂ ಕೆಳಗಿನ ಮಟ್ಟದ ಶಾಲೆಗಳಲ್ಲಿರುವ ಸಂಕುಚಿತ ಮನೋಭಾವಕ್ಕೂ ಈ ವಿಚಾರದಲ್ಲಿ ದೊಡ್ಡ ವ್ಯತ್ಯಾಸವಿದೆ.

ಸಂಸ್ಕೃತಿಯ ಪರಿಚಯ

ಭಾರತ ಒಂದು ಪುರಾತನ ದೇಶ. ಅದಕ್ಕೆ ಮಹತ್ತರವಾದ ಸಂಸ್ಕೃತಿಯ ಪರಂಪರೆ ಇದೆ. ಅದನ್ನು ಇಲ್ಲಿ ಬೆಳೆಯುತ್ತಿರುವ ನಮ್ಮ ಮಕ್ಕಳಿಗೂ ನಿಲುಕುವಂತೆ ಮಾಡಬೇಕಾದ್ದು ನಮ್ಮ ಕರ್ತವ್ಯ ಎಂಬುದನ್ನು ಬಹು ಜನ ಒಪ್ಪುತ್ತಾರೆ. ಅಂಥ ಅವಕಾಶಗಳು ಈಗ ಅನೇಕವಿವೆ. ಭಾರತೀಯ ಸಂಗೀತ, ನೃತ್ಯಕಲೆಗಳನ್ನು ಕಲಿಯಲು ವಿಶೇಷವಾದ ಅನುಕೂಲಗಳಿವೆ. ಉತ್ತಮ ನೃತ್ಯ ಶಿಕ್ಷಕರು ಖಾಸಗಿಯಾಗಿ ಶಾಲೆ ನಡೆಸುತ್ತಿದ್ದಾರೆ. ಅನೇಕ ಹೆಣ್ಣುಮಕ್ಕಳು ಭರತನಾಟ್ಯ ಕಲಿತು ಅದರಲ್ಲಿ ರಂಗಪ್ರವೇಶದ ಘಟ್ಟವನ್ನೂ ಮುಗಿಸುತ್ತಾರೆ. ನನಗೆ ತಿಳಿದ ಎಷ್ಟೊ ಮಕ್ಕಳು ಈ ಕಲೆಯಲ್ಲಿ ತುಂಬಾ ಪ್ರೌಢಿಮೆ ತೋರಿದ್ದಾರೆ. ಗಂಡುಮಕ್ಕಳಿಗೆ ಇಂಥ ಅವಕಾಶಗಳು ಸ್ವಲ್ಪ ಕಡಿಮೆ. ಅಲ್ಲದೆ ತಮ್ಮ ಬಾಲ್ಯ, ಹದಿವಯಸ್ಸಿನಲ್ಲಿ ಹುಡುಗರು ಇಂಥ ಸಾಂಸ್ಕೃತಿಕ ವಿಚಾರಗಳ ಬಗ್ಗೆ ಸ್ವಲ್ಪ ನಿರ್ಲಕ್ಷ್ಯ ತೋರುವುದೂ ಸ್ವಾಭಾವಿಕವೇ. ಆದರೂ ನನಗೆ ತಿಳಿದ ಹಲವಾರು ಮಂದಿ ಯುವಕರು ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತದಲ್ಲಿ ಬಹಳ ಮುಂದುವರೆದಿದ್ದಾರೆ. ನನ್ನ ಗೆಳೆಯರ ಮಗನೊಬ್ಬ, ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ, ಪ್ರತಿವಾರವೂ ರೈಲಿನಲ್ಲಿ ಫಿಲಡೆಲ್ಫಿಯಾದಿಂದ ನ್ಯೂಯಾರ್ಕಿಗೆ ಹೋಗಿ ಅಲ್ಲಿ ಸಮೀರ ಚಟರ್ಜಿಯವರಲ್ಲಿ ತಬಲ ಕಲಿತು ಬರುತ್ತಿದ್ದ.

ಇದೆಲ್ಲ ಈಗಿನ ಮಾತು. ನಾವು ಇಲ್ಲಿ ಬಂದಾಗಿನ ಪರಿಸ್ಥಿತಿ ಬೇರೆಯೇ ಆಗಿತ್ತು. ನಾವು ನಮ್ಮ ನಮ್ಮ ಮನೆಗಳಲ್ಲಿ ಮಕ್ಕಳಿಗೆ ಸಾಧ್ಯವಾದಷ್ಟನ್ನು ಹೇಳಿಕೊಡುತ್ತಿದ್ದೆವು. ಆದರೆ ಮಕ್ಕಳಿಗೆ ಇಂಥವನ್ನೆಲ್ಲ ತಮ್ಮ ಸಮವಯಸ್ಕರೊಂದಿಗೆ ಕಲಿಯುವುದು ಇಷ್ಟ. ಅದು ಅವರಲ್ಲಿ ತುಂಬಾ ಉತ್ಸಾಹ ಮೂಡಿಸುತ್ತದೆ. ಅಲ್ಲದೆ ಆ ಸನ್ನಿವೇಶದಲ್ಲಿ ಇತರರಿಂದ ವಿವಿಧ ವಿಚಾರಗಳನ್ನೂ ಕಲಿಯಬಹುದು.

ಇದನ್ನು ಗುರುತಿಸಿ, ನಾವು ಹಲವರು ಗೆಳೆಯರು ಸೇರಿ ಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ಸಂಸ್ಥೆಯನ್ನು ನಡೆಸಬೇಕೆಂದು ನಿರ್ಧರಿಸಿದೆವು. ಆ ಹೊತ್ತಿಗೇ ಇತರ ಕೆಲವು ಭಾರತೀಯ ಸಂಸ್ಥೆಗಳು ಇದ್ದವು ನಿಜ; ಆದರೆ, ಮಕ್ಕಳಿಗಾಗಿಯೇ ಯಾವುದೂ ಇರಲಿಲ್ಲ. ಇತರ ಸಂಸ್ಥೆಗಳ ಆಶ್ರಯದಲ್ಲಿ ಇಂಥ ಕೆಲಸ ಮಾಡಬೇಕಾದರೆ ಅದರ ಸ್ಥಾನ ಗೌಣವಾಗುತ್ತದೆ. ಆ ಕಾರಣದಿಂದ ಅದಕ್ಕೆ ಒಂದು ಪ್ರತ್ಯೇಕ ಸಂಸ್ಥೆಯನ್ನೇ ಕಟ್ಟಬೇಕು ಎಂದು ನಿರ್ಧರಿಸಿದೆವು. ಈ ಕಲ್ಪನೆಯ ಫಲವಾಗಿ ಇಂಡಸ್, INDUS - Indo-U.S. Children's Association - ಎಂಬ ಸಂಸ್ಥೆ 1975ರಲ್ಲಿ ಜನಿಸಿತು. ನಮ್ಮಲ್ಲಿ ಎಷ್ಟೋ

ಮಂದಿಗೆ ಆಗ ತಾವು ಮುಂದೆ ಇಲ್ಲಿಯೇ ಇರುವವರೋ ಅಥವಾ ಭಾರತಕ್ಕೆ ಮರಳುವವರೋ ಎಂಬ ವಿಷಯ ಖಚಿತವಾಗಿರಲಿಲ್ಲ. ಅದು ಹೇಗಿದ್ದರೂ, ಮಕ್ಕಳಿಗೆ ನಮ್ಮ ಸಂಸ್ಕೃತಿಯ ಪರಿಚಯವಿದ್ದರೆ ಅದು ಎಂದಿದ್ದರೂ ಲಾಭಕರವೇ ಎಂದು ಮನಗಂಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಲು ಪ್ರಾರಂಭಿಸಿದೆವು. ನಮ್ಮ ಮಕ್ಕಳು ತಮ್ಮ ಸಹವಿದ್ಯಾರ್ಥಿಗಳನ್ನೂ ಇಲ್ಲಿಗೆ ಕರೆತರಲು ಉತ್ತೇಜಿಸಿದೆವು, ಆ ಮೂಲಕ ಇಲ್ಲಿನ ಅಮೆರಿಕನ್ ಮಕ್ಕಳಿಗೆ ನಮ್ಮ ಸಂಸ್ಕೃತಿ ಪರಿಚಯವಾಗಲೆಂದು. ಆಗ ಎಲ್ಲ ಭಾಷೆಗಳವರೂ ಕೆಲಕೆಲವೇ ಮಂದಿ ಇದ್ದುದು. ಆದ್ದರಿಂದ ನಾವು ಇಲ್ಲಿ ಬರೀ ಕನ್ನಡ ಅಥವ ಬರೀ ಹಿಂದಿ ಇರಬೇಕು ಎನ್ನುವಂಥ ನಿರ್ಬಂಧಗಳನ್ನು ಮಾಡಲಿಲ್ಲ. ಹಾಗಾಗಿ ಭಾರತದ ಹಲವು ಪ್ರಾಂತ್ಯಗಳ, ಭಾಷೆಗಳ ಜನ, ವಿವಿಧ ಮತಗಳ ಜನ, ಜೊತೆಗೆ ಇಲ್ಲಿನ ಅಮೆರಿಕನ್ನರು – ಎಲ್ಲಾ ಸೇರುತ್ತಿದ್ದರು. ನಮ್ಮ ಸಂವಹನ ಭಾಷೆ ಇಂಗ್ಲಿಷೇ ಆಗಿರುತ್ತಿತ್ತು.

ವಿಮಲ ಮತ್ತು ನಾನು ಇಂಡಸ್ ಕೆಲಸದಲ್ಲಿ ಸಂಪೂರ್ಣವಾಗಿ ನಮ್ಮನ್ನು ತೊಡಗಿಸಿಕೊಂಡಿದ್ದೆವು. ತಿಂಗಳಲ್ಲಿ ಮೂರು ಭಾನುವಾರ ಅದಕ್ಕೆ ವಿನಿಯೋಗವಾಗುತ್ತಿತ್ತು. ಅದಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ಓದುಗರಿಗೆ ಪರಿಚಯ ಮಾಡಲು ಬಯಸುತ್ತೇನೆ.

ನಾವು ತಿಂಗಳಿಗೊಂದು ಸಲ ಸೇರಿ ಭಾನುವಾರ ಮಧ್ಯಾಹ್ನ ಸುಮಾರು ಎರಡೂವರೆ–ಮೂರುಗಂಟೆಗಳ ಕಾಲ ಮಕ್ಕಳಿಗೆ ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೆವು. ನಮ್ಮ ಹಬ್ಬಗಳು, ಅವುಗಳ ಹಿಂದಿರುವ ಪುರಾಣ ಕತೆಗಳು, ಅವುಗಳ ವೈಶಿಷ್ಟ್ಯ ಇವನ್ನು ತಿಳಿಸಿಕೊಡುತ್ತಿದ್ದೆವು. ಆಯಾ ಸಂದರ್ಭಕ್ಕೆ ತಕ್ಕ ಹಾಡುಗಳನ್ನು ಕಲಿಸುತ್ತಿದ್ದೆವು. ದೀಪಾವಳಿ ಸಮಯದಲ್ಲಿ, ಅದರ ಜೊತೆಗೆ ಇಲ್ಲಿನ ಹಬ್ಬ Thanksgiving ಮತ್ತು ಕ್ರಿಸ್ಮಸ್ ಹಬ್ಬಗಳನ್ನೂ ಸೇರಿಸಿ ವಿಶೇಷ ಸಡಗರದಿಂದ ಒಳ್ಳೆಯ ಕಾರ್ಯಕ್ರಮ ನಡೆಸಿ, ಎಲ್ಲ ಸದಸ್ಯರೂ ತಮ್ಮ ಮನೆಗಳಿಂದ ತಂದ ಭಕ್ಷ್ಯಭೋಜ್ಯಗಳನ್ನು ಇತರರೊಡನೆ ಹಂಚಿಕೊಂಡು ಸವಿದು ಕಡೆಯಲ್ಲಿ ದೀಪಾವಳಿಯ ಕುರುಹಾಗಿ ಸುರುಸುರುಬತ್ತಿ ಮುಂತಾದುವನ್ನು ಹಚ್ಚಿ ನಲಿಯುತ್ತಿದ್ದೆವು. (ಇಲ್ಲಿ ನಗರ ಸಭೆಯ ಅನುಮತಿಯಿಲ್ಲದೆ ದೊಡ್ಡದಾಗಿ ಪಟಾಕಿ, ಬಾಣ–ಬಿರುಸು ಉಪಯೋಗಿಸುವಂತಿಲ್ಲ.) ಸಾಧಾರಣವಾಗಿ ಇತರ ಭಾರತೀಯ ಸಮಾರಂಭಗಳಿಗೆ ಹೋಗಲು ವಿವಿಧ ಕಾರಣಗಳಿಂದಾಗಿ ಬೇಸರಪಟ್ಟುಕೊಳ್ಳುತ್ತಿದ್ದ ಮಕ್ಕಳು ಇಲ್ಲಿಗೆ ಮಾತ್ರ ಸಂತೋಷದಿಂದ ಬರುತ್ತಾರೆ ಎಂದು ತಂದೆತಾಯಿಯರು ಹೇಳುತ್ತಿದ್ದರು.

ಇದಲ್ಲದೆ ಮಕ್ಕಳಿಗೆ ಆಗ ಸುಲಭವಾಗಿ ಲಭ್ಯವಾಗದಿದ್ದ ಭರತನಾಟ್ಯ ಶಿಕ್ಷಣವನ್ನೂ ಏರ್ಪಡಿಸಿದೆವು. ನೃತ್ಯ ಒಂದು ಸಂಪೂರ್ಣ ಕಲೆ. ಅದನ್ನು ಚೆನ್ನಾಗಿ ಕಲಿತರೆ ನಮ್ಮ ಸಂಗೀತ, ಪುರಾಣ ಕತೆಗಳು, ಉಡುಗೆ ತೊಡುಗೆಗಳು, ಶೃಂಗಾರ ಪ್ರಸಾಧನಗಳು – ಇತ್ಯಾದಿ ನಮ್ಮ ಸಂಸ್ಕೃತಿಯ ನಾನಾ ಮುಖಗಳ ಪರಿಚಯ ಆಗುತ್ತದೆ. ಅಲ್ಲದೆ

ಭರತನಾಟ್ಯ ಭಾರತದ ಅತ್ಯಂತ ಪ್ರಸಿದ್ಧವಾದ ಕಲಾರೂಪಗಳಲ್ಲಿ ಒಂದು. ಆದ್ದರಿಂದ ಅದರ ಪರಿಚಯ ನಮ್ಮ ಮಕ್ಕಳಿಗೆ ಆಗಬೇಕು ಎಂಬುದು ನಮ್ಮ ಉದ್ದಿಶ್ಯವಾಗಿತ್ತು. ಆಗ ಖ್ಯಾತ ನಟಿ ಪದ್ಮಿನಿ (ಮೂಲತಃ ನೃತ್ಯಗಾತಿ) ಇಲ್ಲಿ ನ್ಯೂಜೆರ್ಸಿಯಲ್ಲಿ ನೆಲೆಸಿದ್ದಳು. ಆಕೆಯೂ ಅಲ್ಲಿ ಒಂದು ನೃತ್ಯಶಾಲೆ ನಡೆಸುತ್ತಿದ್ದಳು. ಆಕೆಯನ್ನು ಇಲ್ಲಿಗೂ ಬಂದು ನಮ್ಮ ಮಕ್ಕಳಿಗೆ ನೃತ್ಯ ಕಲಿಸಲು ಗೊತ್ತುಮಾಡಿದೆವು. ಎರಡು ವಾರಕ್ಕೊಮ್ಮೆ ಆಕೆ ಬರುತ್ತಿದ್ದಳು. ಮಕ್ಕಳನ್ನು ಪ್ರೀತಿಯಿಂದ ಮಾತಾಡಿಸಿ ವಿದ್ಯೆ ಕಲಿಸಿ ಅವರ ವಿಶ್ವಾಸವನ್ನು ಗಳಿಸಿಕೊಂಡಿದ್ದಳು. ತಾನು ಹಿಂದೊಮ್ಮೆ ಇಡೀ ಭಾರತದಲ್ಲಿ ಪ್ರಖ್ಯಾತಳಾಗಿದ್ದ ನಟಿ ಎಂಬ ಬಿಗುಮಾನ ಒಂದು ಚೂರೂ ಇರಲಿಲ್ಲ. ನಮ್ಮ ಭರತನಾಟ್ಯ ತರಗತಿಯನ್ನು ಫಿಲಡೆಲ್ಫಿಯಾದ ಅಂತಾರಾಷ್ಟ್ರೀಯ ಭವನದಲ್ಲಿ (International House) ನಡೆಸುತ್ತಿದ್ದೆವು. ನಮ್ಮ ನೃತ್ಯ ತರಗತಿಗೆ University of Pennsylvaniaದಲ್ಲಿ ಹೆಚ್ಚಿನ ವ್ಯಾಸಂಗಕ್ಕೆಂದು ಬಂದಿದ್ದ ಒಬ್ಬ ಚೆಕೊಸ್ಲಾವ್ ವಿದ್ಯಾರ್ಥಿನಿಯೂ ಸೇರಿದ್ದಳು.

ಕೆಲವು ವರ್ಷಗಳ ನಂತರ ಪದ್ಮಿನಿಗೆ ಇಲ್ಲಿ ಬರುವುದು ಸಾಧ್ಯವಾಗಲಿಲ್ಲ. ಅಷ್ಟು ಹೊತ್ತಿಗೆ ಭಾರತದ ಖ್ಯಾತ ನರ್ತಕಿ ಇಂದ್ರಾಣಿ ರೆಹಮಾನ್ ಇಲ್ಲಿ ಸ್ವಲ್ಪ ಕಾಲ ಇರುವುದು ತಿಳಿದು ಆಕೆಯನ್ನು ಸಂಪರ್ಕಿಸಿದೆವು. ಆಕೆ ನ್ಯೂಯಾರ್ಕಿನಲ್ಲಿ ಇರುತ್ತಿದ್ದಳು. ಬೆಳಿಗ್ಗೆ ಅಲ್ಲಿಂದ ರೈಲಿನಲ್ಲಿ ಹೊರಟು ಬಂದು ಹತ್ತುವರೆಯಿಂದ ಮಧ್ಯಾಹ್ನ ಎರಡುವರೆಯವರೆಗೆ ಸತತವಾಗಿ ಮಕ್ಕಳಿಗೆ ಅಭ್ಯಾಸ ಮಾಡಿಸುತ್ತಿದ್ದಳು. ಆಕೆಯ ಪಾಠಕ್ರಮ ಶಿಕ್ಷಣ ಮಕ್ಕಳಿಗೆ ಅತ್ಯಂತ ಪ್ರಯೋಜನಕಾರಿಯಾಗಿತ್ತು. ಸುಮಾರು ಒಂದೂವರೆ ವರ್ಷ ಇಲ್ಲಿದ್ದು ಆಮೇಲೆ ಆಕೆ ಭಾರತಕ್ಕೆ ಹಿಂತಿರುಗಿದಳು.

ಫಿಲಡೆಲ್ಫಿಯಾದ Nationalities Service Center ಎಂಬ ಸಂಸ್ಥೆ ಇತರ ದೇಶಗಳಿಂದ ಇಲ್ಲಿ ಬಂದು ನೆಲೆಸಿರುವ, ಇಂಗ್ಲಿಷ್ ಚೆನ್ನಾಗಿ ಬಾರದ ವಲಸೆಗಾರರಿಗೆ ಸಹಾಯ ಮಾಡುತ್ತದೆ. ಅವರು ಹಿಂದೆ ಎರಡು ವರ್ಷಕ್ಕೊಮ್ಮೆ ಇಲ್ಲಿನ ವಿವಿಧ ಜನಾಂಗಗಳನ್ನು ಆಹ್ವಾನಿಸಿ ಅವರವರ ಸಾಂಸ್ಕೃತಿಕ ಕಲಾಕೌಶಲಗಳನ್ನು ಪ್ರದರ್ಶಿಸುವ, ಅವರ ತಿಂಡಿತಿನಿಸುಗಳನ್ನು ಎಲ್ಲರಿಗೂ ಪರಿಚಯಿಸುವ Philadelphia Folk Festival ಎಂಬ ಜಾನಪದ ಉತ್ಸವ ಏರ್ಪಡಿಸುತ್ತಿದ್ದರು. ಇದರಲ್ಲಿ ಭಾರತೀಯ ಸಮುದಾಯವನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ನಾವು ವಹಿಸಿಕೊಂಡೆವು. ಇದಕ್ಕಾಗಿ ವಿಶೇಷ ಮುತುವರ್ಜಿ ವಹಿಸಿ ಮಕ್ಕಳನ್ನು ತರಪೇತು ಮಾಡಿದೆವು. ಮೂರು ದಿನಗಳ ಆ ಉತ್ಸವದಲ್ಲಿ ನಮ್ಮ ಮಕ್ಕಳು ಹಲವಾರು ಬಾರಿ ಮುಖ್ಯ ರಂಗದ ಮೇಲೆ ಜಾನಪದ ಹಾಗೂ ಶಾಸ್ತ್ರೀಯ ನೃತ್ಯಗಳನ್ನು ಪ್ರದರ್ಶನ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಈ ಸಮಾರಂಭ ಆಗ ಇದ್ದ Philadelphia Civic Center ಎಂಬ ಸಭಾಭವನದಲ್ಲಿ ನಡೆಯುತ್ತಿತ್ತು. ಹತ್ತಾರು ಸಾವಿರ ಜನ ಬಂದು ಹೋಗುತ್ತಿದ್ದರು. ಅಂಥ ಕಡೆ ನಮ್ಮ ಮಕ್ಕಳು ತಮ್ಮ ನೃತ್ಯ ಕಾರ್ಯಕ್ರಮಗಳನ್ನು ಪ್ರದರ್ಶಿಸಿ ಸಾವಿರಾರು ಜನರ

ಹರ್ಷೋದ್ಗಾರ ಚಪ್ಪಾಳೆಗಳನ್ನು ಸ್ವೀಕರಿಸಿದಾಗ ಅವರ ಎಳೆಯ ಮುಖಗಳ ಮೇಲೆ ಮೂಡುತ್ತಿದ್ದ ಉಲ್ಲಾಸ, ತೃಪ್ತಿಯ ಮಂದಹಾಸ, ತಮ್ಮ ಬಗ್ಗೆ ತಮ್ಮ ಸಂಸ್ಕೃತಿಯ ಬಗ್ಗೆ ಉಕ್ಕುತ್ತಿದ್ದ ಅಭಿಮಾನ, ಭರವಸೆಗಳನ್ನು ಕಂಡಾಗ ನಮ್ಮ ಎಲ್ಲ ಶ್ರಮವೂ ಸಾರ್ಥಕವಾಯಿತೆನ್ನಿಸುತ್ತಿತ್ತು. ಇಂಡಸ್ ಅಲ್ಲದೆ ನಾವು ಇತರ ಸಂಸ್ಥೆಗಳನ್ನೂ ಈ ಉತ್ಸವದಲ್ಲಿ ಪಾಲುಗೊಳ್ಳಲು, ನಮ್ಮ ಭಾರತೀಯ ತಿಂಡಿತಿನಿಸುಗಳನ್ನು ಮಾಡಿ ಮಾರಾಟ ಮಾಡಲು ಕರೆಯುತ್ತಿದ್ದೆವು. ಈ ಉತ್ಸವದಲ್ಲಿ ನಾವು ನಾಲ್ಕೈದು ಬಾರಿ ಪಾಲುಗೊಂಡೆವು. ಈಗ ಅದು ನಡೆಯುವುದಿಲ್ಲ. ಆದರೆ ಅದು ನಡೆಯುತ್ತಿದ್ದ ದಿನಗಳಲ್ಲಿ ಅದರಲ್ಲಿ ಭಾಗವಹಿಸಿದ ನಮ್ಮ ಮಕ್ಕಳಿಗೆಲ್ಲ ಅದೊಂದು ತಮ್ಮ ಅನನ್ಯತೆಯನ್ನು ಎತ್ತಿಹಿಡಿದ, ಸ್ವಾಭಿಮಾನದ ನೆನಪಾಗಿ ಉಳಿದಿದೆ.

ಇದಿಷ್ಟೇ ಅಲ್ಲದೆ ನಮ್ಮ ಮಕ್ಕಳನ್ನು ಇಲ್ಲಿನ ಇತರ ಅನೇಕ ಸಂಸ್ಥೆಗಳ ವಿಶೇಷ ಕಾರ್ಯಕ್ರಮಗಳಲ್ಲಿಯೂ ತೊಡಗಿಸಿದೆವು. ಇಲ್ಲಿನ ಖ್ಯಾತ Philadelphia Museum of Artನವರು Manifestations of Shiva ಎಂಬ ಒಂದು ಬೃಹತ್ ಪ್ರದರ್ಶನ ಏರ್ಪಡಿಸಿದ್ದರು. ಅದೇ ಮ್ಯೂಸಿಯಮ್ಮಿನ ಭಾರತೀಯ ಕಲೆಗಳ ವಿಭಾಗದ ಕ್ಯುರೇಟರ್ ಆಗಿದ್ದ, ಭಾರತೀಯ ದೇವಾಲಯಗಳ ವಾಸ್ತುಶಾಸ್ತ್ರ ಮತ್ತು ಮೂರ್ತಿಶಿಲ್ಪದಲ್ಲಿ ವಿಶ್ವಮಾನ್ಯ ತಜ್ಞೆಯೆನಿಸಿದ ಡಾ. ಸ್ಟೆಲಾ ಕ್ರಾಮ್ರಿಷ್ ಅದನ್ನು ಸಿದ್ಧಗೊಳಿಸಿದ್ದರು. ಅದರ ಅಂಗವಾಗಿ ಏರ್ಪಡಿಸಿದ್ದ ಹಲವು ಕಾರ್ಯಕ್ರಮಗಳಲ್ಲಿ ನಮ್ಮ ಮಕ್ಕಳು ಭಾಗವಹಿಸಿದರು. ಅವರ ನೃತ್ಯ ಪ್ರದರ್ಶನವನ್ನು ನೋಡಿ, ಹಾಗೂ ವಿಮಲ ತನ್ನ ಜಾನಪದ ಸಂಗೀತ ಕಾರ್ಯಕ್ರಮದಲ್ಲಿ ಹಾಡಿದ 'ಮಲ್ಲಯ್ಯನಿರುವೋದು ಇಲ್ಲೀಗೆ ಗಾವುದ, ಮಲ್ಲಯ್ನ ಮಡದಿ ಮರುಗಮ್ಮ' ಎಂಬ ಕೋಲಾಟದ ಹಾಡು ಕೇಳಿ, ಆಕೆ ತುಂಬಾ ಮೆಚ್ಚಿ ಸಂತೋಷಪಟ್ಟಿದ್ದರು.

ಅದೇ ಸಂದರ್ಭದಲ್ಲಿ ಫಿಲಡೆಲ್ಫಿಯಾದ ಇತರ ಹಲವಾರು ಸಂಸ್ಥೆಗಳವರೂ ವಿಶೇಷ ಕಾರ್ಯಕ್ರಮ ಪ್ರದರ್ಶನಗಳನ್ನು ಹಮ್ಮಿಕೊಂಡಿದ್ದರು. ಅವುಗಳ ಪೈಕಿ ಆಗತಾನೆ ಎರಡು-ಮೂರು ವರ್ಷದ ಹಿಂದೆ ಪ್ರಾರಂಭವಾಗಿದ್ದ, ಆರೇಳು ವರ್ಷದ ಮಕ್ಕಳಿಗಾಗಿಯೇ ಮೀಸಲಾದ Please Touch Museum ಸಂಸ್ಥೆಯೂ ಒಂದು. ಇತರ ಮ್ಯೂಸಿಯಮ್ಮುಗಳಲ್ಲಿ ಯಾರೂ ಏನನ್ನೂ ಮುಟ್ಟಕೂಡದು ಎಂಬ ನಿಯಮವಿದ್ದರೆ ಇಲ್ಲಿ, ಚಿಕ್ಕ ಮಕ್ಕಳು ಏನು ಪದಾರ್ಥವನ್ನು ಬೇಕಾದರೂ ಮುಟ್ಟಿನೋಡಬಹುದು. (ಅವರಿಗೆ ಆ ವಸ್ತುವನ್ನು ಕೈಲಿ ಹಿಡಿದ ಅನುಭವ ಮುಖ್ಯ ಎಂಬುದು ಇಲ್ಲಿನ ಕಲ್ಪನೆ.) ಇವರು ಗಣೇಶನ ಬಗ್ಗೆ ಒಂದು ವಿಶೇಷ ಕಾರ್ಯಕ್ರಮ ಸಿದ್ಧಪಡಿಸಿಕೊಡಬೇಕೆಂದು ಕೇಳಿದರು. ಇಂಡಸ್ ನಡೆಸಿಕೊಟ್ಟ ಆ ಗಣೇಶೋತ್ಸವದಲ್ಲಿ ನಮ್ಮ ಮಕ್ಕಳೆಲ್ಲ ಭಾಗವಹಿಸಿದರು. ನಾನು ಗಣೇಶನನ್ನು ಕುರಿತು ಒಂದು ಚಿಕ್ಕ ಕೈಹೊತ್ತಗೆ ಬರೆದುಕೊಟ್ಟೆ. ನಮ್ಮ ಪ್ರಿಯ ಮಿತ್ರರಾದ ದಿ. ಶ್ರೀ ಎಸ್.ಕೆ. ಹರಿಹರೇಶ್ವರ ಗಣೇಶನ ಪೂಜೆ

ನಡೆಸಿಕೊಟ್ಟರು. ಮುಂದೆ ಆ ಸಂಸ್ಥೆ ತುಂಬಾ ಬೆಳೆಯಿತು. ಗಣೇಶ ಎಲ್ಲ ವಿಘ್ನಗಳನ್ನೂ ನಿವಾರಿಸುತ್ತಾನೆ ಎಂದು ಅರಿತಿದ್ದ ಆ ಮ್ಯೂಸಿಯಮ್ಮಿನ ನಿರ್ದೇಶಕಿಯಾಗಿದ್ದ ಪೋರ್ಶಿಯ ಸ್ಪರ್, 'ನೀವು ಇಲ್ಲಿ ಬಂದು ಗಣೇಶನನ್ನು ಪೂಜಿಸಿದ ಮೇಲೆ ನೋಡಿ ನಮ್ಮ ಮ್ಯೂಸಿಯಂ ಎಷ್ಟು ಬೆಳೆದಿದೆ' ಎಂದಿದ್ದರು! (ಸಣ್ಣ ಕಟ್ಟಡಲ್ಲಿದ್ದುದು ಈಗ ಫಿಲಡೆಲ್ಫಿಯಾದ ಸುಸಜ್ಜಿತವಾದ ಶತಮಾನೋತ್ಸವ ಕಟ್ಟಡಕ್ಕೆ ವರ್ಗವಾಗಿದೆ. ಇಲ್ಲಿನ ಪ್ರಮುಖ ಸಂಸ್ಥೆಗಳಲ್ಲೊಂದಾಗಿದೆ.)

ಹೀಗೆಯೇ ಇಲ್ಲಿನ ಇನ್ನೊಂದು ವಿಖ್ಯಾತ ಸಂಸ್ಥೆ Franklin Institute ಎಂಬುದು. ಇದೊಂದು ವೈಜ್ಞಾನಿಕ ಸಂಶೋಧನಾ ಕೇಂದ್ರ ಮತ್ತು ಮ್ಯೂಸಿಯಂ. ಇಲ್ಲೊಂದು ಪ್ಲಾನಿಟೇರಿಯಮ್ ಇದೆ. ಅವರು ಈ ಸಂದರ್ಭದಲ್ಲಿ ಪ್ರಾಚೀನ ಭಾರತದಲ್ಲಿ ಖಗೋಳಶಾಸ್ತ್ರದಲ್ಲಿ ನಡೆದ ಮುನ್ನಡೆಗಳ ಬಗ್ಗೆ Chariots across the Sky ಎಂಬ ಒಂದು ಉತ್ತಮ ಪ್ರದರ್ಶನವನ್ನು ಏರ್ಪಡಿಸಿದ್ದರು. ಅದರ ಆರಂಭಗೀತೆಯಾಗಿ ವಿಮಲ 'ಏಳಯ್ಯ ಏಳು, ಏಳು ಚಿನ್ನದ ಗಿರಿ, ಏಳಯ್ಯ ಸ್ವಾಮಿ ಬೆಳುಗಾದೋ ...ಮೂಡಲಿಂದ ಸ್ವಾಮಿ ರಥವೇರಿ ಬರುತಾನೆ... ತಂದನ್ನಿ ತಾನು ತಂದೆನಾನೋ' ಎಂಬ ಜಾನಪದ ಗೀತೆಯನ್ನು ಹಾಡಿದ್ದಳು. ಆ ಗೀತೆ ಪ್ರದರ್ಶನಕ್ಕೆ ಬಂದಿದ್ದ ಪ್ರೇಕ್ಷಕರನ್ನೆಲ್ಲ ತುಂಬಾ ಆಕರ್ಷಿಸಿತ್ತು. ಆ ಸಮಯದಲ್ಲಿ ಪ್ರಸಿದ್ಧ ಇತಿಹಾಸಜ್ಞ ಡಾ. ಎಸ್. ಗೋಪಾಲ್ ಅವರೂ, ಹಿಂದೆ ಭಾರತಕ್ಕೆ ಅಮೆರಿಕದ ರಾಯಭಾರಿ ಆಗಿದ್ದವರೂ, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಅಧ್ಯಕ್ಷರೂ ಆಗಿದ್ದ ಡಾ. ರಾಬರ್ಟ್ ಗೊಹೀನ್ ಅವರೂ ಆ ಹಾಡನ್ನು ಕೇಳಿ ತುಂಬಾ ಆನಂದಪಟ್ಟಿದ್ದರು.

ಈ ಕಾರ್ಯಕ್ರಮಗಳೆಲ್ಲ ಆರೆಂಟು ವಾರ ನಡೆದವು. ಅವುಗಳಲ್ಲೆಲ್ಲ ಭಾಗವಹಿಸುವಂತಾದದ್ದು ನಮ್ಮ ಮಕ್ಕಳಿಗೂ ನಮಗೂ ತುಂಬಾ ಸಂತೋಷ ತಂದಿತ್ತು.

1982ರಲ್ಲಿ ಆಟೆನ್‌ಬರೋ ತಯಾರಿಸಿದ 'ಗಾಂಧಿ' ಚಿತ್ರ ಇಲ್ಲಿ ತೆರೆಗೆ ಬಂದಾಗ ನಾವು ನಮ್ಮ ಇಂಡಸ್ ಮಕ್ಕಳನ್ನೆಲ್ಲ ಅದನ್ನು ನೋಡಲು ಕರೆದುಕೊಂಡು ಹೋಗಿದ್ದೆವು. ಅದು ಆಗತಾನೆ ನ್ಯೂಯಾರ್ಕಿನ ಝಿಗ್‌ಫೀಲ್ಡ್ ಥಿಯೇಟರಿನಲ್ಲಿ ಬಿಡುಗಡೆಯಾಗಿತ್ತು. ನಾವೆಲ್ಲ ನಾಲ್ಕಾರು ಕಾರುಗಳಲ್ಲಿ ತುಂಬಿಕೊಂಡು ಹೋಗಿದ್ದೆವು. ನಾವು ಅಲ್ಲಿ ತಲಪುವ ಹೊತ್ತಿಗೆ ಟಿಕೆಟ್ ಕೊಳ್ಳಲು ಜನರ ಸಾಲು ಮುಕ್ಕಾಲು ಮೈಲಿ ಹರಿದಿತ್ತು. ಅದನ್ನು ನೋಡಿಯೇ ನಮ್ಮ ಹುಡುಗನೊಬ್ಬನಿಗೆ ಅಭಿಮಾನ ಉಕ್ಕಿತ್ತು. ಭಾರತಕ್ಕೆ ಸಂಬಂಧಪಟ್ಟ ಚಿತ್ರವನ್ನು ನೋಡಲು ಇಷ್ಟು ಜನ ಇಲ್ಲಿನವರು ಬಂದದ್ದು ನೋಡಿ ಅವನಿಗೆ ಬಹಳ ಸಂತೋಷವಾಗಿತ್ತು. ಹೇಗೋ ಎಲ್ಲರಿಗೂ ಜಾಗ ಸಿಕ್ಕಿತು. ಅದನ್ನು ನೋಡಿ ಬಂದಮೇಲೆ ಅದರ ಬಗ್ಗೆ ಒಂದು ಚರ್ಚೆ ಏರ್ಪಡಿಸಿದ್ದೆವು. ಮಕ್ಕಳು ತಾವು ಕಂಡದ್ದನ್ನು ತುಂಬ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಎಲ್ಲರೂ ತಮತಮಗೆ ಚಿತ್ರದಲ್ಲಿ ಯಾವ ಭಾಗ ತುಂಬಾ ಇಷ್ಟವಾಯಿತು ಎಂಬ ಬಗ್ಗೆ ಹೇಳಿದರು. ಮೇಲೆ ಹೇಳಿದ ಹುಡುಗ ಅದರ

ಅನೇಕ ಸೂಕ್ಷ್ಮ ಭಾವಗಳನ್ನು ಗುರುತಿಸಿದ್ದು ನೋಡಿ ನನಗೆ ಬಹಳ ಆಶ್ಚರ್ಯವಾಗಿತ್ತು.

'ಗಾಂಧಿ' ಚಿತ್ರ ಇಲ್ಲಿನ ಜನರನ್ನು ಅದ್ಭುತವಾಗಿ ಆಕರ್ಷಿಸಿತ್ತು. ದೊಡ್ಡ ಊರಿನ ಚಿತ್ರಮಂದಿರಗಳಲ್ಲೇ ಅಲ್ಲದೆ ಸಣ್ಣ ಉಪನಗರಗಳ ಕೇರಿಕೇರಿಯಲ್ಲೂ ಈ ಚಿತ್ರ ಪ್ರದರ್ಶನಗೊಂಡಿತು. ಭಾರತದ ಬಗ್ಗೆ ಜನಕ್ಕೆ ಹೊಸ ಅರಿವು ಮೂಡಿಸಿತು.

ಅದೇ ಸಮಯದಲ್ಲಿ ವಿಮಲನ ತಂದೆ ಶ್ರೀ ಎಲ್. ಗುಂಡಪ್ಪನವರು ಇಲ್ಲಿ ಬಂದು ನಮ್ಮೊಂದಿಗೆ ಸುಮಾರು ಒಂದು ವರ್ಷ ಇದ್ದರು. ಇಲ್ಲಿನ ಸ್ಥಳೀಯ ಚಿತ್ರಮಂದಿರದಲ್ಲಿ 'ಗಾಂಧಿ'ಯನ್ನು ಮತ್ತೆ ನೋಡಲು ಹೋದಾಗ ಅವರೂ ನಮ್ಮ ಜೊತೆ ಬಂದಿದ್ದರು. ಪ್ರದರ್ಶನ ಮುಗಿದ ಮೇಲೆ ಇವರನ್ನು ಕಂಡ ಜನ ಗಾಂಧಿಯುಗದ ಹಿರಿಯ ಭಾರತೀಯರೊಬ್ಬರು ಅಲ್ಲಿ ಬಂದಿರುವುದನ್ನು ಕಂಡು ಅವರಿಗೆ ನಮಸ್ಕಾರ ಸಲ್ಲಿಸಿ ಗೌರವದಿಂದ ಅವರನ್ನು ಮಾತಾಡಿಸಿ ಅನೇಕ ಪ್ರಶ್ನೆಗಳನ್ನು ಕೇಳಿದ್ದರು. ನಮ್ಮ ಮಗನ ಸ್ನೇಹಿತರು ಅವರ ಖಾದಿ ಬಟ್ಟೆ, ಬೊಕ್ಕ ತಲೆ ನೋಡಿ ಅವರನ್ನೇ 'ಗಾಂಧಿ' ಎನ್ನುತ್ತಿದ್ದರು ಕೂಡ!

ನಮ್ಮ ಮಕ್ಕಳಿಗೂ ಅವರು ಇಲ್ಲಿ ನಮ್ಮೊಂದಿಗೆ ಕಳೆದ ಕಾಲ ಬಹಳ ಉಪಯುಕ್ತವಾಗಿತ್ತು. ನಮ್ಮ ಸ್ವಂತ ಧರ್ಮವನ್ನು ಮಾತ್ರವಲ್ಲದೆ ಕ್ರೈಸ್ತ ಧರ್ಮವನ್ನೂ ಚೆನ್ನಾಗಿ ಅರಿತಿದ್ದ ಅವರ ಜೊತೆ ಮಕ್ಕಳು ನಾನಾ ಪ್ರಶ್ನೆಗಳನ್ನು ಕೇಳಿ ಸಂಭಾಷಣೆ ನಡೆಸುತ್ತಿದ್ದರು. ಅಂಥ ಹಿರಿಯರೊಬ್ಬರು ನಮ್ಮ ಸಂಸ್ಕೃತಿಯ ಪ್ರತಿನಿಧಿಯಾಗಿ ಅವರಿಗೆ ದೊರಕಿದ್ದು ಅವರಿಗೆ ಬಹಳ ಪ್ರಯೋಜನವಾಯಿತು.

ಇಂಡಸ್‌ನಲ್ಲಿ ನಾವು ಪಡೆದ ಇನ್ನೊಂದು ಅನುಭವ ಇಲ್ಲಿ ಹೇಳಬೇಕು. ಇಲ್ಲಿನ ಎಷ್ಟೋ ಜನ ಭಾರತದ ಅನಾಥ ಮಕ್ಕಳನ್ನು ದತ್ತು ತೆಗೆದುಕೊಂಡಿದ್ದಾರೆ. ಬಹು ಮಂದಿ ತಾಯಿ ಟೆರೇಸಾ ಅವರ ಅನಾಥಾಲಯದಿಂದ ಬಂದ ಮಕ್ಕಳು. (ಇಲ್ಲಿ ನಮ್ಮ ಮಕ್ಕಳು ತಮ್ಮ ತಂದೆತಾಯಿಯರೊಂದಿಗೆ ಬೆಳೆಯುತ್ತಿದ್ದಾಗಲೇ ಅವರಿಗೆ ಅನನ್ಯತೆಯ ಪ್ರಶ್ನೆ ಎದುರಾದರೆ, ಇನ್ನು ಈ ಅನಾಥ ಮಕ್ಕಳ ಪಾಡೇನು?) ಇಂಥ ಮಕ್ಕಳನ್ನು ದತ್ತು ತೆಗೆದುಕೊಂಡ ಇಲ್ಲಿನ ಅನೇಕರನ್ನು ಆಹ್ವಾನಿಸಿ ಆ ಮಕ್ಕಳು ನಮ್ಮ ಇತರ ಮಕ್ಕಳೊಂದಿಗೆ ಇಂಡಸ್ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಒದಗಿಸಿದೆವು. 'ನಮ್ಮನ್ನು ಇತರ ಯಾವ ಭಾರತೀಯ ಸಂಸ್ಥೆಯವರೂ ಗಮನಿಸಿರಲಿಲ್ಲ, ನೀವು ಮಾತ್ರವೇ ನಮ್ಮ ಮಕ್ಕಳನ್ನು ಪ್ರೀತಿಯಿಂದ ಬರಮಾಡಿಕೊಂಡಿರಿ' ಎಂದು ಒಬ್ಬ ತಾಯಿ ಕಳಕಳಿಯಿಂದ ಹೇಳಿದ್ದಳು.

ಸುಮಾರು 15 ವರ್ಷ ಈ ಸಂಸ್ಥೆ ನಡೆಸಿದೆವು. ಸದ್ಯದಲ್ಲಿ ಅದು ನಿಂತಿದೆ. ಅದು ಮಾಡುತ್ತಿದ್ದ ಕೆಲವು ಕೆಲಸಗಳನ್ನಾದರೂ ಈಗಿನ ಇತರ ಸಂಸ್ಥೆಗಳವರು ಮಾಡುತ್ತಿದ್ದಾರೆ (ಉದಾ: ನೃತ್ಯ ಶಿಕ್ಷಣ). ಆದರೆ ಅದರಂತೆ ನಮ್ಮ ಮಕ್ಕಳಿಗೆ ಇಲ್ಲಿನ ಹಿರಿಯ ಸಂಸ್ಥೆಗಳೊಂದಿಗೆ ಕೆಲಸ ಮಾಡುವ ಅವಕಾಶವನ್ನು ಇತರರು ಹೆಚ್ಚಾಗಿ ಒದಗಿಸುತ್ತಿಲ್ಲ

ಎನ್ನಿಸುತ್ತದೆ. ಇಂಡಸ್‌ನಂಥ ಸಂಸ್ಥೆ ಮಕ್ಕಳಿಗೆ ಯಾವಾಗಲೂ ಬೇಕಾದದ್ದು ಎಂದು ನನ್ನ ಭಾವನೆ. ಎಂತಿದ್ದರೂ ಇಲ್ಲಿನ ಮಕ್ಕಳು ಕಡೆಗೆ ಅಮೆರಿಕತ್ವವನ್ನೆ ಮೈಗೂಡಿಸಿಕೊಳ್ಳುವವರು, ಆದ್ದರಿಂದ ಇಂಡಸ್‌ನಂಥ ಸಂಸ್ಥೆಗಳು ಕಡೆಯಲ್ಲಿ ಸೋಲುವುದೇ ಖಾತ್ರಿ ಎಂದು ಒಬ್ಬರು ಅಂದಿದ್ದರು. ಮಕ್ಕಳು ಬೆಳೆದಂತೆ ಅಮೆರಿಕನ್ ಸಂಸ್ಕೃತಿಗೇ ಒಗ್ಗಿಕೊಳ್ಳಬಹುದು. ಆದರೆ ಹಾಗೆಂದು ನಾವು ಏನೂ ಮಾಡದೆ ಸೋಲುವುದಕ್ಕಿಂತ ಏನಾದರೂ ಮಾಡಿ ಸೋಲುವುದು ವಾಸಿ. ನನಗೇನೋ ನಾವು ಮಾಡಿದ್ದು ವ್ಯರ್ಥ ಎಂದು ಯಾವಾಗಲೂ ಅನಿಸಿಲ್ಲ. 1980ರ ದಶಕದಲ್ಲಿ ಇಲ್ಲಿ ಪ್ರವಾಸ ಕೈಗೊಂಡಿದ್ದ ಸುಪ್ರಸಿದ್ಧ ಕನ್ನಡ ಲೇಖಕ ಶ್ರೀ ವ್ಯಾಸರಾಯ ಬಲ್ಲಾಳರು ನಮ್ಮ ಸಂಸ್ಥೆಯ ದೂರದೃಷ್ಟಿ, ಕಾರ್ಯನಿರ್ವಹಣೆಯನ್ನು ಮೆಚ್ಚಿ ತಮ್ಮ ಪುಸ್ತಕ 'ನಾನೊಬ್ಬ ಭಾರತೀಯ ಪ್ರವಾಸಿ'ಯಲ್ಲಿ 'ಭವಿಷ್ಯತ್ತಿನ ಕಡೆ ದೃಷ್ಟಿಯಿರುವ ಇಂಥ ಪ್ರಯತ್ನಗಳನ್ನು ಎಷ್ಟು ಹೊಗಳಿದರೂ ಸಾಲದು' ಎಂದಿದ್ದಾರೆ. ವಲಸೆಗಾರರ ಅನನ್ಯತೆಯ ಬಗ್ಗೆ ಸೂಕ್ಷ್ಮಸಂವೇದನೆಯಿಂದ ಚಿಂತಿಸಿರುವ ಅವರ ಆಲೋಚನೆಗಳು ಗಣನೀಯವಾದದ್ದು. ಅದೇಂತಾದರೂ, ತಮ್ಮ ಬಾಲ್ಯದಲ್ಲಿ ಇಂಡಸ್ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದು ಈಗ ತಾವೇ ತಾಯಿತಂದೆಯರಾಗಿರುವ ಎಷ್ಟೋ ಮಂದಿ ಅದನ್ನು ಈಗಲೂ ಖುಷಿಯಿಂದ, ಕೃತಜ್ಞತಾ ಭಾವದಿಂದ ನೆನೆಸಿಕೊಳ್ಳುವುದು ನಮ್ಮ ಪ್ರಯೋಗಕ್ಕೆ ಅವರು ಸಲ್ಲಿಸುವ ಪ್ರೀತಿಯ ಕಾಣಿಕೆ ಎಂದು ನಮ್ರನಾಗಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ಇಬ್ಬರು ಹಿರಿಯರನ್ನು ನೆನೆಯಬೇಕು. ನನಗೆ ಈ ವಿಚಾರದಲ್ಲಿ ಸ್ಫೂರ್ತಿ ನೀಡಿದವರು ಅವರೇ. ಒಬ್ಬರು 1930ರ ದಶಕದಲ್ಲಿಯೇ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಾಲೆಯಲ್ಲಿ ಸಿಕ್ಕದ ಅವಕಾಶಗಳನ್ನು ಕಲ್ಪಿಸುವಂಥ ಅಖಿಲ ಕರ್ನಾಟಕ ಮಕ್ಕಳ ಕೂಟ ಎಂಬ ಸಂಸ್ಥೆಯನ್ನು ಕಟ್ಟಿದ ಮಹಾತಾಯಿ ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮನವರು. ಇನ್ನೊಬ್ಬರು, ಕಲ್ಯಾಣಮ್ಮನವರ ಪ್ರಥಮ ಶಿಷ್ಯೆಯಾಗಿ ಅವರೊಡನೆ ಶ್ರದ್ಧೆಯಿಂದ ಕೆಲಸಮಾಡಿ ಮುಂದೆ ಅದೇ ರೀತಿ ಮೈಸೂರಲ್ಲಿ ಮೈಸೂರು ಮಕ್ಕಳ ಕೂಟ ಎಂಬ ಸಂಸ್ಥೆ ಸ್ಥಾಪಿಸಿ ಅದರ ಮೂಲಕ ನೂರಾರು ಚೇತನಗಳನ್ನು ಬೆಳಗಿಸಿದ ನಮ್ಮ ತಾಯಿ ಶ್ರೀಮತಿ ಎಚ್.ವೈ. ಸರಸ್ವತಿಯವರು. ಅವರಿಗೆ ನಾನು ಸದಾ ಕೃತಜ್ಞ.

ಭಾಷೆ

ಸಂಸ್ಕೃತಿ ಭಾಷೆಗಳಿಗಿರುವ ಸಂಬಂಧ ನಿಕಟವಾದದ್ದು. ಒಂದು ಸಂಸ್ಕೃತಿಯನ್ನು ಅದಕ್ಕೆ ಸಂಬಂಧಪಟ್ಟ ಭಾಷೆಯ/ಗಳ ಮೂಲಕವೇ ತಿಳಿದುಕೊಳ್ಳುವುದು ಸಾಧ್ಯವಾದರೆ ಅದು ಉತ್ತಮ. ಅದರಿಂದ ನಮ್ಮ ಮಕ್ಕಳು ಅದನ್ನು (ಪ್ರಸ್ತುತ ಸಂದರ್ಭದಲ್ಲಿ ಕನ್ನಡ) ಕಲಿಯಲಿ, ಅದರಲ್ಲಿ ಪ್ರವೀಣರಾಗದಿದ್ದರೂ ಅದನ್ನು ತಕ್ಕಮಟ್ಟಿಗೆ ಚೆನ್ನಾಗಿ ಕಲಿಯಲಿ ಎಂಬಾಸೆ ತಂದೆತಾಯಿಯರಿಗೆ ಇರುವುದು ಸಹಜ. ಅದರಲ್ಲೂ ನಮ್ಮಂಥ ಮೊದಲ

ಪೀಳಿಗೆಯವರಿಗೆ. ಆದರೆ ಅದನ್ನು ಸಾಧಿಸುವುದು ಸುಲಭದ ಮಾತಲ್ಲ.

ಈ ವಿಷಯದಲ್ಲಿಯೂ ಸಹ ನಮ್ಮ ಆಸೆಗಳು ಏನಿದ್ದರೂ ಕೆಲವು ವಾಸ್ತವಾಂಶಗಳನ್ನು ನಾವು ಗಮನಿಸಬೇಕು. ಇಲ್ಲಿ ಬೆಳೆಯುತ್ತಿರುವ ನಮ್ಮ ಮಕ್ಕಳಿಗೆ ಕನ್ನಡ ಏಕೆ ಬೇಕು? ಅದು ಇಲ್ಲಿನ ಜನರೊಡನೆ ಸಂಪರ್ಕ ಬೆಳಸುವ ಭಾಷೆಯಲ್ಲ. ಗೆಳೆಯರೊಡನೆ ಅದನ್ನು ಮಾತಾಡುವಂತಿಲ್ಲ. ಶಾಲೆಯಲ್ಲಿ ಅದನ್ನು ಓದಬೇಕಿಲ್ಲ, ಮನೆಯ ಹೊರಗೆ ಎಲ್ಲಿ ಹೋದರೂ ಅವರು ಬಳಸುವ ಭಾಷೆ ಬಹುಮಟ್ಟಿಗೆ ಇಂಗ್ಲಿಷೇ. ಆದ್ದರಿಂದ ಅದನ್ನು ಕಲಿಯುವ ಅವಶ್ಯಕತೆ ಅವರಿಗೆ ಕಾಣುವುದಿಲ್ಲ. ಅದು ತಮ್ಮ ಮೂಲ ಸಂಸ್ಕೃತಿಗೆ ಒಂದು ಕೊಂಡಿ ಎಂಬ ಅರಿವು ಅವರಿಗೆ ಆಗಿನ್ನೂ ಸಾಕಷ್ಟು ಮೂಡಿರುವುದಿಲ್ಲ. ಆದ್ದರಿಂದ ಅದನ್ನು ಕಲಿಯಲು ಹೊರಗಿನಿಂದಾಗಲಿ ತಮ್ಮ ಒಳಗಿನಿಂದಾಗಲಿ ಯಾವ ಪ್ರಚೋದನೆಯೂ ಇರುವುದಿಲ್ಲ. ಈಗಂತೂ ಎಷ್ಟೋ ಮಂದಿ ಕನ್ನಡ ಮೂಲದವರು ಇಲ್ಲಿನ ಜನರನ್ನು, ಅಂದರೆ ಅಮೆರಿಕದ ಕ್ರಿಶ್ಚಿಯನ್, ಯೆಹೂದೀ ಮತಗಳವರನ್ನು ಮದುವೆಯಾಗುತ್ತಿದ್ದಾರೆ. ಅಂಥವರ ಮಕ್ಕಳಿಗೆ ಮನೆಯಲ್ಲಿ ಕನ್ನಡ ಕಲಿಯಲು ತಕ್ಕ ವಾತಾವರಣವೂ ಇರುವುದಿಲ್ಲ. ಇದನ್ನೆಲ್ಲ ಗಮನಿಸದೆ ನಿಮ್ಮ ಮಕ್ಕಳು ಏಕೆ ಕನ್ನಡ ಮಾತಾಡುವುದಿಲ್ಲ ಎಂದು ಕೆಲವರು ಕರ್ನಾಟಕದಿಂದ ಬಂದವರು ಅನ್ನುವುದನ್ನು ಕೇಳಿದ್ದೇನೆ. ಆದರೂ ಹೆಚ್ಚಿನ ಪಾಲು ಮಕ್ಕಳು ಅದು ತಮ್ಮ ತಾಯಿತಂದೆಯರ, ಅಜ್ಜಿತಾತಂದಿರ ಮನೆಮಾತು ಎಂಬ ಅತ್ಮೀಯ ಸಂಬಂಧವನ್ನು ಗುರುತಿಸುತ್ತಾರೆ.

ಸಾಧಾರಣವಾಗಿ ಮಕ್ಕಳು ಶಾಲೆಗೆ ಹೋಗುವವರೆಗೆ – ಅಂದರೆ ಸುಮಾರು ನಾಲ್ಕನೆಯ ವಯಸ್ಸಿನಲ್ಲಿ ಕಿಂಡರ್ಗಾರ್ಟನ್ ಶಾಲೆಗಿಂತಲೂ ಮುಂಚೆ Pre-Schoolಗೆ ಹೋಗುವವವರೆಗೆ – ಮನೆಯಲ್ಲಿ ಕನ್ನಡ ಚೆನ್ನಾಗಿ ಕಲಿತಿರುತ್ತಾರೆ. ಆದರೆ ಈಗಲೀಗ, ಹೆಚ್ಚು ಮಂದಿ ತಾಯಂದಿರು ಹೊರಗೆ ಕೆಲಸ ಮಾಡುವುದರಿಂದ ಮಕ್ಕಳು ಇನ್ನೂ ಚಿಕ್ಕ ವಯಸ್ಸಿಗೇ Day Care Centerಗೆ ಹೋಗಲು ಮೊದಲುಮಾಡುತ್ತಾರೆ. ಅಲ್ಲಿ ಅವರ ಕಿವಿಗೆ ಬೀಳುವುದೆಲ್ಲ ಇಂಗ್ಲಿಷೇ. ಹೀಗೆ ಮನೆಯಿಂದ ಹೊರಗೆ ಹೋಗಲು ಪ್ರಾರಂಭಿಸಿದ ಮೇಲೆ, ಇಂಗ್ಲಿಷಿನ ಪ್ರಭಾವ ಹೆಚ್ಚಿ ಕನ್ನಡ ಬೇಗ ಹಿಂದೆ ಬೀಳುತ್ತದೆ.

ಇಲ್ಲಿ ಬೆಳೆದ ಬಹು ಮಂದಿ ಮಕ್ಕಳಿಗೆ ಬೆಳೆದು ದೊಡ್ಡವರಾದಂತೆಲ್ಲ ಮನೆಯ ಪರಿಸರದಲ್ಲಿ ಕೇಳಿಬರುವ ಕನ್ನಡದ ಆಡುಮಾತು ಅರ್ಥವಾಗುತ್ತದೆ, ಆದರೆ ಅದರಲ್ಲೇ ಉತ್ತರ ಕೊಡುವಷ್ಟು ಸಾಮರ್ಥ್ಯ ಇರುವುದಿಲ್ಲ. ಕನ್ನಡ ಓದು ಬರಹ ಗೊತ್ತಿರುವುದು ಬಹಳ ಅಪರೂಪ. ನನಗೆ ತಿಳಿದ ಹಲವು ತಂದೆತಾಯಿಯರು ಈ ವಿಚಾರದಲ್ಲಿ ತುಂಬಾ ಮುತುವರ್ಜಿ ವಹಿಸಿ ತಮ್ಮ ಮಕ್ಕಳಿಗೆ ಚೆನ್ನಾಗಿ ಕನ್ನಡ ಮಾತನಾಡುವುದನ್ನು ಕಲಿಸಿರುವುದು ಶ್ಲಾಘನೀಯ.

ನಮ್ಮಲ್ಲಿ ಹಲವಾರು ಕನ್ನಡ ಕೂಟಗಳು ಮಕ್ಕಳಿಗಾಗಿ 'ಕನ್ನಡ ಕಲಿ' ಎಂಬ

ಕಾರ್ಯಕ್ರಮ ನಡೆಸುತ್ತಿರುವುದು ಒಂದು ಗಣನೀಯ ವಿಚಾರ. ಹಲವಾರು ತಂದೆತಾಯಿಯರು ಇದಕ್ಕಾಗಿ ಬಹಳ ಶ್ರಮವಹಿಸಿ ಇದನ್ನು ಒಂದು ಸೇವಾಕಾರ್ಯದಂತೆ ನಡೆಸುತ್ತಿದ್ದಾರೆ. ಆದರೆ, ಇಲ್ಲಿಯೂ ಕ್ರಮವಾಗಿ ಹಂತಹಂತವಾಗಿ ಮೇಲೇರುವ ಅವಕಾಶ, ವ್ಯವಸ್ಥೆ ಕಾಣುವುದಿಲ್ಲ. (ಇಲ್ಲಿನ ಚೀನೀಯರು ಮಕ್ಕಳಿಗೆ ತಮ್ಮ ಭಾಷೆ ಕಲಿಸುವ ಸುವ್ಯವಸ್ಥಿತ ಶಾಲೆಗಳನ್ನು ನಡೆಸುತ್ತಿರುವುದನ್ನು ಗಮನಿಸಬೇಕು. ಅವರಲ್ಲಿ, ಹಿರಿಯರೊಡನೆ ತಮ್ಮದಲ್ಲದ ಬೇರೊಂದು ಭಾಷೆಯಲ್ಲಿ ಮಾತಾಡುವುದು ಅವರಿಗೆ ಅಗೌರವ ತೋರಿಸಿದಂತೆ ಎಂಬ ಭಾವನೆಯಿದೆಯಂತೆ.) ಇಲ್ಲಿನ ಕೆಲವೇ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಲಿಯುವ ಅವಕಾಶವಿದೆ. ಫಿಲಡೆಲ್ಫಿಯಾದ ಯೂನಿವರ್ಸಿಟಿ ಆಫ್ ಪೆನ್ಸಿಲ್ವೇನಿಯಾದಲ್ಲಿ ಅಂಥ ಅವಕಾಶವುಂಟು. ವಿದ್ಯಾರ್ಥಿಗಳು ಅದನ್ನು ಕ್ರೆಡಿಟ್‌ಗೆ (ಅಂದರೆ ತಮ್ಮ ಪದವಿ ಪಡೆಯಲು ಬೇಕಾದ ವಿಷಯಗಳಲ್ಲಿ ಒಂದಾಗಿ) ತೆಗೆದುಕೊಳ್ಳಬಹುದು. ಅದನ್ನು ಅವರ ಅಧಿಕೃತ transcriptನಲ್ಲಿಯೂ (ಅಂದರೆ ವಿದ್ಯಾಲಯ ಅವರಿಗೆ ಕೊಡುವ ಅವರ ಪಠ್ಯವಿಷಯಗಳ, ಅವುಗಳಲ್ಲಿ ಅವರು ಪಡೆದ ಶ್ರೇಣಿಗಳ ಅಧಿಕೃತ ಪಟ್ಟಿ) ನಮೂದಿಸಿರುತ್ತಾರೆ. ವಿಮಲ ಅಲ್ಲಿ ಸುಮಾರು ಹತ್ತು–ಹನ್ನೆರಡು ವರ್ಷ ಪಾಠ ಹೇಳಿದ್ದಾಳೆ, ಅಲ್ಲಿನ ತನ್ನ ಅನೇಕ ಅನುಭವಗಳನ್ನು ನನ್ನೊಡನೆ ಹಂಚಿಕೊಂಡಿದ್ದಾಳೆ. ಕನ್ನಡಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಹಿಂದಿ, ಗುಜರಾತಿಗಳಿಗೆ ಬಹು ಹೆಚ್ಚು. ಕೆಲವು ವಿದ್ಯಾರ್ಥಿಗಳು 'ನನಗೇನೋ ಕನ್ನಡ ತೆಗೆದುಕೊಳ್ಳಲು ಇಷ್ಟ, ಆದರೆ ನಮ್ಮ ತಂದೆ ತಾಯಿ ಅದರಲ್ಲಿ ಸಾಕಷ್ಟು ಒಳ್ಳೆಯ ಗ್ರೇಡ್ ಸಿಕ್ಕುವುದಿಲ್ಲ ಎಂದರು' ಎಂದೋ, 'ಕನ್ನಡಕ್ಕಾಗಿ ಅಷ್ಟು ಹಣ ಯಾಕೆ ಖರ್ಚುಮಾಡಬೇಕು ಎಂದರು' ಎಂದೋ ಹೇಳುತ್ತಾರೆ. ಆದರೆ ಕಲಿತವರು ಕೆಲವರು, 'ನಮ್ಮ ಅಜ್ಜಿಗೆ ಕನ್ನಡದಲ್ಲೇ ಕಾಗದ ಬರೆದಿದ್ದೆ, ತುಂಬಾ ಸಂತೋಷಪಟ್ಟು ಉತ್ತರ ಬರೆದಿದ್ದಾರೆ' ಎಂದೋ, ಕ್ಲಾಸಿನಲ್ಲಿ ಬೇಂದ್ರೆಯವರ 'ನನ್ನ ಹರಣ, ನಿನಗೆ ಶರಣ' ಪಾಠ ಮಾಡಿದಾಗ, 'ನಮ್ಮ ತಾಯಿ ಯಾವಾಗಲೂ ಇದನ್ನು ಹಾಡುತ್ತಿರುತ್ತಾರೆ' ಎಂದೋ ಹೇಳಿದಾಗ ಅವರಲ್ಲಿ ಜಾಗೃತವಾದ ಸಾಂಸ್ಕೃತಿಕ ಪ್ರಜ್ಞೆ ಎಷ್ಟು ಮೂಲಭೂತವಾದದ್ದು, ಭಾವನಾತ್ಮಕ ಸಂಬಂಧ ಎಷ್ಟು ಆಳವಾದದ್ದು ಎಂಬುದು ಸ್ಪಷ್ಟವಾಗಿ ತೋರುತ್ತದೆ.

ಮಕ್ಕಳು ಒಳ್ಳೆ ಕನ್ನಡ ಕಲಿಯಬೇಕಾದರೆ ಒಳ್ಳೆ ಕನ್ನಡ ಅವರ ಕಿವಿಗೆ ಬೀಳಬೇಕು. ಇದಕ್ಕೆ ಅವಕಾಶ ಸಿಕ್ಕುವುದು ಅವರವರ ಮನೆಗಳಲ್ಲಿ, ಭಾರತಕ್ಕೆ ಹೋದಾಗ ಅವರ ನೆಂಟರ ಮನೆಗಳಲ್ಲಿ, 'ಕನ್ನಡ ಕಲಿ' ತರಗತಿಗಳಲ್ಲಿ, ಕನ್ನಡ ಕೂಟಗಳಲ್ಲಿ. ಆದರೆ ಕೆಲವು ಸಲ ಭಾರತಕ್ಕೆ ಹೋದಾಗ ಅಲ್ಲಿನ ಮಕ್ಕಳು ಇವರೊಡನೆ ಇಂಗ್ಲಿಷಿನಲ್ಲೇ ಮಾತನಾಡಲು ಮೊದಲು ಮಾಡುತ್ತಾರೆ (ದೊಡ್ಡವರೂ ಹೀಗೆ ಮಾಡುವುದನ್ನು ನೋಡಿದ್ದೇನೆ). ಇನ್ನು ಇಲ್ಲಿನ ಕನ್ನಡ ಸಂಘಗಳ ಬಗ್ಗೆ ಒಂದು ಮಾತು ಹೇಳಬೇಕು. ಮೊನ್ನೆ ಇಲ್ಲೊಂದು ಕನ್ನಡ ಕೂಟದ ಕಾರ್ಯಕ್ರಮಕ್ಕೆ ಹೋಗಿದ್ದೆ. ಒಬ್ಬ ಹೈಸ್ಕೂಲು ವಿದ್ಯಾರ್ಥಿನಿ ತನಗೆ ಕೊಟ್ಟಿದ್ದ ಕಾರ್ಯಕ್ರಮವನ್ನು ಸಾಧ್ಯವಾದಷ್ಟು ಮಟ್ಟಿಗೂ ಕನ್ನಡದಲ್ಲೇ ನಿರ್ವಹಿಸಿದಳು.

ದೊಡ್ಡವರು, ಕೂಟದ ಪದಾಧಿಕಾರಿಗಳು ಮಾತ್ರ ಎಲ್ಲ ಇಂಗ್ಲಿಷಿನಲ್ಲೇ ಮಾತಾಡಿದರು! ಮಕ್ಕಳಿಗೆ ಇದು ಎಂಥ ಪಾಠ?

ನಮ್ಮ ಮಕ್ಕಳಿಗೆ ಕನ್ನಡದಲ್ಲಿ ಪ್ರಾವೀಣ್ಯ ಇಲ್ಲದಿದ್ದರೂ ಅದಕ್ಕೂ ನಮ್ಮ ಸಂಸ್ಕೃತಿಗೂ ಇರುವ ಸಂಬಂಧವನ್ನು ಅವರು ಗುರುತಿಸಿದ್ದಾರೆ ಎಂಬುದನ್ನು ಅವರ ಕೆಲವು ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ: ಇಲ್ಲಿನ ಸಂಸ್ಕೃತಿಯ ಪ್ರಕಾರ ಊಟದಲ್ಲಿ ಒಂದೊಂದು ಪದಾರ್ಥವನ್ನೂ ಬೇರೆಬೇರೆಯಾಗಿ ತಿನ್ನುವುದು ಕ್ರಮ. ನಮ್ಮಲ್ಲಿ ಎಲ್ಲವನ್ನೂ ಕಲಸಿಕೊಂಡು ತಿನ್ನುವುದು ಕ್ರಮ. ನಮ್ಮ ಮಕ್ಕಳು ದೊಡ್ಡವರಾದ ಮೇಲೂ, 'Amma, can you please ಕಲ್ಸ್ it for me?' ಎಂದು ತಮ್ಮ ತಾಯನ್ನು ಕೇಳುತ್ತಿದ್ದರು. ಅವರ ಮನಸಿನಲ್ಲಿ ಕಲಸು ಎನ್ನುವುದು ಇಂಗ್ಲಿಷಿನ mixಗೆ ಸಮಾನ ಪದವಲ್ಲ. ತಾವೇ ಅನ್ನ-ಹುಳಿ, ಅನ್ನ-ಮೊಸರು, ಇತ್ಯಾದಿ ಕಲಸಿಕೊಂಡಾಗ ಅದಕ್ಕೆ ಒಂದು ರುಚಿ, ಆದರೆ ಅಮ್ಮ ಅದನ್ನು ಕಲಸಿದರೆ ಅದಕ್ಕೊಂದು ಬೇರೆಯೇ ಆದ ಸ್ವರ್ಗೀಯ ರುಚಿ ಬರುತ್ತದೆ! ಬಹುಶಃ ಅವಳ ಹೃದಯದಲ್ಲಿ ತುಂಬಿರುವ ಪ್ರೇಮ ಕೈಬೆರಳುಗಳ ಮೂಲಕ ಹರಿದು ಬರುವುದೋ ಏನೋ! ನಮ್ಮ ಹೈಸ್ಕೂಲು ರಸಾಯನಶಾಸ್ತ್ರದ ಪಾಠದಲ್ಲಿ ಹೇಳಿರಲಿಲ್ಲವೆ, ಮಿಶ್ರಣಕ್ಕೂ ಸಂಯುಕ್ತ ವಸ್ತುವಿಗೂ ವ್ಯತ್ಯಾಸವಿದೆಯೆಂದು? ತಾವೇ ಕಲಸಿಕೊಂಡಾಗ ಅದು ಕೇವಲ ಮಿಶ್ರಣ (mixture), ತಾಯಿ ಕಲಸಿದರೆ ಆಗ ಅಲ್ಲೊಂದು ರಾಸಾಯನಿಕ ಕ್ರಿಯೆ ನಡೆದು ಅದು ಒಂದು ಸಂಯುಕ್ತ ಪದಾರ್ಥ (compound) ಆಗುತ್ತದೆ! ಹಾಗೆಯೇ ಮಕ್ಕಳು ತಮಗೆ ಬೆನ್ನು ನೋವೋ ಕತ್ತು ನೋವೋ ಆದಾಗ, can you please ಅವುಕ್ me here ಎಂದೇ ಕೇಳುವುದು. ತಮ್ಮ ಸೂಪ್ ತುಂಬಾ ಬಿಸಿಯಾಗಿದ್ದರೆ can you please ಉಫ಼್ it? ಹೀಗೇ 'ಗೋಳುಹುಯ್ಕೊಳ್ಳಿಂಗ್' ಎಂಬ ಪ್ರಯೋಗವನ್ನೂ ಒಬ್ಬರ ಮನೆಯಲ್ಲಿ ಕೇಳಿದ್ದೇನೆ! ಈ ರೀತಿಯ ಕನ್ನಡ ಪದಗಳು ಅವರ ಇಂಗ್ಲಿಷ್ ಶಬ್ದಕೋಶಕ್ಕೆ ಸೇರಿಹೋಗಿವೆ.

ಹೈಸ್ಕೂಲು

ಮಕ್ಕಳು ಎಂಟನೆಯ ಗ್ರೇಡಿಗೆ ಬರುವ ಹೊತ್ತಿಗೆ ಹದಿವಯಸ್ಕರಾಗಲು ಮೊದಲಿಟ್ಟಿರುತ್ತಾರೆ. ಆಮೇಲೆ ನಾಲ್ಕು ವರ್ಷ ಹೈಸ್ಕೂಲು ಮುಗಿಸಿ ಹದಿನೆಂಟರ ಹೊತ್ತಿಗೆ ಕಾಲೇಜಿಗೆ ಕಾಲಿಡುತ್ತಾರೆ. ಹೈಸ್ಕೂಲು ಘಟ್ಟ ನಮ್ಮ ಮಕ್ಕಳಿಗೆ (ಹಾಗೂ ತಂದೆತಾಯಿಯರಿಗೆ) ಹೊಸ ಸವಾಲುಗಳನ್ನು ತರುತ್ತದೆ. ಬಾಲ್ಯ ಕಳೆದು ಯೌವನಕ್ಕೆ ಸಿದ್ಧವಾಗುವ ಈ ಸಮಯ ಜೀವನದಲ್ಲಿ ಒಂದು ಮಹತ್ವದ ಸಮಯ.

ತಮ್ಮಲ್ಲಾಗುತ್ತಿರುವ ದೈಹಿಕ ಮಾನಸಿಕ ಬದಲಾವಣೆಗಳನ್ನು ಗುರುತಿಸಿಕೊಂಡು, ತಮ್ಮ ಹೋಂ ವರ್ಕ್ ಮತ್ತು ಹಾರ್ಮೋನುಗಳ ಸಂಘರ್ಷ ತಡೆದುಕೊಂಡು, ಮನೆಗೆ ಶಾಲೆಗೆ ಸಮಾಜಕ್ಕೆ ಹೊಂದಿಕೊಂಡು ಹೋಗಬೇಕಾದ ಕಲೆಯನ್ನು ಅರಿತುಕೊಳ್ಳುವ ಒಂದು ಸಂಧಿಕಾಲ ಅದು. ಅದು ನಮಗೆಲ್ಲ ಪರಿಚಿತವಾದದ್ದೇ. ಯಾವ ಸಮಾಜದಲ್ಲೂ ಅದು ತನ್ನದೇ ಆದ ವಿಶಿಷ್ಟ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಆದರೆ ಇಲ್ಲಿ ಅದು ನಮ್ಮ ಮಕ್ಕಳಿಗೆ ಇನ್ನೂ ಪ್ರಖರವಾಗಿ ಎದುರಾಗುತ್ತದೆ. ಅವರ ಅನನ್ಯತೆಯ ಪ್ರಶ್ನೆಗಳನ್ನು, ಸಾಂಸ್ಕೃತಿಕ ದ್ವಂದ್ವಗಳನ್ನು ಇನ್ನೂ ಹೆಚ್ಚು ಸ್ಫುಟವಾಗಿ ಎತ್ತಿತೋರುತ್ತದೆ.

ನಾವು ಭಾರತದಲ್ಲಿ ಬೆಳೆಯುತ್ತಿದ್ದ ಕಾಲದಲ್ಲಿ ಹುಡುಗರು, ಹುಡುಗಿಯರು ಪ್ರತ್ಯೇಕ ಶಾಲೆಗಳಲ್ಲಿ ಓದುತ್ತಿದ್ದೆವು. ಬಹುಶಃ ಈಗಲೂ ಅಲ್ಲಿ ಅನೇಕ ಕಡೆಗಳಲ್ಲಿ ಈ ಪದ್ಧತಿಯೇ ಜಾರಿಯಲ್ಲಿರಬಹುದು. ಇಲ್ಲಿ ಹಾಗಲ್ಲ. ಎಲ್ಲೋ ಕೆಲವು ಖಾಸಗಿ ಶಾಲೆಗಳನ್ನು ಬಿಟ್ಟರೆ, ಎಲ್ಲ ಶಾಲೆಗಳಲ್ಲೂ, ಹುಡುಗ ಹುಡುಗಿಯರಿಬ್ಬರೂ ಇರುತ್ತಾರೆ. ಇಲ್ಲಿನ ಸಮಾಜದಲ್ಲಿ ಯುವಕ ಯುವತಿಯರು ತಮ್ಮ ಜೀವನಸಂಗಾತಿಗಳನ್ನು ತಾವೇ ಹುಡುಕಿಕೊಳ್ಳುವುದು ಪದ್ಧತಿಯಾದ್ದರಿಂದ ಮೊದಲಿಂದಲೂ ಅವರಲ್ಲಿ ಈ ಬಳಕೆ ಇರುವುದು ಸೂಕ್ತ. ನಮಗೆ ಅದು ಸ್ವಲ್ಪ ಹೊಸದು. ನಮ್ಮಲ್ಲೂ ಹೆಣ್ಣುಗಂಡುಗಳು ತಮ್ಮ ಪತಿಪತ್ನಿಯರನ್ನು ತಾವೇ ಹುಡುಕಿಕೊಂಡಿರುವುದು ಅಷ್ಟೇನೂ ಅಪರೂಪವಲ್ಲದಿದ್ದರೂ, ಅದೇ ರೂಢಿಯಲ್ಲ, ಬಹುಮಟ್ಟಿಗೆ ಈಗಲೂ ಅದು ವಿನಾಯಿತಿಯೇ. ಹಾಗೆ ಪರಸ್ಪರ ಅರಿತುಕೊಳ್ಳುವ, ಸಂದರ್ಭ ಒದಗುವುದು ಬಹುಶಃ ಕಾಲೇಜು ಮಟ್ಟದಲ್ಲಿ ಅಥವಾ ಅದೂ ದಾಟಿದ ಮೇಲೆ. ಇಲ್ಲಿ ಅಮೆರಿಕನ್ ಸಂಸಾರಗಳಲ್ಲಿಯೂ ಹೈಸ್ಕೂಲು ಮಕ್ಕಳ ತಂದೆತಾಯಿಯರು ಅವರನ್ನು ಇನ್ನೂ ತಮ್ಮ ಕಟ್ಟುಪಾಡಿನಲ್ಲಿ ಇಟ್ಟುಕೊಂಡಿರುತ್ತಾರಾದರೂ ಮಕ್ಕಳಿಗೆ ಅವರು ಕೊಡುವ ಸ್ವಾತಂತ್ರ್ಯ ನಮಗಿಂತ ಹೆಚ್ಚು ಎಂದೇ ಅನ್ನಿಸುತ್ತದೆ. ಇದರಿಂದ ನಮ್ಮ ಮಕ್ಕಳಲ್ಲಿ ಒಂದು ಬಗೆಯ ಕೋಪ, ಅಸಮಾಧಾನ ಬೆಳೆಯುತ್ತದೆ. ಇಲ್ಲಿನವರಿಗೆ, ತಮ್ಮ ಜೊತೆಗಾರರಿಗೆ, ಲಭ್ಯವಾಗಿರುವ ಸ್ವಾತಂತ್ರ್ಯ ಸೌಲಭ್ಯಗಳಿಂದ ತಾವು ಮಾತ್ರ ಏಕೆ ವಂಚಿತರಾಗಬೇಕು ಎಂಬ ಭಾವನೆ ಅವರಲ್ಲಿ ಬೆಳೆಯುತ್ತದೆ. ಅವರಿಗೆ ಇತರರೊಡನೆ ಕಲೆಯುವ ಅವಕಾಶಗಳು ಕಮ್ಮಿಯಾಗುತ್ತವೆ. ಇದರಿಂದಾಗಿ ಮಕ್ಕಳಿಗೆ ತಮ್ಮ ಬಗ್ಗೆ, ತಮ್ಮ ಮನೆಯ ಬಗ್ಗೆ, ತಮ್ಮ ಸಂಸ್ಕೃತಿಯ ಬಗ್ಗೆಯೇ ನಿರಸನ ಬರಬಹುದು. ಹಾಗಾಗದಂತೆ, ಅವರನ್ನು ಬೇರೆ ಕಾರ್ಯಕ್ರಮಗಳಲ್ಲಿ ತೊಡಗಿಸಿ ನೋಡಿಕೊಳ್ಳಬೇಕಾದ್ದು ಮುಖ್ಯ. ನಾನು ಹಿಂದೆ ಹೇಳಿದ ಇಂಡಸ್ ಚಟುವಟಿಕೆಗಳಲ್ಲಿ ಎಷ್ಟೋ ಮಂದಿ ಹೈಸ್ಕೂಲು ಮಕ್ಕಳೂ ಇದ್ದರು.

ನಮ್ಮ ಮನೆಗಳಲ್ಲಿ ತಂದೆತಾಯಿಯರೇ ತುಂಬಾ ವಿದ್ಯಾವಂತರಾದ್ದರಿಂದ, ಓದಿಗೆ, ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡಿ ಉತ್ತಮ ದರ್ಜೆ ಪಡೆಯುವುದಕ್ಕೆ ತುಂಬಾ ಬೆಲೆ ಕೊಡುವುದರಿಂದ, ಮಕ್ಕಳು ಸಾಧಾರಣವಾಗಿ ಓದಿನಲ್ಲಿ ಮುಂದಾಗಿರುತ್ತಾರೆ. ಆದರೆ

ಕ್ರೀಡಾರಂಗದಲ್ಲಿ ಅವರ ಸ್ಥಾನ ಸ್ವಲ್ಪ ಮಧ್ಯಸ್ಥವಾದದ್ದೇ. ನಮ್ಮ ಮಕ್ಕಳು ಇಲ್ಲಿನವರಷ್ಟು ದೃಢಕಾಯರಲ್ಲ ಎನ್ನುವುದು ಒಂದು ಕಾರಣವಾದರೂ ಮನೆಯವರ ಒತ್ತಾಸೆ, ನಿರೀಕ್ಷೆ ಎಲ್ಲ ಓದಿನ ಕಡೆಗೇ. ಇಲ್ಲಿನ ಶಾಲಾಕಾಲೇಜುಗಳಲ್ಲಿ ಫುಟ್‌ಬಾಲ್‌ಗೆ (ಇಲ್ಲಿನ ಫುಟ್‌ಬಾಲ್, ಸಾಕರ್ ಅಲ್ಲ) ಬಹಳ ಪ್ರಾಧಾನ್ಯ. ಅದರಲ್ಲಿ ಮುಂದಾಗಿರುವವರಿಗೆ ಎಲ್ಲಿಲ್ಲದ ಜನಪ್ರಿಯತೆ, ಪುರಸ್ಕಾರ, ಹೆಣ್ಣುಮಕ್ಕಳ ಒಲವು. ಈ ಆಟಕ್ಕೆ ಮಹಾ ಬಲಿಷ್ಠ ಕಾಯ ಬೇಕು (ಆ ಆಟವನ್ನೇ ವೃತ್ತಿಯಾಗಿಟ್ಟುಕೊಂಡವರ ದೈತ್ಯಾಕಾರಗಳನ್ನು ನೋಡಿದ್ದೀರಲ್ಲ!). ನಮ್ಮ ಮಕ್ಕಳು ಇನ್ನೂ ಅಷ್ಟು ಮಹಾಕಾಯರಾಗಿಲ್ಲ, ಬಹುಶಃ ಅದಕ್ಕೆ ಇನ್ನೂ ಎರಡು–ಮೂರು ತಲೆಮಾರುಗಳು ಬೇಕೇನೋ. (ನಮ್ಮ ಮಗ ಹೈಸ್ಕೂಲು ಫುಟ್‌ಬಾಲ್ ಟೀಮಿನಲ್ಲಿದ್ದನಾದರೂ ಮೇಲೆ ಹೇಳಿದ ಕಾರಣದಿಂದ ಅವನು ಆ ಆಟದಲ್ಲಿ ತುಂಬಾ ಮುಂದೆ ಬರಲು ಆಗಲಿಲ್ಲ. ಆದರೆ ಅವನಿಗೆ ಅದರಿಂದ ಅನೇಕ ಗೆಳೆಯರ ಸಖ್ಯ, ಶಾಲೆಯ ಪ್ರಮುಖ ಚಟುವಟಿಕೆಯೊಂದರಲ್ಲಿ ಭಾಗವಹಿಸಿದ ಸಂತೋಷ ದೊರೆಯಿತು.) ಫುಟ್‌ಬಾಲ್ ಒಂದೇ ಅಲ್ಲ, ಇತರ ಬಗೆಯ ವ್ಯಾಯಾಮ ಕ್ರೀಡೆಗಳಲ್ಲೂ (athletic sports), ಉದಾ: ಈಜು, ಓಟಗಳಲ್ಲಿ, ಅವರು ಇನ್ನೂ ಹೆಚ್ಚು ಮುಂದೆ ಬಂದಿಲ್ಲ. ಆದರೆ ಬೌದ್ಧಿಕ ಸ್ಪರ್ಧೆಗಳಲ್ಲಿ ನೋಡಿ, ಅವರು ಬಹಳ ಮುಂದು. ಇಲ್ಲಿ National Spelling Bee ಎಂಬ ಒಂದು ಛಾಂಪಿಯನ್‌ಶಿಪ್ ಪಂದ್ಯವಿದೆ, ಎಂಟನೇ ಗ್ರೇಡ್‌ವರೆಗಿನ ಮಕ್ಕಳಿಗೆ. ದೇಶದ ಎಲ್ಲಾ ಶಾಲೆಗಳಿಂದಲೂ ಮಕ್ಕಳು ಅದರಲ್ಲಿ ಪಾತ್ರ ವಹಿಸಬಹುದು. ವಿದ್ಯಾರ್ಥಿಗಳ ಇಂಗ್ಲಿಷ್ ಶಬ್ದಭಂಡಾರ ಬೆಳೆಸುವುದು ಇದರ ಉದ್ದೇಶ. ವಿದ್ಯಾರ್ಥಿಗಳು ತಮಗೆ ಕೊಟ್ಟ ಪದದ ಸರಿಯಾದ ಸ್ಪೆಲಿಂಗ್ ಹೇಳಬೇಕು. ಈ ಸ್ಪರ್ಧೆಯಲ್ಲಿ 1999ರಿಂದ ನಡೆದಿರುವ 14 ಪಂದ್ಯಗಳಲ್ಲಿ ಭಾರತೀಯ ಮೂಲದ ಮಕ್ಕಳು 10 ಬಾರಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಇದರಿಂದ ಅವರಿಗೆ ದೊಡ್ಡ ಮೊತ್ತದ ನಗದು ಬಹುಮಾನ (ಕಳೆದ ಬಾರಿ ಗೆದ್ದ ಹುಡುಗಿಗೆ 30,000 ಡಾಲರು ಬಹುಮಾನ ಬಂತು) ಅಲ್ಲದೆ, ಕಾಲೇಜು ವಿದ್ಯಾಭ್ಯಾಸಕ್ಕೆ ಸ್ಕಾಲರ್ಶಿಪ್ ಇತ್ಯಾದಿ ದೊರೆಯುತ್ತವೆ. (ನಮ್ಮ ಮಗಳು ಜಿಲ್ಲಾ ಮಟ್ಟದಲ್ಲಿ ಈ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಳು. ಅವಳ ಶಾಲೆಗೆ ಅಂಥ ಬಹುಮಾನ ಬಂದದ್ದು ಅದೇ ಮೊದಲು. ಎಲ್ಲರಿಗೂ ಅದು ಆಶ್ಚರ್ಯ ತಂದಿತ್ತು – ಈ ಹೊರದೇಶದ ಹುಡುಗಿ ಇದನ್ನು ಹೇಗೆ ಸಾಧಿಸಿದಳು ಎಂದು. ಹಾಗೆಂದು ಒಬ್ಬಾಕೆ ಅದನ್ನು ಕೇಳಿಯೂ ಇದ್ದರು. ಆಗ ನಮ್ಮ ಮಗಳು 'My grandfather is a lexicographer' ಎಂದಿದ್ದಳು (ಅವಳ ತಾತ ಎಲ್. ಗುಂಡಪ್ಪನವರು ನಿಘಂಟು ರಚನಕಾರರು). ಆಕೆಗೆ ಅರ್ಥವಾಗದೆ, lexicographer ಎಂದರೇನು ಎಂದು ಕೇಳಿದ್ದರು! ನಮಗೆ ಆಗ ಈ ಸ್ಪರ್ಧೆಗೆ ಇಷ್ಟೊಂದು ಮನ್ನಣೆ ಇದೆ ಎಂದಾಗಲಿ, ಜನ ಅದಕ್ಕಾಗಿ ತುಂಬಾ ಶ್ರಮವಹಿಸಿ ಮಕ್ಕಳನ್ನು ತಯಾರು ಮಾಡುತ್ತಾರೆ ಎಂದಾಗಲಿ ಗೊತ್ತಿರಲಿಲ್ಲ!) ಇದಲ್ಲದೆ Siemens Competition for Math, Science and

Technology, Intel Science Talent Search ಮುಂತಾದ ರಾಷ್ಟ್ರೀಯ ಸ್ಪರ್ಧೆಗಳೂ ಉಂಟು. 2012ರ ಇಂಟೆಲ್ ಸ್ಪರ್ಧೆಯಲ್ಲಿ ಹದಿನೇಳು ವರ್ಷದ ಯುವಕ ಪ್ರಥಮ ಸ್ಥಾನ ಗಳಿಸಿ ಒಂದು ಲಕ್ಷ ಡಾಲರ್ ಬಹುಮಾನ ಗೆದ್ದ. ಕ್ಯಾನ್ಸರ್ ಪರೀಕ್ಷೆ, ಚಿಕಿತ್ಸೆಗಳಲ್ಲಿ ನೆರವಾಗುವ ಹೊಸ ವಿಧಾನ ಇವನ ಸಂಶೋಧನೆಯಿಂದ ಕಂಡುಬಂದಿತ್ತು. ಇದು ಯಾರಿಗಾದರೂ ಹೆಮ್ಮೆ ತರುವ ವಿಷಯ. ಆದರೂ ಒಮ್ಮೊಮ್ಮೆ ನನಗನ್ನಿಸುವುದು, ನಮ್ಮಲ್ಲಿ ಒಬ್ಬ ದೊಡ್ಡ ಫುಟ್‌ಬಾಲ್ ಅಥವಾ ಬೇಸ್‌ಬಾಲ್ ಆಟಗಾರ ಹುಟ್ಟಿಬರುವವರೆಗೂ ಇಲ್ಲಿನ ಜನಸಾಮಾನ್ಯರೊಡನೆ ನಮ್ಮ ಬೆರಕೆ ಸಂಪೂರ್ಣವಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಓದಿದ್ದ ಒಂದು ಸೊಗಸಾದ ಪ್ರಬಂಧ– ರಾಂಜಿಯ ಬಗ್ಗೆ (ಹೌದು, ರಾಂಜಿ ಟ್ರೋಫಿಯ ರಾಂಜಿಯೇ) ಖ್ಯಾತ ಇಂಗ್ಲಿಷ್ ಪ್ರಬಂಧಕಾರ A.G. Gardiner ಬರೆದದ್ದು 'The Jam Sahib of Nawanagar' –ನೆನಪಿಗೆ ಬರುತ್ತದೆ. ಅದರಲ್ಲಿ ಅವನು ಹೇಳುತ್ತಾನೆ:

'... if India had sought to make herself heard and understood by the people who control her from afar, she could not have found a more triumphant missionary than the Jam Sahib, with his smile and his bat. Great Indians come to us frequently, men of high scholarship, rare powers of speech, noble character - the Gokhales, the Bannerjees, the Tagores. They come and they go, unseen and unheard by the multitude. The Jam Sahib has brought the East into the heart of our happy holiday crowds, and has taught them to think of it as something human and kindly, and keenly responsive to the joys that appeal to us...'

ಇದನ್ನು ಗಾರ್ಡಿನರ್ ಬರೆದದ್ದು ಸುಮಾರು 1934ರಲ್ಲಿ. ಬ್ರಿಟಿಷ್ ಸಾಮ್ರಾಜ್ಯಶಾಹಿತನ ಪರಾಕಾಷ್ಠೆಯಲ್ಲಿದ್ದಾಗ. ಆದರೆ ಇಂದಿಗೂ ಅವನು ಹೇಳುವುದರಲ್ಲಿ ಒಂದು ಸತ್ಯವಿದೆ. ನಾವು ಸಾಮಾನ್ಯ ಜನರಿಗೆ ಪ್ರಿಯರಾಗಬೇಕಾದರೆ ನಾವು ಅವರಿಗೆ ಪ್ರಿಯವಾದ ಆಟ ಕಲಾಪಗಳಲ್ಲಿ ಬೆರೆಯಬೇಕು. ಅವುಗಳಲ್ಲಿ ಉನ್ನತಿ ಸಾಧಿಸಬೇಕು. ನಮ್ಮ ಬುದ್ಧಿ ಶ್ರೀಮಂತಿಕೆಯಿಂದ, ಆರ್ಥಿಕ ಶ್ರೀಮಂತಿಕೆಯಿಂದ ನಾವು ನಮ್ಮದೇ ಮೇಲುವರ್ಗ (aristocracy) ಕಲ್ಪಿಸಿಕೊಂಡರೆ, ನಾವು ದ್ವೀಪವಾಸಿಗಳಾಗಿಯೇ ಇರಬೇಕಾಗುತ್ತದೆ.

ಹೈಸ್ಕೂಲು ಮೂರನೆಯ ವರ್ಷದಲ್ಲಿರುವಾಗಲೇ ವಿದ್ಯಾರ್ಥಿಗಳು ತಾವು ಮುಂದೆ ಸೇರಬೇಕಾದ ಕಾಲೇಜನ್ನು ಕುರಿತು ಯೋಚಿಸಲು ಮೊದಲು ಮಾಡಬೇಕು. ಇಲ್ಲಿ ಹೈಸ್ಕೂಲು ಮುಗಿಸಿದವರೆಲ್ಲರೂ ಸೀದಾ ಹಾಗೇ ಕಾಲೇಜಿಗೆ ಹೋಗುವಂತಿಲ್ಲ.

ಅಮೆರಿಕದ ಕಾಲೇಜು ಅಭ್ಯರ್ಥಿಗಳೆಲ್ಲ ಒಂದೆರಡು ನಿಗದಿತ ಮಟ್ಟದ ಪರೀಕ್ಷೆಗಳನ್ನು (standardized tests) ತೆಗೆದುಕೊಳ್ಳಬೇಕು: Educational Testing Service ಎಂಬ ಸಂಸ್ಥೆ ನಡೆಸುವ Scholastic Aptitude Test (SAT) ಮತ್ತು American College Testingನವರು ನಡೆಸುವ ACT ಪರೀಕ್ಷೆ. ಇವುಗಳಲ್ಲಿ ಒಂದನ್ನಾದರೂ ತೆಗೆದುಕೊಳ್ಳಲೇಬೇಕು. ಒಳ್ಳೆಯ ಉತ್ತಮ ವರ್ಗದ ಕಾಲೇಜುಗಳಲ್ಲಿ ಓದುವ ಅವಕಾಶ ಸಿಕ್ಕಬೇಕಾದರೆ (ಅಂದರೆ ನಮ್ಮ ಮಾತಿನಲ್ಲಿ 'ಸೀಟ್' ಸಿಕ್ಕಬೇಕಾದರೆ) ಇದರಲ್ಲಿ ಚೆನ್ನಾಗಿ ಉತ್ತಮ ಶ್ರೇಣಿಯಲ್ಲಿ ಪಾಸಾಗಬೇಕು. ತಮ್ಮ ಹೈಸ್ಕೂಲ್ ಓದಿನಲ್ಲಿ ಮುಂದಾಗಿರಬೇಕು. ಇಷ್ಟೇ ಅಲ್ಲದೆ, ಅವರು ಕ್ರೀಡೆ ಮತ್ತಿತರ ನಾನಾ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿರಬೇಕು. ಇದೆಲ್ಲ 'ಸಂತೆಗೆ ಮುಂಚೆ ಮೂರು ಮೊಳ ನೇಯ್ದು' ಮಾಡುವ ಕೆಲಸವಲ್ಲ. ಇಡೀ ಕಾಲ ಅದರಲ್ಲಿ ನಿರತರಾಗಿರಬೇಕು. ನನಗೆ ಒಂದೊಂದು ಸಲ ಈ ಮಕ್ಕಳು ಕಷ್ಟಪಡುವುದನ್ನು ಕಂಡು ಮರುಕವಾಗಿದೆ. ನಮ್ಮ ಬಾಲ್ಯ ಎಷ್ಟು ನಿಶ್ಚಿಂತೆಯಾಗಿ ಮಜವಾಗಿತ್ತು ಎನಿಸಿದೆ!

ಅಲ್ಲಿಂದ ಮುಂದೆ ಕಾಲೇಜು ಬೇಟೆ ಶುರು. ಇದು ಇಲ್ಲಿನ ಮಕ್ಕಳ ಜೀವನದಲ್ಲಿ (ಅವರ ತಂದೆತಾಯಿಯರ ಜೀವನದಲ್ಲೂ ಸಹ) ಒಂದು ದೊಡ್ಡ ಘಟ್ಟ. ಅಮೆರಿಕದಲ್ಲಿ 4-ವರ್ಷದ ಪದವಿ ಕಾಲೇಜುಗಳು ಸುಮಾರು 2500 ಇವೆ (ಎರಡು ವರ್ಷದ ಜೂನಿಯರ್ ಕಾಲೇಜುಗಳು, ವಿಶೇಷ ಶಿಕ್ಷಣ ನೀಡುವ ಕಾಲೇಜುಗಳು ಇತ್ಯಾದಿಯನ್ನೆಲ್ಲ ಸೇರಿಸಿದರೆ ಸುಮಾರು 7000 ಕಾಲೇಜುಗಳಿವೆ). ಇವುಗಳ ಪೈಕಿ ಪ್ರಪಂಚದಲ್ಲೆಲ್ಲ ಪ್ರಸಿದ್ಧವಾದ, ನೊಬೆಲ್ ಪಾರಿತೋಷಕ ಗಳಿಸಿದ ಪ್ರಾಧ್ಯಾಪಕರನ್ನು ಒಳಗೊಂಡಂಥ ಬೃಹತ್ ವಿಶ್ವವಿದ್ಯಾಲಯಗಳು ಇವೆ, ಸಣ್ಣ ಪುಟ್ಟ ಹಳ್ಳಿ ಕಾಲೇಜುಗಳೂ ಇವೆ. ವರ್ಷಕ್ಕೆ ಈಗಿನ ಲೆಕ್ಕದ ಪ್ರಕಾರ 50,000 ಡಾಲರು ಖರ್ಚಾಗುವ ಕಾಲೇಜುಗಳಿವೆ. ಕೇವಲ 15,000–20,000 ಡಾಲರು ಖರ್ಚಾಗುವ ಕಾಲೇಜುಗಳೂ ಇವೆ. ಇದರಲ್ಲಿ ಯಾವ ಕಾಲೇಜಿಗೆ ಹೋಗಬೇಕು? ಇದನ್ನು ನಿರ್ಧರಿಸುವುದು ಕಷ್ಟ. ಶಾಲೆಯಲ್ಲಿ ಸ್ವಲ್ಪ ಮಾರ್ಗದರ್ಶನ ಸಿಕ್ಕರೂ ವಿದ್ಯಾರ್ಥಿಗಳು ಸ್ವಂತವಾಗಿ ತುಂಬಾ ಮುತುವರ್ಜಿ ವಹಿಸಬೇಕು. ಮೊದಲು ತಾವು ಕಾಲೇಜಿನಲ್ಲಿ ಏನು ಓದಬೇಕು (ಬಹು ಕಷ್ಟದ ಪ್ರಶ್ನೆ), ಯಾವ ಶಾಸ್ತ್ರದಲ್ಲಿ ಪರಿಣತಿ ಪಡೆಯಬೇಕು ಎಂಬುದನ್ನು ಖಚಿತವಾಗಿ ಅಲ್ಲದಿದ್ದರೂ ಸ್ಥೂಲವಾಗಿಯಾದರೂ ನಿರ್ಧರಿಸಿಕೊಂಡು ಯಾವ ಕಾಲೇಜುಗಳಲ್ಲಿ ಆ ಪರಿಣತಿಗೆ ತಕ್ಕ ಅವಕಾಶ, ಉಪಾಧ್ಯಾಯ ವರ್ಗ ಇದೆ ಎಂಬ ವಿವರಗಳನ್ನೆಲ್ಲ ಕಂಡುಕೊಳ್ಳಬೇಕು. ಆ ಕಾಲೇಜು ಎಷ್ಟು ದುಬಾರಿಯದು, ಎಲ್ಲಿದೆ, ಇರಲು ವಸತಿ ಸೌಕರ್ಯ ಚೆನ್ನಾಗಿದೆಯೆ, ಅಲ್ಲಿ ಅವಕಾಶ ದೊರೆಯಬೇಕಾದರೆ SAT, ACT ಪರೀಕ್ಷೆಗಳಲ್ಲಿ ಎಷ್ಟು ಅಂಕ ಬಂದಿರಬೇಕು – ಇತ್ಯಾದಿ ವಿವರಗಳನ್ನೆಲ್ಲ ಸಂಗ್ರಹಿಸಬೇಕು. ಈ ವಿವರಗಳ ಆಧಾರದ ಮೇಲೆ ವಿದ್ಯಾರ್ಥಿಗಳು ಆರೆಂಟು ಕಾಲೇಜುಗಳಿಗಾದರೂ ಅರ್ಜಿ ಸಲ್ಲಿಸುತ್ತಾರೆ.

ಬೇರು ಸೂರು

ಈ ಅರ್ಜಿ ಸಲ್ಲಿಸುವುದು ಅಂದರೆ, ಸುಮ್ಮನೆ ತಮ್ಮ ವೈಯಕ್ತಿಕ ವಿವರಗಳನ್ನು ತಿಳಿಸಿ ತಮ್ಮ ಹೈಸ್ಕೂಲು ಓದಿನ ಫಲಿತಾಂಶ ಪತ್ರ ಸಲ್ಲಿಸಿದರೆ ಸಾಲದು. ಕಾಲೇಜು ನಿಗದಿಮಾಡುವ ಕೆಲವು ವಿಷಯಗಳ ಮೇಲೆ ಪ್ರಬಂಧ ಬರೆಯಬೇಕು. ತಮಗೆ ಈ ಕಾಲೇಜಿನಲ್ಲಿ ಏಕೆ ಆಸಕ್ತಿಯಿದೆ, ಅದಕ್ಕೂ ತಮಗೂ ಹೇಗೆ ಸಾಮರಸ್ಯವಿದೆ, ತಮ್ಮ ವಿಶಿಷ್ಟ ಅರ್ಹತೆಗಳೇನು, ಕಾಲೇಜಿನ ವಾತಾವರಣಕ್ಕೆ ತಾವು ಸಲ್ಲಿಸುವ ಕೊಡುಗೆ ಏನು – ಎಂಬ ವಿಚಾರಗಳನ್ನು ಕುರಿತು ಸುದೀರ್ಘವಾದ ಪ್ರಬಂಧಗಳನ್ನು ಬರೆಯಬೇಕು. (ಕಾಲೇಜುಗಳ ಮಾಹಿತಿ ಸಂಗ್ರಹಣೆ, ಅರ್ಜಿ ಸಲ್ಲಿಸುವಿಕೆ – ಇವನ್ನೆಲ್ಲ ಈಗ ಅಂತರ್ಜಾಲದ ಮೂಲಕ ಮಾಡಲು ಸಾಧ್ಯವಾಗಿರುವುದು ಮಕ್ಕಳಿಗೆ ಸ್ವಲ್ಪ ಅನುಕೂಲವಾಗಿದೆ.) ಇದಾದ ಮೇಲೆ, ಅಥವಾ, ಇದರ ಜೊತೆಜೊತೆಗೇ, ಮಕ್ಕಳು ತಾವು ಹೋಗಬಹುದಾದಂಥ ಕಾಲೇಜುಗಳಿಗೆ ಸ್ವತಃ ಹೋಗಿ ಆ ಸ್ಥಳ, ಅಲ್ಲಿನ ವಾತಾವರಣ, ವಸತಿ ಇವನ್ನೆಲ್ಲ ನೋಡಿಕೊಂಡು ಬರುತ್ತಾರೆ. ತಂದೆತಾಯಿಯರು ಹೀಗೆ ತಮ್ಮ ಮಕ್ಕಳನ್ನು ಹಲವಾರು ಕಾಲೇಜುಗಳನ್ನು ಸಂದರ್ಶಿಸಲು ಕರೆದುಕೊಂಡು ಹೋಗುತ್ತಾರೆ. ಇದೆಲ್ಲ ಆದ ಮೇಲೆ ತಾವು ಕಳಿಸಿದ ಅರ್ಜಿಗೆ ಕಾಲೇಜಿನವರಿಂದ ಉತ್ತರ ಬರುವುದನ್ನು ಕಾಯಬೇಕು. ಇಲ್ಲಿ ಎಲ್ಲ ಅರ್ಜಿಗಳನ್ನೂ ಶಾಲೆಗಳವರು ತಮ್ಮ ನಿಗದಿತ ನೀತಿಯ ಪ್ರಕಾರವಾಗೇ ಪರಿಶೀಲಿಸಿ ಇತ್ಯರ್ಥ ಮಾಡುತ್ತಾರೆ. ಒಂದುವೇಳೆ ಯಾರಿಗಾದರೂ ತಮಗೆ ಬೇಕಾಗಿದ್ದ ಕಾಲೇಜಲ್ಲಿ ಪ್ರವೇಶ ಸಿಕ್ಕದೆ ಹೋದರೆ, ತಮಗೆ ಯಾರೋ ಏನೋ ಅನ್ಯಾಯ ಮಾಡಿದ್ದಾರೆ ಎಂದು ಯಾರೂ ಅಂದುಕೊಳ್ಳುವುದಿಲ್ಲ. ಇಲ್ಲಿ ಯಾರೂ ಈ ಬಗ್ಗೆ 'ರಿಟ್' ಹಾಕುವುದನ್ನು ನೋಡಿಲ್ಲ!

ಇಲ್ಲಿನ ಕಾಲೇಜುಗಳಲ್ಲಿ ಶುಲ್ಕ ಬಹಳ ಹೆಚ್ಚು. ಪ್ರಖ್ಯಾತ ವಿದ್ಯಾಲಯಗಳಲ್ಲಿ (ಉದಾ: ಹಾರ್ವರ್ಡ್) ಸದ್ಯದಲ್ಲಿ ವರ್ಷಕ್ಕೆ 50,000 ಡಾಲರ್‌ವರೆಗೂ ಖರ್ಚು ಬೀಳುತ್ತದೆ (ವಸತಿಯೂ ಸೇರಿ). ಇದನ್ನು ಒದಗಿಸುವುದು ಹೇಗೆ? ಮನೆಯಲ್ಲಿ ಇಬ್ಬರು ಮೂವರು ಮಕ್ಕಳಿದ್ದರೆ ತಂದೆತಾಯಿ ಎಲ್ಲರ ಓದಿನ ಭಾರವನ್ನೂ ತಾವೇ ಹೊರುವುದು ಕಷ್ಟ, ವಿಪರೀತ ಶ್ರೀಮಂತರನ್ನು ಬಿಟ್ಟರೆ. ಈ ಖರ್ಚನ್ನು ಸರಿತೂಗಿಸಲು ಇಲ್ಲಿ ವಿವಿಧ ಮಾರ್ಗಗಳಿವೆ: ವಿದ್ಯಾರ್ಥಿಗಳು ಆ ಖರ್ಚಿನ ಒಂದು ಭಾಗವನ್ನು ಸಾಲ ಪಡೆಯಬಹುದು (student loan), ಶಾಲೆಯಲ್ಲಿರುವಾಗ ಲೈಬ್ರರಿ ಮುಂತಾದ ಕಡೆ ವಾರಕ್ಕೆ ಕೆಲವು ಗಂಟೆಗಳ ಕಾಲ ಕೆಲಸ ಮಾಡಿ ತಮ್ಮ ಖರ್ಚಿನ ಸ್ವಲ್ಪ ಭಾಗವನ್ನು ಗಳಿಸಿಕೊಳ್ಳಬಹುದು (work-study program), ತಂದೆತಾಯಿಯರು ಒಂದು ನಿರ್ದಿಷ್ಟ ಮೊತ್ತವನ್ನು ಸಾಲ ಪಡೆಯಬಹುದು (parent loan), ಮಕ್ಕಳ ವಿದ್ಯಾಭ್ಯಾಸಕ್ಕೆಂದೇ ಕೂಡಿಟ್ಟ ಉಳಿತಾಯಗಳನ್ನು (savings) ಬಳಸಬಹುದು. ವಿದ್ಯಾರ್ಥಿಗಳು ತುಂಬಾ ಉನ್ನತ ಬುದ್ಧಿಮಟ್ಟದವರಾಗಿದ್ದರೆ ಅವರಿಗೆ ಪೂರ್ತ ಶುಲ್ಕವನ್ನು ಮಾಫಿ ಮಾಡುವಂಥ ಸ್ಕಾಲರ್‌ಶಿಪ್ ದೊರೆಯಬಹುದು. ಇದಕ್ಕೆಲ್ಲ ಬೇಕಾದ ಅರ್ಜಿಗಳನ್ನು ಸಕಾಲದಲ್ಲಿ

ತಲುಪಿಸಬೇಕು. ಇದು ವಿದ್ಯಾರ್ಥಿಗಳೂ, ತಂದೆತಾಯಿಯರೂ ಒಟ್ಟಾಗಿ ಮಾಡುವ ಕೆಲಸ. ಸುಮಾರು ಕಾಲ-ಶ್ರಮ ಹಿಡಿಯುತ್ತದೆ. ಅಮೆರಿಕದ ಕಾಲೇಜುಗಳಲ್ಲಿ ಯಾವ ಒಳ್ಳೆಯ ವಿದ್ಯಾರ್ಥಿಯೂ ಹಣವಿಲ್ಲದ ಕಾರಣಕ್ಕಾಗಿ ಕಾಲೇಜಿನ ಕನಸು ತ್ಯಜಿಸಬೇಕಿಲ್ಲ ಎನ್ನುತ್ತಾರೆ. ಹೇಗಾದರೂ ಮಾಡಿ ಶಾಲೆ ಅಂಥವರಿಗೆ ಹಣ ಒದಗಿಸುತ್ತದೆ. ಸುಮಾರು 80% ವಿದ್ಯಾರ್ಥಿಗಳು ಈ ಬಗೆಯ ಆರ್ಥಿಕ ಸಹಾಯ ಪಡೆಯುತ್ತಾರೆ. ಆದರೂ ಪದವಿ ಪಡೆದು ಕಾಲೇಜಿನಿಂದ ಹೊರಬರುವ ವೇಳೆಗೆ ಪ್ರತಿ ವಿದ್ಯಾರ್ಥಿಯೂ ಒಂದು ಸಾಲದ ಹೊರೆ ಹೊತ್ತು ಬರಬೇಕಾಗುತ್ತದೆ (2011ರಲ್ಲಿ ಸರಾಸರಿ ಸಾಲದ ಮೊತ್ತ ಪ್ರತಿ ವಿದ್ಯಾರ್ಥಿಗೆ ಸುಮಾರು 26,000 ಡಾಲರು ಎಂದು ಒಂದು ವರದಿ ತಿಳಿಸುತ್ತದೆ).

ಹೈಸ್ಕೂಲಿನ ಕಡೆಯಲ್ಲಿ ಪ್ರತಿ ಶಾಲೆಯವರೂ ಅದ್ಧೂರಿಯಿದ ಹುಡುಗ ಹುಡುಗಿಯರೆಲ್ಲ ಭಾಗವಹಿಸುವ ಒಂದು ಸಾಮೂಹಿಕ ನೃತ್ಯ ಸಮಾರಂಭ (Prom) ಏರ್ಪಡಿಸುತ್ತಾರೆ. ಇಲ್ಲಿನ ಸಮಾಜದಲ್ಲಿ ಇಂಥ ಸಮಾರಂಭಗಳಿಗೆ ಬಹಳ ಮಹತ್ವ ಕೊಡುತ್ತಾರೆ. ಹುಡುಗರು, ಪ್ರತಿಯೊಬ್ಬನೂ ತನಗೆ ಬೇಕಾದ ಗೆಳತಿಯನ್ನು ತನ್ನ ಅಂದಿನ ಸಂಗಾತಿಯಾಗಿ (date) ಬರಲು ಆಹ್ವಾನಿಸಬೇಕು. ಹುಡುಗಿಯರು ತುಂಬಾ ನಾಜೂಕಿನಿಂದ ಸಿಂಗರಿಸಿಕೊಂಡು ಬರುತ್ತಾರೆ. ರಾತ್ರಿ ಸುಮಾರು ಒಂದು, ಎರಡು ಗಂಟೆಯವರೆಗೆ ಈ ಕಾರ್ಯಕ್ರಮ ನಡೆಯುತ್ತದೆ. ತಮ್ಮ ಮಕ್ಕಳನ್ನು ಯಾರೂ ಆಹ್ವಾನಿಸದೆ ಹೋದ ಸಂದರ್ಭ ಬಾರದಿರಲೆಂದು ತಂದೆತಾಯಿಯರು ಈ ವಿಚಾರದಲ್ಲಿ ತುಂಬಾ ಮುತುವರ್ಜಿ ವಹಿಸಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಹೈಸ್ಕೂಲು ಮುಗಿಸಿ ಕಾಲೇಜಿಗೆ ಹೋಗುತ್ತಿದ್ದವರೇ ಕಡಿಮೆ. ಆದ್ದರಿಂದ ಹೈಸ್ಕೂಲು ಮುಕ್ತಾಯಕ್ಕೆ ವಿಶೇಷ ಪ್ರಾಮುಖ್ಯ ಕೊಡುತ್ತಿದ್ದರು. ಆದರೆ ಈಗ ಬಹಳಷ್ಟು ಮಂದಿ ಕಾಲೇಜಿಗೆ ಹೋಗುವವರಾದರೂ ಈ ಪದ್ಧತಿ ಮುಂದುವರೆದಿದೆ.

ಹೈಸ್ಕೂಲು ವಿದ್ಯಾಭ್ಯಾಸದಲ್ಲಿ ಇನ್ನು ಉಳಿದದ್ದು ಕಡೆಯ ಪದವೀಪತ್ರ ಪ್ರದಾನ ಸಮಾರಂಭ. ಇಲ್ಲಿ ಇದನ್ನೂ graduation ceremony ಎಂದೇ ಗೌರವದಿಂದ ಕರೆಯುತ್ತಾರೆ. ಓದು, ಕ್ರೀಡೆಗಳು, ಪಠ್ಯೇತರ ಚಟುವಟಿಕೆಗಳು ಎಲ್ಲದರಲ್ಲೂ ಮುಂದಿರುವ ವಿದ್ಯಾರ್ಥಿಯನ್ನು ಮುಕ್ತಾಯ ಭಾಷಣ ನೀಡಲು ಆಹ್ವಾನಿಸುತ್ತಾರೆ. ಇಂಥ ಸಮಾರಂಭಗಳನ್ನು ಇಲ್ಲಿನವರು ನಡೆಸುವ ರೀತಿ ಬಹಳ ಅಚ್ಚುಕಟ್ಟಾಗಿರುತ್ತದೆ. ಅದರಲ್ಲಿ ಒಂದು ಗಾಂಭೀರ್ಯ, ಘನತೆ, ಉಲ್ಲಾಸ ಇರುತ್ತದೆ. ಮನೆಮಂದಿಯೆಲ್ಲ ಅದರಲ್ಲಿ ಭಾಗವಹಿಸುತ್ತಾರೆ. ಮಕ್ಕಳನ್ನು ಅಂದು ನೋಡುವುದೇ ಒಂದು ಸೌಭಾಗ್ಯ. ಅಷ್ಟು ಚೆನ್ನಾಗಿ ಶೋಭಿಸುತ್ತಿರುತ್ತಾರೆ.

ಇದು ಇಲ್ಲಿ ನಮ್ಮ ಮಕ್ಕಳು ಹೈಸ್ಕೂಲು ಮುಗಿಸುವವರೆಗಿನ ಜೀವನ. ಅಲ್ಲಿಂದ ಮುಂದೆ ಅವರ ಕಾಲೇಜು ಜೀವನ, ಉದ್ಯೋಗ, ಮದುವೆ ಇತ್ಯಾದಿ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಕ್ಕಳ ತಂದೆತಾಯಿಯರ ಸಂಬಂಧ ಬಹಳ ನಿಕಟವಾದದ್ದು. ನಮ್ಮಷ್ಟು

ಇಲ್ಲವಾದರೂ, ಇಲ್ಲಿನ ಸಂಸ್ಕೃತಿಯಲ್ಲೂ ಅದು ಬಹುಮಟ್ಟಿಗೆ ನಿಜ.

ಈ ಪಯಣ

ಇಲ್ಲಿನ ನಮ್ಮ ಜೀವನದಲ್ಲಿ ಮಕ್ಕಳನ್ನು ಬೆಳೆಸುವುದು ಒಂದು ಪ್ರಮುಖವಾದ ವಿಷಯ ಎಂದು ಮೊದಲಿಗೇ ಹೇಳಿದೆ. ಆದರೆ ನಮಗೆ ಅದೊಂದು ದೊಡ್ಡ ಸಮಸ್ಯೆಯಾಯಿತು, ಇಲ್ಲಿ ತುಂಬಾ ಕಷ್ಟಪಟ್ಟೆವು ಎಂದು ತಿಳಿಯಬಾರದು. ಮಕ್ಕಳನ್ನು ಬೆಳೆಸುವುದರಲ್ಲಿ, ಎಲ್ಲಿದ್ದರೂ, ಕೆಲವು ತಲೆನೋವಿನ ಕ್ಷಣಗಳೂ ಉಂಟು, ಅಭೂತಪೂರ್ವವಾದ ಆನಂದದ ಕ್ಷಣಗಳೂ ಉಂಟು. ಒಂದು ಮಾತಂತೂ ನಿಜ. ಇಲ್ಲಿ ಮಕ್ಕಳನ್ನು ಬೆಳೆಸುವಾಗ ಅವರ ಜೊತೆಗೇ ನಾವೂ ತುಂಬ ಬೆಳೆದಿದ್ದೇವೆ. ಇಲ್ಲಿನ ಸಮಾಜಕ್ಕೂ ನಮಗೂ ಇರುವ ಕೊಂಡಿ ಅವರೇ. ಈ ಸಮಾಜಕ್ಕೆ ಸಂಬಂಧಿಸಿದ ಎಷ್ಟೋ ವಿಚಾರಗಳು ನಮಗೆ ತಿಳಿಯುವುದು ಅವರಿಂದಲೇ. ನಾವು ನಮ್ಮ ಹೆಚ್ಚಿನ ಓದುಗಳನ್ನು ಮಾಡಿ ಕೆಲಸಗಳಲ್ಲಿ ಮೇಲೆ ಬಂದು ಸಹೋದ್ಯೋಗಿಗಳೊಂದಿಗೆ, ಇತರರೊಂದಿಗೆ ವ್ಯವಹರಿಸಿ ಇಲ್ಲಿನ ಜೀವನದ ಕೆಲವು ಮುಖಗಳನ್ನು ಅರಿತುಕೊಂಡಿರುತ್ತೇವೆ, ನಿಜ. ಆದರೆ ನಮಗೆ ಈ ಅಮೆರಿಕನ್ ಸಮಾಜದ ಮೂಲಭೂತ, ಸಾಂಸಾರಿಕ ಪರಿಚಯ ಸಿಕ್ಕುವುದು ನಮ್ಮ ಮಕ್ಕಳ, ಅವರ ಶಾಲೆಯ, ಅವರ ಸ್ನೇಹಿತರ ಮೂಲಕವೇ.

ಇಲ್ಲಿ ಮಕ್ಕಳನ್ನು ಬೆಳೆಸುವಾಗ ನಾವು ಅರಿತುಕೊಂಡ ಒಂದು ಮುಖ್ಯಾಂಶ ಮಕ್ಕಳಲ್ಲಿ ಸ್ವಾವಲಂಬನೆ. ಮೊದಲಿಂದಲೂ ಸ್ವಂತವಾಗಿ ನಿರ್ಧಾರ ಕೈಗೊಳ್ಳುವ ಶಕ್ತಿಯನ್ನು ಬೆಳೆಸುವುದು, ಉತ್ತೇಜಿಸುವುದು ಎಷ್ಟು ಮುಖ್ಯ ಎಂಬುದು. ಇದು ನಮ್ಮ ಸಂಸ್ಕೃತಿಗೂ ಇಲ್ಲಿನ ಸಂಸ್ಕೃತಿಗೂ ಇರುವ ಒಂದು ಮುಖ್ಯ ವ್ಯತ್ಯಾಸ. ನಮ್ಮಲ್ಲಿ ನಮ್ಮ ಮನೆ, ನಮ್ಮ ಸಮಾಜ, 'ಗುರುಹಿರಿಯರು' ಎಲ್ಲವನ್ನೂ ನಮಗಾಗಿ ನಿರ್ಧಾರ ಮಾಡುತ್ತಾರೆ. ಒಬ್ಬ ಮನುಷ್ಯ ಇಡೀ ಜೀವನದಲ್ಲಿ ಒಂದೂ ಸ್ವಂತ ನಿರ್ಧಾರ ಮಾಡದೆ ಬದುಕಬಹುದು. ಇಷ್ಟವಾದ ವಿಷಯವನ್ನು ಅಭ್ಯಾಸ ಮಾಡುವಂತಿಲ್ಲ, ತಂದೆ 'ಅದು ಬೇಡ, ಅದಕ್ಕೆ scope ಇಲ್ಲ, ಅದರ ಬದಲು ಈ ವಿಷಯ ತೆಗೆದುಕೋ' ಎನ್ನುತ್ತಾನೆ. (ಈ 'ಸ್ಕೋಪ್' ಎನ್ನುವ ಪದ, ಭಾರತೀಯರು ಉಪಯೋಗಿಸುವಷ್ಟು ಬಹುಶಃ ಇನ್ನಾರೂ ಉಪಯೋಗಿಸಲಾರರು!) ಮದುವೆಯನ್ನು 'ಗುರುಹಿರಿಯರು' ನಿಶ್ಚಯಿಸುತ್ತಾರೆ. (ಇದನ್ನು ಹೇಳಿದಾಗ ಕೆಲವರು, 'ಏನಿಲ್ಲ, ಈಗೆಲ್ಲ ಬದಲಾವಣೆ ಆಗಿದೆ' ಎಂದು ವಿರೋಧಿಸಬಹುದು. ಆದರೆ ಒಟ್ಟಿನಲ್ಲಿ ಇದು ಇನ್ನೂ ಬಹುಮಟ್ಟಿಗೆ ನಿಜ ಎಂದು ನನ್ನ ಭಾವನೆ.) ಇಲ್ಲಿನ ಸಮಾಜದಲ್ಲಿ ಅದು ಸಾಧ್ಯವಿಲ್ಲ. ಮಕ್ಕಳು ಹೈಸ್ಕೂಲು, ಕಾಲೇಜುಗಳಲ್ಲಿರಬೇಕಾದರೆ ಅನೇಕ ನಿರ್ಧಾರಗಳನ್ನು ಕೈಗೊಳ್ಳಬೇಕು. ಆದರೆ ಇಲ್ಲೂ ಸಹ ಅವರ ನಿರ್ಧಾರಗಳಲ್ಲಿ ನಾವು ಕೈಹಾಕುವ ಚಾಳಿ ಬಿಟ್ಟಿಲ್ಲ. ಎಷ್ಟೋ ಜನ ನಮ್ಮವರು ತಮ್ಮ ಮಕ್ಕಳು ವೈದ್ಯ ವೃತ್ತಿಗೇ ಹೋಗಬೇಕೆಂದು ಅವರನ್ನು ಬಲವಂತಪಡಿಸಿರುವುದನ್ನು

ನೋಡಿದ್ದೇನೆ (ವೈದ್ಯ ವೃತ್ತಿ ಇಲ್ಲಿ ತುಂಬಾ ವರಮಾನ ತರುವ ಪ್ರತಿಷ್ಠಿತ ವೃತ್ತಿ).

ಸ್ವಾವಲಂಬನೆಯ ಜೊತೆಗೆ ಇಲ್ಲಿನ ಜನರಲ್ಲಿ ಹುರುಪು, ಉತ್ಸಾಹ, ಕೆಚ್ಚು ತುಂಬಿದೆ. ತಾವು ತುಂಬಾ ಸಂಪದ್ಯುಕ್ತವಾದ ದೇಶ, ಆದ್ದರಿಂದ ತಾವು ಏನೂ ತಪ್ಪು ಮಾಡಿರಲಿಕ್ಕಿಲ್ಲ, ಇದೇ ಅತಿ ಶ್ರೇಷ್ಠ ದೇಶ – ಎಂಬ ಗರ್ವ ಇದ್ದರೂ ಎಂಥ ಕಷ್ಟ ಬಂದರೂ ಅದನ್ನು ಜಯಿಸುತ್ತೇವೆ ಎಂಬ ಧೈರ್ಯ, ಆತ್ಮವಿಶ್ವಾಸ ಉಳ್ಳವರು. ಎಲ್ಲವನ್ನೂ ಸರ್ಕಾರ ಮಾಡಲಿ ಎಂದು ಕೈಕಟ್ಟಿ ಕುಳಿತಿರುವವರಲ್ಲ. ಸರಕಾರದ ಪಾತ್ರ ಎಷ್ಟು ಕಡಿಮೆ ಇದ್ದರೆ ಅಷ್ಟು ಒಳ್ಳೆಯದು ಎಂಬುದು ಇಲ್ಲಿನವರ ಮೂಲಭೂತ ನಂಬಿಕೆ. ಈ ಸ್ವಾವಲಂಬನೆಯನ್ನು ಇಲ್ಲಿ ಮೊದಲಿಂದಲೂ ಮಕ್ಕಳಲ್ಲಿ ಬೆಳೆಸುತ್ತಾರೆ. ಮಕ್ಕಳು ಹನ್ನೆರಡು ವರ್ಷ ವಯಸ್ಸಾದ ಮೇಲೆ ಹೊರಗೆ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ ಸಂಪಾದಿಸುತ್ತಾರೆ. ಇದೊಂದು ಒಳ್ಳೆಯ ಅನುಭವ. ನಮ್ಮ ಮಕ್ಕಳೆಲ್ಲರೂ ಈ ರೀತಿ ಕೆಲಸಮಾಡಿ ತಮ್ಮ ಕೆಲವು ಸ್ವಂತ ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದರು.

ನನಗೆ ಬಹಳ ಮೆಚ್ಚಿಕೆಯಾಗುವ ಇನ್ನೊಂದು ವಿಷಯವೆಂದರೆ, ಇಲ್ಲಿನ ಶಾಲೆಯ ನಿಗದಿತ ಶಿಕ್ಷಣ ಕ್ರಮದಲ್ಲಿ ಕ್ರೀಡೆಗಳಂತೆಯೇ ಸಂಗೀತಕ್ಕೂ ಒಂದು ಪ್ರಮುಖ ಸ್ಥಾನವಿರುವುದು. ಎಲ್ಲ ಮಕ್ಕಳೂ ಶಾಲೆಯಲ್ಲಿ ಒಂದಲ್ಲ ಒಂದು ವಾದ್ಯ ಕಲಿಯುತ್ತಾರೆ, ಆರ್ಕೆಸ್ಟ್ರಾ, ವೃಂದಗಾನ (choir) ಮುಂತಾದ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ.

ಇಲ್ಲಿ ಮುಂದೆ ಬರಲು, ಮೇಲೇರಲು ಬೇಕಾದಷ್ಟು ಅವಕಾಶಗಳಿವೆ. ಎಲ್ಲರೂ ಎಲ್ಲವನ್ನೂ ಉಪಯೋಗಿಸಿಕೊಳ್ಳುವುದು ಸಾಧ್ಯವಲ್ಲ. ಆದರೆ ತಮಗೆ ಒಗ್ಗುವ, ತಮ್ಮ ಆಂತರ್ಗಿಕ ಶಕ್ತಿಸಾಮರ್ಥ್ಯಗಳನ್ನು ವೃದ್ಧಿಗೊಳಿಸುವ ಅವಕಾಶಗಳನ್ನು ಗುರುತಿಸಿಕೊಂಡು ಹೋಗುವ ಜಾಣ್ಮೆ ಅವರಿಗೆ ಮುಖ್ಯ. ಅವರ ದಾರಿಯಲ್ಲಿ ಅನೇಕ ಪ್ರಲೋಭನೆಗಳಿವೆ. ಹೈಸ್ಕೂಲು, ಕಾಲೇಜುಗಳಲ್ಲಿ ಕುಡಿತ, ಅಮಲಿನ ಪದಾರ್ಥಗಳ ಬಳಕೆ, ಲೈಂಗಿಕ ಸ್ವೇಚ್ಛಾಚಾರ, ಅದರಿಂದ ಬರಬಹುದಾದ ಭೀಕರ ಸಾಂಕ್ರಾಮಿಕ ರೋಗಗಳು – ಇವುಗಳ ಬಗ್ಗೆ ತಂದೆತಾಯಿಯರು, ಮಕ್ಕಳು ಬಹಳ ಜಾಗ್ರತೆ ವಹಿಸಬೇಕಾಗುತ್ತದೆ. ನಮ್ಮ ಮನೆಗಳಲ್ಲಿರುವ ಸ್ಥಿರತೆ (ಅಮೆರಿಕನ್ ಸಮಾಜದಲ್ಲಿ ಸುಮಾರು 50% ಮದುವೆಗಳು ವಿಚ್ಛೇದಗೊಳ್ಳುತ್ತವೆ), ಸುರಕ್ಷೆ, ಮಕ್ಕಳ ಒಳಿತಿನ ಬಗ್ಗೆ ತಂದೆತಾಯಿಯರಿಬ್ಬರೂ ತೋರುವ ಕಾಳಜಿ – ಇವುಗಳಿಂದಾಗಿ ನಮ್ಮ ಸಮಾಜದಲ್ಲಿ ಮಕ್ಕಳು ಬಹುಮಟ್ಟಿಗೆ ತಪ್ಪು ದಾರಿಗೆ ಬೀಳದೆ ಅಭಿವೃದ್ಧಿ ಹೊಂದಿರುವುದು ಒಂದು ಅತ್ಯಂತ ಸಂತೋಷದ, ನೆಮ್ಮದಿಯ ಸಂಗತಿ.

ಆದರೆ, ಒಂದು ವಿಚಾರದಲ್ಲಿ ನಾವು ಮೊದಲಿಗಿಂತ ಹೆಚ್ಚು ಆತಂಕಕ್ಕೆ ಒಳಗಾಗುತ್ತಿದ್ದೇವೆ. ಅದೆಂದರೆ ಇಲ್ಲಿನ ಸಮಾಜದಲ್ಲಿ ಹೆಚ್ಚುತ್ತಿರುವ ಹಿಂಸಾಕೃತ್ಯಗಳು. 2012ರ ಡಿಸೆಂಬರಿನಲ್ಲಿ ಕನೆಕ್ಟಿಕಟ್ ಶಾಲೆಯೊಂದರಲ್ಲಿ ಆದಂಥ ಹತ್ಯಾಕಾಂಡ ಬಹುಶಃ

ಪ್ರಪಂಚದ ಇನ್ನಾವ ನಾಗರಿಕ ಸಮಾಜದಲ್ಲೂ ಆಗಲಾರದು. ಬುದ್ಧಿಸ್ತಿಮಿತವಿಲ್ಲದ ಒಬ್ಬ ಯುವಕ ತನ್ನ ತಾಯಿ ಕೊಂಡಿದ್ದ ಹಲವಾರು ಗನ್ನುಗಳನ್ನು ವಶಪಡಿಸಿಕೊಂಡು ಅವಳನ್ನೂ ಕೊಂದು, ಒಂದು ಪ್ರಾಥಮಿಕ ಶಾಲೆಗೆ ಹೋಗಿ 20 ಮಕ್ಕಳನ್ನೂ, 6 ಮಂದಿ ಉಪಾಧ್ಯಾಯರು ಮತ್ತಿತರರನ್ನೂ ಕೊಂದು, ತಾನೂ ಆತ್ಮಹತ್ಯೆ ಮಾಡಿಕೊಂಡ. ಈ ಪ್ರಕರಣ ಇಡೀ ದೇಶದಲ್ಲಿ ಗನ್ನುಗಳ ಬಗ್ಗೆ ಒಂದು ದೊಡ್ಡ ಚರ್ಚೆ ಎಬ್ಬಿಸಿದೆ.

ಇಲ್ಲಿನ ಸಂಸ್ಕೃತಿಯಲ್ಲಿ ಗನ್ನಿನ ಸ್ಥಾನ ನಮ್ಮ ಸಂಸ್ಕೃತಿಯಲ್ಲಿರುವುದಕ್ಕಿಂತ ಬಹಳ ಬೇರೆ. ನಮಗೆ ಅದೊಂದು ಅಪಾಯಕರ ವಸ್ತು. ಅದು ಎಲ್ಲರಿಗೂ ಬೇಕಿಲ್ಲ. ಸೈನಿಕರು, ಪೊಲೀಸ್ ಪಡೆ, ಅದರ ಬಳಕೆಯಲ್ಲಿ ವಿಶೇಷ ತರಬೇತಿ ಹೊಂದಿದವರಿಗೆ ಮಾತ್ರ ಅದು ಲಭ್ಯ. ಇಲ್ಲಿ ಹಾಗಲ್ಲ. ಆಯುಧಗಳನ್ನು ಕೊಳ್ಳುವುದು, ಧರಿಸುವುದು ಪೌರರ ಹಕ್ಕು. ರಾಜ್ಯಾಂಗದ ಎರಡನೆಯ ಸುಧಾರಣೆ (1791) ಜನಕ್ಕೆ ಆ ಹಕ್ಕು ಕೊಡುತ್ತದೆ. ಅದು ಆತ್ಮರಕ್ಷಣೆಗೆ, ಶಿಕಾರಿ ಮುಂತಾದ ವಿನೋದಗಳಿಗೆ ಆಗುವ ಶಸ್ತ್ರ ಮಾತ್ರವಲ್ಲ, ಅದು ಜನರ ಸ್ವಾತಂತ್ರ್ಯದ, ಸ್ವಾವಲಂಬನೆಯ, ಪೌರುಷದ ಸಂಕೇತ. ಆದರೆ ಈ ಭಾವನೆ ಅತಿರೇಕಕ್ಕೆ ಹೋಗಿದೆ. ಸಮಾಜದಲ್ಲಿ ಆಗುತ್ತಿರುವ ಅನೇಕಾನೇಕ ಹಿಂಸಾಕೃತ್ಯಗಳಲ್ಲಿ ಗನ್ನಿನ ಬಳಕೆ ಸಾಬೀತಾಗಿದ್ದರೂ (ಸುಮಾರು 85% ಕೃತ್ಯಗಳಲ್ಲಿ) ಅದರ ಬೆಂಬಲಿಗರು ಗನ್ನುಗಳ ಕೊಳ್ಳುವಿಕೆ, ಉಪಯೋಗಗಳ ಬಗ್ಗೆ ಯಾವ ಸುಧಾರಣೆಯನ್ನೂ ವಿರೋಧಿಸುತ್ತಾರೆ. National Rifle Associationನಂಥ ಪ್ರಬಲ ರಾಷ್ಟ್ರೀಯ ಸಂಸ್ಥೆ ಗನ್ ತಯಾರಕರ, ಮಾರಾಟಗಾರರ ಹಿತಾಸಕ್ತಿಗಳ ಪರವಾಗಿ ವಶೀಲಿ ನಡೆಸಿ, ಶಾಸಕರ ಚುನಾವಣೆಗೆ ಹಣ ಸುರಿದು ಅವರನ್ನು ತನ್ನ ಕೈವಶ ಮಾಡಿಕೊಂಡು, ಯಾವ ಗನ್ ನಿಯಂತ್ರಣವೂ ಆಗದಂತೆ ತಡೆಗಟ್ಟುತ್ತಿದೆ. ಇಂಥಾ ಹಿಂಸಾಕೃತ್ಯಗಳನ್ನು ತಡೆಗಟ್ಟಬೇಕಾದರೆ ಇರುವ ಒಂದೇ ಮಾರ್ಗ ಇನ್ನಷ್ಟು ಗನ್ನುಗಳು ಎಂಬುದು ಅದರ ನಿಲುವು. ಗನ್ನಿನ ಮಾರಾಟ–ಕೊಳ್ಳುವಿಕೆಯಲ್ಲಿ ಕೆಲವು ಕಾನೂನುಗಳಿವೆ, ನಿಜ. ಆದರೆ ಅವನ್ನು ಮೀರುವ ಅನೇಕ ಅಡ್ಡದಾರಿಗಳಿವೆ. ಇದರಿಂದಾಗಿ, ಈ ಆಯುಧಗಳು ಬುದ್ಧಿಸ್ಥಿಮಿತವಿಲ್ಲದವರಿಗೆ, ಕೊಲೆಪಾತಕರಿಗೆ, ದೌರ್ಜನ್ಯಕಾರರಿಗೆ ಸುಲಭವಾಗಿ ದೊರೆಯುವಂತಾಗಿದೆ.

ಜೊತೆಗೆ ನಾವು ಈ ಹಲವಾರು ದಶಕಗಳಲ್ಲಿ ನೋಡುನೋಡುತ್ತಿದ್ದಂತೆಯೇ ಇಲ್ಲಿನ ಸಮಾಜದಲ್ಲಿ ಕ್ರೌರ್ಯ ಹೆಚ್ಚಿದೆ. ಇಲ್ಲಿನ ಟೆಲಿವಿಷನ್ ಕಾರ್ಯಕ್ರಮಗಳಲ್ಲಿ ಕ್ರೌರ್ಯದ ವೈಭವೀಕರಣ, ಗನ್ನುಗಳ ಬಳಕೆ, ಅಮಾನುಷತೆ ಹೆಚ್ಚಾಗಿವೆ. ಕಂಪ್ಯೂಟರ್, ವಿಡಿಯೋಗಳಲ್ಲಿ ಎದುರಾಳಿಗಳನ್ನು ಕೊಂದು ಜಯಗೊಳಿಸುವ ಆಟಗಳು ವಿಪರೀತ ಹೆಚ್ಚಿವೆ. ಕ್ರೌರ್ಯ ಒಂದು ವಿನೋದವಾಗಿದೆ. ಕೋಪತಾಪಗಳನ್ನು, ಮನಸ್ಸಿನ ಉದ್ವೇಗಗಳನ್ನು ಪರಿಹರಿಸಿಕೊಳ್ಳಲು ಕೊಲೆ ಅತ್ಯಂತ ಸುಲಭೋಪಾಯವಾಗಿದೆ. ಮಕ್ಕಳ ಸುನೀತ ಮನಸ್ಸುಗಳ ಮೇಲೆ ಇದು ತನ್ನ ದುಷ್ಪ್ರಭಾವವನ್ನು ಬೀರದಿರುವುದೆ? ಆ ಬಗ್ಗೆಯೂ ತುಂಬಾ ಚರ್ಚೆ ಎದ್ದಿದೆ.

ಬೇರು ಸೂರು

ಈ ಪರಿಸ್ಥಿತಿಯಲ್ಲಿ ನಮ್ಮ ಮುಂದಿನ ಪೀಳಿಗೆಯ ಮಕ್ಕಳು ಹೇಗೆ ತಮ್ಮ ಮಾನವೀಯ ಗುಣಗಳನ್ನು ಸಂರಕ್ಷಿಸಿಕೊಂಡು ಸತ್ಪ್ರಜೆಗಳಾಗಿರುತ್ತಾರೆ ಎಂಬ ಆತಂಕ ಬೆಳೆಯುತ್ತಿದೆ. ಇದು ಇಡೀ ದೇಶದ, ಸಮಾಜದ ಆತಂಕ. ಈ ವಿಚಾರದಲ್ಲಿ ಅಮೆರಿಕದ ಜನ, ಶಾಸಕರು, ಸರ್ಕಾರ, ಸಮಾಜದ, ಮಕ್ಕಳ ಸುರಕ್ಷಣೆಗೆ ಹೆಚ್ಚಿನ ಆದ್ಯತೆ ಕೊಟ್ಟು ಅದಕ್ಕೆ ತಕ್ಕ ಕಾಯಿದೆಗಳನ್ನು ನಿರ್ಮಿಸುವ ಮತ್ತು ಅವುಗಳನ್ನು ಜಾರಿಗೆ ತರಬೇಕಾದ ಸಮಯ ಬಂದಿದೆ. ಈ ಹಿಂದೆ ಪ್ರತಿಯೊಂದು ಸಾಮೂಹಿಕ ಹಿಂಸಾಕೃತ್ಯ ನಡೆದಾಗಲೂ ಅದರ ಬಗ್ಗೆ ಕೂಗೆದ್ದು ಕೆಲವೇ ದಿನಗಳಲ್ಲಿ ಅದರ ಸದ್ದಡಗುತ್ತಿತ್ತು. ಈ ಸಲ ಈ ಕನೆಕ್ಟಿಕಟ್ ದುರಂತವಾದ ಮೇಲೆ ಈ ದಿಸೆಯಲ್ಲಿ ಸ್ವಲ್ಪವಾದರೂ ಸುಧಾರಣೆ ಆದೀತೇನೋ ಎಂಬ ಆಸೆ ಮೊಳೆಯುತ್ತಿದೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಇದು ಬಹಳ ಮುಖ್ಯವಾದದ್ದು.



ವಿಶ್ವ ಬ್ಯಾಂಕಿನಲ್ಲಿ ನನ್ನ ಜೀವನ ಮತ್ತು ಕಾರ್ಯಾಚರಣೆ

– ಇಂಗ್ಲಿಷ್ ಮೂಲ : ಕೆ.ಜಿ.ವಿ. ಕೃಷ್ಣ
ಅನುವಾದ : ಎಂ.ಎಸ್. ನಟರಾಜ್

ಮೊದಲ ಮಾತು

ನಾನು ಆಗಸ್ಟ್ 1966ರಲ್ಲಿ ವಿಶ್ವ ಬ್ಯಾಂಕ್ ಸಂಸ್ಥೆ (World Bank)ಗೆ ಸೇರಿ ನವೆಂಬರ್ 1990ರಲ್ಲಿ ನಿವೃತ್ತಿಯ ತನಕ ಅದೇ ಸಂಸ್ಥೆಗಾಗಿ ದುಡಿದೆ. ಮುಂದಿನ ಪುಟಗಳಲ್ಲಿ ನಾನು ಹೇಗೆ ವಿಶ್ವ ಬ್ಯಾಂಕಿಗೆ ಸೇರಿದೆ, ಯಾವ ಯಾವ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದೆ, ಯಾವ ಯಾವ ಭೌಗೋಳಿಕ ಪ್ರದೇಶಗಳಿಗೆ ನನ್ನ ವೃತ್ತಿ ನನ್ನನ್ನು ಕೊಂಡೊಯ್ದಿತು, ಹಾಗೂ ಎಂತೆಂಥ ಸದವಕಾಶಗಳು ನನ್ನ ಪಾಲಿಗೆ ದೊರೆತವು ಮುಂತಾದ ವಿಷಯಗಳ ಬಗ್ಗೆ ನನ್ನದೇ ಮಾತುಗಳಲ್ಲಿ ಹೇಳುವವನಿದ್ದೇನೆ. ಈ ಕಥಾನಕದಲ್ಲಿ ಬ್ಯಾಂಕಿನ ಹಣಕಾಸಿನ ವಹಿವಾಟಿನ ಬಗ್ಗೆಯಾಗಲೀ, ಕಾರ್ಯಾಚರಣೆ, ನಿರ್ವಹಣೆ ಅಥವಾ ಅದರ ವಿವಿಧ ಅಂಗಗಳ ರಚನೆಯ ಬಗ್ಗೆಯಾಗಲೀ ಅಥವಾ ಬ್ಯಾಂಕಿನ ಒಟ್ಟಾರೆ ಸಾಲಸೋಲಗಳ ಹಂಚಿಕೆಗಳ ಮೊತ್ತ ಮತ್ತು ಮುಂದೆ ಏನಾಗಬಹುದು ಎಂಬೆಲ್ಲ ವಿಚಾರಗಳ ಬಗ್ಗೆ ಗಮನ ಕೊಟ್ಟಿಲ್ಲ. ಈ ವಿಚಾರಗಳ ಬಗ್ಗೆ ಆಸಕ್ತಿಯಿದ್ದವರಿಗೆ ಬ್ಯಾಂಕಿನವರೇ ತಯಾರಿಸಿದ ಮತ್ತು ಇತರರೂ ಪ್ರಕಟಿಸಿರುವ ಪುಸ್ತಕಗಳು ಮತ್ತು ಇತರ ಸಂಪನ್ಮೂಲಗಳು ಲ್ವಿಪುಲವಾಗಿ ದೊರಕುತ್ತವೆ. ಬ್ಯಾಂಕ್ ಪ್ರಕಟಿಸಿರುವ ತನ್ನ ಚರಿತ್ರೆಯ ಕೈಪಿಡಿ ಸಾಕಷ್ಟು ಉಪಯುಕ್ತವೂ ವಿಚಾರಪೂರಿತವೂ ಆಗಿದೆ.

ನಾನು ನಿವೃತ್ತನಾಗಿ ಇಪ್ಪತ್ತೆರಡು ವರ್ಷಗಳ ನಂತರ ಬರೆಯುತ್ತಿರುವ ಈ ಲೇಖನದಲ್ಲಿ ಅದಕ್ಕೂ ಇಪ್ಪತ್ತೈದು ವರ್ಷಗಳ ಹಿಂದೆ ನಡೆದ ವಿಚಾರಗಳೂ ಸೇರಿಕೊಂಡಿವೆ. ನನ್ನ ಚಟುವಟಿಕೆಗಳ ದಿನಚರಿಯೊಂದನ್ನು ಬರೆದಿಟ್ಟುಕೊಳ್ಳಲಿಲ್ಲವಲ್ಲ ಎಂಬ ಖೇದ ನನಗಾಗುತ್ತಿದೆ, ಹಾಗೆ ಬರೆದುಕೊಂಡಿದ್ದರೆ ತುಂಬಾ ಸಹಾಯಕವಾಗುತ್ತಿತ್ತು. ಹೀಗಾಗಿ, ಹಲವು ವಿವರಗಳಲ್ಲಿ ಘಟನೆಗಳ ಕಾಲದ ಬಗ್ಗೆ ಸಣ್ಣ ಪುಟ್ಟ ತಪ್ಪುಗಳು ಸೇರಿಕೊಂಡಿದ್ದರೆ, ದಯವಿಟ್ಟು ಕ್ಷಮಿಸಿ.

ವಿಶ್ವ ಬ್ಯಾಂಕಿಗೆ ನಾನು ಸೇರಿಕೊಂಡದ್ದು

1966ರಲ್ಲಿ ಬ್ಯಾಂಕಿಗೆ ಸೇರಿದ್ದು ಪೂರ್ವಯೋಜಿತವೂ ಅಲ್ಲ, ನಿರೀಕ್ಷಿತ ಮೊದಲೇ ಅಲ್ಲ. ನೈರೋಬಿ ವಿಶ್ವವಿದ್ಯಾಲಯದಲ್ಲಿ ಹಿರಿಯ ಉಪನ್ಯಾಸಕನಾಗಿ ಕೀನ್ಯಾ ದೇಶದಲ್ಲಿ

ಅಧ್ಯಾಪಕ ವೃತ್ತಿಯಲ್ಲಿ ಸುಖವಾಗಿ ತಳವೂರಿದ್ದವರಲ್ಲಿ ನಾನೂ ಒಬ್ಬನಾಗಿದ್ದೆ. ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಆರು ವರ್ಷಗಳ ಕಾಲ ಅಧ್ಯಾಪಕ ವೃತ್ತಿಯಲ್ಲಿದ್ದ ನನ್ನನ್ನು 1956ರಲ್ಲಿ ನೈರೋಬಿ ವಿವಿ ಆಯ್ದುಕೊಂಡಿತ್ತು. 1963ರಲ್ಲಿ ನ್ಯೂಯಾರ್ಕ್ ಸಂಸ್ಥಾನದ ಉತ್ತರ ಭಾಗದಲ್ಲಿರುವ ಸಿರಕ್ಯೂಸ್ ವಿವಿ ನನ್ನನ್ನು ಸಂದರ್ಶಕ ಉಪನ್ಯಾಸಕನನ್ನಾಗಿ ಆಹ್ವಾನಿಸಿತ್ತು; ಒಂದು ವರ್ಷದ ಬೋಧನ ಕಾರ್ಯ ಮುಗಿದೊಡನೆ, 1964ರಲ್ಲಿ ನಾನು ನೈರೋಬಿಗೆ ಹಿಂದಿರುಗಿದಾಗ ಮುಂದೆಷ್ಟೋ ವರ್ಷಗಳು ನೈರೋಬಿ ವಿವಿಯಲ್ಲೇ ಕಳೆಯುತ್ತೇನೆಂಬ ನಂಬಿಕೆ ನನ್ನದಾಗಿತ್ತು.

ವಿಶ್ವಬ್ಯಾಂಕಿನ ಅಧಿಕಾರಿಗಳಲ್ಲೊಬ್ಬರು 1965ರಲ್ಲಿ ಕೆಲಸದ ಮೇಲೆ ನೈರೋಬಿಗೆ ಬಂದಿದ್ದರು. ಆತ, ಕೀನ್ಯಾದ ಆರ್ಥಿಕ ವ್ಯವಸ್ಥೆಯ ಬಗ್ಗೆ ಮಾತಾಡಲು ನನ್ನ ಭೇಟಿಗೆಂದು ನಮ್ಮ ಮನೆಗೆ ಬಂದಿದ್ದರು. ನಾನು ಯೋಚಿಸಿದ್ದಕ್ಕಿಂತ ದೊಡ್ಡದಾಗೇ ಬೆಳೆಯಿತು ಆ ಸಂವಾದ. ಆಫ್ರಿಕಾ ಖಂಡದ ಆರ್ಥಿಕ ವ್ಯವಸ್ಥೆಯ ಬಗ್ಗೆ ಹೆಚ್ಚಿನ ತಿಳುವಳಿಕೆಯುಳ್ಳವರನ್ನು ನಿಯಮಿಸಿಕೊಂಡು ವಿಶ್ವ ಬ್ಯಾಂಕ್ ತನ್ನ ಆಫ್ರಿಕಾ ವಿಭಾಗವನ್ನು ವಿಸ್ತರಿಸುವ ಯೋಜನೆಯಲ್ಲಿದೆ ಎಂದು ನಮ್ಮ ಮಾತುಕತೆ ಮುಗಿಯುವಾಗ ಆತ ತಿಳಿಸಿದರು. ಆಫ್ರಿಕಾದ ಆರ್ಥಿಕ ವ್ಯವಸ್ಥೆಯ ಬಗ್ಗೆ ಹಲವಾರು ಸಂಶೋಧಕ ಪ್ರಬಂಧಗಳನ್ನು ನಾನು ಆ ವೇಳೆಗೆ ಪ್ರಕಟಿಸಿದ್ದೆ ಮತ್ತು ಪುಸ್ತಕವೊಂದರ ಸಹಲೇಖಕನೂ ಆಗಿದ್ದೆ. ವಿಶ್ವ ಸಂಸ್ಥೆ, ಯುನೆಸ್ಕೋಗಳೊಂದಿಗೆ ಸಲಹೆಗಾರನಾಗಿ ಸಹ ಕೆಲವು ಸಣ್ಣ ಪುಟ್ಟ ಕೆಲಸ ನಿರ್ವಹಿಸಿದ್ದೆ. ಈ ಎಲ್ಲ ವಿಷಯಗಳನ್ನೂ ಅವುಗಳಿಗೆ ಸಂಬಂಧಪಟ್ಟ ನನ್ನ ಪ್ರಕಟಣೆಗಳನ್ನೂ ಆತ ತನ್ನೊಡನೆ ತೆಗೆದುಕೊಂಡೇ ಹೋದರು. ಕೆಲ ತಿಂಗಳ ನಂತರ ಬ್ಯಾಂಕಿನಿಂದ ನನಗೊಂದು ಪತ್ರ ಬಂತು. ಅದರಲ್ಲಿ, 'ಇನ್ನು ಮೂರು ವಾರಗಳಲ್ಲಿ ವಿಶ್ವ ಬ್ಯಾಂಕಿನ ಹಿರಿಯ ಅಧಿಕಾರಿಯೊಬ್ಬರು ನೈರೋಬಿಗೆ ಭೇಟಿಕೊಡುವವರಿದ್ದಾರೆ ಹಾಗೂ ಆತ ನನ್ನ ಭೇಟಿ ಮಾಡಿ ಬ್ಯಾಂಕಿನ ಹುದ್ದೆಯೊಂದಕ್ಕಾಗಿ ನನ್ನೊಡನೆ ಸಂದರ್ಶನ ಮಾಡಲಿಚ್ಛಿಸುತ್ತಾರೆ' ಎಂದು ಬರೆಯಲಾಗಿತ್ತು. ಅದೇ ರೀತಿ, ಸಂದರ್ಶನವೂ ಆಯಿತು. ಆಯ್ಕೆಯ ತೀರ್ಮಾನದ ಬಗ್ಗೆ ಮುಂದೆ ತಿಳಿಸಲಾಗುವುದು ಎಂದು ಹೇಳಿ ಆತ ಹಿಂದಿರುಗಿದರು. ಸುಮಾರು ನಾಲ್ಕು ವಾರಗಳ ನಂತರ ಏಪ್ರಿಲ್ 1966ರ ಸಮಯದಲ್ಲಿ ಬ್ಯಾಂಕಿನ ಆಫ್ರಿಕಾ ಇಲಾಖೆಯ ಪೂರ್ವ ಆಫ್ರಿಕಾ ವಿಭಾಗದಲ್ಲಿ ಅರ್ಥಶಾಸ್ತ್ರಜ್ಞನ ಹುದ್ದೆಗೆ ನನ್ನನ್ನು ಚುನಾಯಿಸಿರುವುದಾಗಿ ಒಕ್ಕಣೆಯಿದ್ದ ಔಪಚಾರಿಕ ಪತ್ರ ನನ್ನ ಕೈಸೇರಿತು.

ಪೂರ್ವ ಆಫ್ರಿಕಾದಲ್ಲಿ ಕಾರ್ಯಭಾರ

1966ರ ಆಗಸ್ಟ್ ತಿಂಗಳಿನಲ್ಲಿ ನಾನೂ, ನನ್ನ ಪತ್ನಿಯೂ, ಒಂಭತ್ತು ವಯಸ್ಸಿನ ಮಗಳೂ, ಇನ್ನೇನು ಒಂದು ವರ್ಷ ತುಂಬಲಿರುವ ಮಗನೂ ವಾಷಿಂಗ್‌ಟನ್ನಿನಲ್ಲಿ ಬಂದಿಳಿದೆವು. ಡೂಪಾಂಟ್ ಪ್ಲಾಜ಼ ಹೋಟೆಲಿನಲ್ಲಿ ಒಂದು ತಿಂಗಳು ತಂಗಿ ಬಾಡಿಗೆ

ಅಥವಾ ಸ್ವಂತ ಮನೆಗೆ ವರ್ಗಾಯಿಸಿಕೊಳ್ಳುವ ಏರ್ಪಾಟು ಆಗಿತ್ತು. ಚೆವಿ ಚೇಸ್‌ನಲ್ಲಿರುವ ಲಫ್ಲಾಯೆಟ್ ಪ್ರಾಥಮಿಕ ಶಾಲೆ ನಮ್ಮ ಮಗಳಿಗೆ ಉತ್ತಮ ಶಾಲೆಯೆಂದು ನಮಗೆ ಮಿತ್ರರಿಂದ ತಿಳಿದುಬಂದಿತ್ತು. ಆದರೆ, ಬೆಳಿಗ್ಗೆ ಎಂಟಕ್ಕೆ ಅವಳನ್ನು ಶಾಲೆಗೆ ಬಿಟ್ಟು ಮತ್ತೆ ಮೂರೂವರೆಗೆ ಮನೆಗೆ ಕೊಂಡೊಯ್ಯುವ ಕೆಲಸ ಮಾತ್ರ ಕಷ್ಟಸಾಧ್ಯವೆನಿಸಿತು. ಅದೃಷ್ಟವಶಾತ್ ನೈರೋಬಿಯಲ್ಲಿ ಪ್ರಾಧ್ಯಾಪಕರಾಗಿದ್ದ ಒಬ್ಬ ಅಮೆರಿಕನ್ ಗೆಳೆಯನ ಹೆಂಡತಿ ತನ್ನ ಔದಾರ್ಯದಿಂದ ನಮ್ಮ ಸಹಾಯಕ್ಕೆ ಮುಂದಾದಳು. ಆಕೆ ಮಧ್ಯಾಹ್ನ ನಮ್ಮ ಮಗಳನ್ನು ತನ್ನ ಮನೆಗೆ ಕರೆದೊಯ್ಯುವುದು, ನಾನು ಬ್ಯಾಂಕಿನಿಂದ ಸಂಜೆ ಹಿಂದಿರುಗುವ ಮಾರ್ಗದಲ್ಲಿ ಅವಳನ್ನು ಮನೆಗೆ ಕರೆದುಕೊಂಡುಬರುವುದು ಎಂದು ವ್ಯವಸ್ಥೆಯಾಯಿತು. ಆ ವೇಳೆಗೆ ನಾನು, ಹಳೆಯ ಕಾರೊಂದನ್ನು ಕೊಂಡಿದ್ದೆ ಮತ್ತು ಹಿಂದೆ ನನಗೆ ಸಿಕ್ಕಿದ್ದ ನ್ಯೂಯಾರ್ಕ್ ಡ್ರೈವಿಂಗ್ ಲೈಸೆನ್ಸನ್ನೇ ಉಪಯೋಗಿಸಿ ಕಾರನ್ನು ನಡೆಸುವ ಸವಲತ್ತಿತ್ತು.

ಶಾಲೆಯ ದೈನಂದಿನ ಕಲಾಪಗಳು ಒಂದು ಘಟ್ಟಕ್ಕೆ ಬರುವ ಮೊದಲೇ ಬ್ಯಾಂಕಿನ ಕಾರ್ಯ ನಿರ್ವಹಣೆಗಾಗಿ ಕೀನ್ಯಾ, ಟಾನ್‌ಝಾನಿಯಾ ಮತ್ತು ಉಗಾಂಡಾ ದೇಶಗಳಿಗೆ ನಾಲ್ಕು ವಾರಗಳ ಪ್ರವಾಸಕ್ಕೆ ಹೊರಡಬೇಕೆಂಬ ಆದೇಶ ನನಗೆ ಬಂದಿತು. ಮೂರು-ನಾಲ್ಕು ಜನರ ವಿಶ್ವ ಬ್ಯಾಂಕ್ ಆಯೋಗ ಮೂರು ನಾಲ್ಕು ವಾರಗಳ ಭೇಟಿಯಲ್ಲಿ ಆ ದೇಶಗಳ ಆರ್ಥಿಕ ಪರಿಸ್ಥಿತಿ, ವ್ಯವಸ್ಥೆ, ಅಭಿವೃದ್ಧಿ, ಉಳಿತಾಯ, ಸಾಲಸೋಲಗಳು ಮತ್ತು ಒಟ್ಟಾರೆ ಆಯ-ವ್ಯಯಗಳನ್ನು ಅಲ್ಲಿಯ ಸರ್ಕಾರಗಳು ಹೇಗೆ ಸರಿದೂಗಿಸುತ್ತಿವೆ ಎಂಬಂಶಗಳನ್ನು ಅಧ್ಯಯನ ಮಾಡಿ ಟಿಪ್ಪಣಿ ತಯಾರಿಸುವ ಕೆಲಸ. ಮಕ್ಕಳ ಮತ್ತು ಸಂಸಾರದ ಆಗುಹೋಗುಗಳನ್ನು ನನ್ನ ಪತ್ನಿಯೊಬ್ಬಳ ಮೇಲೆ ಹೊರಿಸಿ ಇನ್ನೂ ತಹಬಂದಿಗೆ ಬಂದಿರದ ಪರಿಸ್ಥಿತಿಯಲ್ಲಿ ವಿದೇಶಯಾತ್ರೆಗೆ ತೊಡಗುವುದು ಹುಚ್ಚು ಕೆಲಸವೆನಿಸಿತು. ಪವಾಡವೋ ಎಂಬಂತೆ, ನಮ್ಮ ಮಗಳ ಶಾಲೆಯ ಹತ್ತಿರದಲ್ಲೇ ಇದ್ದ ಮನೆಯೊಂದು ಮಾರಾಟಕ್ಕೆ ಬಂದು ಸ್ವಲ್ಪ ಹೆಚ್ಚು ಹಣ ಕೊಟ್ಟರೆ ಎರಡೇ ವಾರಗಳಲ್ಲಿ ಖಾಲಿಮಾಡುವುದಾಗಿ ಮನೆಯ ಒಡೆಯರು ಮಾತುಕೊಟ್ಟು, ನೈರೋಬಿಯಿಂದ ರವಾನಿಸಿದ್ದ ನಮ್ಮ ಸಾಮಾನು-ಸರಂಜಾಮುಗಳೆಲ್ಲ ಒಂದೇ ತಿಂಗಳಿನಲ್ಲಿ ಬಾಲ್ಟಿಮೋರ್ ಬಂದರಿನಲ್ಲಿ ಬಂದಿಳಿದು, ಎಲ್ಲವೂ ಖರೀದಿಸಿದ ಮನೆಗೆ ಬಂದು ತಲುಪಿ ತಮ್ಮತಮ್ಮ ಸ್ಥಾನಗಳನ್ನು ಸೇರಿದವು! ಕೈಮಗುವನ್ನೂ ಕಟ್ಟಿಕೊಂಡು, ಮಗಳನ್ನು ಶಾಲೆಗೆ ಕಳಿಸಿ ಮನೆಗೆ ಕರೆತರುವುದರಿಂದ ಹಿಡಿದು ಮನೆಯಲ್ಲಿ ಬಂದಿಳಿದ ಗಂಟು-ಮೂಟೆಗಳನ್ನು ಬಿಚ್ಚಿ ಮನೆಯನ್ನು ಅಣಿಮಾಡುವ ಸಮಸ್ತ ಕೆಲಸವನ್ನೂ ನಿಭಾಯಿಸಿದ ಯಶ ನನ್ನ ಶ್ರೀಮತಿಗೆ ಸೇರುತ್ತದೆ!

ಪೂರ್ವ ಆಫ್ರಿಕಾ ಪ್ರವಾಸ ಒಬ್ಬ ಹಿರಿಯ ಬ್ಯಾಂಕ್ ಅಧಿಕಾರಿಯ ನಾಯಕತ್ವದಲ್ಲಿ ಸುಗಮವಾಗೇ ಕಳೆಯಿತು. ಮೂರೂ ದೇಶಗಳ ಹಲವಾರು ಸರ್ಕಾರೀ ಅಧಿಕಾರಿಗಳ

ಪರಿಚಯ ನನಗಿದ್ದದ್ದರಿಂದ ಕೆಲಸ ಅಷ್ಟೇನೂ ಕಷ್ಟವಿಲ್ಲದೇ ನಡೆದುಹೋಯಿತು. ಟಾನ್‌ಝಾನಿಯಾ, ಉಗಾಂಡಾದಲ್ಲಿ ನಾನು ಹೆಚ್ಚು ಸಮಯ ಕಳೆಯುವಂತೆ ಕೇಳಿಕೊಂಡಿದ್ದರು, ಜೊತೆಗೆ ಪೂರ್ವ ಆಫ್ರಿಕದ ಸಮುದಾಯದ (ಪೂಆಸಂ) ಕೆಲಸ ಬೇರೆ. East African Community ಎಂಬ ಮೂರೂ ದೇಶಗಳ ಒಂದು ಸಂಘಟನೆ; ಆದರೆ, ಅದರ ಆಡಳಿತ ಮಾತ್ರ ಸ್ವತಂತ್ರವಾದದ್ದು. ಮೂರೂ ದೇಶಗಳು ಒಟ್ಟಾಗಿ ನಡೆಸುವ ಕೆಲಸಗಳ ಉದಾಹರಣೆಯೆಂದರೆ, ಅಭಿವೃದ್ಧಿ ಬ್ಯಾಂಕ್, ಅಂಕೆ–ಸಂಖ್ಯೆಗಳ ಮಾಹಿತಿ ಸಂಗ್ರಹಣೆ, ಆದಾಯ ತೆರಿಗೆ, ಮರಳುಭೂಮಿಯ ಮಿಡತೆಗಳ ಹಾವಳಿಯನ್ನು ತಡೆಗಟ್ಟುವುದು, ಇತ್ಯಾದಿ. ನಾನು ಬರೆದ ಪುಸ್ತಕದ ವಸ್ತು ಸಹ ಅದೇ 'ಪೂಆಸಂ'ಗೆ ಸಂಬಂಧಿಸಿದ್ದು. ಈ ಸಂಘಟನೆ ಹೆಚ್ಚು ದಿನ ಬಾಳಲಿಲ್ಲ, ಕಾರಣ, ಪ್ರತಿ ದೇಶದ ಅತಿ–ರಾಷ್ಟ್ರೀಯ ಮನೋಭಾವ, ಮತ್ತು ಇತರರ ಕೈಗೆ ಅಧಿಕಾರವನ್ನು ಕೊಡಲಿಚ್ಛಿಸದ ಸ್ವಭಾವ.

ಪೂರ್ವ ಆಫ್ರಿಕಾ ವಿಭಾಗದಲ್ಲೇ ನಾನು ಹಲವು ವರ್ಷಗಳ ಕಾಲ ದುಡಿದೆ, ಹಲವಾರು ಆಯೋಗಗಳೊಂದಿಗೆ ಆಫ್ರಿಕಾದಲ್ಲಿ ಪ್ರವಾಸ ಮಾಡಿದೆ; ಹೆಚ್ಚಾಗಿ, ಟಾನ್‌ಝಾನಿಯ ಮತ್ತು ಉಗಾಂಡಕ್ಕೆ. ಕೀನ್ಯಾಕೆ ಸ್ವಲ್ಪ ಕಡಿಮೆ ಎನ್ನಬಹುದು. ಕಾಲಕ್ರಮದಲ್ಲಿ, ಹಿರಿಯ ಆರ್ಥಶಾಸ್ತ್ರಜ್ಞನಾಗಿ ಬಡ್ತಿ ಸಿಕ್ಕಿ ಮುಂದೆ ವಿಭಾಗಾಧಿಕಾರಿಗಳ ಕಛೇರಿಗೆ ವರ್ಗಾಯಿಸಲ್ಪಟ್ಟೆ. ಈ ಹುದ್ದೆಯಲ್ಲಿ ವಿವಿಧ ದೇಶಗಳ ಆರ್ಥಿಕ ವಿಚಾರಗಳಿಗೆ ಸಂಬಂಧಪಟ್ಟ ಕೆಲಸಕ್ಕಿಂತ ವಿಭಾಗದ ನಿರ್ದೇಶಕರ ಪರವಾಗಿ ನಡೆಸುವ ಸಮೀಕ್ಷೆಯ ಕೆಲಸವೇ ಹೆಚ್ಚಾಗಿರುತ್ತಿತ್ತು. ಮುಂದಿನ ವರ್ಷಗಳಲ್ಲಿ ನನಗೆ ಒಂದೆರಡು 'ಆಲೋಚನಾ ತುಣುಕು' ('ಥಿಂಕ್ ಪೀಸ್')ಗಳನ್ನು ಬರೆಯುವ ಅವಕಾಶ ದೊರೆಯಿತು: ಒಂದು, ಬ್ಯಾಂಕಿನ ಸಾಲಕೊಡುವ ಯೋಜನೆಯನ್ನು ವರ್ಷಾನುಗಟ್ಟಲೆಯಿಂದ ದಾರಿದ್ರ್ಯಕ್ಕೊಳಗಾದ ಪ್ರದೇಶಗಳನ್ನು ಗುರಿಯಾಗಿಟ್ಟುಕೊಂಡು ಮುಂದುವರೆಯಬೇಕಾದ ಬಗ್ಗೆ; ಮತ್ತೊಂದು, ವಿಶೇಷವಾಗಿ ಆಫ್ರಿಕಾದ ದೇಶಗಳಿಗೆ ಅನ್ವಯವಾಗುವಂಥದ್ದು, ರೈತರಿಗೆ ಉಪಯೋಗವಾಗುವಂಥ ನಿಧಿಗಳನ್ನು ಮುಡಿಪಾಗಿಡುವುದರ ಬಗ್ಗೆ (ಅವು ಖುಷ್ಕಿ ಬೆಳೆ ತೆಗೆಯುವ ಹೊಲಗಳ ಅಭಿವೃದ್ಧಿಯಾಗಿರಬಹುದು ಅಥವಾ ಹಸು–ಎಮ್ಮೆ ಮೊದಲಾದ ಪ್ರಾಣಿಗಳಿಗಾಗಿ ಹುಲ್ಲುಗಾವಲನ್ನು ಅಭಿವೃದ್ಧಿಪಡಿಸುವ ಯೋಜನೆಯಾಗಿರಬಹುದು). ಈ ಆಲೋಚನಾ ತುಣುಕುಗಳು ಹಲವರ ಗಮನವನ್ನು ಸೆಳೆದವು. ಕೆಲವೇ ತಿಂಗಳುಗಳಲ್ಲಿ ವ್ಯವಸಾಯ ವಿಭಾಗದ ಉಪ–ಮುಖ್ಯಸ್ಥನಾಗಿ ನಾನು ಬಡ್ತಿ ಹೊಂದಿದೆ. ಈ ವ್ಯವಸಾಯ ವಿಭಾಗದಡಿ ಪೂರ್ವ ಆಫ್ರಿಕಾದ ಹದಿನೈದು ದೇಶಗಳಿದ್ದವು – ಉತ್ತರದಲ್ಲಿ ಸುಡಾನಿನವರೆಗೆ ಮತ್ತು ದಕ್ಷಿಣದಲ್ಲಿ ಲೆಸೋತೋವರೆಗೆ. ಯೋಜನಾ ವಿಭಾಗದಿಂದ ನಿರ್ವಹಣೆಯ ವಿಭಾಗಕ್ಕೆ ವರ್ಗ ಸ್ವಲ್ಪ ಅಪರೂಪದ್ದೆ. ಪ್ರಾಯಶಃ, ಬ್ಯಾಂಕು ತನ್ನ ಕಾರ್ಯರಂಗವನ್ನು ವಿಸ್ತರಿಸಿಕೊಳ್ಳುವ ಅಗತ್ಯದ ಬಗ್ಗೆ ಪ್ರಶ್ನೆಗಳನ್ನು ನಾನು ಎತ್ತಿದ್ದರ ಫಲಿತಾಂಶವಿದ್ದರೂ ಇರಬಹುದು. ಈ ವರ್ಗಾವಣೆ ನನ್ನ

ವೃತ್ತಿಜಗತ್ತಿನ ಹೊಸ ದ್ವಾರವಾಗಿ ಪರಿಣಮಿಸಿತು. ವ್ಯವಸಾಯ, ನೀರಾವರಿ, ಅರಣ್ಯ, ಮೀನುಗಾರಿಕೆ, ಇವೆಲ್ಲ ವಿಷಯಗಳ ಅರ್ಥಶಾಸ್ತ್ರ– ಹೀಗೆ ಹಲವು ಹತ್ತು ಶಾಖೆಗಳ ತಜ್ಞರೊಂದಿಗೆ ಕೆಲಸಮಾಡುವ ಅವಕಾಶ ನನಗೆ ಒಂದು ಹೊಸ ಜಗತ್ತನ್ನೇ ತೆರೆಯಿತು. ವಲಸೆ ಹಕ್ಕಿಯನ್ನು ಬರಮಾಡಿಕೊಂಡು, ಸ್ವಾಗತಿಸಿ, ನನ್ನ ಸ್ಥಾನಪಲ್ಲಟದಲ್ಲಿ ಅನೇಕರು ನನಗೆ ಸಹಾಯಮಾಡಿದರು.

ನನ್ನ ಹೊಸ ಹುದ್ದೆಯಲ್ಲಿ ಬ್ಯಾಂಕಿನ ಹೊಸ ಯೋಜನೆಗಳ ಧ್ಯೇಯವನ್ನು ತೀರ್ಮಾನಿಸುವಲ್ಲಿ ಒಟ್ಟಾರೆ ಮಾರ್ಗದರ್ಶನ ನೀಡುವುದು ಮತ್ತು ವರದಿಗಳ ತಯಾರಿಯಲ್ಲಿ ಗುಣ ಮಟ್ಟವನ್ನು ಹತೋಟಿಯಲ್ಲಿಡುವ (ಕ್ವಾಲಿಟಿ ಕಂಟ್ರೋಲ್) ಜವಾಬ್ದಾರಿಗಳು ನನ್ನ ಮೇಲಿದ್ದವು. ನನಗಿದ್ದ ಹೆಚ್ಚಿನ ಜವಾಬ್ದಾರಿಗಳ ಕಾರಣ ಸಾಧಾರಣವಾಗಿ ನನ್ನನ್ನು ಆಯೋಗಗಳ ಜೊತೆ ಕಳಿಸುತ್ತಿರಲಿಲ್ಲ. ಆದರೆ, ಇದಕ್ಕೆ ಎರಡು ಬಾರಿ ವಿನಾಯತಿ ನೀಡಲಾಯಿತು. ಮೊದಲನೆಯದು 1977ರ ಇಥಿಯೋಪಿಯಾದ ಕ್ಷಾಮ. ಈ ಕ್ಷಾಮದಲ್ಲಿ ಸಹಸ್ರಾರು ಜನರ ಮತ್ತು ಸಾಕುಪ್ರಾಣಿಗಳ ಸಾವುಂಟಾಯಿತು. ಪರಿಸ್ಥಿತಿ ಎಷ್ಟು ಹೃದಯ ವಿದ್ರಾವಕವಾಗಿತ್ತೆಂದರೆ – ನಾವು ಆಗ 1978ರ ಫೆಬ್ರುವರಿಯಲ್ಲಿದ್ದೆವು – ಅದೇ ವರ್ಷದ ಜೂನ್ ಮುವ್ವತ್ತರೊಳಗಾಗಿ, ಅಂದರೆ ನಾಲ್ಕೇ ತಿಂಗಳ ಅವಧಿಯಲ್ಲಿ ವಿಶ್ವಬ್ಯಾಂಕ್ ಒಂದು ಯೋಜನೆಯನ್ನು ತಯಾರಿಸಿ ಸಂಬಂಧಪಟ್ಟ ಅಧಿಕಾರಿಗಳ ಅಪ್ಪಣೆಯನ್ನು ಪಡೆದು ವರದಿಯನ್ನು ಮಹಾನಿರ್ದೇಶಕರ ಒಪ್ಪಿಗೆಗೆ ಕಳಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು.

ಬ್ಯಾಂಕಿನಲ್ಲಿ ನಾನು ಕೈಗೊಂಡ ಎಲ್ಲ ಕೆಲಸಗಳಲ್ಲಿ ಈ ಒಂದು ಯೋಜನೆ ಅತ್ಯಂತ ಕಠಿಣವಾದದ್ದೆಂದು ಹೇಳಬಹುದು. ಐದು ವೃತ್ತಿಪರರ ಜೊತೆ, ನಾನು ಮುಖಂಡನಾಗಿ, ನಮ್ಮ ಆಯೋಗ ಇಥಿಯೋಪಿಯಾದಲ್ಲಿ ಬಂದಿಳಿಯಿತು. ಹೆಚ್ಚಿನ ಔಪಚಾರಿಕತೆಯಿಲ್ಲದೇ, ನಮ್ಮದೇ ಸ್ಥಳೀಯ ಕಛೇರಿಯ ಸಹಾಯದಿಂದ ಒಟ್ಟುಗೂಡಿಸಲ್ಪಟ್ಟ ಅಲ್ಲಿನ ಕೆಲಸಗಾರರೊಂದಿಗೆ ಎಲ್ಲಕ್ಕೂ ಮೊದಲು ಅವರ ಮುಖಂಡರನ್ನು ಭೇಟಿಮಾಡಿದ್ದಾಯಿತು. ಬರಪೀಡಿತ ಸಂಸ್ಥಾನಗಳ ಪೈಕಿ ವಾಲೋ ಮತ್ತು ಟೈಗ್ರೆ ಅತ್ಯಂತ ಸಂಕಟಕ್ಕೀಡಾಗಿದ್ದವು. ಬೆಟ್ಟಗಾಡಿನ ರಸ್ತೆಗಳ ಮೂಲಕ ನೂರಾರು ಕಿಲೋಮೀಟರುಗಳ ಪಯಣಮಾಡಿ ಆ ಸ್ಥಳವನ್ನು ತಲುಪುವ ನಿಶ್ಚಯವನ್ನೇನೋ ಮಾಡಿದ್ದಾಯಿತು. ಆದರೆ, ಇಥಿಯೋಪಿಯಾದ ರಸ್ತೆಗಳು ತುಂಬಾ ಕೆಟ್ಟ ಸ್ಥಿತಿಯಲ್ಲಿದ್ದವು. ಮುಖ್ಯ ರಸ್ತೆಗಳನ್ನು ಬಿಟ್ಟರೆ ಸಣ್ಣ ಪುಟ್ಟ ರಸ್ತೆಗಳ ಪಯಣ ಅತ್ಯಂತ ಕಂಟಕಗಳಿಂದ ಕೂಡಿತ್ತಲ್ಲದೇ ತುಂಬಾ ಸಮಯ ಹಿಡಿಯುತ್ತಿತ್ತು.

ಅದೃಷ್ಟವಶಾತ್, ಆಹಾರ ಮತ್ತು ಔಷಧಗಳನ್ನು ಬರಪೀಡಿತ ಸ್ಥಳಗಳಿಗೆ ತಲುಪಿಸಲು ಜರ್ಮನ್ ಸರ್ಕಾರ ಕೊಡಮಾಡಿದ್ದ 36 ಜನರು ಕೂರಬಹುದಾದ ಹ್ಯೂಯೆ ಹೆಲಿಕಾಪ್ಟರ್‌ಗಳು ನಮಗೆ ತುಂಬ ಉಪಯೋಗಕ್ಕೆ ಬಂದವು. ಇವುಗಳಲ್ಲಿ

ಕುಳಿತು ಅರ್ಧದಿನಗಳ ಯಾನ ಮಾಡುವಾಗ ಹಾನಿಯಾದ ಪ್ರದೇಶಗಳ ಉದ್ದಗಲಗಳ ಕಲ್ಪನೆ ಸುಲಭವಾಯಿತು. ಆ ಪ್ರದೇಶಗಳ ರಾಜ್ಯಪಾಲರುಗಳು ಕೂಡ ನಮ್ಮೊಂದಿಗಿದ್ದು ತಲುಪಬೇಕಾದ ಸ್ಥಳಗಳಿಗೆಲ್ಲ ನಮ್ಮನ್ನು ಕೊಂಡೊಯ್ದರು.

ಪರಿಸ್ಥಿತಿ ಅತ್ಯಂತ ಭೀಕರವೂ ಅಸಾಧಾರಣವೂ ಆಗಿದ್ದ ಕಾರಣ ನಮ್ಮ ಆಯೋಗ ತುಂಬ ಚಾಕಚಕ್ಯತೆಯಿಂದ ದುಡಿದು ನಾಲ್ಕೇ ವಾರಗಳ ನಮ್ಮ ಪ್ರವಾಸದ ಅವಧಿಯಲ್ಲೇ ಯೋಜನೆಯ ವಿನ್ಯಾಸದ ವಿವರಗಳನ್ನು ಸಂಪೂರ್ಣಗೊಳಿಸಿ, ಇಥಿಯೋಪಿಯಾ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಮಾಡಿಕೊಳ್ಳಬೇಕಾದ ಒಡಂಬಡಿಕೆಗಳನ್ನು ಮಾಡಿಕೊಂಡು, ಬ್ಯಾಂಕಿನ ಮಹಾನಿರ್ದೇಶಕರಿಗೆ ವರದಿ ಕೊಡುವುದು ಸಾಧ್ಯವಾಯಿತು. ಯೋಜನೆಯ ಮಿಕ್ಕ ವಿವರಗಳನ್ನು ನಾಲ್ಕು ತಿಂಗಳ ಅವಧಿಯಲ್ಲಿ ಪೂರೈಸಲಾಯಿತು. ಸಾಧಾರಣವಾಗಿ ಬ್ಯಾಂಕಿನ ಒಂದೊಂದು ಸರಾಸರಿ ಯೋಜನೆಗೆ 18ರಿಂದ 30 ತಿಂಗಳುಗಳು ಹಿಡಿಯುತ್ತವೆ. ಆದರೆ, ಸಂದರ್ಭದ ಗಂಭೀರತೆಯನ್ನು ಗಮನಿಸಿ ಅಧಿಕಾರಿಗಳು ಶೀಘ್ರಪ್ರವೃತ್ತಿಯನ್ನು ಅಳವಡಿಸಿಕೊಂಡರು ಮತ್ತು ಆಯೋಗದ ಸದಸ್ಯರು ತಮ್ಮ ಕಠಿಣ ಶ್ರಮದಿಂದ ದುಡಿದ ಕಾರಣ ಹಣವನ್ನು ಬಿಡುಗಡೆ ಮಾಡುವ ಕ್ರಮದಲ್ಲಿ ನಿಧಾನಪ್ರವೃತ್ತಿಯನ್ನು ತೊರೆದು ಒಟ್ಟಾರೆ ಕಾರ್ಯಸಾಧನೆಯಲ್ಲಿ ಯಶಸ್ಸನ್ನು ಗಳಿಸಿದರು.

ಆಯೋಗದ ಮುಖಂಡತ್ವ ವಹಿಸಿದ ಮತ್ತೊಂದು ಅನುಭವವೆಂದರೆ, ನಾನು ದಕ್ಷಿಣ ಸುಡಾನಿಗೆ ಹೋಗಿದ್ದು. ಉತ್ತರದ ಅಧಿಕ ಸಂಖ್ಯಾತ ಮುಸ್ಲಿಮರಿಗೂ ದಕ್ಷಿಣದ ಅಧಿಕ ಸಂಖ್ಯಾತ ಕ್ರಿಶ್ಚಿಯನ್ ಆದಿವಾಸಿಗಳಿಗೂ ನಡೆದ ಹದಿನಾಲ್ಕು ವರ್ಷಗಳ ಅಂತಃಕಲಹದಲ್ಲಿ ಉತ್ತರದ ಮುಸ್ಲಿಮರೇ ಹೆಚ್ಚಾಗಿರುವ ಸೇನೆಯು ತನ್ನಲ್ಲಿದ್ದ ಮದ್ದುಗುಂಡುಗಳ ಸಹಾಯದಿಂದ ದಾಕ್ಷಿಣಾತ್ಯರನ್ನು ಸದೆಬಡಿದಿದ್ದರು. ಈ ಆಂತರಿಕ ಯುದ್ಧದಲ್ಲಿ ನಡೆದ ಅಮಾನುಷ ಹತ್ಯಾಕಾಂಡದಿಂದ ತಪ್ಪಿಸಿಕೊಳ್ಳಲು ಲೆಕ್ಕವಿಲ್ಲದಷ್ಟು ಜನ ನೆರೆರಾಜ್ಯಗಳಾದ ಕೀನ್ಯಾ, ಉಗಾಂಡಾ, ಮಧ್ಯ ಆಫ್ರಿಕಾ ಗಣರಾಜ್ಯ ಮತ್ತು ಚಾಡ್‌ಗಳಲ್ಲಿ ನಿರಾಶ್ರಿತರಾಗಿ ಬೀಡುಬಿಟ್ಟಿದ್ದರು. ಅಮಿತ ಸಂಖ್ಯೆಯಲ್ಲಿ ಜನಗಳು ನಿರಾಶ್ರಿತರಾಗಿ ಅನೂಹ್ಯವಾದ ಹಿಂಸೆಗೊಳಗಾದ ನಿದರ್ಶನಗಳಲ್ಲಿ ಇದೂ ಒಂದು. ಸುಡಾನಿನ ಹೊಸ ಅಧ್ಯಕ್ಷನಾಗಿದ್ದ ಜೆನೆರಲ್ ಜಾಫರ್ ನಿಮೇರಿಯ ನಾಯಕತ್ವದಲ್ಲಿ ಒಂದಿಷ್ಟು ಶಾಂತಿ ಉಂಟಾಗಿತ್ತು.

ನಮ್ಮ ಆಯೋಗ ದಕ್ಷಿಣದ ಜೂಬ ಎಂಬಲ್ಲಿ ಬೀಡು ಬಿಟ್ಟಿತ್ತು. ಇದೊಂದು ಸ್ಥಳದಲ್ಲಿ ಮಾತ್ರ ಒಂದಿಷ್ಟು ಜನಜೀವನ ಇನ್ನೂ ಉಳಿದಿತ್ತು ಎನ್ನಬಹುದು. ಆಹಾರ ಸಿಕ್ಕುವುದು ಎಷ್ಟು ಕಷ್ಟವಾಗಿತ್ತೆಂದರೆ, ನಾವು ಹಲವು ರಾತ್ರಿಗಳು ಉಪವಾಸ ಮಲಗುವ ಪರಿಸ್ಥಿತಿ. ರಸ್ತೆಗಳಲ್ಲಿ ಸಂಚರಿಸುವುದೂ ಅಪಾಯಕಾರಿಯಾಗಿತ್ತು, ಧ್ವಂಸಕಾರೀ ಲ್ಯಾಂಡ್‌ಮೈನುಗಳು ಹೂಳಲ್ಪಟ್ಟಿದ್ದವು ('ಸುಮಾರಾಗಿ ಮುಕ್ಕಾಲು ಮೂರು ಪಾಲು ಲ್ಯಾಂಡ್‌ಮೈನ್‌ಗಳನ್ನು ತೆಗೆದಿದ್ದೇವೆ, ಚಿಂತಿಸಲು ಕಾರಣವಿಲ್ಲ' ಎಂದು ದಾಕ್ಷಿಣಾತ್ಯ

ಅಧಿಕಾರಿಯೊಬ್ಬ ನಮಗೆ ಧೈರ್ಯವನ್ನೇನೋ ಹೇಳುತ್ತಿದ್ದನಾದರೂ ನಾವು ಜೀವವನ್ನು ಕೈಯಲ್ಲೇ ಹಿಡಿದುಕೊಂಡು ಪಯಣಿಸಿದೆವು!). ದೇಶ ಬಿಟ್ಟು ಹೋಗಿದ್ದವರು ಹಿಂದಿರುಗುವಂತೆ ಪ್ರೋತ್ಸಾಹಿಸುವ ಪುನರ್ವಸತೀಕರಣದ ಅಗತ್ಯವಿತ್ತೇ ವಿನಃ ವರ್ಷಗಟ್ಟಲೆ ಹಿಡಿಯುವ ಯೋಜನೆಗಳಲ್ಲ ಎಂಬುದು ನಮಗೆ ಸ್ಪಷ್ಟವಾಗಿತ್ತು. ನಾಶವಾದ ಊರುಗಳನ್ನು ಮಾಮೂಲಿನ ಪರಿಸ್ಥಿತಿಗೆ ಹಿಂದಿರುಗಿಸುವ ಮತ್ತು ತಕ್ಷಣ ಅಗತ್ಯವಿರುವ ವ್ಯವಸಾಯಕ್ಕೆ ಸಂಬಂಧಪಟ್ಟ ಸಣ್ಣಪುಟ್ಟ ಸಹಾಯಗಳನ್ನೊದಗಿಸುವ, ಬಿತ್ತಲು ಬೀಜ, ಓಡಾಡಲು ರಸ್ತೆ ಮುಂತಾದ ಸಾರಿಗೆ ಸಲಕರಣೆಗಳ ಯೋಜನೆಗಳನ್ನು ತಯಾರಿಸಿ ಶೀಘ್ರ–ಫಲಿತಾಂಶ ಕೊಡುವ ಕೆಲಸಗಳನ್ನು ಪ್ರಸ್ತಾಪಿಸಿ ಬ್ಯಾಂಕಿನ ಒಪ್ಪಿಗೆ ಪಡೆದೆವು. ಇಲ್ಲಿ ಕೂಡ ನಮ್ಮ ಆಯೋಗ ಮತ್ತು ಸಂಬಂಧಪಟ್ಟ ಅಧಿಕಾರವರ್ಗ ಒಟ್ಟಾಗಿ ಸಹಕರಿಸಿ ಅತ್ಯುತ್ತಮ ಕೆಲಸಮಾಡಿ ಯಶಸ್ಸನ್ನು ಪಡೆಯಿತು.

1968ರಲ್ಲಿ ಬ್ಯಾಂಕಿನ ಅಧ್ಯಕ್ಷನಾದ ರಾಬರ್ಟ್ ಮ್ಯಾಕ್ನಮಾರ ಹತ್ತು ವರ್ಷಗಳ ಅಧಿಕಾರದ ಅವಧಿಯಲ್ಲಿ ತನ್ನ ಸಾಮರ್ಥ್ಯದಿಂದ ದೂರದೃಷ್ಟಿ ಮತ್ತು ಸಮಗ್ರ ದೃಷ್ಟಿಯುಳ್ಳ ಉತ್ತಮ ನಾಯಕನೆನಿಸಿಕೊಂಡ. 1973ರಲ್ಲಿ ನೈರೋಬಿಯಲ್ಲಿ ನಡೆದ ವಿಶ್ವ ಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ನಿಧಿಯ (International Monitary Fund) ಅಧಿವೇಶನದಲ್ಲಿ ಆತ ಮಾಡಿದ ಬಹು ಪ್ರಸಿದ್ಧ ಭಾಷಣದಲ್ಲಿ ಬ್ಯಾಂಕ್ ಕೊಡುತ್ತಿರುವ ಸಾಲದ ಮೊತ್ತ ಏನೇನೂ ಸಾಲದು ಎಂದನಲ್ಲದೇ, ಮುಂದಿನ ಐದು ವರ್ಷಗಳಲ್ಲಿ ಒಟ್ಟಾರೆ ಬ್ಯಾಂಕ್ ಕೊಡುವ ಸಾಲದ ಮೊಬಲಗನ್ನು ದ್ವಿಗುಣಗೊಳಿಸುವುದಾಗಿಯೂ ಅದರಲ್ಲೂ ವ್ಯವಸಾಯದ ಸಾಲದ ಮೊತ್ತವನ್ನು ತ್ರಿಗುಣಗೊಳಿಸುವ ಮತ್ತು ಆಫ್ರಿಕಾ ಖಂಡಕ್ಕೆ ಮೀಸಲಾಗಿಡುವ ಸಾಲದ ಮೊತ್ತವನ್ನು ನಾಲ್ಕರಷ್ಟು ಹೆಚ್ಚಿಸುವ ವಾಗ್ದಾನ ಮಾಡಿದ. ದಾರಿದ್ರ್ಯವನ್ನು ಹೋಗಲಾಡಿಸುವಲ್ಲಿ ಮತ್ತು ಜನರ ಜೀವನ ಮಟ್ಟವನ್ನು ಮೇಲೆತ್ತುವುದರಲ್ಲಿ ಆತ ನಿಸ್ಸೀಮನೆಂದು ತೋರಿಸಿಕೊಟ್ಟ. ನನ್ನ ಬ್ಯಾಂಕ್ ಸೇವೆಯ ಇಪ್ಪತ್ತೈದು ವರ್ಷಗಳಲ್ಲಿ ಅವನನ್ನು ಸ್ವಲ್ಪವಾದರೂ ಹೋಲುವ ಒಬ್ಬ ನಾಯಕನನ್ನೂ ಆತನ ತರುವಾಯ ನಾನು ನೋಡಲಿಲ್ಲ.

ಪೂರ್ವ ಏಷಿಯಾ ಮತ್ತು ಪೆಸಿಫ಼ಿಕ್ ಪ್ರಾಂತ್ಯಗಳೆಡೆಗೆ

1977ರಲ್ಲಿ ಬ್ಯಾಂಕಿನ ಪುನರ್ರಚನೆಯಾಗಿ ಯೋಜನಾ–ಘಟಕಗಳನ್ನು ಪ್ರತ್ಯೇಕಗೊಳಿಸಿ ಇಡೀ ನೌಕರವರ್ಗವನ್ನು ಬೇರೆ ಬೇರೆ ಉಪಾಧ್ಯಕ್ಷರ ನೇತೃತ್ವದಲ್ಲಿ ಮರುವಿಂಗಡಣೆ ಮಾಡಲಾಯಿತು. ಈ ಸಂದರ್ಭದಲ್ಲಿ ನನಗೆ ಮುಂಬಡ್ತಿ ದೊರಕಿ ನಾನು ಪೂರ್ವ ಏಷಿಯಾ ಮತ್ತು ಪೆಸಿಫ಼ಿಕ್ ಪ್ರಾಂತ್ಯಗಳ ವಿಭಾಗಾಧಿಕಾರಿಯಾಗಿ ನಿಯಮಿಸಲ್ಪಟ್ಟೆ. ನಮ್ಮ ಉಪಾಧ್ಯಕ್ಷರ ಆಡಳಿತಕ್ಕೆ ಸೇರಿದಂತೆ ಮೂರು ವ್ಯವಸಾಯಕ್ಕೆ

ಸಂಬಂಧಪಟ್ಟ ವಿಭಾಗಗಳಿದ್ದವು: ಒಂದು ಸಾಮಾನ್ಯ ವ್ಯವಸಾಯಕ್ಕೆ ಸಂಬಂಧಪಟ್ಟದ್ದಾದರೆ, ಮತ್ತೊಂದು ನೀರಾವರಿ ಮತ್ತು ಕ್ಷೇತ್ರಾಭಿವೃದ್ಧಿಗೆ ಸಂಬಂಧಪಟ್ಟದ್ದು; ಹಾಗೂ ಮೂರನೆಯದು - ನನ್ನ ಅಧೀನದಲ್ಲಿದ್ದುದು - ವ್ಯವಸಾಯೋತ್ಪನ್ನಗಳು, ಮೀನುಗಾರಿಕೆ ಮತ್ತು ಅರಣ್ಯ ಇವುಗಳ ಅಭಿವೃದ್ಧಿಗೆ ಸಾಲಕೊಡುವ ವಿಭಾಗ. ಹೀಗಾಗಿ ನಮ್ಮ ವಿಂಗಡಣೆ ಕಾರ್ಯ ಚಟುವಟಿಕೆಗೆ ಸಂಬಂಧಿಸಿತ್ತೇ ವಿನಃ ದೇಶಗಳಿಗಲ್ಲ. ಈ ಪ್ರತಿಯೊಂದು ವಿಷಯಕ್ಕೆ ಸಂಬಂಧಪಟ್ಟಂತೆ ನಾವು ದಕ್ಷಿಣ ಕೊರಿಯಾ, ಫಿಲಿಪೀನ್ಸ್, ಥೈಲೇಂಡ್, ಇಂಡೋನೇಶಿಯಾ, ಮಲೇಶಿಯಾ ಮತ್ತು ಪೆಸಿಫಿಕ್ ದ್ವೀಪಗಳಲ್ಲಿ ಕಾರ್ಯಾಚರಣೆ ನಡೆಸಬೇಕಿತ್ತು.

ನಾನು ಹತ್ತು ವರ್ಷಗಳಿಗೂ ಹೆಚ್ಚಿನ ಸಮಯವನ್ನು ವಿನಿಯೋಗಿಸಿದ್ದ ಆಫ್ರಿಕನ್ ದೇಶಗಳಿಗೆ ಹೋಲಿಸಿದರೆ, ಈ ದೇಶಗಳು ಹೆಚ್ಚು ಮುಂದುವರಿದವು. ವಿದ್ಯಾಭ್ಯಾಸದ ಮಟ್ಟ ಉತ್ತಮವಾಗಿತ್ತು, ಸಾಮಾಜಿಕ ಸೇವೆ-ಸಲಕರಣೆಗಳು ಉನ್ನತ ಮಟ್ಟದವಾಗಿದ್ದವು, ರಸ್ತೆ-ಸಾರಿಗೆ ಮುಂತಾದ ಸೌಲಭ್ಯಗಳು ಸಾಕಷ್ಟು ಅನುಕೂಲವಾಗಿದ್ದವು ಮತ್ತು ಆಡಳಿತ ಸಹ ಮುಂದುವರೆದಿತ್ತು. ಹೀಗಾಗಿ, ಒಟ್ಟಾರೆ ಕೆಲಸಮಾಡುವ ವಾತಾವರಣ ಒಳ್ಳೆಯ ಮಟ್ಟದ್ದಾಗಿತ್ತು. ನನ್ನ ವಿಭಾಗದಲ್ಲಿ ದುಡಿಯಲು ಹನ್ನೆರಡು ವೃತ್ತಿಪರರೂ ಆರೇಳು ಸಹಾಯಕ ವರ್ಗದವರೂ ನಿಗದಿಯಾಗಿದ್ದರು. ಹಲವಾರು ಯೋಜನೆಗಳು ಆಗಲೇ ಪ್ರಾರಂಭವಾದವುಗಳ ಜೊತೆಗೆ ಹೊಸ ಹೊಸ ಪ್ರಸ್ತಾವನೆಗಳನ್ನೂ ಪರಿಶೀಲಿಸಲಾಗುತ್ತಿತ್ತು. ಕೈಗೆ ತೆಗೆದುಕೊಂಡ ಯೋಜನೆಗಳು ವಿಳಂಬವಿಲ್ಲದೇ ಸುಸೂತ್ರವಾಗಿ ಕಾರ್ಯಗತವಾಗುತ್ತಿದ್ದವು. ಆಫ್ರಿಕಾ ವಿಭಾಗದಲ್ಲಿ ಆಗುತ್ತಿದ್ದ ಅಡಚಣೆಗಳಾವುವೂ ಈ ವಿಭಾಗದಲ್ಲಿ ಕಂಡುಬರಲಿಲ್ಲ.

ನಾವು ಕೈಹಾಕಿದ ದೇಶಗಳ ಪೈಕಿ, ಕೊರಿಯಾ ದೇಶ ಉತ್ತಮ ಫಲಿತಾಂಶಗಳನ್ನು ತೋರಿಸುವಲ್ಲಿ ಅಗ್ರಗಣ್ಯವೆನಿಸಿತ್ತು. ಯೋಜನೆಗಳು ಸಂಪೂರ್ಣವಾಗಲು ಅತ್ಯಂತ ಶಿಸ್ತಿನಿಂದ ದುಡಿಯುತ್ತಿದ್ದ ನಿಪುಣ ಕೆಲಸಗಾರರ ಸಹಾಯದಿಂದ ನಮ್ಮ ಗುರಿಯನ್ನು ಅವಧಿಗೆ ಸರಿಯಾಗಿ, ಕೆಲವೊಮ್ಮೆ ಅವಧಿಗಿಂತ ಮುಂಚೆಯೇ ಮುಗಿಸುತ್ತಿದ್ದೆವು. ನನಗೆ ನೆನಪಾಗುತ್ತಿರುವ ಒಂದು ಸಾಲದ ಯೋಜನೆಯಂತೂ ನಮ್ಮ ಗುರಿಗೆ 5%ಗಿಂತ ಹೆಚ್ಚು ವ್ಯತ್ಯಾಸವಾಗದಂತೆ ನಡೆದಿತ್ತು (ಇಡೀ ಬ್ಯಾಂಕಿನ ಎಲ್ಲ ಯೋಜನೆಗಳಿಗೆ ಸಂಬಂಧಪಟ್ಟ ಅಂಕೆ-ಸಂಖ್ಯೆಗಳನ್ನು ನೋಡಿದರೆ, ಅವು ಗುರಿ ಮುಟ್ಟುವುದರಲ್ಲಿ ಏನಿಲ್ಲೆಂದರೂ 40%-50% ಹಿಂದಿರುತ್ತಿದ್ದವು). ನಮ್ಮ ಸಹಕರ್ಮಿಗಳೆಲ್ಲ ಕೊರಿಯಾ ದೇಶವನ್ನು ಹೊಗಳಿದ್ದೇ ಹೊಗಳಿದ್ದು; ಹೋಲಿಕೆಯಲ್ಲಿ ಇತರ ದೇಶಗಳು ಯಾವಾಗಲೂ ಹಿಂದಿರುತ್ತಿದ್ದವು ಮತ್ತು ಕೊರಿಯಾ ಮಟ್ಟಕ್ಕೆ ಇತರ ದೇಶಗಳನ್ನು ತರಲು ಬ್ಯಾಂಕಿನ ನೌಕರರು ಆಗಿಂದಾಗ್ಗೆ ಮೇಲೆಬಿದ್ದು ಕೆಲಸ ಮಾಡಿಸಬೇಕಾಗುತ್ತಿತ್ತು.

ಫಿಲಿಪೀನ್ಸ್‌ನೆಡೆಗೆ

ನಾನು ಪೂರ್ವ ಏಷಿಯಾ ವಿಭಾಗಕ್ಕೆ ಸೇರಿ ನಾಲ್ಕು ವರ್ಷಗಳ ನಂತರ ಬ್ಯಾಂಕು ಮತ್ತೆ ಪುನರ್‌ರಚನೆಗೊಂಡು, ವಿಭಾಗಗಳು ಯೋಜನೆಗಳಿಗೆ ಅನುವಾಗುವುದರ ಬದಲು, ದೇಶಗಳ ಪ್ರಕಾರ ಪುನರ್ವಿಂಗಡಣೆಗೊಂಡವು. ಫಿಲಿಪೀನ್ಸ್ ವಿಭಾಗಕ್ಕೆ ನನ್ನನ್ನು ಅಧಿಕಾರಿಯಾಗಿ ನೇಮಿಸಲಾಯಿತು. ಆ ದೇಶದಲ್ಲಿ ವ್ಯವಸಾಯಕ್ಕೆ ಇರುವ ಪ್ರಾಮುಖ್ಯವನ್ನು ಗಮನಿಸಿ ನನ್ನ ವಿಭಾಗಕ್ಕೆ, ಮೂರು ಮಂದಿ ನೀರಾವರಿ ತಜ್ಞರನ್ನೂ, ವ್ಯವಸಾಯೋತ್ಪನ್ನಗಳಿಗಾಗಿ ಸಾಲಕೊಡುವ ತಜ್ಞರನ್ನೂ, ಅರಣ್ಯಾಧಿಕಾರಿ ಮತ್ತು ಮೀನುಗಾರಿಕಾ ತಜ್ಞರನ್ನು ಸಹ ನೇಮಿಸಿದರು. ಒಟ್ಟು ಹನ್ನೊಂದು ಜನರು (ವೃತ್ತಿಪರರೂ, ಸಹಾಯಕ ವರ್ಗದವರೂ ಸೇರಿ) 1.7 ಮಿಲಿಯ ಡಾಲರುಗಳ ವಹಿವಾಟಿಗೆ ಜವಾಬ್ದಾರರಾಗಿದ್ದೆವು.

ಕೊರಿಯಾಗೆ ಹೋಲಿಸಿದಲ್ಲಿ ಇಲ್ಲಿನ ಕಾರ್ಯಸಾಧನೆಯ ಗತಿ ಕೊಂಚ ನಿಧಾನವೇ ಅನ್ನಿಸಿದರೂ ಸಾಲಹಂಚಿಕೆಯ ವಿಷಯದಲ್ಲಿ ಅವನ್ನು ತಲುಪಿಸುವುದರಲ್ಲಿ ಫಿಲಿಪೀನ್ಸ್ ತೋರುತ್ತಿದ್ದ ಕಾತರ ನನಗೆ ಮೆಚ್ಚುಗೆಯಾಯಿತು. ಹಲವಾರು ಮಂತ್ರಿಗಳು ಮತ್ತು ಅಭಿವೃದ್ಧಿ ಬ್ಯಾಂಕಿನ ಅಧಿಕಾರಿಗಳೊಂದಿಗೆ ನಾವು ವ್ಯವಹರಿಸುತ್ತಿದ್ದೆವು. ಹಿರಿಯ ಅಧಿಕಾರಿಗಳೇ ಆಗಲೀ, ಕ್ಷೇತ್ರದಲ್ಲಿ ದುಡಿಯುವ ಸಾಧಾರಣ ಕೆಲಸಗಾರರೇ ಆಗಲೀ, ಅವರೆಲ್ಲರೂ ಆಗಾಗ್ಗೆ ಎದುರಾಗುತ್ತಿದ್ದ ಅಡಚಣೆಗಳನ್ನು ನಿವಾರಿಸುವಲ್ಲಿ ಅತ್ಯಂತ ಉತ್ಸುಕರಾಗಿದ್ದರು. ಕಾರ್ಯಾಚರಣೆಯ ದೃಷ್ಟಿಯಿಂದ ಕೊರಿಯಾ ನಮಗೆ ಅತ್ಯಂತ ತೃಪ್ತಿ ತಂದ ದೇಶವಾದರೂ, ಫಿಲಿಪೀನ್ಸಿನ ಅಧಿಕಾರಿಗಳು ಸಹ ತಮ್ಮ ದಕ್ಷತೆಯನ್ನು ತೋರುವುದರಲ್ಲಿ ಹಿಂದುಳಿದಿರಲಿಲ್ಲ. ಆದರೆ, ಒಟ್ಟಾರೆ ವ್ಯವಹಾರಗಳ ವ್ಯವಸ್ಥೆಯಲ್ಲಿ ಮತ್ತು ಕ್ಷೇತ್ರಗಳಲ್ಲಿ ದುಡಿಯುವ ಸೇವಕರ ದೃಷ್ಟಿಯಲ್ಲಿ ಕೊರಿಯಾದ್ದೇ ಮೇಲುಗೈ ಎನ್ನಿಸಿತು.

ಪೂರ್ವ ಏಷಿಯಾ ಪ್ರಾಂತ್ಯಗಳಲ್ಲಿ ಕೊನೆಯ ನಿರ್ವಹಣೆ

ಪೂರ್ವ ಏಷಿಯಾ ಪ್ರಾಂತ್ಯದಲ್ಲಿ ಕೊನೆಯಲ್ಲಿ ನಾನು ನಿರ್ವಸಿದ ಜವಾಬ್ದಾರಿಯೆಂದರೆ, ಇಂಡೊನೇಶಿಯಾ, ಮಲೇಶಿಯಾ, ಪಪುವ ನ್ಯೂ ಗಿನಿ ಮತ್ತು ಪೆಸಿಫ಼ಿಕ್ ದ್ವೀಪಗಳ (ಫ಼ಿಜಿ, ಸಾಲೊಮನ್ ದ್ವೀಪಗಳು, ಮತ್ತು ಸಮೋವ) ವಿಭಾಗಾಧಿಕಾರಿಯಾಗಿ ದುಡಿದದ್ದು. ವಿಶಾಲ ಇಂಡೊನೇಶಿಯಾದಿಂದ ಹಿಡಿದು ಪುಟ್ಟ ಸಮೋವ ದ್ವೀಪಗಳಿಂದ ಕೂಡಿದ ಈ ಪ್ರದೇಶ ತುಂಬಾ ಸ್ವಾರಸ್ಯಕರವಾದದ್ದು. ನಮ್ಮ ಕಾರ್ಯಾಚರಣೆಯಲ್ಲಿ ಹೆಚ್ಚಿನವು, ಇಂಡೊನೇಶಿಯದಲ್ಲೂ ಅದಕ್ಕಿಂತ ಕಮ್ಮಿ ಮಲೇಶಿಯಾದಲ್ಲೂ ಮತ್ತು ಇತರ ಭಾಗಗಳಲ್ಲಿ ಅತ್ಯಲ್ಪವೂ ಆಗಿದ್ದವು. ಸಣ್ಣ ದ್ವೀಪಗಳನ್ನು ಭೇಟಿ ಮಾಡುವುದೆಂದರೆ, ಒಂದೇ ಇಂಜಿನ್ ಉಳ್ಳ ಸಣ್ಣ ಪುಟ್ಟ ವಿಮಾನಗಳಲ್ಲಿ ಕುಳಿತು

ದ್ವೀಪೋಲ್ಲಂಘನ ಮಾಡುವುದು! ಬ್ಯಾಂಕಿನಿಂದ ಹೆಚ್ಚು ಹೆಚ್ಚು ಸಾಲ ಪಡೆಯುವ ದೇಶವಾಗಿ ಇಂಡೊನೇಶಿಯಾ ನಮ್ಮ ವಿಭಾಗದ ಕೆಲಸಗಾರರ ಸಮಯವನ್ನು ಹೆಚ್ಚು ಹೆಚ್ಚು ಬೇಡುತ್ತಿತ್ತು. ಭಾರತದೊಂದಿಗಿನ ಭಾಷಾ ಸಾಮ್ಯ ಮತ್ತು ಸಾಂಸ್ಕೃತಿಕ ಸಂಬಂಧ ನನಗೆ ವಿಶೇಷ ಸೆಳೆತವಾಗಿತ್ತು. 'ವನಿತಾ', 'ಭಾಷಾ', 'ಇಂಡೋನೇಶಿಯಾ', 'ವನ–ಭಕ್ತಿ', 'ಭೂಮಿ ಪುತ್ರ', 'ಗೃಹ', 'ಪೂರ್ಣ', 'ಯುದ್ಧ', ಮುಂತಾದವು ಆಗಾಗ್ಗೆ ಕಿವಿಗೆ ಬೀಳುತ್ತಿದ್ದ ಶಬ್ದಗಳು. ಹೆಚ್ಚಿನ ಜನ ಮುಸಲ್ಮಾನರೇ ಆದರೂ ರಾಮಾಯಣ ನೃತ್ಯನಾಟಕ ಪ್ರದರ್ಶನಗಳು ಅಲ್ಲಿ ಅತ್ಯಂತ ಜನಪ್ರಿಯ. ಬೋರೋಬೊದುರಿನಲ್ಲಿರುವ ಬೌದ್ಧ ವಿಹಾರ, ಮತ್ತು ಸಂವಿಧಾನದ ಪ್ರಕಾರ ಹಿಂದೂ ಎಂದು ಗುರುತಿಸಲ್ಪಟ್ಟಿರುವ ಬಾಲಿ ದ್ವೀಪ ಹಾಗೂ ಥೈಲೇಂಡಿನಲ್ಲೂ ಇರುವ 'ಅಯುಧ್ಯಾ' ಅಲ್ಲಿನ ಹಳೆ ರಾಜಧಾನಿ. 'ರಾಮಕೀರ್ತಿ' (ರಾಮಾಯಣ) ಅಲ್ಲಿ ಪವಿತ್ರ ಗ್ರಂಥವೆಂದು ಗೌರವಿಸಲ್ಪಡುತ್ತದೆ, ರಾಮಾಯಣದ ಕಥೆಗಳು ದೇವಾಲಯಗಳ ಭಿತ್ತಿಗಳ ಮೇಲೆಲ್ಲ ಕೆತ್ತಲ್ಪಟ್ಟಿವೆ.

ಕೊರಿಯಾ ಮತ್ತು ಫಿಲಿಪೀನ್ಸ್ ದೇಶಗಳಿಗೆ ಹೋಲಿಸಿದರೆ, ಇಂಡೊನೇಶಿಯಾದಲ್ಲಿ ನಡೆದ ಕಾರ್ಯಾಚರಣೆ ಅರ್ಧದಷ್ಟು ಸಫಲ. ಇಂಡೊನೇಶಿಯಾದ ರಾಜಧಾನಿ ಜಕಾರ್ತದಲ್ಲಿನ ಆಡಳಿತ ಸಿಬ್ಬಂದಿಯಲ್ಲಿ ಅಮೆರಿಕದ ಅತ್ಯುತ್ತಮ ವಿಶ್ವವಿದ್ಯಾನಿಲಯಗಳಲ್ಲಿ ಪದವಿಗಳನ್ನು ಪಡೆದ ಹಲವಾರು ಪ್ರತಿಭಾವಂತರೂ ಇದ್ದರು. ಇಂಥಾ ಯುವ ಪ್ರತಿಭೆಗಳು ಸಾಧಾರಣವಾಗಿ ಆರ್ಥಿಕ ಮತ್ತು ಯೋಜನಾ ಇಲಾಖೆಗಳಲ್ಲಿ ದುಡಿಯುತ್ತಿದ್ದರು, ಅವರ ಹಿಂದಿನ ತಲೆಮಾರಿನ ಆಡಳಿತ ಸಿಬ್ಬಂದಿ ವ್ಯವಸಾಯ ಮತ್ತು ನೀರಾವರೀ ಇಲಾಖೆಗಳಲ್ಲಿದ್ದರು. ಈ ಎರಡು ಗುಂಪುಗಳು ಒಂದಕ್ಕೊಂದು ಎಣ್ಣೆ–ಸೀಗೇಕಾಯಿನ ಸಂಬಂಧವನ್ನು ಹೊಂದಿದ್ದವು.

ಕಾರ್ಯಾಚರಣೆ ಮತ್ತು ನಿಲವುಗಳ ಇಲಾಖೆ

1988ರಲ್ಲಿ ನಾನು ಬ್ಯಾಂಕಿನ ಕಾರ್ಯಾಚರಣೆ ಮತ್ತು ನಿಲವುಗಳನ್ನು ಸಮೀಕ್ಷೆ ಮಾಡುವ ಘಟಕಕ್ಕೆ ಮುಖ್ಯಸ್ಥನಾದೆ. ಈ ಘಟಕಕ್ಕೆ ಎಂಟು ಹಿರಿಯ ಅಧಿಕಾರಿಗಳು ಮತ್ತು ನಾಲ್ಕು ಮುಖ್ಯ ಧ್ಯೇಯಗಳು: (1) ಬ್ಯಾಂಕಿನ ಕಾರ್ಯಾಚರಣೆಗಳ ಕೈಪಿಡಿಯನ್ನು ಕಾರ್ಯರೂಪಕ್ಕಿಳಿಸುವುದು ಹಾಗೂ ಅನುಭವಗಳ ಸಹಾಯದಿಂದ ತಿದ್ದಿ ಹೊಸ ಆವೃತ್ತಿಯನ್ನು ತಯಾರಿಸುವುದು; (2) ಆರ್ಥಿಕ ಧೋರಣೆ, ಅರ್ಥಶಾಸ್ತ್ರದ ವಿಧಾನಗಳು ಮತ್ತು ತಾಂತ್ರಿಕ ಸಹಾಯ ಇವುಗಳ ಬಗ್ಗೆ ಇಡೀ ಬ್ಯಾಂಕಿನ ತಾಂತ್ರಿಕ ವರ್ಗಕ್ಕೆ ಸಲಹೆ ಕೊಡುವುದು; (3) ಹಿರಿಯ ಅಧಿಕಾರಿಗಳ ಕೋರಿಕೆಯ ಮೇರೆಗೆ, ನಿಲುವುಗಳ ವಿಶ್ಲೇಷಣೆ; ಮತ್ತು (4) ಸಂಯುಕ್ತ ರಾಷ್ಟ್ರ ಸಂಸ್ಥೆಯೊಂದಿಗೆ ಸಂಪರ್ಕ ಮತ್ತು ಒಡಂಬಡಿಕೆ. ವಿಭಾಗದಲ್ಲಿರುವವರೆಲ್ಲ ಅನುಭವಸ್ಥರೂ ಹಿರಿಯರೂ ಆಗಿರುವುದರಿಂದ ವಿಭಾಗಾಧಿಕಾರಿ ಸಾಧಾರಣವಾಗಿ ಬ್ಯಾಂಕಿನ ಹಲವಾರು ವಿಭಾಗಗಳಲ್ಲಿ ದುಡಿದ ಹಿರಿಯ

ಅನುಭವಿಯಾಗಿರುತ್ತಾನೆ. ಯಾವ ಒಂದು ದೇಶಕ್ಕೂ ಸೀಮಿತವಲ್ಲದ ಈ ಹುದ್ದೆ ನನಗೆ ಮೊಟ್ಟ ಮೊದಲ ಅನುಭವವಾಗಿತ್ತು. ಈ ಕೆಲಸದಲ್ಲಿ ಎರಡು ವರ್ಷಗಳನ್ನು ಕಳೆಯುವಷ್ಟರಲ್ಲೇ ಬ್ಯಾಂಕು ಮತ್ತೊಂದು ಸಾರಾಸಗಟು ಪುನರ್‌ರಚನೆಯನ್ನು ಎದುರಿಸಬೇಕಾಯಿತು. ಆ ಸಂದರ್ಭದಲ್ಲಿ, ನಮ್ಮ ವಿಭಾಗದ ಮೇಲಧಿಕಾರಿಯೂ ಮತ್ತೊಂದು ಹುದ್ದೆಗೆ ವರ್ಗಾಯಿಸಲ್ಪಟ್ಟಿದ್ದು, ಆತ ನನ್ನನ್ನು ಆ ವಿಭಾಗದ ಸಲಹೆಗಾರನಾಗಿ ಸೇರಿಕೊಳ್ಳುವಂತೆ ತಾಕೀತು ಮಾಡಲಾಗಿ, ಆತನೊಂದಿಗೆ ನನಗೆ ಉತ್ತಮ ವೈಯಕ್ತಿಕ ಸಂಬಂಧವೂ ಇದ್ದದ್ದರಿಂದ, ತಕ್ಷಣ ಒಪ್ಪಿಕೊಂಡೆ.

ಕೊನೆಯ ಹುದ್ದೆ

ನಾನು ಸಲಹೆಗಾರನಾಗಿ ಸೇರಿದ ಇಲಾಖೆಯಡಿ ಪಾಕಿಸ್ತಾನ ಮತ್ತು ಟರ್ಕಿ ದೇಶಗಳಿದ್ದವು, ಅವೆರಡೂ ಬ್ಯಾಂಕಿನಿಂದ ಹೆಚ್ಚು ಹೆಚ್ಚು ಸಾಲಪಡೆಯುತ್ತಿದ್ದ ದೇಶಗಳೇ. ಎರಡೂ ದೇಶಗಳಲ್ಲಿ ಹಲವಾರು ಕಾರ್ಯಾಚರಣೆಗಳು ಆಗಲೇ ನಡೆಯುತ್ತಿದ್ದವಷ್ಟೇ ಅಲ್ಲದೆ, ಹಲವೊಂದು ಹೊಸ ಪ್ರಸ್ತಾವಗಳೂ ಗಮನದಲ್ಲಿದ್ದವು. ಹೀಗಾಗಿ, ಚಟುವಟಿಕೆಯ ಮಟ್ಟ ಅತಿ ಹೆಚ್ಚಾಗೇ ಇತ್ತು.

ಸಲಹೆಗಾರನಾಗಿ ನಾನು ಹಲವು ಹತ್ತು ವಿಷಯಗಳ ಬಗ್ಗೆ ನನ್ನ ಅಭಿಮತವನ್ನು ಕೊಡಬೇಕಾಗುತ್ತಿತ್ತು. ಕಿರಿಯ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡುವುದು, ವಾರ್ಷಿಕ ವರದಿಗಳ ಗುಣಮಟ್ಟವನ್ನು ಕಾಪಾಡುವುದು, ಇಡೀ ವಿಭಾಗದಲ್ಲಿ ತಯಾರಾದ ಕರಡುಗಳನ್ನು ಅಲ್ಪ ಕಾಲದಲ್ಲೇ ಸಮೀಕ್ಷಿಸಿ, ವಿಶ್ಲೇಷಿಸಿ ಪ್ರತಿಕ್ರಿಯೆ ವ್ಯಕ್ತಪಡಿಸುವುದು, ಇವೆಲ್ಲ ನನ್ನ ಜವಾಬ್ದಾರಿಗಳಾಗಿದ್ದವು. ಈ ಸಮಯದಲ್ಲಿ ನಾನು ಟರ್ಕಿಗೆ ಮೂರು ಬಾರಿ ಮತ್ತು ಪಾಕಿಸ್ತಾನಕ್ಕೆ ಒಂದು ಬಾರಿ ಭೇಟಿ ಕೊಟ್ಟೆ. ಮೂವರು ಪಾಕಿಸ್ತಾನಿಯರು ಒಬ್ಬಾತ ಸಹ-ಕಾರ್ಯಕರ್ತ, ಇನ್ನಿಬ್ಬರು ನನ್ನ ನಾಯಕತ್ವದಲ್ಲೇ ದುಡಿಯುತ್ತಿದ್ದವರು ನನ್ನನ್ನು ತಮ್ಮ ದೇಶದಲ್ಲಿ ಕಂಡು ತುಂಬಾ ಖುಷಿಪಟ್ಟಿದ್ದೇ ಅಲ್ಲದೇ, ನನ್ನ ಮೀಟಿಂಗುಗಳು ಮುಗಿದು ಸಂಜೆಯ ವೇಳೆ ಸಮಯ ಸಿಕ್ಕಾಗ ತಮ್ಮ ತಮ್ಮ ಮನೆಗಳಿಗೆ ಆಹ್ವಾನಿಸಿ ಆತಿಥ್ಯ ಮಾಡಿದರು. ಅವಿಭಜಿತ ಭಾರತದಿಂದ ಸ್ವಾತಂತ್ರ್ಯಾನಂತರ ಪಾಕಿಸ್ತಾನಕ್ಕೆ ವಲಸೆ ಬಂದಿದ್ದ ಇಬ್ಬರು ಸಿವಿಲ್ ಇಂಜಿನಿಯರುಗಳು ನನ್ನನ್ನು ಕಾಣಲು ಬಂದಿದ್ದರು, ತಾವು ಬಿಟ್ಟು ಬಂದ ತಮ್ಮ ಊರಿನ ಬಗ್ಗೆ ವಿಚಾರಿಸಲು! ಅಂತೂ ಪಾಕಿಸ್ತಾನದಿಂದ ಒಳ್ಳೊಳ್ಳೆ ನೆನಪುಗಳೊಂದಿಗೆ ಹಿಂದಿರುಗಿದೆ. ಆದರೆ, ವಿಶ್ವ ಬ್ಯಾಂಕಿನ ನಿಲುವುಗಳನ್ನು ಪಾಕಿಸ್ತಾನದಲ್ಲಿ ಕಾರ್ಯರೂಪಕ್ಕೆ ತರುವುದು ಮಾತ್ರ ಕಷ್ಟಕರವಾಗಿತ್ತು, ನಾವು ಮತ್ತೆ ಮತ್ತೆ ಮಧ್ಯೆ ಪ್ರವೇಶ ಮಾಡುವ ಅಗತ್ಯವುಂಟಾಗುತ್ತಿತ್ತು.

ಟರ್ಕಿಯ ಕಥೆಯೇ ಬೇರೆ. ನಾಗರೀಕತೆಯ ಐದು ಪದರಗಳುಳ್ಳ ಅಭಿಮಾನಿಗಳ ದೇಶ, ಯೂರೋಪ್ ಮತ್ತು ಏಷಿಯಾಗಳ ನಡುವಿನ ಸೇತುವೆ, ನೇಟೋ ಸದಸ್ಯ,

ಯೂರೋಪನ್ನು ಸೇರುವ ಹೆಬ್ಬಯಕೆಯಿಂದಿದ್ದ ಟರ್ಕಿಯೊಂದಿಗೆ ಕೆಲಸಮಾಡುವುದು ಸುಲಭದ ಮಾತಾಗಿರಲಿಲ್ಲ. ನಮ್ಮ ಬ್ಯಾಂಕಿನೊಂದಿಗೆ ವ್ಯವಹರಿಸುತ್ತಿದ್ದವರು ಅಲ್ಲಿನ ಖಜಾನೆ ಮತ್ತು ಯೋಜನಾ ಮಂತ್ರಾಲಯಗಳು. ಆದರೆ, ಇಂಡೊನೇಶಿಯಾದಲ್ಲಿದ್ದಂತೆ, ಟರ್ಕಿಯ ಇತರ ಇಲಾಖೆಗಳ ಮಂತ್ರಾಲಯಗಳು ತಮ್ಮ ಇಲಾಖೆಗಳ ಪರವಾಗಿ ಖಜಾನೆ ಮತ್ತು ಯೋಜನಾ ಇಲಾಖೆಗಳು ತೀರ್ಮಾನಿಸುವುದನ್ನು ಅವರು ಒಪ್ಪುತ್ತಿರಲಿಲ್ಲ. ಅದರ ಜೊತೆಗೆ ಇನ್ನೂ ಕೆಲವು ಆರ್ಥಿಕ ಸಂಸ್ಥೆಗಳು ಸ್ವತಂತ್ರವಾಗಿ ವರ್ತಿಸುವುದರ ಮೂಲಕ ವಿಷಮ ಪರಿಸ್ಥಿತಿಯನ್ನುಂಟುಮಾಡುತ್ತಿದ್ದವು. ಅವರ ಆಂತರಿಕ ಭಿನ್ನಾಭಿಪ್ರಾಯಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ಅವರವರ ನಡುವೆ ವಿಚಾರ ವಿನಿಮಯಕ್ಕೆ ಅವಕಾಶ ಮಾಡಿಕೊಡುತ್ತಾ ನಮ್ಮ ಕಾರ್ಯಾಚರಣೆಯನ್ನು ಸುಗಮಗೊಳಿಸುವುದಷ್ಟೇ ನಮ್ಮ ಕೆಲಸವಾಗಿತ್ತು.

ನನ್ನ ನಿವೃತ್ತಿಗೆ ಒಂದು ವರ್ಷ ಮೊದಲು, ಟರ್ಕಿ ಮತ್ತು ಪಾಕಿಸ್ತಾನಗಳ ವಿಭಾಗಕ್ಕೆ ಹೊಸ ನಿರ್ದೇಶಕರು ನಿಯಮಿಸಲ್ಪಟ್ಟರು, ಆತ ನನಗೆ ತಿಳಿದವರೇ ಆಗಿದ್ದರು ಹಾಗೂ ನನ್ನಲ್ಲಿ ವಿಶ್ವಾಸ ಮತ್ತು ಗೌರವ ಉಳ್ಳವರಾಗಿದ್ದರು. ಹಾಗಾಗಿ ನನ್ನ ನಿವೃತ್ತಿಯ ತಯಾರಿ ಸುಲಭಸಾಧ್ಯವಾಯಿತು. ನನ್ನ ಸ್ಥಾನವನ್ನು ತೆಗೆದುಕೊಳ್ಳುವವರು ನಿಯಮಿಸಲ್ಪಡುವವರೆಗೂ – ಸುಮಾರು ಮೂರು ತಿಂಗಳು ಕಾಲ – ಸಲಹೆಗಾರನಾಗಿ ಮುಂದುವರೆದು, ಕೊನೆಗೆ ಅಕ್ಟೋಬರ್ 1990ರಲ್ಲಿ ನಾನು ಕೆಲಸದಿಂದ ವಿಶ್ರಾಂತಿ ಪಡೆದೆ.

ಹಲವು ಅಳಿಸಲಾಗದ ಮುದ್ರೆಗಳು

ಪ್ರಪಂಚದ ನಾನಾ ದೇಶಗಳಲ್ಲಿ ದುಡಿಯುವ ಮೂಲಕ ಅಖಂಡ ಜೀವನಾನುಭವವನ್ನು ಗಳಿಸುವ ಅಮೋಘವಾದ ಅವಕಾಶಗಳನ್ನು ವಿಶ್ವ ಬ್ಯಾಂಕ್ ಕಲ್ಪಿಸುತ್ತದೆ. ವಿಶ್ವದ ನಾಲ್ಕು ಖಂಡಗಳಲ್ಲಿರುವ ಇಪ್ಪತ್ತೈದು ದೇಶಗಳಲ್ಲಿ (ಆಫ್ರಿಕದ ಲೆಸೊತೊವಿನಿಂದ ಹಿಡಿದು ಏಷಿಯಾದ ಕೊರಿಯಾವರೆಗೆ) ದುಡಿದಿದ್ದೇನೆ. ಅಲ್ಲಿಯ ಜನರು ಪಡುವ ಬವಣೆ, ಮಕ್ಕಳ ವಿದ್ಯಾಭ್ಯಾಸದಂಥ ಸಣ್ಣಪುಟ್ಟ ಆಶಯಗಳ ಬಗ್ಗೆ ಚಿಂತಿಸಿದ್ದೇನೆ, ಬಡ ಜನರ ಆರೋಗ್ಯದ ಬಗ್ಗೆ ತಲೆಕೆಡಿಸಿಕೊಂಡಿದ್ದೇನೆ, ದುಡಿಯುವವರಿಗೆ ಕೆಲಸ ಸಿಕ್ಕೀತೆ, ಕೆಲಸ ಮಾಡುವವರಿಗೆ ತಕ್ಕ ಪ್ರತಿಫಲ ದೊರಕೀತೆ, ಲಂಚ–ರಿಷ್ವತ್ತುಗಳಿಲ್ಲದೆ ಆಡಳಿತಗಳು ಎಲ್ಲ ದೇಶಗಳಲ್ಲೂ ಸಾಧ್ಯವೇ, –ಹೀಗೆ ಒಂದೇ ಎರಡೇ ಚಿಂತಿಸಲು ಯೋಗ್ಯವಾದ ವಿಷಯಗಳು? ಚಾರಿತ್ರಿಕ ಹಿನ್ನೆಲೆ, ವಿವಿಧ ಸಾಂಸ್ಕೃತಿಕ ಸಂದರ್ಭಗಳು, ಅದರಿಂದುಂಟಾಗುವ ಸಾಮರ್ಥ್ಯದ ತಾರತಮ್ಯ, ಇವನ್ನೆಲ್ಲ ಲೆಕ್ಕಹಾಕಿದರೆ, ಬೇರೆ ಬೇರೆ ಜನಾಂಗಗಳ ಸಾಧನೆಯಲ್ಲಿ ವ್ಯತ್ಯಾಸ ಕಂಡುಬರುವುದರಲ್ಲಿ ಅಚ್ಚರಿಯೇನಿಲ್ಲ.

ಬ್ಯಾಂಕಿನ ಕೆಲಸದ ವಾತಾವರಣ ಸಹ ಮಾಂತ್ರಿಕವಾದದ್ದು. 1966ರಲ್ಲಿ ನಾನು

ಬ್ಯಾಂಕ್ ಸೇರಿದಾಗ ಒಟ್ಟು ಕೆಲಸಗಾರರ ಸಂಖ್ಯೆ 600 ತಾಂತ್ರಿಕ/ವೃತ್ತಿಪರರು ಮತ್ತು ಅಷ್ಟೇ ಸಂಖ್ಯೆಯ ಸಹಾಯಕ ವರ್ಗ. ನಾನು ನಿವೃತ್ತನಾದಾಗ ಒಟ್ಟು ಕೆಲಸಗಾರರ ಸಂಖ್ಯೆ ಸುಮಾರು 5,000 ವೃತ್ತಿಪರರು, ಆದರೆ ಸಹಾಯಕ ವರ್ಗದ ಸಂಖ್ಯೆ ತೀರಾ ಕಡಿಮೆ, ಏಕೆಂದರೆ ಮಾಹಿತಿ ತಂತ್ರಜ್ಞಾನ ಮತ್ತು ಗಣಕಗಳ ಕಾರಣ ಎಲ್ಲ ಸ್ವಸಹಾಯ ಪದ್ಧತಿ! ಸುಮಾರು ಐವತ್ತು ದೇಶಗಳಿಂದ ಬಂದ ಕೆಲಸಗಾರರು, ಅವರ ರೀತಿ-ರಿವಾಜುಗಳು, ಅವರ ಕೆಲಸದ ಶೈಲಿಯ ಭಿನ್ನತೆ ಮತ್ತು ವೈವಿಧ್ಯ. ನಾನು ಕಂಡ ಹಾಗೆ ನನ್ನೊಡನೆ ದುಡಿಯುತ್ತಿದ್ದ ಜರ್ಮನ್ ಕೆಲಸಗಾರರ ಕಾರ್ಯತತ್ಪರತೆ, ಶಿಸ್ತು, ಸಂಯಮ, ಸಮಯಪಾಲನೆ ಅಸಾಧಾರಣ. ಅವರು ಕೆಲಸಗಳನ್ನು ಯಾವುದು ಮುಖ್ಯ ಯಾವುದು ಗೌಣ ಎಂದು ವಿಭಜಿಸಿಕೊಳ್ಳುವ ಕ್ರಮ, ಕರ್ತವ್ಯಶೀಲತೆ ಇವೆಲ್ಲ ಅನುಕರಣೀಯ. ಜರ್ಮನಿ ದೇಶದಿಂದ ಬಂದಿದ್ದ ಇಬ್ಬರು ಉಪಾಧ್ಯಕ್ಷರು ಮತ್ತು ಇಬ್ಬರು ನಿರ್ದೇಶಕರ ಸಹವರ್ತಿಯಾಗಿ ದುಡಿದು ಅವರಿಂದ ಅನೇಕ ವಿಷಯಗಳನ್ನು ಕಲಿತು ಅವರ ಮಾರ್ಗದರ್ಶನ ಮತ್ತು ವಿವೇಕದಿಂದ ಲಾಭ ಪಡೆದೆ.

ಬ್ಯಾಂಕಿನಲ್ಲಿ ದುಡಿದ ಅನೇಕರು ತಮ್ಮ ತಮ್ಮ ದೇಶಗಳಿಗೆ ಹಿಂದಿರುಗಿ ಹಲವರು ಆರ್ಥಿಕ ಅಥವಾ ಯೋಜನಾ ವಿಭಾಗಗಳಲ್ಲಿ ದೊಡ್ಡ ದೊಡ್ಡ ಹುದ್ದೆಗೇರಿದ್ದಾರೆ, ಹಲವು ದೇಶದ ಅಧ್ಯಕ್ಷರೂ ಆಗಿರುವ ನಿದರ್ಶನಗಳಿವೆ. ಇದು ಆಫ್ರಿಕಾ, ದಕ್ಷಿಣ- ಮತ್ತು ಮಧ್ಯ-ಅಮೆರಿಕಾ ದೇಶಗಳ ವಿಷಯದಲ್ಲಂತೂ ತುಂಬ ನಿಜವಾದ ಮಾತು. ಜಗತ್ತಿನ ದೇಶಗಳು ವಿಶ್ವ ಬ್ಯಾಂಕಿನ ಅನುಭವಕ್ಕೆ ಕೊಡುವ ಮಹತ್ವದ ಪ್ರತೀಕ ಇದು.

ವಿಶ್ವ ಬ್ಯಾಂಕಿಗೆ ನನ್ನನ್ನು ಕೊಂಡೊಯ್ದ ಹಾದಿ ವಿಸ್ಮಯಕಾರಕ. ದೀರ್ಘಾವಧಿಯ ಸಂಸರ್ಗದ ನಂತರ ಅರವತ್ತೈದನೆ ವಯಸ್ಸಿನಲ್ಲಿ ನಾನು ನಿವೃತ್ತನಾದಾಗ ಶ್ರೀಮಂತ ಹಾಗೂ ಫಲಪ್ರದ ಅನುಭವಗಳನ್ನು ಪಡೆದ ಸಂಭ್ರಮ ನನಗಾಗಿತ್ತು. ಆಗಾಗ್ಗೆ ಬ್ಯಾಂಕಿಗೆ ಸಲಹೆಗಾರನಾಗಿ ದುಡಿಯುತ್ತ ನನ್ನ ಅತಿ ಚಟುವಟಿಕೆಯ ಜೀವನದಿಂದ ವಿಶ್ರಾಂತಿಯ ಜೀವನಕ್ಕೆ ಹೊಂದಿಕೊಳ್ಳಲು ಒಂದು ಇಳಿಜಾರನ್ನು ನಿರ್ಮಿಸಿಕೊಂಡೆ. ಈಗ ನಿವೃತ್ತ ಜೀವನದಲ್ಲಿ ಆರಾಮಾಗಿದ್ದೇನೆ!

ಬೇರು ಸೂರು

ಅರ್ಬುದ ನೀಡಿದ ಅದ್ಭುತ ಅನುಭವ



– ಆಹಿತಾನಲ

ಸಹಕಾರ: ಲಕ್ಷ್ಮಿ ಐತಾಳ

ನಮ್ಮ ಅಮೆರಿಕದ ಬದುಕು ಏರಿಳಿತಗಳೊಂದಿಗೇ ಸಾಗಿ ಬಂದಿದೆ. ಹುಟ್ಟು–ಸಾವು, ಕತ್ತಲು–ಬೆಳಕು, ತಪ್ಪು–ಸರಿ,– ಎಂಬಿತರ ವೈರುಧ್ಯಗಳು ವಿಶೇಷ ರೀತಿಯಲ್ಲಿ ನಮ್ಮೆಲ್ಲರ ಜೀವನವನ್ನು ಸ್ಪಂದಿಸಿ, ಅದಕ್ಕೊಂದು ವಿಶಿಷ್ಟ ಅರ್ಥ ಕಲ್ಪಿಸಿಕೊಡುತ್ತವೆ. ಕಹಿಯೆಂಬುದಿಲ್ಲದಿರುತ್ತಿದ್ದರೆ, ಸಿಹಿ ಎಂಬ ಶಬ್ದ ಅರ್ಥ ಕಳೆದುಕೊಳ್ಳುತ್ತದೆ. ಸೋಲಿನಿಂದ, ಗೆಲುವಿಗೆ ಸವಿ ಜಾಸ್ತಿ. ಜೀವನದಲ್ಲಿ ಎದುರಿಸುವ ಕಹಿ ಅನುಭವಗಳೇ ನಮಗೆ 'ಸುಖ'ದ ದಾರಿ ತೋರಿಸುತ್ತವೆ. ನನಗೆ ಈ ಅನುಭವವಾದುದು ಒಂದು ವಿಶಿಷ್ಟ ರೀತಿಯಲ್ಲಿ. ಪರಕೀಯ ಪರಿಸರದಲ್ಲಿರುತ್ತ, ನನ್ನ ಕೈಹಿಡಿದಾಕೆ, ಲಕ್ಷ್ಮಿ (ಪುಟ್ಟಮ್ಮ), ಅನುಭವಿಸಿದ ಕ್ಯಾನ್ಸರ್ ಬಾಧೆ ಮತ್ತು ಅದರ ಮೇಲಿನ ಅವಳ ಯಶಸ್ವಿ ಹೋರಾಟ ನನ್ನ ಮೇಲೆ ಮಾಡಿದ ಪರಿಣಾಮ, ಅದು ನೀಡಿದ ಅನುಭವ, ತೋರಿಸಿದ ಮಾರ್ಗ – ಎಲ್ಲವನ್ನೂ ನಾನು ಮರೆಯುವಂತಿಲ್ಲ. ನಾನು ಅವಳ ಅನುಭವಗಳನ್ನು, 'ಹೊರಗಿನಿಂದ' ನೋಡಿದ್ದರೂ, ಅವಳ ಯಾತನೆ ನನ್ನದೂ ಆಗಿದ್ದು, ಅವಳ ಸಂಕಟದಲ್ಲಿ ನಾನೂ ಭಾಗಿಯಾಗಿದ್ದು, ಅದು ನನ್ನೊಳಗಿನ ಸಂಕಟವೂ, ಹೋರಾಟವೂ ಆಗಿತ್ತು! ಅವುಗಳನ್ನೇ ನಾನೀಗ ಅವಳ ದೃಷ್ಟಿಕೋನದಿಂದ ವಿವರಿಸಲು ಪ್ರಯತ್ನಿಸುತ್ತಿದ್ದೇನೆ. ಹಾಗೆ ಮಾಡಿದಾಗ, ನಾನು ಅವಳ ಸಂವೇದನೆಯೊಡನೆ ಸ್ವಲ್ಪವಾದರೂ ಸ್ಪಂದಿಸುತ್ತಿದ್ದೇನೆ ಎಂಬ ನಂಬಿಕೆ ಇದೆ.

'ದೃಢತೆಗೆ ಧಕ್ಕೆ ಬಂದಾಗ, ದಾರ್ಢ್ಯವೇ ದಾರಿದೀಪ'

1975ರ ದಶಂಬರದಲ್ಲಿ, ಕ್ರಿಸ್‌ಮಸ್ ಹಬ್ಬದ ದಿನ, ನಮ್ಮ ಬಂಧುಗಳಾದ ಸುಬ್ರಾಯ ಮತ್ತು ನಳಿನಿ ಮೈಯರ ಮನೆಗೆ ಸಾಯಂಕಾಲ ಭೋಜನಕ್ಕೆಂದು ಹೋಗಿ, ಅಲ್ಲಿ ಅತಿ ಸಂತೋಷದಿಂದ ಸಮಯ ಕಳೆದ ಮರುದಿನ ಬೆಳಿಗ್ಗೆ – ಅಂದು ಶುಕ್ರವಾರ – ಸ್ನಾನ ಮಾಡುತ್ತ ನನ್ನವಳು ಬಲ ಬದಿ ಸ್ತನದಲ್ಲಿ ಒಂದು ಚಿಕ್ಕ ಗಡ್ಡೆ ಇರುವುದನ್ನು ಗಮನಿಸಿ, ನನ್ನನ್ನು ಎಚ್ಚರಿಸಿದಳು. ಆದರೆ ಅಂದು ನಾವು, ಆ ಗಡ್ಡೆಯು ಮಾರಕ ಗಡ್ಡೆಯಾಗಿರಲಾರದೆ, ಸೌಮ್ಯ ಗಡ್ಡೆಯಾಗಿರಬಹುದೆಂದು ಎಣಿಸಿದೆವು. ಸಂದೇಹ ನಿವಾರಣೆಗೆ ನಮ್ಮ ಡಾಕ್ಟರರಿಗೆ ಫೋನ್ ಮಾಡಿದಾಗ, ಕ್ರಿಸ್‌ಮಸ್

ಸಮಯವಾದುದರಿಂದ, ಅವರನ್ನು ಸಂಪರ್ಕಿಸಲಾಗಲಿಲ್ಲ. ನಾನು ಶಿಕಾಗೋ ಯುನಿವರ್ಸಿಟಿ ಆಸ್ಪತ್ರೆಯ ಪೆಥಾಲಜಿ ಮತ್ತು ಮೆಡಿಸಿನ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದು, ನನಗೆ ಗೊತ್ತಿರುವ ತಜ್ಞರ ಅಭಿಪ್ರಾಯ ಮುಂದಿನ ಸೋಮವಾರ ಪಡೆಯಬಹುದೆಂದು ಅಂದು ನನ್ನವಳಿಗೆ ಆಶ್ವಾಸನೆ ಕೊಟ್ಟೆ. ಹಾಗೆಂದು, ಮುಂದಿನ ಸೋಮವಾರ, ನನ್ನ ಮೇಲ್ವಿಚಾರಕರಾದ ಡಾ. ಟೊಬ್ಯಾಕ್‌ರ ಸಹಾಯದಿಂದ, ಬ್ರೆಸ್ಟ್ ಕ್ಯಾನ್ಸರ್ ತಜ್ಞರಾದ ಡಾ. ಫರ್ಗ್ಯುಸನ್‌ರ ಬಳಿ ಎಲ್ಲ ವಿವರ ಕೊಟ್ಟಾಗ, ಅವರು ಮರುದಿನ ಲಕ್ಷ್ಮಿಯನ್ನು ಆಸ್ಪತ್ರೆಗೆ ಕರೆತರಲು ಸಲಹೆ ಕೊಟ್ಟರು. ಹಾಗೆ ಹೇಳುತ್ತ ಹೆಚ್ಚಾಗಿ ಇಂತಹ ಗಡ್ಡೆಗಳು ಕ್ಯಾನ್ಸರ್ ಆಗಿರದೆ, 'ಸಿಸ್ಟ್' ಆಗಿರುತ್ತವೆಂದು ಧೈರ್ಯವನ್ನೂ ಕೊಟ್ಟಿದ್ದರು. ಮರುದಿನ, ಮಕ್ಕಳಿಗೆ ಸಮಾಧಾನ ಹೇಳಿ, ಅವಳನ್ನು ಯುನಿವರ್ಸಿಟಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅಲ್ಲಿ, ಡಾ. ಫ್ಲರ್ಗ್ಯುಸನ್‌ರು ಹಲವು ಪರೀಕ್ಷೆಗಳನ್ನು ಮಾಡಿ, ಆ ರಾತ್ರಿ ನನ್ನವಳು ಆಸ್ಪತ್ರೆಯಲ್ಲೇ ಉಳಿಯುವ ಹಾಗೆ ಸಲಹೆ ಮಾಡಿದರು. ಮರುದಿನ ಬೆಳಿಗ್ಗೆ ಮುಂಚೆಗೆ ಬಯಾಪ್ಸಿ ಮಾಡುವುದಾಗಿಯೂ, ಅದು ಕ್ಯಾನ್ಸರ್ ಎಂದಾದ್ದಲ್ಲಿ, ಕೂಡಲೇ ಸರ್ಜರಿ ಮಾಡುವುದಾಗಿಯೂ ಹೇಳಿದರು. ಆಗಿನ ಆರೈಕೆ ವಿಧಾನದ ಪ್ರಕಾರ, ಕ್ಯಾನ್ಸರ್ ಹೌದಾದಲ್ಲಿ, ರ‍್ಯಾಡಿಕಲ್ ಮ್ಯಾಸ್ಟೆಕ್ಟೊಮಿ ಮಾಡುವುದು ರೂಢಿಯಲ್ಲಿದ್ದಿತ್ತು. ಆ ಬಗ್ಗೆ ನಾನೂ, ಲಕ್ಷ್ಮಿ ಇಬ್ಬರೂ ಒಪ್ಪಿಗೆ ಕೊಟ್ಟು, ಆ ರಾತ್ರಿ ಲಕ್ಷ್ಮಿಯನ್ನು ಆಸ್ಪತ್ರೆಯಲ್ಲೇ ಬಿಟ್ಟು, ನಾನೊಬ್ಬನೇ ಮನೆಗೆ ಮರಳಿದೆ.

ಮನೆಗೆ ಬಂದಾಗ ಹುಡುಗರಿಗೆ ತಾಯಿ ಬಾರದಿದ್ದುದು ತುಂಬ ಬೇಸರವಾಗಿತ್ತು. ತಮ್ಮ ತಾಯಿಗೆ ಕ್ಯಾನ್ಸರ್ ಆಗಿದ್ದಿರಬೇಕು, ಅಪ್ಪ ತಮ್ಮಲ್ಲಿ ಹೇಳದೆ ಗುಟ್ಟು ಮಾಡುತ್ತಿರಬಹುದೆಂಬ ಊಹೆಯೂ ಅವರಲ್ಲಿ ಮೂಡಿದ್ದಿರಬಹುದು. ಅವರಿಗೆ ಪುನಃ ಸಮಾಧಾನ ಹೇಳಿದೆ. ಆದರೂ, ಮಕ್ಕಳು ಸಪ್ಪೆ ಮುಖ ಹಾಕಿ, ನೆಪ ಮಾತ್ರ ಊಟ ಮುಗಿಸಿ, ಯಾವಾಗಲೂ ಟೀವೀ ನೋಡಿ ಸಮಯ ಕಳೆಯುತ್ತಿದ್ದವರು, ಅಂದು ಸೀದಾ ತಮ್ಮ ರೂಮಿಗೆ ಹೋಗಿ ಮೌನವಾಗಿಯೇ ಸಮಯ ಕಳೆದರು. ಅವರ ಪಾಡನ್ನು ನೋಡಿ ನನಗೆ ಅಳು ಬಂದಿತ್ತು. ನನಗಂತೂ ಆ ರಾತ್ರಿ, ಕೆಟ್ಟ ಕನಸುಗಳೇ ಬಂದು ಆಗಿಂದಾಗ ಎಚ್ಚರವಾಗುತ್ತಲೇ ಇದ್ದಿತ್ತು.

ಮರುದಿನ, ದಶಂಬರ 31 ರಂದು, ಬೆಳಿಗ್ಗೆ ಮುಂಚೆ ಎದ್ದು, 6 ಗಂಟೆಗೆಲ್ಲ ನಾನು ಆಸ್ಪತ್ರೆಗೆ ಹೊರಟೆ. ಹುಡುಗರನ್ನು ನನ್ನ ಸ್ನೇಹಿತರೊಬ್ಬರು ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರೆಂಬ ನೆನಪು. ಡಾ. ಫ್ಲರ್ಗ್ಯೂಸನ್‌ರು ಬೆಳಿಗ್ಗೆ 8 ಗಂಟೆಗೆಲ್ಲ ಬಯಾಪ್ಸಿ ಮಾಡಲಾಗಿರುವುದರಿಂದ, ಅದಕ್ಕೂ ಮೊದಲು ಲಕ್ಷ್ಮಿಯನ್ನು ಭೇಟಿಯಾಗಿ, ಅವಳ ಕೈಹಿಡಿದು, 'ದೇವರು ಕಾಪಾಡುತ್ತಾನೆ' ಎಂದು ಧೈರ್ಯ ಹೇಳುತ್ತ, ಅವಳು ಆಪರೇಷನ್ ಕೋಣೆಗೆ ಹೋಗುವವರೆಗೂ ಅವಳ ಜೊತೆಯಲ್ಲಿದ್ದೆ. ಡಾಕ್ಟರರು ಬಯಾಪ್ಸಿ ಮಾಡಿ, ಅದರ ಫಲಿತಾಂಶ ಬರುವವರೆಗೂ ನನ್ನಾಕೆಯನ್ನು ಆಪರೇಷನ್ ರೂಮಿನಲ್ಲೆ

ಇಟ್ಟುಕೊಂಡಿರುವುದೆಂದೂ, ಫಲಿತಾಂಶ ಮಾರಕ ಎಂತಾದಲ್ಲಿ, ಕೂಡಲೆ ರ್‍ಯಾಡಿಕಲ್ ಮ್ಯಾಸ್ಟೆಕ್ಟೊಮಿ ಮಾಡುವುದೆಂದೂ ಮೊದಲೇ ತೀರ್ಮಾನವಾಗಿದ್ದು, ಆ ಬಗ್ಗೆ ನನ್ನಾಕೆಯಿಂದ ಒಪ್ಪಿಗೆ ಪತ್ರಕ್ಕೂ ಸಹಿ ಹಾಕಿಸಿಕೊಂಡಿದ್ದರು. ಇದ್ದುದರಲ್ಲೇ ಧೈರ್ಯ ತಂದುಕೊಂಡು ನನ್ನ ಲ್ಯಾಬ್‌ಗೆ ಮರಳಿ, ನನ್ನ ಕೆಲಸ ಮಾಡಲಾರಂಭಿಸಿದೆ. ಸುಮಾರು 1 ಗಂಟೆಯ ಮೇಲೆ ಡಾಕ್ಟರರಿಂದ ಫೋನ್ ಬಂತು. ಬಯಾಪ್ಸಿಯ ಪಲಿತಾಂಶ ನನ್ನ ಬಯಕೆಗೆ ಭಿನ್ನವಾಗಿ, ಕ್ಯಾನ್ಸರ್ ಹರಡುವ ಮಾರಕ ಕಣಗಳ ಇರುವಿಕೆಯಯನ್ನು ಸಾರಿತ್ತು. ಪ್ರಯೋಗದ ಮಧ್ಯದಲ್ಲಿದ್ದ ನಾನು, ಆ ವಾರ್ತೆ ಕೇಳಿ, ಕೈಯಲ್ಲಿದ್ದ ಪ್ರಯೋಗದ ಸಾಮಾನುಗಳನ್ನೆಲ್ಲ ಎಸೆದು, ಅಲ್ಲೇ ಕುರ್ಚಿಯಲ್ಲಿ ಕುಸಿದೆ. ಹತ್ತಿರದಲ್ಲಿದ್ದ ಲ್ಯಾಬ್ ಅಸಿಸ್ಟೆಂಟ್ ನನಗೆ ಸಮಾಧಾನ ಹೇಳಿದಳು. ಡಾ.ಟೊಬ್ಯಾಕರೂ ನನ್ನ ಕೋಣೆಗೆ ಧಾವಿಸಿ, ಸಮಾಧಾನ ಹೇಳಿದರು.

ಇಷ್ಟೆಲ್ಲ ನಡೆಯುತ್ತಿರುವಾಗ, ನನ್ನ ಲಕ್ಷ್ಮಿ, ಅರಿವು ಕಳೆದುಕೊಂಡು ಶಸ್ತ್ರಚಿಕಿತ್ಸೆಗೆ ಒಳಗಾಗಿ, ವಿಧಿಯೊಡನೆ ಹೋರಾಡುತ್ತಿದ್ದಳು. ಅವಳಿಗೆ ತಿಳಿಯದಂತೆ ಅವಳ ಬಲಭಾಗದ ಪೂರ್ತಿ ಸ್ತನವನ್ನೂ, ಸುತ್ತಲಿನ ಮಾಂಸಗಳನ್ನೂ ಶಸ್ತ್ರ ಕ್ರಿಯೆಯಿಂದ ತೆಗೆದಿದ್ದರು. ಹಾಗೆ ಮಾಡುವಾಗ, ಅವಳ ಕ್ಯಾನ್ಸರ್ ಇತರ ಭಾಗಗಳಿಗೆ ಹಬ್ಬಿದೆಯೇ ಎಂಬುದನ್ನು ತೀರ್ಮಾನಿಸಲು, ಸುತ್ತಲಿನ ಮತ್ತು ಕಂಕುಳಿನ ಭಾಗದಲ್ಲಿರುವ ದುಗ್ಧಗ್ರಂಥಿ (Lymph node)ಗಳನ್ನು ಆರಿಸಿ, ವಿವರವಾಗಿ ಬಯಾಪ್ಸಿ ಮಾಡಲು ಕಳುಹಿಸಿದ್ದರು. ಪ್ರಾಯಶಃ ಸರ್ಜರಿ ಮುಗಿಯಲು ಸುಮಾರು 3 ಗಂಟೆ ತಗುಲಿರಬೇಕು. ಅದು ಮುಗಿದ ಮೇಲೆ, ಅವಳನ್ನು ಇಂಟೆನ್ಸಿವ್ ಕೇರ್‌ನಲ್ಲಿಟ್ಟು, ಅವಳಿಗೆ ಜ್ಞಾನ ಬಂದಮೇಲೆ ಅವಳನ್ನು ನೋಡಲು ಬರಬಹುದೆಂದು ನನಗೆ ಫೋನ್ ಮಾಡಿ ತಿಳಿಸಿದರು. ನಾನು ಕೂಡಲೆ ಧಾವಿಸಿದೆ. ಇನ್ನೂ ಅರೆ ಎಚ್ಚರದಲ್ಲಿದ್ದ ನನ್ನಾಕೆಯ ತುಟಿಯಿಂದ ಜಾರುತ್ತಿದ್ದ ಆ ಕ್ಷೀಣ ನಗುವನ್ನು ನಾನು ಎಂದಿಗೂ ಮರೆಯಲಾರೆ. ಕಣ್ಣು ಒದ್ದೆಯಾಗಿದ್ದರೂ, ನಾನೂ ಆಕೆಯ ಕೈ ಹಿಡಿದು ಒತ್ತಾಯದ ನಗುವನ್ನೂ ನಕ್ಕಿರಬೇಕು. ಲಕ್ಷ್ಮಿ, ಕ್ಷೀಣ ಸ್ವರದಲ್ಲಿ 'ಏನು ಕ್ಯಾನ್ಸರೇ?' ಎಂದು ಕೇಳಿದಾಗ ನನ್ನ ಕಣ್ಣಲ್ಲಿ ನೀರು ತುಂಬಿ ಬಂದಿತ್ತು. ಮಾತನಾಡಲಾರದೆ ತಲೆಯಲ್ಲಾಡಿಸಿದೆ, ಹೌದೆಂಬಂತೆ. ಆ ಕ್ಷಣ ಅವಳ ಮನಸ್ಸಿನಲ್ಲಿ ಏನೆಲ್ಲ ಭಾವನೆ ಮೂಡಿರಬಹುದೆಂಬುದು ನನ್ನ ಊಹೆಗೂ ಮೀರಿದ್ದುದು. ಆದರೆ ಅದು ತೀರ ನಿರಾಶೆಯನ್ನಂತೂ ತಂದಿರಬೇಕು. ಆದಾಗ್ಯೂ ಅದನ್ನು ತೋರಿಸಿಕೊಂಡಿರಲಿಲ್ಲ; ತೋರಿಸಿಕೊಳ್ಳುವ ಬಲವೂ ಅವಳಲ್ಲಿ ಇದ್ದಿರಲಿಲ್ಲ. ಸ್ವಲ್ಪ ದೂರ ಸರಿದು ನಾನು ಅಳುತ್ತಿರುವುದನ್ನು ನೋಡಿ, ಡಾಕ್ಟರರೊಬ್ಬರು 'ನೋಡು, ಈಗ ನೀನು ಧೈರ್ಯವಾಗಿದ್ದು, ನಿನ್ನ ಹೆಂಡತಿಗೂ ಧೈರ್ಯ ಹೇಳಬೇಕು' ಎಂದು ನನ್ನ ಕರ್ತವ್ಯವನ್ನು ಜ್ಞಾಪಿಸಿದಾಗ, ಕಣ್ಣೀರು ಒರಸಿಕೊಂಡು, ಆಕೆಯ ಬಳಿಗೆ ಬಂದು ನನ್ನ ಮನಸ್ಸಿಗೆ ಹೊಳೆದಂತೆ ಆಕೆಗೆ ಸಮಾಧಾನ ಹೇಳಿರಬೇಕು. ಅಂದಿನ ಆಗು-ಹೋಗುಗಳು ನನಗೀಗ ಕನಸೆಂಬಂತಿದೆ. ಆದರೆ ಅಂದಿನ ಸಂಕಟವನ್ನು ಮರೆಯಲಾರೆ. ಆದರೆ ಇದೊಂದು ವಿಷಯವನ್ನು

ಮರೆಯುವುದು ಕಷ್ಟ. ಇಂಟೆನ್ಸಿವ್ ಕೇರ್ ರೂಮಿನಲ್ಲಿ, ಒಂದು ಹಾಸಿಗೆಯನ್ನು ಪಕ್ಕದಲ್ಲಿಟ್ಟು, ಆ ಹಾಸಿಗೆಗೆ ಲಕ್ಷ್ಮಿಯನ್ನು ಎತ್ತಿ ಹಾಕುವ ಬದಲು, ಅವಳನ್ನು ಮಗ್ಗುಲ ಹಾಸಿಗೆಗೆ ಸರಿಯುವಂತೆ ಅಲ್ಲಿನ ನರ್ಸ್‌ಗಳು ಆಜ್ಞಾಪಿಸಿದ್ದರು. ಮೊದಲೇ ಕ್ಷೀಣವಾಗಿದ್ದು, ಆಗಷ್ಟೇ ಶಸ್ತ್ರ ಚಿಕಿತ್ಸೆಯಿಂದ ಹೊರಬಂದ ನನ್ನಾಕೆ ನೋವಿನಲ್ಲೇ ಕಷ್ಟಪಟ್ಟು ಸರಿಯುವುದನ್ನು ನಾನು ಕಂಡಾಗ, ಅಸಾಧ್ಯ ಸಂಕಟವಾಯ್ತು. ಆ ನರ್ಸ್‌ಗಳ ಮೇಲೆ ಅಸಾಧ್ಯ ಕೋಪ ಬಂದಿತ್ತು. ಆದರೂ ಆ ಅಸಹಾಯಕ ಸಂದರ್ಭದಲ್ಲಿ ಬಂದ ಕೋಪವನ್ನು ನುಂಗಿಕೊಳ್ಳಲೇ ಬೇಕಾಯ್ತು. ಅವಳನ್ನು ಬಿಟ್ಟು ಮನೆಗೆ ಹೋಗುವ ಆಲೋಚನೆಯೇ ಇರಲಿಲ್ಲ. ಕೊನೆಗೆ ಅವಳೇ ಕ್ಷೀಣ ಸ್ವರದಲ್ಲಿ 'ಮಕ್ಕಳು ಯೋಚಿಸುತ್ತಿರಬಹುದು' ಎಂದು ಜ್ಞಾಪಿಸಿದಳು. ನರಳುವಿಕೆಯಲ್ಲೂ ಕರುಳಿನ ಬಂಧ ಅವಳನ್ನು ಕಾಡಿತ್ತು. ಮಾತೃ ಮಮತೆಯೆಂಬುದು ಅದೆಷ್ಟು ಅದ್ಭುತವಾದುದು! ನಾನು ಮನಸ್ಸಿಲ್ಲದ ಮನಸ್ಸಿನಿಂದ ಕಾಲೆಳೆದುಕೊಂಡು ಮನೆಗೆ ಹೊರಟೆ. ನನ್ನ ಮಿತ್ರರಾದ ಕೃಷ್ಣಯ್ಯ ಎಂಬವರು ನನ್ನ ಮನಸ್ಸಿನ ದುಗುಡವನ್ನರಿತು ಅಂದು ನನ್ನೊಡನೆ ಮನೆಗೆ ಬಂದಿದ್ದರು. ಕಷ್ಟ ಕಾಲದಲ್ಲಿ ದೇವರು ಎಲ್ಲಾದರೂ ಸಹಾಯ ಒದಗಿಸುತ್ತಾನೆ!

ಮನೆಗೆ ಬಂದಾಗ, ಹುಡುಗರಿಗೆ ಅಮ್ಮನ ಕ್ಯಾನ್ಸರ್ ವಿಚಾರ ತಿಳಿಸಿದುದು ನನಗೊಂದು ಅತಿ ವೇದನೆಯ ಅನುಭವವಾಗಿತ್ತು. ಅವರ ಮೂಕ ವೇದನೆಯನ್ನು ಗಮನಿಸಿ, ನಾನು ಕಣ್ಣೀರಿಟ್ಟೆ. ಹುಡುಗರೂ ಅಂದು ಏನೊಂದೂ ಹೇಳದೆ, ಅಳುತ್ತಿದ್ದರು. ಆ ಸಮಯ ಅವರಿಗೆ ಸಮಾಧಾನದ ಎರಡು ಮಾತುಗಳನ್ನು ಹೇಳಲೂ ನಾನು ಅಸಮರ್ಥನಾಗಿದ್ದೆ. ನನ್ನ ಮತ್ತು ಹುಡುಗರ ಆ ಪಾಡನ್ನು ಎಣಿಸಿದಾಗಲೆಲ್ಲ ಈಗಲೂ ಸಂಕಟವಾಗುತ್ತಿದೆ. ರಾತ್ರಿಯೆಲ್ಲ ನನಗೆ ನಿದ್ರೆಯೇ ಬಾರದು. ಎಲ್ಲಾದರೂ ಕಣ್ಣೆಳೆದಾಗ, 'ಪುಟ್ಟಿಯು (ಹಾಗೆಂದು ನನ್ನವಳನ್ನು ನಾನು ಕರೆಯುತ್ತಿದುದು) ಆಸ್ಪತ್ರೆಯಲ್ಲಿ ನೋವಿನಿಂದ ನರಳುತ್ತಿದ್ದಾಳೆ' ಎಂಬ ವಾಸ್ತವಿಕತೆ ನನ್ನನ್ನು ಹೊಡೆದೆಬ್ಬಿಸುತ್ತಿತ್ತು. ಅವಳ ಸರ್ಜರಿಯ ನೆನಪಾದಾಗಲೆಲ್ಲ – 'ಅಯ್ಯೋ, ಅದೆಲ್ಲ ಕನಸಾಗಿರಲಿ'– ಎಂದು ಆಶಿಸುತ್ತಿದ್ದೆ. ಆದರೇನು? ವಾಸ್ತವಿಕತೆಯನ್ನು ಬದಲಿಸಲು ಸಾಧ್ಯವೇ? ಅಂದು ರಾತ್ರಿ ಕನಸು–ನನಸುಗಳ ಪೇಚಾಟದಲ್ಲಿ ನಾನು ಬಹಳ ಒದ್ದಾಡಿದ್ದೆ. ಈ ಮಧ್ಯೆ ಹುಡುಗರು ಅನುಭವಿಸುತ್ತಿರುವ ವೇದನೆಯೂ ನನ್ನನ್ನು ಕಾಡುತ್ತಿತ್ತು. ನಮ್ಮ ಪಾಲಿಗೆ, 1975 ಒಂದು ಕೆಟ್ಟ ವರ್ಷ, ದಶಂಬರ 31ರ ಬುಧವಾರ ಮತ್ತೂ ತೀರ ಅಮಂಗಳಕರವಾದ ದಿನ. ಮರುದಿನ ಗುರುವಾರ ಹೊಸ ವರ್ಷದ ದಿನ... ಎಲ್ಲೆಡೆಯಲ್ಲೂ, ಆ ಬಗ್ಗೆ ಉತ್ಸಾಹ. ಆದರೆ ನಮ್ಮ ಕುಟುಂಬಕ್ಕೆ ಬರಿಯ ನಿರುತ್ಸಾಹ. ಆದರೆ ದುರದೃಷ್ಟದ 1975ನ್ನು ಓಡಿಸಿ, ಹೊಸ ವರ್ಷ (1976) ನಮಗೆ ಆಶಾದಾಯಕವಾಗಿರಲೆಂದು ಆಶಿಸಿದ್ದ ನಮ್ಮ ಆ ಬಯಕೆ ಕೈಗೂಡಿ ಬಂದಿದೆ. ನನ್ನಾಕೆಯ ಕ್ಯಾನ್ಸರ್ ಸಂಪೂರ್ಣ ವಾಸಿಯಾಗಿದೆ, ದೇವರ ಕೃಪೆಯಿಂದ. ಶಸ್ತ್ರ ಚಿಕಿತ್ಸೆ ಮುಗಿದು 37 ವರ್ಷಗಳಾಗಿ, ಬಂದ ಮಾರಿ ಬಂದ ಹಾಗೇ

ಹೊರಟುಹೋಯ್ತು. ಪ್ರತಿ ವರ್ಷ ದಶಂಬರ 31, ನಮ್ಮ ಪಾಲಿಗಂತೂ Thanksgiving Day ಆಗಿದೆ.

ಮರುದಿನ ನನ್ನ ತಂದೆಯವರ ವೈದಿಕವಾಗಿತ್ತು. ಆದರೆ ನನ್ನ ಕಷ್ಟದಲ್ಲಿ ನಾನು ಅದನ್ನು ಮರೆತಿದ್ದೆ. ಆ ದಿನ ಹುಡುಗರನ್ನು ಆಸ್ಪತ್ರೆಗೆ ಕರೆದೊಯ್ದಿದ್ದೆ. ತಾಯಿ-ಮಕ್ಕಳ ಸಮ್ಮಿಲನದ ಸಂತೋಷವನ್ನು ಊಹಿಸಿಕೊಳ್ಳಬಹುದು! ಒಂದು ಅತಿ ಮುಖ್ಯ ವಿಶೇಷವೆಂದರೆ, ಅಂದು ನನ್ನವಳು ಕೊಂಚವೂ ಅತ್ತಿರಲಿಲ್ಲ. ಅದು ಅವಳ ಅಸಾಧಾರಣ ಧೈರ್ಯವನ್ನು ವ್ಯಕ್ತಪಡಿಸುವುದಲ್ಲದೆ, ಹುಡುಗರಲ್ಲಿ ಧೈರ್ಯ ತುಂಬಿಸುವ ಅವಳ ಕರ್ತವ್ಯ ನಿಷ್ಠೆಯನ್ನೂ ವ್ಯಕ್ತಪಡಿಸುತ್ತದೆ. ಆ ದಿನವೆಲ್ಲ ನಾವು ಆಸ್ಪತ್ರೆಯಲ್ಲಿ ಪುಟ್ಟಮ್ಮನ ಜೊತೆ ಕಳೆದೆವು. ಅನುರಾಧ-ಅರವಿಂದರು ಬಹಳ ಹೊತ್ತು ತಾಯಿಯ ಜೊತೆಯಲ್ಲಿದ್ದುದು, ಸ್ವಲ್ಪವಾದರೂ ಅವರ ವೇದನೆ ಶಮನವಾಗಿರಬಹುದು. ಮುಂದೆ, ವಾರಾಂತ್ಯಗಳಲ್ಲಿ ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನನಗಂತೂ, ಪ್ರತಿದಿನ, ನನ್ನ ಲ್ಯಾಬ್ ಹತ್ತಿರದಲ್ಲೇ ಇದ್ದುದರಿಂದ, ಬಹಳ ಸಮಯ ಅವಳ ಜೊತೆಯಿರಲು ಅನುಕೂಲವಾಗಿತ್ತು. ಆ ಸಮಯದಲ್ಲಿ ನನ್ನ ರಿಸರ್ಚ್ ಮಾತ್ರ ಘಟ್ಟ ಹತ್ತಿತ್ತು.

ಅವಳು ಆಸ್ಪತ್ರೆಯಲ್ಲಿರುತ್ತ, ತನ್ನ ಕೆಲವು ಅನುಭಗಳನ್ನು ನನ್ನಲ್ಲಿ ಹಂಚಿಕೊಂಡಿದ್ದು,, ಅದನ್ನು ನಿಮ್ಮಲ್ಲೂ ಹಂಚಿಕೊಳ್ಳುತ್ತಿದ್ದೇನೆ. ಡಾ.ಫರ್ಗ್ಯೂಸನ್‌ರು ಲಕ್ಷ್ಮಿಯ ಸರ್ಜರಿಯಾದ ಮೇಲೆ ಕೆಲವು ದಿನ ಆಸ್ಪತ್ರೆಯಲ್ಲಿಟ್ಟುಕೊಳ್ಳಲು ಬಯಸಿದ್ದು, ಆ ಬಗ್ಗೆ ತಮ್ಮ ಸಿಬ್ಬಂದಿಯವರಿಗೂ ಹೇಳಿದ್ದರು. ಆದರೆ ಅಲ್ಲಿಯ ಕೆಲವು ನರ್ಸ್‌ಗಳೂ, ಇನ್ನಿತರ ಸಹಾಯಕ ಡಾಕ್ಟರರೂ, ಸರ್ಜರಿ ಮುಗಿದ 4-5 ದಿನಗಳ ಮೇಲೆ, 'ನೀನು ಇನ್ನೂ ಯಾಕೆ ಆಸ್ಪತ್ರೆಯಲ್ಲಿದ್ದಿಯಾ? ಈಗ ಮನೆಗೆ ಹೋಗಬಹುದು' ಎಂದು ಹೇಳಿದಾಗ ನನ್ನವಳಿಗೆ ತೀರ ಮುಜುಗರವಾಗಿತ್ತು. ಹಾಗೆಂದು ಡಾ. ಫರ್ಗ್ಯೂಸನ್‌ರಿಗೆ ಹೇಳಿದಾಗ, ಅವರು, 'ನೀನು ಕನಿಷ್ಠ 2 ವಾರವಾದರೂ ಆಸ್ಪತ್ರೆಯಲ್ಲಿರಬೇಕಾಗುತ್ತದೆ. ಸರ್ಜರಿಯ ಗಾಯ ಮಾಸುವವರೆಗೂ ಅಲ್ಲಿನ ಕೀವನ್ನು ತೆಗೆದು, ಬ್ಯಾಂಡೇಜು ಮಾಡುತ್ತಿರಬೇಕು. ನಿನ್ನ ಮನೆ ಇಲ್ಲೇ ಸಮೀಪದಲ್ಲಿರುತ್ತಿದ್ದರೆ, ಬೇಗ ಮನೆಗೆ ಕಳುಹಿಸುತ್ತಿದ್ದೆ. ಆದರೆ ದೂರದ ಓಕ್ ಪಾರ್ಕ್‌ನಲ್ಲಿ ನೀನಿರುವುದರಿಂದ ಗಾಯ ಸಾಕಷ್ಟು ವಾಸಿಯಾಗುವವರೆಗೂ ನೀನು ಇಲ್ಲೇ ಇರಬೇಕಾಗುತ್ತದೆ. ನಿನ್ನನ್ನು ಡಿಸ್ಚಾರ್ಜ್ ಮಾಡುವುದೂ, ಬಿಡುವುದೂ ನನ್ನ ನಿರ್ಣಯ, ನರ್ಸ್‌ಗಳದ್ದಲ್ಲ' ಎಂದು ಸಮಾಧಾನ ಹೇಳಿದರು. ಪ್ರಾಯಶಃ, ನರ್ಸ್‌ಗಳಿಗೆ ಈ ವಿಚಾರ ತಿಳಿಸಿರಬೇಕು. ಮುಂದೆ 'ನೀನು ಯಾವಾಗ ಹೋಗುತ್ತಿಯಾ?' ಎಂಬ ಪ್ರಶ್ನೆ ಅವರಿಂದ ಬರಲಿಲ್ಲ.

ರೋಗಿಗಳ ಶುಶ್ರೂಷೆ ಮಾಡುವವರು, ರೋಗಿಗಳ ಬಗ್ಗೆ ಸಾಮಾನ್ಯವಾಗಿ ಅನುಕಂಪ ಇಡುತ್ತಾರೆಂಬ ಭಾವನೆಗೆ ವಿರುದ್ಧವಾಗಿ ಆ ಆಸ್ಪತ್ರೆಯ ನರ್ಸ್‌ಗಳು ನಡೆದುಕೊಂಡ ಕೆಲವು ನಡವಳಿಕೆ ನನ್ನನ್ನು ಆಶ್ಚರ್ಯಗೊಳಿಸಿತು. ಸರ್ಜರಿಯಾದ 1-2

ದಿನ ನನ್ನಾಕೆ ಕರೆದಾಗಲೆಲ್ಲ ನರ್ಸ್‌ಗಳು ಬಂದು, ಸಾಕಷ್ಟು ಉಪಚರಿಸುತ್ತಿದ್ದರು. ಹಾಗೆ ಕರೆಯಲು ದಿಂಬಿನ ಪಕ್ಕದಲ್ಲೆ ಇವಳ ಕೈಗೆ ಸಿಗುವಂತೆ ಒಂದು ಗುಂಡಿಯನ್ನಿಟ್ಟಿದ್ದರು. ಆದರೆ ಈ ನರ್ಸ್‌ಗಳು ತಮ್ಮ ಡ್ಯೂಟಿಯನ್ನು ಅಸಡ್ಡೆ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿತು. ಇಲ್ಲಿ ಕೆಲವೇ ಅಂತಹ ಸಂದರ್ಭಗಳನ್ನು ಉದಾಹರಿಸುತ್ತೇನೆ. ಸರ್ಜರಿಯಾದುದು ದಶಂಬರ ಚಳಿಗಾಲದಲ್ಲಿ. ಆಗ ಶಿಕಾಗೋದ ಚಳಿ ಅನುಭವಿಸಿದವರಿಗೇ ಗೊತ್ತು. ಮೊದಲೇ ಅಶಕ್ತಳಾದ ನನ್ನವಳಿಗೆ ಒಂದು ರಾತ್ರಿ ಚಳಿ ತಡೆಯಲಾರದೆ, ಹೆಚ್ಚಿನ ಹೊದಿಕೆ ಬಯಸಿ, ನರ್ಸ್ ಒಬ್ಬಳನ್ನು ಕರೆಯಲು ಗುಂಡಿ ಒತ್ತಿದಾಗ, ಅವಳು ಎಷ್ಟು ಹೊತ್ತಾದರೂ ಬಾರದಿದ್ದುದು ನನ್ನವಳಿಗೆ ಅನುಮಾನ ಬಂತು. ಕೊನೆಗೆ ನೋಡಿದಾಗ ಆ ಗುಂಡಿಯ ಸ್ವಿಚ್‌ನ್ನೇ ಡಿಸ್‌ಕನೆಕ್ಟ್ ಮಾಡಿದ್ದರು, ಆ ನರ್ಸಮ್ಮಗಳು. ಆ ರಾತ್ರಿ ಅವಳು ಎದ್ದು, ಚಳಿಯಿಂದಲೂ, ನೋವಿನಿಂದಲೂ ನರಳುತ್ತಿದ್ದಂತೆ, ನರ್ಸ್‌ಗಳ ಠಾಣೆಗೆ ಹೋಗಿ, ಹೆಚ್ಚಿನ ಹೊದಿಕೆ ಬೇಡಿಕೊಳ್ಳಬೇಕಾಯ್ತು. ಇಂತಹ ನರ್ಸ್‌ಗಳು ರೋಗಿಗಳ ಶುಶ್ರೂಷೆಗೆ ಹೇಗೆ ನೇಮಕಗೊಂಡರಪ್ಪಾ ಎಂದೂ ಅನಿಸಿ, ವಿಸ್ಮಯಪಡುತ್ತಿದ್ದೇನೆ. ಇನ್ನೊಮ್ಮೆ ಅತಿ ನೋವನ್ನು ಹೋಗಲಾಡಿಸಿಕೊಳ್ಳಲು ಮಾತ್ರೆಗಾಗಿ ಒಂದು ರಾತ್ರಿ ಗುಂಡಿ ಒತ್ತಿದಾಗಲೂ ಇಂಥದೇ ಅನುಭವವಾಗಿತ್ತು, ನನ್ನಾಕೆಗೆ. ನೋವಿನಲ್ಲೇ, ನರ್ಸ್‌ಗಳ ಠಾಣೆಗೆ ಹೋಗಿ ಮಾತ್ರೆ ಪಡೆಯಬೇಕಾಯ್ತು. ಹೆಸರಾಂತ ಆಸ್ಪತ್ರೆಯಲ್ಲಿ, ಇಂತಹ ನಾಗರಿಕ ಯುಗದಲ್ಲಿ, ಈ ರೀತಿಯ ಕರುಣೆ ಇಲ್ಲದ, ಅನುಕಂಪವಿಲ್ಲದ, ವರ್ತನೆ ನನ್ನನ್ನು ಆಶ್ಚರ್ಯಗೊಳಿಸುತ್ತಿದೆ. ನರ್ಸ್ ಠಾಣೆಯಲ್ಲಿ ಅವರೆಲ್ಲ ಚಕ್ಕಂದವಾಡುತಿದ್ದುದು ಗಮನಕ್ಕೆ ಬಂದಿತ್ತು. ಆ ಮಹಾತಾಯಿಯರಿಗೆತಮ್ಮ 'ಮೋಜು' ಸಮಯವನ್ನು ನನ್ನವಳು ಕೆಡಿಸಿದಳೆಂಬ ಅಸಮಾಧಾನವಿದ್ದರೆ ಆಶ್ಚರ್ಯವಿಲ್ಲ.

ಡಾಕ್ಟರುಗಳು ಸರ್ಜರಿಯಾದ ಕೆಲವೇ ದಿವಸಗಳಲ್ಲಿ ಅವಳನ್ನು ಓಡಾಡಲು ಉತ್ತೇಜಿಸುತ್ತಿದ್ದುದರಿಂದ ನನ್ನವಳು ತನ್ನ ಕೈಲಾದ ಮಟ್ಟಿಗೆ ಆಚೀಚೆ ಓಡಾಡುವ ಪ್ರಯತ್ನ ಮಾಡುತ್ತಿದ್ದಳು. ಆಗಾಗ್ಗೆ ಅವಳನ್ನು ಫಿಸಿಕಲ್ ಥೆರಪಿಗೆ ಕೊಂಡೊಯ್ಯುತ್ತಿದ್ದರು. ಅಲ್ಲಿಯೂ ಅವಳಿಗೆ ತಕ್ಕ ವ್ಯಾಯಾಮ ದೊರೆಯುವಂತೆ ಏರ್ಪಾಡು ನಡೆದಿತ್ತು. ದಿನವಿಡೀ ಮಲಗಿರುವುದೂ ಇವಳಿಗೆ ಇಷ್ಟವಿರಲಿಲ್ಲ. ಹಾಗೆ ಮಲಗಿದ್ದರೆ ನೋವಿನ ಬಾಧೆಯ ಕಡೆ ಗಮನ ಜಾಸ್ತಿಯಾಗುತ್ತಿತ್ತು. ಅದಕ್ಕಾಗಿ ಅವಳು ಪ್ರತೀದಿನ ಸ್ವಲ್ಪ ಸಮಯ ನರ್ಸ್‌ಗಳ ಠಾಣೆಯ ಬಳಿ ಬಂದು ಕುಳಿತಿರುತ್ತಿದ್ದಳು. ಹಲವು ಬಾರಿ ನಾನು ಅವಳನ್ನೂ ಅಲ್ಲಿಯೇ ಭೇಟಿಯಾಗುತ್ತಿದ್ದೆ. ಅಲ್ಲಿ ಅವಳು ನರ್ಸ್‌ಗಳೊಡನೆ ಸಂಭಾಷಣೆ ಮಾಡುತ್ತ, ಸಮಯ ಕಳೆಯಲೂ ಅನುಕೂಲವಾಗುತ್ತಿತ್ತು. ಈ ಸಂದರ್ಭದಲ್ಲಿ ಲಕ್ಷ್ಮಿ ಒಬ್ಬ ಪೋಲಿಷ್ ಮಹಾನುಭಾವನನ್ನು ಸಂಪರ್ಕಿಸಿದಳು. ಈತ ತನ್ನ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಕೆಲವು ಟೆಸ್ಟ್‌ಗಳನ್ನು ಮಾಡಿಸಿಕೊಳ್ಳಲು ಆಸ್ಪತ್ರೆ ಸೇರಿದ್ದ. ಅವನಿಗೂ ತನ್ನ ವಾರ್ಡ್‌ನಲ್ಲಿರಲು ಬೇಸರ; ಅಲ್ಲದೆ ಆತ ಮಲಗಿರುವ ಅವಶ್ಯಕತೆಯೂ ಇರಲಿಲ್ಲ.

ಮೂರೊತ್ತೂ ಓಡಾಡಿಕೊಂಡು, ನರ್ಸ್‌ಗಳೊಡನೆಯೂ, ಮತ್ತಿತರ ಪೇಷಂಟ್‌ಗಳೊಡನೆಯೂ ಹರಟೆ ಹೊಡೆದುಕೊಂಡಿರುತ್ತಿದ್ದ. ನನ್ನವಳನ್ನೂ ಪರಿಚಯಿಸಿಕೊಂಡು, ಅವಳೊಡನೆ ಕೆಲವು ಸಮಯ ಹರಟೆ ಹೊಡೆಯುತ್ತಿದ್ದ. ನೋವನ್ನು ಮರೆಯಲು ಇದು ಅವಳಿಗೆ ಸಹಾಯವಾಗುತ್ತಿತ್ತು. ಈ ಪೋಲಿಷ್ ಮಹಾನುಭಾವ, ಲಕ್ಷ್ಮಿಯ ಆರೋಗ್ಯವನ್ನು ವಿಚಾರಿಸುತ್ತಿದ್ದನಲ್ಲದೆ, ಭಾರತದ ವಿಚಾರವನ್ನೂ ತಿಳಿದುಕೊಳ್ಳುತ್ತಿದ್ದ. ಆತ ಬರಿಯ ಮಾತುಗಾರನಲ್ಲದೆ, ಹಾಸ್ಯಪ್ರವೃತ್ತಿಯವನೂ ಆಗಿದ್ದ. ಅವನ ಗೊತ್ತು ಗುರಿಯಿಲ್ಲದ, ಹಳಿ ಇಲ್ಲದ 'ರೈಲು ಬಂಡಿ'ಯ ಮಾತುಗಳೂ, ಜೋಕುಗಳೂ, ನನ್ನಾಕೆಗೆ ಬೇಸರ ತರದೆ, ಸಾಕಷ್ಟು ಹರ್ಷ ನೀಡುತ್ತಿದ್ದವು. ಹಾಗಾಗಿ ಅವಳ ಬೇಸರ ಕಳೆದುಕೊಳ್ಳಲು ಆ ಪೋಲಿಷ್ ಪುರುಷನು ತುಂಬ ಸಹಾಯಕನಾಗಿದ್ದ. ಈಗಲೂ ನನ್ನವಳು ಅವನ Carefree life style ಮತ್ತು ಆತ ಹೇಳುತ್ತಿದ್ದ ಜೋಕುಗಳನ್ನೆಲ್ಲ ನೆನೆಸಿಕೊಳ್ಳುತ್ತಿದ್ದಾಳೆ.

ಸರ್ಜರಿ ಮುಗಿದ ಕೆಲವು ದಿನಗಳಲ್ಲಿ ಅವಳನ್ನು ನೋಡಿ ಅವಳ ಆರೋಗ್ಯ ವಿಚಾರಿಸಲು ನಮ್ಮ ಹಲವು ಪರಿಚಿತರು ಆಸ್ಪತ್ರೆಗೆ ಬಂದಿದ್ದರು. ಅವರಲ್ಲಿ, ಶಿಕಾಗೋಗೆ ಸಮೀಪದ ಮನ್‌ಸ್ಟರ್‌ದಿಂದ ನನ್ನವಳ ಒಬ್ಬ ಕಸಿನ್, ರಜನಿ ಮತ್ತು ಆಕೆಯ ಗಂಡ ನರಸಿಂಹ ಭಟ್ಟರು, ನನ್ನ ಇನ್ನೊಬ್ಬ ಬಂಧುಗಳಾದ ಸುಬ್ರಾಯ ಮೈಯ ಮತ್ತು ನಳಿನಿ, ಗೆಳೆಯರಾದ ಶ್ರೀನಾಥ ದಂಪತಿಗಳು ಕೆಲವರು. ಆದರೆ ನಾವು ಅಪೇಕ್ಷಿಸದಿದ್ದರೂ, ಬಂದು ನನ್ನವಳನ್ನು ಸಂದರ್ಶಿಸಿದ ಮಹಿಳೆಯೊಬ್ಬಳ ವಿಚಾರ ನಾನಿಲ್ಲಿ ಹೇಳಲೇಬೇಕು. ಸ್ವಾಭಾವಿಕವಾಗಿ, ಅಪರಿಚಿತರೊಂದಿಗೆ ಅಂತಹ ಸಮಯದಲ್ಲಿ ಮಾತನಾಡಲು ನಮ್ಮಿಬ್ಬರಿಗೂ ಹುಮ್ಮಸವೇ ಇದ್ದಿರಲಿಲ್ಲ. ಹಾಗಿರುತ್ತ, ನಾನೊಮ್ಮೆ, ಲಕ್ಷ್ಮಿಯೊಡನೆ ಸಮಯ ಕಳೆಯುತ್ತಿದ್ದಾಗ ಒಬ್ಬ ಮಹಿಳೆ ನಮ್ಮ ಕೋಣೆಗೆ ಬಂದು, ನಮ್ಮಿಬ್ಬರ ಜೊತೆ ಮಾತಾಡಲು ಅವಕಾಶ ಕೇಳಿಕೊಂಡಳು. ನನಗೆ ಅವಳು ಬಂದುದು ಎಳ್ಳಷ್ಟೂ ಹಿಡಿಸಿರಲಿಲ್ಲ. ಆದರೆ, ಅವಳು ಈ ಮೊದಲೇ ನನ್ನಾಕೆಗೆ ಫೋನ್ ಮಾಡಿ ಅನುಮತಿಯನ್ನು ಪಡೆದಿದ್ದುದರಿಂದ, ಮನಸ್ಸಿಲ್ಲದಿದ್ದರೂ ನಾನು ಅವಳನ್ನು ಬರಮಾಡಿಕೊಂಡೆ. ತನ್ನ ಪರಿಚಯ ಮಾಡಿಕೊಂಡು, – ಮಿಸೆಸ್ಸ್ ಥಾಮಸ್ ಎಂದಿರಬೇಕು ಆಕೆಯ ಹೆಸರು – ತನಗೂ 12–13 ವರ್ಷಗಳ ಹಿಂದೆ ಬ್ರೆಸ್ಟ್ ಕ್ಯಾನ್ಸರ್ ಆಗಿ ಸರ್ಜರಿಯಾಗಿದ್ದು, ಈಗ ಸಂಪೂರ್ಣ ವಾಸಿಯಾಗಿದೆ ಎಂದು ತಿಳಿಸಿದಳು. ಪ್ರಾರಂಭದಲ್ಲಿ ಅಸಡ್ಡೆ ತೋರಿಸಿದ ನನ್ನ, ಕುತೂಹಲ ಆಗ ಹೆಚ್ಚಿತು. ಆಕೆ, ಅಮೆರಿಕನ್ ಕ್ಯಾನ್ಸರ್ ಸೊಸೈಟಿಯವರು ಕಳುಹಿಸಿಕೊಟ್ಟ ಸ್ವಯಂಸೇವಕಿಯಾಗಿದ್ದಳು. ಇಂಥವರನ್ನು ರೋಗಿಗಳಲ್ಲಿ ಭರವಸೆ ತುಂಬಿ, ಉತ್ತೇಜನ ಕೊಡುವುದಕ್ಕೇ ಕಳುಹಿಸುತ್ತಿದ್ದರು. ಆ ಮಹಿಳೆಯ ಸರ್ಜರಿ ಸಫಲವಾಗಿದ್ದುದನ್ನು ಕೇಳಿ, ನಮಗೆ ಹಿಂದಿದ್ದ ಅಧೈರ್ಯ ಸ್ವಲ್ಪ ಶಮನವಾಗಿ, ಧೈರ್ಯ ತುಂಬಿಕೊಂಡಿತು. 'ಅಧೀರಳಾಗದೆ, ಭರವಸೆ ಇಟ್ಟು, ರೋಗದೊಡನೆ ಹೋರಾಟ ನಡೆಸಿ, ಅದರಲ್ಲಿ ಜಯಗಳಿಸುತ್ತೇನೆಂಬ ದಿಟ್ಟ ನಿಲುವನ್ನು

ನೀನೀಗ ತೆಗೆದುಕೊಳ್ಳಬೇಕು' ಎಂಬುದೇ ಆ ಮಹಿಳೆಯ ಸಂದೇಶವಾಗಿತ್ತು. ಅದು ನಮ್ಮಿಬ್ಬರಿಗೂ ಬಹಳಷ್ಟು ಭರವಸೆ ನೀಡಿತ್ತು. ಲಕ್ಷ್ಮಿಯ ಸರ್ಜರಿಯಾದಮೇಲೆ, ಊಟವೂ ಬೇಡವಾಗಿದ್ದು, ರಾತ್ರಿ ಸರಿಯಾಗಿ ನಿದ್ರೆಯೂ ಮಾಡದಿದ್ದ ನಾನು ಅಂದು, ಆ ಮಹಿಳೆಯ ಮಾತು ಕೇಳಿ, ರಾತ್ರಿ ಮನೆಗೆ ಬಂದು ಹೊಟ್ಟೆ ತುಂಬ ಊಟ ಮಾಡಿ, ಚೆನ್ನಾಗಿ ನಿದ್ರೆ ಮಾಡಿದೆ! ಅಷ್ಟು ಸಮಾಧಾನ ಮತ್ತು ಭರವಸೆ ನೀಡಿತ್ತು, ಆಕೆಯ ಮಾತುಗಳು! ಮುಂದೆ, ಲಕ್ಷ್ಮಿಯೂ, ಅವಳಂತೆ ಕ್ಯಾನ್ಸರ್ ಆದ ಕೆಲವರಲ್ಲಿ, ತನ್ನ ಅನುಭವವನ್ನು ಹಂಚಿಕೊಂಡು, ಅಂಥವರಿಗೂ ಸಮಾಧಾನ ನೀಡಿದ್ದಳು.

ಮೇಲೆ ತಿಳಿಸಿದವರಲ್ಲದೆ, ನನ್ನ ಮೇಲ್ವಿಚಾರಕರಾಗಿದ್ದ, ಡಾ. ಟೊಬ್ಯಾಕ್ ಕೂಡ ಆಗಗ್ಗೆ ನನ್ನವಳನ್ನು ನೋಡಲು ಬರುತ್ತಿದ್ದರಲ್ಲದೇ, ಅವಳಲ್ಲಿ ಧೈರ್ಯ ತುಂಬುವುದಕ್ಕೂ ಸಹಾಯಕರಾಗಿದ್ದರು. ಇವಳ ಸರ್ಜರಿ ಮಾಡಿದ ಡಾ. ಫರ್ಗ್ಯೂಸನ್‌ರಂತೂ ಇವಳ ಆರೋಗ್ಯದ ಬಗ್ಗೆ ಅತಿಯಾದ ಆಸಕ್ತಿ ವಹಿಸಿದ್ದರು. ಆಗಾಗ್ಗೆ ಸಮಯಕ್ಕೆ ಸರಿಯಾದ ಧೈರ್ಯ ತುಂಬಿ, ಗಂಡಾಂತರವನ್ನು ಎದುರಿಸಲು ಹುರುಪನ್ನೂ ತುಂಬಿಸಿದ್ದರು. ಲಕ್ಷ್ಮಿ ಈಗಲೂ ಅವರನ್ನು ನೆನೆಸಿಕೊಳ್ಳುತ್ತ ಅವರೊಬ್ಬ 'ಮಹಾತ್ಮ'ನೆಂದೇ ನಂಬಿರುತ್ತಾಳೆ. ನನ್ನಾಕೆಯ ಅನುಕೂಲತೆಗೆಂದು, ಗಾಯ ಬಹುವಾಗಿ ಮಾಸುವವರೆಗೂ, ಅವಳನ್ನು ಆಸ್ಪತ್ರೆಯಲ್ಲಿಟ್ಟುಕೊಂಡು, ಎಲ್ಲ ಅನುಕೂಲತೆಗಳನ್ನೂ ಒದಗಿಸಿಕೊಟ್ಟಿರುವುದು ಈ ಮಹಾಪುರುಷನ ಸೌಹಾರ್ದತೆ ಮತ್ತು ಅನುಕಂಪವನ್ನು ವ್ಯಕ್ತಪಡಿಸುತ್ತದೆ. ತಾನು ಸರ್ಜರಿ ಮಾಡಿದ ಪ್ರತಿಯೊಬ್ಬ ಪೇಷಂಟ್ ಮೇಲೂ ಇದೇ ರೀತಿಯ ಅನುಕಂಪ ತೋರಿಸುತ್ತಿದ್ದರು. ಅಂತಹ ನಿಷ್ಠಾವಂತ ಡಾಕ್ಟರುಗಳು ಸಿಗುವುದು ಬಹಳ ವಿರಳವೆನ್ನಬಹುದು. ನಾನಂತೂ ಅವರನ್ನು – ಲಕ್ಷ್ಮಿಗೆ ಜೀವದಾನ ಮಾಡಿದ ದೇವ ಪುರುಷ– ಎಂದೇ ತಿಳಿದಿರುತ್ತೇನೆ. ಡಾ. ಫರ್ಗ್ಯೂಸನ್ ನಿವೃತ್ತರಾಗಿ, ಶಿಕಾಗೋ ಸಮೀಪದ ವಿಲ್ಮೆಟ್ ಎಂಬ ಬಡಾವಣೆಯಲ್ಲಿ ನೆಲೆಸಿ, ಬಹಳ ಕಾಲದವರೆಗೂ, ಪ್ರತಿ ವರ್ಷ ದಶಂಬರ–ಜನವರಿಯ ಸಮಯ ನನ್ನವಳಿಗೆ ಫೋನ್ ಮಾಡಿ ಅವಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಆದರೆ ಈಚೆಗೆ ಕೆಲವು ವರ್ಷಗಳಿಂದ ಅವರ ಫೋನ್ ಬಂದಿರಲಿಲ್ಲ. ವಯಸ್ಸಾದ ಅವರು ಇಹಲೋಕದಿಂದ ಪರಲೋಕಕ್ಕೆ ಪ್ರಯಾಣಿಸಿದ್ದರೂ ಇರಬಹುದು. ಎಷ್ಟೋ ಜನರ ಸಂಕಟಗಳನ್ನು ತಣಿಸಿ, ಹಲವರಿಗೆ 'ಜೀವದಾನ' ಮಾಡಿದ ಅವರು ವಿಧಿಯ ಮಾಟಕ್ಕೆ ಸಿಕ್ಕಿದ್ದರೆ ಅದನ್ನು ತಪ್ಪಿಸಲು ಯಾರಿಗೆ ಸಾಧ್ಯ? ಅಂತಹ ಮಹಾತ್ಮನ ಜನಸೇವೆಯನ್ನು ಎಷ್ಟು ಕೊಂಡಾಡಿದರೂ ಸಾಲದೆಂದು ನನ್ನ ಮನಸ್ಸು ಹೇಳುತ್ತಿದೆ.

ಲಕ್ಷ್ಮಿಗೆ ಸರ್ಜರಿಯಾದ ವಿಚಾರ 3–4 ದಿನಗಳಾದರೂ, ಭಾರತದ ಬಂಧುಗಳಿಗೆ ತಿಳಿಸಿರಲಿಲ್ಲ. ಎಲ್ಲರಿಗಿಂತಲೂ ನನ್ನವಳ ತಂದೆಗೆ ತಿಳಿಸುವುದು ಬಲು ಕಷ್ಟದ ಕೆಲಸವಾಗಿತ್ತು. 3–4 ದಿನಗಳ ಮೇಲೆ ಪತ್ರ ಮುಖೇನ ನನ್ನವಳ ಸಲಹೆಯಂತೆ, ಸುದ್ದಿ

ತಿಳಿಸಿದೆ. ಅದರ ಸಾರಾಂಶ ಹೀಗಿತ್ತು: 'ಪುಟ್ಟಮ್ಮನಿಗೆ ಬ್ರೆಸ್ಟ್ ಕ್ಯಾನ್ಸರ್ ಎಂದು ಗೊತ್ತಾದ ತಕ್ಷಣವೇ ಅವಳಿಗೆ ಸರ್ಜರಿ ಮಾಡಿದ್ದಾರೆ. ಆರಂಭದ ಹಂತದಲ್ಲೇ ಪತ್ತೆ ಹಚ್ಚಿದುದರಿಂದ ಸಂಪೂರ್ಣ ಗುಣಹೊಂದಲು ಸಾಧ್ಯವಿದ್ದು, ಜೀವಕ್ಕೇನೂ ಅಪಾಯವಿಲ್ಲವೆಂದು ಡಾಕ್ಟರು ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿ ಆಸ್ಪತ್ರೆಯಲ್ಲಿ ಅತಿ ಆಧುನಿಕ ವ್ಯವಸ್ಥೆ ಇರುವುದರಿಂದ, ನೀವೇನೂ ಗಾಬರಿಯಾಗಬೇಕಾಗಿಲ್ಲ. ಸುತ್ತಲಿನ ಸ್ನೇಹಿತರೂ, ನಮ್ಮ ರಜನಿಯೂ ಹತ್ತಿರದಲ್ಲೇ ಇರುತ್ತ ನಮಗೆ ತುಂಬ ಸಹಾಯ ದೊರಕುತ್ತಿದೆ. ಆಕೆ ಖಂಡಿತ ಗುಣಹೊಂದಿ ನಿಮ್ಮನ್ನು ಸದ್ಯದಲ್ಲೆ ನೋಡುತ್ತಾಳೆ...' ಎಂದು. ನನ್ನ ತಾಯಿಗೂ ಹೆಚ್ಚು ಕಡಿಮೆ ಅದೇ ರೀತಿಯಲ್ಲಿ ಬರೆದಿದ್ದೆ. ಆದರೆ, ನ್ಯೂಯಾರ್ಕಿನಲ್ಲಿರುವ ಒಂದು ಆಸ್ಪತ್ರೆಯಲ್ಲಿ ತರಬೇತಿ ಪಡೆಯುತ್ತಿದ್ದ ನನ್ನ ತಮ್ಮ ಕೇಶವನಿಗೆ ಸರ್ಜರಿಯಾದ ಮರುದಿನವೇ ಫೋನ್ ಮಾಡಿ ತಿಳಿಸಿದ್ದೆ. ನಾನೆಣಿಸಿದಂತೆ, ಸಹಜವಾಗಿ, ಲಕ್ಷ್ಮಿಯ ತಂದೆ ತೀರ ಗಾಬರಿಯಾಗಿದ್ದರು. 'ಪುಟ್ಟಮ್ಮ ಸ್ವಲ್ಪ ಗುಣಹೊಂದಿ ಓಡಾಡುವ ಸ್ಥಿತಿಗೆ ಬಂದ ತಕ್ಷಣ ಅವಳನ್ನು ಊರಿಗೆ ಕಳುಹಿಸಿ. ಇಲ್ಲಿ ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ' ಎಂದು ಬರೆದಿದ್ದರು. ಅಲ್ಲದೆ, ನಮ್ಮ ಅಮೆರಿಕದ ವಾಸ ಮುಗಿಸಿ, ಆದಷ್ಟು ಬೇಗ ಭಾರತಕ್ಕೆ ಮರಳುವಂತೆಯೂ ಬರೆದಿದ್ದರು. ಪಾಪ, ಮಗಳ ಬಗ್ಗೆ ಎಷ್ಟು ಮರುಗಿದರೋ ಏನೋ! ಲಕ್ಷ್ಮಿಯ ಒಬ್ಬನೇ ಅಣ್ಣನೂ ತುಂಬ ಗಾಬರಿಯಾಗಿ, ತಂಗಿಗೆ ಬರೆದಿದ್ದ: 'ನಿನ್ನ ಸರ್ಜರಿಯಾದ ದಿನಗಳಲ್ಲಿ ನನಗೆ ಏನೋ 'ಹೊಟ್ಟೆ' ಸಂಕಟವಾಗುತ್ತಿತ್ತು. ಯಾಕೆಂದು ನಿನ್ನ ಪತ್ರ ಬಂದಮೇಲೆ ಹೊಳೆಯಿತು. ಆದಷ್ಟು ಬೇಗ ನೀನು ಗುಣಮುಖ ಹೊಂದುವಂತೆ ದೇವರಲ್ಲಿ ಪ್ರಾರ್ಥಿಸುತ್ತೇನೆ...' ಎಂದು ತನ್ನ ಸಂಕಟವನ್ನು ವ್ಯಕ್ತಪಡಿಸಿದ್ದ. ಹಾಗೆಯೇ ನನ್ನ ತಾಯಿಯೂ ಗಾಬರಿಯಿಂದ ಪತ್ರ ಬರೆಸಿದ್ದು ಅದರಲ್ಲಿ, ಲಕ್ಷ್ಮಿಯ ಹೆಸರಿನಲ್ಲಿ ಹಲವಾರು ಪೂಜೆಗಳನ್ನು ಮಾಡಿಸುವುದಾಗಿಯೂ ತಿಳಿಸಿದ್ದಳು. ಮುಂದೆ ಆ ಬಗ್ಗೆ ಪ್ರಸಾದಗಳನ್ನೂ ಕಳುಹಿಸಿದ್ದಳು. ಎಲ್ಲರ ಪತ್ರಗಳಲ್ಲೂ, ಭಾರತಕ್ಕೆ ಆದಷ್ಟು ಬೇಗ ಮರಳುವಂತೆ ನಮಗೆ ಸಲಹೆ ಇರುತ್ತಿತ್ತು.

ಈ ಸಲಹೆಗಳು, ಲಕ್ಷ್ಮಿಯ ಅಸ್ವಸ್ಥತೆಯಿಂದ ಧೈರ್ಯ ಕೆಟ್ಟ ನನ್ನನ್ನು ಮತ್ತಷ್ಟು ಅಧೀರನನ್ನಾಗಿ ಮಾಡಿತು. ನನ್ನವರೆಲ್ಲ ಭಾರತದಲ್ಲಿರುವಾಗ, ನಾನಿಲ್ಲಿ ಮಾಡುತ್ತಿರುವುದಾದರೂ ಏನು? – ಎಂಬ ಪ್ರಶ್ನೆ ನನ್ನಲ್ಲಿ ಮೂಡಿಸಿತ್ತು. ಒಮ್ಮೆ ಗ್ರೋಸರಿಗೆಂದು ಮಕ್ಕಳ ಜೊತೆ ಹೋಗಿದ್ದೆ. ಅಮ್ಮನಿಲ್ಲದಿರುವಾಗ, ಹುಡುಗರು ಮನೆಗೆಲಸದಲ್ಲಿ ತುಂಬ ಭಾಗಿಗಳಾಗುತ್ತಿದ್ದರು. ಅನುರಾಧಳು ಒಂದೊಂದೇ ಜವಾಬ್ದಾರಿಕೆಯನ್ನು ವಹಿಸಿಕೊಳ್ಳುತ್ತಿದ್ದಳು. ಪಾಪಣ್ಣನೂ ಅಕ್ಕನಿಗೆ ತುಂಬ ಸಹಾಯ ಮಾಡುತ್ತಿದ್ದ. ಅದೊಂದು ಹೆಮ್ಮೆಯ ವಿಚಾರವಾದರೂ, ನನ್ನ ಆ ಸ್ಥಿತಿಯಲ್ಲಿ ನನಗೆ ಹೆಮ್ಮೆಗಿಂತ, ದುಃಖವನ್ನೇ ಹೆಚ್ಚಿಸಿತ್ತು. ಪಾಪ, ಚಿಕ್ಕ ಹುಡುಗರಿಂದ ಕೆಲಸ ಮಾಡಿಸಿಕೊಳ್ಳಬೇಕಾಯ್ತಲ್ಲಾ ಎಂದು. ಶಾಪಿಂಗ್‌ಗೆ ಹೋದಾಗ, ಹುಡುಗರು ಮನೆಗೆ ಬೇಕಾಗುವ ಸಾಮಾನುಗಳನ್ನು ಆರಿಸುವ ಜವಾಬ್ದಾರಿ ಹೊತ್ತಿದ್ದರು. ಅವರು ಹಾಗೆ

ಮಾಡುತ್ತಿದ್ದುದನ್ನು ನೋಡಿ, ನನಗೆ ದುಃಖ ಉಮ್ಮಳಿಸಿ ಬಂತು. 'ನನ್ನ ಸ್ಥಿತಿ ಹೀಗಾಯಿತಲ್ಲಾ! ಹುಡುಗರಿಗೆ ಕಷ್ಟ ಕೊಡುತ್ತಿದ್ದೇನಲ್ಲಾ! ಆಸ್ಪತ್ರೆಯಲ್ಲಿ ಪುಟ್ಟಮ್ಮ ನರಳುತ್ತಿದ್ದಾಳೆ. ಇದು ನನ್ನ ಊರೇ? ಯಾತಕ್ಕಿಲ್ಲಿ ನಾವು ಈ ರೀತಿ ನರಳಬೇಕು? ನಮ್ಮವರೆಲ್ಲ ಊರಲ್ಲಿದ್ದಾರೆ. ಎಲ್ಲರನ್ನೂ ಬಿಟ್ಟು ನಾನೊಬ್ಬನೇ ಏನನ್ನು ಸಾಧಿಸುತ್ತಿದ್ದೇನೆ ಇಲ್ಲಿ?' ಎಂಬೆಲ್ಲ ಯೋಚನೆ ಬಂದು ಸಾಮಾನು ತುಂಬಿದ ಗಾಡಿಯನ್ನು ಮುಂದೂಡಲಾಗದೆ ಅಳುತ್ತ ನಿಂತುಬಿಟ್ಟೆ. ಅದನ್ನು ನೋಡಿ ಹುಡುಗರು ಮೂಕವೇದನೆ ಪಟ್ಟರು. ಪಾಪಣ್ಣ ನನ್ನ ಕೈಯಿಂದ ಗಾಡಿ ಪಡೆದು ಮುಂದೂಡಲು ಪ್ರಾರಂಭಿಸಿದ. ಮುನ್ನಿ, 'ಅಪ್ಪಾ ಇನ್ನು ಮನೆಗೆ ಹೋಗೋಣ' ಎಂದು ಹೇಳಿದಾಗ, ಆ ಮಾತಿನಲ್ಲಿ ಅಡಗಿದ್ದ, ನನ್ನನ್ನು ಸಮಾಧಾನಿಸುವ 'ಮೂಕ ಮರುಕ' ನನ್ನ ಹೃದಯ ತಟ್ಟಿತು. ಮಕ್ಕಳ ವೇದನೆಯನ್ನು ನಾನು ಶಮನ ಮಾಡಬೇಕಾಗಿದ್ದುದು. ಆದರೆ ಮಕ್ಕಳೇ ನನಗೆ ಮೌನವಾಗಿ ಸಮಾಧಾನ ನೀಡುತ್ತಿದ್ದರು, ಅಮ್ಮನ ಅನಾರೋಗ್ಯದ ವೇದನೆಯನ್ನೂ ಬದಿಗೊತ್ತಿ!

ಇವೆಲ್ಲವೂ, ನನ್ನ ಮನಸ್ಸನ್ನು ರಾಡಿ ಮಾಡಿದ್ದು, ನನ್ನಲ್ಲೇ ಲಕ್ಷ್ಮಿಯ ಆರೋಗ್ಯ ಸುಧಾರಿಸಿದ ಮೇಲೆ ಭಾರತಕ್ಕೆ ಮರಳುವುದೆಂಬ ತೀರ್ಮಾನಕ್ಕೆ ಬಂದೆ. ನನ್ನ ಈ ನಿರ್ಣಯಕ್ಕೆ ನಮ್ಮ ಮಕ್ಕಳ ಯೋಗ ಕ್ಷೇಮವೂ ಕಾರಣವಾಗಿತ್ತು. ನನ್ನವಳ ಸರ್ಜರಿಯಾದಂದಿನಿಂದ ನನ್ನ ಮನಸ್ಸಿನಲ್ಲಿ ಕೆಟ್ಟ ಯೋಚನೆಗಳು ಬರುತ್ತಿದ್ದುವು – ಕ್ಯಾನ್ಸರ್ ಎಂಬುದು ಗುಣವಾಗದಿರುವ ಖಾಯಿಲೆ, ಅದಕ್ಕೆ ತುತ್ತಾದವರ ಆಯುಷ್ಯ ದಿನಗಳನ್ನು ಎಣಿಸಬಹುದು – ಎಂದು. ಹಾಗಾಗಿ, ನನ್ನ ಮನಸ್ಸಿನಲ್ಲಿ, – ನಾನು ಲಕ್ಷ್ಮಿಯನ್ನು ಕಳೆದುಕೊಳ್ಳುತ್ತೇನೆ; ಹುಡುಗರು ಅನಾಥರಾಗುತ್ತಾರೆ – ಎಂಬೆಲ್ಲ ದುರಾಲೋಚನೆಗಳು ಕಾಡುತ್ತಿದ್ದವು. ಅಂತಹ ಸಂದರ್ಭಗಳಲ್ಲಿ, ನಾವಿಲ್ಲಿರುವುದೇ ಅನಾನುಕೂಲವಾಗಬಹುದು. ಊರಲ್ಲಾದರೆ ಅವರನ್ನು ನೋಡಿಕೊಳ್ಳಲು ಹಲವಾರು ಸಂಬಂಧಿಗಳಿದ್ದಾರೆ. ಆದುದರಿಂದ ಊರಿಗೆ ಹೋಗುವುದೇ ವಾಸಿ ಎಂದು ಎಣಿಸುತ್ತಿದ್ದೆ. ಒಮ್ಮೆ ನನ್ನವಳು ಆಸ್ಪತ್ರೆಯಲ್ಲಿ ಹೇಳಿದ್ದಳು: 'ನೋಡಿ, ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ; ಊರಲ್ಲಾದರೆ ಬಂಧುಗಳಿದ್ದಾರೆ. ಇಲ್ಲಿ ಯಾರಿದ್ದಾರೆ ನಮಗೆ?' ಎಂದು. ಆ ಮಾತಿನ ಹಿಂದೆ ತನ್ನ ಸಾವನ್ನು ಆಕೆ ಊಹಿಸಿದ್ದಿರಬೇಕೆಂಬುದನ್ನು ನಾನು ಗುರುತಿಸಿದ್ದೆ. ಆದರೆ, ಅಂದು ನಾನು ಇದ್ದುದರಲ್ಲಿಯೇ ಧೈರ್ಯ ತಂದುಕೊಂಡು, ಏನೇನೋ ಸಮಾಧಾನ ಹೇಳಿದ್ದೆ. ಅದೇ ಪ್ರಶ್ನೆಯನ್ನು ನಾನೇ ನನ್ನಲ್ಲಿ ಕೇಳಿಕೊಂಡಾಗ, ಸಮಾಧಾನ ತಂದುಕೊಳ್ಳುವ ಬಲ ನನ್ನಲ್ಲಿರಲಿಲ್ಲ.

ನಾನು ಭಾರತಕ್ಕೆ ಮರಳುವ ನಿರ್ಣಯವನ್ನು ನನ್ನ ಮೇಲ್ವಿಚಾರಕರಾದ ಡಾ. ಟೊಬ್ಯಾಕ್‌ರಿಗೆ ತಿಳಿಸಿದಾಗ, ಅವರು ನನ್ನ ಬಗ್ಗೆ ತೋರಿಸಿದ ಸಹಾನುಭೂತಿಯನ್ನು ನಾನೆಂದಿಗೂ ಮರೆಯಲಾರೆ. 'ಕ್ಯಾನ್ಸರ್ ಎಂಬುದು ಯಾರಿಗೆ ಯಾವಾಗ ಬರುತ್ತದೆಂದು

ಹೇಳಲು ಅಸಾಧ್ಯ. ಹುಟ್ಟಿದ ಮನುಷ್ಯನಿಗೆ ಕಷ್ಟ ಬರುವುದು ಸ್ವಾಭಾವಿಕ; ಆದರೆ ನಾವು ಅದನ್ನು ಧೈರ್ಯದಿಂದ ಎದುರಿಸಲು ಕಲಿಯಬೇಕು. ನೀನೀಗ ನಿನ್ನಲ್ಲೇ ಧೈರ್ಯ ತುಂಬಿಸಿಕೊಂಡು ನಿನ್ನವಳಿಗೆ ಧೈರ್ಯ ಕೊಡಬೇಕು.' ಎಂದು. ನನ್ನವಳ ವಾರ್ಡಿಗೂ ಹೋಗಿ ತನ್ನ ಸಹಾನುಭೂತಿ, ಧೈರ್ಯ ತುಂಬುವ ಮಾತುಗಳನ್ನು ನೀಡುತ್ತಿದ್ದರು. ನಾನು ಭಾರತಕ್ಕೆ ಮರಳುವ ವಿಚಾರವಾಗಿ ಅವರು, 'ನೋಡು, ನೀನಿಲ್ಲಿರುವಾಗಲೇ ನಿನ್ನ ಹೆಂಡತಿಯ ಕ್ಯಾನ್ಸರ್ ಗುರುತಿಸಿದ್ದುದು ಒಂದು ರೀತಿಯಲ್ಲಿ ಅನುಕೂಲವೇ ಆಯ್ತು. ಯಾಕೆಂದರೆ ಅಮೆರಿಕದಲ್ಲಿ ವೈದ್ಯಕೀಯ ವಿಜ್ಞಾನವು ಬಹಳಷ್ಟು ಮುಂದುವರಿದಿದ್ದು, ಆಧುನಿಕ ಪ್ರಯೋಗಗಳಿಂದ ನಿನ್ನವಳ ಕಾಯಿಲೆ ಸಂಪೂರ್ಣ ಗುಣವಾಗುವ ಸಾಧ್ಯತೆ ಇದೆ. ನಿನ್ನವಳ ಸರ್ಜರಿ ಮಾಡಿದ ಸರ್ಜನ್ ಬಹಳ ನುರಿತ ನಿಪುಣರು. ನಿನ್ನ ದೇಶವನ್ನು ಹೀನಾಯಿಸುತ್ತೇನೆಂದು ತಿಳಿಯಬೇಡ. ಭಾರತದಲ್ಲಿ ಇಂತಹ ಅನುಕೂಲತೆ ಸಿಕ್ಕಲಾರದು. ನಿನ್ನ ಹೆಂಡತಿಯ ಖಾಯಿಲೆ ನಿನ್ನನ್ನು ಅಧೀರನನ್ನಾಗಿ ಮಾಡಿರಬಹುದು; ಆದರೆ ಅವಳ ಈ ಸ್ಥಿತಿಯೇ ನೀನು ಇಲ್ಲಿರಬೇಕಾದುದಕ್ಕೆ ಕಾರಣವಾಗಿರುತ್ತದೆ. ಸುಮ್ಮನೆ ದುಡುಕಬೇಡ. ಸಾವಕಾಶವಾಗಿ ಆಲೋಚಿಸಿ ಸರಿಯಾದ ನಿರ್ಣಯ ತೆಗೆದುಕೊ.' ಎಂದು ಹೇಳಿದ ಮಾತುಗಳೂ ನನ್ನ ಹೃದಯ ಮುಟ್ಟಿ, ನನ್ನಲ್ಲಿ ವಿವೇಕ ಮೂಡುವಂತೆ ಮಾಡಿತು. ನನ್ನವಳ ಆರೋಗ್ಯವೇ ಮುಖ್ಯವಾಗಿರುವಾಗ ನಾನು ಇಂತಹ ಸಂದರ್ಭದಲ್ಲಿ ಭಾರತಕ್ಕೆ ಮರಳುವುದು ಸಮಂಜಸವಲ್ಲವೆಂದು ಕಂಡಿತು. ಇಲ್ಲಿದ್ದು, ಇಲ್ಲಿ ದೊರೆಯುವ ಆಧುನಿಕ ವೈದ್ಯಕೀಯ ಅನುಕೂಲತೆಗಳ ಫಲ ಅನುಭವಿಸಿ, ನನ್ನವಳನ್ನು ಉಳಿಸಿಕೊಳ್ಳುವುದೇ ನನ್ನ ಮುಖ್ಯ ಉದ್ದಿಶ್ಯ. ಹಾಗಾಗಿ, ನಾನು ನನ್ನ ಭಾರತಕ್ಕೆ ಮರಳುವ ನಿರ್ಣಯವನ್ನು ಬದಲಿಸಿದೆ. ಈಗಲೂ ಅನಿಸುತ್ತಿದೆ, ನಾನು ಅಂದು ಕೈಗೊಂಡ ಆ ನಿರ್ಣಯವೇ ಸರಿಯಾಗಿತ್ತೆಂದು.

ಆಸ್ಪತ್ರೆಯಲ್ಲಿ ಫಿಸಿಕಲ್ ಥೆರಪಿಗೆ ಪ್ರತೀದಿನ ಹೋಗುತ್ತಿದ್ದು, ಯಾವ್ಯಾವ ಎಕ್ಸರ್‌ಸೈಜ್ ಮಾಡಬೇಕೆಂಬ ಮಾಹಿತಿ ಪಡೆಯುತ್ತಿದ್ದಳು. ಕೆಲವು ಎಕ್ಸರ್‌ಸೈಜ್ ಮಾಡುವಾಗಲಂತೂ ತುಂಬ ನೋವಾಗುತ್ತಿತ್ತಂತೆ. ಆದಾಗ್ಯೂ, ಎಷ್ಟೇ ಕಷ್ಟವಾದರೂ, ಅವುಗಳನ್ನು ತಪ್ಪದೆ ನನ್ನವಳು ಮಾಡುತ್ತಿದ್ದಳು. ತನಗೆ ಬಂದ ಕಾಯಿಲೆ ತಾನಾಗಿ ಬರಮಾಡಿಕೊಂಡದ್ದಲ್ಲ; ಬಂದಮೇಲೆ ಅದನ್ನು ಧೈರ್ಯದಿಂದ ಎದುರಿಸಿ, ಹೋರಾಟ ನಡೆಸಿ, ಬಂದ ಕಾಯಿಲೆಯನ್ನು ಸೋಲಿಸಬೇಕು ಎಂಬ ಆಕೆಯ ದೃಢತೆಯನ್ನು ಮೆಚ್ಚಲೇಬೇಕು! ಆ ದೃಢತೆಯೇ ಅವಳಿಗೆ ಕ್ಯಾನ್ಸರ್‌ನೊಡನೆ ನಡೆಸಿದ ಹೋರಾಟದಲ್ಲಿ ಜಯ ಗಳಿಸುವಂತೆ ಮಾಡಿತ್ತು.

ಎರಡು ವಾರದ ನಂತರ ಲಕ್ಷ್ಮಿ ಮನೆಗೆ ಬರುವವಳಿದ್ದಳು. ಆಸ್ಪತ್ರೆಯಲ್ಲಿ ಸ್ವಲ್ಪ ತಿರುಗಾಡುತ್ತಿದ್ದರೂ, ಆಕೆಗೆ ಸಂಪೂರ್ಣ ಶಕ್ತಿ ಬಂದಿರಲಿಲ್ಲ. ಸಾಮಾನ್ಯವಾಗಿ, ಆಸ್ಪತ್ರೆಯ ವಾಡಿಕೆಯ ಪ್ರಕಾರ, ರೋಗಿಗಳನ್ನು ಮನೆಗೆ ಕಳುಹಿಸುವಾಗ ಅವರನ್ನು ವ್ಹೀಲ್ ಚೇರಿನಲ್ಲಿ

ಆಸ್ಪತ್ರೆ ಹೊರಗಿನವರೆಗೂ ತಂದು ಬಿಡುತ್ತಿದ್ದರು. ಆದರೆ ನನ್ನವಳನ್ನು ಹಾಗೆ ಮಾಡದೆ ಕಳುಹಿಸಿಕೊಟ್ಟಿದ್ದರು; ಏನೇನೋ ಕಾರಣ ಹೇಳಿದ್ದರೆನ್ನಿ. ಆದರೆ ನನಗಂತೂ ಆ ವರ್ತನೆ ಸರಿ ಕಾಣಲಿಲ್ಲ. ಅವಳು ನಡೆದೇ ಬಂದು ಆಸ್ಪತ್ರೆಯ ಹೊರಗೆ ನಿಂತು, ನನ್ನ ಕಾರಿಗಾಗಿ ಕಾದಿದ್ದಳು. ಆದರೆ, ಅಲ್ಲಿಯ ಒಬ್ಬ ನರ್ಸ್ ಇವಳ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಇವಳನ್ನು ಬೀಳ್ಕೊಟ್ಟಿದ್ದಳು. ಅದು ಚಳಿಗಾಲವಾದದ್ದರಿಂದ, ಸ್ನೋ ಬೀಳುವ ಸಂಭವವೂ ಇದ್ದಿತ್ತು. ಆಕೆ ನಮ್ಮನ್ನು 'ಸ್ನೋ ಬೀಳುವುದರೊಳಗೇ ನೀವು ಬೇಗ ಮನೆ ಸೇರಿ' ಎಂದು ಹಾರೈಸಿ ಕಳುಹಿಸಿದ್ದಳು. ಆಸ್ಪತ್ರೆ ಬಿಡುವ ಮುಂಚಿನ ದಿನವೇ ಡಾ. ಫರ್ಗ್ಯೂಸನ್‌ರು ವಾರಕ್ಕೊಂದು ಬಾರಿ ಬರುವಂತೆಯೂ, ಮುಂದೆ ಅವಳಿಗೆ ಸಾಕಷ್ಟು ಶಕ್ತಿ ಬಂದ ಮೇಲೆ ಕಿಮೋಥೆರಪಿ (ಕಿಮೋ) ಪ್ರಾರಂಭಿಸುವುದಾಗಿ ಹೇಳಿದ್ದರು. ಈ ಹಿಂದೆ ಲಕ್ಷ್ಮಿಯ ಕ್ಯಾನ್ಸರ್ ಬೇರೆ ಕಡೆ ಹಬ್ಬಿದೆಯೋ ಎಂಬುದನ್ನು ತೀರ್ಮಾನಿಸಲು ಸ್ತನದ ಸುತ್ತಲಿನ ಮತ್ತು ಕಂಕುಳಿನ ದುಗ್ಧಗ್ರಂಥಿಗಳನ್ನು ಪರೀಕ್ಷಿಸಿದಾಗ, ಪರೀಕ್ಷಿಸಿದ ಹಲವು ನೋಡ್‌ಗಳಲ್ಲಿ ಕೇವಲ 5 ಮಾತ್ರ ಅನುಮಾನಾಸ್ಪದವಾಗಿದ್ದವು. ಹಾಗಾಗಿ ನನ್ನವಳ ಕ್ಯಾನ್ಸರ್ ಅಷ್ಟೇನೂ ಹಬ್ಬಿರಲಿಲ್ಲವೆಂಬ ನೆಮ್ಮದಿ ಸಿಕ್ಕಿತು. ಆದರೆ, ಕಿಮೋದಿಂದ ತಲೆ ಕೂದಲು ಹೆಚ್ಚಾಗಿ ಉದುರುವುದೆಂದು ನಮ್ಮನ್ನು ಡಾಕ್ಟರರು ಎಚ್ಚರಿಸಿದ್ದರು. ಅಲ್ಲದೆ ವಾಂತಿಯಾಗುವುದೆಂದೂ, ತುಂಬ ನಿಶ್ಶಕ್ತಿಯೂ ಬರುವುದೆಂದೂ ನಮಗೆ ಮೊದಲೇ ಸೂಚನೆ ಕೊಟ್ಟಿದ್ದರು. ಇವೆಲ್ಲವನ್ನೂ ವಿವರಿಸಿದ ಮೇಲೆಯೇ, ನನ್ನಾಕೆಯನ್ನು ಆಸ್ಪತ್ರೆಯಿಂದ ಮನೆಗೆ ಹೋಗಲು ಅನುಮತಿ ಕೊಟ್ಟಿದ್ದರು.

ಅಂದು ಜನವರಿ 15; ಸ್ನೋ ಸುರಿಸುವಂತಹ ಮೋಡದಿಂದ ಆಕಾಶ ತುಂಬಿತ್ತು. ಬೆಳಿಗ್ಗೆ 11 ಗಂಟೆಯ ಹೊತ್ತಿಗೆ ನಾನು ನನ್ನವಳನ್ನು ಕೂಡಿ ಮನೆಗೆ ಹೊರಟೆ. ಅವಳು ಅಂದು ಬಿಡುಗಡೆ ಹೊಂದುತ್ತಾಳೆಂಬುದು ನನಗೆ ಖಾತ್ರಿ ಇರಲಿಲ್ಲ. ಹಾಗಾಗಿ, ನಾನು ಹುಡುಗರಿಗೆ ತಿಳಿಸಿರಲಿಲ್ಲ. ತಾಯಿ ಮನೆಗೆ ಬಂದಾಗ ಹುಡುಗರು ಸ್ಕೂಲಿಗೆ ಹೋಗಿದ್ದು, ಮನೆಯಲ್ಲಿರಲಿಲ್ಲ. ನಾನು ನನ್ನವಳನ್ನು, ಮಹಡಿಯ ಮೇಲಿರುವ ನಮ್ಮ ಬಿಡಾರಕ್ಕೆ ಆದಷ್ಟು ಜಾಗ್ರತೆ ವಹಿಸಿ ಕರೆದುಕೊಂಡು ಬಂದು ಹಾಸಿಗೆಯಲ್ಲಿ ಮಲಗಿಸಿ ನನ್ನಿಂದಾದ ಉಪಚಾರ ಮಾಡಿದ್ದೆ. ಬಹುಶಃ ಸ್ವಲ್ಪ ಊಟ ತಿನ್ನಿಸಿದೆನೆಂಬ ನೆನಪು. ನನ್ನಾಕೆಗೋ ಮನೆಗೆ ಬಂದೆ ಎಂಬ ನೆಮ್ಮದಿ ದೊರಕಿದ್ದು, ಅದು ಅವಳ ಮುಖದಲ್ಲಿ ಮೂಡಿತ್ತು. ಹುಡುಗರು ಸ್ಕೂಲಿಂದ ಬರುವ ಹೊತ್ತಿಗಾಗಿ ಕಾಯುತ್ತಿದ್ದಳು. ಅಲ್ಲಿಯವರೆಗೆ ಸ್ವಲ್ಪ ವಿಶ್ರಾಂತಿ ಪಡೆಯಲು ಮಲಗಿದ್ದಳು. ಮೊದಲಿಗೆ ಅನುರಾಧಾ ಬಂದಳು. ಅಂದು ಆಕೆ ಸ್ಕೂಲಿನ ಯಾವುದೋ ಪ್ರಾಜೆಕ್ಟ್ ಯೋಚನೆಯಲ್ಲಿಯೇ ಮಗ್ನಳಾಗಿದ್ದಳು. ಅದೇ ಗುಂಗಿನಲ್ಲಿ, ಸೀದಾ ತನ್ನ ಕೋಣೆಗೆ ಹೋಗಿ, ಆಲೋಚಿಸುತ್ತ, ಹಾಸಿಗೆ ಮೇಲೆ ಒರಗಿದಳು. ಪಕ್ಕದ ರೂಮಿನಲ್ಲಿ ಅಮ್ಮನಿದ್ದುದು ಅವಳ ಆ ಯೋಚನೆಯಲ್ಲಿ, ಗಮನಕ್ಕೆ ಬರಲಿಲ್ಲ. ಅದೇ ಸ್ವಲ್ಪ ಹೊತ್ತಿಗೆ ಪಾಪಣ್ಣ ಬಂದ. ಹುಡುಗರಿಗೆ ಮನೆಯ ಬೀಗದ ಕೈ ಕೊಟ್ಟಿದ್ದು, ಪಾಪಣ್ಣ ಬಾಗಿಲ ಬೀಗ ತೆರೆಯುತ್ತಿದ್ದಂತೆಯೇ 'ಅಮ್ಮ ಮನೆಗೆ ಬಂದಿದ್ದಾಳೆ'

ಎಂದು ಕೂಗುತ್ತ, ನಮ್ಮ ಕೋಣೆಯ ಕಡೆ ಧಾವಿಸಿದ. ನನಗಿನ್ನೂ ಆಶ್ಚರ್ಯವಾಗುತ್ತಿದೆ, ಅದು ಹೇಗೆ ಅವನಿಗೆ ಬಾಗಿಲು ತೆರೆಯುತ್ತಲೇ ಅಮ್ಮ ಬಂದುದು ತಿಳಿಯಿತು ಎಂದು. ಅದು 'ಕರುಳಿನ ಕರೆ'ಯೇ ಇದ್ದಿರಬೇಕು. ಅವನ ಕೂಗಿಗೆ, ನಿದ್ರಿಸುತ್ತಿದ್ದ ನನ್ನಾಕೆ ಎಚ್ಚತ್ತು, 'ಬಾ ಪಾಪಣ್ಣ, ಅಕ್ಕ ಇನ್ನೂ ಬರಲಿಲ್ಲವೇ?' ಎಂದು ಕೇಳಿದಳು. ಪಾಪಣ್ಣನ ಕೂಗನ್ನು ಕೇಳಿಯೇ ಮುನ್ನಿಗೆ ಅರಿವಾಗಿದ್ದುದು ಅಮ್ಮ ಬಂದ ವಿಚಾರ. ಅವಳು ತಕ್ಷಣ 'ಅಮ್ಮಾssss...' ಎಂದು ಕರೆಯುತ್ತ ನಮ್ಮ ಕೋಣೆಗೆ ಧಾವಿಸಿದಳು. ತಾಯಿ ಮಕ್ಕಳ ಆ ಅಪೂರ್ವ ಮಿಲನವನ್ನು ವರ್ಣಿಸಲು ಮಾತೇ ಸಾಲದು. ಇಬ್ಬರೂ ಅಮ್ಮನನ್ನು ಲಘುವಾಗಿ ತಬ್ಬಿಕೊಂಡು, ಆನಂದಭರಿತರಾದರು. ಮುನ್ನಿಯ ಸ್ಕೂಲಿನ ಪ್ರಾಜೆಕ್ಟ್‌ನ ಸಮಸ್ಯೆಗಳೆಲ್ಲಾ ಓಡಿ, ಗಾಳಿಪಾಲಾಗಿತ್ತು. ಅಮ್ಮ ಬಂದಳೆಂಬ ಸಂಭ್ರಮದ ಮುಂದೆ ಎಲ್ಲವೂ ಕ್ಷುಲ್ಲಕವಾಗಿತ್ತು. ಅದೊಂದು ಅವರ್ಣನೀಯ ಮಿಲನ!

ಅಂದು ನನ್ನವಳು ಮನೆಗೆ ಬಂದ ಸಂತೋಷವನ್ನು ಈ ಕೆಳಗಿನ ಸಂಗತಿ ಕೆಡಿಸಿತ್ತು. ರಾತ್ರಿ ಊಟ ಮಾಡಿ, ಸ್ವಲ್ಪ ಹೊತ್ತು ಮಾತಾಡಿ, ಲಕ್ಷ್ಮಿ ನಿದ್ರೆ ಹೋದಳು. ಆದರೆ ಸ್ವಲ್ಪ ಹೊತ್ತಿನಲ್ಲೇ ಅವಳು ಮಲಗಿದ ರೂಮಿನ ಮೇಲೆ ಮಹಡಿಯಿಂದ 'ದಪ್, ದಪ್' ಎಂಬ ವಿಶ್ರಾಂತಿ ಕೆಡಿಸುವ ಶಬ್ದ ಕೇಳಿಬಂತು. ಮಹಡಿಯಲ್ಲಿ ತುಂಬ ಜನರು ಸೇರಿ ಕುಣಿಯುತ್ತಿರುವಂತೆ ಆ ಶಬ್ದ ಕೇಳಿಸುತ್ತಿತ್ತು. ಸ್ವಲ್ಪ ಹೊತ್ತಿನಲ್ಲೇ ಶಮನವಾಗಬಹುದೆಂದು ಎಣಿಸಿ ಸುಮ್ಮನಿದ್ದರೂ, ಮುಂದೆ ಶಬ್ದವು ಜಾಸ್ತಿಯಾಗುತ್ತಿತ್ತೇ ವಿನಹ ಕಮ್ಮಿಯಾಗುವ ಸೂಚನೆಯೇ ಕಂಡು ಬರಲಿಲ್ಲ. ಹಾಗೆಂದು, ನಾನು ಮಹಡಿ ಮೇಲೆ ಹೋಗಿ, ಅವರಲ್ಲಿ ಶಬ್ದ ಕಮ್ಮಿ ಮಾಡುವಂತೆ ಕೇಳಿಕೊಂಡೆ. ನಿಜ, ನಾನೆಣಿಸಿದಂತೆ ಅದು ಯುವಕರ ಪಾರ್ಟಿಯಾಗಿತ್ತು. ಪಾರ್ಟಿಯ ಅಂಗವಾಗಿ, ಹಾಡುತ್ತ ನರ್ತನ ಮಾಡುತ್ತಿದ್ದರು. ನನ್ನ ಕೋರಿಕೆ ಅವರಿಗೆ ಸರಿಬರಲಿಲ್ಲವೆಂದು ಕಾಣಿಸುತ್ತದೆ. ಶಬ್ದ ಕಮ್ಮಿ ಮಾಡುವೆವೆಂದು ಒಪ್ಪಿದರೂ, ಸ್ವಲ್ಪ ಹೊತ್ತು ಕಮ್ಮಿಯಾದ ಶಬ್ದ ಪುನಃ ಜಾಸ್ತಿಯಾಯ್ತು. ನಾನು ಪುನಃ ಮೇಲೆ ಹೊಗಿ, ಈ ಬಾರಿ ಆ ಮನೆಯ ಹಿರಿಯರಲ್ಲಿ ಬೇಡಿಕೊಂಡೆ, ಶಬ್ದ ಕಮ್ಮಿ ಮಾಡಲು. ಮಾತ್ರವಲ್ಲ ನನ್ನಾಕೆ ಸರ್ಜರಿ ಮುಗಿಸಿ, ಅಂದೇ ಆಸ್ಪತ್ರೆಯಿಂದ ಮನೆಗೆ ಬಂದುದೆಂತಲೂ ಹೇಳಿಕೊಂಡೆ. ಅವರು ನನ್ನಲ್ಲಿ ಕ್ಷಮೆ ಕೇಳಿ ಅಲ್ಲಿ ಸೇರಿದ್ದ ಹುಡುಗರಿಗೆ ಶಬ್ದ ಕಮ್ಮಿ ಮಾಡಲು ಹೇಳಿದರು. ಸರಿ, ನನ್ನ ಕಾರ್ಯ ಸಫಲವಾಯ್ತೆಂದು ಕೆಳಗೆ ಬಂದು ಮಲಗಿದೆ. ಆದರೆ ಸುಮಾರು 15 ನಿಮಿಷಗಳ ಮೇಲೆ ಯಥಾಪ್ರಕಾರ ಗಲಾಟೆ ಜಾಸ್ತಿಯಾಯ್ತು. ಯುವಕರಂತೂ, ನಮ್ಮ ಕಷ್ಟ-ಸುಖಗಳನ್ನು ಮೆಚ್ಚಲಾರರು; ಆದರೆ ವಯಸ್ಕರಾದ ತಂದೆ-ತಾಯಿಯರೂ ಆ ಬಗ್ಗೆ ಉದಾಸೀನರಾಗಿದ್ದುದು ಸೋಜಿಗವೇ! ನಾವು ಪೊಲೀಸಿನವರಿಗೆ ದೂರು ಕೊಡಬಹುದಾಗಿತ್ತೋ ಏನೋ! ಇರಲಿ, ನಾವು ತುಂಬ ಹೊತ್ತು ಆ ಯಾತನೆಯನ್ನು ಅನುಭವಿಸಬೇಕಾಯ್ತು. ಅವರ ಪಾರ್ಟಿ ಯಾವಾಗ ಮುಗಿಯಿತೋ ತಿಳಿಯೆ. ಅದರ ಮಧ್ಯದಲ್ಲೇ, ಸುಸ್ತಾಗಿದ್ದ ಲಕ್ಷ್ಮಿ ನಿದ್ರೆ ಹೋಗಿದ್ದಳು.

ಲಕ್ಷ್ಮಿ ಮನೆಗೆ ಬಂದ ಸಮಾಚಾರ ನನ್ನ ಕೆಲವು ಸ್ನೇಹಿತರು ತಿಳಿದು ಅವಳನ್ನು ಆಗಾಗ್ಗೆ ಬಂದು ನೋಡಿ, ಅವಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ನನ್ನ ಬಂಧುಗಳಾದ ರಜನಿ ಮತ್ತು ನಳಿನಿ (ಮೈಯ) ಆಗಾಗ್ಗೆ ಬಂದು ನನ್ನವಳಿಗೆ ಅನುಕೂಲವಾಗುವಂತೆ ವಾರಕ್ಕಾಗುವಷ್ಟು ಅಡುಗೆ ಮಾಡಿ ತಂದು ಕೊಡುತ್ತಿದ್ದರು. ಇವರೆಲ್ಲ ಮಾಡಿದ ಉಪಕಾರ, ತೋರಿಸಿದ ಸಹಾನುಭೂತಿಗಳನ್ನು ಈಗಲೂ ಕೃತಜ್ಞತೆಯಿಂದ ನೆನೆದುಕೊಳ್ಳುತ್ತಿದ್ದೇವೆ. ನಾವು ಶಿಕಾಗೋಗೆ ಬಂದು ಕೇವಲ 4 ತಿಂಗಳಾಗಿದ್ದುದರಿಂದ ನಮ್ಮ ಸ್ನೇಹಿತ ವರ್ಗವಿನ್ನೂ ಚಿಕ್ಕದಾಗಿತ್ತು, ಆದರೂ, ಇದ್ದ ಕೆಲವೇ ಸ್ನೇಹಿತರು ಬಂದು, ನಮ್ಮಲ್ಲಿ ಧೈರ್ಯ ತುಂಬಿಸಿದ್ದರು. ವಿಜಯ ಮಾಧವ ರಾವ್ ಎಂಬವರು ಬಂದು ನನ್ನವಳಿಗೆ ಅಡುಗೆ ಮಾಡಿ, ಫ್ರೀಜ಼್ ಮಾಡುವ ಅನೇಕ ಮಾಹಿತಿಯನ್ನು ಒದಗಿಸಿ ಕೊಟ್ಟಿದ್ದರು. ಈ ವಿಚಾರದಲ್ಲಿ, ನನ್ನ ಗೆಳೆಯ ಸುಬ್ರಮಣ್ಯಮ್‌ರ ಪತ್ನಿ, ಲಕ್ಷ್ಮಿ ಕೂಡ ತುಂಬ ಉಪಕಾರ ಮಾಡಿದ್ದರು. ಅವರು ನಮ್ಮ ಮನೆಗೆ ಹಲವು ಬಾರಿ ಬಂದು, ನನ್ನ ಲಕ್ಷ್ಮಿಗೆ ತರಕಾರಿ ಹೆಚ್ಚಿಕೊಡುವುದು, ಅಡುಗೆಗೆ ಸಹಾಯ ಮಾಡುವುದೆಂದು ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದರು. ಇವೆಲ್ಲವನ್ನೂ ನೆನೆದಾಗ, ಸಾವಿರಾರು ಮೈಲಿ ದೂರ ಬಂದರೂ, ಗೆಳೆಯರಿಂದ ಪಡೆದ ಸಹಾನುಭೂತಿ, ಸಹಕಾರಗಳೆಲ್ಲ ನಮ್ಮ ಮನಸ್ಸಿನ 'ಬಂಧುಗಳ್ಯಾರೂ ಇಲ್ಲವಲ್ಲಾ!' ಎಂಬ ಭಾವನೆಯನ್ನು ದೂರ ಮಾಡಿ 'ನಮಗೆ ಇವರೆಲ್ಲ ಬಂಧುಗಳು' ಎಂಬ ಭಾವನೆಯನ್ನು ಮೂಡಿಸಿತ್ತು.

'ದೇವದೂತೆ' (Angel) ಯಾಗಿ ಬಂದ ಪಾಪಚ್ಚಿ

ಮಿಸಿಸ್ಸಿಪ್ಪಿಯಲ್ಲಿರುವ ನನ್ನವಳ ಕಸಿನ್ ಪಾಪಚ್ಚಿ, ನನ್ನವಳಿಗೆ ಕ್ಯಾನ್ಸರ್ ಬಂದಾಗ ಮಾಡಿದ ಉಪಕಾರವನ್ನು ಸ್ಮರಿಸಿದಾಗಲೆಲ್ಲ, ನಮ್ಮ ಹೃದಯ ತುಂಬಿ ಬರುತ್ತದೆ. ಅವಳ ಗಂಡ, ಮಿಸಿಸ್ಸಿಪ್ಪಿಯ, ಟೈಲರ್ ಟೌನ್ ಎಂಬಲ್ಲಿ ಜನರಲ್ ಸರ್ಜನ್ ಆಗಿ ಒಂದು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಮಕ್ಕಳಿಬ್ಬರು, –ಅರ್ಚನ ಮತ್ತು ಸ್ವಾತಿ – ಇನ್ನೂ ಚಿಕ್ಕವರು. 1976 ಜನವರಿ 1 ರಂದು, ನನ್ನವಳ ಸರ್ಜರಿಯಾದ ಮರುದಿನ, ನಮ್ಮ ದುರದೃಷ್ಟದ ವಿಚಾರ ತಿಳಿಯದೆ, ಪಾಪಚ್ಚಿ ಪ್ರತಿ ವರ್ಷದಂತೆ, ಹೊಸ ವರ್ಷದ ಶುಭಾಶಯಗಳನ್ನು ಹೇಳಲು ಫ಼ೋನ್ ಮಾಡಿ, 'ಪುಟ್ಟಮ್ಮ ಇಲ್ಲವೇ?'ಎಂದು ಕೇಳಿದಳು. ನಾನು ಉತ್ತರವಾಗಿ, 'ಎಂತಹ ಹೊಸ ವರ್ಷ ಪಾಪಚ್ಚಿ! ಪುಟ್ಟಮ್ಮ ಈಗ ಆಸ್ಪತ್ರೆಯಲ್ಲಿದ್ದಾಳೆ' ಎಂದು ಹೇಳಿ, ಆಕೆಯ ಅಸ್ವಸ್ಥತೆಯ ವಿವರವನ್ನೆಲ್ಲ ಹೇಳಿದೆ. ಪಾಪಚ್ಚಿ ತುಂಬ ಗಾಬರಿಯಾಗಿ, 'ಮನೆಯಲ್ಲಿ ವ್ಯವಸ್ಥೆ ಏನು? ಮಕ್ಕಳು ಹೇಗಿದ್ದಾರೆ? ನಿಮ್ಮ ಸಹಾಯಕ್ಕೆ ನಾನು ಕೂಡಲೆ ಬರುತ್ತೇನೆ. ಆ ಬಗ್ಗೆ ಏನೂ ಸಂಕೋಚ ಪಡಬೇಡಿ. ಇಂತಹ ಸಮಯದಲ್ಲಿ ನಮ್ಮವರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ. ಪುಟ್ಟಮ್ಮನಿಗೆ ಬೇಗ ವಾಸಿಯಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.......' ಎಂದೆಲ್ಲ ಹೇಳುತ್ತ, ತನ್ನ

ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಳು. ಚಿಕ್ಕ ಮಕ್ಕಳನ್ನೂ, ಗಂಡನನ್ನೂ ಬಿಟ್ಟು ಬಂದು ನಮಗೆ ಸಹಾಯ ಮಾಡುವೆನೆಂದು ಹೇಳಿದ್ದುದು ಆಕೆಯ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ. ಹಾಗೆಂದು ಈ ವಿಷಯವನ್ನು ನನ್ನವಳ ಬಳಿ ವಿಚಾರಿಸಿದಾಗ, ಅವಳು, 'ಪಾಪಚ್ಚಿ ಈಗ ಬಂದು ಪ್ರಯೋಜನವಾಗುವುದಿಲ್ಲ. ಈಗ ಸ್ವಲ್ಪ ದಿನ ಆಸ್ಪತ್ರೆಯಲ್ಲೇ ಇರಬೇಕಾಗಿದೆ. ಆಸ್ಪತ್ರೆಯಿಂದ ಮನೆಗೆ ಹೋದ ಮೇಲೆ ಅವಳಿಂದ ಉಪಕಾರ ಪಡೆಯಬಹುದೇನೊ! ಆದರೆ, ಅವಳಿಗೆ ತನ್ನದೇ ಸಂಸಾರ ತಾಪತ್ರಯವಿರುವಾಗ, ನಾವು ಅವಳಿಗೆ ತೊಂದರೆ ಕೊಡುವುದು ಸರಿಯಲ್ಲ. ಹಾಗೇ ಅವಳಿಗೆ ತಿಳಿಸಿ' ಎಂದು ತನ್ನ ಅಭಿಪ್ರಾಯ ತಿಳಿಸಿದ್ದಳು. ಅದೇ ರೀತಿ ಪಾಪಚ್ಚಿಗೆ ನಾನು ತಿಳಿಸಿದಾಗ ಅವಳು, 'ಐತಾಳರೇ, ನೀವು ಯಾವ ರೀತಿಯಲ್ಲೂ ಸಂಕೋಚ ಪಡಬೇಡಿ. ಎಷ್ಟು ತೊಂದರೆಯಾದರೂ, ಈ ಸಂದರ್ಭದಲ್ಲಿ ನಿಮಗೆ ಸಹಾಯ ಮಾಡುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಅಲ್ಲದೆ, ಅದರಿಂದ ನಮಗೂ ತೃಪ್ತಿ ಸಿಗುತ್ತದೆ. ನಾನು ಮಕ್ಕಳ ಸಮೇತ, ಪುಟ್ಟಮ್ಮ ಆಸ್ಪತ್ರೆಯಿಂದ ಮನೆಗೆ ಬಂದ ಮೇಲೆ ಖಂಡಿತ ಬರುತ್ತೇನೆ. ಅವಳು ಮನೆಗೆ ಬರುವ ದಿನ ನನಗೆ ತಿಳಿಸಿ' ಎಂದು ಹೇಳಿದಳು. ಮುಂದೆ, ಪ್ರತೀದಿನ ಫ಼ೋನ್ ಮಾಡಿ, ನನ್ನವಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದಳು.

ಅವಳು ಬರುವ ದಿನ ಲಕ್ಷ್ಮಿಗೆ ಒಂದು ವಿಶೇಷ ಅನುಭವವಾಗಿತ್ತು. ನಾನು ಪಾಪಚ್ಚಿಯನ್ನು ಕರೆತರಲು, ಏರ್‌ಪೋರ್ಟಿಗೆ ಹೋಗಿದ್ದೆ. ಅಷ್ಟರಲ್ಲಿ, ಬಾಲಕೃಷ್ಣ ರಾವ್ ಎಂಬವರು ತಮ್ಮ ಪತ್ನಿಯೊಡನೆ ಲಕ್ಷ್ಮಿಯನ್ನು ನೋಡಲು ಬಂದರು. ನಮ್ಮ ಮಕ್ಕಳು ಅವರನ್ನು ಸ್ವಾಗತಿಸಿ, ಕೂಡಿಸಿ, ತಮ್ಮಿಂದಾದ ಆತಿಥ್ಯವನ್ನು ನೀಡಿದ್ದರು. ಮಲಗಿ ವಿಶ್ರಾಂತಿ ಪಡೆಯುತ್ತಿದ್ದ ನನ್ನಾಕೆ, ನಿಶ್ಶಕ್ತಿ ಇದ್ದರೂ, ತನ್ನ ವೇದನೆಯನ್ನು ಬದಿಗೊತ್ತಿ, ಲಿವಿಂಗ್ ರೂಮಿಗೆ ಬಂದು ಕುಳಿತು, ಅವರೊಡನೆ ಸಂಭಾಷಿಸಲು ಪ್ರಾರಂಭಿಸಿದಳು. ನಾನು ಪಾಪಚ್ಚಿಯ ಜೊತೆ ಮನೆಗೆ ಬಂದಾಗ ನನ್ನವಳು ಕಷ್ಟಪಟ್ಟು ಕುಳಿತು ಬಂದ ಅತಿಥಿಗಳ ಜೊತೆ ಮಾತಾಡುವುದನ್ನು ನೋಡಿದಾಗ ತುಂಬಾ ವೇದನೆಯಾಯ್ತು. ಮಾತಾಡುವ ಶಕ್ತಿ ಇಲ್ಲದಿದ್ದರೂ ತನ್ನ 'ಕರ್ತವ್ಯ'ವೆಂದು ತಿಳಿದು ಹಾಗೆ ಮಾಡಿದ್ದುದು ಅವಳು ನಡೆದು ಬಂದ ದಾರಿಯನ್ನು ವ್ಯಕ್ತಪಡಿಸುತ್ತದೆ.

ಪಾಪಚ್ಚಿಯನ್ನು ನೋಡಿದ ತಕ್ಷಣ ಲಕ್ಷ್ಮಿಯ ಮುಖದಲ್ಲಿ ಮೂಡಿದ ಗೆಲುವನ್ನು ವರ್ಣಿಸಲಸಾಧ್ಯ. ಪಾಪಚ್ಚಿಯೂ ಅವಳನ್ನು ಸಂತೋಷದಿಂದ ಲಘುವಾಗಿ ತಬ್ಬಿಕೊಂಡಳು. ಇಬ್ಬರ ಕಣ್ಣುಗಳು ಒದ್ದೆಯಾಗಿದ್ದುವು. ಪಾಪಚ್ಚಿ ತಕ್ಷಣವೇ ಅಲ್ಲಿ ಬಂದಿದ್ದ ಅತಿಥಿಗಳಿಗೆ ಕಾಪಿ ಮಾಡಿಕೊಟ್ಟಳು. ಬಂದಂದಿನಿಂದ ಆಕೆ ಮನೆಯ ಕೆಲಸದ ಜವಾಬ್ದಾರಿ ಹೊತ್ತು ನಮ್ಮಲ್ಲಿ ಧೈರ್ಯ ತುಂಬಿ, ತುಂಬ ನೆರವಾಗಿದ್ದಳು. ಆ ಬಗ್ಗೆ ನಾವು ಅವಳಿಗೆ ಚಿರಋಣಿಗಳು. ಪಾಪಚ್ಚಿ ಮನೆಗೆಲಸದಲ್ಲೂ, ಅಡುಗೆ ಮಾಡುವುದರಲ್ಲೂ, ತುಂಬ ನುರಿತವಳು. ಮುಂದಿನ 3 ವಾರಗಳಲ್ಲಿ, ನಮ್ಮ ಮನೆಯಲ್ಲೇ ಅವಳಿಂದಲೇ ಉಪಚಾರ

ಮಾಡಿಸಿಕೊಳ್ಳಬೇಕಾದ ಸಂದರ್ಭ ಬಂದಿತ್ತು. ಅವಳಿರುವಷ್ಟು ದಿನ ನಮಗೆ ಊಟೋಪಚಾರವಲ್ಲದೆ, ಅದಕ್ಕೂ ಹೆಚ್ಚಿನ ಧೈರ್ಯ ತುಂಬುವ ಆತ್ಮೀಯ ಮಾತುಗಳಿಂದ, ನಮಗೆ ದೊರಕಿದ ನೆಮ್ಮದಿ ಅಷ್ಟಿಷ್ಟಲ್ಲ.

ಪಾಪಚ್ಚಿ ಹೊರಡುವ ದಿನ ಬಂದಂತೆ, ನಮ್ಮ ಹೃದಯ ಭಾರವಾಗುತ್ತ ಬಂತು. ಹೊರಡುವ ದಿನ ಎಲ್ಲರ ಕಣ್ಣೂ ಒದ್ದೆಯಾಗಿತ್ತು. ನನ್ನವಳನ್ನು ಬೀಳ್ಕೊಳ್ಳುವಾಗ ಪಾಪಚ್ಚಿ ತುಂಬ ನೊಂದಿದ್ದಳು. ಈಗಲೂ ಅವಳ ಆತ್ಮೀಯತೆಯ ಬೆಚ್ಚಗಿನ ಅನುಭವ ಆಗಿಂದಾಗ್ಗೆ ಆಗುತ್ತಿದ್ದಂತೆ, ನಮ್ಮ ಹೃದಯ ತುಂಬಿ ಬರುತ್ತದೆ. ಆಕೆಯ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ಬಲು ಕಷ್ಟ. ನನ್ನವಳು ಈಗಲೂ ಹೇಳುತ್ತಿರುತ್ತಾಳೆ, 'ಕಷ್ಟ ಕಾಲದಲ್ಲಿ ದೇವರು ಎಲ್ಲಿಂದಾದರೂ ಸಹಾಯ ಒದಗಿಸಿ ಕೊಡುತ್ತಾನೆ; ಆ ದೇವರು ಪಾಪಚ್ಚಿಯನ್ನು ನಮಗೆ ತನ್ನ ಪ್ರತಿನಿಧಿಯಾಗಿ ಕಳುಹಿಸಿ ಕೊಟ್ಟ' – ಎಂದು. ನನ್ನ ತಾಯಿಗೆ ಪಾಪಚ್ಚಿಯ ವಿಚಾರ ಬರೆದು ತಿಳಿಸಿದಾಗ, ಅವಳು ಉತ್ತರ ಬರೆದಿದ್ದಳು: 'ಪಾಪಚ್ಚಿಯೇ ನಿಮಗೆ 'ದೇವದೂತಳಾಗಿ' ಬಂದು ಸಹಾಯ ಮಾಡಿದಳು' ಎಂದು. ಪಾಪಚ್ಚಿ ಮಾಡಿದ ಉಪಕಾರ ನೆನೆಸಿದಷ್ಟೂ, ಕೃತಜ್ಞತೆಯ ಕಂಬನಿ ಕಣ್ಣಲ್ಲಿ ತುಂಬುವುದು. ನಿಜ! ನಮ್ಮ ಪಾಲಿಗಂತೂ ಆಕೆ ಒಬ್ಬ ಏಂಜಲ್; ನಮ್ಮ ಕಷ್ಟದಲ್ಲಿ ನೆರವಾದ 'ದೇವದೂತೆ!' ಪಾಪಚ್ಚಿ ಹೋದ ಮೇಲೆ ಮನೆಯಲ್ಲಿ ಮೊದಲಿನ ಸಡಗರವಿರಲಿಲ್ಲ. ಅವಳಿರುವಷ್ಟು ದಿನ, ಸಂತೋಷ ಸಾಗರದಲ್ಲಿ ತೇಲುತ್ತಿದ್ದ ನಮ್ಮನ್ನು, ಅವಳ ನಿರ್ಗಮನ ಒಮ್ಮೆಗೇ ವಾಸ್ತವ ಸ್ಥಿತಿಗೆ ತಂದಂತಾಯ್ತು. ಮುಂದೆ, ನನ್ನವಳ ಕ್ಯಾನ್ಸರ್‌ನೊಡನ ಹೋರಾಟಕ್ಕೆ ಸಜ್ಜುಗೊಳಿಸಬೇಕಾದ ಕಡೆ ಗಮನ ಹರಿಸಬೇಕಾಯ್ತು. ಪಾಪಚ್ಚಿ ಇದ್ದಷ್ಟು ಕಾಲ ಆ ಹೋರಾಟದ ನೆನಪು ನೇಪಥ್ಯದಲ್ಲಿದ್ದಿತ್ತು. ಈಗ ಒಮ್ಮೆಗೆ, ಅದು ರಂಗಭೂಮಿಯಲ್ಲಿ ಮುಖ್ಯ ಸ್ಥಾನ ತೆಗೆದುಕೊಂಡಂತಾಯ್ತು. ಲಕ್ಷ್ಮಿಯ ಜೀವನದ ಇನ್ನೊಂದು ಹಂತ ಪ್ರಾರಂಭವಾಯ್ತು.

ಒಂದು ತಿಂಗಳು ಸರ್ಜರಿಯ ನೋವಿನಿಂದ ಚೇತರಿಸಿಕೊಂಡ ಮೇಲೆ ನನ್ನಾಕೆಯ ಕಿಮೋ ಚಿಕಿತ್ಸೆ ಪ್ರಾರಂಭಿಸುವುದಾಗಿ ಡಾ. ಫರ್ಗ್ಯೂಸನ್ ಹೇಳಿದ್ದರಷ್ಟೆ! ಪ್ರತಿವಾರವೂ ಅವರನ್ನು ನೋಡಲು ಆಸ್ಪತ್ರೆಗೆ ಹೋಗುತ್ತಿದ್ದೆವು. ಕಿಮೋ ಪ್ರಾರಂಭಿಸುವ ನಿರ್ದಿಷ್ಟ ಸಮಯವನ್ನು ನಿಶ್ಚಯಿಸಿ, ಆ ದಿನ ನಮ್ಮೊಡನೆ ಸುಮಾರು ಒಂದು ಗಂಟೆ ಕಾಲ ಅದರ ವಿಚಾರವಾಗಿ ಪುನಃ ಫರ್ಗ್ಯೂಸನ್‌ರು ಮಾಹಿತಿ ಕೊಟ್ಟರು. ತಾವು ಅನುಸರಿಸಲಿರುವ ಕಿಮೋ ಕ್ರಮವು ಅಮೆರಿಕದಲ್ಲಿ ಹೊಸದಾಗಿ ಪ್ರಾರಂಭಿಸಿದುದೆಂದೂ, ಯುರೋಪಿನಲ್ಲಿ ಬಹಳಷ್ಟು ಯಶಸ್ವಿಯಾಗಿದೆಯೆಂದೂ ಹೇಳಿದರು. ಈ ಕ್ರಮದಲ್ಲಿ, ಮೂರು ಔಷಧಗಳಿದ್ದು, ಅವು ಮೂರು ವಿಧದಲ್ಲಿ ಕ್ಯಾನ್ಸರ್ ಉತ್ಪತ್ತಿ ಮಾಡುವ ಕಣಗಳನ್ನು ನಿರ್ಮೂಲ ಮಾಡಲು ಸಹಾಯವಾಗುವುದೆಂದೂ ವಿವರಿಸಿದರು. ಅವುಗಳಲ್ಲಿ ಎರಡು ಮಾತ್ರೆಯ ರೂಪದಲ್ಲಿ ಪ್ರತೀದಿನ ತೆಗೆದುಕೊಳ್ಳಬೇಕಾದುದು. ಮೂರನೆಯದು

ಇಂಜೆಕ್ಷನ್ ರೂಪದಲ್ಲಿ, ವಾರಕ್ಕೊಂದು ಬಾರಿ ತೆಗೆದುಕೊಳ್ಳಬೇಕಾದುದು. ಆ ಇಂಜೆಕ್ಷನ್‌ನ ಪರಿಣಾಮವೆಂದರೆ ಹೊಟ್ಟೆ ತೊಳಸಿ ಬರುವುದು. ಅಲ್ಲದೆ ಆ ಚಿಕಿತ್ಸಾ ಅವಧಿಯಲ್ಲಿ ಕೆಂಪು ರಕ್ತ ಕಣಗಳ ಪ್ರಮಾಣ ಕಡಿಮೆಯಾಗಬಹುದೆಂದೂ, ಆ ಬಗ್ಗೆ ಜಾಗರೂಕರಾಗಿರಬೇಕೆಂದೂ ಎಚ್ಚರಿಸಿದ್ದರು. ಆ ಸಮಯ ಪುಷ್ಟಿಕರ ಆಹಾರವನ್ನು ಆದಷ್ಟು ಸೇವಿಸಬೇಕು. ಇಲ್ಲಿ 'ಆದಷ್ಟು' ಎಂಬುದಕ್ಕೊಂದು ಅರ್ಥವಿದೆ. ಈ ಚಿಕಿತ್ಸಾ ಕ್ರಮದ ಅವಧಿಯಲ್ಲಿ, ಆಹಾರ ಸೇವನೆಯೇ ಬೇಡವೆನಿಸುತ್ತದೆ. ಎರಡು ವಾರ ಔಷಧಿಯಲ್ಲಿದ್ದು ಇನ್ನೆರಡು ವಾರ ಔಷಧಿ ಸೇವನೆ ಇಲ್ಲದೆ, ವಿಶ್ರಾಂತಿ. ಈ ವಿಶ್ರಾಂತಿ ಸಮಯ ಆಹಾರ ಸೇವನೆಗೆ ತುಂಬ ಅನುಕೂಲವಾಗುತ್ತಿತ್ತು. ಈ ಚಿಕಿತ್ಸಾ ಅವಧಿಯಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ತಲೆ ಕೂದಲು ಉದುರುವುದೆಂದೂ ಎಚ್ಚರಿಸಿದ್ದರು. ಹೀಗೆ 'ಕಿಮೋ'ದಿಂದಾಗುವ ಪರಿಣಾಮಗಳನ್ನೆಲ್ಲ ವಿವರಿಸಿ, ಡಾ. ಫರ್ಗ್ಯೂಸನ್‌ರು ನನ್ನವಳನ್ನು ಕ್ಯಾನ್ಸರ್‌ನೊಡನೆ ಹೋರಾಟ ನಡೆಸಲು 'ಹುರಿದುಂಬಿಸಿದರು'.

ಮೊದಲ ದಿನದ ಟ್ರೀಟ್‌ಮೆಂಟ್ ನನ್ನ ಮನಸ್ಸಿನಲ್ಲಿನ್ನೂ ನಟ್ಟುಳಿದಿದೆ. ಆ ದಿನ, ಇಂಜೆಕ್ಷನ್ ತೆಗೆದುಕೊಂಡು ಮನೆಗೆ ಬರುತ್ತಿರುವಾಗ ದಾರಿಯಲ್ಲಿಯೇ ಇವಳ ಹೊಟ್ಟೆ ತೊಳಸಿ ಬಂದು ವಾಂತಿ ಮಾಡಿದಳು. ಅದಕ್ಕಾಗಿ, ವಾಂತಿಮಾಡಲೆಂದೇ, ಒಂದು ಪ್ಲಾಸ್ಟಿಕ್ ಲಕೋಟೆಯನ್ನು ಕೊಂಡೊಯ್ದು ನನ್ನಾಕೆ ಮುಂಜಾಗ್ರತೆ ವಹಿಸಿದ್ದಳು. ಸುಸ್ತಾಗಿ, ಮನೆಗೆ ಬಂದವಳೇ ತಿನ್ನುವ ಉತ್ಸಾಹವಿಲ್ಲದೆ, ಸೀದಾ ಹೋಗಿ ಮಲಗಿದಳು. ಕುಡಿದ ಟೀ ಸ್ವಲ್ಪ ಸಮಯದಲ್ಲೇ ವಾಂತಿಯಾಗಿ ಹೋಗಿತ್ತು. ಕೆಲವು ಬಾರಿ ಎದ್ದು ನಿಂತು, ಬಾತ್ ರೂಮಿನ ಸಿಂಕ್‌ನಲ್ಲಿ ವಾಂತಿ ಮಾಡುವ ಶಕ್ತಿ ಇಲ್ಲದೆ, ಕುಳಿತು, ಟಾಯ್ಲೆಟ್ಟಿಗೆ ಮುಖ ಒಡ್ಡಿ ವಾಂತಿ ಮಾಡಲು ಒದ್ದಾಡುತ್ತಿದ್ದಳು. ನೋಡುವವರಿಗೇ ಅದು ತುಂಬ ಯಾತನೆ ಕೊಡುತ್ತಿತ್ತು. ಅನುಭವಿಸುವ ಅವಳಿಗೆ ಅದೆಷ್ಟು ಯಾತನೆಯಾಗುತ್ತಿತ್ತೋ ಏನೋ! ಎರಡು ವಾರ ಈ ರೀತಿ ನರಕಯಾತನೆ ಅನುಭವಿಸಿ, ಮುಂದಿನೆರಡು ವಾರ ವಿಶ್ರಾಂತಿ ದೊರಕುತ್ತಿತ್ತು. ಆ ಎರಡು ವಿಶ್ರಾಂತಿ ವಾರಗಳು ನಮಗೆ ಸ್ವರ್ಗಸುಖದಂತಿದ್ದುವು. ಹೀಗೆ ಈ ಚಿಕಿತ್ಸಾವಿಧಾನದಲ್ಲಿ ಒಂದು ವರ್ಷ ಕಳೆಯಬೇಕಾಗಿತ್ತು. ಒಮ್ಮೆ, ಆಸ್ಪತ್ರೆಯಿಂದ ಮನೆಗೆ ಇಂಜೆಕ್ಷನ್ ತೆಗೆದುಕೊಂಡು ಮರಳುತ್ತಿದ್ದಂತೆ, ಒಂದು ಟ್ರಕ್–ಕಾರುಗಳೊಡನೆ ಅಪಘಾತವಾಗಿತ್ತು. ಅದರ ಸ್ವಲ್ಪ ಹಿಂದೆಯೇ ಚಲಿಸುತ್ತಿದ್ದ ನನ್ನ ಕಾರು, ಪುಣ್ಯವಶಾತ್, ಈ ಅಪಘಾತದಿಂದ ತಪ್ಪಿಸಿಕೊಂಡಿತ್ತು. ಇದನ್ನು ನನ್ನಾಕೆ ನೋಡುತ್ತಿದ್ದಳು. ಆದರೆ, ಅದೇ ಸಮಯ ಹೊಟ್ಟೆ ತೊಳಸಿ ಬಂದಿದ್ದು, ವಾಂತಿ ಮಾಡುತ್ತಿದ್ದಳು. ಆ ಸಂಕಟದಲ್ಲಿ ಆ ಅಪಘಾತದ ಬಗ್ಗೆ ಏನೊಂದೂ ಆಲೋಚನೆ ಮಾಡುವ ಹಾಗಿರಲಿಲ್ಲ. ಮನೆಗೆ ಬಂದು ಸುಧಾರಿಸಿ, 1–2 ದಿನಗಳ ಮೇಲೆಯೇ ನನ್ನನ್ನು ಕೇಳಿದ್ದಳು – 'ಅಂದಿನ ಅಪಘಾತದಲ್ಲಿ ಯಾರಿಗೇನಾದರೂ ಪೆಟ್ಟಾಗಿತ್ತೇ? ನಮಗೇನಾದರೂ ಅಪಾಯವಾಗಿತ್ತೇ?' ಎಂದು. ಇದರಿಂದಲೇ ಎಣಿಸಬಹುದು, ಆಕೆ ಪಡುತ್ತಿದ್ದ ಸಂಕಟದ ತೀವ್ರತೆಯನ್ನು! ಹೀಗೆ ಮನೆಗೆ ಬಂದು, 1–2 ದಿನ ಏನೂ ಆಹಾರವಿಲ್ಲದೆ, ದಿನಕ್ಕೆ 2–3 ಕಪ್ ಟೀ ಕುಡಿದೇ 'ಹೊಟ್ಟೆ

ತುಂಬಿಸಿಕೊಳ್ಳುತ್ತಿದ್ದಳು. ಸ್ವಲ್ಪ ಶಕ್ತಿ ಬಂದಾಗ ಅಡುಗೆ ಕೆಲಸ ಮಾಡುತ್ತಿದ್ದಳು. ಟ್ರೀಟ್‌ಮೆಂಟ್ ಸಮಯದಲ್ಲಿ, ಮೊದಲೇ ಮಾಡಿ, ಫ್ರೀಝರಿನಲ್ಲಿಟ್ಟ ಅಡುಗೆಗಳು ನಮ್ಮ ಉಪಯೋಗಕ್ಕೆ ಬರುತ್ತಿದ್ದುವು. ಕೆಲವೊಮ್ಮೆ, ನಮ್ಮ ರಜನಿ ಮಾಡಿಕೊಟ್ಟ ಅಡುಗೆಯೂ ನಮಗೆ ತುಂಬ ಉಪಕಾರಕ್ಕೆ ಬಂದಿದ್ದು, ಆ ಪುಣ್ಯಾತ್ಮೆಯ ಸಹಕಾರವನ್ನು ಸ್ಮರಿಸುತ್ತ, ಊಟ ಮಾಡುತ್ತಿದ್ದೆವು. ಆದರೆ, ಸ್ವಲ್ಪವೇ ಶಕ್ತಿ ಬಂದ ಕ್ಷಣವೇ ನನ್ನಾಕೆ ಅಡುಗೆ ಕೆಲಸಕ್ಕೆ ಪ್ರಾರಂಭಿಸುತ್ತಿದ್ದಳೆಂದು ಹೇಳಿದೆನಲ್ಲವೇ? ಹುಡುಗರಿಗೆ ಸರಿಯಾದ ಊಟ-ಉಪಚಾರಗಳನ್ನು ಮಾಡುವುದು ತನ್ನ ಕರ್ತವ್ಯವೆಂದು ಆಕೆ ದೃಢವಾಗಿ ನಂಬಿದ್ದಳು. ನಾನೂ ಆಗಾಗ್ಗೆ, ಅಡುಗೆ ಮನೆಯಲ್ಲಿ 'ನಾಮಕಾವಾಸ್ತೆ'ಗಾದರೂ ಸಹಾಯ ಮಾಡುತ್ತಿದ್ದೆ. ಆದರೆ, ಹುಡುಗರಂತೂ ಅಮ್ಮನಿಗೆ ತುಂಬ ಸಹಾಯಮಾಡುತ್ತಿದ್ದರು. ಹಿಂದೆ ಹೇಳಿದಂತೆ, ಲಕ್ಷ್ಮಿ ಸುಬ್ರಮಣ್ಯಮ್ ಆಗಾಗ್ಗೆ ಬಂದು ಮನೆಗೆಲಸ ತುಂಬ ಮಾಡಿಕೊಡುತ್ತಿದ್ದರು. ರಜನಿಯಂತೂ, ಪ್ರತಿ ಬಾರಿ ಬಂದಾಗಲೂ, ವಾರಕ್ಕಾಗುವಷ್ಟು ಅಡುಗೆ ಮಾಡಿ ತರುತ್ತಿದ್ದಳು. ಔಷಧಿ ಇಲ್ಲದ ಎರಡು ವಾರ ನಾವು ಸಂತೋಷದಿಂದ ಕಳೆಯುತ್ತಿದ್ದೆವು. ಆ ಸಮಯದಲ್ಲೇ ನಾವು ಬೇರೆಯವರ ಮನೆಯ ಆಮಂತ್ರಣವನ್ನು ಸ್ವೀಕರಿಸುತ್ತಿದ್ದೆವು. ಕೆಲವು ಸ್ನೇಹಿತರು ನಮ್ಮ ಅನುಕೂಲಕ್ಕಾಗಿಯೇ ಆ ಸಮಯದಲ್ಲೇ ನಮ್ಮನ್ನು ಆಮಂತ್ರಿಸುತ್ತಿದ್ದರು.

ಒಂದು ವರ್ಷದ ಔಷಧೋಪಚಾರದ ಅವಧಿಯನ್ನು ಹೇಗೆ ಕಳೆದೆವೋ ಏನೋ! ಅದು ಒಂದು ನರಕಯಾತನೆಯಂತಿದ್ದುದು ಮಾತ್ರ ನಿಜ. ಟ್ರೀಟ್‌ಮೆಂಟ್ ಇಲ್ಲದ ಎರಡು ವಾರ ನಾವು ಇದ್ದುದರಲ್ಲಿಯೇ 'ಸುಖ' ಪಡೆಯಲು ಯತ್ನಿಸಿದೆವು. ಆದರೆ ನನ್ನವಳಿಗೆ ಆಸ್ಪತ್ರೆಗೆ ಹೋಗುವುದನ್ನು ಎಣಿಸಿಕೊಂಡಾಗಲೇ ಹೊಟ್ಟೆ ತೊಳಸಿ ಬರುತ್ತಿತ್ತು. ಈ ಮಧ್ಯೆ, ಭಾರತದಿಂದ, ನನ್ನವಳ ಅತ್ತಿಗೆಯ (ಅಣ್ಣನ ಹೆಂಡತಿ) ತಂಗಿಯೊಬ್ಬಳು ನಮ್ಮನ್ನು ಸಂದರ್ಶಿಸಿದ್ದಳೆಂಬ ನೆನಪು. ಆಕೆ ಗಂಡನ ಜತೆ ಅಮೆರಿಕಕ್ಕೆ ಪ್ರವಾಸ ಕೈಗೊಂಡಿದ್ದು, ಅವಳ ಕಸಿನ್, ರಜನಿಯ ಮನೆಗೆ ಬಂದಿದ್ದಳು. ಚಿಅವಳು ಬಂದಾಗ ಟ್ರೀಟ್‌ಮೆಂಟ್ ಇರಲಿಲ್ಲ. ನಮ್ಮವಳು ಅವಳ ಭೇಟಿಯಿಂದ ತುಂಬ ಹರ್ಷಿತಳಾಗಿದ್ದಳು. ಅಂತಹ ಸಮಯ ಬಂಧುಗಳ ಭೇಟಿ ಹೆಚ್ಚಿನ ನೆಮ್ಮದಿ ನೀಡುವುದು ಸ್ವಾಭಾವಿಕವೇ! ನನ್ನ ತಮ್ಮ ಕೇಶವನೂ, ನ್ಯೂಯಾರ್ಕ್‌ನಿಂದ 2-3 ಬಾರಿ ಭೇಟಿ ಕೊಟ್ಟಿದ್ದ. ಅವನು ನನ್ನವಳ ಯೋಗಕ್ಷೇಮವನ್ನು ಫ಼ೋನ್ ಮೂಲಕ ವಿಚಾರಿಸುತ್ತಲೇ ಇರುತ್ತಿದ್ದ. ಪಾಪಚ್ಚಿಯಂತೂ, ಪದೇ ಪದೇ ಫ಼ೋನ್ ಮಾಡಿ ನನ್ನವಳಲ್ಲಿ ಹರ್ಷ ಮತ್ತು ಹುರುಪನ್ನು ತುಂಬಿಸುತ್ತಲೇ ಇದ್ದಿದ್ದಳು – ಪುಣ್ಯಾತಗಿತ್ತಿ! ಅವಳಿಗಾಗಿ ನಮ್ಮ ಹೃದಯದಲ್ಲಿ ಒಂದು ಸ್ಪೆಷಲ್ ಸ್ಥಾನವಿದೆ. ಟ್ರೀಟ್‌ಮೆಂಟ್ ಮುಗಿದ ಮೇಲೋ, ಅಥವಾ ಆ ಸಮಯದಲ್ಲೋ ಜ್ಞಾಪಕವಾಗುತ್ತಿಲ್ಲ, ಭಾರತದಿಂದ, ಲಕ್ಷ್ಮಿಯ ಅತ್ತಿಗೆಯ ತಂದೆ ಅಮೆರಿಕಕ್ಕೆ ಭೇಟಿಕೊಟ್ಟಿದ್ದು, ನಾವು ಅವರನ್ನು ಸಂದರ್ಶಿಸಿದ್ದೆವು. ಅವರು ಅಂದು ಹೇಳಿದ ಮಾತಿನ್ನೂ ನೆನಪಿನಲ್ಲಿದೆ : 'ಊರಿಗೆ ಹೋಗಿ ನಿನ್ನ ತಂದೆಗೆ ಪುಟ್ಟಮ್ಮ ಕ್ಷೇಮದಲ್ಲಿದ್ದಾಳೆ ಎಂದು ತಿಳಿಸುತ್ತೇನೆ' ಎಂದು ಹೇಳಿದ್ದರು. ನನ್ನ

ತಂಗಿಯ ಗಂಡ, ಶ್ರೀಪತಿಯೂ ಭಾರತದಿಂದ ಅಮೆರಿಕಕ್ಕೆ ಬಂದಿದ್ದು, ನಮ್ಮಲ್ಲೂ ಸ್ವಲ್ಪ ದಿನವಿದ್ದರು. ಈ ಎಲ್ಲ ಭೇಟಿಗಳು ನನ್ನವಳಿಗೆ ತುಂಬ ಹರ್ಷ ಮತ್ತು ನೆಮ್ಮದಿ ನೀಡಿದ್ದವು.

ಡಾಕ್ಟರರು ಹೇಳಿದಂತೆ, ಕಿಮೋ ಶುರುಮಾಡಿದ 1–2 ತಿಂಗಳಲ್ಲೇ ನನ್ನಾಕೆಯ ತಲೆ ಕೂದಲು ಉದುರಲು ಪ್ರಾರಂಭವಾಯ್ತು. ಮೊಣಕಾಲಿನವರೆಗೆ, ಉದ್ದಕ್ಕೂ, ದಪ್ಪವಾಗಿಯೂ ಬೆಳೆದಿದ್ದ ಕೂದಲಿನ ಜಡೆಯು ಮೋಟುದ್ದವಾಗಲು ಪ್ರಾರಂಭವಾದಾಗ ನನಗೆ ವೇದನೆಯನ್ನುಂಟುಮಾಡಿತ್ತು. ಅದು ಅವಳಿಗೂ ಸಂಕಟ ತಂದಿತ್ತು. ಆದರೆ ಏನೂ ಮಾಡುವಂತಿಲ್ಲ. ಕ್ರಮೇಣ, ಕೂದಲು ಉದುರುವಿಕೆಯು ಜಾಸ್ತಿಯಾಗಿ, 'ವಿಗ್' ಹಾಕಿಕೊಳ್ಳುವ ಪ್ರಸಂಗ ಬಂದು, ಅದಕ್ಕಾಗಿ, ಒಂದು ವಿಗ್ ಖರೀದಿ ಮಾಡಬೇಕಾಯ್ತು. ಅದನ್ನು ಧರಿಸುವಾಗ, ನನ್ನವಳು ತುಂಬ ನಾಚುತ್ತಿದ್ದಳು. ಆದರೂ ಕೂದಲಿಲ್ಲದ ಆ ತಲೆಗೆ ಆ ವಿಗ್ ಇದ್ದುದರಲ್ಲೇ ಲಕ್ಷಣದ ತೋರಿಕೆ ಕೊಟ್ಟಿತ್ತು. ಮುಂದೆ ಕೂದಲು ಬಂದರೂ, ಮೊದಲಿನಂತೆ ದಟ್ಟ ಮತ್ತು ಉದ್ದ ಕೂದಲಾಗಿರಲಿಲ್ಲ. ನನ್ನ ಲಕ್ಷ್ಮಿ ತನ್ನ ಹಿಂದಿನ ಕೂದಲ ಸಿರಿಯನ್ನು ಮತ್ತೆ ಪಡೆಯಲೇ ಇಲ್ಲ.

ಈಗ ನನ್ನ ಅಧೀರತೆ ಮಾಯವಾಗಿದೆ. ನನ್ನ ಲಕ್ಷ್ಮಿ, ಕ್ಯಾನ್ಸರ್‌ನೊಡನೆ ನಡೆಸಿದ ಹೋರಾಟದಲ್ಲಿ ಸಂಪೂರ್ಣ ಜಯ ಗಳಿಸಿದ್ದಾಳೆ. ಕ್ಯಾನ್ಸರ್ ಸ್ಟ್ಯಾಟಿಸ್ಟಿಕ್ಸ್‌ನಿಂದ ಹೊರ ಬಂದು, ಅದಕ್ಕೊಂದು ಅರ್ಥಪೂರ್ಣ ಮಾದರಿಯಾಗಿದ್ದಾಳೆ. ಡಾ. ಫರ್ಗ್ಯೂಸನ್‌ರ ಶಸ್ತ್ರಚಿಕಿತ್ಸೆಯ ಚಮತ್ಕಾರಕ್ಕೆ ವಿಜಯ ತಂದುಕೊಟ್ಟಿದ್ದಾಳೆ. ಈ ಯಾತನೆಯ ಮೂಲಕವೇ ಅವಳಲ್ಲಿ ಮೂಡಿಬಂದ ಅವಳ ಅಪ್ರತಿಮ ದೃಢತೆಗಾಗಿ ನಾನು ಸದಾ ತಲೆದೂಗುತ್ತಿದ್ದೇನೆ. ಡಾ. ಫರ್ಗ್ಯೂಸನ್, ಡಾ. ಟೊಬ್ಯಾಕ್, ಪಾಪಚ್ಚಿ, ರಜನಿ, ನನ್ನ ತಮ್ಮ ಕೇಶವ, ನಳಿನಿ, ವಿಜಯ, ಲಕ್ಷ್ಮಿ ಸುಬ್ರಮಣ್ಯಮ್ ಮುಂತಾದ ಹಲವರ ಸಹಾನುಭೂತಿ, ಸಹಾಯ, ಸೌಹಾರ್ದತೆ, ನನ್ನ ಲಕ್ಷ್ಮಿಗೆ ಕ್ಯಾನ್ಸರ್‌ನೊಡನೆ ಹೋರಾಟ ನಡೆಸಲು ಬಲವನ್ನು ಒದಗಿಸಿಕೊಟ್ಟಿತ್ತು. ಅನುರಾಧ–ಅರವಿಂದರೆಂಬ 'ರತ್ನ'ದಂಥ ಎರಡು ಮಕ್ಕಳ ಪ್ರೀತಿ ಆ ಬಲಕ್ಕೆ ಅಪಾರ ಪೋಷಣೆಯನ್ನು ನೀಡಿತ್ತು. ಪರಿಣಾಮವಾಗಿ, ಲಕ್ಷ್ಮಿಗೆ, ಬದುಕನ್ನು ವಿಶೇಷ ದೃಷ್ಟಿಯಿಂದ ನೋಡುವ ಮನೋಧರ್ಮವನ್ನು ಕಲ್ಪಿಸಿಕೊಟ್ಟಿದೆ. ಬದುಕು ನಿರರ್ಥಕವಲ್ಲ, ಅದರಲ್ಲಿ ಸೊಗಸಿದೆ; ಬಾಳಿನಲ್ಲಿ ಕರ್ತವ್ಯ ಸಾಧನೆಯಿಂದ ತೃಪ್ತಿ ಪಡೆಯಬಹುದು ಎಂಬುದರಲ್ಲಿ ದೃಢ ನಂಬಿಕೆಯನ್ನು ಹುಟ್ಟಿಸಿದೆ. ಈ ದೃಢತೆ ಹುಟ್ಟುವಂತೆ ಸಹಾಯ ಮಾಡಿದ ಅನೇಕ ಗೆಳೆಯ ಬಂಧುಗಳಿಗೆ ನಾವು ಚಿರಋಣಿಗಳಾಗಿದ್ದೇವೆ. ಈ ಸಂದರ್ಭದಲ್ಲಿ, ನಮ್ಮ ಮೇಲೆ ಕರುಣೆಯಿಟ್ಟ ಆ ಮಹಾ ಶಕ್ತಿಯನ್ನು ಸದಾ ನೆನೆಯುತ್ತಿರುತ್ತೇವೆ.

ಇತ್ತೀಚೆಗೆ, ಸರ್ಜರಿಯ ಸಮಯ ತಾನು ಅನುಭವಿಸಿದ ಯಾತನೆಯನ್ನು ನೆನೆದುಕೊಳ್ಳುತ್ತ ನನ್ನ ಲಕ್ಷ್ಮಿ ಹೇಳಿದ ಮಾತು ನೆನಪಾಗುತ್ತಿದೆ. ನನ್ನ ಸರ್ಜರಿ ಸಮಯ, ರೇಡಿಯೋದಲ್ಲಿ 'One day at a time...' ಎಂಬ ಹಾಡು ಯಾವಾಗಲೂ ಬರುತ್ತಿದ್ದು,

ಅದು ನನ್ನ ಮನಸ್ಸಿಗೆ ಎಲ್ಲಿಲ್ಲದ ಪರಿಹಾರ ನೀಡುತ್ತಿತ್ತು. ಧೈರ್ಯಕ್ಕೆ ಧಕ್ಕೆ ಬಂದಾಗ, meditation ಮನಸ್ಸಿಗೆ ಸಮಾಧಾನ ನೀಡುವುದರಲ್ಲಿ ಒಂದು ಉಪಯುಕ್ತ ಸಾಧನವೆಂದು ನಾನು ನಂಬಿರುತ್ತೇನೆ. ಅದೊಂದು self counselling ಇದ್ದ ಹಾಗೆ! ಈ meditation ಮತ್ತು `One day at a time...' ಹಾಡು ನೀಡಿದ ಸಮಾಧಾನವೇ ಮುಂದೆ ನನಗೆ ಕ್ಯಾನ್ಸರ್‌ನ್ನು ಧೈರ್ಯದಿಂದ ಎದುರಿಸುವ ತ್ರಾಣ ನೀಡಿತ್ತು! ಆ ಹಾಡನ್ನು ನೆನೆಸಿದಾಗಲೆಲ್ಲ ನನ್ನಲ್ಲಿ ಧೈರ್ಯ ತುಂಬುತ್ತದೆ. ಜೊತೆಗೆ, ಆಸ್ಪತ್ರೆಯಲ್ಲಿ ಧೈರ್ಯ ನೀಡಿದ ಆ ಮಹಿಳೆಯ ಮಾತುಗಳೂ ಸದಾ ನೆನಪಿಗೆ ಬರುತ್ತಲೇ ಇವೆ...' ಎಂದು ಹೇಳಿದ್ದಳು. ಬಂದೊದಗಿದ ಕಷ್ಟ ಕಾಲದಲ್ಲಿ ಅವಳು ಅನುಸರಿಸಿದ ನಿಲುವಿಗೆ, ಇದು ಅರ್ಥಪೂರ್ಣ ಸಫಲತೆ ನೀಡಿದೆಯೆಂದು ನನ್ನ ಅಭಿಪ್ರಾಯ!

ಹಿಂದೆ, ಎಡ್ವರ್ಡ್ ಕೆನೆಡಿ, ಅಮೆರಿಕದ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ, ಅದಕ್ಕೆ ನಾಮಿನೇಷನ್ ಪಡೆಯಲು ಅಸಮರ್ಥನಾಗಿ, ಸೋಲನ್ನೊಪ್ಪಿಕೊಂಡಾಗ ಹೇಳಿದ, '...the cause endures, the hope still lives, and the dream shall never die.' ಎಂಬ ಮಾತು ಇಲ್ಲಿ ನೆನಪಿಗೆ ಬರುತ್ತಿದೆ. ಭರವಸೆಯನ್ನು ಕಳೆದುಕೊಳ್ಳದೆ ಶುಭವಾಗುವ ಕನಸುಗಳನ್ನು ನನಸು ಮಾಡುವುದರ ಮೂಲಕ ಜೀವನದ ಗುರಿ ಸಾಧಿಸಬಹುದು. ನನ್ನ ಪಾಲಿಗಂತೂ, ಅಂದಿನ ಕಹಿ ಅನುಭವಗಳ ಮಧ್ಯೆ ಪಡೆದ ದೃಢತೆಯೇ ಇಂದು ಜೀವನದ ಅತಿ ಸಿಹಿ ಸಂದರ್ಭಗಳನ್ನು ಸಂತೋಷದಿಂದ ಅನುಭವಿಸಲು ದಾರಿ ಮಾಡಿಕೊಟ್ಟಿದೆ. ಹೌದು, When the going gets tough, the tough get going. ಇದು ನಮಗೆ, ಅರ್ಬುದ ಕಲಿಸಿ ಕೊಟ್ಟ ಅಮೃತದಂಥ ಪಾಠ! ಅನುಕಂಪ, ಸ್ಥೈರ್ಯ ಎಂಬಿತ್ಯಾದಿ ಶಬ್ದಗಳಿಗೆ ಅರ್ಥಕಲ್ಪಿಸಿ, ನನಗೂ ಬಾಳನ್ನು 'ಭರವಸೆ' ಎಂಬ ದೃಷ್ಟಿಯಲ್ಲಿ ನೋಡುವಂತಹ ವಿವೇಕ, ಸ್ವಲ್ಪವಾದರೂ ಮೂಡುವುದಕ್ಕೆ ಎಡೆಮಾಡಿಕೊಟ್ಟಿದೆ. ನನ್ನ ಅನೇಕ ಸ್ನೇಹಿತರು ನಾನು ಪಟ್ಟ ಸಂಕಟಗಳಿಗಾಗಿ ಸಹಾನುಭೂತಿ ತೋರಿಸುವುದರ ಜೊತೆಗೇ, ನಾನು ಅವುಗಳನ್ನು ಎದುರಿಸಿದ 'ಧೈರ್ಯ'ದ ನಿಲುವನ್ನೂ ಮೆಚ್ಚಿ ಮಾತಾಡಿದ್ದಾರೆ. ಇದೊಂದು ಹೊಗಳಿಕೆ ಮಾತೆಂದು ತಿಳಿಯದೆ, ನನ್ನಲ್ಲಿ ಮೂಡಿದ್ದ ಸ್ಥೈರ್ಯಕ್ಕೊಂದು ರುಜುವಾತು –ಎಂದು ನಂಬಿರುತ್ತೇನೆ. ಹೀಗೆ ಹೇಳುವಾಗ, ನಾನು ಲಕ್ಷ್ಮಿಯಿಂದಲೇ ಆ ಅನುಭವ ಪಡೆದೆನೆಂದು ಒಪ್ಪಿಕೊಳ್ಳುತ್ತಿದ್ದೇನೆ.

ಹೇಮಂತದಲ್ಲಿ ವಸಂತಗಾನ



– ನಳಿನಿ ಮೈಯ

'ನೀನು ದೇವರೇ ನಿರ್ಮಿಸಿದ ಒಂದು ಸಂಗೀತವಾದ್ಯ, ಮಗು. ಈ ವಾದ್ಯವನ್ನು ಅದರ ಪೆಟ್ಟಿಗೆಯಲ್ಲೇ ಕೊಳೆಯಬಿಡಬೇಡ. ನುಡಿಸು! ಬಿಡದೆ ಅದರ ಒಂದೊಂದು ಮೂಲೆಯಿಂದಲೂ ನಾದ ಹೊಮ್ಮಿಸು. ಬಾಕ್‌ನಂತೆ 'ಗ್ಲೋರಿಯ' ನುಡಿಸಲು ಶಕ್ತನಿರುವಾಗ 'ತ್ರೀ ಬ್ಲೈಂಡ್ ಮೈಸ್'ನಂತಹ ಶಿಶು ಗೀತೆಗೇ ತೃಪ್ತನಾಗದಿರು.' *(You are an instrument of God. Don't leave the instrument sitting in its case, my son. Play! Leave no part of the instrument unexplored. Why settle for `Three Blind Mice' when you can play `Gloria'?)* (ಡಾ. ಅಬ್ರಹಾಮ್ ವರ್ಗಿಸ್ ಬರೆದ 'ಕಟಿಂಗ್ ಫ಼ರ್ ಸ್ಟೋನ್' ಎಂಬ ಕಾದಂಬರಿಯಿಂದ ಆಯ್ದುಕೊಂಡಿದ್ದು.)

ಈ ಮಾತು ಬಹುಶಃ ನನ್ನಲ್ಲಿ ಅಂದು ಹುದುಗಿದ್ದ ಒಂದು ಬಗೆಯ ಚಡಪಡಿಕೆಯನ್ನು ಸರಿಯಾಗಿ ಗುರುತಿಸುತ್ತದೆ. ಮಕ್ಕಳು ಬೆಳೆದು ಅವರವರ ಪಾಡಿಗೆ ಸ್ಕೂಲು ಕಾಲೇಜುಗಳಲ್ಲಿ ಓದುತ್ತಿದ್ದರು. ನನಗೆ ಆಗ ಸುಮಾರು ನಲವತ್ತನಾಲ್ಕು ವರ್ಷ. ಇಷ್ಟೇನಾ ಜೀವನ? ಈಗ ದಿನದಿನದ ಮನೆಗೆಲಸಗಳನ್ನು ಮಾಡಿದ ಮೇಲೂ, ಸ್ವಲ್ಪ ಮಟ್ಟಿಗೆ ಹವ್ಯಾಸಿ ಓದು, ಸಂಗೀತದಲ್ಲಿ ಕಾಲ ಕಳೆದ ಮೇಲೂ 'ಸಮಯ' ಎಂಬುದು ಧಂಡಿಯಾಗಿ ನನ್ನೆದುರು ಬಿದ್ದುಕೊಂಡು ಅಣಕಿಸುತ್ತಿತ್ತು. ಇಷ್ಟು ಕಡಿದು ಹಾಕಿದ್ದು ಸಾಕೆ? ಇನ್ನೇನಾದರೂ ಮಾಡಲು ಸಾಧ್ಯವಿಲ್ಲವೆ ನಿನ್ನಿಂದ ಅಂತ ಹೇಳುತ್ತಿತ್ತು.

ಈ ಅವಕಾಶಗಳ ನಾಡಾದ ಅಮೆರಿಕಾದಲ್ಲಿ ಏನೆಲ್ಲಾ ಮಾಡಬಹುದು! ನನಗೆ ದೇವರು ಏನೋ ಒಂದಿಷ್ಟು ಬುದ್ಧಿಶಕ್ತಿ ಅಂತ ಕೊಟ್ಟಿದ್ದಾನೆ. ಯಾವ ವಯಸ್ಸಿನಲ್ಲಿ ಬೇಕಾದರೂ ಕಾಲೇಜಿಗೆ ಹೋಗಿ ಓದು ಮುಂದುವರಿಸಬಹುದು ಅನ್ನುವ ಅಡ್ವೆಂಚರ್ ಲ್ಯಾಂಡ್ ಅಮೆರಿಕಾ ನನ್ನೆದುರು ಆಸೆಗಳನ್ನು ಎತ್ತಿ ಹಿಡಿದು ಕ್ಯಾಚ್ ಮಾಡು ಅಂತ ಹೇಳುತ್ತಾ ಇದೆ. ನಾನು ಓದಿನಲ್ಲಿ ಮನೆಗೆಲಸವನ್ನು ಕಡೆಗಣಿಸಿದರೂ ಏನೂ ಗಲಾಟೆ ಮಾಡದೆ ತಾವೇ ಅಡುಗೆ ಮಾಡಿಕೊಂಡು, ಪಾತ್ರೆ ತೊಳೆಯುವಂತಹ ಗಂಡನನ್ನು ಪಡೆದಾಯಿತು. ಇಷ್ಟೆಲ್ಲಾ ಇದ್ದೂ ನಾನು ಯಾವ ಸವಲತ್ತುಗಳನ್ನೂ ಉಪಯೋಗಿಸದೆ ಹಾಗೇ ಜೀವನ ತಳ್ಳಬಹುದೆ? ಏನಾದರೂ ಮಾಡಬೇಕು! ಏನಾದರೂ ಮಾಡಬೇಕು! ಆದರೆ ಏನು? ಈ ವಯಸ್ಸಿನಲ್ಲಿ ಕಾಲೇಜಿಗೆ ಹೋದರೆ ಏನೋ ಒಂದು ಡಿಗ್ರಿ ಪಡೆಯಲು

ಕನಿಷ್ಠ ಪಕ್ಷ ಎರಡು–ಮೂರು ವರ್ಷ ಬೇಕು. ಆಗ ನನಗೆ ನಲವತ್ತೇಳು ವರ್ಷ ಆಗಿಬಿಡುತ್ತಲ್ವಾ? ಹಾಗಂತ ಒಮ್ಮೆ ನಾನು ಗೆಳತಿ ಲಕ್ಷ್ಮಿ ಐತಾಳರ ಬಳಿ ಹೇಳಿಕೊಂಡೆ. ಅವರು ಕೊಟ್ಟ ಉತ್ತರ ಮಾರ್ಮಿಕವಾಗಿತ್ತು.

'ನಿಜ ನಳಿನಿ. ನೀವು ಒಂದು ವೇಳೆ ಕಾಲೇಜಿಗೆ ಹೋದರೂ ಓದು ಮುಗಿಯುವ ಹೊತ್ತಿಗೆ ನಿಮಗೆ ನಲವತ್ತೇಳು ವರ್ಷ ಆಗಿಬಿಡುತ್ತೆ. ಆದರೆ ಕಾಲೇಜಿಗೆ ಹೋಗದೆ ಇದ್ರೆ ಇನ್ನು ಮೂರು ವರ್ಷಕ್ಕೆ ನಿಮಗೆ ಎಷ್ಟು ವರ್ಷ ಆಗಿರುತ್ತೆ?'

ನನ್ನ ಕಣ್ಣು ತೆರೆಯಿತು! ಹೌದಲ್ವಾ? ನಾನು ಓದಿದರೂ ಓದದಿದ್ದರೂ ಸಮಯವಂತೂ ಕಳೆದೇ ಕಳೆಯುತ್ತೆ. ಆದರೆ ಹೇಗೆ ಕಳೆಯುತ್ತೆ ಅನ್ನೋದು ಮಾತ್ರ ನಮ್ಮ ಕೈಯಲ್ಲಿದೆ ಅನ್ನಿಸಿತು.

'ಬಾಕ್‌ನ ಗ್ಲೋರಿಯ ಅಲ್ಲ. ನಿನ್ನ ಗ್ಲೋರಿಯ. ನಿನ್ನ ಗ್ಲೋರಿಯ ನಿನ್ನೊಳಗೆ ಇದೆ. ಅದೇನೆಂದು ಕಂಡುಕೊಳ್ಳದಿರುವುದು ನಿಜವಾಗಿಯೂ ಪಾಪವಾಗುತ್ತದೆ. ದೇವರು ನಿನಗೆ ಕೊಟ್ಟ ಪ್ರತಿಭೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿರುವುದೂ ಪಾಪವೇ.' (Not Bach's Gloria. Yours! Your Gloria lives within you. The greatest sin is not finding it, ignoring what God made possible in you.)

ಮನೆಗೆ ಹತ್ತಿರದಲ್ಲಿರುವ ಕಮ್ಯುನಿಟಿ ಕಾಲೇಜು ವರ್ಷಕ್ಕೆ ಮೂರು ಬಾರಿ ಪೋಸ್ಟಿನಲ್ಲಿ ಕ್ಯಾಟಲಾಗ್ ಕಳಿಸುತ್ತಿತ್ತು. ಅದರಲ್ಲಿ ಆ ಕಾಲೇಜಿನಲ್ಲಿ ಯಾವ ಯಾವ ಸಬ್ಜೆಕ್ಟುಗಳು ಇವೆ, ಅವನ್ನು ಓದಲು ಎಷ್ಟು ಫೀಸು ಮುಂತಾದ ವಿವರಣೆಗಳು ಇರುತ್ತಿದ್ದವು. ಅದನ್ನು ಹರಡಿಕೊಂಡು ಕುಳಿತೆ. ಯಾವ ಕೋರ್ಸು ತಗೋಬೇಕು! ಕಂಪ್ಯೂಟರ್ ಎದುರು ಕುಳಿತು ಇಡೀ ದಿನ ಕೆಲಸ ಮಾಡುವ ಜಾಯಮಾನ ನನ್ನದಲ್ಲ. ಅವರಿವರ ಹತ್ತಿರ ಮಾತಾಡುತ್ತಾ ಓಡಾಡಿಕೊಂಡು ಮಾಡುವ ಕೆಲಸವಾದರೆ ಚೆನ್ನ. ಅಕೌಂಟಿಂಗ್ ತರಹ ನಂಬರುಗಳ ಜೊತೆ ಗುದ್ದಾಡುವ ಕೆಲಸವಂತೂ ಬೇಡವೇ ಬೇಡ. ನೋಡುತ್ತಿರಬೇಕಾದರೆ 'ರೆಸ್ಪಿರೇಟರಿ ಥೆರಪಿಸ್ಟ್' ಕೋರ್ಸು ಓದಿ ಪಾಸು ಮಾಡೋಕೆ ಒಂದೇ ವರ್ಷ ಸಾಕು ಅನ್ನೋ ಮಾಹಿತಿ ಕಂಡಿತು. ನನಗೆ ಹೆಲ್ತ್ ಕೇರ್ ಫೀಲ್ಡು ತುಂಬ ಇಷ್ಟ ಅನ್ನಿಸಿತು. ಜೀವನದಲ್ಲಿ ತುಂಬ ಅಸಹಾಯಕರಾಗುವ ಕ್ಷಣಗಳು ಅಂದರೆ ನಮಗೆ ಅಥವಾ ನಮ್ಮವರಿಗೆ ಖಾಯಿಲೆ ಬಂದಾಗ. ಅಂಥವರಿಗೆ ಸಾಂತ್ವನ ನೀಡುತ್ತಾ ಧೈರ್ಯ ತುಂಬುತ್ತಾ ಮಾಡುವ ಎಂಥ ಕೆಲಸವಾದರೂ ಚೆನ್ನಾಗಿರುತ್ತೆ! ಹಾಗಂತ ನಮ್ಮ ಮನೆಯವರ ಹತ್ತಿರ ಹೇಳಿಕೊಂಡೆ. ಅವರು ರೆಸ್ಪಿರೇಟರಿ ಥೆರಪಿಸ್ಟ್ ಅಂತ ಕೇಳಿದ ತಕ್ಷಣ ತಮ್ಮ ಗೆಳೆಯ ಶೇಖರ್ ಅವರಿಗೆ ಫೋನ್ ಮಾಡಿದರು. ಶೇಖರ್ ಒಬ್ಬ ಡಾಕ್ಟರ್.

'ಶೇಖರ್, ನಳಿನಿ ಅದೇನೋ ರೆಸ್ಪಿರೇಟರಿ ಥೆರಪಿಸ್ಟ್ ಆಗ್ಬೇಕು ಅಂತ ಯೋಚಿಸುತ್ತಾ ಇದ್ದಾಳೆ. ನಿನಗೇನನ್ನಿಸುತ್ತೆ?' ಅಂದರು.

ಆ ಮಹಾರಾಯ, 'ಅಯ್ಯೋ, ಬೇಡಪ್ಪಾ ಅದು. ದಿನ ಬೆಳಗಾದರೆ ಎಂತೆಂತಹ ರೋಗಿಗಳ ಕಫ ಕೂತಿರುವ ಗಂಟಲಲ್ಲಿ ಟ್ಯೂಬ್ ಇಳಿಸಿ ಸಕ್ಷನ್ ಮಾಡಬೇಕು. ಆಗ ಅವರು ಮುಖದ ಮೇಲೆ ಕೆಮ್ಮುತ್ತಾರೆ. ಹೀಗಾಗಿ ಖಾಯಿಲೆಗಳಿಗೆ ನಾವೇ ಆಮಂತ್ರಣ ಕೊಟ್ಟು ಕರೆಸಿಕೊಂಡ ಹಾಗಾಗುತ್ತೆ.' ಅಂದುಬಿಟ್ಟರು. ನಮ್ಮವರ ತಲೆಯಲ್ಲಿ ನಾನು ಯಾವುದೊ ದೊಡ್ಡ ಖಾಯಿಲೆಗೆ ತುತ್ತಾದಂತೆ, ಅದು ಮನೆಮಂದಿಗೆಲ್ಲ ಹಬ್ಬಿದಂತೆ, ವಂಶಕ್ಕೆ ವಂಶವೇ ನಿರ್ನಾಮವಾದಂತೆ ಕಲ್ಪನೆಯ ಚಿತ್ರಗಳು ಕುಣಿಯಲು ಶುರುವಾಯಿತು. 'ಆ ಕೋರ್ಸು ಖಂಡಿತ ಬೇಡ' ಅಂತ ಗಿಳಿಗೆ ಹೇಳಿದ ಹಾಗೆ ಹೇಳಿದರು.

ಅದನ್ನು ಕೈ ಬಿಟ್ಟು ಎಕ್ಸ್-ರೇ ಟೆಕ್ನಿಶಿಯನ್ ಆಗುವ ಯೋಚನೆ ಹಮ್ಮಿಕೊಂಡೆ. ಅದರಲ್ಲಿ ಕ್ಯಾನ್ಸರ್ ಬರುವ ಸಂಭವ ಜಾಸ್ತಿ ಅಂತ ನಮ್ಮವರು ಅದನ್ನೂ ವಿಟೊ ಮಾಡಿದರು. ಅವರು ಹೇಳಿದ್ದನ್ನೆಲ್ಲ ನಾನು ಕೇಳೇ ಕೇಳ್ತೀನಿ ಅಂತ ಏನೂ ಇಲ್ಲ. ಆದರೆ ಈಗ ನನಗೂ ಮುಂದೆ ಏನು ಮಾಡಬೇಕು ಅಂತ ಮನಸ್ಸಿನಲ್ಲಿ ಧೃಡವಾದ ನಿರ್ಧಾರ ಇಲ್ಲದ್ದರಿಂದ ಯಾರು ಏನೇ ಹೇಳಿದರೂ 'ಹೌದು' ಅನ್ನಿಸುತ್ತಿತ್ತು.

ಕೊನೆಗೆ 'ಆಕ್ಯುಪೇಶನಲ್ ಥೆರಪಿ' ಕಣ್ಣಿಗೆ ಬಿತ್ತು. ಹೆಚ್ಚೆಂದರೆ ಎರಡು ಅಥವಾ ಮೂರು ವರ್ಷ ತಗುಲೀತು ಕಲಿತು ಮುಗಿಯುವುದಕ್ಕೆ. ಅದಕ್ಕೂ ಶೇಖರ್ ಅವರ ಒಪ್ಪಿಗೆಯ ಮುದ್ರೆ ಬಿದ್ದ ನಂತರವೇ 'ಅದೇ ಸರಿ' ಅಂತ ಮುಂದುವರಿದಿದ್ದು. ಅಂತೂ ಇಂತೂ ಮದುವೆಯಾಗಿ, ಮಕ್ಕಳಾಗಿ ಇನ್ನೇನು ಋಷಿಪಂಚಮಿ ಉದ್ಯಾಪನೆ ಆಗಬೇಕು ಅಂತ ಇರುವಾಗ ಮತ್ತೆ ಕಾಲೇಜಿಗೆ ಮಣ್ಣು ಹೊರಲು ಶುರು ಮಾಡಿದ್ದಾಯಿತು.

'ಬೆಟರ್ ಲೇಟ್ ದೆನ್ ನೆವರ್'

ಇಂಗ್ಲಿಷಿನಲ್ಲಿ ಹೇಳ್ತಾರಲ್ಲ, ಹಾಗೇ- ಏನೋ ಒಂದು ಇಪ್ಪತ್ತು-ಇಪ್ಪತ್ತೈದು ವರ್ಷ ತಡವಾದರೇನಂತೆ, ಕಡೆಗಾದರೂ ನಾನು ಕಾಲೇಜಿಗೆ ಹೋಗಿ ಏನೋ ಕಡಿದು ಗುಡ್ಡೆ ಹಾಕುತ್ತೀನಲ್ಲ! ಅಂತ ನನಗೆ ಅನ್ನಿಸುತ್ತಿತ್ತು. ಕಾಲೇಜಿನಲ್ಲಿ ನೋಡಿದರೆ ಅರ್ಧಕ್ಕರ್ಧ ಜನ ನನ್ನಂಥವರೇ ಇದ್ದರು! ಅಂದರೆ ಈಗ ತಾನೆ ಹೈಸ್ಕೂಲು ದಾಟಿ ಬಂದವರು ಎಷ್ಟು ಜನ ಇದ್ದರೋ ಅಷ್ಟೇ ಜನ ನನ್ನ ಹಾಗೆ ಬಾಳಿ ಬದುಕಿ ಜೀವನ ಅಂದರೆ ಏನು ಅಂತ ಕಂಡವರೂ ಇದ್ದರು. ನನಗೆ ಇದ್ದ ಅಲ್ಪಸ್ವಲ್ಪ ಅಳುಕೂ ಅದನ್ನು ನೋಡಿ ಮಾಯವಾಯಿತು.

ಬೇರು ಸೂರು

'ಆಕ್ಯುಪೇಶನಲ್ ಥೆರಪಿ' ಅಂದರೆ ಏನು ಅಂತ ತುಂಬ ಜನ ಕೇಳ್ತಾರೆ. ಅದು ಏನು ಅಂತ ವಿವರಿಸುವುದೇ ಕಷ್ಟ. ಮುಖ್ಯವಾಗಿ ಆಕ್ಯುಪೇಶನಲ್ ಥೆರಪಿಯ ಬುನಾದಿ ಏನಂದರೆ 'ಒಬ್ಬ ಮನುಷ್ಯ ಎಷ್ಟರ ಮಟ್ಟಿಗೆ ತನ್ನ ಕೆಲಸ ತಾನು ಮಾಡಿಕೊಂಡು, ಹೊರಗೆ ಉದ್ಯೋಗದಲ್ಲಿದ್ದುಕೊಂಡು, ತಕ್ಕಮಟ್ಟಿಗೆ ಮನರಂಜನೆಯಲ್ಲೂ ಭಾಗವಹಿಸುತ್ತಾನೋ ಅಷ್ಟರಮಟ್ಟಿಗೆ ಅವನು ಆರೋಗ್ಯವಾಗಿ ಸಂತೋಷವಾಗಿ ಇರುತ್ತಾನೆ. ಈ ಕೆಲಸಗಳನ್ನು ಮಾಡುವುದಕ್ಕೆ ದೈಹಿಕವಾಗಿ, ಮಾನಸಿಕವಾಗಿ ಏನೇ ಅಡಚಣೆಗಳಿದ್ದರೂ ಆಕ್ಯುಪೇಶನಲ್ ಥೆರಪಿ ಅವನ್ನು ನಿವಾರಿಸುವುದಕ್ಕೆ ಪ್ರಯತ್ನಿಸುತ್ತದೆ. ಯಾಕೆಂದರೆ ಒಬ್ಬ ಮನುಷ್ಯ ಕ್ರಿಯಾಶೀಲನಾಗಿದ್ದಷ್ಟೂ ಅವನ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಿಸುತ್ತದೆ.'

ಹೀಗಾಗಿ ಆಕ್ಯುಪೇಶನಲ್ ಥೆರಪಿಸ್ಟ್ ಮನುಷ್ಯನ ದೈಹಿಕ, ಮಾನಸಿಕ, ಸಾಮಾಜಿಕ, ಸಾಂಸಾರಿಕ ವಲಯಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಕೆಲಸ ನಿರ್ವಹಿಸಬೇಕಾಗುತ್ತದೆ. ದೈಹಿಕವಾಗಿ ನಿಶ್ಶಕ್ತರಾದವರಿಗೆ ವ್ಯಾಯಾಮ, ಬ್ಯಾಲೆನ್ಸ್ ಇಲ್ಲದವರಿಗೆ ಅದನ್ನು ಸುಧಾರಿಸುವುದರಿಂದ ಹಿಡಿದು ಸಾಕ್ಸ್ ಹಾಕಿಕೊಳ್ಳಲು ಬಗ್ಗುವುದಕ್ಕೆ ಸಾಧ್ಯವಾಗದವರಿಗೆ ಬಗ್ಗದೆಯೆ ಸಾಕ್ಸ್ ಹಾಕಿಕೊಳ್ಳುವ ಸಲಕರಣೆ ನೀಡುವವರೆಗೆ, ಮಾನಸಿಕವಾಗಿ ಬಳಲಿದವರಿಗೆ ಮತ್ತೆ ಅಂಗಡಿಗೆ ಹೋಗಿ ವ್ಯಾಪಾರ ಮಾಡಲು ಉತ್ತೇಜನ, ಮಾರ್ಗದರ್ಶನ ನೀಡುವವರೆಗೆ ಆಕ್ಯುಪೇಶನಲ್ ಥೆರಪಿಯ ವ್ಯಾಪ್ತಿ, ಹರಹು ಇರುತ್ತದೆ.

ತರಗತಿಗಳು ಶುರುವಾದ ಮೇಲೆ ಈ ಆಕ್ಯುಪೇಶನಲ್ ಥೆರಪಿ ಅಂದರೆ ಏನು ಅಂತ ನನಗೆ ಅರ್ಥವಾಗಲು ಸ್ವಲ್ಪ ಕಾಲ ಹಿಡಿಯಿತಾದರೂ ಅದರ ಸಂಪೂರ್ಣ ವ್ಯಾಪ್ತಿ ನನ್ನ ತಿಳಿವಿಗೆ ಬಂದಾಗ ತುಂಬ ಇಷ್ಟವಾಯಿತು. ಆದರೂ ಮನೆ ಮಕ್ಕಳು ಕಾಲೇಜು ತೂಗಿಸಿಕೊಂಡು ಹೋಗುವುದು ಕಷ್ಟವೇ ಆಯಿತು. ದಿನದ ಒಂದೊಂದು ನಿಮಿಷವೂ ಅಷ್ಟೂ ಮುಖ್ಯ, ವೇಸ್ಟ್ ಮಾಡುವುದಕ್ಕೆ ಒಂದೇ ಒಂದು ಕ್ಷಣವೂ ನನ್ನ ಹತ್ತಿರ ಇಲ್ಲ ಅನ್ನಿಸಿಬಿಡುತ್ತಿತ್ತು.

ಅದೊಂದು ದಿನ ನಡೆದ ಘಟನೆ ನನಗೆ ಇನ್ನೂ ನೆನಪಿದೆ. ನನ್ನ ಮಗ ಮಧು ತನ್ನ ಕಷ್ಟ ಸುಖ ಏನಿದ್ದರೂ ನನ್ನ ಹತ್ತಿರ ಮಾತ್ರ ತೋಡಿಕೊಳ್ಳುವವನು. ಅಷ್ಟೇ ಅಲ್ಲವೆ? ಅಮ್ಮನನ್ನು ಬಿಟ್ಟರೆ ಇನ್ಯಾರಿಗೆ ತಾನೇ ಅಷ್ಟು ತಾಳ್ಮೆ, ಸಹನೆ, ಕಳಕಳಿ ಇರುತ್ತದೆ. ನನ್ನ ಹತ್ತಿರ ಹೇಳಿಕೊಂಡ ಮೇಲೆ ಅವನಿಗೆ ಏನೋ ಮನಸ್ಸು ಹಗುರಾಗುತ್ತಿತ್ತು. ಒಂದು ದಿನ ರಾತ್ರಿ ಸುಮಾರು ಎಂಟು ಗಂಟೆ ಸಮಯಕ್ಕೆ ಬಂದ– 'ಅಮ್ಮ ನಿನ್ನ ಹತ್ತಿರ ಏನೋ ಮಾತಾಡಬೇಕಿತ್ತು' ಅಂದ. ಅವನ ದನಿಯಲ್ಲೇ ಗೊತ್ತಾಯಿತು, ಇದು ಸುಲಭದಲ್ಲಿ ಮುಗಿಯುವ ಕಥೆ ಅಲ್ಲ ಅಂತ. ಮರು ದಿನ ಒಪ್ಪಿಸಲೇಬೇಕಾಗಿದ್ದ ಟರ್ಮ್ ಪೇಪರ್ ಟೈಪ್ ಮಾಡುತ್ತಿದ್ದೆ ನಾನು. ಸಿಂಕ್ ತುಂಬ ತೊಳೆಯಬೇಕಾದ ಪಾತ್ರೆ ರಾಶಿ ಬಿದ್ದಿತ್ತು. 'ಪುಟ್ಟ, ರಾತ್ರಿ ಹತ್ತು ಗಂಟೆಗೆ ಖಂಡಿತಾ ಮಾತಾಡೋಣ' ಅಂದೆ. ಹೋಮ್ ವರ್ಕ್ ಮುಗಿದು ಪಾತ್ರೆ ತೊಳೆದು ಆಗುವಾಗ ಹತ್ತೂವರೆ ಆಗಿತ್ತು. ಮತ್ತೆ ಬಂದ. ಮರುದಿನ

ಬೆಳಿಗ್ಗೆ ಎಂಟು ಗಂಟೆಗೆ ಸರಿಯಾಗಿ ಕ್ಲಾಸ್ ರೂಮಿನಲ್ಲಿರಬೇಕಾಗಿತ್ತು ನಾನು. ಅಷ್ಟರ ಒಳಗೆ ಬೆಳಗಿನ ನನ್ನ ಸ್ವಂತ ಕೆಲಸ ಮುಗಿಸಿ ಎಲ್ಲರಿಗೂ ಲಂಚ್ ಕಟ್ಟಿಕೊಡಬೇಕಾಗಿತ್ತು. ಅಲ್ಲದೆ ಕಾಲೇಜಿನವರೆಗೆ ಡ್ರೈವ್ ಮಾಡಬೇಕಾದರೆ ನಾನು ಏಳೂವರೆಗೆ ಮನೆ ಬಿಡಬೇಕಾಗಿತ್ತು. ಮಗನ ಮುಖ ನೋಡಿ ಹೇಳಿದೆ– 'ನಾನು ಬೇಗ ಮಲಗಿಕೊಳ್ಳಬೇಕು. ಒಂದು ಹತ್ತು ಹದಿನೈದು ನಿಮಿಷದಲ್ಲಿ ಮಾತನಾಡಿ ಮುಗಿಸೋಣ. ಆಯ್ತಾ?' ಹಾಗೆ ಹೇಳುವಾಗಲೇ ನನಗೆ ತುಂಬ ಸಂಕಟವಾಯಿತು. ಮಗನ ಕಷ್ಟ ಸುಖ ಕೇಳುವಷ್ಟು ವ್ಯವಧಾನ ಇಲ್ಲದ ಈ ಓದು ಯಾಕೆ ಬೇಕು? ಅನ್ನಿಸಿಬಿಟ್ಟಿತು. ಸಧ್ಯ, ಆ ದಿನ ಅವನ ಸಮಸ್ಯೆ ಅಂಥ ದೊಡ್ಡದೇನೂ ಆಗಿರಲಿಲ್ಲ. ಸುಲಭದಲ್ಲೇ ಅವನ ಮನಸ್ಸು ತಿಳಿಯಾಯಿತು!

ಇಂಥ ಸಮಯದಲ್ಲಿ ಯಾಕಾದರೂ ಈ ವಯಸ್ಸಿನಲ್ಲಿ ಓದು ಶುರು ಮಾಡಿಕೊಂಡೆನೋ ಅನ್ನಿಸುತ್ತಿತ್ತು. ಆದರೆ ಈಗ ಕೈ ಬಿಡುವ ಹಾಗಿಲ್ಲ! ನನ್ನ ಪರಿಚಯ, ಗೆಳೆತನ ಇರುವ ಎಲ್ಲರಿಗೂ ನಾನು ಮತ್ತೆ ಕಾಲೇಜಿಗೆ ಹೋಗುವ ವಿಷಯ ಟಾಂ ಟಾಂ ಮಾಡಿಯಾಗಿದೆ. ಈಗ ನಿಲ್ಲಿಸಿಬಿಟ್ಟರೆ ಮರ್ಯಾದೆ ಹೋಗುತ್ತೆ! ಹಾಗಂತ ಒಮ್ಮೆ ನನ್ನ ಗೆಳತಿ ಭವಾನಿ ಹತ್ತಿರ ಹೇಳಿಕೊಂಡೆ. ಅದಕ್ಕೆ ಆಕೆ, 'ಓ, ಹಾಗಾದ್ರೆ ಈಗ ನೀವು ಓದ್ತಾ ಇರೋದು ನಿಮಗಾಗಿ ಅಲ್ಲ, ನಮಗಾಗಿ!' ಅಂತ ನಕ್ಕುಬಿಟ್ಟಳು. ಮತ್ತೊಮ್ಮೆ ಕಣ್ಣು ತೆರೆಯಿತು.

ಕ್ಲಾಸ್ ರೂಮಿನ ಕಲಿಯುವಿಕೆ ಮುಗಿಯುವುದಕ್ಕೆ ಸುಮಾರು ಎರಡು ವರ್ಷಗಳೇ ಹಿಡಿದವು. ಈ ಅವಧಿಯಲ್ಲಿ ನನ್ನ ಸಹಪಾಠಿಗಳೆಲ್ಲ 'ನನ್ನ ಮಿತ್ರರು' ಎಂಬ ವರ್ಗಕ್ಕೆ ಗ್ರಾಜುಯೇಟ್ ಆದರು. ಅವರಲ್ಲಿ ಒಬ್ಬಳು ಮಾತ್ರ ಯಾರ ಜೊತೆಗೂ ಹೆಚ್ಚು ಬೆರೆಯುತ್ತಿರಲಿಲ್ಲ. ಒಬ್ಬಿಬ್ಬರ ಜೊತೆ ಮಾತ್ರ ಮಾತನಾಡುತ್ತಿದ್ದಳು. ಒಂದು ಸಾರಿ ಕ್ಲಾಸಿನಲ್ಲಿ ನಾವು ಒಬ್ಬೊಬ್ಬರಾಗಿ ನಿಂತು ಯಾವುದಾದರೂ ಥೆರಪಿಗೆ ಸಂಬಂಧ ಪಟ್ಟ ವಿಷಯದ ಮೇಲೆ ಪುಟ್ಟ ಉಪನ್ಯಾಸ ನೀಡಬೇಕಾಗಿತ್ತು. ಆಮೇಲೆ ಉಳಿದವರು ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸಬೇಕಾಗಿತ್ತು. ಆಗ ಈಕೆ ನನ್ನ ಬಗ್ಗೆ, 'ತುಂಬ ಚೆನ್ನಾಗಿ ಮಾತನಾಡುತ್ತಾರೆ. ಆದರೆ ಅವರು ಏನು ಹೇಳುತ್ತಾರೋ ಗೊತ್ತಾಗುವುದೇ ಕಷ್ಟ ಅವರ ಉಚ್ಚಾರಣೆಯಿಂದಾಗಿ.' ಅಂತ ಕೊಂಕು ನುಡಿ ಬರೆದಿದ್ದಳು. ಆ ಒಂದು ಅನುಭವ ಬಿಟ್ಟರೆ ನನ್ನ ಕಾಲೇಜು ದಿನಗಳು ಸಮಾಧಾನಕರವಾಗಿ ಕಳೆದವು ಅನ್ನಬಹುದು.

ಕೊನೆಯಲ್ಲಿ 'ಇಂಟರ್ನ್‌ಶಿಪ್' ಮಾಡಬೇಕು– ಅಂದರೆ ಬೇರೆ ಬೇರೆ ಸಂಸ್ಥೆಗಳಲ್ಲಿ ಆಕ್ಯುಪೇಶನಲ್ ಥೆರಪಿ ಮಾಡುತ್ತಿರುವ ಜಾಗಗಳಲ್ಲಿ ವಿದ್ಯಾರ್ಥಿಗಳು ಹೋಗಿ 'ಆನ್ ದಿ ಜಾಬ್' ಟ್ರೈನಿಂಗ್ ಪಡೆಯಬೇಕು. ಮೊಟ್ಟಮೊದಲು ನನ್ನನ್ನು ಒಂದು ಶಾಲೆಯಲ್ಲಿ ಹಾಕಿದರು. ಅಲ್ಲಿ ಆರೋಗ್ಯವಂತ ಮಕ್ಕಳ ಒಂದು ಶಾಲೆಯಲ್ಲಿ ಒಂದು ಚಿಕ್ಕ ಕೋಣೆಯಲ್ಲಿ ಕೈ ಕಾಲು ಮುರುಟಿ ಹೋದ ಸೆರೆಬ್ರಲ್ ಪಾಲ್ಸಿ, ಬರ್ತ್ ಡಿಫೆಕ್ಟ್

ಮುಂತಾದ ಸಮಸ್ಯೆಗಳಿರುವ ಮಕ್ಕಳ ಗುಂಪಿನ ನಡುವೆ ಅವಕ್ಕೆ ತಕ್ಕ ಹಾಗೆ ವಿದ್ಯಾಭ್ಯಾಸ ನಡೆಯುತ್ತಿತ್ತು.

ಜಾನ್ ಕೆನೆಡಿ ಅಮೆರಿಕಾದ ಅಧ್ಯಕ್ಷನಾಗಿದ್ದಾಗ, ಅಂದರೆ ಅರವತ್ತನೆಯ ದಶಕದಲ್ಲಿ, ಪ್ರತಿಯೊಂದು ಮಗುವಿಗೂ– ಅದರ ದೈಹಿಕ, ಮಾನಸಿಕ ಸ್ಥಿತಿಗತಿ ಹೇಗೇ ಇರಲಿ – ಕಡ್ಡಾಯವಾಗಿ ಅದಕ್ಕೆ ತಕ್ಕ ವಿದ್ಯಾಭ್ಯಾಸ ಕೊಡಲೇಬೇಕು ಅಂತ ಕಾಯಿದೆಯನ್ನು ಜಾರಿಗೊಳಿಸಿದ. ಹಾಗಾಗಿ ಅಂಗವೈಕಲ್ಯ ಮತ್ತು ಮನೋವೈಕಲ್ಯ ಇರುವ ಮಕ್ಕಳಿಗೆ ವಿಶೇಷ ತರಬೇತಿ ಅಮೆರಿಕಾದಲ್ಲಿ ಬಹಳ ಚೆನ್ನಾಗಿದೆ. ಈ ತರಗತಿಯಲ್ಲಿ ಒಬ್ಬಳು ಟೀಚರ್, ಅಸಿಸ್ಟೆಂಟ್ ಮತ್ತು ನನ್ನ ಮಾರ್ಗದರ್ಶಿ ಆಕ್ಯುಪೇಶನಲ್ ಥೆರಪಿಸ್ಟ್ ಇದ್ದರು. ಆ ಮಕ್ಕಳನ್ನು ನೋಡಿ ನನ್ನ ಮನಸ್ಸು ಬಾಡಿ ಹೋಯಿತು. ರೂಮಿನ ಹೊರಗೆ ಬೇರೆ ಮಕ್ಕಳು ಕುಣಿದು ಕುಪ್ಪಳಿಸಿ ಕೇಕೆ ಹಾಕುತ್ತಿವೆ! ಇಲ್ಲಿ ನೋಡಿದರೆ ಈ ಮಕ್ಕಳಿಗೆ ಕೈ ಎತ್ತಲು ಆಗುವುದಿಲ್ಲ, ಮಾತಾಡಲು ಬರುವುದಿಲ್ಲ ಕುಣಿಯುವುದು ಹೋಗಲಿ, ನಿಂತುಕೊಳ್ಳಲೂ ಆಗುತ್ತಿಲ್ಲ! ದೇವರೇ ಇದೆಂತಹ ಪಕ್ಷಪಾತ! ಯಾಕೆ ಹೀಗೆ ಮಾಡಿದೆ? ಅಂತ ಅನ್ನಿಸುತ್ತಿತ್ತು. ಇದು ಬಹುಶಃ ನನ್ನನ್ನು ಆಕ್ಯುಪೇಶನಲ್ ಥೆರಪಿಸ್ಟ್ ಆಗಿ ರೂಪಿಸಲು ವಿಧಿ ಕೊಟ್ಟ ಮೊದಲ ಉಳಿಯ ಪೆಟ್ಟು. ಮುಂದೆ ಇಂತಹ ದಾರುಣ ಚಿತ್ರಗಳು ಎಷ್ಟೋ ಬಂದವು ನನ್ನ ಕಣ್ಣೆದುರು. ನೋಡುತ್ತಾ ನೋಡುತ್ತಾ ಮನಸ್ಸು ಗಟ್ಟಿಯಾಗುತ್ತಾ ಹೋಯಿತು.

ಅಲ್ಲಿ ಒಬ್ಬಳು ಪುಟ್ಟ ಇಂಡಿಯನ್ ಹುಡುಗಿಯೂ ಇದ್ದಳು. 'ಆಶಾ' ಅಂತ ಅವಳ ಹೆಸರು. ವ್ಹೀಲ್ ಛೇರಿನಲ್ಲಿ ಕುಳಿತ ಅವಳನ್ನು ಕಂಡಾಗೆಲ್ಲ ನನಗೆ ಹೋಗಿ ಅಪ್ಪಿಕೊಳ್ಳಬೇಕು ಅನ್ನಿಸುತ್ತಿತ್ತು. ಅಲ್ಲಿ ಬೇರೆ ಮಕ್ಕಳು ಅಂಥವರು ಇದ್ದರೂ ಇವಳ ಮೇಲೆ ನನಗೆ ಅದೇನೋ ವಾಂಛಲ್ಯ. ಅವಳಿಗೆ ಹೆಚ್ಚು ಗಮನ ಕೊಡುತ್ತಿದ್ದೆ. ಇದನ್ನು ಗಮನಿಸಿದ ನನ್ನ ಮಾರ್ಗದರ್ಶಿ ಥೆರಪಿಸ್ಟ್ ಒಮ್ಮೆ 'ಹಾಗೆ ತಾರತಮ್ಯ ತೋರುವುದು ತಪ್ಪಾಗುತ್ತೆ. ಎಲ್ಲರನ್ನೂ ಒಂದೇ ಥರ ನೋಡಬೇಕು' ಅಂತ ಮೃದುವಾಗಿ ಹೇಳಿ ಎಚ್ಚರಿಸಿದರು. ಸರಿಯೇ ಅವರು ಹೇಳಿದ್ದು. ಒಪ್ಪಿಕೊಂಡೆ.

ನೋಡುತ್ತಲೇ ಅಲ್ಲಿ ಮೂರು ತಿಂಗಳು ಕಳೆದು ಹೋಯಿತು. ಆ ಅವಧಿಯಲ್ಲಿ ಮಕ್ಕಳಿಗೆ ತಮ್ಮ ವ್ಹೀಲ್ ಛೇರ್ ತಾವೇ ತಳ್ಳುವುದರ ಟ್ರೈನಿಂಗಿನಿಂದ ಹಿಡಿದು, ಮುಖ ಒರೆಸಿಕೊಳ್ಳಲು ಟವಲ್ ಹಿಡಿದುಕೊಳ್ಳಲು ಆಗದವರಿಗೆ ಕೈಗೆ ಒಂದು ಚೀಲದಂತಹ ಟವಲ್ ತೊಡಿಸಿ ತಾವೇ ಮುಖ ಒರೆಸಿಕೊಳ್ಳಲು ಉತ್ತೇಜನ ನೀಡುವವರೆಗೆ ಏನೇನೋ ತರಬೇತಿಗಳಲ್ಲಿ ಭಾಗವಹಿಸಿದೆ. ಮಕ್ಕಳಿಗೆ ನಾನೇ ಟವಲಿನ ಕೈಚೀಲಗಳನ್ನು ಹೊಲಿದು ತಂದುಕೊಟ್ಟೆ.

ಅಲ್ಲಿ ನನ್ನ ಕೊನೆಯ ದಿನ ಬಂದೇ ಬಂತು. ನನಗೆ ಆ ಮಕ್ಕಳನ್ನು ಬಿಟ್ಟುಹೋಗಲು ಏನೋ ಸಂಕಟವಾಗುತ್ತಿತ್ತು. ನಮ್ಮ ಮನೆಯವರು ಕೆಲಸ ಮಾಡುವ ಲ್ಯಾಬಿನಲ್ಲಿ ಹೀಲಿಯಮ್ ದೊರಕುತ್ತದೆ. ಅವರಿಗೆ ಹೇಳಿ ಮಕ್ಕಳಿಗೆಲ್ಲ ಹಿಲಿಯಮ್ ಬಲೂನು

ಮಾಡಿಸಿ ತಗೊಂಡು ಹೋದೆ. ಆರೋಗ್ಯವಂತ ಮಕ್ಕಳಾಗಿದ್ದರೆ 'ನನಗೆ ಕೆಂಪು ಬಣ್ಣದ್ದು ಬೇಕು', 'ನನಗೆ ನೀಲಿ ಬಣ್ಣದ್ದು ಬೇಕು' ಅಂತ ಕುಣಿಯುತ್ತಿದ್ದರು. ಈ ಮಕ್ಕಳು 'ಯಾವ ಬಲೂನು ಬೇಕು?' ಅಂತ ನಾವೇ ಕೇಳಿದರೆ ಕಷ್ಟಪಟ್ಟು ಎತ್ತಲಾರದ ಕೈ ಅರ್ಧ ಎತ್ತಿ ಒಂದು ಬಲೂನನ್ನು ತೋರಿಸುತ್ತಿದ್ದರು. ಆದರೂ ಅವರ ಮುಖದ ಮೇಲೆ ಬಣ್ಣದ ಬಲೂನು ತಂದ ಉಲ್ಲಾಸದ ನಗೆಯೊಂದು ಇತ್ತು. ಎಲ್ಲರಿಗೂ ಬಲೂನು ಕೊಟ್ಟು, ಅಪ್ಪಿಕೊಂಡು ವಿದಾಯ ಹೇಳಿ ಮನೆಯ ಕಡೆ ಹೊರಟಾಗ ನನ್ನ ಕಣ್ಣಂಚಿನಲ್ಲಿ ನೀರಾಡುತ್ತಿತ್ತು. ಜೀವನಾನುಭವದಲ್ಲಿ ನಾನು ಕಲಿತ ಒಂದು ವಿಷಯವೆಂದರೆ ದುಃಖದ ಒಡನಾಟದಲ್ಲಿ ಉಂಟಾದ ಬಾಂಧವ್ಯ ಸುಖದ ಒಡನಾಟದಲ್ಲಿ ಉಂಟಾದ ಬಾಂಧವ್ಯಕ್ಕಿಂತ ಹೆಚ್ಚು ಗಟ್ಟಿಯಾದುದು ಮತ್ತು ಸತ್ವಪೂರ್ಣವಾದದ್ದು. ಈ ಅನುಭವವೂ ಅದನ್ನೇ ಸಾಬೀತು ಮಾಡಿತು. ಎಲ್ಲ ಸರಿಯಾಗಿರುವ ಮಕ್ಕಳ ಜೊತೆ ಕೆಲಸ ಮಾಡಿದ್ದರೆ ಬಿಟ್ಟು ಹೋಗುವಾಗ ಇಷ್ಟು ಸಂಕಟ ಆಗುತ್ತಿರಲಿಲ್ಲ. ಈ ನತದೃಷ್ಟ ಮಕ್ಕಳ ಮತ್ತು ನನ್ನ ನಡುವೆ ಯಾವುದೋ ಕಣ್ಣಿಗೆ ಕಾಣದ ದಿವ್ಯ ಸೂತ್ರದ ಬಲವಾದ ಬಂಧನವಿತ್ತು! 'ಖಂಡಿತ ಈ ಶಾಲೆಗೆ ಮತ್ತೊಮ್ಮೆ ಭೇಟಿ ಕೊಟ್ಟು ಮಕ್ಕಳನ್ನು ನೋಡುತ್ತೇನೆ' ಅಂತ ಮನಸ್ಸಿನಲ್ಲಿ ಅಂದುಕೊಂಡಿದ್ದೇನೋ ಸರಿ. ಆದರೆ ಕಡೆಗೂ ಸಮಯಾಭಾವದಿಂದ ಹಾಗೆ ಮಾಡೋಕೆ ಆಗಲಿಲ್ಲ.

ಮುಂದೆ ನಾನು ಒಂದು ಆಲ್ಜೈಮರ್ಸ್ ಯೂನಿಟ್, ಒಂದು ನರ್ಸಿಂಗ್ ಹೋಮ್ ಮತ್ತು ಒಂದು ಮಾನಸಿಕ ರೋಗಿಗಳ ಆಸ್ಪತ್ರೆಯಲ್ಲಿ ಇಂಟರ್ನ್‌ಶಿಪ್ ಮಾಡಿದೆ. ಆಲ್ಜೈಮರ್ಸ್ ಯೂನಿಟ್‌ನಲ್ಲಿ ಆ ರೋಗಿಗಳು ಹಿಂದಿನ ನೆನಪಿಲ್ಲದೆ, ಮುಂದಿನ ಚಿಂತೆ ಇಲ್ಲದೆ ಈ ಗಳಿಗೆಯಲ್ಲಿ ಜೀವಿಸುತ್ತಿದ್ದರು. ಈ ಕ್ಷಣದಲ್ಲಿ ಸಿಕ್ಕುವ ಸ್ನೇಹ, ಪ್ರೀತಿ ಮಾತ್ರ ಅವರ ಮನಸ್ಸಿನಲ್ಲಿ ಆ ಹೊತ್ತಿಗೆ ದಾಖಲಾಗುತ್ತಿತ್ತು. ಎಲ್ಲ ಸ್ಟಾಫ್ ಕೂಡಾ ರೋಗಿಗಳನ್ನು ಪ್ರೀತಿಯಿಂದಲೇ ಮಾತನಾಡಿಸುತ್ತಿದ್ದರು. ಯಾಕೆಂದರೆ ಎಂಟು ಗಂಟೆಗಳ ಕಾಲ ಕೆಲಸ ಮಾಡಿದ ಮೇಲೆ ಅವರಿಗೆ ಇಲ್ಲಿಂದ ಮುಕ್ತಿ ದೊರಕುತ್ತಿತ್ತು. ಭಾರತದಲ್ಲಿ ಮನೆಯಲ್ಲೇ ಆಲ್ಜೈಮರ್ಸ್ ರೋಗಿಗಳನ್ನು ಇಪ್ಪತ್ತನಾಲ್ಕು ಗಂಟೆಯೂ ನೋಡಿಕೊಂಡು ಸುಸ್ತಾಗಿ ಮನೆಯವರು ರೋಗಿಗಳ ಮೇಲೆ ರೇಗಿ ಅವರು ತಬ್ಬಿಬ್ಬಾಗುವುದನ್ನು ಕಂಡಿದ್ದೆ ನಾನು. ಅದಕ್ಕಿಂತಲೂ ಈ ವ್ಯವಸ್ಥೆ ಎಷ್ಟು ಉತ್ತಮ; ರೋಗಿಗಳಿಗೂ ಮನೆಯವರಿಗೂ, ಅಂತನ್ನಿಸಿತು.

ಮಾನಸಿಕ ರೋಗಿಗಳ ಆಸ್ಪತ್ರೆಯಲ್ಲಿ ನಡೆದ ಒಂದು ಘಟನೆಯನ್ನು ನಿಮಗೆ ಹೇಳಲೇಬೇಕು. ಈ ಮೆಂಟಲ್ ಇನ್ಸ್‌ಟಿಟ್ಯೂಟ್ ಒಂದು ಆಸ್ಪತ್ರೆಗೆ ತಾಗಿಕೊಂಡು ಅದೇ ಆಸ್ಪತ್ರೆಯ ಒಂದು ಭಾಗವಾಗಿತ್ತು. ಅಲ್ಲಿ ನಾನು ಮತ್ತು ಇನ್ನೊಬ್ಬ ವಿದ್ಯಾರ್ಥಿನಿ, ಕ್ಯಾಥಿ, ಇಂಟರ್ನ್‌ಶಿಪ್ ಮಾಡುತ್ತಿದ್ದೆವು. ನಮ್ಮ ಜೊತೆ ಕೆಲವು ನರ್ಸುಗಳು, ಮತ್ತು ನಮ್ಮ ಮಾರ್ಗದರ್ಶಿ ಆಕ್ಯುಪೇಶನಲ್ ಥೆರಪಿಸ್ಟ್ ಇದ್ದರು. ಒಂದು ದಿನ ಒಬ್ಬ ರೋಗಿ ಇದ್ದಕ್ಕಿದ್ದ

ಹಾಗೆ ಕೆರಳಿ ಕೈಯಲ್ಲಿದ್ದ ಕಪ್‌ನಿಂದ ಕ್ಯಾಥಿಯ ತಲೆಯ ಮೇಲೆ ಕುಟ್ಟಿಬಿಟ್ಟ. ರಕ್ತ ಸೋರಲು ಶುರುವಾಯಿತು. ತಕ್ಷಣ ಅಲ್ಲಿದ್ದ ನರ್ಸುಗಳು ಆ ಕೆರಳಿದ ರೋಗಿಯನ್ನು ಪ್ರತ್ಯೇಕವಾದ ಒಂದು ರೂಮಿನಲ್ಲಿ ಹಾಕಿ ಬಾಗಿಲು ಹಾಕಿ, ಕ್ಯಾಥಿಗೆ ಗಾಯಕ್ಕೆ ಬ್ಯಾಂಡೇಜು ಹಾಕಿದರು. ಸಧ್ಯಕ್ಕೆ ಪರಿಸ್ಥಿತಿ ಒಂದು ತಹಬಂದಿಗೆ ಬಂತು. ಕ್ಯಾಥಿ ಸ್ವಲ್ಪ ಹೊತ್ತು ಸುಧಾರಿಸಿಕೊಂಡು, 'ಈಗ ಎಲ್ಲ ಸರಿಯಾಗಿದೆ' ಅಂತ ಹೇಳುತ್ತಿದ್ದರೂ ನಮ್ಮ ಗೈಡ್ ಕೇಳದೆ ಅವಳನ್ನು ಆಸ್ಪತ್ರೆಯ ಇನ್ನೊಂದು ಭಾಗಕ್ಕೆ ಕರೆದುಕೊಂಡು ಹೋಗಿ ಸೂಕ್ತವಾದ ಚಿಕಿತ್ಸೆ ಕೊಡಿಸಿದಳು. ಇದಾಗಿ ಸ್ವಲ್ಪ ದಿನಕ್ಕೆ ನೂರಾರು ಡಾಲರುಗಳ ಒಂದು ದೊಡ್ಡ ಬಿಲ್ ಬಂತು ಆಸ್ಪತ್ರೆಯಿಂದ ಕ್ಯಾಥಿಗೆ! ಈ ಘಟನೆ ನಡೆದಿದ್ದು ಅದೇ ಆಸ್ಪತ್ರೆಯಲ್ಲಿ, ಅಲ್ಲಿಯ ವಿದ್ಯಾರ್ಥಿನಿ ಈಕೆ, ಅಲ್ಲದೆ 'ತನಗೆ ಚಿಕಿತ್ಸೆ ಬೇಡ' ಅಂತ ಹೇಳುತ್ತಿದ್ದರೂ ಎಳೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದಾರೆ. ಆದರೂ ಕೊನೆಗೆ ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ ಎಂಬಂತೆ ದಂಡ ತೆತ್ತವಳು ಅವಳೇ! ಅಷ್ಟಾಗಿ ಅವಳ ಹತ್ತಿರ ಪೋಲು ಮಾಡುವಷ್ಟು ದುಡ್ಡು ಕೂಡಾ ಇರಲಿಲ್ಲ! ಹೆಲ್ತ್ ಇನ್ಶೂರೆನ್ಸ್ ಮೊದಲೇ ಇರಲಿಲ್ಲ! ಇದು ಅಮೆರಿಕಾ ದೇಶದ ಹೆಲ್ತ್ ಇನ್ಶೂರೆನ್ಸ್ ವ್ಯವಸ್ಥೆಯ (ಅಲ್ಲ ಅವ್ಯವಸ್ಥೆಯ) ಬಗ್ಗೆ ನನಗೆ ಕಂಡು ಬಂದ ಮೊದಲ ಮಿಂಚುನೋಟ.

ಕಡೆಗೊಮ್ಮೆ ನನ್ನ ವಿದ್ಯಾಭ್ಯಾಸ ಮುಗಿದು ಡಿಗ್ರಿ ಸರ್ಟಿಫಿಕೇಟು ಕೈಗೆ ಬಂತು. ಇದೀಗ ನಾನು ಜಾಬ್ ಮಾರ್ಕೆಟ್ ಪ್ರವೇಶಿಸೋಕೆ ರೆಡಿ ಆಗಿದ್ದೆ! ನಾನು ಕಾಲೇಜಿಗೆ ಹೋಗಿದ್ದು ಯಾಕೆ? ದುಡ್ಡು ಮಾಡೋಕಾ? ಸೇವೆ ಮಾಡೋಕಾ? ನನ್ನ ಪ್ರತಿಭೆಯ ಸದುಪಯೋಗ ಪಡಿಸೋಕಾ? ಯಾಕೆ? ನನ್ನನ್ನು ನಾನೇ ಕೇಳಿಕೊಂಡಾಗ ಉತ್ತರ ಹೇಳೋದೇ ಕಷ್ಟವಾಯಿತು. ಸೇವೆ ಮಾಡೊ ಆಸೆ ಇರೋದೇನೋ ನಿಜ. ಆದರೆ ದುಡ್ಡಿನ ಆಮಿಷ ಇಲ್ಲದೆ ಹೋಗಿದ್ದರೆ ನಾನು ಕೆಲಸ ಮಾಡುತ್ತಿದ್ದೆನಾ? ಅದೂ ಅಲ್ಲದೆ 'ಆಕೆ ಡಾಕ್ಟರ್', 'ಈಕೆ ಇಂಜಿನಿಯರ್' ಅಂತ ಇನ್ನೊಬ್ಬರ ವಿಷಯ ಕೇಳಿದಾಗೆಲ್ಲ 'ನಾನೂ ಒಂದು ಪದವಿ ಗಳಿಸಿ, ಒಂದು ಒಳ್ಳೆಯ ಹುದ್ದೆ ಗಳಿಸಿ ಜನರ ಕೈಯಲ್ಲಿ 'ಸೈ' ಅನ್ನಿಸಿಕೊಬೇಕು' ಎಂಬ ಏನೋ ಒಂದು ಪೈಪೋಟಿ ಮನೋಭಾವವೂ ಇತ್ತಲ್ವಾ? ಬಹುಶಃ ಇವೆಲ್ಲವೂ ಒಟ್ಟಾಗಿ ಸೇರಿ ನನ್ನನ್ನು ಕಾಲೇಜಿಗೆ ಹೋಗುವಂತೆ ಮಾಡಿದ್ದವು.

ಉದ್ಯೋಗಂ ಸ್ತ್ರೀ ಲಕ್ಷಣಂ

ನಿಮಗೆಲ್ಲಾ ಗೊತ್ತೇಗೊತ್ತು, 'ಉದ್ಯೋಗಂ ಪುರುಷ ಲಕ್ಷಣಂ' ಅನ್ನೋ ಮಾತು. ಆದರೆ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಸಂಸಾರ ರಥವನ್ನು ತಳ್ಳಲು ಗಂಡ, ಹೆಂಡತಿ ಇಬ್ಬರೂ ದುಡಿಯಬೇಕಾಗಿ ಬಂದಿದೆ. ಅದಕ್ಕೇ 'ಉದ್ಯೋಗಂ ಸ್ತ್ರೀ ಲಕ್ಷಣಂ' ಅಂತ ಹೇಳಿದರೂ ತಪ್ಪಾಗುವುದಿಲ್ಲ. ಅಥವಾ 'ಉದ್ಯೋಗಂ ಮನುಷ್ಯ ಲಕ್ಷಣಂ' ಅನ್ನಬೇಕಾ? ಇರಲಿ. ಮಾತು ಎಲ್ಲೆಲ್ಲಿಗೋ ಹೋಗುತ್ತಿದೆ.

ಬೇರು ಸೂರು

ನಾನು ಥೆರಪಿಸ್ಟ್ ಆಗಿ ಕೆಲಸ ಶುರು ಮಾಡಿದ್ದು ಒಂದು ನರ್ಸಿಂಗ್ ಹೋಮಿನಲ್ಲಿ. ಆಸ್ಪತ್ರೆಯಲ್ಲಿ ಖಾಯಿಲೆಯ ತೀವ್ರತೆ ಇಳಿಮುಖವಾಗುವವರೆಗೂ ಚಿಕಿತ್ಸೆ ಕೊಟ್ಟ ಮೇಲೆ, 'ರೋಗ ಪೂರ್ತಿ ಗುಣಮುಖವಾಗಿಲ್ಲ, ಆದರೆ ಹೆಚ್ಚಿನ ನಿಗಾ ಇಡಬೇಕಾದ ಅವಶ್ಯಕತೆ ಇಲ್ಲ' ಎಂಬಂತಿರುವಾಗ ಈ ಥರದ ನರ್ಸಿಂಗ್ ಹೋಮಿಗೆ ಕಳಿಸುತ್ತಾರೆ. ಇಲ್ಲಿ ಪರಿಣತ ನರ್ಸುಗಳು, ಹಲವು ಬಗೆಯ ವೈದ್ಯಕೀಯ ಸಲಕರಣೆಗಳು, ಸೌಲಭ್ಯಗಳು ಹಾಗೂ ಫಿಸಿಕಲ್ ಥೆರಪಿಸ್ಟ್, ಆಕ್ಯುಪೇಶನಲ್ ಥೆರಪಿಸ್ಟ್ ಮತ್ತು ಸ್ಪೀಚ್ ಥೆರಪಿಸ್ಟ್ ಇರುತ್ತಾರೆ. ಆದರೆ ಡಾಕ್ಟರುಗಳು ಆಗಾಗ ಬಂದು ಹೋಗಿ ಮಾಡುತ್ತಾರಷ್ಟೆ. ರೋಗ ಮತ್ತೆ ಉಲ್ಬಣಗೊಂಡರೆ ನರ್ಸು ಡಾಕ್ಟರಿಗೆ ಫೋನ್ ಮಾಡಿ ವಿಚಾರಿಸಿ ಅಗತ್ಯ ಬಿದ್ದರೆ ಡಾಕ್ಟರ ಸಲಹೆಯ ಮೇರೆಗೆ ಮತ್ತೆ ಆಸ್ಪತ್ರೆಗೆ ಕಳಿಸುವುದೂ ಉಂಟು. ಇಲ್ಲಿ ಆಸ್ಪತ್ರೆಯಲ್ಲಿ ತಂಗುವುದಕ್ಕಿಂತ ಕಡಿಮೆ ವೆಚ್ಚ ತಗಲುತ್ತದೆ. ಇಂತಹ ಒಂದು ನರ್ಸಿಂಗ್ ಹೋಮಿನಲ್ಲೇ ನಾನು ಉದ್ಯೋಗ ಅಂತ ಶುರು ಮಾಡಿದ್ದು ನನ್ನ ಜೀವನ ಅರ್ಧ ಕಳೆದ ಮೇಲೆ.

ಇಲ್ಲಿ ಸೇರಿದಾಗ ನನ್ನ ಮನಸ್ಸಿಗೆ ಬಂದ ಮೊದಲ ಅನಿಸಿಕೆ ಅಂದರೆ 'ಇಷ್ಟು ದಿನ ನಾನು ಅಮೆರಿಕಾ ಎಂಬ ಮನೆಯ ಡ್ರಾಯಿಂಗ್ ರೂಮಿನಲ್ಲಿ ಕುಳಿತು ಮನೆಯವರ ಹತ್ತಿರ ಉಭಯ ಕುಶಲೋಪರಿ ಮಾತಾಡುತ್ತಾ ಜೊತೆಯಾಗಿ ತಿಂಡಿ ತೀರ್ಥ ಸೇವಿಸಿದ್ದೆ; ಅಷ್ಟೆ. ಆದರೆ ಈಗ, ಮನೆಯ ಒಳಗೆಲ್ಲ ಓಡಾಡುತ್ತಿದ್ದೀನಿ' ಅಂತ. ಅಲ್ಲಿ ಆ ಮನೆಯಲ್ಲಿ ಮಗು ಜೊಲ್ಲು ಸುರಿಸಿದ ಜಾಗ, ರಾತ್ರಿ ನಿಶ್ಯಬ್ದವಾಗಿ ಯಾರೋ ಅತ್ತು ಕಣ್ಣೀರಿನಲ್ಲಿ ತೊಯ್ದ ದಿಂಬು, ಉಚ್ಚೆ ಬಟ್ಟೆಗಳ ರಾಶಿ, ಸಂಭ್ರಮದ ದಿನಗಳಲ್ಲಿ ನೆಲದ ಮೇಲೆ ಚೆಲ್ಲಾಡಿದ ಕೇಕ್ ಪೀಸುಗಳು, ಬಲೂನ್ ಚೂರುಗಳು ಎಲ್ಲವೂ ಕಾಣಿಸುತ್ತಿವೆ! ಹೌದು, ಅಮೆರಿಕಾದ ಜನರ ಜೀವನದ ಅತಿ ಕಷ್ಟದ, ಆತಂಕದ ದಿನಗಳಲ್ಲಿ ಅವರ ಮನಸ್ಸಿನ ತಲ್ಲಣ, ದುಗುಡ, ಆಸೆ, ಭರವಸೆ, ಪರಸ್ಪರ ಸಂಬಂಧಗಳು, ದೇವರ ಮೇಲಿನ ನಂಬಿಕೆ, ಆರ್ಥಿಕ ಪರಿಸ್ಥಿತಿ... ಎಲ್ಲವೂ ಈಗ ನನ್ನೆದುರು ಬೆತ್ತಲಾಗಿದ್ದವು.

ಸಾಮಾನ್ಯವಾಗಿ ಥೆರಪಿಸ್ಟುಗಳು ಒಬ್ಬೊಬ್ಬ ರೋಗಿಯ ಹತ್ತಿರ ಏನಿಲ್ಲವೆಂದರೂ ಮುಕ್ಕಾಲು ಗಂಟೆ ಅಥವಾ ಒಂದು ಘಂಟೆಯೇ ಕಳೆಯಬೇಕಾಗುತ್ತದೆ. ವ್ಯಾಯಾಮ, ಕೊ–ಆರ್ಡಿನೇಶನ್, ಬ್ಯಾಲೆನ್ಸ್ ಮುಂತಾದ ಬೇರೆ ಬೇರೆ ಆಯಾಮಗಳಲ್ಲಿ ಅವರಿಗೆ ಟ್ರೀಟ್‌ಮೆಂಟ್ ಕೊಡುವ ಸಮಯದಲ್ಲಿ ರೋಗಿಗಳ ಜೊತೆ ಏನಾದರೂ ಮಾತಾಡುತ್ತಿರುತ್ತೇವೆ. ಮುಂದೆ ಮನೆಗೆ ಹೋದಾಗ ಅವರಿಗೆ ಎಷ್ಟು ನೆರವು ದೊರಕುತ್ತದೆ, ರೋಗಿಗಳ ಜವಾಬ್ದಾರಿ ಏನೇನು ಇರುತ್ತದೆ, ಸುರಕ್ಷಿತವಾಗಿ ಅವರು ಬಚ್ಚಲು ಮನೆ, ಅಡುಗೆಮನೆ ಮುಂತಾದ ಕಡೆ ಓಡಾಡಿಕೊಂಡು ತಮ್ಮ ಕೆಲಸ ತಾವು ಮಾಡಿಕೊಳ್ಳಬಲ್ಲರೆ? ಇವೆಲ್ಲವೂ ನಮ್ಮ ವೃತ್ತಿಯ ಪರಿಧಿಯಲ್ಲಿ ಬರುವುದರಿಂದ ನಾವು ರೋಗಿಗಳ ಮತ್ತು ಸಂಬಂಧಿಕರ ಜೊತೆ ಆಪ್ತವಾಗಿ, ಕಳಕಳಿಯಿಂದ ಮಾತನಾಡುತ್ತೇವೆ. ಆ ಮಾತಿನ ನಡುವೆ ಕಳೆದು ಹೋದ ಸುಖದ ದಿನಗಳನ್ನು ನೆನೆದು, ಯಾರನ್ನೂ

ಅವಲಂಬಿಸಬೇಕಾಗದ ಸ್ವತಂತ್ರ ಬದುಕನ್ನು ನೆನೆದು ಎಷ್ಟೋ ಬಾರಿ ರೋಗಿಗಳು, ಮನೆ ಮಂದಿ ಕಣ್ಣೀರು ಹಾಕುವುದೂ ಉಂಟು. ಆ ಕ್ಷಣಗಳಲೆಲ್ಲ ಮೌನವಾಗಿ ಅವರ ಕೈ ಹಿಡಿದು ಅದುಮಿ, ಬೆನ್ನು ಸವರಿ, ಕಣ್ಣೀರು ಒರೆಸಿ ಅವರಿಗೆ ಸಮಾಧಾನವಾಗಲು ಕೆಲ ಸಮಯ ಕೊಡುವುದನ್ನು ಬಿಟ್ಟರೆ, ತೋಚಿದ ರೀತಿಯಲ್ಲಿ ಧೈರ್ಯ ಹೇಳುವುದನ್ನು ಬಿಟ್ಟರೆ ಮತ್ತೇನು ತಾನೆ ಮಾಡಬಲ್ಲೆವು ನಾವು! ಹೌದು. ಥೆರಪಿಸ್ಟ್ ಆಗಿ ನಾನು ಕಂಡುಕೊಂಡ ಸತ್ಯ ಇದು– ಅಮೆರಿಕನ್ ಆದರೇನು? ಭಾರತೀಯನಾದರೇನು? ಕೊನೆಯಲ್ಲಿ ನಾವೆಲ್ಲ ಮನುಷ್ಯರು ಅಷ್ಟೆ. ಮನುಷ್ಯನ ನೋವು, ನಲಿವು, ತಲ್ಲಣ, ದುಗುಡ, ಆತಂಕ, ಪ್ರೀತಿ ಮುಂತಾದ ಭಾವನೆಗಳಿಗೆ ಹೊರಗಿನ ಮೈ ಚರ್ಮದ ಬಣ್ಣವಾಗಲಿ, ಭೂಗೋಳದ ರೇಖೆಯಾಗಲಿ ಯಾವ ತಾರತಮ್ಯವನ್ನೂ ಮಾಡುವುದಿಲ್ಲ.

ಕಳೆದು ಹೋದ ಸ್ವಾತಂತ್ರ್ಯ

ಬರ್ನಡೆಟ್‌ಳನ್ನು ನಾನು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ನಾನು ಕೆಲಸ ಶುರು ಮಾಡಿದ ಮೊದಲ ದಿನಗಳಲ್ಲಿ ನನ್ನ ಪೇಷೆಂಟ್ ಆಗಿದ್ದವಳು. ವಯಸ್ಸು ಅರವತ್ತೆಂಟು ಇರಬಹುದು. ಸಿಗರೇಟು ತುಂಬ ಸೇದುತ್ತಿದ್ದಳಂತೆ. ಕುಡಿಯುವ ಚಟವೂ ಇತ್ತು. ಅದಕ್ಕಾಗಿಯೇ ಇರಬಹುದು. ಉಸಿರಾಟಕ್ಕೆ ಕಷ್ಟವಾಗುತ್ತಿತ್ತು. ನಿತ್ರಾಣ ಕಾಡುತ್ತಿತ್ತು. ಇದಕ್ಕೆ ಮುಂಚೆ ಒಬ್ಬಳೇ ಒಂದು ಅಪಾರ್ಟ್‌ಮೆಂಟಿನಲ್ಲಿ ಜೀವನ ಮಾಡುತ್ತಿದ್ದಳು. ಅವಳ ಥೆರಪಿ ಮುಗಿಯುತ್ತಾ ಬಂದ ಹಾಗೆ ಅವಳು ಮತ್ತೆ ಅದೇ ಥರ ಸ್ವತಂತ್ರವಾಗಿ ಅಪಾರ್ಟ್‌ಮೆಂಟಿನಲ್ಲಿ ಜೀವನ ಮಾಡಿಕೊಂಡು ಇರಬಲ್ಲಳೆ? ಎಂಬ ಪ್ರಶ್ನೆ ಬಂತು. ಅವಳು ಸುರಕ್ಷಿತಳಾಗಿರಬೇಕು ಎಂಬುದೇ ನಮ್ಮೆಲ್ಲರ ಕಾಳಜಿಯಾಗಿತ್ತು. ನನ್ನ ಜೊತೆ ಅವಳು ಕಳೆದ ಥೆರಪಿ ಸಮಯದಲ್ಲಿ ಅವಳ ಮನಸ್ಸು ತುಂಬ ಗೋಜಲು ಗೋಜಲಾಗಿರುವುದು ನನ್ನ ಗಮನಕ್ಕೆ ಬಂದಿತ್ತು. ಫಿಸಿಕಲ್ ಥೆರಪಿಸ್ಟ್ ಕೂಡಾ ಇದನ್ನು ಗಮನಿಸಿದ್ದಳು. ಬರ್ನಡೆಟ್, ಅವಳ ಸಂಬಂಧಿಕರು ಮತ್ತು ಇತರ ಸ್ಟಾಫ್ ಮೆಂಬರ್ಸ್ ಕೂಡಿ ಏರ್ಪಡಿಸಿದ ಮೀಟಿಂಗಿನಲ್ಲಿ ನಾವು ಇದನ್ನೇ ಹೇಳಿದೆವು. ಅವಳಿಗೆ ಈ ಗಳಿಗೆಯದ್ದು ಮುಂದಿನ ಗಳಿಗೆ ನೆನಪಿರುವುದಿಲ್ಲ. ಸ್ವತಂತ್ರವಾಗಿ ಆಕೆ ಬದುಕುವುದು ಸುರಕ್ಷಿತವಲ್ಲ ಅಂತ. ಎಲ್ಲರೂ ಸೇರಿ ಅವಳು ಇನ್ನು ಮೇಲೆ ಒಂದು ನರ್ಸಿಂಗ್ ಹೋಮ್ ಅಥವಾ ಅಸಿಸ್ಟೆಡ್ ಲಿವಿಂಗ್ ಸೆಂಟರಿನಲ್ಲಿ (ಅಂದರೆ ತಮ್ಮ ಕೆಲಸ ತಾವು ಮಾಡಿಕೊಳ್ಳಬಲ್ಲವರು ವಾಸಿಸುವ, ಮೇಲ್ವಿಚಾರಣೆ ಇರುವಂಥ, ಊಟ ತಿಂಡಿ ಒದಗಿಸುವಂಥ ಜಾಗದಲ್ಲಿ) ಇರಬೇಕಂತ ತೀರ್ಮಾನಿಸಿದರು. ಇದನ್ನು ಕೇಳುತ್ತಿದ್ದಂತೆಯೇ ಬರ್ನಿಯ ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಹರಿಯಲು ಶುರುವಾಯಿತು.

'ಛೆ ನಾನು ಎಂಥ ಕೆಲಸ ಮಾಡಿದೆ! ಅವಳ ಸ್ವಾತಂತ್ರ್ಯ ಕಸಿದುಕೊಳ್ಳುವ ಹಕ್ಕು

ನನಗಿದೆಯೆ? ಇಷ್ಟಕ್ಕೂ ನನ್ನ ಜಡ್ಜ್‌ಮೆಂಟ್ ಸರಿ ಅಂತ ಏನು ಗೊತ್ತು?' ಇವೇ ಮುಂತಾದ ಯೋಚನೆಗಳು ನನ್ನನ್ನು ಕಿತ್ತು ತಿನ್ನಲು ಆರಂಭಿಸಿದವು. ಖಿನ್ನಳಾಗಿದ್ದ ನನ್ನನ್ನು ನೋಡಿ ನನ್ನ ಬಾಸ್ ಬಾರ್ಬರಾ ಕೇಳಿದಳು, 'ಏನು ಸಪ್ಪಗಿದ್ದೀಯಾ, ನಳಿನಿ?' ನನ್ನ ಮನಸ್ಸಿನ ವಿಚಾರಗಳನ್ನು ಅವಳಲ್ಲಿ ಹೇಳಿಕೊಂಡೆ. ಅವಳು ನಸುನಕ್ಕು ಹೇಳಿದಳು– 'ಇವೆಲ್ಲ ಗ್ರೋಯಿಂಗ್ ಪೈನ್ಸ್, ನಳಿನಿ. ದಿನಗಳೆದಂತೆ ನಿನ್ನ ಚರ್ಮ ದಪ್ಪಗಾಗುತ್ತೆ. ಇದೆಲ್ಲ ಅಭ್ಯಾಸವಾಗುತ್ತೆ.' ಹೌದು, ಕಷ್ಟಾತಿಕಷ್ಟಗಳೇ ಬರಲಿ, ಅಥವಾ ಜೀವ ಹಿಂಡುವ ನಿರ್ಧಾರಗಳೇ ಆಗಲಿ, ಎಲ್ಲವುದರ ತೀಕ್ಷ್ಣತೆಯೂ ದಿನಗಳೆದಂತೆ ಕಡಿಮೆಯಾಗುತ್ತೆ, ಅಲ್ವಾ?

ದಿನಗಳೆದಂತೆ ವೃತ್ತಿಯಲ್ಲಿ ನಾನು ಪಳಗಿದ ಮೇಲೆ ನನಗೇ ಗೊತ್ತಾಯಿತು– ಬರ್ನಡೆಟ್ ಬಗ್ಗೆ ನನ್ನ ನಿರ್ಧಾರ ಸರಿಯಾಗೇ ಇತ್ತು ಅಂತ. ಮನೆಯಲ್ಲಿ ಒಬ್ಬೊಬ್ಬರೇ ಬಾಳ್ವೆ ಮಾಡುವ ಎಷ್ಟೋ ವೃದ್ಧರು ಏನೋ ಎಡವಟ್ಟು ಮಾಡಿಕೊಂಡು ಅಥವಾ ಬಿದ್ದು ಕೈ ಕಾಲು ಮುರಿದುಕೊಂಡು ಫೋನ್‌ವರೆಗೂ ತೆವಳಿಕೊಂಡು ಹೋಗಲಾಗದೆ ಗಂಟೆಗಟ್ಟಲೆ ಕಾದಿದ್ದ ಪರಿಸ್ಥಿತಿಗಳೂ ಉಂಟಾಗಿದ್ದವು ಅಂತ ನನ್ನ ಪೇಷೆಂಟುಗಳೇ ಹೇಳಿಕೊಂಡಿದ್ದನ್ನು ಕಂಡೆ.

ಬದುಕಿನ ಸಂಜೆಯಲ್ಲಿ

ನನ್ನ ಸ್ನೇಹಿತೆ ಮೀರಾನ ಅಮ್ಮ ಮಂಗಳೂರಿನವರು. ಯಾವಾಗಲೂ ತಮಾಷೆಯಾಗಿ ಹೀಗೆ ಹೇಳುತ್ತಿದ್ದರು– 'ನಿಮ್ಮ ಹತ್ತಿರ ಆರೋಗ್ಯ, ಯೌವನ ಉಂಟೋ? ಅಮೆರಿಕಾ ಚಂದ ಉಂಟು. ಗಮ್ಮತ್ತು ಮಾಡಿ. ಆದರೆ ಅವೆರಡೂ ನಿಮ್ಮ ಹತ್ತಿರ ಇಲ್ಲ ಅಂತಾದರೆ ಇಂಡಿಯಾವೇ ಚಂದ.'

ಯಾವ ದೇಶದಲ್ಲೇ ಇದ್ದರೂ ಆರೋಗ್ಯ ಕ್ಷೀಣಿಸುತ್ತಿರುವ ಬದುಕಿನ ಸಂಜೆಯ ದಿನಗಳು ಕಷ್ಟಕರವಾದವು. ಆದರೆ ಅಮೆರಿಕಾದಲ್ಲಿ ಕೆಲವು ವಿಶಿಷ್ಟ ಸನ್ನಿವೇಶಗಳಿಂದಾಗಿ ಇನ್ನೂ ಜೀವನ ಕಷ್ಟವಾಗುತ್ತದೆ. ದೊಡ್ಡ ದೊಡ್ಡ ನಗರಗಳ ಬಡಾವಣೆಗಳಲ್ಲಿ ವಾಸಿಸುವವರಿಗೆ ಅಲ್ಲಿ ಸಾರಿಗೆ ವ್ಯವಸ್ಥೆ ಏನೂ ಇರುವುದಿಲ್ಲ. ಎಲ್ಲರೂ ತಮ್ಮ ತಮ್ಮ ಕಾರುಗಳಲ್ಲೇ ಓಡಾಡುತ್ತಾರೆ. ಬಸ್ಸುಗಳು ಬಹಳ ವಿರಳ. ನಮ್ಮ ಇಂಡಿಯಾದ ಹಾಗೆ ಆಟೋಗಳೂ ಇಲ್ಲ. ಹೀಗಾಗಿ ಡ್ರೈವಿಂಗ್ ಮಾಡಲಾಗದ ವೃದ್ಧ ದಂಪತಿಗಳಿಗೆ ದುಬಾರಿ ಬೆಲೆಯ ಟ್ಯಾಕ್ಸಿ ಅಥವಾ ಕಂಡವರ ಸಹಾಯ ಬಿಟ್ಟರೆ ಓಡಾಡುವುದಕ್ಕೆ ಯಾವ ಅನುಕೂಲವೂ ಇರುವುದಿಲ್ಲ. ನಮ್ಮಲ್ಲಿಯ ಹಾಗೆ ಮನೆಗೆಲಸದವರ ಹತ್ತಿರ ಹೇಳಿ ಅಂಗಡಿಯಿಂದ ದಿನಸಿ ಸಾಮಾನು, ಹಾಲು ತರಿಸುವ ಹಾಗಿಲ್ಲ. ಅಥವಾ ಅಂಗಡಿಗೇ ಫೋನ್ ಮಾಡಿ ಮನೆಗೆ ಡೆಲಿವರಿ ಮಾಡಿಸುವ ವ್ಯವಸ್ಥೆಯೂ ಇಲ್ಲ!

ನನಗೆ ಒಮ್ಮೊಮ್ಮೆ ಜಾನ್ ನೆನಪಾಗುತ್ತಾನೆ. ದಿನವೂ ಅವನನ್ನು ಮಗ ಅಥವಾ

ಮಗಳು ಬೆಳಿಗ್ಗೆ ಕೆಲಸಕ್ಕೆ ಹೋಗುತ್ತಾ ನಮ್ಮ ನರ್ಸಿಂಗ್ ಹೋಮಿನಲ್ಲಿ ಡ್ರಾಪ್ ಮಾಡಿ ಹೋಗುತ್ತಿದ್ದರು. ಯಾಕೆಂದರೆ ಜಾನ್‌ಗೆ ಕಣ್ಣಿನ ದೃಷ್ಟಿ ಮಂಜಾಗಿದ್ದರಿಂದ ಇತ್ತೀಚೆಗೆ ಡ್ರೈವ್ ಮಾಡುತ್ತಿರಲಿಲ್ಲ. ಆತ ತನ್ನ ರೋಗಿ ಪತ್ನಿ ಸೂಸನ್ ಜೊತೆ ಇಡೀ ದಿನ ಅಂದರೆ ಸಾಯಂಕಾಲ ಮಕ್ಕಳು ಬರುವವರೆಗೂ ಕಾಲ ಕಳೆಯುತ್ತಾ ಕೂರುತ್ತಿದ್ದ. ಆ ಕೋಣೆಯಲ್ಲಿ ಎಲ್ಲೆಲ್ಲೂ ಫೋಟೊಗಳಿದ್ದವು- ಜಾನ್ ಮತ್ತು ಸೂಸನ್ ಅವರು ಕಳೆದ ಒಳ್ಳೆಯ ದಿನಗಳ ಮಧುರ ಕ್ಷಣಗಳು ಕ್ಯಾಮೆರಾದಲ್ಲಿ ಸೆರೆ ಸಿಕ್ಕಿ ಹೆಪ್ಪುಗಟ್ಟಿ ನಿಂತಂತೆ. ಹುರುಪು, ಚೈತನ್ಯ ಚಿಮ್ಮುವ ನವದಂಪತಿಗಳು ಹವಾಯಿಯಲ್ಲಿ ವೆಕೇಷನ್ ಹೋಗಿದ್ದು, ಮದುವೆಯಾದ ದಿನ ಚರ್ಚ್ ಮುಂದೆ ನಿಂತು ನಸುನಗುತ್ತಾ ಪೋಸ್ ಕೊಟ್ಟಿದ್ದು, ಪುಟ್ಟ ಕಂದನನ್ನು ಬಗಲಲ್ಲಿ ಎತ್ತಿಕೊಂಡಿದ್ದ ಸೂಸನ್, ಮರೀನ್ ಆಗಿ ಜಾಗತಿಕ ಯುದ್ಧದಲ್ಲಿ ಭಾಗವಹಿಸಿದ್ದ, ಸಮವಸ್ತ್ರ ತೊಟ್ಟು ನಿಂತ ತರುಣ ಜಾನ್... ಹೀಗೇ. ಎಲ್ಲವೂ ಗತವೈಭವದ ಪಳೆಯುಳಿಕೆಗಳು! ಮಕ್ಕಳ ಮನಸ್ಸಿನಲ್ಲಿ ಫೋಟೋ ನೋಡಿಯಾದರೂ ತಾಯಿಗೆ ನೆನಪುಗಳು ಎಚ್ಚತ್ತು ಅವಳ ಸ್ಥಿತಿ ಸುಧಾರಿಸಬಹುದೆಂಬ ಹುಲು ಕಡ್ಡಿಯ ಭರವಸೆ! ಪಾಪ, ಜಾನ್‌ಗೂ ವಯಸ್ಸಾಗಿದೆ. ಮಧ್ಯಾಹ್ನ ಸ್ವಲ್ಪ ಅಡ್ಡಾಗಬೇಕು ಅಂತ ಅನ್ನಿಸುವುದಿಲ್ಲವೆ? ಏನಾದರೂ ಬಾಯಾಡಬೇಕು ಅನ್ನಿಸುವುದಿಲ್ಲವೆ? ಸೂಸನ್ ಮಾತು ಕೂಡಾ ಆಡಲಾಗದಷ್ಟು ಡಯಾಬಿಟಿಕ್ ಕೋಮಾಗೆ ಒಳಗಾಗಿದ್ದಳು.

ಗಂಡ, ಹೆಂಡತಿ ಇಬ್ಬರಿಗೂ ವಯಸ್ಸಾಗಿ ಓಡಾಡುವುದು, ತಮ್ಮ ಕೆಲಸ ಮಾಡಿಕೊಳ್ಳುವುದು ಕಷ್ಟವಾದರೆ ಇಲ್ಲಿ ಲಿವ್-ಇನ್ ಹೆಲ್ಪ್ ದೊರಕುತ್ತದೆ. ಅಂದರೆ ಇಡೀ ದಿನ ಅವರ ಮನೆಯಲ್ಲೇ ಇದ್ದು ಅವರಿಗೆ ಎಲ್ಲ ಥರದ ಸಹಾಯ ಮಾಡುವವರು ಸಿಕ್ಕುತ್ತಾರೆ. ಆದರೆ ಇವರೆಲ್ಲ ಸಾಮಾನ್ಯವಾಗಿ ಪೋಲೆಂಡಿನಿಂದ ಅಥವಾ ಮೆಕ್ಸಿಕೊನಿಂದ ಬಂದ ಕಡುಬಡವರು. ಅವರಿಗೆ ಇಂಗ್ಲಿಷ್ ಕೂಡಾ ಸರಿಯಾಗಿ ಮಾತಾಡಲು ಬರುವುದಿಲ್ಲ! ಹಾಗಾಗಿ ಈ ವೃದ್ಧ ದಂಪತಿಗಳು ಹೇಳುವುದೇನೊ ಆ ಸಹಾಯಕ್ಕೆ ಬಂದವರು ಮಾಡುವುದೇನೋ ಆಗುತ್ತದೆ.

ಹೀಗೆ ಹೇಳುವಾಗ ನನ್ನ ಗೆಳತಿ ಗಾಯತ್ರಿ ಹೇಳಿದ್ದು ನೆನಪಾಗುತ್ತೆ. ಅವಳು ಮೊನ್ನೆ ಮೊನ್ನೆ ಮಂಗಳೂರಿಗೆ ಹೋದಾಗ ಕಂಡಿದ್ದು- ಎಷ್ಟೋ ಜನ ವೃದ್ಧ ತಂದೆ ತಾಯಿಯರು ಕೈಲಾಗದವರು ಯಾರೋ ಮಲಯಾಳಿ ಹೆಂಗಸರನ್ನು ಮನೆಯಲ್ಲಿ ಸಹಾಯಕ್ಕೆ ಇಟ್ಟುಕೊಂಡಿದ್ದಾರಂತೆ. ಮಕ್ಕಳು ದೊಡ್ಡ ದೊಡ್ಡ ಕೆಲಸಗಳಲ್ಲಿ ಅಮೆರಿಕಾ, ಆಸ್ಟ್ರೇಲಿಯಾ, ಮುಂಬಯಿ, ದೆಹಲಿ ಅಂತ ಇದ್ದಾರಂತೆ. ಆ ಮಲಯಾಳಿ ಹೆಂಗಸು ಹೇಳಿದ್ದು ಇವರಿಗೆ ಅರ್ಥವಾಗಲ್ಲ. ಇವರು ಹೇಳಿದ್ದು ಅವಳಿಗೆ ಅರ್ಥ ಆಗಲ್ಲ. ಹಾಗಾದರೆ ಈ ಪರಿಸ್ಥಿತಿ ಎಲ್ಲೆಲ್ಲೂ ಇದೆ ಅಂತ ಆಯಿತು.

ಇತ್ತೀಚೆಗೆ ಅಮೆರಿಕೆಯಲ್ಲಿ ವಯಸ್ಸಾದ ಭಾರತೀಯರ ಸಂಖ್ಯೆ ಹೆಚ್ಚಾಗುತ್ತಿದೆ. ನಲವತ್ತು ವರ್ಷಗಳ ಕೆಳಗೆ ಉಕ್ಕುವ ಯೌವನದಲ್ಲಿ ಇಲ್ಲಿಗೆ ಬಂದು ತಳ ಊರಿದವರು

ಈಗ ವಾಕರ್ ಹಿಡಿದು ನಡೆಯಬೇಕಾದ ಪರಿಸ್ಥಿತಿ ಬಂದಿದೆ. ಅಂಥವರಿಗಾಗಿಯೇ ಭಾರತೀಯ ವಾತಾವರಣವಿರುವ ನರ್ಸಿಂಗ್ ಹೋಮುಗಳೂ ಶುರುವಾಗಿವೆ. ಅಲ್ಲಿ ಇಂಡಿಯನ್ ಊಟ, ತಿಂಡಿ, ಹಿಂದಿ ಮಾತಾಡಬಲ್ಲ ನರ್ಸುಗಳು, ಭಾರತೀಯ ಸಂಗೀತ, ಟಿವಿಯಲ್ಲಿ ಇಂಡಿಯನ್ ಸಿನಿಮಾಗಳು... ಹೀಗೆ ಎಲ್ಲವೂ ಇರುತ್ತವೆ. ಅದೊಂದು ಪುಟ್ಟ ಇಂಡಿಯಾ! ಕಾಲಾಯ ತಸ್ಮೈನಮಃ!

ಮೆಡಿಕೇರ್ ಎಂಬ ಕಲ್ಪ ವೃಕ್ಷ

ಲಿಂಡನ್ ಜಾನ್ಸನ್ ಅಮೆರಿಕಾದ ಅಧ್ಯಕ್ಷನಾಗಿದ್ದಾಗ 'ಮೆಡಿಕೇರ್' ಎಂಬ ಆರೋಗ್ಯ ವಿಮೆ ಜಾರಿಗೆ ಬಂತು. ಅರವತ್ತೈದು ವರ್ಷ ದಾಟಿದ ಪ್ರತಿಯೊಬ್ಬ ಅಮೆರಿಕನ್ ಪ್ರಜೆಗೂ ಮತ್ತು ಕಾನೂನುಬದ್ಧವಾಗಿ ವಲಸೆ ಬಂದು ಅಮೆರಿಕಾದಲ್ಲಿ ಬಹಳ ವರ್ಷಗಳಿಂದ ನೆಲೆಸಿದವರಿಗೂ ಖಾಯಿಲೆ ಬಂದಾಗ ಆಸ್ಪತ್ರೆಯ ಬಹುತೇಕ ಖರ್ಚನ್ನು ಈ ಮೆಡಿಕೇರ್ ನೋಡಿಕೊಳ್ಳುತ್ತದೆ. 'ನಮ್ಮ ದೇಶವನ್ನು ಈ ಮಟ್ಟಕ್ಕೆ ತಂದ ಹಿರಿಯರಿಗೆ ಇದು ನಮ್ಮ ಋಣ' ಎಂಬ ಉದಾತ್ತ ಕಲ್ಪನೆಯಿಂದ ಶುರುವಾಗಿದ್ದು ಮೆಡಿಕೇರ್. ಬರುಬರುತ್ತಾ ಅದರ ದುರ್ಬಳಕೆ ಜಾಸ್ತಿಯಾಗುತ್ತಿದೆ. ಥೆರಪಿ ಮಾಡದಿದ್ದರೂ ಮಾಡಿದೆ ಅಂತ ಸುಳ್ಳು ಹೇಳಿ ಸಿಕ್ಕಿಬಿದ್ದವರಿದ್ದಾರೆ! ಇತ್ತೀಚೆಗೆ ಡೆಟ್ರಾಯಿಟ್‌ನಲ್ಲಿ ಭಾರತೀಯರಿಬ್ಬರು ನಡೆಸುತ್ತಿದ್ದ ಥೆರಪಿ ಕಂಪೆನಿಯಲ್ಲಿ, ಹೀಗೆ 'ಸತ್ತವರಿಗೆ ಥೆರಪಿ ಮಾಡಿದ್ದೀವಿ' ಅಂತ ಹೇಳಿ ಸಿಕ್ಕಿಕೊಂಡರು ಅಂತ ಹೇಳುವುದಕ್ಕೆ ಬೇಜಾರಾಗುತ್ತದೆ. ರೋಗಿಗಳಿಗೆ ವ್ಹೀಲ್ ಛೇರ್, ವಾಕರ್ ಕೊಟ್ಟೆವು ಅಂತ ಸುಳ್ಳು ಹೇಳಿ ದುಡ್ಡು ಸುಲಿದವರಿದ್ದಾರೆ! ಸಿಕ್ಕಿ ಹಾಕಿಕೊಂಡವರು ಕೆಲವರಾದರೆ ಸಿಕ್ಕಿ ಬೀಳದೆ ಸುಲಿದವರೆಷ್ಟೋ! ಅಲ್ಲದೆ ಹುಷಾರಾದ ಮೇಲೂ ರೋಗಿಗಳನ್ನು ನರ್ಸಿಂಗ್ ಹೋಮಿನಲ್ಲೇ ನಾಲ್ಕು ದಿನ ಹೆಚ್ಚಿಗೆ ಇಟ್ಟುಕೊಂಡು ಸುಲಿಯುವುದು, ಥೆರಪಿ ಮಾಡಿಸಲು ಸಾಧ್ಯವಿಲ್ಲದವರನ್ನು ಕೂಡಾ ಹಾಕಿಕೊಂಡು ಥೆರಪಿ ಮಾಡಿದ್ದೀವಿ ಅಂತ ಹೇಳಿ ಸುಲಿಯುವುದು ಎಲ್ಲವೂ ನಡೆಯುತ್ತಿದೆ! ಮೆಡಿಕೇರ್‌ನ ಉಳಿಗಾಲಕ್ಕೇ ಸಂಚಕಾರ ಬಂದಿದೆ!

ಮೆಡಿಕೇರ್ ಒಂದು ಖಾಯಿಲೆಗೆ ಒಬ್ಬರಿಗೆ ನೂರು ದಿನಗಳ ಕಾಲ ಆಸ್ಪತ್ರೆ ಅಥವಾ ನರ್ಸಿಂಗ್ ಹೋಮಿನಲ್ಲಿ ಇರಲು ದುಡ್ಡು ಕೊಡುತ್ತದೆ. ಆಮೇಲೆ ಬೇರೆ ಏನಾದರೂ ವ್ಯವಸ್ಥೆ ಮಾಡಲೇಬೇಕು. ಕ್ಯಾನ್ಸರ್, ಸ್ಟ್ರೋಕ್‌ನಂತಹ ಕೆಲವು ಖಾಯಿಲೆಗಳಿಗೆ ನೂರು ದಿನವೂ ಸಾಕಾಗುವುದಿಲ್ಲ. ಆ ಗಡುವು ಸಮೀಪಿಸುತ್ತಿದ್ದಂತೆ ಮುಂದೇನು? ಎಂದು ದಿಕ್ಕೆಟ್ಟವರನ್ನು ನೋಡಿದಾಗ 'ಅಯ್ಯೋ' ಅನ್ನಿಸುತ್ತೆ. ಇಳಿವಯಸ್ಸಿನಲ್ಲಿ ಈ ತರಹದ ಬವಣೆಗೊಳಗಾಗಿ ಗಂಡನ ಬಗ್ಗೆಯೋ ಹೆಂಡತಿಯ ಬಗ್ಗೆಯೋ ತಲೆ ಕೆಡಿಸಿಕೊಂಡು ಕೊರಗುವುದು ಅಮೆರಿಕೆಯಂತಹ ಶ್ರೀಮಂತ ರಾಷ್ಟ್ರದಲ್ಲೂ ನಡೆಯುತ್ತದೆ. 'ಬೆಟ್ಟಿ' ಅಂತಹ ಒಂದು ಹೆಂಗಸು. ಸ್ಟ್ರೋಕ್ ಆದ ಗಂಡನನ್ನು ಮನೆಗೆ ಕರೆದುಕೊಂಡು

ಹೋಗುವಾಗ ಹೆದರಿಬಿಟ್ಟಿದ್ದಳು. ಅವಳಿಗೆ ನಾವೇ ಅವನನ್ನು ಹೇಗೆ ಕೂರಿಸಬೇಕು, ಹೇಗೆ ಮಲಗಿಸಬೇಕು ಅಂತ ಟ್ರೈನಿಂಗ್ ಕೊಟ್ಟಿದ್ದೆವು. ಇಂಡಿಯಾದಲ್ಲೂ ಹೀಗಾಗುತ್ತಾ? ನಾವು ವಲಸೆ ಬಂದ ಮೇಲೆ, ಕಳೆದ ಮೂವತ್ತು-ನಲವತ್ತು ವರ್ಷಗಳಲ್ಲಿ ಅಲ್ಲೂ ಇಂತಹ ಸಮಸ್ಯೆಗಳು ಶುರುವಾಗಿವೆ.

ಇನ್ನು ಅರವತ್ತೈದು ವರ್ಷದ ಒಳಗಿನವರು, ಆರೋಗ್ಯ ವಿಮೆ ಇಲ್ಲದೆ ಕತ್ತಿಯ ಅಲುಗಿನ ಮೇಲೆ ನಡೆಯುತ್ತಿರುವವರು ಅಮೆರಿಕಾದಲ್ಲಿ ಮಿಲಿಯಗಟ್ಟಲೆ ಇದ್ದಾರೆ. ಅಂತಹವರು ನಮ್ಮ ನರ್ಸಿಂಗ್ ಹೋಮಿಗೆ ಬರುವುದು ಕಡಿಮೆ. ಹಾಗಾಗಿ ಆ ಪರಿಸ್ಥಿತಿಯ ಬಗ್ಗೆ ನಾನು ಏನೂ ಹೆಚ್ಚಿಗೆ ಹೇಳಲಾರೆ.

ಕಣ್ಣೀರು ಎಲ್ಲೆಲ್ಲೂ ಉಪ್ಪೇ

ಮನುಷ್ಯ-ಮನುಷ್ಯನ ನಡುವೆ ಇರುವ ಗೋಡೆಯನ್ನು ಕರಗಿಸಬಲ್ಲ ಒಂದೇ ಒಂದು ದ್ರವ ಯಾವುದು ಗೊತ್ತಾ? ಕಣ್ಣೀರು. ನನಗೆ ಬಂದ ಪೇಷೆಂಟುಗಳಲ್ಲಿ ಡಾಕ್ಟರು, ಲಾಯರು, ಜಡ್ಜುಗಳು, ಟ್ಯಾಕ್ಸಿ ಡ್ರೈವರ್, ಡ್ರಗ್ ಅಡಿಕ್ಟ್ ಎಲ್ಲರೂ ಇದ್ದರು. ಆದರೆ ಕೊನೆಯಲ್ಲಿ ಉಳಿದದ್ದೇನು? ಅವರು ಮನುಷ್ಯರು ಎಂಬ ಭಾವ ಮಾತ್ರ. ಜೀವನದ ಸಂಕಟದ ಸಂದರ್ಭಗಳಲ್ಲಿ, ಮುದಿತನದಲ್ಲಿ, ವ್ಯಾಧಿಗ್ರಸ್ತ ದೇಹದಲ್ಲಿರುವಾಗ ನಾವು ಶ್ರೀಮಂತರು, ಬಿಳಿಯರು, ಮೇಲು ಜಾತಿಯವರು, ಅಮೆರಿಕನ್, ಇಂಡಿಯನ್, ಕ್ರಿಶ್ಚಿಯನ್, ಹಿಂದೂ ಎಂಬ ಎಲ್ಲ ಗೋಡೆಗಳೂ ಕರಗಿ ಹೋಗುತ್ತವೆ. ಕಡೆಗೆ ನಾವು ಮನುಷ್ಯರು ಎಂಬ ಭಾವ ಮಾತ್ರ ಸ್ಥಾಯಿಯಾಗಿ ನಿಲ್ಲುತ್ತದೆ. ಕೆಲವರಿಗಂತೂ ಅದೂ ಮರೆಯಾಗಿ ಹೋಗುತ್ತದೆ. ಮಗುವಾಗಿ ಇದೇ ಅವಸ್ಥೆಯಲ್ಲಿ ಶುರು ಮಾಡಿದ ಯಾತ್ರೆ ಮುದಿತನದಲ್ಲಿ ಮತ್ತೆ ಅದೇ ಅವಸ್ಥೆಯಲ್ಲಿ ಕೊನೆಗೊಳ್ಳುತ್ತದೆ. ಮಧ್ಯೆ ಕೊಟ್ಟು ಕೊಂಡು ಮಾಡಿದ ಪ್ರೀತಿ, ಸ್ನೇಹ, ವಿಶ್ವಾಸ, ಕರುಣೆ, ಉಪಕಾರ ಮಾತ್ರ ಬದುಕಿಗೆ ಅರ್ಥ ಕೊಡುತ್ತದೆ. ಅಷ್ಟೇ ಅಲ್ಲವೆ ಜೀವನ!

ನಾನು ಮತ್ತೆ ಕಾಲೇಜಿಗೆ ಮಣ್ಣು ಹೊತ್ತು, ಈ ಉದ್ಯೋಗ ಅಂತ ಮಾಡಿ ಏನು ಪಡೆದೆ? ದುಡ್ಡು ಪಡೆದದ್ದು ಹೌದು. ಏನೋ ಒಂದು ಸಾರ್ಥಕ ಭಾವ, ಆತ್ಮ ತೃಪ್ತಿ ಪಡೆದದ್ದೂ ಹೌದು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ನಾನು ಪಡೆದ ಅತ್ಯಂತ ಮೌಲಿಕ ವಸ್ತು ಅಂದರೆ ವಿನೀತ ಭಾವ, ಹ್ಯುಮಿಲಿಟಿ. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ– 'There, but for the grace of God, go I' (ದೇವರ ಒಂದು ಕೃಪಾ ಕಟಾಕ್ಷ ಇರುವ ಹೊತ್ತಿಗೆ ನಾನು ಇಷ್ಟರಮಟ್ಟಿಗೆ ಇದ್ದೀನಿ) ಅಂತ. ಅದರ ನಿಜವಾದ ಅರ್ಥವನ್ನು ನಾನು ಜೀವಂತವಾಗಿ ಅನುಭವಿಸಿದ್ದೇ ಈ ವೃತ್ತಿಯಲ್ಲಿ. ಈ ಬಗೆಯ ಅನುಭವಗಳನ್ನು ನನಗೆ ತಂದುಕೊಟ್ಟ ಎಲ್ಲ ಪೇಷೆಂಟುಗಳಿಗೂ ನನ್ನ ಅನಂತ ಧನ್ಯವಾದಗಳು.

ಬೇರು ಸೂರು

ಅಮೆರಿಕದಲ್ಲಿ ದೇವಸ್ಥಾನಗಳ ನಿರ್ಮಾಣ ಮತ್ತು ನಿರ್ವಹಣೆ



– ಇಂಗ್ಲಿಷ್ ಮೂಲ: ಎ.ಎಸ್.ರಾಘವನ್, ನಿರುಪಮಾ ರಾಘವನ್

ಅನುವಾದ: ಶ್ರೀವತ್ಸ ಜೋಶಿ

ಭಾಗ 1

ಮೊದಲಿಗೆ ಒಂದು ನಿವೇದನೆಯಿಂದಲೇ ಆರಂಭಿಸುತ್ತೇನೆ, ಏನೆಂದರೆ ನಾನು ಅಂಥ ಮಹಾ ದೈವಭಕ್ತನಲ್ಲ. ನನ್ನ ಅಮ್ಮನ ಕಡೆಯಿಂದ ಮುತ್ತಜ್ಜ ಬೆಂಗಳೂರು ಮತ್ತು ಮೇಲುಕೋಟೆಯಲ್ಲಿನ ಹಲವು ದೇವಸ್ಥಾನಗಳ ನಿಕಟ ಸಂಪರ್ಕ ಇದ್ದವರೇನೋ ಹೌದು; ಅವರ ವಂಶಜರು ಇವತ್ತಿಗೂ ಆ ದೇವಸ್ಥಾನಗಳ ಮೊಕ್ತೇಸರ ವರ್ಗದಲ್ಲಿರುವುದೂ ಹೌದು; ನನ್ನ ಹೆತ್ತವರು ಸಹ ತಕ್ಕಮಟ್ಟಿಗೆ ದೈವಭಕ್ತಿಯುಳ್ಳವರೇ ಮತ್ತು ನಮಗೆಲ್ಲ ಧಾರ್ಮಿಕ ಆಚಾರವಿಚಾರಗಳನ್ನು ಕಲಿಸಿದವರೇ ಆಗಿದ್ದರು ಎನ್ನುವುದೂ ನಿಜ. ನನ್ನ ಬಾಲ್ಯದಲ್ಲಿ ನಾವು ಕನಕಪುರದಲ್ಲಿದ್ದಾಗ ನನ್ನ ತಂದೆ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ದಿನಗಳಲ್ಲಿ, ದೇವಸ್ಥಾನಕ್ಕೆ ನಾವು ವರ್ಷಕ್ಕೆ ಒಂದೆರಡು ಸಲ ಹೋಗುತ್ತಿದ್ದರೆ ಅದೇ ಹೆಚ್ಚು. ನಮ್ಮ ತಂದೆಯವರಿಂದಲೇ ಸೇವಾರ್ಥವೇನಾದರೂ ಇದ್ದರೆ ಆಗ ಮಾತ್ರ. ಮತ್ತೆ ಕಾಲೇಜು ವಿದ್ಯಾಭ್ಯಾಸದ ವೇಳೆಯಂತೂ ದೇವಸ್ಥಾನಕ್ಕೆ ಭೇಟಿಯೆಂದರೆ ಪರೀಕ್ಷೆಗಳ ಹಿಂದಿನ ದಿನ ಮಾತ್ರ! ಮುಂಬೈಯಲ್ಲಿ ಉದ್ಯೋಗ ಹಿಡಿದ ಮೇಲೂ ಅಂಥ ಪರಿವರ್ತನೆ ಏನೂ ಆಗಲಿಲ್ಲ. ದೈವಭಕ್ತಿ, ದೇವಸ್ಥಾನಕ್ಕೆ ಭೇಟಿ ಮುಂತಾದವೆಲ್ಲ ಅಗ್ರಪ್ರಾಶಸ್ತ್ಯವೇನೂ ಪಡೆಯಲಿಲ್ಲ.

ಮದುವೆ ಆದ ಮೇಲೆ ಮಾತ್ರ ಗಮನಾರ್ಹ ಬದಲಾವಣೆ ಕಂಡುಬಂತು. ನನ್ನ ಹೆಂಡತಿಯ ಕಡೆಯವರು ಹೆಚ್ಚುಹೆಚ್ಚಾಗಿ ದೇವಸ್ಥಾನಕ್ಕೆ ಹೋಗುವ ಪೈಕಿಯವರು. ನನ್ನ ಸಹೋದರಿಯನ್ನು ಮದುವೆ ಮಾಡಿಕೊಂಡ ಕುಟುಂಬದವರೂ ಧಾರ್ಮಿಕ ಆಚರಣೆಗಳಿಗೆ ಮಹತ್ವ ಕೊಡುವವರೇ. ಕ್ರಮೇಣ ನನ್ನ ಹೆತ್ತವರ ಮನೆಯಲ್ಲೂ ಪೂಜೆ ಪುನಸ್ಕಾರಗಳ ಗಾಳಿ ಬೀಸತೊಡಗಿತು. 1978ರಲ್ಲಿ ನನ್ನ ತಂದೆಯವರ ನಿಧನಾನಂತರ ನನ್ನ ಅಮ್ಮ ಮನೆಯಲ್ಲಿ ಆಗಾಗ ಪೂಜೆಗಳನ್ನು ಹಮ್ಮಿಕೊಳ್ಳುತ್ತಿದ್ದರು. ಬಹುಶಃ ಅದು ಅವರಿಗೊಂದು ರೀತಿ ಮಾನಸಿಕ ಸ್ಥೈರ್ಯ ಕೊಡುತ್ತಿತ್ತು. ನಾನು ವಾಷಿಂಗ್ಟನ್‌ಗೆ ಬಂದಮೇಲೆ ನಮ್ಮೂರಿಗೆ ಭೇಟಿಕೊಡುವಾಗೆಲ್ಲ ಧಾರ್ಮಿಕ ಆಚರಣೆಗಳಲ್ಲಿ, ದೇವಸ್ಥಾನಗಳಿಗೆ ಭೇಟಿಯಲ್ಲಿ ಪಾಲ್ಗೊಳ್ಳುತ್ತಿದ್ದೆ.

1980ರ ದಶಕದಲ್ಲಿ ವಾಷಿಂಗ್ಟನ್ ಮೆಟ್ರೊಪಾಲಿಟನ್ ಪ್ರದೇಶದಲ್ಲಿ ಕೆಲವು ಹಿಂದೂ ದೇವಾಲಯಗಳ ನಿರ್ಮಾಣದ ಚಳವಳಿ ಆರಂಭವಾಗಿತ್ತು. ಈಗಿರುವ ಶ್ರೀ ಶಿವವಿಷ್ಣು ದೇವಾಲಯದ ಆರಂಭಿಕ ಸಮಿತಿಯು ಮೇರಿಲ್ಯಾಂಡ್‌ನ 'ಲನ್ಹಮ್' ಎಂಬಲ್ಲಿ ಜಮೀನು ಕೊಂಡುಕೊಂಡು 1984ರ ಸುಮಾರಿಗೆ ಒಂದು ಪುಟ್ಟ 'ಬಾಲಾಲಯ'ವನ್ನೂ ಆರಂಭಿಸಿತ್ತು. ಬೃಹತ್ ದೇವಾಲಯದ ನಿರ್ಮಾಣಕ್ಕೆ 1989ರಲ್ಲಿ ಮತ್ತು 1995ರಲ್ಲಿ ಹಂತಹಂತವಾಗಿ ಯೋಜನೆಗಳು ಆರಂಭವಾದವು. ನಾನೂ ಒಂದಿಷ್ಟು ಧನಸಹಾಯದೊಂದಿಗೆ ನೆರವಾದೆ– ಬಹುತೇಕವಾಗಿ ಸಾಮಾಜಿಕ ಬಾಧ್ಯತೆಯಿಂದಲೇ ಹೊರತು ನನ್ನಲ್ಲಿ ಮಹಾನ್ ದೈವಭಕ್ತಿ ಇತ್ತೆಂದೇನಲ್ಲ.

ಶಿವವಿಷ್ಣು ದೇವಸ್ಥಾನದ ಜೊತೆ ನಾನು ಮೊದಲಾಗಿ ತೊಡಗಿಸಿಕೊಂಡದ್ದೆಂದರೆ 1995ರಲ್ಲಿ ದೇವಸ್ಥಾನದ ಧರ್ಮದರ್ಶಿಗಳ ಮಂಡಳಿಯು ನನ್ನನ್ನು ಆರ್ಥಿಕ ಸಮಿತಿಯ ಸದಸ್ಯನಾಗುವಂತೆ ಕೋರಿಕೊಂಡಾಗ. ನನ್ನ ಕಾರ್ಯಕ್ಷೇತ್ರ ಮತ್ತು ಔದ್ಯೋಗಿಕ ಅನುಭವವೂ ಅರ್ಥಶಾಸ್ತ್ರ ಸಂಬಂಧಿತವೇ ಆಗಿದ್ದರಿಂದ ದೇವಸ್ಥಾನದ ಆರ್ಥಿಕ ಸಮಿತಿಯ ಕೆಲಸಗಳ ಹೊಣೆ ನನಗೆ ಭಾರವೆನಿಸಲಿಲ್ಲ. ಅಷ್ಟೇ ಅಲ್ಲ, ಇನ್ನೊಂದು ಗಮನಾರ್ಹ ಸಂಗತಿ ಏನೆಂದರೆ, 1995ರಲ್ಲಿ ನಮ್ಮ ಆರ್ಥಿಕ ಸಮಿತಿಯು ಮಾಡಿದ್ದ ಶಿಫಾರಸ್ಸುಗಳು ಇವತ್ತಿನ ದಿನಕ್ಕೂ ಶಿವವಿಷ್ಣು ದೇವಸ್ಥಾನದ ಆಡಳಿತ ಸೂತ್ರದಲ್ಲಿ ಭದ್ರವಾಗಿ ನೆಲೆನಿಂತಿವೆ; ದೇಶಕ್ಕೆ ದೇಶವೇ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುವಾಗ, ದೇವಸ್ಥಾನಗಳೂ ಸೇರಿದಂತೆ ಎಲ್ಲ ಸಂಘಸಂಸ್ಥೆಗಳ ಮೇಲೂ ಅದರ ಹೊಡೆತ ಬಿದ್ದಿರುವಾಗ, ಅವತ್ತು ನಾವು ರೂಪಿಸಿದ್ದ ಆರ್ಥಿಕ ನೀತಿ ದೇವಸ್ಥಾನದ ಆಡಳಿತ ಯಂತ್ರವನ್ನು ಶಿಥಿಲವಾಗದಂತೆ ನೋಡಿಕೊಂಡಿದೆ ಎನ್ನುವುದು ನಿಜಕ್ಕೂ ಹೆಮ್ಮೆಯ ವಿಷಯ. 1998ರಲ್ಲಿ ನನ್ನನ್ನು ದೇವಸ್ಥಾನದ ಧರ್ಮದರ್ಶಿ ಮಂಡಳಿಯ ಸದಸ್ಯನಾಗಿ, ಅಂದರೆ, ಒಬ್ಬ ಟ್ರಸ್ಟಿಯನ್ನಾಗಿ ಸೇರಿಕೊಳ್ಳುವಂತೆ ಕೋರಿದರು. ಅದೇ ವೇಳೆಗೆ ದೇವಸ್ಥಾನದ ರಾಜಗೋಪುರ ನಿರ್ಮಾಣ ಮತ್ತು ಕಟ್ಟಡ ಸಂಕೀರ್ಣದ ಬೆಳವಣಿಗೆ ಯೋಜನೆಗಳೂ ರೂಪುಗೊಂಡವು. ದೇವಸ್ಥಾನದ ಇತಿಹಾಸದ ಬೃಹತ್ ಕಾಮಗಾರಿಯ ಯೋಜನೆ ಅದು. 2002 ಮತ್ತು 2003ರಲ್ಲಿ ನಾನು ವಿಶ್ವಸ್ಥ ಮಂಡಳಿಯ ಅಧ್ಯಕ್ಷನೂ ಆದೆ. ಆಗಲೇ ರಾಜಗೋಪುರ ನಿರ್ಮಾಣಕಾರ್ಯ ಮುಗಿದು ಅದರ ನೆನಪಿಗಾಗಿ ಮಹಾಕುಂಭಾಭಿಷೇಕ ಸಮಾರಂಭವನ್ನೂ ಆಯೋಜಿಸಲಾಯ್ತು. ಜತೆಯಲ್ಲೇ, ಮೂಲದೇವಸ್ಥಾನ ಕಟ್ಟಡಕ್ಕೆ ಆಗಲೇ ಹನ್ನೆರಡು ವರ್ಷಗಳಾಗುತ್ತ ಬಂದಿದ್ದರಿಂದ ಜೀರ್ಣೋದ್ಧಾರ ಕೆಲಸಗಳೂ ನಡೆದವು. ವಾಷಿಂಗ್ಟನ್ ಪ್ರದೇಶದಲ್ಲಿ 'ಯುನೈಟೆಡ್ ಹಿಂದೂ ಏಂಡ್ ಜೈನ್ ಟೆಂಪಲ್ಸ್ ಆಫ್ ವಾಷಿಂಗ್ಟನ್' ಎಂಬ ಸಂಸ್ಥೆಯೊಂದಿದೆ, ಇಲ್ಲಿನ 14 ಬೇರೆಬೇರೆ ದೇವಸ್ಥಾನಗಳನ್ನು ಅದು ಸದಸ್ಯರನ್ನಾಗಿ ಹೊಂದಿದೆ. 2002ರಲ್ಲಿ ಆ ಸಂಸ್ಥೆಯ ಆಧಿಪತ್ಯದ ಪಾಳಿ ಶ್ರೀಶಿವವಿಷ್ಣು ದೇವಸ್ಥಾನದ್ದಾಗಿತ್ತು. ಹಾಗಾಗಿ ಆ ವರ್ಷಕ್ಕೆ ನಾನೇ ಆ ಸಂಸ್ಥೆಯ ಅಧ್ಯಕ್ಷನೂ ಆಗಬೇಕಾಯ್ತು. ಈಗ ನಾನು ಆ ಸಂಸ್ಥೆಯಲ್ಲಾಗಲೀ,

ಶಿವವಿಷ್ಣು ದೇವಸ್ಥಾನದ ಆಡಳಿತ ಮಂಡಳಿಯಲ್ಲಾಗಲೀ ನಿರ್ದೇಶಕ ಸ್ಥಾನಗಳಲ್ಲಿಲ್ಲ. ಆದರೆ ಸಕ್ರಿಯ ಕಾರ್ಯಕರ್ತನಾಗಿ, ಸ್ವಯಂಸೇವಕನಾಗಿ ಎರಡೂ ಸಂಸ್ಥೆಗಳೊಂದಿಗೆ ನನ್ನ ನಿಕಟ ಸಂಬಂಧವಿದೆ.

ಇಲ್ಲಿನ ದೇವಸ್ಥಾನಗಳೊಂದಿಗೆ ನನಗೆ ಇಷ್ಟು ಸಂಪರ್ಕವಿರುವ ಹಿನ್ನೆಲೆಯಲ್ಲಿ, ಅಮೆರಿಕದ ನೆಲದಲ್ಲಿ ಹಿಂದೂ ದೇವಾಲಯಗಳನ್ನು ನಡೆಸುವ ಸವಾಲುಗಳೇನು ಎಂದು ನನ್ನ ಸ್ವಾನುಭವದಿಂದ ಕೆಲವು ಮಾತುಗಳನ್ನು ಉಲ್ಲೇಖಿಸಲು ಇಷ್ಟಪಡುತ್ತೇನೆ.

ಉನ್ನತ ಗುಣಮಟ್ಟ ನಿರ್ವಹಣೆ

ನಾನು ಕೋಶಾಧಿಕಾರಿಯಾಗುವವರೆಗೂ ಹಣಕಾಸಿನ ಕೆಲಸಗಳನ್ನೆಲ್ಲ ನನ್ನ ನಿಕಟಪೂರ್ವ ಸದಸ್ಯ, ಒಂದಿಬ್ಬರು ಸ್ವಯಂಸೇವಕರ ನೆರವಿನೊಂದಿಗೆ ಚೆನ್ನಾಗಿಯೇ ನಿಭಾಯಿಸಿಕೊಂಡು ಬಂದಿದ್ದರು. ಅವರೊಬ್ಬ ಕಠಿಣ ದುಡಿಮೆಯ ವ್ಯಕ್ತಿ. ಚಾರ್ಟರ್ಡ್ ಅಕೌಂಟಿಂಗ್ ಅವರ ಕಾರ್ಯಕ್ಷೇತ್ರ. ಹಣಕಾಸು ಇಲಾಖೆಯ ಜವಾಬ್ದಾರಿ ವಹಿಸಿಕೊಂಡ ಮೇಲೆ ನನಗನಿಸಿತು– ಇಷ್ಟು ದೊಡ್ಡ ದೇವಸ್ಥಾನಕ್ಕೆ ಒಬ್ಬ ಪೂರ್ಣಕಾಲಿಕ ಅಕೌಂಟೆಂಟ್‌ನ ಅವಶ್ಯಕತೆಯಿದೆ, ಎಂದು. ಆದರೆ ದೇವಸ್ಥಾನದ ಆದಾಯವು, ಸಂಬಳ ಕೊಟ್ಟು ಕೆಲಸ ಮಾಡಿಸುವ ಮಟ್ಟದಲ್ಲಿರಲಿಲ್ಲ. ಹಾಗಾಗಿ ನಾನು ಮೂವರು ಅಕೌಂಟಿಂಗ್ ಸದಸ್ಯರ 'ಸಹಾಯಕ ಕೋಶಾಧಿಕಾರಿಗಳ ತಂಡ'ವೊಂದನ್ನು ರಚಿಸಿದೆ. ಅವರೆಲ್ಲ ಸ್ವಯಂಸೇವಕರೇ. ಅವರಲ್ಲಿ ಪ್ರತಿಯೊಬ್ಬರಿಗೂ ಮತ್ತೆ ಒಂದಿಷ್ಟು ಅಕೌಂಟಿಂಗ್ ಜ್ಞಾನವಿರುವ ಸ್ವಯಂಸೇವಕರನ್ನು ಸೇರಿಸಿಕೊಂಡು ಕೆಲಸ ನಡೆಸುವ ಸ್ವಾತಂತ್ರ್ಯ ಕೊಟ್ಟಿದ್ದೆ. ಒಬ್ಬೊಬ್ಬರಿಗೂ ಒಂದೊಂದು ಪ್ರಮುಖ ಜವಾಬ್ದಾರಿಯನ್ನೂ ವಹಿಸಿದೆ. ಮೊದಲೆಲ್ಲ ಈ ಕ್ರಮವನ್ನು ನೋಡಿ ಜನ ಹಾಸ್ಯಮಾಡಿದ್ದೂ ಇದೆ– ಒಬ್ಬನೇ ಅಕೌಂಟೆಂಟ್ ಇದ್ದ, ಈಗ ದೊಡ್ಡದೊಂದು ಡಿಪಾರ್ಟ್‌ಮೆಂಟ್ ಬಂದಿದೆ ಎಂದು. ಆದರೆ ಯಾವಾಗ ಈ ನಮ್ಮ ಸಮಿತಿಯ ಕಾರ್ಯಭಾರಕ್ಕೆ ದೇವಸ್ಥಾನದ ಆಡಳಿತಗಾರರಿಂದ, ದೇವಸ್ಥಾನಕ್ಕೆ ಸಾಮಗ್ರಿಗಳನ್ನು ಪೂರೈಸುವ ವ್ಯಾಪಾರಸ್ಥರಿಂದ, ಲೆಕ್ಕಪತ್ರ ತಪಾಸಣೆಗಾರರಿಂದ ಪ್ರಶಂಸೆ ಬರತೊಡಗಿತೋ, ಆಗ ಹಾಸ್ಯ ಮಾಡುವವರು ಬಾಯ್ಮುಚ್ಚಬೇಕಾಯ್ತು. ಮುಂದೆ ಎಂಟು ವರ್ಷಗಳವರೆಗೂ ಕೋಶಾಧಿಕಾರಿಗಳ ಆಯ್ಕೆಯೂ ಸುಲಭವಾಯ್ತು, ಏಕೆಂದರೆ ಸಹಾಯಕ ಕೋಶಾಧಿಕಾರಿಗಳೆಲ್ಲ ಒಮ್ಮೆಲೇ ನಿವೃತ್ತರಾಗುತ್ತಿರಲಿಲ್ಲ. ಮೂವರು ಸಹಾಯಕ ಕೋಶಾಧಿಕಾರಿಗಳು ಒಬ್ಬೊಬ್ಬರಾಗಿ ಆಮೇಲೆ ಮುಖ್ಯ ಕೋಶಾಧಿಕಾರಿ ಸ್ಥಾನವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ನಾನಿದನ್ನು ಇಷ್ಟು ಒತ್ತುಕೊಟ್ಟು ಹೇಳುತ್ತಿರುವುದೇಕೆಂದರೆ, ಸ್ವಯಂಸೇವಕರ ಕೆಲಸ ಎಂದಮಾತ್ರಕ್ಕೇ ಅದು ಕಳಪೆ ಗುಣಮಟ್ಟದ್ದೆಂದು ಅಂದುಕೊಳ್ಳಬೇಕಾಗಿಲ್ಲ. ಸರಿಯಾದ ಕೆಲಸಕ್ಕೆ ಸರಿಯಾದ ಅರ್ಹತೆಯುಳ್ಳ ವ್ಯಕ್ತಿಗಳು ಸಿಕ್ಕರೆ ಗುಣಮಟ್ಟ ತನ್ನಿಂತಾನೇ ಬರುತ್ತದೆ.

ಬೇರು ಸೂರು

ಇನ್ನೊಂದು ಅಂಶವೆಂದರೆ, ದೊಡ್ಡದೊಡ್ಡ ಸಂಸ್ಥೆಗಳಂತೆಯೇ, ಸ್ವಯಂಸೇವಾ ಸಂಘಟನೆಗಳು ಸಹ ಪದಾಧಿಕಾರಿಗಳ ಆಯ್ಕೆಯ ವಿಷಯದಲ್ಲಿ ವರ್ಷಗಳಿಂದಲೂ ಮುಂದಾಲೋಚನೆ ಇಟ್ಟುಕೊಂಡಿದ್ದರೆ ಒಳ್ಳೆಯದಾಗುತ್ತದೆ.

ನಾನು ಗಮನಿಸಿದಂತೆ, ಹೆಚ್ಚಿನ ಸ್ವಯಂಸೇವಾ ಸಂಸ್ಥೆಗಳು ಸಾಲ ಮಾಡಿ ದುಡ್ಡು ಜೋಡಿಸುವುದನ್ನು ಇಷ್ಟಪಡುವುದಿಲ್ಲ. ದೇವಸ್ಥಾನಗಳು ಆದಷ್ಟು ಮಟ್ಟಿಗೆ ಈ ನೀತಿಯನ್ನು ಅನುಸರಿಸಿದರೆ ಒಳ್ಳೆಯದೇ ಹೌದಾದರೂ, ದೊಡ್ಡದೊಡ್ಡ ಪ್ರಾಜೆಕ್ಟ್‌ಗಳ ವೇಳೆ ಹಣಕಾಸು ಯೋಜನೆಗಳು ಶಕ್ತಿಯುತವಾಗಿ ಇರಬೇಕು. ರಾಜಗೋಪುರ ನಿರ್ಮಾಣದ ವೇಳೆ ಮೊದಲು ಆಗಿದ್ದ ನಿರ್ಣಯದಂತೆ ನಿರ್ಮಾಣ ವೆಚ್ಚದ ಅಷ್ಟೂ ಮೊತ್ತವು ದತ್ತಿಸಂಗ್ರಹದಿಂದ ಜಮೆ ಆಗುವವರೆಗೂ ಯಾವುದೇ ಕಾಂಟ್ರಾಕ್ಟ್ ಸಹಿ ಮಾಡಲಿಕ್ಕಿಲ್ಲ ಎಂದು. ನಾವು ಒಂದೆರಡು ವರ್ಷ ಕಾದೆವು, ಆದರೂ ನಾಲ್ಕನೇ ಒಂದಂಶದಷ್ಟೂ ಧನಸಂಗ್ರಹವಾಗಲಿಲ್ಲ. ಕೆಲವರ ಸಹನೆ ಕಟ್ಟೆಯೊಡೆಯಿತು. ಒಂದಿಬ್ಬರು ಭಕ್ತಾದಿಗಳಂತೂ ಬಡ್ಡಿರಹಿತ ವೈಯಕ್ತಿಕ ಸಾಲ ಕೊಡುವುದಕ್ಕೂ ಮುಂದೆ ಬಂದರು. ಆ ಮೊತ್ತ ಇಡೀ ಯೋಜನೆಗೆ ಸಾಲದು, ನಿಜ. ಆದರೂ ನಾವು ಕಾಮಗಾರಿಯನ್ನು ಆರಂಭಿಸಬಹುದೆಂದು ಟ್ರಸ್ಟಿಗಳಿಗೆ ಭರವಸೆ ತುಂಬಲು ಸಾಕಾಯ್ತು. ನಾನು ನನ್ನ ಉದ್ಯೋಗದಲ್ಲಿಯೂ ನೋಡಿರುವಂತೆ ಎಷ್ಟೋ ದೊಡ್ಡ ಕಂಪನಿಗಳಲ್ಲೂ ಕಾಮಗಾರಿ ವೆಚ್ಚ ಮತ್ತು ಅದಕ್ಕೆ ತಕ್ಕ ಸಂಪನ್ಮೂಲದ ಸರಿಯಾದ ಯೋಜನೆಯಿಲ್ಲದೆ ಕಾಮಗಾರಿಗಳು ಒಂದೋ ಆರಂಭವಾಗುವುದೇ ಇಲ್ಲ, ಅಥವಾ ನಡುವೆ ನಿಂತು ಹೋಗುತ್ತವೆ. ಬ್ಯಾಂಕ್‌ಗಳಿಂದ ಸಾಲ ಪಡೆಯುವಂತೆ ನಾನು ದೇವಸ್ಥಾನದ ವಿಶ್ವಸ್ಥ ಮಂಡಳಿಗೆ ಸಲಹೆ ನೀಡಿದೆ, ಅದು ಮಾನ್ಯವೂ ಆಯ್ತು. ರಾಜಗೋಪುರ ನಿರ್ಮಾಣ ಕಾರ್ಯ ಯಾವೊಂದು ಅಡೆತಡೆ ಇಲ್ಲದೆ ಮುಂದುವರೆಯಿತು.

ಶ್ರೀ ಶಿವವಿಷ್ಣು ದೇವಸ್ಥಾನದ ಪ್ರಾಕಾರವನ್ನು ಭಾರತೀಯ ಶೈಲಿಗೊಳಪಡಿಸುವ ಕಾರ್ಯ, ಮತ್ತು ಜತೆಯಲ್ಲೇ ರಾಜಗೋಪುರ ನಿರ್ಮಾಣ– ಇವುಗಳಿಗೋಸ್ಕರ ಇಪ್ಪತ್ತಕ್ಕೂ ಹೆಚ್ಚು ಶಿಲ್ಪಿಗಳು ಸುಮಾರು ಎರಡು ವರ್ಷ ಕಾಲ ದೇವಸ್ಥಾನದ ಪರಿಸರದಲ್ಲೇ ಬೀಡುಬಿಟ್ಟು ಕೆಲಸ ಮಾಡುವ ಅನಿವಾರ್ಯ ಉಂಟಾಯ್ತು. ಈ ಹಿಂದೆ, ಅಮೆರಿಕದ ಇತರ ನಗರಗಳಲ್ಲಿನ ಹಿಂದೂ ದೇವಸ್ಥಾನಗಳು, ಶಿಲ್ಪಿಗಳಿಗೆ ಭಾರತದಲ್ಲಿ ವೇತನ ಪಾವತಿಸಿ ಕೆಲಸ ಮಾಡಿಸಿಕೊಳ್ಳುತ್ತಿದ್ದವು. ವೆಚ್ಚ ತಗ್ಗಿಸಲು ಇದು ಸಹಾಯವಾಗುತ್ತಿತ್ತು. ಆದರೆ ಶಿವವಿಷ್ಣು ದೇವಸ್ಥಾನದಲ್ಲಿ ನಾವು ಅಮೆರಿಕನ್ ಡಾಲರ್ ಲೆಕ್ಕದಲ್ಲೇ ಸಂಬಳ ಕೊಟ್ಟು, ಅವರಿಂದ ಆದಾಯ ತೆರಿಗೆ ಪಾವತಿಯನ್ನೂ ಮಾಡಿಸಿದೆವು. ಇದು ಸ್ವಲ್ಪ ಹೆಚ್ಚು ಖರ್ಚಿನ ಬಾಬ್ತೇ ಹೌದಾದರೂ ಸ್ಥಳೀಯ ನೀತಿನಿಯಮಗಳನ್ನು ಪಾಲಿಸುವುದು ಯಾವತ್ತಿಗೂ ಒಳ್ಳೆಯದೇ. ದುಡ್ಡು ಉಳಿತಾಯವಾಗುತ್ತದೆಂದು ನೀತಿನಿಯಮಗಳನ್ನು ಗಾಳಿಗೆ ತೂರುವುದರಿಂದ ಮುಂದೆ ಕಾನೂನು ರೀತ್ಯಾ ತೊಡಕುಗಳಾಗುವುದು,

ದೇವಸ್ಥಾನದಂಥ ಘನತೆವೆತ್ತ ಸಂಸ್ಥೆಗೆ ಕೆಟ್ಟ ಹೆಸರು ಬರುವುದು ಅಪೇಕ್ಷಣೀಯವಲ್ಲ. ಇಂಗ್ಲೇಂಡ್ ಮತ್ತು ಆಸ್ಟ್ರೇಲಿಯಾದಲ್ಲಿ ಕೆಲವು ದೇವಸ್ಥಾನಗಳು ಈರೀತಿ ಮುಜುಗರದ ಪರಿಸ್ಥಿತಿಗೆ ಒಳಗಾದ ಉದಾಹರಣೆಗಳೂ ಇವೆ. ದೇವಸ್ಥಾನಗಳನ್ನು ನಾವು ಕಟ್ಟುವುದೇ ಧರ್ಮಪಾಲನೆ ಮುಂದುವರಿಯಬೇಕೆಂಬ ಸದುದ್ದೇಶದಿಂದ. ಅಂಥದರಲ್ಲಿ ಅಡ್ಡದಾರಿ ಬಳಸಿ ಯೋಜನೆಗಳನ್ನು ಕೈಗೊಳ್ಳುವುದು ಸರ್ವಥಾ ಸಾಧುವಲ್ಲ ಎಂದು ನನ್ನ ಅಭಿಪ್ರಾಯ. ನಮ್ಮ ಜನ ಕೆಲವರು ದೇವಸ್ಥಾನಗಳನ್ನು ವ್ಯಾಪಾರ/ವಾಣಿಜ್ಯ ಕೇಂದ್ರಗಳೆಂದು ಪರಿಗಣಿಸುವುದಿಲ್ಲವಾದರೂ ಕಾನೂನು ಮತ್ತು ನಿಯಂತ್ರಣ ಅಧಿಕಾರಿಗಳ ದೃಷ್ಟಿಯಲ್ಲಿ ಅವು ವಾಣಿಜ್ಯಕೇಂದ್ರಗಳಂತೆಯೇ.

ಯುವಜನತೆಯನ್ನು ಸೆಳೆಯುವತ್ತ ಕ್ರಮಗಳು

ಅಮೆರಿಕದಲ್ಲಿ 'ಹಿಂದೂ ಮಂದಿರ್ ಎಕ್ಸಿಕ್ಯೂಟಿವ್ ಕಾನ್ಫರೆನ್ಸ್' ಅಂತೊಂದಿದೆ. ಅದು ದೇವಾಲಯಗಳ ಪದಾಧಿಕಾರಿಗಳ ವಾರ್ಷಿಕ ಸಮ್ಮೇಳನಗಳನ್ನು ಹಮ್ಮಿಕೊಳ್ಳುತ್ತದೆ. ಅದರ ಅಂದಾಜಿನಂತೆ 2012ರ ಹೊತ್ತಿಗೆ ಉತ್ತರ ಅಮೆರಿಕದಲ್ಲಿ ಹಿಂದೂ ದೇವಾಲಯಗಳ ಸಂಖ್ಯೆ ಸುಮಾರು 600 ಇರುತ್ತದೆ! ಅಂದರೆ, 2000ದಲ್ಲಿ ಇದ್ದ ದೇವಸ್ಥಾನಗಳ ಸಂಖ್ಯೆಗೆ ಹೋಲಿಸಿದರೆ ಸುಮಾರು 200% ವೃದ್ಧಿ! ಬಹುತೇಕವಾಗಿ ಈ ದೇವಸ್ಥಾನಗಳನ್ನು ವಲಸೆ ಬಂದ ಭಾರತೀಯರೇ ಕಟ್ಟಿಸಿದ್ದು– ತಮ್ಮದೇ ಒಂದು ಪೂಜಾಸ್ಥಳ ಇರಬೇಕು ಎಂಬ ಹಂಬಲದಿಂದ. ಅರ್ಚಕರನ್ನೂ ಭಾರತದಿಂದಲೇ ಕರೆಸಿಕೊಂಡಿದ್ದು. ಈರೀತಿ ಧಾರ್ಮಿಕ ಆಸಕ್ತ ಉದಾರಿಗಳು ಮತ್ತು ವಿವಿಧ ಸಂಪ್ರದಾಯಗಳ ಅರ್ಚಕರು ಅಮೆರಿಕದ ಸಣ್ಣಪುಟ್ಟ ನಗರಗಳಲ್ಲೂ ಒಂದುಗೂಡಿದ್ದರಿಂದ ಹಿಂದೂ ಧರ್ಮದ ವಿಧಿವಿಧಾನಗಳು, ಆಚರಣೆಗಳು ಅನೂಚಾನವಾಗಿ ಇಲ್ಲಿ ಮುಂದುವರೆಯುವುದು ಸಾಧ್ಯವಾಗಿದೆ. ಧಾರ್ಮಿಕ ವಿಚಾರಗಳಿಗೇನೋ ಇದು ಚೆನ್ನಾಗಿಯೇ ಫಲಪ್ರದವಾಗಿದೆ ಆದರೆ ದೇವಸ್ಥಾನಗಳು ಕೇವಲ ಧಾರ್ಮಿಕ ಚಟುವಟಿಕೆಗಳಿಗಷ್ಟೇ ಸೀಮಿತವಾಗುವುದು ಸಾಧ್ಯವಿಲ್ಲ, ಸಾಧುವೂ ಅಲ್ಲ. ನನಗನಿಸುವುದೇನೆಂದರೆ ಬರೀ ಧಾರ್ಮಿಕ ಚಟುವಟಿಕೆಗಳ ದೇವಸ್ಥಾನಗಳು ವಲಸಿಗರ ಎರಡನೇ ಮೂರನೇ ತಲೆಮಾರಿನ ಜನರನ್ನು ಅಷ್ಟೇನೂ ಆಕರ್ಷಿಸಲಾರವು. ಇತರ ಸಾಂಸ್ಕೃತಿಕ ಮತ್ತು ಸಮಾಜಮುಖಿ ಚಟುವಟಿಕೆಗಳನ್ನು ಹಮ್ಮಿಕೊಂಡರಷ್ಟೇ ಇಲ್ಲಿನ ದೇವಸ್ಥಾನಗಳು ಮುರೋಗಾಮಿಯಾಗಬಲ್ಲವು. ನಮ್ಮ ಶಿವವಿಷ್ಣು ದೇವಸ್ಥಾನವೇ ಇದಕ್ಕೆ ಒಳ್ಳೆಯ ಉದಾಹರಣೆ. ಇವತ್ತು ಇಲ್ಲಿ ಬರೀ ಧಾರ್ಮಿಕ ವಿಧಿವಿಧಾನಗಳಷ್ಟೇ ನಡೆಯುತ್ತಿಲ್ಲ. ಸಮಾಜದಲ್ಲಿ ಅದರ ಪಾತ್ರ ನಾಲ್ಕು ಆಧಾರಸ್ತಂಭಗಳ ಮೇಲೆ ನಿಂತಿದೆ: ಧಾರ್ಮಿಕ ಚಟುವಟಿಕೆಗಳು, ಶೈಕ್ಷಣಿಕ ಕಾರ್ಯಕ್ರಮಗಳು, ಕಲಾಪೋಷಣೆ, ಮತ್ತು ಸಮಾಜಸೇವೆ.

ನಾಲ್ಕು ಆಧಾರಸ್ತಂಭಗಳು

ಮೊದಲನೆಯದು– ಧಾರ್ಮಿಕ ಸೇವೆಗಳು– ಇದರ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯವಿಲ್ಲ. ಭಾರತದಿಂದ ಪ್ರವಾಸದಲ್ಲಿ ಬರುವ ಅನೇಕ ಹಿರಿಯರು ಹೇಳುವುದನ್ನು ನಾನು ಕೇಳಿದ್ದೇನೆ– ಏನೆಂದರೆ, ಈಗ ಇಲ್ಲಿ ಅಮೆರಿಕದಲ್ಲಿ ಆಚರಣೆಗೊಳ್ಳುವಷ್ಟು ಧಾರ್ಮಿಕ ಸಂಪ್ರದಾಯಗಳು, ನೈಮಿತ್ತಿಕ ಕಾರ್ಯಗಳಲ್ಲಿನ ವಿಧಿವಿಧಾನಗಳು ಈಗೀಗ ಭಾರತದಲ್ಲೇ ಅಷ್ಟು ಕೂಲಂಕಷವಾಗಿ ನೋಡಲಿಕ್ಕೆ ಸಿಗುವುದಿಲ್ಲ! ಇಲ್ಲಿನ ಕೆಲವು ದೇವಸ್ಥಾನಗಳಲ್ಲಂತೂ ನೂರಾರು ಋತ್ವಿಕರು ಭಾಗವಹಿಸಿದ ಯಜ್ಞಯಾಗಾದಿಗಳು ಸಾಂಗವಾಗಿ ನೆರವೇರಿವೆ, ಭಾರತದಲ್ಲೂ ಇಂಥಹುದು ನಡೆದಿಲ್ಲ ಎನ್ನುವ ಮಟ್ಟಿಗೆ! ಇದು ನಿಜಕ್ಕೂ ಒಂದು ದೊಡ್ಡ ಸಾಧನೆಯೇ. ಆದರೂ ಅಮೆರಿಕದಲ್ಲಿ ಕಾರ್ಯಭಾರ ನಡೆಸುವ ದೇವಸ್ಥಾನಗಳು ಒಂದು ಪ್ರಮುಖ ಅಂಶವನ್ನು ಮನಗಾಣುವುದಿದೆ: ಶಿವವಿಷ್ಣು ದೇವಸ್ಥಾನವೂ ಸೇರಿದಂತೆ ಹೆಚ್ಚಿನ ದೇವಸ್ಥಾನಗಳು 'ಇಷ್ಟದೇವತಾ' ಪ್ರಧಾನವಾಗಿವೆ. ಅದಕ್ಕೋಸ್ಕರ ಹತ್ತಾರು ವಿಗ್ರಹಗಳನ್ನು ಸ್ಥಾಪಿಸಿವೆ. ನಮ್ಮ ಶಿವವಿಷ್ಣು ದೇವಸ್ಥಾನವೊಂದರಲ್ಲೇ ಹದಿನೇಳು ಮೂರ್ತಿಗಳಿವೆ! ಪ್ರತಿಯೊಂದಕ್ಕೂ ತನ್ನದೇ ಆದ ಸಂಪ್ರದಾಯ ಶೈಲಿ ಮತ್ತು ಪೂಜಾವಿಧಾನ ಇತ್ಯಾದಿ. ಶಿವವಿಷ್ಣು ದೇವಸ್ಥಾನದ ಜನಪ್ರಿಯತೆಗೆ ಇದು ಪೂರಕವೇ ಆಗಿದೆ, ಆದರೂ ಈರೀತಿಯ ಬಹುವಿಗ್ರಹ ಪೂಜೆಯಿಂದ ಒಂದು ಅಡ್ಡಪರಿಣಾಮ ಏನಾಗುತ್ತದೆಯೆಂದರೆ 'ಹಿಂದೂಗಳಿಗೆ ಒಬ್ಬರೇ ದೇವರು ಅಂತಿಲ್ಲ' ಎಂಬ ಪಾಶ್ಚಾತ್ಯ ಮನೋಭಾವ ಮತ್ತಷ್ಟು ಬೇರೂರುವುದಕ್ಕೆ ಸಹಾಯವಾಗುತ್ತದೆ. 'ದೇವನೊಬ್ಬ ನಾಮ ಹಲವು' ಎಂಬ ಉನ್ನತ ವಿಚಾರ ನಮಗೆಲ್ಲ ಗೊತ್ತಿದೆಯಾದರೂ ಪಾಶ್ಚಾತ್ಯರಿಗೆ ಅದು ತಿಳಿದಿಲ್ಲ. ಇದೇನಪ್ಪಾ ಒಂದೇ ದೇವಸ್ಥಾನದಲ್ಲಿ ಹಲವಾರು ದೇವರು ಎಂದು ಅವರು ಅಂದುಕೊಳ್ಳುತ್ತಾರೆ. ಹಾಗಾಗಿ ನಾನು ಹೇಳುವುದಿಷ್ಟೇ. 'ವಿಧವಿಧ ರೂಪಗಳನ್ನು ಧರಿಸಿರುವ ದೇವರು ಒಬ್ಬನೇ' ಎಂಬ ತತ್ತ್ವವು ಮೊದಲು ನಮಗೂ ಚೆನ್ನಾಗಿ ಮನದಟ್ಟಾಗಬೇಕು. ಇತರರಿಗೆ ಮನದಟ್ಟಾಗುವಂತೆ ಅದನ್ನು ವಿವರಿಸುವ ಜ್ಞಾನವೂ ನಮ್ಮಲ್ಲಿರಬೇಕು. ಅದು ನಮ್ಮ ದೇವಸ್ಥಾನಗಳಿಂದಲೇ ಆರಂಭವಾದರೆ ಒಳ್ಳೆಯದಲ್ಲವೇ?

ಕೆಲ ವರ್ಷಗಳ ಹಿಂದೆ, ನಾನು ಶಿವವಿಷ್ಣು ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷನಾಗಿದ್ದಾಗ, ನನ್ನ ಆಪ್ತಮಿತ್ರ, ಚಿನ್ಮಯ ಮಿಷನ್‌ನ ಟ್ರಸ್ಟಿಗಳಲ್ಲೊಬ್ಬರಾದ ಡಿ. ಸಿ. ರಾವ್ ನನ್ನೊಡನೆ ಒಂದು ಪ್ರಸ್ತಾಪ ಮಂಡಿಸಿದ್ದರು. ಚಿನ್ಮಯ ಮಿಷನ್‌ನ ಹೆಚ್ಚುವರಿ ವಿದ್ಯಾರ್ಥಿಗಳಿಗೋಸ್ಕರ ಶಿವವಿಷ್ಣು ದೇವಸ್ಥಾನದ ವಠಾರದಲ್ಲಿ ತರಗತಿಗಳನ್ನು ನಡೆಸುವುದು ಸಾಧ್ಯವಾದೀತೇ ಎಂದು. ನಿಮಗೆಲ್ಲ ಗೊತ್ತೇ ಇರುವಂತೆ ಚಿನ್ಮಯ ಮಿಷನ್ ಅಮೆರಿಕದ ಪ್ರಮುಖ ನಗರಗಳಲ್ಲೆಲ್ಲ ಭಾರತೀಯ ಸಂಸ್ಕೃತಿ ಸಂವರ್ಧನೆಯ ಕೆಲಸವನ್ನು ಮುಂಚೂಣಿಯಲ್ಲಿದ್ದು ಮಾಡಿಕೊಂಡು ಬಂದಿರುವ ಸಂಸ್ಥೆ. ಶಿವವಿಷ್ಣು ದೇವಸ್ಥಾನದ

ವರ್ಚಸ್ಸು ಹೆಚ್ಚಬೇಕು ಎಂದಷ್ಟೇ ಗುರಿಯಿದ್ದ ನಾನು ಆ ಪ್ರಸ್ತಾಪಕ್ಕೆ ಅಷ್ಟೇನೂ ಪೂರಕ ಪ್ರತಿಕ್ರಿಯೆ ಕೊಡಲಿಲ್ಲ, ಆದರೆ ಈಗ ನನಗೆ ಪಶ್ಚಾತ್ತಾಪವಾಗುತ್ತಿದೆ: ದೇವಸ್ಥಾನಗಳು ತಾವೇ ಶೈಕ್ಷಣಿಕ ಚಟುವಟಿಕೆಗಳನ್ನು ಮಾಡಲು ಸಮರ್ಥವಿಲ್ಲದಾಗ ಚಿನ್ಮಯ ಮಿಷನ್ (ಅಂತೆಯೇ ಆರ್ಷ ವಿದ್ಯಾ ಗುರುಕುಲಮ್, ಆರ್ಷ ವಿಜ್ಞಾನ ಗುರುಕುಲಮ್, ವೇದಾಂತ ಸೊಸೈಟಿ ಆಫ್ ಅಮೆರಿಕ) ಮುಂತಾದ ಸಂಸ್ಥೆಗಳ ಸಹಯೋಗವನ್ನು ಪಡೆದುಕೊಳ್ಳುವುದು ಒಳ್ಳೆಯದು. ಈ ಶೈಕ್ಷಣಿಕ ಸಂಸ್ಥೆಗಳು ಶಿಕ್ಷಕರನ್ನು ತಯಾರಿಸಿ ಆಮೇಲೆ ಅವರು ನಮ್ಮ ದೇವಸ್ಥಾನಗಳಲ್ಲಿ ಕಲಿಕೆಯ ತರಗತಿಗಳನ್ನು ಆರಂಭಿಸುವಂತಾಗುವುದು ನಿಜಕ್ಕೂ 'ದೀಪದಿಂದ ದೀಪ ಹಚ್ಚೆ'ದಂತೆಯೇ ರಚನಾತ್ಮಕ ಕಾರ್ಯ.

ಸಂಸ್ಕೃತಿ ಮತ್ತು ಕಲಾಪೋಷಣೆಯ ವಿಚಾರಕ್ಕೆ ಬಂದರೆ, ಕಳೆದ ಸುಮಾರು ವರ್ಷಗಳಿಂದ ಶಿವವಿಷ್ಣು ದೇವಸ್ಥಾನವು ಈ ನಿಟ್ಟಿನಲ್ಲಿ ವಹಿಸಿರುವ ಪಾತ್ರದಿಂದ, ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಕಲೆಗೆ ಇದೊಂದು ಪ್ರಧಾನ ವೇದಿಕೆಯೇ ಆಗಿಹೋಗಿದೆ. ವಾಷಿಂಗ್ಟನ್ ಪ್ರದೇಶಕ್ಕೆ ಭೇಟಿ ನೀಡುವ ಕಲಾವಿದರು ಮತ್ತು ಇಲ್ಲಿಯೇ ಹುಟ್ಟಿ ಬೆಳೆದ ಅನೇಕ ಪ್ರತಿಭಾನ್ವಿತ ಸಂಗೀತಾಭ್ಯಾಸಿಗಳಿಗೂ, ನೃತ್ಯವಿದ್ಯಾರ್ಥಿಗಳಿಗೂ ಶಿವವಿಷ್ಣು ದೇವಸ್ಥಾನದ ಸಭಾಂಗಣವು ಕಲಾಪ್ರದರ್ಶನಕ್ಕೆ ವೇದಿಕೆಯೊದಗಿಸಿದೆ. 1984ರಿಂದೀಚೆಗೆ ಅಮೆರಿಕ ಪ್ರವಾಸ ಕೈಗೊಂಡ ಪ್ರಮುಖ ಕರ್ನಾಟಕ ಶಾಸ್ತ್ರೀಯ ಸಂಗೀತ ವಿದ್ವಾಂಸರು, ಹಿಂದುಸ್ಥಾನಿ ಪದ್ಧತಿಯ ಕಲಾವಿದರು ಸಹ, ವಾಷಿಂಗ್ಟನ್ ನಗರಕ್ಕೆ ಬಂದಾಗ ಶಿವವಿಷ್ಣು ದೇವಸ್ಥಾನದ ಸಭಾಂಗಣದಲ್ಲಿ ತಮ್ಮದೊಂದು ಸಂಗೀತಕಛೇರಿ ಕೊಟ್ಟೇಕೊಟ್ಟಿದ್ದಾರೆ. ಅದೇವೇಳೆಗೆ, ಸಂಗೀತ ಮತ್ತು ನೃತ್ಯ ಶಿಕ್ಷಕರನೇಕರೂ ವಾಷಿಂಗ್ಟನ್ ಪ್ರದೇಶದಲ್ಲಿ ವಾಸವಾಗಿದ್ದು, ಇವತ್ತು ಇಲ್ಲಿ ಉದಯೋನ್ಮುಖ ಸಂಗೀತ/ನೃತ್ಯ ಕಲಾವಿದರ ದೊಡ್ಡ ಬಳಗವೇ ಹುಟ್ಟಿಕೊಂಡಿದೆ. ಈ ಸ್ಥಳೀಯ ಪ್ರತಿಭೆಗಳ ಕಲಾಪ್ರದರ್ಶನಕ್ಕೆಂದು ಶಿವವಿಷ್ಣು ದೇವಸ್ಥಾನವು ವರ್ಷಕ್ಕೆ ಏನಿಲ್ಲವೆಂದರೂ ಹತ್ತು-ಹದಿನೈದು ಕಾರ್ಯಕ್ರಮಗಳನ್ನಾದರೂ ಹಮ್ಮಿಕೊಳ್ಳುತ್ತದೆ. ಅದಲ್ಲದೇ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ತ್ಯಾಗರಾಜ, ಪುರಂದರದಾಸ, ಸ್ವಾತಿ ತಿರುನಾಳ್, ದೀಕ್ಷಿತರ್ ಆರಾಧನಾ ಮಹೋತ್ಸವಗಳನ್ನೂ ದೇವಸ್ಥಾನದ ವಠಾರದಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಇಂತಹ ಕಾರ್ಯಕ್ರಮಗಳಲ್ಲಿ, ಕನ್ನಡಿಗರಾದ ಸಂಗೀತ ವಿದುಷಿ ಉಷಾ ಚಾರ್ ನಿರ್ದೇಶನದಲ್ಲಿ ನಡೆಯುವ 'ನಾದತರಂಗಿಣಿ ತ್ಯಾಗರಾಜ ಉತ್ಸವ' ಪ್ರಮುಖವಾದದ್ದು. ಆಬಾಲವೃದ್ಧರಾದಿಯಾಗಿ ಎಲ್ಲರೂ ಈ ಉತ್ಸವಗಳಲ್ಲಿ ಭಾಗವಹಿಸುವುದಕ್ಕೆ ತಾಲೀಮು ನಡೆಸಿ, ಪ್ರದರ್ಶನ ಕೊಡುವುದನ್ನು ಕೇಳಲು ಎರಡು ಕಿವಿಗಳು ಸಾಲವು, ನೋಡಲು ಕಣ್ಣೆರಡು ಸಾಲವು! ಶಿವವಿಷ್ಣು ದೇವಸ್ಥಾನದ ಆಶ್ರಯದಲ್ಲಿ 'ರಂಗಪ್ರವೇಶ' ಮಾಡಿದ ಅನೇಕ ಪ್ರತಿಭೆಗಳು ಇವತ್ತು ಭಾರತದಲ್ಲಿ ಪ್ರಖ್ಯಾತ ಗಾಯನಸಭೆಗಳಲ್ಲಿ ಭಾಗವಹಿಸಲು ಆಹ್ವಾನ ಪಡೆಯುತ್ತಿರುವುದು ನಿಜಕ್ಕೂ ಅಭಿಮಾನದ ಸಂಗತಿ.

ಬೇರು ಸೂರು

ಸಮಾಜಸೇವೆಯ ವಿಚಾರದಲ್ಲಂತೂ ಶಿವವಿಷ್ಣು ದೇವಸ್ಥಾನವು ಇತರ ದೇವಸ್ಥಾನಗಳಿಗೆಲ್ಲ ಮಾದರಿ ಎನಿಸಿದೆ. ಈಗ್ಗೆ ಸುಮಾರು ವರ್ಷಗಳಿಂದ ಇಲ್ಲಿನ ಅನಾಥಾಶ್ರಮಗಳಿಗೆ ಆಹಾರ ಸರಬರಾಜು ದೇವಸ್ಥಾನದಿಂದ ನಡೆಸಲಾಗುತ್ತದೆ. 1999ರಿಂದ ಆರಂಭವಾದ 'ಮಿತ್ರಮಂಡಲ' ಸಹಾಯಗುಂಪು ಕಷ್ಟಕರ ಸನ್ನಿವೇಶಗಳನ್ನೆದುರಿಸುತ್ತಿರುವವರಿಗೆ, ಗಂಭೀರ ಕಾಯಿಲೆಗೊಳಗಾದವರಿಗೆ, ಕೌಟುಂಬಿಕ ಸಮಸ್ಯೆಗೊಳಗಾದವರಿಗೆ ನೆರವು ನೀಡಿದೆ. ಇತ್ತೀಚೆಗೆ ಭೂತಾನ್ ದೇಶದಿಂದ ವಲಸೆ ಬಂದ ಸುಮಾರು 1750 ಹಿಂದೂ ನಿರಾಶ್ರಿತ ಕುಟುಂಬಗಳಿಗೆ ಬಾಲ್ಟಿಮೋರ್-ವಾಷಿಂಗ್ಟನ್ ಪ್ರದೇಶದಲ್ಲಿ ಆಹಾರ ಮತ್ತು ವಸತಿ ನೆರವು ಕೊಡುವುದರಲ್ಲೂ ಈ ಗುಂಪು ತೊಡಗಿಸಿಕೊಂಡಿದೆ. ಎಸ್.ಎ.ಟಿ. (SAT) ತರಬೇತಿ ಕಾರ್ಯಕ್ರಮ ಇತ್ತೀಚಿನ ಸೇರ್ಪಡೆ. ಹೆಚ್ಚುಹೆಚ್ಚು ಯುವಜನರು ಈ ತರಗತಿಗಳ ಲಾಭ ಪಡೆಯುತ್ತಿದ್ದಾರೆ. ಕೆಲವು ಸೂಕ್ಷ್ಮಗ್ರಾಹಿಗಳು ಗಮನಿಸಿರುವಂತೆ ಇಲ್ಲಿನ ದೇವಸ್ಥಾನಗಳು ಯುವಜನತೆಯಲ್ಲಿ ಆಕರ್ಷಣೆ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿಲ್ಲ. ಮಕ್ಕಳು ಚಿಕ್ಕವಯಸ್ಸಿನವರಿರುವಾಗ ಹೆತ್ತವರೊಂದಿಗೆ, ಅವರ ಒತ್ತಾಯಕ್ಕಾಗಿ ದೇವಸ್ಥಾನಕ್ಕೆ ಬರುತ್ತಾರೆ. ಆಮೇಲೆ ಅವರಿಗಲ್ಲಿ ಏನೂ ಆಕರ್ಷಣೆ ಇಲ್ಲವಾಗುತ್ತದೆ. ಅಲ್ಲದೇ ಅರ್ಚಕರು ನಡೆಸುವ ವಿಧಿವಿಧಾನಗಳು ಯುವಜನತೆಗೆ ಅರ್ಥವಾಗುವುದಿಲ್ಲ. ಅವರಿಗೆ ಅರ್ಥವಾಗುವಂತೆ ಬಿಡಿಸಿಹೇಳುವ ವ್ಯವಧಾನ ಅರ್ಚಕರಿಗಿರುವುದಿಲ್ಲ. ಕೆಲವು ದೇವಸ್ಥಾನಗಳಲ್ಲಿ ಬಾಲವಿಕಾಸದಂಥ ಕಾರ್ಯಕ್ರಮಗಳನ್ನು ಆರಂಭಿಸಿದ್ದಾರಾದರೂ ಆಗಬೇಕಾದ್ದು ತುಂಬ ಇದೆ. ಹೈಸ್ಕೂಲ್ ಮತ್ತು ಕಾಲೇಜು ಮಕ್ಕಳೂ ದೇವಸ್ಥಾನಕ್ಕೆ ಬರುವಂತೆ ಆಗಬೇಕು. ಹೀಗೆ ಯುವಜನರನ್ನು ದೇವಸ್ಥಾನದತ್ತ ಸೆಳೆಯುವ ಬೇರೆಬೇರೆ ಯೋಜನೆಗಳನ್ನು ದೇವಸ್ಥಾನದ ಆಡಳಿತ ಮಂಡಳಿ ಪರಿಶೀಲಿಸುತ್ತಿದೆ. ಮಂಡಳಿಯಲ್ಲೇ ಮಹಿಳೆಯರಿಗೆ ಮತ್ತು ಯುವಜನತೆಗೆ ಸ್ಥಾನಗಳನ್ನು ಕಲ್ಪಿಸುವುದು ಈ ನಿಟ್ಟಿನಲ್ಲಿ ಇಟ್ಟ ಒಂದು ಹೆಜ್ಜೆ.

ಭೇದಭಾವ ಇಲ್ಲವಾಗಿಸುವುದು

ನಮ್ಮಲ್ಲಿನ ಕೆಲವು ಧಾರ್ಮಿಕ ಸಂಪ್ರದಾಯಗಳು ಪ್ರತ್ಯೇಕತೆಯನ್ನು ಪೋಷಿಸುತ್ತವೆ. ಕೆಲವು ದೇವಸ್ಥಾನಗಳು ಅದನ್ನು ಕಠಿಣವಾಗಿ ಪರಿಪಾಲಿಸುತ್ತವೆ. ಹೆಂಗಸರು ಮತ್ತು ತಥಾಕಥಿತ 'ನಿಮ್ನವರ್ಗಗಳ ಜನರು' ಇದರಿಂದ ಬೇಸರಗೊಳ್ಳುತ್ತಾರೆ. ದೇವಸ್ಥಾನಗಳ ಆಡಳಿತ ಮಂಡಳಿಗಳು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದಿದ್ದರೆ ಸಮಾಜದಲ್ಲಿ ಒಡಕು ಮೂಡುತ್ತದೆ. ವಲಸಿಗರ ಎರಡನೇ ಮತ್ತು ಮೂರನೇ ತಲೆಮಾರಿನ ವೇಳೆ ಈ ಸಂಪ್ರದಾಯಗಳೆಲ್ಲ ಮರೆಯಾಗಿ ಎಲ್ಲರಿಗೂ ಸಮಾನಾವಕಾಶ ದೊರಕುವುದು ಸಾಧ್ಯವಾಗುತ್ತದೆಂದು ನನ್ನ ಆಶಾವಾದ. ಅದಕ್ಕೋಸ್ಕರವಾದರೂ ಹೆಂಗಸರು ಮತ್ತು ಯುವಜನತೆ ದೇವಸ್ಥಾನದ ಆಡಳಿತ ಮಂಡಳಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ನನ್ನ ಬಯಕೆ.

ಬೇರು ಸೂರು

ದಕ್ಷತೆಯನ್ನು ಉಳಿಸಿಕೊಳ್ಳುವುದು

ಕೊನೆಯಲ್ಲಿ, ದೇವಸ್ಥಾನದ ಆಡಳಿತ ಮಂಡಳಿಗಳ ದಕ್ಷತೆಯ ವಿಚಾರ. ಕೈಬೆರಳೆಣಿಕೆಯಷ್ಟು ಕೆಲವನ್ನು ಬಿಟ್ಟರೆ ಹೆಚ್ಚಿನೆಲ್ಲ ದೇವಸ್ಥಾನಗಳಲ್ಲೂ ಸ್ವಯಂಸೇವಕರಿಂದಲೇ ಆಡಳಿತ ನಿರ್ವಹಣೆ. ನನ್ನ ಅನುಭವದಂತೆ, ಸ್ವಯಂಸೇವಾ ಸಂಸ್ಥೆಗಳ ನಿರ್ವಹಣೆ ಬಲು ಕಷ್ಟದ್ದು. ಸ್ವಯಂಸೇವಕರನ್ನು ಅವರ ಕೆಲಸ ಮತ್ತು ನಿಷ್ಠೆಯನ್ನಾಧರಿಸಿ ಟ್ರಸ್ಟಿ ಹುದ್ದೆಗೆ ಬಡ್ತಿ ಮಾಡಲಾಗುತ್ತದೆ. ಆದರೆ ಟ್ರಸ್ಟಿ ಹುದ್ದೆಯೆಂದರೆ ದೊಡ್ಡ ಉದ್ಯಮದ ಆಡಳಿತ ಮಂಡಳಿ ಸದಸ್ಯತ್ವ ಇದ್ದಂತೆ. ದೇವಸ್ಥಾನದ ಆಡಳಿತ ಮಂಡಳಿಯ ಟ್ರಸ್ಟಿಗಳನ್ನೂ ಅವರ ಕಾರ್ಯಕ್ಷಮತೆ, ದೊಡ್ಡದೊಡ್ಡ ತಂಡಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಅಳತೆಗೋಲಾಗಿಸಿ ಆಯ್ಕೆ ಮಾಡಬೇಕಾಗುತ್ತದೆ. ಬಂಡವಾಳ ಹೂಡಬೇಕಾದ ಬೃಹತ್ ಯೋಜನೆಗಳನ್ನೂ ಅಷ್ಟೇ- ಅದಕ್ಕೆ ಬೇಕಾದ ಅನುಭವ ಮತ್ತು ಅರ್ಹತೆ ಇದ್ದವರಿಗಷ್ಟೇ ಒಪ್ಪಿಸಬೇಕಾಗುತ್ತದೆ.

ಮಂಡಳಿಯಲ್ಲಿ ಅನುಭವಿಗಳು ಇದ್ದರೂ ಸತತ ಬದಲಾವಣೆ ಆಗುತ್ತಲೇ ಇರಬೇಕಾಗುತ್ತದೆ. ಏಕೆಂದರೆ ಹೆಚ್ಚಿನ ದೇವಸ್ಥಾನಗಳಲ್ಲಿ ಆಡಳಿತ ಮಂಡಳಿಯ ಸದಸ್ಯರಿಗೆ ಇಂತಿಷ್ಟೇ ವರ್ಷಗಳೆಂಬ ಸೀಮಿತ ಅವಧಿ ಇರುತ್ತದೆ. ಅನುಭವಿಗಳನ್ನು ಅನಿವಾರ್ಯವಾಗಿ ಕಳಕೊಳ್ಳಬೇಕಾಗುತ್ತದೆ. ನಮ್ಮ ಶಿವವಿಷ್ಣು ದೇವಸ್ಥಾನವು 'ಸಮರ್ಥವಾಗಿ ನಿರ್ವಹಣೆಗೊಳ್ಳುವ ಸಂಸ್ಥೆ' ಎಂದು ಹೆಸರು ಪಡೆದಿದೆಯಾದರೂ ಇಲ್ಲಿಯೂ ಈರೀತಿ ಅನುಭವಿಗಳ ಕಳಕೊಳ್ಳುವಿಕೆ ಅನಿವಾರ್ಯವಾಗಿ ನಡೆಯುತ್ತದೆ. ಜ್ಞಾನ ಮತ್ತು ಅನುಭವಗಳನ್ನು ಉಳಿಸಿಕೊಳ್ಳಲು ಒಂದೇ ಉಪಾಯವೆಂದರೆ ಕೈಪಿಡಿಗಳನ್ನು ತಯಾರಿಸುವುದು, ಕಾರ್ಯನೀತಿಗಳ ಮಾಹಿತಿಪತ್ರಗಳನ್ನು ಮುದ್ರಿಸುವುದು, ಮತ್ತು ಲೆಕ್ಕಪತ್ರ ತಪಾಸಣೆ, ಔದ್ಯೋಗಿಕ ನಿರ್ವಹಣೆ, ಸಂಪನ್ಮೂಲ ನಿರ್ವಹಣೆ ಮುಂತಾದ ಎಲ್ಲದಕ್ಕೂ ನಿರ್ದಿಷ್ಟ ಸಾಂವಿಧಾನಿಕ ಕ್ರಮಗಳನ್ನು ಅನುಷ್ಠಾನಗೊಳಿಸುವುದು.

ವಲಸಿಗರ ಎರಡನೇ ತಲೆಮಾರಿನವರು ಸ್ಥಾಪಿಸಿದ, ನಿರ್ವಹಿಸಿದ ದೇವಸ್ಥಾನಕ್ಕೆ ಒಂದು ನಿದರ್ಶನ ಇಲ್ಲಿದೆ, ಈ ಲೇಖನದ ಎರಡನೇ ಭಾಗದಲ್ಲಿ ನನ್ನ ಮಗಳು ನಿರುಪಮಾ ಅದನ್ನು ನಿಮಗೆ ಪರಿಚಯಿಸಲಿದ್ದಾಳೆ. ಈಕೆ ಅಮೆರಿಕ ದೇಶಕ್ಕೆ ಕಾಲಿಟ್ಟಾಗ ಆಗಿನ್ನೂ ಒಂದು ವರ್ಷದ ಹಸುಗೂಸು. ಈಗ ಆರ್ಕನ್ಸಾ ಸಂಸ್ಥಾನದಲ್ಲಿ ಒಂದು ಪುಟ್ಟ ಹಿಂದೂ ದೇವಸ್ಥಾನದ ಆಡಳಿತ ಮಂಡಳಿಯಲ್ಲಿದ್ದಾಳೆ!

ಭಾಗ 2

'ಬೋರ್ಡ್ ಆಫ್ ದ ಹಿಂದೂ ಎಸೋಸಿಯೇಶನ್ ಆಫ್ ನಾರ್ತ್‌ವೆಸ್ಟ್ ಆರ್ಕನ್ಸಾ'ದ ಸದಸ್ಯೆಯಾಗುವಂತೆ ನನ್ನನ್ನು ಕೇಳಿಕೊಂಡಾಗ ಒಮ್ಮೆ ಹಿಂದೇಟು ಹಾಕಿದ್ದು ಹೌದಾದರೂ ನಮ್ಮ ಸಮುದಾಯಕ್ಕೆ ಸೇವೆ ಸಲ್ಲಿಸುವುದು ನನ್ನ ಕರ್ತವ್ಯವೆಂಬ ಪ್ರಜ್ಞೆ ಜಾಗೃತಗೊಂಡಾಗ ನಾನು ಒಪ್ಪಿಕೊಳ್ಳಲೇಬೇಕಾಯ್ತು. ಎರಡು ವರ್ಷಗಳ ನಂತರ ಮಂಡಳಿಯ ಅಧ್ಯಕ್ಷಸ್ಥಾನಕ್ಕೆ ನನ್ನ ಹೆಸರು ಸೂಚಿತವಾದಾಗ ಮತ್ತದೇ ಹಿಂಜರಿಕೆ. ಆ ಸ್ಥಾನವನ್ನು ತುಂಬಲು ನಾನು ಅರ್ಹತೆಯುಳ್ಳವಳು ಎಂದು ನನಗನ್ನಿಸಿರಲಿಲ್ಲ. ನನ್ನ ಆಸಕ್ತಿ ಅಧ್ಯಾತ್ಮವೇ ಹೊರತು ಧಾರ್ಮಿಕ ಚಟುವಟಿಕೆಗಳಲ್ಲ. ಈ ದೇಶದಲ್ಲಿ ಹುಟ್ಟಿ ಬೆಳೆದ ಹಿಂದೂಗಳೆಲ್ಲರಂತೆಯೇ ನನಗೂ ಧಾರ್ಮಿಕ ವಿಧಿವಿಧಾನಗಳ ಬಗ್ಗೆ ತಿಳುವಳಿಕೆ ಅಷ್ಟೇನೂ ಇರಲಿಲ್ಲ. ನಾನು ಅವುಗಳಲ್ಲಿ ಭಾಗವಹಿಸಿದ್ದೂ ಕಡಿಮೆಯೇ. ನಾನು ಯಾವುದೇ ಭಾರತೀಯ ಭಾಷೆಯನ್ನೂ ಮಾತಾಡಬಲ್ಲವಳಾಗಿರಲಿಲ್ಲ. ಇಲ್ಲಿನ ಭಾರತೀಯ ಸಮುದಾಯದಲ್ಲಿ ನನ್ನ ಪರಿಚಯ ಸಹ ಯಾರಿಗೂ ಇದ್ದಿರಲಿಲ್ಲ. ಏಕೆಂದರೆ, ಈ ಊರಲ್ಲಿರುವ ಭಾರತೀಯರು ಬಹುಭಾಗ ಕಂಪ್ಯೂಟರ್ ಕ್ಷೇತ್ರದ ಉದ್ಯೋಗಿಗಳಾಗಿದ್ದರು. ನನ್ನ ಸ್ನೇಹಿತರೂ ಹೆಚ್ಚಾಗಿ ಹಿಂದುವೇತರ ಧರ್ಮೀಯರೇ ಆಗಿದ್ದರು. ನನ್ನ ಪ್ರಾಯದಲ್ಲಿ ಹೆಣ್ಣು ಒಂಟಿ ಆಗಿರುವುದೂ ಹಿಂದೂ ಸಂಪ್ರದಾಯದಲ್ಲಿ ಕೊಂಚ ಆಭಾಸವೇ. ಆಡಳಿತ ಮಂಡಳಿಯಲ್ಲಿ ಹೆಂಗಸರು ಇರುತ್ತಿದ್ದದ್ದು ಕಡಿಮೆ, ಅಧ್ಯಕ್ಷಸ್ಥಾನಕ್ಕೇರಿದವರಂತೂ ಯಾರೂ ಇಲ್ಲ. ದೇವಸ್ಥಾನದ ಭಕ್ತಾದಿಗಳಲ್ಲೂ ಗಂಡಸರದೇ ಪ್ರಾಧಾನ್ಯ. ನನ್ನ ಉದ್ಯೋಗಸಂಬಂಧಿತವಾಗಿ ನಾನು ಪ್ರತಿವಾರ ಪ್ರವಾಸದಲ್ಲಿ ಬೇರೆ ಇರಬೇಕಾಗುತ್ತಿತ್ತು. ಇಷ್ಟೆಲ್ಲ ಪ್ರತಿಕೂಲ ಅಂಶಗಳಿರುವಾಗ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯೆಯಾಗಲು, ಕೊನೆಗೆ ಅಧ್ಯಕ್ಷ ಸ್ಥಾನವೇರಲು ನಾನು ಹಿಂದೇಟು ಹಾಕಿದ್ದು ಸಹಜವೇ ಆಗಿತ್ತು.

ಆದರೆ ಕೊನೆಗೂ ನಿರ್ಧರಿಸಿದೆ– ನಾನು ಏನು ಮಾಡಲಾರೆ ಎನ್ನುವುದಕ್ಕಿಂತ ನಾನು ನನ್ನ ಯಾವ ಪ್ರತಿಭೆಯನ್ನು ಮತ್ತು ಉದ್ಯೋಗದಿಂದ ಯಾವ ಅನುಭವವನ್ನು ಇಲ್ಲಿಗೆ ತೆಗೆದುಕೊಂಡು ಬಂದರೆ ಒಳಿತು ಎನ್ನುವುದರತ್ತ ಗಮನ ಹರಿಸಿದೆ. ನನ್ನ ಉದ್ಯೋಗವಾದರೋ ನನಗೆ ಬೇರೆಬೇರೆ ಕೌಶಲಗಳನ್ನು ಕಲಿತುಕೊಳ್ಳುವ ಅವಕಾಶ ಒದಗಿಸಿಕೊಟ್ಟಿತ್ತು. ವಾಣಿಜ್ಯಶಾಸ್ತ್ರದಲ್ಲಿ ಪದವಿ ಪಡೆದ ನಾನು ಮೊದಲಿಗೆ ಉದ್ಯೋಗ ನಿರ್ವಹಿಸಿದ್ದು, ಪೂರ್ವ ಯುರೋಪ್ ಮತ್ತು ರಷ್ಯಾ ಪ್ರಾಂತ್ಯಗಳಲ್ಲಿ ಕೆಲಸ ಮಾಡುತ್ತಿದ್ದ ಅಮೆರಿಕನ್ ಸರಕಾರಿ ಉದ್ಯೋಗಿಗಳಿಗೆ ಆಡಳಿತ ಸಹಾಯ ಒದಗಿಸುವ ಕಂಪನಿಯೊಂದರಲ್ಲಿ. ಆಮೇಲೆ ಎಂಬಿಎ ಪದವಿ ಗಳಿಸಿದ ನಾನು ಆರ್ಕನ್ಸಾದ ಬೆಂಟನ್‌ವಿಲ್‌ನಲ್ಲಿ ವಾಲ್‌ಮಾರ್ಟ್‌ನ ಕೇಂದ್ರಕಛೇರಿಯಲ್ಲಿ ಉದ್ಯೋಗಕ್ಕೆ ಸೇರಿಕೊಂಡೆ. ಅಲ್ಲಿನ ಹನ್ನೊಂದು ವರ್ಷಗಳ ಅವಧಿಯಲ್ಲಿ ನಾನು ವ್ಯಾಪಾರವಸ್ತುಗಳು, ಮಾಹಿತಿ

ತಂತ್ರಜ್ಞಾನ, ಮಾರ್ಕೆಟಿಂಗ್ ಮತ್ತು ಹೊಸ ಉತ್ಪನ್ನಗಳ ಪ್ರಚಾರ ನಿರ್ವಹಣೆ ಹೀಗೆ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದೆ. ಅದಾದ ಮೇಲೆ ಈಗಿರುವ ಕಾಗ್ನಿಜೆಂಟ್ ಕನ್ಸಲ್ಟಿಂಗ್‌ಗೆ ಸೇರಿದೆ. ಇದಿಷ್ಟೂ ಅವಧಿಯಲ್ಲಿ ನಾನು ಸುಮಾರಷ್ಟು ನೈಪುಣ್ಯಗಳನ್ನು ಕಲಿತುಕೊಂಡೆ, ಮುಂದೆ ಅವು ದೇವಸ್ಥಾನ ಕಟ್ಟುವಿಕೆ ಮತ್ತು ನಿರ್ವಹಣೆಯಲ್ಲಿ ಖಂಡಿತವಾಗಿಯೂ ನೆರವಿಗೆ ಬಂದವು.

ಯೋಜನೆ ನಿರ್ವಹಣೆ (Project Management)

ವಾಲ್‌ಮಾರ್ಟ್‌ನಲ್ಲಿ ಉದ್ಯೋಗದಲ್ಲಿದ್ದಾಗ ಸ್ಯಾಮ್ಸ್ ಕ್ಲಬ್‌ನ 'ಉತ್ಪನ್ನ ಪ್ರದರ್ಶನ'ಗಳನ್ನು ನಿರ್ವಹಿಸುವ ಜವಾಬ್ದಾರಿ ನನ್ನ ಮೇಲಿತ್ತು. ಆ ಕಾರ್ಯಯೋಜನೆಯನ್ನು ನಾನು ಪೂರ್ಣವಾಗಿ ನವೀಕರಿಸಿದ್ದೆ. ಬೇರೆಬೇರೆ ತಂಡಗಳು ಬೇರೆಬೇರೆ ಸಾಮಗ್ರಿಗಳನ್ನು ಅಲ್ಲಿಂದಿಲ್ಲಿಗೆ ಸಾಗಿಸುವುದು ಮುಂತಾಗಿ ಸೂಕ್ಷ್ಮ ನಿಯಂತ್ರಣ ವ್ಯವಸ್ಥೆಯನ್ನು ಬೇಡುವ ಕಾರ್ಯಕ್ರಮ ಅದಾಗಿತ್ತು. ಸಮತೋಲನದಿಂದ, ಎಲ್ಲವೂ ಅಚ್ಚುಕಟ್ಟಾಗಿ ಸಾಗುವಂತೆ ಗಮನ ಹರಿಸಬೇಕು. ದೇವಸ್ಥಾನ ನಿರ್ಮಾಣದಲ್ಲೂ ಹಾಗೆಯೇ. ನೂರಾರು ಚಿಕ್ಕಪುಟ್ಟ ಕೆಲಸಗಳು ಒಂದಕ್ಕೊಂದು ಹೊಂದಿಕೊಂಡು ಸಾಗಿದರೇನೇ ಯೋಜನೆ ಯಶಸ್ವಿಯಾಗುವುದು. ಅದರಲ್ಲಿ ಕೆಲವು ಕೆಲಸಗಳು ಇನ್ನೊಂದರ ಮೇಲೆ ಅವಲಂಬಿತವಲ್ಲ, ಅವನ್ನು ಮೊದಲು ಕ್ಲುಪ್ತವಾಗಿ ಮುಗಿಸಿಕೊಂಡರೆ ಮುಂದಿನ ದಾರಿ ಸುಲಭ. ಅಂದಮಾತ್ರಕ್ಕೆ 'ದೊಡ್ಡ ಚಿತ್ರಣ'ವನ್ನು ಮರೆತು ಅಂಥ ಪುಟ್ಟ ಕೆಲಸಗಳಲ್ಲೇ ಮೈಮರೆತರೂ ಪ್ರಯೋಜನವಿಲ್ಲ. ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸುವ ದೇವಸ್ಥಾನವನ್ನು ಕಟ್ಟುವುದೆಂದರೆ ಸುಲಭದ ಮಾತಲ್ಲ. ಇದೆಲ್ಲದರಲ್ಲೂ ನನ್ನ ವಾಲ್‌ಮಾರ್ಟ್ ಉದ್ಯೋಗದ ಕೌಶಲವನ್ನು ನಾನು ದೇವಾಲಯ ನಿರ್ಮಾಣದಲ್ಲಿ ಧಾರಾಳವಾಗಿ ಬಳಸಿಕೊಂಡಿದ್ದೇನೆ.

ನಿರ್ಣಯ ನೈಪುಣ್ಯ (Decision Making)

ವಾಲ್‌ವಾರ್ಟ್‌ನಲ್ಲಿ ಉದ್ಯೋಗದಲ್ಲಿದ್ದಾಗ ವೃತ್ತಪತ್ರಿಕೆಗಳೊಂದಿಗೆ ವಿತರಣೆಯಾಗುವ ಜಾಹಿರಾತು ಪತ್ರಗಳಲ್ಲಿ ಯಾವಯಾವ ಉತ್ಪನ್ನಗಳನ್ನು ಸೇರಿಸಬೇಕೆಂದು ನಿರ್ಧರಿಸುವುದು ನನ್ನ ಜವಾಬ್ದಾರಿಯಾಗಿತ್ತು. ಪ್ರತಿಯೊಬ್ಬ ಗ್ರಾಹಕನಿಗೂ ತನಗೇ ಬೇಕಾದ ಉತ್ಪನ್ನವು ಆ ಜಾಹಿರಾತು ಪತ್ರದಲ್ಲಿರಬೇಕೆಂಬ ತುಡಿತ. ಅದರಿಂದಾಗಿ ಯಾವುದನ್ನು ಸೇರಿಸಬೇಕು ಯಾವುದನ್ನು ಬಿಡಬೇಕು ಎಂದು ಕಠಿಣ ಸವಾಲು. ಯಾವುದೋ ಒಂದು ಉತ್ಪನ್ನಕ್ಕೆ ನಾನು ಬೇಡ ಎಂದರೆ ಯಾಕೆ ಬೇಡ ಎಂದು ಉನ್ನತಾಧಿಕಾರಿಗಳಿಂದ ಸವಾಲು ಬರುತ್ತಿತ್ತು. ಆಗೆಲ್ಲ ದತ್ತಾಂಶಗಳನ್ನು ಆಧರಿಸಿ ವಸ್ತುನಿಷ್ಠವಾಗಿ ನಿರ್ಧರಿಸುವುದು, ನನ್ನ ವೈಯಕ್ತಿಕ ಖಯಾಲಿಗಳು ಅಲ್ಲಿ ಮೂಗು

ತೂರಿಸದಂತೆ ನೋಡಿಕೊಳ್ಳುವುದು ಮುಖ್ಯವಾಗಿತ್ತು. ಇದರಿಂದ ನನ್ನ ನಿರ್ಧಾರಗಳನ್ನು ಸಮರ್ಥಿಸಿಕೊಳ್ಳುವುದೂ ಸುಲಭವಾಯಿತು. ದೇವಸ್ಥಾನ ನಿರ್ಮಾಣದ ವೇಳೆಯೂ ಅನೇಕ ವಿಚಾರಗಳಲ್ಲಿ ಹೀಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭ ಬರುತ್ತಿತ್ತು. ವಾಸ್ತುಕಲೆಯಾಗಲೀ, ಒಳಚರಂಡಿ ವ್ಯವಸ್ಥೆಯಾಗಲೀ ನನಗೆ ಲವಲೇಶವೂ ಅನುಭವವಿಲ್ಲದ ವಿಚಾರಗಳಲ್ಲಿ ನಾನು ನಿರ್ಧಾರ ಕೈಗೊಳ್ಳಬೇಕಿತ್ತು! ಆಗೆಲ್ಲ ನಾನು ಅವಲಂಬಿಸಿದ್ದು ಸಂಬಂಧಪಟ್ಟ ಅಂಕಿಅಂಶಗಳ ಸಂಗ್ರಹಣೆ, ತಜ್ಞರ ಅಭಿಪ್ರಾಯ ಕ್ರೋಡೀಕರಣ, ಸಂಶೋಧನೆ, ಇತ್ಯಾದಿ. ಆಗಲೂ ನನ್ನ ನಿರ್ಧಾರಗಳು ಪ್ರಶ್ನೆಗೊಳಗಾದದ್ದಿದೆ. ಆದರೆ ಸಾಕಷ್ಟು ವಿಶ್ಲೇಷಣೆಯ ನಂತರವೇ ಆ ನಿರ್ಧಾರಗಳನ್ನು ಕೈಗೊಂಡಿತ್ತಾದ್ದರಿಂದ ಅವು ಮುರಿದುಬೀಳುತ್ತಿರಲಿಲ್ಲ. ದೇವಾಲಯ ನಿರ್ಮಾಣದ ವೇಳೆ, ವಾಸ್ತು-ವಿನ್ಯಾಸದ ಬಗ್ಗೆ, ಕಟ್ಟಡ ಕಾಮಗಾರಿಯ ಬಗ್ಗೆ, ಯೋಜನೆಯ ವೇಳಾಪಟ್ಟಿ ಮತ್ತು ಖರ್ಚುವೆಚ್ಚದ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುವ ಸನ್ನಿವೇಶಗಳು ಆಗಾಗ ಬರುತ್ತಿದ್ದವು. ಆರ್ಕಿಟೆಕ್ಟ್‌ನ ಸಲಹೆಯನ್ನೋ, ಗುತ್ತಿಗೆದಾರ ಒದಗಿಸುವ ಮಾಹಿತಿಯನ್ನೋ ಅಲ್ಲೇ ಪರಿಶೀಲಿಸಿ ಯೋಚಿಸಲು ಹೆಚ್ಚು ಸಮಯವಿಲ್ಲದೇ ನಿರ್ಣಯ ತೆಗೆದುಕೊಳ್ಳುವುದು ಅವಶ್ಯವಾಗುತ್ತಿತ್ತು. ಆ ನಿರ್ಣಯಗಳನ್ನು ತೆಗೆದುಕೊಳ್ಳುವುದೊಂದೇ ಅಲ್ಲ, ಆಮೇಲೆ ಆಡಳಿತ ಮಂಡಳಿಯ ಸದಸ್ಯರಿಗೆ ಅವುಗಳನ್ನು ವಿವರಿಸುವ ಜವಾಬ್ದಾರಿಯೂ ನನ್ನ ಮೇಲಿತ್ತು. ಅದೆಲ್ಲವನ್ನೂ ನಿಭಾಯಿಸುವುದು ನನಗೆ ಸಾಧ್ಯವಾದದ್ದು ನನ್ನ ವೃತ್ತಿಯ ಅನುಭವಗಳಿಂದಲೇ.

ಆಪತ್ತಿನ ನಿರ್ವಹಣೆ (Crisis Management)

2004ರಲ್ಲಿ ನಾನು ವಾಲ್‌ಮಾರ್ಟ್‌ನ ಇನ್ಫಾರ್ಮೇಶನ್ ಸಿಸ್ಟಮ್‌ಗೆ ಮ್ಯಾನೇಜರ್ ಆದೆ. ನಾನು ಆ ಸ್ಥಾನಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಎಲ್ಲ ಅಯೋಮಯವಾಗತೊಡಗಿತು. ಅಡಚಣೆಗಳನ್ನೆಲ್ಲ ನಿವಾರಿಸಿ ಮತ್ತೆ ಎಲ್ಲವನ್ನೂ ಹದ್ದುಬಸ್ತಿಗೆ ತರಬೇಕಿದ್ದರೆ ನಾನು ಸಮರೋಪಾದಿಯಲ್ಲಿ ಕೆಲಸ ನಿರ್ವಹಿಸಬೇಕಾಯ್ತು. 30ಕ್ಕೂ ಹೆಚ್ಚು ಜನ ಉದ್ಯೋಗಿಗಳ ನೆರವಿನಿಂದ 'ವಾರ್ ರೂಮ್' ಮಾದರಿಯಲ್ಲಿ ಕಾರ್ಯನಿರ್ವಹಿಸಿ ಎಲ್ಲ ತಂಡಗಳ ಕೆಲಸವನ್ನು ಸಂಯೋಜಿಸಿ, ಅಲ್ಲಿಂದ ಬರುವ ಮಾಹಿತಿಗಳನ್ನಾಧರಿಸಿ ಕ್ಷಣಮಾತ್ರದಲ್ಲಿ ನಿರ್ಣಯಗಳನ್ನು ಕೈಗೊಂಡು ಮುಂದಿನ ತಂತ್ರವನ್ನು ರೂಪಿಸಬೇಕಾಗುತ್ತಿತ್ತು. ರಾತ್ರಿಯಿಡೀ ನಿದ್ದೆಗೆಟ್ಟು ಕೆಲಸ ಮಾಡಿದ್ದೂ ಇದೆ. ಕ್ರಮೇಣ ಸಮಸ್ಯೆಯನ್ನು ಎದುರಿಸುವ ತಾರ್ಕಿಕ ವಿಧಾನಗಳನ್ನು ನಾನು ಕಂಡುಕೊಂಡೆ. ನನ್ನ ತಂಡದಲ್ಲಿದ್ದ ನುರಿತ ತಂತ್ರಜ್ಞರಿಗೆ ತಂತ್ರಜ್ಞಾನದ ಜವಾಬ್ದಾರಿ ಬಿಟ್ಟುಬಿಟ್ಟೆ, ಅವರ ಯೋಜನೆಗಳಿಗೆ ಅನುವು ಮಾಡುವ ಕೆಲಸಗಳನ್ನು ನಾನು ಕೈಗೊಂಡೆ. ಟೀಕೆಗಳು ಬಂದಾಗೆಲ್ಲ ಎದುರಿಸಲು ಸನ್ನದ್ಧಳಾದೆ. ಒಟ್ಟಿನಲ್ಲಿ ನಾವೆಲ್ಲರೂ ಸೇರಿ ಎಲ್ಲ

ಸಮಸ್ಯೆಗಳನ್ನೂ ನಿವಾರಿಸಿ ಇಡಿ ಇನ್ಫಾರ್ಮೇಶನ್ ಸಿಸ್ಟಮ್ ಸುಸೂತ್ರವಾಗಿ ಕಾರ್ಯನಿರ್ವಹಣೆಗೆ ಮರಳುವಂತೆ ಮಾಡಿದೆವು.

ಒಟ್ಟಭಿಪ್ರಾಯ ಜೋಡಣೆ (Driving to consensus)

ಒಬ್ಬ ಕನ್ಸಲ್ಟೆಂಟ್ ಆಗಿ ನನ್ನ ಜವಾಬ್ದಾರಿಯೆಂದರೆ ನಾನು ಕೆಲಸ ಮಾಡುವ ಕಂಪನಿಯು ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವಂತೆ ನೆರವಾಗುವುದು. ಕಂಪನಿ ಎಂದಮೇಲೆ ಅಲ್ಲಿ ವಿವಿಧ ಆಶೋತ್ತರಗಳ ಅಧಿಕಾರಿಗಳಿರುತ್ತಾರೆ. ಅವರವರದೇ ಆದ ದೃಷ್ಟಿಕೋನಗಳಿರುತ್ತವೆ. ಇಂಥದೇ ಸ್ಪಷ್ಟ ನಿರ್ಧಾರವನ್ನು ಮಂಡಿಸುವವರೆಂದು ಅಲ್ಲಾರೂ ಇರುವುದಿಲ್ಲ. ಬದಲಿಗೆ, ಒಂದು ನಿರ್ಧಾರಕ್ಕೆ ಒಟ್ಟಭಿಪ್ರಾಯದ ಬೆಂಬಲ ದೊರಕಿಸಿಕೊಳ್ಳುವ ಪ್ರಕ್ರಿಯೆಯೇ ಹೆಚ್ಚಾಗಿ ನಡೆಯುತ್ತದೆ. ಹಾಗಾಗಿ ನನ್ನ ಪಾತ್ರವೆಂದರೆ ಎಲ್ಲ ಅಧಿಕಾರಿಗಳನ್ನೂ ಒಟ್ಟುಸೇರಿಸಿ ಅವರ ಅಭಿಪ್ರಾಯಗಳೆಲ್ಲವನ್ನೂ ಕ್ರೋಡೀಕರಿಸಿ ಒಂದು ನಿರ್ಧಾರವನ್ನು ಪ್ರಸ್ತುತಪಡಿಸುವುದು. ದೇವಸ್ಥಾನದ ಕೆಲಸಗಳಿಗೆ ಸಂಬಂಧಪಟ್ಟ ಸಭೆಗಳಲ್ಲೂ ಹಾಗೇ ಆಗುತ್ತಿತ್ತು. ಹಿಂದೂಗಳಲ್ಲಿ ಅಭಿಪ್ರಾಯ-ಆಚಾರ-ವಿಚಾರಗಳ ವೈವಿಧ್ಯಕ್ಕೆ ಎಣೆಯಿಲ್ಲ. ಆಡಳಿತ ಮಂಡಳಿಗೆ ನಾನು ಅಧ್ಯಕ್ಷೆಯಾಗಿದ್ದೆನಾದರೂ ಹಿಂದೂ ಸಮುದಾಯದ ಜನಾಭಿಪ್ರಾಯಕ್ಕೆ ವಿರೋಧವಾಗಿ ನಾನು ಏನನ್ನೂ ಠರಾವು ಮಾಡುವಂತಿಲ್ಲವಲ್ಲ? ಸಭೆಗಳಲ್ಲಿ ಎಲ್ಲರಿಂದ ಎಲ್ಲರೀತಿಯ ಅಭಿಪ್ರಾಯಗಳಿಗೂ ಮುಕ್ತ ಅವಕಾಶ ಕೊಡಬೇಕಾಗುತ್ತಿತ್ತು. ಕೆಲವೊಮ್ಮೆಯಂತೂ ನನಗೆ ವೈಯಕ್ತಿಕವಾಗಿ ಇಷ್ಟವಾಗದ ಅಭಿಪ್ರಾಯವನ್ನೂ ಇನ್ನೊಬ್ಬರ ಸಲುವಾಗಿ ಅವರ ಅನುಪಸ್ಥಿತಿಯಲ್ಲಿ ನಾನು ಪ್ರಸ್ತುತಪಡಿಸಬೇಕಾಗುತ್ತಿತ್ತು. ಸಭೆ ಬರೀ ಕಾಲಹರಣವಾಗದಂತೆಯೂ ನೋಡಿಕೊಳ್ಳಬೇಕಾಗುತ್ತಿತ್ತು. ಕೊನೆಗೂ ಎಲ್ಲರಿಗೂ ಒಪ್ಪಿಗೆಯಾಗುವಂಥ ವಿನ್ಯಾಸವನ್ನು ನಾವೆಲ್ಲರೂ ಸೇರಿ ನಿರ್ಧರಿಸುವಲ್ಲಿ ಯಶಸ್ವಿಯಾದೆವು.

ಗುತ್ತಿಗೆಗಳು (Contracts)

ವಾಲ್‌ಮಾರ್ಟ್‌ನಲ್ಲಿ ಉತ್ಪನ್ನಗಳ ಪ್ರದರ್ಶನ ವ್ಯವಸ್ಥೆಯಲ್ಲಿ ನಾನು ಹೊರಗುತ್ತಿಗೆದಾರರೊಂದಿಗೆ ಚೌಕಾಶಿ ನಡೆಸಿ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳಬೇಕಿತ್ತು. ಪುಟಗಟ್ಟಲೆ ದಸ್ತಾವೇಜುಗಳನ್ನು ಓದಿ, ಪ್ರಮುಖ ಅಂಶಗಳ ಟಿಪ್ಪಣಿ ಮಾಡಿ, ಒಪ್ಪಂದಕ್ಕೆ ಸಹಿ ಹಾಕುವ ಉನ್ನತಾಧಿಕಾರಿಗೆ ಸಂಕ್ಷಿಪ್ತವಾಗಿ ಎಲ್ಲವನ್ನೂ ವಿವರಿಸಿ ಗುತ್ತಿಗೆಪತ್ರವನ್ನು ಸಿದ್ಧಪಡಿಸಲು ಸಾಕಷ್ಟು ಶ್ರಮ ಪಡಬೇಕಾಗುತ್ತಿತ್ತು. ಗುತ್ತಿಗೆಗಳ ವಿಷಯದಲ್ಲಿ ನಾನು ವಕೀಲರೊಂದಿಗೂ ವ್ಯವಹಾರ, ವಿಚಾರವಿನಿಮಯ ನಡೆಸಬೇಕಾಗಿ ಬರುತ್ತಿತ್ತು. ಈ ಎಲ್ಲ ಅನುಭವಗಳಿಂದ ದೇವಸ್ಥಾನದ ಕೆಲಸಗಳ ಗುತ್ತಿಗೆ ವೇಳೆಯಲ್ಲೂ ದಸ್ತಾವೇಜುಗಳನ್ನು ಓದಿಕೊಳ್ಳುವುದು, ಪ್ರಮುಖ ಅಂಶಗಳ ಬಗ್ಗೆ ಪ್ರಶ್ನೆ ಕೇಳಿ

ಉತ್ತರಗಳನ್ನು ಪಡೆದುಕೊಳ್ಳುವುದು ಮುಂತಾದವು ಸುಲಭಸಾಧ್ಯವಾಯಿತು. ಆರ್ಥಿಕವಾಗಿ ದೊಡ್ಡ ಮೊತ್ತದ ಬಾಬ್ತುಗಳಾದ್ದರಿಂದ ಇವೆಲ್ಲ ಪ್ರಾಮುಖ್ಯ ಗಳಿಸುವ ಅಂಶಗಳಾಗಿದ್ದವು.

ನಾನು ನನ್ನ ಅನುಭವವನ್ನಷ್ಟೇ ಅಲ್ಲ ದೇವಸ್ಥಾನದ ಆಡಳಿತ ಮಂಡಳಿಯ ಇತರ ಸದಸ್ಯರೂ ತಂತಮ್ಮ ಅನುಭವ ಮತ್ತು ಕೌಶಲಗಳನ್ನು ಧಾರೆಯೆರೆಯುವಂತೆ ಪ್ರೋತ್ಸಾಹಿಸಿದೆ. ವಾಸ್ತುಶಿಲ್ಪಿ ಮತ್ತು ಕಟ್ಟಡ ನಿರ್ಮಾತೃ ತಮ್ಮ ಅನುಭವವನ್ನು ಎರಕ ಹೊಯ್ದರು. ಭಕ್ತಾದಿಗಳಿಗೆ ದೇವಸ್ಥಾನದಲ್ಲಿ ಯಾವ್ಯಾವ ಅಂಶಗಳು ಪ್ರಮುಖವಾಗುತ್ತವೆ ಎಂದು ಅರ್ಥಮಾಡಿಕೊಳ್ಳುವಲ್ಲಿ ಆಡಳಿತ ಮಂಡಳಿಯ ಇತರ ಸದಸ್ಯರು ಮತ್ತು ಸಮುದಾಯದಲ್ಲಿನ ಪ್ರಭಾವಿ ವ್ಯಕ್ತಿಗಳು ನನಗೆ ನೆರವಾದರು. ಈ ಎಲ್ಲ ಪರಿಣತರನ್ನು ಒಂದುಗೂಡಿಸುವುದಷ್ಟೇ ನನ್ನ ಮುಖ್ಯ ಕೆಲಸವಾಯಿತು. ಯಶಸ್ವಿ ಸಂಸ್ಥೆಗಳೆಲ್ಲ ಹೇಗೆ ತಮ್ಮ ಮುಂದಾಳುಗಳ ಮತ್ತು ಉದ್ಯೋಗಿಗಳ ಪ್ರತಿಭೆ ಮತ್ತು ಅನುಭವಗಳಿಂದ ಲಾಭ ಪಡೆಯುತ್ತವೋ ಹಾಗೆಯೇ ಹಿಂದೂ ದೇವಸ್ಥಾನಗಳೂ ಸಮುದಾಯದ ಜನರ ಪ್ರತಿಭೆ ಮತ್ತು ಅನುಭವಗಳಿಂದ ಲಾಭ ಪಡೆಯಬಹುದೆನ್ನುವುದರಲ್ಲಿ ಸಂಶಯವೇ ಇಲ್ಲ!

ಸಂಗೀತ ಮತ್ತು ಸಾಂತ್ವನ



– ವಿಮಲಾ ರಾಜಗೋಪಾಲ್

ನಾನು ಈ ದೇಶಕ್ಕೆ ಕಾಲಿಟ್ಟದ್ದು 1967ರಲ್ಲಿ. ಮೂರೂವರೆ ವರ್ಷದ ನನ್ನ ಪುಟ್ಟ ಮೊದಲ ಮಗಳನ್ನೂ ಒಂದು ತಂಬೂರಿಯನ್ನೂ ಹಿಡಿದು ನಾನು ನ್ಯೂಯಾರ್ಕಿನ ಕೆನೆಡಿ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಈ ದೇಶಕ್ಕೆ ಒಂದು ವರ್ಷದ ಹಿಂದೆಯೇ ಬಂದಿದ್ದ ನನ್ನ ಪತಿ ರಾಜಗೋಪಾಲ್ ತಾವು ಓದುತ್ತಿದ್ದ ಪೆನ್ಸಿಲ್ವೇನಿಯಾ ಸ್ಟೇಟ್ ಯೂನಿವರ್ಸಿಟಿ ಇರುವ ಸ್ಟೇಟ್ ಕಾಲೇಜ್ ಎಂಬ ಊರಿನಿಂದ ಅಲ್ಲಿಗೆ ಬಂದು ನಮ್ಮನ್ನು ಸ್ವಾಗತಿಸಿದರು. ಸಮೀಪದ ಬ್ರಾಂಕ್ಸ್‌ನಲ್ಲಿ ನಾಲ್ಕು ದಿನ ತಂಗಿದ್ದು, ನ್ಯೂಯಾರ್ಕಿನ ಕೆಲವು ಮುಖ್ಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಪೆನ್ಸಿಲ್ವೇನಿಯಾ ರಾಜ್ಯದ ಮಧ್ಯೆ ಇರುವ ಸ್ಟೇಟ್ ಕಾಲೇಜಿಗೆ ಬಂದು ತಲುಪಿದೆವು.

ಸ್ಟೇಟ್ ಕಾಲೇಜ್ ಬಹಳ ಸುಂದರವಾದ ಊರು. ಅದನ್ನು ನಲಿವಿನ ಕಣಿವೆ (Happy Valley) ಎಂದೇ ಇಲ್ಲಿನವರು ಕರೆಯುತ್ತಾರೆ. ಸಾವಿರಾರು ವಿದ್ಯಾರ್ಥಿಗಳಿಂದ ಥಳಥಳಿಸುತ್ತಿದ್ದ ಆ ಊರಲ್ಲಿ ಉತ್ಸಾಹಕ್ಕೇನೂ ಕೊರತೆಯಿರಲಿಲ್ಲ. ನನ್ನ ಪುಟ್ಟ ಮಗಳಿಗೆ ತಂದೆಯಿಂದ ಒಂದು ವರ್ಷ ಅಗಲಿದ್ದು ಈಗ ಮತ್ತೆ ಅವರೊಡನೆ ಇರುವಂತಾದದ್ದು ತುಂಬಾ ಸಂತೋಷ ತಂದಿತ್ತು. ನಾವು ಅಲ್ಲಿ ಆಗಲೇ ನೆಲಸಿದ್ದ ಹಲವಾರು ಭಾರತೀಯ ಕುಟುಂಬಗಳ ಪರಿಚಯ ಮಾಡಿಕೊಂಡೆವು. ಅಲ್ಲದೆ, ನಾವು ವಾಸಿಸುತ್ತಿದ್ದ Graduate Circle ಅಪಾರ್ಟ್‌ಮೆಂಟುಗಳು ಮದುವೆಯಾದ, ಪುಟ್ಟ ಸಂಸಾರಗಳಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿಯೇ ಇದ್ದುದರಿಂದ, ನಮ್ಮ ಸ್ಥಿತಿಯಲ್ಲೇ ಇದ್ದ ಅನೇಕ ಅಮೆರಿಕನ್ ವಿದ್ಯಾರ್ಥಿ ಸಂಸಾರಗಳ ಪರಿಚಯವಾಯಿತು. ಆ ಊರಲ್ಲಿ ನಮಗೆ ಪರಿಚಿತರಾದ ಹಲವರು ಈಗಲೂ ನಮಗೆ ಬಹಳ ಹತ್ತಿರದವರಾಗಿದ್ದಾರೆ.

ಸ್ಟೇಟ್ ಕಾಲೇಜಿನಲ್ಲಿ 1969ರವರೆಗೆ ಇದ್ದು ಆಮೇಲೆ ನಾವು ಅದೇ ರಾಜ್ಯದ ಫಿಲಡೆಲ್ಫಿಯಾ ಬಳಿಗೆ ಬಂದು ಸಂಸಾರ ಹೂಡಿದೆವು. ಇದು ಆಗ್ಗೆ ಅಮೆರಿಕದ ನಾಲ್ಕನೆಯ ದೊಡ್ಡ ಪಟ್ಟಣವಾಗಿತ್ತು. ನೂರಾರು ಚರಿತ್ರಾರ್ಹ ಸ್ಥಳಗಳು, ಪ್ರಖ್ಯಾತವಾದ ಕಾಲೇಜುಗಳು, ಮ್ಯೂಝಿಯಮ್ಮುಗಳು, ಸಂಗೀತ ಸಂಸ್ಥೆಗಳು, ಪಾರ್ಕುಗಳು, ಇತ್ಯಾದಿ ಎಲ್ಲಾ ಇದ್ದರೂ ನಾವು ಮೊದಲು ಬಂದ ಪುಟ್ಟ ಊರಿನ ಚೆಲುವು ಇಲ್ಲಿ ಕಾಣುತ್ತಿರಲಿಲ್ಲ. ಅನೇಕ ವರ್ಷಗಳು ನಾವು ಅಲ್ಲಿಗೆ ಪ್ರತಿ ವರ್ಷವೂ ಹೋಗಿ ಪ್ರೀತಿಯ ಗೆಳೆಯರನ್ನು

ನೋಡಿ ಬರುತ್ತಿದ್ದೆವು.

ನನ್ನ ಗಂಡ ವಿದ್ಯಾರ್ಥಿಯಾಗಿ ಇಲ್ಲಿ ಬಂದದ್ದರಿಂದ ನನ್ನ ವೀಸಾದಲ್ಲಿ ಇಲ್ಲಿ ಕೆಲಸ ಮಾಡುವ ಅವಕಾಶ ನನಗಿರಲಿಲ್ಲ. ನಾನು ಸ್ವಲ್ಪ ಹಣಗಳಿಸಿದ್ದು ನಾನು ಎಂದೂ ಮಾಡದಿದ್ದ 'ಬೇಬಿ ಸಿಟಿಂಗ್'– ಮಕ್ಕಳನ್ನು ನೋಡಿಕೊಳ್ಳುವುದರ– ಮೂಲಕ. 1971ರ ಹೊತ್ತಿಗೆ ಗ್ರೀನ್ ಕಾರ್ಡ್ ಪಡೆದು ಕೆಲಸ ಮಾಡುವ ಅರ್ಹತೆ ಗಳಿಸಿಕೊಂಡಿದ್ದೆ. ಇಲ್ಲಿ ಬರುವ ಮುಂಚೆ ಭಾರತದಲ್ಲಿಯೂ ನಾನು ಯಾವಾಗಲೂ ಕೆಲಸ ಮಾಡುತ್ತಿದ್ದೆ. ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. ಆನರ್ಸ್ ಮುಗಿಸಿ, ಆಕಾಶವಾಣಿ ವಿಜಯವಾಡ ಕೇಂದ್ರದಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಇಲ್ಲಿ ಕೆಲಸದ ಪರವಾನಗಿ ದೊರೆತರೂ ನಾನು ಕೆಲಸಕ್ಕೆ ಹೋಗದಿದ್ದುದಕ್ಕೆ ಕಾರಣ, ಇಲ್ಲಿ ಬಂದಮೇಲೆ ನಮ್ಮ ಸಂಸಾರ ಬೆಳೆದದ್ದು (ಇನ್ನೊಬ್ಬ ಮಗಳು, ಒಬ್ಬ ಮಗ), ಮತ್ತು ಮಕ್ಕಳು ಬೆಳೆದು ದೊಡ್ಡವರಾಗುವವರೆಗೂ ಅವರಿಗಾಗಿ ಹೆಚ್ಚಿನ ಗಮನ ಕೊಡಬೇಕೆಂದು ನಾನು ಮಾಡಿಕೊಂಡ ನಿರ್ಧಾರ.

ನನಗೆ ಚಿಕ್ಕಂದಿನಿಂದಲೂ ಹೊರಗಿನ ಚಟುವಟಿಕೆಗಳಲ್ಲಿ ತುಂಬಾ ಆಸಕ್ತಿ. ನಮ್ಮ ತಂದೆ ಶ್ರೀ ಎಲ್. ಗುಂಡಪ್ಪನವರು ನಮ್ಮನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಹಾಗೂ ಇತರ ಎಲ್ಲ ಸಾಹಿತ್ಯ ಕಾರ್ಯಕ್ರಮಗಳಲ್ಲೂ ಭಾಗವಹಿಸಲು ಪ್ರೋತ್ಸಾಹಿಸುತ್ತಿದ್ದರು. ನಮ್ಮ ಚಿಕ್ಕಪ್ಪ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು, ನನ್ನ ಅಕ್ಕ ಎಲ್.ಜಿ. ಸುಮಿತ್ರಳಿಗೂ ನನಗೂ ನೂರಾರು ಜಾನಪದ ಗೀತೆಗಳನ್ನು ಅಚ್ಚ ಧಾಟಿಯಲ್ಲಿ ಹಾಡಲು ಕಲಿಸಿದ್ದರು. ನಮ್ಮ ಸಂಗೀತದ ಉಪಾಧ್ಯಾಯರಾಗಿದ್ದ ಶ್ರೀ ಚಿ. ವಿಶ್ವೇಶ್ವರಯ್ಯನವರು ನಮ್ಮನ್ನು ಬೆಂಗಳೂರಿನ ಎಲ್ಲ ಒಳ್ಳೆ ಸಂಗೀತ ಕಾರ್ಯಕ್ರಮಗಳಿಗೂ ಕರೆದೊಯ್ಯುತ್ತಿದ್ದರು. ಜೊತೆಗೆ ನಮಗೆ ಶ್ರೀಮತಿ ಕಲ್ಯಾಣಮ್ಮನವರ ಮಕ್ಕಳ ಕೂಟ, ನಾನು ಹೋಗುತ್ತಿದ್ದ ಶಾಲಾ ಕಾಲೇಜುಗಳು, ಇವುಗಳಿಂದೆಲ್ಲ ನಾನಾ ರೀತಿಯ ಪ್ರೋತ್ಸಾಹ ದೊರೆಯುತ್ತಿತ್ತು. ಮುಖ್ಯ ಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರ ಸರ್ಕಾರ ನಡೆಸುತ್ತಿದ್ದ ಸಂಸ್ಕೃತಿ ಪ್ರಸಾರ ಯೋಜನೆಯಲ್ಲಿ ನನ್ನ ಅಕ್ಕನೂ ನಾನೂ ಅನೇಕ ಹಳ್ಳಿಗಳಿಗೆ ಹೋಗಿ ಕಾರ್ಯಕ್ರಮಗಳನ್ನು ಕೊಟ್ಟುಬರುತ್ತಿದ್ದೆವು. ಪ್ರಸಿದ್ಧ ಕಲಾವಿಮರ್ಶಕರಾದ ಶ್ರೀ ಜಿ. ವೆಂಕಟಾಚಲಂ ಅವರ ಮೂಲಕ ಅನೇಕ ಉತ್ತಮ ಕಲಾವಿದರ ಪರಿಚಯವಾಗಿತ್ತು. ತಪ್ಪದೆ ರೇಡಿಯೋ ಕಾರ್ಯಕ್ರಮಗಳಿಗೆ ಆಹ್ವಾನ ಬರುತ್ತಿತ್ತು.

ಈ ಹಿನ್ನೆಲೆಯಿಂದ ಬಂದ ನಾನು ನನ್ನ ಈ ಬಿಡುವಿನ ವೇಳೆಯನ್ನು ಇಲ್ಲಿನ ನಾನಾ ಸಂಸ್ಥೆಗಳೊಂದಿಗೆ ಸಂಪರ್ಕ ಬೆಳೆಸಿಕೊಂಡು ಅವುಗಳ ಅಂಗವಾಗಿ ಭಾರತೀಯ ಸಂಸ್ಕೃತಿಯನ್ನು ಇಲ್ಲಿನವರಿಗೆ ಪರಿಚಯ ಮಾಡಿಸುವ ಕಾರ್ಯಕಮಗಳನ್ನು ಮಾಡುತ್ತಿದ್ದೆ. ಕೋಲಾರಕ್ಕೆ ಹೋಗುತ್ತಿದ್ದ ಒಂದು ಅಮೆರಿಕನ್ ಪೀಸ್ ಕೋರ್ ತಂಡಕ್ಕೆ ಕ್ಯಾಲಿಫೋರ್ನಿಯಾದಲ್ಲಿ ಕನ್ನಡ ಕಲಿಸಿದೆ. ಇಲ್ಲಿನ ಯೂನಿವರ್ಸಿಟಿ ಆಫ್

ಪೆನ್ಸಿಲ್ವೇನಿಯಾದವರು ನಡೆಸುತ್ತಿದ್ದ International Class Room ಕಾರ್ಯಕ್ರಮದಲ್ಲಿ ಇಲ್ಲಿನ ಅನೇಕ ಶಾಲೆಗಳಲ್ಲಿ ಭಾರತದ ಬಗ್ಗೆ ಉಪನ್ಯಾಸ ಮಾಡುತ್ತಿದ್ದೆ. ಫಿಲಡೆಲ್ಫಿಯಾ ಮ್ಯೂಜಿಯಮ್ ಆಫ್ ಆರ್ಟ್, ಫ್ರಾಂಕ್ಲಿನ್ ಇನ್ಸ್ಟಿಟ್ಯೂಟ್, ಲಾಂಗ್‌ವುಡ್ ಗಾರ್ಡನ್ಸ್ ಮುಂತಾದ ಪ್ರಖ್ಯಾತ ಸಂಸ್ಥೆಗಳಲ್ಲಿ ಕನ್ನಡ ಜಾನಪದ ಸಂಗೀತದ ಬಗ್ಗೆ, ಭಾರತದ ಬಗ್ಗೆ ಹಾಡಿಕೆ ಭಾಷಣಗಳನ್ನಿತ್ತೆ. ಇಲ್ಲಿನ ಪ್ರಸಿದ್ಧ ವ್ಯಾಪಾರೀ ಸಂಸ್ಥೆಗಳಾದ ಬ್ಲೂಮಿಂಗ್‌ಡೇಲ್ಸ್ (Bloomoingdale's) ಮತ್ತು ಜೆ.ಸಿ. ಪೆನ್ನಿ (J.C. Penney) ಕಂಪೆನಿಗಳು ಭಾರತದ ವಸ್ತುಗಳ ಮಾರಾಟವನ್ನು ಉತ್ತೇಜಿಸಲು ಏರ್ಪಡಿಸಿದ್ದ ಪ್ರಚಾರ ಕಾರ್ಯಕ್ರಮಗಳಲ್ಲಿ ಸಲಹೆಗಾರಳಾಗಿ ಹಲವಾರು ಕಾರ್ಯಕ್ರಮಗಳನ್ನು ನಿಯೋಜಿಸಿದ್ದೆ. 1976ರಲ್ಲಿ ಅಮೆರಿಕದ 200ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಭಾರತೀಯ ಸಮುದಾಯದ ಪರವಾಗಿ ಎರಡು ದೊಡ್ಡ ಕಲಾತ್ಮಕ ವಿನೋದಾವಳಿಗಳನ್ನು ಏರ್ಪಡಿಸಿದ್ದೆ. ಅಲ್ಲದೆ ಮಕ್ಕಳಿಗಾಗಿಯೇ ನನ್ನ ಪತಿಯೂ ನಾನೂ ನಮ್ಮ ಇತರ ಕೆಲವು ಗೆಳೆಯರೊಂದಿಗೆ ಇಂಡಸ್ ಎಂಬ ಸಂಸ್ಥೆ ಸ್ಥಾಪಿಸಿ, ಅದರ ಕಾರ್ಯದಲ್ಲಿ ತುಂಬ ಮುಳುಗಿದ್ದೆ. (ಈ ಬಗ್ಗೆ ರಾಜಗೋಪಾಲ್ ತಮ್ಮ ಲೇಖನದಲ್ಲಿ ಬರೆದಿದ್ದಾರೆ.)

1988ರ ಹೊತ್ತಿಗೆ ಮಕ್ಕಳು ದೊಡ್ಡವರಾಗಿದ್ದರು. ಮೊದಲ ಮಗಳು ಆಗಲೇ ಕಾಲೇಜು ಮುಗಿಸಿದ್ದಳು. ಎರಡನೆಯವಳು ಕಾಲೇಜು ಮೆಟ್ಟಿಲು ಹತ್ತಿ ಒಂದು ವರ್ಷಕ್ಕೆ ಇಂಗ್ಲೆಂಡಿಗೆ ಹೋಗಿದ್ದಳು. ಮಗ, ಕಿರಿಯವನು ಇನ್ನೊಂದು ವರ್ಷದಲ್ಲಿ ಹೈ ಸ್ಕೂಲು ಮುಗಿಸಿ ಕಾಲೇಜು ಹತ್ತುವುದರಲ್ಲಿದ್ದ. ಆಗ ಇನ್ನು ಮುಂದೆ ನಾನು ಪೂರ್ಣಾವಧಿಯ (full-time) ಕೆಲಸಕ್ಕೆ ಹೋಗಬಹುದೇನೋ ಎನ್ನಿಸಿತು. ನನ್ನ ಕಾರ್ಯಕ್ರಮಗಳನ್ನೆಲ್ಲ ಉತ್ಸಾಹದಿಂದ ನೋಡಿದ್ದ ನನ್ನ ಗೆಳತಿಯೊಬ್ಬಳು ತಾನು ಕೆಲಸ ಮಾಡುತ್ತಿದ್ದ ಎಲ್ವಿನ್ ಸಂಸ್ಥೆಯಲ್ಲಿ ಏಕೆ ನಾನು ಕೆಲಸಕ್ಕೆ ಪ್ರಯತ್ನಿಸಬಾರದು ಎಂದು ಸೂಚಿಸಿದಳು. ನನಗೆ ಅದುವರೆಗೆ ಆ ಸಂಸ್ಥೆಯ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಅದು ನಮ್ಮ ಮನೆಗೆ ಹತ್ತಿರದಲ್ಲೆ ಇದೆ. ಅದೊಂದು ದೈಹಿಕ ಮಾನಸಿಕ ದೌರ್ಬಲ್ಯಗಳಿರುವ ವ್ಯಕ್ತಿಗಳನ್ನು ನೋಡಿಕೊಳ್ಳುವ, ವಸತಿ ಮತ್ತು ಶಿಕ್ಷಣ ನೀಡುವ ಸಂಸ್ಥೆ. ಸುಮಾರು 150 ವರ್ಷಕ್ಕೂ ಹೆಚ್ಚು ಕಾಲದಿಂದಲೂ ಈ ಬಗೆಯ ಸೇವೆ ಸಲ್ಲಿಸುತ್ತಿರುವ ಸಂಸ್ಥೆ. ಅಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಂದ ಹಿಡಿದು ನೂರು ವಯಸ್ಸು ದಾಟಿದ ವೃದ್ಧರವರೆಗೂ ನಾನಾ ರೀತಿಯ ಜನ ಇದ್ದಾರೆ. ಅಲ್ಲೇ ಅವರಿಗೆ ವಾಸಿಸಲು ತಕ್ಕ ಏರ್ಪಾಡುಗಳಿವೆ. ಹೊರಗಿನಿಂದಲೂ ಜನ ಶಿಕ್ಷಣಕ್ಕೆ ಬಂದು ಹೋಗುತ್ತಾರೆ. ಕಟ್ಟಡದ ಒಳಗೂ, ಹೊರಗೂ ಎರಡು ದೊಡ್ಡ ಈಜುಕೊಳಗಳಿವೆ. ದೊಡ್ಡ ಆಟದ ಮೈದಾನದ ಸೌಕರ್ಯವಿದೆ. ಅಲ್ಲಿನ ದೈಹಿಕ, ಮಾನಸಿಕ ವಿಹಾರ ವಿಭಾಗದಲ್ಲಿ (Recreation Department) ಕೆಲಸ ಮಾಡಲು ಹಲವಾರು ತಜ್ಞರು ಬೇಕಾಗಿದ್ದರು. ನನಗೆ ಸಂಗೀತದಲ್ಲಿದ್ದ ಪರಿಶ್ರಮ ಆಸಕ್ತಿಗಳನ್ನು ಕಂಡ ನನ್ನ ಗೆಳತಿ ನನ್ನನ್ನು ಅಲ್ಲಿ ಸೇರಲು ಸಲಹೆ ಮಾಡಿದ್ದಳು.

ಬೇರು ಸೂರು

ನಾನೇನೋ ನನ್ನ ಅರ್ಹತಾಪತ್ರ (ರೆಸ್ಯುಮೆ) ಹಿಡಿದು ಹೋದೆ. ಆದರೆ ಅದರಿಂದ ಏನೂ ಪರಿಣಾಮವಾಗಲಿಲ್ಲ. ಮೇಲಧಿಕಾರಿಗಳು ಆ ಇಡೀ ವಿಭಾಗವನ್ನು ಪುನರ್ವ್ಯವಸ್ಥೆ ಮಾಡುವ ಯೋಚನೆಯಲ್ಲಿದ್ದರೆಂದು ಆಮೇಲೆ ತಿಳಿಯಿತು. ಅದೆಲ್ಲ ವ್ಯವಸ್ಥೆಯಾಗುವವರೆಗೆ ಯಾರನ್ನೂ ಕೆಲಸಕ್ಕೆ ತೆಗೆದುಕೊಳ್ಳುವಂತಿರಲಿಲ್ಲ.

ಆದರೆ, ಮುಂದಿನ ಕೆಲವು ತಿಂಗಳಲ್ಲಿ ಅದೇ ಗೆಳತಿ ನನ್ನನ್ನು ಮತ್ತೆ ಕರೆದು, 'ಈಗ ಇನ್ನೊಮ್ಮೆ ಅದೇ ವಿಭಾಗದಲ್ಲಿ ಪ್ರಯತ್ನ ಮಾಡು, ಆ ಹಳೆಯ ಅಧಿಕಾರಿ ಹೋಗಿ ಈಗ ಇಲ್ಲಿ ಹೊಸದಾಗಿ ಒಬ್ಬಳು ಬಂದಿದ್ದಾಳೆ, ಚುರುಕಾಗಿ ಕಾಣಿಸುತ್ತಾಳೆ, ಹೊಸ ವಿಚಾರಗಳಲ್ಲಿ ಆಸಕ್ತಿ ಇರುವಂತಿದೆ, ಬಂದು ಅವಳನ್ನು ಭೇಟಿಯಾಗು' ಅಂದಳು. ಸರಿ ಮತ್ತೆ ಹೋದೆ. ಈ ಸಲ ನಾನು ಕಂಡವಳು ಸೂ ಟಾಂಸನ್. ನನ್ನ ಗೆಳತಿ ಹೇಳಿದಂತೆಯೇ ಸೂ ಟಾಂಸನ್ ಚುರುಕಾಗಿದ್ದಳು. ನನ್ನ ರೆಸ್ಯುಮೆ ಓದಿ ತುಂಬ ಸಂತೋಷ ವ್ಯಕ್ತಪಡಿಸಿದಳು. ಬರೀ ಒಂದೇ ರೀತಿ ಒಂದೇ ಕೆಲಸದಲ್ಲಿ ಹೋಗುತ್ತಿರುವವರಿಗಿಂತ ಹೀಗೆ ನಾನಾ ರೀತಿಯ ಜನಗಳೊಂದಿಗೆ ಬೆರೆತು ಅವರೆಲ್ಲರೊಡನೆ ಕೆಲಸಮಾಡುವ ಆಸಕ್ತಿ ಸಾಮರ್ಥ್ಯ ಇರುವವರೇ ಬೇಕು ನಮಗೆ, ಯಾವಾಗಿನಿಂದ ಕೆಲಸಕ್ಕೆ ಬರುತ್ತೀಯ ಎಂದು ಅಲ್ಲೇ ನನಗೆ ಕೆಲಸದ ಆಹ್ವಾನ ಕೊಟ್ಟಳು. ಆಗ ಇಲ್ಲಿನ ಸ್ವಾತಂತ್ರೋತ್ಸವ ಸಮಯ, ಅಂದರೆ, ಜುಲೈ ನಾಲ್ಕು. ಅದು ಸಾರ್ವತ್ರಿಕ ರಜಾದಿನ. ಅದು ಮುಗಿದ ಕೂಡಲೆ ಕೆಲಸಕ್ಕೆ ಬರಬಹುದು ಎಂದಳು. ನನಗೂ ಸಂತೋಷವಾಯಿತು. ಆದರೆ ಅಂದು ನನಗೆ ಮುಂದೆ ಆ ಕೆಲಸ ಎಷ್ಟು ಅನನ್ಯವಾದ ಮಾನವೀಯ ಅನುಭವಗಳನ್ನು ನೀಡುವುದಿತ್ತು, ಅದರ ಮೂಲಕ ನಾನು ನನ್ನ ಅಮೆರಿಕನ್ ಜೀವನದಲ್ಲಿ ಎಷ್ಟು ವಿಶಿಷ್ಟಳಾದ ಒಬ್ಬ ವ್ಯಕ್ತಿಯನ್ನು ಕಾಣುವುದಿತ್ತು ಎಂದು ಊಹಿಸಿರಲಿಲ್ಲ. ಆಗ ಸೇರಿದವಳು ಅಲ್ಲಿ ಸುಮಾರು 20 ವರ್ಷ ಕೆಲಸಮಾಡಿದೆ. (ಹಾಗೆ ಅಲ್ಲಿ ಕೆಲಸ ಮಾಡುತ್ತಿದ್ದಾಗಲೇ ಸುಮಾರು ಹತ್ತು ವರುಷ ಇಲ್ಲಿನ ಯೂನಿವರ್ಸಿಟಿ ಆಫ್ ಪೆನ್ಸಿಲ್ವೇನಿಯಾದ ದಕ್ಷಿಣ ಏಷ್ಯಾ ಪ್ರಾದೇಶಿಕ ಅಧ್ಯಯನ ವಿಭಾಗದಲ್ಲಿ (South Asia Regional Studies Department) ನಾನು ಕನ್ನಡ ಪಾಠ ಹೇಳುತ್ತಿದ್ದೆ. ಒಂದು ಕಡೆ ಬುದ್ಧಿ ಬೆಳವಣಿಗೆಯಲ್ಲಿ ಹಿಂದುಳಿದವರ ಜೊತೆ ವ್ಯವಹರಿಸುತ್ತಿದ್ದರೆ, ಇನ್ನೊಂದು ಕಡೆ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಗಳೊಂದಿಗೆ ವ್ಯವಹರಿಸುತ್ತಿದ್ದೆ. ಇದೊಂದು ಸ್ವಾರಸ್ಯಕರವಾದ ಸವಾಲೇ ಆಗಿತ್ತು!)

ಎಲ್ವಿನ್ ಸಂಸ್ಥೆಯನ್ನು ಸ್ಥಾಪಿಸಿದ ಡಾ. ಆಲ್ಫ್ರೆಡ್ ಎಲ್ವಿನ್‌ಗೆ ಚಿಕ್ಕಂದಿನಲ್ಲಿ ಆದ ಒಂದು ಅನುಭವ ಆತನ ಜೀವನವನ್ನೇ ಮಾರ್ಪಡಿಸಿತ್ತು. ಆತನಿಗೆ ತುಂಬಾ ಪ್ರಿಯಳಾಗಿದ್ದ ಒಬ್ಬ ಬಂಧುವಿಗೆ ಅಷ್ಟು ಬುದ್ಧಿ ಸ್ವಾಸ್ಥ್ಯವಿರಲಿಲ್ಲವಂತೆ. ಆ ಹಿಂದಿನ ಕಾಲದಲ್ಲಿ ಅಂಥವರನ್ನು ಹೇಗೆ ನೋಡಿಕೊಳ್ಳಬೇಕು ಎಂದು ಜನಕ್ಕೆ ಗೊತ್ತಿರಲಿಲ್ಲ.

ವೈದ್ಯರಿಗೇ ಆ ವಿಭಾಗದಲ್ಲಿ ಏನೇನೂ ಗೊತ್ತಿರಲಿಲ್ಲ. ಅವಳಿದ್ದ ಹುಚ್ಚಾಸ್ಪತ್ರೆಯಲ್ಲಿ (asylum) ಅವಳನ್ನು ಹದ್ದುಬಸ್ತಿನಲ್ಲಿಡಲು ಅವಳನ್ನು ಒಂದು ಮಂಚಕ್ಕೆ ಕಟ್ಟಿಹಾಕುತ್ತಿದ್ದರಂತೆ. ಅದನ್ನು ಕಂಡ ಬಾಲಕ ಆಲ್ಫ್ರೆಡ್‌ಗೆ ಮನಸ್ಸಿಗೆ ಎಷ್ಟು ವ್ಯಾಕುಲವಾಯಿತೆಂದರೆ, ತಾನು ದೊಡ್ಡವನಾದಮೇಲೆ ಇಂಥ ಮಾನಸಿಕ, ದೈಹಿಕ ದೌರ್ಬಲ್ಯಗಳಿಗೆ ಒಳಗಾದವರನ್ನು ಸರಿಯಾಗಿ ನೋಡಿಕೊಳ್ಳುವಂಥ ವ್ಯವಸ್ಥೆ ಮಾಡಬೇಕು ಎಂಬ ನಿರ್ಧಾರ ಆಗಲೇ ಮೂಡಿತಂತೆ. ಮುಂದೆ ವೈದ್ಯಕೀಯ ವ್ಯಾಸಂಗ ಮಾಡಿ, ಸಮಾಜ ಕಡೆಗಣಿಸಿದ್ದ ತನ್ನ ಬಂಧುವಿನಂಥ ವ್ಯಕ್ತಿಗಳ ಪೋಷಣೆ ಶಿಕ್ಷಣಗಳಿಗೆ ತನ್ನ ಜೀವ ಮುಡಿಪಾಗಿರಿಸಿದ. 1849ರಲ್ಲಿ ಬಾಸ್ಟನ್ನಿನಲ್ಲಿ ನಡೆದ ವೈಜ್ಞಾನಿಕ ಸಮ್ಮೇಳನವೊಂದಕ್ಕೆ ಹೋಗಿದ್ದಾಗ ಅಲ್ಲಿ ಮಾನಸಿಕ ದೌರ್ಬಲ್ಯಗಳಿಗೆ ಒಳಗಾದ, ಅಸಮರ್ಪಕ ಮಾನಸಿಕ ಬೆಳವಣಿಗೆಯಿಂದಾಗಿ ಕಲಿಕೆಯಲ್ಲಿ ಹಿಂದುಳಿದವರ ಶಿಕ್ಷಣಕ್ಕಾಗಿ ಡಾ. ಜೇಮ್ಸ್ ರಿಚರ್ಡ್ಸ್ ಎಂಬಾತ ನಡೆಸುತ್ತಿದ್ದ ತರಗತಿಗಳನ್ನು ಕಂಡ ಡಾ. ಎಲ್ವಿನ್, ಇಲ್ಲಿ, ಫಿಲಡೆಲ್ಫಿಯಾದಲ್ಲೂ ಅಂಥದೇ ಶಿಕ್ಷಣಕ್ಕೆ ಅವಕಾಶ ಒದಗಿಸಬೇಕೆಂದು ನಿರ್ಧರಿಸಿದ. ಅದರ ಪರಿಣಾಮವಾಗಿ ಫಿಲಡೆಲ್ಫಿಯಾ ಸಮೀಪದ ಜರ್ಮನ್‌ಟೌನ್‌ನಲ್ಲಿ ಒಂದು ಸಣ್ಣ ಶಾಲೆ ಪ್ರಾರಂಭವಾಯಿತು. ಡಾ. ರಿಚರ್ಡ್ಸ್‌ರವರೇ ಇಲ್ಲಿಯೂ ಮುಖ್ಯಸ್ಥರಾಗಿ ಬಂದು ಸೇರಿದರು. ಆ ಶಾಲೆ ಬೆಳೆದಂತೆಲ್ಲ, ಅದಕ್ಕೆ ಹೆಚ್ಚಿನ ಅನುಕೂಲಗಳು, ದೊಡ್ಡ ನಿವೇಶನ ಬೇಕಾಯಿತು. ಆಗ ಡಾ. ಎಲ್ವಿನ್ ಅದನ್ನು ಈಗಿರುವ 60–ಎಕರೆ ನಿವೇಶನಕ್ಕೆ ವರ್ಗಾಯಿಸಿದ. 1870ರಲ್ಲಿ ಆತನೇ ಅದರ ಅಧ್ಯಕ್ಷನಾದ. ಆ ಸಂಸ್ಥೆಯ ಹೆಸರು ಎಲ್ವಿನ್ ಇನ್ಸ್ಟಿಟ್ಯೂಟ್ ಎಂದಾಗಿ, ಈಗ ಬರೀ ಎಲ್ವಿನ್ (Elwyn, Inc.) ಎಂದಾಗಿದೆ. ಅದಿರುವ ಊರಿಗೇ ಎಲ್ವಿನ್ ಎಂದೂ ಹೆಸರಾಗಿದೆ.

ಈ ಸಂಸ್ಥೆಯ ಮೂಲ ಉದ್ದೇಶ ವಿವಿಧ ರೀತಿಯ ಮಾನಸಿಕ ದೈಹಿಕ ದೌರ್ಬಲ್ಯಗಳಿಗೆ ಒಳಗಾಗಿರುವ ಜನರಿಗೆ ಅವರ ಜೀವನವನ್ನು ಅವರವರ ಅವಶ್ಯಕತೆಗಳಿಗೆ, ಸಾಮರ್ಥ್ಯಗಳಿಗೆ ತಕ್ಕಂತೆ ರೂಪಿಸಿ, ಅವರಿಗೆ ಒಂದು ಅರ್ಥಪೂರ್ಣ ಜೀವನಾವಕಾಶ ಕಲ್ಪಿಸುವುದು ಮತ್ತು ಈ ಉದ್ದೇಶ ಸಾಧನೆಗಾಗಿ ವೈಯಕ್ತಿಕವಾಗಿಯೂ ಸಾಮುದಾಯಿಕವಾಗಿಯೂ ಇರುವ ಎಲ್ಲ ಸೌಲಭ್ಯ ಕೌಶಲಗಳನ್ನೂ, ನವೀನ ಸಾಧನಗಳನ್ನೂ ಕಲ್ಪನೆಗಳನ್ನೂ ಬಳಸಿಕೊಳ್ಳುವುದು.

ಎಲ್ವಿನ್ ಸಂಸ್ಥೆ ತನ್ನ ಈ ಕಾರ್ಯಸಾಧನೆಯಲ್ಲಿ ತನ್ನ ಸಹಾಯ ಬಯಸುವ ವ್ಯಕ್ತಿಗಳ ಮನೆಯವರು, ಸಮಾಜ ಮತ್ತು ಸರ್ಕಾರದೊಡನೆ ಸಂಬಂಧ ಕಲ್ಪಿಸಿಕೊಂಡು ತನ್ನ ಗ್ರಾಹಕರ ಸೇವೆಗೆ ಅವಶ್ಯಕವಾದ ಅನುಕೂಲಗಳನ್ನು ನಿರ್ಮಿಸುತ್ತದೆ. ಇಂಥ ದೌರ್ಬಲ್ಯಗಳಿಗೆ ಒಳಗಾದವರನ್ನು ಗೌರವದಿಂದ, ಅನುಕಂಪದಿಂದ ನೋಡಿಕೊಳ್ಳತಕ್ಕದ್ದು ಅವಶ್ಯಕ; ಆದರೆ ಅತಿಮರುಕದಿಂದ ಅವರ ಸ್ವಾಭಿಮಾನಕ್ಕೆ ಭಂಗ ತರಬಾರದು; ಅವರ ಸ್ವಾವಲಂಬನೆಯನ್ನು ಹೆಚ್ಚಿಸಿ, ಅವರು ಸಮಾಜದಲ್ಲಿ ಬೆರೆಯಲು ಪ್ರೋತ್ಸಾಹಿಸುವುದು

ತನ್ನ ಕರ್ತವ್ಯ ಎಂದು ಎಲ್ವಿನ್ ನಂಬಿದೆ. ಅಂತೆಯೇ ಈ ಸಂಸ್ಥೆ ಸಮಾಜವೂ ಕೂಡ ಇಂಥವರನ್ನು ಹೇಗೆ ಕಾಣಬೇಕು ಎಂಬ ಬಗ್ಗೆ ತಿಳುವಳಿಕೆ ಕೊಡುತ್ತದೆ. ಎಲ್ವಿನ್‌ಗೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಶಾಲೆಯೊಂದಿದೆ. ಅಲ್ಲಿ ಶಿಕ್ಷಣ ಪಡೆದವರಿಗೆ ಹೊರಗಿನ ಸಮಾಜದಲ್ಲಿ ಉದ್ಯೋಗ ಅವಕಾಶಗಳನ್ನು ಕಲ್ಪಿಸುತ್ತದೆ. ಎಲ್ವಿನ್‌ನಲ್ಲಿಯೂ ಕೂಡ ಒಂದು ಕಾರ್ಯಾಗಾರ (workshop) ಇದೆ. ಅಲ್ಲಿಯೂ ಅವರು ಕೆಲಸ ಮಾಡಿ ವರಮಾನ ಗಳಿಸಬಹುದು. ಹೀಗೆ ಎಲ್ವಿನ್ ಮಾನಸಿಕ, ದೈಹಿಕ ದೌರ್ಬಲ್ಯಗಳಿಂದ ಕುಂಠಿತರಾದವರ ಜೀವನ ಸಂಕಷ್ಟಗಳನ್ನು ಸ್ವಲ್ಪವಾದರೂ ಹಗುರಗೊಳಿಸುವ ಮಾನವೀಯ ಕೆಲಸ ಮಾಡುತ್ತಿದೆ. ಆ ಕ್ಷೇತ್ರದಲ್ಲಿ ಖ್ಯಾತಿ ಗಳಿಸಿರುವ ಈ ಸಂಸ್ಥೆಯ ಶಾಖೆಗಳು ಅಮೆರಿಕದ ಇತರ ಕಡೆಗಳಲ್ಲೂ ಇವೆ; ಇಸ್ರೇಲ್‌ನಲ್ಲಿಯೂ ಒಂದು ಶಾಖೆ ಇದೆ. ಪ್ರಪಂಚದ ಅನೇಕ ರಾಷ್ಟ್ರಗಳಿಗೆ ಈ ಸಂಸ್ಥೆ ತಜ್ಞ ಸಲಹೆ ನೀಡುತ್ತದೆ. ಭಾರತ ಸರ್ಕಾರದಿಂದ ಹಲವಾರು ಆಯೋಗಗಳು ಅಧ್ಯಯನಕ್ಕಾಗಿ ಈ ಸಂಸ್ಥೆಗೆ ಭೇಟಿ ಕೊಟ್ಟಿವೆ.

ಎಲ್ವಿನ್ ಆವರಣದಲ್ಲಿದ್ದ ಬಾಲಕ ಬಾಲಕಿಯರು, ಯುವಕ ಯುವತಿಯರು, ಮತ್ತು ವಯಸ್ಕರು – ಎಲ್ಲರ ಜೀವನದಲ್ಲೂ ಹೊರ ಪ್ರಪಂಚದಲ್ಲಿ ಸಹಜವಾಗಿ ನಡೆಯುತ್ತಿದ್ದಂಥ ಕಾರ್ಯಕಲಾಪಗಳೆಲ್ಲವೂ ಸೇರಿಕೊಳ್ಳುವಂತೆ ನಮ್ಮ ವಿಹಾರ ವಿಭಾಗ (Recreation Department) ವರ್ಷವಿಡೀ ವರ್ಣರಂಜಿತ ವಿವಿಧ ಕಾರ್ಯಕ್ರಮಗಳನ್ನು ನಿಯೋಜಿಸಿತ್ತು. ನಾನು ಎಲ್ವಿನ್ ಸೇರಿದ ಕೆಲವೇ ವಾರಗಳಲ್ಲಿ ಕ್ಯಾಂಪಸ್ ಆದ್ಯಂತ ವಾರ್ಷಿಕ ಪ್ರತಿಭಾ ಪ್ರದರ್ಶನದ (Talent Show) ಸಿದ್ಧತೆ ಶುರುವಾಯಿತು. ಅದರ ಬಗ್ಗೆ ನನ್ನ ಸಹೋದ್ಯೋಗಿಗಳಲ್ಲಿ ಸಂಭ್ರಮದ ಜೊತೆಜೊತೆಗೆ ತುಂಬಾ ಆತಂಕವೂ ಕಾಣಿಸುತ್ತಿತ್ತು. ಇಲ್ಲಿರುವಂಥ ನಿವಾಸಿಗಳಿಗೆ ಹಾಡು ನರ್ತನ ಕಲಿಸಿ ವೇದಿಕೆಯ ಮೇಲೆ ಪ್ರದರ್ಶನಕ್ಕೆ ತಯಾರುಮಾಡುವುದು ಎಷ್ಟು ಪ್ರಯಾಸಕರವೆಂಬುದನ್ನು ಪ್ರತಿದಿನದ ಸ್ಟಾಫ್ ಮೀಟಿಂಗಿನಲ್ಲಿ ಮತ್ತೆ ಮತ್ತೆ ಚರ್ಚಿಸಿ ಚಿಂತಿಸಿ ಚಿಂತಿಸಿ ತಾವೂ ಸಿಕ್ಕಾಪಟ್ಟೆ ಬೆದರಿ ಇತರರೂ ಗಾಬರಿಗೊಳ್ಳುವಂತೆ ಮಾಡಿದ್ದರು. ಆದರೆ ನನ್ನ ಮನಸ್ಸಿನಲ್ಲಿ ಇವರುಗಳ ಚರ್ಚೆ ಮುಂದುವರೆದಷ್ಟೂ ಈ ಬಗೆಯ ಪ್ರತಿಭಾ ಪ್ರದರ್ಶನದ ಬಗ್ಗೆ ಹೊಸ ರೀತಿಯ ಸಾಧ್ಯತೆಗಳು ಹೊಳೆಯತೊಡಗಿದವು. ಕಾಟೇಜ್ 7ರಲ್ಲಿ (ಅಲ್ಲಿನ ನಿವಾಸಿಗಳಿಗೆ ಅವರ ವಯಸ್ಸಿಗನುಗುಣವಾಗಿ ಬೇರೆ ಬೇರೆ ಸುಸಜ್ಜಿತ ಕಟ್ಟಡಗಳಲ್ಲಿ ವಸತಿ ಏರ್ಪಡಿಸಿದ್ದರು; ಆ ವಸತಿಗಳನ್ನು ಕಾಟೇಜ್ ಎಂದು ಕರೆಯುತ್ತಿದ್ದರು) 7–8 ವರ್ಷಗಳಿಂದ ಹಿಡಿದು 16–17 ವಯಸ್ಸಿನ ಒಳಗಿನ ಹರೆಯದ ಹುಡುಗಿಯರಿದ್ದರು. ಪಕ್ಕದ ಕಾಟೇಜ್ 8ರಲ್ಲಿ 7–15 ವಯಸ್ಸಿನ ಬಾಲಕರಿದ್ದರು. ಇವರುಗಳ ಮನೋಲ್ಲಾಸ ಹವ್ಯಾಸದ ಜವಾಬ್ದಾರಿ, ಅವರು ಶಾಲೆಯಿಂದ ಬಂದನಂತರ ಮಧ್ಯಾಹ್ನ 3ರಿಂದ 5 ಗಂಟೆವರೆಗೆ ಮತ್ತೆ ಭೋಜನಾನಂತರ

6ರಿಂದ 8ರವರೆಗೆ ನನ್ನದಾಗಿತ್ತು. Train is a-coming, Oh yeah! ಎನ್ನುವ ಹಾಡನ್ನು ವೃಂದಗಾನವಾಗಿ ಹಾಡುತ್ತ ರೈಲು ಪ್ರಯಾಣಿಕರ, ಕಂಡಕ್ಟರನ ಪಾತ್ರಗಳನ್ನು ಅಭಿನಯಿಸುವಂತೆ ಈ ಮೊದಲೇ ನಾನು ಹೇಳಿಕೊಟ್ಟಿದ್ದೆ. ಆ ಹಾಡು ಅವರಿಗೆಲ್ಲ ಇಷ್ಟವಾಗಿತ್ತು. ಇದೇ ಬಗೆಯ ಹಾಡನ್ನು ತಮಗೂ ಹೇಳಿಕೊಡುವಂತೆ ಕಾಟೇಜ್ 7ರ ಹುಡುಗಿಯರು ಬೇಡಿಕೊಳ್ಳತೊಡಗಿದರು.

ನನಗೆ ಥಟ್ಟನೆ ನಾನು ತೀರ ಪುಟ್ಟವಳಿದ್ದಾಗ ಶಾಲಾ ಗೆಳತಿಯರೊಂದಿಗೆ ಹಾಡಿಕೊಂಡು ಮಾಡುತ್ತಿದ್ದ ಸಾಮೂಹಿಕ ನೃತ್ಯವೊಂದು ಜ್ಞಾಪಕಕ್ಕೆ ಬಂತು. ಅದರ ಹಾಡನ್ನು ಅದೇ ರಾಗದಲ್ಲಿ ಇಂಗ್ಲಿಷಿನಲ್ಲಿ ಹಾಡಿದೆ. ಚೆನ್ನಾಗಿ ಅನ್ನಿಸಿತು. ತೋಟದಲ್ಲಿ ಹೂವಾಯ್ದು ಬುಟ್ಟಿಗಳಲ್ಲಿರಿಸಿ ಹೂ ಕಟ್ಟಿ ಹಾರ ಮಾಡಿ ಅಲಂಕರಿಸಿಕೊಂಡು ಉಲ್ಲಾಸದಿಂದ ಹಾಡಿ ವೃತ್ತಾಕಾರವಾಗಿ ನರ್ತಿಸುವ ಪ್ರಸಂಗ ಅದಾಗಿತ್ತು. ಈ ಹಾಡಿನ ನರ್ತನದ ಮತ್ತು ಅವಕ್ಕೆ ಬೇಕಾಗುವ ಸಾಮಗ್ರಿಗಳ ವಿಚಾರ ಎಲ್ಲ ಹುಡುಗಿಯರಿಗೂ ತುಂಬಾ ಖುಶಿ ತಂದುಕೊಟ್ಟಿತ್ತು. ಆ ಹುಡುಗಿಯರಿಗೆ ಬೇಕಾಗುವ ಬುಟ್ಟಿಗಳು, ಹೂವಿನ ಹಾರ ಇವೆಲ್ಲದರ ಜೊತೆಗೆ ನಾನು ಸೂಚಿಸಿದ ಬಣ್ಣಬಣ್ಣದ ಲಂಗ ದಾವಣಿ ಉಡುವ ಅವಕಾಶ ಅತ್ಯಂತ ರೋಮಾಂಚಕಾರಿ ಅನ್ನುಭವ ಎನ್ನಿಸತೊಡಗಿತ್ತು ಆ ಹುಡುಗಿಯರಿಗೆ. ಈ ನೃತ್ಯಕ್ಕೆ ಬೇಕಾಗುವ ಉಡುಗೆ ತೊಡುಗೆಗಳ ವಿಚಾರವನ್ನು ನಾನು ಸ್ಟಾಫ್ ಮೀಟಿಂಗಿನಲ್ಲಿ ಪ್ರಸ್ತಾಪ ಮಾಡಿದಾಗ ಅತ್ಯಂತ ಚತುರಳಾದ ದರ್ಜಿಯೊಬ್ಬಳು ಅಲ್ಲೇ ಕ್ಯಾಂಪಸ್ಸಿನಲ್ಲೇ ಇದ್ದಾಳೆಂದು ತಿಳಿಯಿತು. ಆಕೆಯನ್ನು ಕಂಡು ಈ ಭಾರತೀಯ ನೃತ್ಯಕ್ಕೆ ಬೇಕಾದ ಉಡುಗೆಯ ರೂಪರೇಖೆಗಳನ್ನು ಬರೆದು ತೋರಿಸಿದೆ. ಆಕೆಯೂ ತುಂಬಾ ಉತ್ಸಾಹದಿಂದ ಅದನ್ನು ಹೊಲಿದುಕೊಡಲು ಒಪ್ಪಿದಳು. ಹಳದಿ ವೆಲ್ವೆಟ್ ಲಂಗಕ್ಕೆ ಜಗಜಗಿಸುವ ಅಂಚು ಕಟ್ಟಿ ದಾವಣಿಗಾಗಿ ಸುಂದರವಾದ ಬಟ್ಟೆಗಳನ್ನು ಖರೀದಿಸಿ ಅವಕ್ಕೆ ಹೊಂದುವ ಬಣ್ಣಗಳಲ್ಲಿ ಗುತ್ತನಾದ ಮೇಲಂಗಿ ಕೊಂಡುಕೊಂಡೆವು. ಎಲ್ಲರಿಗೂ ಕಣ್ಣುಕೋರೈಸುವ ವೇಷಭೂಷಣ ತಯಾರಾಯಿತು. ಅವರ ಹದಿಹರೆಯದ ಜೀವನದಲ್ಲಿ ಪ್ರಥಮ ಬಾರಿಗೆ ಈ ಯುವತಿಯರು ಅತ್ಯಂತ ಉತ್ಸಾಹದಿಂದ ನೃತ್ಯಾಭ್ಯಾಸ ಪ್ರಾರಂಭಿಸಿದರು.

ಈ ಪ್ರದರ್ಶನದ ಸಮಯದಲ್ಲೇ ಇಂಗ್ಲೆಂಡಿನ ಮ್ಯಾಂಚೆಸ್ಟರಿನಲ್ಲಿ ಯು.ಕೆ. ಕನ್ನಡ ಬಳಗ ನಡೆಸಲಿದ್ದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕನ್ನಡ ಜಾನಪದ ಗೀತೆಗಳನ್ನು ಹಾಡಲು ನನಗೆ ಆಮಂತ್ರಣ ಬಂದು ಅದಕ್ಕಾಗಿ ಎಲ್ಲ ಏರ್ಪಾಡುಗಳನ್ನು ಆ ಮೊದಲೇ ಮಾಡಿಕೊಂಡಿದ್ದೆ. ಆದ್ದರಿಂದ ನಾನು ಈ ಪ್ರತಿಭಾ ಪ್ರದರ್ಶನದ ಸಮಯದಲ್ಲಿ ಇಲ್ಲಿ ಇರಲು ಆಗದ್ದರಿಂದ ಆ ಕಾರ್ಯಕ್ರಮವನ್ನು ನಿರ್ವಹಿಸುವ ಜವಾಬ್ದಾರಿಯನ್ನು ನನ್ನ ಸಹೋದ್ಯೋಗಿಗಳಿಗೆ ವಹಿಸಬೇಕಾಯಿತು. ಅವರಿಗೆ ಆ ಬಗ್ಗೆ ಕೊಡಬೇಕಾದ ಎಲ್ಲ ನಿರ್ದಿಷ್ಟ ಸೂಚನೆಗಳನ್ನೂ ಕೊಟ್ಟೆ.

ಬೇರು ಸೂರು

ಮ್ಯಾಂಚೆಸ್ಟರಿನಿಂದ ಹಿಂದಿರುಗಿದ ನನಗೆ ದೊಡ್ಡ ಅಚ್ಚರಿಯೇ ಕಾದಿತ್ತು. ಕಾಟೇಜ್ 7ರ ಹುಡುಗಿಯರು ಎಲ್ವಿನ್ ಆದ್ಯಂತ ಪ್ರಸಿದ್ಧರಾಗಿ ಹೋಗಿದ್ದರು. ಪ್ರತಿಭಾ ಪ್ರದರ್ಶನದ ಮೊದಲ ಬಹುಮಾನ ಅವರಿಗೇ ಸಂದಿತ್ತು. ವಿವಿಧ ಮನೋಭಾವಗಳ, ಒಬ್ಬರೊಡನೊಬ್ಬರು ಹೊಂದಿಕೊಂಡು ಒಗ್ಗಟ್ಟಾಗಿ ಕೆಲಸ ಮಾಡುವ ಪ್ರಕೃತಿ ಇಲ್ಲದವರನ್ನು ಒಂದುಗೂಡಿಸಿ ಒಂದು ಸುಂದರ ನೃತ್ಯ ಮಾಡಿಸಿದ್ದು ಎಲ್ಲರಿಗೂ ಸೋಜಿಗವನ್ನುಂಟುಮಾಡಿತ್ತು. ನನ್ನನ್ನು miracle worker ಎಂದದ್ದಲ್ಲದೆ, ನನ್ನನ್ನು ತಿಂಗಳ ಪ್ರತಿಷ್ಠಿತ ಉದ್ಯೋಗಿ (Employee of the Month) ಎಂದು ಆಯ್ಕೆ ಮಾಡಿದ್ದರು! ಇದೂ ಅಲ್ಲದೆ, ಸಮೀಪದ ಇಮಾಕ್ಯುಲಾಟ ಕಾಲೇಜಿನಲ್ಲಿ (2002ರಿಂದ ಇದನ್ನು ಇಮಾಕ್ಯುಲಾಟ ಯೂನಿವರ್ಸಿಟಿ ಎನ್ನುತ್ತಾರೆ) ಪ್ರತಿ ವರ್ಷವೂ ನಡೆಯುತ್ತಿದ್ದ ಸಂಗೀತ ಸಾಂತ್ವನ ಶಿಕ್ಷಣ ಶಿಬಿರ (Music and Healing Workshop)ದಲ್ಲಿ ಭಾಗವಹಿಸಲು ಎಲ್ವಿನ್ ಪ್ರತಿನಿಧಿಯಾಗಿ ನನ್ನನ್ನು ಆಯ್ಕೆ ಮಾಡಿದ್ದರು. ಈ ಅವಕಾಶ ನನಗೆ ದೊರೆತಾಗ ನನಗೊದಗಿದ ಸೌಭಾಗ್ಯವೆಂದರೆ ಸಿಸ್ಟರ್ ಜೀನ್ ಆಂಟೊನಿ (Sister Jean Anthony) ಎಂಬ ಪ್ರತಿಭಾನ್ವಿತ ತೇಜೋವಂತ ಮಹಿಳೆಯ ಪರಿಚಯ ಆದದ್ದು. ಆಕೆ ನನಗೆ ಸಂಗೀತ ಚಿಕಿತ್ಸಾ (music therapy) ವಿಧಾನಗಳನ್ನು ಬೋಧಿಸಿದ ನನ್ನ ಅಕ್ಕರೆಯ ಗುರುವಾದಳು.

ಇಮಾಕ್ಯುಲಾಟ ಕಾಲೇಜಿನಲ್ಲಿ ಸಂಗೀತ ಮತ್ತು ಚಿಕಿತ್ಸೆಯ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿದ್ದ ಸಿಸ್ಟರ್ ಜೀನ್ ಆಂಟೊನಿ ಅವರನ್ನು ನಾನು ಮೊದಲು ಕಂಡಾಗ ಆಕೆ ಸುಮಾರು 47 ವಯಸ್ಸಿನ ವ್ಯಕ್ತಿ. ಸಾಧಾರಣ ಎತ್ತರದ ನಿಲುವು. ಸ್ವಲ್ಪ ದುಂಡಾಗಿದ್ದ ಕಾಯ. ಮುಖದಲ್ಲಿ ಉತ್ಸಾಹದ ಕಳೆ ತುಳುಕುತ್ತಿತ್ತು. ಮೂರುಹೊತ್ತೂ ಆಸಕ್ತಿಯಿಂದ ಕೆಲಸಮಾಡುತ್ತ ಪಾದರಸದಂತೆ ಹರಿದಾಡುತ್ತಿದ್ದರು. ಆಕೆಯೊಡನೆ ಸಂಪರ್ಕಕ್ಕೆ ಬಂದವರೆಲ್ಲರಿಗೂ ಸಂಗೀತ ವಿದ್ಯಾರ್ಜನೆಯ ಬಗ್ಗೆ ಪ್ರೋತ್ಸಾಹ ನೀಡುತ್ತಾ, ಗೆಲುವಿನ ಗಾನದ ಜೀವಂತ ಒರತೆಯಾಗಿದ್ದರು. ಹೈಸ್ಕೂಲು ಮುಗಿಸಿದ ಒಂದೆರಡು ವರ್ಷದಲ್ಲೇ ತನ್ನ ಇಡೀ ಜೀವನವನ್ನು ದೇವರ ಸೇವೆಗೆ ಅರ್ಪಿಸಿದವರಾದರೂ ಮಾತುಮಾತಿಗೂ ದೇವರ ಹೆಸರು ಹೇಳುವ ಬರಡು ಧರ್ಮಪರಾಯಣೆ ಎಂಬಂತೆ ಕಾಣುತ್ತಿರಲಿಲ್ಲ. ಆಕೆಯ ಮಾತಿನಲ್ಲಿ ಇನ್ನೂ ಹುಡುಗಾಟಿಕೆಯಿತ್ತು. ಚಿಕ್ಕಂದಿನ ಹುರುಪು, ಕೀಟಲೆ ಇತ್ತು. ಆಕೆಗೆ ಚಿಕ್ಕಂದಿನಿಂದಲೂ ಪಿಯಾನೋ ವಾದನದಲ್ಲಿ ತುಂಬಾ ಆಸಕ್ತಿಯಿತ್ತಂತೆ. ಆದರೆ ಯಾಕೋ ಅವಳ ಪಿಯಾನೋ ಶಿಕ್ಷಕಿಯ ಬಗ್ಗೆ ಬೇಸರ. ಒಂದು ದಿನ ಈ ಹುಡುಗಿ ಫೋನ್ ಎತ್ತಿಕೊಂಡು ಆ ಶಿಕ್ಷಕಿಯನ್ನು ಕರೆದು, ತನ್ನ ತಾಯಿಯ ದನಿ ಅನುಕರಿಸುತ್ತ ನನ್ನ ಮಗಳು ಇನ್ನು ಮೇಲೆ ನಿಮ್ಮಲ್ಲಿಗೆ ಪಾಠಕ್ಕೆ ಬರುವುದಿಲ್ಲ ಎಂದು ಹೇಳಿ ಅವರಿಂದ ಬಿಡಿಸಿಕೊಂಡಿದ್ದಳಂತೆ! ಆದರೆ ಆಕೆಯ ಸಂಗೀತ ಪರಿಶ್ರಮ ಸಾಧನೆ ಅಲ್ಲಿಗೇ ನಿಲ್ಲಲಿಲ್ಲ. ಮುಂದೆ ಪಿಯಾನೊ, ವಯೊಲಿನ್ ವಾದನದಲ್ಲಿ ತುಂಬಾ ಪರಿಣತಿ ಗಳಿಸಿದರು. ಸಂಗೀತ

ಶಿಕ್ಷಣದಲ್ಲಿ ಪಿ.ಎಚ್.ಡಿ. ಗಳಿಸಿದರು. ಆಕೆ 2004ರಲ್ಲಿ ಕ್ಯಾನ್ಸರಿನಿಂದ ತೀರಿಹೋದಾಗ ಅವರ ಜೊತೆಯವರು, ಕಾಲೇಜಿನ ಅಧ್ಯಾಪಕರು, ವಿದ್ಯಾರ್ಥಿಗಳು ಎಲ್ಲರೂ ಅವರ ಸ್ನೇಹಪರತೆ, ಅದಮ್ಯ ಜೀವನೋತ್ಸಾಹವನ್ನು ಕುರಿತು ನೆನೆಸಿಕೊಂಡಿದ್ದರು. ನನಗಂತೂ ಆಕೆಯ ತುಂಟತನದ ನಡವಳಿಕೆ, ಮಾತುಕತೆ ನೋಡಿದಾಗ Sound of Musicನಲ್ಲಿ ಬರುವ 'How d'you solve a problem like Maria' ಎಂಬ ಹಾಡಿನ ಸಾಲು ನೆನಪಿಗೆ ಬರುತ್ತಿತ್ತು.

ಈ ಶಿಕ್ಷಣ ಶಿಬಿರದಲ್ಲಿ ಆಕೆ ಸಂಗೀತದ ಬಗ್ಗೆ, ಅದಕ್ಕೂ ನಮ್ಮ ದೈಹಿಕ, ಮಾನಸಿಕ ಸ್ವಾಸ್ಥ್ಯಕ್ಕೂ ಇರುವ ಸಂಬಂಧ, ಒಟ್ಟಿನಲ್ಲಿ ಶಬ್ದಪ್ರಪಂಚದ ಪ್ರಗಲ್ಭ ಚೇತನ, ಇವುಗಳನ್ನು ಕುರಿತು ನಮಗೆ ಅನೇಕ ವಿಷಯಗಳನ್ನು ತಿಳಿಸಿಕೊಟ್ಟರು. ಆಕೆ ಅಂದು ಹೇಳಿದ ಒಂದು ಮಾತು ನನ್ನ ಮನಸ್ಸಿನಲ್ಲಿ ನೆಟ್ಟಿದೆ: 'ಅತ್ಯಂತ ಕುಶಲಿಯಾದ ಶಸ್ತ್ರಚಿಕಿತ್ಸಕನ ಹರಿತವಾದ ಆಯುಧ ಕೂಡ ಮುಟ್ಟಲಾರದ ಮಿದುಳಿನ ಸ್ಥಳಗಳನ್ನು ಸಂಗೀತ ಮುಟ್ಟಬಲ್ಲದು.'

ಜೀನ್ ಆಂಟೊನಿ ಒಬ್ಬ ಅಸಾಂಪ್ರದಾಯಿಕ ವ್ಯಕ್ತಿ. ಪಾಶ್ಚಿಮಾತ್ಯ ಸಂಗೀತದಲ್ಲಿ ಅಪಾರ ಆಸಕ್ತಿಯಿದ್ದು ಅದರಲ್ಲಿ ಪ್ರಾವೀಣ್ಯ ಗಳಿಸಿದ್ದರೂ, ಇತರ ದೇಶಗಳ, ಅದರಲ್ಲೂ ಭಾರತೀಯ ಸಂಗೀತದ ಬಗ್ಗೆ ಆಕೆಗೆ ತುಂಬಾ ತಿಳುವಳಿಕೆಯಿತ್ತು. 'ಜನ ನನ್ನನ್ನು ಇದೆಂತಹ ಹುಚ್ಚುತಿಪ್ಪಿ ಕ್ಯಾಥೊಲಿಕ್ ನನ್ ಎಂದುಕೊಳ್ಳಬಹುದು, ಅದರಿಂದ ನನಗೇನೂ ಚಿಂತೆಯಿಲ್ಲ' ಎಂದು ಪ್ರಪಂಚದ ಇತರ ಸಂಸ್ಕೃತಿಗಳವರು, ಧರ್ಮಗಳವರು ಸಂಗೀತವನ್ನು ತಮ್ಮ ನಿಜಜೀವನದಲ್ಲಿ ಹೇಗೆ ಕಾಣುತ್ತಾರೆ, ಅದರ ಸಾಂತ್ವನ ಗುಣಗಳನ್ನು ಹೇಗೆ ಕಂಡುಕೊಂಡಿದ್ದಾರೆ ಎಂಬುದನ್ನು ನಿರ್ಭೀತವಾಗಿ ಹೇಳುತ್ತಿದ್ದರು. ಹಿಂದು, ಬೌದ್ಧ ಶಾಸ್ತ್ರಗಳಲ್ಲಿ ಅಡಗಿರುವ ಮಾನವದೇಹ ಕಲ್ಪನೆ, ಚಕ್ರಗಳ ಸ್ಥಾನ ಮಹತ್ವಗಳು, ಇವಕ್ಕೂ ನಾದಕ್ಕೂ ಇರುವ ಸಂಬಂಧ ಇವುಗಳ ಬಗ್ಗೆ ಆಕೆಗೆ ವಿಶೇಷವಾದ ಕುತೂಹಲ ಇತ್ತು.

ಪಶ್ಚಿಮದ ಸಂಗೀತ ಸಾಂತ್ವನ ಪದ್ಧತಿ ತುಂಬಾ ನಿರ್ಭಾವುಕವಾಗಿ, ನಿರ್ಲಿಪ್ತವಾಗಿ, ಏಕಮುಖವಾದ clinical ದಾರಿ ಹಿಡಿದಿದೆ. ಇದರಿಂದ ಹೆಚ್ಚು ಪ್ರಯೋಜನ ಕಾಣುತ್ತಿಲ್ಲ. ಸಂಗೀತವನ್ನು ನಾವು ಸಾಂತ್ವನ ಸಾಧನವಾಗಿ ಬಳಸಬೇಕಾದರೆ ಅದನ್ನು ನಾವು ಬಹುಮುಖವಾಗಿ, ಸಮಗ್ರತಾ ದೃಷ್ಟಿಯಿಂದ (ಅಂದರೆ holistic ಆಗಿ) ನೋಡಬೇಕು. ಈ ದೃಷ್ಟಿಯಿಂದ ನೋಡಿದರೆ ಭಾರತೀಯ ಸಂಗೀತ ಈ ವಿಚಾರದಲ್ಲಿ ಹೆಚ್ಚು ಮುಂದುವರೆದಿದೆ – ಎಂದಿದ್ದರು. ಭಾರತೀಯ ರಾಗ ಕಲ್ಪನೆಯ ಬಗ್ಗೆ ಆಕೆಗೆ ಬಹಳ ವಿಶ್ವಾಸವಿತ್ತು. ಅಲ್ಲದೆ ನಮ್ಮ ಪದ್ಧತಿಯಲ್ಲಿ ನಾವು ಮಾಡುವ ರಾಗಾಲಾಪನೆ, ಅದಕ್ಕೆ ಬೇಕಾದ ಮನೋಧರ್ಮವನ್ನು ಬೆಳಸಿಕೊಳ್ಳುವುದು, ಶ್ರೋತೃಗಳ ಇಂಗಿತವನ್ನು ಗ್ರಹಿಸುವುದು, ಸಂಗೀತಗಾರ ಮತ್ತು ಶ್ರೋತೃ ಅವರಿಬ್ಬರ ನಡುವೆ ನಡೆಯುವ ಭಾವಸಂವಾದ – ಇವೆಲ್ಲವನ್ನೂ ಆಕೆ ತಮ್ಮ ಸಂಗೀತ–ಸಾಂತ್ವನ ಕಾರ್ಯಕ್ಷೇತ್ರದ ದೃಷ್ಟಿಯಿಂದ ಬಹಳ ಮೆಚ್ಚಿಕೊಂಡಿದ್ದರು. ನಮ್ಮ ಸಂಗೀತ ಶಿಕ್ಷಣ ಪದ್ಧತಿಯನ್ನು ಕುರಿತು

ನನ್ನೊಡನೆ ದೀರ್ಘವಾಗಿ ಚರ್ಚಿಸಿದ್ದರು. ನಾನು ನಮ್ಮ ಪಾಠಕ್ರಮ, ನಾವು ಕಲಿತು ಎಂದೆಂದಿಗೂ ಮರೆಯದೆ ಮನಸಿನಲ್ಲಿಟ್ಟುಕೊಳ್ಳುವಂತೆ ಬಾಯಿಪಾಠ ಮಾಡುವ ಸರಳೆ ಜಂಟಿ ವರಸೆಗಳೂ, ಸ್ವರಜತಿ ವರ್ಣ ಇತ್ಯಾದಿಯನ್ನೆಲ್ಲ ವಿವರಿಸಿ, ಹಾಡಿ ತೋರಿಸಿದ್ದೆ. ಅದನ್ನೇ ಕುರಿತು ಇದೇ ಶಿಬಿರದಲ್ಲಿ ಒಂದು ಸೋದಾಹರಣ ಉಪನ್ಯಾಸ ಕೊಡಲು ಅನುವು ಮಾಡಿಕೊಟ್ಟಿದ್ದರು.

ಆಕೆಯ ಇನ್ನೊಂದು ಮುಖ್ಯ ಕೊಡುಗೆ ಎಂದರೆ ಸಂಗೀತ ಸಾಂತ್ವನದಲ್ಲಿ ಆಧುನಿಕ ಕಂಪ್ಯೂಟರನ್ನು ಹೇಗೆ ಬಳಸಬಹುದು ಎಂಬ ಬಗ್ಗೆ ಮಾಡಿದ ಸಂಶೋಧನೆ. ಎಷ್ಟೋ ಮಂದಿ ಅಂಗಾಂಗವಿಕಲರಿಗೆ ಅವರ ಮಾಂಸಖಂಡಗಳನ್ನು ಉಪಯೋಗಿಸುವ ಚಾಲಕ ಶಕ್ತಿ ಏನೇನೂ ಇರುವುದಿಲ್ಲ. ಅಂಥವರಿಗಾಗಿ ಅತ್ಯಲ್ಪ ಚಾಲನೆಯಿಂದ – ಕಣ್ಣಿನ ರೆಪ್ಪೆಯ ಮಿಟುಕಿನಿಂದ – ತಮಗೆ ಬೇಕಾದ ಸಂಗೀತ ಕೇಳುವಂತಾಗಬೇಕು ಎಂದು ಶ್ರಮಿಸುತ್ತಿದ್ದರು. ಕಂಪ್ಯೂಟರ್ ವಿಜ್ಞಾನದಲ್ಲಿ ಪಿ.ಎಚ್.ಡಿ. ಮಾಡುತ್ತಿದ್ದ ಒಬ್ಬಾಕೆಯೊಡನೆ ಸೇರಿ ಸಿಸ್ಟರ್ ಆಂಟೊನಿ ಆ ಸಂಶೋಧನೆ ನಡೆಸುತ್ತಿದ್ದರು. ಸಂಗೀತ ಸಾಂತ್ವನ ವಿಧಾನಗಳಲ್ಲಿ ಕಂಪ್ಯೂಟರ್ ಬಳಕೆಯನ್ನು ಜಾರಿಗೆ ತಂದವರಲ್ಲಿ ಈಕೆಯೇ ಮೊದಲಿಗಳು ಎಂದು ತಜ್ಞರು ಗುರುತಿಸಿದ್ದಾರೆ.

ಜೀನ್ ಆಂಟೊನಿ ಹೇಳಿದ ಇನ್ನೊಂದು ಮಾತು ಹೀಗಿದೆ: ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲೂ ಅವರದೇ ಆದ, ಅವರ ಸ್ವಭಾವಕ್ಕೆ ಹೊಂದಿದ ಒಂದು ಶ್ರುತಿ, ಒಂದು ಸ್ವರ, ಒಂದು ಲಯ ಇದೆ. ಅದನ್ನು ಚಿಕಿತ್ಸಕರು ಗುರುತಿಸಬೇಕು. ಎಲ್ಲರಿಗೂ ಒಂದೇ ರೀತಿಯ ಸಂಗೀತ, ಸಂಗೀತ ಮೇಳ ಹಿಡಿಸಲಾರದು. ಇದು ಮುಂದೆ ನಾನು ನನ್ನ ಎಲ್ವಿನ್ ನಿವಾಸಿಗಳೊಂದಿಗೆ ಕೆಲಸ ಮಾಡುವಾಗ ನನ್ನ ಸ್ವಂತ ಅನುಭವಕ್ಕೆ ಬಂತು. ಅವರವರ ದೈಹಿಕ–ಮನೋಭಾವಕ್ಕೆ ತಕ್ಕಂತೆ ಸಂಗೀತದ ಶ್ರುತಿ ಗಾತ್ರಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತಿತ್ತು. ತುಂಬಾ ಎತ್ತರದ ಶ್ರುತಿ, ವಾದ್ಯಗಳ ಗದ್ದಲ ಅನೇಕರಿಗೆ ಸಹಿಸಲಾಗುತ್ತಿರಲಿಲ್ಲ. ಕೆಲವರಿಗೆ ಒಂದು ಸಣ್ಣ ಶಬ್ದವೂ ಒಂದು ಆಸ್ಫೋಟದಂತೆ ಕೇಳುವುದಂತೆ. ಸಂಗೀತಜ್ಞರು ಇದನ್ನು ಕುರಿತು ಎಚ್ಚರಿಕೆ ವಹಿಸಬೇಕಾದ್ದು ತುಂಬಾ ಮುಖ್ಯವೆಂದು ಆಕೆ ಒತ್ತಿ ಹೇಳುತ್ತಿದ್ದರು.

ಆಕೆ ಸ್ಥಾಪಿಸಿ ಬೆಳೆಸಿದ್ದ ಸಂಗೀತ ಮತ್ತು ಸಾಂತ್ವನ ಶಾಲೆಯಲ್ಲಿ (Music and Healing Institute) ತನ್ನ ಸ್ವಂತ ಪರಿಶ್ರಮದಿಂದ ಅನರ್ಘ್ಯವಾದ ಸಂಗೀತ ಭಂಡಾರವನ್ನು ನಿರ್ಮಿಸಿದ್ದರು. ಅಮೆರಿಕದ ಮೂಲ ನಿವಾಸಿ ಇಂಡಿಯನ್ನರ ವಿವಿಧ ಸಂಗೀತ ಪ್ರಕಾರಗಳ ಅತ್ಯಂತ ಆಕರ್ಷಣೀಯ ಸಂಗ್ರಹ ಅಲ್ಲಿತ್ತು. ಆ ಜನರ ಮೂಲ ಸಂಗೀತ ಪ್ರಕಾರದಲ್ಲಿ ಕಂಡುಬರುವ healing drums ಅಂದರೆ ಚಿಕಿತ್ಸೆಗಾಗಿಯೇ ಉಪಯೋಗಿಸುವ ಡೋಲಿನ ಅನೇಕ ಧ್ವನಿಮುದ್ರಿಕೆಗಳಿದ್ದವು.

ಬೇರು ಸೂರು

ಈ ಶಿಬಿರದಲ್ಲಿ ಅಮೆರಿಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ ವಿವಿಧ ತಜ್ಞರನ್ನು ಕರೆಸಿ ಬಹಳ ಉಪಯುಕ್ತವಾದ ಸೋದಾಹರಣ ಭಾಷಣಗಳನ್ನು ಏರ್ಪಡಿಸಿದ್ದರು. ಅಂಥ ತಜ್ಞರ ಪೈಕಿ ಡೇವಿಡ್ ಡಾರ್ಲಿಂಗ್ ಒಬ್ಬರು. ಆತ ನುರಿತ ವಯೋಲಾ ವಾದಕ. ಈ ಸಂಗೀತ ಚಿಕಿತ್ಸಕ ಅನೇಕ ದೇಶಗಳಲ್ಲಿ ಸಂಚರಿಸಿ ಒಟ್ಟುಗೂಡಿಸಿ ತಂದಿದ್ದ ಉಪಯುಕ್ತ ವಿಷಯಗಳನ್ನು ಮನೋಜ್ಞವಾಗಿ ವರ್ಣಿಸಿ ಒಳ್ಳೆಯ ಕಲಿಕೆಯ ಅವಕಾಶ ನೀಡಿದರು. ಭಾರತದ ಮೂಲೆಮೂಲೆಗಳಲ್ಲಿ ಅನೇಕ ಬಾರಿ ಸಂಚರಿಸಿ ಬಂದಿದ್ದ ಇನ್ನೊಬ್ಬ ತಜ್ಞ ನಡೆಸಿಕೊಟ್ಟ ಚಿಕಿತ್ಸಾ ಶಿಬಿರ ಎಲ್ಲರಲ್ಲೂ ಬಹಳ ಸೋಜಿಗವನ್ನುಂಟುಮಾಡಿತ್ತು. ನಾವು ವಾಸಿಸುವ ನಮ್ಮ ಸುತ್ತಲ ವಾತಾವರಣದಲ್ಲಿ ತೀರ ಸಹಜವೆನಿಸುವಂತೆ ಕೇಳಿಬರುವ ಮನುಷ್ಯರ, ಯಂತ್ರೋಪಕರಣಗಳ, ಪ್ರಾಣಿಗಳ, ಪಕ್ಷಿಗಳ, ಕೀಟಗಳ – ಈ ಎಲ್ಲಾ ವ್ಯಕ್ತಿ ವಸ್ತು ವಿಶೇಷಗಳ ಶಬ್ದಗಳಲ್ಲಿ ಅಡಗಿರುವ ಅನಂತ ಸಾಂತ್ವನ ಸಾಧ್ಯತೆಗಳನ್ನು ಆತ ನಮಗೆ ಧ್ವನಿಮುದ್ರಿಕೆಗಳ ಮೂಲಕ ವರ್ಣಿಸಿದ್ದ.

ಈ ಶಿಬಿರ ನನಗೆ ನನ್ನ ಕೆಲಸದಲ್ಲಿ ಅತ್ಯಂತ ಪ್ರಯೋಜನಕಾರಿಯಾಯಿತು. ನಾನೇನೂ ಸಂಗೀತಕ್ಕೆ ಹೊಸಬಳಲ್ಲ. ಅಲ್ಲದೆ ನಮ್ಮಲ್ಲಿ ಅನಾದಿ ಕಾಲದಿಂದಲೂ ಮಾನವರು ಮಾತ್ರವಲ್ಲದೆ ಪ್ರಾಣಿಪಕ್ಷಿಗಳು, ಕಡೆಗೆ ನಿರ್ಜೀವ ವಸ್ತುಗಳೂ ಕೂಡ ಸಂಗೀತಕ್ಕೆ ಸ್ಪಂದಿಸುತ್ತವೆ ಎಂಬ ನಂಬಿಕೆ ಇದೆ. ವ್ಯಾಸರಾಯರು ತಮ್ಮ ಪದದಲ್ಲಿ ಕೃಷ್ಣನ ಕೊಳಲ ನಾದ ಕೇಳಿ 'ಮೇವ ಮರೆತವಾ ಗೋವುಗಳೆಲ್ಲವು, ಸಾವಧಾನದಲಿ ಹರಿದಳು ಯಮುನಾ' ಎಂದು ಹಾಡಿ ಕೋಟಿ ಕೋಟಿ ಜನರನ್ನು ತಣಿಸಿದ್ದಾರೆ. (ಇದನ್ನು ಸಿಸ್ಟರ್ ಜೀನ್ ಆಂಟೊನಿಯವರಿಗೂ ಹೇಳಿದ್ದೆ, ಅದನ್ನು ಕೇಳಿ ಆಕೆ ತುಂಬಾ ಆನಂದಪಟ್ಟಿದ್ದರು.) ಸಂಗೀತದ ಮೂಲಕ ನಾವು ಎಲ್ಲರನ್ನೂ ತಲುಪಬಹುದು, ಆದರೆ ಅವರ ಜೀವಸ್ವರಕ್ಕೆ ಅನುಗುಣವಾಗಿ ಹೋಗಬೇಕು, ಅಷ್ಟೆ. (ಇದನ್ನೇ ನಾವು ಸಾಧಾರಣವಾಗಿ It struck a chord in me ಎಂದು ಹೇಳುವುದು.) ಸಂಗೀತ ಯಾವುದಾದರೂ ಪರವಾಗಿಲ್ಲ. ನಾನು ಕರ್ನಾಟಕ ಸಂಗೀತದಲ್ಲಿ ಶಿಕ್ಷಣ ಪಡೆದು, ಕನ್ನಡ ಜಾನಪದ ಗಾಯಕಿಯಾಗಿ ಆಕಾಶವಾಣಿಯಲ್ಲಿ ಹೆಸರುಮಾಡಿದ್ದೆ. ಸಿಸ್ಟರ್ ಆಂಟೊನಿಯಿಂದ ದೊರೆತ ಸಂಗೀತ ಮಾರ್ಗದರ್ಶನದಿಂದಾಗಿ ಭಾರತೀಯ ಸಂಗೀತದಲ್ಲಿ ನನಗಿರುವ ಪರಿಶ್ರಮವನ್ನು ಇಲ್ಲಿ ಎಲ್ವಿನ್ ಸಂಸ್ಥೆಯ ನಿವಾಸಿಗಳಿಗಾಗಿ ಯಾವ ರೀತಿ ಬಳಸಬಹುದೆಂಬ ವಿಚಾರದಲ್ಲಿ ಅನೇಕ ಸಾಧ್ಯತೆಗಳು ಗೋಚರಿಸಿದವು. ನಾನು ನನ್ನ ಸುಪರ್ದಿನಲ್ಲಿದ್ದ ನಿವಾಸಿಗಳಿಗೆ ಎಷ್ಟೋ ಸಲ ಚೌರಸಿಯಾ ಅಥವಾ ರಮಣಿ ಅವರ ಕೊಳಲ ಸಂಗೀತ ಕೇಳಿಸಿದ್ದೇನೆ. ಅದರಿಂದ ಅವರಿಗೆ ದೊರೆಯುತ್ತಿದ್ದ ಸಾಂತ್ವನ ನಿಜಕ್ಕೂ ಆಶ್ಚರ್ಯಕರ.

ಎಲ್ವಿನ್ ನಿವಾಸಗಳಲ್ಲಿ ಒಂದಾದ ಎವರ್ಗ್ರೀನ್ ಕಟ್ಟಡದಲ್ಲಿದ್ದ ಆರ್ಥರ್ ಪಾರ್ಡಿಯಾನ್ ಅತೀವ ದೈಹಿಕ, ಮಾನಸಿಕ ದುರ್ಬಲತೆಗಳಿಗೆ ಒಳಗಾಗಿದ್ದ. ಸುಮಾರು

35 ವಯಸ್ಸಿನ ಅವನು ವಿಪರೀತ ಕೃಶನಾಗಿ ಕೇವಲ 12–15 ವಯಸ್ಸಿನ ಹುಡುಗನಂತೆ ಕಾಣುತ್ತಿದ್ದ. ದೇಹ ಸುರುಟಿಕೊಂಡು ವಕ್ರವಾಗಿತ್ತು. ಕೈಕಾಲುಗಳಲ್ಲಿ ಏನೇನೂ ಶಕ್ತಿಯಿಲ್ಲ. ತಲೆಯ ಭಾರ ಹೊರಲಾರದ ಕತ್ತು. ಮಾತಿನ ಶಕ್ತಿಯೇ ಇರಲಿಲ್ಲ. ಅವನಿಗಾಗಿಯೇ ಮಾಡಿಸಿದ್ದ ತಳ್ಳುಕುರ್ಚಿಯಲ್ಲಿ ಹೇಗೋ ಮುದುರಿಕೊಂಡು ಕೂತಿರುತ್ತಿದ್ದ. ಅವನನ್ನು ನೋಡಿಕೊಳ್ಳುವುದು, ಅವನಿಗೆ ಔಷಧಿ ಉಣಿಸುವುದು ಮಹಾಪ್ರಯಾಸದ ಕೆಲಸವಾಗುತ್ತಿತ್ತು. ಅವನು ತನಗೆ ಅನ್ನಿಸಿದ್ದನ್ನು ಹೇಳಲಾರ, ತೋರಿಸಲಾರ. ಹೀಗಾಗಿ ಅವನಿಗಿದ್ದ ಮಾರ್ಗ ಕಿರುಚಾಟವೊಂದೇ. ಸದಾ ಕಿರುಚುತ್ತಿದ್ದ ಅವನನ್ನು ಸಹಿಸುವುದು ಬಹಳ ಕಷ್ಟವಾಗುತ್ತಿತ್ತು. ಒಂದು ದಿನ ಅವನ ಮೇಲ್ವಿಚಾರಕ ನರ್ಸ್ ಒಬ್ಬಳು ಅವನ ಸ್ಥಿತಿಯ ಬಗ್ಗೆ ನನ್ನಲ್ಲಿ ಮಾತಾಡಿ ಅವನನ್ನು ನನ್ನ ಸಂಗೀತ ಸಾಂತ್ವನದ ಗೋಷ್ಠಿಗೆ ಕರೆತಂದಳು.

ನಾನು ಅಂದು ಚೌರಸಿಯಾ ಕೊಳಲು ವಾದನದ ಮುದ್ರಿಕೆ ಹಚ್ಚಿದ್ದೆ. ಕಿರುಚುತ್ತಲೇ ಬಂದ ಆರ್ಥರ್ ಹಾಗೇ ಸಂಗೀತ ಕೇಳುತ್ತಾ ಕುಳಿತ. ಕ್ರಮೇಣ ಅವನ ಕಿರುಚಾಟ ಕಮ್ಮಿಯಾಯಿತು. ಸ್ವಲ್ಪ ಹೊತ್ತಿನಲ್ಲೇ ಅವನು ನಿಶ್ಶಬ್ದನಾದ, ಅವನತ್ತ ತಿರುಗಿ ನೋಡಿದೆ. ಅವನನ್ನು ನೋಡಿಕೊಳ್ಳುತ್ತಿದ್ದ ನರ್ಸ್ ಕೂಡಾ ಅವನನ್ನೇ ದಿಟ್ಟಿಸಿ ಗಮನಿಸುತ್ತಿದ್ದಳು. ಅವಳ ಮುಖದಲ್ಲಿ ಆಶ್ಚರ್ಯ ಮೂಡಿತ್ತು. ಕೊಳಲ ದನಿ ಕೇಳುತ್ತ ಕೇಳುತ್ತ ಆರ್ಥರ್ ಶಾಂತನಾಗಿದ್ದ. ಕಣ್ಣುಗಳು ಅರ್ಧ ಮುಚ್ಚಿದ್ದವು. ಅವನ ಕೈಗಳು ಅಲ್ಲೇ ಗಾಳಿಯಲ್ಲಿ ಅವನ ಸುತ್ತಲೂ ಅಲೆಯುತ್ತಿದ್ದ ಕೊಳಲ ನಾದವನ್ನು ಅದರ ಮಾಧುರ್ಯದ ತುಣುಕನ್ನು ಹಿಡಿಯಿತೋ ಎಂಬಂತೆ ಅಲುಗಾಡುತ್ತಿದ್ದವು. ಸಂಗೀತದ ಲಯಕ್ಕೆ ಸರಿಯಾಗಿ ಅವನ ತಲೆ ತೂಗುತ್ತಿತ್ತು (ಅದೇನು ಅಷ್ಟು ಸುಲಭವಾದ ನಡೆಯೂ ಆಗಿರಲಿಲ್ಲ). ಆ ಕೊಳಲ ನಾದ, ಅದರ ಪ್ರಶಾಂತ ಸ್ನಿಗ್ಧತೆ, ಅದರ ಲಯ – ಎಲ್ಲವೂ ಆರ್ಥರನ ಮನಹೊಕ್ಕು ಅವನಿಗೆ ಸಮಾಧಾನ ತಂದುಕೊಟ್ಟಿದ್ದವು. ಗೋಷ್ಠಿ ಮುಗಿದಾಗ ಅವನು 'ಗೆದೆಗೆದೆ' ಎಂದು ತನ್ನ ಅವ್ಯಕ್ತ ಭಾಷೆಯಲ್ಲಿ ತನ್ನ ಕೃತಜ್ಞತೆ ತೋರಿಸಿ ನನ್ನೆಡೆ ನೋಡಿ ಮುಗುಳ್ನಕ್ಕ.

'ಎಲ್ಲಾ' ಎಂಬ ಒಬ್ಬ ಯುವತಿ ರೆಟ್ ಸಿಂಡ್ರೋಮ್‌ನಿಂದ (Rett syndrome) ತೊಳಲುತ್ತಿದ್ದಳು. ಈ ರೋಗಲಕ್ಷಣಗಳುಳ್ಳವರಿಗೆ ಕೈಗಳು ಸದಾ ಹೆಣೆದುಕೊಂಡಿರುತ್ತವೆ. ಬಿಡಿಸಿಕೊಳ್ಳಲು ಹೆಣಗಾಡುತ್ತಿರುತ್ತಾರೆ, ಆದರೆ ಆಗಲೊಲ್ಲದು. ಸಾಧಾರಣವಾಗಿ ಇದು ಹೆಣ್ಣುಮಕ್ಕಳಿಗೆ ಅವರು ದೊಡ್ಡವರಾಗುವ ವಯಸ್ಸಿನಲ್ಲಿ ಕಾಣಿಸಿಕೊಳ್ಳುತ್ತದೆ. ಇಂಥ ಎಲ್ಲಾ ಈ ಕೊಳಲ ಸಂಗೀತ ಕೇಳುತ್ತ ಎಷ್ಟು ಸಾಂತ್ವನಗೊಳ್ಳುತ್ತಿದ್ದಳೆಂದರೆ ಅವಳ ಕೈಗಳು ತಾವಾಗಿ ಬಿಡಿಸಿಕೊಳ್ಳುತ್ತಿದ್ದವು. ಆ ಸ್ವಲ್ಪ ಹೊತ್ತಾದರೂ ಅವಳು ಸಮಾಧಾನದಿಂದಿರುತ್ತಿದ್ದಳು.

ಡೇನಾಗೆ ಇನ್ನೊಂದು ರೀತಿಯ ಮನೋವಿಕಾರವಿತ್ತು. ತಮ್ಮನ್ನು ನೋಡಿಕೊಳ್ಳುತ್ತಿದ್ದ ಸಿಬ್ಬಂದಿ ಯಾರಾದರೂ ತನ್ನ ಜೊತೆಯವರಿಗೆ ಹೇಳಿದ ಮಾತನ್ನು

ಕೇಳಿಸಿಕೊಂಡು ತಾನೂ ಅದನ್ನೇ ಪದೇ ಪದೇ ಹೇಳುತ್ತಿದ್ದಳು. ಉದಾಹರಣೆಗೆ, ಶಿಕ್ಷಕಿಯೊಬ್ಬಳು ಅಲ್ಲಿದ್ದ ಇನ್ನೊಬ್ಬ ಹುಡುಗನನ್ನು ಉದ್ದೇಶಿಸಿ `Don't do it, Donald' ಎಂದರೆ, ತಾನೂ ಅದನ್ನೇ ಹೇಳುವಳು. ಪ್ರತಿ ಸಲ ಅದನ್ನು ಹೇಳುವಾಗಲೂ ಅದರ ಸ್ಥಾಯಿ ಏರುತ್ತ ಬರುಬರುತ್ತ ಅದು ಸಹಿಸಲಾಗದ ಕೂಗಾಟವಾಗಿ ಪರಿಣಮಿಸುತ್ತಿತ್ತು. ಸಂಗೀತದ ಆಲಿಸುವಿಕೆಯಿಂದ ಇದೂ ಕೂಡ ತಹಬಂದಿಗೆ ಬರುತ್ತಿತ್ತು. ಸಂಗೀತದಲ್ಲಿ ತನ್ಮಯಳಾದಾಗ ಅದರ ಲಯದ ನಡೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ತಾಳ ಹಾಕುತ್ತಿದ್ದುದು ನನಗೆ ತುಂಬಾ ಆಶ್ಚರ್ಯವನ್ನುಂಟುಮಾಡುತ್ತಿತ್ತು. ಒಂದು ಸಲ ನಾನು ಹಾಡಿದ ಒಂದು ಭಜನೆಯಲ್ಲಿ ಪದಗಳು ಪುನರುಕ್ತಿಗೊಳ್ಳುತ್ತಿದ್ದ ರೀತಿ ಅವಳಿಗೆ ಸಮಾಧಾನ ನೀಡಿದಂತೆ ತೋರಿತು. ಅದರಿಂದ ಪ್ರೇರಿತಳಾಗಿ ನಾನು ಅವಳಿಗಾಗಿಯೇ ಪ್ರತ್ಯೇಕವಾಗಿ ಪದೇಪದೇ ಪುನರುಕ್ತಿಗೊಳ್ಳುವ ಕೆಲವೇ ಸರಳ ಪದಗಳಿರುವ ಹಾಡುಗಳನ್ನು ರಚಿಸಿ ಹೇಳಿಕೊಟ್ಟೆ. ಅದರಿಂದ ಅವಳ ಪುನರುಕ್ತಿಯ ಚಟಕ್ಕೆ ಸೂಕ್ತ ಸಮಾಧಾನ ಸಿಕ್ಕುತ್ತಿತ್ತು.

ಸ್ಯಾಮ್ ಮಧ್ಯವಯಸ್ಸಿನವನು. ಕಣ್ಣಿನ ದೃಷ್ಟಿ ತುಂಬಾ ಕ್ಷೀಣಿಸಿ ಅವನು ತನ್ನ ಕೋಣೆಯನ್ನು ಬಿಟ್ಟು ಹೊರಬರಲು ಹಿಂದೆಗೆಯುತ್ತಿದ್ದ. ಕಡೆಕಡೆಗೆ ನಿರಾಕರಿಸುತ್ತಲೂ ಇದ್ದ. ಆದರೆ ಅವನನ್ನು ಹೊರತರುತ್ತಿದ್ದುದು ಒಂದೇ – ಡೋಲಿನ ಶಬ್ದ. ಲಯಬದ್ಧ ಡ್ರಮ್ (ತಾಳವಾದ್ಯ) ನಿನಾದ ಕೇಳಿದರೆ ಸಾಕು ಎದ್ದು ಉತ್ಸಾಹದಿಂದ ನರ್ತಿಸುವುದಕ್ಕೇ ಪ್ರಾರಂಭಿಸಿಬಿಡುತ್ತಿದ್ದ. ಒಂದು ಸಲ ಅವನಿಗಾಗಿ ಡ್ರಮ್ ವಾದನದ ಧ್ವನಿಮುದ್ರಿಕೆ ಹಾಕಿದ್ದಾಗ ಸ್ಯಾಮ್‌ಅನ್ನು ನೋಡಿಕೊಳ್ಳುತ್ತಿದ್ದ ಆಫ್ರಿಕದಿಂದ ಹೊಸದಾಗಿ ಬಂದಿದ್ದ ಯುವಕ – ಯಾವಾಗಲೂ ಅನ್ಯಮನಸ್ಕನಾಗಿ ಯಾರೊಡನೆಯೂ ಸೇರದಂತೆ ಇರುತ್ತಿದ್ದವನು – ಅದನ್ನು ಗಮನವಿಟ್ಟು ಕೇಳಿಸಿಕೊಳ್ಳುತ್ತ ಕುಳಿತಿದ್ದ. ಅತಿ ಕುಶಲತೆಯಿಂದ ತಾನೂ ನುಡಿಸತೊಡಗಿದ. ಸುತ್ತಲಿದ್ದ ಸಿಬ್ಬಂದಿ ಎಲ್ಲರೂ ಬಂದು ಅದನ್ನು ಆನಂದಿಸತೊಡಗಿದರು. ಇದನ್ನು ಕಂಡು ಚಕಿತಳಾದ ನಾನು ಮರುದಿನ ನಮ್ಮ ವಿಭಾಗದಿಂದ ಒಂದು ನಿಜವಾದ ಆಫ್ರಿಕನ್ ಡ್ರಮ್ ಒಂದನ್ನು ತಂದು ಈ ಯುವಕನ ಕೈಲಿಟ್ಟೆ. ಅವನ ಮುಖ ಅರಳಿತು. ಅದನ್ನು ಒಡನೆಯೇ ನುಡಿಸಲಾರಂಭಿಸಿದ. ಬರುಬರುತ್ತ ಅವನು ಸ್ಫೂರ್ತಿಗೊಳ್ಳುತ್ತ ಅವನ ವಾದನ ಉತ್ತುಂಗಕ್ಕೆ ಏರಿತು. ಅಂತೆಯೇ ಸ್ಯಾಮ್ ನರ್ತನ ಕೂಡ. ಸುತ್ತಮುತ್ತಲಿನ ಸಿಬ್ಬಂದಿ ಮತ್ತಿತರರು ಎಲ್ಲರೂ ಇದರಲ್ಲಿ ಸೇರಿಕೊಂಡು ತನ್ಮಯರಾದರು. ಈ ಕಾರ್ಯಕ್ರಮವನ್ನು ಸದ್ಯದಲ್ಲೇ ನಡೆಯಲಿದ್ದ ಪ್ರತಿಭಾ ಪ್ರದರ್ಶನದಲ್ಲಿ ಖಂಡಿತ ಬಳಸಬೇಕು ಎಂದು ನಿರ್ಧರಿಸಿದೆ.

ಇದರಿಂದ ಸ್ಯಾಮ್ ಮತ್ತು ಅವನನ್ನು ನೋಡಿಕೊಳ್ಳುತ್ತಿದ್ದ ಯುವಕನಿಗೆ ಮಾತ್ರವೇ ಅಲ್ಲದೆ ಇಡೀ ಎಲ್ವಿನ್ನಿಗೇ ಒಂದು ಮಹತ್ತರವಾದ, ಅನಿರೀಕ್ಷಿತ ಫಲ ದೊರೆಯಿತು. ಎಲ್ವಿನ್‌ನಲ್ಲಿ ಆಫ್ರಿಕದ ಲೈಬೀರಿಯ, ಘಾನ, ಕೆನ್ಯಾ ಮತ್ತಿತರ ರಾಷ್ಟ್ರಗಳಿಂದ ಅಧಿಕ ಸಂಖ್ಯೆಯಲ್ಲಿ ಜನ ಬಂದು ಕೆಲಸಕ್ಕೆ ಸೇರಿದ್ದರು. ಅವರಿಗೂ ಮತ್ತು ಇಲ್ಲಿನವರೇ ಆದ

ಆಫ್ರಿಕನ್ ಅಮೆರಿಕನ್ ಜನರಿಗೂ ನಡುವೆ ಒಂದು ಸಾಂಸ್ಕೃತಿಕ ಅಡ್ಡಗೋಡೆ ಏಳಲು ಪ್ರಾರಂಭವಾಗಿತ್ತು. ಇದರಿಂದಾಗಿ ಅವರೆಲ್ಲ ಒಟ್ಟಾಗಿ ಎಲ್ವಿನ್ ನಿವಾಸಿಗಳ ಸೇವೆಮಾಡಬೇಕಾದ ಸಂದರ್ಭಗಳಲ್ಲಿ ಸಮಷ್ಟಿಭಾವವಿಲ್ಲದೆ ಭಿನ್ನಾಭಿಪ್ರಾಯ ಒಡಕುಗಳು ಏರ್ಪಡುತ್ತಿದ್ದವು. ಈ ಸಮಸ್ಯೆಯನ್ನು ನಿವಾರಿಸುವ ಮಾರ್ಗ ತೋರದೆ ಅಧಿಕಾರ ವರ್ಗದವರು ಒದ್ದಾಡುತ್ತಿದ್ದರು. ಪ್ರತಿಭಾ ಪ್ರದರ್ಶನದ ದಿನ ಸ್ಯಾಮ್ ಮಾಡಿದ ನರ್ತನಕ್ಕೆ ಈ ಯುವಕ ಡ್ರಮ್ ನುಡಿಸಲು ಮೊದಲಿಟ್ಟಾಗ ಅವನ ವಾದನ ಕೇಳುತ್ತ ಸಭೆಯಲ್ಲಿದ್ದ ಆಫ್ರಿಕನ್ ಜನ ಮಾತ್ರವಲ್ಲದೆ ಇಲ್ಲಿನವರೆಲ್ಲರೂ ಕೂಡ ಒಬ್ಬೊಬ್ಬರಾಗಿ ಬಂದು ಸೇರಿ ಸಾಮೂಹಿಕವಾಗಿ ನರ್ತಿಸಲು ಮೊದಲಿಟ್ಟರು. ಆ ಡ್ರಮ್ ವಾದನ ಎಲ್ಲರನ್ನೂ ಪರವಶರನ್ನಾಗಿಸಿತ್ತು, ಎಲ್ಲರನ್ನೂ ಒಂದುಗೂಡಿಸಿತ್ತು. ಅವರಲ್ಲಿ ತಲೆ ಎತ್ತುತ್ತಿದ್ದ ವಿಷಮತೆಯ ಬಿರುಕು ಮಾಯವಾಗಿ ಅವರೆಲ್ಲರ ಮುಂದಿನ ಐಕಮತ್ಯಕ್ಕೆ ನಾಂದಿಯಾಯಿತು. ಅನೇಕ ಪುರಾತನ ಸಂಸ್ಕೃತಿಗಳು ತಾಳವಾದ್ಯದ ಪ್ರಭಾವವನ್ನು ಗುರುತಿಸಿ ಅದಕ್ಕೆ ಒಂದು ಪ್ರಮುಖ, ಪವಿತ್ರ ಸ್ಥಾನ ಕೊಟ್ಟಿವೆ ಎಂದು ಸಿಸ್ಟರ್ ಆಂಟೊನಿ ಹೇಳುತ್ತಿದ್ದ ಮಾತನ್ನು ಪ್ರತ್ಯಕ್ಷವಾಗಿ ಕಂಡಂತಾಯಿತು.

ನಾನು ಎಲ್ವಿನ್ನಿನಿಂದ ನಿವೃತ್ತಿಗೊಂಡು ನಾಲ್ಕು ವರ್ಷಗಳಾದುವು. ನಾನು ಅಲ್ಲಿ ಕೆಲಸ ಮಾಡುತ್ತಿದ್ದಾಗ ಅನುದಿನವೂ ನೋಡುತ್ತಿದ್ದ ಮಕ್ಕಳು, ಯುವಕ-ಯುವತಿಯರು, ವೃದ್ಧರು ಎಲ್ಲರ ಮುಖಗಳೂ ಈಗಲೂ ಕಣ್ಣ ಮುಂದೆ ಬರುತ್ತವೆ. ಹಾಗೆಯೇ ಎಲ್ವಿನ್ ಸೇರುವ ಮುಂಚೆ – ಅಲ್ಲಿ ಸೇರುವ ಕಲ್ಪನೆಯೂ ಇರಲಿಲ್ಲ ಆಗ ನನಗೆ – ನಾನು ಕಂಡಿದ್ದ ಕನಸೊಂದು ನೆನಪಾಗುತ್ತದೆ. 1986ರಲ್ಲಿ ನನ್ನ ತಂದೆಯವರು ನಿಧನ ಹೊಂದಿದಾಗ ನಾನು ಭಾರತಕ್ಕೆ ಹೋಗಿದ್ದೆ. ಮದರಾಸಿಗೆ ಹೋಗಿ ನನ್ನ ಪತಿಯ ಪ್ರಿಯ ಸೋದರಮಾವನ ಮನೆಯವರನ್ನೆಲ್ಲ ನೋಡಿ ಅಲ್ಲಿಂದ ನನ್ನ ತಂದೆಯವರ ನೆನಪಿನಲ್ಲಿ ಕಂಚಿಗೆ ಹೋಗಿ ಕಾಮಾಕ್ಷಿ ದೇವಿಯ ಸಂದರ್ಶನ ಮಾಡಿ ಮದರಾಸಿಗೆ ಮರಳಿದ್ದೆ. ಆ ಮರುದಿನದ ಬೆಳಗಿನ ಝಾವ ನನಗಾದ ಕನಸಲ್ಲಿ ಸನಿಹದಲ್ಲೇ ಕಾರ್ಯನಿರತಳಾದ ದೇದೀಪ್ಯಮಾನಳಾದ ದೇವಿ, ಅಲ್ಲೇ ಅವಳ ಕೃಪೆಗಾಗಿ ಕಾದು ನಿಂತ ವೃದ್ಧರು, ಅಂಗವಿಕಲರು ಎಲ್ಲರನ್ನೂ ಒಳಗೊಂಡ ಮಾನವರ ಸಾಲು – ಇವನ್ನು ಕಂಡೆ. ನನ್ನ ಎಲ್ವಿನ್ ದಿನಗಳ ಮುನ್ಸೂಚನೆ ಅದಾಗಿತ್ತೇನೋ ಎಂಬ ಭಾವನೆ ನನಗೆ ತೋರಿದೆ.

ಬೇರು ಸೂರು



ನಮ್ಮ ರೊಚ್ಚಿನ ಒಳತೋಟಿ ಹಾಗೂ ದ್ವಂದ್ವ–ದಿಗ್ಬಂಧ

– ಟಿ.ಎನ್. ಕೃಷ್ಣರಾಜು

ಈ ಪ್ರಬಂಧದ ಶೀರ್ಷಿಕೆಗೆ, ಗೋಪಾಲಕೃಷ್ಣ ಅಡಿಗರ 'ವರ್ಧಮಾನ,' ಮತ್ತು 'ದ್ವಂದ್ವ–ದಿಗ್ಬಂಧ' ಕವನಗಳ ಪದ ಗುಚ್ಛಗಳನ್ನು ಸೇರಿಸಿದ್ದೇನೆ. ಏಕೆಂದರೆ, ಹೊರನಾಡಿನಲ್ಲಿರುವ ನಮ್ಮ ಸದ್ಯದ ಪರಿಸ್ಥಿತಿಯನ್ನು ಈ ಶೀರ್ಷಿಕೆ ಧ್ವನಿಸೀತು ಅಂತ ನನ್ನ ಅಭಿಪ್ರಾಯ. ಭಾರತ ನಮ್ಮ ನಿರಂತರ ಚಿಂತನೆಯ ಅಂಗ–ಒಬ್ಸೆಷೆನ್. 'ಹೆಚ್ಚೂ ಕಮ್ಮಿ ಪ್ರತಿದಿನ ನನಗೆ ನಮ್ಮೂರು ನೆನಪಿಗೆ ಬರುತ್ತೆ' ಅಂತ ಐವತ್ತು ವರ್ಷ ಚಿಕಾಗೋದಲ್ಲಿ ವಾಸ ಮಾಡಿದ್ದ ಮಿತ್ರ ಒಮ್ಮೆ ಹೇಳಿದ್ದ. ಹೊರನಾಡಿನ ನಾವು, ಭಾರತದ ರಾಜಕೀಯ ಕೋಲಾಹಲ, ಜಾತಿ ಕೋಮುಗಳ ಬಡಿದಾಟಗಳ ಬಗ್ಗೆ ಅಮೆರಿಕಾ ಪತ್ರಿಕೆಗಳಲ್ಲಿ ಬರುವ ಟೀಕೆಯ ಲೇಖನಗಳನ್ನು ಓದಿ ಸಿಡಿಯುತ್ತೇವೆ. 'ಸ್ಲಮ್ ಡಾಗ್ ಮಿಲಿಯನೇರ್' ಮುಂತಾದ ಸಿನಿಮಾಗಳು ಭಾರತದ ಝೋಪಡಾ ಪಟ್ಟಿಗಳ ಪಾಡು, ಬಡತನದ ಗೋಳು ಬದುಕನ್ನು ಸೆನ್‌ಶೇನಲೈಸ್ ಮಾಡಿ, ನಮಗೆ ಅವಮಾನ ತರುವ ಹಾಲಿವುಡ್ ಪ್ರವೃತ್ತಿಯನ್ನು ಟೀಕಿಸುತ್ತೇವೆ. ಆಗ ನನಗೆ, ಅಡಿಗರ 'ವರ್ಧಮಾನ' ಕವನದ ಹುರಿಮೀಸೆಯ ಯುವಕನ ಅರ್ಥರಹಿತ ರೊಚ್ಚಿನ ಚಿತ್ರಣ ನೆನಪಿಗೆ ಬರುತ್ತದೆ: 'ತನಗಿಂತ ಮೊದಲೇ ತನ್ನಪ್ಪ ಹುಟ್ಟಿದ್ದಕ್ಕೆ; ಮೊಲೆಬಿಡಿಸಿದವಮಾನ ಮುಯ್ಯಿ ತೀರದ್ದಕ್ಕೆ ರೊಚ್ಚು...'

ಹಾಗೇ, ನಮಗೇ ಅರಿವಿಲ್ಲದೇ ನಮ್ಮನ್ನು ಬಂಧಿಸುವ ದಿಗ್ಬಂಧಗಳ ಆಳವಾದ ಅಭಿವ್ಯಕ್ತಿಯನ್ನು ತೋರುವ ಅಡಿಗರ ಕವನ 'ದ್ವಂದ್ವ–ದಿಗ್ಬಂಧ'. ಈ ಕವನದಲ್ಲಿ ನಾವು, ಬದುಕು ಸಾವು, ಪೂರ್ಣ ಅಪೂರ್ಣ, ಅನಂತಮುಖಿ ಅಂತರಂಗದ ಸಂಚಾರವನ್ನು ತಡೆಯುವ ಈ ನೆಲಕ್ಕೆ ಅಂಟಿ ಗಟ್ಟಿ ನಿಂತ ಜಡ ಶರೀರ– ಇತ್ಯಾದಿ ವಿರುದ್ಧ ಪ್ರತಿಮೆಗಳನ್ನು ಎದುರಿಸುತ್ತೇವೆ. ಇವೆಲ್ಲಾ ಹೇಗೆ, 'ತಕ್ಕಡಿಯ ಎರಡೂ ತಟ್ಟೆಯಲ್ಲಿ ಪರಸ್ಪರ ವಿರುದ್ಧ ದ್ವಂದ್ವಗಳು ಸರ್ವದಾ ತೂಗುತ್ತವೆ' ಎಂಬ ದಿಟ್ಟ ಪ್ರತಿಮೆಗಳನ್ನು ನಮ್ಮ ಮುಂದಿಡುವ ಅಡಿಗರ ಈ ಕವನದ ಅರ್ಥ ಅತ್ಯಂತ ವೈಯಕ್ತಿಕ ಅಂತರಾಳಕ್ಕೆ ಸಂಬಂಧಿಸಿದರೂ, ಪರದೇಶದಲ್ಲಿರುವ ನಮಗೂ ಅನ್ವಯವಾಗುತ್ತದೆ ಅಂತ ನನಗನ್ನಿಸುತ್ತದೆ.

ನನ್ನ ವಾದದ ಪೋಷಣೆಗೆ, ಈ ಕೆಳಗೆ ಎರಡು ಅನುಭವಗಳನ್ನು ನಿಮ್ಮ ಮುಂದಿಡುತ್ತೇನೆ. ಇಲ್ಲಿ ಬರುವ ಹೆಸರುಗಳು ನಿಜದ್ದಲ್ಲ– ಅವು ನನ್ನ ಕಲ್ಪಿತ.

ಮಿತ್ರರ ಮನೆಯಲ್ಲಿ ಒಂದು ಸಂಜೆ

ರಂಗರಾವ್ ಮನೇ ಭೋಜನದ ಆಹ್ವಾನವನ್ನು ಯಾರೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವರ ಹೆಂಡತಿ ನಿರ್ಮಲಬಾಯಿ ಮಾಡುವ ಬಿಸಿಬೇಳೆಬಾತನ್ನು ನೀವು ತಿಂದು ನೋಡಬೇಕು, ನಾನು ಹೇಳಿ ಪ್ರಯೋಜನವಿಲ್ಲ. ಅಂದಿನ ಭೋಜನಕ್ಕೆ ಕಾರಣ, ಎರಡು ವಾರದ ಹಿಂದೆ ಬೆಂಗಳೂರಿನಿಂದ ಬಂದಿದ್ದ ರಾಯರ ಚಿಕ್ಕಮ್ಮನ ಮಗ, ನಡುವಯಸ್ಸಿನ ಗೋಪಾಲ್ ರಾವ್ ಅವರನ್ನು ನಮಗೆ ಪರಿಚಯಿಸಬೇಕು ಅಂತ.

ಮಾಮೂಲಿ ಭಾರತೀಯರ ಮನೆ ಪಾರ್ಟಿ. ಸಣ್ಣ ಮಕ್ಕಳು ರೈಲು ಗಾಡಿಮಾಡಿಕೊಂಡು ಮನೆಯೆಲ್ಲಾ ಓಡಾಡುತ್ತಿದ್ದರೆ, ಟೀನ್‌ಏಜ್ ಮಕ್ಕಳು ಬೇಸ್ಮೆಂಟ್‌ನಲ್ಲಿ ವಿಡಿಯೋ ಆಟಕ್ಕೆ ಶುರುಮಾಡಿದರು. ಅಡುಗೆ ಮನೆಯಲ್ಲಿ ಹೆಂಗಸರ ಚಕ್ಕಂದ. ಕೆಲಸವಿರದ ಗಂಡಸರು ಲಿವಿಂಗ್ ರೂಮಿನಲ್ಲಿ ಕುಳಿತು, ಬೂಂದೀಕಾಳು ತಿನ್ನುತ್ತಾ ಹರಟೆಯಲ್ಲಿ ಮುಳುಗಿದೆವು.

ಮಾತುಕತೆ ಅದೂ ಇದೂ ಆದಮೇಲೆ, ರಾಜಕೀಯಕ್ಕೆ ತಿರುಗಿತು– ಇಳಿಯಿತು, ಅನ್ನಬೇಕೇನೋ. ಅಂದಿನ ಚರ್ಚೆಯನ್ನು ಸಂಗ್ರಹಿಸುವುದು ಕಷ್ಟ. ಯಾರು ಏನು ಹೇಳಿದರು ಅಂತ ಸೂಚಿಸದೆ, ನನ್ನ ನೆನಪಿನಲ್ಲಿ ಉಳಿದ ಚರ್ಚೆಯಲ್ಲಿ ಮೂಡಿಬಂದ ಕೆಲವು 'ತಲೆಬರಹಗಳನ್ನ' (headlines) ಮಾತ್ರ ಕೊಟ್ಟಿದ್ದೇನೆ, ವಿವರಗಳನ್ನು ಊಹಿಸಿಕೊಳ್ಳಿ.

'ಪ್ರೆಸಿಡೆಂಟ್ ಬುಶ್ ಎಂಥಾ ಪ್ರಚಂಡ, ಆ ಇರಾಕಿಗಳ ಕುಂಡೆಗೆ ಒದ್ದು ಹ್ಯಾಗೆ ಬುದ್ಧಿ ಕಲಿಸುತ್ತಿದ್ದಾನೆ ನೋಡಿ.'

'ಭಾರತ ಇಸ್ರೇಲ್ ಜತೆ diplomatic relations ಯಾಕೆ ಶುರು ಮಾಡೋಲ್ಲ? ನಾವು ಪ್ಯಾಲಸ್ಟೈನ್ ಪ್ಯಾಲಸ್ಟೈನ್ ಅಂತ ಎಷ್ಟು ದಿನ ಅವರನ್ನ ಎತ್ತಿ ಹಿಡೀಬೇಕು?'

'ನೀವೇನೇ ಅನ್ನಿ, ಅಮೇರಿಕಾದ ಕರಿ ಜನ ಬಹಳ lazy ಅಲ್ವಾ?'

'ಈಗ ನೋಡಿ, ನಾವು, ಹಿಂದುಗಳು ನಮ್ಮ ದೇವರನ್ನ ಯಾರಾದರೂ ಅವಮಾನ ಮಾಡಿದರೆ, ಊರನ್ನೆಲ್ಲ ಸುಡೋಕೆ ಹೋಗಲ್ಲ... ಅದ್ಯಾಕೆ ಬಿಡಿ, ನಾವು 'ಗಣೇಶ ಬೀಡಿ' ಅಂತ ಸೇದೋಲ್ವೇ? ಗಣೇಶನ ಹೆಸರಿಗೆ ಅವಮಾನ ಅಂತ ಯಾವಾಗಾದರೂ ರಯಟ್ ಆಗಿದೆಯಾ? ಹಾಗೇ, ಚಾಮುಂಡೀ ಕೆಫೆ, ಲಕ್ಷ್ಮೀ ಜೂವೆಲರ್ಸ್, ಕೃಷ್ಣಭವನ ಅಂತ ಹೆಸರಿರೋ ಬಿಸಿನೆಸ್‌ಗಳು ಕಡಿಮೆನಾ? ಆದರೆ ನೋಡಿ, ಪ್ರವಾದಿಯ ಬಗ್ಗೆ ಯಾರೋ ವ್ಯಂಗ್ಯ ಚಿತ್ರ ಬರೆದ ಅಂತ ಪ್ರಪಂಚದಲ್ಲೆಲ್ಲಾ ಗುಲ್ಲು, ರಯಟ್ಸ್, ಅದ್ಯಾಕೆ? They are fanatics.'

'ಭಗವದ್ಗೀತೆ, ಉಪನಿಷದ್, ಮತ್ತು ಚತುರ್ವೇದಗಳ ನಮ್ಮ ಕಲ್ಚರ್ ಬಿಟ್ಟರೆ, ಅದಕ್ಕಿಂತ ದೊಡ್ಡದು ಯಾವುದಿದೆ ಸಾರ್?'

ಬೇರು ಸೂರು

'ಕಡೆಗಾದರೂ ಬಿ.ಜೆ.ಪಿ. ಆಡಳಿತಕ್ಕೆ ಬಂದರೆ, ದೇಶ ಉದ್ಧಾರವಾದೀತು.'

'ನಮ್ಮ ರಾಜಕಾರಣಿಗಳು ಲಂಚ ತಗೊಂಡರೂ ಪರವಾಗಿಲ್ಲ, ಕೆಲಸನಾದರೂ ಮಾಡಿದರೆ ಸಾಕು, ಅಲ್ಲವಾ?'

'ಬೆಂಗಳೂರಲ್ಲಿ ಕನ್ನಡನೇ ಹೊರಟು ಹೋಗ್ತಾ ಇದೆಯಲ್ಲ ಸಾರ್! The current generation does not know the beauty of Kannada!'

'ಏನೇ ಇರಲಿ, ನಮಗೆ ನಮ್ಮ ದೇಶ ಅಂತ ಅಭಿಮಾನ ಇದ್ದರೆ ಸಾಕು. ಇಂಡಿಯಾದ ಕಲ್ಚರ್ is great. We are accommodating. We take the best of all the worlds. ಹಂಸ-ಕ್ಷೀರ ನ್ಯಾಯದ ಹಾಗೆ. ನಮ್ಮ ಅಧ್ಯಾತ್ಮ, plus ಆಧುನಿಕ ಜೀವನ ಕ್ರಮ, We are the best.'

'What's so great about America?'

ಊಟ ಬಡಿಸಿದೆ ಅಂತ ಆಹ್ವಾನ ಬಂತು. ಅದನ್ನೇ ಕಾಯುತ್ತಿದ್ದ ನಾವು, ಧಾವಿಸಿ, ಬಿಸಿಬೇಳೆ ಬಾತನ್ನು ಹೊಟ್ಟೆ ತುಂಬಾ ತಿಂದೆವು.

ಹರಟೆಯ ಸಮಯದಲ್ಲಿ ನನಗನಿಸಿದ ಸಾವಿರ ಯೋಚನೆಗಳನ್ನು ಹೇಗೆ ಸಂಗ್ರಹಿಸಲಿ? ಅದರಲ್ಲೂ, ಗೋಪಾಲರಾಯರ ಕಡೆಯ ಉದ್ಗಾರ, 'ವಾಟ್ ಈಸ್ ಸೋ ಗ್ರೇಟ್ ಎಬೌಟ್ ಅಮೇರಿಕಾ?' ಪ್ರಶ್ನೆ ಕಾಡಿತು.

What is so great about America? ಈ ಕೆಳಗಿರುವುದು ನನ್ನ ಸಣ್ಣ ಪಟ್ಟಿ.

ಸ್ಮಿತ್ಸೋನಿಯನ್

ಸುಮಾರು ಐದು ವರ್ಷಗಳ ಹಿಂದೆ ನಾನು ಮೈಸೂರಿನ ಜಗನ್ಮೋಹಿನೀ ಪ್ಯಾಲೇಸ್‌ಗೆ ಹೋಗಿದ್ದೆ. ಅದು ಈಗಲೂ ಹಾಗೇ ಇದ್ದರೆ ಒಟ್ಟಿಗೇ ಅಳಬಹುದು. ಹೆಚ್ಚುಕಡಿಮೆ ಪ್ರತಿ ಗೋಡೆಯ ಮೇಲೆ ಬಣ್ಣ ಬಣ್ಣದ ಗ್ರಫೀಟಿಗಳು. 'ದೀಪ ಹಿಡಿದ ಮಹಿಳೆ' ಅದ್ಭುತ ತೈಲಚಿತ್ರದ ರೂಮಿನಲ್ಲಿ ದೀಪವಿಲ್ಲ. 'ಸುಮಾರು ಒಂದು ತಿಂಗಳ ಹಿಂದೆ ಬಲ್ಬು ಹೋಗಿದೆ ಸಾರ್' ಅಂತ ಅಲ್ಲೇ ಆಕಳಿಸುತ್ತ ನಿಂತಿದ್ದ ಪೇದೆ ಹೇಳಿದ. ಧೂಳು ತುಂಬಿದ ಗಾಜಿನ ಮೇಜುಗಳಲ್ಲಿ ಪ್ರದರ್ಶಿಸಿದ ಮೈಸೂರಿನ ರಾಜಮನೆತನದ ವಸ್ತುಗಳ ಬಗ್ಗೆ ಹಾಸ್ಯಾಸ್ಪದ ವಿವರಗಳು: 'ಬೆಳ್ಳಿಯ ಲೋಟ', 'ಕಂಚಿನ ಕತ್ತಿ', 'ಗಂಧದಲ್ಲಿ ಕೆತ್ತಿದ ಗಣಪತಿ'...

ಆಗ ನಿಮಗೆ ವಾಷಿಂಗ್ಟನ್‌ನಲ್ಲಿರೋ ಸ್ಮಿತ್ಸೋನಿಯನ್ ಸಂಸ್ಥೆಗಳು ನೆನಪಿಗೆ ಬರಬೇಕು. ಅಂಥಾ ಸಂಸ್ಥೆಗಳು ಭಾರತದಲ್ಲಿ ಯಾಕೆ ಕಟ್ಟಬಾರದು? ನಮ್ಮ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳಿಗೆ, ಜನ ಸಾಮಾನ್ಯರಿಗೆ ಮನೋರಂಜನೆ ಮತ್ತು

ಜ್ಞಾನಾಭಿವೃದ್ಧಿಗೆ ಎಷ್ಟು ಸಹಾಯವಾದಾವು? Don't we deserve such a gift to ourselves?

ದೈನಂದಿನ ವ್ಯವಹಾರ

ಲಂಚ ಭ್ರಷ್ಟಾಚಾರ ಎಲ್ಲಾ ಕಡೆ ಇದ್ದದ್ದೇ. ಆದರೆ, ಅಮೇರಿಕಾದಲ್ಲಿ ಮಧ್ಯಮ ವರ್ಗದ ನಾವು ನಿತ್ಯದ ಬದುಕಿನಲ್ಲಿ ಲಂಚ ಕೊಡಬೇಕಾಗಿ ಬರೋದಿಲ್ಲ. ನಿಮ್ಮ ಊರು, ಕೌಂಟಿ, ಮತ್ತು ರಾಜ್ಯಗಳ ಆಫೀಸುಗಳಲ್ಲಿ ನೀವು ನಡೆಸಬೇಕಾದ ಕೆಲಸಗಳಿಗೆ, ಪಡೆಯಬೇಕಾದ ಅನುಮತಿಗಳಿಗೆ, ಎಂದಾದರೂ ಲಂಚ ಕೊಟ್ಟಿದ್ದೀರಾ? ಅಮೇರಿಕಾ ಏನೂ ರಾಮರಾಜ್ಯವಲ್ಲ, ನಿಜ. ಆದರೆ ನೋಡಿ, ಈ ನಲವತ್ತು ವರುಷಗಳಲ್ಲಿ, ನನ್ನ ಹೆಂಡತಿ, ಇಬ್ಬರು ಮಕ್ಕಳು ಮತ್ತು ನಾನು ಸುಮಾರು ನೂರು ಸರ್ತಿ ನಮ್ಮ driver's licenseಗಳನ್ನು ಪಡೆದಿದ್ದೇವೆ, ನವೀಕರಿಸಿದ್ದೇವೆ. ಒಂದು ಬಾರಿ ಕೂಡಾ ಅವನ್ನು ಪಡೆಯಲು ಲಂಚ ಕೊಡಬೇಕಾದ ಪರಿಸ್ಥಿತಿಯೂ ಬಂದಿಲ್ಲ. ಈಚೆಗಂತೂ ಇಂಟರ್ನೆಟ್ ಮೂಲಕ ಪಡೆಯುತ್ತಿದ್ದೇವೆ. ನಿಮ್ಮ ಅನುಭವ ಕೂಡಾ ಹಾಗೇ ಅಂತ ನಂಬಿದ್ದೇನೆ.

ಅದೇ ನನ್ನ ಭಾವ ಮೈದುನ ಜಯಂತ ಬೆಂಗಳೂರಿನಲ್ಲಿ ತನ್ನ driver's licenseನ್ನು ಪಡೆಯಲು ಹತ್ತು ಸರ್ತಿ ಹೋದಾಗಲೂ, ಪರೀಕ್ಷೆಯಲ್ಲಿ ಅವನನ್ನ ಪಾಸುಮಾಡಲಿಲ್ಲ, ಲೈಸನ್ಸ್ ಕೊಡಲಿಲ್ಲ. ಅದ್ಯಾಕೆ ಅಂತ ಅವನಿಗೆ ಗೊತ್ತಿತ್ತು. 'ಯಾಕೆ ಅವರಿಗೆ ತಿನ್ನಿಸಬೇಕು ಭಾವ' ಅನ್ನುತ್ತಿದ್ದ.

ಕಡೆಗೆ ಬೇಸತ್ತು, ಯಾರ ಕೈಯಲ್ಲೋ ಐದು ಸಾವಿರ ರುಪಾಯಿ ಕೊಟ್ಟುಕಳುಹಿದ. ಮರುದಿನ ಯಾರೋ ಒಬ್ಬ ಜಯಂತನ ಲೈಸೆನ್ಸ್‌ನ್ನು ಮನೆಗೇ ತಂದು ಕೊಟ್ಟ; ಪರೀಕ್ಷೆ ಇಲ್ಲ ಏನಿಲ್ಲ! ಇದು ಸುಮಾರು ಹತ್ತು ವರುಷಗಳ ಹಿಂದೆ ನಡೆದದ್ದು. ಈಗ driver's licenseನ ಬೆಲೆ ಜಾಸ್ತಿಯಾಗಿದೆಯಂತೆ.

ರಾಷ್ಟ್ರೀಯ ಆರೋಗ್ಯ ಸಂಸ್ಥೆ – National Institutes of Health

ನಾನು ಕೆಲಸ ಮಾಡುವ ಈ ಸಂಸ್ಥೆ, ಪ್ರತಿ ವರ್ಷ ಮೂವತ್ತು ಬಿಲಿಯನ್ ಡಾಲರ್‌ನಷ್ಟು ಹಣವನ್ನು ವೈದ್ಯಕೀಯ ಸಂಶೋಧನೆಗೆ ಗ್ರ್ಯಾಂಟ್ ಮೂಲಕ ಕೊಡುತ್ತದೆ, ಇದು ಪ್ರತಿಯೊಬ್ಬ ಅಮೆರಿಕನ್ ಕೂಡಾ ಹೆಮ್ಮೆ ಪಡಬೇಕಾದ ವಿಷಯ. ಇರಲಿ.

ಇದರಲ್ಲಿ ಮಿಲಿಯನ್‌ಗಟ್ಟಲೆ ಧನಸಹಾಯ ಅಂತರಾಷ್ಟೀಯ ವಿಜ್ಞಾನಿಗಳಿಗೆ ಹೋಗುತ್ತದೆ– ಭಾರತಕ್ಕೂ ಕೂಡಾ. ಭಾರತದ ಕಾನೂನು ಪ್ರಕಾರ ಅಮೆರಿಕದಿಂದ ಬರುವ ಎಲ್ಲಾ ಗ್ರ್ಯಾಂಟ್ ಧನವೂ, ಭಾರತದ ಕೇಂದ್ರ ಸರ್ಕಾರದ ಮೂಲಕ ಭಾರತೀಯ ವಿಜ್ಞಾನಿಗಳಿಗೆ ತಲುಪಬೇಕು. ನನ್ನ ಸಹೋದ್ಯೋಗಿ, 2008ರ ಜನವರಿಯಲ್ಲಿ, ಬೆಳಗಾವಿ

ಮೆಡಿಕಲ್ ಕಾಲೇಜಿನ ಸಂಶೋಧಕರಿಗೆ ಸಿಕ್ಕ NIH ಗ್ರ್ಯಾಂಟ್ ಕಾಗದಕ್ಕೆ ಸಹಿ ಮಾಡಿದ. ಆಮೇಲೆ ನಮ್ಮ ಡೈರೆಕ್ಟರ್ ಸಹಿ ಆಯಿತು; ಒಂದು ವಾರದೊಳಗೆ ಆ ಗ್ರ್ಯಾಂಟ್‌ನ ಹಣ ಭಾರತ ಸರ್ಕಾರಕ್ಕೆ- ಐ.ಸಿ.ಎಮ್.ಆರ್. ಸಂಸ್ಥೆಗೆ ಹೋಯಿತು. ಅಲ್ಲಿಂದ ಅದು ಸಂಶೋಧಕರಿಗೆ ಮತ್ತೊಂದು ವಾರದಲ್ಲಿ ಸಿಗಬೇಕಾಗಿತ್ತು.

ಆದರೆ, ಬೆಳಗಾವಿ ಸಂಶೋಧಕರಿಗೆ NIH ಕೊಟ್ಟ ಗ್ಯಾಂಟ್‌ನ ಹಣ, ಸಿಗಲು ಎರಡು ವರುಷ ಬೇಕಾಯಿತು, ಅದೂ ಅಲ್ಲಿನ ಸಂಶೋಧಕರ ಭಗೀರಥ ಪ್ರಯತ್ನದ ನಂತರ. ಎಲ್ಲೆಲ್ಲಿ ಎಷ್ಟೆಷ್ಟು ಕೈಬಿಸಿ ಮಾಡಿಸಬೇಕು ಅಂತ ಅವರಿಗೆ ಗೊತ್ತಿದ್ದರೂ, ದುಡ್ಡು ಹರಿದುಬರುವ ದಾರಿಯ ಪ್ರತಿ ಹೆಜ್ಜೆಗೂ ಬೆಣ್ಣೆ-ತುಪ್ಪ ಸವರಿ, ಸಂಶೋಧನೆ ಮಾಡಲಿಕ್ಕೆ ಅವರ ಕೈಗೆ ಧನ ಸಿಗುವಾಗ, ಗ್ರ್ಯಾಂಟ್‌ನಲ್ಲಿ ಶೇಕಡಾ ಮೂವತ್ತರಷ್ಟು 'ಮಾಮೂಲಿ'-ಬೆಣ್ಣೆ-ತುಪ್ಪಕ್ಕೆ ಖರ್ಚಾಯಿತಂತೆ. 'This is the reality here Sir; what can we do,' ಅಂದರು ಅವರು, ಮೊನ್ನೆ ಸಿಕ್ಕಿದಾಗ.

ನೆನೆಸಿಕೊಂಡರೆ ನಾಚಿಕೆ, ನೋವು ಆಗದೇ?

ಈ ಮೇಲಿನ ನನ್ನ ಪಟ್ಟಿಗೆ ನಿಮ್ಮ ಐಟಂಗಳನ್ನೂ ಸೇರಿಸಿ. ಅದರಲ್ಲಿ ಹತ್ತನೇ ಒಂದಂಶವಾದರೂ ಭಾರತದಲ್ಲಿ ಇರಬಾರದೇಕೆ ಅಂತ ನನಗಾಗುವ ಹಂಬಲದಂತೆ ನಿಮಗೂ ಆಗಬಹುದು.

ಮಿಥ್ ಆಫ್ ಸಿಸಿಫಸ್: ಅಮೆರಿಕನ್ ಸ್ಟೈಲ್

ಮೊನ್ನೆ ಮೊನ್ನೆಯ ಮಾತು. ನನಗೆ ವೈದ್ಯಕೀಯ ಚರಿತ್ರೆಗೆ ಸಂಬಂಧಿಸಿದ ಸ್ಟ್ಯಾಂಪ್‌ಗಳನ್ನು ಸಂಗ್ರಹಿಸಿ ಅಭ್ಯಾಸ ಮಾಡುವ ಹವ್ಯಾಸ. ಅಂಚೆಚೀಟಿಗಳ ಕತೆಗಳನ್ನು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಠ ಹೇಳುವ ಭಾಷಣಗಳಲ್ಲಿ ಉಪಯೋಗಿಸುತ್ತೇನೆ.

ಕೆಲವು ವರ್ಷಗಳ ಹಿಂದೆ ನನ್ನ ಸಹೋದ್ಯೋಗಿ ಡಾ. ಕ್ರಿಸ್ಟೀನ್ ಮೆಕಲಕ್, ತನ್ನ ತೀರಿಕೊಂಡ ಮಾವ ಸಂಗ್ರಹಿಸಿದ್ದ ಸಾವಿರಾರು ಸ್ಟ್ಯಾಂಪ್‌ಗಳಿದ್ದ ಏಳೆಂಟು ಆಲ್ಬಮ್‌ಗಳನ್ನು ನನಗೆ ಕೊಟ್ಟಿದ್ದರು; ಅವುಗಳ ಬಗ್ಗೆ ತನಗೆ ಆಸಕ್ತಿ ಇಲ್ಲ ಅಂದಿದ್ದರು. ಆ ಆಲ್ಬಂಗಳಲ್ಲಿ ವಿವಿಧ ದೇಶಗಳ ಅಂಚೆ ಚೀಟಿಗಳಲ್ಲದೇ ವಿಭಿನ್ನ ಮಾದರಿಯ, ಬಣ್ಣ ಆಕಾರಗಳ ಸುಂದರವಾದ ಸ್ಟ್ಯಾಂಪುಗಳೂ ಇದ್ದವು. ಅವುಗಳ ಬೆಲೆ ಅಥವಾ ಮೌಲ್ಯದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಅದಕ್ಕಿಂತ ಹೆಚ್ಚಾಗಿ, ಅವುಗಳಲ್ಲಿ ಯಾವುದೂ ವೈದ್ಯಕೀಯ ಚರಿತ್ರೆಯ ಸ್ಟ್ಯಾಂಪುಗಳಿರಲಿಲ್ಲ. ಹಾಗಾಗಿ ಅವನ್ನು ಯಾರಿಗಾದರೂ ಕೊಟ್ಟು ಅಥವಾ ಮಾರಿ, ನನಗೆ ಬೇಕಾದ ಸ್ಟ್ಯಾಂಪ್‌ಗಳನ್ನು ಪಡೆಯಬೇಕು ಅಂತ ತುಂಬ ದಿನಗಳಿಂದ

ಅಂದುಕೊಳ್ಳುತ್ತಿದ್ದೆ.

ಅದಕ್ಕೆ ಸರಿಯಾಗಿ, ಒಂದು ವಾರಾಂತ್ಯದಲ್ಲಿ ವಾಷಿಂಗ್ಟನ್ ಡಿ.ಸಿ. ವಿಮಾನ ನಿಲ್ದಾಣದ ಬಳಿ ಹೊಟೆಲೊಂದರಲ್ಲಿ ನಡೆಯುತ್ತಿದ್ದ ಸ್ಟ್ಯಾಂಪ್ ಪ್ರದರ್ಶನದ ಬಗ್ಗೆ ಮಾಹಿತಿ ತಿಳಿಯಲು, ಅಲ್ಲಿಗೆ ಹೋದೆ. ಹೋಗಲು ಸುಮಾರು ಅರ್ಧ ಗಂಟೆ ಡ್ರೈವ್. ಮಹತ್ತಾದ ಸಭಾಂಗಣದ ತುಂಬ ಸ್ಟ್ಯಾಂಪ್ ಅಂಗಡಿಗಳು, ನೋಡಲು ಬಂದ ಗಿರಾಕಿಗಳು. ತಾವು ತಂದ ಅಂಚೆ ಚೀಟಿಗಳನ್ನು, 'ಫಸ್ಟ್ ಡೇ ಕವರ್'ಗಳನ್ನು, ಅಂಚೆ ಚೀಟಿ ಸಂಗ್ರಹಿಸುವವರಿಗೆ ಬೇಕಾದ ವಸ್ತುಗಳನ್ನು ಪ್ರದರ್ಶಿಸಿ, ಚೌಕಾಸಿ ಮಾಡಿ ಮಾರಲು ತಯಾರಾದ ಮಾಲೀಕರು. ಪಿರಿಯಾಪಟ್ಟಣದ ಶನಿವಾರ ಸಂತೆ ಏನೋ ಅನ್ನಿಸುವಷ್ಟು ಗಲಾಟೆ, ಗಜಿಬಿಜಿ. ಕೆಲವು ಅಂಗಡಿಗಳು ನಮ್ಮೂರ ಬೀಡಿ ಅಂಗಡಿಯಂತೆ, ಸಣ್ಣವು- ನೆಲದ ಮೇಲೆ ಸ್ಟ್ಯಾಂಪ್‌ಗಳ ಕಂತೆಗಳನ್ನು ಹರಡಿ ಕುಳಿತ ಮಾಲಿಕರು. ಇನ್ನು ಕೆಲವು, ದೊಡ್ಡ ಪುಸ್ತಕದಂಗಡಿಯಂತೆ ಕಂಡವು.

ಆಗ ನನಗೆ, 1963ರ, 'ಶರೇಡ್' ಎಂಬ ಸಿನಿಮಾದ ಕಡೆಯ ದೃಶ್ಯ ನೆನಪಿಗೆ ಬಂತು. ಆಡ್ರಿ ಹೆಪ್ಬರ್ನ್ ಒಂದು ಸ್ಟ್ಯಾಂಪ್ ಪ್ರದರ್ಶನಕ್ಕೆ ಮಗನೊಡನೆ ಹೋಗುತ್ತಾಳೆ. ಗಲಾಟೆಯಲ್ಲಿ ಮಗ ತಪ್ಪಿಸಿಕೊಳ್ಳುತ್ತಾನೆ. ಅವನನ್ನು ಹುಡುಕುತ್ತಾ ಅವಳಿಗೆ ಇದ್ದಕ್ಕಿದ್ದಂತೇ ಹೊಳೆಯುತ್ತದೆ, ತೀರಿಕೊಂಡಿದ್ದ ತನ್ನ ಗಂಡನ ಎನ್ವಲಪ್‌ಗೆ ಅಂಟಿಸಿದ ಸ್ಟ್ಯಾಂಪ್‌ಗಳು ಅರ್ಧ ಮಿಲಿಯನ್ ಡಾಲರಿಗೂ ಜಾಸ್ತಿಬೆಲೆಯ ಅಪರೂಪದ ಅಂಚೆ ಚೀಟಿಗಳು ಅಂತ. ಅದು ಆ ಸಿನಿಮಾದ ಕ್ಲೈಮ್ಯಾಕ್ಸ್ ಸೀನ್.

ನಾನು ಮೇಲೆ ಕೆಳಗೆ ಓಡಾಡಿದೆ. ಕೆಲವಾರು ಅಂಗಡಿಗಳನ್ನು ನೋಡಿ, ಕಡೆಗೆ ಒಂದು ಪುಟಾಣಿ ಗೂಡಿನಂತೆ ಕಾಣುತ್ತಿದ್ದ ಅಂಗಡಿಗೆ ಹೋದೆ. ಅಲ್ಲಿ ಗಿರಾಕಿಗಳು ಇರಲಿಲ್ಲ. ಅಂಗಡಿಯ ಮಾಲಿಕನಿಗೆ ನನ್ನ ಸ್ಟ್ಯಾಂಪ್ ಆಲ್ಬಂಗಳನ್ನು ತೋರಿಸಿದೆ.

ಆಗ, ನಡುವಯಸ್ಸಿನ ಬಿಳಿಯ ಹೆಂಗಸೊಬ್ಬಳು ಧಾವಿಸಿ ಬಂದು, ನನ್ನನ್ನು ನೋಡಿ, 'ಕ್ಷಮಿಸಿ, ನಾನು ಬಹಳ ದೂರದಿಂದ ಬಂದಿದ್ದೇನೆ, ನನಗೆ ಜಾಸ್ತಿ ಟೈಮ್ ಇಲ್ಲ, I want to purchase lots of stamps quickly. If you don't mind, shall I go first?' ಅಂದಳು. ಅವಳ ಮಗಳಿರಬೇಕು, ಎಂಟು ವರುಷದ ಹುಡುಗಿ; ದೊಡ್ಡ ಕಣ್ಣು ಬಿಟ್ಟು ಹರಡಿದ್ದ ಅಂಚೆ ಚೀಟಿಗಳ ರಾಶಿಯ ಮೇಲೆ ಕೈಯಾಡಿಸಿದಳು.

'ಅದಕ್ಕೇನು, be my guest' ಅಂದೆ.

ಆಗ ಅವಳು, ಮಾಲಿಕನ ಹತ್ತಿರ, 'ನನಗೆ ಐದು ಸಾವಿರದಷ್ಟು ಸ್ಟ್ಯಾಂಪ್ ಇರೋ ಚೀಲ ಬೇಕು. ನೂರಾರು ದೇಶಗಳ, ಹತ್ತಾರು ಬಣ್ಣ, ವಿಧವಿಧವಾದ ಸೈಜಿನ ಮತ್ತು ಆಕಾರಗಳ, ಹಳೆಯ ಮತ್ತು ಹೊಸ ಸ್ಟ್ಯಾಂಪ್‌ಗಳಿರಬೇಕು; ಹತ್ತು ಡಾಲರ್‌ಗಿಂತ ಜಾಸ್ತಿ ಕೊಡಲಾರೆ; I want them cheap,' ಅಂದಳು.

ಬೇರು ಸೂರು

ಆಕೆಯ ವಿಚಿತ್ರ ಕೋರಿಕೆ ಬಗ್ಗೆ ಆಶ್ಚರ್ಯವಾದರೂ, ನಾನು ಸುಮ್ಮನೇ ಅವಳನ್ನು ನೋಡುತ್ತಾ ನಿಂತೆ. ಅಂಗಡಿಯ ಮಾಲಿಕ ತಲೆಕೆರೆದುಕೊಳ್ಳುತ್ತಾ ತನ್ನ ಸಂತೆ ಸರಬರಾಜುಗಳನ್ನು ಹುಡುಕತೊಡಗಿದ.

ಆಗ ಹುಡುಗಿ ಅಮ್ಮನನ್ನ ಕೇಳಿದಳು, 'Mom, are you buying these for grandpa and grandma? What about for me?' ಆಗ, ಅವಳಮ್ಮ, 'Of course, dear, I shall buy something for you, before we leave.' ಅಂದಳು.

ಈ ಹೆಂಗಸಿನ ತಂದೆ ತಾಯಿಯೋ, ಅತ್ತೆ ಮಾವನೋ ಅಂಚೆ ಚೀಟಿ ಸಂಗ್ರಹಿಸುವ ಉತ್ಸಾಹಿಗಳಿರಬೇಕು, ಅನ್ನಿಸಿ, ಅವರು ಎಷ್ಟು ವರ್ಷಗಳಿಂದ ಸ್ಟ್ಯಾಂಪ್ ಸಂಗ್ರಹ ಮಾಡುತ್ತಿದ್ದಾರೆ ಅಂತ ಆಕೆಯನ್ನು ಕೇಳಿದೆ.

ಅವಳು, 'ನೋಡಿ, ನನ್ನ ಮಾವ ಅತ್ತೆ ಇಬ್ಬರಿಗೂ ಎಂಭತ್ತೈದು ವರ್ಷ, ನರ್ಸಿಂಗ್ ಹೋಂನಲ್ಲಿದ್ದಾರೆ, ಮೆರಿಲ್ಯಾಂಡ್‌ನಲ್ಲಿ. ಇವತ್ತು ಅವರನ್ನು ನೋಡಲು ಹೋಗುತ್ತಿದ್ದೇವೆ; ಆಗಲೇ ತಡ ಆಯ್ತು. ಅವರಿಬ್ಬರಿಗೂ ಕೈಬೆರಳುಗಳ ಆರ್ಥ್ರೈಟಿಸ್. ಜಾಸ್ತಿ ನಡೆಯೋಕೂ ಆಗಲ್ಲ. ದಿನ ಇಡೀ ಅವರಿಗೆ ಮಾಡೋಕೆ ಏನೂ ಇರೋಲ್ಲ. ಅದಕ್ಕೆ, ಈ worthless ಸ್ಟ್ಯಾಂಪ್‌ಗಳನ್ನು ಕೊಡುತ್ತೇನೆ. ಅವರಿಗೆ ಏನಾದರೂ ಮಾಡಲು ಇರಲಿ ಅಂತ'.

'ಈ ಸ್ಟ್ಯಾಂಪುಗಳನ್ನು ಅವರೇನು ಮಾಡ್ತಾರೆ?' ಅಂತ ಪೆದ್ದನಂತೆ ಕೇಳಿದೆ.

ಅವಳ ಉತ್ತರ ನನ್ನನ್ನು ಸ್ಥಗಿತಗೊಳಿಸಿತು. 'ಅವರಿಗೆ ನಾನು ಕೊಡೋ ಕೆಲಸ ಇದು. ಈ ಸ್ಟ್ಯಾಂಪ್‌ಗಳ ರಾಶಿ ಮುಂದೆ ಕೂತ್ಕೋತಾರೆ. ಬೆಳಗಿಂದ ಸಾಯಂಕಾಲದವರೆಗೆ, ಇವುಗಳನ್ನು ಸಾರ್ಟ್ ಮಾಡುತ್ತಾರೆ. ಬೇರೆ ಬೇರೆ ಗುಂಪಾಗಿ ಮಾಡಿ, ಎಣಿಸಿ, ಒಂದು ಪುಸ್ತಕದಲ್ಲಿ ಬರೆಯುತ್ತಾರೆ. ಮತ್ತೆ ಆ ಸ್ಟ್ಯಾಂಪ್‌ಗಳನ್ನು ಪುನಃ ಕಲಸಿ ಒಂದು ರಾಶಿ ಮಾಡುತ್ತಾರೆ. Mondays and Tuesdays they sort them by country; Wednesdays and Thursdays by colors; Fridays and Saturdays by size and shape; and Sundays chronologically. ಮತ್ತೆ, ಮುಂದಿನವಾರ, ಎಲ್ಲಾ ಪುನಃ ರಿಪೀಟ್ ಆಗುತ್ತೆ, ಅಥವಾ, ಬೇರೆ ಬೇರೆ ಕಾಂಬಿನೇಷನ್ ಮಾಡಿ ಸಾರ್ಟ್ ಮಾಡಬಹುದು. ಮುಂದೆ ಯಾವಾಗಲೋ ನಾನು ಹೋದಾಗ ನನಗೆ ಅವರು ಬರೆದಿಟ್ಟ ಲೆಕ್ಕ ತೋರಿಸುತ್ತಾರೆ. ಅದು ಅವರಿಗೆ ಹೋಮ್ ವರ್ಕ್ ಇದ್ದ ಹಾಗೆ.'

'ಈ ಚಾಕರಿಯನ್ನು ನಿಮ್ಮ ಅತ್ತೆ ಮಾವಂದಿರಿಗೆ ಯಾಕೆ ಕೊಡುತ್ತೀ' ಅಂತ ಅಂದುಕೊಳ್ಳುತ್ತಾ ಅವಳನ್ನು ನೋಡಿದಾಗ, ನನ್ನ ಪ್ರಶ್ನೆಯನ್ನರಿತವಳಂತೆ ಹೇಳಿದಳು–

'ಅವರ ಕೈಗೆ ಏನಾದರೂ ಕೆಲಸ ಬೇಕು. ಅವರಿಗೆ ಮೂರು ಮಕ್ಕಳು, ಎಂಟು ಜನ ಮೊಮ್ಮಕ್ಕಳು. ಆದರೆ ನಾನು, ನನ್ನ ಮಗಳನ್ನ ಬಿಟ್ಟು ಯಾರೂ ಅವರನ್ನ ನೋಡೋಕೆ ಹೋಗೊಲ್ಲ. ನನಗೂ ಅವರೊಟ್ಟಿಗೆ ಜಾಸ್ತಿ ಇರೋಕಾಗಲ್ಲ, ತಿಂಗಳಿಗೆ ಒಮ್ಮೆ ಹೋದರೆ

ಹೆಚ್ಚು. ನಮಗೆ ನಮ್ಮ ಕೆಲಸ ಇರೋಲ್ವಾ? You understand. ಅದಕ್ಕೇ, ಅವರೇನಾದರೂ ಮಾಡ್ತಾಇದ್ದರೆ ಒಳ್ಳೆಯದು, ಇಲ್ಲದಿದ್ದರೆ, ಅವರ ಬೆರಳಿನ ತಾಕತ್ತು ಹೋಗಿ ಕ್ರಿಪಲ್ ಆಗಬಹುದು ಅಂತ ಡಾಕ್ಟರ್ ಹೇಳಿದ್ದಾರೆ. ಅವರಿಗೆ ಓದೋದು ಬರೆಯೋದು ಅಂದರೆ ಇಷ್ಟವಿಲ್ಲ. ದಿನ ಇಡೀ ಸೋಪ್ ಅಪೇರ, ಕಾಮಿಡೀ ಶೋಗಳನ್ನೇ ಟೀ.ವೀಯಲ್ಲಿ ಎಷ್ಟೂ ಅಂತ ನೋಡ್ತಾರೆ? ನೋಡ್ತಾ ನೋಡ್ತಾ ನಿದ್ದೆನೇ ಮಾಡಿಬಿಡ್ತಾರೆ! ಈ ರೊಟೀನ್ ಇದ್ದರೆ, ಅವರಿಗೆ ಏನಾದರೂ ಮಾಡೋಕಿರುತ್ತೆ ನೋಡಿ, getting old is not fun.' ಅಂದಳು.

ಪೌರಾಣಿಕ ಗ್ರೀಕ್ ಸಾಹಿತ್ಯದಲ್ಲಿ ಸಿಸಿಫಸ್ (Sisyphus) ಎಂಬ ಶಾಪಗ್ರಸ್ಥ ಮಹಾರಾಜನ ಗತಿ ನೆನಪಿಗೆ ಬಂತು. ಅವನ ಶಾಪ, ನಿರಂತರ ಚಾಕರಿ. ಬೆಟ್ಟದ ಬುಡದಿಂದ ಒಂದು ದೊಡ್ಡ ಬಂಡೆಯನ್ನು ಎತ್ತಿ, ಅದನ್ನು ಬೆಟ್ಟದ ತುದಿಗೆ ಕೊಂಡೊಯ್ಯಬೇಕು. ಆದರೆ, ಬಂಡೆಯನ್ನು ಬೆಟ್ಟದ ತುದಿಯಲ್ಲಿ ಇಟ್ಟ ಕೂಡಲೇ ಆ ಬಂಡೆ ಉರುಳಿ ಬೆಟ್ಟದ ಬುಡಕ್ಕೆ ಬಂದು ಬೀಳುತ್ತದೆ. ಸಿಸಿಫಸ್, ಮತ್ತೆ ಪುನಃ ಅದೇ ಬಂಡೆಯನ್ನು ಹೊತ್ತು, ಬೆಟ್ಟ ಹತ್ತಿ, ಬಂಡೆಯನ್ನು ತುದಿಯಲ್ಲಿಟ್ಟು, ಅದು ಕೆಳಗೆ ಉರುಳುವುದನ್ನು ನೋಡಬೇಕು. ಈ ನಿರಂತರ ಅರ್ಥರಹಿತ ಶಾಪ, ಅವನ ಕರ್ಮ, ಅವನ ಹಣೇಬರಹ. ಆಧುನಿಕ ಮಾನವನ ಅರ್ಥರಹಿತ ಬದುಕಿನ ದಿನನಿತ್ಯದ ದುಡಿಮೆಗೆ ಈ ಕತೆ ಪ್ರತಿಮೆ ಅಂತ, ಆಲ್‌ಬರ್ಟ್ ಕಾಮೂ ಬರೆದ Myth of Sisyphus ಎಂಬ ರೋಚಕ ಪ್ರಬಂಧದ ನೆನಪು ಬಂತು. ಅಷ್ಟು ಮಕ್ಕಳು ಮರಿಮಕ್ಕಳು ಇದ್ದರೂ, ನರ್ಸಿಂಗ್ ಹೋಮ್‌ನಲ್ಲಿ ಸ್ಟ್ಯಾಂಪ್‌ಗಳನ್ನು ಸಾರ್ಟ್ ಮಾಡುವ ನಿರರ್ಥಕ ಕೆಲಸ, ಪಾಪ ಅವರನ್ನು ಅಂಗಹೀನತೆಯಿಂದಾದರೂ ಕಾಪಾಡುತ್ತದೆ, ಆದರೆ, ಅದು ಕುಟುಂಬದವರ ಪ್ರೀತಿಗೆ ಎಲ್ಲಿ ಸಾಟಿ– ಅಂತ ಯೋಚಿಸಿದೆ.

ಅಂಗಡಿಯ ಮಾಲಿಕ, ಸ್ಟ್ಯಾಂಪ್ ತುಂಬಿಸಿದ್ದ ದೊಡ್ಡ ಗೋಣಿಚೀಲದಂಥಾ disposable bag ನ್ನ ಅವಳಿಗೆ ಕೊಟ್ಟ. 'ಇದಕ್ಕೆ ಹದಿನೆಂಟು ಡಾಲರ್, ನಿನಗಾಗಿ ಹದಿನೈದಕ್ಕೆ ಕೊಡುತ್ತೇನೆ,' ಅಂದ.

'ನನ್ನ ಬಡ್ಜೆಟ್ ಬರೇ ಹತ್ತು ಡಾಲರ್. ಇರಲಿ, ಹನ್ನೆರಡು ಕೊಡ್ತೀನಿ,' ಅಂತ ಚೌಕಾಸಿ ಮಾಡಿ, ದುಡ್ಡು ತೆತ್ತು, ಥ್ಯಾಂಕ್ಯೂ ಅಂತ ಅವನಿಗೆ ಮತ್ತು ನನಗೆ ವಂದಿಸಿ ಹೊರಟಳು ಆ ಹೆಂಗಸು. ಅವಳನ್ನೂ, 'ಬಾಯ್' ಅಂತ ಕೈಬೀಸಿ ಕುಣಿಯುತ್ತಾ ಓಡಿದ ಅವಳ ಮಗಳನ್ನೂ, ಅವರು ಹೋದ ದಾರಿಯನ್ನೂ ನೋಡುತ್ತಾ ಮೂಕನಾಗಿ ನಿಂತೆ.

ಆಗ ಮಾಲಿಕ ಹೇಳಿದ, 'ಪ್ರತೀ ವಾರ ಎಷ್ಟೋ ಜನ ಇಂತಹವರು ಬರ್ತಾ ಇರ್ತಾರೆ. ಅದಕ್ಕೇ, ಹಳೇ ಪಳೇ ಅಂಚೆ ಚೀಟಿಗಳನ್ನ ಕೂಡಿಸಿಡ್ತೀವಿ.'

ಹಾಗೇ, 'ನೀನು ತಂದ ಸ್ಟ್ಯಾಂಪುಗಳ ಬೆಲೆ ಬಹಳ ಕಡಿಮೆ. ನನಗೆ ಬೇಡ. ಆದರೆ, ನೀನು ಇಷ್ಟು ದೂರ ಬಂದಿದ್ದೀ, ಮೂರು ಡಾಲರ್ ಕೊಡ್ತೀನಿ' ಅಂದ.

ಬೇರು ಸೂರು

ಆಲ್ಬ್ರಟ್ ಕಾಮೂ ಪ್ರಬಂಧವನ್ನ ಮತ್ತೆ ನೆನಪಿಸಿಕೊಳ್ಳುತ್ತಾ, ಮೂರು ಡಾಲರ್‌ಗೆ ನನ್ನ ಕಡತಗಳನ್ನು ಮಾರಿದೆ. ಇನ್ಯಾವುದಾದರೂ ಅಮೆರಿಕನ್ ಅಜ್ಜಿಅಜ್ಜಂದಿರಿಗೆ Sisyphusನಂತೆ ದಿನ ಕಳೆಯಲು ಸಹಾಯವಾದೀತು ಅಂದುಕೊಂಡೆ. ನಾನಂತೂ ಹಾಗಾಗದಿದ್ದರೆ ಸಾಕು ಅಂದುಕೊಳ್ಳುತ್ತಾ ಮನೆಗೆ ಹೊರಟೆ.

ನಿಜ, getting old is not fun, especially in America.

ಈ ಮೇಲಿನ ನನ್ನ ಅನುಭವಗಳನ್ನು ನಿಮ್ಮೊಡನೆ ಹಂಚಿಕೊಳ್ಳುವಾಗ ನಾನು ಯಾರನ್ನೂ ಟೀಕಿಸುತ್ತಿಲ್ಲ. ನಲವತ್ತು ವರ್ಷಕ್ಕೂ ಹಿಂದೆ ಅಮೆರಿಕಕ್ಕೆ ವಲಸೆ ಬಂದ ನಾನೂ ದ್ವಂದ್ವ ದಿಗ್ಬಂಧಿಯೇ. ವಿರುದ್ಧವಾದ ಅನುಭವಗಳನ್ನು ಜೀರ್ಣಿಸಿಕೊಂಡು ಸಮತೋಲನ ಬದುಕನ್ನು ನಡೆಸುವ ಜೀವನ ಕಲೆಯನ್ನು ನಾನು ಹೇಗೆ ಪಕ್ವ ಮಾಡಿಕೊಳ್ಳಲಿ ಎಂಬುದು ನನ್ನ ಚಿರಂತನ, ವೈಯಕ್ತಿಕ ಹಂಬಲ, ಅಷ್ಟೇ.



ಅಮೆರಿಕದಲ್ಲಿ ರಂಗಭೂಮಿ ಅನುಭವಗಳ ಹಲವು ನೆನಪುಗಳು

– ಡಾ॥ ತಾವರೆಕೆರೆ ಶ್ರೀಕಂಠಯ್ಯ

ಹಿನ್ನೆಲೆ

ಸುಮಾರು ನಲವತ್ತು ವರುಷ ಹಿಂದಿನ ಮಾತು. ದಕ್ಷಿಣ ಕ್ಯಾಲಿಫೋರ್ನಿಯಾ ಕನ್ನಡ ಕೂಟ ಅದೇ ತಾನೆ ಪ್ರಾರಂಭವಾಗಿತ್ತು. ಉದ್ಯಾನವನದಲ್ಲಿ ಒಂದುದಿನ 'ಪಿಕ್‌ನಿಕ್' ಮಾಡಿ ಆ ಕಡೆಯ ಕನ್ನಡಿಗರನ್ನೆಲ್ಲಾ ಒಟ್ಟುಗೂಡಿಸುವ ಪ್ರಯತ್ನ ನಡೆಸಿತ್ತು. ಅದಾದ ಮಾರನೆಯ ವರುಷವೇ ನನಗೆ ಅಧ್ಯಕ್ಷನಾಗಲು ಒತ್ತಾಯ ಬಂತು. ನಾನು ಅಧ್ಯಕ್ಷನಾಗಿ ಬಂದಮೇಲೆ ಮಾಡಿದ ಮೊದಲ ಕೆಲಸ– ಉತ್ಸಾಹೀ ಹಾಗೂ ಯೋಗ್ಯ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಿದ್ದು. ಆ ವರ್ಷ (1976) ನಾವು ಏರ್ಪಡಿಸಿದ ನಾಟಕ ಹಾಗೂ ಇತರ ಕಾರ್ಯಕ್ರಮಗಳ ಮೂಲಕ ಕನ್ನಡ ಕೂಟದ ಹಿರಿಮೆಯನ್ನು ಮೇಲಕ್ಕೆ ಏರಿಸಿದ ವಿಷಯ ಇಂದೂ ಬಹಳ ಮಂದಿ ಜ್ಞಾಪಕದಲ್ಲಿ ಇಟ್ಟಿದ್ದಾರೆ. ಅದೇ ವರುಷ ಕನ್ನಡ ಕೂಟಕ್ಕೆ ಹೆಚ್ಚಿನ ಸದಸ್ಯರು ಸೇರಿ, ಕಾರ್ಯಕ್ರಮಗಳಿಂದ ಸಂಸ್ಥೆಯ ಆದಾಯ ಏರಿ, ಸಂಘಕ್ಕೆ ಅತ್ಯುತ್ತಮ ಪಾಯ ಹಾಕಲಾಯಿತು. ಅಲ್ಲಿಂದ ಪ್ರಾರಂಭವಾಯಿತು ನನ್ನ 'ರಂಗಭೂಮಿ'ಯ ಅನುಭವಗಳು. ಜನರಲ್ಲಿ ಉತ್ಸಾಹ ತುಂಬಿ, ಕಲೆಯಲ್ಲಿ ಆಸಕ್ತಿ ಇದ್ದವರಿಗೆ ಅವಕಾಶ ಕೊಟ್ಟು ಎಲ್ಲರನ್ನೂ ಒಂದುಗೂಡಿಸುವ ದಾರಿಯನ್ನು ಕಲಿತೆ.

ಪಶ್ಚಿಮದಿಂದ ಪೂರ್ವಕ್ಕೆ

ದಕ್ಷಿಣ ಕ್ಯಾಲಿಫೋರ್ನಿಯಾದಿಂದ 1977ರಲ್ಲಿ 'ವರ್ಲ್ಡ್ ಬ್ಯಾಂಕ್'ನಲ್ಲಿ ಕೆಲಸ ತೆಗೆದುಕೊಂಡು, ವಾಷಿಂಗ್‌ಟನ್ನಿನಲ್ಲಿ ನೆಲೆಸಿದೆ. ಇಲ್ಲಿ ನಾನು ಮೊದಲು ಪಾತ್ರ ವಹಿಸಿದ್ದು ಡಾ॥ ಮೈ.ಶ್ರೀ. ನಟರಾಜರ 'ದುಡಿದು ಮಡಿದವರು' ಕನ್ನಡ ನಾಟಕದಲ್ಲಿ (1980). ಆಮೇಲೆ ಹಲವಾರು ನಾಟಕಗಳಲ್ಲಿ ನಟಿಸಿ, ಮತ್ತು ಹಲವಾರು ನಾಟಕಗಳನ್ನು ನಿರ್ದೇಶನ ಮಾಡಿದ್ದೇನೆ. ಇದರ ಜೊತೆಗೆ, ನಾನು ಇತರ ಸಂಸ್ಥೆಗಳ (ಗುಜರಾತೀ, ಮರಾಠಿ, ಬೆಂಗಾಲಿ, ಇತ್ಯಾದಿ) ನಾಟಕಗಳನ್ನು ವೀಕ್ಷಿಸಿ, ನಿರ್ದೇಶಕರ ಹಾಗೂ ಕಲಾವಿದರ ಜೊತೆ ರಂಗಭೂಮಿಯ ಬಗ್ಗೆ ಚರ್ಚಿಸುವ ಅವಕಾಶ ಒದಗಿತು. ಈ ಚರ್ಚೆಗಳಲ್ಲಿ, ಭಾರತದ ರಂಗ ಸಂಸ್ಕೃತಿಯನ್ನು ಎಲ್ಲ ದೇಶೀಯರ ಹಾಗೂ ವಿದೇಶೀಯರ ಜೊತೆ ಹೇಗೆ ಹಂಚಿಕೊಳ್ಳುವುದು ಎಂಬುದು ಮುಖ್ಯ ಅಂಶವಾಗಿತ್ತು.

ಬೇರು ಸೂರು

'ನಾಟ್ಯಭಾರತಿ'ಯ ಉಗಮ

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ನಾನು, ಹಲವು ರಂಗಭೂಮಿಯ ಗೆಳೆಯರ ಜೊತೆ ಸೇರಿ, 'ನಾಟ್ಯ ಭಾರತಿ' ಎಂಬ ಸಂಸ್ಥೆಯನ್ನು 1985ರ ಸಮಯದಲ್ಲಿ ಪ್ರಾರಂಭಿಸಿದೆ. ಈ ಸಂಸ್ಥೆ ಕಳೆದ 25 ವರ್ಷಗಳ ಅವಧಿಯಲ್ಲಿ 200ಕ್ಕೂ ಹೆಚ್ಚು ಸದಸ್ಯರನ್ನು ಒಳಗೊಂಡಿದೆ. ವಾಷಿಂಗ್‌ಟನ್ ಹಾಗೂ ಇತರ ನಗರಗಲ್ಲಿ ಸುಮಾರು 45 ನಾಟಕಗಳ 120ಕ್ಕೂ ಹೆಚ್ಚು ಪ್ರದರ್ಶನಗಳನ್ನು ಈ ಸಂಸ್ಥೆ ನೀಡಿದೆ. ಗಿರೀಶ್ ಕಾರ್ನಾಡರ ಹಿಂದಿ ಭಾಷೆಯ 'ಹಯವದನ' ಹಾಗೂ ಇಂಗ್ಲೀಷ್ ಭಾಷೆಯ 'ಏಕಲವ್ಯ'ದ ಪ್ರದರ್ಶನ ಈ ಸಂಘದ ಹೆಮ್ಮೆಯ ಕೊಡುಗೆಗಳು. ಇವೆರಡು ನಾಟಕಗಳಲ್ಲೂ ನನ್ನ ಪಾತ್ರ ಬಹಳ ಮುಖ್ಯವಾಗಿತ್ತು. 'ಏಕಲವ್ಯ' ನಾಟಕದ ನಿರ್ದೇಶನವನ್ನೂ ಕೂಡ ಮಾಡಿದೆ. 'ಏಕಲವ್ಯ'ದ ಪ್ರದರ್ಶನಗಳು ತುಂಬಿದ ರಂಗಮಂದಿರಗಳಲ್ಲಿ ಪ್ರದರ್ಶಿತವಾದವು.

ಈ 'ನಾಟ್ಯ ಭಾರತಿ' ಸಂಸ್ಥೆಯನ್ನು ಹುಟ್ಟು ಹಾಕಿದ ನಂತರ, ಅದರ ಅಧ್ಯಕ್ಷನಾಗಿ ಆರು ವರುಷ ಕೆಲಸ ಮಾಡಿದೆ. ನಂತರವೂ, ಅದರ 'ಬೋರ್ಡ್' ಸದಸ್ಯನಾಗಿ ಮುಂದುವರೆಸಿ, ರಂಗಭೂಮಿಗೆ ಸೇವೆ ಸಲ್ಲಿಸುತ್ತಿದ್ದೇನೆ. ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಳ್ಳೆಯ ನಾಟಕಗಳನ್ನು ಚುನಾಯಿಸಿ, ಸರಿಯಾದ ಕಲಾವಿದರನ್ನು ಆರಿಸಿ, ಉತ್ತಮ ಸಜ್ಜಿಕೆಗಳಿಂದ, ನಾಟಕಗಳನ್ನು ರಂಗದಮೇಲೆ ತರುವ ಜವಾಬ್ದಾರಿ ನನ್ನ ಮೇಲಿದೆ. ಅಮೆರಿಕದಲ್ಲಿ, ನಾಟ್ಯಭಾರತಿಯಂತಹ ಭಾರತೀಯ ರಂಗಭೂಮಿ ಇದೊಂದೇ ಎಂದು ಬಹಳ ಜನ ಕೊಂಡಾಡುತ್ತಿದ್ದಾರೆ. ಈ ಸಂಸ್ಥೆಯನ್ನು ಕಳೆದ 25 ವರ್ಷಗಳಿಂದ ಈಗಿನ ಸ್ಥಿತಿಗೆ ತರುವ ಅವಕಾಶ ಸಿಕ್ಕಿದ್ದು ನನಗೆ ಬಹಳ ಹೆಮ್ಮೆ.

ಮತ್ತೊಂದು ಸೋದರಿ ಸಂಸ್ಥೆ

ನಾಟ್ಯಭಾರತಿಯ ಜೊತೆಗೆ ಸೋದರಿ-ಸಂಸ್ಥೆಯಾಗಿ ಹುಟ್ಟಿದ ಇನ್ನೊಂದು ಸಂಸ್ಥೆ 'ಸಹಾರ.' ಇದು 1992ರಲ್ಲಿ ಜನ್ಮ ತಾಳಿತು. ಇಂಗ್ಲೀಷ್ ಭಾಷೆಯಲ್ಲಿ ನಾಟಕಗಳ ಪ್ರದರ್ಶನ ನೀಡಿ, ಮುಖ್ಯವಾಗಿ ಅಮೆರಿಕನ್ನರಿಗೆ (ಮತ್ತು ಇತರ ಪಾಶ್ಚಾತ್ಯರಿಗೆ) ನಮ್ಮ ಸಂಸ್ಕೃತಿಯ ಪರಿಚಯ ಮಾಡಿಕೊಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶ. 1992ರಿಂದ ಆ ಸಂಸ್ಥೆಯ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಈ ಸಂಸ್ಥೆಯ ಮುಖ್ಯ ಅಂಶವೇನೆಂದರೆ, ಟಿಕೀಟು ಮಾರಾಟ ಮಾಡಿ ಬಂದ ಹಣವನ್ನು ಭಾರತದಲ್ಲಿ ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ-ಸಂಸ್ಥೆಗಳಿಗೆ ವಿನಿಯೊಗ ಮಾಡುವುದು. ಈ ಸಂಸ್ಥೆಯ ನಾಟಕಗಳ ಪ್ರದರ್ಶನದಿಂದ ಬಂದ ಉತ್ಪನ್ನವನ್ನು ನಾವು ಧಾರವಾಡದ ಭಾರತೀಯ ಶಿಕ್ಷಣ ಪ್ರಸಾರ ಸಮಿತಿ, ಬೆಂಗಳೂರಿನ 'ಸೇವಾ ಇನ್ ಆ್ಯಕ್ಷನ್', ಮೈಸೂರಿನ 'ಸ್ವಸಹಾಯ ಸಮುಚ್ಚಯ ಶಾಲೆ' (ಬೌದ್ಧಿಕವಾಗಿ ಹಿಂದುಳಿದ ಮಕ್ಕಳ ಮತ್ತು ಅಂಗವಿಕಲರ ಶಾಲೆ) ಇತ್ಯಾದಿ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಈ ಸಂಸ್ಥೆಗಳು 'ಸಹಾರ'ದ ಸಹಾಯದಿಂದ

ಬಲಗೊಂಡಿವೆ. ಇತ್ತೀಚೆಗೆ ನಾನು ನಿರ್ದೇಶಿಸಿದ ಬೆಂಗಳೂರಿನ ಮಹೇಶ್ ದಾತಾನಿ ಅವರ 'Where There is a Will' ನಾಟಕದ ಪ್ರದರ್ಶನದಿಂದ ಸುಮರು 20,000 ಡಾಲರ್‌ಗಳಷ್ಟು ಸಹಾಯಧನದ ಸಂಗ್ರಹಣೆಯಾಯಿತು.

ನಾಟ್ಯ ಭಾರತಿ ಹಾಗೂ ಸಹಾರ ಸಂಸ್ಥೆಗಳ ಕಾರ್ಯಕ್ರಮಗಳ ವಿವರಗಳು ಪತ್ರಿಕೆಗಳಲ್ಲಿ ಹಾಗೂ ದೂರದರ್ಶನದಲ್ಲಿ ಪ್ರಸಾರವಾಯಿತು. ಆ ಪ್ರಚಾರದ ಕಾರಣವಾಗಿ ಹಲವಾರು ರಂಗಭೂಮಿಗೆ ಸಂಬಂಧಪಟ್ಟ- ನಟನೆ, ಬೆಳಕು, ಶಬ್ದ, ಪ್ರಸಾಧನ, ವಸ್ತ್ರಾಲಂಕಾರ, ರಂಗಸಜ್ಜಿಕೆ ಮೊದಲಾದ -ವಿಷಯಗಳಲ್ಲಿ 'ಕಮ್ಮಟ'ಗಳ ಏರ್ಪಾಟು ಮಾಡುತ್ತಿದ್ದೇವೆ. ಭಾರತದಿಂದ ಬಂದ ಉತ್ತಮ ಹಾಗೂ ಜನಪ್ರಿಯ ಕಲಾವಿದರು ಈ ಕಮ್ಮಟಗಳನ್ನು ನಡೆಸಿಕೊಡುತ್ತಾರೆ. ಉದಾಹರಣೆಗೆ, ನಾಟ್ಯಭಾರತಿಯ 25ನೇ ವರ್ಷದ (ರಜತ) ಮಹೋತ್ಸವಕ್ಕೆ ಆಗಮಿಸಿದ ಕಲಾವಿದ ಶ್ರೀ ಅಮೋಲ್ ಪಾಲೇಕರ್, ಕಲಾವಿದೆ ಶ್ರೀಮತಿ ಸುನೀಲಾ ಪ್ರಧಾನ್, ಬೆಂಗಳೂರಿಂದ ಆಗಮಿಸಿದ ಶ್ರೀಮತಿ ಯಮುನಾ ಮೂರ್ತಿ ಮತ್ತು ಇತರರು. ಈ ಎರಡು ಸಂಸ್ಥೆಗಳನ್ನೂ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ತರಲು ಪ್ರಯತ್ನ ಮಾಡುತ್ತೇನೆ.

ಕನ್ನಡ ನಾಟಕಗಳು

ನಾನು ಹಲವಾರು ಕನ್ನಡ ನಾಟಕಗಳನ್ನು ನಿರ್ದೇಶಿಸಿದ್ದೇನೆ. ಆ ನಿರ್ದೇಶನದಿಂದ ನಾನು ಕಲಿತ ಪಾಠಗಳು ಅಪಾರ. ನಟರನ್ನು ಬ್ಲಾಕ್ ಮಾಡುವ ಜವಾಬ್ದಾರಿ ನಿರ್ದೇಶಕನಿಗೆ ಸೇರಿದ್ದು. ನಟ ನಟಿಯರು ರಂಗದ ಮೇಲೆ ಎಲ್ಲಿರಬೇಕು, ಹೇಗೆ ನಿಲ್ಲಬೇಕು, ಮತ್ತು ಇತರ ನಟರೊಂದಿಗೆ ಹೇಗೆ ಇಂಟರ್‌ಆ್ಯಕ್ಟ್ ಮಾಡಬೇಕು – ಇವೆಲ್ಲ ಮುಖ್ಯವಾದ ವಿವರಗಳು, ನಾಟಕದ ಯಶಸ್ಸಿನ ರಹಸ್ಯಗಳು. ಅವರ ಸಂಭಾಷಣೆಗಳಿಗೆ ಏರಿಳಿತ, ರಂಗಮಂದಿರದ ಉದ್ದಗಲಕ್ಕೂ ಕೇಳುವಂತೆ ಮಾತಾಡುವ ಕಲೆ, ಬೆಳಕು-ಕತ್ತಲೆಯ ಯೋಜನೆ, ರಂಗಸಜ್ಜಿಕೆ, ಇತ್ಯಾದಿ, ಒಂದೇ ಎರಡೇ! ಎಲ್ಲ ನಾಟಕಗಳನ್ನೂ ವೃತ್ತಿಪರ ರಂಗಭೂಮಿಯ ಮಟ್ಟಕ್ಕೆ ತಯಾರು ಮಾಡುವುದೆ ನನ್ನ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ನನ್ನ ರಂಗ ಸಹಾಯಕರು ಇತ್ತ ಸಹಕಾರ ಮತ್ತು ಸಹಾಯ ಬಹಳವಾಗಿತ್ತು.

ನಾನು ನಿರ್ದೇಶಿಸಿದ ಕನ್ನಡ ನಾಟಕಗಳಲ್ಲಿ, ನಾಲ್ಕು ನಾಟಕಗಳು ನನ್ನ ಮೆಚ್ಚಿನವು: ಡಾ॥ ಮೈ.ಶ್ರೀ. ನಟರಾಜ್ ಬಾಷಾಂತರಿಸಿದ 'ಮಾಯಾವಿ ಸರೋವರ,' ಗಿರೀಶ್ ಕಾರ್ನಾಡರ 'ಹಯವದನ,' ಕುವೆಂಪು ಅವರ 'ಬೆರಳ್ಗೆ ಕೊರಳ್,' ಹಾಗೂ ಕೃಷ್ಣಮೂರ್ತಿ ಪುರಾಣಿಕರ 'ರಾಧೇಯ.'

ಡಾ॥ ಮೈ.ಶ್ರೀ. ನಟರಾಜ್ ಅವರು ಹಿಂದಿ ಭಾಷೆಯಿಂದ ಅನುವಾದಿಸಿದ ನಾಟಕ 'ಮಾಯಾವಿ ಸರೋವರ' (ಮೂಲ: ದಿವಂಗತ ಶಂಕರ್ ಶೇಷ್), ಗಂಡು-ಹೆಣ್ಣಿನ

ದೃಷ್ಟಿಕೋನಗಳಲ್ಲಿರುವ ವೈರುಧ್ಯ ಮತ್ತು ವ್ಯತ್ಯಾಸಗಳ ಮೇಲೆ ಬೆಳಕು ಚೆಲ್ಲುವ ಒಂದು ವಿಚಾರಾತ್ಮಕ ನಾಟಕ. ನಿತ್ಯದ ಬದುಕಿನಲ್ಲಿ ಎದುರಾಗುವ ಸನ್ನಿವೇಶಗಳಿಗೆ ಗಂಡು ಹೆಣ್ಣು ಇವರುಗಳ ವಿಭಿನ್ನ ದೃಷ್ಟಿಕೋನಗಳೆ ಈ ನಾಟಕಕಾರನ ಪ್ರಸ್ತಾವನೆ. ಇದು ಕಾಲ್ಪನಿಕ ಹಾಗೂ ತಿಳಿ ಹಾಸ್ಯ ಭರಿತ ಜಾನಪದ ಶೈಲಿಯ ನಾಟಕ. ಸೂತ್ರಧಾರ ಮತ್ತು ಸೂತ್ರಧಾರಿಣಿ ಇಬ್ಬರೂ ನಾಟಕದ ಸನ್ನಿವೇಶಗಳನ್ನು ಪರಿಚಯ ಮಾಡಿಕೊಟ್ಟು, ಪ್ರೇಕ್ಷಕರೊಡನೆ ಬೆರೆತು ನಾಟಕದ ಸೊಬಗನ್ನು ಹೆಚ್ಚಿಸಿ, ರಾಜನ ಪರಿಸ್ಥಿತಿಯ ಸಂದಿಗ್ಧ ಸನ್ನಿವೇಶಗಳನ್ನು ತೋರಿಸುತ್ತಾರೆ. ಈ ನಾಟಕವನ್ನು ವಾಷಿಂಗ್‌ಟನ್ ಪ್ರದೇಶದ 'ಕಾವೇರಿ' ಸದಸ್ಯರಿಗೆ ತೋರಿಸಿದ್ದಲ್ಲದೆ, ನ್ಯೂ ಜೆರ್ಸಿ-ಪೆನ್ಸಿಲ್‌ವೇನಿಯಾ ಮತ್ತು ಡೆಲವೇರ್ ಪ್ರದೇಶಗಳ ಕನ್ನಡ ಸಂಸ್ಥೆಯಾದ 'ತ್ರಿವೇಣಿ'ಯ ಆಶ್ರಯದಲ್ಲಿ ಮತ್ತು ಶಿಕಾಗೋ ನಗರದಲ್ಲಿ ನಡೆದ 'ಅಕ್ಕ' ಸಮ್ಮೇಳನದಲ್ಲಿಯೂ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಲಾಯಿತು.

ನನಗೆ ತೃಪ್ತಿಕೊಟ್ಟ ಇನ್ನೊಂದು ನಾಟಕ, ಗಿರೀಶ್ ಕಾರ್ನಾಡರ 'ಹಯವದನ.' ಹೊರಗಿನ ದೇಹಬಲ ಹೆಚ್ಚೋ ಅಥವಾ ಒಳಗಿನ ಬುದ್ಧಿಬಲ ಹೆಚ್ಚೋ ಎಂಬ ದ್ವಂದ್ವ ಈ ನಾಟಕದಲ್ಲಿ ಅರ್ಥಗರ್ಭಿತವಾಗಿದೆ. ಕಪಿಲ ಹಾಗೂ ದೇವದತ್ತ ಎರಡು ಪಾತ್ರಗಳು. ಅವರು ದೇಹದಿಂದ ಮನಸ್ಸಿಗೆ ಮತ್ತು ಮನಸ್ಸಿನಿಂದ ದೇಹಕ್ಕೆ ಬದಲಾವಣೆಯಾಗುವ ಸನ್ನಿವೇಶಗಳು ನಿಜವಾಗಿಯೂ ಸವಾಲುಗಳಂತಿದ್ದವು. ಈ ನಾಟಕ 'ಕಾವೇರಿ'ಯ ಸದಸ್ಯರಿಗೆ ಮೆಚ್ಚುಗೆಯಾದ ಮೇಲೆ, ನಾಟಕವನ್ನು ದಕ್ಷಿಣ ಕ್ಯಾಲಿಫೋರ್ನಿಯ, ಹ್ಯೂಸ್ಟನ್, ಮತ್ತು ಶಿಕಾಗೊ ನಗರಗಳಲ್ಲೂ ಪ್ರದರ್ಶನ ಮಾಡಿದೆವು.

ಮೂರನೆಯ ನಾಟಕ ಕುವೆಂಪು ಅವರ 'ಬೆರಳ್‌ಗೆ ಕೊರಳ್.' ಈ ನಾಟಕ ನಿರ್ದೇಶನ ಮಾಡಿದ್ದು ನನಗೆ ನಿಜವಾಗಿಯೂ ಹೆಮ್ಮೆಯ ವಿಷಯ. ಈ ನಾಟಕ ಇರುವುದು ಹಳೆಗನ್ನಡದಲ್ಲಿ. ಮಹಾಭಾರತದ ಏಕಲವ್ಯನ ಕಥೆಯನ್ನು ಆಧರಿಸಿ ಬರೆದಿರುವ ಈ ನಾಟಕ ಕುವೆಂಪು ಅವರಿಗೆ ಮಾತ್ರ ಸಾಧ್ಯ! ಏಕಲವ್ಯ, ಏಕಲವ್ಯನ ತಾಯಿ, ದ್ರೋಣ, ದ್ರೋಣನ ಮಗ ಅಶ್ವತ್ಥಾಮ, ಈ ನಾಲ್ವರಲ್ಲಿ ಕುವೆಂಪು ಅವರು ಹಳೆಗನ್ನಡದಲ್ಲಿ ಸೊಗಸಾಗಿ ಪಾತ್ರಗಳನ್ನು ಮತ್ತು ಸಂಭಾಷಣೆಗಳನ್ನು ಹಾಗೂ ಸನ್ನಿವೇಶಗಳನ್ನು ಸೃಷ್ಟಿಸಿದ್ದಾರೆ. ನಾಲ್ಕು ಕಲಾವಿದರನ್ನು ಈ ನಾಟಕಕ್ಕೆ ಆರಿಸಿಕೊಳ್ಳುವುದು ಮೊದಲನೆಯ ಸವಾಲಾಗಿತ್ತು. ನಂತರ, ಅವರಿಗೆ ಹಳೆಗನ್ನಡದ ಸಂಭಾಷಣೆಗಳನ್ನು ತಿಳಿಸಿ, ಅದರ ಅರ್ಥ ಹೇಳುವುದು ಎರಡನೆಯ ಸವಾಲು. ಪ್ರತಿಯೊಂದು ಸಂಭಾಷಣೆಯಲ್ಲೂ ಕಲಾವಿದರು, 'ಇದರ ಅರ್ಥ ಏನು?' ಎಂದು ಕೇಳುತ್ತಿದ್ದರು. ಅವರಿಗೆ ಅದನ್ನು ತಿಳಿಸಿ, ಅವರನ್ನು ರಂಗದ ಮೇಲೆ 'ಬ್ಲಾಕ್' ಮಾಡಿ ಅವರಿಂದ ಅಭಿನಯ ಮಾಡಿಸುವುದರಲ್ಲಿ ಬಹಳ ಶ್ರಮಪಟ್ಟೆ. ಇದರ ಜೊತೆಗೆ, ವಿಶೇಷವಾಗಿ ಬೆಳಕು ಮತ್ತು ಹಿನ್ನೆಲೆ ಸಂಗೀತ ಅಳವಡಿಸುವುದು ಮತ್ತೊಂದು ಸವಾಲಾಗಿತ್ತು. ಈ ನಾಟಕ ಹಲವಾರು ನಗರಗಳಲ್ಲಿ

ಪ್ರದರ್ಶನಗೊಂಡಿದೆ. ವಾಷಿಂಗ್‌ಟನ್ 'ಕಾವೇರಿ'ಗೆ ಸಮರ್ಪಣೆ ಮಾಡಿದ ನಂತರ, ಬಾಲ್ಟಿಮೋರ್ 'ಅಕ್ಕ' ಸಮಾರಂಭದಲ್ಲಿ ಈ ನಾಟಕ ಅತ್ಯಂತ ಯಶಸ್ವಿಯಾಯಿತು. ಭಾರತದಿಂದ ಬಂದಿದ್ದ ಅಕೆಡಮಿಯ ಅಧ್ಯಕ್ಷ ಶ್ರೀ ಶ್ರೀನಿವಾಸ ಕಪ್ಪಣ್ಣನವರು ಈ ನಾಟಕವನ್ನು ಬಹಳ ಮೆಚ್ಚಿಕೊಂಡರು. ಭಾರತಕ್ಕೆ ಹೋಗಿ ಪ್ರದರ್ಶನ ನೀಡುವ ಅವಕಾಶವೂ ನಮಗಿತ್ತು. ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ. ಈ ನಾಟಕವನ್ನು South Asian Theatre Festival, New Jerseyಯಲ್ಲಿ ನಡೆಸಿದ ನಾಟಕೋತ್ಸವದಲ್ಲಿ ಆಮಂತ್ರಿತರಾಗಿ ಅಭಿನಯಿಸಿದೆವು. ಹಲವಾರು ನಾಟಕಗಳ ಜೊತೆ, ಬೆರಳ್‌ಗೆ ಕೊರಳ್ ಎಲ್ಲರ ಮೆಚ್ಚುಗೆ ಪಡೆದು, ಭಾರತದಿಂದ ಬಂದಿದ್ದ ಹೆಸರಾಂತ ಕಲಾವಿದ ಶ್ರೀ ವಿಜಯ್ ತಂಡುಲ್ಕರ್ ಅವರು ನಮಗೆ ಬಿನ್ನವತ್ತಳೆ ನೀಡಿದರು. ಈ ನಾಟಕ ಶಿಕಾಗೊ ನಗರದಲ್ಲೂ ಬಹಳವಾಗಿ ಪ್ರಶಂಸೆ ಪಡೆಯಿತು. ಅದೂ ಅಲ್ಲದೆ, ಈ ನಾಟಕ ಮೊದಲ ಬಾರಿ ರಂಗದ ಮೇಲೆ ಬಂದಿದ್ದು ಫ಼ಿಲಡೆಲ್ಫಿಯಾದಲ್ಲಿ, ಕನ್ನಡ ಸಾಹಿತ್ಯ ರಂಗದ ಮೊದಲನೆಯ ಸಮ್ಮೇಳನದಲ್ಲಿ (2004)! ಸಾಹಿತಿಗಳ ಗುಂಪಿನಲ್ಲಿ ಈ ನಾಟಕ ಪ್ರದರ್ಶಿಸುವ ಸುವರ್ಣ ಅವಕಾಶ ಸಿಕ್ಕಿದ್ದು ನಮ್ಮ ಅದೃಷ್ಟ. ಈ ಹಳೆಗನ್ನಡದ ನಾಟಕವನ್ನು ನಿರ್ದೇಶನ ಮಾಡಿದ್ದು ನನ್ನ ಅಪೂರ್ವ ಅನುಭವ ಹಾಗೂ ನನ್ನ ಹೆಮ್ಮೆಯ ವಿಷಯ.

ನಾಲ್ಕನೆಯ ನಾಟಕ 'ರಾಧೇಯ'. ನನಗೆ ಗೊತ್ತಿರುವಂತೆ ಕಾದಂಬರಿಕಾರ ಶ್ರೀ ಕೃಷ್ಣಮೂರ್ತಿ ಪುರಾಣಿಕರು ಬರೆದ ಏಕೈಕ ನಾಟಕ ಇದು. ಮಹಾಭಾರತದ ಕರ್ಣನ ಸುತ್ತ ಹೆಣೆದಿರುವ ಕಥೆ. ಕರ್ಣನಂತಹ ವೀರ, ಮೇಧಾವಿ, ಹಾಗೂ ದಾನಶೂರ ಇಡೀ ಮಹಾಭಾರತದಲ್ಲಿ ಬೇರೆ ಯಾರೂ ಇಲ್ಲ. ಚುರುಕಾದ ಸಂಭಾಷಣೆ, ಪಾತ್ರ ಬೆಳವಣಿಗೆ, ಜನಪದ ಸಂಗೀತ ಎಲ್ಲ ಸೇರಿ ಈ ನಾಟಕ ಓದಿದಾಗ ಆನಂದ ಕೊಡುವುದರ ಜೊತೆಗೆ, ರಂಗದ ಮೇಲಿನ ಅಭಿನಯವನ್ನು ಕಂಡಾಗಲೂ ಅತೀವ ಆನಂದದಾಯಕವಾದ ಅನುಭವವನ್ನು ಕೊಡುತ್ತದೆ. ಈ ನಾಟಕ ಮೊಟ್ಟಮೊದಲು ಕನ್ನಡ ಸಾಹಿತ್ಯ ರಂಗದ ವಾಷಿಂಗ್‌ಟನ್ ಸಮ್ಮೇಳನದಲ್ಲಿ (2009) ಪ್ರದರ್ಶನಗೊಂಡು ನಂತರ ವಾಷಿಂಗ್‌ಟನ್ ಕಾವೇರಿ ಸಂಸ್ಥೆ, ನ್ಯೂ ಜೆರ್ಸಿ ಕನ್ನಡ ಸಂಘ ಇತ್ಯಾದಿ ಹಲವು ನಗರಗಳಲ್ಲಿ ಪ್ರದರ್ಶನಗಳಾಗಿವೆ. ನಾಟ್ಯ ಭಾರತಿಯ 25ನೇ ವರ್ಷದ ರಜತ ಮಹೋತ್ಸವದಲ್ಲಿ ಹೆಸರಾಂತ ಸಿನೆಮ ಕಲಾಕಾರ ಶ್ರೀ ಅಮೋಲ್ ಪಾಲೆಕರ್ (ಇಂಗ್ಲಿಷ್ ಭಾಷೆಯಲ್ಲಿ ಸಬ್‌ಟೈಟಲಿನೊಂದಿಗೆ) ಈ ನಾಟಕ ನೋಡಿ, ನಿರ್ದೇಶನ, ನಟನೆ, ಹಾಗೂ ಹಿನ್ನೆಲೆ ಸಂಗೀತವನ್ನು ಬಹಳ ಮೆಚ್ಚಿಕೊಂಡರು. ನಾಟಕದಲ್ಲಿ, ರಾಧೇಯ (ಕರ್ಣ), ಅವನ ಸಾಕುತಾಯಿ ಅಂಗಮಾತೆ, ಹೆತ್ತತಾಯಿ ಕುಂತಿ, ಇವರ ಸಂಭಾಷಣೆಗಳು ಅರ್ಥಗರ್ಭಿತವಾಗಿದ್ದು, ಭಾರತದ ಸಂಸ್ಕೃತಿಯನ್ನು ಬಿಂಬಿಸಿವೆ.

ನನಗೆ ಕರ್ನಾಟಕ ಸರ್ಕಾರದ ನಾಟಕ ಅಕ್ಯಾಡಮಿಯಿಂದ 2007ರಲ್ಲಿ ಸುವರ್ಣ ಕರ್ನಾಟಕ ಗೌರವ ಪುರಸ್ಕಾರ ದೊರಕಿತು. ಅಕ್ಯಾಡಮಿಯ ದೃಷ್ಟಿಯಲ್ಲಿ ನಾನು

ಅಮೆರಿಕದಲ್ಲಿ ರಂಗಭೂಮಿಗೆ ಸಲ್ಲಿಸಿದ ಸೇವೆ ಗಮನೀಯ ಎಂದು ಪುರಸ್ಕಾರ ನೀಡಿದರು.

ಮುಕ್ತಾಯ

ಸದ್ಯಕ್ಕೆ ಇಷ್ಟು ಸಾಕು. ನನ್ನ ನೆನಪುಗಳಲ್ಲಿ, ಕಳೆದ 25 ವರ್ಷಗಳಿಗೂ ಹೆಚ್ಚಿನ, ಇನ್ನೂ ಹಲವಾರು (ನೂರಾರು ಎಂದೇ ಹೇಳಬಹುದು) ಅನುಭವಗಳು ಉಳಿದಿವೆ. ಮತ್ತೊಮ್ಮೆ ಅವಕಾಶ ಸಿಕ್ಕಾಗ ಅದರ ಬಗ್ಗೆ ಬರೆಯುವೆ. ನನ್ನ ಜೀವನ ಸಂಗಾತಿ ಜಯಶ್ರೀ ನನ್ನ ರಂಗಭೂಮಿಯ ಪ್ರಯೋಗಗಳಲ್ಲಿ ಕೊಟ್ಟ ಪ್ರೋತ್ಸಾಹಕ್ಕೆ ಮತ್ತು ನೀಡಿದ ಸಹಾಯಹಸ್ತಕ್ಕಾಗಿ ನಾನು ಆಭಾರಿ.



ಮೌನದ ಚಳಿಗೆ ಅಧ್ಯಯನದ ಹೊದಿಕೆ

– ಶಶಿಕಲಾ ನಿಂಬಾಳ

ನನಗೆ ಶೀತಕಾಲ ಹತ್ತಿರ ಬರುತ್ತಿದ್ದಂತೆಯೇ ಮೈಯೊಳಗೆ ನಡುಕ ಶುರುವಾಗಿಬಿಡುತ್ತದೆ! ಭಾರತದಲ್ಲಿ ಬೇಸಿಗೆಯಿಂದ–ಮಳೆಗಾಲ, ಮಳೆಗಾಲದಿಂದ–ಚಳಿಗಾಲ ಬದಲಾಗುವ ಕಾಲಕ್ಕೆ, ಜನರ ದೈನಂದಿನ ಜೀವನದ ಗತಿಯಲ್ಲಿ ಅಷ್ಟೊಂದು ವ್ಯತ್ಯಾಸ ಕಾಣುವುದಿಲ್ಲ. ಶ್ರಾವಣ ಮಾಸದಲ್ಲಿ ಜಿಟಿ–ಜಿಟಿ ಮಳೆ ಬೀಳಲು ಶುರುವಾಗುತ್ತದೆ. ಪ್ರಭಾವಶಾಲಿಯಾದ ಪವಿತ್ರವಾದ ಆ ದಿನಗಳಲ್ಲಿ ಹಬ್ಬ–ಹರಿದಿನಗಳು ಇರುವುದರಿಂದ ಪ್ರವಚನ, ಪುರಾಣ, ಪುಣ್ಯಕತೆಗಳ ಶ್ರವಣ ಮಾಡುವ ಅವಕಾಶ ಸಿಗುತ್ತದೆ. ಚಳಿಗಾಲದ ಆರಂಭದಲ್ಲಿ ಬರುವ ಬೆಳಕಿನ ಹಬ್ಬವಾದ ದೀಪಾವಳಿಯು ಮನದ ಮೂಲೆಯ ಕರಿಯ ಕತ್ತಲೆಯನ್ನು ದೂರಮಾಡಿ ಹೃದಯದಲ್ಲಿ ಆಶಾಕಿರಣವನ್ನು ತುಂಬುತ್ತದೆ.

ಆದರೆ ಅಮೇರಿಕೆಯಲ್ಲಿ ಹಾಗಲ್ಲ! ಇಲ್ಲಿ ಚಳಿಗಾಲವು ಬಹಳ ತೀಕ್ಷ್ಣವಾಗಿದ್ದು, ನಮ್ಮ ನಿತ್ಯಜೀವನದಲ್ಲಿ ಬಹಳ ಬದಲಾವಣೆಯನ್ನು ತರುತ್ತದೆ. ಬೇಸಿಗೆಯಲ್ಲಿ ಹಗಲು ದೊಡ್ಡದಾಗಿದ್ದು ರಾತ್ರಿ ಒಂಭತ್ತಾದರೂ ಸೂರ್ಯನ ಬಿಸಿಲು ಇರುತ್ತಿದ್ದು, ಚಳಿಗಾಲ ಬಂದಿತೆಂದರೆ ಮಧ್ಯಾಹ್ನ ನಾಲ್ಕು ಮೂವತ್ತಕ್ಕೆ ಕತ್ತಲಾವರಿಸಿ ಬಿಡುತ್ತದೆ. ಪಾರ್ಕುಗಳು, ಮಕ್ಕಳ ಆಟದ ಬಯಲುಗಳು, ಕಾಲುದಾರಿಗಳು ನಿರ್ಜನವಾಗಿ ಖಾಲಿ–ಖಾಲಿ ಎನಿಸುತ್ತವೆ ಹಾಗೂ ಸುದೀರ್ಘ ಮೌನ ಎಲ್ಲೆಡೆ ವ್ಯಾಪಿಸಿ ಮನಸ್ಸಿನಲ್ಲಿ ಖಿನ್ನತೆಯನ್ನು ತರುತ್ತದೆ! ಬೇಸಿಗೆಯಲ್ಲಿ ಉಪಯೋಗಿಸಲ್ಪಡುತ್ತಿದ್ದ ಹಗುರಾದ, ತೆಳುವಾದ, ಅರ್ಧ ತೋಳಿನ ಟಾಪ್, ಟೀ ಶರ್ಟ್‌ನಂತಹ ಬಟ್ಟೆಗಳನ್ನು ಕಟ್ಟಿ ಎತ್ತಿಡಬೇಕಾಗುತ್ತದೆ. ಉದ್ದನೆಯ ತೋಳಿನ ಶರ್ಟು, ದಪ್ಪ–ದಪ್ಪಗಿರುವ ಜಾಕೆಟ್, ಸ್ವೆಟರ್ಸ್ ಹೊರಗೆ ಬರುತ್ತವೆ. ಹೀಗೆ ವಿಪರೀತ ಚಳಿ ಇರುವಾಗ ಹೊರಗಡೆ ಹೋಗಲು ತಯಾರಾಗುವದಕ್ಕೆ ಮಾಮೂಲಿಗಿಂತ ಹತ್ತು ನಿಮಿಷ ಹೆಚ್ಚು ಸಮಯ ಬೇಕಾಗುತ್ತದೆ. ಎರಡೆರಡು ಲೇಯರ್ ಬಟ್ಟೆ ಮೈಮೇಲೆ ಹೇರಿಕೊಂಡು, ತಲೆಗೆ ಸ್ಕಾರ್ಫ್, ಕೈಗೆ ಗ್ಲೋವ್ಸ್, ಕಾಲಿಗೆ ಸಾಕ್ಸ್–ಷೂಸ್ ಎಲ್ಲಾ ಹಾಕ್ಕೊಂಡು, ಕಾರ್ಟೂನ್ ಬೊಂಬೆಯಂತೆ ಯಾಂತ್ರಿಕ ನಡಿಗೆಯಲ್ಲಿ ಹೊರಗೆ ಹೆಜ್ಜೆ ಇಡುವುದಕ್ಕೆ ಸಾಕು ಸಾಕಾಗುತ್ತದೆ.

ದೀರ್ಘ ರಾತ್ರಿಯ ದಿನಗಳು ಆರಂಭವಾಗುವ ಸಮಯದಲ್ಲಿ 'ಹಾಲೊವೀನ್' ಹಬ್ಬ

ಬರುತ್ತದೆ. ಅಮೇರಿಕದಲ್ಲಿ ಆಚರಿಸಲ್ಪಡುವ ಇದೊಂದು ವಿಚಿತ್ರ ಹಬ್ಬ. ಪ್ರಾಣಿ, ಪಕ್ಷಿ, ದೆವ್ವ, ಭೂತಗಳ ವೇಷ ಧರಿಸಿ ಮನೆ ಮನೆಗೆ ಹೋಗಿ 'ಟ್ರಿಕ್ ಆರ್ ಟ್ರೀಟ್' ಅಂತ ಹೇಳಿ ಚಾಕ್‌ಲೇಟ್, ಕ್ಯಾಂಡೀಗಳನ್ನು ತಮ್ಮ ಬುಟ್ಟಿಯಲ್ಲಿ ಹಾಕಿಸಿಕೊಂಡು ಬಂದು, ಬಂಧು ಮಿತ್ರರೊಂದಿಗೆ ಒಂದೆಡೆ ಸೇರಿ ಊಟ ಮಾಡಿ ಮಜವಾಗಿ ಆಚರಿಸುತ್ತಾರೆ! ನವೆಂಬರದ ಕೊನೆಯಲ್ಲಿ ಥ್ಯಾಂಕ್ಸ್ ಗಿವಿಂಗ್ ಎಂಬ ಹಬ್ಬ ಬರುವ ಹೊತ್ತಿಗೆ ಸೂರ್ಯ ಸಾಯಂಕಾಲ ಐದು ಘಂಟೆ ಆಗುತ್ತಿದ್ದಂತೆಯೇ ಮುಗಿಲಿನಿಂದ ಮರೆಯಾಗಿಬಿಟ್ಟಿರುತ್ತಾನೆ! ಬದುಕಿನ ಕುಂದು–ಕೊರತೆಗಳನ್ನು ಮರೆತು, ಹಿಂದೆ ಘಟಿಸಿದ ವೈಮನಸ್ಸು, ವಿರಸಗಳನ್ನು ಬಿಟ್ಟು, ಒಳಿತಾದುದನ್ನೇ ಸ್ಮರಿಸಿ, ಸೌಖ್ಯಕ್ಕೆ ಕಾರಣರಾದವರನ್ನು ಕೃತಜ್ಞತೆಯ ಭಾವದಿಂದ ಅಭಿನಂದಿಸಿ ಮನೆಯ ಮಂದಿ, ಬಂಧು ಮಿತ್ರರೆಲ್ಲ ಒಂದೆಡೆ ಸೇರಿ ಭಾರಿ ಭೋಜನ ಮಾಡುವುದು ಥ್ಯಾಂಕ್ಸ್ ಗಿವಿಂಗ್ ಹಬ್ಬದ ಹಿನ್ನೆಲೆಯಾಗಿದೆ. ಊಟದ ನಂತರ ಬ್ಲ್ಯಾಕ್ ಫ್ರಾಯ್‌ಡೆಯ ಸೇಲ್‌ನಲ್ಲಿ ಸಾಮಾನುಗಳನ್ನು ಕೊಂಡುಕೊಳ್ಳುವ ಆತುರ ಎಲ್ಲರ ಮನದಲ್ಲಿ ಎದ್ದು ಕುಣಿಯುತ್ತಿರುತ್ತದೆ. 'ಜನ ಮರುಳೋ, ಜಾತ್ರೆ ಮರುಳೋ' ಎಂಬ ನುಡಿಯಂತೆ ಒಬ್ಬರನ್ನೊಬ್ಬರು ಹಿಂಬಾಲಿಸಿ ನಡುರಾತ್ರಿಯಲ್ಲಿ ದಪ್ಪ ದಪ್ಪಗಿನ ಜಾಕೆಟ್ ಧರಿಸಿ, ಮತ್ತೆ ಕೆಲವರು ಟೆಂಟ್‌ಗಳನ್ನು ಕಟ್ಟಿಕೊಂಡು ಅಂಗಡಿಗಳ ಮುಂದೆ ಸಾಲು ಸಾಲಾಗಿ ನಿಂತಿರುತ್ತಾರೆ! ಆ ದಿನ ಅಮೇರಿಕೆಯ ಎಲ್ಲ ಅಂಗಡಿಗಳು ಜನರಿಂದ ಕಿಕ್ಕಿರಿದು ತುಂಬಿ, ಅಂದು ಒಂದೇ ದಿನದಲ್ಲಿ ಬಿಲಿಯನ್ ಡಾಲರ್‌ಗೂ ಮಿಕ್ಕಿ ಅಂಗಡಿಯವರು ವ್ಯಾಪಾರ ಮಾಡುತ್ತಾರೆ!

ನನಗೆ ಈ ದೇಶದಲ್ಲಿ ಮೊದಲ ಚಳಿಗಾಲ ಕಳೆಯುವುದು ಬಹಳ ಸಾಹಸಪೂರ್ಣವಾಗಿತ್ತು. ಕೆಲಸದಿಂದ ಮನೆಗೆ ಬಂದು, ಅಡುಗೆ ಮಾಡಿ, ಪಾತ್ರೆ ತೊಳೆದು, ಮನೆಗೆಲಸವೆಲ್ಲ ಬೇಗ ಬೇಗ ಮುಗಿಸಿ ಬಿಡುತ್ತಿದ್ದೆ. ಮಕ್ಕಳು ಸ್ಕೂಲ್‌ನಿಂದ ಬಂದು, ಊಟ ಮಾಡಿ ತಮ್ಮ ಹೋಮ್‌ವರ್ಕ್‌ನಲ್ಲಿ ಮಗ್ನರಾಗಿರುತ್ತಿದ್ದರು. ಇಲ್ಲಿಯ ಟಿ ವಿ ನೋಡುವ ಅಭ್ಯಾಸ ಇಲ್ಲದ ನನಗೆ ಹೊತ್ತು ಕಳೆಯುವುದು ಬಹಳ ಕಷ್ಟವಾಗುತ್ತಿತ್ತು. ಕುಳಿತರೆ–ನಿಂತರೆ ಊರಲ್ಲಿರುವ ತಂದೆ–ತಾಯಿ ಮತ್ತು ಒಡಹುಟ್ಟಿದವರ ನೆನಪು 'ಮಳೆ ನಿಂತರೂ ಮರದ ಹನಿ ನಿಲ್ಲದು' ಎನ್ನುವ ಹಾಗೆ ಕಾಡುತ್ತಿತ್ತು. ಖ್ಯಾತ ಕವಿಗಳ, ಚಿಂತನಕಾರರ ಮತ್ತು ಪ್ರಖ್ಯಾತ ಸಂಗೀತಗಾರರ ಊರಾದ ಧಾರವಾಡ ನನ್ನ ತವರು! ಧಾರವಾಡದ ಯಾವ ಬೀದಿಯಲ್ಲಾದರೂ ನಿಂತು ಒಂದು ಸಣ್ಣ ಕಲ್ಲು ಎಸೆದರೆ ಅದು ಹೋಗಿ ಒಬ್ಬ ಸಾಹಿತಿಯ ಅಥವಾ ಸಂಗೀತಗಾರನ ಮನೆಯ ಅಂಗಳದಲ್ಲಿ ಬೀಳುತ್ತದೆಂದು ಹೇಳುತ್ತಾರೆ (ಇಪ್ಪತ್ತು ವರ್ಷಗಳ ಹಿಂದಿನ ಮಾತಿದು). ನನ್ನ ತಂದೆಯವರೂ ಸಾಹಿತಿಗಳಾಗಿದ್ದರಿಂದ ನಮ್ಮ ಮನೆಯಲ್ಲಿಯೇ ಒಂದು ಪುಟ್ಟ ಲೈಬ್ರರಿ ಆಗುವಷ್ಟು ಎರಡು ಕೋಣೆಗಳ ತುಂಬ ಪುಸ್ತಕಗಳಿವೆ, ಹೀಗಾಗಿ ಬಾಲ್ಯದಿಂದಲೂ ಪುಸ್ತಕ ಓದುವ ಹವ್ಯಾಸ ನನಗೆ ಅಂಟಿಕೊಂಡಿದೆ. ನಾನು ಅಮೇರಿಕೆಗೆ ಬರುವಾಗ ನನಗಿಷ್ಟವಾದ ಪುಸ್ತಕಗಳನ್ನು ತಂದಿರಲಿಲ್ಲ. ಆಗ ನನಗೆ ತುಂಬ ಹಿಂಸೆಯಾಗುತ್ತಿತ್ತು, ಅಮೂಲ್ಯವಾದ

ಸಮಯವನ್ನು ವ್ಯರ್ಥ ಕಳೆಯುವದಕ್ಕೆ ಬೇಜಾರು ಆಗುತ್ತಿತ್ತು. ಕವನ, ಕತೆ, ಮತ್ತು ಕಾದಂಬರಿಗಳನ್ನು ಓದುವುದರಲ್ಲಿ ಅಪಾರ ಆಸಕ್ತಿ ಹೊಂದಿದ್ದ ನಾನು ಇಲ್ಲಿಗೆ ಬಂದು ನೀರನ್ನು ಅಗಲಿದ ಮೀನಿನಂತೆ ಚಡಪಡಿಸುತ್ತಿದ್ದೆ.

ಪಕ್ಕದ ಮನೆಯ ಚೈನೀಸ್ ಕುಟುಂಬದ ಮಹಿಳೆ 'ಲಿನ್' ಎಂಬವರು ನನಗೆ ಪರಿಚಯವಾಗಿದ್ದರು. ಪರಿಚಯ ಕೆಲಸಮಯದ ನಂತರ ಸ್ನೇಹದಲ್ಲಿ ತಿರುಗಿತ್ತು. ಹೈಸ್ಕೂಲ್‌ನಲ್ಲಿ ಓದುತ್ತಿದ್ದ ಅವರ ಮಗಳು ಲೀಸಾ ಸ್ಕೂಲ್ ಪ್ರೊಜೆಕ್ಟ್‌ಗಾಗಿ ಪುಸ್ತಕಗಳನ್ನು ಹುಡುಕುತ್ತಿದ್ದಳು. ಬರುವ ವೀಕೆಂಡು ಲೀಸಾಳನ್ನು ಕರೆದುಕೊಂಡು ಸಮೀಪದ ಪಬ್ಲಿಕ್ ಲೈಬ್ರರಿಗೆ ಹೋಗುವುದಾಗಿ ಅವರು ಹೇಳಿದ್ದರು; ನಾನು ಅಮೇರಿಕೆಯಲ್ಲಿ ಲೈಬ್ರರಿ ನೋಡುವ ಕುತೂಹಲದಿಂದ ಅವರೊಂದಿಗೆ ಹೊರಟೆ. ಅವತ್ತಿನ ದಿನ ಮೊದಲಬಾರಿ ಅಮೇರಿಕೆಯಲ್ಲಿ ಲೈಬ್ರರಿ ನೋಡಿದ್ದು! ಅದು, ಮೂರು-ನಾಲ್ಕು ಅಂತಸ್ತಿನ ಭವ್ಯವಾದ ಅತಿ ದೊಡ್ಡ ಕಟ್ಟಡ! ಸೂಜಿ ಬಿದ್ದರೂ ಸಪ್ಪಳಾಗುವಂತಹ ಶಾಂತ ವಾತಾವರಣ. ಸುವ್ಯವಸ್ಥಿತವಾಗಿ ಸುಂದರವಾಗಿ ಶೆಲ್ಫ್‌ನಲ್ಲಿ ಹೊಂದಿಸಿದ್ದ ಪುಸ್ತಕಗಳು. ಕಂಪ್ಯುಟರ್‌ನಲ್ಲಿ ಪುಸ್ತಕದ ಹೆಸರಿನಿಂದ, ಲೇಖಕರ ಹೆಸರಿನಿಂದ ಅಥವಾ ಪ್ರಕಾಶಕರ ಹೆಸರಿನಿಂದ ಟೈಪ್ ಮಾಡಿ ಹುಡುಕಿದರೆ ಅತಿ ಸುಲಭವಾಗಿ ಸಿಗುವಂತಿದ್ದವು. ಅದು ತೋರಿಸುವ ಸೆಕ್ಷನ್-ಶೆಲ್ಫ್‌ಗೆ ಬಂದು ನೋಡಿದರೆ ಖಂಡಿತವಾಗಿಯೂ ಅಲ್ಲಿ ಆ ಪುಸ್ತಕ ಸಿಗುತ್ತಿತ್ತು. ಇಷ್ಟೊಂದು ಶಿಸ್ತಾಗಿ, ಸರಿಯಾಗಿ ಹೊಂದಿಸಲ್ಪಟ್ಟ ಬೆಟ್ಟದಷ್ಟು ಪುಸ್ತಕಗಳ ಸಂಗ್ರಹವನ್ನು ನೋಡಿ ಬೆರಗಾಗಿಬಿಟ್ಟಿದ್ದೆ! ಶಾಪಿಂಗ್ ಕಾಂಪ್ಲೆಕ್ಸ್‌ಗೆ, ಭೋಜನಕೂಟಗಳಿಗೆ ಹೋದರೆ ಬಹಳ ಅವಸರ-ಅವಸರ ಮಾಡಿ ಮನೆಗೆ ಮರಳುವ ನಾನು, ಆ ಲೈಬ್ರರಿಯಲ್ಲಿ ಇಪ್ಪತ್ತಾ ನ್ನಲ್ಕು ಗಂಟೆ ಇದ್ದರೂ ನಡೆಯುತ್ತದೆ ಅಂತ ಅನಿಸಿತ್ತು! ವರ್ತಮಾನ ಪತ್ರಿಕೆಗಳು, ಮಾಸ ಪತ್ರಿಕೆಗಳು, ಸಂಚಿಕೆಗಳು, ಮ್ಯಾಗ್‌ಝೀನ್‌ಗಳು ಒಂದೆಡೆ ಇದ್ದರೆ, ಇನ್ನೊಂದೆಡೆ ಮ್ಯುಜಿಕ್ ಆಡಿಯೋ ಕ್ಯಾಸೆಟ್‌ಗಳು, ಮೂವಿ ಡಿವಿಡಿಗಳ ದೊಡ್ಡ ಸಂಗ್ರಹ ಇತ್ತು. ಇಂಟರ್‌ನೆಟ್ ಸೌಲಭ್ಯದೊಂದಿಗೆ ಕಂಪ್ಯುಟರ್‌ಗಳನ್ನು ಬಳಸಲು ಸಾರ್ವಜನಿಕರಿಗಾಗಿ ಉಚಿತವಾಗಿಟ್ಟಿದ್ದರು. ಇಬ್ಬರಿಂದ ನಾಲ್ಕು ಜನರು ಸೇರಿ ಗ್ರೂಪ್ ಸ್ಟಡಿ ಮಾಡಲು ಕುರ್ಚಿ-ಟೇಬಲ್‌ಗಳಿದ್ದ ಚಿಕ್ಕ ಚಿಕ್ಕ ರೂಮ್‌ಗಳಿದ್ದವು. ಚಿಕ್ಕಮಕ್ಕಳಿಗಾಗಿ ಮತ್ತು ಅವರುಗಳ ವಯಸ್ಸಿಗೆ ಅನುಗುಣವಾಗಿ ವಿವಿಧ ಚಟುವಟಿಕೆಗಳಾದ ಸ್ಟೋರಿ ಟೈಮ್, ಶೋ ಟೈಮ್, ಪ್ಲೇ ಟೈಮ್ ಅಂತ ಇದ್ದವು. ದೊಡ್ಡವರಿಗಾಗಿ ಬೇರೆ ಬೇರೆ ದೇಶಗಳಿಂದ ಬಂದವರಿಗೆ ಇಂಗ್ಲೀಷ್ ಕಲಿಯಲು ಹಾಗೂ ಕಂಪ್ಯುಟರ್ ಮತ್ತು ಅಂತರ್‌ಜಾಲದ ಬಗ್ಗೆ ಮಾಹಿತಿ ತಿಳಿಯಲು ಪುಸ್ತಕಗಳು, ಗೈಡ್‌ಗಳು ಇದ್ದವು. ಪರಿಣತಿ ಹೊಂದಿದ ಶಿಕ್ಷಕರಿಂದ ಈ ವಿಷಯಗಳಲ್ಲಿ ಕ್ಲಾಸ್‌ಗಳನ್ನು ಸಹ ನಡೆಸುತ್ತಿದ್ದರು. ಈ ಕ್ಲಾಸುಗಳಿಗೆ ಸೇರಲು ಯಾವ ಶುಲ್ಕವೂ ಇರುವುದಿಲ್ಲ. ಅಲ್ಲಿಯೇ ಒಂದು ಮೂಲೆಯಲ್ಲಿ ಸ್ಟಾರ್‌ಬಕ್ಸ್ ಕಾಫಿ ಶಾಪ್ ಕೂಡಾ ಇತ್ತು. ನನ್ನನ್ನು ಕರೆದುತಂದಿದ್ದ ಲಿನ್ ಕಾಫಿ ಕುಡಿಯಲು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು. ಕೆಲವರು ಕಾಫಿಯನ್ನು ಕುಡಿದು, ಸ್ನೇಹಿತರ ಜೊತೆ

ಸಂಭಾಷಿಸಿ ಸಮಯ ಕಳೆಯುವ ಸಲುವಾಗಿಯೂ ಲೈಬ್ರರಿಗೆ ಬರುತ್ತಾರೆಂದು ಲಿನ್ ಹೇಳುತ್ತಿದ್ದರು.

ನಾವು ಕಾಫಿ ಕುಡಿದು ಬಂದಾಗ, ಲೀಸಾ ಒಂದು ಹೊರೆ ಪುಸ್ತಕಗಳನ್ನು ಹೊತ್ತುಕೊಂಡು ಬಂದು ಅಲ್ಲಿಯೇ ಕುಳಿತು ತನ್ನ ಸ್ಕೂಲ್ ವರ್ಕ್ ಮಾಡುವುದಾಗಿ ಹೇಳಿದಳು. 'ರೋಗಿ ಬಯಸಿದ್ದು ಅನ್ನ ಹಾಲು, ಡಾಕ್ಟರ್ ಹೇಳಿದ್ದು ಅನ್ನ ಹಾಲು' ನನಗೂ ಅದೇ ಬೇಕಿತ್ತು. ನಾನು ನನ್ನ ಪುಸ್ತಕಗಳ ಅನ್ವೇಷಣೆಗಾಗಿ ಕಂಪ್ಯುಟರ್ ಕಡೆಗೆ ಹೆಜ್ಜೆ ಹಾಕಿದೆ. ಬಹಳ ದಿನಗಳ ಹಿಂದೆ ನಾನು ಧಾರವಾಡದ ಕರ್ನಾಟಕ ಕಾಲೇಜ್‌ನಲ್ಲಿ ಓದುತ್ತಿದ್ದಾಗ ನಮ್ಮ ಇಂಗ್ಲೀಷ್ ಮೇಡಂ ಅವರಿಂದ ಜೆ. ಕೃಷ್ಣಮೂರ್ತಿಯವರ ಆಧ್ಯಾತ್ಮಿಕ ಮತ್ತು ತಾತ್ವಿಕ ಚಿಂತನೆಗಳ ಕುರಿತಾಗಿ ಬರೆದ ಪುಸ್ತಕಗಳ ಬಗ್ಗೆ ಕೇಳಿದ್ದೆ. ಅವುಗಳನ್ನು ಓದಬೇಕೆಂಬ ಅಪೇಕ್ಷೆ ಬಹುದಿನಗಳಿಂದ ಮನಸ್ಸಿನಲ್ಲಿತ್ತು; ಅವರ ಪುಸ್ತಕಗಳು ಇಲ್ಲಿ ಸಿಗಬಹುದೇ ಅಂತ ಲೇಖಕರ ಹೆಸರಿನಲ್ಲಿ ಹುಡುಕಾಟ ಶುರುಮಾಡಿದೆ. ಅಹಾಹಾ! ನನ್ನ ಅದೃಷ್ಟವೇ ಅದೃಷ್ಟ! ಒಂದಲ್ಲ, ಎರಡಲ್ಲ, ಮೂರು ಪುಸ್ತಕಗಳನ್ನು ಅವರ ಹೆಸರಿನಲ್ಲಿ ಕಂಪ್ಯುಟರ್ ತೋರಿಸಿತ್ತು! ಅದು ತೋರಿಸಿದ ಜಾಗಕ್ಕೆ ಹೋಗಿ ನೋಡಿದಾಗ 'ದಿ ಅವೇಕನಿಂಗ ಆಫ್ ಇಂಟಲಿಜನ್ಸ್' 'ದಿ ಫಸ್ಟ ಆಂಡ್ ಲಾಸ್ಟ್ ಫ್ರೀಡಮ್' ಮತ್ತು 'ಕೃಷ್ಣಮೂರ್ತಿ ಟು ಹಿಮ್‌ಸೆಲ್ಫ್' ಈ ಮೂರು ಪುಸ್ತಕಗಳನ್ನು ಶೆಲ್ಫಿನಲ್ಲಿ ಅಂದವಾಗಿ ಜೋಡಿಸಿಟ್ಟಿದ್ದರು. ಕೆಂಟಾಕಿಯಲ್ಲಿರುವ ಲೆಕ್ಸಿಂಟನ್, ಎಂಬ ಊರಲ್ಲಿ, ಪಬ್ಲಿಕ್ ಲೈಬ್ರರಿಯಲ್ಲಿ ಹಿಂದೂ ಫಿಲಾಸಫಿಯ ಪುಸ್ತಕಗಳನ್ನು ಕಂಡು ದಂಗಾಗಿಬಿಟ್ಟೆ! ಸಂತೋಷದಿಂದ ಮೈಮರೆತು ಹೋದೆ! 'ದಿ ಅವೇಕನಿಂಗ್ ಆಫ್ ಇಂಟಲಿಜನ್ಸ್' ಮತ್ತು 'ಕೃಷ್ಣಮೂರ್ತಿ ಟು ಹಿಮ್‌ಸೆಲ್ಫ್' ಎರಡು ಪುಸ್ತಕಗಳನ್ನು ಕೈಗೆತ್ತಿಕೊಂಡು ಕೆಳಗೆ ಇಳಿದು ಬಂದೆ. ಅಷ್ಟರಲ್ಲಿ ಲೀಸಾಳ ಸ್ಕೂಲ್ ವರ್ಕ್ ಒಂದು ಹಂತಕ್ಕೆ ಬಂದಿತ್ತು. ಇಬ್ಬರೂ ಸೇರಿ ಕೌಂಟರ್‌ಗೆ ಬಂದು ಲೈಬ್ರರಿಯ ಮೆಂಬರ್‌ಶಿಪ್‌ನ್ನು ಮತ್ತು ಕಾರ್ಡ್‌ನ್ನು ಸಲೀಸಾಗಿ ಪಡೆದು, ಪುಸ್ತಕಗಳನ್ನು ಚೆಕ್ ಔಟ್ ಮಾಡಿಸಿದೆವು. ಅವತ್ತಿನ ನನ್ನ ಅನುಭವ ಅನನ್ಯ ಮತ್ತು ಎಂದೂ ಮರೆಯಲಾಗದ ದಿನ! ಅಂದಿನಿಂದ ಆ ಊರಲ್ಲಿರುವವರೆಗೆ ತಿಂಗಳಲ್ಲಿ ಒಂದೆರಡು ಬಾರಿ ಲೈಬ್ರರಿಗೆ ಹೋಗುವದು ರೂಢಿಯಾಗಿಬಿಟ್ಟಿತ್ತು. ಒಳ್ಳೆಯ ಪುಸ್ತಕಗಳು ಸ್ನೇಹಿತೆಯರಿಗಿಂತ ಮಿಗಿಲು, ಅವುಗಳ ಜೊತೆಯಿರುವಾಗ ಚಳಿಗಾಲ ಉರುಳಿದ್ದು ತಿಳಿಯದ ಹಾಗೆ ಆಯಿತು.

ಜಿದ್ದು ಕೃಷ್ಣಮೂರ್ತಿಯವರು (1895–1986) ಆಂಧ್ರ ಪ್ರದೇಶದವರು, 1922ರಲ್ಲಿ ಕ್ಯಾಲಿಫೋರ್ನಿಯಕ್ಕೆ ಬಂದು, ಜಗತ್ತಿನ ಉದ್ದಗಲಕ್ಕೂ ಸಂಚರಿಸಿ ತತ್ವಜ್ಞಾನದ ಸುಗಂಧವನ್ನು ಎಲ್ಲೆಡೆ ಪಸರಿಸಿ world renowned spiritual teacher ಎಂದು ಪ್ರಸಿದ್ಧರಾದರು. ಅವರು ದೇವರು, ಧ್ಯಾನ, ಭಕ್ತಿ, ಸಾಕ್ಷತ್ಕಾರ, ಪ್ರೀತಿ, ಸೇವೆ ಇವುಗಳನ್ನೆಲ್ಲ ಹೊಸ ಆಯಾಮದ ಚೌಕಟ್ಟಿನಲ್ಲಿಟ್ಟು, ವಿಭಿನ್ನ ರೀತಿಯಲ್ಲಿ ವಿವರಿಸುತ್ತಾರೆ. ಮತ್ತು

ನಿತ್ಯಜೀವನದ ಪ್ರತಿಕ್ಷಣಗಳಲ್ಲಿ ಚಂಚಲ ಚಿತ್ತದ ಯೋಚನೆಗಳ ಬೆನ್ನುಹತ್ತಿ ಓಡುತ್ತಿರುವ ಮನಸ್ಸಿನ ಓಟವನ್ನು ಸ್ವಲ್ಪ ನಿಲ್ಲಿಸಿ, ಹಿಂದೆ ಸರಿಸಿ, ನಿಂತು ನೋಡುವುದನ್ನು ಕಲಿಸುತ್ತಾರೆ. ನಿಜವಾದ ಧ್ಯಾನವು, ಭೂತ ಭವಿಷ್ಯದ ವಿಚಾರಗಳನ್ನು ಮರೆತು ಮನಸ್ಸು ವರ್ತಮಾನದಲ್ಲಿ ಲೀನವಾಗಿಸಿದಾಗ ಸಹಜವಾಗಿ ಮೂಡುತ್ತದೆ ಎಂದು ಅರುಹುತ್ತಾರೆ. ಇತ್ತೀಚೆಗೆ, 'ದಿ ಪವರ್ ಆಫ್ ನೌ' ಮತ್ತು 'ಎ ನ್ಯು ಅರ್ಥ್' ಪುಸ್ತಕಗಳನ್ನು ಬರೆದು ಪ್ರಸಿದ್ಧರಾದ ಎಕಾರ್ಟ್ ಟೋಲೆ ಅವರು ಕೃಷ್ಣಮೂರ್ತಿಯವರ ವಿಚಾರಗಳನ್ನು ಪ್ರಸ್ತಾಪಿಸಿ ಅನುಮೋದಿಸುತ್ತಾರೆ. ಜೆ. ಕೃಷ್ಣಮೂರ್ತಿಯವರು ನನ್ನ ಮೆಚ್ಚಿನ ತತ್ವದರ್ಶಿಗಳಲ್ಲಿ ಒಬ್ಬರು. ಆಗಾಗ ಬರುವ ನಮ್ಮ ಬದುಕಿನ ಏಳು-ಬೀಳುಗಳಲ್ಲಿ 'ಹಿಂದಿಲ್ಲ ನಮಗ ಮುಂದಿಲ್ಲ' ಎಂದು ಅನಿಸಿದಾಗ ಹೊಸ ಆಸೆಯ ಬೆಳಕಿನ ಕಿರಣಗಳನ್ನು ಜೆ. ಕೃಷ್ಣಮೂರ್ತಿಯವರ ಮಾತುಗಳಲ್ಲಿ ಕಾಣುತ್ತಿರುತ್ತೇನೆ.

ಮೂರು-ನಾಲ್ಕು ವರ್ಷಗಳು ಚಳಿಯಿರುವ ಆ ಊರು ಈ ಊರುಗಳಲ್ಲಿ ಕಳೆದು ಕೊನೆಗೆ ಕ್ಯಾಲಿಫೋರ್ನಿಯದ ಸ್ಯಾನ್ ಫ್ರಾನ್ಸಿಸ್ಕೋ ಬೇ ಏರಿಯಾಕ್ಕೆ ಬಂದು ನೆಲೆಸಿದೆವು. ಸುವರ್ಣ ಸೇತುವೆಯನ್ನು ಹೊಂದಿರುವ ಈ ನಾಡು, ಕನ್ನಡ ನಾಡಿನ ಪ್ರಕೃತಿಯ ಹವಾಗುಣಕ್ಕೆ ಮತ್ತು ಮನೋಗುಣಕ್ಕೆ ಸರಿಯಾಗಿ ಒಗ್ಗುವ ಸುಂದರ ಬೀಡು. ನಾನು ಮಾಡುವ ಸಾರಿಗೆ ಮತ್ತು ಅಡುಗೆಯ ಒಗ್ಗರಣೆಗೆ ಹಾಕಲು ಕರಿಬೇವಿನ ಸೊಪ್ಪು ಕಂಡಿದ್ದು ಇಲ್ಲಿ ಬಂದ ಮೇಲೆಯೆ! ಸಿಹಿಯಾದ ಮಾವಿನ ಹಣ್ಣನ್ನು ಸವಿದಿದ್ದು ಇಲ್ಲಿಯೇ! ಅದಕ್ಕೂ ಮಿಗಿಲಾಗಿ ನನ್ನನ್ನು ಮರಳು ಮಾಡಿದ್ದು ಇಲ್ಲಿಯ ಕನ್ನಡಿಗರ ಅದ್ಭುತ ಸಾಧನೆ! ಕನ್ನಡದ ಕಲರವ ಕಣ್ತುಂಬ, ಕಿವಿ ತುಂಬ, ಹೃದಯದ ತುಂಬ ತುಂಬಿದ್ದು ಇಲ್ಲಿಯೇ! ಸಾಹಿತ್ಯ ಗೋಷ್ಠಿ, ಕನ್ನಡ ಕೂಟ, ಕನ್ನಡ ಕಲಿ, ವಾಕ್ಪಟುಗಳು- ಎಲ್ಲೆಲ್ಲೆಯೂ ರಾರಾಜಿಸುವ ಪ್ರತಿಭಾನ್ವಿತ ಕನ್ನಡಿಗರು! ಕರ್ನಾಟಕದಲ್ಲಿ ನೋಡಲು, ಅನುಭವಿಸಲು ಅಸಾಧ್ಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ಮೇಲಿಂದ ಮೇಲೆ ನೋಡಲು, ಕೇಳಲು, ಅನುಭವಿಸಲು ಸಿಗುತ್ತವೆ. ಇವುಗಳಲ್ಲದೆ 'ಅಕ್ಕ', 'ಕನ್ನಡ ಸಾಹಿತ್ಯ ರಂಗ' ಮತ್ತು ಇತ್ತೀಚೆಗೆ ಶುರು ಆಗಿರುವ 'ನಾವಿಕ' ಸಂಘ, ಸಂಸ್ಥೆಗಳು ಏರ್ಪಡಿಸುವ ಅದ್ದೂರಿಯ ಕನ್ನಡದ ಸಮಾರಂಭಗಳು. ಇಲ್ಲಿ ಬೆಳೆಯುತ್ತಿರುವ ಮಕ್ಕಳು ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಹಾಗೂ ಭಾವಗೀತೆ, ಚಿತ್ರಗೀತೆಗಳನ್ನು ಹೇಳುವುದರಲ್ಲಿ ಕನ್ನಡದ ನಾಡಿನಲ್ಲಿ ಹುಟ್ಟಿಬೆಳೆದ ಮಕ್ಕಳಿಗಿಂತ ಒಂದು ಹೆಜ್ಜೆ ಮುಂದೆಯೇ ಇದ್ದಾರೆಂದು ಹೆಮ್ಮೆಯಿಂದ ಹೇಳುತ್ತೇನೆ! ನಾನು ನೋಡಿದ, ಅಟ್ಲಂಟಾದಲ್ಲಿ ಏರ್ಪಡಿಸಲಾಗಿದ್ದ 'ಅಕ್ಕ ಐಡಲ್'ದಲ್ಲಿ ಗೆಲುವು ಪಡೆದ ಮತ್ತು ಭಾಗವಹಿಸಿದ ಮಕ್ಕಳು ಸಭಿಕರ ಮನವನ್ನು ಸೂರೆಗೊಂಡರು ಎಂಬುದೇ ಇದಕ್ಕೆ ಸಾಕ್ಷಿ! ಇಷ್ಟೆಲ್ಲ ಸಾಂಸ್ಕೃತಿಕ, ಸಾಹಿತ್ಯಿಕ, ಕಲಾತ್ಮಕ ರಸದೌತಣ ಈ ದೇಶದಲ್ಲಿಯೇ ಇತ್ತಿತ್ತಲಾಗಿ ವಿಪುಲವಾಗಿ ದೊರೆಯುತ್ತಿರುವಾಗ ಕರ್ನಾಟಕದಿಂದ, ಕನ್ನಡದ ಭಾಷೆಯಿಂದ ದೂರವಾಗಿರುವೆ ಎಂಬ ಬೇಸರ ಈಗ ಇಲ್ಲವಾಗಿದೆ!

ಬೇರು ಸೂರು

ಮಕ್ಕಳ ಸ್ಕೂಲ್, ಸ್ಕೂಲ್‌ನಲ್ಲಿಯ ಇತರ ಚಟುವಟಿಕೆಗಳು, ನಂತರ ಅವರುಗಳನ್ನು ಕಾಲೇಜ್‌ಗೆ ಕಳಿಸುವ ತಯಾರಿ ಮಾಡುವಷ್ಟರಲ್ಲಿ ಗಡಿಯಾರ ಟಿಕ್ ಟಿಕ್ ಎನ್ನುತ್ತ ಬಲು ಬೇಗ ಬೇಗ ಓಡುತ್ತಿತ್ತು. ಗುರುದೇವ ರಾನಡೆಯವರು ಹೇಳಿದ್ದು 'ಪರಮಾರ್ಥ ಸಾಧನವೇ ಪರಮ ಮಾನವ ಧರ್ಮ' ಎಂಬುದು. ಮನುಷ್ಯರಾದವರು ತಮ್ಮ ಆಯುಷ್ಯದ ಸ್ವಲ್ಪ ಭಾಗವನ್ನಾದರೂ ಭಗವಂತನ ಪ್ರಾರ್ಥನೆಗೆ, ಪ್ರವಚನಕ್ಕೆ ಮೀಸಲಿಡಬೇಕು ಎಂದು ತಿಳಿದವರು ಹೇಳಿರುವರು. ನನಗೆ ಲಭ್ಯವಿರುವ ಸ್ವಲ್ಪ ಸಮಯವನ್ನು, ಅದಕ್ಕಾಗಿ ಮೀಸಲಾಗಿಡಬೇಕು ಅಂತ ಅನಿಸತೊಡಗಿತ್ತು. ಪರಮಹಂಸ ಯೋಗಾನಂದರ 'ಅಟೊ ಬಯೋಗ್ರಾಫಿ ಆಫ್ ಎ ಯೋಗಿ' ಕನ್ನಡದಲ್ಲಿ 'ಯೋಗಿಯ ಆತ್ಮಕತೆ'ಯನ್ನು ನಾನು ತುಂಬ ಚಿಕ್ಕವಯಸ್ಸಿನಲ್ಲಿ ಓದಿದ್ದೆ. ಅವರು ಭಾರತದಲ್ಲಿ ವಾಯ್.ಎಸ್.ಎಸ್. (1917), ಅಮೇರಿಕದಲ್ಲಿ ಸೆಲ್ಫ್ ರಿಯಲೈಝೇಶನ್ ಫೆಲೋಶಿಪ್ (ಎಸ್.ಆರ್.ಎಫ್.) ಎಂದು ಸ್ಥಾಪಿಸಿದ್ದಾರೆ. ಕ್ಯಾಲಿಫೋರ್ನಿಯಕ್ಕೆ ಬಂದ ಮೇಲೆ ಲಾಸ್ ಗ್ಯಟೋಸ್‌ನಲ್ಲಿರುವ ಅವರ ಟೆಂಪಲ್‌ಗೆ ಹೋಗುವ, ಅಲ್ಲಿಯ ಸತ್ಸಂಗದಲ್ಲಿರುವ ಸದವಕಾಶ ದೊರೆಯಿತು. ನನಗೆ ಸಮಯ ದೊರೆತಾಗಲೆಲ್ಲ ಅಲ್ಲಿ ನಡೆಯುವ ವಿಶೇಷ ಶಿಬಿರಗಳಿಗೆ ತಪ್ಪದೆ ಹೋಗಿದ್ದೇನೆ. ಅಲ್ಲಿಯ ಪುಸ್ತಕಾಲಯದಿಂದ, ಅವರು ಬರೆದ 'God talks with Arjuna' 'Man's Eternal Quest' ಪುಸ್ತಕಗಳನ್ನು ತಂದು ಓದಿದೆ. ದಕ್ಷಿಣ ಕ್ಯಾಲಿಫೋರ್ನಿಯ ಸಮುದ್ರದ ತೀರದಲ್ಲಿ ಅತ್ಯಂತ ನಯನ ಮನೋಹರವಾದ Encinitas ಆಶ್ರಮ, ಮಹತ್ಮಾ ಗಾಂಧಿಯವರ ಸ್ಮಾರಕ ಹೊಂದಿರುವ, Lake Shrine ಆಶ್ರಮ (1950) ಮತ್ತು ಲಾಸ್ ಎಂಜಲೀಸ್‌ನಲ್ಲಿರುವ International Headquarters ನೋಡುವಂಥ ಸ್ಥಳಗಳಾಗಿವೆ. ಪರಮಹಂಸ ಯೋಗಾನಂದರು ಬಂಗಾಲದಿಂದ ಸುಮಾರು 1920ರಲ್ಲಿ ಬಾಸ್ಟನ್‌ನಲ್ಲಿ ಏರ್ಪಡಿಸಿದ್ದ ವಿಶ್ವದ ಅಂತರ್‌ರಾಷ್ಟ್ರೀಯ ಸರ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ, ಇಲ್ಲಿಯ ಜನರ ಮೆಚ್ಚುಗೆಗೆ ಪಾತ್ರರಾದರು. ಧ್ಯಾನದಲ್ಲಿ ಹೆಜ್ಜೆ ಹೆಜ್ಜೆಯಾಗಿ ಮುಂದುವರೆಯಲು ವೈಜ್ಞಾನಿಕವಾದ, ಪ್ರಾಕ್ಟಿಕಲ್ ಆದ ಮೆಟ್ಟಿಲುಗಳನ್ನು ಹಾಕಿಕೊಟ್ಟಿದ್ದಾರೆ. ಕಾಲಗರ್ಭದಲ್ಲಿ ಮರೆಯಾಗಿ ಹೋಗುತ್ತಿದ್ದ ಕ್ರಿಯಾಯೋಗವನ್ನು ಪುನರುಜ್ಜೀವನಗೊಳಿಸಿ ಅಧ್ಯಾತ್ಮದ ಹಾದಿಯನ್ನು ಅತ್ಯಂತ ಆಸಕ್ತಿಯಿಂದ ಅರಸಿ ಬಂದ ಪಾಶ್ಚಿಮಾತ್ಯರಿಗೆ ಅರುಹಿದ್ದಾರೆ. ಅವರು ರಚಿಸಿರುವ ಕಾಸ್ಮಿಕ್ ಚಾಂಟ್ಸ್ ಬಹಳ ಚೆನ್ನಾಗಿವೆ.

ಕನ್ನಡದ ಕಲರವದ ಕಂಪು, ಪರಮಹಂಸ ಯೋಗಾನಂದರ ಹಾಗೂ ಜೆ. ಕೃಷ್ಣಮೂರ್ತಿ ಅಂಥವರ ಅನುಭಾವದ ಉಪಾಸನೆಯ ಇಂಪು ಇಲ್ಲಿಯ ಪರಿಸರದಲ್ಲಿ ಹರಡಿರುವದನ್ನು ಎಷ್ಟು ವರ್ಣಿಸಿದರೂ ಸಾಲದು! ಇವರ ಮತ್ತು ಜಗತ್ತಿನ ಇತರ ಸಂತರ ಕೃತಿಗಳು ಜೊತೆಗಿದ್ದರೆ ಜೀವನಕ್ಕೆ ಇನ್ನೇನಾದರೂ ಬೇಕು ಅಂತ ನನಗೆ ಅನಿಸುತ್ತಿಲ್ಲ.

ಬೇರು ಸೂರು

ವಿಕಟ ದೃಷ್ಟಿ, ವಿಧಿಯ ಆಸೆ
ಬಾಳ ಬಟ್ಟೆ, ಬಿಡದ ಚಿಂತೆ
ಇದ್ದರೆಷ್ಟು? ಬಿಟ್ಟರೆಷ್ಟು?
ಗಟ್ಟಿ ಬುಕ್ಕು ಕೈಯಲಿರಲು
ತಕ್ಕ ಮತಿಯು ತಲೆಯಲಿರಲು
ತೇಲಬಹುದು ತೇಪೆ ಬದುಕು

ಸಂತರ ಮತ್ತು ಮಹಂತರ ಗಟ್ಟಿ ಬುಕ್ಕುಗಳು ನನ್ನ ತೇಪೆಯ ಬದುಕಿನ ದೋಣಿಯನ್ನು ತೇಲುವಂತೆ ಮಾಡಿವೆ. ನಾನು ಅಮೇರಿಕೆಗೆ ಬಂದು ಕಟ್ಟಿಕೊಂಡ ಜೀವನ ಮತ್ತು ಪಡೆದ ಅನುಭವ ಎಷ್ಟು ಹೇಳಿದರೂ ಸಾಲದು, 'ಕನ್ನಡಿಯೊಳಗೆಷ್ಟು ಕಂಡೀತು ಕನಕಾಚಲವು, ಕೊಡಕೆ ಹಿಡೀಸೀತೆಷ್ಟು ಕಡಲ ನೀರು' ಎನ್ನುವ ಕವಿವಾಣಿ ನೆನಪಿಗೆ ಬರುತ್ತದೆ. ಈಗ ಹಿಂದೆ ತಿರುಗಿ ನೋಡುವ, ಇಲ್ಲಿ ಯಾಕೆ ಬಂದೆ ಎನ್ನುವ ತಕರಾರುಗಳೆಲ್ಲ ಮುಗಿದುಹೋಗಿವೆ. ಚಳಿಗಾಲದ ದೀರ್ಘ ಮೌನದ ದಿನಗಳನ್ನು ಕಳೆಯಲೆಂದು ಆರಂಭಿಸಿದ ನನ್ನ ಓದುವ ಹವ್ಯಾಸ ಈಗ ಎಲ್ಲ ಋತುಗಳಲ್ಲಿಯೂ ಬೆಚ್ಚನೆಯ ಹೊದಿಕೆಯಾಗಿ ಹಮ್ಮಿಕೊಂಡಿದೆ.

ಹಾದಿ ನೂರು...



– ಮೀರಾ ಪಿ. ಆರ್.

ನನ್ನ ಅಸ್ತಿತ್ವ, ಅಸ್ಮಿತೆ, ಗುರುತು, ಇತ್ಯಾದಿಗಳೆಲ್ಲ ಇರುವುದು ಅಥವಾ ಇಲ್ಲದಿರುವುದು ಕೇವಲ ನನ್ನೊಳಗಾ ಅಥವಾ ನನ್ನನ್ನು ನೋಡುವ ಉಳಿದವರೊಳಗಾ ಎನ್ನುವುದು ನನ್ನನ್ನು ಮತ್ತೆ ಮತ್ತೆ ಕಾಡಿದ್ದ ಪ್ರಶ್ನೆ. ನಮ್ಮ ಬದುಕು ನಮಗೊದಗಿಸುವ ಸಂದರ್ಭಗಳು, ಆಯಾ ಸಂದರ್ಭಕ್ಕೆ ಪಕ್ಕಾಗಿ ನಾವು ತೆಗೆದುಕೊಳ್ಳುವ ನಿರ್ಧಾರಗಳು – ಇವುಗಳ ಆಧಾರದ ಮೇಲಷ್ಟೇ ನಮ್ಮ ಇರವನ್ನು ಗುರುತಿಸದೆ, ಬೇರೆ ಬೇರೆ ಕಾಲ ದೇಶ ಪರಿಸರ ಪರಿಸ್ಥಿಗಳಲ್ಲಿ ಹಾಯುತ್ತಲೂ ಅದನ್ನು ಮೀರಿ ನಮ್ಮೊಳಗೆ ಉಳಿದ ಕೇವಲ ನಮ್ಮದಷ್ಟೆ ಆದ ಏನೋ ಒಂದು ಅರಳುವ ಅಥವಾ ಮುರುಟಿಹೋಗುವ ಪ್ರಕ್ರಿಯೆಯಲ್ಲಿ ನಮ್ಮ ಇರುವಿಕೆಗೆ ಅರ್ಥವನ್ನು ಕಾಣುವುದು ನನ್ನ ಹಂಬಲ. ಈ ಹಂಬಲವನ್ನು ಭಾರತದಲ್ಲಿದ್ದ ನನ್ನ ಬದುಕಿನ ಅನುಭವವೂ ಈಗ ನಾನಿರುವ ನನ್ನ ಅಮೆರಿಕಾದ ಬದುಕಿನ ಅನುಭವವೂ ಒಟ್ಟೊಟ್ಟಿಗೇ ಪೋಷಿಸಿವೆ, ಗಟ್ಟಿಗೊಳಿಸುತ್ತಿವೆ. ಇಲ್ಲಿ ಕಳೆದ ಈ ವರುಷಗಳು ಭಾರತದಲ್ಲೇ ನಾನು ಕಳೆದಿದ್ದರೆ ಆಗ ನಾನು ಏನಾಗಿರುತ್ತಿದ್ದೆ, ಇಲ್ಲಿದ್ದು ಈಗ ಏನಾಗಿದ್ದೇನೆ ಎಂದು ಹಲವು ಬಾರಿ ನನ್ನನ್ನು ನಾನೇ ಕೇಳಿಕೊಂಡಿದ್ದಿದೆ. ನಾವು ಹಾಯುವ ಕಾಲ, ದೇಶ, ವ್ಯಕ್ತಿಗಳು, ಜೊತೆಗೆ ಒದಗಿ ಬರುವ ಅವಕಾಶಗಳು, ಬೇರೆಯವರು ನಮ್ಮನ್ನು ನೋಡುವ ಬಗೆಯಲ್ಲಿ ವ್ಯತ್ಯಾಸಗಳನ್ನು ತರಬಹುದು. ಆದರೆ ನನ್ನೊಳಗಿರುವ ನನ್ನನ್ನು ನಾನೇ ಹುಡುಕಬೇಕು. ಈ ಬರಹವೂ ಆ ತರಹದ ಒಂದು ಹುಡುಕಾಟದ ಪ್ರಯತ್ನವಿರಬಹುದು.

ನನ್ನ ಅಮೆರಿಕನ್ ಬದುಕಿನ ಹಲವು ಅನುಭವಗಳು ನನ್ನ ಭಾರತೀಯ ಪರಂಪರೆ, ನಂಬಿಕೆಗಳನ್ನು ಇನ್ನಷ್ಟು ಅರಿಯಲು, ಆದರಿಸಲು ನೆರವಾಗಿರುವಂತೆಯೇ ನನ್ನ ಭಾರತೀಯ ಪರಂಪರೆ ಇಲ್ಲಿನ ನನ್ನ ನೋಟಗಳನ್ನು ಇನ್ನಷ್ಟು ಸ್ಪಷ್ಟವಾಗಿಸಿದೆ. ಒಂದರ ಮೂಲಕ ಒಂದನ್ನು ಅರಿಯುವ ಆದರಿಸುವ ಪ್ರಕ್ರಿಯೆಯಲ್ಲಿ ಭಾರತದ ನನ್ನ ನಿನ್ನೆಗಳ ನೆನಪೂ ಅಮೆರಿಕದ ಇಂದಿನ ಬದುಕಿನ ಅನುಭವವೂ ನೆರವಾಗಿವೆ. ಇವೆರಡೂ ಸೇರಿ ಸದಾಕಾಲವೂ ನಾನಾಗಿಯೇ ಉಳಿಯ ಬಯಸುವ ನನ್ನ ನಂಬಿಕೆಗಳನ್ನೂ ಪೋಷಿಸಿವೆ. ನನ್ನ ಅಮೆರಿಕನ್ ಬದುಕಿನ ಅನುಭವವೊಂದು ಹೀಗೆ ನನ್ನ ನಂಬಿಕೆಯಿಂದಲೇ ಮೂಡಿದ್ದ ಆದರೆ ಆಚರಿಸಲು ಅಷ್ಟು ಸುಲಭವಿರದಿದ್ದ ನನ್ನದೇ ನಿರ್ಧಾರವೊಂದರ ಭಾರವನ್ನು ಹಗುರವಾಗಿಸಿದ್ದನ್ನು ಈಗ ನಿಮ್ಮೊಡನೆ ಹಂಚಿಕೊಳ್ಳುವ ಆಸೆ.

ಬೇರು ಸೂರು

ಬದುಕಿನ ಪಯಣದಲ್ಲಿ ನಾವೆಲ್ಲ ಯಾತ್ರಿಕರೇ. ಈ ಪಯಣಕ್ಕೆ ಖಚಿತವಾದ ಒಂದು ಗುರಿ, ದಿಕ್ಕು, ದೆಸೆ ಎಲ್ಲವೂ ಇರುವುದೂ ಬಿಡುವುದೂ ಸಂದರ್ಭಗಳನ್ನು ಅವಲಂಬಿಸಿರುತ್ತದೆ. ಭಾರತದಲ್ಲಿ ನಾನು ಹುಟ್ಟಿ ಬೆಳೆದಿದ್ದ ಪರಿಸರ ನಾನು ಹೀಗೇ ಇರಬೇಕೆಂದು ನಿರ್ಧರಿಸಿ ನನಗೆ ಪೂರ್ವನಿರ್ಧಾರಿತ ವಿದ್ಯೆ ಮತ್ತು ಉದ್ಯೋಗವನ್ನ ಒದಗಿಸಿತ್ತು. ನನ್ನ ಮತ್ತು ನನ್ನ ಮೇಲೆ ಆರೋಪಿಸಲಾದ ಈ ನನ್ನತನದ ನಡುವೆ ಇದ್ದ ನಿರಂತರ ಘರ್ಷಣೆಯಲ್ಲೇ ನನ್ನ ಬಹುಪಾಲು ಸಮಯ ಉರುಳುತ್ತಿತ್ತು. ಆದರೆ ನಾನು ನಾನೇ ಆಗಿ ಉಳಿಯಲು ಈ ಘರ್ಷಣೆ ತುಂಬಾ ಮುಖ್ಯವಾಗಿತ್ತು. ಈ ಘರ್ಷಣೆಗೆ ಕಾರಣ ನಾನು ಭಾರತೀಯಳೆಂಬುದು, ಹೆಣ್ಣೆಂಬುದು, ಮಧ್ಯಮ ವರ್ಗಕ್ಕೆ ಸೇರಿದವಳೆಂಬುದು ಅಲ್ಲ. ಇದು ಕೇವಲ ನಾನಿದ್ದ ಪರಿಸರ ನನಗೆ ಒದಗಿಸಿದ್ದ ಮಿತಿ ಅಷ್ಟೇ. ಆದರೆ ಇದೇ ಪರಿಸರದಲ್ಲಿ ನನಗೆ ಇದು ನನ್ನದೆನ್ನುವ ಬೆಚ್ಚನೆ ಭಾವವಿತ್ತು. ಆ ಬೆಚ್ಚನೆಯ ಭಾವವನ್ನು ಉಳಿಸಿಕೊಂಡೇ ಆ ಪರಿಸರ ಒದಗಿಸಿದ್ದ ಮಿತಿಯನ್ನು ಮೀರುವ ಹಂಬಲವಿತ್ತು. ನನಗೆ ಅನ್ನಿಸಿದ್ದನ್ನು ಮಾಡುತ್ತಾ ಖುಷಿಯಾಗಿ ಇರುವುದು, ನನಗೇ ನನ್ನ ಸಾಧ್ಯತೆಗಳ ಅರಿವಾಗಿಸುವುದು ನನ್ನ ಕನಸಾಗಿತ್ತು.

ಭಾರತದಲ್ಲಿದ್ದಾಗ ಶಿಕ್ಷಕಿಯಾಗಿಯೂ ಆಕಾಶವಾಣಿಯ ಅರೆಕಾಲಿಕ ಉದ್ಘೋಷಕಿಯಾಗಿಯೂ ಕೆಲವು ಕಾಲ ಕೆಲಸ ಮಾಡಿದ್ದ ನಾನು, ನನ್ನ ಗಂಡನ ಕೆಲಸದ ನಿಮಿತ್ತ ಅವನೊಂದಿಗೆ ಅಮೆರಿಕೆಗೆ ಬಂದ ಮೇಲೆ ಇಲ್ಲಿ ಮಾಡುವುದೇನು ಎಂಬ ಪ್ರಶ್ನೆ ಎದುರಾಯಿತು. ಕೇವಲ ಒಂದೆರಡು ವರ್ಷಗಳ ಮಟ್ಟಿಗೆ ಇಲ್ಲಿರುವುದಷ್ಟೇ ಎಂದುಕೊಂಡೇ ಇಲ್ಲಿಗೆ ಬಂದಿದ್ದ ಕಾರಣ ಆ ಒಂದು ಎರಡು ವರ್ಷಗಳ ಅಲ್ಪ ಕಾಲಾವಧಿಯಲ್ಲಿ ನನ್ನ ಆಸಕ್ತಿಯ ಕೆಲವು ವಿಷಯಗಳನ್ನು ಅಭ್ಯಾಸ ಮಾಡುತ್ತಾ ಆನಂದವಾಗಿರುವುದು ಅಂದುಕೊಂಡು ಒಂದಿಷ್ಟು ತರಗತಿಗಳಿಗೆ ಸೇರಿದ್ದಾಯ್ತು. ಕ್ಯಾರಿಕೇಚರ್, ಆಯಿಲ್ ಪೈಂಟಿಂಗ್, ಪಿಯಾನೋ, ಗಿಟಾರ್, ಹಿಂದೂಸ್ತಾನಿ ಸಂಗೀತ, ವೆಬ್ ಡಿಸೈನಿಂಗ್ ಅಂತೆಲ್ಲ ಒಂದು ಮುಗಿದ ಹಾಗೆ ಇನ್ನೊಂದು ಕಲಿಯುತ್ತಾ ಹೋದಂತೆ ನಾವು ಈ ದೇಶದಲ್ಲಿ ಇರುವ ಅವಧಿಯೂ ವಿಸ್ತಾರವಾಗುತ್ತ ಕಡೆಗೆ ಇನ್ನು ಇಲ್ಲಿಯೇ ಉಳಿಯಬೇಕಾಗಬಹುದು ಎನಿಸುವ ಹೊತ್ತಿಗೆ ಮಗನೂ ನಮ್ಮ ಜೊತೆಗೆ ಬಂದಿದ್ದಾಗಿತ್ತು. ಅಷ್ಟರಲ್ಲಾಗಲೇ ನನ್ನದೇ ಒಂದು ಪುಟ್ಟ ಸಂಗೀತ ಶಾಲೆಯನ್ನು ನಡೆಸುತ್ತಿದ್ದೆ. ಇದರ ಜೊತೆಗೆ ಚಿಕ್ಕಂದಿನಿಂದಲೂ ತೀರ ಖಾಸಗಿ ಹವ್ಯಾಸವಾಗಿ, ಆಪ್ತವಾಗಿ ನನ್ನ ಜೊತೆಗೇ ಇದ್ದ ನನ್ನ ಬರವಣಿಗೆಯನ್ನು ಇನ್ನೂ ಕೆಲವು ಮಂದಿಯ ಜೊತೆಗೆ ಹಂಚಿಕೊಳ್ಳಬಹುದಾದ ಅವಕಾಶಗಳು ಒದಗಿ ಬಂದಿತ್ತು. ಉಳಿದಂತೆ ನನ್ನ ಹತ್ತು ಹಲವು ಆಸಕ್ತಿಗಳಲ್ಲಿ ಬಿಡುವಿಲ್ಲದೆ ತೊಡಗಿಸಿಕೊಂಡು ಖುಷಿಯಾಗಿದ್ದೆ. ಆದರೆ ಪೂರ್ಣಪ್ರಮಾಣದ ಉದ್ಯೋಗ ಮಾಡುತ್ತಿರಲಿಲ್ಲ.

ಇಂಥ ಸಂದರ್ಭದಲ್ಲಿ 'ಹೂ ಬಳ್ಳಿಯ ಹಿಗ್ಗೆ, ಆನಂದದ ಬುಗ್ಗೆ' ಅಂತೆಲ್ಲ

ಹಾಡಿಕೊಂಡು ನಾನೇ ನನ್ನ ಮಗುವನ್ನು ಬೇಕಾದಾಗಲೆಲ್ಲ ತಟ್ಟಿ ಮಲಗಿಸುವ, ಮಗುವಿನ ಮನೆಯ ಎಲ್ಲಾ ಅಗತ್ಯಕ್ಕೂ ಥಟ್ಟನೆ ಒದಗಿಬರುವ (ಈ ಕಾಲಕ್ಕೆ ಲಗ್ಷುರಿ ಎನಿಸಿರುವ), ನಿರಾಳವು ನನಗಿದ್ದು ಅದನ್ನು ನಾನು ಇನ್ನಿಲ್ಲದಷ್ಟು ತನ್ಮಯಳಾಗಿ ಅನುಭವಿಸುತ್ತಿದ್ದಾಗಲೂ ಹಲವು ಬಾರಿ 'ಮುಂದೇನು?' ಎಂಬ ಪ್ರಶ್ನೆ ಧುತ್ತೆಂದು ಎದುರಾಗುತ್ತಿತ್ತು. ಮಗುವಿಗೆ ಐದು ವರ್ಷವಾಗುವ ತನಕವಂತೂ ನಾನು ಪೂರ್ಣ ಪ್ರಮಾಣದ ಅಮ್ಮನಾಗೇ ಇರಬೇಕು ಎಂದು ನಿರ್ಧರಿಸಿಯೇ ಅಮ್ಮನಾಗಿದ್ದರಿಂದ ಈ ಕಾಲದ ನನ್ನ ತಲೆಮಾರಿನ ಬಹುಪಾಲು ಅಮ್ಮ ಅಪ್ಪಂದಿರ ಇಬ್ಬಂದಿತನದ ಸಂಕಟ, ಬೇಗುದಿಗಳಿಂದ ನಾನು ಹೊರಗುಳಿದಿದ್ದೆ. ಆದರೂ 'ಬರೀ ಅಮ್ಮನಾಗಿಬಿಟ್ಟೆ' ಹಳಹಳಿಕೆಯೊಂದು ಆಗಾಗ ನನ್ನೊಳಗೆ ಸುಳಿಯುತ್ತಿತ್ತು. ಕಳೆದ ಎರಡು ಮೂರು ದಶಕಗಳಿಂದ ಈಚೆಗೆ ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಾದ ಕ್ರಾಂತಿಯಿಂದ ಉದ್ಯೋಗಾವಕಾಶಗಳ ದೆಸೆಯಿಂದ ನನ್ನ ತಲೆಮಾರಿನ ಹೆಣ್ಣು ಗಂಡುಗಳೆಲ್ಲ ಮೊಟ್ಟ ಮೊದಲ ಬಾರಿಗೆ ತಮ್ಮ ದುಡಿತ, ವರಮಾನ ಇತ್ಯಾದಿಗಳ ಸಮಾನ ಅವಕಾಶಗಳ ಲಾಭ ಪಡೆದು 'ನಾವು ಸ್ವತಂತ್ರರು, ಸಮಾನರು' ಎಂದೆಲ್ಲಾ ಅಂದುಕೊಳ್ಳುತ್ತಾ ತಮ್ಮ ಕ್ಷೇತ್ರಗಳಲ್ಲಿ ಮುಂದುವರೆಯುತ್ತಿರುವಾಗ ಈಗಾಗಲೇ ನನ್ನ ಸ್ವಾತಂತ್ರ್ಯಕ್ಕಾಗಲೀ ಸಮಾನತೆಗಾಗಲಿ ಯಾವ ಆತಂಕವೂ ಇಲ್ಲದ ಪರಿಸ್ಥಿತಿಯಲ್ಲಿ ನಾನಿದ್ದಾಗಲೂ ನಾನು ಓದಿದ ಓದು, ಮಾಡಬಹುದಾಗಿದ್ದ ಉದ್ಯೋಗ ಎಲ್ಲವನ್ನೂ ಬದಿಗಿಟ್ಟು ಈಗ ಮಾಡುತ್ತಿರುವುದಾದರೂ ಏನು ಎಂಬ ಪ್ರಶ್ನೆ ಆಗಾಗ ನನ್ನನ್ನು ಕಾಡುತ್ತಿತ್ತು. ಇಂಥ ದಿನಗಳಲ್ಲೊಮ್ಮೆ ನನ್ನ ನಿರ್ಧಾರ ಕೇವಲ ನನ್ನದಷ್ಟೇ ಆಗಿರುವ ಸಂತೋಷವನ್ನು ಯಾವ ಹಳಹಳಿಯೂ ಇಲ್ಲದೆ ಅನುಭವಿಸಲು ನೆರವಾಗುವ ಸಂಗತಿಯೊಂದು ನಡೆಯಿತು.

ಆಗಿನ್ನೂ ಒಂಬತ್ತು ತಿಂಗಳು ತುಂಬಿದ್ದ ನನ್ನ ಮಗುವನ್ನು ಆಗ ನಾನಿದ್ದ ಬಾಸ್ಟನ್ ಸಮೀಪದ ಊರಿನ ಲೈಬ್ರರಿಯ 'ಶಿಶು ಕಥಾ ಸಮಯ'ಕ್ಕೆ (ಬೇಬೀಸ್ ಸ್ಟೋರಿ ಟೈಮ್‌ಗೆ) ಕರೆದುಕೊಂಡು ಹೋಗುತ್ತಿದ್ದೆ. ನನ್ನಂತೆಯೇ ಅಲ್ಲಿ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದವರಲ್ಲಿ ಹೆಚ್ಚಿನವರು ಅಮ್ಮಂದಿರು. ಉಳಿದಂತೆ ಮಕ್ಕಳ ಅಪ್ಪ, ತಾತ ಅಥವಾ ಅಜ್ಜಿಯರೂ ಕೂಡ ಈ ಗುಂಪಿನಲ್ಲಿದ್ದರು. ಹಾಗೆ ಪರಿಚಿತರಾದ ನಮ್ಮ ಗುಂಪಿನಲ್ಲಿದ್ದ ಒಂದಿಬ್ಬರು ಅಪ್ಪಂದಿರು ತಮ್ಮನ್ನು ತಾವು 'ಸ್ಟೇ ಅಟ್ ಹೋಂ ಅಪ್ಪಂದಿರು' ಎಂದು ಪರಿಚಯಿಸಿಕೊಂಡಿದ್ದರು. ಅಮೆರಿಕಾದಲ್ಲಿ ಹೀಗೆ 'ಸ್ಟೇ ಅಟ್ ಹೋಮ್ ಅಪ್ಪಂದಿರು', 'ಹೌಸ್ ಹಸ್ಬೆಂಡ್'ಗಳು ಇರುವುದುಂಟು. ಮನೆಯ ದೇಖರೇಖಿಯನ್ನು, ಮಕ್ಕಳ ಲಾಲನೆ ಪಾಲನೆಯನ್ನು ಅಮ್ಮನೋ ಅಪ್ಪನೋ ಇಬ್ಬರಲ್ಲೊಬ್ಬರು ನಿಭಾಯಿಸಲು ನಿರ್ಧರಿಸಿ, ಮಾಡುತ್ತಿದ್ದ ಉದ್ಯೋಗ ಬಿಟ್ಟು ಮನೆಯಲ್ಲೇ ಉಳಿದು ನೆರವಾಗುವ ಅಮ್ಮ, ಅಪ್ಪಂದಿರ ಸಂಖ್ಯೆ ಅಮೆರಿಕದಲ್ಲಿ ಗಣನೀಯವಾಗಿ ಹೆಚ್ಚುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಹೀಗೆ ಮನೆಯಲ್ಲೇ ಉಳಿದು ಮಕ್ಕಳನ್ನು ನೋಡಿಕೊಳ್ಳುವ ಅಪ್ಪಂದಿರ ಸಂಖ್ಯೆ ಮೊದಲಿಗಿಂತ ದುಪ್ಪಟ್ಟಾಗಿದೆ. ಪುಟ್ಟ ಮಕ್ಕಳಿಗಾಗಿ 'ಮಮ್ಮಿ ಮತ್ತು ನಾನು' ಚಟುವಟಿಕೆಗಳ ಜೊತೆಗೇ

ಈಗೀಗ 'ಡ್ಯಾಡಿ ಮತ್ತು ನಾನು' ಚಟುವಟಿಕೆಗಳೂ ಹುಟ್ಟಿಕೊಂಡಿವೆ. ಹಾಗೆ ಪರಿಚಯವಾದ 'ಮನೆಯಲ್ಲೇ ಉಳಿದ ಅಪ್ಪ' ಕ್ರಿಸ್, ತಾನು ಮಾಡುತ್ತಿದ್ದ ಲಾಯರ್ ಕೆಲಸ ಬಿಟ್ಟು ಈಗ ಪೂರ್ಣಾವಧಿ ಅಪ್ಪನಾಗಿ ಮಗಳೊಂದಿಗೆ ಮನೆಯಲ್ಲೇ ಉಳಿದಿರುವ ಲಾಭವನ್ನು ಹೀಗೊಂದು ದಿನ ಲೈಬ್ರರಿಯಲ್ಲಿ ನಮ್ಮೊಂದಿಗೆ ಹಂಚಿಕೊಂಡರು.

ಕ್ರಿಸ್‌ಗೂ ಕೂಡ ನನ್ನಂತದೇ ಹಳಹಳಿಕೆ ಇರಬಹುದೆ ಎಂಬ ನನ್ನ ಅನುಮಾನಕ್ಕೆ ಉತ್ತರಿಸುತ್ತಾ 'ಈ ಹೊತ್ತು ನನ್ನ ಕ್ಲೈಂಟ್‌ಗಳ ತರಲೆ ತಾಪತ್ರಯದಲ್ಲಿ ಭಾಗಿಯಾಗಿ ಊಟ ನಿದ್ದೆ ಮರೆತು ದಿನಕ್ಕೆ 8–9ಗಂಟೆ ಕಾಲ ದುಡಿದು ಹೈರಾಣಾಗಿ ನನ್ನವರೊಂದಿಗೆ ಸರಿಯಾಗಿ ಮಾತನಾಡಲೂ ಸಮಯ ಹುಡುಕಬೇಕಾಗುವ ಪರಿಸ್ಥಿತಿಯ ಜೊತೆಗೆ ನನ್ನ ಮಗುವಿನ ಲಾಲನೆ ಪಾಲನೆಗೆ ಒದಗಿರುವ ಈ ಸಮಯವನ್ನು ಯಾವತ್ತೂ ಹೋಲಿಸಲು ಸಾಧ್ಯವೇ ಇಲ್ಲ'ವೆಂದರು. ತಾನೂ ತನ್ನ ಹೆಂಡತಿಯೂ ಕುಳಿತು ಚರ್ಚಿಸಿ ಇಬ್ಬರಲ್ಲಿ ಯಾರು ಉದ್ಯೋಗ ಮುಂದುವರೆಸಿದರೆ ಒಳ್ಳೆಯದು, ಇನ್ಯಾರು ಮನೆಯಲ್ಲಿ ಉಳಿದು ಕೊನೆಯೇ ಇಲ್ಲದ ಮನೆಯ, ಮಕ್ಕಳ ಅಗತ್ಯಗಳನ್ನು ಪೂರೈಸುವುದೊಳ್ಳೆಯದು ಎಂದು ನಿರ್ಧರಿಸಿದ್ದನ್ನು ತಿಳಿಸಿದರು. ಆದರೂ ಅವರ ಈ ನಿರ್ಧಾರಕ್ಕೆ ಉಳಿದವರಿಂದ ಬರುವ 'ವಾಹ್, ಎಷ್ಟು ಒಳ್ಳೆಯ ಕೆಲಸ ಮಾಡ್ತಿದ್ದೀರಿ' ಎನ್ನುವ ಮೆಚ್ಚುಗೆಯನ್ನು ಆ ಹೇಳಿಕೆಯ ಕುರಿತು ಕೊಂಚವೂ ಅನುಮಾನವಿಲ್ಲದೆ ಅನುಭವಿಸುವುದು ಹೇಗೆ ಕಷ್ಟವೆನಿಸುತ್ತದೆ ಎನ್ನುವುದನ್ನೂ ತಿಳಿಸಿದರು. ಆ ಕ್ಷಣ ಮನೆಯಲ್ಲೇ ಪೂರ್ಣಾವಧಿ ಅಮ್ಮನಾಗಿ ಉಳಿದು ಉಳಿದಂತೆ ನನ್ನ ಅಂಕೆಯಲ್ಲೇ ಉಳಿಯುವ ಪಾರ್ಟ್ ಟೈಮ್ ಕೆಲಸದಲ್ಲೂ ಉಳಿದ ಚಟುವಟಿಕೆಗಳಲ್ಲೂ ನನ್ನನ್ನು ತೊಡಗಿಸಿಕೊಳ್ಳುವ ನನ್ನ ನಿರ್ಧಾರವನ್ನು ಮತ್ತು ಅದು ನನಗೊದಗಿಸಿದ ಅಪೂರ್ವ ಅವಕಾಶವನ್ನೂ ಮನಃಪೂರ್ತಿ ಒಪ್ಪಿಕೊಂಡು ಅನುಭವಿಸಲು ನನಗೆ ಸಾಧ್ಯವಾಯಿತು. 'ನನ್ನಿಷ್ಟದ' ಕೆಲಸದಲ್ಲಿ ಯಾವಾಗಲೂ ನನ್ನನ್ನು ತೊಡಗಿಸಿಕೊಳ್ಳುವ ನನ್ನ ಯಾವತ್ತಿನ ನಿರ್ಧಾರವನ್ನು ಯಾವ ಅನುಮಾನವೂ ಇಲ್ಲದೆ ಗೌರವಿಸುವುದು ಸಾಧ್ಯವಾಗಲು ಹೀಗೆ ಒಬ್ಬ ಅಮೆರಿಕನ್ ಅಪ್ಪ ನನಗೆ ನೆರವಾಗಿದ್ದರು.

ನಮಗೇ ಸದಾ ಗೊತ್ತಿರುವ ಸತ್ಯವೊಂದು ಹೀಗೆ ಯಾವುದೋ ಒಂದು ಘಳಿಗೆ ಇನ್ಯಾವುದೋ ಸಂದರ್ಭದ ಅನುಕೂಲದಲ್ಲಿ ಸಾಕ್ಷಾತ್ಕಾರವಾಗುವುದು ಒಂದು ಸೋಜಿಗ. ಇಲ್ಲಿ ನನಗಾದ ಸೋಜಿಗಕ್ಕೆ ಕ್ರಿಸ್ ಗಂಡು ಎನ್ನುವುದೂ ಆತ ಅಮೆರಿಕನ್ ಎನ್ನುವುದೂ ಕಾರಣವಾಗಿರಬಹುದು. ಯಾಕೆಂದರೆ ಭಾರತದಲ್ಲಾಗಲೀ ಅಮೆರಿಕದಲ್ಲಾಗಲೀ ಗಂಡು ಹೀಗೇ ಇರಬೇಕು, ಹೆಣ್ಣು ಹೀಗೇ ಇರಬೇಕು ಎಂದೆಲ್ಲ ಅಂದಂದಿನ ಸಾಮಾಜಿಕ ಸಂದರ್ಭಗಳು ಆರೋಪಿಸಿದ ಪೂರ್ವ ನಿರ್ಧಾರಿತ ಪಾತ್ರಗಳಿವೆ. ಕಾಲಕ್ಕೆ ತಕ್ಕಂತೆ ಈ ಪಾತ್ರಗಳಲ್ಲಿ ಬದಲಾವಣೆಗಳಾಗುತ್ತಿದ್ದರೂ ಕಾಲ ಒದಗಿಸುವ ಸಾಧ್ಯತೆಗಳೇ ಮತ್ಯಾವುದೋ ಬಗೆಯ ನಿರ್ಬಂಧವೂ ಮಿತಿಯೂ ಆಗಿ ಬಿಡುವ ಚೋದ್ಯವಿದೆ. ನನ್ನ ಅಜ್ಜಿಯ ಕಾಲದಲ್ಲಿ, ಆಕೆ ಇದ್ದ ಪರಿಸರದಲ್ಲಿ ಹೆಂಗಸಾಗಿ ಅವಳು ಹೊರಗೆ ಹೋಗಿ

ದುಡಿಯುವುದು ಎಷ್ಟು ದೊಡ್ಡ ವಿಷಯವಾಗಿತ್ತೋ ಅಷ್ಟೇ ದೊಡ್ಡದು ಈಗ ಕ್ರಿಸ್ ಎಂಬ ಅಮೆರಿಕನ್ ಅಪ್ಪ ಮನೆಯಲ್ಲೇ ಉಳಿದು ಮಕ್ಕಳ ನಿಗಾ ವಹಿಸುವ ನಿರ್ಧಾರ ತೆಗೆದುಕೊಳ್ಳುವುದರಲ್ಲಿದೆ. ಹಾಗೆ ನಾವು ತೆಗೆದುಕೊಳ್ಳುವ ನಿರ್ಧಾರಗಳು ಸಾಧುವೋ ಅಸಾಧುವೋ ಎನ್ನುವುದನ್ನು ನಿರ್ಧರಿಸುವ ಸ್ವಾತಂತ್ರ್ಯ ಕೇವಲ ನಮಗಷ್ಟೇ ನಾವು ಕೊಟ್ಟುಕೊಂಡಾಗ ಮಾತ್ರ ಎಲ್ಲಕ್ಕಿಂತ ದೊಡ್ಡದಾದ ಬದುಕಿನ ಸಣ್ಣಪುಟ್ಟ ಸಂತೋಷಗಳನ್ನು ಮನಃಪೂರ್ತಿಯಾಗಿ ಅನುಭವಿಸುವುದು ಸಾಧ್ಯ. ನನ್ನ ಸಾಧ್ಯತೆಗಳ ಕನಸುಗಳನ್ನು ಚಿವುಟುತ್ತಲೇ ಇದ್ದ ಬಾಲ್ಯ ಮತ್ತು ಹರೆಯದ ನನ್ನ ಅನುಭವಗಳು ಮತ್ತು ಅದಕ್ಕೆ ಪ್ರತಿರೋಧ ಒಡ್ಡುತ್ತಲೇ ನನ್ನ ಕನಸುಗಳನ್ನು ಜೋಪಾನವಾಗಿಟ್ಟುಕೊಂಡ ನನಗೆ ಆ ಕನಸುಗಳ ಕಡೆಗೆ ಯಾವ ಪ್ರತಿರೋಧವೂ ಇಲ್ಲದೆ ಸುಲಭವಾಗಿ ನಡೆದು ಬಿಡಬಹುದಾದ ದಿನವೊಂದು ಎದುರಾದಾಗ ನಿನ್ನೆಯ ಕನಸು ಮತ್ತು ಇಂದಿನ ಅತ್ಯಗತ್ಯವನ್ನು ನನ್ನದೇ ತಕ್ಕಡಿಯಲ್ಲಿಟ್ಟು ಅಳೆದು ನೋಡಿ ಯಾವುದು ಹೆಚ್ಚೆಂದು ನಿರ್ಧರಿಸಬೇಕಾಗಿತ್ತು. 'ಆರ್ ಯೂ ವರ್ಕಿಂಗ್?' ಎಂಬ ಪ್ರಶ್ನೆಗೆ ಎಂದಿಗೂ ಮುಗಿಯದ ನನ್ನ ಎಲ್ಲಾ ಕೆಲಸಗಳ ಜೊತೆಗೂ 'ನೋ, ಐಯಾಮ್ ನಾಟ್' ಎಂಬ ಒಂದು ಸರಳ ಉತ್ತರವನ್ನು ಯಾವ ಹಿಂಜರಿಕೆಯೂ ಇಲ್ಲದೆ ಕೊಟ್ಟು ಬಿಡುವ ನಿರಾಳತೆಯನ್ನು ಸಾಧಿಸಬೇಕಿತ್ತು.

ಈಗ ನನ್ನ ಮಗನಿಗೆ ಐದು ತುಂಬಿ ಅದರ ಮೇಲೆ ಎರಡು ವರ್ಷಗಳು ಉರುಳಿರುವಾಗಲೂ ನನ್ನದೇ ಕಾರಣಗಳಿಂದಾಗಿ ಸಂತೋಷದಿಂದ 'ಸ್ಟೇ ಅಟ್ ಹೋಮ್ ಮಾಮ್' ಆಗಿಯೇ ಉಳಿದಿರುವ ನನಗೆ ವರ್ಷಗಳ ಹಿಂದೆ ಇದ್ದ ಈ ಕುರಿತ ಅಳುಕು ಉಳಿದಿಲ್ಲ. ಮೊದಲಿಗಿಂತ ಕೊಂಚ ದೊಡ್ಡದಾಗಿ ಬೆಳೆದ ನನ್ನದೇ ಸಂಗೀತ ಶಾಲೆ, ಫ್ರೀಲ್ಯಾನ್ಸರ್ ಎಂಬ ಹೆಸರು ತಗುಲಿಸಿಕೊಂಡ ನನ್ನ ಬರವಣಿಗೆಯ, ಚಿತ್ರ ಬಿಡಿಸುವ ಹವ್ಯಾಸ, ಸಾಧ್ಯವಿದ್ದಾಗ ಸಾಧ್ಯವಾದಷ್ಟು ಸಮಯಕ್ಕೆ ಮಾಡುವ ವಾಲಂಟರಿ ಕೆಲಸಗಳು ಇವೆಲ್ಲದರ ಜೊತೆಗೆ ನಿರಾಳವಾಗಿ 'ಐ ಆಮ್ ನಾಟ್ ವರ್ಕಿಂಗ್' ಎಂದು ಹೇಳಿಕೊಳ್ಳಲು ಸಾಧ್ಯವಾಗಿದೆ ಮತ್ತು ನಿಷ್ಕಾಮ ಕರ್ಮದ ಸಾಧನೆಗೆ ಇದೂ ಹಾದಿ ತೋರಿಸಬಹುದು ಎಂದು ಉಳಿದವರೊಂದಿಗೆ ಈ ಸ್ಥಿತಿಯ ಕುರಿತು ತಮಾಷೆ ಮಾಡಿಕೊಳ್ಳುವುದಕ್ಕೂ ಸಾಧ್ಯವಾಗಿದೆ.

ವ್ಯಕ್ತಿ ಸ್ವಾತಂತ್ರ್ಯವೇ ಪರಮೋಚ್ಚ ಆದರ್ಶವೆಂಬ ನಂಬಿಕೆಯನ್ನು ಆಚರಿಸುವ ಅಮೆರಿಕದ ಹಂಬಲವೂ ವ್ಯಕ್ತಿತ್ವ ನಿರಸನದ ಸಾಧನೆಯೇ ಆದರ್ಶವೆನ್ನುವ ತತ್ವವನ್ನು ಕೊಟ್ಟ ಭಾರತದ ನಂಬಿಕೆಯೂ ನನಗೆ ಯಾವಾಗಲೂ ಒಂದಕ್ಕೊಂದು ಪೂರಕವೆನಿಸಿದೆ. ವ್ಯಕ್ತಿತ್ವ ನಿರಸನವಾಗಲು ಅತಿ ಅಗತ್ಯವಾಗಿ ಇರಬೇಕಾದ್ದು ವಿಕಾಸಗೊಂಡ ಒಂದು ಸ್ವತಂತ್ರ ವ್ಯಕ್ತಿತ್ವ ಹಾಗೆ ವ್ಯಕ್ತಿತ್ವ ವಿಕಾಸವಾಗಲು ಸಾಕಷ್ಟು ಅವಕಾಶ ಸಿಗುವುದು ವ್ಯಕ್ತಿಸ್ವಾತಂತ್ರ್ಯವಿರುವ ಪರಿಸರದಲ್ಲಿ. ಈ ಎರಡೂ ದೇಶಗಳ ಈ ಸುಂದರ ತತ್ವಗಳೂ

ಆದರ್ಶಗಳೂ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗುವುದೂ ಈ ಎರಡೂ ತತ್ವಕ್ಕೆ ಸಾಕಷ್ಟು ಮನ್ನಣೆ ಮತ್ತು ಅವಕಾಶ ಸಿಕ್ಕಾಗಲೇ. ನಮ್ಮ ನಮ್ಮ ನಿರ್ಧಾರಗಳನ್ನು ನಾವೇ ಕೈಗೊಳ್ಳುವ ಮತ್ತು ಅದು ಅನಿವಾರ್ಯವಾಗಿ ಬದಲಾಗುವ ಅಗತ್ಯ ಬಿದ್ದಾಗ ಅದನ್ನೂ ಸಾವಕಾಶವಾಗಿ ಅರಿತು ಆದರಿಸಿ ಅನುಭವಿಸುವ ಅವಕಾಶ ಮತ್ತು ಸಾಧ್ಯತೆಗಳು ಈಗ ನನ್ನ ಈ ಎರಡೂ ದೇಶಗಳಲ್ಲೂ ಹೆಚ್ಚಾಗುತ್ತಿದೆ ಎನ್ನುವುದು ನನ್ನ ಸದ್ಯದ ಸಂತೋಷಗಳಲ್ಲೊಂದು.

ಅಮೆರಿಕೆಯಲ್ಲಿ ಕನ್ನಡ ಪಾಠ



– ಫಣೀಂದ್ರ ಮಂಕಾಲೆ

ಅಮೇರಿಕೆಯಲ್ಲಿ ಹುಟ್ಟಿ ಬೆಳೆಯುತ್ತಿರುವ ಮಕ್ಕಳಿಗೆ ಕನ್ನಡ ಕಲಿಸುವ ಅವಶ್ಯಕತೆ ಇದೆಯೇ? ಪ್ರಶ್ನೆ ಸಹಜ. ಇಲ್ಲಿನ ಜನ ಕನ್ನಡ ಭಾಷೆ ಮಾತನಾಡುವುದಿಲ್ಲ, ಕನ್ನಡ ಕಲಿಯುವುದರಿಂದ ಕೆಲಸ ಸಿಗುವುದಿಲ್ಲ, ಇಲ್ಲಿನ ಶಾಲೆ, ಕಾಲೇಜುಗಳ ಪ್ರವೇಶಕ್ಕೆ ಪ್ರಯೋಜನವಿಲ್ಲ, ಆರ್ಥಿಕವಾಗಿ ಕನ್ನಡದಿಂದ ಯಾವುದೇ ಅನುಕೂಲಗಳಿಲ್ಲ. ಮತ್ತೆ ಏಕೆ ಈ ದುಸ್ಸಾಹಸ? ಇಲ್ಲಿ ಮಕ್ಕಳನ್ನು ಬೆಳೆಸುವುದೇ ಕಷ್ಟ, ಅವರ ವಿವಿಧ ಮ್ಯಾತ್ ಕ್ಲಬ್, ಕೂಮಾನ್, ವಿಜ್ಞಾನ ಓಲಂಪಿಯಾಡ್, ಬ್ಯಾಲೆ, ಪಿಯಾನೋ, ಬ್ಯಾಂಡ್, ಲೆಗೋ ಲೀಗ್ ಚಟುವಟಿಕೆಗಳು, ಬೇಸ್ ಬಾಲ್, ಬ್ಯಾಸ್ಕೆಟ್ ಬಾಲ್, ಸಾಕರ್, ಕರಾಟೆ ಆಟಪಾಠಗಳು, ಇವುಗಳ ಮಧ್ಯದಲ್ಲಿ ಕನ್ನಡಕ್ಕೆಲ್ಲಿ ಸಮಯ? ಇನ್ನು ಪ್ರೌಢ ಶಾಲೆ ಮಕ್ಕಳಿಗಂತೂ ಏಪಿ ಕೋರ್ಸ್‌ಗಳು ಮತ್ತು ಎಸ್.ಎ.ಟಿ. ನಡುವೆ ಕನ್ನಡದ ಉಸಿರೆಳೆಯಲಿಕ್ಕು ಸಮಯ ಸಾಲದು. ವಾಸ್ತವ ಹೀಗಿದ್ದರೂ ಸಹ, ಅಮೇರಿಕೆಯಲ್ಲಿ ಸುಮಾರು ಕನ್ನಡಿಗರು ಮಕ್ಕಳಿಗೆ ಕನ್ನಡ ಕಲಿಸುವ ಸಾಹಸ ಮಾಡಿದ್ದಾರೆ, ಈಗಲೂ ಮಾಡುತ್ತಲಿದ್ದಾರೆ. ಇದು ಪರಮಾಶ್ಚರ್ಯವೇ ಸರಿ. ಇದಕ್ಕೆ ಹಲವಾರು ಕಾರಣಗಳಿವೆ.

ಮೊದಲನೆಯದಾಗಿ, ಅಜ್ಜ ಅಜ್ಜಿಯರ ಅಕ್ಕರೆ, ಪ್ರೀತಿ, ಮೊಮ್ಮಕ್ಕಳಿಗೆ ಅವರ ಮೇಲಿರುವ ವಿಶ್ವಾಸ, ಇಲ್ಲಿನ ಮಕ್ಕಳಿಗೆ ಕನ್ನಡ ಕಲಿಯುವಂತೆ ಪ್ರೇರೇಪಿಸುತ್ತದೆ. ಮಕ್ಕಳು ಭಾರತದಲ್ಲಿರುವ ಅಜ್ಜ, ಅಜ್ಜಿಯ ಜೊತೆ ದೂರವಾಣಿಯಲ್ಲಿ ಕನ್ನಡದಲ್ಲಿ ಮಾತನಾಡಲು ಪ್ರಯತ್ನಿಸುತ್ತಾರೆ. ತಂದೆ–ತಾಯಿಯರ ನೆರವಿನಿಂದ ಅಷ್ಟು ಇಷ್ಟು ಮಾತನಾಡಲು ಸಫಲರಾಗುತ್ತಾರೆ. ಸಣ್ಣ ಪದಗಳ ಶಬ್ದ ಸಂಗ್ರಹಣೆ ಬೇರೂರುತ್ತದೆ. ಹೀಗೆ ಮುಂದುವರೆದು ಸಣ್ಣ ವಾಕ್ಯಗಳನ್ನು ಮಾಡಲು ಕಲಿಯುತ್ತಾರೆ. ಮಕ್ಕಳ ಈ ಸ್ವಪ್ರೇರಿತ ಕನ್ನಡಾಸಕ್ತಿ ತಂದೆ–ತಾಯಿಯರಿಗೆ ಮಕ್ಕಳಿಗೆ ಕನ್ನಡ ಕಲಿಸುವ ಮುಂದಿನ ಹೆಜ್ಜೆಯಿಡಲು ಉತ್ತೇಜಿಸುತ್ತದೆ. ಇಲ್ಲಿಂದ ಕನ್ನಡ ಕಲಿಸುವ ಹೊಣೆ ಸಂಪೂರ್ಣವಾಗಿ ಪೋಷಕರ ಹೊಣೆಯಾಗುತ್ತದೆ. ಮಕ್ಕಳಿಗೆ ಕನ್ನಡದ ರಸದೂಟ ಸರಿಯಾದ ಸಮಯಕ್ಕೆ ಸಿಗುತ್ತಾ ಹೋದರೆ, ಕನ್ನಡ ಭಾಷೆಯ ಬೇರು ಧೃಡವಾಗಿ, ಆಳವಾಗಿ ಊರಲು ಸಾಧ್ಯ.

ಎರಡನೆಯದಾಗಿ, ಅಪಾರ ಕನ್ನಡ ಭಾಷಾಭಿಮಾನವುಳ್ಳ ಅಮೇರಿಕನ್ನಡಿಗರು, ತಮ್ಮಂತೆ ತಮ್ಮ ಮಕ್ಕಳೂ ಸಹ ಕನ್ನಡ ಕಲಿತು, ಕನ್ನಡದ ಕಂಪನ್ನು ಸವಿಯಲಿ, ಎನ್ನುವ

ಉದ್ದೇಶದಿಂದ ಮಕ್ಕಳಿಗೆ ಕನ್ನಡ ಕಲಿಸಲು ಮುಂದಾಗುತ್ತಾರೆ. ಬೇಂದ್ರೆ, ಕುವೆಂಪು, ರಾಜರತ್ನಂ ಮುಂತಾದವರನ್ನು ಪರಿಚಯಿಸುತ್ತಾರೆ. ಡಾ! ರಾಜ್‌ಕುಮಾರ್ ಮುಂತಾದವರ ಚಿತ್ರಗಳನ್ನು ಮಕ್ಕಳ ಜೊತೆಯಲ್ಲಿ ಕುಳಿತು ನೋಡಿ ಆನಂದಿಸುವಾಗ ಕನ್ನಡ ಭಾಷೆಯ ಪರಿಚಯವೂ ಆಗುತ್ತದೆ.

ಮೂರನೆಯದಾಗಿ, ಮಕ್ಕಳಿಗೆ ಕನ್ನಡ ಕಲಿಸುವುದಕ್ಕೆ ಪ್ರಬಲವಾದ ಕಾರಣ, ಅಮೇರಿಕೆಯಲ್ಲಿ ಇರುವ ಇತರೆ ದೇಶಗಳಿಂದ ನಮ್ಮಂತೆ ವಲಸೆ ಬಂದವರು. ಪೋಲ್ಯಾಂಡ್, ಕೊರಿಯ, ಚೀನ, ಇಸ್ರೇಲ್, ಗ್ರೀಸ್, ಫ್ರಾನ್ಸ್ ಮುಂತಾದ ದೇಶಗಳಿಂದ ಅಮೇರಿಕ ಸಂಸ್ಥಾನಕ್ಕೆ ಮೂರು ನಾಲ್ಕು ತಲೆಮಾರುಗಳ ಹಿಂದೆ ಬಂದಿದ್ದರೂ ಸಹ, ಮಾತೃಭಾಷೆಯನ್ನು ಮಕ್ಕಳಿಗೆ ಕಲಿಸುವಲ್ಲಿ ಬಹಳ ಕಾಳಜಿ ವಹಿಸುತ್ತಾರೆ. ಮಾತೃಭಾಷೆಯನ್ನು ಕಲಿಯಲು ವಾರಾಂತ್ಯಗಳಲ್ಲಿ ಮೈಲುಗಟ್ಟಲೆ ಡ್ರೈವ್ ಮಾಡುತ್ತಾರೆ. ನಾಟಕ, ಹಾಡು, ಸಂಗೀತ, ನೃತ್ಯ, ಕಥೆ, ಇತಿಹಾಸ, ಆಹಾರ ಮುಂತಾದವುಗಳ ಮೂಲಕ ತಂತಮ್ಮ ದೇಸೀ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸಿದ್ದಾರೆ. ಈ ವಾತಾವರಣ ಪೀಳಿಗೆಯಿಂದ ಪೀಳಿಗೆಗೆ ಬೆಳೆದು, ಎಲ್ಲ ಪೀಳಿಗೆಗಳಿಗೂ ಆಧಾರವಾಗಿ ನಿಂತು, ಮುಂದಿನ ಪೀಳಿಗೆಗೆ ತಮ್ಮ ಭಾಷೆ, ಸಂಸ್ಕೃತಿಯ ಬಗ್ಗೆ ಅಪಾರ ಹೆಮ್ಮೆಯನ್ನು ಮೂಡಿಸಿ, ವಿವಿಧ ಕ್ಷೇತ್ರಗಳಲ್ಲಿ ಅಗ್ರಗಣ್ಯರಾಗಲು ಆತ್ಮವಿಶ್ವಾಸವನ್ನು ಮೂಡಿಸಲು ಸಫಲವಾಗಿದೆ. ಕನ್ನಡದ ಮಕ್ಕಳಲ್ಲಿಯೂ ಸಹ ತಮ್ಮ ಸಂಸ್ಕೃತಿ, ನಡೆ, ನುಡಿಗಳ ಬಗ್ಗೆ ಗೌರವ, ಅಭಿಮಾನ ಬೆಳೆಸಿ, ಅವರಲ್ಲಿಯೂ ಸಹ ಅಮೇರಿಕೆಯಲ್ಲಿ ಅಗ್ರಗಣ್ಯರಾಗಲು ಆತ್ಮವಿಶ್ವಾಸ ಬೆಳೆಸಲು, ಕನ್ನಡ ಭಾಷಾ ಜ್ಞಾನ ಅವಶ್ಯಕ.

ಈ ದಿಸೆಯಲ್ಲಿ ಅಮೇರಿಕೆಯ ಕನ್ನಡ ಸಂಘಟನೆಗಳ ಪಾತ್ರ ಪ್ರಮುಖವಾದುದು. ಕನ್ನಡ ಸಂಘಗಳು ಈಗಾಗಲೇ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿವೆ. ನಾಟಕ, ಹಾಡು, ಮಕ್ಕಳ ಸ್ಪರ್ಧೆಗಳ ಮೂಲಕ ಪರೋಕ್ಷವಾಗಿ ಕನ್ನಡದ ಕಂಪನ್ನು ಹರಡುವಲ್ಲಿ ಯಶಸ್ವಿಯಾಗಿವೆ. ಇನ್ನು ಕೆಲವು ಸಂಘಗಳು ಕನ್ನಡ ಶಾಲೆಗಳನ್ನು ನಡೆಸುತ್ತಿವೆ. ಕರ್ನಾಟಕ ಸರ್ಕಾರದ ವತಿಯಿಂದ ಈ ಶಾಲೆಗಳಿಗೆ ನೆರವು ಲಭ್ಯವಾಗಿದೆ. ಕನ್ನಡಾಭಿವೃದ್ಧಿ ಪ್ರಾಧಿಕಾರ ಹೊರನಾಡು ಕನ್ನಡ ಶಾಲೆಗಳಿಗೆ ಆರ್ಥಿಕ ನೆರವನ್ನು ನಿರ್ದಿಷ್ಟ ಶಾಲೆಗಳಿಗೆ ಕೊಡುತ್ತದೆ. ಆರ್ಥಿಕ ನೆರವು ಬಯಸುವ ಸಂಘ ಸಂಸ್ಥೆಗಳು ಕನ್ನಡಾಭಿವೃದ್ಧಿ ಪ್ರಾಧಿಕಾರವನ್ನು ಸಂಪರ್ಕಿಸಬಹುದು.

ಇನ್ನು ಅಮೇರಿಕೆಯಲ್ಲಿ ಹುಟ್ಟಿ ಬೆಳೆವ ಮಕ್ಕಳಿಗೆ ಕನ್ನಡ ಹೇಗೆ ಹೇಳಿ ಕೊಡುವುದು? ಇದು ಸ್ವಲ್ಪ ವಿಚಾರ ಮಾಡಿ ನಿರ್ಧರಿಸಬೇಕಾದ ವಿಷಯ. ವಾಷಿಂಗ್ಟನ್ ಡಿ.ಸಿ.ಯ ಕಾವೇರಿ ಕನ್ನಡ ಸಂಘದ ವತಿಯಿಂದ ಕಳೆದ ಐದು ವರ್ಷಗಳಿಂದ ಕನ್ನಡ ಕಲಿಯೋಣ ಕಾರ್ಯಕ್ರಮ ನಡೆಸುತ್ತ ಬಂದಿದ್ದೇವೆ. ನಮ್ಮ ಅನುಭವದ ಕೆಲವು ಮುತ್ತುಗಳನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ.

ಬೇರು ಸೂರು

ನಮ್ಮ ಮೊದಲ ವರ್ಷದಲ್ಲಿ ಸುಮಾರು ಮೂವತ್ತಕ್ಕು ಹೆಚ್ಚು ಮಕ್ಕಳು ಕನ್ನಡ ಕಲಿಯಲು ಎರಡು ಶಾಖೆಗಳಲ್ಲಿ ದಾಖಲಾದರು. ಮಕ್ಕಳಲ್ಲಿ ಕನ್ನಡ ಕಲಿಯುವ ಈ ಹುಮ್ಮಸ್ಸನ್ನು ನಾವು ನಿರೀಕ್ಷಿಸಿರಲಿಲ್ಲ. ನಮಗೂ ಸಹ ಇದು ಹೊಸಾ ಅನುಭವ. ಇಲ್ಲಿನ ಮಕ್ಕಳು ಬಹಳ ಆಸಕ್ತಿಯಿಂದ, ಕುತೂಹಲದಿಂದ ಕನ್ನಡ ಕಲಿಯಲು ಬಂದಿದ್ದರು. ನಮ್ಮ ಮೊದಲನೆಯ ಒಂದೆರಡು ಪಾಠ ಮಾಡಿದ ನಂತರ ನಾವು ಈ ಮಕ್ಕಳಿಗೆ ಕಲಿಸುವ ವಿಧಾನದಲ್ಲಿಯೇ ಬದಲಾವಣೆ ಮಾಡಬೇಕೆಂದು ಅರಿತೆವು. ಕಂಠಪಾಠ ಮಾಡುವುದಂತು ಇಲ್ಲಿನ ಮಕ್ಕಳಿಗೆ ಸ್ವಲ್ಪವೂ ಇಷ್ಟವಿಲ್ಲ. ಪ್ರತಿಯೊಂದು ಪದದ ಅರ್ಥವನ್ನು ಇಂಗ್ಲೀಷಿನಲ್ಲಿ ಹೇಳಿ, ಎರಡೂ ಭಾಷೆಗಳಲ್ಲಿ ಪಾಠ ಹೇಳುವುದನ್ನು ಅಭ್ಯಾಸ ಮಾಡಿಕೊಂಡೆವು. ಕೆಲವು ಹಿರಿಯ ಮಕ್ಕಳು, ನಾವು ಕನ್ನಡದಲ್ಲಿ ಮಾತನಾಡುವುದನ್ನು ಬೇಗಬೇಗ ಇಂಗ್ಲೀಷ್‌ನಲ್ಲಿ ಬರೆದು ಓದಲು ಪ್ರಯತ್ನಿಸುತ್ತಿದ್ದರು. ಕೆಲವು ಮಕ್ಕಳ ಸಲಹೆಯಂತೆ ನಾವು ಕನ್ನಡ ಪದಗಳನ್ನು ಅವರಿಗೆ ಪರಿಚಯಿಸಲು ಸಣ್ಣ ಸಣ್ಣ ಪದ್ಯಗಳನ್ನು ಅವರಿಗೆ ಪರಿಚಿತವಾದ ರಾಗದಲ್ಲಿ ಹಾಡಿ ಕಲಿಸಲು ಪ್ರಾರಂಭಿಸಿದೆವು.

ಕರಡಿ ಬೆಟ್ಟಕೆ ಹೋಯಿತು, ಕರಡಿ ಬೆಟ್ಟಕೆ ಹೋಯಿತು ।
ಕರಡಿ ಬೆಟ್ಟಕೆ ಹೋಯಿತು...
ನೋಟ ನೋಡಲು ॥

ಮಕ್ಕಳು ತಮಗೆ ತೋಚಿದಂತೆ 'ನೋಟ ನೋಡಲು' ಬದಲು, ಸ್ನಾನ ಮಾಡಲು, ಊಟ ಮಾಡಲು, ನೀರು ಕುಡಿಯಲು, ಇತ್ಯಾದಿ ಅವರದೇ ಪದಗಳಿಂದ ಹಾಡು ಕಟ್ಟಿ ಕನ್ನಡ ಕಲಿಕೆಯಲ್ಲಿ ಆನಂದವನ್ನು ಕಂಡರು, ನಮಗೂ ಇದು ಹೊಸಾ ವಿಧಾನ ಎಂದನಿಸಿ ಖುಷಿಯಾಯಿತು.

ಇನ್ನೊಂದು ಉದಾಹರಣೆ, ಮಕ್ಕಳಿಗೆ ನಾವು ಬಣ್ಣಗಳ, ತರಕಾರಿಗಳ, ಹಣ್ಣುಗಳ ಹೆಸರುಗಳನ್ನು ಕನ್ನಡದಲ್ಲಿಯೇ ಹೇಳಲು ಆರಂಬಿಸಿದೆವು. ಮಕ್ಕಳಿಗೆ ಅರ್ಥವಾಗಲು ಶುರುವಿನಲ್ಲಿ ಕೊಂಚ ಕಷ್ಟವಾಯಿತು. ನಂತರ ಕಲಿತರು. ಇಲ್ಲಿ ಕನ್ನಡ ಪಾಠ ಮಾಡಬೇಕಾದರೆ ಇಂಗ್ಲಿಷಿನಿಂದ ಕನ್ನಡಕ್ಕೆ ಪಾಠ ಮಾಡಬೇಕು ಎಂದು ನಾವೂ ಅರಿತೆವು.

ಮಕ್ಕಳಿಗೆ ಏನಾದರೂ ಕಲಿಯುವ ಅನುಭವ ಆಕರ್ಷಕವಾಗಿರಬೇಕು. ಹಾಗೇ ಕನ್ನಡ ಪಾಠವೂ. ಬಣ್ಣ ಬಣ್ಣದ ಚಿತ್ರಗಳಿರುವ ಪುಟಗಳು, ಸಣ್ಣ ಸಣ್ಣ ಪ್ರಾಸಭರಿತ ಪದ್ಯಗಳು ಸಣ್ಣ ಮಕ್ಕಳಿರುವ ತರಗತಿಗಳಿಗೆ ಅವಶ್ಯಕ. ಎಲ್ಲ ಮಕ್ಕಳಿಗೆ ಕಥೆಗಳೆಂದರೆ ಪಂಚಪ್ರಾಣ. ನಮ್ಮ ಪಠ್ಯಕ್ರಮದಲ್ಲಿ ಕಥೆಗಳಿಗೆ ಮುಖ್ಯ ಪಾತ್ರವಿದೆ. ಕಥೆಗಳು ಕನ್ನಡ ಭಾಷೆಯನ್ನು ತಿಳಿಸುವುದಲ್ಲದೆ, ಅವರ ಏಕಾಗ್ರತೆಯನ್ನು ಹಿಡಿದಿಡುವಲ್ಲಿ ಕೂಡಾ ಉಪಯೋಗವಾಗುತ್ತವೆ.

ಬೇರು ಸೂರು

ನಮ್ಮ ಈ ಪಠ್ಯಕ್ರಮದಲ್ಲಿ ಓದುವುದಕ್ಕೆ ಪ್ರಾಧಾನ್ಯ. ಅಮೇರಿಕೆಯ ಪ್ರಾಥಮಿಕ ಶಾಲೆಗಳಲ್ಲಿ ಓದುವುದು, ಮತ್ತು ಓದಿದ್ದನ್ನು ಅರ್ಥೈಸುವುದಕ್ಕೆ ಬಹಳ ಪ್ರಾಮುಖ್ಯ ನೀಡುತ್ತಾರೆ. ಅಂತೆಯೇ ನಮ್ಮ ಶಾಲೆಯಲ್ಲೂ ಸಹ ಇದೇ ಕ್ರಮವನ್ನು ಅನುಸರಿಸಿದೆವು. ಪ್ರಾಥಮಿಕ ಶಾಲೆಯ ಮಕ್ಕಳು ಇದನ್ನು ಕೂಡಲೆ ಗ್ರಹಿಸುತ್ತಾರೆ ಮತ್ತು ಅವರ ಶಾಲೆಯ ಕ್ರಮವೇ ಕನ್ನಡ ಶಾಲೆಯಲ್ಲೂ ಇದ್ದರೆ ಮಕ್ಕಳಿಗೆ ಅರ್ಥವಾಗುವುದು ಸುಲಭ. ಇಲ್ಲಿಯ ಶಾಲೆಗಳಂತೆ ನಾವೂ ಸಹ ಮಕ್ಕಳನ್ನು ಶಾಲೆಯ ಅನೇಕ ಚಟುವಟಿಕೆಗಳಲ್ಲಿ ಮತ್ತು ಮುಂದಿನ ಪಠ್ಯಕ್ರಮ ಹೇಗಿರಬೇಕೆಂದು ಯೋಜಿಸುವುದರಲ್ಲಿ ಸಲಹೆ ಕೇಳಿ ಅವು ಯೋಗ್ಯವಾದ ಸಲಹೆಗಳಾಗಿದ್ದರೆ ಅನುಮೋದಿಸಿದೆವು.

ಕೊನೆಯದಾಗಿ, ಅಮೇರಿಕ ದೇಶದ ಕೆಲವು ಪರಂಪರೆಯನ್ನು ಇಲ್ಲಿನ ರಾಷ್ಟ್ರೀಯ ಹಬ್ಬಗಳನ್ನೂ, ನಮ್ಮ ಶಾಲೆಯಲ್ಲೂ ಮಾಡುತ್ತೇವೆ. ಉದಾಹರಣೆ ಹಾಲೋವೀನ್ ದಿನ ಛದ್ಮ ವೇಷಧಾರಣೆ, ಅಭಿನಂದನಾ ದಿವಸ (ಥ್ಯಾಂಕ್ಸ್‌ಗಿವಿಂಗ್ ಡೇ). ಈ ಹಬ್ಬಗಳ ವಿವರಣೆಯನ್ನು ಮಕ್ಕಳೇ ನಮಗೆ ಆದಷ್ಟು ಕನ್ನಡದಲ್ಲಿ ತಿಳಿಸುವ ಪ್ರಯತ್ನ ಮಾಡುತ್ತಾರೆ. ಜೊತೆಗೆ ಸಂಕ್ರಾಂತಿ, ದೀಪಾವಳಿ, ರಾಜ್ಯೋತ್ಸವ, ಗಣೇಶ ಚತುರ್ಥಿಯನ್ನು ಆಚರಿಸಿ, ಅವುಗಳ ಮಹತ್ವವನ್ನು ತಿಳಿಸುವುದು. ಹೀಗೆ ಮಕ್ಕಳಿಗೆ ಪರಿಚಿತ, ಕ್ಷೇಮ, ವಿನೋದ ಪೂರಿತ ವಾತಾವರಣ ಕನ್ನಡ ಕಲಿಕೆಗೆ ನಿರ್ಮಿಸುವ ಪ್ರಯತ್ನದಲ್ಲಿದ್ದೇವೆ.

ಅಮೇರಿಕಾದಲ್ಲಿ ಕನ್ನಡ–ಕಲಿ ಪಕ್ಷಿನೋಟ

ಕನ್ನಡ ಕಲಿ ಮೊದಲನೆ ಶಾಲೆ ಚಿಕಾಗೊ ನಗರದಲ್ಲಿ 'ಜ್ಞಾನಭಾರತಿ ಕನ್ನಡ ಶಾಲೆ' 1970ರ ದಶಕದಲ್ಲಿ ಶ್ರೀ ಎಚ್.ಎಸ್. ಜಯಸ್ವಾಮಿ ಶುರುಮಾಡಿದರು. ಆ ಶಾಲೆ ಚಿಕಾಗೊ ನಗರದಲ್ಲಿ ಇವತ್ತಿಗೂ ನಡೆಯುತ್ತಿದೆ. ಚಿಕಾಗೊದ ಸಮೀಪದ ಉಪನಗರಗಳಲ್ಲಿ ಈಗ ಎರಡು ಶಾಲೆಗಳಲ್ಲಿ 30–40 ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ.

ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಇಪ್ಪತ್ತಕ್ಕೂ ಹೆಚ್ಚು ವರ್ಷಗಳಿಂದ ಬೇರೆ ಬೇರೆ ಸ್ವಯಂಸೇವಕರಿಂದ ಕನ್ನಡ ಶಾಲೆಗಳು ನಡೆಯುತ್ತಿವೆ. 2005 ಸೆಪ್ಟೆಂಬರಿಂದೀಚೆಗೆ ಕೆ.ಕೆ.ಎನ್.ಸಿ. ನಡೆಸುತ್ತಿರುವ ಶಾಲೆಯಲ್ಲಿ ಈಗ ನೂರಕ್ಕೂ ಹೆಚ್ಚು ಮಕ್ಕಳಿಗೆ, ಏಳು ಶಿಕ್ಷಕರು ಕನ್ನಡ ಕಲಿಸುತ್ತಿದ್ದಾರೆ. ಅಮೇರಿಕಾದಲ್ಲಿ ಇದು ಅತಿ ದೊಡ್ಡ ಕನ್ನಡ ಶಾಲೆ ಎಂದು ಹೆಸರು ಪಡೆದಿದೆ.

ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ, ಸುಮಾರು ನಾಲ್ಕು ಶಾಖೆಗಳಲ್ಲಿ ನೂರಕ್ಕು ಹೆಚ್ಚು ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ.

ವಾಷಿಂಗ್‌ಟನ್ ಡಿ.ಸಿ.ಯ ಕಾವೇರಿ ಕನ್ನಡ ಸಂಘದ ವಲಯದಲ್ಲಿ, ನಾಲ್ಕು ಶಾಖೆಗಳಲ್ಲಿ 14 ಶಿಕ್ಷಕರು ಸುಮಾರು 100 ಮಕ್ಕಳಿಗೆ ಉಚಿತವಾಗಿ ಕನ್ನಡ ಹೇಳಿ ಕೊಡುತ್ತಾರೆ. ಇಂಟರ್ನೆಟ್ ಮೂಲಕ ಪಾಠಗಳನ್ನು, ಪ್ರಸಾರ ಮಾಡುತ್ತರೆ. ಕನ್ನಡದ

ಕಂದ ಎನ್ನುವ ತ್ರೈಮಾಸಿಕ ಪತ್ರಿಕೆಯನ್ನು ಸಹ ಪ್ರಕಟಿಸುತ್ತಾರೆ.

ಜರ್ಮನ್ ಟೌನ್ ಮೇರಿಲ್ಯಾಂಡ್‌ನಲ್ಲಿ ಜೆ.ಎಸ್.ಎಸ್. ಸಂಸ್ಥೆಯ ಆಶ್ರಯದಲ್ಲಿ ಸಹ ಕನ್ನಡ ಶಾಲೆ ಇದೆ.

ಕೊಲಂಬಿಯ ಮೇರಿಲ್ಯಾಂಡ್‌ನ ಡಿವೈನ್ ಪಾರ್ಕ್ ಸಂಸ್ಥೆ 70 ಮಕ್ಕಳಿಗೆ ಕನ್ನಡ ಕಲಿಸುತ್ತದೆ.

ಫೀನಿಕ್ಸ್ ಅರಿಜೋನದಲ್ಲಿ ಪುತ್ತಿಗೆ ಮಠದ ಆಶ್ರಯದಲ್ಲಿ ಮಕ್ಕಳಿಗೆ ಕನ್ನಡ ಶಾಲೆ ನಡೆಯುತ್ತಿದೆ.

ಅಟ್ಲಾಂಟ ನಗರವಲಯದಲ್ಲಿ ನಾಲ್ಕು ಕನ್ನಡ ಶಾಲೆಗಳಿದ್ದು, 8–10 ಶಿಕ್ಷಕರು 100 ಮಕ್ಕಳಿಗೆ ಕನ್ನಡ ಹೇಳಿ ಕೊಡುತ್ತಾರೆ.

ಫ್ಲೋರಿಡಾದ ಟಾಂಪಾ ನಗರದಲ್ಲಿ ಇಬ್ಬರು ಶಿಕ್ಷಕರು, 10 ಮಂದಿ ಮಕ್ಕಳಿಗೂ, ಫ್ಲೋರ್ಟ್ ಲಾಡರ್ಡೇಲ್ ನಗರದಲ್ಲಿ 15 ಮಕ್ಕಳಿಗೆ ಕನ್ನಡ ಕಲಿಸಿಕೊಡಲಾಗುತ್ತಿದೆ.

ನ್ಯೂಯಾರ್ಕಿನ ಪ್ರಸಿದ್ಧ ಗಣೇಶ ದೇವಾಲಯದಲ್ಲಿ ಐದು ಶಿಕ್ಷಕರು 40–50 ಮಕ್ಕಳಿಗೆ ಕನ್ನಡ ಹೇಳಿಕೊಡುತ್ತಾರೆ.

ಮಿನಿಯಪೊಲಿಸ್, ಸೆಂಟ್ ಲೂಯಿ, ಆಸ್ಟಿನ್, ಡ್ಯಾಲಾಸ್, ಸ್ಯಾನ್‌ಡಿಯಾಗೊ, ಡೆನ್ವರ್, ಸಿಯಾಟಲ್, ಜ್ಯಾಕ್ಸನ್‌ವಿಲ್, ನ್ಯಾಷ್‌ವಿಲ್ ನಗರಗಳಲ್ಲಿ ಸಣ್ಣ ಶಾಲೆಗಳಲ್ಲಿ ಕನ್ನಡದ ಕಂಪು ಹರಡುತ್ತಿದೆ.

ಒಟ್ಟಿನಲ್ಲಿ ಅಮೇರಿಕಾದಲ್ಲಿ 1000–1500 ಕನ್ನಡ ವಿದ್ಯಾರ್ಥಿಗಳು, 100–150 ಕನ್ನಡ ಶಿಕ್ಷಕರಿಂದ ವಾರಾಂತ್ಯಗಳಲ್ಲಿ ಕನ್ನಡ ಕಲಿಯುತ್ತಿದ್ದಾರೆ.



ಅಮೇರಿಕಾದಲ್ಲಿ ಸಂಸ್ಕೃತ ಶಿಕ್ಷಣ

– ರವಿ ರವಿಶಂಕರ

ಅಮೆರಿಕಾ ಸಂಸ್ಥಾನದಲ್ಲೀಗ ಸಂಸ್ಕೃತ ಶಿಕ್ಷಣದ ಹೊಸ ಅಲೆಯೇ ಎದ್ದಿದೆ. ಭಾಷೆಯನ್ನು ಕಲಿಯಲು ಹೊಸ ಹೊಸ ಸಾಧನಗಳು, ಮಾರ್ಗಗಳು ಹಾಗೂ ಹಲವಾರು ಅವಕಾಶಗಳು ಸೃಷ್ಟಿಯಾಗುತ್ತಿದ್ದಂತೆ ಅದನ್ನು ಕಲಿಯುವ ಉತ್ಸಾಹಿ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶಿಕ್ಷಣದ ಗುಣಮಟ್ಟ ಮೇಲಕ್ಕೇರಿದೆ. ಫೇಸ್‌ಬುಕ್ ಹಾಗೂ ಟ್ವಿಟ್ಟರ್‌ಗಳ ದಾಳಿಯಿಂದ ಪ್ರಪಂಚದ ಆಧುನಿಕ ಭಾಷೆಗಳೇ ತತ್ತರಿಸಿ ಭಾಷೆಯ ಸ್ವರೂಪವೇ ಮಾರ್ಪಾಡಾಗುತ್ತಿರುವ ಈ 'ಐ–ಫೋನ್' ಯುಗದಲ್ಲಿ ಸಹಸ್ರಾರು ವರ್ಷಗಳ ಪುರಾತನ ಸಂಸ್ಕೃತ ಭಾಷೆಯನ್ನು ಕಲಿಯುವ ಉದ್ದೇಶವಾದರೂ ಏನು? ಅದರಲ್ಲೂ ಅಮೆರಿಕೆಯಲ್ಲಿ ಈ ಭಾಷೆಯನ್ನು ಕಲಿತು ಆಗುವ ಪ್ರಾಯೋಗಿಕ ಪ್ರಯೋಜನವಾದರೂ ಏನು? ಈ ಬಗೆಯ ಪ್ರಶ್ನೆಗಳು ಇಲ್ಲಿನ ಆಧುನಿಕ ಯುವಪೀಳಿಗೆಗೆ ಎದುರಾದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಸಂಸ್ಕೃತ ಭಾಷೆಯ ಬಗ್ಗೆ ಜನಸಮುದಾಯದ ಸಾಮಾನ್ಯ ಪ್ರಜ್ಞೆಯಲ್ಲಿ ಪ್ರಚಲಿತವಾಗಿರುವ ಅರ್ಧ ತಿಳುವಳಿಕೆಗಳೂ ಇಂತಹ ಸಂದೇಹಗಳಿಗೆ ಕಾರಣವಾಗಿವೆ. ಸಂಸ್ಕೃತ ಭಾಷೆಯ ಕಲಿಕೆಯಿಂದ ಲಭಿಸುವ ಸರ್ವತೋಮುಖ ವ್ಯಕ್ತಿ ವಿಕಾಸದ ಹಾಗೂ ಸಾಮಾಜಿಕ ವಿಕಾಸದ ಸ್ಪಷ್ಟ ಅರಿವು ಮೂಡಿದಲ್ಲಿ ಈ ಪ್ರಶ್ನೆಗಳಿಗೆ ನೇರವಾಗಿ ಉತ್ತರ ಸಿಗುವುದರಲ್ಲಿ ಸಂಶಯವಿಲ್ಲ.

ಸಂಸ್ಕೃತ ಎಂದೊಡನೆ ಹಲವರ ಮನಸ್ಸಿನಲ್ಲಿ ಮೂಡುವ ಪ್ರಥಮ ಚಿತ್ರಣವೆಂದರೆ ಹಲವಾರು ಹಿಂದೂ ದೇವತೆಗಳನ್ನು ಪೂಜಿಸಲು ಬೇಕಾಗುವ ನೂರಾರು ಶ್ಲೋಕಗಳ ಆಗರ ಹಾಗೂ ಸಂಸ್ಕೃತವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡುವುದೆಂದರೆ ವೇದೋಪನಿಷತ್ತುಗಳ ಅಧ್ಯಯನ. ಈ ಅಧ್ಯಯನ ಪಂಡಿತರ ಕಾರ್ಯಭೂಮಿಯೇ ಹೊರತು ಸಾಮಾನ್ಯರಿಗಲ್ಲ ಎನ್ನುವ ಸರ್ವೇಸಾಮಾನ್ಯವಾದ ಅಭಿಪ್ರಾಯ. ಆದರೆ ಸಂಸ್ಕೃತದ ವಿಸ್ತಾರ ಹಿಂದೂ ಮಹಾ ಸಾಗರದಂತೆ, ಅದರ ಎತ್ತರ ಹಿಮಾಲಯದಂತೆ. ಸಹಸ್ರ ಸಹಸ್ರ ವರ್ಷಗಳಿಂದ ಹತ್ತು ಹಲವಾರು ದಿಕ್ಕುಗಳಲ್ಲಿ ನಿರಂತರವಾಗಿ ಹರಿದು ಬಂದ ಮಾನವ ಚಿಂತನೆಯ ಇತಿಹಾಸದ ದ್ಯೋತಕವಿದು. ಮಾನವ ಇತಿಹಾಸದ ಸಾಂಸ್ಕೃತಿಕ ಪರಂಪರೆ, ವೈಜ್ಞಾನಿಕ ಮುನ್ನಡೆ, ಸೃಜನಶೀಲ ಕಲಾ ನಿರ್ಮಾಣ, ತತ್ತ್ವ ಚಿಂತನೆ ಹೀಗೆ ಜೀವನದ ಹಲವಾರು ಮುಖಗಳನ್ನು ಸಮಗ್ರವಾಗಿ ಪ್ರತಿಬಿಂಬಿಸುವ ಸಾಧನವಿದು.

ಬೇರು ಸೂರು

ಸಂಸ್ಕೃತದಲ್ಲಿ ಇದುವರೆಗೆ ನಮಗೆ ದೊರಕಿರುವ ಗ್ರಂಥಗಳ ವಸ್ತು ವೈವಿಧ್ಯವನ್ನು ಪರೀಕ್ಷಿಸಿದಾಗ ಅದರ ಅಗಾಧತೆಯ ಅರಿವು ನಮಗಾಗುತ್ತದೆ. ಸರಿ ಸುಮಾರು ಐದು ಮಿಲಿಯನ್ ಹಸ್ತಲಿಖಿತ ಸಂಸ್ಕೃತ ಗ್ರಂಥಗಳು ದೊರಕಿವೆಯೆಂದರೆ ಅದರ ಗಾತ್ರವೈಶಾಲ್ಯದ ಅರಿವೂ ಮೂಡುತ್ತದೆ. ಭಾಷಾ ವಿಜ್ಞಾನ, ಮನೋವಿಜ್ಞಾನ, ವೈದ್ಯಕೀಯ ವಿಜ್ಞಾನ, ನಿತ್ಯಾನಂದಕರೀ ಸಾಹಿತ್ಯ ಕೃತಿಗಳು, ಕಲಾವಿಜ್ಞಾನ, ಗಣಿತ ಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಖಗೋಳಶಾಸ್ತ್ರ... ಹೀಗೆ ಸಂಸ್ಕೃತ ಭಾಷೆ ಮುಟ್ಟದ ವಿಷಯವಿಲ್ಲ. ಸಂಸ್ಕೃತ ಭಾಷೆಯಲ್ಲಿ ನಮಗೆ ದೊರಕಿರುವ ಅನೇಕ ಮಹೋನ್ನತ ಶಾಸ್ತ್ರ ಗ್ರಂಥಗಳನ್ನು ಅವಲೋಕಿಸಿದಾಗ ನಮಗೆ ಗೋಚರವಾಗುವ ಮತ್ತೊಂದು ವೈಶಿಷ್ಟ್ಯವೆಂದರೆ ಈ ಕೃತಿಗಳಲ್ಲಿ ವಿಜ್ಞಾನಿಯ ಸೂಕ್ಷ್ಮಜ್ಞತೆ, ಕಲಾಕಾರನ ಸೃಜನಶೀಲತೆ, ಗಣಿತಜ್ಞನ ನಿಖರತೆ ಹಾಗೂ ಮಾನವ ಶಾಸ್ತ್ರದ ಸಂಕೀರ್ಣತೆ ಮತ್ತು ವೈಶಾಲ್ಯಗಳು, ಇವೆಲ್ಲವೂ ಒಂದೆಡೆ ಅಡಕವಾಗಿ ಸಮನ್ವಯವಾಗಿ ಸಮರಸವಾಗಿ ಮೂಡಿಬಂದಿವೆ. ಹಾಗೆಂದೇ ಈ ಭಾಷೆ ವ್ಯಕ್ತಿ ವಿಕಾಸದ ಪ್ರತಿಯೊಂದು ಮುಖವನ್ನೂ ಮುಟ್ಟಿ ತಟ್ಟಿ ವ್ಯಕ್ತಿಯ ಸಂಪೂರ್ಣ ಅಭಿವೃದ್ಧಿಗೆ ಸಾಧನವಾಗುವ ಸಾಮರ್ಥ್ಯವನ್ನು ಹೊಂದಿದೆ.

ಸಂಸ್ಕೃತ ಶಾಸ್ತ್ರಗ್ರಂಥಗಳನ್ನೆಲ್ಲಾ ಇಲ್ಲಿ ಉಲ್ಲೇಖಿಸುವುದು ಅಸಾಧ್ಯವಾದ ಕೆಲಸವಾದರೂ ಉದಾಹರಣೆಯಾಗಿ ಕೆಲವೊಂದನ್ನು ನೋಡಬಹುದು.

1. ನಮಗೆ ದೊರೆತಿರುವ ಪ್ರಪಂಚದ ಮೊಟ್ಟಮೊದಲ ವ್ಯಾಕರಣ ಶಾಸ್ತ್ರ (grammar) ಪಾಣಿನಿಯ 'ಅಷ್ಟಾಧ್ಯಾಯಿ'. ಕೇವಲ ನಾಲ್ಕು ಸಾವಿರಕ್ಕೂ ಕಮ್ಮಿ ಭಾಷಾ ಸೂತ್ರಗಳಲ್ಲಿ (linguistic formula) ಸಮಗ್ರವಾಗಿಯೂ, ನಿಖರವಾಗಿಯೂ, ಸಂಕ್ಷಿಪ್ತವಾಗಿಯೂ ಭಾಷೆಯ ನಾನಾ ಛಾಯೆಯನ್ನು ಸೂಕ್ಷ್ಮವಾಗಿ ಸೆರೆಹಿಡಿದು ವ್ಯವಸ್ಥಿತವಾಗಿ ನಿರ್ದೇಶಿಸಿರುವ ಇಂತಹ ಗ್ರಂಥ ಇದುವರೆಗೆ ಪ್ರಪಂಚದ ಇತಿಹಾಸದಲ್ಲೇ ಮತ್ತೊಂದು ಮೂಡಿಬಂದಿಲ್ಲ. Artificial Intelligence ಹಾಗೂ Computational Linguistics ಸಂಬಂಧಿತ ವಿಚಾರಗೋಷ್ಠಿಗಳಲ್ಲಿ ಪಾಣಿನಿಯ ಅಷ್ಟಾಧ್ಯಾಯಿಯ ಬಗ್ಗೆ ಸಂಶೋಧಕರು ದಿನೇ ದಿನೇ ತೋರುತ್ತಿರುವ ಅಧಿಕ ಆಸಕ್ತಿ ಈ ದಿಕ್ಕಿನಲ್ಲಿ ನಡೆಯಬಹುದಾದ ಅನೇಕ ಹೊಸ ಸಂಶೋಧನೆಗಳ ಅವಕಾಶಗಳನ್ನು ಸೂಚಿಸುತ್ತದೆ.

2. ಕಲಾಶಾಸ್ತ್ರವನ್ನು ಸಮಗ್ರವಾಗಿ ನಿರೂಪಿಸುವಲ್ಲಿ ಪ್ರಪಂಚದ ಅತ್ಯುತ್ತಮ ಗ್ರಂಥಗಳ ಸಾಲಿಗೆ ಆನಂದವರ್ಧನನ 'ಧ್ವನ್ಯಾಲೋಕ' ಸೇರುತ್ತದೆ. ಕಲೆ ಇದರ ಪ್ರಮುಖ ವಿಷಯವಾದರೂ ಶಬ್ದಾರ್ಥಗಳಿಗೂ ಮಾನವನ ಭಾವನಾಲೋಕಕ್ಕೂ, ಭಾವನೆಗಳ ಏರಿಳಿತದಿಂದ ಮನೋಲೋಕದಲ್ಲಿ ಉದ್ಭವಿಸುವ ರಸಾನುಭವಕ್ಕೂ ಇರುವ ಸಂಬಂಧವನ್ನು ಶಾಸ್ತ್ರಬದ್ಧವಾಗಿ ನಿರೂಪಿಸಿ ಮನೋವಿಜ್ಞಾನವನ್ನು ಸ್ಪರ್ಶಿಸಿದ ಹಿರಿಮೆ ಈ ಗ್ರಂಥಕ್ಕೆ.

3. ಸಾಮಾಜಿಕ ಜೀವನ ವ್ಯವಸ್ಥೆ, ಶಾರೀರಿಕ ಹಾಗೂ ಮನೋವಿಜ್ಞಾನ-ಗಳನ್ನೊಳಗೊಂಡು ಅದನ್ನೂ ಮೀರಿನಿಂತು ಬುದ್ಧಿ ಭಾವಗಳಾಚೆಗೂ ದೃಷ್ಟಿ ಹರಿಸುವ ಧೀಮಂತ ಕೃತಿ ಪತಂಜಲಿಯ 'ಯೋಗ ಸೂತ್ರಗಳು'. ಈ ಯೋಗಸೂತ್ರದ ಮೇಲುಪದರಗಳನ್ನಷ್ಟೇ ಅವಲೋಕಿಸಿ ಇದೀಗ ಪ್ರಭಾವಗೊಂಡಿರುವ ಆಧುನಿಕ ಮನೋವಿಜ್ಞಾನ ಶಾಸ್ತ್ರ ಇದರ ಪದರ ಪದರಗಳನ್ನು ಅಭ್ಯಸಿಸಿ ಕಲಿಯಬೇಕಾದ ವಿಷಯಗಳು ಅನೇಕ.

4. ವೈದ್ಯಕೀಯ ಶಾಸ್ತ್ರವಾದ 'ಚರಕಸಂಹಿತಾ'ವನ್ನು ಆಧರಿಸಿ ಪುನರುಜ್ಜೀವನಗೊಂಡಿರುವ ಆಯುರ್ವೇದ ಶಾಸ್ತ್ರದಲ್ಲಿನ ಆಸಕ್ತಿ ಆಧುನಿಕ ವೈದ್ಯಕೀಯ ಜ್ಞಾನದ ಬೆಳವಣಿಗೆಗೆ ಪೂರಕವಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ.

5. ಇನ್ನು ಸಾಹಿತ್ಯದ ಅನೇಕ ಪ್ರಕಾರಗಳನ್ನು ಪ್ರಪ್ರಥಮವಾಗಿ ಸೃಷ್ಟಿಸಿದ ಕಾವ್ಯಶಿಖರಗಳಾದ ರಾಮಾಯಣ, ಮಹಾಭಾರತ, ಮಾಘ, ಭಾಸ, ಭಾರವಿ, ಕಾಳಿದಾಸಾದಿಗಳಿಂದ ರಚಿಸಲ್ಪಟ್ಟ ಮಹಾಕಾವ್ಯಗಳು, ನಾಟಕಗಳು- ಹೀಗೆ ಸಂಸ್ಕೃತದ ಸಂಪತ್ತು ಅಗಣಿತ.

ಈ ಎಲ್ಲ ಸಂಪತ್ತನ್ನು ಅನುಭವಿಸುವ ಅಧಿಕಾರ ಸರ್ವ ಮಾನವ ಕುಲಕ್ಕೂ ಸೇರಿದುದಾದರೆ ಅದನ್ನು ಸಂರಕ್ಷಿಸುವ ಬಾಧ್ಯತೆ ಮುಖ್ಯವಾಗಿ ಭಾರತೀಯರದು. ಇಂತಹ ಜ್ಞಾನಸಂಪತ್ತನ್ನು ಉಪೇಕ್ಷೆ ಮಾಡುವುದರ ಮೂಲಕ ಅದರ ಚಿರನೆನಪುಗಳನ್ನು ಸಮಾಜ ಕಳೆದುಕೊಂಡದ್ದೇ ಆದರೆ ಅದರಿಂದ ನಮ್ಮ ಸಮಕಾಲೀನವಷ್ಟೇ ಅಲ್ಲ, ಭಾವೀ ಸಮಾಜಕ್ಕೂ ಆಗುವ ಹಾನಿ ಊಹೆಗೂ ಎಟುಕಲಾರದಷ್ಟು. ಕ್ರಿಸ್ತಶಕದಾದಿಯಲ್ಲಿ ಅಲೆಗ್ಸಾಂಡ್ರಿಯಾದ ಮಹಾಗ್ರಂಥಾಲಯುವನ್ನು ಭಸ್ಮಮಾಡಿದ ಸೀಸರನ ಮೂರ್ಖತನವನ್ನು ಸಾವಿರಪಟ್ಟು ಮೀರಿದ ಮೂರ್ಖತನ ನಮ್ಮದಾಗುತ್ತದೆ.

'ಜ್ಞಾನಕ್ಕಾಗಿ ಜ್ಞಾನ' ಎಂಬುದೊಂದೇ ವಿಷಯವನ್ನು ಆಧರಿಸಿ ಜ್ಞಾನಭಂಡಾರದ ಕಲ್ಪತರುವಾದ ಸಂಸ್ಕೃತದ ಕಲಿಕೆಗೆ ನಾವು ಕೊಡಲೇಬೇಕಾದ ಪ್ರಾಮುಖ್ಯವನ್ನು ಅರ್ಥೈಸಿಕೊಳ್ಳಬಹುದು. ಹಾಗಿದ್ದರೂ ಇದರ ಇನ್ನೂ ಕೆಲವು ಪ್ರಾಯೋಗಿಕ ಹಾಗೂ ಲೌಕಿಕ ಪ್ರಯೋಜನಗಳನ್ನು ಸ್ಥೂಲವಾಗಿ ಪರಿಶೀಲಿಸೋಣ. ತಾಂತ್ರಿಕ ವಿಜ್ಞಾನದ ಹಾಗೂ ಆಧುನಿಕ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಿಂದ ನಾಗಾಲೋಟದಲ್ಲಿ ಧಾವಿಸಿ ಸಂಕೀರ್ಣವಾಗುತ್ತಿರುವ ನೂತನ ಜಾಗತಿಕ ವ್ಯವಸ್ಥೆಯಲ್ಲಿ ಅನ್ಯಭಾಷಾ ಕಲಿಕೆಯು ಮುಂದಿನ ಯುವಪೀಳಿಗೆಗೆ ಅತ್ಯವಶ್ಯಕವಾಗುವುದರಲ್ಲಿ ಸಂಶಯವಿಲ್ಲ. 'ಭಾಷಾ ವಿಜ್ಞಾನ' ಪ್ರಜ್ಞೆಯನ್ನು ಅಂತಃಕರಣದಲ್ಲಿ ಹುದುಗಿಸಿಕೊಂಡು ಅಭಿವ್ಯಕ್ತವಾಗಿರುವ ಸಂಸ್ಕೃತ ಭಾಷೆ ಇತರೆಲ್ಲ ಭಾಷೆಯ ಕಲಿಕೆಯ ಮಾದರಿಯಾಗಿ, ಆಧಾರಸ್ಥಾಯಿಯಾಗಿ ನಿಲ್ಲಬಲ್ಲ ಶಕ್ತಿಯನ್ನೊಳಗೊಂಡಿದೆ. ಸಂಸ್ಕೃತದ ಬೇರು ಭರತಖಂಡದ ಭೂಮಿಯಲ್ಲಿದ್ದರೂ ಅದರ ಕೈಗಳು ಥೈಲಾಂಡಿನಿಂದ ರೋಮ್‌ವರೆಗೂ ಚಾಚಿ ಪ್ರಭಾವವನ್ನು ಬೀರಿ ಆ

ಮೂಲದಲ್ಲಿ ಜನಿಸಿದ ಭಾಷೆಗಳಲ್ಲಿ ಅಂತರ್ಗತವಾಗಿ ಜೀವಂತವಾಗಿವೆ. ಸಂಸ್ಕೃತಕ್ಕೂ ಹಾಗೂ ಲ್ಯಾಟಿನ್, ಗ್ರೀಕ್ ಭಾಷೆಗಳಿಗೂ ಇರುವ ನಿಕಟ ಸಂಬಂಧ ಮತ್ತು ಸಂಸ್ಕೃತ ಕಲಿಕೆಯಿಂದ ಲ್ಯಾಟಿನ್ ಮೂಲದ ಭಾಷೆಗಳಾದ ಸ್ಪಾನಿಶ್, ಫ್ರೆಂಚ್, ಜರ್ಮನ್ ಮುಂತಾದ ಅನ್ಯ ಭಾಷೆಗಳನ್ನು ಕಲಿಯುವುದರಲ್ಲಿ ಒದಗುವ ಸಹಾಯ ಈಗಾಗಲೇ ಅನೇಕ ಭಾಷಾ ಸಂಶೋಧನೆಯಿಂದ ವ್ಯಕ್ತವಾಗಿರುವ ವಿಷಯ. ಆದರೆ ಜಾಗತಿಕ ಬೆಳವಣಿಗೆಯ ಮುಂಚೂಣಿಯಲ್ಲಿರುವ ಅನೇಕ ಆಗ್ನೇಯ ಏಶಿಯಾ ರಾಷ್ಟ್ರಗಳ ಭಾಷೆಗೂ ಸಂಸ್ಕೃತಕ್ಕೂ ಇರುವ ಸಂಬಂಧ ಅನೇಕರಿಗೆ ತಿಳಿಯದೆ ಇರಬಹುದು. ಉದಾಹರಣೆಗೆ ಇಂಡೋನೇಷಿಯಾದ ರಾಷ್ಟ್ರೀಯ ಭಾಷೆಯಾದ 'ಬಹಾಸ'ವನ್ನೆ ತೆಗೆದುಕೊಳ್ಳೋಣ. ನಗರ, ದೇಶ, ಮಾರ್ಗ, ಗುಣ, ಹೀನ, ಜಯ, ಕಾರ್ಯ, ದುಃಖ, ದುರ್ಜನ... ಹೀಗೆ ಸಾವಿರಾರು ಸಂಸ್ಕೃತ ಶಬ್ದಗಳು ಹಾಸುಹೊಕ್ಕು ಇಂದಿಗೂ ಇಲ್ಲಿ ದಿನನಿತ್ಯದ ಬಳಕೆಯಲ್ಲಿವೆ. ಅಷ್ಟೇ ಏಕೆ, ಆ 'ಭಾಷೆ'ಯ ಹೆಸರೇ ಸಂಸ್ಕೃತದಿಂದ ಬಂದಿದೆಯಲ್ಲವೇ!

ಇತ್ತೀಚಿನ ದಿನಗಳಲ್ಲಿ ಬಹು ಭಾಷೆಗಳನ್ನು ಕಲಿಯುವುದರಿಂದ ವ್ಯಕ್ತಿಯ ಮಾನಸಿಕ ಸ್ವಾಸ್ಥ್ಯದ ಮೇಲಾಗುವ ಉತ್ತಮ ಪರಿಣಾಮಗಳ ಬಗ್ಗೆ ಹಲವಾರು ಸಂಶೋಧನೆಗಳು ನಡೆದಿವೆ, ಇನ್ನೂ ನಡೆಯುತ್ತಲಿವೆ. ಸಂಶೋಧನೆಗಳ ಪ್ರಕಾರ ವಿಭಿನ್ನ ಭಾಷಾ ಕಲಿಕೆಯಿಂದ Dementia, Alzeimers ಮುಂತಾದ ಇಳಿವಯಸ್ಸಿಗೆ ಸಂಬಂಧಿಸಿದ ಮಾನಸಿಕ ರೋಗಗಳನ್ನು ತಡೆಗಟ್ಟಬಹುದು ಯಾ ಮುಂದೂಡಬಹುದು ಎನ್ನುವ ಅಭಿಪ್ರಾಯ ವೈಜ್ಞಾನಿಕ ವಲಯದಲ್ಲಿ ವ್ಯಕ್ತವಾಗಿದೆ. ಅದಲ್ಲದೆ ಚಿಕ್ಕ ವಯಸ್ಸಿನಲ್ಲಿ ಅಧ್ಯಯನ ಮಾಡುವುದರಿಂದ ಜೀವನದುದ್ದಕ್ಕೂ ನೆನಪಿನ ಶಕ್ತಿ ವರ್ಧನೆಯ ಲಾಭವನ್ನು ಪಡೆಯಬಹುದು ಎನ್ನುವ ಅಭಿಪ್ರಾಯ ಕೂಡ ಇದೆ. ಈ ದಿಶೆಯಲ್ಲಿ ವೈಜ್ಞಾನಿಕ ಸಂಶೋಧನೆ ಇನ್ನೂ ನಡೆಯಬೇಕಾಗಿದ್ದರೂ ಸ್ವಾನುಭವವೇ ಇದಕ್ಕೆ ಸಾಕ್ಷಿಯಾಗಿ ನಿಲ್ಲಬಹುದು. ಇಂಟರ್ನೆಟ್ ಮಾಧ್ಯಮ ಅಷ್ಟರಲ್ಲಿರಲಿ, ಕೇವಲ ಬರವಣಿಗೆಯೂ ಇಲ್ಲದ ಕಾಲದಲ್ಲೇ ಬೃಹದ್ಕಾವ್ಯಗಳನ್ನು ರಚಿಸಿ, ಅದನ್ನು ವಾಗ್ರೂಪದಲ್ಲಿ ಸಂರಕ್ಷಿಸಿ, ಪೀಳಿಗೆಯಿಂದ ಪೀಳಿಗೆಗೆ ಪ್ರವಹಿಸಿ, ನಮ್ಮ ಪೀಳಿಗೆಯವರೆಗೂ ಅದನ್ನು ಉಡುಗೊರೆಯನ್ನಾಗಿ ಉಳಿಸಿರುವ ನಮ್ಮ ಪೂರ್ವಜರ ಅದ್ಭುತ ದೂರದರ್ಶಿತ್ವ ಹಾಗೂ ನೆನಪಿನ ಶಕ್ತಿಯನ್ನು ಸ್ಮರಿಸಿದರೇ ನಮಗೆ ರೋಮಾಂಚನವಾಗುತ್ತದೆ. ಸ್ಮರಣಶಕ್ತಿಗೆ ಅನುಕೂಲವಾಗುವಂತಹ ವಿಧಾನಗಳೂ ಸಂಸ್ಕೃತ ಭಾಷೆಯಲ್ಲಿ ಉದ್ದೇಶ ಪೂರ್ವಕವಾಗಿಯೋ ಅಥವಾ ಆಕಸ್ಮಿಕವಾಗಿಯೋ ಅಡಕವಾಗಿವೆಯೆನ್ನುವ ಅಂಶ ಭಾಷೆಯ ಅಧ್ಯಯನದಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಬೇರು ಸೂರು

ಇತ್ತೀಚಿನ ದಿನಗಳಲ್ಲಿ ಅಮೆರಿಕಾ ದೇಶದಲ್ಲಿ ಸಂಸ್ಕೃತ ಭಾಷಾಧ್ಯಯನದ ವಿಷಯವಾಗಿ ಹಿಂದೆಂದೂ ಕಾಣದಷ್ಟು ಒಂದು ನವನಿರ್ಮಾಣ ಕ್ರಾಂತಿಯೇ (renaissance) ಉದಯವಾಗಿದೆ. ಈ ನವನಿರ್ಮಾಣ ಕ್ರಾಂತಿಯ ಮುಂಚೂಣಿಯಲ್ಲಿ 'ಸಂಸ್ಕೃತ ಭಾರತಿ' ಸಂಸ್ಥೆಯ ಅಮೆರಿಕಾ ಘಟಕವಾದ 'ಸಂಸ್ಕೃತ ಭಾರತಿ ಯು.ಎಸ್.ಎ.' (http://www.samskritabharatiusa.org) ಮುಂದಾಳತ್ವವನ್ನು ವಹಿಸಿದೆ. ಅಮೆರಿಕಾ ದೇಶದಲ್ಲೇ ಹುಟ್ಟಿ ಬೆಳೆದು ಹೈಸ್ಕೂಲು ವಿದ್ಯಾಭ್ಯಾಸವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗಾಗಿ ರಚಿಸಿದ Samskritam As a Foreign Language (SAFL) ಎಂಬ ಅಧ್ಯಯನ ಯೋಜನೆ ಇದಕ್ಕೆ ಒಂದು ಉತ್ತಮ ಉದಾಹರಣೆ. 'ಸಂಸ್ಕೃತ ಅಧ್ಯಯನದ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಲಿತವಿರುವ ಅನೇಕ ಕಾವ್ಯ, ಧರ್ಮ ಹಾಗೂ ತತ್ವ ಸಿದ್ಧಾಂತಗಳನ್ನು ವಿದ್ಯಾರ್ಥಿಗಳು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ' ಎನ್ನುವ ನಂಬಿಕೆ ಹಾಗೂ ಗುರಿ ಈ ಅಧ್ಯಯನ ಯೋಜನೆಯನ್ನು ಪ್ರೇರೇಪಿಸಿದೆ. ಆಧುನಿಕ ಹಾಗೂ ಸೃಜನಶೀಲ ಶೈಕ್ಷಣಿಕ ವಿಧಾನಗಳನ್ನು ಅಳವಡಿಸಿಕೊಂಡು ಮೂರು ವರ್ಷಾವಧಿಯ ಈ ದೂರ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ತರಬೇತಿ ಹೊಂದಿದ ಉತ್ತಮ ಗುಣಮಟ್ಟದ ಶಿಕ್ಷಕರು, ಹೆಚ್ಚಿನ ಶಿಕ್ಷಕ-ವಿದ್ಯಾರ್ಥಿ ಸಂಖ್ಯಾ ಪ್ರಮಾಣ, ಶಿಕ್ಷಕರೊಡನೆ ವಿದ್ಯಾರ್ಥಿಗಳ ನೇರಸಂಬಂಧ, ವರ್ಷಕ್ಕೊಮ್ಮೆ ಸಂಸ್ಕೃತಮಯವಾದ Residential camps, ಹೀಗೆ ಮುಂತಾದ ಅಂಶಗಳಿಂದ ಈಗಾಗಲೇ ಪ್ರಯೋಜನ ಪಡೆದಿರುವ ಅನೇಕ ಅಮೆರಿಕಾ ವಿದ್ಯಾರ್ಥಿಗಳು ಸಂಸ್ಕೃತದ ಶ್ರವಣ, ಸಂಸ್ಕೃತದಲ್ಲೆ ಮಾತನಾಡುವುದು ಹಾಗೂ ಓದುವ ಬರೆಯುವ ಸಾಮರ್ಥ್ಯಗಳನ್ನು ಗಳಿಸಿದ್ದಾರೆ.

ಇದರ ಜೊತೆಗೆ ಎಳೆಯರಿಗಾಗಿ ಬಾಲಗಣ ಹಾಗೂ ವಯಸ್ಕರಿಗಾಗಿಯೂ ಕೂಡ ಸಂಸ್ಕೃತ ಭಾರತಿ ಯು.ಎಸ್.ಎ. ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಅಮೇರಿಕಾ ದೇಶದ ಮೂಲೆ ಮೂಲೆಗಳಲ್ಲಿ ಹಲವಾರು ನಗರಗಳಲ್ಲಿ ಸಂಸ್ಥೆಯ ಸ್ವಯಂಸೇವಕರು ಸಂಜೆ ಶಾಲೆಗಳನ್ನು ನಿರ್ವಹಿಸುತ್ತಿದ್ದಾರೆ. ಮುಖತಃ ಶಾಲೆಗೆ ಬರಲು ಸಾಧ್ಯವಾಗದಿದ್ದವರಿಗೋಸ್ಕರ ದೂರವಾಣಿ ಅಥವಾ ಗೂಗಲ್ ಪ್ಲಸ್ ಮೂಲಕವೂ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಶಾಲೆಗಳನ್ನು ಉತ್ತಮವಾಗಿ ನಡೆಸಿಕೊಂಡು ಹೋಗಲು ಶಕ್ತರಾದ ಶಿಕ್ಷಕವರ್ಗದ ನಿರ್ಮಾಣಕ್ಕಾಗಿ ಶಿಕ್ಷಕ ಪ್ರಶಿಕ್ಷಣ (Teachers training) ವ್ಯವಸ್ಥೆಯನ್ನೂ ನಿರ್ಮಿಸಲಾಗಿದೆ. ದೇಶದ ಹಲವೆಡೆ ಪ್ರತಿವರ್ಷ ಹಲವಾರು ಸಂಸ್ಕೃತ ಶಿಬಿರಗಳೂ (Residential camps) ನಡೆಯುತ್ತವೆ. ಜ್ಞಾನಾರ್ಜನೆಯೊಂದಿಗೆ ಮನೋರಂಜನೆಯನ್ನೂ ಸಮನ್ವಯಗೊಳಿಸಿ ನಡೆಸುವ ಈ ಶಿಬಿರಗಳು ಸಂಸ್ಕೃತ ಕಲಿಕೆಯನ್ನು ಬಹಳ ಸರಳವಾಗಿಸುತ್ತವೆ. ಶಿಕ್ಷಣವು ಅನೇಕ ಸ್ತರಗಳಲ್ಲಿ ನಡೆಯುವ ಕಾರಣ ಭಾಷೆ ಅರಿಯದ ಹೊಸ ವಿದ್ಯಾರ್ಥಿಗಳಿಂದ ಹಿಡಿದು ಅಧಿಕ ಮಟ್ಟದ ಅಧ್ಯಯನವನ್ನು

ಪಡೆಯಲು ಆಸಕ್ತಿ ಇರುವ ಸಂಸ್ಕೃತಜ್ಞರೂ ಕೂಡ ಇದರ ಪೂರ್ಣ ಪ್ರಯೋಜನವನ್ನು ಪಡೆಯಬಹುದು. ಭಾಷೆಯನ್ನು ಕಲಿಯುವುದರ ಜೊತೆಗೆ ಯೋಗ್ಯತಾ ದೃಢೀಕರಣ ಪತ್ರವನ್ನು (certification) ಕೂಡ ಪಡೆಯಲು ಆಸಕ್ತಿಯಿರುವವರಿಗೆ ನಿಯಮಿತ ಅಧ್ಯಯನ ಸಾಮಗ್ರಿಗಳು ಹಾಗೂ ವರ್ಷಕ್ಕೆರಡು ಬಾರಿ (ನವೆಂಬರ್ ಹಾಗೂ ಮೇ ಮಾಸದಲ್ಲಿ) ಪರೀಕ್ಷೆಗಳನ್ನು ಕೂಡ ನಿಯೋಜಿಸಲಾಗಿದೆ. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಸಹಯೋಗದಿಂದ ಸಂಸ್ಕೃತಭಾಷಾ ವಿಷಯದಲ್ಲಿ M.A. ಪದವಿಯನ್ನೂ ಕೂಡ ಪಡೆಯಬಹುದಾದ ಭಾಗ್ಯ ಸಂಸ್ಕೃತ ಭಾರತಿ ಯು.ಎಸ್.ಎ. ವತಿಯಿಂದ ಅಮೆರಿಕಾ ಸಂಸ್ಕೃತಾಸಕ್ತರಿಗೆ ದೊರಕಿದೆ.

ಸಂಸ್ಕೃತ ಭಾರತಿ ಯು.ಎಸ್.ಎ. ಅಳವಡಿಸಿಕೊಂಡಿರುವ ಒಂದು ವೈಶಿಷ್ಟ್ಯಮಯ ವಿಧಾನವೆಂದರೆ ಪ್ರಾಥಮಿಕ ಹಂತದಲ್ಲಿ ಸಂಸ್ಕೃತ ಸಂಭಾಷಣೆಗೆ ಕೊಡುವ ಪ್ರಾಮುಖ್ಯ. ಇದರಿಂದ ಸಂಸ್ಕೃತ ಜ್ಞಾನ ಆಳವಾಗಿ ಬೇರೂರಿ ಉನ್ನತಸ್ತರದ ಅಧ್ಯಯನಕ್ಕೆ ಬಹಳಷ್ಟು ಸಹಾಯವಾಗುತ್ತದೆ. ಸಂಸ್ಕೃತ ಅತಿ ಕ್ಲಿಷ್ಟಕರವಾದ ಭಾಷೆ ಎಂಬ ಮೂಢ ನಂಬಿಕೆಯೂ ಇದರಿಂದ ತೊಲಗುತ್ತದೆ. ಹಿಂದೆಂದೂ ಸಂಸ್ಕೃತವನ್ನು ಅಧ್ಯಯನ ಮಾಡದೆ ಕಳೆದೆರಡು ವರ್ಷಗಳಲ್ಲೆ ಸಂಸ್ಕೃತ ಭಾರತಿಯ ಸಹವಾಸ ಭಾಗ್ಯದಲ್ಲಿ ಸಂಸ್ಕೃತ ಸಂಭಾಷಣೆಯ ಸಾಮರ್ಥ್ಯವನ್ನು ಗಳಿಸಿದ ನನ್ನ ಸ್ವಾನುಭವವೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ. ಸಂಸ್ಕೃತ ಭಾರತಿ ನಡೆಸುವ ಪ್ರತಿಯೊಂದು ಕಾರ್ಯಕ್ರಮಗಳೂ, ಶಿಬಿರಗಳೂ, ದೂರವಾಣಿ ಮೀಟಿಂಗುಗಳು, ಸರ್ವವೂ ಸಂಸ್ಕೃತಮಯ, ಎಲ್ಲ ಸಂಭಾಷಣೆಯೂ ಸಂಸ್ಕೃತದಲ್ಲಿ!

ಈಗಾಗಲೇ ಭರದಿಂದ ಸಾಗುತ್ತಿರುವ ಸಂಸ್ಕೃತ ಭಾಷಾವರ್ಧನೆಯನ್ನು ಮತ್ತೂ ಚುರುಕುಗೊಳಿಸಬೇಕೆಂಬ ಆಶಯದಿಂದ 2012ನೆಯ ವರ್ಷದ ಮಧ್ಯದಲ್ಲಿ ನಡೆದ ಚರ್ಚೆಯ ಫಲಿತಾಂಶವೇ 'ಸಂಸ್ಕೃತ ಅಭಿಯಾನಂ' ಯೋಜನೆ. ವರ್ಷಾಂತದ ಮೂರು ತಿಂಗಳಲ್ಲಿ ಅಮೆರಿಕಾ ಸಂಸ್ಥಾನದ (ಹಾಗೂ ಕೆನಡಾದ) ನವವಿದ್ಯಾರ್ಥಿಗಳಿಗಾಗಿ 108 ವಾರಾಂತ್ಯದ ಶಿಬಿರಗಳನ್ನು ನಡೆಸುವ ಅದ್ಭುತ ಯೋಜನೆಯಿದು. ಮೂರು ತಿಂಗಳುಗಳಲ್ಲಿ ಇಷ್ಟೊಂದು ಶಿಬಿರಗಳನ್ನು ನಡೆಸುವುದು ಕಾರ್ಯಸಾಧ್ಯವೇ ಎನ್ನುವ ಅಳುಕು ಸಹಜವಾದರೂ ಸಾಧಿಸಲೇ ಬೇಕೆಂಬ ಛಲ ಅದನ್ನು ಮೆಟ್ಟಿ ನಿಂತಿತು. ಮೂವತ್ತಕ್ಕೂ ಮೀರಿದ ಶಿಕ್ಷಕರು ಹಾಗೂ ನೂರಕ್ಕೂ ಅಧಿಕ ಕಾರ್ಯಕರ್ತರ ನಿರಂತರ ಶ್ರಮ, ಶ್ರದ್ಧೆ ಹಾಗೂ ಛಲದ ಪರಿಣಾಮವಾಗಿ ಈ ಕಾರ್ಯಕ್ರಮ ಅದ್ಭುತ ಸಫಲತೆಯನ್ನು ಕಂಡುಕೊಂಡಿತು. ದೇಶದೆಲ್ಲೆಡೆಯಲ್ಲಿ ಸಾವಿರಕ್ಕೂ ಅಧಿಕ ನೂತನ ವಿದ್ಯಾರ್ಥಿಗಳು ಈ ಶಿಬಿರಗಳಲ್ಲಿ ಭಾಗವಹಿಸಿದರು. ಇದರಿಂದ ಉತ್ತೇಜನಗೊಂಡ ಕಾರ್ಯಕರ್ತರು 2013ರಲ್ಲಿ ಇದಕ್ಕೂ ಮೀರಿದ 150 ವಾರಾಂತ್ಯ ಶಿಬಿರಗಳನ್ನು ನಡೆಸುವ ಅಭಿಯಾನ ಕಾರ್ಯಕ್ರಮವನ್ನು ನಿಯೋಜಿಸಬೇಕೆಂಬ ಆಶಯವನ್ನು ಹೊಂದಿದ್ದಾರೆ. ತಮ್ಮ ಪಾಂಚಜನ್ಯದಿಂದ ಇದೇ ಅಮೆರಿಕೆಯಲ್ಲಿ ಭಾರತೀಯ ಸಂಸ್ಕೃತಿಯ ಸಿಂಹನಾದ

ಮೊಳಗಿಸಿದ ಸನಾತನ ಧರ್ಮವೀರ ಶ್ರೀ ಸ್ವಾಮಿ ವಿವೇಕಾನಂದರ 150ನೆಯ ಜನ್ಮ ಮಹೋತ್ಸವಕ್ಕೆ ತಕ್ಕುದಾದಂತಹ ಗುರುಕಾಣಿಕೆಯಿದು.

ಸಂಸ್ಕೃತ ಅಪ್ರಚಲಿತ ಭಾಷೆಯೆಂಬ ಅಪಪ್ರಚಾರ ಹಲವಾರು ವರ್ಷಗಳಿಂದ ನಮ್ಮಲ್ಲಿ ತಪ್ಪು ತಿಳುವಳಿಕೆಯನ್ನುಂಟು ಮಾಡಿದೆ. ಇಂದಿಗೂ ಸಂಸ್ಕೃತ ಪ್ರತಿಯೊಂದು ಭಾರತೀಯ ಭಾಷೆಯಲ್ಲೂ ಅಂತರ್ಗತವಾಗಿ ಜೀವಂತವಾಗಿದೆ. ಅದಕ್ಕೆ ಉದಾಹರಣೆಯಾಗಿ, ಕನ್ನಡ ಪ್ರೇಮದಿಂದ ಕನ್ನಡದಲ್ಲೇ ಬರೆದ ಈ ಲೇಖನವನ್ನೇ ನೋಡಬಹುದು. ಈ ಲೇಖನದಲ್ಲಿ ಸುಮಾರು 80 ಪ್ರತಿಶತ ಪದಗಳು ಸಂಸ್ಕೃತದಿಂದ ಯಥಾವತ್ ರೂಪದಲ್ಲಿ ಅವತರಿಸಿದ ಪದಗಳೇ. ಇದು ಈ ಲೇಖನಕ್ಕೆ ಮಾತ್ರವೇ ಅಲ್ಲ, ಕನ್ನಡದ ಯಾವುದೇ ಉತ್ತಮ ಸಾಹಿತ್ಯವನ್ನು ತೆಗೆದುಕೊಂಡು ಪರಿಶೀಲಿಸಿದರೂ ಈ ಅಂಶ ದೃಗ್ಗೋಚರವಾಗುತ್ತದೆ. ಈ ಮಾತು ಒಂದು ನೂರು ಕೋಟಿ ಜನರ ನಾಲಿಗೆಯ ಮೇಲೆ ನಿತ್ಯವೂ ಹರಿದಾಡುವ ಪ್ರತಿಯೊಂದು ಭಾರತೀಯ ಭಾಷೆಗೂ ಅನ್ವಯವಾಗುತ್ತದೆ. ಹೀಗಿರುವಾಗ ಸಂಸ್ಕೃತವನ್ನು ಅಪ್ರಚಲಿತ ಭಾಷೆಯೆಂದು ಹೇಳುವುದಾದರೂ ಹೇಗೆ ಸಾಧ್ಯ?

ಕನ್ನಡದ ದಾರ್ಶನಿಕ ಕವಿ ಕುವೆಂಪುರವರು ಕನ್ನಡಮ್ಮನನ್ನು ಭಾರತಜನನಿಯ ತನುಜಾತೆಯೆಂದು ಕರೆದರು. ಕನ್ನಡ ಭಾಷೆಯ ಮೂಲ ಉಗಮ ಹೇಗಾದರೂ ಆಗಿರಲಿ, ಅದರ ಸಮಗ್ರ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಲ್ಲಿ ಹೇಳುವುದಾದರೆ ಕನ್ನಡ ಭಾಷೆಯನ್ನು ಸಂಸ್ಕೃತ ಭಾಷೆಯ ತನುಜಾತೆಯೆಂದೂ ಕರೆಯಬಹುದು. ಕನ್ನಡ ಸಾಹಿತ್ಯ ಭಾಷಾ ಸುಗಂಧವನ್ನು ಆಘ್ರಾಣಿಸಲು ಸಂಸ್ಕೃತ ಭಾಷೆಯ ಜ್ಞಾನ ಅತಿ ಸಹಾಯಕ. ಕನ್ನಡ ಸಾಹಿತ್ಯದ ಅರಿವಿರುವ ಕನ್ನಡಿಗರಿಗೆ ಸಂಸ್ಕೃತ ಅಧ್ಯಯನ ಅತಿ ಸರಳ ಕೂಡ. ಯಾವುದೇ ಹೊಸ ಭಾಷೆಯನ್ನು ಕಲಿಯುವಾಗ ಆ ಭಾಷೆಯ ಶಬ್ದ ನಿಘಂಟನ್ನು ನಮ್ಮದಾಗಿಸಿಕೊಳ್ಳುವುದು ಅತಿ ಕ್ಲಿಷ್ಟವಾದ ಕೆಲಸ, ಅದರಲ್ಲೂ ಆ ಶಬ್ದಭಂಡಾರ ಕೇವಲ ಸ್ಮರಣ ಶಕ್ತಿಯ ಕಸರತ್ತಾಗಿ ಉಳಿಯದೆ ಅದನ್ನು ಭಾವನಾಲೋಕದಲ್ಲಿ ಅಂತರ್ಗತಗೊಳಿಸುವುದು ಇನ್ನೂ ಕಷ್ಟಕರ. ಇದಕ್ಕೆ ಹಲವಾರು ವರ್ಷಗಳ ಪರಿಶ್ರಮಯುಕ್ತ ಸಾಧನೆಯೇ ಬೇಕಾಗುತ್ತದೆ. ಆದರೆ ಸಂಸ್ಕೃತ ಕಲಿಯಲೆತ್ನಿಸುವ ಕನ್ನಡಿಗರ ವಿಷಯವೇ ಬೇರೆ. ನವಜಾತ ಶಿಶುವಿಗೆ ಹುಟ್ಟುತ್ತಲೇ ತಾಯಿಯ ಹಾಲು ಉಣ್ಣುವ ಕಲೆ ಸಹಜವಾಗಿ ಬರುವಂತೆ ಕನ್ನಡದ ಕಂದಮ್ಮಗಳು ಸಂಸ್ಕೃತದ ಮೊದಲ ಪಾಠವನ್ನು ಪಠಿಸುವ ಮೊದಲೇ ಸಂಸ್ಕೃತದ ಸಹಸ್ರಾರು ಶಬ್ದಗಳು ಅವರ ಸ್ಮರಣಪಟದಲ್ಲಿ ಅಚ್ಚು ಒತ್ತಿರುತ್ತವೆಯೆಂಬುದು ಕನ್ನಡಿಗರ ಸೌಭಾಗ್ಯವಲ್ಲದೆ ಮತ್ತೇನು!

ಬೇರು ಸೂರು

ನಿನ್ನ ಪ್ರೀತಿಗೆ ಅದರ ರೀತಿಗೆ ಕಣ್ಣ ಹನಿಗಳೆ ಕಾಣಿಕೆ



– ಶಾಂತಲಾ ಭಂಡಿ

ಸುಮ್ಮನೆ ಕೂತಿದ್ದರೆ ನೆನಪುಗಳು ಮುತ್ತಿಕೊಂಡು ಬರತ್ವೆ. ಒಮ್ಮೊಮ್ಮೆ ಮುದ್ದಾಗಿ, ಇನ್ನೊಮ್ಮೆ ಒಡೆದು ಹೋದ ಮುತ್ತಾಗಿ, ಕೈಗೂ ಸಿಗದೇ ಮನಸ್ಸೊಳಗೆ ಚದುರಿಹೋಗತ್ವೆ. ಎಷ್ಟೊಂದು ನೆನಪುಗಳಿವೆ. ಯಾವುದನ್ನ ಅಂತ ಬರೆಯೋದು. ಯಾವುದನ್ನ ಬರೆದ್ರೆ ಚೆನ್ನಾಗಿರತ್ತೆ. ಯಾವುದನ್ನ ಬರೆದ್ರೆ ಮನಸ್ಸು ಒಪ್ಪಬಹುದು... ಯೋಚಿಸ್ತಲೇ ಬರೆಯೋಕೆ ಕೊಟ್ಟ ಗಡಿವು ಮುಗಿದು ಹೋಗ್ತಿದೆ. ಈ ನೆನಪುಗಳೇ ಹೀಗೆ, ಬರೆದ್ರೆಷ್ಟೋ ಬಿಟ್ರೆಷ್ಟು! ಕೆಲವೊಂದು ನೆನಪುಗಳು ಮನಸನ್ನ ಬಿಟ್ಟು ಎಲ್ಲೂ ಬರೋಲ್ಲ ಅನ್ನುತ್ವೆ, ಬರೆಯೋಕೂ ಆಗೋಲ್ಲ, ಹೇಳೋಕೂ ಆಗೋಲ್ಲ. ಹಾಳಾದ ನೆನಪು, ಯಾಕಾದ್ರೂ ಇರತ್ತೋ! ಮರೆತೇ ಹೋಗಿದ್ರೆ ಚೆನ್ನಾಗಿತ್ತು, ಮರೆಯೋದೂ ಇಲ್ಲ.

ನಾನು ಮತ್ತು ಅವಳು, ಎಲ್ಲ ಸೇರಿ ಅಡುಗೆ ಆಟ ಆಡಿದ್ದನ್ನ ಬರೀಬೇಕ? ಅಥ್ವಾ ಅಂಗಳದ ಮಣ್ಣನ್ನ ತಲೆ ಮೇಲೆ ಸುರುವಿಕೊಂಡು ನೆತ್ತಿ ಕೆಂಪಾಗಿದ್ದನ್ನ ನೋಡಿ ಅಮ್ಮ ಗಾಬರಿಯಾಗಿದ್ದನ್ನ ಬರೀಬೇಕ? ಅಥವಾ ತಲೆ ಎಲ್ಲ ಮಣ್ಣಾಯ್ತು ಅಂತ ನಾವು ಇಬ್ಬರೂ ಒಬ್ಬರ ಮೇಲೊಬ್ಬರು ತಪ್ಪು ಹೊರಿಸಿಕೊಂಡು ಕಿತ್ತಾಡಿದ್ದನ್ನ ಬರೀಬೇಕ? ಯಾವುದನ್ನ ಬರೆದ್ರೂ ಚೆನ್ನಾಗಿರತ್ತೆ. ಸೀರೆ ಅಂಗಡಿ ಮುಂದೆ ನಿಂತು ಎಷ್ಟೆಲ್ಲ ಒಳ್ಳೊಳ್ಳೆ ಸೀರೆಗಳ ಮಧ್ಯೆ ಒಂದೇ ಒಂದು ಸೀರೆ, ನಿಂಗಿಷ್ಟವಾದದ್ದನ್ನ ತಗೋಬೇಕು ಅಂದ್ರೆ ಎಷ್ಟು ಕಷ್ಟ ಅಲ್ವ?

ಇಲ್ಲಿ ನಿನಗೆ ಎಲ್ಲಾರೂ ಬೇಕಾದವ್ರೇ, ಎದ್ರಿಗಿಲ್ಲಾಂದ್ರೂ ಮರೆಯೋಕಾಗದಂಥ ಮಂದಿ. ಅವ್ರಲ್ಲಿ ಒಬ್ಬರೇ ಒಬ್ಬರನ್ನ ಒಳ್ಳೆಯವ್ರನ್ನ ಆಯ್ಕೆ ಮಾಡ್ಕೋ ಅಂದ್ರೆ ತುಂಬ ಕಷ್ಟದ ಕೆಲ್ಸ. ಯಾರನ್ನ ಆಯ್ಕೆ ಮಾಡ್ಕೊಂಡ್ರೆ ಇನ್ಯಾರಿಗೆ ಬೇಜಾರಾಗತ್ತೋ ಅನ್ನಿಸತ್ತೆ. ಹೀಗೆ ಒಬ್ಬರನ್ನೇ ಆಯ್ಕೆ ಮಾಡ್ಕೊಂಡ್ರೆ ನಿನ್ನ ಮನಸ್ಸಿಗೂ ಒಂಥರಾ ಅತೃಪ್ತವಾದ ಗಿಲ್ಟು ಕಾಡ್ಬಹುದು ಕೊನೇತನಕ.

ಎಷ್ಟೆಲ್ಲ ನೆನಪು. ಒನಪು ವಯ್ಯಾರದ್ದು, ಸರ ಸರನೆ ಸರಿದು ಹೋದ ಸುಂದರ ದಿನಗಳದ್ದು, ಗಳಗಳನೆ ಅತ್ತು ಹಗುರಾದ ಹೊತ್ತು, ಕಿಲಕಿಲನೆ ನಕ್ಕ ನವಿರು ಕ್ಷಣ, ಅಜ್ಜ ತಂದುಕೊಟ್ಟ ಪೆಪ್ಪರಮೆಂಟು, ಮಧ್ಯರಾತ್ರಿಯಾಗಿರಲಿ, ಇದು ಬೇಕೇಂತ ಹಟ ಹಿಡಿದ ಹೊತ್ತಲ್ಲಿ ಅದನ್ನೇ ಮಾಡಿಕೊಟ್ಟ ಅಜ್ಜ, ಕ್ರೀಮ್ ಬಿಸ್ಕೇಟೇ ಬೇಕು ಅಂತ ಅತ್ತಾಗ ಪಾರ್ಲೆಜಿ ಬಿಸ್ಕೇಟಿಗೆ ಬೆಣ್ಣೆ, ಅರಿಶಿಣ, ಸಕ್ಕರೆ ಬೆರೆಸಿ ಬೆಣ್ಣೆ ಹಚ್ಚಿದ್ದ ಅಮ್ಮ, ಅಂತಂಥ ಹೊತ್ತಲ್ಲಿ

ಜೊತೆಬಿಡದ ಅಪ್ಪ, ಯಾವಾಗಲೂ ಜೊತೆಗಿರುತ್ತೇನಂತ ಮಾತುಕೊಟ್ಟು ಮತ್ತ್ಯಾವಾಗಲೂ ಸಿಗದೇ ದೇವರಲ್ಲಿಗೆ ಹೋದ ಅಜ್ಜ... ಅಜ್ಜ, ಅಜ್ಜಿ, ಫ್ರೆಂಡ್ಸು, ಮನೆ, ಸುತ್ತಮುತ್ತ, ಕೆರೆಏರಿ, ತಂಗಾಳಿ, ತೋಟ, ಗದ್ದೆ, ಅರಳೀಕಟ್ಟೆ, ದಿನವೂ ಕಾಣುತ್ತಿದ್ದ ಕೆಂಪುಬಣ್ಣದ ಬಸ್ಸು, ಪಾಟಿ, ಬಣ್ಣದಕಡ್ಡಿ, ಪಾಟೀಚೀಲ, ಸಣ್ಣ ಓಣಿ, ದೊಡ್ಡ ಓಣಿ, ಸುಂದರ್ಶಿ ಮಾವಿನಮರ, ಹುಣಸೇಕಾಯಿ, ನೆಲ್ಲೀಕಾಯಿ, ನೇರಳೇ ಹಣ್ಣು, ಸಂಪಿಗೆಹಣ್ಣು, ಆಲದ ಮರ, ದೊಡ್ಡ ಹಿತ್ಲು, ದೇವಸ್ಥಾನ, ಜಾರುಬಂಡೆ, ಭೂತಪ್ಪನ ಕಟ್ಟೆ, ಮಾರಿಗುಡಿ, ಮಾರೀಕೋಣ, ದೊಡ್ಡ ಹಬ್ಬ, ಜಾತ್ರೆ, ಬೆಳದಿಂಗಳೂಟ... ಯಾವುದು ಬರೀಲಿ, ಏನು ಹೇಳ್ಲಿ?

ಈಗ ಬಂದಿರೋ ಕಷ್ಟ ಅದಲ್ಲ, ಅಲ್ಲಿಂದ ಇಲ್ಲಿಗೆ ಬಂದಿದೀಯ, ಇಲ್ಲಿ ಏನು ನೋಡ್ದೆ ಹೇಳು! ಏನು ನೋಡ್ದೆ ಅನ್ನೋದಕ್ಕಿಂತ ಏನೇನು ನೋಡ್ಲಿಲ್ಲ ಅನ್ನೋ ವಿಚಾರ ಬರತ್ತೆ. ತೀರ ವೈಯಕ್ತಿಕವಾದವು, ಪುಟ್ಟ ವಿಚಾರಗಳು, ಬೇಕಂದ್ರೆ ಆ ಹೊತ್ತಿಗೇ ಮರೆತ್ಬಿಡಬಹುದಾಗಿತ್ತು ಅನ್ನೋವಂಥವು, ಸುಮ್ಮನೆ ಜೊತೆಯಲ್ಲಿ ಸಾಗತ್ವೆ. ಮರೆಯೋಣ ಅಂತ ಯೋಚಿಸಿಯೂ ಇಲ್ಲ, ಮರೆತು ಹೋಗ್ಬೇಕು ಅಂತ ಆ ನೆನಪುಗಳಿಗೂ ಗೊತ್ತಾಗಿಲ್ಲ. ಜೊತೇಲಿ ಬರ್ತಲೇ ಇವೆ, ಇನ್ನೆಷ್ಟು ದಿನ ಇರತ್ವೋ ಗೊತ್ತಿಲ್ಲ. ಅಂಥದೇ ನೆನಪುಗಳಲ್ಲಿ ಒಂದು ಪುಟ್ಟ ನೆನಪು ಸದಾ ಕಾಡತ್ತೆ. ಅದೆಂದರೆ:

ಒಂದು ಕಡೆ ಮನೆ ಬದಲಾಯಿಸಿದ ಗಡಿಬಿಡಿ, ಮತ್ತೊಂದೆಡೆ ಕನ್ನಡ ಸಾಹಿತ್ಯ ರಂಗಕ್ಕೆ ಹೋಗಿ ಬಂದ ಮನ ತುಂಬಿದ ಸಂಭ್ರಮ, ನೆನಪು. ಅದೇ ಗುಂಗಿನಲ್ಲಿ ಪ್ಯಾಟಿಯೋಕ್ಕೆ ಬಂದು ನಿಂತರೆ ಪೂರ್ತಿ ಖಾಲಿ ಪ್ಯಾಟಿಯೋ. ಆಗಲೇ ಅನ್ನಿಸಿತ್ತು, ಮಣ್ಣಿರುವಷ್ಟು ಜಾಗಕ್ಕೆ ನಾಲ್ಕು ಗಿಡಗಳನ್ನಾದರೂ ಹಾಕಬೇಕು ಅಂತ. ಬೀಜ ಹಾಕಿದರೆ ಮೊಳಕೆಯೊಡೆದು ಗಿಡವಾಗಿ ಬೆಳೆಯೋಕೆ ಸಮಯ ಬೇಕು. ಆಗಲೇ ಮೇ ತಿಂಗಳು ಶುರುವಾಗಿದೆ. ತಡಮಾಡದೇ ನಾಲ್ಕು ಟೊಮ್ಯಾಟೋ ಗಿಡಗಳನ್ನ ತಂದಿದ್ದೆ. ಮಣ್ಣಲ್ಲೀಗ ನೆಡುವುದು ಹೇಗೆ? ಯಾವತ್ತಾದರೂ ಇಂಥ ಕೆಲಸ ಮಾಡಿದ್ರೆ ತಾನೇ ಆಗಲೇ ತಿಳಿದಿರ್ತಿತ್ತು ಇವೆಲ್ಲ ಕಷ್ಟ. ಗೆಳತಿಗೆ ಫೋನಾಯಿಸಿದೆ. 'ಟೊಮ್ಯಾಟೋ ಸಸಿಯಾದ್ರೆ ದೊಡ್ಡ ಬಳ್ಳಿಯಂಗೆ ಬೆಳಿಯತ್ತೆ. ಸ್ವಲ್ಪ ನೆಲದಾಳಕ್ಕೇನೆ ನೆಡು. ಮುಕ್ಕಾಲು ಫೂಟಿನಷ್ಟಾದ್ರೂ ಆಳವಿರೋ ಗುಂಡಿ ತೋಡ್ಬೇಕು' ಅಂದುಬಿಟ್ಲು. ಈಗ ಬಂತು ನೋಡು ಕಷ್ಟ. ತಕ್ಷಣ ತಲೇಲಿ ಏನೋ ವಿಚಾರ ಹೊಳ್ದು ಮನೆ ಕೀಲಿಕೈ ತಗೊಂಡು, ಚಪ್ಪಲಿ ಹಾಕೊಂಡು ಹೊರಟೆ. ಅಲ್ಲಿ ಅಪಾರ್ಟ್ಮೆಂಟಿನ ಲಾನ್ ಟ್ರಿಮ್ ಮಾಡ್ತಿದ್ದ ಗಾರ್ಡನರ್ ಕಾಣ್ಸಿದ್ದೇ ತಗೋ... 'ಅಯ್ಯ... ಬಾಯಿ ಇದ್ರೆ, ತಾಯಿದ್ದಂಗಂತೆ' ಅಂತ ಅಜ್ಜಿ ಯಾವಾಗ್ಲೂ ಹೇಳ್ತಿದ್ರು. ಅದು ನಿಜ ಕೂಡ. ಗಾರ್ಡನರ್ ಹತ್ರ ಹೋಗಿ 'ಪ್ಯಾಟಿಯೋದಲ್ಲಿ ಟೊಮ್ಯಾಟೋ ಗಿಡ ನೆಡ್ಬೇಕು. ಹೆಲ್ಪ್ ಮಾಡ್ತೀರ' ಅಂತ ಕೇಳ್ದೆ. 'ಇದೀಗ ಅಪಾರ್ಟ್‌ಮೆಂಟನ ಕೆಲಸ ಮಾಡ್ತಿದ್ದೀನಿ, ಲಂಚ್ ಅವರ್ ಅಲ್ಲಿ ಬೇಕಿದ್ರೆ ಬಂದು ಹೆಲ್ಪ ಮಾಡ್ತೀನಿ' ಅಂದಿದ್ದರು

ಗಾರ್ಡನರ್. ಅಷ್ಟಕ್ಕೇ ಖುಷಿಯಾಗಿ ಥ್ಯಾಂಕ್ಸ್ ಹೇಳಿ, ಡೋರ್ ನಂಬರ್ ಕೊಟ್ಟು ಬಂದಿದ್ದೆ.

ತನ್ನ ಮಧ್ಯಾಹ್ನದ ಊಟದ ಸಮಯದಲ್ಲಿ ಬಂದ ಗಾರ್ಡನರ್ ಪ್ಯಾಟಿಯೋದೊಳಗೆ ತನ್ನ ಹತಾರೆಗಳೊಂದಿಗೆ ನಿಂತಿದ್ದನ್ನು ನೋಡಿ ತುಂಬಾನೆ ಖುಷಿಯಾಯ್ತು. ಗಿಡ ನೆಡದಲೇ ಒಣಗಿ ಹೋಗೋಕೂ ಮೊದಲು ಅದಕ್ಕೊಂದು ಸದ್ಗತಿ ಕಾಣ್ಸ್ತಿದ್ದಾರಲ್ಲ ಇವರಾದರೂ ಅಂತ. ಐದು ಟೊಮೆಟೋ ಗಿಡಗಳನ್ನು ಎರಡೆರಡು ಫೀಟ್ ಅಂತರದಲ್ಲಿ ಫೂಟ್ ಆಳದಷ್ಟು ಗುಂಡಿ ತೋಡಿ ನೆಟ್ಟು ಹೋದ. ಹೋಗುವಾಗ ಈ ಗಿಡಕ್ಕೆ ಚೆನ್ನಾಗಿ ನೀರು ಮತ್ತು ಬೆಳಕು ಎರಡೂ ಬೇಕಾಗತ್ತೆ. ಚೆನ್ನಾಗಿ ಬಿಸಿಲು ಬಂದ್ರೆ ಒಳ್ಳೇ ಟೊಮ್ಯಾಟೋಗಳು ಬರತ್ವೆ ಅಂತ ಹೇಳಿ ಹೊರಟುಹೋದ. ಆ ಒಂದು ತಾಸಿನಲ್ಲಿ ಏನೆಲ್ಲ ಗಿಡಗಳು, ಅವುಗಳ ಆರೈಕೆ ಬಗ್ಗೆ ತಮ್ಮ ಅನೇಕ ಅನುಭವಗಳನ್ನು ಹಂಚಿಕೊಂಡ ಆ ಗಾರ್ಡನರ್ ತುಂಬ ಆಪ್ತರೆನಿಸಿದ್ದರು. 'ಒಂದು ಸೀಸನಲ್ ಫ್ಲವರ್ ಸೀಡ್ಸ್ ಇವೆ, ಮತ್ತು ಬೀನ್ಸ್ ಕಾಳುಗಳೂ ಇವೆ, ಕೊಡ್ತೀನಿ, ಬಿತ್ತು, ತುಂಬ ಸುಲಭಕ್ಕೆ ಬೆಳೆಯುತ್ವೆ, ಕಡಿಮೆ ಆರೈಕೆಯಲ್ಲಿ' ಅಂತ ಹೇಳಿ ಹೊರಟು ಹೋದ ಗಾರ್ಡನರ್ ಮತ್ತೆ ಸಿಕ್ಕಿದ್ದು ನಾಲ್ಕಾರು ದಿನಗಳ ಮೇಲೆ. ಮನೆ ಬಾಗಿಲನ್ನು ತಟ್ಟಿದವರ್ಯಾರೆಂದು ತೆರೆದರೆ ಗಾರ್ಡನರ್! ಹೂವಿನ ಬೀಜಗಳೊಂದಿಷ್ಟು ಇದ್ದವು, ಅವರೆ ಬೀಜ ಇರಲಿಲ್ಲ, ತಗೋ ಇವನ್ನ ಅಂತ ಕೊಟ್ಟು ಹೋದರು.

ಒಂದು ದೊಡ್ಡ ಪಾಟಿನಲ್ಲಿ ಆ ಬೀಜಗಳನ್ನ ಮಣ್ಣಿನಲ್ಲಿ ಹರವಿದ್ದೆ. ದಿನ ದಿನಕ್ಕೂ ಬೆಳೆಯುತ್ತಿದ್ದ ಟೊಮ್ಯಾಟೋ ಗಿಡಗಳನ್ನು ನೋಡಿ ಖುಷಿಪಡುವುದರ ಜೊತೆಗೆ ಹೂವಿನ ಬೀಜಗಳು ಮೊಳಕೆ ಬಂದವೇನು ಅಂತ ನೋಡುವುದನ್ನು ಮರೆಯಲಿಲ್ಲ. ಬೇಗ ಆ ಬೀಜಗಳೆಲ್ಲ ಮೊಳಕೆಯೊಡೆದು, ಗಿಡವಾಗಿ ಅವನ್ನ ನಾನು ಬೇರೆಡೆ ನೆಟ್ಟು ಅವು ಬೆಳೆದು ಯಾವ ತೆರನಾದ, ಯಾವ ಬಣ್ಣದ ಹೂವು ಅರಳಬಹುದು ಅನ್ನುವುದು ನನ್ನ ಕುತೂಹಲದ ಕನಸಾಗಿ ಅರಳುತ್ತಿತ್ತು. ವಾರದಲ್ಲಿ ಮೊಳಕೆಯೊಡೆದ ಬೀಜಗಳು ಖುಷಿಕೊಟ್ಟರೆ ಇನ್ನೂ ಬೆಳೆಯುತ್ತಿದ್ದ ಟೊಮ್ಯಾಟೋ ಗಿಡವೊಂದು ಪುಟ್ಟ ಹಳದಿ ಹೂವನ್ನು ಅರಳಿಸಿಕೊಂಡು ನನ್ನನ್ನು ಬೆರಗುಗೊಳಿಸಿತ್ತು. ಇನ್ನೊಂದು ವಿಷಯವೆಂದರೆ ದಿನವೂ ಗಿಡಗಳಿಗೆ ನೀರು ಉಣಿಸುವಾಗ ನೆನಪಾಗುತ್ತಿದ್ದದ್ದು – ಗಾರ್ಡನರ್ ತಾನು ನೆಟ್ಟ ಟೊಮ್ಯಾಟೋ ಗಿಡಗಳಿಗೆ ಆವತ್ತು ನೀರುಣಿಸಲು ತಂದುಕೊಂಡಿದ್ದ ಹೋಸ್‌ಅನ್ನು ನಮ್ಮ ಪ್ಯಾಟಿಯೋದಲ್ಲಿ ಬಿಟ್ಟು ಹೋಗಿದ್ದರು. ಮರೆತು ಹೋಗಿದ್ದರೋ, ಬೇಕೆಂತಲೇ ಬಿಟ್ಟು ಹೋಗಿದ್ದರೋ ಗೊತ್ತಿಲ್ಲ, ನಾನಂತೂ ದಿನಾಲೂ ನಾಳೆಯಾದರೂ ನಾನು ಹೊಸತೊಂದನ್ನು ತಂದುಕೊಂಡು ಇದನ್ನು ಗಾರ್ಡನರ್‌ಗೆ ಮರಳಿಸಿಬಿಡಬೇಕಂತ ಯೋಚಿಸುತ್ತಲೇ ಇದ್ದೆ.

ಆವತ್ತು ಸೋಮವಾರ ಬೆಳಿಗ್ಗೆ ಅನ್ನುವುದು ನೆನಪಿದೆ ಇನ್ನೂ. ಪ್ಯಾಟಿಯೋದಲ್ಲಿ

ನಿಂತಿದ್ದವಳಿಗೆ ಅಪಾರ್ಟ್ಮೆಂಟಿನ ಲಾನಿನಲ್ಲಿ ಗ್ರಾಸ್ ಟ್ರಿಮ್ ಮಾಡುತ್ತಿದ್ದ ಸದ್ದು ಕೇಳಿ ಅಲ್ಲಿ ಗಾರ್ಡನರ್ ಇದ್ದೇ ಇರುತ್ತಾರೆಂದು ಅನ್ನಿಸಿ ಭೇಟಿಯಾಗಿ ಅವರು ವಾಟರ್ ಹೋಸ್‌ಅನ್ನು ನಮ್ಮ ಪ್ಯಾಟಿಯೋದಲ್ಲಿಯೇ ಬಿಟ್ಟು ಹೋದದ್ದನ್ನೂ ಮತ್ತು, ನಮ್ಮ ಪ್ಯಾಟಿಯೋದಲ್ಲಿ ಅವರು ನೆಟ್ಟ ಗಿಡಗಳು ಈಗ ಮತ್ತಷ್ಟು ಹಸಿರಾಗಿರುವ ವಿಷಯವನ್ನು ಹೇಳಬೇಕೆಂದು ಆತುರದಲ್ಲಿ ಹೋದೆ. ಆದರೆ ಅಲ್ಲಿದ್ದ ಗಾರ್ಡನರ್ ಒಬ್ಬ ಯುವಕನಾಗಿದ್ದು ಇನ್ನೊಬ್ಬರು ವಯಸ್ಸಾದ ನನಗೆ ಸಹಾಯ ಮಾಡಿದ ಗಾರ್ಡನರ್ ಬಗ್ಗೆ ಕೇಳಿದರೆ 'ಗೊತ್ತಿಲ್ಲ', ತಾನಿಲ್ಲಿಗೆ ಹೊಸಬ ಅನ್ನುವ ಉತ್ತರ ಮಾತ್ರ ಸಿಕ್ಕಿತು.

ಹೀಗೆ ನಾಲ್ಕಾರು ದಿನ ಇವತ್ತು ಬಂದಿರಬಹುದು, ಇವತ್ತು ಬಂದಿರಬಹುದು ಅಂತ ಅಪಾರ್ಟ್ಮೆಂಟಿನ ಸುತ್ತೆಲ್ಲ ಸುತ್ತಿಕೊಂಡು ಬರುತ್ತಿದ್ದೆ. ಯಾವತ್ತೂ ಆ ಗಾರ್ಡನರ್ ಕಾಣಿಸಲಿಲ್ಲ. ಮತ್ತೆ ಕಂಡ ಹೊಸ ಗಾರ್ಡನರ್ ಹತ್ತಿರ ಕೇಳಿದೆ, 'ಇನ್ನೊಬ್ಬರು ಗಾರ್ಡನರ್ ಇದ್ದಾರಲ್ಲ, ಅವರೆಲ್ಲಿ?' ಅಂತ. 'ಇಲ್ಲಿ ನನ್ನೊಬ್ಬನನ್ನು ಬಿಟ್ಟು ಮಾತ್ಯಾರೂ ಗಾರ್ಡನರ್ ಇಲ್ಲ, ನಾನೊಬ್ಬನೇ ಇಡೀ ಅಪಾರ್ಟ್ಮೆಂಟಿನ ಗಾರ್ಡನ್ ನೋಡಿಕೊಳ್ಳುತ್ತಿರುವುದು' ಅಂತ ಹೇಳಿದ. ಈತ ಹೊಸಬನಾದ ಕಾರಣ ಈತನಿಗೆ ವಿಚಾರಗಳು ಗೊತ್ತಿರಲಿಕ್ಕಿಲ್ಲ ಅಂತ ನೇರ ಲೀಸಿಂಗ್ ಆಫೀಸಿನಲ್ಲಿ ವಿಚಾರಿಸೋಣ ಅಂತ ನಡೆದೆ. ಅಲ್ಲಿ ಕೇಳಿದರೆ ಮ್ಯಾನೇಜರ್ ಹೇಳಿದ್ದಿಷ್ಟು– 'ಅವನು ಇನ್ನಿಲ್ಲ ಬಿಡು. ತುಂಬ ಒಳ್ಳೆಯ ಗಾರ್ಡನರ್ ಆಗಿದ್ದ, ಅವನು ಮರಣ ಹೊಂದಿದ್ದು ನನಗೆ ತುಂಬ ದುಃಖವಾಗಿದೆ. ಹೊಸ ಗಾರ್ಡನರ್ ಬಂದಿದ್ದಾನೆ, ಏನಾದರೂ ಸಹಾಯ ಬೇಕಿದ್ದರೆ ಅವನೇ ಮಾಡುತ್ತಾನೆ, ವಿಚಾರಿಸು' ಅಂದಿದ್ದಳು. ಇಲ್ಲ, ನನಗೆ ಅದೇ ಹಳೆಯ ಗಾರ್ಡನರ್ ಹತ್ತಿರ ನನ್ನ ಖುಷಿಯೊಂದನ್ನು ಹಂಚಿಕೊಳ್ಳುವುದಿತ್ತು, ಅವನು ಮರೆತುಹೋದ ವಸ್ತುವನ್ನು ಅವನಿಗೆ ಮರಳಿಕೊಡಬೇಕಿತ್ತು ಅಂತ ಅವಳಿಗೆ ಹೇಳಿದರೆ ಗಾರ್ಡನರಿಗೆ ಕೇಳಿಸುತ್ತಿತ್ತೇನೋ. ಏನೂ ಮಾತನಾಡದೇ ಮರಳಿದ್ದೆ.

ಗಾರ್ಡನರ್ ಮರೆತುಹೋದ ವಾಟರ್ ಹೋಸ್ ಮತ್ತು ಅವನು ನೆಟ್ಟು ಹೋದ ಗಿಡಗಳು, ಅವುಗಳಲ್ಲಿ ಅರಳಿ ನಿಂತ ಹೂವು, ಟೊಮ್ಯಾಟೋ ಹಣ್ಣುಗಳಲ್ಲಿ ಗಾರ್ಡನರ್ ಇದ್ದಾರೆ ಅನ್ನಿಸುತ್ತಿತ್ತು. ಆ ವಾಟರ್ ಹೋಸ್, ಆ ಗಿಡಗಳು, ಹೂವು, ಹಣ್ಣು ಯಾವುವೂ ಈಗ ನನ್ನ ಜೊತೆ ಇಲ್ಲ, ಆದರೆ ಕೇವಲ ಒಂದು ತಾಸಿನ ಗಳಿಗೆಯಲ್ಲಿ ಆಪ್ತವಾದ ಗಾರ್ಡನರ್ ಇನ್ನೂ ಆಪ್ತವಾಗಿಯೇ ಇದ್ದಾರೆ. ಕೆಲವರು ಹೀಗೆಯೇ ಕೆಲವೇ ಕ್ಷಣಗಳಲ್ಲಿ ಆಪ್ತರಾಗಿ ಹಾದಿಯುದ್ದಕ್ಕೂ ನಮ್ಮೊಡನೆಯೇ ಇದ್ದುಬಿಡುತ್ತಾರೆ.

ನೆನಪುಗಳ ಬೆನ್ನು ಹತ್ತಿ ಹೊರಟರೆ ಕನ್ನಡ ಸಾಹಿತ್ಯ ರಂಗವೇ ಒಂದು ನೆನಪು, ನಿತ್ಯ, ಮತ್ತು ಕನಸು, ಎಲ್ಲವೂ ಆಗಬಲ್ಲುದು ನನಗೆ. 'ಕನ್ನಡ ಸಾಹಿತ್ಯ ರಂಗ'ವನ್ನು ನೆನೆದರೆ

ಸವಿಸವಿ ನೆನಪಿನ ಗುಚ್ಛಗಳೇ ಎಲ್ಲರಿಗೂ ಹಂಚಿಬಿಡುವಷ್ಟು. ಎರಡು ವರ್ಷಗಳ ಹಿಂದೆ, ಸುಮಾರು ಇದೇ ಸಮಯ. ಅಲಮೇಲು ಮೇಡಮ್ ಅವರು ನನಗೆ ಫೋನ್ ಮಾಡಿ, 'ಈ ವರ್ಷ (2011) ಬೇ ಏರಿಯಾದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ರಂಗದ 'ವಸಂತ ಸಾಹಿತ್ಯೋತ್ಸವ'ದಲ್ಲಿ 'ಕನ್ನಡದಲ್ಲಿ ಪ್ರಾದೇಶಿಕ ಭಾಷೆ' ವಿಷಯದ ಬಗ್ಗೆ ಹತ್ತು ನಿಮಿಷಗಳ ಕಾಲ ಮಾತನಾಡ್ತೀಯ?' ಅಂತ ಕೇಳಿದಾಗ, ಅಲಮೇಲು ಮೇಡಮ್ ಅವರಂಥ ಹಿರಿಯರ ಹೇಳಿಕೆಗೆ 'ಇಲ್ಲ'ವೆನ್ನುವುದು ಹೇಗೆ ಗೊತ್ತಾಗದೇ 'ಸರಿ' ಅಂದಿದ್ದೆ. ಆದರೂ ಅಳುಕು. ನಾನು ಹತ್ತು ನಿಮಿಷಗಳ ಕಾಲ ಸ್ಟೇಜಿನಲ್ಲಿ ಅಷ್ಟೆಲ್ಲ ಹಿರಿಯರ ಮುಂದೆ ಮಾತನಾಡಬಲ್ಲೆನ ಎನ್ನುವ ಅಳುಕು. ಅವರ ಆ ಹುರಿದುಂಬಿಸುವಿಕೆಯ ಮುಂದೆ ಧೈರ್ಯವಾಗಿ ಪರಿಣಮಿಸಿ ಅಂತೂ 'ವಸಂತ ಸಾಹಿತ್ಯೋತ್ಸವ'ದಂದು 'ಕನ್ನಡದಲ್ಲಿ ಪ್ರಾದೇಶಿಕ ಭಾಷೆ'ಯ ಬಗ್ಗೆ ಸ್ಟೇಜಿನಲ್ಲಿ ಮಾತನಾಡಿದ್ದೆ. ಬೇ ಏರಿಯಾದಲ್ಲಿ ಮೊದಲ ಬಾರಿಗೆ ನನ್ನನ್ನು ಸ್ಟೇಜು ಹತ್ತಿಸಿ ಹಲವಾರು ಗಣ್ಯರ ಪರಿಚಯವನ್ನು ನನಗೆ ಮಾಡಿಕೊಟ್ಟವರು ಅಲಮೇಲು ಮೇಡಮ್ ಮತ್ತು ಕನ್ನಡ ಸಾಹಿತ್ಯ ರಂಗ. ಮರೆತೇನೆಂದರೂ ಮರೆಯಲಿ ಹ್ಯಾಂಗ ನಿನ್ನ ಓ ನನ್ನ ಕನ್ನಡ ಸಾಹಿತ್ಯ ರಂಗವೇ!

ಅಲ್ಲಿ ನನ್ನ ಮಾತುಗಳನ್ನು ಆಲಿಸಿದ್ದ ಶ್ರೀ ಮಧು ಕೃಷ್ಣಮೂರ್ತಿಯವರು 2012ರಲ್ಲಿ 'ನಾಟಕ ಚೈತ್ರ'ದ ಸಲುವಾಗಿ ಅವರು ನಿರ್ದೇಶಿಸಲಿದ್ದ ಕಂಬಾರರ 'ಸಾಂಬ ಶಿವ ಪ್ರಹಸನ' ನಾಟಕದಲ್ಲಿ ಒಂದು ಪಾತ್ರವನ್ನು ನನಗೆ ಕೊಟ್ಟು ನಟನೆಯನ್ನು ಕಲಿಸಿದರು. 'ಗಜನಿಂಬೆ' ಎಂಬ ಪುಟ್ಟ ಪಾತ್ರ. ನನಗೆ ಆ ಪಾತ್ರವನ್ನೂ ಕೊಟ್ಟಿದ್ದಲ್ಲದೇ ಆ ಪಾತ್ರಕ್ಕೆ ನಟನೆ ಕಲಿಸಿ ಮೆರುಗು ತಂದುಕೊಟ್ಟವರು ಮಧು. ಮರೆತೇನೆಂದರೂ ಮರೆಯುವುದು ಹೇಗೆ? ಮೊದಲ ಬಾರಿಗೆ ಹತ್ತಿದ ಸ್ಟೇಜು, ಮೊದಲ ಬಾರಿಯ ನಟನೆ ನನ್ನನ್ನು ಬೇ ಏರಿಯಾದ ಹಲವರ ಕಣ್ಣಿಗೆ ಬೀಳುವಂತೆ ಮಾಡಿತು. ಇದೀಗ 2013 ಬರುತ್ತಿದೆ. ನನ್ನನ್ನು ಬೇ ಏರಿಯಾದ ಸಹೃದಯ ಜನತೆ ಕನ್ನಡ ಕೂಟದ ಅಧ್ಯಕ್ಷೆಯನ್ನಾಗಿ ಮಾಡಿಕೊಂಡಿತು. ಈ ಹೊತ್ತಿನಲ್ಲಿ ಕನ್ನಡ ಸಾಹಿತ್ಯ ರಂಗದ ನೆನಪು ಅತೀವ ಕಾಡುತ್ತದೆ. ಕನ್ನಡ ಸಾಹಿತ್ಯ ರಂಗವೇ ನಿನಗೆ ನನ್ನ ನಮನ.

'ನಿನ್ನ ಪ್ರೀತಿಗೆ ಅದರ ರೀತಿಗೆ ಕಣ್ಣ ಹನಿಗಳೆ ಕಾಣಿಕೆ...'



ನೀಲಿ ಡಬ್ಬಿಯ ಶ್ರೀಖಂಡ

– ಶ್ರೀಕಾಂತ್ ಬಾಬು

ಸುಮನಾ ದೇಶಮುಖ್:

ಸಟ್ಟನೆ ಎಚ್ಚರವಾಯಿತು. ಕಣ್ತೆರೆದು ಪಕ್ಕದ ಕಿಟಕಿಯಿಂದ ನೋಡಿದೆ. ನಭೋಮಂಡಲವನ್ನು ಸೀಳಿಕೊಂಡು ವಿಮಾನ ಮುನ್ನುಗ್ಗುತ್ತಿರುವಂತೆ ಭಾಸವಾಗುತ್ತಿತ್ತು. ವಿಮಾನದ ರೆಕ್ಕೆಗಳಿಂದ ಪ್ರಖರವಾದ ಕೆಂಪು, ನೀಲಿ ದೀಪಗಳು ಹತ್ತಿ–ಆರಿ–ಹೋಗುತ್ತಿದ್ದವು. ಪಕ್ಕನೆ ನಾನೆಲ್ಲಿದ್ದೇನೆ ಎಂದೂ ಸಹ ಗೊತ್ತಾಗಲಿಲ್ಲ. ಒಮ್ಮೆ ಸುತ್ತಲೂ ಕಣ್ಣಾಡಿಸಿ ನೋಡಿದೆ. ಯುನೈಟೆಡ್ ಏರ್–ಲೈನ್ಸ್‌ನ ವಿಮಾನದಲ್ಲಿ ಪುಣೆಗೆ ಹೊರಟಿರುವುದು ಜ್ಞಾಪಕಕ್ಕೆ ಬಂತು. ಡಿಸೆಂಬರ್ ರಜಾದ ಕಾರಣ ವಿಮಾನ ತುಂಬಿಹೋಗಿತ್ತು. ಬಹಳ ಹೊತ್ತಿನಿಂದ ವಿಮಾನದಲ್ಲಿ ಕುಳಿತಿದ್ದಂತೆ ಅನ್ನಿಸಿತು. ವಾಚ್‌ನಲ್ಲಿ ಟೈಮ್ ನೋಡಿದರೆ, ಇನ್ನೂ 11:15 ತೋರಿಸುತ್ತಿತ್ತು. ಅಂದರೆ ನುವರ್ಕ್ ಬಿಟ್ಟು ಇನ್ನೂ ಒಂದೂ ಕಾಲು ಘಂಟೆ ಆಗಿತ್ತು ಅಷ್ಟೆ. 10 ಘಂಟೆಗೆ ವಿಮಾನ ಗೇಟ್‌ನಿಂದ ಹೊರಟದ್ದು, ಮೇಲೇರುತ್ತಿದ್ದುದು ಎಲ್ಲಾ ಜ್ಞಾಪಕವಿದೆ. ನಂತರ ಕಣ್ಣು ಹತ್ತಿರಬೇಕು. ಆಯಾಸದಿಂದ ಹಾಗೇ ನಿದ್ದೆ ಬಂದುಬಿಟ್ಟಿದೆ. ಸುಮಾರು ಒಂದು ಘಂಟೆ ಮಲಗಿರಬಹುದು. ಇವತ್ತು ಬೆಳಗ್ಗೆ ಆರು ಘಂಟೆಯಿಂದ ಏರ್–ಪೋರ್ಟಿಗೆ ಹೊರಡುವವರೆಗೂ ಕೆಲಸವೋ ಕೆಲಸ. ಕಳೆದ ವಾರವಷ್ಟೇ ಪೂನಾಗೆ ಹೋಗಿಬರಲು ನಿರ್ಧರಿಸಿ ಟಿಕೀಟು ಖರೀದಿಸಿಯಾಗಿತ್ತು. 70 ವರ್ಷದ ಅಪ್ಪನಿಗೆ ನಾಳೆ ಹಾರ್ಟ್ ಆಪರೇಶನ್. ಅಮ್ಮನಿಗೂ ಪೂರ್ತಿ ಹುಷಾರಿಲ್ಲ. ಅಣ್ಣ–ಅತ್ತಿಗೆಯರಿಗೆ ಅವರದೇ ತಾಪತ್ರಯಗಳು. ಹೀಗಾಗಿ ನನಗೆ ಪೂನಾಗೆ ಹೋಗದೇ ಇರಲು ಮನಸ್ಸಾಗಲಿಲ್ಲ. ಅಮ್ಮ ತುಂಬಾ ಹೆದರಿದ್ದಳು. ನಾನು ಹೋಗಿ ಅವಳ ಜೊತೆಗೆ 8–10 ದಿನಗಳಿದ್ದರೆ ಅವಳಿಗೂ ಸಮಾಧಾನವೆಂದು ಚಿಂತಿಸಿ ಎರಡು ವಾರದ ಮಟ್ಟಿಗೆ ಹೋಗಿಯೇ ಬರುವುದೆಂದು ನಿರ್ಧರಿಸಿದ್ದೆ.

ನಾನು ಮತ್ತು ಸುಂದರ್ ಅಮೇರಿಕಾಗೆ ಬಂದು 14 ವರ್ಷಗಳಾಗಿವೆ. ಸುಂದರ್ ಕಂಪ್ಯೂಟರ್ ಸೈನ್ಸ್‌ನಲ್ಲಿ ಪೋಸ್ಟ್ ಗ್ರಾಜುಯೇಷನ್ ಮುಗಿಸಿ ಒಳ್ಳೆಯ ಉದ್ಯೋಗದಲ್ಲಿದ್ದಾನೆ. ನಾನು ಕೂಡ ಸೈನ್ಸ್ ಗ್ರಾಜುಯೇಟ್. ಕೆಲವು ಕೋರ್ಸ್‌ಗಳನ್ನು ಮಾಡಿಕೊಂಡು ಸುಮಾರು 10 ವರ್ಷಗಳಿಂದ ಟೆಲಿಕಾಮ್ ಕಂಪನಿಯಲ್ಲಿ ಟೆಸ್ಟರ್ ಆಗಿ

ಕೆಲಸ ಮಾಡುತ್ತಿದ್ದೇನೆ. ನಮ್ಮಿಬ್ಬರದೂ ಪ್ರೇಮ ವಿವಾಹ. ನಾವಿಬ್ಬರೂ ಪೂನಾದಲ್ಲಿ ಹುಟ್ಟಿ ಬೆಳದದ್ದು. ನಮ್ಮ ಮನೆ ಭಾಷೆ– ಮರಾಠಿ ಮಿಶ್ರಿತ ಕನ್ನಡ. ನನ್ನಣ್ಣ ಚೇತನ್ ಸುಂದರ್‌ಗೆ ಪಿ.ಯು.ಸಿ.ಯಲ್ಲಿ ಕ್ಲಾಸ್–ಮೇಟ್ ಮತ್ತು ಒಂದೇ ಕ್ರಿಕೆಟ್ ಟೀಮ್‌ಗೆ ಆಡುತ್ತಿದ್ದರು. ಹೀಗೇ ನಮ್ಮ ಭೇಟಿ ಆಯಿತು. ಸುಂದರ್‌ಗಿಂತ ನಾನು ಎರಡು ವರ್ಷ ಸಣ್ಣವಳು. ನಮ್ಮ ಸ್ನೇಹ ಪ್ರಣಯಕ್ಕೆ ತಿರುಗಿ, ಕಾಲೇಜ್ ಶಿಕ್ಷಣಗಳೆಲ್ಲ ಮುಗಿದಮೇಲೆ, ಅಂದರೆ ಸುಮಾರು ಎಂಟು ವರ್ಷಗಳ ನಂತರ ನಮ್ಮ ವಿವಾಹ ಪೂನಾದಲ್ಲೇ ಯಾವ ಅಡೆತಡೆಗಳಿಲ್ಲದೆ ನಡೆದಿತ್ತು. ವಿವಾಹದ ನಂತರ ಮುಂಬಯಿಯಲ್ಲಿ 7 ವರ್ಷ ಕೆಲಸ ಮತ್ತು ವಾಸ. ಮದುವೆಯಾಗಿ ಒಂದು ವರ್ಷದಲ್ಲೇ ಸುಚಿತ್ರ ಹುಟ್ಟಿದ್ದಳು. ಅದಾದ ನಂತರ ಐದು ವರ್ಷಗಳ ನಂತರ ಸುಮೇರು ಹುಟ್ಟಿದ್ದು. ಸುಮೇರು ಇನ್ನೂ 6 ತಿಂಗಳಿರುವಾಗಲೇ ಸುಂದರ್‌ಗೆ ಅಮೇರಿಕಾದಲ್ಲಿ ಉದ್ಯೋಗದ ಕರೆ ಮತ್ತು ನ್ಯೂಯಾರ್ಕ್‌ಗೆ ಪ್ರಯಾಣ. ಎಷ್ಟು ಬೇಗ ಕಾಲವು ಸರಿದುಹೋಗುತ್ತಾ ಇದೆ.

ವಿಮಾನದೊಳಗೆ ಗಾಡಿಯಲ್ಲಿ ಮುಂದಿನಿಂದ ಊಟ ಬರುತ್ತಿತ್ತು. ಮುಂದಿನ ಸಾಲಿನ ಒಂದು ದೊಡ್ಡ ಸಂಸಾರ (ಸುಮಾರು ಏಳೆಂಟು ಜನರೆಂದು ತೋರುತ್ತೆ) ಬಹಳ ಗಲಾಟೆ ಮಾಡುತ್ತಿತ್ತು. ಅವರೆಲ್ಲರಿಗೂ ಊಟ ಸಿಕ್ಕ ಮೇಲೆ ಸ್ವಲ್ಪ ಶಾಂತವಾದಂತೆ ತೋರಿತು. ಏರ್–ಹೋಸ್ಟೆಸ್ ಸಮೀಪಕ್ಕೆ ಬಂದು 'ವೆಜ್ ಅಥವಾ ನಾನ್–ವೆಜ್?' ಅಂತ ಕೇಳಿದಳು. ಯಾಕೋ ಏನನ್ನೂ ತಿನ್ನುವ ಮನಸ್ಸಿರಲಿಲ್ಲ. ಏನೂ ಬೇಡವೆಂದು ಹೇಳಿ ಒಂದು ಲೋಟ ನೀರು ತೆಗೆದುಕೊಂಡೆ. ಪಕ್ಕದ ಸೀಟಿನಲ್ಲಿದ್ದ ಹುಡುಗನಿಗೆ ಇನ್ನೂ 5 ವರ್ಷವಿರಬಹುದು. ಮಲಗಿಬಿಟ್ಟಿದ್ದ. ಅವನ ಅಮ್ಮ ಅವನಿಗೆ ಊಟ ಮಾಡಿಸುವ ಪ್ರಯತ್ನ ಮಾಡುತ್ತಿದ್ದಳು. ನನಗೆ ತಕ್ಷಣ ಸುಮೇರುವಿನ ನೆನಪಾಗಿ ನಗು ಬಂತು. ಅವನಿಗೆ ಹದಿನಾಲ್ಕು ವಯಸ್ಸಾದರೂ ಇನ್ನೂ ನಾನೇ ಕಲಸಿ ತಿನ್ನಿಸಬೇಕು. ಸುಂದರ್, ನಾನು ಅವನನ್ನು ತುಂಬಾ ಮುದ್ದು ಮಾಡಿ ಹಾಳು ಮಾಡುತ್ತಿದ್ದೇನೆಂದು ಸಿಡುಕುತ್ತಿದ್ದ. ದಿನಾ ರಾತ್ರಿ ನಮ್ಮದು ಇದೇ ಗಲಾಟೆ. ಪಾಪ ಇನ್ನೆರಡು ವಾರ ಸುಮೇರುವಿಗೆ ಊಟ ಯಾರು ತಿನ್ನಿಸುತ್ತಾರೋ.

ಈ 14 ವರ್ಷಗಳಲ್ಲಿ ನಾನು ಮಕ್ಕಳನ್ನೂ ಎಂದೂ ಬಿಟ್ಟಿರಲಿಲ್ಲ. ನಾಲ್ಕು ಸಾರಿ ಇಂಡಿಯಾಗೆ ಹೋಗಿ ಬಂದಿದ್ದರೂ ಎಲ್ಲಾ ಸಾರಿಯೂ ಮಕ್ಕಳು ಜೊತೆಗೇ ಇದ್ದರು. ಇದೇ ಮೊದಲ ಬಾರಿ ನಾನು ಮಕ್ಕಳನ್ನು ಬಿಟ್ಟು ಪೂನಾಕ್ಕೆ ಹೋಗುತ್ತಿರುವುದು. ಆದರೆ ಈ ಬಾರಿ ನನಗೆ ಮಕ್ಕಳನ್ನು ಕರೆದುಕೊಂಡು ಹೋಗಲಿಕ್ಕೂ ಆಗುತ್ತಿರಲಿಲ್ಲ. ಅವರಿಬ್ಬರಿಗೂ ಸ್ಕೂಲ್ ಇದೆ. ಸುಚಿತ್ರ ನ್ಯೂಯಾರ್ಕಿನ ಕೊಲಂಬಿಯ ಯೂನಿವರ್ಸಿಟಿಯಲ್ಲಿ ಮೊದಲ ವರ್ಷದ ಮೆಡಿಸಿನ್ ಪ್ರೋಗ್ರಾಮ್‌ನಲ್ಲಿದ್ದಾಳೆ. ಸುಮೇರು ಮಿಡ್ಲ್–ಸ್ಕೂಲ್‌ನ ಕೊನೆಯ ವರ್ಷದಲ್ಲಿದ್ದಾನೆ. ಸುಂದರ್‌ಗೆ ಯಾವಾಗಲೂ ಕೆಲಸ. ಅದೂ ಅಲ್ಲದೆ ಅವರೆಲ್ಲಾ ಈಗ ಅಲ್ಲಿಗೆ ಬಂದು ಮಾಡುವುದೇನಿದೆ? ಬಹುಶಃ

ಅಪ್ಪ ಇನ್ನೂ ಕನಿಷ್ಟ ಎಂದರೂ ಎರಡು–ಮೂರು ವಾರ ಆಸ್ಪತ್ರೆಯಲ್ಲಿರಬೇಕಾಗಬಹುದು.

ಊಟ ಮಾಡಿಸುತ್ತಿದ್ದ ಅಮ್ಮನ ಕಾಟ ತಡೆಯಲಾರದೆ ಪಕ್ಕದ ಸೀಟಿನ ಹುಡುಗ ಅಳಲಾರಂಭಿಸಿದ. ನಾನು ಅವನ ಅಮ್ಮನ ಕಡೆ ನೋಡಿದೆ. ಅವಳಿಗೆ ಅವಮಾನವಾದಂತಾಗಿ ಮುಖ ತಿರುಗಿಸಿದಳು.

ನನ್ನ ಯೋಚನಾ ಲಹರಿ ಮುಂದುವರಿಯಿತು. ಅಪ್ಪನ ಆರೋಗ್ಯ ಯಾವಾಗಲೂ ಚೆನ್ನಾಗಿಯೇ ಇತ್ತು. ಅವರು ಅನಾರೋಗ್ಯವಾಗಿರುವುದನ್ನು ನೋಡಿದ್ದೇ ನನಗೆ ನೆನಪಿಲ್ಲ. ಬಹಳ ಶಿಸ್ತಿನ ಮನುಷ್ಯ, ಊಟ, ಕೆಲಸ, ನಿದ್ದೆ, ಎಲ್ಲದರಲ್ಲೂ. ಬಹುಶಃ ನನಗೂ ಅಪ್ಪನ ಗುಣ ಬಂದಿರಬೇಕು. ಸುಚಿತ್ರಾ ಯಾವಾಗಲೂ ಹಾಸ್ಯ ಮಾಡುತ್ತಿರುತ್ತಾಳೆ. 'ಅಮ್ಮ, ನಿನ್ನ ಜೊತೆ ನಿಭಾಯಿಸೋದು ಕಷ್ಟ. ಹೇಗೆ ಮಾಡಿದರೂ ನಿನಗೆ ಸರಿ ಹೋಗೋಲ್ಲ'. ಹೌದು, ಅದಕ್ಕೇ ಅಪ್ಪನಿಗೆ ನಾನು ತುಂಬಾ ಪ್ರೀತಿಪಾತ್ರಳಾಗಿದ್ದೆ. ಅಣ್ಣನ ಬೇಜವಾಬ್ದಾರಿತನ ಅಪ್ಪನಿಗೆ ಸ್ವಲ್ಪವೂ ಇಷ್ಟವಾಗುತ್ತಿರಲಿಲ್ಲ. ಅಣ್ಣ ಯಾವಾಗಲೂ ಅಪ್ಪನ ಹತ್ತಿರ ಬೈಸಿಕೊಳ್ಳಿತ್ತಿದ್ದ. ಅಪ್ಪನ ಹಾರ್ಟ್ ಪ್ರಾಬ್ಲಮ್ ಹೆರೆಡಿಟಿಯಿಂದ ಆಗಿರಬಹುದೆಂದು ಡಾಕ್ಟರುಗಳ ಅಭಿಪ್ರಾಯ. ಇತರೆಯಂತೆ ಅವರ ಆರೋಗ್ಯ ಚೆನ್ನಾಗಿರುವುದರಿಂದ ಅವರು ಸಂಪೂರ್ಣವಾಗಿ ಚೇತರಿಸಿಕೊಳ್ಳುತ್ತಾರೆಂದು ಭರವಸೆ ನೀಡಿದ್ದರು. ನಾನು ಪುಣೆ ತಲುಪುವ ಹೊತ್ತಿಗೆ ಬಹುಶಃ ಅವರ ಆಪರೇಶನ್ ಆಗಿ ಹೋಗಿರುತ್ತದೆ. ಎಚ್ಚರ ಬರುವುದಕ್ಕೆ 8–10 ಘಂಟೆಗಳಾಗಬಹುದೆಂದಿದ್ದಾರೆ. ಅವರಿಗೆ ಪೂರ್ಣ ಪ್ರಜ್ಞೆ ಬರುವ ವೇಳೆಗೆ ನಾನು ಅಲ್ಲಿರುತ್ತೇನೆ. ಅವರು ಕಣ್ಣು ಬಿಡುವ ವೇಳೆಗೆ ನಾನು ಎದುರಿಗೆ ಇರಬೇಕು. ದೇವರೇ! ಅಪ್ಪನಿಗೆ ಏನೂ ಕಷ್ಟವಾಗದ ಹಾಗೆ ಗುಣವಾಗಲೀ ಎಂದು ಪ್ರಾರ್ಥಿಸಿದೆ.

ಘಂಟೆ ಒಂದಾಯಿತು. ದುಬಾಯ್ ಮುಟ್ಟಲು ಇನ್ನೂ ಹನ್ನೊಂದು ಘಂಟೆ ಇದೆ ಎಂದು ಲೆಕ್ಕಹಾಕಿ ಕಣ್ಮುಚ್ಚಿ ನಿದ್ದೆ ಮಾಡಲು ಪ್ರಯತ್ನಿಸಿದೆ. ಏರ್–ಹೋಸ್ಟೆಸ್ ಮತ್ತೆ ಬಂದು ಕಾಫೀ–ಟೀ ಬೇಕಾ ಎಂದು ಕೇಳಿದಳು. ನಾನು ಊಟ ಮಾಡದೇ ಇದ್ದದ್ದು ಅವಳಿಗೆ ನನ್ನ ಮೇಲೆ ಸಹಾನುಭೂತಿ ಇದ್ದಂತೆ ಕಂಡಿತು. ನಗುತ್ತಾ 'ನೋ ಥ್ಯಾಂಕ್ಸ್' ಅಂತ ಹೇಳಿದೆ. ಇದ್ದಕ್ಕಿದ್ದಂತೆ ನನಗೆ ಫ್ರಿಜ್‌ನಲ್ಲಿ ಬ್ಲೂ ಕಲರ್ ಪ್ಲಾಸ್ಟಿಕ್ ಡಬ್ಬದಲ್ಲಿ ಶ್ರೀಖಂಡ್ ಮಾಡಿಟ್ಟಿದ್ದು ಸುಂದರ್‌ಗೆ ಹೇಳಲು ಮರೆತದ್ದು ನೆನಪಾಯಿತು. ಸಾಧಾರಣವಾಗಿ ಸುಂದರ್ ಹಾಗೆಲ್ಲಾ ಏನನ್ನೂ ತಾನೇ ತಾನಾಗಿ ಹುಡುಕುವವನಲ್ಲ. ಮಕ್ಕಳಂತೂ ಅಡುಗೆ ಮನೆ ಸುದ್ದಿಗೂ ಹೋಗುವುದಿಲ್ಲ. ಸುಚಿತ್ರಾಳಿಗೆ ಶ್ರೀಖಂಡ ಅಂದರೆ ಪ್ರಾಣ. ಅದೊಂದಿದ್ದರಾಯಿತು. ಅವಳಿಗೆ ಇನ್ನೇನೂ ಬೇಡ. ನನಗೆ ಸುಂದರ್ ಮೇಲೆ ತಕ್ಷಣ ಸಿಟ್ಟು ಬಂತು. ಏರ್–ಪೋರ್ಟಿಗೆ ಬರುವಾಗ ಶ್ರೀಖಂಡದ ಬಗ್ಗೆ ಹೇಳಬೇಕೆಂದು ಬಾಯಿ ತೆರೆಯುವಷ್ಟರಲ್ಲಿ, ಸುಂದರ್ ಅವನ ಕೆಲಸಕ್ಕೆ ಸಂಬಂಧಪಟ್ಟ ಯಾವುದೋ ಅನವಶ್ಯಕ ವಿಷಯದ ಮೇಲೆ ಮಾತನಾಡಿ ನನಗೇ ಶ್ರೀಖಂಡದ ವಿಷಯ ಪೂರ್ತಿ ಮರತೇ ಹೋಯಿತು. ಪೂನಾಗೆ ಹೋದ ತಕ್ಷಣ ಸುಂದರ್‌ಗೆ ಇ–ಮೈಲ್ ಮಾಡಬೇಕು.

ಬೇರು ಸೂರು

ನಾನೆಷ್ಟು ಅದೃಷ್ಟಶಾಲಿ. ಅದೆಷ್ಟು ಒಳ್ಳೆಯವರು ನನ್ನ ಮಕ್ಕಳು? ವಿದ್ಯೆ, ಬುದ್ಧಿ, ರೂಪ– ಯಾವುದರಲ್ಲೂ ಕೊರತೆಯಿರಲಿಲ್ಲ. ತುಂಬಾ ಅವಸರದಲ್ಲಿ ಬಂದೆ. ಇನ್ನೂ ಸ್ವಲ್ಪ ಹೊತ್ತು ಅವರ ಜೊತೆಗಿರಬೇಕಾಗಿತ್ತು. ಥೂ, ಹಾಳಾದ್ದು. ಇನ್ನೂ ನಿದ್ದೆಯ ಸುಳಿವಿಲ್ಲ. ಹೇಗೆ ದುಬಾಯ್ ಮುಟ್ಟುವವರೆಗೂ ಕಾಲ ಕಳೆಯುವುದು? ಪಕ್ಕದ ಸೀಟಿನಲ್ಲಿದ್ದ ಹುಡುಗ ಗಾಢ ನಿದ್ದೆಯಲ್ಲಿದ್ದ. ಅವನ ಅಮ್ಮ ಅವನ ಹೊದ್ದಿಗೆ ಸರಿಮಾಡಿದಳು. ಸುತ್ತಲಿಂದ ಸಣ್ಣಗೆ ಗೊರಕೆ ಶಬ್ದಗಳು ಕೇಳಿಬರುತ್ತಿದ್ದವು. ಹಾಗೇ ಕಣ್ತೆರೆದುಕೊಂಡು ನಿದ್ದೆಯ ನಿರೀಕ್ಷೆಮಾಡುತ್ತಾ ಪಕ್ಕದ ಕಿಟಕಿಯಿಂದ ಕಪ್ಪನೆಯ ಆಗಸವನ್ನು ವೀಕ್ಷಿಸತೊಡಗಿದೆ.

ಸುಚಿತ್ರಾ ದೇಶಮುಖ್

ಅಮ್ಮನನ್ನು ಏರ್–ಪೋರ್ಟ್‌ಗೆ ಬಿಟ್ಟು ಮನೆಗೆ ಬಂದಾಗ ಇನ್ನೂ ಒಂಭತ್ತು ಘಂಟೆ. ಪಾಪ, ಅಮ್ಮ. ಎಷ್ಟು ಬೇಜಾರಾಗಿದ್ದಳು? ಅಮ್ಮನಿಗೆ ಅವಳ ಅಪ್ಪನನ್ನು ನೋಡುವ ಆಸೆಯೊಂದು ಕಡೆಗಾದರೆ, ನಮ್ಮನ್ನು ಬಿಟ್ಟು ಹೋಗುವ ದುಃಖ ಇನ್ನೊಂದು ಕಡೆ. ತುಂಬಾ ಪೆಚ್ಚುಬಡಿದಂತೆ ಕಾಣುತ್ತಿದ್ದಳು. ಕೊನೆ ಕೊನೆಗಂತೂ ಏನೇನೋ ಬಡಬಡಿಸುತ್ತಿದ್ದಳು. ಅದೆಷ್ಟು ಬಾರಿ ನಮಗೆ ಹೊತ್ತಿಗೆ ಸರಿಯಾಗಿ ಊಟ ಮಾಡಲು ಹೇಳಿದಳೋ ಏನೋ? ಸೆಕ್ಯೂರಿಟಿ ಚೆಕ್–ಅಪ್ ಮುಗಿಸಿ ನಮಗೆ ದೂರದಿಂದ ಕೈ ಮಾಡಿದಾಗ ಅವಳ ಮ್ಲಾನ ಮುಖ ನನ್ನ ಕರುಳನ್ನು ಹಿಂಡಿತು.

ಮನೆಗೆ ಬಂದ ಮೇಲೆ, ಅಪ್ಪ ತಟ್ಟೆಗಳಿಗೆ ಊಟ ಹಾಕಿ ನಮ್ಮನ್ನು ಊಟಕ್ಕೆ ಕರೆದರು. ಅಮ್ಮ ಒಂದು ವಾರಕ್ಕೆ ಸಾಕಾಗುವಷ್ಟು ಅಡುಗೆ ಮಾಡಿಟ್ಟಿದ್ದಳು. ಅವಳು ಯಾವಾಗಲೂ ಹಾಗೇ. ನಾವೆಲ್ಲಾ ಎಲ್ಲಿಗೇ ರಜಾದಲ್ಲಿ ಹೊರಟರೂ, ಅಡುಗೆ ಪ್ಯಾಕ್ ಮಾಡಲು ಶುರು ಮಾಡುತ್ತಿದ್ದಳು. ಹೊರಗೆ ತಿನ್ನಬೇಕೆಂದು ಆಸೆ ಪಡುತ್ತಿದ್ದ ನಮಗೆ ತುಂಬಾ ಸಿಟ್ಟು ಬರುತ್ತಿತ್ತು. ಅಮ್ಮ ಸ್ಟ್ರಿಕ್ಟ್ ವೆಜಿಟೇರಿಯನ್. ಅವಳಿಗೆ ಹೊರಗಡೆ ತಿನ್ನಲು ತುಂಬಾ ಅನುಮಾನ, ಏನಾದರೂ ಸೇರಿಬಿಟ್ಟಿದ್ದರೆ ಅಂತಾ. ಪಿಜ್ಜಾ ಬಿಟ್ಟು ಇನ್ನೇನನ್ನೂ ತಿನ್ನುತ್ತಿರಲಿಲ್ಲ ಅವಳು. ಆ ವಿಷಯದಲ್ಲಿ ಮಾತ್ರ ಅವಳು ಅಮೇರಿಕಾಗೆ ಬಂದು ಸ್ವಲ್ಪವೂ ಬದಲಾಗಿರಲಿಲ್ಲ. ಅಮ್ಮ ತುಂಬಾ ಧಾರ್ಮಿಕ ಪ್ರವೃತ್ತಿಯವಳು. ಪ್ರತಿ ದಿನ ಬೆಳಿಗ್ಗೆ ಎದ್ದು ಸ್ನಾನ ಮಾಡಿ ಅರ್ಧ ಘಂಟೆ ದೇವರ ಮುಂದೆ ಕುಳಿತು ಪೂಜೆ, ಧ್ಯಾನಗಳನ್ನು ಮಾಡಿದ ನಂತರವೇ ಮುಂದಿನ ಕೆಲಸ. ಪ್ರತಿವಾರ ಅಜ್ಜ, ಅಜ್ಜಿ, ಮಾವನವರೊಂದಿಗೆ ಮಾತನಾಡುತ್ತಿದ್ದಳು ಮತ್ತು ನಮ್ಮನ್ನೂ ಮಾತನಾಡಿ ಎಂದು ಒತ್ತಾಯಿಸುತ್ತಿದ್ದಳು. ಆದರೆ ಅಪ್ಪ ಅಮ್ಮನಿಗೆ ತದ್ವಿರುದ್ಧ. ಯಾವಾಗಲೂ ಹೊರಗಡೆ ಇರಬೇಕೆಂದು ಬಯಸುವವನು. ಅದಕ್ಕೆ ಸರಿಯಾಗಿ ಅವನಿಗೆ ಆಫೀಸ್ ಟೂರ್ ಯವಾಗಲೂ ಇರುತ್ತಿತ್ತು. ಅವನಿಗೆ

ಊಟ-ತಿಂಡಿಗಳ ಬಗ್ಗೆ ಅಷ್ಟು ಕಾಳಜಿ ಇರುತ್ತಿರಲಿಲ್ಲ. ಹೇಗಾದರೂ ಸರಿ, ನಿಭಾಯಿಸಿಕೊಂಡು ಹೋಗುವುದು ಅವನ ಗುಣ.

ಘಂಟೆ ಹತ್ತೂ ಮೂವತ್ತಾಯಿತು. ಸುಮೇರು ಟಿ.ವಿ. ನೋಡುತ್ತಾ ಊಟವನ್ನು ಮರೆತೇ ಬಿಟ್ಟಿದ್ದ. ಅಪ್ಪ ಅವನನ್ನು ಗದರಿಸಿದರು. ಅಮ್ಮ ಅವನನ್ನು ಮುದ್ದುಮಾಡಿ ಹಾಳು ಮಾಡಿದ್ದಾಳೆಂದು ಗೊಣಗಿದರು. ಅಪ್ಪನ ಹೆದರಿಕೆಗೆ ಸುಮೇರು ಗಬಗಬ ಊಟ ಮುಗಿಸಿದ. ನಂದು, ಅಪ್ಪಂದು ಊಟ ಆಗಲೇ ಮುಗಿಸಿಯಾಗಿತ್ತು. ಅಪ್ಪ ಎಲ್ಲವನ್ನೂ ಎತ್ತಿಟ್ಟರು. ನಾಳೆ ಶನಿವಾರವಾದ್ದರಿಂದ ಚೆನ್ನಾಗಿ ಮಲಗಬಹುದೆಂದು ಎಣಿಕೆಹಾಕಿ ನಮ್ಮ-ನಮ್ಮ ರೂಮುಗಳಿಗೆ ತೆರಳಿದೆವು.

ನಾನು ಕಾಲೇಜಿನ ಡೋರ್ಮ್‌ನಲ್ಲಿದ್ದರೂ ಪ್ರತಿ ಶುಕ್ರವಾರ ರಾತ್ರಿ ಮನೆಗೆ ಹಾಜರಾಗುತ್ತಿದ್ದೆ. ಅಮ್ಮನ ಅಡುಗೆ ಊಟ, ನನ್ನ ಕೆಲವು ಸ್ನೇಹಿತರ ಜೊತೆ ಕಾಲಹರಣ, ತಮ್ಮನನ್ನು ಛೇಡಿಸುವುದು ಇತ್ಯಾದಿಗಳಲ್ಲಿ ಶನಿವಾರ, ಭಾನುವಾರ ಕಳೆಯುತ್ತಿತ್ತು. ಭಾನುವಾರ ರಾತ್ರಿ ಮರಳಿ ನನ್ನ ಕಾಲೇಜಿನ ಡೋರ್ಮ್‌ಗೆ ವಾಪಸಾಗುತ್ತಿದ್ದೆ. ಕೊಲಂಬಿಯ ಕಾಲೇಜ್ ನನಗೆ ತುಂಬಾ ಇಷ್ಟವಾಗಿದೆ. ಇದೇ ಫಸ್ಟ್ ಸೆಮೆಸ್ಟರ್ ಆಗಿದ್ದರೂ ನನಗೆ ಬಹಳ ಜನ ಸ್ನೇಹಿತರಾಗಿದ್ದಾರೆ. ಇಬ್ಬರು ಪ್ರೊಫೆಸರ್‌ಗಳಿಗೂ ನಾನು ಅಚ್ಚು ಮೆಚ್ಚಾಗಿದ್ದೇನೆ.

ಇನ್ನೂ ಹನ್ನೊಂದೂವರೆ ಘಂಟೆ. ನಿದ್ದೆ ಬರುತ್ತಿಲ್ಲ. ನಾವು, ಅಂದರೆ ಇಲ್ಲಿನ ಕಾಲೇಜ್ ಸ್ಟೂಡೆಂಟ್ಸ್ ಎಲ್ಲಾ ಸಾಧಾರಣವಾಗಿ ಮಲಗುವುದು ರಾತ್ರಿ (ಬೆಳಿಗ್ಗೆ?) 3 ಘಂಟೆಯ ಮೇಲೆ. ಅಲ್ಲಿಯವರೆಗೆ ಹೊಮ್-ವರ್ಕ್ಸ್, ಅಸೈನ್-ಮೆಂಟ್ ಇತ್ಯಾದಿಗಳಲ್ಲಿ ಕಾಲ ಕಳೆಯುತ್ತದೆ. ನಾನು ವೀಕ್-ಎಂಡ್‌ಗೆ ಮನೆಗೆ ಬಂದಾಗಲೆಲ್ಲಾ ರಾತ್ರಿ ಅಮ್ಮನಿಗೂ ನನಗೂ ಜಗಳ. ರಾತ್ರಿ ಹನ್ನೊಂದು ಹೊಡೆದ ತಕ್ಷಣ, ಅಮ್ಮ ಪ್ರತಿ ಹತ್ತು ನಿಮಿಷಕ್ಕೊಮ್ಮೆ ಬಂದು ಮಲಗು ಎಂದು ಗದರುತ್ತಿದ್ದಳು. ನಾನು ಹೂಂ ಹೂಂ ಎಂದು ಹೇಳಿ ಸುಮ್ಮನಾಗುತ್ತಿದ್ದೆ. ಕೊನೆಗೆ ಅಮ್ಮನ ಕಾಟ ತಡೆಯಲಾರದೆ ಮುಸುಕುಹಾಕಿಕೊಂಡು ನನ್ನ ಲ್ಯಾಪ್-ಟಾಪ್‌ನ್ನು ಆನ್ ಮಾಡಿಕೊಂಡು ಚಾಟಿಂಗ್, ಬ್ರೌಸಿಂಗ್ ಮಾಡುತ್ತಿದ್ದೆ. ನಾನು ಆಗಲೇ ಅಮ್ಮನನ್ನು ಮಿಸ್ ಮಾಡಿಕೊಳ್ಳುತ್ತಿದ್ದೆ.

ಕಂಪ್ಯೂಟರಿನಲ್ಲಿ ಬ್ರೌಸ್ ಮಾಡುತ್ತಾ 'ದೇವದಾಸ್' ಚಿತ್ರದ ಹಾಡನ್ನು ಕೇಳುತ್ತಿದ್ದೆ. ಸುಮೇರು ಆಗಲೇ ಗಾಢ ನಿದ್ದೆಯಲ್ಲಿದ್ದ. ನಾಳೆ ಅವನನ್ನು ಥಿಯೇಟರಿನಲ್ಲಿ ಪಿಕ್ಚರಿಗೆ ಕರೆದುಕೊಂಡು ಹೋಗುವುದಾಗಿ ಮಾತುಕೊಟ್ಟಿದ್ದೆ. ಚೆನ್ನಾಗಿರುವ ಪಿಕ್ಚರ್ ಯಾವುದಿದೆಯೆಂದು ರಿವ್ಯೂ ಓದತೊಡಗಿದೆ. ಪಕ್ಕದ ರೂಮ್‌ನಿಂದ ಅಪ್ಪನ ಗೊರಕೆ ಸಣ್ಣಗೆ ಕೇಳತೊಡಗಿತು. ಇನ್ನರ್ಧ ಘಂಟೆಯಲ್ಲಿ ಅದು ಇನ್ನೂ ಜೋರಾಗುವುದೆಂದು ಗೊತ್ತಿದ್ದ ನಾನು, ನನ್ನ ರೂಮ್ ಬಾಗಿಲನ್ನು ಪೂರ್ತಿ ಹಾಕಿದೆ.

ನನ್ನ ಮಂಚಕ್ಕೆ ಬರುವಷ್ಟರಲ್ಲಿ, ನನಗೆ 'ಕಾಲ್ ಮಿ' ಅಂತ ನನ್ನ ಹೈಸ್ಕೂಲಿನ

ಸಹಪಾಠಿ ವಿಶಾಲ್‌ನಿಂದ ಒಂದು ಟೆಕ್ಸ್ಟ್ ಮೆಸೇಜ್ ಬಂತು. ನಾನು ಹೈಸ್ಕೂಲ್ ಆದ ಮೇಲೆ ಅವನನ್ನು ನೋಡಿರಲಿಲ್ಲ. ವಿಶಾಲ್ ತುಂಬಾ ಬಾಯಿ ಬಡುಕ. ಅವನ ಬಾಯಲ್ಲಿ ಏನೂ ನಿಲ್ಲುವುದಿಲ್ಲ. ಚೆನ್ನಾಗಿ ಗಿಟಾರ್ ನುಡಿಸುತ್ತಾನೆ. ತುಂಬಾ ಒಳ್ಳೆಯ ಡಾನ್ಸರ್ ಕೂಡ. ಅವನಿಲ್ಲದೆ ಯಾವ ಪಾರ್ಟಿನೂ ಕಳೆಗಟ್ಟೊಲ್ಲ. ತುಂಬಾ ಉಪಕಾರಿ ಮತ್ತು ಭಾವುಕ ಜೀವಿ. ಯಾವುದೇ ಸಮಯದಲ್ಲಿಯಾದರೂ ಅವನ ಸಹಾಯವನ್ನು ಎಣಿಸಬಹುದಿತ್ತು. ನನ್ನ ಹೈ-ಸ್ಕೂಲ್ ಪ್ರಾಜೆಕ್ಟ್ ವರ್ಕ್ ಮೇಲೆ ನನಗೋಸ್ಕರ ಎಷ್ಟೆಲ್ಲಾ ಸುತ್ತಾಡಿದ್ದ!

ಅವನು ಇಂಜಿನಿಯರಿಂಗ್ ಓದಲು ಮೇರಿಲ್ಯಾಂಡ್ ಯೂನಿವರ್ಸಿಟಿಗೆ ಹೋಗಿದ್ದ. ಒಂದೆರಡು ಬಾರಿ ಇ-ಮೈಲ್ ವಿನಿಮಯ ಆಗಿತ್ತು ಅಷ್ಟೇ. ಅವನು ಮೆಸೇಜ್ ಮಾಡಿದ್ದು ನೋಡಿ ಆಶ್ಚರ್ಯವಾಯಿತು. ತಕ್ಷಣ ಫೋನ್ ಮಾಡಿದೆ. ನಾನು ಈಗಷ್ಟೇ ಮೇರಿಲ್ಯಾಂಡಿನಿಂದ ಬಂದಿದೀನಿ, ನೀನು ಫ್ರೀ ಆಗಿದ್ದರೆ ಮೀಟ್ ಮಾಡೋಣವೇ ಅಂತ ಕೇಳಿದ. ನನಗೋ ಇನ್ನೂ ನಿದ್ದೆ ಸಮಯವಲ್ಲ. ಇನ್ನೂ ಎರಡು-ಮೂರು ಘಂಟೆಗಳಂತೂ ಖಂಡಿತಾ ನಿದ್ದೆ ಬರುವುದಿಲ್ಲ. ಯಾಕೆ ಹೋಗಿ ಬರಬಾರದು? ಹೇಗಿದ್ರೂ ವಿಶಾಲನನ್ನು ನೋಡಿ ನಾಲ್ಕು ತಿಂಗಳ ಮೇಲಾಯಿತು. ಮಾತನಾಡುವುದು ಬಹಳ ಇದೆ. ಅವನಿಗೆ ಎಲ್ಲರ ವಿಷಯವೂ ಗೊತ್ತಿರತ್ತೆ. ತಮಾಷೆಯಾಗಿ ಕಾಲ ಕಳೆಯಬಹುದೆಂದೆನಿಸಿತು. ಸರಿ, ಬಾ ಮನೆಗೆ. ಆದರೆ ಬೆಲ್ ಮಾಡಬೇಡ, ಎಲ್ಲಾ ಮಲಗಿದಾರೆ. ಮನೆಯ ಹತ್ತಿರ ಬಂದಾಗ ಟೆಕ್ಸ್ಟ್ ಮಾಡು ಸಾಕು ಅಂತ ಹೇಳಿದೆ. ಅಪ್ಪ ಮತ್ತು ಸುಮೇರು ಇಬ್ಬರೂ ಮಲಗಿದ್ದಾರೆ. ಅವರನ್ನು ಎಚ್ಚರಿಸುವ ಅವಶ್ಯಕತೆ ಇಲ್ಲ. ಹೇಗಿದ್ರೂ ಅಬ್ಬಬ್ಬಾ ಅಂದ್ರೆ 3 ಘಂಟೆಯೊಳಗೆ ಬಂದುಬಿಡ್ತೀನಿ. ಬಂದು ಮಲಗಿದರಾಯಿತು. ಬೆಳಿಗ್ಗೆ ಎದ್ದ ಮೇಲೆ ಅಪ್ಪನಿಗೆ ಹೇಳುತ್ತೇನೆ. ಅಪ್ಪನಿಗೂ ವಿಶಾಲ ಚೆನ್ನಾಗಿ ಗೊತ್ತು ಮತ್ತು ಅವರೇನೂ ಅಪಾರ್ಥ ಮಾಡಿಕೊಳ್ಳುವುದಿಲ್ಲ.

ಮೇಲೆದ್ದು ನನ್ನ ಬಟ್ಟೆ ಬದಲಾಯಿಸಿ ವಿಶಾಲನಿಗೆ ಕಾಯುತ್ತಾ ಕುಳಿತೆ. ನಮ್ಮ ಮನೆ ಹತ್ತಿರಾನೇ ಇದ್ದ ವಿಶಾಲ್ 10 ನಿಮಿಷಗಳೊಳಗೆ ಬಂದ. ನಾನು ಶಬ್ದ ಮಾಡದೆ ಕೆಳಗಿಳಿದು ಬಂದು ಮನೆಯ ಕೀಯನ್ನು ಇಟ್ಟುಕೊಂಡು ಮುಂದಿನ ಬಾಗಿಲನ್ನು ಲಾಕ್ ಮಾಡಿಕೊಂಡು ಹೊರಗೆ ಬಂದೆ. ವಿಶಾಲ್ ಕಾರಿನಿಂದ ಹೊರ ಬಂದು ನನಗೆ ಪ್ಯಾಸೆಂಜರ್ ಸೈಡಿನ ಬಾಗಿಲನ್ನು ತೆರೆದು ಒಳಗೆ ಹೋಗಲು ಸೂಚಿಸಿದ. ಹೊಸಾ ಕಾರು. ವಿಶಾಲ್‌ಗೆ ಅವರ ಅಪ್ಪ ಕಾಲೇಜಿಗೆ ಸೇರಿದಾಗ ಬಹುಮಾನವಾಗಿ ಕೊಟ್ಟದ್ದು. ಚೆನ್ನಾಗಿಯೇ ಇಟ್ಟುಕೊಂಡಿದ್ದ. ಕಾರಿನ ಡ್ಯಾಶ್-ಬೋರ್ಡ್ ಮೇಲೆ ಗಣಪತಿಯ ಪುಟ್ಟ ವಿಗ್ರಹ ಇತ್ತು. ಬಹುಶಃ ವಿಶಾಲನ ಅಮ್ಮ ಪೂಜೆ ಮಾಡಿ ಇಟ್ಟಿರಬೇಕು. ನಮ್ಮ ಮನೆಯ ಎರಡೂ ಕಾರುಗಳಲ್ಲೂ ಗಣಪತಿ ಇದ್ದಾನೆ. ಅಮ್ಮನಂತೂ ಗಣಪತಿಗೆ ಕೈ ಮುಗಿಯದೆ ಕಾರನ್ನು ಸ್ಟಾರ್ಟ್ ಮಾಡಲೂ ಬಿಡುವುದಿಲ್ಲ. ಮತ್ತೆ ನಗು ಬಂತು. ವಿಶಾಲ್ ಸೀಟಿನಲ್ಲಿ ಕುಳಿತು ಕಾರ್ ಸ್ಟಾರ್ಟ್ ಮಾಡಿದ. ಯಾಕೋ, ಅವನು ಸ್ವಲ್ಪ ತೆಳ್ಳಗಾದಂತೆ ಕಂಡುಬಂದ.

ಯಾಕೆ ಅಂತ ಕೇಳಿದ್ದಕ್ಕೆ, ಅಮ್ಮನ ಆರೈಕೆ ಇಲ್ಲಾ ಅದಕ್ಕೆ ಎಂದು ನಕ್ಕ. ಮುಂದೆ ಸುಮಾರು ಇಪ್ಪತ್ತು ನಿಮಿಷ ಹೊಟ್ಟೆ ಹುಣ್ಣಾಗುವಷ್ಟು ನಕ್ಕಿರಬಹುದು. ವಿಶಾಲ್‌ನ ಜೊತೆಗಿದ್ರೆ ಹಾಗೇ.

ಅವನಿಂದ ಸುಮಾರಷ್ಟು ನನ್ನ ಹೈ-ಸ್ಕೂಲ್ ಸ್ನೇಹಿತರ ವಿಷಯವೆಲ್ಲಾ ತಿಳಿದಹಾಗಾಯಿತು. ವಿಶಾಲ್ ಸುಮ್ಮನೇ ಡ್ರೈವ್ ಮಾಡ್ತಾ ಇದ್ದ. ಇಬ್ಬರಿಗೂ ಇಂಥಾ ನಿಶ್ಚಿತ ಸ್ಥಳಕ್ಕೆ ಹೋಗಬೇಕೆಂದಿರಲಿಲ್ಲ. ಸಮ್ಮನೇ ಕಾಲ ಕಳೆಯಬೇಕಾಗಿತ್ತು ಅಷ್ಟೇ. ಮಾತಿನ ಮಧ್ಯೆ ನಮ್ಮ ಕ್ಲಾಸ್-ಮೇಟ್ ಜೆಫೆರಿ ಟೇಲರ್‌ನ ವಿಷಯ ಬಂತು. ಜೆಫರಿ ನಮ್ಮ ಕಾಲೇಜಿನಲ್ಲೇ ಇದ್ದ. ಅವನ ಸಬ್ಜೆಕ್ಟ್ ಆರ್ಟ್ಸ್ ಆಗಿತ್ತು. ನನಗೇನೂ ಅವನ ಸಂಪರ್ಕ ಅಷ್ಟಾಗಿ ಇರಲಿಲ್ಲ. ಲೈಬ್ರರಿಯಲ್ಲಿ ಮೂರು-ನಾಕು ಬಾರಿ ಭೇಟಿಯಾಗಿತ್ತು ಅಷ್ಟೇ. ಅವನು ವಿಶಾಲ್‌ಗೆ ತುಂಬಾ ಕ್ಲೋಸ್ ಆಗಿದ್ದ. ಜೆಫರಿ ಬಗ್ಗೆ ಮಾತನಾಡುತ್ತಾ ಅವನಿಗೆ ಫೋನ್ ಹಚ್ಚಿಯೇ ಬಿಟ್ಟ. ಜೆಫರಿ ಅದ್ಯಾಕೋ ಇನ್ನೂ ಕ್ಯಾಂಪಸ್‌ನಲ್ಲೇ ಇದ್ದ. ಅವನ ಜೊತೆಗೆ ಇನ್ನೂ ನಾಲ್ಕಾರು ಮಂದಿ ಇದ್ದರೆನಿಸತ್ತೆ. ವಿಶಾಲನಿಗೆ ಅಲ್ಲಿಗೇ ಬರಲು ತುಂಬಾ ಒತ್ತಾಯ ಮಾಡಿದ ಮತ್ತು ವಿಶಾಲ್ ಬಂದರೆ ತಾನೂ ಅವನ ಜೊತೆಗೆ ಬರುವುದಾಗಿ ಹೇಳಿ ಮಾರನೆಯದಿನ ಅಟ್ಲಾಂಟಿಕ್ ಸಿಟಿಗೆ ಹೋಗಬಹುದೆಂದ. ವಿಶಾಲ್ ಕೂಡ ಹೋಗುವ ಅಪೇಕ್ಷೆ ವ್ಯಕ್ತಪಡಿಸಿದ. ಈಗ ಹನ್ನೆರಡೂಕಾಲು ಘಂಟೆ. ಟ್ರಾಫಿಕ್ ಇಲ್ಲದಿದ್ದಲ್ಲಿ ಕೊಲಂಬಿಯಕ್ಕೆ ಹೋಗಲು ಸುಮಾರು 45 ನಿಮಿಷಗಳು ಬೇಕಾಗಬಹುದು. ಅಲ್ಲಿ ಒಂದು ಘಂಟೆ ಕಳೆದರೂ, ಮೂರು ಘಂಟೆಯ ಒಳಗೆ ಮನೆಗೆ ಬಂದುಬಿಡಬಹುದು ಎಂದು ಲೆಕ್ಕ ಹಾಕಿ ಹೇಳಿದ. ನಾನು ಸ್ವಲ್ಪ ಹಿಂಜರಿದರೂ, ಜೊತೆ ಇರುವುದರಿಂದ ಹೋಗಿ ಬರುವುದರಲ್ಲಿ ಆತಂಕವೇನಿಲ್ಲ ಎನಿಸಿತು. ಅದೂ ಅಲ್ಲದೆ ನಾನು ಎರಡು ಪುಸ್ತಕಗಳನ್ನು ನನ್ನ ರೂಮಿನಲ್ಲಿ ಮರೆತುಬಂದಿದ್ದೆ. ಅವನ್ನೂ ತಂದ ಹಾಗಾಯಿತು ಎಂದು ಹೂಂ ಎಂದೆ. ಸರಿ, ಹೊರಟೆವು ನ್ಯೂಯಾರ್ಕ್ ಸಿಟಿಯತ್ತ.

ರಾತ್ರಿಯಾದ್ದರಿಂದ ಸ್ವಲ್ಪವೂ ಟ್ರಾಫಿಕ್ ಇರಲಿಲ್ಲ. ಝುಗಝುಗಿಸುವ ನ್ಯೂಯಾರ್ಕನ್ನು ರಾತ್ರಿ ಹೊತ್ತು ನೋಡಿಯೇ ಆನಂದಿಸಬೇಕು. ವಾಷಿಂಗ್ಟನ್ ಬ್ರಿಡ್ಜ್ ಮೇಲಿನಿಂದ ಆ ಸುಂದರ ನಗರದ ಸೌಂದರ್ಯವನ್ನು ಆಸ್ವಾದಿಸಿದೆವು. ವಿಶಾಲ್ ಬಹಳ ಜೋಪಾನವಾಗಿ ಜವಾಬ್ದಾರಿಯಿಂದ ಡ್ರೈವ್ ಮಾಡುತ್ತಿದ್ದ. ಮಾತನಾಡುತ್ತಾ ನಮಗೆ ದಾರಿ ಸವೆದದ್ದೇ ಗೊತ್ತಾಗಲಿಲ್ಲ. ಒಂದು ಘಂಟೆಗೆಲ್ಲಾ ಜೆಫರಿ ಬಳಿಗಿದ್ದೆವು. ಅವನ ಸಣ್ಣ ಅಪಾರ್ಟಮೆಂಟಿನಲ್ಲಿ ಅವನ ಜೊತೆಗೆ ಅವನ ಕ್ಲಾಸ್-ಮೇಟ್ಸ್ ಪಾರೀಖ್, ಸ್ಟೀವನ್, ಮೇಘನಾ, ಜೆನ್ನಿಫೆರ್ ಇದ್ದರು. ಒಂದಿಷ್ಟು ಸ್ನಾಕ್ಸ್ ಮತ್ತು ಬೀರ್ ಬಾಟಲುಗಳಿದ್ದವು. ಜೆಫರಿ ಅವನ ಮಿತ್ರರಿಗೆ ವಿಶಾಲನ ಮತ್ತು ನನ್ನ ಪರಿಚಯ ಮಾಡಿಕೊಟ್ಟ. ವಿಶಾಲ್ ಒಂದು ಬೀರ್ ಬಾಟಲ್ ತೆಗೆದುಕೊಂಡು ಹರಟೆ ಶುರುಮಾಡಿದ. ಅಲ್ಲಿಂದ ನನ್ನ ರೂಮ್‌ಗೆ ಕೇವಲ 10 ನಿಮಿಷಗಳ ದೂರವಿತ್ತು. ನಾನು ಹೋಗಿ ಅವನ್ನು ತಂದುಬಿಡುತ್ತೇನೆಂದು ಹೇಳಿ ಹೊರಟೆ. ನಾನು ನನ್ನ ರೂಮಿಗೆ ಹೋಗಿ ಬರುವಷ್ಟರಲ್ಲಿ

ಸುಮಾರು ಅರ್ಧ ಘಂಟೆಯಾಗಿತ್ತು. ಜೆಫರಿಯ ಸ್ನೇಹಿತರೆಲ್ಲಾ ಹೊರಟುಹೋಗಿದ್ದರು. ವಿಶಾಲ್ ಮತ್ತು ಜೆಫರಿ ಬೀರು ಗುಟುಕರಿಸುತ್ತಾ ಮಾತನಾಡುತ್ತಿದ್ದರು. ನಾನು ಹೋದ ಮೇಲೆ ಸುಮಾರ 15 ನಿಮಿಷ ಮಾತನಾಡಿದೆವು. ಜೆಫರಿ ಒಂದು ಬ್ಯಾಗಿನಲ್ಲಿ ತನ್ನ ವಸ್ತುಗಳನ್ನೆಲ್ಲಾ ತುಂಬಿಕೊಂಡು ಹೊರಡಲು ತಯಾರಾದ. ವಿಶಾಲ್ ನನ್ನನ್ನು ಹೊರಡೋಣವಾ ಅಂತ ಕೇಳಿದ. ನನಗೆ ಒಂದು ಕ್ಷಣ ಯಾಕೋ ದಿಗಿಲಾಗಿ, 'ನೀನು ಡ್ರೈವ್ ಮಾಡ್ತೀಯಾ? ಪರವಾಗಿಲ್ಲವಾ? ಎಷ್ಟು ಡ್ರಿಂಕ್ಸ್ ತೊಗೊಂಡೆ?' ಅಂತ ಕೇಳಿದೆ. ವಿಶಾಲ್ ನಕ್ಕು, 'ಕೇವಲ ಎರಡು ಬಾಟಲ್ ಅಷ್ಟೇ. ಏನೂ ಹೆದರಬೇಡ. ಆರು ಬಾಟಲ್ ಕುಡಿದು ಡ್ರೈವ್ ಮಾಡಿದ್ದೇನೆ. ಇದು ಏನೂ ಇಲ್ಲ. ನಿನ್ನನ್ನು ಮೂರು ಘಂಟೆಯೊಳಗೆ ನಿಮ್ಮ ಮನೆ ಸೇರಿಸುವುದು ನನ್ನ ಜವಾಬ್ದಾರಿ' ಎಂದು ನಗುತ್ತಾ ಹೇಳಿ ಕುರ್ಚಿಯಿಂದ ಎದ್ದ. ಮೂವರೂ ಹೊರಗೆ ಹೊರಟೆವು. ಜೆಫರಿ ಬಾಗಿಲನ್ನು ಲಾಕ್ ಮಾಡಿದ. ಅವನು ಸ್ವಲ್ಪ ಜಾಸ್ತಿ ಕುಡಿದಿದ್ದನೆಂದು ತೋರುತ್ತೆ. ಮಾತು ತೊದಲುತ್ತಿತ್ತು ಮತ್ತು ನಡಿಗೆ ನೇರವಾಗಿರಲಿಲ್ಲ.

ಕಾರಿನಲ್ಲಿ ಕುಳಿತು ಅಲ್ಲಿಂದ ಹೊರಡುವ ಹೊತ್ತಿಗೆ ಸುಮಾರು ಎರಡೂಕಾಲಾಗಿತ್ತು. ವಿಶಾಲ್ ಡ್ರೈವ್ ಮಾಡುತ್ತಿದ್ದ. ಜೆಫರಿ ಮುಂದುಗಡೆ ಪ್ಯಾಸೆಂಜರ್ ಸೀಟಿನಲ್ಲಿ ಕುಳಿತುಕೊಂಡ. ನಾನು ಹಿಂದಿನ ಸೀಟಿಗೆ ಹೋದೆ. ಜೆಫರಿ ಏನೇನೋ ಅಸಂಬದ್ಧವಾಗಿ ಮಾತನಾಡುತ್ತಿದ್ದ. ಅಶ್ಲೀಲ ಪದಗಳನ್ನು ಮಾತು ಮಾತಿಗೂ ಉಪಯೊಗಿಸುತ್ತಿದ್ದ. ವಿಶಾಲ್ ಮತ್ತು ಜೆಫರಿ ಒಂದೇ ಸಮನೆ ಮಾತನಾಡುತ್ತಿದ್ದರು. ಅವರಿಗೆ ವಿಷಯದ ಕೊರತೆಯಿರಲಿಲ್ಲವೆಂದು ಕಾಣಿಸುತ್ತದೆ. ಪಾಲಿಟಿಕ್ಸ್, ಸ್ಕೂಲ್-ಫ್ರೆಂಡ್ಸ್, ಬ್ಯಾಸ್ಕೆಟ್-ಬಾಲ್, ಫುಟ್-ಬಾಲ್, ಮೂವೀಸ್ ಎಲ್ಲಾ ಇತ್ತು. ನನಗೆ ಸಣ್ಣಗೆ ಕಣ್ಣು ಎಳೆಯಲಾರಂಬಿಸಿತು. ಹಾಗೆಯೇ ತೂಕಡಿಸತೊಡಗಿದೆ. ಮದ್ಯೆಮಧ್ಯೆ ವಿಶಾಲ್, ಜೆಫರಿ ಕೇಕೆ ಹಾಕಿ ನಗುತ್ತಿದ್ದುದು ಕೇಳಿಸುತ್ತಿತ್ತು. ನನಗೆ ಸ್ವಲ್ಪ ಎಚ್ಚರವಾಗಿ ನೋಡಿದಾಗ ರೂಟ್ 1ರಲ್ಲಿ ನುವರ್ಕ್ ಏರ್-ಪೋರ್ಟ್‌ನ್ನು ದಾಟಿ ಹೋಗುತ್ತಿದ್ದೆವು. ವಿಶಾಲ್ ಸ್ವಲ್ಪ ಹೆಚ್ಚು ವೇಗವಾಗಿ ಹೋಗುತ್ತಿದ್ದಾನೆ ಎನ್ನಿಸಿತು. ಪಕ್ಕದ ಲೇನ್‌ನಲ್ಲಿ ಇನ್ನೊಂದು ಕಾರು ಇವರೊಡನೆ ಪೈಪೋಟಿ ನಡೆಸಿದ್ದಂತೆ ತೋರಿತು. ವಿಶಾಲ್ ಮತ್ತು ಜೆಫರಿ ಪಕ್ಕಕ್ಕೆ ನೋಡುತ್ತಾ ಜೋರಾಗಿ ನಗುತ್ತಿದ್ದರು. ವಿಶಾಲ್, ನಾನು ಕಣ್ಣು ಬಿಟ್ಟಿದ್ದನ್ನು ನೋಡಿ, 'ನೀನು ನಿದ್ದೆ ಹೋಗು. ಇನ್ನು ಇಪ್ಪತ್ತು ನಿಮಿಷದಲ್ಲಿ ನಿಮ್ಮ ಮನೆ ಸೇರಿಸುತ್ತೇನೆ' ಅಂತ ಹೇಳಿದ. ನಾನು ಮತ್ತೆ ಕಣ್ಣು ಮುಚ್ಚಿದೆ. ಏನೇನೋ ವಿಚಿತ್ರ ಕನಸುಗಳು... ಅಮ್ಮ, ಅಪ್ಪ, ಸುಮೇರು, ಅಜ್ಜ, ಅಜ್ಜಿ... ಎಲ್ಲಾ ನನ್ನನ್ನೇ ನೋಡುತ್ತಿರುವಂತೆ, ಕೈ ಸನ್ನೆ ಮಾಡುತ್ತಿರುವಂತೆ. ನಾನು ನದಿ ಸುಳಿಯಲ್ಲಿ ಸಿಕ್ಕು ಒಳಗೆ ಹೋಗುತ್ತಿದ್ದಂತೆ... ಕೂಗಲು ಬಾಯಿ ತೆರೆದರೆ ಶಬ್ದ ಹೊರಡುತ್ತಿಲ್ಲ... ಕೆಳಗೆ ಹೋಗುತ್ತಿದ್ದೇನೆ... ಇದ್ದಕ್ಕಿದ್ದಂತೆ ಥಡ್-ಥಡ್-ಥಡ್ ಎಂದು ಶಬ್ದವಾಯಿತು. ನನ್ನ ದೇಹವನ್ನು ಮೇಲಕ್ಕೆ ಎತ್ತಿ ಜೋರಾಗಿ ನೆಲಕ್ಕೆ ಅಪ್ಪಳಿಸಿದ ಹಾಗಾಯಿತು. ನನ್ನ ತಲೆ

ಸೀಳಿಹೋದಂತೆ ಅನ್ನಿಸಿತು. ಆದರೆ, ಆಶ್ಚರ್ಯ! ನನಗೆ ನೋವೇ ಆಗುತ್ತಿಲ್ಲ. ಹಾಗೇ ಕಣ್ಮುಚ್ಚಿದೆ.

ಸುಂದರ್ ದೇಶಮುಖ್

ಟ್ರಿನ್... ಟ್ರಿನ್.... ಟ್ರಿನ್..... ಫೋನ್ ಕೂಗುತ್ತಿದೆ. ಗಾಢವಾದ ನಿದ್ದೆಯಲ್ಲಿದ್ದ ನನಗೆ ಅದು ಕನಸೇ ಎಂದು ಕಲ್ಪನೆ. ಮತ್ತೆ ಟ್ರಿನ್... ಟ್ರಿನ್.... ಟ್ರಿನ್..... ಶಬ್ದ!

ಕಣ್ಣು ಬಿಟ್ಟು ನೋಡುತ್ತೇನೆ. ಮನೆ ಫೋನ್ ಒಂದೇ ಸಮನೆ ಒದರುತ್ತಿದೆ. ಫೋನ್ ತೆಗೆದುಕೊಂಡು ನಿಧಾನವಾಗಿ 'ಹಲೋ' ಅಂದೆ. ಗಡಿಯಾರ ಐದು ಘಂಟೆ ತೋರಿಸುತ್ತಿತ್ತು.

ಆ ಕಡೆಯ ಧ್ವನಿ 'Is this Sundar Deshmukh?'

ನಾನು – 'Yes, I am Sundar Deshmukh. Who is this?'

ಆ ಕಡೆಯ ಧ್ವನಿ – 'I am sorry. You have to come to Newark Hospital immediately. Your daughter is in critical condition'

ನಾನು – 'What? You must be mistaken. My daughter is right here.'

ಆ ಕಡೆಯ ಧ್ವನಿ – 'No Sir. She is here and you please come fast. Alright.'

ನನಗೆ ತಕ್ಷಣ ಗಾಬರಿಯಾಯಿತು. ಡೀಟೈಲ್ಸ್‌ನ್ನು ತೆಗೆದುಕೊಂಡು ಇನ್ನರ್ಧ ಘಂಟೆಯಲ್ಲಿರುತ್ತೇನೆಂದು ಹೇಳಿ ಫೋನನ್ನಿಟ್ಟೆ. ನನಗೆ ಇನ್ನೂ ನಂಬಿಕೆ ಇರಲಿಲ್ಲ. ರಾತ್ರಿ ಹನ್ನೊಂದರವರೆಗೆ ಟಿ.ವಿ. ನೋಡಿದ ನಂತರ ಮಲಗಲು ಬಂದಿದ್ದೇವೆ, ಅದು ಹ್ಯಾಗೆ ಅವಳು ಅಲ್ಲಿರಲಿಕ್ಕೆ ಸಾಧ್ಯ? ಎಂದು ಯೋಚಿಸುತ್ತಾ ಪಕ್ಕದ ರೂಮಿಗೆ ಹೋಗಿ ನೋಡುತ್ತೇನೆ, ಸುಚಿತ್ರಾ ಅಲ್ಲಿಲ್ಲ! ನನ್ನ ಎದೆ ಧಸಕ್ಕೆಂದಿತು. ಅಂದರೆ ನಾನು ಕೇಳಿದ್ದು ನಿಜವೇ? ಅವಳಿಗೆ ಏನಾದರೂ ಪೆಟ್ಟಾಗಿದೆಯಾ? ಯಾವಾಗ ಮನೆಯಿಂದ ಹೋದಳು? ಯಾವತ್ತೂ ಹೇಳದೇ ಹೋಗುವವಳಲ್ಲ. ಹೀಗೇಕೆ ಮಾಡಿದಳು? ಎಂದೆಲ್ಲಾ ಯೋಚಿಸುತ್ತಾ ಪ್ಯಾಂಟ್ ಹಾಕಿಕೊಂಡು ಹೊರಡಲು ಅಣಿಯಾದೆ. ಮತ್ತೆ ಅನುಮಾನದಿಂದ ಮನೆಯೆಲ್ಲಾ ಇನ್ನೊಮ್ಮೆ ಶೋಧಿಸಿದೆ. ಸುಮೇರು ಇನ್ನೂ ಸುಖ ನಿದ್ದೆಯಲ್ಲಿದ್ದ. ಅವನನ್ನು ಎಬ್ಬಿಸುವುದು ಬೇಡ. ಇನ್ನೂ ಐದೂವರೆ. ಬೇಗ ಸುಚಿತ್ರಾನ ಕರೆದುಕೊಂಡು ಬಂದು ಬಿಡುತ್ತೇನೆ ಅಂದುಕೊಡು ಸೆಲ್-ಫೊನನ್ನೂ, ಕಾರಿನ ಕೀಯನ್ನೂ ಕೈಗೆತ್ತಿಕೊಂಡು ಹೊರ ನಡೆದೆ.

ನುವರ್ಕ್ ಕೇವಲ 30 ನಿಮಿಷಗಳ ಹಾದಿ. ಬೆಳಿಗ್ಗೆ ಟ್ರಾಫಿಕ್ ಇರಲಿಲ್ಲ. ಡ್ರೈವ್ ಮಾಡುತ್ತಾ ಸುಚಿತ್ರಾಳ ಹುಡುಗಾಟದ ಬಗ್ಗೆ ಸಿಟ್ಟೇ ಬಂತು. ಅವಳಿಗೆ ಚೆನ್ನಾಗಿ ಗದರಬೇಕು ಅಂದುಕೊಂಡೆ. ಸುಮನಾ ನೆನಪಾದಳು. ಇನ್ನೂ ಫ್ಲೈಟಿನಲ್ಲಿರುತ್ತಾಳೆ. ದುಬೈ ಮುಟ್ಟಲು ಇನ್ನೂ ಏಳು ಘಂಟೆ ಬೇಕು ಎಂದು ಲೆಕ್ಕ ಹಾಕಿದೆ. 6 ಘಂಟೆಗೆಲ್ಲಾ ಹಾಸ್ಪಿಟಲ್ಲನ್ನು ತಲುಪಿದೆ. ಯಾಕೋ ಎದೆ ಸಣ್ಣಗೆ ಢವಗುಟ್ಟಲಾರಂಭಿಸಿತು. ಸೀದಾ ಎಮೆರ್ಜೆನ್ಸಿ ಸೆಕ್ಷನ್ನಿನ ಕಡೆಗೆ ನಡೆದೆ. ರೆಸೆಪ್ಷನ್‌ನಲ್ಲಿ ನನ್ನ ಗುರುತು ಹೇಳಿ ನಿಂತೆ. ಒಂದು ನಿಮಿಷ ತಾಳಿ ಎಂದು ರೆಸೆಪ್ಷನಿಸ್ಟ್ ಒಳಗೆ ಹೋದಳು. ಒಬ್ಬ ಭಾರೀ ಆಕೃತಿಯ ಸೀನಿಯರ್ ಡಾಕ್ಟರಿನ ಜೊತೆಗೆ ಮತ್ತೆ ಹೊರಬಂದಳು. 'Hello Sundar, I am Greg Hughes. Please come with me' ಎಂದು ಕೈ ಚಾಚಿದರು. ನಾನು ಅವರ ಕೈಯನ್ನು ಕುಲುಕಿ ಹಿಂಬಾಲಿಸಿದೆ. ಎದೆಯ ಢವ–ಢವಿಕೆ ಇನ್ನೂ ನಿಂತಿರಲಿಲ್ಲ. ನನ್ನ ಮೈಯೂ ಕಂಪಿಸುತ್ತಿತ್ತು. ಡಾ. ಹ್ಯೂಸ್ ನನ್ನನ್ನು ಅವರ ಕೋಣೆಗೆ ಕರೆದುಕೊಂಡುಹೋಗಿ ಎದುರಿಗಿದ್ದ ಕುರ್ಚಿಯ ಮೇಲೆ ಕೂರಲು ಸಂಜ್ಞೆ ಮಾಡಿದರು. ನಾನು ಕುಳಿತುಕೊಂಡು ಮೈಯನ್ನೆಲ್ಲಾ ಕಿವಿಯನ್ನಾಗಿಸಿಕೊಂಡು ಅವರನ್ನು ನೋಡತೊಡಗಿದೆ. ಡಾ. ಹ್ಯೂಸ್ ಒಮ್ಮೆ ದೀರ್ಘವಾಗಿ ಉಸಿರನ್ನೆಳೆದುಕೊಂಡು ನನ್ನನ್ನೇ ದೃಷ್ಟಿಸಿ ನೋಡಿ ಮಾತನಾಡಲು ಆರಂಭಿಸಿದರು.

'I am very sorry Sundar, we tried our best but we could not save your child.' ನನಗೆ ತಲೆ ಸುತ್ತಲಾರಂಭಿಸಿತು. ಡಾಕ್ಟರ್ ಇನ್ನೂ ಏನೇನೋ ಹೇಳುತ್ತಿದ್ದರೆನಿಸುತ್ತದೆ. ನನಗೇನೂ ಕೇಳಿಸುತ್ತಿರಲಿಲ್ಲ. ಏನೇನೋ ಚಿತ್ರಗಳು... ಎಲ್ಲವೂ ಅಸ್ಪಷ್ಟ. ಶೂನ್ಯ ಭಾವದಿಂದ ಅವರನ್ನೇ ನೋಡುತ್ತಿದ್ದೆ. 'Are you alright?' ಅಂತ ಕೇಳಿದರು ಮತ್ತು ಪಕ್ಕದಲ್ಲಿದ್ದ ಒಂದು ನೀರಿನ ಬಾಟಲ್ಲನ್ನು ನನ್ನ ಕಡೆಗೆ ತಳ್ಳಿದರು. ಅದನ್ನು ತೆಗೆದುಕೊಂಡು ಒಂದೇ ಉಸಿರಿಗೆ ಎಲ್ಲವನ್ನೂ ಕುಡಿದೆ. ಮನಸ್ಸು ನಿಧಾನವಾಗಿ ತಿಳಿಯಾಗತೊಡಗಿತು. ಸುಚಿತ್ರಾ ಇನ್ನಿಲ್ಲವೆನ್ನುವ ಅಂಶ ನನ್ನ ಮೆದುಳಿಗೆ ಹೊಗುತ್ತಲೇ ಇರಲಿಲ್ಲ ಮತ್ತು ಅದನ್ನು ನಂಬಲು ಸಿದ್ಧವಾಗಿರಲಿಲ್ಲ. 'Doctor, how is it possible? She is only 19? She has whole life ahead of her. I want to see her right now' ಎಂದು ಒಂದೇ ಉಸಿರಿನಲ್ಲಿ ಎದ್ದು ನಿಂತು ಬಡಬಡಿಸಿದೆ. ಡಾಕ್ಟರ್ ಸ್ವಲ್ಪ ಅವಾಕ್ಕಾಗಿ, ತಾವೂ ಎದ್ದು ನನ್ನನ್ನು ಕರೆದುಕೊಂಡು ಹೊರಟರು. ಒಂದು ದೊಡ್ಡ ಹಾಲನ್ನು ದಾಟಿದಮೇಲೆ ಬಲಭಾಗದಲ್ಲಿದ್ದ ಒಂದು ಕೋಣೆಯೊಳಗೆ ಕಾಲಿಡುತ್ತಾ ಅವರನ್ನು ಹಿಂಬಾಲಿಸುವಂತೆ ಸಂಜ್ಞೆ ಮಾಡಿದರು. ಒಳಗೆ ಸುಚಿತ್ರಾಳನ್ನು ಮಂಚದ ಮೇಲೆ ಮಲಗಿಸಿದ್ದಾರೆ. ಕುತ್ತಿಗೆಯವರೆವಿಗೂ ಹೊದಿಸಿದ್ದರಿಂದ ಏನೂ ಗೊತ್ತಾಗುವಂತಿರಲಿಲ್ಲ. ಮುಖ ಮಾತ್ರ ಶಾಂತವಾಗಿ ಮಲಗಿದ್ದಂತೆ ತೋರುತ್ತಿತ್ತು. ಹೋದವನೇ ಅವಳ ಮುಖವನ್ನು ಸವರಿದೆ. ತಣ್ಣಗಿತ್ತು. ಕರುಳು ಕಿತ್ತು ಬಂದಂತೆ ಆಗಿ ದುಃಖ ಉಮ್ಮಳಿಸಿತು. 'ಸುಚೀ, ಸುಚೀ...' ಅಂತಾ ಕೂಗುತ್ತಾ 'ಏಳು, ಏಳು, ಮನೆಗೆ

ಹೋಗೋಣ' ಅಂತ ಹಲುಬಿದೆ. ಹಲವಾರು ನಿಮಿಷಗಳ ದುಃಖೋನ್ಮಾದ ಇಳಿದ ಮೇಲೆ, ಇದು ಸತ್ಯ, ಸುಚಿತ್ರಾ ಇನ್ನು ನಮ್ಮೊಡನೆ ಇಲ್ಲ ಎನ್ನುವುದು ಖಾತ್ರಿಯಾಯಿತು ನನಗೆ. ಮನಸ್ಸು ಶೂನ್ಯವಾಗಿತ್ತು. ಇದು ಹೇಗಾಯಿತು ಅನ್ನುವುದು ನನಗಿನ್ನೂ ತಿಳಿದೇ ಇರಲಿಲ್ಲ. 'What happened to my baby?' ಅಂತ ಹಲುಬಿದೆ. ಅಷ್ಟರಲ್ಲಿ ಅಲ್ಲಿ ಒಬ್ಬ ಪೋಲೀಸ್ ಆಫೀಸರ್ ಬಂದಿದ್ದರು. ಮತ್ತೆ ನನ್ನನ್ನು ಡಾಕ್ಟರ್ ಅವರ ಕೋಣೆಗೆ ಕರೆದುಕೊಂಡು ಹೋದರು.

ಪೋಲೀಸ್ ಆಫೀಸರ್ ಎಲ್ಲವನ್ನೂ ಬಿಡಿಸಿ ಹೇಳಿದ, 'ಸುಮಾರು 3 ಘಂಟೆಯ ಹೊತ್ತಿಗೆ ಒಂದು ಆಕ್ಸಿಡೆಂಟ್ ಬಗ್ಗೆ 911 ಕರೆಯಿಂದ ತಿಳಿಯಿತು. ಆಂಬುಲೆನ್ಸನ್ನು ತಕ್ಷಣ ಕಳುಹಿಸಲಾಯಿತು. ಇವರಿದ್ದ ಕಾರು ರಸ್ತೆಯ ಮಗ್ಗುಲಿನ ಮೀಡಿಯನ್‌ಗೆ ಢಿಕ್ಕಿಹೊಡೆದು, ರಸ್ತೆಯ ಪಕ್ಕದಲ್ಲಿದ್ದ ಬೀದಿ ದೀಪಕ್ಕೆ ಅಪ್ಪಳಿಸಿ ಒಂದೆರಡುಬಾರಿ ಉಲ್ಟಾ ಹೊಡೆದು ತಲೆ ಕೆಳಗಾಗಿ ರಸ್ತೆಯ ಪಕ್ಕದಲ್ಲಿ ಬಿದ್ದಿತ್ತು. ಪಕ್ಕದಲ್ಲಿ ರಕ್ತದ ಕೋಡಿ ಹರಿದುಬರುತ್ತಿತ್ತು. ಒಳಗೆ 3 ಜನ ಇದ್ದದ್ದು ಕಾಣಿಸಿತು. ಯಾರಿಗೂ ಎಚ್ಚರವಿದ್ದ ಹಾಗೆ ಕಾಣಿಸಲಿಲ್ಲ. ತಕ್ಷಣ ಹೆಲಿಕಾಪ್ಟರಿಗೆ ಬರುವಂತೆ ತಿಳಿಸಿ, ಕಾರಿನಿಂದ ದೇಹಗಳನ್ನು ಹೊರತೆಗೆಯಲು ಪ್ರಯತ್ನಿಸಿದೆವು. ಕಾರಿನ ಬಾಗಿಲುಗಳು ಜಾಮ್ ಆಗಿದ್ದ ಕಾರಣ ಅದನ್ನು ಕತ್ತರಿಸಿ ಅವರನ್ನೆಲ್ಲಾ ಹೊರತೆಗೆಯುವಷ್ಟರಲ್ಲಿ ಹೆಲಿಕಾಪ್ಟರ್ ಬಂದಿತ್ತು. ಮೂವರನ್ನೂ ಅದರಲ್ಲಿ ಹಾಸ್ಪಿಟಲ್‌ಗೆ ಕರೆತಂದೆವು. ಡ್ರೈವರ್ ವಿಶಾಲ್ ವಿಪರೀತ ರಕ್ತ ಸ್ರಾವದಿಂದ ಸ್ಥಳದಲ್ಲೇ ಮೃತ್ಯುವನ್ನಪ್ಪಿದ್ದ. ಸುಚಿತ್ರಾಗೆ ಮೆದುಳಿಗೆ ತೀವ್ರವಾದ ಪೆಟ್ಟಾಗಿ ಹಾಸ್ಪಿಟಲ್ಲಿಗೆ ಬಂದ 15 ನಿಮಿಷಗಳಲ್ಲೇ ಅಸು ನೀಗಿದಳು. ಜೆಫರಿ ಮಾತ್ರ ಏರ್-ಬ್ಯಾಗ್‌ನಿಂದಾಗಿ ಜೀವ ಉಳಿಸಿಕೊಂಡ. ಅವನ ಕಾಲು ಫ್ರಾಕ್ಚರ್ ಆಗಿದೆ ಮತ್ತು ಈಗ ಮಾತನಾಡುತ್ತಿದ್ದಾನೆ' ಎಂದು ಹೇಳಿದರು. 'ಅತೀ ವೇಗವಾಗಿ ಹೋಗುತ್ತಿದ್ದುದೇ ಆಕ್ಸಿಡೆಂಟಾಗಲಿಕ್ಕೆ ಕಾರಣವಾಯಿತು' ಎಂದೂ ಹೇಳಿದರು.

ನನಗೆ ಸಹಾಯ ಮಾಡಲು ಒಂದಿಬ್ಬರನ್ನು ನೇಮಕ ಮಾಡಿದರು. ನನ್ನ ಕೆಲ ಸ್ನೇಹಿತರಿಗೆ ಫೋನ್ ಮಾಡಿ ತಿಳಿಸಿದೆವು. ಯು.ಎ.ಇ. ಏರ್-ಲೈನ್ಸ್‌ಗೆ ಫೋನ್ ಮಾಡಿ ಸುಮನಾಳನ್ನು ಅವಳ ಫ್ಲೈಟ್ ದುಬಾಯನ್ನು ತಲುಪುತ್ತಿದ್ದಂತೆ ಮತ್ತೆ ವಾಪಸ್ ನ್ಯೂಯಾರ್ಕ್‌ಗೆ ಕಳುಹಿಸುವಂತೆ ಕೋರಿಕೊಂಡೆವು. ನನ್ನ ಸ್ನೇಹಿತರೂ ಕೆಲವೇ ಕ್ಷಣದಲ್ಲಿ ಅಲ್ಲಿಗೆ ಬಂದು ಮುಂದಿನ ಕೆಲಸಗಳನ್ನು ನೋಡಿಕೊಳ್ಳಲು ಶುರು ಹಚ್ಚಿದರು. ಆಗಲೇ 10 ಘಂಟೆಯಾಗಿತ್ತು. ಹಾಸ್ಪಿಟಲಿನಲ್ಲಿ ಇದ್ದು ಮಾಡುವುದೇನೂ ಇರಲಿಲ್ಲ. ಒಂದಷ್ಟು ಡಾಕ್ಯುಮೆಂಟ್ಸ್ ತಂದು ಸಹಿ ಮಾಡಲು ಹೇಳಿದರು. ನನಗೆ ಓದುವ ವ್ಯವಧಾನವಿರಲಿಲ್ಲ. ಸಹಿ ಮಾಡಿ ಸ್ನೇಹಿತರೊಡನೆ ಮನೆಗೆ ಮರಳಿದೆ.

ನನ್ನ ಸ್ನೇಹಿತ ಪಂಕಜ್ ಮತ್ತು ಅವನ ಹೆಂಡತಿ ಸುಧಾ ಎಲ್ಲವನ್ನೂ ಸುಧಾರಿಸುತ್ತಿದ್ದರು. ನನ್ನ ಮನಸ್ಸೆಲ್ಲವೂ ಶೂನ್ಯವಾಗಿತ್ತು. ನನಗೆ ಸುಮನಳದೇ

ಚಿಂತೆಯಾಗಿತ್ತು. ಅವಳಿಗೆ ಹೇಗೆ ಹೇಳುವುದು? ಹೇಗೆ ಸಮಾಧಾನ ಮಾಡುವುದು?

ಸುಧಾಳ ಬಲವಂತಕ್ಕೆ ಮಧ್ಯಾಹ್ನ ಸ್ವಲ್ಪ ಊಟದ ಶಾಸ್ತ್ರ ಮಾಡಿದೆ. ಪಂಕಜ್ ನಿಧಾನವಾಗಿ ಮುಂದಿನ ಕಾರ್ಯಗಳ ವಿವರಣೆ ನೀಡಿದ. ಸುಮನಾ ನಾಳೆ ಬೆಳಿಗ್ಗೆ 7:30ಕ್ಕೆ ಜಾನ್ ಎಫ್ ಕೆನಡಿ ಏರ್–ಪೋರ್ಟ್‌ಗೆ ಬರುತ್ತಾಳೆಂದೂ, ಮಧ್ಯಾಹ್ನ 1:00 ಘಂಟೆಗೆ ಶವಾಗಾರದಲ್ಲಿ ಅಂತಿಮ ನಮನ, ಧಾರ್ಮಿಕ ಕಾರ್ಯಕ್ರಮ, ಅಂತ್ಯ ಸಂಸ್ಕಾರಗಳನ್ನು ಏರ್ಪಡಿಸಲಾಗಿದೆಯೆಂದನು. ಹೂಂ ಎಂದು ತಲೆಯಾಡಿಸಿದೆ. ನಿಜ ಹೇಳಬೇಕೆಂದರೆ, ನನ್ನ ಮನಸ್ಸು ಒಂದು ರೀತಿ ಅಯೋಮಯವಾಗಿತ್ತು. ಒಮ್ಮೊಮ್ಮೆ ಜೋರಾಗಿ ರೋದಿಸೋಣವೆನಿಸುತ್ತಿತ್ತು. ಮತ್ತೊಮ್ಮೆ ಒಂದು ರೀತಿಯ ವಿರಕ್ತಿ ಭಾವ ಮೂಡಿ ಈ ಜೀವನದಲ್ಲಿ ಯಾವುದು ಶಾಶ್ವತ? ಎಲ್ಲವೂ ನಶ್ವರವಲ್ಲವೆ? ಎಂದು ನಿರ್ಲಿಪ್ತತೆಯ ಭಾವ ಆವರಿಸುತ್ತಿತ್ತು. ಬೆಳಿಗ್ಗೆ ನಾನು, ಪಂಕಜ್ ಮತ್ತು ಸುಧಾ ಮಾತ್ರ ಏರ್–ಪೋರ್ಟಿಗೆ ಹೋಗಿ ಸುಮನಾಳನ್ನು ಮನೆಗೆ ಕರೆತರುವುದೆಂದೂ ಮತ್ತು ಮನೆಗೆ ಬಂದ ನಂತರ ಅವಳಿಗೆ ವಿಷಯವನ್ನು ತಿಳಿಸುವುದೆಂದು ನಿರ್ಧಾರ ಮಾಡಿದೆವು. ಉಳಿದಂತೆ ಒಂದೇ ಸಮನೆ ದಿನವೆಲ್ಲಾ ಬಂಧು ಮಿತ್ರರ ಫೋನ್‌ಗಳು ಬರುತ್ತಲೇ ಇದ್ದವು. ಅವರ ಪ್ರೇಮ, ಸಹಾನುಭೂತಿಗಳಿಂದ ನನ್ನ ಮನಸ್ಸು ತುಂಬಿ ಬಂದ ಹಾಗಿತ್ತು. ಸುಚೀ ಮತ್ತೆ ನಮ್ಮ ಬಳಿಗೆ ಬಾರಳೇ ಎಂದು ಹೃದಯ ಚೀರುತ್ತಿತ್ತು. ಸಾಯಂಕಾಲ ಚಿನ್ಮಯ ಮಿಷನ್ನಿನ ಸ್ವಾಮಿಗಳು ಫೋನಿನಲ್ಲಿ ಮಾತನಾಡಿ ಸಮಾಧಾನ ಹೇಳಿದರು. ಹರಿಶ್ಚಂದ್ರ–ಚಂದ್ರಮತಿಯರ ಪುತ್ರಶೋಕದ ಬಗ್ಗೆ, ಜೀವಾತ್ಮ–ಪರಮಾತ್ಮಗಳ ಮಿಲನದ ಬಗ್ಗೆ ಸಂಕ್ಷೇಪವಾಗಿ ಹೇಳಿ ನನ್ನ ದುಃಖವನ್ನು ಶಮನ ಮಾಡಲು ಪ್ರಯತ್ನಿಸಿದರು.

ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ. ಹೊರಳಾಡಿ, ಹೊರಳಾಡಿ ಸಾಕಾಯಿತು. ಪಂಕಜ್ ಮತ್ತು ಸುಧಾ ನಮ್ಮ ಮನೆಯಲ್ಲೇ ಮಲಗಿದ್ದರು. ಪಾಪ ಸುಮೇರುವನ್ನಂತೂ ಸಮಾಧಾನ ಮಾಡಲು ಸುಧಾ ಹೆಣಗಾಡಿದಳು. ಸುಮೇರು ತನ್ನ ದೊಡ್ಡ ಕಣ್ಣುಗಳಲ್ಲಿ ನೀರು ತುಂಬಿಕೊಂಡು, 'ಅಪ್ಪಾ, ಇನ್ನು ನಾನು ಅಕ್ಕನನ್ನು ನೋಡೋದೇ ಇಲ್ವಾ? ನನ್ನನ್ನ ಇವತ್ತು ಪಿಕ್ಚರ್ರಿಗೆ ಕರೆದುಕೊಂಡು ಹೋಗ್ತೀನೀಂತ ಹೇಳಿದ್ದಳಲ್ಲಾ' ಎಂದು ಕೇಳಿದಾಗ ನನ್ನ ಕರುಳು ಕಿತ್ತು ಬಂದಿತ್ತು. ದೇವರೇ, ಈ ಸಾವು ಯಾಕಾದರೂ ಇದೆಯೋ ಅಂತ ಸಂಕಟವಾಯಿತು. ಮತ್ತೆ ಸುಮನಾಳ ನೆನಪು. ಪಾಪ, ಅವಳಿಗೆ ಇನ್ನೂ ವಿಷಯ ಗೊತ್ತಿಲ್ಲ. ಹೇಗೆ ಬರುತ್ತಿದ್ದಾಳೋ, ಏನೋ? ಎಷ್ಟು ಸಂತೋಷವಾಗಿದ್ದೆವು? ಒಂದು ರಾತ್ರಿಯಲ್ಲಿ ಎಲ್ಲವೂ ಅಲ್ಲೋಲ ಕಲ್ಲೋಲವಾಯಿತಲ್ಲಾ. ಯಾವ ಪಾಪಕ್ಕಾಗಿ ಈ ಶಿಕ್ಷೆಯೆಂದು ಹಲುಬಿದೆ.

ಮಧ್ಯ ರಾತ್ರಿಯಲ್ಲಿ ಸುಚಿತ್ರಾಳ ಆಲ್ಬಮ್ ತೆಗೆದು ಫೋಟೋಗಳನ್ನು ನೋಡುತ್ತಾ ಕುಳಿತೆ. ಅವಳ ಫೋಟೋಗಳ ಮೇಲೆಲ್ಲಾ ಪ್ರೀತಿಯಿಂದ ಕೈಯಾಡಿಸಿದೆ. ಮತ್ತೆ ಬಂದು ಮಲಗಲು ಪ್ರಯತ್ನಿಸಿದೆ. ನಿದ್ರೆ ಬರಲಿಲ್ಲ. ಒಂದೆರಡು ಬಾರಿ ಕೆಲವು ನಿಮಿಷಗಳ

ಮಂಪರು ಆಯಿತು ಅಷ್ಟೇ.

ಐದು ಘಂಟೆಗೇ ಎದ್ದು ಸ್ನಾನ ಮಾಡಿ ತಯಾರಾದೆ. ಪಂಕಜ್ ಮತ್ತು ಸುಧಾ ಕೂಡ ಎದ್ದು ತಯಾರಾದರು. ಸುಧಾ ನಮಗೆ ಉಪ್ಪಿಟ್ಟು, ಕಾಫಿ ಮಾಡಿಕೊಟ್ಟಳು. ಆರೂ ಮೂವತ್ತಕ್ಕೆಲ್ಲಾ ಮನೆ ಬಿಟ್ಟೆವು. ಏಳೂವರೆಗೆ ಏರ್–ಪೋರ್ಟಿನಲ್ಲಿದ್ದೆವು. ಫ್ಲೈಟ್ ನಿಗದಿತ ಸಮಯಕ್ಕೆ ಬಂದಿತ್ತು. ನಾವು ಅರೈವಲ್ಸ್‌ನಲ್ಲಿ ಕಾಯುತ್ತಾ ನಿಂತೆವು. ಸುಮನಾ ಬರುವುದನ್ನು ದೂರದಿಂದಲೇ ನೋಡಿದೆ. ಅವಳು ಹತ್ತಿರ ಬಂದಂತೆ ಅವಳ ಮುಖ ಚೆನ್ನಾಗಿ ಕಾಣಿಸುತ್ತಿತ್ತು. ಸುಮಾರು 30 ಘಂಟೆಗಳ ಸತತ ಪ್ರಯಾಣದಿಂದ ತುಂಬಾ ದಣಿವಾಗಿದ್ದಂತೆ ತೋರಿದಳು. ಸರಿಯಾಗಿ ನಿದ್ದೆಯಿಲ್ಲದೆ ಕಣ್ಣುಗಳೆಲ್ಲಾ ಬತ್ತಿದ್ದವು. ನಮ್ಮನ್ನೂ ನೋಡಿದಳು. ಹತ್ತಿರ ಬಂದವಳೇ, 'ಮಕ್ಕಳು ಎಲ್ಲಿ? ಇಬ್ಬರೂ ಜೋಪಾನವಷ್ಟೇ? ಯಾಕೆ ಮತ್ತೆ ನನ್ನನ್ನು ವಾಪಸ್ ಕರೆಸಿದಿ? ಅಪ್ಪನ ಆಪರೇಷನ್ ಹೇಗಾಯಿತಂತೆ?' ಎಂದೆಲ್ಲಾ ಪ್ರಶ್ನೆಗಳನ್ನು ಕೇಳತೊಡಗಿದಳು. 'ಗಾಬರಿಯಾಗಬೇಡ, ಮಕ್ಕಳು ಮನೇಲಿದಾರೆ, ಅಲ್ಲಿಗೆ ಹೋಗಿ ಮಾತನಾಡೋಣ ಬಾ' ಅಂತ ಹೇಳಿದೆ. ಅವಳಿಗೆ ಸಮಾಧಾನವಾಗಲಿಲ್ಲ. ಎಲ್ಲಾ ಬಂದು ಕಾರಿನಲ್ಲಿ ಕುಳಿತೆವು. ಪಂಕಜ್ ಡ್ರೈವ್ ಮಾಡುತ್ತಿದ್ದ. ಸುಧಾ ಮುಂದೆ ಕುಳಿತಿದ್ದಳು. ನಾನು ಮತ್ತು ಸುಮನಾ ಹಿಂದಿನ ಸೀಟಿನಲ್ಲಿದ್ದೆವು. ನಾನು ಸುಮನಾಳ ಕೈ ಹಿಡಿದುಕೊಂಡಿದ್ದೆ. ನನ್ನ ಕೈ ಸಣ್ಣಗೆ ನಡುಗುತ್ತಿತ್ತು. ಏನೋ ಅನಾಹುತವಾಗಿರಬೇಕೆಂದು ಸುಮನಾಳಿಗೆ ಆಗಲೇ ಸಂಶಯ ಬಂದಿತ್ತು. ಕಣ್ಣಲ್ಲಿ ನೀರು ತುಂಬಿಕೊಂಡು ನನ್ನನ್ನು ದೃಷ್ಟಿಸಿ ನೋಡುತ್ತಾ ಕೇಳಿದಳು, 'ಸುಂದರ್ ನಿಜ ಹೇಳು, ನನ್ನ ಸುಚೀ ಮತ್ತು ಮೇರು ಹುಷಾರಾಗಿದ್ದಾರೆ ತಾನೆ?'

ನನ್ನ ಬಾಯಿ ಒಣಗಿತು. ಧ್ವನಿ ಉಡುಗಿತು. ಸುಮೀ... ಎಂದು ಜೋರಾಗಿ ಅಳತೊಡಗಿದೆ. ಹಿಂದಿನ ದಿನದಿಂದ ಕಟ್ಟಿದ್ದ ಶೋಕವೆಲ್ಲಾ ಕಿತ್ತು ಹರಿಯಲಾರಂಭಿಸಿತು. ಕಣ್ಣೀರು ನಿಲ್ಲಲೇ ಇಲ್ಲ. ಮಾತು ಹೊರಡುತ್ತಿಲ್ಲ. ಸುಮನಾಗೆ ಈಗ ನಿಜವಾಗಲೂ ದಿಗಿಲಾಯಿತು, ಏನು ದುಃಖದ ಸಮಾಚಾರವಿದೆಯೋ ಎಂದು ಹತಾಶಳಾದಳು. ಸುಧಾಳನ್ನೂ, ಪಂಕಜರನ್ನೂ ಏನಾಗಿದೆ ಹೇಳಿ ಎಂದು ಒತ್ತಾಯಿಸಿದಳು. ನಾನು ನನ್ನೆಲ್ಲಾ ಶಕ್ತಿಯನ್ನು ಸೇರಿಸಿ, 'ಸುಮನಾ, ಸುಚಿತ್ರಾ ನಮ್ಮನ್ನೆಲ್ಲಾ ಬಿಟ್ಟು ದೇವರ ಹತ್ತಿರ ಹೋರಟು ಹೋದಳು' ಎಂದೆ. ಸುಮನಾ ಭಯ–ವಿಸ್ಮಯಗಳಿಂದ ಶಾಕ್ ಹೊಡೆದಂತೆ ದಿಙ್ಮೂಢಳಾದಳು. ಹಿಂದಿನ ದಿನ ನನಗಾದಂತೆ ಕೆಲ ಕ್ಷಣ ಮಾತಿಲ್ಲದೆ ಮೂಕಳಾದಳು. ಸ್ವಲ್ಪ ಚೇತರಿಸಿಕೊಳ್ಳುತ್ತಿದ್ದ ಹಾಗೇ, 'ನಾನು ಸುಚೀನ ಈಗಲೇ ನೋಡಬೇಕು' ಎಂದು ಹೇಳಿದಳು. ಬಹುಶಃ ಪ್ರಯಾಣದ ಆಯಾಸ ಮತ್ತು ಉದ್ವೇಗಗಳಿಂದ ಮುಖದಲ್ಲಿ ಶೂನ್ಯತೆ ಇತ್ತು. ಕಣ್ಣಲ್ಲಿ ನೀರಿರಲಿಲ್ಲ. ಜೋರಾಗಿ ಅತ್ತರೆ ದುಃಖ ಹಗುರಾಗುತ್ತದೆಯೆನ್ನುತ್ತಾರೆ. ಸಮುನಾ ಅಳದೇ ಇರುವುದೇ ನನಗೆ ಯೋಚನೆಯಾಯಿತು.

ಬೇರು ಸೂರು

ಪಂಕಜ್ ಶವಾಗಾರಕ್ಕೆ ಫೋನ್ ಮಾಡಿ ಅಲ್ಲಿಗೆ ಹೋಗಲಿಕ್ಕೆ ಅನುಮತಿ ಪಡೆದು ಸೀದಾ ಅಲ್ಲಿಗೆ ಕರೆದುಕೊಂಡು ಹೋದನು. ಸುಮನಾ ಇನ್ನೂ ಮೌನವಾಗೇ ಇದ್ದಳು. ನಿಸ್ತೇಜ ಮುಖದಿಂದ ಹೊರಗಡೆ ನೋಡುತ್ತಿದ್ದಳು. ಏನಾಯಿತು, ಹೇಗಾಯಿತು ಎಂದೇನೂ ಕೇಳಲಿಲ್ಲ. ಶವಾಗಾರದ ಪೆಟ್ಟಿಗೆಯಲ್ಲಿ ಸುಚೀನ ನೋಡಿದಾಗ ನನ್ನ ಎದೆ ಒತ್ತಿ ಬಂತು. ಆಶ್ಚರ್ಯವೆಂದರೆ ಸುಮನಾ ಇನ್ನೂ ಅಳಲಿಲ್ಲ. ಮಗಳನ್ನೇ ಐದು ನಿಮಿಷ ಎವೆಯಿಕ್ಕದೆ ನೋಡಿದಳು. ಮುಖವನ್ನು ಸವರಿ ತಲೆ ಕೂದಲನ್ನು ಸರಿ ಮಾಡಿದಳು. ಅಲ್ಲಿನ ಕಾರ್ಯಕರ್ತರು ಮುಂದಿನ ವ್ಯವಸ್ಥೆ ಮಾಡಲಿಕ್ಕಾಗಿ ನಮ್ಮನ್ನು ಹೊರಹೋಗುವಂತೆ ಕೇಳಿಕೊಂಡರು. ನಮಗೆ 12:30ಕ್ಕೆ ಬರಲು ಹೇಳಿದರು. ಆಗಲೇ 10 ಘಂಟೆಯಾಗಿತ್ತು. ಸೀದಾ ಮನೆಗೆ ಬಂದೆವು. ಸುಮನಾ ಒಳಗೆ ಬಂದವಳೇ ಸುಮೇರುವನ್ನು ಕಟ್ಟಿಕೊಂಡು ಕೆಲಕಾಲ ಶೋಕಿಸಿದಳು. ಇನ್ನೂ ಕಣ್ಣೀರಿರಲಿಲ್ಲ. ಸುಚಿತ್ರಾಳ ರೂಮಿಗೆ ಹೋಗಿ ಕೆಲಕಾಲ ಇದ್ದಳು. ಶವರ್ ಮಾಡಿ ಬೇಗ ರೆಡಿ ಆಗು ಮತ್ತೆ ಹೋಗಬೇಕು ಅಂತ ಹೇಳಿ, ಅವಳಿಗೆ ಬಟ್ಟೆಗಳನ್ನು ಎತ್ತಿಕೊಟ್ಟೆ.

ಹನ್ನೆರಡು ಘಂಟೆಗೆ ಮನೆ ಬಿಟ್ಟೆವು. ವಿದ್ಯುತ್-ಚಿತಾಗಾರವನ್ನು ತಲುಪಿದಾಗ ಹನ್ನೆರಡೂ ಮೂವತ್ತಾಗಿತ್ತು. ಎಲ್ಲರೂ ಬರವುದು ಒಂದು ಘಂಟೆಗೆ ಎಂದು ಪಂಕಜ್ ಹೇಳಿದ್ದ. ಒಬ್ಬ ಹಿಂದೂ ಪುರೋಹಿತರು ಆಗಲೇ ಬಂದಿದ್ದರು. ಸುಚಿತ್ರಾಗೆ ಅವಳ ಅಚ್ಚುಮೆಚ್ಚಿನ ನೀಲೀ ಚೂಡೀದಾರ್ ಹಾಕಿ ಮುಖಕ್ಕೆ ಮೇಕಪ್ ಮಾಡಿದ್ದರು. ನಾವು ಮೂವರೇ ಸುಚಿತ್ರಾಳೊಂದಿಗೆ ಕೆಲ ಕಾಲ ಏಕಾಂತದಲ್ಲಿದ್ದೆವು. ಸುಮನಾಳಂತೂ ನೆಟ್ಟ ಕಣ್ಣುಗಳಿಂದ ಒಂದೇ ಸಮನೆ ಸುಚೀನ ನೋಡುತ್ತಿದ್ದಳು. ಮೂವರಿಗೂ ಎರಡು ದಿನಗಳ ಭಾವಾತಿರೇಕದಿಂದ ಒಂದು ರೀತಿಯ ಶೂನ್ಯತೆ ಆವರಿಸಿತ್ತು. ಒಂದು ರೀತಿಯ ಯಾಂತ್ರಿಕತೆಯಿಂದ ಬೇರೆಯವರ ಆದೇಶಗಳನ್ನು ಪಾಲಿಸುತ್ತಿದ್ದೆವು. ಒಂದು ದೊಡ್ಡ ಹಾಲಿನಲ್ಲಿ ಸುಚಿತ್ರಾಳ ದೇಹವನ್ನು ತಂದಿರಿಸಿದರು. ಪುರೊಹಿತರು ದೇವರ ಫೋಟೋ ಆಗಲೇ ಅಲ್ಲಿಟ್ಟಿದ್ದರು. ಹೋಮಕ್ಕೆ ಅಣಿಮಾಡಿದ್ದರು. ಊದುಬತ್ತಿಯ ವಾಸನೆ ಆವರಿಸಿತ್ತು. ಒಂದು ಬುಟ್ಟಿಯ ತುಂಬಾ ರೋಸ್ ಹೂಗಳು ಇದ್ದವು.

ಒಂದು ಘಂಟೆಯ ಹೊತ್ತಿಗೆ ಆ ಹಾಲ್ ತುಂಬಿಹೋಗಿತ್ತು. ಸುಚಿತ್ರಾಳ ಸ್ನೇಹಿತರೆಲ್ಲಾ ಬಂದಿದ್ದರು. ಎಲ್ಲ ಕಡೆಗಳಿಂದಲೂ ಬಿಕ್ಕುವ ಶಬ್ದ ಕೇಳಿ ಬರುತ್ತಿತ್ತು. ಪುರೋಹಿತರು ಹೋಮವನ್ನು ಶುರು ಮಾಡಿದರು. ಇಪ್ಪತ್ತು ನಿಮಿಷಗಳಲ್ಲಿ ಹೋಮ ಮುಗಿಯಿತು. ಪುರೊಹಿತರು ಶಾಂತಿ ಮಂತ್ರವನ್ನು ಹೇಳಿ ಮೃತಳ ಬಗ್ಗೆ ಶ್ರದ್ಧಾಂಜಲಿ ಅರ್ಪಿಸಬಹುದೆಂದರು. ಸಾಲಿನಲ್ಲಿ ಬಂದು ನನ್ನ ಸ್ನೇಹಿತರೂ, ಸುಚೀಯ ಸ್ನೇಹಿತರೂ, ಅವಳ ಪ್ರೊಫ಼ೆಸರ್ ಒಬ್ಬರ ನಂತರ ಒಬ್ಬರು ಎರಡು ಮೂರು ನಿಮಿಷ ಸುಚಿತ್ರಾಳ ಬಗ್ಗೆ ಮಾತನಾಡಿದರು. ನಮ್ಮ ಮನಸ್ಸು ಅವರೆಲ್ಲರ ಪ್ರೇಮ ಮತ್ತು ಸಹಾನುಭೂತಿಗಳಿಂದ ತುಂಬಿ ಬಂತು. ಆದರೆ ಎಲ್ಲರ ಮಾತುಗಳನ್ನು ಕೇಳುವ ಏಕಾಗ್ರತೆ ನಮಗಿರಲಿಲ್ಲ. ಎಲ್ಲವೂ

ಅಯೋಮಯವಾಗಿತ್ತು. ಯಾವುದೋ ಮಾಯದಿಂದ ನಮ್ಮ ಸುಚೀ ಎದ್ದು ಬರುತ್ತಾಳೇನೋ ಅನ್ನಿಸುತ್ತಿತ್ತು.

ಶ್ರದ್ಧಾಂಜಲಿಗಳು ಮುಗಿದ ನಂತರ ಎಲ್ಲರೂ ಸಾಲಾಗಿ ಬಂದು ಅಂತಿಮ ದರ್ಶನ ಪಡೆದರು. ಎಲ್ಲರೂ ದುಃಖವನ್ನು ತಡೆಯಲಾರದೆ ಕಣ್ಣೊರಸಿಕೊಳ್ಳುತ್ತಾ ಹೋಗುತ್ತಿದ್ದರು.

ಎರಡೂ ಮೂವತ್ತಕ್ಕೆ ಎಲ್ಲರನ್ನೂ ಹಾಲಿನಿಂದ ಹೊರಗೆ ಹೋಗಲು ತಿಳಿಸಿದರು. ಸುಚಿತ್ರಾಳ ದೇಹವಿರುವ ಪೆಟ್ಟಿಗೆಯನ್ನು ಚಿತಾಗಾರದ ಬಳಿಗೆ ತಂದರು. ನಮಗೆ ಮತ್ತೊಮ್ಮೆ ಏಕಾಂತದಲ್ಲಿ ಕೆಲವು ನಿಮಿಷಗಳು ವೀಕ್ಷಣೆಗೆ ಕೊಟ್ಟರು. ನಗು ಮುಖದ ಉತ್ಸಾಹದ ಚಿಲುಮೆಯಾಗಿದ್ದ ನಮ್ಮ ಮುದ್ದಿನ ಸುಚಿತ್ರಾಳನ್ನು ಶಾಂತವಾಗಿ ಪೆಟ್ಟಿಗೆಯಲ್ಲಿ ಶವವಾಗಿ ಮಲಗಿರುವ ಚಿತ್ರವಾಗಿ ನೆನಪಲ್ಲಿ ಇರಿಸಿಕೊಳ್ಳಲು ಮನಸ್ಸಿಲ್ಲದಿದ್ದರೂ ಅವಳನ್ನು ಈ ಭೂಮಿಯ ಮೇಲೆ ನೋಡಲು ಇದು ಕೊಟ್ಟಕೊನೆಯ ಅವಕಾಶ! ಇನ್ನು ಕೆಲವೇ ಕ್ಷಣಗಳಲ್ಲಿ ಬೂದಿಯಾಗಿ ಹೋಗುತ್ತಾಳೆ. ಮೂವರೂ ಮತ್ತೊಮ್ಮೆ ಅವಳನ್ನು ಕಣ್ತುಂಬ ನೋಡಿದೆವು. ನಂತರ ಬಾಗಿಲನ್ನು ಮುಚ್ಚಿ ಚಿತಾಗಾರದ ಒಳಗೆ ಕಳುಹಿಸಿ, ನನಗೆ ಒಂದು ಬಟನ್ ಒತ್ತಲು ಹೇಳಿದರು. ಒಮ್ಮೆ ಸುಮನಾಳತ್ತ ನೋಡಿ 'ಓಂ ನಮಃ ಶಿವಾಯ' ಎಂದು ಹೇಳಿಕೊಳ್ಳುತ್ತಾಒತ್ತೇ ಬಿಟ್ಟೆ. ಎಂಥಾ ವಿಪರ್ಯಾಸ! ಅವಳನ್ನು ಈ ಭೂಮಿಗೆ ತಂದ ನಾನೇ ಅವಳ ಕೊನೆಯ ತೆರೆಯನ್ನು ಎಳೆದಿದ್ದೆ. ಏನನ್ಯಾಯ, ಉಜ್ವಲ ಭವಿಷ್ಯವಿದ್ದ ಒಂದು ಮುಗ್ಧ ಜೀವದ ಅಂತ್ಯ ಎಷ್ಟು ನಿರ್ದಯದಿಂದ ಕೊನೆಯಾಯಿತು ಎಂದು ನಿಡುಸುಯ್ದೆ.

ನಾವು ಇನ್ನು ಅಲ್ಲಿದ್ದು ಮಾಡುವುದೇನೂ ಇರಲಿಲ್ಲ. ಮನೆಗೆ ಹೊರಟೆವು. ಕೆಲ ಸ್ನೇಹಿತರೂ ಸಾಂತ್ವನ ಹೇಳುತ್ತಾ ಜೊತೆಗೆ ಬಂದರು. ಡೈನಿಂಗ್ ಟೇಬಲ್ಲಿನ ಬಳಿ ಸ್ವಲ್ಪ ಹೊತ್ತು ಕುಳಿತಿದ್ದೆವು. ಸುತ್ತಲೂ ಸ್ನೇಹಿತರೆಲ್ಲಾ ಮಾತನಾಡುತ್ತಿದ್ದರು. ಶಬ್ದ ಮಾತ್ರ ಕೇಳಿಸುತ್ತಿತ್ತು, ಅರ್ಥವನ್ನು ಜೀರ್ಣಿಸಿಕೊಳ್ಳುವ ಶಕ್ತಿ ಇಬ್ಬರಿಗೂ ಇರಲಿಲ್ಲ. ಏನನ್ನೋ ಜ್ಞಾಪಿಸಿಕೊಂಡವಳಂತೆ ಇದ್ದಕ್ಕಿದ್ದಂತೆ ಸುಮನಾ ಮೇಲೆದ್ದು ಅಡುಗೆಮನೆಗೆ ಹೋದಳು. ಫ್ರಿಡ್ಜಿನ ಬಾಗಿಲು ತೆರೆದ ಶಬ್ದ ಕೇಳಿಸಿತು. ಬಾಗಿಲ ಸಂದಿಯಿಂದ ನೋಡಿದೆ. ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಡಬ್ಬಿಯನ್ನು ಹೊರಗೆ ತೆಗೆದಂತೆ ಕಾಣಿಸಿತು. ನಂತರ ಅದರಿಂದ ಏನನ್ನೋ ಸಿಂಕಿಗೆ ಚೆಲ್ಲಿದ ಸದ್ದಿನ ಜೊತೆಗೆ ಸಣ್ಣಗೆ ಬಿಕ್ಕುವ ಶಬ್ದ ಕೇಳಿಸಿತು.

ಶ್ರೀ

ಮೂಕ ಮರ್ಮರ...

– ಪ್ರಕಾಶ ನಾಯಕ



ಸುತ್ತಲಿನ ಪರಿಸರವನ್ನು ಕಾವಲು ಕಾಯುವವನಂತೆ, ದಿಟ್ಟಿಸಿ ನೋಡುತ್ತ, ಮುಗಿಲೆತ್ತರ ಬೆಳೆದು ನಿಂತಿದ್ದ ದೇವದಾರು ಮರ ವಾರಾಂತ್ಯಕ್ಕಾಗಿಯೇ ಕಾಯ್ದುಕೊಂಡಿದ್ದಂತೆ, ಶುಕ್ರವಾರದ ಸಂಜೆ, ಮನೆಯ ಪಶ್ಚಿಮದ ಮಾಡನ್ನು ಸವರಿ ಉದ್ದಕ್ಕೆ ಬಿದ್ದಿತ್ತು. ಅದರಡಿಯಲ್ಲಿ ಸಿಕ್ಕ ಎಲ್ಲವೂ ನಜ್ಜುಗುಜ್ಜಾಗಿದ್ದವು. ಏನಿಲ್ಲವೆಂದರೂ ಐವತ್ತು ಅಡಿಗೂ ಮೀರಿದ ಮರ, ಯಾವ ಗಾಳಿ-ಮಳೆ ಎಂಬ ನೆಪ ಇರದೆ ಏಕಾಏಕಿ ಕಿತ್ತು ಬಿದ್ದಿತೆಂದರೆ ನಂಬುವ ಮಾತಲ್ಲ. ಅದು ಎಸಗಬಹುದಾಗಿದ್ದ ಅನಾಹುತಗಳನ್ನು ನೆನಪಿಸಿಕೊಂಡು 'ಸದ್ಯ, ಅಷ್ಟರಲ್ಲಿಯೇ ತಪ್ಪಿತಲ್ಲ' ಎಂದು ಸಮಾಧಾನಪಟ್ಟುಕೊಂಡರೂ, 'ತಾನಿದನ್ನು ತಪ್ಪಿಸಬಹುದಿತ್ತೇನೋ' ಎಂಬ ಪ್ರಶ್ನೆ ವಾಸುವನ್ನು ಕಾಡುವುದು ಬಿಟ್ಟಿರಲಿಲ್ಲ. ಮರದಿಂದಾದ ಹಾನಿ ತುಂಬಿಸಿಕೊಡಲು ಇನ್ಶೂರನ್ಸ್ ಇತ್ತು; ಏಜೆಂಟ್ ಸೋಮವಾರ ಬರುವುದಾಗಿ ಹೇಳಿದ್ದ. ಕುಪರ್ಟಿನೋದಲ್ಲಿ ಈ ಮರ 'ಸಂರಕ್ಷಿತ ಮರ'ಗಳಲ್ಲಿ ಸೇರಿರುವುದರಿಂದ ಕಡಿಯಲು ಅನುಮತಿ ಬೇಕಿತ್ತು. ಹತ್ತಿರದ ಆರ್ಬೋರಿಸ್ಟ್ ಇಯಾನ್ ಮಾನ್ರೋ ಬೆಳಿಗ್ಗೆಯೇ ಬಂದು ಮರ ಉರುಳಿರುವುದು ನೈಸರ್ಗಿಕವೆಂತಲೂ, ಅದಕ್ಕೆ ಹಲವು ಕಾರಣಗಳನ್ನೂ ಬರೆದು, ಬಿದ್ದಿರುವ ಮರವನ್ನು ಕತ್ತರಿಸಲು ತೊಂದರೆಯಿಲ್ಲವೆಂದು ಹೇಳಿ ಹೋಗಿದ್ದ. ಇಯಾನನ ಪಾಂಡಿತ್ಯದ ಬಗ್ಗೆ ವಾಸುವಿಗೆ ವಿಶೇಷ ಗೌರವ ಇರದಿದ್ದರೂ, ನಗರಸಭೆಯವರ ಪ್ರಶ್ನೆಗಳನ್ನು ತಪ್ಪಿಸಿಕೊಳ್ಳಲು ಅವನ ವರದಿಯ ಅವಶ್ಯಕತೆಯಿತ್ತು. ಆದರೆ ಅವನ ಹಲವು ಪುಟಗಳ ವರದಿಯನ್ನು ಓದುವ ಆಸಕ್ತಿ ಇರಲಿಲ್ಲ. ಬಿದ್ದ 'ದಿಯೋದಾರ್ ಸಿಡಾರ್' ಬದಲಿಗೆ ಯಾವುದಾದರೂ ಸಣ್ಣ ಜಾತಿಯ ಮರವನ್ನು ಶಿಫಾರಸು ಮಾಡುವುದಾಗಿ ಹೇಳಿದ್ದ. ದೇವದಾರು ಮರದ ಬಗ್ಗೆ ವಾಸುವಿಗಿರುವ ಆತ್ಮೀಯತೆ, ಅವನಿಗೆ ಇಲ್ಲದೇ ಇರುವುದರಿಂದ, ಅವನ ಸಲಹೆ ಸರಿಯಾಗಿಯೇ ಇತ್ತು. ಆದರೆ ಸಾಂತಜ್ಜ ಹಿಂದಿನ ಸೋಮವಾರ ಬೆಳಿಗ್ಗೆ ಬಾಗಿಲು ತಟ್ಟಿ ಹೇಳಿದ ಮಾತುಗಳು, ಅಂದಿಗಿಂತಲೂ ಹೆಚ್ಚು ಸ್ಪಷ್ಟವಾಗಿ ಕಿವಿಗಪ್ಪಳಿಸತೊಡಗಿದವು.

ಸಾಂತಜ್ಜ ಸುಮ್ಮನೆ ಬರುವವನಲ್ಲ. ಯಾವಾಗಲೂ ಬೀದಿಯಲ್ಲಿ ನಿಂತು, ಗಟ್ಟಿ ದನಿಯಲ್ಲಿ ಗಂಟೆಗಟ್ಟಲೆ ಹರಟುವ ಮುದುಕ ಬಾಗಿಲು ತಟ್ಟುವುದು ತುಂಬಾ ಕಡಿಮೆ. ಅದೂ ಅವನು ಬರುವುದು ಸೂರ್ಯ ಕಂತಿದ ಮೇಲೆ. ಅವನ ದೈನಂದಿನ ಸಂಜೆಯ ನಡಿಗೆಗೆ ಬಂದವನು, ರಸ್ತೆಯುದ್ದಕ್ಕೂ ಅಲ್ಲಲ್ಲಿ ನಿಂತು ಮಾತನಾಡುವ ಅವನ ದಿನಚರಿ

ಎಲ್ಲರಿಗೂ ಪರಿಚಿತವಾಗಿತ್ತು. ಅವನೊಟ್ಟಿಗೆ ಅವನ ಸೊಂಟದೆತ್ತರ ಬೆಳೆದ ನಾಯಿಯೊಂದು ಯಾವಾಗಲೂ ಬರುತ್ತಿತ್ತು. ಯಾರೂ ಸಿಗದಿದ್ದರೆ ಅವನು ಆ ನಾಯಿಯೊಂದಿಗೆ ಮಾತನಾಡುತ್ತ ಹೋಗುತ್ತಿದ್ದ. ಮಾತಿಗೆ ಸಿಗದ ಮತ್ತು ಮಾತನಾಡಲು ಬರದ ಜನ ಹೆಚ್ಚಿದ್ದ ಆ ಬೀದಿಯಲ್ಲಿ, ಅವನು ಹೇಳಿದುದನ್ನು ಕೇಳುವವರನ್ನು ಕಂಡರೆ ಅವನಿಗೆ ಹೆಚ್ಚೇ ಸಲಿಗೆ. ಅವನ ಹೆಸರು ಸರಿಯಾಗಿ ಗೊತ್ತಿದ್ದವರು ಕಡಿಮೆ. ವಾಸು ಒಮ್ಮೆ ಕೇಳಿದಾಗ, 'ಸಿಕ್ಯಾಹೋನಾವ್' ಎಂದು ಹೇಳಿ, ಅದರ ಅರ್ಥವನ್ನೂ ಸಾಂತಜ್ಞ ಬಿಡಿಸಿ ಹೇಳಿದ್ದ. ಆದರೆ ವಾಸು ಹೇಳಲು ತಡವರಿಸಿದಾಗ, 'ನೀನು ನನ್ನನ್ನು ವಿಲ್ಸನ್ ಅಂತಲೇ ಕರಿ, ಅದು ನನ್ನ ಇಂಗ್ಲಿಷ್ ಹೆಸರು' ಅಂದರೂ ಕೇಳದೇ ಅವನ ಮೂಲ ಹೆಸರಿನಿಂದಲೇ ಕರೆಯಲು ಪ್ರಯತ್ನಿಸಿದ್ದ. ವಾಸು ಹೇಗೆ ಹೇಳಿದರೂ ಅವನು, 'ನೀನು ಹೇಳುವುದರ ಅರ್ಥ ನಮ್ಮಲ್ಲಿ ಬೇರೆಯೇ ಆಗುತ್ತದೆ' ಎಂದು ತಿದ್ದುತ್ತಿದ್ದ. ಅವನ ಹೆಸರು ಹೇಳಿ ಕರೆಯುವ ಅವಶ್ಯಕತೆ ಕಡಿಮೆ ಇದ್ದುದರಿಂದ, ಮೂಲ ಹೆಸರು ನೆನಪಾಗುತ್ತಲೇ ಇರಲಿಲ್ಲ. ವಾಸುವಿಗೆ ವಿಲ್ಸನ್ ಎಂದರೆ ಬಹಳ ಜನ ನೆನಪಿಗೆ ಬರುತ್ತಿದ್ದರು. ಮೊಳದುದ್ದ ಬಿಳಿ ಗಡ್ಡ, ಹಿಂದೆ ಬಾಚಿದ ಉದ್ದ ಕೂದಲು, ದಪ್ಪವೆನ್ನಬಹುದಾದ ಆಕೃತಿ, ಸಾಂತಾಕ್ಲಾಸ್‌ನನ್ನು ನೆನಪಿಸುವ 'ಸಿಕ್ಯಾಹೋನಾವ್', ವಾಸುವಿನ ಮನೆಯೊಳಗೆ ಸಾಂತಾ ಆಗಿದ್ದ. ಅವನಿಗೂ ಅದು ಗೊತ್ತಾಗಿ ಹೋಗಿತ್ತು. ಯಾವತ್ತೋ ಒಂದಿನ ವಾಸುವಿನ ಸಣ್ಣ ಮಗ ಬಂದು, 'ಸಾಂತಾ, ನಿನ್ನ ನಾಯಿಯೆಲ್ಲಿ?' ಎಂದು ಕೇಳಿದಾಗ. ಅವನು ನಕ್ಕು ಬಿಟ್ಟಿದ್ದ. 'ಅದೇನೂ ಕೆಟ್ಟ ಹೆಸರಲ್ಲ, ಆದರೆ ಈ ನಾಯಿಯನ್ನು ಬಿಟ್ಟು ಜಿಂಕೆ ತರಬೇಕಾಯ್ತೇನೋ?' ಎಂದು ತನ್ನ ನಾಯಿ ಕಡೆಗೆ ನೋಡಿ ಕಣ್ಣು ಮಿಟುಕಿಸಿದ್ದ. ನಾಯಿ ತನಗೂ ಆ ಸಂಭಾಷಣೆ ಅರ್ಥವಾಯಿತೆನ್ನುವಂತೆ ತಲೆಯಾಡಿಸಿತ್ತು. ನಂತರದ ಕ್ರಿಸ್‌ಮಸ್‌ಗೆ ಮಗನಿಗೊಂದು ಆಟಿಗೆಯನ್ನು ತಂದಿದ್ದ. ಅವನ ಎಲ್ಲ ವ್ಯವಹಾರವೂ ರಸ್ತೆಯ ಮೇಲೆ, ಎಂದೂ ಬಾಗಿಲು ತಟ್ಟಿದವನಲ್ಲ. ಆದರೆ ನಾಲ್ಕೈದು ದಿನಗಳ ಹಿಂದೆ, ಅಂದರೆ ಸೋಮವಾರ ಬೆಳಿಗ್ಗೆ, ಅನಿರೀಕ್ಷಿತವಾಗಿ ಬಂದು ಬಾಗಿಲು ತಟ್ಟಿದ್ದ. ಆಫೀಸಿಗೆ ಹೋಗುವ ಅವಸರದಲ್ಲಿದ್ದವನಿಗೆ ಅವನ ಆಗಮನ ಕಿರಿಕಿರಿ ಮಾಡಿತ್ತು. ಬಾಗಿಲು ತೆರೆದವನು, ಅಸಹನೆಯನ್ನು ತೋರಗೊಡದೆ, 'ಏನಿವತ್ತು ವಿಶೇಷ? ತುಂಬಾ ದಿನದಿಂದ ಕಾಣಿಸಿರಲಿಲ್ಲವಲ್ಲ. ಅದೂ ಬೆಳಿಗ್ಗೆ ಯಾವತ್ತು ನೋಡಿರಲಿಲ್ಲ.' ಎಂದುದಕ್ಕೆ, ಅದನ್ನು ಕೇಳಿಸಿಕೊಳ್ಳದವನ ಹಾಗೆ, 'ಬಹಳ ಸಮಯವಿಲ್ಲ, ನಿನ್ನಲ್ಲಿ ಮಾತನಾಡುವುದಿದೆ. ಸ್ವಲ್ಪ ಹೊರಗೆ ಬರುತ್ತಿಯೇನು?' ಎಂದು ಕೇಳಿದ. ವಾಸುವಿಗಿಂತಲೂ ಅವನೇ ಹೆಚ್ಚು ಅವಸರದಲ್ಲಿದ್ದಂತಿತ್ತು. ಒಳಗೆ ಕುಳಿತುಕೊಳ್ಳಲು ಆಹ್ವಾನಿಸಿದರೂ, ಅದನ್ನು ಕೇಳಿಸಿಕೊಳ್ಳದವನ ಹಾಗೆ ಹೊರಗೆ ನಿಂತು ಕಾಯುತ್ತಿದ್ದವನನ್ನು ನಿರುಪಾಯವಾಗಿ ಹಿಂಬಾಲಿಸಿದ್ದ.

'ನಿನ್ನ ಹಿಮಾಲಯನ್ ಸಿಡಾರ್‌ನ್ನೊಮ್ಮೆ ಸರಿಯಾಗಿ ನೋಡಿದ್ದಿಯೇನು?' ಎಂದು ಕೇಳಿದಾಗ ತಕ್ಷಣ ಏನೆಂದು ಹೊಳೆದಿರಲಿಲ್ಲ. ಮನೆ ಮುಂದಿರುವ ದೇವದಾರು ಮರದ ಸ್ಥಳೀಯ ಹೆಸರೆಂದು ಗೊತ್ತಾದರೂ, ಆ ಮರವನ್ನು ಸರಿಯಾಗಿ ನೋಡುವುದೇನಿದೆ

ಎಂದು ತಿಳಿಯದೇ ಮರವನ್ನೊಮ್ಮೆ ನೋಡಿ, ಪುನಃ ಸಾಂತಜ್ಞನ ಕಡೆ ನೋಡಿದ್ದ. ಬಂದ ಹೊಸತರಲ್ಲಿ ಆ ಮರವನ್ನು ನೋಡಿದಾಗಲೆಲ್ಲ ಬೇಸರವಾಗುತ್ತಿತ್ತು. 'ನೀನು ಕೊಂಡ ಮನೆಯಾದರೂ ಹೇಗಿದೆ ಎಂದು ನೋಡುತ್ತೇನೆ' ಎಂದು ಬಂದಿದ್ದ ಪರಿಚಯಸ್ಥೆ, ರಿಯಲ್ ಎಸ್ಟೇಟ್ ಏಜೆಂಟ್ ರಿಯಾ ಪಟೇಲ್, ತನ್ನ ಅಗಾಧ ಅನುಭವವೆಲ್ಲವನ್ನೂ 'ಆ ಮರವೆಷ್ಟು ಅಪಾಯಕಾರಿ ಮತ್ತು ಅದರಿಂದ ಮನೆಯನ್ನು ಮಾರುವುದೆಷ್ಟು ಕಷ್ಟ' ಎಂದು ಮನಗಾಣಿಸಲು ಉಪಯೋಗಿಸಿದ್ದಳು. ತನ್ನಿಂದ ಮನೆ ಕೊಂಡುಕೊಂಡಿಲ್ಲವೆಂದು ಬೇಸರದಿಂದ ಅವಳು ಹಾಗೆ ಹೇಳಿದ್ದಳೆಂದು ಗೊತ್ತಿದ್ದರೂ, ಅವಳು ಹೇಳಿದುದರಲ್ಲಿ ಸತ್ಯವಿದೆಯೆಂದು ತಿಳಿದು ಅದನ್ನು ತೆಗೆಸಲು ಅನುಮತಿಗಾಗಿ ಪ್ರಯತ್ನಿಸಿ ಸೋತಿದ್ದ. ಸಿಟಿ ಆಫೀಸಿನ ಆರುವರೆ ಅಡಿಗಿಂತಲೂ ಎತ್ತರದ, ಸೀಳುನೋಟದ ಆಫೀಸರ್, ಸಂರಕ್ಷಿತ ಮರಗಳ ಪಟ್ಟಿಗೆ ಸೇರಿದ 'ದಿಯೋದಾರ್ ಸಿಡಾರ್' ಮರವನ್ನು ಕಡಿಯಲು ಇರುವ ನಿಯಮಗಳನ್ನು ವಿವರಿಸಿದಾಗ, ಅವನ ಕಣ್ಣುಗಳನ್ನೇ ನೋಡುತ್ತ ಕುಳಿತಿದ್ದ ವಾಸು, ಮರದೊಡನೆ ಬದುಕುವ ನಿರ್ಧಾರ ಮಾಡಿದ್ದ; ಅವನಿಗೆ ಸಾಂತಜ್ಞನ ಸಾಂತ್ವನ ಸಮಾಧಾನ ತಂದಿತ್ತು. ಯಾರೋ ಹೇಳಿದರೆಂದು ಅಲ್ಲೇ ಇದ್ದ ಮರವನ್ನು ಕಡಿಯುವುದು ಸರಿಯಲ್ಲವೆಂದೂ, ತಾನು ಎಷ್ಟೆಲ್ಲ ಮನೆ ಕಟ್ಟಿಸಿದ್ದರೂ ಒಮ್ಮೆಯೂ ಯಾವ ಮರವನ್ನೂ ಕಡಿದಿಲ್ಲವೆಂದು ಅಭಿಮಾನದಿಂದ ಹೇಳಿಕೊಂಡಿದ್ದ. ಪೂಜೆಗೆಂದು ಮನೆಗೆ ಬಂದಿದ್ದ ಜೋಯಿಸರು ದೇವದಾರು ಪುರಾಣಕಾಲದ ಮರವೆಂದೂ, ಶುಭವೆಂದೂ ಹೇಳಿದ್ದರು. ತಾನೇ ಅದರ ಕುರಿತು ಇನ್ನಷ್ಟು ಮಾಹಿತಿ ಕಲೆಹಾಕಿ, ಬೇರೆಯವರಿಗೆ ಸಮಜಾಯಿಷಿ ಹೇಳಿದ್ದ. ಹಿಮಾಲಯದ ದೇವದಾರು, ಇಲ್ಲಿನ ಸಿಡಾರ್ ಆಗಿ, ಅದೂ ಸಂರಕ್ಷಿತ ಮರಗಳ ಪಟ್ಟಿಯಲ್ಲಿ ಸೇರಿಕೊಂಡಿರುವುದು ಆಶ್ಚರ್ಯ ಮತ್ತು ಅಭಿಮಾನ ಎರಡೂ ತಂದಿತ್ತು. 'ತುಳಸಿ ಇಲ್ಲದಿದ್ದರೇನಂತೆ, ದೇವದಾರಿದೆ.' ಎನ್ನುವುದು ಹೆಮ್ಮೆಯ ವಿಷಯವಾಗಿ, ಕಾಲಕ್ರಮೇಣ ಬಂದವರಿಗೆ, ತಮ್ಮ ಮನೆಯ ಮುಂದೂ ಇಂತಹುದೊಂದು ಮರವಿದ್ದರೆ ಚೆನ್ನಾಗಿರುತ್ತಿತ್ತೇನೋ ಎನ್ನುವಷ್ಟು ರೂಢಿಯಾಗಿತ್ತು.

ಸಾಂತಜ್ಞ ಮರದ ಹತ್ತಿರ ಕುಳಿತು ಅಲ್ಲಿಯೇ ಬಿದ್ದಿದ್ದ ಕೋನ್‌ಗಳನ್ನು ತಂದು ಮೂಸಿ ನೋಡುತ್ತ, ತಲೆಯಲ್ಲಾಡಿಸಿ, ಮತ್ತೆ ಮರದ ತುದಿಯೆಡೆಗೆ ನೋಡತೊಡಗಿದ. ಕೊನೆಗೆ ಸ್ವಲ್ಪ ಹೊತ್ತು ಮರವನ್ನು ದಿಟ್ಟಿಸಿ ನೋಡಿ 'ಆ ಟೊಂಗೆಗಳು ಬಾಗಿಕೊಂಡಿದ್ದು ಕಾಣಿಸುವುದಿಲ್ಲವೇನು?' ಎಂದಾಗ, ವಾಸುವಿನ ಗಮನವೆಲ್ಲ ಹೊತ್ತು ಜಾರುತ್ತಿರುವುದರ ಕಡೆಗಿತ್ತು. ಸ್ವಲ್ಪ ಹೊತ್ತು ಸುಮ್ಮನಿದ್ದ ಸಾಂತಜ್ಞ 'ಈ ಮರದ ಸಮಯ ಮುಗಿಯಿತು. ಇದನ್ನಿನ್ನು ಕಡಿಸುವ ವಿಚಾರಮಾಡು.' ಎಂದಾಗ, ಎಂದಿನ ಉಡಾಫೆಯಿಲ್ಲದ ಅವನ ಧ್ವನಿ ಕೇಳಿ, ವಿಷಯ ಯಾಕೋ ಗಂಭೀರವಾಗಿದೆ ಎನ್ನಿಸಿತ್ತು. 'ಅದಕ್ಕೆ ಅನುಮತಿ ಸಿಗುವುದು ಅಷ್ಟು ಸುಲಭವಲ್ಲ. ನಾನು ಮೊದಲೊಂದು ಸಲ ಕೇಳಿಯಾಗಿದೆ.' ಎಂದಾಗ ಸಾಂತಜ್ಞ ವಾಸುವನ್ನೇ ದಿಟ್ಟಿಸಿ ನೋಡುತ್ತಿದ್ದ.

'ನನಗೇನೂ ಈ ಮರ ತೊಂದರೆಯಲ್ಲಿದೆಯೆಂದು ಅನ್ನಿಸುವುದಿಲ್ಲ. ಬೇಕಾದರೆ ಆರ್ಬೋರ್‌ರಿಸ್ಟ್‌ನಲ್ಲಿ ಒಂದು ಮಾತು ಕೇಳಿ ನೋಡುತ್ತೇನೆ.'

'ಅದೇ, ಆ ಬೀದಿ ಕೊನೆಯ ಇಯಾನ್ ತಾನೆ? ಅವನಿಗೇನು ಗೊತ್ತಾಗುತ್ತದೆ, ಮಣ್ಣು. ಬದುಕುವುದಕ್ಕಾಗಿ ಆ ವೃತ್ತಿ ಮಾಡಿಕೊಂಡಿದ್ದಾನೆ. ನಿನಗೆ ಬೇಕಾದಂತಹ ವರದಿ ಕೊಡುತ್ತಾನೆ. ನನ್ನನ್ನು ನಂಬು. ನನಗೆ ಈ ಮರದ ಕೂಗು ಸ್ಪಷ್ಟವಾಗಿ ಕೇಳಿಸುತ್ತಿದೆ. ನಿನ್ನೆ ರಾತ್ರಿ ಈ ದಾರಿಯಲ್ಲಿ ಹೋಗುತ್ತಿರುವಾಗ ಅದು ಅಳುತ್ತಿರುವುದು ಕೇಳಿಸಿತು. ನೋಡಿದರೆ ಎಲ್ಲ ಟೊಂಗೆಗಳೂ ಮಣ್ಣಿನ ಕಡೆ ಮುಖ ಮಾಡಿವೆ. ಹೇಗಾದರೂ ಮಾಡಿ ಕಡಿಸುವ ವಿಚಾರಮಾಡು.'

'ನಾನೀಗ ಆಫೀಸಿಗೆ ಹೋಗಬೇಕು, ಸಂಜೆ ಮಾತನಾಡುವ.'

'ಆಯಿತು, ಸಂಜೆ ಬರುತ್ತೇನೆ.'

ವಾಸುವಿನ ನಿರೀಕ್ಷೆಗೂ ಮೀರಿ, ಆಫೀಸಿನಿಂದ ಬರುವ ಮೊದಲೇ ಸಾಂತಜ್ಜ ನಿಂತಿದ್ದ. ಒಳಗೆ ಬಂದು ಕುಳಿತುಕೊಳ್ಳುವಂತೆ ಕರೆದರೂ ಕದಲಲಿಲ್ಲ. ತೊಂದರೆಯಿಲ್ಲ ಎನ್ನುವಂತೆ ಕೈಯೆತ್ತಿದ. ಬೆಳಿಗ್ಗೆ ಅವನೊಡನೆ ಬರದ ನಾಯಿ ಈಗ ಬಂದಿತ್ತು. ಅದು ಅವನನ್ನು ಸುಮ್ಮನೆ ನಿಲ್ಲಲು ಬಿಡದೆ ರಸ್ತೆಯ ಕಡೆಗೆ ಎಳೆಯುತ್ತಿತ್ತು. ಆದರೆ ಸಾಂತಜ್ಜ ಶಾಂತನಾಗಿದ್ದಂತೆ ಕಂಡ. 'ಏನು ವಿಚಾರ ಮಾಡಿದ್ದಿಯಾ?' ಎಂದ. ವಾಸು ಅದರ ಕುರಿತು ವಿಚಾರವನ್ನೇ ಮಾಡಿರಲಿಲ್ಲ. ಆಫೀಸಿನ ಎಂದಿನ ಜಂಜಾಟದಲ್ಲಿ ದಿನ ಕಳೆದುಹೋಗಿತ್ತು.

'ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ಇನ್ನಷ್ಟು ವಿಚಾರಮಾಡುತ್ತೇನೆ.'

'ನಿಮ್ಮ ಸಮಸ್ಯೆಯೇ ಇದು. ಹಸಿರು ನೋಟು ಎಣಿಸುವುದೊಂದೇ ಗೊತ್ತು ಈ ತಲೆಮಾರಿಗೆ. ಮನೆಗೆ ಬಂದಿದ್ದ ನಾನಾಗಲೀ, ಮುಂದೆ ನಿಂತಿದ್ದ ಮರವಾಗಲೀ ನೆನಪಾಗುವುದಿಲ್ಲ.'

ಕೋಪದಲ್ಲಿದ್ದವನ ಮುಂದಿನ ಕೆಲವು ಮಾತುಗಳು ಸ್ಪಷ್ಟವಾಗಿರಲಿಲ್ಲ. ಅವು ಯಾರನ್ನೂ ಉದ್ದೇಶಿಸಿ ಹೇಳಿದ ಮಾತುಗಳಾಗಿರಲಿಲ್ಲ. ತನ್ನಷ್ಟಕ್ಕೆ ತಾನೇ ಮಾತನಾಡುತ್ತ, ಮತ್ತೆ ಮರದ ಕಡೆ ನೋಡುತ್ತ ನಿಂತ. ಅವನ ಕಣ್ಣಾಲಿಗಳು ತುಂಬಿಕೊಂಡಿದ್ದವು. ಎದುರು ನಿಂತವನ ಸಮಾಧಾನಕ್ಕೆಂದೇ ಹೇಳಿದ ವಾಸುವಿನ ಮಾತಿನ ಹಿಂದೆ ಯಾವ ಲೆಕ್ಕಾಚಾರವೂ ಇರಲಿಲ್ಲ.

'ಅದಕ್ಕೇನಂತೆ. ನೀನು ಅನುಮತಿ ತಂದುಕೊಡು. ಸಾಧ್ಯವಾದರೆ ಶನಿವಾರ ಕಡಿಸಿದರಾಯಿತು.'

'ಆದರೆ ಅದಕ್ಕಷ್ಟು ಸಮಯವಿದ್ದಂತೆ ಕಾಣುವುದಿಲ್ಲ'

ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಸಾಂತಜ್ಜನ ಹಠ ಅರ್ಥವಾಗದೇ,

ವಿಷಯ ಬದಲಿಸಲು ಪ್ರಯತ್ನಿಸಿದ. 'ಬೀದಿಯ ಕೊನೆಯ ಮನೆ ಮಾರಾಟವಾಯಿತೇನು?' ಎಂದ. ಸಾಂತಜ್ಜನಿಗೆ ಸುತ್ತಮುತ್ತಲಿನ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಯಾವಾಗಲೂ ಆಸಕ್ತಿಯಿತ್ತು. ಯಾವುದಾದರೊಂದು ನೆಪಮಾಡಿ ಆ ವಿಷಯಕ್ಕೆ ಬರುತ್ತಿದ್ದ. ತಾನು ಬಂದಾಗ, ಅಂದರೆ, ಐವತ್ತು-ಅರವತ್ತು ವರ್ಷಗಳ ಸುತ್ತಲಿನ ಹಿಂದಿನ ಪರಿಸರ, ಅದರಲ್ಲೂ ಸ್ಟ್ರಾಬೆರಿ ತೋಟಗಳು, ಹೇಗಿತ್ತೆಂದು ಆರಂಭಿಸಿ, ಇತ್ತೀಚಿನ ರಿಯಲ್ ಎಸ್ಟೇಟ್ ಏರಿಳಿತಗಳ ಬಗ್ಗೆ ಮಾತನಾಡುತ್ತಿದ್ದ. ಚೈನೀಸ್ ಉದ್ದಿಮೆದಾರರು ಬಂದು ಅಲ್ಲಿ ಮನೆಕಟ್ಟಿ ಮಾರುವುದನ್ನು ವೃತ್ತಿ ಮಾಡಿಕೊಂಡ ಮೇಲೆ, ಹೇಗೆ ಅದು ಬಣ್ಣ ಕಳೆದುಕೊಂಡಿತೆಂದು ಉದಾಹರಣೆ ಸಮೇತ ವಿವರಿಸುತ್ತಿದ್ದ. ಒಮ್ಮೆ, ಮಾತಿನ ಮಧ್ಯೆ, ವಲಸೆಗಾರರಿಂದಲೇ ಅದು ಹಾಳಾಯಿತೆಂದವನು, ವಾಸುವಿನ ಇರವನ್ನು ಗಮನಿಸಿ, 'ನಿಮ್ಮವರಲ್ಲ. ನೀವು ನಮ್ಮಂತೆಯೇ; ನಾವು ಸ್ಥಳೀಯ ಇಂಡಿಯನ್ಸ್, ನೀವು ಬಂದ ಇಂಡಿಯನ್ಸ್. ನಿಮ್ಮನ್ನು ಹುಡುಕುತ್ತಿದ್ದವರಿಗೆ ನಾವು ಸಿಕ್ಕೆವು. ಈವತ್ತು ನಮ್ಮನ್ನೇ ಹುಡುಕಬೇಕು.' ಎಂದು ಸಮಜಾಯಿಷಿ ಹೇಳಿದ್ದ. ಯಾರಿಗೂ ಅವನ ಸಮಜಾಯಿಷಿ ಬೇಕಿರಲಿಲ್ಲ, ಯಾಕೆಂದರೆ ಯಾರೂ ಅವನ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಅದು ಅವನ ಎಂದಿನ ವಿಷಯವಾಗಿತ್ತಾದರೂ, ಪ್ರತೀ ಸಲ ಏನಾದರೊಂದು ಹೊಸತನವಿರುತ್ತಿತ್ತು. ಕೇಳುಗ್ಗರ ಕಣ್ಣರಳುವುದನ್ನೇ ಕಾಯುತ್ತ, ನಂತರ ಗೆದ್ದವನಂತೆ ನಗುತ್ತಿದ್ದ. ಆಗವನನ್ನು ನೋಡುತ್ತಿದ್ದರೆ, ವಾಸುವಿಗೆ ಸಾತಪ್ಪನ ನೆನಪಾಗುತ್ತಿತ್ತು. ಅವನು ಸ್ವಾತಂತ್ರ್ಯ ಹೋರಾಟದ ಕುರಿತು ಯಾವಾಗಲೂ ಹುರುಪಿನಿಂದ ಮಾತನಾಡುತ್ತಿದ್ದ. ಪ್ರತೀ ಸಲ ಅವನು ಹೇಳುವ ಇತಿಹಾಸ ಬದಲಾಗುತ್ತಿತ್ತು. ಹೊಸ ಪಾತ್ರಗಳು, ಹೊಸ ಪ್ರಸಂಗಗಳು ತಾನೇ ತಾನಾಗಿ ಹುಟ್ಟಿಕೊಳ್ಳುತ್ತಿದ್ದವು. ಕುದುರೆಯ ಮೇಲೆ ಬಂದ ನೆಹರು ಅವನನ್ನು ನೋಡಿ ಕೈಮಾಡಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕುವಂತೆ ಆಹ್ವಾನಿಸಿದ್ದು... ಎಲ್ಲವೂ ಎಂದೂ ಮುಗಿಯದ ಕಥೆಗಳಾಗಿದ್ದುವು. ಆವತ್ತು ಸಾಂತಜ್ಜನಿಗೆ, ಅದರಲ್ಲೂ ಆಸಕ್ತಿಯಿದ್ದಂತೆ ತೋರಲಿಲ್ಲ. 'ಯಾರೋ ದುಡ್ಡಿದ್ದವರು ಕೊಂಡುಕೊಳ್ಳಬಹುದು, ನನಗೇನು ಗೊತ್ತು.' ಎಂದು ಮತ್ತೇನೂ ಮಾತನಾಡದೆ ಹೊರಡಲನುವಾದ. ರಸ್ತೆಗಿಳಿದವನು, ವಾಸುವಿನ ಕಡೆಗೆ ತಿರುಗಿ, 'ಮರ ಕಡಿಯಲು ಬೇಕಾದರೆ, ನನಗೆ ತಿಳಿಸು. ಜನ ಕಳಿಸುತ್ತೇನೆ, ದುಡ್ಡಿನ ವಿಚಾರ ಮಾಡಬೇಡ' ಎಂದ. ಮತ್ತೆ ತಿರುಗಿ ನೋಡಲಿಲ್ಲ. ಸಾಂತಜ್ಜನ ಮನಸ್ಥಿತಿ ಅರಿತ ನಾಯಿ ಎಂದಿನ ತಕರಾರು ಮಾಡದೇ ಅವನನ್ನು ಹಿಂಬಾಲಿಸಿತ್ತು. ಅವನೂ ಅಷ್ಟೆ, ಅದರೊಡನೆಯೂ ಮಾತನಾಡಲಿಲ್ಲ.

ಪಕ್ಕದ ಮನೆಯ ಚೈನೀಸ್, ಡ್ಯಾನಿ, ಅವರಿಬ್ಬರು ಮಾತನಾಡುವುದನ್ನು ಗಮನಿಸುತ್ತಿದ್ದ. ಅವನಿಗೆ ಸಾಂತಜ್ಜನೆಂದರೆ ಅಷ್ಟಕಷ್ಟೆ. ಸಾಂತಜ್ಜ ಹೊರಟುದನ್ನು ನೋಡಿದವ ವಾಸುವಿನೆಡೆಗೆ ಬಂದು, 'ಏನು ವಿಷಯ' ಎನ್ನುವವನಂತೆ ಸನ್ನೆ ಮಾಡಿದ. ಅವನು ಮರ ಕಡಿಯುವಂತೆ ಸೂಚಿಸಿದುದನ್ನು ತಿಳಿದು, 'ನನಗೆ ಗೊತ್ತಿತ್ತು. ಅವನು

ಯಾಕೆ ಹಾಗೆ ಹೇಳಿದ್ದಾನೆ. ನೀನು ಊಹಿಸುತ್ತೀಯೇನು?' ಎಂದು ಕೇಳಿದ. ವಾಸುವಿನ ಉತ್ತರಕ್ಕಾಗಿಯೂ ಕಾಯದೇ, ಸಾಂತಜ್ಜನ ಮಗ ಮರ ಕಡಿಯುವ ಬಿಸಿನೆಸ್ ಮಾಡುತ್ತಿದ್ದುದನ್ನು ಹೇಳಿದ. ಆ ಸುದ್ದಿ ವಾಸುವಿಗೂ ಹೊಸದು. ಸಾಂತಜ್ಜನ ಮಾತುಗಳಿಗೆ ಹೊಸ ಅರ್ಥ ಬರತೊಡಗಿತು. ಅವನು ಹೇಳಿದ ಮೇಲೆ, ಕೆಲವೊಂದು ದಿನದ ಹಿಂದೆ ಸಾಂತಜ್ಜ, 'ಏಂಜಲ್ ಟ್ರೀ ಸರ್ವೀಸಸ್' ಗಾಡಿಯಲ್ಲಿ ಹೋಗುತ್ತಿದ್ದುದನ್ನು ನೆನಪುಮಾಡಿಕೊಂಡ ವಾಸು,

'ಇರಲಿ ಬಿಡು, ಮೊದಲು ಅಪ್ಪ-ಮಗ ಮಾತನಾಡುತ್ತಿರಲಿಲ್ಲ. ಬಹುಶಃ ಈಗ ಮಗನ ವ್ಯವಹಾರಕ್ಕೆ ಸಹಾಯ ಮಾಡಬಯಸಿರಬೇಕು. ಅದರಲ್ಲೇನು ತಪ್ಪು.'

'ಅಂದರೆ ಮರ ಕಡಿಸುತ್ತಿದ್ದಿ ಅಂತಾಯ್ತು!'

'ಬಹುಶಃ; ಇನ್ನೂ ತೀರ್ಮಾನಿಸಿಲ್ಲ.'

'ಅವನ ವಯಸ್ಸು ಮತ್ತು ಮಾತಿಗೆ ಮರುಳಾಗಬೇಡ. ಮರ ಮತ್ತು ಮುದುಕ ಎರಡೂ ನಿನಗೆ ಹೊಸತೇನಲ್ಲ. ನಿನಗೂ ಗೊತ್ತಿರಬೇಕು, ಮೊದಲು ಆ ಮರ ಕಡಿಯಲು ಅಡ್ಡಬಂದವನೇ ಈ ಮುದುಕ.'

ವಾಸು ಅಂದುಕೊಂಡುದಕ್ಕಿಂತಲೂ ಹೊಸ ಆಯಾಮಗಳಿದ್ದವು. ಆ ಮಾತುಗಳಲ್ಲಿ ಅವನಿಗೆ ಅಷ್ಟೊಂದು ವಿಶ್ವಾಸವಿಲ್ಲದಿದ್ದರೂ, ತಾನು ಸಾಂತಜ್ಜನ ವಿಷಯ ಪೂರ್ತಿ ತಿಳಿದುಕೊಳ್ಳಲಿಲ್ಲವೇನೋ ಎಂದೆನಿಸಿತು.

'ಇದು ನೀನು ಮನೆ ಖರೀದಿ ಮಾಡುವುದಕ್ಕಿಂತ ಮೊದಲಿನ ಸುದ್ದಿ. ಹಳೆಯ ಮಾಲೀಕ ಮರ ಕಡಿದ ನಂತರ ಮನೆ ಮಾರಬೇಕೆಂದಿದ್ದ. ಹಾಗೆ ಮಾಡಿದರೆ ಒಳ್ಳೆ ಬೆಲೆ ಬರಬಹುದು ಎಂದು ರಿಯಲ್ ಎಸ್ಟೇಟ್ ಏಜೆಂಟ್ ಹೇಳಿದ್ದರಿಂದ ಅವನು ಅದಕ್ಕಾಗಿ ಅರ್ಜಿ ಹಾಕಿದ್ದ. ಆಗ ಇದೇ ಮುದುಕ ನಗರಸಭೆಗೆ ಕಂಪ್ಲೇಂಟ್ ಮಾಡಿದ್ದ. ಇಡೀ ಪ್ರದೇಶದ ಲ್ಯಾಂಡ್‌ಸ್ಕೇಪಿಗೆ ಮೆರುಗು ತರುವಂತಹ ಚಿರಪರಿಚಿತ ಮರ; ಸ್ಥಳೀಯ ಸಂಸ್ಕೃತಿ ಅರ್ಥವಾಗದ ಹೊರಗಿನಿಂದ ಬಂದವರ ಮನವಿಯನ್ನು ತಿರಸ್ಕರಿಸಬೇಕೆಂದು ಲಿಖಿತದಲ್ಲಿ ಕೇಳಿಕೊಂಡಿದ್ದ.'

ಅವನು ಸ್ವಲ್ಪ ಉದ್ವೇಗದಲ್ಲಿದ್ದುದು ವ್ಯಕ್ತವಾಗುತ್ತಿತ್ತು. ಸಾಂತಜ್ಜ ಯಾವಾಗಲೂ ಈ ವಿಷಯ ಹೇಳದಿದ್ದುದರ ಬಗ್ಗೆ ವಾಸುವಿಗೆ ಸಿಟ್ಟು ಬಂತು. ಅಷ್ಟೆಲ್ಲ ಆತ್ಮೀಯತೆಯಿಂದ ಮಾತನಾಡುವ ಸಾಂತಜ್ಜ 'ಹೊರಗಿನವರು' ಎಂದುದಕ್ಕೆ ಇನ್ನಷ್ಟು ಬೇಸರವಾಗಿತ್ತು. ಆದರೂ ತೋರಿಸಿಕೊಳ್ಳದೆ 'ಅವನೇ ಬರೆದುದೆಂದು ನಿನಗೆ ಹೇಗೆ ಗೊತ್ತು? ಬೇರೆ ಯಾರಾದರೂ ಬರೆದಿರಬಹುದು.' ಎಂದ.

'ಮೊದಲನೆಯದಾಗಿ, ಇಲ್ಲಿ ಇರುವ ಬಹುತೇಕ ಮಂದಿ ನಮ್ಮಂತವರು, ಅವರು ಹಾಗೆ ಬರೆಯಲು ಸಾಧ್ಯವಿಲ್ಲ. ನಿಮ್ಮ ಮನೆಯ ಹಳೆಯ ಮಾಲೀಕ ನನ್ನ ಹೆಂಡತಿಯ

ಸಂಬಂಧಿಕ. ನಾವಿಬ್ಬರೂ ಹೋಗಿ ಈ ಮುದುಕನಲ್ಲಿ ಮಾತನಾಡಿದೆವು. ಕಾಣಲು ಸುಬಗನಂತೆ ಕಾಣುವ ಮುದುಕ ಆಡಿದ ಮಾತುಗಳನ್ನು ನೀನು ನಂಬಲಿಕ್ಕಿಲ್ಲ. ಆ ಮರವೇ ತಾನೆಂಬಂತೆ ಮಾತನಾಡಿದ. 'ಹೊರಗಿನಿಂದ ಬಂದವರಿಗೆ ಇಲ್ಲಿಯ ಮರಗಳ ವೈಶಿಷ್ಟ್ಯ ಹೇಗೆ ಗೊತ್ತಾಗಬೇಕು? ಅದು ಇಲ್ಲೇ ಹುಟ್ಟಿ ಬೆಳೆದ ಮರ. ನಿಮಗೆ ಅದರೊಡನೆ ಬದುಕಲು ಸಾಧ್ಯವಿಲ್ಲದಿದ್ದರೆ ಬಲವಂತ ಮಾಡಿದವರಾರು? ಹಾಗಂತ ಅದನ್ನು ಕಡಿಯಲು ಸಾಧ್ಯವಿಲ್ಲ. ನಿಮಗೆ ಬೇರೆಲ್ಲೋ ಹೋಗಿ ಬದುಕಲು ಸಾಧ್ಯವಿದೆ. ಆದರೆ ಆ ಮರಕ್ಕೆ ಹೋಗಲಿಕ್ಕೆ ಆಗುವುದಿಲ್ಲ.' ಎಂದೆಲ್ಲ ಮನಸ್ಸಿಗೆ ಬಂದಂತೆ ಮಾತನಾಡಿದ. ನಾವು 'ಮರ ಮನೆಯ ಮೇಲೆ ಬೀಳುವ ಸಾಧ್ಯತೆ ಇದೆ, ಅಪಾಯಕಾರಿ ಅಂತ ಹಾಗೆ ವಿಚಾರ ಮಾಡಿದೆವು, ಅಷ್ಟೆ.' ಅಂದಿದ್ದಕ್ಕೆ 'ಆ ಮರಕ್ಕಿಂತಲೂ ನೀವೇ ಹೆಚ್ಚು ಅಪಾಯಕಾರಿ. ಅದು ಬೀಳಬಹುದೆನ್ನುವ ನೆಪ ಮಾಡಿ ಅದನ್ನು ಕಡಿಯಲು ಹೊರಟಿದ್ದೀರಿ. ಮರ ಬೀಳುವ ಹೆದರಿಕೆ ಇದ್ದರೆ ಬಯಲಲ್ಲಿ ಹೋಗಿ ಮನೆಮಾಡಿ.' ಎನ್ನುವುದೇ! ನಾವು ನಗರಸಭೆಯ ಆರ್ಬೋರಿಸ್ಟ್ ಸರ್ಟಿಫಿಕೇಟ್ ಕೊಟ್ಟ ಸುದ್ದಿ ಹೇಳಿದಾಗ, ಒಂದೇ ಸಮನೆ ಒದರಲು ಆರಂಭಿಸಿದ. ಅವನ ಎಲ್ಲ ತೊಂದರೆಗಳಿಗೂ ನಾವೇ ಕಾರಣವೆನ್ನುವಂತೆ ಮಾತನಾಡಿದ. ಆ ಮರವನ್ನು ಉಳಿಸಿಕೊಳ್ಳಲು ಎಲ್ಲಕ್ಕೂ ಸಿದ್ಧನಿರುವುದಾಗಿ ಹೇಳಿದ. ನಾವು ನಿಜಕ್ಕೂ ಹೆದರಿ, ಹೆಚ್ಚಿಗೆ ಮಾತನಾಡದೆ ತಿರುಗಿ ಬಂದೆವು.'

ಮೊದಲ ಬಾರಿಗೆ ಡ್ಯಾನಿ ಅಷ್ಟು ಮಾತನಾಡಿದುದನ್ನು ಕೇಳಿದ ವಾಸು ಸುಮ್ಮನಾದ. ಸಾಂತಜ್ಜನ ಮೇಲೆ ಸಿಟ್ಟು ಬರತೊಡಗಿತ್ತು. ಮುಂದಿನ ಸಲ ಬಂದು ಬಾಗಿಲು ತಟ್ಟಿದರೆ ತೆಗೆಯದಿರಲು ನಿರ್ಧರಿಸಿಕೊಂಡ.

'ಮರ ಕಡಿಸು, ಆದರೆ ಮುದುಕನ ಮಗನಿಗೆ ಈ ಕೆಲಸ ವಹಿಸಬೇಡ. ಅಂತಹ ಕೆಲಸ ಮಾಡುವ ಸಾವಿರ ಜನರಿದ್ದಾರೆ. ಕಡಿಮೆಗೂ ಮಾಡಿಕೊಡಬಹುದು.'

ವಾಸು ಗಲಿಬಿಲಿಗೊಂಡಿದ್ದ. ಸಾಂತಜ್ಜ ಹೇಳಿದ ಮಾತಿನಲ್ಲಿ ಸ್ವಲ್ಪವೂ ನಂಬಿಕೆ ಉಳಿಯಲಿಲ್ಲ. ಎಲ್ಲರ ಮಾತು ಕೇಳಿ, ಮರ ಕಡಿಸುವ ಪ್ರಯತ್ನ ಮಾಡಿ ಆಗದೇ ಬೇಸರದಿಂದ ಇದ್ದಾಗ, ಇದೇ ಸಾಂತಜ್ಜನ ಸಾಂತ್ವನದ ಮಾತುಗಳು ನೆನಪಿಗೆ ಬಂದವು. 'ಮನೆಯ ಮೌಲ್ಯದ ಬಗ್ಗೆ ತಲೆಕೆಡಿಸಿಕೊಳ್ಳಬೇಡ, ಈ ಮರ ಯಾವಾಗಿನಿಂದಲೂ ಇದೆ. ಅಷ್ಟು ಸುಲಭವಾಗಿ ಬಿಟ್ಟುಕೊಡುವ ಬೇರುಗಳಲ್ಲ. ಮೂರ್ತಿ ಪೂಜಿಸುವ ನೀವು, ಮರವನ್ನೂ ಪೂಜಿಸುವದಿಲ್ಲವೇನು?' ಎಂದು ಕೇಳಿದಾಗ. ತೆಂಗಿನ ಮರದ ಹೆಸರು ಹೇಳಿದ್ದ; ಆಲ-ಅಶ್ವತ್ಥಗಳ ಹೆಸರು ನೆನಪಾಗಿರಲಿಲ್ಲ. 'ಬರೀ ನಮಗೇನೋ ಕೊಡುತ್ತದೆ ಎಂದಷ್ಟೇ ಪೂಜಿಸಿದರೆ ಅದು ವ್ಯಾಪಾರ. ಈ ಮರ ತುಂಬ ನಿರುಪಯೋಗಿ. ಹೂವಿಲ್ಲ, ಹಣ್ಣಿಲ್ಲ, ಹೋಗಲಿ ಸರಿಯಾದ ನೆರಳೂ ಇಲ್ಲ. ಆದರೂ ಎಷ್ಟೋ ವರ್ಷಗಳಿಂದ ಇದೆ. ಜುಜುಬಿ ಲೆಕ್ಕಾಚಾರದಲ್ಲಿ ಅದನ್ನು ಕೊಲ್ಲಲು ನಾವ್ಯಾರು?' ಎಂದವನು ಹೇಳಿದಾಗ ವಾಸುವಿಗೆ ಅವನ ಮೇಲಿನ ಗೌರವ ನೂರ್ಮಡಿಯಾಗಿತ್ತು. ಜೋಯಿಸರ ಮಾತುಗಳಿಗೆ

ಅವು ತಾಳೆಯಾಗಿದ್ದವು; ಸಾಂತಜ್ಞ ತತ್ವಜ್ಞಾನಿಯಂತೆ ಕಂಡಿದ್ದ. ಆದರೆ ಈಗ ಅವನ ಮೇಲಿದ್ದ ಗೌರವವೆಲ್ಲವೂ ಇಳಿದುಹೋಗಿತ್ತು. ಮಗನ ಮೋಹದ ಮೇಲಿಂದ ಈ ಮಟ್ಟಕ್ಕೆ ಇಳಿಯಬಾರದಿತ್ತು ಎನ್ನಿಸಿತು. ಅದನ್ನಾದರೂ ನೇರವಾಗಿ ಹೇಳದೇ ನಾಟಕ ಯಾಕೆ ಮಾಡಬೇಕಾಗಿತ್ತು ಎಂದು ಅರ್ಥವಾಗಲಿಲ್ಲ. ನಂತರ ಅವನ ಕಣ್ಣು ತುಂಬಿಕೊಂಡಿದ್ದುದು ನೆನಪಿಗೆ ಬಂದು, 'ಬಹುಶಃ ಅವನ ಮಗ ತುಂಬಾ ತೊಂದರೆಯಲ್ಲಿರಬೇಕು, ಅದಕ್ಕೆ ಮುದುಕ ಕರಗಿ ಹೋಗಿದ್ದಾನೆ' ಎಂದುಕೊಂಡ. ಮೊದಲು ಯಾವುದೋ ಮಾತಿನಲ್ಲೊಮ್ಮೆ ಮಕ್ಕಳೆಷ್ಟು ಎಂದು ಕೇಳಿದಾಗ, 'ಯಾರನ್ನು ನಂಬಲು ಸಾಧ್ಯವಿಲ್ಲವೋ ಅವರನ್ನು ಎಣಿಸಿ ಏನು ಪ್ರಯೋಜನ?' ಎಂದು ಮಾತು ಬದಲಾಯಿಸಿದ್ದ. ವಾಸುವಿನ ಮಗನನ್ನು ನೋಡಿದಾಗಲೆಲ್ಲ ಮೊಮ್ಮಗನ ಸುದ್ದಿ ಮಾತನಾಡುತ್ತಿದ್ದ. 'ಬಹುಶಃ ಹತ್ತಿರದಲ್ಲೇ ಇದ್ದಿರಬೇಕು. ಪಾಪ, ಅವನ ಸಮಸ್ಯೆಗಳೇನಿವೆಯೋ? ತತ್ವಜ್ಞಾನಿ ಅಲ್ಲವಾದರೇನಾಯಿತು, ಮಾಮೂಲಿ ಮನುಷ್ಯನಾದರೂ ಸರಿ' ಎಂದುಕೊಂಡು, ಡ್ಯಾನಿ ಹೇಳಿದರೂ ಸಾಂತಜ್ಞನ ಮಗನಿಂದಲೇ ಮರ ಕಡಿಸುವ ತೀರ್ಮಾನಕ್ಕೆ ಬಂದಿದ್ದ. 'ಅವನು ಮತ್ತೊಮ್ಮೆ ಬಂದಾಗ ಒಪ್ಪಿಗೆ ಸೂಚಿಸಬೇಕು, ಅದಕ್ಕಾಗಿ ಪರವಾನಿಗೆ ತರುವ ಕೆಲಸವನ್ನೂ ಅವನಿಗೇ ವಹಿಸಬೇಕು' ಎಂದುಕೊಂಡಿದ್ದರೆ, ಸಾಂತಜ್ಞ ಬರುವ ಮೊದಲೇ, ವಾರಾಂತ್ಯಕ್ಕೂ ಕಾಯದೇ ಮರ ಬಿದ್ದಿತ್ತು.

ಅಷ್ಟು ದೊಡ್ಡ ಮರವಾಗಿದ್ದರೂ ಅಂತಹ ಹಾನಿಯೇನೂ ಆಗಿರಲಿಲ್ಲ. ಆದರೆ ಸಾಂತಜ್ಞನ ಮಾತುಗಳನ್ನು, ಅವನು ಹೇಳಿದ ರೀತಿಯನ್ನು ನೆನಪಿಸಿಕೊಂಡಾಗಲೆಲ್ಲ, ವಾಸು ಆಶ್ಚರ್ಯ ಚಕಿತನಾಗುತ್ತಿದ್ದ. 'ಅವನಿಗೆ ನಿಜಕ್ಕೂ ಮರ ಸೂಚನೆ ಕೊಟ್ಟಿತೇ? ಅದು ಅವನ ಭ್ರಮೆ ಇರಬಹುದಾದರೂ, ಅಂತಹ ಖಚಿತತೆ ಎಲ್ಲಿಂದ ಬಂತು?' ಟೊಂಗೆಗಳು ಬಾಗಿವೆ ಎಂದು ಹೇಳಿದ್ದರೂ, ಹಾಗೇನೂ ಕಂಡಿರಲಿಲ್ಲ. ಅವನನ್ನೇ ಕೇಳಲು ವಾಸುವಿನ ಮನಸ್ಸು ಕಾತರಿಸಿತು. 'ಹೇಗಿದ್ದರೂ ಸೋಮವಾರ ಇನ್ಶೂರೆನ್ಸ್ ಏಜೆಂಟ್ ಬರುತ್ತಾನೆ. ಅದೇ ದಿನ ಬಿದ್ದ ಮರವನ್ನೂ ತೆಗೆಸಿದರಾಯಿತು' ಎಂದುಕೊಂಡು ಬಾಗಿಲು ಹಾಕಿ ಸಾಂತಜ್ಞನ ಮನೆಕಡೆ ಹೊರಟ. ಬೇಡವೆಂದರೂ, ಅವನ ಕಣ್ಣು ಡ್ಯಾನಿಯ ಮನೆಯೆಡೆಗೆ ಹೊರಳಿತು, ಅವನು ಕಣ್ಣಿಗೆ ಬೀಳಲಿಲ್ಲ.

ಸಾಂತಜ್ಞನ ಮನೆಯ ವಿಳಾಸ ನೆನಪಿರದಿದ್ದರೂ, ಮನೆ ಹುಡುಕುವುದು ಕಷ್ಟವಿರಲಿಲ್ಲ. ಹಳೆಯ ಕನ್ಸ್ಟ್ರಕ್ಷನ್ ಸಾಮಗ್ರಿಗಳು ಮನೆಯ ಮುಂದೆ ತುಂಬಿದ್ದು ಅವನ ಇರುವಿಕೆಯನ್ನು ತೋರುತ್ತಿದ್ದವು. ಪರಿಚಯವಾಗಿ ವರ್ಷಗಳೇ ಕಳೆದಿದ್ದರೂ ಅವನ ಮನೆಗೆ ವಾಸು ಎಂದೂ ಹೋಗಿರಲಿಲ್ಲ. ಅಲ್ಲಿನ ಬಹುಜನರು ಪರಸ್ಪರ ಪರಿಚಿತರಿದ್ದರೂ, ಹೋಗಿ–ಬರುವ ರೂಢಿ ಕಡಿಮೆ. ಮನೆಯ ಹೊರಗೆ ನಿಂತ, ಕಾರು ಒರೆಸುತ್ತಿದ್ದ ಜನರನ್ನು ನೋಡಿ ಮಾತನಾಡಿಸುವಲ್ಲಿ ಶುರುವಾಗುವ ಪರಿಚಯ, ಬೇರೆಲ್ಲೋ ಸಿಕ್ಕಾಗ ಗಟ್ಟಿಯಾಗುತ್ತಿತ್ತು. ಭಾನುವಾರ ಆಗಿದ್ದುದರಿಂದ ಮನೆಯ ಹೊರಗೆ ಜನ ಕಾಣಲಿಲ್ಲ.

ಕಾರುಗಳು ಸಾಲುಸಾಲಾಗಿ ನಿಂತು, ಒಡೆಯರು ಮನೆಯಲ್ಲಿ ಇದ್ದಾರೆಂದು ಸಾರುತ್ತಿದ್ದವು. ದಿನವೂ ಇಷ್ಟು ಹೊತ್ತಿಗೆ ಹೊರಬಂದು ಮನೆಯ ಮುಂದೆ ಸೊಂಪಾಗಿ ಬೆಳೆದು, ನೀಟಾಗಿ ಕತ್ತರಿಸಿ ನಿಂತ ಗುಲಾಬಿ ಗಿಡಗಳನ್ನೋ, ಪೊದೆಯನ್ನೋ ಸವರುತ್ತ ನಿಲ್ಲುವ ಎದುರು ಮನೆಯ ಸರ್ದಾರ್ಜಿ ಅಂದೇಕೋ ಹೊರಗೆ ಬಂದಿರಲಿಲ್ಲ. ಮೊದಮೊದಲು ಬಂದಾಗ ಎಲ್ಲಾ ಮುಖಪರಿಚಿತರನ್ನು, 'ಸತ್ ಶ್ರೀ ಅಕಾಲ್' ಎಂದು ಹೇಳುತ್ತಿದ್ದ ಅವನ ಧ್ವನಿ ಸಣ್ಣದಾಗಿದೆ. ಅವನೀಗ 'ಸತ್ ಶ್ರೀ ಅಕಾಲ್' ಹೇಳುತ್ತಾನೋ ಇಲ್ಲವೋ, ಆದರೆ ವಿಶ್ ಮಾಡಿದಾಗಲೆಲ್ಲ ಎಲ್ಲರಿಗೂ ಅವನು ಹಾಗೆ ಹೇಳಿದಂತೆ ಅನಿಸುತ್ತದೆ. ಯಾವಾಗ ನೋಡಿದರೂ ಮನೆಯ ಹೊರಗೇ ಇರುವವ, ಮರ ಬಿದ್ದ ನಂತರ ಮನೆಗೆ ಬಂದು ಬಿದ್ದ ಮರವನ್ನು ಬಹಳವಾಗಿ ನೋಡುತ್ತಲೇ ಇದ್ದ. 'ದೇವರ ಕೃಪೆ ದೊಡ್ಡದು, ಹೆಚ್ಚೇನೂ ಹಾನಿಯಾಗಲಿಲ್ಲ.' ಎಂದು ಹೇಳಿದ್ದ.

ಬೇಗ ಹೋಗಿಬರಬೇಕೆನ್ನುವ ಭಾವನೆ ಬಂದೊಡನೆ ವಾಸುವಿನ ಹೆಜ್ಜೆಗಳು ಬಿರುಸಾಗತೊಡಗಿದವು. ಇನ್ನೂ ಎರಡು ಅಡ್ಡರಸ್ತೆಗಳನ್ನು ದಾಟಬೇಕಿತ್ತು. ಬೀದಿಯುದ್ದಕ್ಕೂ ಹಾಸಿದಂತೆ ಬಿದ್ದ ಬಣ್ಣಬಣ್ಣದ ತರಗೆಲೆಗಳು ರಸ್ತೆಗೆ ಹೊಸದೊಂದು ಸ್ವರೂಪವನ್ನು ತಂದಿದ್ದವು. ಉದುರಿದ ಎಲೆಗಳೂ ಇಷ್ಟು ಚೆನ್ನಾಗಿ ಕಾಣಬಹುದು ಎಂದು ಹೊಳೆಯುವುದೇ ಇಲ್ಲ. ಈ ಎಲೆಗಳಿಗೆ ಉದುರುವ ಮೊದಲು ಈ ಬಣ್ಣ ಬರುತ್ತೋ ಅಥವಾ ಬಿದ್ದ ಮೇಲೆ ಬರುತ್ತೋ ಎನ್ನುವುದು ನೆನಪಾಗದೆ, ಮುಂದಿನ ವರ್ಷ ಎಲೆ ಬೀಳುವ ಮೊದಲು ಅದನ್ನು ಗಮನಿಸಬೇಕು ಅಂದುಕೊಂಡ. ಕೆಲವು ಮರಗಳ ಮೇಲೆ ಒಂದು ಎಲೆಯೂ ಇರದೇ, ದೇವರ ಆಶೀರ್ವಾದಕ್ಕಾಗಿ ಕಾದು ನಿಂತ ದಿಗಂಬರ ಸನ್ಯಾಸಿಯಂತೆ ಕಾಣುತ್ತಿದ್ದವು. ಅವುಗಳು ಬದುಕಿದ್ದುದಕ್ಕೆ ಮರದ ಮೇಲೆ ಯಾವ ಕುರುಹೂ ಇರಲಿಲ್ಲ. 'ಸದಾ ಹಸಿರು ದೇವದಾರು ಮರ ಎಂದೂ ಬಣ್ಣಗೆಟ್ಟುದಿಲ್ಲ. ಬಿದ್ದಿರುವ ಮರ ನೋಡಿದರೂ ಜೀವ ಇರುವಂತೆಯೇ ಕಾಣುತ್ತದೆ. ಸಾಂತಜ್ಜನಿಗೆ ಅದು ಬೀಳಬಹುದೆಂದು ಹೇಗನಿಸಿತೋ ಏನೋ? ಮತ್ತದೇ ಜಾತಿಯ ಗಿಡವನ್ನೇ ನೆಡಬೇಕು' ಎಂದುಕೊಂಡ.

ರಸ್ತೆಯ ಆ ಕಡೆಯ ಮನೆಯಲ್ಲಿ ಇಡೀ ಮನೆಯನ್ನೇ ಮುಚ್ಚುವಂತ ಟ್ರಕ್ಕೊಂದು ನಿಂತಿತ್ತು. ನಾಲ್ಕಾರು ಜನ ಸಾಮಾನನ್ನು ಇಳಿಸುತ್ತಿದ್ದರು. ಟ್ರಕ್ಕಿನ ಹಿಂದೆ ನಿಂತವ ವಾಸುವನ್ನು ನೋಡಿ ನಕ್ಕ. ಬಹುಶಃ ಮನೆಯ ಯಜಮಾನ ಇರಬೇಕೆಂದೆನಿಸಿತು. ತಿರುಗಿ ನಕ್ಕವನಿಗೆ ನಂತರ ನಗಬಾರದಿತ್ತೇನೋ ಎನ್ನಿಸಿತು. ಅವನು ರಸ್ತೆ ಕ್ರಾಸ್ ಮಾಡಿ ಈ ಕಡೆಗೆ ಬಂದ.

'ಇಲ್ಲಿ ತುಂಬಾ ದಿನದಿಂದ ಇದ್ದೀರಾ?'.

'ಕೆಲವು ವರ್ಷಗಳಿಂದ ಅಷ್ಟೇ, ಇಲ್ಲಿ ಬಂದು ಎಂಟು-ಹತ್ತು ವರ್ಷ ಆಗಬಹುದು. ನೀವು?'

'ನಾವು ಈಗಷ್ಟೇ ಬಂದಿದ್ದೇವೆ. ಮೊದಲು ಪೂರ್ವ ಕರಾವಳಿಯಲ್ಲಿದ್ದೆವು. ಈ ಕಡೆಗೆ ಬಂದು ನಾಲ್ಕಾರು ತಿಂಗಳುಗಳಾದವು. ನಮ್ಮ ಕಸಿನ್ ಪಕ್ಕದ ರಸ್ತೆಯಲ್ಲಿದ್ದಾರೆ. ಹಾಗಾಗಿ ಈ ಪರಿಸರ ಚೆನ್ನಾಗಿ ಗೊತ್ತು. ನಮ್ಮವರು ತುಂಬಾ ಜನ ಇದ್ದಾರೆ. ಮನೆ ಕೊಂಡ್ಕೊಂಡು ಒಂದು ವಾರ ಆಯ್ತು ಅಷ್ಟೆ. ನಿಮ್ಮ ಮನೆ ಇದೇ ಬೀದಿಯಲ್ಲಿದೆಯಾ?'

'ಅದೇ, ಆ ದೊಡ್ಡ ಮರ ಬಿದ್ದಿದೆಯಲ್ಲ, ಅದೇ.'

'ಓ, ಸಾರಿ. ಎಲ್ಲವೂ ಸರಿಯಾಗಿದೆ ಅಂದುಕೊಳ್ಳುತ್ತೇನೆ. ನಮ್ಮ ಮನೆಯ ಹಿಂದೆ ಅದಕ್ಕಿಂತಲೂ ದೊಡ್ಡ ಮರವಿದೆ. ತೆಗೆಸುವ ವಿಚಾರ ಮಾಡುತ್ತಿದ್ದೇವೆ.'

ದೂರದಲ್ಲಿ ನಿಂತಿದ್ದ ಅವನ ಹೆಂಡತಿ, ಟ್ರಕ್‌ನಿಂದ ಇಳಿಸುವ ಕೆಲಸವನ್ನು ಗಮನಿಸುವುದಕ್ಕಿಂತ ಹೆಚ್ಚಾಗಿ ಇವರ ಮಾತುಗಳನ್ನು ಆಲಿಸುತ್ತಿದ್ದಳು. ವಾಸುವಿಗೆ ಕುತೂಹಲ ಅದುಮಿಡಲಾರದೆ 'ಎಲ್ಲಿಯವರು' ಅಂದ. ಆ ಬೀದಿಯಲ್ಲಿ ಭಾರತೀಯರ ಮನೆಗಳು ಹಲವಾರು ಇದ್ದಿದ್ದರೂ, ಎಲ್ಲವೂ ಉತ್ತರ ಭಾರತೀಯರದಾಗಿತ್ತು. ಬಂದ ಹೊಸ ಕುಟುಂಬ ಬೆಂಗಳೂರಿನವರೆಂದು ತಿಳಿದು ಸಂತೋಷವಾಯಿತು. ಎಷ್ಟೋ ದಿನಗಳಿಂದ ಅಗಲಿದ್ದ ಪರಿಚಿತರು ಭೇಟಿಯಾದ ಹಾಗೆನಿಸಿ, ಮಾತನಾಡುತ್ತ ನಿಂತ. ತಮಗಿಬ್ಬರಿಗೂ ಬೆಂಗಳೂರಿನ ಪರಿಚಯವಿದೆ ಎನ್ನುವುದನ್ನು ಖಾತ್ರಿ ಪಡಿಸಿಕೊಳ್ಳುವವರ ಹಾಗೆ, ಅಲ್ಲಿಯ ವಿದ್ಯಮಾನಗಳ ಕುರಿತು ಕೆಲವು ನಿಮಿಷಗಳ ಹರಟೆಯೂ ನಡೆಯಿತು. ಆ ಕ್ಷಣ ಅವನಿಗೆ ಸಾಂತಜ್ಜ, ಮನೆಯ ಮೇಲೆ ಬಿದ್ದಿದ್ದ ಮರ ಎಲ್ಲವೂ ಹಿಂದೆ ಸರಿದಿದ್ದವು. ಟ್ರಾನ್ಸ್‌ಪೋರ್ಟಿನವನು ಭಾರದ ಪೆಟ್ಟಿಗೆಯೊಂದನ್ನು ಕೆಳಗೆ ಇಳಿಸುತ್ತಿದ್ದ. ಇಳಿಸುವಾತ ತನ್ನ ಸಂಗಡಿಗನಿಗೆ ತುಂಬಾ ಭಾರವಿದೆಯೆಂದು ಹೇಳುತ್ತಿದ್ದುದು, ಭಾಷೆ ಗೊತ್ತಾಗದಿದ್ದರೂ ಎಲ್ಲರಿಗೂ ಗೊತ್ತಾಗುವಂತಿತ್ತು. ಅದೇನಿರಬಹುದೆಂಬ ಕುತೂಹಲದಿಂದ ನೋಡುವವನ ಮನಸ್ಸನ್ನು ಅರ್ಥಮಾಡಿಕೊಂಡ ಹಾಗೆ, ಅವನ ಹೆಂಡತಿ, 'ಅದು ತಂಜಾವೂರಿನಿಂದ ತರಿಸಿದ ಕಪ್ಪುಕಲ್ಲಿನ ತುಳಸಿಕಟ್ಟೆ, ಮತ್ತೆಲ್ಲಿ ಒಡೆದಾರೋ ಎಂಬ ಭಯ. ಇವರಿಗೆ ಅದರ ಮಹತ್ವ ಗೊತ್ತಾಗಬೇಕಲ್ಲ.' ಎನ್ನುತ್ತಲೇ ಆ ಕಡೆ ಲಕ್ಷ್ಯ ಹರಿಸುವಂತೆ ಗಂಡನಿಗೆ ಸನ್ನೆ ಮಾಡಿದಳು. ಆಗ ವಾಸುವಿಗೂ ತಾನು ಹೊರಟಿದ್ದ ಕೆಲಸ ನೆನಪಾಗಿತ್ತು. 'ತೊಂದರೆಯಿಲ್ಲ, ಮತ್ತೆ ಸಿಗುವಾ, ನಾನೀಗ ಹೋಗಬೇಕು' ಎಂದು ಹೊರಟ.

ಸಾಂತಜ್ಜನ ಮನೆಯ ಮುಂದೆ ನಾಲ್ಕೈದು ಕಾರುಗಳು ನಿಂತಿದ್ದವು. ಅವನ ಕನ್ಸ್ಟ್ರಕ್ಷನ್ ವಾಹನಗಳೂ ಅಲ್ಲೇ ನಿಂತಿದ್ದರಿಂದ, ಅಲ್ಲೊಂದು ವಾಹನಗಳ ಸಂತೆಯಾಗಿತ್ತು. ಬಹುದಿನಗಳಿಂದ ಉಪಯೋಗಿಸದ್ದರಿಂದ ಅವು ಬಣ್ಣಗೆಟ್ಟು ತುಕ್ಕುಹಿಡಿದಿದ್ದವು. ಹತ್ತು ಹನ್ನೆರಡು ವರ್ಷದ ಹುಡುಗನೊಬ್ಬ, ಬಣ್ಣದ ದೀಪಗಳಿಂದ ಮಾಡಿದ ಸಾಂತಾಕ್ಲಾಸ್‌ನನ್ನು ಮತ್ತು ಅವನ ಸುತ್ತಲಿನ ಅಲಂಕಾರವನ್ನು ಎತ್ತಿ ನಿಲ್ಲಿಸುತ್ತಿದ್ದ. ಸುತ್ತಲೂ ಕೃತಕ ಹಿಮವನ್ನು ಹರಡಲಾಗಿತ್ತು. ಮುಂದೆ ನಿಂತ ಕಾರುಗಳನ್ನು

ಗಮನಿಸಿ, ಒಳಗಡೆ ತುಂಬಾ ಜನರಿರಬಹುದೆಂದು ಸಂಶಯ ಬಂದು, ಒಳಹೋಗಬೇಕೋ-ಬೇಡವೋ ಎಂದು ವಿಚಾರ ಮಾಡುತ್ತಿರುವಷ್ಟರಲ್ಲಿ, ಸಾಂತಾಕ್ಲಾಸ್‌ನನ್ನು ನಿಲ್ಲಿಸುತ್ತಿದ್ದ ಕೆಲಸವನ್ನು ಅಲ್ಲಿಯೇ ಬಿಟ್ಟು, 'ಯಾರು ಬೇಕಿತ್ತು?'ಎಂದ. ವಿಲ್ಸನ್ ಎನ್ನಲು ಮನಸ್ಸಾಗದೆ, ಈ ಹುಡುಗ ಅವನ ಮೊಮ್ಮಗನಿರಬಹುದೆಂಬ ನಂಬಿಕೆಯಿಂದ, 'ನಿಮ್ಮ ತಾತನನ್ನು ನೋಡಬೇಕಿತ್ತು.' ಎಂದ. ಹುಡುಗ ಮಾತನಾಡದೇ ಒಳಗೆ ಓಡಿದ. ಸ್ವಲ್ಪ ಹೊತ್ತು ಯಾರೂ ಬರಲಿಲ್ಲ. ಮನೆಯ ಮುಂದಿನ ಕ್ರಿಸ್‌ಮಸ್ ಮರಕ್ಕೆ ಅರ್ಧಮರ್ಧ ಹಾಕಿದ್ದ ಡೆಕೋರೇಷನ್ ನೋಡುತ್ತ ನಿಂತಿದ್ದ ಹಾಗೆ, 'ಇದಿನ್ನೂ ಅಕ್ಟೋಬರ್, ಇಷ್ಟು ಮೊದಲೇ ಆರಂಭಿಸಿದ್ದಾರೆ' ಎಂದು ಅಚ್ಚರಿಗೊಂಡ. ಮನೆಯಿಂದ ಹೊರಟಾಗಿದ್ದ ಬೆಳಕು ಕಡಿಮೆಯಾಗಿ, ಮೋಡಗಳು ಕವಿಯಲಾರಂಭಿಸಿದ್ದವು. ಮಳೆ ಶುರುವಾಗುವ ಮುನ್ನ ಮನೆ ಸೇರಿಕೊಳ್ಳಬೇಕು ಎಂದೆಲ್ಲ ವಿಚಾರ ಮಾಡುತ್ತಿರುವಾಗ, ಮನೆಯಿಂದ ಹೊರಬಂದವ 'ಓಹೋ, ಬಿಗ್ ಟ್ರೀ ಇಂಡಿಯನ್, ಬನ್ನಿ ಕುಳಿತುಕೊಳ್ಳಿ' ಎಂದು ಸ್ವಾಗತಿಸಿದ. ಬಂದವ ಆ ಹುಡುಗನ ತಂದೆ ಅಂದರೆ ಸಾಂತಜ್ಜನ ಮಗನಾಗಿರಬಹುದೆಂದು ಅನುಮಾನಿಸಿ, ಮಾತು ಆರಂಭಿಸಲು ಶಬ್ದಗಳಿಗೆ ತಡಕಾಡಿದ.

'ನಾನೇ ಬರುವ ವಿಚಾರದಲ್ಲಿದ್ದೆ. ಆದರೆ ಮನೆ ತುಂಬಾ ಜನ. ಬರಲಾಗಲಿಲ್ಲ. ನೀವೇ ಬಂದುದು ಒಳ್ಳೆಯದಾಯಿತು. ನಮ್ಮ ತಂದೆ ನಿಮ್ಮ ವಿಷಯ ತುಂಬಾ ಹೇಳುತ್ತಿದ್ದರು. ನನ್ನೊಟ್ಟಿಗಷ್ಟು ಮಾತನಾಡುತ್ತಿರಲಿಲ್ಲ. ಅವರ ಮಾತೇನಿದ್ದರೂ ನನ್ನ ಅಮ್ಮನ ಹತ್ತಿರ. ನಿಮ್ಮ ಮರ ಕಡಿಯಲು ಸಹಾಯ ಮಾಡೆಂದು ಹೇಳಿಯೂ ಇದ್ದರು.' ಅವನ ದೃಷ್ಟಿ ಬೇರೆಲ್ಲೋ ಇತ್ತು. ಅವನ ಮಾತುಗಳನ್ನು ಕೇಳುತ್ತಿದ್ದ ಹಾಗೆ, ವಾಸುವಿನ ಮನಸ್ಸು ಸಣ್ಣಗೆ ಕಂಪಿಸಹತ್ತಿತ್ತು. ಮುಂದೆ ಯೋಚಿಸುವ ಸಾಹಸ ಮಾಡದೇ, ಅವನನ್ನೇ ನೋಡುತ್ತಿದ್ದ. 'ಅವರಿಗೆ ಆ ಮರವೆಂದರೆ ತುಂಬಾ ಇಷ್ಟವಾಗಿತ್ತು. ಅದು ತನ್ನಂತೆ ಏಕಾಕಿ, ನಿರುಪಯೋಗಿ ಎಂದೆಲ್ಲ ಗೊಣಗುತ್ತಿದ್ದರು. ಮರ ಬೀಳುವ ಮೊದಲೇ ನಮಗೆ ವಿದಾಯ ಹೇಳಿದರು.'

ವಾಸುವಿಗೆ ಏನು ಮಾತನಾಡುವುದೆಂದು ತಿಳಿಯಲಿಲ್ಲ. ಸುಮ್ಮನೆ ನಿಂತ. ಸೋಮವಾರ ಸಂಜೆ ನೋಡಿದಾಗ ಗಟ್ಟಿಯಾಗಿದ್ದ ಸಾಂತಜ್ಜ ಇನ್ನಿಲ್ಲವೆನ್ನುವುದನ್ನು ಅರಗಿಸಿಕೊಳ್ಳಲು ಸ್ವಲ್ಪ ಹೊತ್ತು ಬೇಕಾಗಿತ್ತು.

'ಆ ಮರ ತೆಗೆಯುವುದು ನನ್ನ ಜವಾಬ್ದಾರಿ, ದಯವಿಟ್ಟು ಬೇರೆ ಯಾರಿಗೂ ಅವಕಾಶ ಕೊಡಬೇಡಿ. ನಾನು ಮರ ಕಡಿಯುವ ವೃತ್ತಿಯಲ್ಲಿರುವುದು ತಂದೆಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಅವರು ಹೇಳಿದ ಈ ಕೆಲಸವನ್ನಾದರೂ ಮಾಡಿ ಸಮಾಧಾನ ಮಾಡಿಕೊಳ್ಳುತ್ತೇನೆ.'

ಅವನ ಧ್ವನಿ ಭಾರವಾಗಿತ್ತು. 'ಬನ್ನಿ, ಒಳ ಬನ್ನಿ.' ಎಂದು ಕರೆದಾಗ ಯಾಕೋ

ಇಲ್ಲವೆನ್ನಲು ಆಗಲಿಲ್ಲ. ಹತ್ತು ಹದಿನೈದು ಮಂದಿ ಸಾಲಾಗಿ ಕುಳಿತಿದ್ದರು. ಯಾರ ಮುಖವೂ ಪರಿಚಿತವಲ್ಲ. ಆದರೆ ಅವರಾಡುವ ಪ್ರತಿ ಮಾತೂ ಬೇರೆಲ್ಲೋ ಮೊದಲೇ ಕೇಳಿದಂತಿದೆಯಲ್ಲ ಎಂದು ವಿಸ್ಮಯಗೊಂಡ. ಸರತಿಯಂತೆ ಪ್ರತಿಯೊಬ್ಬರೂ ಸಾಂತಜ್ಜನ ಗುಣಗಾನ ಮಾಡುತ್ತಿದ್ದರು. ಅವನು ತಮಗೆಷ್ಟು ಸಲ ಸಹಾಯ ಮಾಡಿದ್ದ ಮತ್ತು ತಾವು ಅವನಿಗೆಷ್ಟು ಹತ್ತಿರವಾಗಿದ್ದೆವು ಎನ್ನುವುದನ್ನು ಹೇಳುತ್ತಿದ್ದರು. ಸಾಂತಜ್ಜನ ಹಲವು ಮುಖಗಳಿದ್ದವು. ವಾಸುವಿನ ಸರದಿಯೂ ಬಂತು, ಅಷ್ಟು ಜನರ ಮಾತು ಕೇಳಿದ ಮೇಲೂ ಅವನಿಗೆ ಸಾಂತಜ್ಜನ ನಿಜ ಹೆಸರು ನೆನಪಾಗಲಿಲ್ಲ. ಎದ್ದು ನಿಂತವನ ದನಿ ಉಡುಗಿ ಹೋಗಿತ್ತು. 'ಅವನು ನನ್ನ ಪಾಲಿಗೆ ಪ್ರತಿದಿನ ಸಂಜೆ ಬರುವ ಸಾಂತಾಕ್ಲಾಸ್ ಆಗಿದ್ದ, ಅವನನ್ನು ನೋಡಿದಾಗಲೆಲ್ಲ ನನ್ನವರನ್ನು ನೋಡಿದ ಅನುಭವವಾಗುತ್ತಿತ್ತು...' ವಾಸುವಿಗೆ ಮತ್ತೆ ಏನು ಹೇಳುವುದೆಂದು ತೋಚಲಿಲ್ಲ. ಕುಳಿತುಕೊಳ್ಳಲು ಅನುಮತಿ ಕೇಳಿ ಕುಳಿತುಕೊಂಡ. ಅವನ ಮಗ ಎದ್ದು ನಿಂತು, 'ಇವರು ಆ ದೊಡ್ಡ ಮರದ ಮನೆಯವರು. ತಂದೆಗೆ ಅದು ಅವರ ಪ್ರತಿರೂಪವಾಗಿತ್ತು. ಬೇಸರವೆಂದರೆ ಅದೂ ಶುಕ್ರವಾರವೇ ಬಿತ್ತು.' ಮತ್ತೆ ಅವನ ಕಡೆ ತಿರುಗಿ, 'ನೀವೆಂದರೆ ತಂದೆಗೂ ಬಹಳ ಇಷ್ಟವಾಗಿತ್ತು. ನಮಗೆಲ್ಲರಿಗೂ ನಿಮ್ಮ ಉದಾಹರಣೆ ಕೊಟ್ಟು ಹಂಗಿಸುತ್ತಿದ್ದರು. ನೀವು ಇವತ್ತು ಬಂದಿರುವುದು ನಮಗೆ ತುಂಬಾ ಸಂತೋಷ.' ಎಲ್ಲರ ಗಮನ ವಾಸುವಿನ ಮೇಲಿತ್ತು. ಅವನಿಗೆ ಮಾತನಾಡಲೂ ಮತ್ತಿನ್ನೇನೂ ಉಳಿದಿರಲಿಲ್ಲ. ಮನಸ್ಸಿನಲ್ಲಿದ್ದ ಹಲವು ಪ್ರಶ್ನೆಗಳು ತಮ್ಮಷ್ಟಕ್ಕೆ ಮಾಯವಾಗಿ ಗೂಡು ಸೇರಿದ್ದವು. ಫೈರ್-ಪ್ಲೇಸಿನ ಮೇಲಿದ್ದ ಸಾಂತಜ್ಜನ ಚಿತ್ರ ತನ್ನನ್ನೇ ನೋಡಿ ನಕ್ಕಂತೆನಿಸಿತು. ಎಲ್ಲರಿಗೂ ನಮಸ್ಕರಿಸಿ ಹೊರಬಂದಾಗ, ಮೋಡಗಳು ಇನ್ನಷ್ಟು ದಟ್ಟವಾಗಿದ್ದವು. ಮನೆಯ ಕಡೆ ಕಾಲು ಹಾಕತೊಡಗಿದವನಿಗೆ ನಡೆದುದೆಲ್ಲವನ್ನು ಪೋಣಿಸಿ ತರ್ಕ ಹುಡುಕುವ ಧೈರ್ಯವಾಗಲಿಲ್ಲ. ಅವುಗಳಿಗೊಂದು ತರ್ಕವೋ, ಅರ್ಥವೋ ಇರಲಿಕ್ಕಿಲ್ಲವೆಂಬ ಗುಮಾನಿಯೂ ಬಂದು ಸುಮ್ಮನಾದ.

ಅಜ್ಜಿ



– ಸಂಧ್ಯಾ ರವೀಂದ್ರನಾಥ್

'ಅಮ್ಮಾ, ನಾನು ಸ್ವಲ್ಪ ಹೊತ್ತು ಹೊರಗೆ ಹೋಗಿ ಬರ್ತೀನಿ' ಎಂದು ಹೇಳಿ ನಾನು ಹೊರಟಾಗ ಎಲ್ಲಿಗೆ ಹೋಗ್ತೀನಿ ಅಂತ ನನಗೇ ತಿಳಿದಿರಲಿಲ್ಲ . 'ಹುಷಾರಾಗಿ ಹೋಗಿ ಬಾ' ಅಂತ ಹೇಳುವುದನ್ನ ಅಮ್ಮ ಮರೆಯಲಿಲ್ಲ. ಅಮ್ಮನಿಗೆ ಯೋಚನೆ. ಮಗಳು 5 ತಿಂಗಳ ಬಸುರಿ. ಜೊತೆಗೆ ಮನೆಯ ವಾತಾವರಣ ಈಗ ಸರಿ ಇರಲಿಲ್ಲ. ಎಲ್ಲರ ಮನಸ್ಸೂ ಮುದುಡಿ ಹೋಗಿತ್ತು. ನಾನು ಒಬ್ಬಳೇ ಹೊರಗೆ ಹೋಗ್ತೀನಿ ಅಂದಾಗ ನಾನು ನಿನ್ನ ಜೊತೆ ಬರ್ತೀನಿ ಅಂತ ಹೇಳಹೊರಟವರು ಸುಮ್ಮನಾಗಿದ್ದರು. ಅಮ್ಮ ಯಾವಾಗಲೂ ಹಾಗೆ, ಎಲ್ಲ ಅರ್ಥ ಮಾಡಿಕೊಳ್ಳುತ್ತಿದ್ದರು. ನನ್ನ ಜೊತೆ ಯಾವಾಗ ತಾನು ಇರಬೇಕು, ಯಾವಾಗ ನನಗೆ ಸ್ವಾತಂತ್ರ್ಯ ನೀಡಬೇಕು ಅಂತ ಅವರಿಗೆ ತಿಳಿದಿತ್ತು. ನನಗಂತೂ ಈಗ ಏಕಾಂತ ಬೇಕಾಗಿತ್ತು. ಜೊತೆಗೆ ಯಾರೂ ಬೇಡ, ನನ್ನ ಯೋಚನೆಯಲ್ಲಿ ನಾನು ಮುಳುಗಬೇಕಿತ್ತು. ಅಜ್ಜಿಯ ಯೋಚನೆಯಲ್ಲಿ. ನನಗೆ ಈಗ ಬೇಕಾಗಿದ್ದುದು ಅಜ್ಜಿಯ ಜೊತೆ ಮಾತ್ರ. 'ಬೇಗ ಬಂದುಬಿಡು. ಅವರೆಲ್ಲಾ ಇನ್ನೊಂದು ಘಂಟೆಗೆ ಇಲ್ಲಿರುತ್ತಾರೆ'. ಅಮ್ಮನಿಗೂ ತುಂಬ ಬೇಜಾರು. ದುಃಖ. ನಮ್ಮನ್ನು ಈ ಪ್ರಪಂಚಕ್ಕೆ ತಂದ ತಾಯಿಯನ್ನು ಕಳೆದುಕೊಳ್ಳುವುದು ನಮ್ಮ ಜೀವನದಲ್ಲಿ ಅತ್ಯಂತ ನೋವು ಉಂಟುಮಾಡುವ ಅನುಭವ ಅಲ್ಲವೆ? ಅದೂ ಅಮ್ಮನಿಗೆ ಅಜ್ಜಿಯನ್ನು ಕಂಡರೆ ಅತೀವ ಪ್ರೀತಿ. ಎಲ್ಲಿಗೆ ಹೋಗುವುದು? ಕಾರು ಬೇಡ ನಡೆದೇ ಹೋಗುವುದು ಎಂದು ತೀರ್ಮಾನ ಮಾಡಿ ಮನೆಯಿಂದ ಬಲಗಡೆ ಪಾರ್ಕ್ ಕಡೆ ತಿರುಗಿದೆ. ನಾನು ಚಿಕ್ಕವಳಾಗಿದ್ದಾಗ, ಅಲ್ಲೇ, ಅಜ್ಜಿ ನನ್ನನ್ನು ಆಡಲು ಕರೆದುಕೊಂಡು ಹೋಗ್ತಾ ಇದ್ದುದು. ಬೇಸಗೆ ರಜದಲ್ಲಂತೂ ಪ್ರತಿದಿನ ಬೆಳಗಿನ ತಿಂಡಿ ಆದಮೇಲೆ ಅಜ್ಜಿ ಕೈಹಿಡಿದುಕೊಂಡು ಪಾರ್ಕಿಗೆ ಕರೆದುಕೊಂಡು ಬರ್ತಾ ಇದ್ದರು. ಅಮ್ಮನ ಓದು ಮುಗಿದು, ಅವರು ಸಾಫ್ಟ್‌ವೇರ್ ಇಂಜಿನೀಯರ್ ಆದ ಮೇಲೆ ಅದುವರೆಗೆ ಅರ್ಧ ದಿನ ಮಾತ್ರ ಕೆಲಸಮಾಡುತ್ತಿದ್ದ ಅಮ್ಮ, ಆಗ ಪೂರ್ತಿ ದಿನ ಕೆಲಸಕ್ಕೆ ಹೋಗಲು ಶುರುಮಾಡಿದ್ದರು. ಆಗ ಅಜ್ಜಿ ಬೆಂಗಳೂರಿಂದ ನಮ್ಮ ಮನೆಗೇ ಬಂದುಬಿಟ್ಟರು. ನನ್ನನ್ನು ನೋಡಿಕೊಳ್ಳಲು ಒಬ್ಬರು ಬೇಕಾಗಿತ್ತಲ್ಲಾ... ಅದಕ್ಕೆ ಮುಂಚೆ ನಾನು ಹುಟ್ಟಿದಾಗ ಅಜ್ಜಿ, ತಾತ ಇಬ್ಬರೂ ಬೆಂಗಳೂರಿಂದ ಬಂದಿದ್ದರಂತೆ. ಆದರೆ ನನಗೆ ನೆನಪಿರುವುದು ನಾನು ಮೊದಲನೇ ತರಗತಿಗೆ ಹೋಗುತ್ತಿದ್ದಾಗ. ಆಗ ತಾತ ಹೋಗಿಬಿಟ್ಟಿದ್ದರು. ಅಮ್ಮಾ ಅಜ್ಜಿಗೆ ಬೆಂಗಳೂರಲ್ಲಿ ನೀನು ಯಾಕೆ ಒಬ್ಬಳೇ ಇರಬೇಕು,

ಇಲ್ಲೇ ಬಂದುಬಿಡು ಅಂತ ಅವರಿಗೆ ಗ್ರೀನ್‌ಕಾರ್ಡ್ ಕೊಡಿಸಿ ಕರೆಸಿಕೊಂಡಿದ್ದರು. ಹೀಗಾಗಿ ನನ್ನನ್ನು ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಆಗ ಅಜ್ಜಿಯ ಹೆಗಲ ಮೇಲಿತ್ತು.

ಅಜ್ಜಿ ನಮ್ಮ ಮನೆಗೆ ಬಂದ ದಿನ ಇನ್ನೂ ಚೆನ್ನಾಗಿ ನೆನಪಿದೆ ನನಗೆ. ಅಜ್ಜಿಯನ್ನು ಏರ್‌ಪೋರ್ಟ್‌ನಿಂದ ಮನೆಗೆ ಕರೆತಂದಾಗ `Welcome, Bangalore Ajji' ಅಂತ ಒಂದು ದೊಡ್ಡ ಸೈನ್ ಮಾಡಿ ಗೋಡೆಯ ಮೇಲೆ ನೇತುಹಾಕಿದ್ದೆ, ಮನೆಯ ಒಳಗೆ ಕಾಲಿಟ್ಟ ತಕ್ಷಣ ಅವರಿಗೆ ಕಾಣುವ ಹಾಗೆ! ಅವರು ನಕ್ಕು ನನ್ನನ್ನು ತಬ್ಬಿಕೊಂಡು ಹೇಳಿದ್ದರು 'ನಾನು ಬೆಂಗಳೂರು ಬಿಟ್ಟು, ನನ್ನ ಪುಟಾಣಿ ಜೊತೆ ಇರೋಕೆ ಸ್ಯಾನ್ ಹೊಸೇಗೆ ಬಂದೇ ಬಿಟ್ಟೆನಲ್ಲಾ! ಇನ್ನು ಹೇಗೆ ಬೆಂಗಳೂರು ಅಜ್ಜಿ?' ಆದರೂ ನಾನು ಅವರನ್ನು ಬೆಂಗಳೂರು ಅಜ್ಜಿ ಎಂದೇ ಕರೆಯುತ್ತಿದ್ದೆ. ಅದು ಏನೋ ನೂತನವಾಗಿ ವಿಶೇಷವಾಗಿ ಅನಿಸುತ್ತಿತ್ತು!

ಅಂದಿನಿಂದ ಅಜ್ಜಿ ನನ್ನ ಬೆಸ್ಟ್ ಫ್ರೆಂಡ್ ಆಗಿಬಿಟ್ಟರು. ಅದುವರೆಗೂ ನಾನೊಬ್ಬಳೇ ಕಲ್ಪನೆಯ ಸ್ನೇಹಿತರೊಡನೆ (ಇಮಾಜಿನೆರಿ ಫ್ರೆಂಡ್ಸ್) ಆಟ ಆಡುತ್ತಿದ್ದ ನನಗೆ, ನನ್ನ ಜೊತೆ ನಗುವ, ನಡೆದಾಡುವ, ಮಾತಾಡುವ, ಹಾಡುವ, ಕುಣಿಯುವ ಅಜ್ಜಿ ಪರಮಪ್ರಿಯರಾದರು. ಅವರು ನನ್ನ ಜೊತೆಗೆ ತಾವೂ ಮಗುವಾಗಿ ಬಿಡುತ್ತಿದ್ದರು. ನನ್ನ ಜೊತೆ ಪುಟ್ಟ ಪುಟ್ಟ ಟೀಸೆಟ್ ಇಟ್ಟುಕೊಂಡು ಟೀಪಾರ್ಟಿ ಆಡುತ್ತಿದ್ದರು. ಅವರು ಬಂದಿದ್ದು, ನನ್ನ ಪ್ರೀತಿಪಾತ್ರವಾದ ಇಮಾಜಿನರಿ ಫ್ರೆಂಡ್ಗೆ ಜೀವ ಬಂದಂತೆ ಆಗಿತ್ತು. ಅದುವರೆಗೆ ನನ್ನನ್ನು ಕಾಡಿ ತಿನ್ನುತ್ತಿದ್ದ ಒಂಟಿತನ, ಬೇಸರ ಈಗ ಸಂಪೂರ್ಣವಾಗಿ ದೂರವಾಗಿತ್ತು. ನನ್ನ ಜೀವನವೇ ಬದಲಾಗಿತ್ತು.

ನಾನು ಮಲಗುವ ಮುನ್ನ ಅಜ್ಜಿ ನನಗೆ ಕಥೆ ಹೇಳಿ ಮಲಗಿಸುತ್ತಿದ್ದರು. ರಾಮಾಯಣ, ಮಹಾಭಾರತ, ರಾಜರಾಣಿಯರ ಕಥೆ, ಹೀಗೆ ದಿನಕ್ಕೊಂದು ಕಥೆ. ಮನೆಯ ಹತ್ತಿರವೇ ಇದ್ದ ಲೈಬ್ರರಿಗೂ ಅಜ್ಜಿ ನನ್ನನ್ನು ಕರೆದೊಯ್ಯುತ್ತಿದ್ದರು. ಓದುವ ಹವ್ಯಾಸವಿದ್ದ ಅಜ್ಜಿಯಿಂದ ಪುಸ್ತಕ ಓದುವ ಹುಚ್ಚು ನನಗೂ ಅಂಟಿತು. ನನ್ನ ಕಲ್ಪನಾಶಕ್ತಿಗೆ ನೀರೆರೆಯಿತು.

ಅಲ್ಲೇ ಇದ್ದ ಪಾರ್ಕ್ ಬೆಂಚ್ ಮೇಲೆ ಕುಳಿತೆ. ನನಗಂತೂ ಅಜ್ಜಿ ಅಲ್ಲೇ ಇದ್ದಾರೇನೋ ಅನ್ನಿಸಿಬಿಟ್ಟಿತು. ಅಲ್ಲಿಯ ನೆನಪುಗಳು ಅಷ್ಟು ಹಸಿರಾಗಿದ್ದವು. ಈ ಬೆಂಚ್ ಮೇಲೆ ಅಜ್ಜಿಯ ಜೊತೆ ನಿಕೋಲ್ ನಿಶಿಮೊಟೊ ಅಮ್ಮಾನೂ ಕುಳಿತು ಮಾತನಾಡುತ್ತಿದ್ದರು. ನಿಕೋಲ್ ಅಮ್ಮ ಜಪಾನ್ ಮೂಲದವರು. ಟೋಕಿಯೋದಿಂದ ಬಂದವರಂತೆ. ಅವರು ಹೊರಗೆ ಕೆಲಸ ಮಾಡುತ್ತಿರಲಿಲ್ಲ. ನಿಕೋಲ್ ಜೊತೆ ಮನೆಯಲ್ಲೇ ಇರುತ್ತಿದ್ದರು. ನಾನು, ನಿಕೋಲ್ ಮರಳಿನ ಮನೆ ಕಟ್ಟುವುದರಲ್ಲಿ ನಿರತರಾಗಿರುತ್ತಿದ್ದಾಗ ಅವರು ಮತ್ತು ಅಜ್ಜಿ ತಾವು ಬಿಟ್ಟುಬಂದ ದೇಶ ಎಷ್ಟು ಚೆನ್ನಾಗಿತ್ತು. ಅಲ್ಲಿ ಎಷ್ಟು ಸಮಾಧಾನ ಇತ್ತು, ಅಮೇರಿಕಾದ ಜೀವನ ಎಷ್ಟು ಯಾಂತ್ರಿಕ ಎಂದೆಲ್ಲ ಮಾತನಾಡುತ್ತಿದ್ದರು. ನಮ್ಮ ಮಾತು, ಕಿಲಕಿಲ ನಗುವಿನ ಮಧ್ಯದಲ್ಲಿ ಅವರ ಮಾತು ನನ್ನ

ಪುಟ್ಟ ಕಿವಿಗಳಿಗೆ ಬಿದ್ದರೂ, ಅದರ ಪೂರ್ತಿ ಅರ್ಥವನ್ನು ಗ್ರಹಿಸುವ ಶಕ್ತಿ ನನಗೆ ಆಗ ಇರಲಿಲ್ಲ.

ಅಜ್ಜಿ ಇಲ್ಲಿಗೆ ಬಂದಿದ್ದಾದರೂ ಏಕೆ? ಅಮ್ಮನಿಗಾಗಿ, ನನಗಾಗಿ ಅಲ್ಲವೇ? ನಿಜ, ತಾತ ಇಲ್ಲದೆ ಅವರು ಒಬ್ಬಂಟಿಯಾಗಿದ್ದರು. ಆದರೂ ಆಗ ಇನ್ನೂ ಅರವತ್ತೂ ತುಂಬದ ಅಜ್ಜಿಗೆ ಜೀವನದಲ್ಲಿ ಬೇರೆ ಇನ್ನೇನೂ ಆಸೆ ಆಕಾಂಕ್ಷೆಗಳಿರಲಿಲ್ಲವೇ? ಅವರ ಅಕ್ಕತಂಗಿಯರು, ಅಣ್ಣತಮ್ಮಂದಿರಿದ್ದರಲ್ಲಾ, ಅವರ ಜೊತೆ ಹಾಯಾಗಿ ಕಾಲ ಕಳೆಯಬಹುದಾಗಿತ್ತು. ಅವರಿಗೆ ಸಮಾಜಸೇವೆ ಮಾಡಲು ಬಲು ಆಸಕ್ತಿ. ಅವರ ಮಹಿಳಾ ಸಮಾಜದಲ್ಲಿ ಅವರು ತುಂಬಾ ಆಕ್ಟಿವ್ ಆಗಿ ಕೆಲಸ ಮಾಡುತ್ತಿದ್ದರು. ಅಜ್ಜಿ ಚೆನ್ನಾಗಿ ಹಾಡುತ್ತಿದ್ದರು ಕೂಡ. ಸಮಾಜದಲ್ಲಿ ಅವರು ಸಂಗೀತ ಪಾಠ ಹೇಳಿಕೊಡುತ್ತಿದ್ದರು. ಅಜ್ಜಿಗೆ ಪಗಡೆ ಆಟ ಆಡುವ ಹುಚ್ಚು. ಅಕ್ಕತಂಗಿಯರು ಸಮಯ ದೊರೆತಾಗಲೆಲ್ಲ ಪಗಡೆ ಆಟ ಆಡುತ್ತಿದ್ದರು. ಹೀಗೆ ಬೆಂಗಳೂರಿನಲ್ಲಿ, ಅನೇಕ ಚಟುವಟಿಕೆಗಳಲ್ಲಿ ನಿರತರಾಗಿದ್ದ ಅಜ್ಜಿ ಸಾವಿರಾರು ಮೈಲಿ ದೂರದ ಈ ಅಪರಿಚಿತ ಪರಿಸರದಲ್ಲಿ, ಅಮೇರಿಕಾದಲ್ಲಿ ಈಗ ಒಬ್ಬಂಟಿ. ಒಬ್ಬರೊಡನೆ ಮಾತಿಲ್ಲ ಕತೆ ಇಲ್ಲ. ನಮ್ಮ ಮನೆಯ ನಾಲ್ಕು ಗೋಡೆಗಳ ನಡುವೆ ಅವರ ಜೀವನ.

ಆಗ ಇನ್ನೂ ಟೆಕ್ನಾಲಜಿ ಇಷ್ಟೊಂದು ಮುಂದುವರೆದಿರಲಿಲ್ಲ. ಸುಲಭವಾಗಿ ಬೆಂಗಳೂರಿಗೆ ಫೋನ್ ಮಾಡುವಂತಿರಲಿಲ್ಲ. ಟಿ.ವಿ.ಯಲ್ಲಿ ಇಂಡಿಯನ್ ಪ್ರೋಗ್ರಾಮ್‌ಗಳು ಬರುತ್ತಿರಲಿಲ್ಲ. ಬಂದರೂ ವಾರಕ್ಕೆ ಒಂದೋ, ಎರಡೋ ಘಂಟೆಗಳು ಮಾತ್ರ. ಪಾಪ, ಅಜ್ಜಿ ಅದಕ್ಕಾಗಿ ಕಾದು ಕುಳಿತಿರುತ್ತಿದ್ದರು. ಚಿಕ್ಕವಳಾಗಿದ್ದ ನನಗೋ, ಆ ಸಮಯದಲ್ಲಿ ನನ್ನ ವಾರಾಂತ್ಯದ ಕಾರ್ಟೂನ್‌ಗಳನ್ನು ನೋಡಲು ಆಗುವುದಿಲ್ಲವಲ್ಲ ಅಂತ ಬೇಸರ!

ಅಜ್ಜಿಯನ್ನು ಅಮ್ಮ, ಅಪ್ಪ ತುಂಬ ಪ್ರೀತಿಯಿಂದ, ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ತಾವು ಹೋದ ಕಡೆಯೆಲ್ಲ ಅವರನ್ನೂ ಕರೆದುಕೊಂಡು ಹೋಗುತ್ತಿದ್ದರು. ಅವರು ಮತ್ತು ಅವರ ಸ್ನೇಹಿತರೆಲ್ಲ ಅಜ್ಜಿಯನ್ನು ಪ್ರೀತಿಯಿಂದ, ಗೌರವದಿಂದ ನೋಡಿಕೊಳ್ಳುತ್ತಿದ್ದರು. ಆದರೂ ಈ ಅಪರಿಚಿತ ದೇಶದಲ್ಲಿ, ಅಜ್ಜಿಗೆ ನಮ್ಮ ಮನೆಯಲ್ಲಿ ಬೇಸರವಾಗುತ್ತಿತ್ತು ಎಂದು ನನಗೆ ಗೊತ್ತಿತ್ತು. ಕಾರು ನಡೆಸಲು ಗೊತ್ತಿಲ್ಲದ ಅಜ್ಜಿಗೆ, ತಾವಾಗೇ ಎಲ್ಲೂ ಹೋಗಲು ಸಾಧ್ಯವಿರಲಿಲ್ಲ. ಅಜ್ಜಿಗೆ ತನ್ನದೇ ಆದ ಸ್ನೇಹಿತರಿರಲಿಲ್ಲ. ಅಪ್ಪ, ಅಮ್ಮನ ಸ್ನೇಹಿತರೇ ಅವರ ಸ್ನೇಹಿತರು. ಅವರೆಲ್ಲ ವಯಸ್ಸಿನಲ್ಲಿ ಅಜ್ಜಿಗಿಂತ ಚಿಕ್ಕವರಾದ್ದರಿಂದ, ಅಜ್ಜಿಗೆ ಬೇಕಾಗಿದ್ದ ಸ್ನೇಹ, ಬಾಂಧವ್ಯ ಸಿಗುತ್ತಿರಲಿಲ್ಲ. ಒಮ್ಮೊಮ್ಮೆ ರಾತ್ರಿ, ಅಪ್ಪ ಅಮ್ಮ ಕೆಲಸ ಎಲ್ಲ ಮುಗಿಸಿ ಟಿ. ವಿ. ನೋಡುತ್ತಾ ಕುಳಿತಾಗ, ನಾನು ನನ್ನ ರೂಮಿನಲ್ಲಿ ಹೋಂವರ್ಕ್ ಮಾಡುತ್ತಿದ್ದಾಗ, ಅವರ ರೂಮಿನಲ್ಲಿ ಬಾಗಿಲು ಹಾಕಿಕೊಂಡು ಮಲಗಿರುತ್ತಿದ್ದ ಅಜ್ಜಿ ಅಳುತ್ತಿದ್ದುದೂ ನನಗೆ ಕೇಳುತ್ತಿತ್ತು. ಈ ಒಂಟಿತನ ಹೋಗಲಾಡಿಸುವುದು ಹೇಗೆ? ನನ್ನ ಆಗಿನ ಚಿಕ್ಕ ವಯಸ್ಸು,

ಮುಗ್ಧ ಮನಸ್ಸು ಅವರಿಗೆ ಫ್ರೆಂಡ್ ಹುಡುಕಿಕೊಳ್ಳಲು ಹಾಕಿದ್ದ ಪ್ಲಾನ್ ಯೋಚಿಸಿ ಈಗ ನಗು ಬರುತ್ತೆ!

ನನ್ನೊಳು ನಾನೇ ನಗುತ್ತಾ ಪಾರ್ಕಿನ ಇನ್ನೊಂದು ಬದಿಯಲ್ಲಿದ್ದ ಬಸ್ ಸ್ಟಾಪ್ ಬಳಿ ಬಂದೆ. ಅಲ್ಲೇ ನಮ್ಮ ಸ್ಕೂಲ್ ಬಸ್ ಬರ್ತಾ ಇದ್ದಿದ್ದು. ನಾನು ಮೊದಲನೇ ತರಗತಿಯಲ್ಲಿದ್ದೆ. ಒಂದು ದಿನ, ಸ್ಕೂಲಿನಲ್ಲಿ ಎಲ್ಲ ಮಕ್ಕಳೂ ಕವಿತಾ ಎನ್ನುವ ನನ್ನ ಹೆಸರನ್ನು ಕತ್ತರಿಸಿ 'ಕೌ, ಹೋಲಿ ಕೌ, ಹೋಲಿ ಕೌ' ಅಂತ ರೇಗಿಸುತ್ತಿದ್ದರು. ನನಗೆ ತುಂಬ ಬೇಸರವಾಗಿ, ಅಳು ಬರುತ್ತಿತ್ತು. ಮನೆಗೆ ಬರುವಾಗ ಬಸ್ಸಿನಲ್ಲಿ ನನ್ನ ಪಕ್ಕ ಕುಳಿತಿದ್ದ ಚಾರ್ಲಿ, 'ಯಾಕೆ ಅಳ್ತಾ ಇದ್ದೀಯ?' ಅಂತ ಕೇಳಿದ. 'ನನ್ನ ಹೆಸರು ಕೌ ಅಲ್ಲ' ಅಂತ ಬಿಕ್ಕಿದೆ. ಅವನು ತಬ್ಬಿಬ್ಬಾಗಿ 'ಹ್ಞ?... ನನ್ನ ಹೆಸರು ಕೌ, ಚಾರ್ಲಿ ಕೌ' ಅಂದ. ನನ್ನ ಅಳುವೆಲ್ಲ ಮಾಯವಾಗಿ ತುಂಬ ನಗು ಬಂತು. ನಿಜವಾಗಿಯೂ ಅವನ ಲಾಸ್ಟ್ ನೇಮ್ ಕೌ (Cao) ಆಗಿತ್ತು! ಬಸ್ಸಿನಿಂದ ಇಳಿದಾಗ, ನನ್ನ ಬರುವನ್ನೇ ಕಾಯುತ್ತಿದ್ದ ಅಜ್ಜಿಗೆ ನನ್ನ ತಡೆಯಲಾರದ ನಗುವಿನ ಮಧ್ಯೆ ಹೇಳಿದೆ 'ಅಜ್ಜಿ, ಇವನು ಚಾರ್ಲಿ, ನನ್ನ ಸ್ನೇಹಿತ. ನಾವಿಬ್ಬರೂ ಕೌಗಳು' ನಮ್ಮ ಹೆಸರಿನ ಕಥೆಯನ್ನು ಕೇಳಿ ಅಜ್ಜಿಯೂ ನಕ್ಕುಬಿಟ್ಟರು. ಅಂದಿನಿಂದ ಅವರೂ ನಮ್ಮಿಬ್ಬರನ್ನು 'ಹೋಲಿ ಕೌಸ್' ಎಂದು ಕರೆಯಲು ಪ್ರಾರಂಭಿಸಿದರು!

ನಮ್ಮ ಬೀದಿಯಲ್ಲೇ ಇದ್ದ ಚಾರ್ಲಿ ನನ್ನ ಮೆಚ್ಚಿನ ಸ್ನೇಹಿತನಾದ. ನಾನು, ಅವನು ಸ್ಕೂಲಿನಲ್ಲಿ ಸದಾ ಜೊತೆಯಲ್ಲಿ ಇರುತ್ತಿದ್ದೆವು. ಇಬ್ಬರೂ ಒಟ್ಟಿಗೆ ಒಂದೇ ಬಸ್ಸಿನಲ್ಲಿ ಮನೆಗೆ ಬರುತ್ತಿದ್ದೆವು. ಅವನೂ ತುಂಬ ಬುದ್ಧಿವಂತ. ನಮ್ಮಿಬ್ಬರಿಗೂ ಸದಾ 'ಎ' ಬರುತ್ತಿತ್ತು. ಚಾರ್ಲಿ ಕೌ ತಾತ ವಿಯೆಟ್ನಾಮ್‌ನವರು. ನನ್ನ ಪ್ಲಾನ್ ಏನೆಂದರೆ ನನಗೆ ಚಾರ್ಲಿ ಎಷ್ಟು ಇಷ್ಟವಾದವನು ಅಂದಮೇಲೆ ಅವನ ತಾತ ಕೂಡ ಇಷ್ಟೇ ಒಳ್ಳೆಯವನಿರಬಹುದು. ಅವರು ಮತ್ತು ನನ್ನ ಅಜ್ಜಿ ಸ್ನೇಹಿತರಾಗಲಿ, ಒಬ್ಬರನ್ನೊಬ್ಬರು ಇಷ್ಟಪಡಲಿ ಎಂದು. ಒಂಥರಾ 'ಬ್ರೇಡಿ ಬಂಚ್' ಕಥೆ ಇದ್ದಹಾಗೆ. ಆಗ ಅವರಿಗೂ ಚೆನ್ನಾಗಿರುತ್ತೆ, ನನಗೆ ಮತ್ತು ಚಾರ್ಲಿಗೂ ಚೆನ್ನಾಗಿರುತ್ತೆ. ಒಟ್ಟಿಗೆ ಹಾಯಾಗಿ ಆಟ ಆಡುತ್ತಾ ಕಾಲ ಕಳೀಬಹುದು ಅಂತ! ಆದರೆ ಆ ತಾತನನ್ನು ಒಂದೆರಡು ಬಾರಿ ಬಸ್ ಸ್ಟಾಪಿನಲ್ಲಿ ನೋಡಿದ ಮೇಲೆ ಗೊತ್ತಾಯಿತು. ಅವರು ಮಾತಾಡುವ ಇಂಗ್ಲೀಷ್ ಅಜ್ಜಿಗಿರಲಿ, ನನಗೇ ಸರಿಯಾಗಿ ಅರ್ಥ ಆಗ್ತಾ ಇರಲಿಲ್ಲ. ಇನ್ನು ಅವರೊಡನೆ ವಿಶೇಷವಾದ ಸ್ನೇಹ ಎಲ್ಲಿಂದ ಬರಬೇಕು?! ನನ್ನ ಪ್ಲಾನ್ ಅಲ್ಲಿಗೇ ಸಮಾಪ್ತಿಯಾಯಿತು!

ನನ್ನ ಅಜ್ಜಿಯ ಇಂಗ್ಲೀಷ್ ಜ್ಞಾನ ತುಂಬ ಚೆನ್ನಾಗಿತ್ತು. ಅಜ್ಜಿ ಏನು ಕಾಲೇಜಿಗೆ ಹೋಗಿರಲಿಲ್ಲವಂತೆ. ಆದರೂ ಚೆನ್ನಾಗಿ ಓದಿ, ಬರೆದು ಮಾತನಾಡುತ್ತಿದ್ದರು. ಇಂಗ್ಲೀಷ್ ಮಾತಾಡೋದು ಅವರಿಗೆ ಒಂದು ರೀತಿಯಲ್ಲಿ ಹೆಚ್ಚುಗಾರಿಕೆ. ಬಂದ ಹೊಸದರಲ್ಲಿ ನನ್ನ ಜೊತೆಯಲ್ಲೂ ಅವರು ಇಂಗ್ಲೀಷಲ್ಲಿ ಮಾತನಾಡತೊಡಗಿದಾಗ, ಅಮ್ಮ ಹೇಳಿದ್ದಳು

'ಅಮ್ಮ, ನೀನು ಬಂದಮೇಲಾದರೂ ಇವಳು ಕನ್ನಡ ಕಲೀತಾಳೆ ಅಂತ ಅಂದುಕೊಂಡರೆ, ನೀನೂ ಇಂಗ್ಲೀಷಲ್ಲಿ ಮಾತಾಡ್ತಾ ಇದ್ದೀಯಲ್ಲ'. 'ಸುಮ್ಮನಿರೆ, ಅವಳ ಜೊತೆ ಮಾತಾಡಿದರೆ, ನನ್ನ ಇಂಗ್ಲೀಷ್ ಉತ್ತಮ ಆಗುತ್ತೆ' ಎಂದು ಅಜ್ಜಿ ಮಾರುತ್ತರ ಕೊಟ್ಟಿದ್ದರು. ಒಟ್ಟಿನಲ್ಲಿ, ವರುಷಗಳು ಉರುಳಿದಾಗ, ಅಜ್ಜಿಯಿಂದ ನನ್ನ ಕನ್ನಡ ಮತ್ತು ನನ್ನಿಂದ ಅವರ ಇಂಗ್ಲೀಷ್ ಉತ್ತಮಗೊಂಡಿತ್ತು.

ಅಜ್ಜಿಗೆ ಪೀಜ್ಝಾ ತುಂಬ ಇಷ್ಟ. ಎಷ್ಟು ಇಷ್ಟ ಅಂದರೆ, ಅವರ ಹುಟ್ಟಿದ ಹಬ್ಬಕ್ಕೆ ಎಲ್ಲಿಗೆ ಊಟಕ್ಕೆ ಹೋಗೋಣ ಅಂದರೆ, ಪೀಜ್ಝಾ ಹಟ್ ಎಂದು ಉತ್ತರ ಬರುತ್ತಿತ್ತು! ಮನೆಯಲ್ಲೇ ಪೀಜ್ಝಾ ಕೂಡ ಮಾಡುವುದನ್ನು ಕಲಿತಿದ್ದರು ಅಜ್ಜಿ. ಅಷ್ಟೇ ಆಸಕ್ತಿಯಿಂದ ನನಗೆ ಕರ್ನಾಟಕದ ಅಡುಗೆಗಳನ್ನೂ ಹೇಳಿಕೊಟ್ಟಿದ್ದರು. ನಾನು, ಅವರು ಸೇರಿ ಗಣೇಶನ ಹಬ್ಬಕ್ಕೆ ಕರಿಗಡುಬು ಮಾಡುತ್ತಿದ್ದೆವು. ಒಮ್ಮೊಮ್ಮೆ ಉಪ್ಪಿಟ್ಟೋ, ಅವಲಕ್ಕಿ ಒಗ್ಗರಣೆಯನ್ನೋ ನಾನು ಮಾಡಿದರೆ, ಅಜ್ಜಿಗೆ ತುಂಬ ಖುಷಿ. 'ನೋಡಿದೆಯಾ, ಎಷ್ಟು ಚೆನ್ನಾಗಿ ಮಾಡ್ತಾಳೆ' ಅಂತ ಹೆಮ್ಮೆಯಿಂದ ಅಮ್ಮನ ಕೈಲಿ ಹೇಳೋರು! ಈ ರೀತಿ ಅಡುಗೆ ಮಾಡುವಾಗಲೇ, ಅವರು ನನಗೆ ಅವರ ಜೀವನದಲ್ಲಿ ನಡೆದ ಘಟನೆಗಳನ್ನು ಕಥೆಗಳಂತೆ ವಿವರವಾಗಿ ಹೇಳುತ್ತಿದ್ದರು. 'ಸೌದೆ ಒಲೆಯ ಮೇಲೆ ಕೊಳದಪ್ಪಲೆ ತುಂಬ ಸಾರು, ಹುಳಿ ಮಾಡುತ್ತಿದ್ದ ನಾನು, ಈಗ ಅಮೇರಿಕದ ಗ್ಯಾಸ್ ಸ್ಟೌ ಮೇಲೆ ಅಡುಗೆ ಮಾಡೋದು, ಮೈಕ್ರೋವೇವ್ ಉಪಯೋಗಿಸೋದು ಎಲ್ಲ ಕಲಿತುಬಿಟ್ಟಿದ್ದೀನಿ ನೋಡು' ಅಂತ ನಗೋರು. ಆದರೂ 80 ವರ್ಷದ ಅವರ ಜೀವನದಲ್ಲಿ ಎಷ್ಟೊಂದು ಬದಲಾವಣೆ!

ಅವರ 80 ವರ್ಷದ ಹುಟ್ಟಿದ ಹಬ್ಬದಲ್ಲೇ ನಾನು ಅವರನ್ನು ಕಡೆಯ ಬಾರಿ ನೋಡಿದ್ದು. ನನ್ನ ಭರತನಾಟ್ಯಂ ರಂಗಪ್ರವೇಶಕ್ಕೆ ಅಮ್ಮ ಅವರಿಗೆ ಹಸಿರು ಮೈಗೆ ಹಳದಿ ಅಂಚು ಇರುವ ಸೀರೆಯನ್ನು ಕೊಟ್ಟಿದ್ದಳು. ಅದೇ ಸೀರೆಯನ್ನೇ ಅವರ 80ನೇ ಹುಟ್ಟಿದ ಹಬ್ಬದಂದೂ ಉಟ್ಕೊಂಡು ಎಷ್ಟು ಕಳೆಕಳೆಯಾಗಿದ್ದರು. ನನ್ನ ಡ್ಯಾನ್ಸ್ ಅಂದರೆ ಅವರಿಗೆ ಎಷ್ಟೊಂದು ಆಸಕ್ತಿ. ನಾನು 9 ವರ್ಷದವಳು ಭರತನಾಟ್ಯವನ್ನು ಕಲಿಯಲು ಪ್ರಾರಂಭಿಸಿದಾಗ, ಆ ತರಗತಿಗಳು ಬುಧವಾರ ನಡೆಯುತ್ತಿದ್ದವು. ದೂರದ ಡ್ಯಾನ್ಸ್ ಟೀಚರ್ ಮನೆಗೆ ಹೇಗೆ ಹೋಗೋದು, ಯಾರು ಕರ್ಕೊಂಡು ಹೋಗ್ತಾರೆ ಅಂತ ಅಮ್ಮ ಯೋಚನೆ ಮಾಡ್ತಾ ಇದ್ದಾಗ, ಅಜ್ಜೀನೇ ಭರವಸೆ ಕೊಟ್ಟಿದ್ದರು 'ಏನು ಯೋಚನೆ ಮಾಡಬೇಡ. ನಾನು ಅವಳನ್ನು ಬಸ್ಸಿನಲ್ಲಿ ಕರೆದುಕೊಂಡು ಹೋಗಿ ಬರ್ತೀನಿ' ಎಂದಿದ್ದರು. ಅಂದು ಶುರುವಾದ ನಮ್ಮ ಬಸ್ಸಿನ ಪ್ರಯಾಣ, ನಾನು ರಂಗಪ್ರವೇಶ ಮಾಡುವ ತನಕ ನಡೆಯಿತು. ಪಾಪ, ಎಷ್ಟೇ ಸುಸ್ತಾಗಿದ್ದರೂ, ಸ್ಕೂಲಿಂದ ನಾನು ಬಂದ ಮೇಲೆ ನನಗೆ ಏನಾದರೂ ತಿಂಡಿಕೊಟ್ಟು, ಬಸ್ಸಿನಲ್ಲಿ ಟೀಚರ್ ಮನೆಗೆ ಕರೆದೊಯ್ದು, ಅಲ್ಲಿ ಪಾಠ ಮುಗಿಯುವ ತನಕ ಕಾಯ್ದು ಕುಳಿತು, ಮತ್ತೆ ಬಸ್ಸಿನಲ್ಲಿ ವಾಪಸ್ ಕರೆದುಕೊಂಡು ಬರುತ್ತಿದ್ದರು. ಎಂಟು ವರ್ಷಗಳ ನಂತರ, ನಾನು ರಂಗಪ್ರವೇಶ ಮಾಡ್ತೀನಿ ಅಂತ

ನಿರ್ಧರಿಸಿದಾಗ ಅವರಿಗೆ ಹೆಮ್ಮೆಯೋ ಹೆಮ್ಮೆ! ಅವರ ಅಕ್ಕತಂಗಿಯರಿಗೆಲ್ಲ ಫೋನ್ ಮಾಡಿ, ನೀವು ಬರಬೇಕು ಈ ಕಾರ್ಯಕ್ರಮಕ್ಕೆ. ಅಮೇರಿಕದಲ್ಲಿ ಹುಟ್ಟಿ ಬೆಳೆದ ಹುಡುಗಿಯ ರಂಗಪ್ರವೇಶ ಎಂದರೆ ವಿಶೇಷವಲ್ಲವೇ, ಖಂಡಿತಾ ಬರಬೇಕು ಅಂತ ಒತ್ತಾಯ ಮಾಡಿದ್ದರು. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಎಲ್ಲರಿಗಿಂತ ಸಡಗರ ಪಟ್ಟವರು ನನ್ನ ಅಜ್ಜಿ.

ಅದಾದ ನಂತರ, ನಾನು ಕಾಲೇಜಿಗೆ ಲಾಸ್ ಏಂಜಲೀಸ್‌ಗೆ ಹೋದೆ. ಅಲ್ಲೇ ಮಾಸ್ಟರ್ಸ್ ಮಾಡಿ ಮುಗಿಸುವ ಹೊತ್ತಿಗೆ 6–7 ವರ್ಷ ಕಳೆದಿತ್ತು. ನಾನು ಮಾಸ್ಟರ್ಸ್ ಮಾಡ್ತಾ ಇದ್ದಾಗ, ಅಮೇರಿಕನ್ ಮೂಲದವನಾದ ಜಸ್ಟಿನ್ ಪರಿಚಯವಾಯಿತು. ನಾವು ಮದುವೆಯಾಗಲು ತೀರ್ಮಾನ ಮಾಡಿದಾಗ, ಅಪ್ಪ ಅಮ್ಮನಿಗೆ ಈ ವಿಷಯ ತಿಳಿಸುವುದು ಹೇಗೆ ಅನ್ನುವುದು ದೊಡ್ಡ ಪ್ರಶ್ನೆಯಾಗಿತ್ತು. ಅವರು ಎಷ್ಟೇ ಉದಾರ ಮನಸ್ಸಿನವರಾದರೂ, ಅವರ ಏಕಮಾತ್ರ ಪುತ್ರಿ ಭಾರತೀಯನಲ್ಲದವನನ್ನು ಮದುವೆಯಾಗುವಳು ಎಂದರೆ, ಅವರಿಗೆ ಒಪ್ಪಿಗೆಯಾಗುತ್ತದೆಯೇ? ಅಜ್ಜಿ ಏನನ್ನುವರೋ? ಅಜ್ಜಿಯೂ ಅಮೇರಿಕಾಗೆ ಬಂದು ಈಗ 17–18 ವರ್ಷಗಳೇ ಕಳೆದಿತ್ತು. ಇಲ್ಲಿಯ ರೀತಿನೀತಿಗೆ ಹೊಂದಿಕೊಂಡಿದ್ದರು. ಆದರೂ ಅಜ್ಜಿ ಎಂದರೆ ನನಗೆ ಭಾರತದ, ಭಾರತದ ಸಂಸ್ಕೃತಿ, ಪರಂಪರೆ, ಜನಜೀವನದ ಪ್ರತೀಕ. ಅವರು ಹೇಳಿದ್ದ ಕಥೆಗಳಿಂದ, ಅವರ ಜೀವನದ ಅನುಭವಗಳ ಕಥನದಿಂದ ಇದು ನನಗೆ ತಿಳಿದಿತ್ತು. ಅಂತಹ ಅಜ್ಜಿಗೆ ಒಬ್ಬ ಬಿಳಿಯ ಹುಡುಗನನ್ನು ಮೊಮ್ಮಗಳು ಮದುವೆಯಾಗುವುದು ಸರಿ ಕಾಣುವುದೇ? ಈ ಎಲ್ಲ ಗೊಂದಲಗಳಿದ್ದರೂ, ಧೈರ್ಯಮಾಡಿ ಜಸ್ಟಿನ್ ಮತ್ತು ನಾನು ಸ್ಯಾನ್‌ಜೋಸೆಗೆ ನಮ್ಮ ಮನೆಗೆ ಬಂದೆವು. ನನ್ನ ಸ್ನೇಹಿತ ಎಂದು ಮಾತ್ರ ಪರಿಚಯ ಮಾಡಿಕೊಟ್ಟಿದ್ದರೂ, ಭೇಟಿ ಮಾಡಿದ ಹತ್ತೇ ನಿಮಿಷದಲ್ಲಿ, ಅಜ್ಜಿಗೆ ಹೇಗೋ ಸುಳಿವು ಗೊತ್ತಾಯಿತು. ಅಪ್ಪ ಅಮ್ಮನ ಜೊತೆ ಜಸ್ಟಿನ್ ಮಾತನಾಡುತ್ತಿದ್ದಾಗ, ಅಜ್ಜಿ ಮೆಲ್ಲಗೆ ಬಂದು ನನ್ನ ಪಕ್ಕ ಕುಳಿತು, ಪಿಸುಮಾತಿನಲ್ಲಿ ಹೇಳಿದ್ದರು 'ಹೂಂ... ನನಗೆ ಎಲ್ಲ ಗೊತ್ತಾಯಿತಮ್ಮಾ... ಸದ್ಯದಲ್ಲೇ ನನಗೆ ಒಂದು ಭಾರಿ ಮದುವೆ ಊಟ ಸಿಗುತ್ತೆ!' ಆಮೇಲೆ ನನಗೇ ಅನ್ನಿಸಿತ್ತು ನಾನು ಯಾಕೆ ಈ ವಿಷಯ ಹೇಳಲು ಅಷ್ಟೊಂದು ಯೋಚನೆ ಮಾಡ್ತಾ ಇದ್ದೆ ಅಂತ!

ಇಂತಹ ಅಜ್ಜಿ ಈಗ ಇಲ್ಲ. ಹೊಟ್ಟೆಯಲ್ಲಿದ್ದ ಮಗು ಒಮ್ಮೆ ಹೊರಳಿ, ನನ್ನನ್ನು ಅಜ್ಜಿಯ ಧ್ಯಾನದಿಂದ ಹೊರಗೆ ಎಳೆಯಿತು. ಹೊಟ್ಟೆಯ ಮೇಲೆ ಕೈಯಾಡಿಸಿದೆ. ಈ ನನ್ನ ಮಗು ನನ್ನ ಅಜ್ಜಿಯನ್ನು ನೋಡಲೇ ಇಲ್ಲ. ಅಜ್ಜಿ ಮಗುವನ್ನು ಇನ್ನೆಷ್ಟು ಮುದ್ದಾಡುತ್ತಿದ್ದರೋ, ಎಷ್ಟು ಆಟ ಆಡಿಸುತ್ತಿದ್ದರೋ... ಎಷ್ಟು ಹಾಡು ಹೇಳಿ, ಕಥೆ ಹೇಳಿ ಮಲಗಿಸುತ್ತಿದ್ದರೋ...

ಅಮ್ಮ ಕಾಯ್ತಾ ಇರ್ತಾರೆ ಎಂದುಕೊಂಡು ಮನೆಯ ಕಡೆ ತಿರುಗಿದೆ. ತಲೆಯಲ್ಲಿ ಇನ್ನೂ ಅಜ್ಜಿಯ ನೆನಪು ಗುಂಯ್‌ಗುಡುತ್ತಿತ್ತು. ಎಷ್ಟು ಬೇಗ ದಿನಗಳು ಕಳೆದುಹೋದವು,

ಎಷ್ಟೊಂದು ನೆನಪುಗಳು. ಎಷ್ಟೊಂದು ಸುಂದರ ನೆನಪುಗಳನ್ನು ಹಿಂದೆ ಉಳಿಸಿ ಹೋಗಿದ್ದಾರೆ ಅಜ್ಜಿ! ಎಲ್ಲೋ ಓದಿದ ನೆನಪು 'ಮಗು ಹುಟ್ಟುವಾಗ ಅದು ಅಳುತ್ತಿರುತ್ತದೆ, ಉಳಿದವರು ನಗುತ್ತಿರುತ್ತಾರೆ, ಆದರೆ ಜೀವ ಹೋಗುವಾಗ, ಆ ಮನುಷ್ಯ ನಗುತ್ತಿರುತ್ತಾನೆ, ಉಳಿದವರು ಅಳುತ್ತಿರುತ್ತಾರೆ' ಅಂತ. ಆದರೆ ನನಗೆ ಗೊತ್ತು. ಸದಾ ನಗುತ್ತಿದ್ದ ಅಜ್ಜಿ, ಈಗಲೂ ನಗುತ್ತಿರುತ್ತಾರೆ. ಅವರು ಹಿಂತಿರುಗಿ ಬಾರದಂತೆ ಹೋದರೂ, ನನಗೆ ಈಗ ಅಳು ಬರುತ್ತಿಲ್ಲ. ಅವರ ಸುಂದರ ನೆನಪಿನಲ್ಲಿ ನಾನೂ ನಗುತ್ತಾ ಇದ್ದೀನಿ.

ಮನೆಯ ಬಾಗಿಲು ತಟ್ಟಿದೆ. ಬಾಗಿಲು ತೆರೆದವರು ಅಮ್ಮ. ಅಜ್ಜಿಯ ಹಸಿರು ಸೀರೆಯಲ್ಲಿ! ಅದೇ ಸೀರೆ, ನನ್ನ ರಂಗಪ್ರವೇಶದಲ್ಲಿ ಅಜ್ಜಿ ಉಟ್ಟಿದ್ದ ಸೀರೆ. ಮತ್ತೆ ಅವರ 80ನೇ ಹುಟ್ಟಿದಹಬ್ಬದಂದು ಅವರು ಉಟ್ಟಿದ್ದ ಸೀರೆ. ನೋಡಿ ದಂಗಾಗಿ ಹೋದೆ. ಅಜ್ಜಿಯೇ ಎದುರು ಬಂದು ನಿಂತಂತೆ ಇತ್ತು!

'ಬಂದ್ಯಾ... ಹೋಗಮ್ಮ, ರೆಡಿಯಾಗು. ನಮ್ಮ ಸ್ನೇಹಿತರೆಲ್ಲ ಇನ್ನೇನು ಬಂದೇ ಬಿಡುತ್ತಾರೆ.' ಅಮ್ಮ ಹೇಳಿದಳು. ಅಜ್ಜಿಯ ನೆನಪಿನಲ್ಲಿ ಒಂದು ಸಭೆ. ಅಪ್ಪ, ಅಮ್ಮನ ಸ್ನೇಹಿತರು, ಅವರೇ ಅಜ್ಜಿಯ ಸ್ನೇಹಿತರೂ ಆದದ್ದರಿಂದ, ಎಲ್ಲರೂ ಇಂದು ನಮ್ಮ ಮನೆಗೆ ಬರುತ್ತಿದ್ದರು. ಅಜ್ಜಿಯ ಬಗ್ಗೆ ಮಾತನಾಡಲು, ಅವರ ಜೀವನವನ್ನು ಸೆಲೆಬ್ರೇಟ್ ಮಾಡಲು, ಅವರ ಆತ್ಮಕ್ಕೆ ಶಾಂತಿ ಕೋರಲು.

ಮಹಡಿಯ ಮೇಲೆ ಬಂದು, ಅಜ್ಜಿಯ ರೂಮಿನಲ್ಲಿ ಇಣುಕಿದೆ. ಎಲ್ಲ ಅವರು ಇಟ್ಟಂತೆಯೇ ಇತ್ತು. ಅಜ್ಜಿ ಮೊದಲಿಂದ ತುಂಬ ಅಣಿ, ನಾಜೂಕು. ಅವರ ಕ್ಲಾಸೆಟ್ಟಿನಲ್ಲಿ ಅವರ ಬಟ್ಟೆಗಳೆಲ್ಲಾ ನೀಟಾಗಿತ್ತು. ಬಣ್ಣ ಬಣ್ಣದ ಸೀರೆಗಳನ್ನು ಸಾಲಾಗಿ ಹ್ಯಾಂಗರ್ನಲ್ಲಿ ಹಾಕಿತ್ತು. ಒಂದೇ ರೀತಿ ಮಡಿಸಿದ್ದ ಆ ಎಲ್ಲ ಸೀರೆಗಳ ಸೆರಗಿನ ಅಂಚಿಗೆ ಕಟ್ಟಿದ್ದ ಕುಚ್ಚುಗಳು ಎಲ್ಲಾ ಸಮಾನಾಂತರವಾಗಿ, ಒಂದೇ ಕಡೆ ತಿರುಗಿಕೊಂಡಿದ್ದವು. ಅಜ್ಜಿಯ ಓರಣ ಕಂಡು ನನ್ನ ಮುಖದ ಮೇಲೆ ಸಣ್ಣ ನಗೆ ಮೂಡಿತು. ಆ ಶಿಸ್ತು ನಮಗೇಕೆ ಇಲ್ಲ! ಸೀರೆಗಳ ಮೇಲೆ ಕೈಯಾಡಿಸಿದೆ. ನವಿರಾದ ರೇಷ್ಮೆ ಸೀರೆಗಳು. ಬಿಳಿಯ ಸೀರೆಯ ಮೇಲೆ ಕೈ ಬಂದಾಗ ಅನ್ನಿಸಿತು, ನಾನೂ ಏಕೆ ಅಜ್ಜಿಯ ಸೀರೆ ಉಡಬಾರದು? ಬಿಳಿ ಸೀರೆಗೆ ಕಪ್ಪು ಬಾರ್ಡರ್. ಅದು ಅಜ್ಜಿಯ ಮತ್ತೊಂದು ಅಚ್ಚುಮೆಚ್ಚಿನ ಸೀರೆ.

ಸದಾ ಅಮೇರಿಕನ್ ಉಡುಗೆ ತೊಡುವ ನನಗೆ ಸೀರೆ ಉಡುವುದು ಸುಲಭದ ಮಾತಲ್ಲ. ಅದೂ ಪುಟ್ಟ ಕಂದನಿದ್ದ ನನ್ನ ಹೊಟ್ಟೆ ಹೀಗೆ ಮುಂದೆ ಬಂದಿರುವಾಗ! ಸೀರೆಯನ್ನು ಮೈಗೆ ಸುತ್ತಿದಾಗ, ಅಜ್ಜಿಯ ಬೆಚ್ಚನೆಯ ಅಪ್ಪುಗೆ ನೆನಪಾಯಿತು. ಚಿಕ್ಕಂದಿನಲ್ಲಿ ಕಥೆ ಕೇಳುವಾಗ ಅವರನ್ನು ತಬ್ಬಿ ಮಲಗುತ್ತಿದ್ದೆನಲ್ಲಾ ಆ ರೀತಿ. ಒಂದೊಂದು ನೆರಿ ಹಿಡಿದಾಗಲೂ ಅಜ್ಜಿಯ ನಗುಮುಖ ಕಂಡಂತಾಯಿತು. ಸೀರೆ ಉಟ್ಟು, ಅಲ್ಲೇ ಇದ್ದ ಅಜ್ಜಿಯ ಕುಂಕುಮದ ಸ್ಟಿಕರ್ ಹಣೆಗೆ ಇಟ್ಟುಕೊಂಡೆ. ಅಜ್ಜಿಯ ಮುಖ ಕಣ್ಮುಂದೆ ಬಂತು. ಅಜ್ಜಿ ಎಲ್ಲೂ ಹೋಗಿಲ್ಲ. ಅಜ್ಜಿ ಇಲ್ಲೇ ಇದ್ದಾರೆ. ನನ್ನಲ್ಲೇ ಇದ್ದಾರೆ. ನನ್ನ ಮಗುವಿಗೆ

ಅಜ್ಜಿಯಾಗಲಿರುವ ನನ್ನಮ್ಮನಲ್ಲಿದ್ದಾರೆ!

ನಾನು ಬಿಳಿ ಸೀರೆ ಉಟ್ಟು ಮಹಡಿ ಮೆಟ್ಟಲಿಳಿದಾಗ, ನನ್ನನ್ನು ದಂಗಾಗಿ ನೋಡುವ ಸರದಿ ಅಮ್ಮನದಾಗಿತ್ತು!

೬೧·೧೩



ಅಮ್ಮಚ್ಚಿ

– ಸವಿತಾ ರವಿಶಂಕರ್

ಅಮ್ಮಚ್ಚಿ ನನ್ನ ಅಮ್ಮನ ಅಕ್ಕ, ಅಂದ್ರೆ ನನ್ನ ದೊಡ್ಡಮ್ಮ. ಅವಳಿಗೆ ಬೇರೆ ಹೆಸರಿದ್ದರೂ ನಾನು ಅವಳನ್ನ ಕರೆಯೋದು ಅಮ್ಮಚ್ಚಿ ಎಂದು. ನನ್ನ ಹೆತ್ತವರು ನನಗೆ ಭೂಷಣವಾದ ಹೆಸರು ಕೊಟ್ಟಿದ್ದರೂ ಅಮ್ಮಚ್ಚಿ ನನ್ನನ್ನು ಗುಲ್ಲೂ ಎಂದು ಕರೆಯುತ್ತಾಳೆ. ಅಮ್ಮಚ್ಚಿ ಎಂದರೆ ನನಗೆ ಅಮ್ಮನಂತೆಯೇ ಭಾವನೆ. ಅಮ್ಮಚ್ಚಿಯೂ ನನ್ನನ್ನು ಮಗನಂತೆಯೆ ತಿಳಿದಿದ್ದಾಳೆ. ನಾನು, ಅಮ್ಮಚ್ಚಿ ಜೊತೆಯಲ್ಲಿ ಹೋಗುವಾಗ ಎಷ್ಟೋ ಮಂದಿ 'ಇವನು ನಿಮ್ಮ ಮಗ ಏನ್ರೀ' ಎಂದು ಕೇಳಿದ್ದಾರೆ, 'ಹೌದು' ಎಂದು ನನ್ನ ಕಡೆ ಕಣ್ಣು ಮಿಟುಕಿಸಿ ಅಮ್ಮಚ್ಚಿ ಉತ್ತರಿಸಿದ್ದಾಳೆ.

ನಾನು, ಅಪ್ಪ, ಅಮ್ಮ, ನನ್ನಕ್ಕ ಇರುವುದು ಮೈಸೂರಿನಲ್ಲಿ. ತಾತ, ಅಜ್ಜಿ, ಮುತ್ತಜ್ಜಿ ಇರುವುದು ನಮ್ಮ ಮನೆಯ ಈಚೆ ಪಕ್ಕದಲ್ಲಿ. ನನ್ನ ಅಮ್ಮನ ತಂಗಿ ಅಂದರೆ ನನ್ನ ಚಿಕ್ಕಮ್ಮ, ಚಿಕ್ಕಪ್ಪ ಮತ್ತು ಅವರ ಗಂಡು ಮಕ್ಕಳಿಬ್ಬರು ಇರುವುದು ನಮ್ಮ ಮನೆಯ ಆಚೆ ಪಕ್ಕದಲ್ಲಿ. ಅಮ್ಮಚ್ಚಿಯ ಇಬ್ಬರು ಹೆಣ್ಣು ಮಕ್ಕಳೂ ಸೇರಿ ನಮ್ಮ ಮುತ್ತಜ್ಜಿಗೆ ನಾವು ಆರು ಮರಿಮಕ್ಕಳು. ಅದರಲ್ಲಿ ಇಲ್ಲಿರುವ ನಾವು ನಾಲ್ಕು ಜನ ದಿನಗಟ್ಟಲೆಯಲ್ಲಿ ಅಜ್ಜಿ ಮನೆಗೆ ಹೋಗಿ ಬಂದು ಮಾಡುತ್ತೇವೆ. ಅಮ್ಮಚ್ಚಿ ಫ್ಯಾಮಿಲಿ ವರ್ಷಕ್ಕೊಮ್ಮೆ ಬರುತ್ತಾರೆ. ಕೆಲವೊಮ್ಮೆ ಅಮ್ಮಚ್ಚಿ ಒಬ್ಬಳೇ ಬರುತ್ತಾಳೆ, ಕೆಲವೊಮ್ಮೆ ದೊಡ್ಡಪ್ಪ ಒಬ್ಬರೇ ಕೆಲಸದ ಮೇಲೆ ಬರುತ್ತಾರೆ, ಕೆಲವೊಮ್ಮೆ ಪೂರ್ತ ಫ್ಯಾಮಿಲಿ ಒಟ್ಟಿಗೆ ಬರುತ್ತಾರೆ. ದೂರದ ಅಮೇರಿಕಾದಲ್ಲಿದ್ದರೂ ಸದಾ ಫೋನು, ಚಾಟು ಮಾಡಿಕೊಂಡು ನಮ್ಮ ದಿನನಿತ್ಯದ ಒಡನಾಟದಲ್ಲಿ ಇವರೆಲ್ಲರೂ ಸೇರಿಬಿಟ್ಟಿದ್ದಾರೆ.

ನನಗೆ ಬುದ್ಧಿ ತಿಳಿದಾಗಿಂದಲೂ ಅಮ್ಮಚ್ಚಿ ಅಮೇರಿಕಾದಲ್ಲಿದ್ದಾಳೆ. ದೊಡ್ಡಪ್ಪನೊಂದಿಗೆ ಮದುವೆಯಾದ ತಿಂಗಳಿಗೆ ವಿಮಾನ ಹತ್ತಿದವಳಾಕೆ. 'ಮದುವೆಗೆ ಮುಂಚೆ ಸೈಕಲ್ಲೂ ಮೆಟ್ಟಿದವಳಲ್ಲ ನಾನು' ಎಂದು ಅವಳೇ ನಗುತ್ತಾ ಹೇಳುತ್ತಾಳೆ. ಇಂದು ಅಮ್ಮಚ್ಚಿ ವ್ಯಾನಿನಲ್ಲಿ ಊರಿಂದ ಊರಿಗೆ ಗಂಟೆಗಟ್ಟಲೆ ಡ್ರೈವ್ ಮಾಡಿಕೊಂಡು ಮನೆಮಂದಿ, ನೆಂಟರು ಅಕ್ಕಪಕ್ಕದವರನ್ನೆಲ್ಲಾ ಕರೆದುಕೊಂಡು ಹೋಗುತ್ತಾಳಂತೆ.

ಅಮ್ಮಚ್ಚಿ ಇಂಡಿಯಾಕ್ಕೆ ಬರುವಾಗ ಒಂದು ಬಾರಿಯೂ ಸಣ್ಣ ಲಗ್ಗೇಜ್ ತಂದದ್ದು ನಾನಂತೂ ನೋಡಿಲ್ಲ. ಬರುವಾಗ ತನ್ನದೊಂದು ಮೂರು ಜೊತೆ ಬಟ್ಟೆ ಇಟ್ಟುಕೊಂಡು

ಎಲ್ಲರಿಗೂ ಕೊಡಲು ಸಾಮಾನು, ಚಾಕಲೇಟು, ಬಟ್ಟೆ, ಪುಸ್ತಕ, ಪಟಪಟ ಸಿಡಿಯುವ ಪಾಪ್ಕಾರ್ನ್ ಇತ್ಯಾದಿ ಇತ್ಯಾದಿ ತರುತ್ತಾಳೆ. ವಿಮಾನ ನಿಲ್ದಾಣದಿಂದ ಅಮ್ಮಚ್ಚಿಯನ್ನು ಕರೆತರುವ ಕಾಯಂ ಗಿರಾಕಿಯೆಂದರೆ ನಾನೇ. ಬರುತ್ತಲೇ ಅಮ್ಮಚ್ಚಿ ನನ್ನನ್ನು ತಬ್ಬಿ ಮುತ್ತಿಕ್ಕುತ್ತಾಳೆ. ಮೈಸೂರಿಗೆ ಕರೆತರುವಾಗಿನಿಂದ ಹಿಡಿದು ಅಮೇರಿಕಾಕ್ಕೆ ವಾಪಸ್ ಕಳಿಸುವವರೆಗೂ ನಾನು ಅಮ್ಮಚ್ಚಿಯ ಬಾಲ.

ಅಮ್ಮಚ್ಚಿಯದು ದೊಡ್ಡ ಮನೆಯಂತೆ. ನಾನೇನೂ ಆ ಮನೆ ನೋಡಿಲ್ಲ. ನನ್ನ ಅಮ್ಮ ಅಪ್ಪ ಒಮ್ಮೆ ಅಮೇರಿಕಾಕ್ಕೆ ಹೋಗಿಬಂದು ಹೇಳಿದ್ದರಿಂದ ತಿಳಿದದ್ದು. ವಿಶಾಲವಾದ ದೇವರಮನೆ, ದೊಡ್ಡದಾದ ಅಡುಗೆಮನೆ, ಒಂದು ದೊಡ್ಡ ಹಜಾರ, ಮತ್ತೊಂದು ಚಿಕ್ಕ ಹಜಾರ, ಎರಡು ಊಟದ ಮನೆ, ಆಫೀಸ್ ರೂಮು, ನಾಲ್ಕು ಬಚ್ಚಲು ಮನೆ, ನಾಲ್ಕು ಮಲಗುವ ರೂಮು, ಮಸಾಜು ಕೋಣೆ, ಲೈಬ್ರೆರಿ ಮತ್ತೆ ಹೋಮ್ ಥಿಯೇಟರ್ ಇದೆ ಎಂದು ಅಪ್ಪ ವರ್ಣಿಸಿದ್ದರು. ಇಷ್ಟು ದೊಡ್ಡ ಮನೆಯಲ್ಲಿ ತಿರುಗಿ ಅಮ್ಮಚ್ಚಿ ಕಾಲೇನಾಗಬೇಡ. ಅದಕ್ಕೋ ಏನೊ ಅಮ್ಮಚ್ಚಿಗೆ ಎಂದೂ ಕಾಲು ನೋವು. 'ಅಮ್ಮಚ್ಚಿ ಎಲ್ಲಿದ್ದೀಯಾ ಕಾಲು ಒತ್ತುತ್ತೇನೆ ಬಾ' ಎಂದರೆ, ಮೈ ಹೊತ್ತುಕೊಂಡು ಗುಡುಗುಡು ಓಡಿ ಬರುತ್ತಾಳೆ. ಕಾಲು ಒತ್ತುತ್ತೇನೆ ಎಂದು ನಾನೂ ಸುಮಾರಾಗಿ ಆಟ ಕಟ್ಟುತ್ತೇನೆ. ಮೊದಲು ಎಣ್ಣೆ ಹಾಕಿ ಅದರ ಮೇಲೆ ಕ್ರೀಮ್ ಬಳಿದು ಕೊನೆಗೆ ಪೌಡರ್ರೂ ಹಚ್ಚಿ ಉಜ್ಜುತ್ತೇನೆ. ನೀನು ಮಲಕ್ಕೋ ನಾನು ಕಾಲು ಒತ್ತಿಬಿಟ್ಟು ನಿನ್ನೊಟ್ಟಿಗೇ ಮಲಗುತ್ತೇನೆ ಎಂದು ಕಾಲಿಗೆ ಇನ್ನಷ್ಟು ಪೌಡರ್ರು ಸುರಿಯುತ್ತೇನೆ. ಅಮ್ಮಚ್ಚಿಗೆ ನಾನೇನು ಮಾಡಿದರೂ ಮುದ್ದು. 'ಗುಲ್ಲೂ ನೀನು ಭಾಳಾ ಜಾಣಾ ನೋಡು, ನಂಗೆ ಹೀಗೆ ಇನ್ಯಾರೂ ಪೌಡರ ಸೇವೆ ಮಾಡಿಲ್ಲಾ' ಎಂದು ಕಣ್ಣು ಮಿಟುಕಿಸುತ್ತಾಳೆ. ಅಮ್ಮಚ್ಚಿಗೆ ರಾತ್ರಿ ಒಬ್ಬಳೇ ಮಲಗಲು ಆಗುವುದೇ ಇಲ್ಲ. ನಾನು ಎಂದೂ ಅವಳ ಬಂಟ. ಜೊತೆಗೆ ಕಾಲೊತ್ತುವ ಪಂಟ. ಅಮ್ಮಚ್ಚಿ ಮಲಗಿದಾಗ ನನಗೆ ಫ್ಯಾಮಿಲಿ ಕಥೆಗಳನ್ನು ಬಹಳ ಸೊಗಸಾಗಿ ಹೇಳಿಕೊಡುತ್ತಾಳೆ. ನಾವೆಲ್ಲಾ ಹುಟ್ಟಿದಾಗಿನ ಕಥೆಗಳು, ಅವಳು ಬೆಳೆಯುತ್ತಿದ್ದಾಗಿನ ಕಥೆಗಳು, ಅಮೇರಿಕಾದ ವಿಚಾರಗಳು, ಹೀಗೆ ಏನೇನೋ ವಿಚಾರಗಳು ಗೊತ್ತು ಗುರಿಯಿಲ್ಲದೆ ರಾತ್ರಿಯೆಲ್ಲಾ ಅರಳುತ್ತವೆ. ಬೆಳಿಗ್ಗೆ ನನ್ನನ್ನು ಟ್ಯೂಷನ್ನಿಗೆ ಏಳಿಸಲು ಅಮ್ಮಚ್ಚಿಗೆ ಸಾಕಷ್ಟು ಕಷ್ಟಕೊಡುತ್ತೇನೆ. ಅಮ್ಮಚ್ಚಿಯ ಲೆಕ್ಕದಲ್ಲಿ ಬೆಳಿಗ್ಗೆ ಏಳು ಗಂಟೆಗೆ ಏಳುವುದು ಲೇಟು.

ಅಮ್ಮಚ್ಚಿಗೆ ಈಗ ನಲ್ವತ್ತರ ಮೇಲಾಯ್ತು ಆದರೆ ಹುಡುಗಾಟಿಕೆಗೆ ಅವಳ ವಯಸ್ಸು ಅಡ್ಡಬಂದಿಲ್ಲ. ರಾತ್ರಿ ಮನೆಮಂದಿಯೆಲ್ಲ ಮಲಗಿದ ಮೇಲೆ ನಾನು ಅಮ್ಮಚ್ಚಿ ಪೆನ್ ತಗೊಂಡು ಹೆಂಗಸರಿಗೆ ಮೀಸೆ ಮತ್ತು ಗಂಡಸರಿಗೆ ನಾಮ ಎಂದು ಬರೆಯಲು ಹೋಗಿ ಸಿಕ್ಕಿಬಿದ್ದು ಚೆನ್ನಾಗಿ ಬೈಸಿಕೊಂಡಿದ್ದೇವೆ. ಮೀಸೆ ತಿದ್ದುವಾಗ ನನ್ನಕ್ಕ ಗುರುಗುರು ಎನಿಸಿದ್ದಕ್ಕೆ ಚೂರು ಎಚ್ಚರವಾಗಿ ನಿದ್ದೆಯಲ್ಲಿ ಮಣಮಣ ಎಂದೇನೊ ಹೇಳಿದಾಗ ನಾನು ಅಮ್ಮಚ್ಚಿ ಮುಖ ಚಿವುಟಿ ನೋವು ಬರಿಸಿಕೊಂಡು ನಗು ತಡೆದಿದ್ದೆವು. ಇನ್ನೊಮ್ಮೆ ನನ್ನ ಮುತ್ತಜ್ಜಿಗೆ

ಅಂದರೆ ಅಮ್ಮಚ್ಚಿಯ ಅಜ್ಜಿಗೆ ಮಧ್ಯರಾತ್ರಿ ಮೇಲೆ ಘಂಟೆ ಕನ್‌ಫ್ಯೂಷನ್ ಮಾಡೋಣಾ ಎಂದು ಗಂಟೆ ಹೊಡಿಯುವ ಗಡಿಯಾರವನ್ನು ಮುಂದೆ ತಿರುಗಿಸಿ ತಿರುಗಿಸಿ ಐದೈದು ನಿಮಿಷಕ್ಕೂ ಗಂಟೆ ಬಾರಿಸುವಂತೆ ಮಾಡಿ, 'ನಿನ್ನಿಂದಲೇ ಈ ಹುಡುಗರೆಲ್ಲಾ ಹೆಚ್ಚಿಕೊಂಡಿದ್ದಾರೆ' ಎಂದು ಮುತ್ತಜ್ಜಿಯಿಂದ ಬೈಸಿಕೊಂಡಿದ್ದಳು. ಹುಡುಗರ ಪಾಳ್ಯಕಟ್ಟಿಕೊಂಡು ತಿನ್ನಲು ಬೇಕರಿಯ ತಿಂಡಿ, ಕುಡಿಯಲು ಕೊಕೊ ಕೋಲ, ಫ್ರೂಟಿ, ಜ್ಯೂಸು ಎಲ್ಲಾ ತರಿಸಿ ರಾತ್ರಿಯಿಡೀ ಆಡುವುದು ಅಮ್ಮಚ್ಚಿಗೂ ನಮಗೂ ಅತಿ ಪ್ರೀತಿಯ ವಿಷಯ.

ಚಳಿ ಎಷ್ಟಾದರೂ ನಾನು ಮತ್ತು ಅಮ್ಮಚ್ಚಿ ತಡೆಯುತ್ತೇವೆ, ಸೆಕೆ ಮಾತ್ರ ಕಷ್ಟ. ಅಮ್ಮಚ್ಚಿ ಸುಡುವ ಬೇಸಿಗೆಯಲ್ಲಿ ಬಂದು ಇಲ್ಲಿ ಕರೆಂಟು ಫ್ಯಾನು ಇಲ್ಲದೆ ಒದ್ದಾಡಿದ್ದಾಳೆ. ಅದಕ್ಕೆ ನನ್ನದೊಂದು ಮಂತ್ರವಿದೆ. ಫ್ರಿಜ್ಜಿನಲ್ಲಿರುವ ತಣ್ಣೀರನ್ನು ತೆಗೆದು ಅಮ್ಮಚ್ಚಿ ಮುಖಕ್ಕೆ ಕೈಯಿಂದ 'ಜೈ ಹನುಮಾನ್' ಎಂದು ಎರಚುವುದು (ಹಾಗೆ ಹನುಮಂತನ ಗುಡಿಯಲ್ಲಿ ಯಂತ್ರ ಕಟ್ಟುವಾಗ ಮಾಡುವುದನ್ನು ನೋಡಿದ್ದೆ). ಹೀಗೆ ಸೆಖೆಯಾದಾಗಲೆಲ್ಲ 'ಹನುಮಂತನ್ನ ಮಾಡೋ ಗುಲ್ಲೂ' ಎಂದು ನನಗೆ ಕೂಗು ಹಾಕುತ್ತಾಳೆ.

ನಾವೆಲ್ಲಾ ಸೇರಿ ಒಂದು ಕ್ಲಬ್ ಮಾಡಿಕೊಂಡಿದ್ದೇವೆ. ಕ್ಲಬ್ಬಿನ ಐಡಿಯಾ ಯಾರದು ಎಂದು ಹೇಳಬೇಕಿಲ್ಲ ತಾನೆ. ಈ ಸಂಘಕ್ಕೆ ಅಮ್ಮಚ್ಚಿ, ನಾವಾರು ಮಕ್ಕಳು ಮತ್ತು ಅಮ್ಮಚ್ಚಿಯ ವಾರಗಿತ್ತಿಯ ಇಬ್ಬರು ಮಕ್ಕಳು, ನನ್ನಮ್ಮ, ಚಿಕ್ಕಮ್ಮ ಸದಸ್ಯರು. ಕ್ಲಬ್ಬಿನ ಹೆಸರಿನ ಆಯ್ಕೆಗೆ ನಾವು ಎಲೆಕ್ಷನ್ ಮಾಡಿದೆವು. ಕ್ಲಬ್ಬಿಗೆ 'ನಗುನಲಿ' ಎಂದು ನನ್ನಮ್ಮ, 'ತಲೆಹರಟೆ' ಎಂದು ನನ್ನಕ್ಕ, 'ಚಿಂದಿ ಚೋರ್ಸ್' 'ಇನ್‌ಕ್ರೆಡಿಬಲ್ಸ್' ಎಂದು ನನ್ನ ಚಿಕ್ಕಮ್ಮನ ಮಕ್ಕಳು, 'ಹೈಪರ್ ಆಕ್ಟಿವ್ ಈಟರ್ಸ್' ಎಂದು ಅಮ್ಮಚ್ಚಿಯ ವಾರಗಿತ್ತಿಯ ಮಗ, 'ಇರಿಟೇಟರ್ಸ್' ಎಂದು ನಾನು ಹಾಗೂ 'ಓವರ್ ಡೋಸ್' ಎಂದು ಅಮ್ಮಚ್ಚಿ, ಹೀಗೆ ಹೆಸರುಗಳನ್ನು ಮಂಡಿಸಿದೆವು. ಎಲ್ಲರೂ ಸೇರಿ ನಮ್ಮ ಆಯ್ಕೆಯ ಹೆಸರಿಗೆ ಮತ ಚಲಾಯಿಸಿದೆವು. 'ಓವರ್ ಡೋಸ್' ಗೆದ್ದಿತು. ಓವರ್ ಡೋಸ್ ಕ್ಲಬ್ಬಿನ ಉದ್ದೇಶ 'ಲಾಫ್ ಮಚ್, ಲವ್ ಮಚ್, ಎಂಜಾಯ್ ಮಚ್.' ಎಂದು.

ಅಮ್ಮಚ್ಚಿ ಬಂದಳೆಂದರೆ ನಾವು ಟೂರಿಂಗ್ ಟಾಕೀಸಿನವರಾಗಿ ಬಿಡುತ್ತೇವೆ. ದೊಡ್ಡ ವ್ಯಾನು ಮಾಡಿಕೊಂಡು, ಊಟ ಕಟ್ಟಿಕೊಂಡು, ಅಂತ್ಯಾಕ್ಷರಿ ಹಾಡಿಕೊಂಡು ಜಾಗಗಳನ್ನು ನೋಡಲು ಹೋಗುತ್ತೇವೆ. ಬಂಡೀಪುರದ ಕೋತಿಗೆ ಬಾಳೆಹಣ್ಣು ತಿನ್ನಿಸಿ, ದೇವಸ್ಥಾನದ ಆನೆಗೆ ಕಾಯಿ ಕೊಟ್ಟು, ಕಾರಂಜಿ ಪಾರ್ಕಲ್ಲಿ ಚಿಟ್ಟೆ ಹಿಡಿದಿದ್ದೇವೆ. ಗಿಡಕ್ಕೆಂದು ಬಿಟ್ಟ ನೀರಲ್ಲಿ ಹೊರಳಾಡಿ ಝೂ ಮಾಲಿ ಕೈಯಲ್ಲಿ ಬೈಸಿಕೊಂಡಿದ್ದೇವೆ, 'ಸಾರಿ ಸಾರಿ' ಎಂದು ಪೂಸಿ ಹೊಡೆದಿದ್ದೇವೆ. ಅರಮನೆ ಗೈಡಿನೊಡನೆ ಸ್ನೇಹ ಬೆಳೆಸಿ, ಅವನ ಇನ್‌ಫ್ಲೂಯೆನ್ಸ್‌ನಿಂದ ಕಲ್ಯಾಣ ಮಂಟಪದ ಮಧ್ಯದಲ್ಲಿ ನಿಂತು ಹ್ಯಾಪಿಬರ್ತ್‌ಡೆ ಹಾಡಿದ್ದೇವೆ. ಕೆ ಆರ್. ಎಸ್. ಗಾರ್ಡನ್‌ನಲ್ಲಿ ಪೋಲಿಸ್ ಪೇದೆ ಜೊತೆ ಫೋಟೋ, ಊಟಿಯಲ್ಲಿ ಜೂಟಾಟ ಹೀಗೆ

ನಾವು ಆಡದ ಆಟವಿಲ್ಲ. ಆಟ ಆಡಿಸು, ನೀನು ನಮ್ಮೊಡನೆಯೇ ಆಡು ಎಂದು ಅಮ್ಮಚ್ಚಿಯ ತಲೆ ತಿನ್ನುತ್ತೇವೆ. ಅಮ್ಮಚ್ಚಿಯೂ ಖುಷಿಯಾಗಿ ಆಟ ಕಟ್ಟುತ್ತಾಳೆ. ಆಟದಲ್ಲಿ ನಾನು ಎಂದೂ ಅವಳ ಪಾರ್ಟ್‌ನರ್, ಊಟದಲ್ಲೂ ಅಷ್ಟೆ. ನನಗೂ ಅಮ್ಮಚ್ಚಿಗೂ ಸೇರದ ಊಟವಿಲ್ಲ. ಎಲ್ಲವೂ ಪ್ರಿಯವೇ. ಆದರೂ ಈಗೀಗ ಸ್ವಲ್ಪ ಕಂಟ್ರೋಲು ಮಾಡ್ತಾಳೆ. 'ಗುಲ್ಲೂ ನನಗೆ ನಲವತ್ತರ ಮೇಲಾಯ್ತು, ಇನ್ನು 'ಒವರ್ ಡೋಸ್' ನಿಲ್ಲಿಸಬೇಕು' ಎಂದು ಕಣ್ಣು ಮಿಟುಕಿಸುತ್ತಾಳೆ.

ಅಮ್ಮಚ್ಚಿಯದು ಹೀಗೆ ಹುಡುಗು ಸ್ವಭಾವ. ಒಮ್ಮೆ ನಾನು ಅಮ್ಮಚ್ಚಿಯನ್ನು ಕೇಳಿದ್ದೆ, 'ನಿಂಗೆ ಯಾವಾಗಲಾದ್ರೂ ಅಳು ಬರುತ್ತೇನು?' ಎಂದು. 'ಗುಲ್ಲೂ, ವರ್ಷದಲ್ಲಿ ಅರವತ್ತು ದಿನ ನಗು; ಮತ್ತೆಲ್ಲಾ ಅಳುವೇ.' ಅಂದ್ಲು. ಹೇಗೆ ಎಂದು ನಾನೆಣಿಸುತ್ತಿರುವಾಗಲೇ ಬಂದಿತ್ತು ಜವಾಬು, 'ನೋಡು, ಪ್ರತೀ ವರ್ಷ ಮೈಸೂರಲ್ಲಿ ನಿನ್ನೊಟ್ಟಿಗೆ ಎರಡು ತಿಂಗಳಿರ್ತೀನಲ್ಲ, ಆಗೆಲ್ಲ ಬರೀ ನಗು; ಇನ್ನು ಮುನ್ನೂರು ದಿನ ಉಳಿಯುತ್ತಲ್ಲ, ಆಗ ನಿನ್ನ ಯೋಚನೇಲಿ ಅಳು.' ಅಂತ ನಗ್ತಾ ಹೇಳಿದ್ಲು. ನಂಗ್ಯಾಕೋ ಅಮ್ಮಚ್ಚಿ ಅಳೋದನ್ನು ನೆನೆಸಿಕೊಳ್ಳಲು ಮನಸ್ಸಿಗೆ ತುಂಬ ಕಸಿವಿಸಿ ಹಾಗೂ ಕಷ್ಟವೂ ಆಯ್ತು.

ಮೈಸೂರಿನವಳಾದ ಅಮ್ಮಚ್ಚಿಗೆ ದಸರ ಎಂದರೆ ಸಂಭ್ರಮ. ಗೊಂಬೆ ಕೂಡಿಸುವುದು ಒಂದು ಹವ್ಯಾಸವೆಂದು ಶುರುವಾಗಿ ಈಗ ದೊಡ್ಡ ಗೀಳಾಗಿ ಹೋಗಿದೆ. ನನ್ನಮ್ಮ ಮತ್ತು ತಾತ ಗೊಂಬೆ ಸಾಮಾಗ್ರಿ ಸಪ್ಲೈ ಮಾಡುವ ವಿಚಾರದಲ್ಲಿ ಸದಾ ಕಸರತ್ತು ಮಾಡುತ್ತಲೇ ಇರುತ್ತಾರೆ. ಎಲ್ಲಿ ಹೋದರೂ ಗೊಂಬೆಯದೇ ಧ್ಯಾನ. ಅವಕ್ಕೆ ಬಟ್ಟೆ ಹೊಲಿದು, ಬಣ್ಣ ಹಚ್ಚಿ, ಒಡವೆ ತೊಡಿಸುವುದರಲ್ಲಿ ಅಮ್ಮಚ್ಚಿಗೆ ಸಿಗುವ ಆನಂದ ಅಷ್ಟಿಷ್ಟಲ್ಲ. ಹಿಂದು ಹಬ್ಬಗಳ ಬಗ್ಗೆ ಗೊಂಬೆ ಜೋಡಿಸಿಯಾಯಿತು. ಕೃಷ್ಣನ ಕಥೆ, ರಾಮಯಣವನ್ನೂ ಮುಗಿಸಿಯಾಯ್ತು. ಅಷ್ಟಲಕ್ಷ್ಮಿ, ದಸರಾ ಪರೇಡ್ ಜೋಡಿಸಿದ್ದಾಯಿತು. ಮನೆಯ ತುಂಬಾ ಗೊಂಬೆ ಜೋಡಿಸಿ ಸ್ನೇಹಿತರು, ವಿದ್ಯಾರ್ಥಿಗಳು, ಹೀಗೆ ನೂರಾರು ಜನರನ್ನು ಕರೆದು ಗೊಂಬೆ ತೋರಿಸಿ, ಕಥೆ ಬಿಡಿಸಿ ಹೇಳಿ, ಊಟ ಉಪಚಾರವಿತ್ತು ಖುಷಿ ಪಡುತ್ತಾಳೆ. ಅವಳ ಗೊಂಬೆ ಕಥೆ ಅಲ್ಲಿನ ಟೀವಿ ಹಾಗೂ ನ್ಯೂಸ್ ಪೇಪರ್‌ನಲ್ಲಿಯೂ ಬಂದಿತ್ತು. ಗೊಂಬೆ ಜೋಡಿಸಿದ ರೀತಿಗೆ, ಕಥಾವಸ್ತುವಿಗೆ ಎಂದು ಅಮೇರಿಕದಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಸಿಕ್ಕಿದಾಗ ನನ್ನ ಬಗ್ಗೆಯೂ ಹೆಮ್ಮೆ ಮೂಡಿತ್ತು, ಯಾಕೆಂದರೆ ನಾನೂ ಹದ್ದಿನ ಕಣ್ಣನ್ನು ಹಾಕಿಕೊಂಡು ಗೊಂಬೆ ಹುಡುಕಾಟದಲ್ಲಿ ಪಾಲ್ಗೊಂಡಿದ್ದೆನಲ್ಲ!

ಅಮ್ಮಚ್ಚಿಯ ಇಬ್ಬರು ಮಕ್ಕಳೂ (ನನ್ನ ಅಕ್ಕಂದಿರು) ಕನ್ನಡ ಸರಾಗವಾಗಿ ಮಾತನಾಡುವುದಲ್ಲದೇ ಓದಿ ಬರೆಯಲೂ ಬಲ್ಲರು. ಮೈಸೂರಿಗೆ ಬಂದಾಗ ಖುಷಿಯಾಗಿ ಹೊಂದಿಕೊಂಡು ಕನ್ನಡದಲ್ಲಿ ಮಾತಾಡಿಕೊಂಡು, 'ಇವರು ಅಮೇರಿಕಾದಲ್ಲಿ ಬೆಳೆದ ಮಕ್ಕಳಾ!' ಎಂದು ಎಲ್ಲರೂ ಆಶ್ಚರ್ಯ ಪಡುವಂತೆ ಇರುವವರು. ಇಲ್ಲಿನ ಸ್ಲಮ್

ಏರಿಯಾಗಳಿಗೆಲ್ಲಾ ಹೋಗಿ ಮಕ್ಕಳಿಗೆ ಕೊಳಲೂದಿ ತೋರಿಸಿದ್ದಾರೆ, ಅಮೇರಿಕಾದ ಬಗ್ಗೆ ಸಿನಿಮಾ ರೀತಿ ತಾವೇ ಡಿವಿಡಿ ಮಾಡಿ ತೋರಿಸಿದ್ದಾರೆ, ಮತ್ತೆ ನೂರಾರು ಬಡವರಿಗೆ ಕಣ್ಣಿನ ಉಚಿತ ತಪಾಸಣೆ ಶಿಬಿರ ಏರ್ಪಡಿಸಿ ಫ್ರೀ ಕನ್ನಡಕ, ಫ್ರೀ ಕ್ಯಾಟರಾಕ್ಟ್ ಸರ್ಜರಿ ಮಾಡಿಸಿಕೊಟ್ಟಿದ್ದಾರೆ. ಫ್ರೀ ಡೆಂಟಲ್ ಕ್ಯಾಂಪು ಮಾಡಿ ಮಕ್ಕಳಿಗೆಲ್ಲಾ ಟೂತ್‌ಬ್ರಷ್ ಹಂಚಿ ಹಲ್ಲು ಕ್ಲೀನ್ ಮಾಡಿಸಿದ್ದಾರೆ. ಇದಕ್ಕೆಲ್ಲಾ ಫಂಡ್ಸ್ ತಾವೇ ಹೊಂದಿಸಿದ್ದಾರೆ. ಅಮ್ಮಚ್ಚಿ ಈ ರೀತಿಯ ಕಾರ್ಯಗಳಿಗೆ ತುಂಬಾ ಪ್ರೋತ್ಸಾಹ ಕೊಡುತ್ತಾಳೆ. ಮಕ್ಕಳೊಂದಿಗೆ ತಾನೂ ಸ್ಲಮ್ ಏರಿಯಾಗಳಿಗೆ ಹೋಗಿ ಸೇವೆ ಸಲ್ಲಿಸಿದ್ದಾಳೆ. ಅವಳದೇ ಫೋಟೋ ಮತ್ತೆ ವೀಡಿಯೋಗ್ರಫಿ ಈ ಕಾರ್ಯಕ್ರಮಗಳಿಗೆ. ಫೋಟೊ ತೆಗೆಯುವುದು ಅಮ್ಮಚ್ಚಿಯ ಇನ್ನೊಂದು ಗೀಳು. ನಮ್ಮೆಲ್ಲರ ಫೋಟೊಗಳನ್ನು ಕ್ಲಿಕ್ಕಿಸಿರುವುದು ಹೆಚ್ಚಾಗಿ ಅಮ್ಮಚ್ಚಿಯೇ. ನನಗೂ ಕೃಷ್ಣನ ಅಲಂಕಾರ ಮಾಡಿ ಕೊಳಲು ಕೊಟ್ಟು ತುಳಸೀಕಟ್ಟೆಯ ಬಳಿ ಕೂಡಿಸಿ ಫೋಟೊ ತೆಗೆದಿದ್ದಾಳೆ. ಅದರಲ್ಲೂ ಹೆಣ್ಣು ಮಕ್ಕಳ ತಲೆ ಬಾಚಿ, ಮುಖ ಅಲಂಕರಿಸಿ ಫೋಟೊ ಹೊಡೆಯುವುದು ಅವಳ ಮುಖ್ಯ ಉದ್ಯೋಗವೆನ್ನಬಹುದು.

ಅಮ್ಮಚ್ಚಿಯ ಗಂಡ, ಅಂದರೆ ನನ್ನ ದೊಡ್ಡಪ್ಪ, ಬಹಳ ಒಳ್ಳೆಯ ಮನುಷ್ಯ. ಮಾತು ನಯ, ನಡೆ ವಿನಯ. ಅಮ್ಮಚ್ಚಿಯ ಪ್ರೀತಿಯ ಬಸ್ಯಾ. ಅಮ್ಮಚ್ಚಿ ಬಸವ-ಬಸವಿ ಎಂದು ಪದ ಬರೆದು ರಾಗ ಕಟ್ಟಿ ಹಾಡುತ್ತಾಳೆ. ದೊಡ್ಡಪ್ಪನಿಗೆ ಅದೇ ಖುಷಿ. ನಲವತ್ತಕ್ಕೂ ಮೀರಿ ಸಂಶೋಧನೆ ಕಂಡು ಹಿಡಿದಿದ್ದಕ್ಕೆ ಕೊಟ್ಟ ಫಲಕಗಳನ್ನೆಲ್ಲಾ ಆಫೀಸು ರೂಮಿನ ತುಂಬಾ ಜೋಡಿಸಿಟ್ಟಿದ್ದಾರೆಂದು ಅಮ್ಮ ನನಗೆ ಹೇಳಿದ್ದಳು. ದೊಡ್ಡಪ್ಪ ಮೈಸೂರಿಗೆ ಬಂದಾಗ ನಮ್ಮ ಸಮಕ್ಕೂ ಶಾರ್ಟ್ಸ್ ಹಾಕ್ಕೊಂಡು ನಮ್ಮೊಟ್ಟಿಗೆ ಮಲಗಿಕೊಂಡು ಕಥೆ ಹೇಳಿಕೊಡುತ್ತಾರೆ, ಮಕ್ಕಳೆಂದರೆ ಪ್ರೀತಿ. ಡೆಲ್ಲಿ, ಬಾಂಬೆ ಎಲ್ಲಾ ನಾವು ನೋಡಿದ್ದು ದೊಡ್ಡಪ್ಪನೊಡನೆಯೆ. ಸರಳ ಜೀವನ ಅವರಿಗಿಷ್ಟ. ಅವರು ಅವಶ್ಯಕತೆ ಮೀರಿ ಖರ್ಚು ಮಾಡಿದ್ದನ್ನು ನಾನು ನೋಡೇ ಇಲ್ಲ. ಕೆಲಸದ ಸಲುವಾಗಿ ಭಾರತಕ್ಕೆ ಸಾಕಷ್ಟು ಬಾರಿ ಬರುತ್ತಲೇ ಇರುತ್ತಾರೆ. ಪ್ರತೀಬಾರಿಯೂ ಮಾತಿಲ್ಲದೆ ಅಮ್ಮಚ್ಚಿ ಒತ್ತಿ ಒತ್ತಿ ತುಂಬಿ ಕಳಿಸುವ ಲಗ್ಗೇಜನ್ನು ನಮಗಾಗಿ ಸಾಗಿಸುತ್ತಾರೆ. ಇಲ್ಲಿಂದ ನಾವು ಕಳಿಸುವ ಸಾಮಾನನ್ನು ಅಮ್ಮಚ್ಚಿಗಾಗಿ ಸಾಗಿಸುತ್ತಾರೆ.

ಮೊದಲು ಬೇಡವೆಂದು ಹಠ ಹಿಡಿದರೂ, ನಂತರ ವಿಧಿಯಿಲ್ಲದೆ ತಲೆಬಾಗಿ, ಕೊನೆಯಲ್ಲಿ ಉಸ್ಸೆಂದು ವಿಶ್ರಾಂತಿ ಕೊಡಿಸುವ ಪರಿಪಾಠವೊಂದನ್ನು ಅಮ್ಮಚ್ಚಿ ಬಂದಾಗಲೆಲ್ಲಾ ಹಚ್ಚಿಕೊಳ್ಳುತ್ತಾಳೆ; ಅದೇ 'ಎಣ್ಣೆ-ನೀರು.' ಬಾಣಲೆಯಲ್ಲಿ ಹರಳೆಣ್ಣೆ ಕಾಯಿಸಿ, ತಲೆಗೆ ತೀಡಿ ಹಚ್ಚಿ, ಮೈ ಕೈಗೆಲ್ಲಾ ಉಜ್ಜಿ, ಶ್ರದ್ಧೆಯಿಂದ- ಪಾಪ ಪ್ರತಿಬಾರಿ ಬಂದಾಗಲೂ- ನೀರು ಹಾಕುತ್ತಾಳೆ. ಹಂಡೆಯಲ್ಲಿ ಕಾದ ನೀರನ್ನು ಎತ್ತಿ ಚಟಿಲ್ ಎಂದು ಮೊಗಚಿ ಮೈಮೇಲೆ ಎರಚಿದರೆ ಆಗುವ ಅನುಭವ ಅನುಭವಿಸಿಯೇ ತಿಳಿಯಬೇಕು. ಈ ಎಣ್ಣೆ-ಸೀಗೆಕಾಯಿಯ ಅಭ್ಯಂಜನವನ್ನು ನಾನು ರೂಢಿಸಿಕೊಂಡಿರುವುದು ನನಗೋ ಅಮ್ಮಚ್ಚಿಗೋ ಎಂದು ನನಗೆ ನಾನೇ ಕೆಲವೊಮ್ಮೆ ಪ್ರಶ್ನಿಸಿಕೊಳ್ಳುತ್ತೇನೆ.

ಬೇರು ಸೂರು

ತಿನ್ನುವ ವಿಚಾರದಲ್ಲಿ ನಮ್ಮ ಮನೆಯ ಮಕ್ಕಳಿಗೆ ಒಂದು ರೀತಿಯ ಬರ. 'ನಮ್ಮಷ್ಟು ತಂದು ಹಾಕುವವರಿಲ್ಲ, ನಿಮ್ಮಷ್ಟು ತಿಂದು ಹಾಕುವವರಿಲ್ಲ' ಎನ್ನುವ ಮಾತು ಮನೆಯವರಿಂದ ಕೇಳಿಸಿಕೊಳ್ಳುತ್ತಲೇ ಬೆಳೆದಿದ್ದೇವೆ. ಅದರಲ್ಲೂ ಬೇಸಿಗೆ ರಜದಲ್ಲಿ ಮಾಡಲು ಕೆಲಸ ಬೇರೆ ಇಲ್ಲ. ಆನಂದದಿಂದ ಭಕ್ಷಿಸುವುದೇ ಉದ್ಯೋಗ. ಇಂಥಾ ಸಂದರ್ಭದಲ್ಲಿ ಅಮ್ಮಚ್ಚಿ ನಮ್ಮೊಟ್ಟಿಗೆ ಇದ್ದರೆ ಫಿಜ್ಜಾ, ನೂಡಲ್ಸ್, ಚಾಟ್, ಐಸ್ ಕ್ರೀಂ, ಮೈಲಾರಿ ದೋಸೆ, ತಟ್ಟೆ ಇಡ್ಲಿ, ಎಂದು ಕಂಠ ಭರ್ತಿ ತಿನ್ನಿಸುತ್ತಾಳೆ. ಜೊತೆಗೆ ಮನೆಯಲ್ಲಿ ದೊಡ್ಡ ಬೋಗುಣಿಯಲ್ಲಿ ತುಪ್ಪ ಸುರಿದು ಕಲಸಿದ ಕೈತುತ್ತು, ಬಾಯಿ ತುತ್ತು ಬೇರೆ. ಸೇರುಗಟ್ಟಲೆ ಅನ್ನ ಅಗಳೂ ಬಿಡದಂತೆ ಖಾಲಿಯಾಗುತಿತ್ತು. ಫಲಿತಾಂಶ, ನಮ್ಮೆಲ್ಲರ ಹೊಟ್ಟೆಯ ಸುತ್ತಳತೆಯಲ್ಲಿ ತೋರುತ್ತಿತ್ತು.

ಅಮ್ಮಚ್ಚಿ ಇಂಡಿಯಾಕ್ಕೆ ಬಂದಾಗ ಹೊತ್ತು ಹೋಗುವುದು ಗೊತ್ತೇ ಆಗೊಲ್ಲ. ದಿನಗಳು ಓಡಿ, ವಾರಗಳಾಗಿ, ನೋಡುನೋಡುತ್ತಿರುವಲ್ಲೇ ತಿಂಗಳಾಗಿಬಿಡುತ್ತೆ. ಬೀಳ್ಕೊಡುವ ಸಮಯ ಬಂದೇ ಬಿಡುತ್ತದೆ. ನಾವು ಮಕ್ಕಳು ಸೇರಿ ಅಮ್ಮಚ್ಚಿಗೆಂದು ಸೆಂಡ್ ಆಫ್ ವಿಡಿಯೋ ಮಾಡಲು ಪ್ರಯತ್ನಿಸುತ್ತೇವೆ. ಪ್ರತೀಸಲವೂ ಏನಾದರೂ ಆಗಿ ಅದು ಕೆಡುತ್ತದೆ. ಕೊನೆ ಘಳಿಗೆಯಲ್ಲಿ ಏನೋ ಒಂದಷ್ಟು ಚಿತ್ರಗಳನ್ನ ಹಾಕಿ, ಟೈಟಲ್ ಜೋಡಿಸಿ, ಸೆಲ್ ಫೋನಿನಲ್ಲಿ ಬ್ಯಾಗ್ರೌಂಡ್ ಮ್ಯೂಸಿಕ್ ಹಾಕಿ ನಮ್ಮ ಶೋ ತೋರಿಸುತ್ತೇವೆ. ನಾನು ಮೊದಲೇ ಹೇಳಿದೆನಲ್ಲ, ನಾನೇನು ಮಾಡಿದರೂ ಅಮ್ಮಚ್ಚಿಗೆ ಮುದ್ದು ಎಂದು. ಚಿತ್ರಗಳನ್ನು ನೋಡುತ್ತಿರುವಾಗ ಮಜದ ಕ್ಷಣಗಳೆಲ್ಲಾ ನೆನಪಾಗಿ ಕಣ್ಣಲ್ಲಿ ನೀರು ಬಂದರೂ, ಯಾರಿಗೂ ಕಾಣದಂತೆ ಒರೆಸಿಕೊಂಡು ಅಮ್ಮಚ್ಚಿಯನ್ನು ಬೀಳ್ಕೊಡಲು ತಯಾರಾಗುತ್ತೇನೆ. ಅಮ್ಮಚ್ಚಿ ಹೊರಟು ನಿಂತಾಗ ಒಂದು ರೀತಿಯ ಶೂನ್ಯ ಭಾವನೆ ನಮ್ಮೆಲ್ಲರಲ್ಲೂ ಮೂಡುತ್ತದೆ. ನಗೆ, ಆಟ, ಕುಣಿತಕ್ಕೆಲ್ಲ ತತ್ಕಾಲಿಕವಾಗಿ ತೆರೆ ಬೀಳುತ್ತದೆ.

– ಅಮ್ಮಚ್ಚಿಯ ಗುಲ್ಲೂ

ಸಿದ್ಧಾರ್ಥ ನಗರ, ಮೈಸೂರು

ಇಂಡಿಯ ಎಂಬ ಢೋಂಗಿ ಪ್ರಜಾಪ್ರಭುತ್ವ

– ಡಾ. ಶಾಂತಾರಾಮ ಸೋಮಯಾಜಿ

ಸುಮಾರು ಎಂಟು ವರ್ಷಗಳ ಹಿಂದೆ, ಕ್ಯಾಲಿಫೋರ್ನಿಯದ ಸ್ಟೇಟ್ ಯುನಿವರ್ಸಿಟಿಯಿಂದ ನಿವೃತ್ತಿ ಪಡೆದು, ನಾನೇ ಡಿಸೈನ್ ಮಾಡಿ ತುಂಬಾ ಮುತುವರ್ಜಿ ವಹಿಸಿ ಕಟ್ಟಿಸಿದ ಮನೆಯನ್ನು ಮಾರಿ, ಎರಡು–ಮೂರು ದಶಕಗಳ ಕಾಲ ಕಾಪಾಡುತ್ತಾ ಬಂದಿದ್ದ ಅದೆಷ್ಟೋ ವಸ್ತು–ವೈಶಿಷ್ಟ್ಯಗಳನ್ನು ಗರಾಜ್–ಸೇಲ್‌ನಲ್ಲಿ ಮಾಯಮಾಡಿ, ನನ್ನ ದೇಶಕ್ಕೆ ಮರಳುತ್ತಿದ್ದೇನೆಂದು ಸಂಭ್ರಮ ಪಟ್ಟುಕೊಂಡು ಇಲ್ಲಿಗೆ (ಉಡುಪಿಗೆ) ಬಂದು, ನಾಲ್ಕೈದು ತೆಂಗಿನ ಮರಗಳಿರುವ ಮತ್ತು ನಾಚಿಗೆಮುಳ್ಳಿನ ('ಮುಟ್ಟಿದರೆ ಮುನಿ'ಯ) ಲಾನ್ ಇದ್ದ ಕೆಸರುಗುಂಡಿಯಂತಹ ಜಾಗ ಖರೀದಿ ಮಾಡಿ, ಹಂಚಿನ ಮಾಡಿನ ಮನೆ ಕಟ್ಟಿಸಿ ಬದುಕು ಶುರುಮಾಡಿದ ಕೆಲವೇ ಕೆಲವು ತಿಂಗಳಲ್ಲೇ ನನ್ನ ಉತ್ಸಾಹ, ಆವೇಶ, ಛಲ, ಇವೆಲ್ಲಾ, ಚಳಿಗಾಲದ ಮೇಪಲ್ ಮರದ ಎಲೆಗಳಂತೆ, ಒಂದೊಂದಾಗಿ ಬಾಡಿ, ಒಣಗಿ, ಮಣ್ಣಿಗೆ ಬೀಳತೊಡಗಿದವು.

ವರ್ಷಗಳು ಒಂದೊಂದಾಗಿ ಹೊರಳಾಡುತ್ತಾ ಎಲ್ಲೆಲ್ಲಿಗೋ ಹೊರಟುಹೋದ ಬೆನ್ನಲ್ಲೇ, 'ಐ ಮೇಡ್ ಎ ಸ್ಟುಪಿಡ್ ಡಿಸಿಶನ್' ಎಂಬ ಪ್ರಜ್ಞೆ ಸ್ಪಷ್ಟವಾಯಿತು. ಈ ಪ್ರತಿಕ್ರಿಯೆಗೆ ಕಾರಣಗಳು ಹಲವಾರು. ನಮ್ಮಷ್ಟಕ್ಕೇ ನಾವು ವಾಕಿಂಗ್ ಹೋಗಲೂ ಅವಕಾಶ ನೀಡದ ಮಾರ್ಗಗಳಿಂದ ಹಿಡಿದು, ಕ್ಯೂನಲ್ಲಿ ನಿಂತವರನ್ನು ನೋಡಿಯೂ ನೋಡದವರ ಹಾಗೆ ಜಾಣತನದಿಂದ ನಡುವೆ ನುಸುಳಿಕೊಳ್ಳುವ– ಸ್ವಂತಕ್ಕೆ ಮಾತ್ರ ಯೋಚಿಸಬಲ್ಲ– ಪ್ರಜೆಗಳವರೆಗೆ, ಅವೆಷ್ಟೋ ಪುಟ್ಟ–ದೊಡ್ಡ ಕಾರಣಗಳನ್ನು ಹೆಸರಿಸಬಹುದು. ಆದರೆ ಒಟ್ಟಾಗಿ ನೋಡುವುದಾದಲ್ಲಿ, ಈ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯೇ ಇಲ್ಲ. ಎಂದರೆ, ಅಂತಹ ಮನಸ್ಥಿತಿಯೇ ಇಲ್ಲ. ಇಲ್ಲಿರುವುದು, 'ವರ್ಲ್ಡ್ಸ್ ಲಾರ್ಜೆಸ್ಟ್ ಡೆಮಾಕ್ರಸಿ' ಎಂದು ತನ್ನನ್ನು ತಾನು ವೈಭವೀಕರಿಸುವ ಒಂದು ನಕಲಿ ಪ್ರಜಾಪ್ರಭುತ್ವ ಮಾತ್ರ.

ಹೀಗಾಗಿ ಈ ಸಮಾಜದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಸದ್ಗುಣಗಳನ್ನು ನಿರೀಕ್ಷೆ ಮಾಡುವುದೇ ತಪ್ಪು ಎಂದು, ತಡವಾಗಿಯಾದರೂ, ಕಂಡುಕೊಂಡು, ಅದಕ್ಕೆ ಪೂರಕವಾದ ಅಂಶ–ಮಾಹಿತಿಗಳನ್ನೆತ್ತಿಕೊಂಡು, 'ಛೆ! ಇದೆಂತಾ ಪ್ರಜಾಪ್ರಭುತ್ವ?' ಎಂಬ ಪುಸ್ತಕದಲ್ಲಿ ದಾಖಲಿಸಿದೆ (ಶ್ರೀನಿವಾಸ ಪುಸ್ತಕ ಪ್ರಕಾಶನ, 2011).

ಆ ಅಂಶಗಳಲ್ಲೊಂದು– ಸಾಮಾಜಿಕ ಸಮಾನತೆ. ಈ ಕುರಿತು ನನ್ನ ನೇರ ಅನುಭವಕ್ಕೆ ಬಂದ ಒಂದೆರಡು ಘಟನೆ–ವಿಷಯಗಳನ್ನು ಈ ಲೇಖನದಲ್ಲಿ ಕೊಡುತ್ತಿದ್ದೇನೆ.

ಅದಕ್ಕಿಂತ ಮೊದಲು, ಅಸಲಿ ಮತ್ತು ನಕಲಿ– ಈ ಎರಡು ಪದಗಳ ಬಗ್ಗೆ ನನ್ನ ವಿವರಣೆ ಅಗತ್ಯ. ಮುಖ್ಯವಾಗಿ ಯಾವುದು ಅಸಲಿ ಮತ್ತು ಯಾವುದು ನಕಲಿ, ಇದರ ಪತ್ತೆ ಹೇಗೆ? ಇದಕ್ಕೆ ಉತ್ತರ, ಆಯಾಯ ವಸ್ತು–ವಿಷಯದ ಮೇಲೆ ಹೊಂದಿಕೊಂಡಿರಬಹುದು. ಆದರೆ, ಜಸ್ಟ್ ಫಾರ್ ದ ಸೇಕ್ ಆಫ್ ಆರ್ಗ್ಯುಮೆಂಟ್, ಹತ್ತು ರೂಪಾಯಿ ನೋಟನ್ನು ತೆಗೆದುಕೊಳ್ಳೋಣ.

ಇದರಲ್ಲಿ ಹಲವಾರು ವೈಶಿಷ್ಟ್ಯಗಳಿವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯ– ಈ ಹೆಸರು, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ, ನೋಟಿನ ಒಂದು ಮುಖದಲ್ಲಿದೆ. ಅದರ ಕೆಳಾಗೆ 'ಹತ್ತು' ಸಂಖ್ಯೆ ಇದೆ. ಸಂಖ್ಯೆಯ ಕೆಳಗೆ 'ದಸ್ ರೂಪಯೆ' ಎಂದು ಹಿಂದಿ ಭಾಷೆಯಲ್ಲಿ ಬರೆಯಲಾಗಿದೆ. ನಗುವ ಗಾಂಧೀಜಿ ಚಿತ್ರ (ತಲೆ) ನೋಟಿನ ಬಲಬದಿಯಲಿದೆ. ಅವರ ಒಂದು (ಎಡ) ಕಿವಿ ಮಾತ್ರ ಕಾಣುತ್ತಿದೆ. ನೋಟಿನ ಸಂಖ್ಯೆಯನ್ನು ಎರಡು ಮೂಲೆಗಳಲ್ಲಿ ಸೂಚಿಸಲಾಗಿದೆ. ನೋಟಿನ ಇನ್ನೊಂದು ಮುಖದಲ್ಲಿ, ಪೊದೆಯೊಳಗಿಂದ ಹೊರಗಿಣುಕುವ ಹುಲಿಯ ಚಿತ್ರ ಇದೆ. ಟೆನ್ ರುಪೀಸ್ ಎಂದು ಇಂಗ್ಲಿಷ್ ಭಾಷೆಯಲ್ಲಿ ಮತ್ತು ದಸ್ ರೂಪಯೆ ಎಂದು ಹಿಂದಿ ಭಾಷೆಯಲ್ಲಿ ಬರೆಯಲಾಗಿದೆ.... ಹೀಗೆ, ಟೆನ್ ರುಪೀಸ್ ನೋಟಿನಲ್ಲಿ ಹಲವಾರು ವೈಶಿಷ್ಟ್ಯಗಳನ್ನು ಕಾಣಬಹುದು. ಒಟ್ಟು ಎಷ್ಟು? ಅದನ್ನೆಲ್ಲ ಲೆಕ್ಕ ಮಾಡುವುದರ ಬದಲು, ಎರಡು ಡಜನ್ ಎಂದುಕೊಳ್ಳೋಣ.

ಒಂದು ಹತ್ತು ರೂಪಾಯಿ ನೋಟು ಅಸಲಿ ಎಂದುಕೊಳ್ಳಬೇಕಾದರೆ, ಈ ಇಪ್ಪತ್ನಾಲ್ಕು ವೈಶಿಷ್ಟ್ಯಗಳಲ್ಲಿ ಎಷ್ಟು ಅಸಲಿ, ಅಥವಾ ಅಥೆಂಟಿಕ್ ಆಗಿರಬೇಕು? ಎಲ್ಲವೂ, ಅಲ್ವಾ? ಎಂದರೆ, ಇಪ್ಪತ್ನಾಲ್ಕರಲ್ಲಿ ಇಪ್ಪತ್ನಾಲ್ಕು– ಎಂದರೆ, ಶೇಕಡಾ ನೂರು– ಅಸಲಿಯಾಗಬೇಕು. ಆಗ ಮಾತ್ರ ಅದು ತಾಜಾ ಅಥವಾ ಅಸಲಿ ನೋಟು. ಇಪ್ಪತ್ನಾಲ್ಕರಲ್ಲಿ ಒಂದು– ಬರೀ ಒಂದು– ವೈಶಿಷ್ಟ್ಯ ಅಸಲಿ ಆಗದಿದ್ದರೂ ಸಾಕು, ಅದು ಅಸಲಿ ನೋಟು ಅಲ್ಲ. ಎಂದರೆ, ಅದು ನಕಲಿ ನೋಟು ಎಂದು ಪರಿಗಣಿಸಲ್ಪಡುತ್ತದೆ.

ಎಂದರೆ, ನೂರಕ್ಕೆ ನೂರು ಅಥೆಂಟಿಕ್ ಆದರೆ ಮಾತ್ರ ಅದು ತಾಜಾ ನೋಟು, ಮತ್ತು ಅದಕ್ಕೆ ಬೆಲೆ ಇದೆ– ಹತ್ತು ರೂಪಾಯಿ. ನೂರಕ್ಕೆ ನೂರರ ಬದಲು ತೊಂಬತ್ತೊಂಬತ್ತು ಅಸಲಿಯಾಗಿ, ಉಳಿದ ಒಂದು ನಕಲಿ ಆದದ್ದೇ ಆದರೆ ಅದು, ಹೌದು, ಯಾವುದೇ ಬೆಲೆ ಇರದ ನಕಲಿ ನೋಟು.

ಇದನ್ನೇ ಥೀಸಿಸ್ ಆಗಿಟ್ಟುಕೊಂಡು, ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಸಲಿ ಅಥವಾ ನಕಲಿ ಎಂದು ಪ್ರತ್ಯೇಕಿಸುವುದಾದರೆ, ಅಥೆಂಟಿಕ್, ಅಥವಾ ಅಸಲಿ ಪ್ರಜಾಪ್ರಭುತ್ವ

ಎಂದು ಗುರುತಿಸಬೇಕಾದರೆ, ಪ್ರಜಾಪ್ರಭುತ್ವದ ಹಲವಾರು ಅಂಶಗಳಲ್ಲಿ ಎಲ್ಲವೂ– ಶೇಕಡಾ ನೂರು– ಅಸಲಿಯಾಗಲೇಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ, ಅಥವಾ ಅಶುದ್ಧ, ಅನಿಸುವ ಒಂದು– ಬರೀ ಒಂದು– ಅಂಶ ಕಂಡುಬಂದರೂ ಅದು ನಕಲಿ ಪ್ರಜಾಪ್ರಭುತ್ವ ಅನಿಸಿಕೊಳ್ಳುತ್ತದೆ. ಧಾರ್ಮಿಕ ಗೂಂಡಾಗಿರಿ, ರಾಜಕೀಯ ದಬ್ಬಾಳಿಕೆ, ಸಾಮಾಜಿಕ ಕ್ರೌರ್ಯ, ಜಾತಿ ವ್ಯವಸ್ಥೆ, ಬೆಳೆಸಿಕೊಂಡು ಬಂದ ಅಸಮಾನತೆ, ಕೌಟುಂಬಿಕ ಶೋಷಣೆ, ಗ್ರಾಮಗಳ ನಿರ್ಲಕ್ಷ್ಯ, ಶಿಕ್ಷಣದ ವ್ಯಾಪಾರೀಕರಣ... ಇವೇ ಮುಂತಾದ ಹಲವಾರು ವೈಶಿಷ್ಟ್ಯಗಳ ಪೈಕಿ ಒಂದೇ ಒಂದು ಕಂಡುಬಂದರೂ ಸಾಕು, ಅದನ್ನು ನಕಲಿ ಪ್ರಜಾಪ್ರಭುತ್ವ ಎಂದು ಪರಿಗಣಿಸಬೇಕು. ಒಂದರ ಬದಲು, ಈ ಎಲ್ಲಾ ಅಂಶಗಳೂ ಸೇರಿಕೊಂಡರೆ? ಆಗ ಅದು ನಕಲಿ ವ್ಯವಸ್ಥೆ ಆಗದೆ ಬೇರೇನಾಗಲು ಸಾಧ್ಯ?

ಕೆಲವರ್ಷಗಳ ಹಿಂದೆ ನನಗೆ ಮಂಗಳೂರಿನ ಒಂದು ಕಾಲೇಜ್‌ನ ಪ್ರಿನ್ಸಿಪಾಲರನ್ನು ಅವರ ಕೊಠಡಿಯಲ್ಲಿ ಭೇಟಿಮಾಡುವ ಅವಕಾಶ ಬಂತು. ಆ ಕಾಲೇಜ್‌ನಲ್ಲೇ ಕಲಿತು ಇತ್ತೀಚೆಗಷ್ಟೇ ಪಿಯುಸಿ ಮುಗಿಸಿದ ವಿದ್ಯಾರ್ಥಿನಿಯೊಬ್ಬಳಿಗೆ ಒಂದು ಸರ್ಟಿಫಿಕೇಟ್ ಬೇಕಾಗಿತ್ತು. ನಾನು ಅವಳೊಂದಿಗೆ ಆ ಕೊಠಡಿಯೊಳಗೆ ಹೋದೆ.

ನನಗೆ ಪ್ರಿನ್ಸಿಪಾಲರ ಪರಿಚಯ ಇರಲಿಲ್ಲ, ಆದರೆ ನನ್ನೊಂದಿಗಿದ್ದ ವಿದ್ಯಾರ್ಥಿನಿಗೆ ಅವರು ಚೆನ್ನಾಗಿ ಗೊತ್ತಿತ್ತು ಮತ್ತು ವೈಸ್ ವರ್ಸ. ಮಾಳಿಗೆಯ ಒಂದು ಬೃಹತ್ ಹಾಲ್ ಅವರ ಆಫೀಸ್ ಆಗಿತ್ತು. ಅದರ ಒಂದು ಮೂಲೆಯಲ್ಲಿ ಅವರ ಭಾರೀ ಉದ್ದದ ಮೇಜು. (ಸುಮಾರು ಅದೇ ಗಾತ್ರದ ಹಾಲ್ ಗ್ರೌಂಡ್‌ಫ್ಲೋರ್‌ನಲ್ಲಿದೆ. ಅದು ಸ್ಟಾಫ್ ರೂಮ್. ಎಂದರೆ, ಕಾಲೇಜ್‌ನ ಎಲ್ಲಾ ಅಧ್ಯಾಪಕರಿಗೂ ಅಲ್ಲಿ ಜಾಗ ಮಾಡಿಕೊಡಲಾಗಿದೆ. ಒಂದಕ್ಕೊಂದು ಅಂಟಿಕೊಂಡಂತಿರುವ ಚಿಕ್ಕಚಿಕ್ಕ ಮೇಜುಗಳು ಮತ್ತು ಅವುಗಳ ಹಿಂದೆ ಒತ್ತೊತ್ತಾಗಿ ಇರಿಸಿದ ಕುರ್ಚಿಗಳು, ಅಷ್ಟೇ. ಪ್ರಿನ್ಸಿಪಾಲರದ್ದು ದೊಡ್ಡ ಚೇಂಬರ್, ಮತ್ತು ಅಧ್ಯಾಪಕರದ್ದು ಬರೀ ಕುರ್ಚಿ.)

ಪ್ರಿನ್ಸಿಪಾಲರ ಅಗಲ ಮೇಜಿನೆದುರು ಹಲವು ಖಾಲಿ ಕುರ್ಚಿಗಳಿದ್ದವು. ನನ್ನೊಂದಿಗೆ ಬಂದ ವಿದ್ಯಾರ್ಥಿನಿ, ಮುಂದೆ ಹೋಗಿ, ಪ್ರಿನ್ಸಿಪಾಲರಿಗೆ ಸಲಾಂ ಹೊಡೆದು, ಕುತ್ತಿಗೆಯನ್ನು ಕೆಳಗೆ ಮಾಡಿ, ಬೆನ್ನು ಬಗ್ಗಿಸಿ, ತಪ್ಪಿತಸ್ಥಳಂತೆ ಮೇಜಿನೆದುರು ನಿಂತಳು. ಅವ್ರಿಗೆ ಅವಳ ಹೆಸರು ನೆನಪಿತ್ತು. ಹಾಗಾಗಿ ಅವಳ ಹೆಸರು ಕರೆದು, ಏನು ಬಂದದ್ದು ಎಂದು ಕೇಳಿದರು. ಮತ್ತು ವಾರೆಗಣ್ಣು ಮಾಡಿ ನನ್ನನ್ನು ನೋಡಿದರು. ಕುಳಿತುಕೊಳ್ಳಲು ಕರೆ ಬರಬಹುದು ಎಂಬ ನಿರೀಕ್ಷೆ ಮಾಡುತ್ತಿದ್ದೆ. 'ಹ್ಯಾವ್ ಎ ಸೀಟ್, ಪ್ಲೀಸ್'– ಹೀಗೇನಾದರೂ ಅವರ ಬಾಯಿಯಿಂದ ಬರಬಹುದಾ? ಬರಲಿಲ್ಲ.

ಅವರು ಕೇಳಿದ ಪ್ರಶ್ನೆಗೆ ವಿದ್ಯಾರ್ಥಿನಿ ಉತ್ತರ ಹೇಳಿದಳು. ಅದನ್ನು ಕೇಳಿ ನನ್ನ ಕಡೆ ನೋಡುತ್ತಾ ಪ್ರಿನ್ಸಿಪಾಲರು ನನ್ನ ಬಗ್ಗೆ ವಿಚಾರಿಸಿದರು. ಅವಳ ಹೇಳಿಕೆಯ ನಂತರ, ನನ್ನನ್ನು ನೋಡಿ, ನನಗೇನೋ ಉಪಕಾರ ಮಾಡುವ ಧಾಟಿಯಲ್ಲಿ ಅವರು ಹೇಳಿದರು– 'ಕುಳಿತುಕೊಳ್ಳಿ'.

ನಾನು ಥ್ಯಾಂಕ್ಯೂ ಎಂದು ಹೇಳಿ, ಒಂದು ಕುರ್ಚಿ ಎಳೆದು ಕುಳಿತುಕೊಂಡೆ. ನನ್ನ ಎರಡೂ ಬದಿಗಳಲ್ಲಿ ಒಟ್ಟು ಐದಾರು ಖಾಲಿ ಕುರ್ಚಿಗಳಿದ್ದವು. ನನ್ನೊಂದಿಗಿದ್ದ ವಿದ್ಯಾರ್ಥಿನಿಗೆ ಹೇಳಿದೆ– 'ಬಾ, ಕುಳಿತುಕೋ'. ಅವಳು ಹಿಂದೆ ಮುಂದೆ ನೋಡಿದಳು. ತಕ್ಷಣ ಪ್ರಿನ್ಸಿಪಾಲರು ಹೇಳಿದರು, 'ಬೇಡ, ಬೇಡ. ಅವಳು ಕುಳಿತುಕೊಳ್ಳಬಾರದು. ಅದು ಅವಳಿಗೂ ಗೊತ್ತಿದೆ. ಅವಳು ನಮ್ಮ ಸ್ಟೂಡೆಂಟ್ ಅಲ್ವಾ. ಹೀಗಾಗಿ ಅವಳು ಕುಳಿತುಕೊಳ್ಳಲಿಕ್ಕಿಲ್ಲ.'

ಅವರ ಮಾತಿನಿಂದ ನಾನು ಸ್ವಲ್ಪ ಗೊಂದಲಕ್ಕೊಳಗಾದೆ. ಎದ್ದು ನಿಲ್ಲುವ ಪ್ರಯತ್ನ ಮಾಡುತ್ತಾ ನಾನು ಹೇಳಿದೆ– 'ನಾನು ಕೂಡಾ ನಿಂತಿರುತ್ತೇನೆ, ಐ ಡೋಂಟ್ ಮೈಂಡ್...' ಕೈಯಿಂದ ನನಗೆ ಕುಳಿತುಕೊಳ್ಳಲು ಸೂಚಿಸುತ್ತಾ ಪ್ರಿನ್ಸಿಪಾಲರು ಹೇಳಿದರು– 'ನೀವಲ್ಲ... ಅವಳು ಮಾತ್ರ. ನೀವು ಇಲ್ಲಿನ ಸ್ಟೂಡೆಂಟ್ ಅಲ್ಲ... ಅಧ್ಯಾಪಕರೆದುರು ಕುಳಿತುಕೊಳ್ಳಬಾರದು ಎಂದು ನಮ್ಮ ಸ್ಟೂಡೆಂಟ್ಸ್‌ಗೆ ಗೊತ್ತಿದೆ, ಅಲ್ವಾ?'– ಹಾಗೆ ಹೇಳಿ, ಹುಬ್ಬು ಹಾರಿಸಿ ಅವಳನ್ನು ನೋಡಿದರು. ಹೌದು ಗೊತ್ತಿದೆ ಎಂಬಂತೆ ಅವಳು ತಲೆ ಅಲ್ಲಾಡಿಸಿದಳು. ಮುಂದುವರಿಸುತ್ತಾ ಪ್ರಿನ್ಸಿಪಾಲರು ಹೇಳಿದರು– 'ಇದು, ನಮ್ಮ ಸ್ಟೂಡೆಂಟ್ಸ್ ಆದವರು, ಅಧ್ಯಾಪಕರಿಗೆ ತೋರಿಸುವ ಗೌರವದ ಸಂಕೇತ.'

ಮುಂದೆ ಸ್ವಲ್ಪ ಹೊತ್ತಿನ ನಂತರ ನಾವು ಆ ಕೊಠಡಿಯಿಂದ ಹೊರಗೆ ಬಂದೆವು.

ಬಹು ಹಿಂದಿನಿಂದಲೂ ನಮ್ಮ ಸಮಾಜದಲ್ಲಿ ಒಂದು ವರ್ಗ ಅಥವಾ ಜಾತಿಯ ಜನರು ಯಾವಾಗಲೂ ಕುಳಿತುಕೊಂಡೇ ಇರುವ ಅರ್ಹತೆ ಪಡೆದು ಬಂದವರು. ಅವರು ಇತರರಿಂದ ಗೌರವವನ್ನು ಪಡೆಯುವವರು... ಹಾಗೆಯೇ, ಇನ್ನೊಂದು ವರ್ಗ ಅಥವಾ ಜಾತಿಯ ಜನರು ಕುಳಿತುಕೊಂಡಿರುವ ಅರ್ಹತೆ ಪಡೆಯದೆ ಬಂದವರು. ಅವರು ಇತರರಿಗೆ ಗೌರವ ಕೊಡುವವರು. ಎಂದರೆ ನಿಂತುಕೊಂಡೇ ಇರಬೇಕಾದವರು.

ಈ ಸಾಮಾಜಿಕ ಅಸಮಾನತೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶ ಇದೆಯಾ? ಖಂಡಿತಾ ಇಲ್ಲ. ಗೌರವ ಕೊಡುವವರೂ ಅವರೇ, ಗೌರವ ಪಡೆಯುವವರೂ ಅವರೇ. ಎಲ್ಲರೂ ಸಮಾನರು ಎಂದ ಮೇಲೆ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಪ್ರತಿಯೊಬ್ಬರೂ ಪ್ರತಿಯೊಬ್ಬರಿಗೂ ಗೌರವ ಕೊಡುತ್ತಾರೆ, ಮತ್ತು ಅವರಿಂದ ಗೌರವ ಪಡೆಯುತ್ತಾರೆ.

'ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ' ಎಂದು ಕರೆಸಿಕೊಳ್ಳುವ ನಮ್ಮ ನಾಡಿನ

ಸಾಮಾಜಿಕ ವ್ಯವಸ್ಥೆಯಲ್ಲಿ, ಅದೆಷ್ಟೋ ಶತಮಾನಗಳಷ್ಟು ಹಳೆಯ ಜಾತಿ–ಧರ್ಮ ಅಸಮಾನತೆ, ದಶಕಗಳ ಹಿಂದೆಯೇ ಮಾಯವಾಗಬೇಕಿತ್ತು. ಆಗಿದೆಯಾ? ದುರಂತವೆಂದರೆ, ಸಾಮಾಜಿಕ ಸಮಾನತೆಯನ್ನು ಮುಂದಿನ ಪ್ರಜೆಗಳಿಗೆ ಪಾಠ ಮಾಡಬೇಕಿದ್ದ ಶಿಕ್ಷಣರಂಗದಲ್ಲೂ ಈ ಹಳೆಯ ರೋಗ ಹರಡುತ್ತಲೇ ಇದೆ, ಬೆಳೆಯುತ್ತಲೇ ಇದೆ.

ಕೆಲವರ್ಷಗಳ ಹಿಂದೆ ನಾನು ಐಐಟಿ ಮದ್ರಾಸ್‌ನಲ್ಲಿ ನಡೆದ ಒಂದು ಸೆಮಿನಾರ್‌ನಲ್ಲಿ, ಕಟ್ಟಡಗಳ ರಚನೆಯಲ್ಲಿ ಫಂಕ್ಷನ್, ಯುಟಿಲಿಟಿ, ಮತ್ತು ಏಸ್ತೆಟಿಕ್ಸ್–ಇವುಗಳ ಹೊಂದಾಣಿಕೆಯ ಬಗ್ಗೆ ಒಂದು ಪೇಪರ್ ಪ್ರಸೆಂಟೇಶನ್ ಮಾಡುತ್ತಿದ್ದೆ. ನನ್ನ ಹೇಳಿಕೆಗಳಿಗೆ ಪೂರಕವಾಗಿ ಬೇರೆ ಬೇರೆ ಉದಾಹರಣೆಗಳನ್ನು ಕೊಡುತ್ತಿದ್ದೆ.

ಒಂದು ಉದಾಹರಣೆಯಾಗಿ, ಐಐಟಿ ಕ್ಯಾಂಪಸ್‌ನ ಮೂರುಮಾಳಿಗೆಯ ಕೆಲವು ರೆಸಿಡೆಂಶಿಯಲ್ ಕ್ವಾರ್ಟರ್ಸ್‌ಗಳನ್ನೆತ್ತಿಕೊಂಡು, ಅವುಗಳ ಸ್ಟೇರ್‌ಕೇಸ್ ರಚನೆಯ ಬಗ್ಗೆ ಆಕ್ಷೇಪಣೆ ಎತ್ತಿದೆ. ಈ ಕಟ್ಟಡಗಳಲ್ಲಿ ಎರಡು ಸ್ಟೇರ್‌ಕೇಸ್‌ಗಳಿವೆ. ಒಂದು ಮುಂಭಾಗದಲ್ಲಿ, ಇನ್ನೊಂದು ಹಿಂಭಾಗದಲ್ಲಿ. ಮುಂಭಾಗದ ಸ್ಟೇರ್‌ಕೇಸ್‌ನ ಬುಡದಿಂದ ಹೊರಟ ಕಾಂಕ್ರೀಟ್‌ನ ಕಾಲುದಾರಿ ನೇರವಾಗಿ ಮಾರ್ಗಕ್ಕೆ ಕೂಡುತ್ತದೆ. ಇದರ ಮೆಟ್ಟಲು ಸಾಕಷ್ಟು ಅಗಲವಾಗಿದ್ದು, ಹತ್ತಿ–ಇಳಿಯಲು ಹಿತ ಅನಿಸುತ್ತದೆ.

ಹಿಂಭಾಗದ ಮೆಟ್ಟಲು ಹುಲ್ಲು–ಮುಳ್ಳು ಬೆಳೆದ ಮಣ್ಣಿನ ನೆಲದಲ್ಲಿ ಅಂತ್ಯಗೊಳ್ಳುತ್ತದೆ. ಇದು ತುಂಬಾ ಸಪೂರದ (ಒಬ್ಬೊಬ್ಬರಷ್ಟೇ ಹತ್ತಬಹುದು ಅಥವಾ ಇಳಿಯಬಹುದು, ಎರಡೂ ಅಸಾಧ್ಯ) ಸ್ಪೈರಲ್ ಸ್ಟೇರ್‌ಕೇಸ್. ಎಂದರೆ, ಹತ್ತುವವರು ಅಥವಾ ಇಳಿಯುವವರು, ಸುತ್ತಿಸುತ್ತಿಕೊಂಡೇ ಅದನ್ನು ಉಪಯೋಗ ಮಾಡಬೇಕು. ಅದಲ್ಲದೆ, ಯಾವುದೇ ಮೈಂಟೆನೆನ್ಸ್ ಇಲ್ಲದೆ, ಅದರ ಮೆಟ್ಟಲುಗಳಿಗೆ ಅಲ್ಲಲ್ಲಿ ತೂತು ಬಿದ್ದಿವೆ.

ಒಂದೇ ಕಟ್ಟಡದಲ್ಲಿ ಎರಡು ವಿಭಿನ್ನ ಸ್ಟೇರ್‌ಕೇಸ್‌ಗಳು. ಎರಡರದ್ದೂ ಉಪಯೋಗ (ಫಂಕ್ಷನ್) ಒಂದೇ ರೀತಿ – ಕಟ್ಟಡವಾಸಿಗಳಿಗೆ ಹತ್ತಿ–ಇಳಿಯಲು ಸುಲಭ ಆಗಬೇಕು. ಆದರೆ ಅವುಗಳ ರಚನೆ ಬೇರೆಬೇರೆ. ಒಂದು ಎಲ್ಲರ ಹೆಮ್ಮೆಯ ರಾಜಮಾರ್ಗ. ಇನ್ನೊಂದು ಇಕ್ಕಟ್ಟಾದ ಗದ್ದೆಯ ಓಣಿ. ಒಂದನ್ನು ಪ್ರತಿದಿನ ಗುಡಿಸಿ ಸ್ವಚ್ಛಮಾಡಲಾಗುತ್ತದೆ. ಇನ್ನೊಂದನ್ನು ಕೇಳುವವರೇ ಇಲ್ಲ. ಯಾಕೆ ಹೀಗೆ? ಎಂದು ನಾನು ಸಭಿಕರಿಗೆ (ಇಂಜಿನಿಯರ್ಸ್‌ಗೆ) ಕೇಳಬೇಕೆನ್ನುವಷ್ಟರಲ್ಲಿ, ಒಬ್ಬ ಹಿರಿಯರು ಸಭೆಯಲ್ಲಿ ಕುಳಿತಲ್ಲಿಂದಲೇ ಹೇಳಿದರು – 'ಅದೇನು ವಿಶೇಷ? ಹಿಂಬದಿಯ ಸ್ಟೇರ್‌ಕೇಸ್ ಸರ್ವೆಂಟ್‌ಗಳ ಉಪಯೋಗಕ್ಕೆ ಮಾತ್ರ.' (ಸರ್ವೆಂಟ್ಸ್ ಪದದ ಬದಲು ಅವರು ತಮಿಳಿನ ಒಂದು ಕೀಳು ಪದವನ್ನು ಉಪಯೋಗಿಸಿದರು.)

ಬೇರು ಸೂರು

ಕಟ್ಟಡದ ಬೇರೆಬೇರೆ ಬಿಡಾರಗಳಿಗೆ ಪ್ರತಿನಿತ್ಯ ಮನೆಕೆಲಸಕ್ಕೆ ಬಂದುಹೋಗುವವರು ಮುಂಭಗದ ಸ್ಟೇರ್‌ಕೇಸನ್ನು ಉಪಯೋಗಿಸುವಂತಿಲ್ಲ ಎಂಬುದು ಅವರ ಹೇಳಿಕೆಯ ಅರ್ಥ. ಎಂದರೆ, ಮನೆ ಒಡೆಯರು ಮತ್ತು ಅವರ ಕುಟುಂಬದವರಿಗೆ ಒಂದು ಸುಂದರ ಮಾರ್ಗ, ಮತ್ತು ಕೆಲಸದವರಿಗೆ ಬೇರೊಂದು ಹೊಲಸು ಓಣಿ. ಮನೆ ಒಡೆಯರು ಹಾಗೂ ಕುಟುಂಬದವರಿಗೆ ಅಗಲವಾದ ಹೈವೇ. ಮತ್ತು ಮನೆಕಸವನ್ನು ಎತ್ತಿ ಒಯ್ಯುವವರಿಗೆ ಇಕ್ಕಟ್ಟಾದ ಕೆಸರುಮಣ್ಣಿನ ಓಣಿ. (ಸರ್ವೆಂಟ್ಸ್ ಉಪಯೋಗಿಸುವ ಮೆಟ್ಟಲನ್ನು ಅಲ್ಲಿನ ಮನೆಯವರು ಉಪಯೋಗಿಸುತ್ತಿರಲಿಲ್ಲ ಎಂಬುದು ಮುಂದೆ ನನ್ನ ಗಮನಕ್ಕೆ ಬಂತು.)

ಕಟ್ಟಡ ರಚನೆಯಲ್ಲೂ ಒಡೆಯ-ಆಳು ವರ್ಗ ಪದ್ಧತಿಯನ್ನು ಅನುಸರಿಸುತ್ತಿರುವ ಸಮಾಜದಲ್ಲಿ ಸಮಾನತೆಯ ನಿರೀಕ್ಷೆ ಸಾಧ್ಯವಾ?

ಇತ್ತೀಚೆಗೆ ಒಂದೆರಡು ವರ್ಷಗಳ ಹಿಂದೆ ನಾನು ಬೆಳ್ತಂಗಡಿ ಸಮೀಪದ ಒಂದು ಪುಟಾಣಿ ಹಳ್ಳಿ ಶಾಲೆಗೆ ಭೇಟಿಕೊಟ್ಟೆ. ಅದು ಸರಕಾರಿ ಶಾಲೆ. ಎಂದರೆ, ಅದು ಕನ್ನಡ ಮೀಡಿಯಂ ಶಾಲೆ. ಒಂದರಿಂದ ಏಳನೆ ತರಗತಿಯವರೆಗೆ ಅಲ್ಲಿ ಸುತ್ತಮುತ್ತ ಸುಮಾರು ನಾಲ್ಕೈದು ಕಿ.ಮೀ. ದೂರದಿಂದ ಮಕ್ಕಳು ಬರುತ್ತಾರೆ. ಕೆಲ ವರ್ಷಗಳ ಹಿಂದೆ ಇನ್ನೂರು ಮುನ್ನೂರು ಇದ್ದ ವಿದ್ಯಾರ್ಥಿ ಸಂಖ್ಯೆ ಈಗ ಅರುವತ್ತೈದು ಎಪ್ಪತ್ತಕ್ಕೆ ಇಳಿದಿದೆ. ಕೆಲವು ತರಗತಿಗಳಿಗೆ ಹತ್ತು-ಹನ್ನೆರಡು ಮಕ್ಕಳು; ಇನ್ನು ಕೆಲವು ತರಗತಿಗಳಿಗೆ ಬರೀ ನಾಕು-ಐದು, ಅಷ್ಟೆ. ಮಕ್ಕಳ ಸಂಖ್ಯೆ ತೀರಾ ಕಡಿಮೆ ಇರುವುದರಿಂದ ಅಲ್ಲಿ (ಮತ್ತು ಅಂತಹ ಹಲವು ಶಾಲೆಗಳಲ್ಲಿ) ಅಧ್ಯಾಪಕರ ಸಂಖ್ಯೆ ಕೇವಲ ಮೂರು. ಎಂದರೆ, ಒಂದು ಟೀಚರ್‌ಗೆ ಎರಡು (ಅಥವಾ ಮೂರು) ತರಗತಿಗಳಿಗೆ, ಒಟ್ಟಿಗೆ, ಪಾಠ ಮಾಡಬೇಕಾದ ದುರವಸ್ಥೆ.

ಈ ಸಂಕಷ್ಟಕ್ಕಿಂತ ಇನ್ನಷ್ಟು ಕಳವಳಕಾರಿ ಸಂಗತಿ ಎಂದರೆ ಆ ಶಾಲಾ ಮಕ್ಕಳ ಸಾಮಾಜಿಕ ಸ್ಥಿತಿ ಮತ್ತು ಆರ್ಥಿಕ ಮಟ್ಟ. ಮೇಲು ಜಾತಿಯ, ಕ್ರಿಶ್ಚಿಯನ್ ಧರ್ಮದ ಮತ್ತು ಊರಿನ ಪ್ರಜ್ಞಾವಂತ ನಾಗರಿಕರ ಒಂದೇ ಒಂದು ಮಗು ಆ ಶಾಲೆಯಲ್ಲಿಲ್ಲ. ಆ ಮಕ್ಕಳು ಅಲ್ಲಿಂದ ಎರಡು-ಮೂರು ಕಿ.ಮೀ. ದೂರದ ಇಂಗ್ಲಿಷ್ ಮೀಡಿಯಂ ಪ್ರೈವೇಟ್ ಶಾಲೆಯಲ್ಲಿ ಓದುತ್ತಿದ್ದಾರೆ.

ಆ ಕನ್ನಡ ಶಾಲೆಗೆ ಬರುವವರು ಸುತ್ತಮುತ್ತಲಿನ ದಲಿತ ಕುಟುಂಬಗಳ (ದಲಿತ ಸಮುದಾಯದ) ಮತ್ತು ಬಡ ಮುಸ್ಲಿಮರ ಮಕ್ಕಳು ಮಾತ್ರ. ಹರಕು ಬಟ್ಟೆ ಹಾಕಿಕೊಂಡು, ಹಸಿದಹೊಟ್ಟೆಯಲಿ ಶಾಲೆಗೆ ಬಂದ (ಅನಾರೋಗ್ಯ ಪೀಡಿತರಂತೆ ಕಂಡುಬರುವ) ಮಕ್ಕಳನ್ನು ನೋಡಿ 'ಇದೇನು ಹೀಗೆ?' ಎಂದು ವಿಚಾರಿಸಿದೆ.

'ಮೂರ್ನಾಲ್ಕು ಕಿ.ಮೀ. ದೂರದಿಂದ ನಡೆದುಕೊಂಡು ಬರುತ್ತಾರೆ, ಪಾಪ. ಕೆಲವರಿಗೆ ಮನೆಯಲ್ಲಿ ಬೆಳಿಗ್ಗೆ ಊಟ-ತಿಂಡಿ ಇರುವುದಿಲ್ಲ. ಅದಲ್ಲದೆ, ನಾನಾ

ಕಾರಣಗಳಿಂದ ಆಗಾಗ ಸಣ್ಣಪುಟ್ಟ ಕಾಯಿಲೆ ಬಂದು ಅವರು ಮನೆಯಲ್ಲಿಯೇ ಉಳಿಯುತ್ತಾರೆ. ವಾರದಲ್ಲಿ ಮೂರುದಿನ ಶಾಅಲೆಗೆ ಬರುತ್ತಾರೆ, ಮತ್ತೆರಡು ದಿನ ರಜೆ ಮಾಡುತ್ತಾರೆ. ಹೀಗಾಗಿ ಕಲಿಕೆಯಲ್ಲಿ ಹಿಂದೆ ಬೀಳುತ್ತಾರೆ. ಪಾಠ-ಹೋಂವರ್ಕ್ ಬಗ್ಗೆ ಸ್ಟ್ರಿಕ್ಟ್ ಮಾಡಿದರೆ, ಕೆಲವುದಿನ ರಜೆ ಮಾಡುತ್ತಾರೆ. ಶಾಲೆಗೇ ಬಾರದೆ ಶಿಕ್ಷಣ ಸಿಗುವುದು ಹೇಗೆ? ಮನೆಯ ವಾತಾವರಣ ಅವರ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವುದಿಲ್ಲ...' ಹೀಗೆ ಹಲವು ಕಾರಣಗಳನ್ನು ಶಾಲೆಯಲ್ಲಿ ತಿಳಿಸಿದರು.

ಮುಂದೆ ನಾನು ಆ 'ದಲಿತ ಕಾಲನಿ'ಗೆ ಭೇಟಿಕೊಟ್ಟೆ. ಸರಕಾರ ಕೊಟ್ಟ ಪೋಸ್ಟಲ್ ಸ್ಟಾಂಪ್‌ನಷ್ಟು ಚಿಕ್ಕ ಜಾಗದಲ್ಲಿ ಗುಡಿಸಲು ಕಟ್ಟಿ ಬದುಕುತ್ತಿರುವ ಆರೇಳು ಡಜನ್ ಕುಟುಂಬಗಳು ಅಲ್ಲಿದ್ದವು. (ಮುಸ್ಲಿಮರನ್ನು ಹೊರತುಪಡಿಸಿ ಅಲ್ಲಿ ಮತ್ತು ಸುತ್ತಮುತ್ತ ಯಾವುದೇ ಮೇಲುಜಾತಿಯವರ ಮನೆಗಳಿಲ್ಲ. ದಲಿತರು ವಾಸ ಮಾಡುವ ಪ್ರದೇಶದಲ್ಲಿ ಉಳಿದವರು ವಾಸ ಮಾಡುವುದಿಲ್ಲ.) ಆ ಮನೆಗಳಲ್ಲಿ ನೀರಿನ ಪೈಪ್ ಇಲ್ಲ, ಕರೆಂಟ್ ಇಲ್ಲ, ಕುಳಿತುಕೊಳ್ಳಲು ಒಂದು ಕುರ್ಚಿಯೂ ಇಲ್ಲ, ಮತ್ತು ಓದು-ಬರಹವನ್ನು ಪ್ರೋತ್ಸಾಹಿಸುವ ವ್ಯವಸ್ಥೆಯಾಗಲೀ ಅಥವಾ ಸಾಮಗ್ರಿಯಾಗಲೀ ಇಲ್ಲವೇ ಇಲ್ಲ.

ಆ ವಸತಿ ಸಮೂಹಕ್ಕೆ ತೀರಾ ಸಮೀಪದಲ್ಲಿ (ಒಂದು ಕಿ.ಮೀ. ದೂರದಲ್ಲಿ) ಒಂದು ಸರಕಾರಿ ಪದವಿ ಪೂರ್ವ ಕಾಲೇಜ್ ಇದೆ. ಆದರೆ ಈ ವಠಾರದ ಯಾವೊಬ್ಬ ವಿದ್ಯಾರ್ಥಿಯೂ ಅಲ್ಲಿಗೆ ಕಾಲಿಟ್ಟಿಲ್ಲ. ಏಕೆಂದರೆ, ಹೈಸ್ಕೂಲ್ (ಹತ್ತನೇ ತರಗತಿ) ಶಿಕ್ಷಣ ಪೂರ್ತಿ ಮಾಡಿದವರು ವಠಾರದಲ್ಲಿ ಒಬ್ಬರೂ ಇಲ್ಲ.

ಶಿಕ್ಷಣ ಪಡೆಯದ ಹೊರತು ಈ ದಲಿತ ಮಕ್ಕಳು ತಾವಿರುವ ಅಂಧಕಾರದ ಪರಿಸರದಿಂದ ಹೊರಗೆ ಬರುವುದು ಸಾಧ್ಯವೇ ಇಲ್ಲ ಎಂಬ ನಂಬಿಕೆಯಿಂದ ನಾನು ಅಲ್ಲಿನ ಕೆಲವು ತಾಯಂದಿರ ಮುಂದೆ ಒಂದು ಪ್ರಪೋಸಲ್ ಇಟ್ಟೆ- 'ಪ್ರತೀದಿನ ಇಲ್ಲಿನ (ಮತ್ತು ಸುತ್ತಮುತ್ತಲಿನ) ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿ, ಹಿಂದೆ ತಂದು ಬಿಡಲು ರಿಕ್ಷಾ ವ್ಯವಸ್ಥೆ ಆರಂಭಿಸಿದರೆ, ಮತ್ತು ಅವರ ಬೆಳಗ್ಗಿನ ಉಪಾಹಾರದ ವ್ಯವಸ್ಥೆಯನ್ನು ಶಾಲೆಯಲ್ಲಿಯೇ ಮಾಡಿದರೆ (ಎಲ್ಲವೂ ಉಚಿತ), ಮಕ್ಕಳನ್ನು ಶಾಲೆಗೆ ಪ್ರತಿದಿನ ತಪ್ಪದೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ನೀವು ವಹಿಸಿಕೊಳ್ಳುತ್ತೀರಾ?'

ತಕ್ಷಣ ಅವರು ಒಪ್ಪಿಗೆ ಸೂಚಿಸಿದರು. ಆದರೆ, ಶಾಲೆಯ ಮ್ಯಾನೇಜಿಂಗ್ ಟ್ರಸ್ಟ್‌ನ ಒಬ್ಬರು ಹೇಳಿದರು- 'ನೀವು ನಮ್ಮ ಶಾಲೆಗಾಗಿ ತುಂಬಾ ಹಣ ಖರ್ಚು ಮಾಡಲು ಹೊರಟಿದ್ದೀರಿ. ಆದರೆ ಆ ಜನಗಳು ಬದಲಾಗುವುದಿಲ್ಲ; ನೋಡಿ ಬೇಕಾದರೆ. ಕಪ್ಪುನಾಯಿಯನ್ನು ಬಿಳಿನಾಯಿ ಮಾಡಲಿಕ್ಕಾಗುತ್ತದಾ?' ಆದರೆ, ಪೆಸ್ಸಿಮಿಸಂಗೆ ಅವಕಾಶ ಕೊಡದೆ, ಹೊಸ ಪ್ರಯೋಗವನ್ನು ಶುರುಮಾಡಿದೆ.

ಮುಂದಿನ ವಾರದಿಂದ ಈ ವ್ಯವಸ್ಥೆ ಜಾರಿಯಾಯಿತು. ಪ್ರತೀದಿನ ಎರಡೆರಡು ರಿಕ್ಷಾ- ಬೆಳಿಗ್ಗೆ ಎರಡು, ಸಂಜೆ ಎರಡು; ಶಾಲೆಯ ಎಲ್ಲಾ ಮಕ್ಕಳಿಗೆ ಬೆಳಗ್ಗಿನ

ಬ್ರೇಕ್‌ಫಾಸ್ಟ್... ಎರಡೆರಡು ವಾರಕ್ಕೊಮ್ಮೆ ಅಲ್ಲಿಗೆ ಹೋಗಿ ವಿಚಾರಿಸಿಕೊಂಡು ಬರುತ್ತಿದ್ದೆ.

ಆರಂಭದ ಎರಡು ಮೂರು ತಿಂಗಳು ಎಲ್ಲವೂ ನಿರೀಕ್ಷೆಯಂತೆ ನಡೆಯಿತು. ಪ್ರಯೋಗದಲ್ಲಿ ಯಶಸ್ಸು ಸಿಗಬಹುದೆಂದು ಅನಿಸಿತು. ಎಲ್ಲಾ ಮಕ್ಕಳು ಪ್ರತಿದಿನ ತಪ್ಪದೆ ಶಾಲೆಗೆ ಬರುತ್ತಿದ್ದರು. ಶೇ. 60–70 ಇದ್ದ ಅಟೆಂಡೆನ್ಸ್, 90–100ಕ್ಕೆ ಏರಿತು. ಬೆಳಗ್ಗಿನ ತಿಂಡಿಯಿಂದಾಗಿ ಮಕ್ಕಳು ಇಡೀದಿನ ಲವಲವಿಕೆಯಿಂದ ಇರುತ್ತಿದ್ದರು. ಆದರೆ?

ಆದರೆ, ನನ್ನ ಉದ್ದೇಶ ಏನು? ಅವರ ಹೊಟ್ಟೆಯನ್ನು ತಂಪು ಮಾಡುವುದಲ್ಲ. ಅಥವಾ ಅವರ ಕಾಲ್ನಡಿಗೆಗೆ ವಿಶ್ರಾಂತಿ ಕೊಡುವುದಲ್ಲ. ಉದ್ದೇಶ ಹಾಗೂ ನಿರೀಕ್ಷೆ– ಅವರ ಶೈಕ್ಷಣಿಕ ಪ್ರಗತಿ. ಇದು ಸಾಧ್ಯವಾ?

ಅಧ್ಯಾಪಕರು ಹೇಳಿದ್ದು ಹೀಗೆ– 'ಮಕ್ಕಳು ಮೊದಲಿಗಿಂತ ರೆಗ್ಯುಲರ್ ಆಗಿ ಶಾಲೆಗೆ ಬರುತ್ತಿದ್ದಾರೆ, ಹೌದು. ಆದರೆ, ಹೋಂವರ್ಕ್ ಮಾಡಿ ತರುವುದಿಲ್ಲ. ವಿಚಾರಿಸಿದರೆ, ಉದ್ಧಟತನದ ಉತ್ತರ ಸಿಗುತ್ತದೆ. ಶಾಲೆಯಲ್ಲಿ ಅವರ ಉಪಟಳ ಜಾಸ್ತಿಯಾಗಿದೆ (ಬೆಳಗ್ಗೆ ತಿಂಡಿ ತಿಂದು ಕೆಲವರು ಭಾರೀ ಉತ್ಸಾಹ ಪ್ರದರ್ಶಿಸಿದರೆ, ಇನ್ನು ಕೆಲವರಿಗೆ ತೂಕಡಿಕೆ– ನಿದ್ದೆ). ನಾವು ಹೇಳಿದ್ದೊಂದೂ ಕೇಳುವುದಿಲ್ಲ. ಎಷ್ಟೇ ಪ್ರಯತ್ನ ಮಾಡಿದರೂ ಕಲಿಯುವುದಿಲ್ಲ. ಕಲಿಯಬೇಕೆಂಬ ಮನಸ್ಸೇ ಇಲ್ಲ. ಮನೆಗೆ ರಿಕ್ಷಾ ಬರುತ್ತದೆ ಮತ್ತು ಫ್ರೀ ತಿಂಡಿ–ಊಟ ಸಿಗುತ್ತದೆ ಎಂದು ಹೆತ್ತವರು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಮಕ್ಕಳ ವಿದ್ಯಾಭ್ಯಾಸದ ಚಿಂತೆ ಅವರಿಗಿಲ್ಲ.'

ಮಕ್ಕಳ ಶೈಕ್ಷಣಿಕ ಪ್ರಗತಿಯ ಪರಿಶೀಲನೆ ಮಾಡಲು ಇನ್ನಷ್ಟು ಸಮಯ ಬೇಕು ಎಂದುಕೊಂಡು, ಆ ಎಕಡೆಮಿಕ್ ಇಯರ್ ಅಂತ್ಯದವರೆಗೆ ಪ್ರಯೋಗವನ್ನು ಮುಂದುವರಿಸಿದೆ. ವರ್ಷ ಮುಗಿಯುತ್ತಾ ಬರುತ್ತಿದ್ದಂತೆ ರಿಕ್ಷಾದಲ್ಲಿ ಬರುವವರ ಸಂಖ್ಯೆಯಲ್ಲಿ ಇಳಿಮುಖ ಕಂಡುಬಂತು. ಹೆತ್ತವರಲ್ಲಿ ಈ ಬಗ್ಗೆ ವಿಚಾರಿಸಿದಾಗ ಕುಂಟುನೆಪಗಳು ಕೇಳಿಬಂದವು. ಮಕ್ಕಳ ಶಿಕ್ಷಣ–ಕಲಿಕೆಯಲ್ಲಿ ಅಭಿವೃದ್ಧಿ ಆಗಿದೆಯಾ? ಈ ಪ್ರಶ್ನೆಗೆ ಅಧ್ಯಾಪಕರ ಉತ್ತರ ಸಮಾಧಾನ ತರಲಿಲ್ಲ. ನಿರಾಶೆಪಟ್ಟುಕೊಂಡು ಪ್ರಯೋಗವನ್ನು ನಿಲ್ಲಿಸಿದೆ.

ಇದರೊಂದಿಗೆ ಇನ್ನೊಂದು ಪ್ರಯೋಗವನ್ನು ಶುರುಮಾಡಿದೆ. ಮನೆಯ ವಾತಾವರಣದಲ್ಲಿ ಬದಲಾವಣೆ ತಂದರೆ ಮಕ್ಕಳ ಶೈಕ್ಷಣಿಕ ಪ್ರಗತಿ ಸಾಧ್ಯವಾದೀತಾ? ಇದು ನನ್ನ ಮುಂದಿದ್ದ ಪ್ರಶ್ನೆ.

ಅದೇ ಶಾಲೆಯಲ್ಲಿ ಏಳನೇ ತರಗತಿ ಮುಗಿಸಿದ ಒಬ್ಬ (ಕೊರಗ ಸಮುದಾಯದ) ವಿದ್ಯಾರ್ಥಿನಿಯ ತಾಯಿ, 'ಇನ್ನು ಶಾಲೆ ಸಾಕು' ಎಂದು ಮಗಳನ್ನು ಮನೆಯಲ್ಲಿ ಇಟ್ಟುಕೊಳ್ಳುವವಳಿದ್ದರು. ವಿದ್ಯಾರ್ಥಿನಿಯ ಎಕಡೆಮಿಕ್ ಸ್ಟಾಂಡಿಂಗ್ ಬಗ್ಗೆ ಅಧ್ಯಾಪಕರಲ್ಲಿ ವಿಚಾರಿಸಿದೆ. 'ಶಾಲೆಗೇ ಬರುತ್ತಿರಲಿಲ್ಲ ಅವಳು, ಶಾಲೆಗೆ ತಪ್ಪದೆ ಬಂದರೆ ಹುಷಾರಾದಾಳು' ಎಂದು ಸರ್ಟಿಫಿಕೇಟ್ ಸಿಕ್ಕಿತು.

ಬೇರು ಸೂರು

ತಾಯಿ ಮತ್ತು ಮನೆಯವರಲ್ಲಿ ವಿಚಾರಿಸಿದೆ– 'ನಾನು ಅವಳನ್ನು ನನ್ನ ಮನೆಯಲ್ಲಿಟ್ಟುಕೊಂಡು ಓದಿಸುತ್ತೇನೆ. ಕಳುಹಿಸಲು ತಯಾರಿದ್ದೀರಾ?' ಒಪ್ಪಿಗೆ ಕೊಟ್ಟರು. ಮೊದಲು ತಾಯಿ ಮತ್ತು ಮಗಳು ಇಬ್ಬರನ್ನೂ ಮನೆಗೆ ಕರೆದುಕೊಂಡು ಬಂದು, ಇಲ್ಲಿನ ವ್ಯವಸ್ಥೆಯ ಪರಿಚಯ ಮಾಡಿಸಿದೆ. 'ಸರಿ, ನೀವೇ ಓದಿಸಿ' ಎಂದರು ತಾಯಿ.

ಅವಳನ್ನು ನನ್ನ ಮನೆಗೆ ಸಮೀಪದ ಒಂದು ಖಾಸಗಿ ಕನ್ನಡ ಶಾಲೆಯಲ್ಲಿ ಎಂಟನೆ ತರಗತಿಗೆ ಸೇರಿಸಿದೆ (ಬಸ್ಸಲ್ಲಿ ಹೋಗಿ ಬರಬೇಕು). ಅವಳ ಕಲಿಕೆಗೆ ಬೇಕಾದ ಎಲ್ಲಾ ಅಗತ್ಯ ಸೌಲಭ್ಯಗಳನ್ನೂ ಮನೆಯಲ್ಲಿ ಪೂರೈಸಿದೆ. ದಿನನಿತ್ಯದ ಓದಿಗೆ ಟೈಮ್–ಟೇಬಲ್ ಹಾಕಿಕೊಟ್ಟೆ. ಪಾಠಗಳ ಬಗ್ಗೆ ಸಂದೇಹ–ಪ್ರಶ್ನೆಗಳು ಬಂದಾಗ ಕೂತು ವಿವರಿಸಿದೆ... ಮೊದಲ ಪರೀಕ್ಷೆ ಆಯ್ತು. ಪಾಸಾದಾಳು ಎಂದುಕೊಂಡೆ. ಆದರೆ, ಎಲ್ಲಾ ವಿಷಯಗಳಲ್ಲೂ ಫೈಲ್. ಗಳಿಸಿದ ಅಂಕಗಳು ನೂರರಲ್ಲಿ ಮೂರು, ಐದು, ಆರು,...

ಇದಕ್ಕೆ ಪರಿಹಾರ ಹೇಗೆ? ಪ್ರತೀದಿನ ಸಂಜೆ ಅವಳಿಗೆ ಕೋಚಿಂಗ್ ಕೊಡತೊಡಗಿದೆ. ಆಗ ತಿಳಿಯಿತು– ಇಂಗ್ಲಿಷ್‌ನಿಂದ ಹಿಡಿದು ಗಣಿತದವರೆಗೆ ಮೂಲಭೂತ ಜ್ಞಾನವೂ ಅವಳಿಗಿರಲಿಲ್ಲ. ಎಂದರೆ, ಎಂಟನೆ ತರಗತಿಯಲ್ಲಿದ್ದರೂ ತಿಳುವಳಿಕೆಯ ಮಟ್ಟಿಗೆ ಅವಳು ಎರಡನೆ ಅಥವಾ ಮೂರನೆ ತರಗತಿಯ ವಿದ್ಯಾರ್ಥಿ ಆಗಿದ್ದಳು. ಹೀಗಾಗಿ ಯಾವಯಾವ ಪಾಠಗಳನ್ನು ಎಲ್ಲಿಂದ ಅಥವಾ ಯಾವ ಹಂತದಿಂದ ಕೋಚಿಂಗ್ ಮಾಡಬೇಕೆಂದು ತಿಳಿಯದೆ, ಅದೂ ಇದೂ ಟ್ರಯಲ್ಸ್ ಮಾಡಿದೆ. ಆದರೆ, ಯಾವುದೂ ಫಲ ಕೊಡಲಿಲ್ಲ.

ಮಧ್ಯವಾರ್ಷಿಕ ಪರೀಕ್ಷೆ ಮುಗಿಯಿತು, ಮುಂದಿನ ಕ್ಲಾಸ್ ಪರೀಕ್ಷೆಗಳು ಮುಗಿದವು. ಅವಳಿಗೆ ದೊರಕಿದ್ದು ಒಂದಂಕಿಗಳು ಮಾತ್ರ. ಮುಂದೇನು? ಶಾಲೆಯ ಹೆಡ್‌ಮಾಸ್ಟರರನ್ನು ಭೇಟಿಮಾಡಿದೆ. ಅವರಿಂದ ಭರವಸೆ ಸಿಗಲಿಲ್ಲ. ಅವರು ಹೇಳಿದ್ದು ಹೀಗೆ– 'ಅದೇ ಸಮುದಾಯದ ಇನ್ನೂ ಒಂದಿಬ್ಬರು ಅದೇ ಕ್ಲಾಸ್‌ನಲ್ಲಿದ್ದಾರೆ. ಆದರೆ ಅವರೆಲ್ಲರ ಫಲಿತಾಂಶ ಒಂದೇ ರೀತಿ– ನೂರರಲ್ಲಿ ಹತ್ತು ಅಂಕಕ್ಕಿಂತ ಜಾಸ್ತಿ ಇಲ್ಲ. ಅಧ್ಯಾಪಕರು ಸಾಕಷ್ಟು ಪ್ರಯತ್ನ ಮಾಡುತ್ತಾರೆ. ಆದರೆ, ಫಲಿತಾಂಶದಲ್ಲಿ ಸುಧಾರಣೆ ಇಲ್ಲ. ಎಂಟನೇ ತರಗತಿಯಲ್ಲಿ ನಾವು ಎಲ್ಲರನ್ನೂ ಒಂಬತ್ತನೇ ತರಗತಿಗೆ ಪಾಸ್ ಮಾಡಿ ಕಳುಹಿಸುತ್ತೇವೆ. ಆದರೆ ಒಂಬತ್ತನೇ ತರಗತಿಯಲ್ಲಿ ಮಿನಿಮಮ್ ಮಾರ್ಕ್ಸ್ ಪಡೆಯಲೇಬೇಕು. ಪಡೆಯದಿದ್ದವರನ್ನು ಫೈಲ್ ಮಾಡುತ್ತೇವೆ. ನಿಮ್ಮ ಮನೆಯ ಹುಡುಗಿ ಪಾಸಾಗುವುದು ಕಷ್ಟ...'

ನಾನೇನು ಮಾಡಬೇಕು? ಎಂಟನೇ ತರಗತಿಯ ವಾರ್ಷಿಕ ಪರೀಕ್ಷೆಗಳು ಮುಗಿದ ತಕ್ಷಣ ನಾನು ಅವಳನ್ನು ಅವಳ ಮನೆಗೆ ಕೊಂಡುಹೋಗಿ ಬಿಟ್ಟೆ. ಛೇ! ಎರಡು ಪ್ರಯೋಗಗಳಲ್ಲೂ ಸೋಲು. ನನ್ನ ನಿರೀಕ್ಷೆಗಳೆಲ್ಲಾ ಸುಳ್ಳಾದವು.

ಆದರೆ, ಒಂದು ಅಂಶ ಮನದಟ್ಟಾಯಿತು. ಹುಟ್ಟು, ಜಾತಿ, ಧರ್ಮ, ಕುಟುಂಬ,

ಇತ್ಯಾದಿ ಅಂಶಗಳ ಆಧಾರದಲ್ಲಿ ಅಸಮಾನತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿರುವ ಸಮಾಜದಲ್ಲಿ, ಶತಮಾನಗಳಿಂದಲೂ ಶಿಕ್ಷಣದಿಂದ ವಂಚಿತರಾಗಿ ಕೀಳುಮನುಷ್ಯರೆಂದು ಗುರುತಿಸಿಕೊಂಡು ಬಂದ ಪ್ರಜೆಗಳನ್ನು ಸಮಾನತೆಯ ಆಧಾರದಲ್ಲಿ ಸುಧಾರಣೆ ಮಾಡಲು ಹಲವಾರು ದಶಕಗಳೇ ಬೇಕಾಗಬಹುದು. ಅದರ ಬದಲು, ಅಸಮಾನತೆಯನ್ನೇ ಬೆಳೆಸಿಕೊಂಡು ಬಂದು ಅದೇ ಆಧಾರದಲ್ಲಿ ಸುಧಾರಣೆಗೆ ಹೊರಟರೆ, ಇನ್ನೂ ಸಾವಿರಾರು ವರ್ಷ ಕಳೆದರೂ, ಅವರು ಕೀಳುದರ್ಜೆಯ ಪ್ರಜೆಗಳಾಗಿಯೇ ಗುರುತಿಸಲ್ಪಡುತ್ತಾರೆ.

ಇಲ್ಲಿನ ಒಂದು ಪ್ರೈವೇಟ್ ಶಿಕ್ಷಣ ಸಂಸ್ಥೆಯಲ್ಲಿ (ಪ್ರಿ-ಯುನಿವರ್ಸಿಟಿ ಕಾಲೇಜ್) ನನ್ನ ಇಬ್ಬರು ಹೆಣ್ಣುಮಕ್ಕಳನ್ನು ಎಡ್ಮಿಶನ್‌ಗೆ ಕರೆದುಕೊಂಡು ಹೋದೆ. (ಈ ಬಗ್ಗೆ ಕಾಲೇಜಿನಲ್ಲಿ ಮೊದಲೇ ಮಾತನಾಡಿ ಬಂದಿದ್ದೆ.) ಎಪ್ಲಿಕೇಶನ್ ಫಾರ್ಮ್ ಕೊಟ್ಟರು. ಹೆಸರು, ವಿಳಾಸ ಇತ್ಯಾದಿ ಅಗತ್ಯ ವಿವರಗಳ ನಂತರ, ಆ ಫಾರ್ಮ್‌ನಲ್ಲಿ ರಿಲಿಜನ್, ಕಾಸ್ಟ್ ಇತ್ಯಾದಿ ಧಾರ್ಮಿಕ ನಂಬಿಕೆಗಳ ಬಗ್ಗೆ ಮಾಹಿತಿ ಕೊಡಬೇಕೆಂದಿತ್ತು. ನಮ್ಮ ಮನೆಯಲ್ಲಿ ಧಾರ್ಮಿಕ ಅಥವಾ ಜಾತಿ ಆಧಾರಿತ ನಂಬಿಕೆಗಳಿಲ್ಲ. ಎಂದರೆ, ನಮಗೆ ರಿಲಿಜನ್ ಇಲ್ಲ. ಹೀಗಾಗಿ ಆ ಖಾಲಿಜಾಗದಲ್ಲಿ 'ನೋ ರಿಲಿಜನ್' ಎಂದು ಬರೆಯಲು ನಾನು ಮಕ್ಕಳಿಗೆ ಸೂಚಿಸಿದೆ.

ನಾವು ಒಪ್ಪಿಸಿದ ಫಾರ್ಮ್‌ಗಳನ್ನು ನೋಡಿದ ಕಾಲೇಜ್ ಅಧಿಕಾರಿಗಳು ಈ ಬಗ್ಗೆ ಆಕ್ಷೇಪಣೆ ಎತ್ತಿದರು– 'ನೋ ರಿಲಿಜನ್ ಎಂದು ಬರೆದಿದ್ದೀರಿ. ಅದು ಸರಿಯಲ್ಲ'– ಎಂದು ಅವರು ಹೇಳಿದಾಗ ನಾನು– 'ನಮಗೆ ಧರ್ಮವೂ ಇಲ್ಲ, ಜಾತಿಯೂ ಇಲ್ಲ. ಅದನ್ನೇ ನಾವು ಸೂಚಿಸಿದ್ದು' ಎಂದು ಹೇಳಿದೆ. 'ನಿಮ್ಮದು ಹಿಂದೂ ಹೆಸರು. ಹಾಗಾಗಿ ಹಿಂದೂ ಎಂದು ಬರೆಯಿರಿ'– ಎಂದು ಹೇಳಿದರು. 'ನೀವು ನಮಗೆ ರಿಲಿಜನ್ ಕೊಡುವುದು ಬೇಡ. ಧರ್ಮದ ಆಯ್ಕೆ ಅವರವರಿಗೆ ಬಿಟ್ಟ ವಿಚಾರ. ನೀವು ಅದನ್ನು ನಮ್ಮ ಮೇಲೆ ಬಲಾತ್ಕಾರ ಮಾಡುವ ಹಾಗಿಲ್ಲ' ಎಂದು ಖಾರವಾಗಿಯೇ ಹೇಳಿದೆ.

ಆದರೆ ಈ ವಾದ-ಚರ್ಚೆ ಅವರಿಗೆ ಬೇಕಾಗಿರಲಿಲ್ಲ. ಮಕ್ಕಳ ಎಡ್ಮಿಶನ್‌ಗೆ ತೊಂದರೆ ಆಗಬಾರದೆಂದು ನಾನು, ರಿಲಿಜನ್ ಇದ್ದಲ್ಲಿ 'ಇಂಡಿಯನ್' ಎಂದು ಬರೆಯಲು ಸೂಚಿಸಿದೆ. (ಹೆಚ್ಚಿನ ಎಲ್ಲಾ ಕಛೇರಿಗಳಲ್ಲಿ ಪ್ರಜೆಗಳ ಅಭಿಪ್ರಾಯಕ್ಕೆ ಅಥವಾ ಮಾತಿಗೆ ಅವಕಾಶವೇ ಇಲ್ಲ, ಬೆಲೆಯೂ ಇಲ್ಲ. ಅಧಿಕಾರಿಗಳು/ ರಾಜಕಾರಣಿಗಳು ಹೇಳಿದ ಹಾಗೆ ಮಾಡುವುದಷ್ಟೇ ಪ್ರಜೆಗಳಿಗಿರುವ ಚಾಯ್ಸ್.)

ಒಂದು ಅಸಲಿ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಜೆಗಳಿಗೆ ಸಂವಿಧಾನ ಕೊಟ್ಟ ಹಕ್ಕುಗಳನ್ನು ಸರಕಾರವೇ ಕಿತ್ತುಕೊಳ್ಳುವ ಸಾಧ್ಯತೆ ಇದೆಯಾ? ಚುನಾವಣೆಯಲ್ಲಿ ಓಟು

ಹಾಕುವುದೊಂದನ್ನು ಬಿಟ್ಟು ಮಿಕ್ಕ ಹಕ್ಕುಗಳನ್ನು ತಮಗೆ ಖುಷಿ ಬಂದ ಹಾಗೆ ಕಿತ್ತುಕೊಳ್ಳುವ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದೆಯಾ?

ಮುಂದೆ, ಮಕ್ಕಳ ಎಡ್ಮಿಶನ್ ಫೀ ಕೊಡುವ ಸಂದರ್ಭದಲ್ಲಿ ಕಾಲೇಜ್‌ನ ಅಧಿಕಾರಿಗಳು ಒಂದು ಸಣ್ಣ ಚೀಟಿಯನ್ನು ನನ್ನ ಮುಂದಿಟ್ಟು– 'ಇದರಲ್ಲಿ ನಿಮ್ಮ ಹೆಸರು, ವಿಳಾಸ ಬರೆದು, ಡೇಟ್ ಮತ್ತು ಸೈನ್ ಹಾಕಿ ಹಿಂದೆ ಕೊಡಿ' ಎಂದು ತಿಳಿಸಿದರು. ಅದನ್ನು ಓದಿದೆ. ಅದರಲ್ಲಿ ಟೈಪ್ ಮಾಡಿದ್ದ ವಿವರ ಸುಮಾರು ಹೀಗಿತ್ತು: 'ಕಾಲೇಜ್‌ನ ಎಕ್ಸ್ಟ್ರಾಕರಿಕ್ಯುಲರ್ ಆಕ್ಟಿವಿಟಿಯನ್ನು ಮೆಚ್ಚಿಕೊಂಡು, ಅದಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ನಾನು ಸ್ವಯಂಪ್ರೇರಿತನಾಗಿ ಈ ಹಣವನ್ನು ಕಾಣಿಕೆಯಾಗಿ ಕೊಡುತ್ತಿದ್ದೇನೆ' ಪ್ರತಿಯೊಬ್ಬ ವಿದ್ಯಾರ್ಥಿಯ ಹೆತ್ತವರೂ ಅದನ್ನು ಕಡ್ಡಾಯವಾಗಿ ಸಹಿಮಾಡಿ ಕೊಡಬೇಕಿತ್ತು.

ಅದನ್ನು ಓದಿದ ಮೇಲೆ, ಈ ಹಸಿಹಸಿ ಸುಳ್ಳಿಗೆ ನಾನು ಹೇಗೆ ಸಹಿ ಹಾಕುವುದು ಎಂದು ಗೊಂದಲಕ್ಕೆ ಬಿದ್ದೆ. ಕಾಲೇಜ್‌ನ ಆಡಳಿತ ಮಂಡಳಿ ಈ ರೀತಿ ನನ್ನಿಂದ ಬಲಾತ್ಕಾರವಾಗಿ ಸುಳ್ಳು ಹೇಳಿಕೆ ಪಡೆದು, ತಾವು ಸರಕಾರಕ್ಕೆ ಮಾಡುತ್ತಿರುವ ವಂಚನೆಯಲ್ಲಿ ನನ್ನನ್ನೂ ಕೂಡಾ ಪಾಲುದಾರನನ್ನಾಗಿ ಮಾಡುತ್ತಿದೆ ಎಂಬ ಆಘಾತ ಒಂದು ಕಡೆ. ಸಹಿ ಹಾಕದಿದ್ದರೆ ಮಕ್ಕಳಿಗೆ ಎಡ್ಮಿಶನ್ ಸಿಗದೆ ಅವರು ಬೇರೆ ಕಾಲೇಜ್‌ಗೆ ಸೇರಿಕೊಳ್ಳಬೇಕಲ್ಲಾ ಎಂಬ ಬೇಸರ–ಸಂದಿಗ್ಧ ಇನ್ನೊಂದು ಕಡೆ. (ಬೇರೆ ಕಾಲೇಜ್‌ಗಳಲ್ಲೂ ಇದೇ ಪದ್ಧತಿ ಇರಬಹುದು.) ಅಲ್ಲಿಗೆ ಬಂದಿದ್ದ ಎಲ್ಲಾ ಹೆತ್ತವರೂ ಬಾಯಿಮುಚ್ಚಿಕೊಂಡು (ಆತ್ಮಾಭಿಮಾನ ಬದಿಗಿಟ್ಟು?) ಸಹಿ ಹಾಕಿ ಹಿಂದೆ ಕೊಡುತ್ತಿದ್ದಾರೆ. ನಾನೇನು ಮಾಡಬೇಕು?

ನಾನೇನು ಮಾಡಬೇಕು? ಆತ್ಮಾಭಿಮಾನ ಕಳಚಿಟ್ಟು, ಸಹಿಹಾಕಿ ಕೊಟ್ಟೆ. ಒಟ್ಟು ಫೀಯ ಸುಮಾರು ಶೇ.ಎಂಭತ್ತರಷ್ಟು ಹಣವನ್ನು ಹೀಗೆ, ಸುಳ್ಳು ದಾಖಲೆ ಬರೆಸಿ ನನ್ನಿಂದ ಆ ಕಾಲೇಜ್ ಕಿತ್ತುಕೊಂಡಿತು. ಮತ್ತು ನನ್ನ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಹೀಗೆ, ಸರಕಾರಕ್ಕೆ ವಂಚನೆ ಮಾಡಿ ಸ್ವಂತಕ್ಕೆ ಲಾಭ ಮಾಡುವ ಗ್ಯಾಂಗ್‌ನಲ್ಲಿ ನಾನೂ ಸೇರಿಕೊಂಡೆ.

ಇಂಡಿಯದ ಸಮಾಜದಲ್ಲಿ ಪ್ರಜಾಪ್ರಭುತ್ವ ಎಂಬುದು ಒಂದು ಅಂದದ ಘೋಷಣಾಫಲಕ ಮಾತ್ರ. ಹೈಟೆಕ್ ವೇಷಭೂಷಣ ಮತ್ತು ಪುರಾತನ ಕಾಲದ ಮನಸ್ಸು– ಇವೆರಡರ ಮಿಶ್ರಣವಾದ ಪ್ರಜೆಗಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳು ಇವೆಯಾ? ಇಲ್ಲ, ಇಲ್ಲ. ಸಂವಿಧಾನಿಕ ಹಕ್ಕುಗಳು ಇವೆಯಾ? ಇಲ್ಲ, ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಎಲ್ಲರೂ ಸಮಾನರು ಎಂಬ ಚಿಂತನೆ ಇದೆಯಾ? ಖಂಡಿತಾ ಇಲ್ಲ.

ಬೇರು ಸೂರು

ಪ್ರಜಾಪ್ರಭುತ್ವ ಎಂಬುದು ಪ್ರತಿಯೊಬ್ಬ ಪ್ರಜೆಯ ಮನಸ್ಥಿತಿ ಆಗುವವರೆಗೆ ಇಂಡಿಯ ಎಂಬುದು ಒಂದು ಢೋಂಗಿ ಪ್ರಜಾಪ್ರಭುತ್ವ ಮಾತ್ರ... ಸುಮಾರು ಮೂರೂವರೆ ದಶಕಗಳ ಕಾಲ ಅಮೆರಿದಲ್ಲಿದ್ದು ಮತ್ತೆ ಈ ನಕಲಿ ಸಮಾಜಕ್ಕೆ ಬಂದು, ಸಾವಿರಾರು ವರ್ಷಗಳಷ್ಟು ಹಿಂದಿನ ಮನಸ್ಸುಗಳೊಂದಿಗೆ ಸೇರಿಕೊಂಡಿದ್ದೇನಲ್ಲಾ ಎಂದು ಯೋಚನೆ ಮಾಡುವುದನ್ನು ನಾನೀಗ ಬಿಟ್ಟಿದ್ದೇನೆ.

ವಲಸೆವೃತ್ತದ ವರಸೆಯೊಳಗೆ...



– ಸುಪ್ತದೀಪ್ತಿ (ಜ್ಯೋತಿ ಮಹಾದೇವ್)

ಈ ಪದವೇ ಹಾಗೆ; 'ವಲಸೆ' ಅಂದಾಕ್ಷಣ ಗಂಟು ಮೂಟೆಯೊಂದಿಗಿನ ಪಯಣದ ಬಿಂಬ ಮೂಡಿನಿಲ್ಲುವಂಥಾದ್ದು. ವಲಸೆಯ ಗುಣ ಲಕ್ಷಣಗಳೂ ಅವೇ, ಇಲ್ಲಿಂದಲ್ಲಿಗೆ, ಅಲ್ಲಿಂದೆಲ್ಲಿಗೋ... ಚಲನಶೀಲತೆಯೇ ಜೀವನದರ್ಶನವಾದರೂ ಒಂದೆಡೆ ನೆಲೆಯೂರುವ ಬಯಕೆ ಹಿಂಗದಿರುವ ಬಾಯಾರಿಕೆ ಮನುಜನಿಗೆ. ಸದಾ ಚಲನಶೀಲ ಪ್ರಕೃತಿಯ ಮಡಿಲೊಳಗೆ ಎಲ್ಲೋ ಒಂದು ಮೂಲೆಯಲ್ಲಿ ಎರಡೂ ಕಾಲೂರಿ ನೆಲೆಯಾಗುವ ಇಚ್ಛೆಯಿಂದ ಹೊಸ ನೆಲದ ಹುಡುಕಾಟದಲ್ಲಿ, ಸ್ಥಿರತೆಯ ಶೋಧದಲ್ಲಿ ಹೊರಟ ಮಾನವ ಸಮಾಜಕ್ಕೆ ವಲಸೆ ಅನ್ನುವುದು ಜನ್ಮಕ್ಕೇ ಅಂಟಿಕೊಂಡು ಬಂದ ಚಟ, ಆನುವಂಶೀಯ ಸಹಜ ಹವ್ಯಾಸ; ಹಸಿವು– ನಿದ್ದೆ– ಮೈಥುನಗಳಷ್ಟೇ ಸ್ವಾಭಾವಿಕ. ಹೀಗಿದ್ದರೂ ಮನುಜನ ವಲಸೆಯೆನ್ನುವುದು ಪ್ರಾಣಿ– ಪಕ್ಷಿ– ಚಿಟ್ಟೆಗಳ ವಲಸೆಗಿಂತ ಭಿನ್ನವೇ. ಕಾರಣ– ಬಹಳಷ್ಟು ಸಂದರ್ಭಗಳಲ್ಲಿ, ಇತ್ತೀಚಿನ ಕಾಲಮಾನದಲ್ಲಿ, ಮಾನವ ಪ್ರಾಣಿಯು ತನ್ನೆಲ್ಲಾ ಸಂಕುಲದ ಜೊತೆಗೆ, ಪರಿವಾರ–ಸಂಸಾರ ಸಹಿತವೇ ವಲಸೆ ಹೋಗುವುದಿಲ್ಲ. ಒಂಟೊಂಟಿಯಾಗಿಯೋ, ಜಂಟಿಯಾಗಿಯೋ ತನ್ನನುಕೂಲದ ಅನ್ನಾಹಾರಸುಖದ ಹುಡುಕಾಟದಲ್ಲಿ ತೊಡಗಿಕೊಳ್ಳುತ್ತಿರುವುದಾಗಿದೆ. ಆದ್ದರಿಂದಲೇ ಇದೊಂದು ವಿಶಿಷ್ಟ ವಲಸೆ. ವಿವಿಧ ಆಯಾಮಗಳನ್ನು ಒಳಗೊಂಡ ವಲಸೆ. ಸರಿಸುಮಾರು ಮುಕ್ಕಾಲು ಶತಮಾನದಿಂದೀಚೆಗೆ, ಭಾರತದಿಂದ ಪಶ್ಚಿಮದತ್ತ, ಅದರಲ್ಲೂ ಅಮೆರಿಕಾದತ್ತ, ಇಂಥ ವಲಸೆಯ ಏಕಮುಖ ಓಘ ಕಾಣುವ ನಾವು ಮರುವಲಸೆಯ ಬಗ್ಗೆ ಯೋಚಿಸುವುದು ಕಡಿಮೆಯೇ. ಯೋಚಿಸಿದರೂ ಕಾರ್ಯಗತಗೊಳಿಸುವುದು ಇನ್ನೂ ಅಪರೂಪ. ಕೈಗೊಂಡರೂ, ಮರುವಲಸೆ ಕೈಗೂಡಿ ಮರುನೆಲೆಯಾಗುವ ಉದಾಹರಣೆಗಳು ಇನ್ನಷ್ಟು ದುಸ್ತರ. ಯಾಕೆ ಹೀಗೆ? ಚಿಂತನೆಗೆ ಗ್ರಾಸವಾಗಬಹುದಾದ ವಿಷಯವೇ ಇದು?

ಇಂಥ ಒಂದು ಮರು–ವಲಸೆಯನ್ನು ಸಾಧ್ಯವಾಗಿಸಿಕೊಂಡಿರುವ ನಮ್ಮ ಅನುಭವಗಳನ್ನು, ನನ್ನೊಬ್ಬಳ ಮಾತಿನಲ್ಲಿ ಹಂಚಿಕೊಳ್ಳುವುದಕ್ಕೆ ಈ ಪೂರ್ವರಂಗ. ಹಾಗೆ ನೋಡಿದರೆ, ವಲಸೆ ಅನ್ನುವ ಪದ ನನ್ನ ಜನ್ಮಕ್ಕಂಟಿಯೆ ಬಂದಿರುವಂಥಾದ್ದು ಅನ್ನಬಹುದು. ಹುಟ್ಟಿದಾರಭ್ಯ ಮದುವೆಯಾಗಿ ಅತ್ತೆ ಮನೆಗೆ 'ವಲಸೆ' ಬರುವಲ್ಲಿಯ ತನಕ, ಅಪ್ಪ–ಅಮ್ಮರ ಜೊತೆಗೆ, ಇಬ್ಬರು ತಮ್ಮಂದಿರ ಸಮೇತ ನನಗೆ ನೆನಪಿರುವಂತೆಯೇ

ನಾಲ್ಕು ಬಾರಿ ವಲಸೆ ಹೋಗಿದ್ದಾಗಿದೆ. ಮದುವೆಯಾಗಿ ಗಂಡನ ಹಿಂದೆ ಹೊರಟುಬಂದದ್ದು ಕಾರ್ಕಳದಿಂದ ಬೆಂಗಳೂರಿಗೆ. ಎರಡು ಮನೆ ಬದಲಾಯಿಸಿದ ಐದು ವರ್ಷಗಳ ಬಳಿಕ ಅಲ್ಲಿಂದ ಬೇ ಏರಿಯಾ (ಕ್ಯಾಲಿಫೋರ್ನಿಯಾ)ಗೆ. ಆರು ವರ್ಷಗಳ ಕಾಲದಲ್ಲಿ ಅಲ್ಲಿಯೇ ಮೂರು ಮನೆ ಬದಲಾಯಿಸಿದ್ದು ಪರಿಸರ ಬದಲಾವಣೆಯ ವಲಸೆಯಾದೀತೆ? ವೀಸಾ ಮುಗಿದ ನೆಪದಿಂದ ಗಡೀಪಾರಾದಂತೆ ಭಾರತಕ್ಕೆ ಬಂದಾಗ ನೆಲೆಯಾದದ್ದು ಮೈಸೂರು ನಗರ; ಬರೀ ಒಂದೂವರೆ ವರ್ಷಗಳಿಗೆ ಮಾತ್ರ. ಆ ಒಂದು ಮರುವಲಸೆ ಅಲ್ಲಿಗೇ ತಿರುವಲಸೆಯಾಯ್ತು. ಸ್ಯಾನ್-ಡಿಯಾಗೋ ನಗರಕ್ಕೆ ಅನಿವಾರ್ಯವಾಗಿ ಸೇರಿದವರನ್ನು ಹತ್ತೇ ತಿಂಗಳಲ್ಲಿ ಬೇ ಏರಿಯಾ ಮತ್ತೊಮ್ಮೆ ಕೈಬೀಸಿ ಕರೆದಾಗ ಮರಳಿ ತೌರಿಗೆ ಬಂದಂತಾಗಿದ್ದು ನನ್ನೊಬ್ಬಳಿಗೇ ಅಲ್ಲ, ಎಲ್ಲ ಸ್ನೇಹಿತವರ್ಗದ ಪ್ರೀತಿ ಉಂಡಿದ್ದ ಮನೆಮಂದಿಗೆಲ್ಲ.

ಹಾಗೂ ಹೀಗೂ ಲೆಕ್ಕಾಚಾರ ಹಾಕಿ, ಗ್ರೀನ್ ಕಾರ್ಡ್ ಪಡೆದ ಬೆನ್ನಲ್ಲೇ ಪುನಃ ಗಂಟುಮೂಟೆ ಕಟ್ಟಿ ಹೊರಟು ಕಾಲೂರಿದ್ದು ಮಣಿಪಾಲದಲ್ಲಿ, ಕಾರ್ಕಳಕ್ಕೆ ಸಮೀಪವೆನ್ನುವ ನೆಪದಲ್ಲಿ. ಆದರ್ಯಾಕೋ ಅಲ್ಲಿಗೂ ಈ ವಲಸೆದೇವರಿಗೆ ನಮ್ಮ ಮೇಲೆ ಸಮಾಧಾನವಾಗಿರಲಿಲ್ಲ. ಹೆತ್ತವರ ಹತ್ತಿರವಿರುವ ಅವಕಾಶವನ್ನು ಇಪ್ಪತ್ತೆರಡು ತಿಂಗಳಲ್ಲೇ ಕತ್ತರಿಸಿ ಮತ್ತೊಮ್ಮೆ ಬೇ ಏರಿಯಾ ಕಡೆಗೆ ದೂಡಿತು. ಯಾರ ಮೇಲೆ ಮುನಿಸ್ಯಾಡಿ ಏನುಪಯೋಗ? ವಲಸೆ ಪ್ರಕ್ರಿಯೆಯ ನಿಷ್ಣಾತರಾಗುವ ಅವಕಾಶ ಎಲ್ಲರಿಗೂ ದಕ್ಕೀತೇ, ಅಂದುಕೊಂಡು ಮಗದೊಮ್ಮೆ ತಿರುಗಾಳಿಯ ಸುಳಿಹಿಡಿದೆವು. ಬೇ ಏರಿಯಾ ಅನ್ನುವುದು ಕ್ಯಾಲಿಫೋರ್ನಿಯಾದ ಬೆಂಗಳೂರು. ಕನ್ನಡಿಗರ ಮನೆಯಾಚೆಗಿನ ಮನೆ; ನಿಜ. ಹಾಗಂತ ನಮ್ಮ ಬೇರು ಅಲ್ಲಿಳಿಯಲೇ ಇಲ್ಲ. ಸ್ವಂತ ನೆಲೆಯಾಗಲಿಲ್ಲ ನಿಂತ ನೆಲ. ಅದೊಂದು ಹಂತದಲ್ಲಿ ಹಠವಾದಿ ರಾಜಾ ತ್ರಿವಿಕ್ರಮನ ಕುಲದವರಂತೆ ಪೆಟ್ಟಿಗೆಗಳನ್ನು ಹೊತ್ತು ಮರಳಿ ಮಣಿಪಾಲದಲ್ಲಿ ಇಳಿಸಿ ಇದೀಗ ಇದನ್ನು ಬರೆಯುವ ಕಾಲಕ್ಕೆ ಮೂರು ವರ್ಷ. ಇನ್ನು ಇಲ್ಲಿಯೇ ಗ್ಯಾರಂಟಿ ಅಂದುಕೊಂಡಾಗೆಲ್ಲ ಅಲ್ಲಿಯ ಎಲ್ಲ ಸ್ನೇಹಿತರ ಬಾಂಧವ್ಯದ ಸೆಳೆತದ ಜೊತೆಗೇ ಮಗ ಅಲ್ಲಿಯೇ ಕಲಿಯುತ್ತಿರುವ, ಕೆಲಸ ಹುಡುಕುತ್ತಿರುವ ವಾಸ್ತವ ಎದುರಾಗುತ್ತದೆ. ಮತ್ತೊಂದು ಸಾಧ್ಯತೆಯ ಸೂಚನೆಯೆ? ಗೊತ್ತಿಲ್ಲ, ಬಿಡಿ.

ಈ ಮೊದಲೇ ಎರಡು ಬಾರಿ ಬಂದು-ಹೋಗಿದ್ದಕ್ಕೂ ಈ ಸಲ ಬಂದಿರುವುದಕ್ಕೂ ನಮ್ಮ ಯೋಚನೆಗಳಲ್ಲಿ, ನಿರೀಕ್ಷೆಗಳಲ್ಲಿ ವ್ಯತ್ಯಾಸಗಳೇನಿಲ್ಲ (ನಮ್ಮಿಂದ ಏನೇನನ್ನೋ ಬಯಸುವವರ ನಿರೀಕ್ಷೆಗಳ ಲೆಕ್ಕ ಇಲ್ಲೀಗ ಅಪ್ರಸ್ತುತ). ಯಾವುದೇ ವಿಶೇಷವನ್ನು ಬಯಸದೆ, ಎಲ್ಲರೊಳಗೊಂದಾಗಿಯೂ ನಮ್ಮಷ್ಟಕ್ಕೆ ನಾವಾಗಿರುವ ಸಾದಾ ಸೀದಾ ಬದುಕಿನ ಆಶಯ ನಮ್ಮದು. ಬೇಕೆಂದಾಗ, ಕರೆ ಬಂದಾಗ, ಅವಕಾಶವಿದ್ದಾಗ, ಅವಶ್ಯವಿದ್ದಾಗ, ಬರೇ ಮೂವತ್ತು-ಮೂವತ್ತೈದು ಕಿಲೋಮೀಟರ್ ಅಂತರದಲ್ಲಿರುವ ಎರಡು ಜೊತೆ ಹೆತ್ತವರ ಅಂಗಳದಲ್ಲಿಳಿಯುವ ನಿರೀಕ್ಷೆಯೊಂದೇ ನಮಗಿದ್ದದ್ದು

ಎನ್ನಬಹುದು. ನಮ್ಮದೇ ಹೊತ್ತಲ್ಲಿ ನಮ್ಮದೇ ವೇಗದ ಗತಿ–ಮಿತಿಯಲ್ಲಿ ಓಡಾಡಲು, ಹೆತ್ತವರನ್ನು ಅವರಿಗೆ ಬೇಕಾದಲ್ಲಿಗೆ ಬೇಕೆನಿಸಿದಾಗ ಓಡಾಡಿಸಲು ಮರುಮಾರಾಟಕ್ಕಿದ್ದ ಕಾರೊಂದನ್ನು ಖರೀದಿಸಿ ಮನೆಮುಂದೆ ನಿಲ್ಲಿಸಿಕೊಂಡೆವು.

ಈ ಹಿಂದೆ, 2003–04ರಲ್ಲಿ, ಮಣಿಪಾಲದಲ್ಲಿ ಈ ಮನೆ ಕೊಂಡು, ಸ್ವಲ್ಪ ಬದಲಾವಣೆ ಮಾಡಿ ನೆಲೆಸಿದ್ದಾಗಲೂ ಈ ಊರಿನ ಎಲ್ಲೆಡೆ ನಾನೂ ಕಾರ್ ಚಲಾಯಿಸುತ್ತಿದ್ದೆ. ಅದು ಅನಿವಾರ್ಯವೂ ಆಗಿತ್ತು (ಮಹಾದೇವ್ ಆಗ, ಒಂದು ವರ್ಷ ಬೇ–ಏರಿಯಾದಲ್ಲೂ, ಮತ್ತೆ ಹತ್ತು ತಿಂಗಳು ಪೂನಾದಲ್ಲೂ ಇದ್ದರು). ಜೊತೆಗೆ, ಸಮಾನತೆಯ ಪ್ರತಿಪಾದಿಯಾಗಿದ್ದ ನನ್ನ ಮೂಲ ಸ್ವಭಾವಕ್ಕೆ ಪರದೇಶವಾಸ ನೀರೆರೆದು ಪೋಷಿಸಿತ್ತು. ಸ್ವಾಭಿಮಾನಿ ಸ್ವಾವಲಂಬಿತ್ವ ನನ್ನೊಳಗೆ ಬಲಿತಿತ್ತು. ಆದರೆ, ಮಣಿಪಾಲವಾಗಲೀ ಉಡುಪಿ–ಕಾರ್ಕಳಗಳಾಗಲೀ ಈಗಿನಷ್ಟು ಬೆಳೆದಿರಲಿಲ್ಲ, ಮುಂದುವರೆದಿರಲಿಲ್ಲ. ಸಣ್ಣ–ಪುಟ್ಟ ಊರಿನ ಸಣ್ಣ–ಪುಟ್ಟ ನೋಟದ 'ದೊಡ್ಡ' ಜನರೇ ಇದ್ದರು. ಹೆಣ್ಣೊಬ್ಬಳು ಕಾರು ಚಲಾಯಿಸಿಕೊಂಡು (ಅದೂ ಎರಡು ಮಕ್ಕಳನ್ನೋ, ಮೂರು–ನಾಲ್ಕು ಹಿರಿಯರನ್ನೋ ಕೂರಿಸಿಕೊಂಡು) ಊರೆಲ್ಲಾ ಸುತ್ತುತ್ತಿದ್ದಾಗ ತಿರುತಿರುಗಿ ನೋಡುತ್ತಿದ್ದ ತಲೆಗಳೇ ಜಾಸ್ತಿ. ಅದರಲ್ಲೂ ಈ ಖಾಸಗಿ ಸಾರಿಗೆ ಸಂಸ್ಥೆಗಳ ಬಸ್ ಚಾಲಕರಿಗಂತೂ ಅದೊಂದು ಸವಾಲಿನಂತಾಗಿದ್ದಿರಬೇಕು. ಬೇಕು ಬೇಕೆಂದೇ ಸಿಕ್ಕಾಪಟ್ಟೆ ಹಾರ್ನ್ ಹಾಕುತ್ತಾ ಅಟ್ಟಿಸಿಕೊಂಡು ಬಂದಂತೆ ಬಂದು, ಹೇಗೋ ನುಸುಳಿ ಮುಂದೆ ಸಾರಿ, ಅಲ್ಲೇ ಬಸ್ ನಿಲ್ದಾಣವೆಂಬಂತೆ ಥಟ್ಟನೆ ನಿಲ್ಲಿಸಿ ಹಿಂದೆ ಇಣುಕುತ್ತಿದ್ದವರೆಷ್ಟು ಜನವೋ! ಅವರನ್ನೆಲ್ಲ ಕಂಡು ಕೆಲವೊಮ್ಮೆ ಸಿಡುಕೂ ಕೆಲವೊಮ್ಮೆ ನಗುವೂ ನನ್ನೊಳಗೆ ಗುಲ್ಲೆಬ್ಬಿಸುತ್ತಿದ್ದವು.

ಇನ್ನು, ನಿವೃತ್ತಿಯ ಆಸುಪಾಸಿನ ವಯಸ್ಸಿನ ಕೆಲವು 'ಯಜಮಾನ'ರಿಗೋ, 'ಹೆಣ್ಣು ವಾಹನ' ಕಂಡರೆ ಅದೇನೋ ಕಿರಿಕಿರಿ. ಅವರಂತೂ ಮೂವತ್ತು ಕಿ.ಮೀ. ವೇಗ ದಾಟಿ ಮುಂದೆ ಹೋಗಲಾರರು, ನನಗೂ ಹೋಗಗೊಡಲಾರರು. ಅಯ್ಯಯ್ಯಪ್ಪಾ! ಹಗ್ಗ–ಜಗ್ಗಾಟವಾದರೂ ಆದೀತು, ಆ ಡ್ರೈವಿಂಗ್ ಅಲ್ಲ, ಅನ್ನುವಷ್ಟಕ್ಕಾಗುತ್ತಿತ್ತು ಹದಿನೈದಿಪ್ಪತ್ತು ನಿಮಿಷಗಳಲ್ಲಿ ಐದು ಕಿಲೋಮೀಟರ್ ದೂರದ ಉಡುಪಿ ತಲುಪುವಷ್ಟರಲ್ಲಿ. ಅದರಲ್ಲೂ ಕೆಲವರಿಗಂತೂ 'ಚಾಲಕಿ'ಯರೆಂದರೆ ನಿಕೃಷ್ಟ ಜೀವಿಗಳಿಗೆ ಸಮ. ಹಿಂದೊಮ್ಮೆ, ಬ್ಯಾಂಕ್ ಒಂದರ ಹೊರಗೆ ನಿವೃತ್ತರೊಬ್ಬರ ಮುಖಾಮುಖಿಯಾಗಿತ್ತು. ನನ್ನ ಕಾರಿನ ಹಿಂದೆ ಅಡ್ಡಡ್ಡಲಾಗಿ ನಿಲ್ಲಿಸಲಾಗಿದ್ದ 'ಗಿಳಿಹಸಿರು ಫಿಯೆಟ್ ಕಾರಿನ ಯಜಮಾನರು ಬ್ಯಾಂಕ್ ಒಳಗಿದ್ದೀರಾ?' ಎಂದು ಕೂಗಿ ಕೇಳಿದ್ದಕ್ಕೆ ನಂತರ ಕಾರಿನ ಬಳಿ ನನ್ನನ್ನು ಬೇಕಾಬಿಟ್ಟಿ ಬೈದಿದ್ದರು. 'ಯೂ ಸ್ಟುಪಿಡ್ ಫೀಮೇಲ್, ಯೂ ಶೌಟ್ ಅಟ್ ಪೀಪಲ್ ಇನ್‌ಸೈಡ್

ಬ್ಯಾಂಕ್?' ಅಂತೆಲ್ಲ ಬಾಯಾಡಿಸಿ, ನನ್ನ ಬಿ.ಪಿ. ತಾತ್ಕಾಲಿಕವಾಗಿ ಏರಿಸಿ, ಜಾರಿಕೊಂಡಿದ್ದರು. ಕೆಲವಾರು ದಿನಗಳವರೆಗೂ ನಾನೂ ಒಳಗೊಳಗೇ ಹೊಗೆಯುಗುಳುತ್ತಿದ್ದುದು ನಿಜ. ಅಂಥ ಅತಿರೇಕದ ಪ್ರಸಂಗಗಳು ಮುಂದೆಯೂ ನಡೆದರೂ ಅವನ್ನೆಲ್ಲ ನಿರ್ಲಕ್ಷಿಸುವಷ್ಟು ದಪ್ಪ ಚರ್ಮ ಬೆಳೆಸಿಕೊಂಡಿದ್ದೇವೆ. ಅವನ್ನೆಲ್ಲ ಈ ರೀತಿ ಕಥಾನಕವಾಗಿಸುವ ಮನಸ್ಥಿತಿಯನ್ನೂ ಉಳಿಸಿಕೊಂಡಿದ್ದೇನೆ. ಅಮೆರಿಕಾವಾಸದ ಅನುಭವ ನನ್ನನ್ನು ಇನ್ನಷ್ಟು ಪಕ್ವಗೊಳಿಸಿರಬೇಕು.

ಉಳಿದಂತೆ, ಧೂಳು, ಹೊಗೆ, ಶಬ್ದ ಮಾಲಿನ್ಯಗಳಂತೂ ಅವಿಭಾಜ್ಯವೇ. ಇವೆಲ್ಲ ಆಗಿನ ಪರಿಸರಕ್ಕೂ ಈಗಿನ ಪರಿಸರಕ್ಕೂ ವ್ಯತ್ಯಯಗೊಂಡಿಲ್ಲ. ಉಡುಪಿ–ಮಣಿಪಾಲ ರಸ್ತೆ ಮಾತ್ರ ಸಲೀಸಾಗಿದೆ. ಎಷ್ಟೆಂದರೆ, 'ಮಣಿಪಾಲದ ಅಂಚಿನ ಕುಂಡಲಕಾಡಿನ ತಲೆಬದಿಯಲ್ಲಿ ಕಾರ್ ನ್ಯೂಟ್ರಲ್ಲಿನಲ್ಲಿ ಹಾಕಿ ಕೈ–ಚಕ್ರ ತಿರುಗಿಸುತ್ತಿದ್ದರೆ ಐದು ನಿಮಿಷಗಳಲ್ಲಿ ಉಡುಪಿಯಲ್ಲಿರುತ್ತೇವೆ' ಅಂತ ನಾನು ತಮಾಷೆಯಾಗಿ ಹೇಳುವುದಿದೆ; ಅಷ್ಟೂ ಸಪಾಟಾಗಿದೆ ಹೊಸ ಚತುಷ್ಪಥ. ಬದಲಾವಣೆ ಬೇಕಲ್ಲ. ಇದೇ ಬದಲಾವಣೆಯ ಇನ್ನೊಂದು ಮುಖವಾಗಿರುವ ಧೂಳು, ಹೊಗೆ, ಮಾಲಿನ್ಯಗಳನ್ನು ದೂರುವ ಹಾಗಿಲ್ಲ. ಬದಲಾವಣೆಯಿಲ್ಲದಲ್ಲಿ ಬೆಳವಣಿಗೆಯಿಲ್ಲ.

ಈ ಬಾರಿ ಹಿಂದಿರುಗಿ ಬಂದ ಕೂಡಲೇ ಮರುಮಾರಾಟಕ್ಕಿದ್ದ ಕಾರೊಂದನ್ನು ಖರೀದಿಸಿದೆವೆಂದು ಹೇಳಿದೆನಲ್ಲ. ಅದರಲ್ಲೊಂದು ಸ್ವಾರಸ್ಯವಾಯ್ತು. ಮಾರುತಿ ಸುಝುಕಿ ಕಂಪೆನಿಯ ಪ್ರತಿಷ್ಠಿತ ಕಾರ್‌ಗಳಲ್ಲೊಂದು ಬಲೀನೊ (ಬಲೆನೊ). ಈ ಮಾಡೆಲ್ ಹೊಸ ಕಾರುಗಳು ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಎಲ್ಲ ಆಯಾತ ಬಿಡಿಭಾಗಗಳಿಂದ ತಯಾರಾದ ಈ ಕಾರ್ (ಬಹಳ ತುಟ್ಟಿಯೂ) ಬಹಳ ಸುಲಲಿತ ಚಾಲನಾ ಅನುಭವ ಕೊಡುವ ಕಾರಣ ಅದನ್ನೇ ಹುಡುಕಿದೆವು. ಮೂರು ಲಕ್ಷ ರುಪಾಯಿ ಎಂದ ಕಾರ್ ಡೀಲರ್ ಕೊನೆಗೆ ಎರಡು ಲಕ್ಷದ ಎಪ್ಪತ್ತು ಸಾವಿರಕ್ಕೆ ಒಪ್ಪಿದರು. ಈ ಹಿಂದೆ ಇದೇ ಮಾರುತಿ ಡೀಲರ್ ಬಳಿಯೇ ಇನ್ನೊಂದು ಮಾಡೆಲ್, ಎಸ್ಟೀಮ್ ಕೊಂಡಿದ್ದೆವು (ಅಮೆರಿಕಕ್ಕೆ ಮರಳಿ ಹೊರಟಾಗ ಪರಿಚಿತರೊಬ್ಬರಿಗೆ ಮಾರಿದ್ದೆವು ಕೂಡಾ). ಈಗ ಬಲೀನೊ ಕೊಂಡು ತಂದೆವು. ಮಂಗಳೂರಲ್ಲಿನ ಒಂದು ಮಾರುತಿ ಡೀಲರ್ ಬಳಿ ನನ್ನ ತಮ್ಮ ಸ್ವಲ್ಪ ಕಾಲ ಕೆಲಸ ಮಾಡುತ್ತಿದ್ದ. ಅವನ ಹೇಳಿಕೆಯ ಮೇರೆಗೆ ಇದನ್ನು ಅಲ್ಲಿಗೆ ಒಯ್ದೆವು, ಕೆಲವೊಂದು ಸಣ್ಣ–ಪುಟ್ಟ ರಿಪೇರಿಗಾಗಿ. ಈಗ, ಇಲ್ಲಿಯೂ ಕಾರ್–ಫ್ಯಾಕ್ಸ್ ರೆಕಾರ್ಡ್ ತೆಗೆಸಬಹುದು ಎನ್ನುವುದನ್ನು ತಿಳಿಸಿ, ಈ ಕಾರಿನ ರೆಕಾರ್ಡ್ಸ್ ತೆಗೆಸಿದ. ನಮಗೆ ಸಣ್ಣ ಅಚ್ಚರಿ ಕಾದಿತ್ತು. ಕಾರಿನ ಒಡೊಮೀಟರಿನಲ್ಲಿದ್ದ ಕಿ.ಮೀ. ಸಂಖ್ಯೆಗೂ ಈ ದಾಖಲೆಯಲ್ಲಿನ ಸಂಖ್ಯೆಗೂ ನಲವತ್ತೆರಡು ಸಾವಿರದ ವ್ಯತ್ಯಾಸ. ಕಾರ್ ಮೀಟರನ್ನು ಮಾನಿಪ್ಯುಲೇಟ್ ಮಾಡಿ ಕಡಿಮೆ

ಕಿಲೋಮೀಟರ್ ಓಡಿದ್ದೆಂದು ತೋರಿಸಿ ನಮಗೆ ಮಾರಿದ್ದರು. ವಿಪರ್ಯಾಸವೆಂದರೆ, ನಾವು ಕಾರ್ ಕೊಂಡ ಆ ಡೀಲರ್‌ಶಿಪ್‌ನ ಮುಖ್ಯಸ್ಥರಿಗೂ ಇದರ ಅರಿವಿರಲಿಲ್ಲ. ತಿಳಿದೂ ತಿಳಿದೂ ನಮಗವರು ಮೋಸ ಮಾಡಿರಲಿಲ್ಲವಾದರೂ ನಾವು ಮೋಸ ಹೋಗಿದ್ದೆವು. ತಮ್ಮನ ಮಧ್ಯಸ್ಥಿಕೆಯಲ್ಲಿ ಹಾಗೂ ಹೀಗೂ ಮಾತಾಡಿ, ಎಳೆದಾಡಿ, ಕೊನೆಗೆ ಎಪ್ಪತ್ತು ಸಾವಿರ ರುಪಾಯಿ ಹಿಂದಿರುಗಿಸಿದರು. ಪ್ರಕರಣ ಹಗರಣವಾಗದೇ ಅಂತ್ಯ ಕಂಡಿತು. ಆದರೂ, ಮೋಸಹೋದೆವೆಂಬ ಸಣ್ಣ ನೋವು ಒಮ್ಮೊಮ್ಮೆ ಇಣುಕುವುದಿದೆ. ಎನ್ನಾರೈಗಳೆಂದರೆ ಅಷ್ಟೂ ಸಾಧುಜನ, ಭೋಳೇ ಸ್ವಭಾವ ಎನ್ನುವ ಸಾರ್ವಜನಿಕ ನಂಬಿಕೆಯನ್ನು ಸತ್ಯಮಾಡಿದೆವಲ್ಲ ಅಂತನ್ನಿಸಿ ಪಿಚ್ಚೆನ್ನಿಸುವುದಿದೆ.

ಈ ಮರುವಲಸೆಯ ಮೂಲ ಉದ್ದೇಶವಿದ್ದದ್ದೇ ಎರಡು ಜೊತೆ ಹಿರಿಯರ ಜೊತೆ ಸಾಕಷ್ಟು ಸಮಯ ಕಳೆಯುವ ಹಂಬಲ ಅಂತ ಮೊದಲೇ ಹೇಳಿದೆ. ಅದಕ್ಕಾಗಿಯೇ, ಬಂದ ಹೊಸದರಲ್ಲಿ ಮಹಾದೇವ್ ಮನೆಯಲ್ಲೇ ಇದ್ದರು. ಯಾವಾಗಂದರೆ ಆವಾಗ, ನೆನಪಾದಾಗೆಲ್ಲ ಊರಿಗೆ ಹೋಗಿ ಬರುತ್ತಿದ್ದೆವು. ಎಲ್ಲ ನೆಂಟರಿಷ್ಟರ ಮನೆಗಳ ಸಮಾರಂಭಗಳಿಗೆ ಹಾಜರಾಗುತ್ತಿದ್ದೆವು. ಹಿರಿಯರನ್ನು ಕರೆದೊಯ್ಯುತ್ತಿದ್ದೆವು. ಕೆಲವಾರು ಕಡೆಗಳಿಗೆ ನಾವಿದ್ದೇವೆಂತಲೇ (ಕಾರ್ ಇದೆಯೆಂದೇ) ಹೋಗಿದ್ದಿದೆ. ಎಷ್ಟೋ ವರ್ಷಗಳ ಬಳಿಕ ಕೆಲವು ಸಂಬಂಧಿಕರ ಮನೆಗಳಿಗೆ (ಒಂದೆರಡು ಕಡೆ ಮೊದಲ ಬಾರಿಗೆ) ಅವರ ಜೊತೆ ಹೋಗಿ ಬಂದೆವು. ಹೀಗೇ, ಅತ್ತೆ-ಮಾವ, ಅಪ್ಪ-ಅಮ್ಮ ಮತ್ತು ನಾವಿಬ್ಬರು, ತಿರುಪತಿ, ಮಂತ್ರಾಲಯ ಹಾಗೂ ಉತ್ತರ ಭಾರತದತ್ತ ಪಯಣಿಸಿದೆವು. ಹಿರಿಯ ಜೋಡಿಗಳೆರಡೂ ಮುಂಬಯಿ, ದೆಹಲಿ, ಆಗ್ರಾ, ಮಥುರಾ, ಹರಿದ್ವಾರ, ಬದರಿ, ಹೃಷಿಕೇಶ, ಪ್ರಯಾಗ, ವಾರಣಾಸಿ, ಗಯಾ ಕ್ಷೇತ್ರಗಳನ್ನು ಸಂದರ್ಶಿಸಿ ಖುಷಿಪಟ್ಟರು. ಅಲ್ಲೆಲ್ಲ ಮುಂಗಡವಾಗಿ ಅಂತರ್ಜಾಲ ಮತ್ತು ಫೋನ್ ಮುಖಾಂತರ ವಿಮಾನ-ರೈಲುಗಳ ಟಿಕೆಟ್, ಇತರ ವಾಹನ, ವಸತಿಗಳ ವ್ಯವಸ್ಥೆ ಮಾಡಿಕೊಂಡದ್ದರಿಂದ ಎಲ್ಲವೂ ಸುಸೂತ್ರವಾಗಿಯೇ ಸಾಗಿತು. ಅವರ ನೆಮ್ಮದಿಯಲ್ಲಿ ನಮ್ಮ ತೃಪ್ತಿ.

ಇಲ್ಲಿ ಬಂದ ಮೊದಮೊದಲು ಮನೆಯಲ್ಲೇ ಕಾಲ ಕಳೆಯುವ ಪ್ರಯತ್ನ ಮಾಡಿದ ಮಹಾದೇವ್, ಆರು ತಿಂಗಳ ನಂತರ, ಮನೆಯಿಂದ ಮೂರನೇ ಕಟ್ಟಡದಲ್ಲೇ ನಡೆಯುತ್ತಿದ್ದ ಸಣ್ಣ ಸಾಫ್ಟ್‌ವೇರ್ ಕಂಪೆನಿಯೊಂದಕ್ಕೆ ಸೇರಿಕೊಂಡರು. ಅರೆಕಾಲಿಕ ನೌಕರಿ, ಬೆಳಗ್ಗೆ ಒಂಭತ್ತರಿಂದ ಮಧ್ಯಾಹ್ನ ಒಂದರತನಕ, ವಾರದ ಆರೂ ದಿನಗಳು. ಒಂದೆರಡು ದಿನ ರಜೆ ಬೇಕಾದಲ್ಲಿ, ನಂತರದ ಒಂದೆರಡು ದಿನ ಅಪರಾಹ್ನ ಎರಡರಿಂದ ಆರು ಗಂಟೆಯವರೆಗೆ ಆಫೀಸಿಗೆ ಹೋದರಾಯ್ತು. ಆ ಸಮಯ ಬಹಳವೇ ಅನುಕೂಲಕರವಾಗಿತ್ತು. ನಾಲ್ಕು ತಿಂಗಳು ಹೀಗೇ ಸಾಗಿದಾಗ, ಕಂಪೆನಿ ಮಾಲಕರು

ಪೂರ್ಣಕಾಲಿಕ ನೌಕರಿಗೆ ಒತ್ತಾಯಿಸಿದರು. ಮಾತುಕತೆಯಾಡಿ, ಮುಕ್ಕಾಲು (ದಿನಕ್ಕೆ ಆರು ಗಂಟೆ) ಸಮಯದ ಒಪ್ಪಂದವಾಗಿದೆ. ಇಷ್ಟರಲ್ಲಿ ನಿಜವಾದ ಮಜಾ ಅಂದರೆ, ಹನ್ನೊಂದು ಗಂಟೆಯ ಟೀ ಮಾಡಲು ಒಲೆಮೇಲಿಟ್ಟು ಒಂದು ಕಾಲ್ ಕೊಡುವ ಕ್ರಮ. ಅದವರಿಗೆ ಸೂಚನೆ ಮಾತ್ರ. ಟೀ ಕುದಿಯುವ ಹೊತ್ತಿಗೆ ಮನೆಯಲ್ಲಿರುತ್ತಾರೆ, ಟೀ ಕುಡಿದು ಮತ್ತೆ ಆಫೀಸಿಗೆ. ಮಧ್ಯಾಹ್ನ ಊಟದ ನಂತರ, ಎರಡರಿಂದ ನಾಲ್ಕರ ವರೆಗಿನ ಡ್ಯೂಟಿ ಮನೆಯಿಂದಲೇ! ಇಂಥ 'ಐಷಾರಾಮ'ದ ಸಾಧ್ಯತೆ ಬೇರೆಲ್ಲೂ ಇರಲಾರದು, ಅಮೆರಿಕದಲ್ಲಾಗಲೀ ಭಾರತದಲ್ಲಾಗಲೀ ಸಿಗದು. ಈ ಮುಕ್ಕಾಲು ಸಮಯದ ಒಂದೇ ಒಂದು ಅಡ್ಡ ಪರಿಣಾಮವೆಂದರೆ, ಈಗ ಒಂದು ರಜೆ ಬೇಕಾದಲ್ಲಿ, ಅದನ್ನು ಭರಿಸಲು ಮೂರು ಪೂರ್ಣದಿನಗಳ ಕೆಲಸವಾಗಬೇಕು. ಲೆಕ್ಕದ ಹನ್ನೆರಡು ರಜೆಗಳು ಈ ಸಮಾರಂಭಗಳ ಸಮಯದಲ್ಲಿ ಎಲ್ಲಿಗೂ ಸಾಕಾಗದು. ದಕ್ಕಿದ್ದಕ್ಕಿಂತ ಹೆಚ್ಚಿನದನ್ನು ಬಯಸುವುದು ಮನುಜ ಸಹಜ ಸ್ವಭಾವ, ಅಲ್ಲವೆ?

ಇತ್ತೀಚೆಗೆ, ಎಚ್. ಎಸ್. ರಾಘವೇಂದ್ರ ರಾಯರು ಉಡುಪಿಗೆ ಬಂದಿದ್ದರು, ಯಾವುದೋ ಕಾರ್ಯಕ್ರಮಕ್ಕೆ. ಆ ನಂತರ, ಅವರನ್ನೂ ವೈದೇಹಿಯವರನ್ನೂ ಅವರ ಪತಿ ಶ್ರೀನಿವಾಸ ಮೂರ್ತಿಯವರನ್ನೂ ನನ್ನ ರಥ, ಅಲ್ಲ, ಐರಾವತದಲ್ಲೇ (ಯಾಕಂದ್ರೆ ಈ ಬಲೀನೊ ಚೆನ್ನಾಗಿಯೇ ಪೆಟ್ರೋಲ್ ಕುಡಿಯುತ್ತದೆ; ಅದನ್ನು ಸಾಕೋದು ಕಷ್ಟ!) ವೈದೇಹಿಯವರ ಮನೆಗೆ ಕರೆತರುತ್ತಿದ್ದೆ. ಎಚ್ಚೆಸ್ಸಾರ್ ಕೇಳಿದರು, 'ಅಲ್ಲಿ ಡ್ರೈವ್ ಮಾಡಿದ ನಿಮಗೆ ಇಲ್ಲಿ ಕಷ್ಟ ಆಗೋದಿಲ್ವಾ? ಅಲ್ಲಿಗೂ ಇಲ್ಲಿಗೂ ನಿಯಮಗಳೆಲ್ಲ ಬೇರೆಬೇರೆ ಅಲ್ವಾ?' ನಾನಂದಿದ್ದೆ, 'ಸಾರ್, ಅಲ್ಲಿ ನಿಯಮಾನುಸಾರ ಡ್ರೈವ್ ಮಾಡ್ತಿದ್ವಿ, ನಿಜ. ಆದ್ರೆ ಇಲ್ಲಿ ನಿಯಮಗಳೇ ಇಲ್ಲ!' ಅದು ಅರೆಸತ್ಯವಾದರೂ ವಾಸ್ತವ. ಆದಷ್ಟು ಮಟ್ಟಿಗೆ ನಮ್ಮ ಜಾಗ್ರತೆಯಲ್ಲಿ ನಾವಿದ್ದುಕೊಂಡು, ಉಳಿದವರ ಚಲನವಲನಗಳ ಕಡೆಗೂ ಗಮನ ಇಟ್ಟುಕೊಂಡೇ, ಸದಾ ಹಾರ್ನ್ ಮಾಡಿಕೊಂಡೇ ಇಲ್ಲಿ ವಾಹನ ಚಲಾಯಿಸಬೇಕಾಗುತ್ತದೆ. ಹಾರ್ನ್ ಮಾಡುವುದರಲ್ಲಿ ಸ್ವಲ್ಪ ಹಿಂದುಳಿದ ಕೈ ಮಹಾದೇವ್ (ನಾನೊಂಚೂರು ಪರವಾಗಿಲ್ಲ, ಕ್ಯಾಂ, ಪ್ಯಾಂ ಮಾಡಲು ಕಲಿತಿದ್ದೇನೆ). 'ಸುಮ್ನೆ ಶಬ್ದ ಮಾಲಿನ್ಯ. ಬೇಕಿದ್ದರೆ ಮಾತ್ರ ಹಾರ್ನ್ ಮಾಡಬೇಕು' ಅಂತ ಸಂಯಮದ ಪಾಲನೆ ಅವರದ್ದು. ಆದರೆ, ಅಡ್ಡಾದಿಡ್ಡಿ ಓಡಾಡುವ ಜನ-ದನ-ವಾಹನಗಳ ನಡುವೆ ಈ ಸಂಯಮದ ಚಾಲಕಧರ್ಮ ಆ ದೇವರಿಗೇ ಮೀಸಲು. ಹಾಗಾಗಿಯೇ, ಇದುತನಕ ಒಂದೇ ಒಂದು ತಟ್ಟುಕುಟ್ಟು ಮಾಡಿಕೊಳ್ಳದೆ ನಿಭಾಯಿಸುತ್ತಿದ್ದೇವೆ, ಅನ್ನುವ ಹಾಗಿಲ್ಲ.

ಒಮ್ಮೆ ಮುಸ್ಸಂಜೆಗೆ ಉಡುಪಿಗೆ ಹೋದವರು ಹಿಂದಿರುಗುವಾಗ ಒಳರಸ್ತೆಯಿಂದ ಮುಖ್ಯರಸ್ತೆಗೆ ಬಲಕ್ಕೆ ತಿರುಗಬೇಕಿತ್ತು. ಮುಖ್ಯರಸ್ತೆಯಲ್ಲಿ ಇಕ್ಕೆಲಗಳಲ್ಲೂ ವಾಹನಗಳ

ಸರಣಿ. ಬಲತಿರುಗು ಸೂಚನೆ ಹಾಕಿ ಕಾಯುತ್ತಿದ್ದಾರೆ (ವಾಹನ ಚಾಲನೆ ಎಡಕ್ಕೆ). ಹಿಂದಿನಿಂದ ಬಂದ ಬಸ್ ಒಂದು ಕಿವಿ ಕೊರೆಯುವ ಹಾರ್ನ್ ಹಾಕುತ್ತಾ ಹತ್ತಿಪ್ಪತ್ತು ಸೆಕೆಂಡ್ ಕಾದಿರಬಹುದು. ರಸ್ತೆ ಖಾಲಿಯಾಗಲಿಲ್ಲ, ಇವರಿಗೆ ತಿರುಗಲಾಗಲಿಲ್ಲ. ಆ ಚಾಲಕ, ಮಹಾ ಭಂಡ! ತನ್ನ ಬಸ್ ಮುಂದೆ ತಂದು ನಮ್ಮ ಐರಾವತದ ಹಿಂಬದಿಗೆ ಮುತ್ತಿಕ್ಕಿಸಿಯೇ ಬಿಟ್ಟ. ತಕ್ಷಣವೇ ಕಾರಿನಿಂದಿಳಿದ ಇವರನ್ನು ತರಾಟೆಗೆಳೆದ. 'ನಿಮ್ಮ ಕಾರ್ ಹಿಂದೆ ಜಾರಿದೆ. ನನ್ನ ಬಸ್ಸಿಗೆ ತಾಗಿಸಿದ್ದೀರಿ. ಪರಿಹಾರಧನ ಕೊಡಿ'. ಅಲ್ಲೇ ಹತ್ತಡಿ ದೂರದಲ್ಲಿದ್ದ ಪೊಲೀಸ್ ಪೇದೆಯೊಬ್ಬ ಬಸ್ಸಿನವನ ಸಾಲು. ಅವರಿಗೆಲ್ಲ ಮಾಮೂಲು-ಪಾಲು ಇದೆಯೇನೋ! 'ನಮ್ಮ ಕಾರ್ ಹಿಂದೆ ಜಾರಿದ್ದಲ್ಲ, ಬ್ರೇಕ್ ಹಾಕಿಯೇ ಇದೆ. ಬೇಕಾದ್ರೆ ಕೇಸ್ ಬರ್ಕೊಳ್ಳಿ' ಅಂತೆಲ್ಲ ಇವರೂ ಮಾತು ಏರಿಸಿದ ಮೇಲೆ, ಅದೇನೋ, ಅವರಿಬ್ಬರೂ ತೆಪ್ಪಗಾದರು, ರಸ್ತೆಯೂ ಸ್ವಲ್ಪ ತೆರವಾಯ್ತು. ಬುಸುಗುಡುತ್ತಾ ಮನೆಗೆ ಬಂದಿದ್ದರು ಮಹಾದೇವ್. ಅಂಥ ಭಂಡ ಚಾಲಕರು ಇಲ್ಲಿ ಎಲ್ಲೆಲ್ಲೂ ಇದ್ದಾರೆ. ಈಗೀಗ ಸ್ವಲ್ಪ ಜಾಸ್ತಿಯೇನೋ!

ಇನ್ನು ಕೆಲವೊಂದು ವಿಚಿತ್ರ ಪ್ರಸಂಗಗಳನ್ನು ನಿಭಾಯಿಸಬೇಕಾದ ಸನ್ನಿವೇಶ, ಅದಾಗಿ ಒದಗಿ ಬಂದದ್ದೋ, ನಾವಾಗಿಯೇ ಎಳೆದುಕೊಂಡದ್ದೋ ಹೇಳಲಾರೆ. ಪರದೇಶದಲ್ಲಿದ್ದು ಬಂದುದರಿಂದ ನಮಗೊಂದು ರೀತಿಯ ಭಾವನಾತ್ಮಕ ಎಳೆ ತುಸು ಹೆಚ್ಚೇ ಇದೆಯೆನ್ನುವುದನ್ನು ಇವು ತೋರುತ್ತವೆಯೋ, ಅದೂ ಗೊತ್ತಿಲ್ಲ. ಆದರೆ, ಸಾಮಾನ್ಯವಾಗಿ ಯಾರೂ ಸ್ಪಂದಿಸದ ಘಟನೆಗಳಿಗೆ ನಾವು ತೆರೆದುಕೊಳ್ಳುತ್ತಿರುವುದು ಮಾತ್ರ ಸ್ಪಷ್ಟ. ಮೊದಲಿನಿಂದಲೂ ಸಮಾನತೆಯ ಪ್ರತಿಪಾದಿ ನಾನು. ಅದರಲ್ಲೂ ಕುಡುಕ ಗಂಡ ಹೆಂಡತಿ-ಮಕ್ಕಳನ್ನು ಥಳಿಸುತ್ತಿದ್ದರೆ ನನಗೆ ಎಲ್ಲಿಲ್ಲದ ಕೋಪ. ಆದರೆ, ಅಂಥ ಸಂದರ್ಭಗಳಲ್ಲಿ ನನ್ನನ್ನು ನಾನು ಒಡ್ಡಿಕೊಂಡ, ರಕ್ಷಕಿಯ ಪಾತ್ರ ಆರೋಪಿಸಿಕೊಂಡ ಉದಾಹರಣೆಗಳಿಲ್ಲ. ಅದೂ ನಡೆದುಹೋಯ್ತು.

ನಮ್ಮ ಮನೆಯ ಸರೀ ಮುಂದುಗಡೆಯದು ದೊಡ್ಡ ಕಾಂಪೌಂಡ್. ಸಾಮಾನ್ಯ ಮನೆ. ಮನೆಯಲ್ಲಿ ಯಾರೂ ಇಲ್ಲ. ಮನೆಯ ಬದಿಯಲ್ಲೇ ಪುಟ್ಟ ಶೆಡ್ ರೀತಿಯ ಇಳಿಕೋಣೆಯಲ್ಲಿ ಒಂದು ಬಿಜಾಪುರಿ ಸಂಸಾರ ವಾಸವಿದ್ದು ಈ ಕಾಂಪೌಂಡಿನ ಉಸ್ತುವಾರಿ ನೋಡಿಕೊಳ್ಳುತ್ತಾರೆ. ಅಪ್ಪ-ಅಮ್ಮ ಜೊತೆಗೆ ಮೂರು ಮಕ್ಕಳು. ದೊಡ್ಡ ಮಗ ಬಸಪ್ಪ, ಓದು ನಿಲ್ಲಿಸಿ ದಿನಗೂಲಿ ಮಾಡುವವ. ಚಿಕ್ಕ ಮಗ ಕುಮಾರ ಹತ್ತನೇ ತರಗತಿ ಮತ್ತು ಮಗಳು ಮಲ್ಲಮ್ಮ ಯಾ ನಿರ್ಮಲ ಒಂಭತ್ತನೇ ತರಗತಿ. ಅಮ್ಮ- ನಾಗಮ್ಮ- ಇಲ್ಲಿ ಸುತ್ತಮುತ್ತ ಮನೆಗಳ ತೋಟಗಳಲ್ಲಿ ಹುಲ್ಲುತೆಗೆದು ಸ್ವಚ್ಛಗೊಳಿಸುವ, ಹಿತ್ತಿಲನ್ನು ಓರಣಗೊಳಿಸುವ ಕೆಲಸಗಳನ್ನು ಅವಳದೇ ನಿರಾಳ ಓಘದಲ್ಲಿ ಮಾಡಿಕೊಡುತ್ತಿದ್ದಳು.

ಸಹಿಸಿಕೊಳ್ಳಲೇಬೇಕಾಗಿತ್ತು; ನಮಗೆ ಗತಿಯಿಲ್ಲ, ಅವಳಿಗೆ ಮತಿಯಿಲ್ಲ.

ಈ ಅಪ್ಪ– ಕಲ್ಲಪ್ಪ– ಸಂಜೆ ಮನೆಗೆ ಬಂದನೆಂದರೆ 'ಒಳಗಿನ ಪರಮಾತ್ಮ'ನ ಪ್ರತಾಪ ಶುರು. ದಿನಗೂಲಿ ಮುಗಿಸಿ ಹೊಟ್ಟೆತುಂಬಾ ಎಣ್ಣೆ ತುಂಬಿಸಿಕೊಂಡು ಬರುವವನ ಅಬ್ಬರಕ್ಕೆ ಮಕ್ಕಳು ಓದಲಾಗುತ್ತಿರಲಿಲ್ಲ. ಮಡದಿಯನ್ನೂ ಚಿಕ್ಕ ಮಗ ಮತ್ತು ಮಗಳನ್ನೂ ಮನೆಯಲ್ಲಿ ಇರಗೊಡದೆ ಬಯ್ದು ಹೊಡೆದು ಕಾಂಪೌಂಡ್ ಹೊರಗೆ ಗೇಟ್ ಬದಿ ನಿಲ್ಲಿಸಿ ತಾನು ಗೇಟಿಗಡ್ಡಲಾಗಿ ಮಲಗುತ್ತಿದ್ದ. ದೊಡ್ಡ ಮಗ ಬರುವತನಕ ಇದೇ ಕಥೆ. ಆತ ಅಪ್ಪನನ್ನು ತುಸು ಬಗ್ಗಿಸುತ್ತಿದ್ದ, ಕಟ್ಟುಮಸ್ತಾಗಿ ಅಪ್ಪನಿಗಿಂತ ಧಡೂತಿಯಿದ್ದ ಕಾರಣ ಅಪ್ಪನನ್ನೇ ಗದರಿಸಿ ಮೂಲೆಯಲ್ಲಿ ಕೂರಿಸುತ್ತಿದ್ದ. ಆದರೆ, ಅವನು ಸಂಜೆ ಹೊಟೇಲೊಂದರಲ್ಲಿ ಕೆಲಸದ ಪಾಳಿ ಮುಗಿಸಿ ಬರುವಾಗ ಕಲ್ಲಪ್ಪನ ಏರುದನಿ ಅಡಗಿರುತ್ತಿತ್ತು, ಸುಮಾರಾಗಿ ಪರಿಸ್ಥಿತಿ ಹದಕ್ಕೆ ಬಂದಿರುತ್ತಿತ್ತು. ಏನೇನೋ ಗೊಣಗಾಡುತ್ತಾ ಮೂಲೆಯಲ್ಲೇ ಬಿದ್ದಿರುತ್ತಿದ್ದ. ಹೆಚ್ಚಿನ ಕಿರಿಕಿರಿ ಇರುತ್ತಿದ್ದುದು ಸಂಜೆ ಏಳರಿಂದ ಒಂಭತ್ತರ ತನಕ. ಇದನ್ನೆಲ್ಲ ಈ ಬೀದಿಯ ಮನೆಯವರೆಲ್ಲ ನಿತ್ಯನಾಟಕದಂತೆ ನೋಡಿಯೂ ನೋಡದಂತೆ ಇರುತ್ತಿದ್ದರು. ಯಾರಿಗೂ ಈ ಸಂಜೆಯ ನಾಟಕ ಬೇಕಾಗಿಲ್ಲ. ಬೆಳಗಾದರೆ, ಕಲ್ಲಪ್ಪನನ್ನೋ ನಾಗಮ್ಮನನ್ನೋ ಕೆಲಸಗಳಿಗೆ ಕರೆಯಲು ಈ ಗೇಟಿನತನಕ ಬರುವ ಅವರಿಗೆ ಸಂಜೆಯ ನಿತ್ಯನಾಟಕಕ್ಕೆ ಕಿವುಡುತನ ಅಡರುತ್ತಿತ್ತೇನೊ.

ಕಳೆದ ಫೆಬ್ರವರಿಯಲ್ಲಿ ಕಲ್ಲಪ್ಪನ ಅವತಾರ ಅತಿಯಾದಾಗ ಮಗಳು ನಿರ್ಮಲ ಒಂದು ಸಂಜೆ ನಮ್ಮ ಅಂಗಳಕ್ಕೆ ಅಳುತ್ತಾ ಬಂದಳು. ಅಪ್ಪನ ಆರ್ಭಟದಲ್ಲಿ ಓದಲಾಗುತ್ತಿಲ್ಲ. ಮುಂದಿನ ತಿಂಗಳಲ್ಲಿ ಪರೀಕ್ಷೆ. ಅಪ್ಪನಿಗೆ ಸ್ವಲ್ಪ ಬುದ್ಧಿ ಹೇಳಿ ಅಂತವಳ ಅಹವಾಲು. ಅವಳನ್ನೂ ಅಣ್ಣ ಕುಮಾರನನ್ನೂ ನಮ್ಮ ಮಹಡಿಯಲ್ಲಿ ಓದಿಕೊಳ್ಳಲು ಹೇಳಿದೆ. ಅಪ್ಪನಿಗೆ ಸುಮ್ಮನಿರಲು ತಾಕೀತು ಮಾಡಿ ಬಂದೆ. ಆದರೂ ಆತನ ಬಾಯಿ ಸುಮ್ಮನಿರುತ್ತಿರಲಿಲ್ಲ. ನಮ್ಮ ಗೇಟಿನ ಬದಿಗೇ ಬಂದು ಬೊಬ್ಬಿಡುತ್ತಿದ್ದ. ಅದರಿಂದ ಕಿರಿಕಿರಿಪಟ್ಟ ನಮ್ಮ ಈಬದಿ ಮನೆಯವರು ಪೊಲೀಸರಿಗೆ ದೂರಿತ್ತರು. ತನ್ನ ಮಕ್ಕಳು ಆತನ ಕಿರುಚಾಟಕ್ಕೆ ಅಂಜುತ್ತಿದ್ದಾರೆನ್ನುವ ದೂರು. ಮರುದಿನ ಮನೆ ಮುಂದೆ ಬಂದ ಪೊಲೀಸರಿಗೆ ಸಾಕ್ಷಿಯೂ ಬೇಕಾಗಿತ್ತು. ಪೊಲೀಸ್ ಜೀಪ್ ನೋಡಿ ವಿಷಯ ಏನೆಂದು ಅರಿಯಲು ನಾವು ಹೊರಗೆ ಬಂದಿದ್ದರಿಂದಲೂ ಅದೇ ಕಾರಣಕ್ಕೆ ಅಕ್ಕಪಕ್ಕದವರಾರೂ ಹೊರಗೇ ಇಣುಕಿಲ್ಲವಾದ್ದರಿಂದಲೂ, ಮಹಾದೇವ್ ಸಾಕ್ಷಿಯಾಗಿ ಸಹಿ ಹಾಕಿದರು. ಈ ನಾಗಮ್ಮ ನಮ್ಮನ್ನು ಊದಿಕೊಂಡ ಕಣ್ಣುಗಳಿಂದಲೇ ದುರುದುರು ನೋಡಿದಳು (ಆಗಷ್ಟೇ ತನಗೆ ಚೆನ್ನಾಗಿಯೇ ಚಚ್ಚಿದ್ದನಾದರೂ ತನ್ನ 'ಪತಿದೇವರ' ವಿರುದ್ಧದ ದೂರಿಗೆ ನಾವು ಸಾಕ್ಷಿಯಾಗಿದ್ದು ಅವಳ ನೋಟದಲ್ಲಿ ಅನ್ಯಾಯ). ಬಂದಿದ್ದ ಪೊಲೀಸರು ಆತನನ್ನು ಜೀಪ್ ಏರಿಸಿಕೊಂಡು ಹೋಗಿ, ರಾತ್ರೆ ಸುಮಾರು ಹನ್ನೊಂದೂವರೆಯ ಹೊತ್ತಿಗೆ ಬಿಡುಗಡೆ ಮಾಡಿದ್ದಾರೆ. ಆ ರಾತ್ರೆಯಲ್ಲೂ, ಹನ್ನೆರಡರ ಮೇಲೆಯೇ, 'ನೋಡೇ, ನಾ

ಬಂದೆ ನೋಡು. ಯಾರೂ ನಂಗೆ ಏನೂ ಮಾಡ್ಲಿಕ್ಕಾಗೂದಿಲ್ಲ. ಏನಂದ್ಕಂಡಿದಾರೆ. ನಾ ಬಂದೆ, ನೋಡು.' ಅಂತ ಬೀದಿ ಕೊನೆಯಿಂದಲೇ ಆರ್ಭಟಿಸುತ್ತಾ ಮನೆಸೇರಿದ್ದ ಕುಡುಕ ಮಹಾಶಯ. ಆ ನಂತರ ನಮ್ಮ ತೋಟದ ಹುಲ್ಲು ತೆಗೆಯಲು ನಾಗಮ್ಮನ ಕೈ ಬಿಡುವಾಗಲೇ ಇಲ್ಲ ಎನ್ನುವುದು ವಿಪರ್ಯಾಸ. ಅವಳಲ್ಲಿರುವ ಆ 'ಪತಿದೇವರು' ಅನ್ನುವ ಮನೋಭಾವಕ್ಕೆ ನಾನೂ ರೋಸಿದ್ದೆ.

ಇದಕ್ಕೆ ಪರ್ಯಾಯವಾದೊಂದು ಘಟನೆ ಸನ್ನಿವೇಲಿನ ನಮ್ಮ ಮನೆಮುಂದೆ ನಡೆದಿತ್ತು. ಅಲ್ಲೂ ಇಂಥ ಕುಡುಕ ಪತಿಯ ಮೆಕ್ಸಿಕನ್ ಸಂಸಾರವೊಂದು ಪುಟ್ಟ ಪುಟ್ಟ ಇಬ್ಬರು ಮಕ್ಕಳನ್ನು ಕಟ್ಟಿಕೊಂಡು ಬಾಳುತ್ತಿತ್ತು. ವಾರದಲ್ಲಿ ಒಂದೆರಡು ಸಂಜೆಯಾದರೂ ಪಾನಪೂಜೆಯ ಘೋಷಗಳು ಕೇಳುತ್ತಿದ್ದವು. ವಾರಕ್ಕೊಮ್ಮೆಯೋ ಎರಡು ವಾರಕ್ಕೊಮ್ಮೆಯೋ ಪೊಲೀಸ್ ಜೀಪಿನ ಸೈರನ್ನೂ ನಂತರ ಎಲ್ಲವೂ ಸ್ತಬ್ಧವಾದ ನೀರವತೆಯೂ ಆವರಿಸಿಕೊಳ್ಳುತ್ತಿದ್ದವು. ಆದರೆ, ಅಲ್ಲಿ ಕಿಟಕಿ ಪರದೆಯ ಈಕಡೆಯಿಂದಲೇ ನಾಟಕಕ್ಕೆ ಪ್ರೇಕ್ಷಕಿಯಾಗುತ್ತಿದ್ದೆ. ಕಾರಣ, ಒಂದು: ಅದು ಮೆಕ್ಸಿಕನ್ ಸಂಸಾರ, ಭಾಷೆಯ ಗೋಡೆಯಿರುತ್ತಿತ್ತು. ಎರಡು: ಅಲ್ಲಿನ ಪೊಲೀಸ್ ಇಲಾಖೆ ಕಾರ್ಯತತ್ಪರವಾಗುತ್ತಿತ್ತು. ಯಾವುದೇ ಅನಾಹುತವಾಗುವ ಸಾಧ್ಯತೆಗಳು ಕಡಿಮೆ. ಸುತ್ತಮುತ್ತಲ ಯಾರೇ 911 ಕರೆ ಮಾಡಿದರೂ ಬಂದುಬಿಡುತ್ತಿದ್ದರು. ಹಾಗಾಗಿ, ಅಲ್ಲಿ ಈ ರೀತಿಯಲ್ಲಿ ಆ ಮಕ್ಕಳ, ಮಹಿಳೆಯ 'ರಕ್ಷಣೆ'ಗೆ ನಾನು ಧಾವಿಸುವ ಅಗತ್ಯ ಕಂಡಿರಲಿಲ್ಲ, ಹೋಗಿರಲಿಲ್ಲ. ಆದರೆ, ಇಲ್ಲಿಯ ಪರಿಸ್ಥಿತಿ ಭಿನ್ನವಾಗಿತ್ತು. ನಿರ್ಮಲಳಿಗೆ, ಕುಮಾರನಿಗೆ ಓದಲು ಸ್ಥಳದ ಅನುಕೂಲ, ಭಾವನಾತ್ಮಕ ಆಸರೆ ಬೇಕಾಗಿತ್ತೆಂದು ತೋಚಿದ್ದರಿಂದ ತೊಡಗಿಸಿಕೊಂಡೆ.

ಈ ಗಲಾಟೆಗಳ ನಡುವೆಯೂ ಕುಮಾರ ಮತ್ತು ನಿರ್ಮಲ ನಮ್ಮ ಮಹಡಿಯಲ್ಲಿ ಓದುತ್ತಿದ್ದರು, ಪ್ರತೀ ದಿನ ಸಂಜೆ ಎಂಟರಿಂದ ಹತ್ತು-ಹತ್ತೂವರೆಯ ತನಕ. ಕರೆಂಟ್ ಹೋದರೂ ಪರ್ಯಾಯ ವ್ಯವಸ್ಥೆಯಿದ್ದ ಕಾರಣ ಹದಿನೆಂಟು ಇಪ್ಪತ್ತು ದಿನಗಳ ಸತತ ಓದು ಸಾಧ್ಯವಾಗಿತ್ತು. ಪ್ರತಿದಿನ ಸಂಜೆ 'ಕಲ್ಲಪ್ಪಾರಾಯಣ' ಮಾತ್ರ ತಪ್ಪುತ್ತಿರಲಿಲ್ಲ. ಒಂದು ಸಂಜೆ, ಆರುಗಂಟೆಗೇ ಮಡದಿಯನ್ನು ಥಳಿಸುತ್ತಿದ್ದಾಗ ಮಗಳು ನಮ್ಮ ಬಾಗಿಲಿಗೆ ಓಡಿ ಬಂದಳು, 'ಮನೆಯೊಳಗೆ ಹೋಗಲೂ ಬಿಡುತ್ತಿಲ್ಲ, ಪುಸ್ತಕಗಳನ್ನು ತರಲಾಗುತ್ತಿಲ್ಲ. ದುಡ್ಡು ಕೊಡು ಅಂತ ಅಮ್ಮನನ್ನು ಪೀಡಿಸಿ ಹೊಡೀತಿದ್ದಾರೆ ಅಪ್ಪ. ನೀವು ಬನ್ನಿ' ಎಂದಳು. ಹೋದೆ. ಕೈಯಲ್ಲಿದ್ದ ಕೋಲು ಕೆಳಗೆ ಹಾಕಿ ಸ್ವರ ಏರಿಸಿದ, 'ಅಮ್ಮಾರೆ, ನೀವು ನನ್ ಮನಿಗೆ ಯಾಕ್ ಬಂದ್ರಿ? ನಾ ನಿಮ್ ಗೇಟ್ ಪಕ್ಕ ಬರ್ಬಾರ್ದು ಅಂತೀರಲ್ಲ, ಇಲ್ಯಾಕ್ ಬಂದ್ರಿ? ನಡ್ರಿ ನಿಮ್ಮನಿಗೇ...' ಅಂತನ್ನುತ್ತಾ ನನ್ನತ್ತ ನುಗ್ಗಿ ಬಂದ. ಒಂದೇಒಂದು ಕ್ಷಣ ಎದೆ ಧಸಕ್ ಅಂದರೂ ಸಾವರಿಸಿಕೊಂಡೆ. ಎಷ್ಟಾದರೂ ಕುಡುಕ, ಮೈಮೇಲೆ ಸ್ವಾಧೀನವಿಲ್ಲ. ಬಲವಾಗಿ ದೂಡಿದರೆ ಬಿದ್ದೇಬಿಡುತ್ತಾನೆ. ಹಿಂಜರಿಯುವ ಕಾರಣ ಇಲ್ಲವೆಂದು ನೆಲಕ್ಕೆ ಗೂಟ ಹೊಡೆದಂತೆ ನಿಂತಲ್ಲೇ ನಿಂತೆ. ನಿರ್ಮಲಳನ್ನು ಆಕೆಯ ಪುಸ್ತಕ ತರಲು ಕಳಿಸಿದೆ.

ನಾಗಮ್ಮಳನ್ನು ಮನೆಯೊಳಗೆ ಹೋಗಲು ಹೇಳಿದೆ, ಆಕೆಯ ಅಡುಗೆ ಕೆಲಸ ಬಾಕಿಯಿತ್ತು. ಕಲ್ಲಪ್ಪನನ್ನು ದೊಡ್ಡ ಮನೆಯ ವೆರಾಂಡದ ಬದಿಯಲ್ಲೇ ಕೂತಿರಲು ತಾಕೀತು ಮಾಡಿ ನಿರ್ಮಲಳ ಜೊತೆ ನಮ್ಮನೆಗೆ ಬಂದೆ. ಬರುವಾಗ, ಇನ್ನೊಮ್ಮೆ ನಾಗಮ್ಮನಿಗಾಗಲಿ ನಿರ್ಮಲಳಿಗಾಗಲಿ ಏಟು ಹಾಕಿದರೆ ಅವನನ್ನೇ ಆ ವೆರಾಂಡದೊಳಗೆ (ಅದೊಂದು ಭಾಗ ಓನರ್ ತೆರೆದಿಟ್ಟಿದ್ದರು, ಮನೆಯ ಉಳಿದ ಭಾಗಕ್ಕೆ ಬೀಗವಿತ್ತು) ಕೂಡುಹಾಕಿ ಬೀಗ ಜಡಿಯುವುದಾಗಿ ಬೆದರಿಸಿ ಬಂದೆ. ಒಂದೆರಡು ದಿನ ತಣ್ಣಗಿದ್ದ. ಅಮೆರಿಕ ಪೋಷಿಸಿದ ನನ್ನ ಸ್ವಾವಲಂಬಿ ಸ್ವಭಾವ ನನಗೆ ಈ ಛಾತಿ ಕೊಟ್ಟಿತ್ತು.

ಮತ್ತೊಂದು ಸಂಜೆ, ಮತ್ತೆ ಏರುದನಿ, ಏಟು-ಅಳು ನಿನದಿಸಿದವು. ಕೈಯಲ್ಲಿ ಬೀಗವೊಂದನ್ನು ಹಿಡಿದೇ ಅವರ ಅಂಗಳಕ್ಕೆ ಹೋದರೆ ನಾಗಮ್ಮನಿಗೂ ನಿರ್ಮಲಳಿಗೂ ಹೊಡೆಯುತ್ತಿದ್ದ. ಅವನ ಕೈಯಲ್ಲಿದ್ದ ದೊಡ್ಡ ಕೋಲನ್ನು ಕಿತ್ತುಕೊಳ್ಳಲು ಮಗ ಕುಮಾರ ಪ್ರಯತ್ನಿಸುತ್ತಿದ್ದ. ನನ್ನನ್ನು ಕಂಡ ಕೂಡಲೇ ಕೋಲು ಕೆಳಗೆ ಬಿತ್ತು. 'ಕಲ್ಲಪ್ಪ, ಸುಮ್ನೇ ಆ ವೆರಾಂಡದೊಳಗೆ ನಡಿ, ನಿನ್ನನ್ನು ಅಲ್ಲಿ ಕೂಡುಹಾಕುತ್ತೇನೆ' ಎಂದದ್ದೇ ನನ್ನ ಮೇಲೆಯೇ ಸ್ವರ ಏರಿಸಿದ. 'ನನ್ನ ಅಂಗಳಕ್ಕೇ ಬಂದು ಮಾತಾಡ್ತೀರ? ನಿಮ್ ಅಂಗಳದಿಂದ ಮಾತಾಡ್ರಿ. ನನ್ ಮಕ್ಳು ಓದ್ಬೇಕು. ಅದ್ಕೇ ನಾನು ಕಷ್ಟ ಪಡೋದು. ಅವ್ರೂ ನನ್ ಥರಾ ಆಗ್ಬಾರ್ದು. ಚೆನ್ನಾಗಿ ಓದಿ ದೊಡ್ ಸಾಹೇಬ್ರಾಗ್ಬೇಕು. ಅದ್ಕೇ ಓದಿ ಅಂತಿದ್ದೆ. ನೀವು ಇಂಗ್ಲಿಷ್ ಮಾತಾಡ್ಬೇಡ್ರಿ, ಕನ್ನಡ... ಕನ್ನಡ...' ಅಂದ. ಇಷ್ಟಾದರೂ ನಾಗಮ್ಮ ತುಟಿಪಿಟಕ್ ಅಂತಿರಲಿಲ್ಲ. 'ನಾ ಆವತ್ತೇ ಹೇಳಿದ್ದೆ ನಿಂಗೆ, ಹೆಂಡ್ತಿ ಮಕ್ಕಳಿಗೆ ಏಟು ಹಾಕಿದ್ರೆ ನಿನ್ನ ಕೂಡುಹಾಕ್ತೀನಿ ಅಂದಿದ್ದೆ. ಈವತ್ತು ನೀನು ಮತ್ತೆಮತ್ತೆ ಹೊಡೀತಿದ್ದೆ. ಅದ್ಕೇ ನಡೀ ಆ ವೆರಾಂಡದೊಳಗೆ. ಮಾತಾಡ್ಬೇಡ, ಛುಪ್!' ಅಂದೆ. ಕುಡುಕನ ಬುದ್ಧಿಮಟ್ಟ ತೋರಿಸಿದ, 'ಛುಪ್ ಅನ್ನೋದು ಕನ್ನಡ ಅಲ್ಲ. ಕನ್ನಡ ಮಾತಾಡ್ರಿ, ಕನ್ನಡ... ನೀವೇನು ಕೂಡುಹಾಕೋದು ನನ್ನ, ನಾನೇ ಒಳಗೆ ಹೋಗಿ ಬಾಗ್ಲು ಹಾಕ್ಕೋತೀನಿ. ನೀವೇನ್ ಮಾಡ್ತೀರೋ ನಂಗೆ, ನೋಡ್ತೀನಿ...' ಅನ್ನುತ್ತಾ ತಾನೇ ಆ ವೆರಾಂಡದೊಳಗೆ ಹೋಗಿ ಒಳಗಿನಿಂದ ಚಿಲಕ ಜಡಿದುಕೊಂಡ. ಆ ನೋವಿನಲ್ಲೂ ನಿರ್ಮಲ, ಕುಮಾರ ಕಿಸಕ್ಕೆಂದರು. ಕೈಯಲ್ಲಿದ್ದ ಬೀಗವನ್ನು ಅವರೆಲ್ಲರ ಎದುರೇ ಆ ಬಾಗಿಲಿಗೆ ಹೊರಗಿನಿಂದ ಜಡಿದೆ. ಯಾವುದೇ ಕಾರಣಕ್ಕೂ ಆತನನ್ನು ಹೊರಗೆ ಬಿಡಲಾರೆ, ನಾಳೆ ಸಂಜೆಯವರೆಗೆ ಅಲ್ಲಿ ಬಿದ್ದಿರಲಿ. ಹೊಟ್ಟೆ ಚುರ್ರೆಂದರೆ ಸ್ವಲ್ಪ ಸರಿಯಾದಾನು, ಅಂತೆಲ್ಲ ಅಂದುಕೊಂಡು, ಅವರಿಗೂ ಹೇಳಿ ಮನೆಗೆ ಬಂದೆ.

ಸುಮಾರು ಎಂಟೂವರೆಯ ಹೊತ್ತಿಗೆ ಹುಡುಗರಿಬ್ಬರೂ ಬಂದು ಬಾಗಿಲು ತಟ್ಟಿದರು. ಆತನನ್ನು ಒಂಬತ್ತು ಗಂಟೆಯ ಬಸ್ಸಿಗೆ ಊರಿಗೆ ಕಳಿಸುತ್ತೇವೆ, ಬಾಗಿಲು ತೆಗೀರಿ ಅಂದರು. ತೆಗೆದೆ. ಮರುದಿನದ ಒಂಬತ್ತು ಗಂಟೆಯ ಬಸ್ಸಿಗೆ ಊರಿಗೆ ಹೋದ ಆಸಾಮಿ ಮತ್ತೆ ಬಂದದ್ದು ಜೂನ್ ಕೊನೆಗೆ. ಮಕ್ಕಳಿಬ್ಬರೂ ತಮ್ಮತಮ್ಮ ಪರೀಕ್ಷೆಗಳಲ್ಲಿ ಮೊದಲ

ಶ್ರೇಣಿಯಲ್ಲೇ ಉತ್ತೀರ್ಣರಾಗಿ ದೊಡ್ಡ ನಗುಮುಖದಲ್ಲಿ ಎರಡೆರಡು ಚಾಕ್ಲೇಟ್ಸ್ ಕೊಟ್ಟು ಅಮ್ಮನ ಜೊತೆ ಊರಿಗೆ ಹೋದರು. ಜೂನ್ ಮೊದಲ ವಾರದಲ್ಲಿ ಮೂರು ಮಕ್ಕಳು ಮಾತ್ರವೇ ಬಂದು, ಕಿರಿಯರಿಬ್ಬರು ಶಾಲೆಗೆ ಹೋಗಲು ಆರಂಭಿಸಿದರು. ಇದನ್ನು ನಾನು ನೋಡಿದ್ದೆ. ಒಂದು ಮಧ್ಯಾಹ್ನ, ನಾವು ಮನೆಯಲ್ಲಿರಲಿಲ್ಲ. ಪೊಲೀಸ್ ಮತ್ತು ನಾಲ್ಕು ಆಳುಗಳು ಬಂದು ಆ ಶೆಡ್‌ನಂಥ ಇಳಿಕೋಣೆಯನ್ನು ಕೆಡವಿ ಪಾತ್ರೆ-ಪಗಡಿ-ಪುಸ್ತಕಗಳನ್ನು ಹರಡಿ ಚೆಲ್ಲಾಡಿ ಹೋಗಿದ್ದರಂತೆ. ಕೆಲವಾರು ದಿನಗಳ ನಂತರ ರಸ್ತೆಯಲ್ಲಿ ಸಿಕ್ಕಿದ ನಿರ್ಮಲ ತಿಳಿಸಿದ ವಿಷಯವಿದು. ಅವರ ಓನರ್ ಅವರನ್ನು ಅಲ್ಲಿಂದ ಏಳಲು ಹೇಳದೆ, ಪರ್ಯಾಯ ವ್ಯವಸ್ಥೆ ಮಾಡದೆ, ಮಾಡಲು ತಿಳಿಸದೆ, ತಮ್ಮದೇ ಸ್ಥಳವಾದರೂ ಅವರ ತಲೆಮೇಲಿನ ಸೂರನ್ನು ಕೆಡವಿಸಿದ್ದು ಅಮಾನವೀಯ ಅಂದುಕೊಂಡೆ. ಸನ್ನಿವೇಶದ ವಿಪರೀತವೆಂದರೆ, ಈಮನೆಯ ಓನರ್ ಹಾಗೂ ಆಚೆ ಕಡೆಯ ಮನೆಯವರು, ಮಹಾದೇವ್ ಮತ್ತು ನಾನು ಹೇಳಿ ಪೊಲೀಸ್ ಬಂದು ಅವರ ನೆಲೆ ಕೆಡವಿದ್ದೆಂದು ಹೇಳಿದ್ದಾರೆ. ಅದಕ್ಕೇ ಅಂದು ನಾವು ಮನೆಯಲ್ಲಿರಲಿಲ್ಲ, ಎಂದಿದ್ದಾರೆ. ಮತ್ತಿವರೆಲ್ಲ ಅದನ್ನು ನಂಬಿದ್ದಾರೆ, ನಮ್ಮ ಜೊತೆ ಮಾತು ಬಿಡುವ ನಿರ್ಧಾರ ಮಾಡಿದ್ದಾರೆ. ಈಗ ಆ ಸಂಸಾರ ಇದೇ ಬೀದಿಯಲ್ಲಿ ಇನ್ನೊಂದು ದೊಡ್ಡ ಕಾಂಪೌಂಡಿನಲ್ಲಿಯ ದೊಡ್ಡ ಮನೆಯೊಂದರ ಇಳಿಕೋಣೆಯಲ್ಲಿದ್ದಾರೆ. ನಮ್ಮನೆತನಕ ಕಲ್ಲಪ್ಪನ ಸ್ವರ ಕೇಳುತ್ತಿಲ್ಲವಾಗಿ ಮುಂದಿನ ವಿಷಯಗಳೊಂದೂ ತಿಳಿಯದು. ಆದರೂ, ಈ ರೀತಿಯಾಗಿ ಅಮಾನವೀಯವಾಗಿ ಅವರನ್ನು ಖಾಲಿಮಾಡಿಸಿದ್ದು ಇಲ್ಲಿ ಮಾತ್ರ ಸಾಧ್ಯವೆ? ಅದೂ ಅಲ್ಲದೆ, ಅವರ ಆ ನೆಲೆತಪ್ಪಿದ ಸ್ಥಿತಿಗೆ ನಾವೇ ಕಾರಣರೆಂದು ಹೇಳಿಕೊಟ್ಟ ಆಚೆ ಮನೆಯವರ ನೈತಿಕತೆ ಯಾವ ಮಟ್ಟದ್ದು? 'ಹೊರಗಿದ್ದು ಬಂದವರು' ಎನ್ನುವ ಹೊಟ್ಟೆಕಿಚ್ಚೆ? ಈಯೆಲ್ಲ ಪ್ರಶ್ನೆಗಳಿಗೆ ಉತ್ತರಗಳು ಸಿಗಲಾರವು. ವಲಸಿಗರಾಗಿ ಬೇರೆ ನೆಲದಲ್ಲಿದ್ದು ಹಿಂದಿರುಗಿದ್ದರಿಂದ, ಅಸ್ಥಿರತೆಯ ಅರಿವಿದ್ದುದರಿಂದ ಆ ಸಂಸಾರದತ್ತ ನನ್ನಲ್ಲಿ ಕನಿಕರವಿತ್ತೆ? ಗೊತ್ತಿಲ್ಲ. ಆದರೂ, ಊರು ಸುತ್ತಿದ ಅನುಭವ ನನ್ನನ್ನು ಗಟ್ಟಿಗೊಳಿಸಿತ್ತು ಅನ್ನುವುದು ಸತ್ಯ. ಇಲ್ಲವಾದಲ್ಲಿ ಆ ಬಾಗಿಲಿಗೆ ನಾನೂ ಹೋಗುತ್ತಿರಲಿಲ್ಲ; ಎಲ್ಲ ನೆರೆಯವರ ಹಾಗೇ ಸುಮ್ಮನಿರುತ್ತಿದ್ದೆ.

ಭಾರತದಲ್ಲಿ ಬೀಡಾಡಿ ನಾಯಿ-ಬೆಕ್ಕುಗಳಿಗೇನೂ ಬರವಿಲ್ಲ. ಮಣಿಪಾಲವೂ ಅದಕ್ಕೆ ಹೊರತಲ್ಲ. ಈ ಬೀಡಾಡಿಗಳು ಅದು ಹೇಗೋ ನಮ್ಮಂಗಳವನ್ನೇ ಹುಡುಕಿಕೊಂಡು ಬರುವುದು ನಮ್ಮ ಪ್ರಾಪ್ತಿಯೋ ಅವುಗಳ ಪ್ರಾಪ್ತಿಯೋ ತಿಳಿಯದು. 2010ರ ಆಗಸ್ಟ್ ತಿಂಗಳ ಕೊನೆದಿನ. ನಮ್ಮ ಮನೆಯ ಬದಿಯಲ್ಲೇ, ಗೋಡೆ ಮತ್ತು ಹಳೆ ಟ್ಯಾಂಕಿಯ ನಡುವೆ ಬೀಡಾಡಿ ನಾಯಿತಾಯಿ ಆರು ಮರಿಯಿಟ್ಟು ಅವುಗಳ ಆರೈಕೆಯಲ್ಲಿ ನನ್ನ ಕೈವಾಡವೂ ಸೇರಿಹೋಗಿ ಬಂಧ ಬೆಸೆದುಕೊಂಡ ಸನ್ನಿವೇಶಗಳನ್ನು 'ಬೆಳ್ಳಿ-ಚುಕ್ಕಿ'ಯರ

ಕಥಾನಕದಲ್ಲಿ ಹೇಳಿದ್ದೇನೆ. ಬೆಳ್ಳಿ-ಚುಕ್ಕಿ ಇಬ್ಬರಿಗೂ ಆರು ತಿಂಗಳಾಗುತ್ತಲೇ ಸಂತಾನಹರಣ ಚಿಕಿತ್ಸೆ ಮಾಡಿಸಿ (ಇಲ್ಲವಾದಲ್ಲಿ ಹೆಣ್ಣುನಾಯಿಮರಿ ಯಾರಿಗೂ ಬೇಡ, ಮರಿ ಹಾಕುತ್ತವೆ ಅನ್ನುವ ನೆಪ), ಮತ್ತೊಂದು ತಿಂಗಳು ಆರೈಕೆ ಮಾಡಿದ ಅನುಭವ ಇನ್ನೊಂದೇ ಲೇಖನವಾಗಬಹುದು. ಆ ನಂತರದಲ್ಲಿ ಅವರಿಬ್ಬರನ್ನೂ ನಮ್ಮೂರ ರೈತನೊಬ್ಬನ ಅಂಗಳದಲ್ಲಿ ಬಿಟ್ಟು ಬಂದೆವು. ಈಗಲೂ ಒಮ್ಮೊಮ್ಮೆ ಸಮಯವಾದಾಗ ಆ ಕಡೆ ಕಾರ್ ಹೊರಳಿಸಿದರೆ, ಅವರಿಬ್ಬರ ಪ್ರೀತಿಯ ಮಹಾಪೂರ ನಮ್ಮ ಪಾದಗಳ ಮೇಲೆ ಹರಿದಾಡುತ್ತದೆ. ಕಣ್ಣಂಚು ಪಸೆಯಾಗುತ್ತದೆ. ಮಾತು ಬಾರದಿರುವ ಆ ಎರಡು ಜೀವಿಗಳು ತಮ್ಮ ಇಡೀ ದೇಹವನ್ನು ಆಡಿಸಿ, ತೂಗಿಸಿ, ಹೊರಳಿಸಿ, ಹಾರಿಸಿ, ಕುಣಿಯಿಸಿ, ಮಣಿಯಿಸಿ, ಕುಂಯ್‌ಕುಂಯ್ ಎನ್ನುತ್ತಾ ಒಪ್ಪಿಸುವ ಭಾವಧಾರೆ ಯಾವ ಪ್ರಣಯಿಯೂ ಹರಿಸಿರಲಾರರು; ಯಾವ ತಾಯಿಯೂ ಉಣಿಸಿರಲಾರರು. ಅಂಥ ಅದಮ್ಯ ಪ್ರೀತಿಯನ್ನು ಅನುಭವಿಸಿದ ಕ್ಷಣಗಳು ಧನ್ಯಧನ್ಯ. ಆ ಕ್ಷಣಗಳನ್ನು ನಮಗಾಗಿ ಸೋಸಿದ ಬೆಳ್ಳಿ-ಚುಕ್ಕಿ, ಇಬ್ಬರಿಗೂ ಪ್ರೀತಿಯ ಋಣಿಗಳು ನಾವು.

ಅಂಥದೇ ಇನ್ನೊಂದು ಕುನ್ನಿ ಕಂಚು. 2011ರ ಡಿಸೆಂಬರ್ ಮೂವತ್ತರ ಬೆಳ್ಳಂಬೆಳಗ್ಗೆ ಬೀದಿಯಲ್ಲಿ ಬೇರೆ ನಾಯಿಗಳಿಂದ ಘಾತಕ್ಕೊಳಗಾಗಿ ನರಳುತ್ತಿದ್ದ ಪುಟ್ಟ ಕಂದು ಮರಿಯೊಂದನ್ನು ನಮ್ಮ ನೆರೆಹೊರೆಯ ಮಗಳೊಬ್ಬಳು ತಂದಿತ್ತಳು, 'ಆಂಟಿ, ನಮ್ಮನೆಯಲ್ಲೇ ಎರಡು ದೊಡ್ಡ ನಾಯಿಗಳು ಇದ್ದಾವೆ. ಇದನ್ನು ನೋಡ್ಕೊಳ್ಳೋದಿಕ್ಕೆ ಆಗೋದಿಲ್ಲ. ನೀವು ಇದರ ಪಾಲನೆ ಮಾಡ್ತೀರಾ?' ಬಟ್ಟೆತುಂಡೊಂದರಲ್ಲಿ ಸುತ್ತಿಸಿಕೊಂಡು ಕುಂಯ್‌ಗುಡುತ್ತಾ ನಡುಗುತ್ತಿದ್ದ ಈ ಮರಿಯನ್ನು ಮತ್ತೆ ಬೀದಿಗೆಸೆಯುವ ಚಿತ್ತವಿಲ್ಲ. ಹೀಗೆ ಮಡಿಲಿಗೆ ಬಿದ್ದ ಕಂದುಮೋರೆ, ಕಪ್ಪುಮೈಯವಳನ್ನು 'ಕಂಚು' ಎಂದು ಕರೆದೆ. ಸುಮಾರು ಎರಡು ತಿಂಗಳು ವಯಸ್ಸಾಗಿದ್ದರೂ ಈಕೆ ಎಷ್ಟು ಪುಟ್ಟದಾಗಿದ್ದಳೆಂದರೆ, ನನ್ನ ಮೈದುನನ ಎರಡೂವರೆ ವರ್ಷದ ಮಗ ಇವಳನ್ನು 'ಮೌಸ್' ಎಂದ. ಅಂಥ ಮರಿಯನ್ನು, ಹೆಜ್ಜೆಸದ್ದಿಗೂ ಹೆದರುತ್ತಿದ್ದ ಪುಕ್ಕಲಿಯನ್ನು (ತನ್ನದೇ ಹೂಸಿಗೂ ಬೆಚ್ಚುತ್ತಿದ್ದವಳನ್ನು) ಧೀರೆಯಾಗಿಸಿ, ಇವಳಿಗೂ ಸಂತಾನಹರಣ ಚಿಕಿತ್ಸೆ ಮಾಡಿಸಿ, ಆರೈಕೆ ಮಾಡಿ ನಮ್ಮೂರಲ್ಲೇ ಇನ್ನೊಬ್ಬರ ಮನೆಯಂಗಳದಲ್ಲಿ ಆಡಾಡಿಕೊಂಡಿರಲು ಕಳಿಸಿದೆ. ಅಲ್ಲೇ ಬದಿಯಲ್ಲಿ ನಮ್ಮೊಬ್ಬರು ನೆಂಟರ ಮನೆ. ಅಲ್ಲಿಗೇನಾದರೂ ನಾವು ಹೋದರೆ, ಕಾರ್ ನಿಂತ ಕೂಡಲೇ ಗುರುತಿಸಿ, ಹಾರ್‌ಹಾರಿ ಕುಂಯ್‌ಗುಟ್ಟಿ ನಮ್ಮ ಗಮನ ಸೆಳೆಯಲು ಪ್ರಯತ್ನಿಸಿ, ನಾವು ಬೇಕೆಂದೇ ನಿರ್ಲಕ್ಷಿಸಿದರೆ, ಕಟಾಂಜನಕ್ಕೆ ಕೈಯೂರಿ, ತಲೆಯಿಟ್ಟು ಮೌನವ್ರತ ಕೈಗೊಳ್ಳುವ ಈ ಬಿಂಕದರಸಿಯ ಪ್ರೀತಿಗೆ ಯಾವ ಪ್ರತಿರೋಧವೂ ನಮ್ಮಲ್ಲಿಲ್ಲ.

ಅಮೆರಿಕಾದಲ್ಲಿದ್ದಾಗ ಕೆಲಕಾಲ ನಮ್ಮಲ್ಲೊಬ್ಬ ತಂಟೆಕೋರ ಲ್ಹಾಸಾ ಆಪ್ಸೋ, 'ಕೋಕೋ' ಇದ್ದ. ಅವನನ್ನು ಅನಿವಾರ್ಯವಾಗಿ ಸ್ನೇಹಿತರೊಬ್ಬರ ಮನೆಯೊಳಗಿರಿಸಿ

ಹೊರಟಾಗಲೂ ಅವ ತೋರಿದ ನಿರ್ವ್ಯಾಜ ಪ್ರೀತಿಯನ್ನು ಇನ್ನೂ ಎದೆಯೊಳಗೆ ಬೆಚ್ಚಗೆ ಇರಿಸಿಕೊಂಡಿದ್ದೇವೆ. ಇದೀಗ, ಯಾವುದೋ ಖಾಲಿ ಮನೆಯ ಯುಟಿಲಿಟಿ ಏರಿಯಾದಲ್ಲಿ ಸಾವಿಗೆದುರಾಗಿದ್ದ ಎರಡು ಬೆಕ್ಕಿನ ಮರಿಗಳು ನಮ್ಮ ಗರಾಜಿನಲ್ಲಿ ಹಾಲನ್ನ ಉಣ್ಣುತ್ತಿವೆ. ಗಟ್ಟಿಯಾಗಿ ಓಡಾಡುವ ದೇಹಶಕ್ತಿಯಿದ್ದರೂ ಭಯದ ಬೇರಳಿದಿಲ್ಲ. ಒಂದು ದಿನ ನನ್ನ ಅಂಗಿಯ ಚುಂಗು ಹಿಡಿದು ಆಡಿಯಾವು ಎನ್ನುವ ನಿರೀಕ್ಷೆಯಲ್ಲಿದ್ದೇನೆ. ಬದುಕು ನಮ್ಮೆದುರು ಎಷ್ಟು ಬತ್ತದ ಒರತೆಗಳನ್ನು ತೆರೆದಿರಿಸಿದೆ. ಅವುಗಳನ್ನು ಆಪ್ತವಾಗಿ ಸಲಹುವ ಆಸಕ್ತಿ ದೊರಕಿದ್ದು ಹೊರನಾಡಿನ ಹೊರನೋಟದ ಬದುಕಿನಿಂದ. ಅಲ್ಲಿ ಸಾಕುಪ್ರಾಣಿಗಳಿಗೆ ಸಿಗುವ ಸ್ಥಾನ, ಸೌಲಭ್ಯ ನಮ್ಮ ಕಣ್ಣುಗಳನ್ನು ತೆರೆದಿದೆ. ಪ್ರಪಂಚವನ್ನು ಹೃದಯದಿಂದ ನೋಡುವ ಹೀರುವ ಆಯಾಮ ಕೊಟ್ಟ ಶಕ್ತಿಗೆ ನಮ್ರನಮನಗಳು.

ಅಮೆರಿಕದಲ್ಲಿದ್ದಷ್ಟು ಕಾಲವೂ 'ಅಳಿದೂರಿಗೆ ಉಳಿದವನೇ ಗೌಡ' ಅನ್ನುವ ಗಾದೆಯನ್ನು ನೆನಪಿಸಿಕೊಳ್ಳುತ್ತಲೇ ಇದ್ದೆ. ನಾನೂ ಒಬ್ಬ ಲೇಖಕಿ, ನಾನೂ ಒಬ್ಬ ಕವಯತ್ರಿ, ನಾನೂ ಒಬ್ಬ ಸಾಹಿತಿ- ಎನ್ನುವ ಮನ್ನಣೆಗಳಲ್ಲಿ ನನ್ನ ಇನ್ನೊಂದು ಮುಖವನ್ನು ಕಾಣುತ್ತಿದ್ದೆ. ಇಲ್ಲಿ ಬಂದಾಗ ಇಲ್ಲಿರುವ ನೂರಾರು ಬರಹಗಾರರ ನಡುವೆ, ಅವರ ರಾಜಕಾರಣಗಳ ನಡುವೆ, ಹುನ್ನಾರ-ಪೈಪೋಟಿಗಳ ನಡುವೆ ಸಿಲುಕಿ ಬೆರಗಾದೆ. ಆದರೂ, ಬರವಣಿಗೆ ಕೈಬಿಟ್ಟಿಲ್ಲ, ನನ್ನ ಪುಣ್ಯ. ಪ್ರಕಟಿತ ಬರಹಗಳನ್ನು ಓದಿ, ಕವಿಗೋಷ್ಠಿ, ಸಾಹಿತ್ಯ ಕಾರ್ಯಕ್ರಮಗಳಲ್ಲಿ ನನ್ನ ಉಪಸ್ಥಿತಿಯನ್ನು ಕೋರಿ, ಮಾತುಗಳನ್ನು ಕೇಳಿ, ಮೆಚ್ಚಿ ನಾಲ್ಕು ಮಾತಾಡಿದರೆ ಖುಷಿಯಾಗುತ್ತದೆ. 'ಅಲ್ಲೇ ಇದ್ದಿದ್ದರೆ ಇದಕ್ಕಿಂತ ಹೆಚ್ಚಿನ ಮನ್ನಣೆ ಸಿಗುತ್ತಿತ್ತೆ?' ಅನ್ನುವ ಪ್ರಶ್ನೆಯನ್ನೂ ಒಂದೆರಡು ಬಾರಿ ಕೇಳಿಕೊಂಡಿದ್ದಿದೆ. 'ಅಮೆರಿಕನ್ನಡ ಬರಹಗಾರರು' ಅನ್ನುವ ಹಣೆಪಟ್ಟಿ ಮಾತ್ರ ಇನ್ನೂ ಸಂಪೂರ್ಣ ಇಳಿದಿಲ್ಲ.

ಸ್ವದೇಶದಲ್ಲಿ ನಮ್ಮವರ ಸುತ್ತಮುತ್ತಲಲ್ಲೇ ನೆಲೆಯೂರುವ ನಮ್ಮ ಹಂಬಲ ಮಾತ್ರ ಇಂದೂ ಬಸವಳಿದಿಲ್ಲ, ಬೇಸರಿಸಿಲ್ಲ. ಹಾಗೆಂದು, ಎಲ್ಲಿಂದೆಲ್ಲಿಗೇ ಆಗಲಿ, ವಲಸೆಯೆನ್ನುವುದು, ನರ್ಸರಿಯಿಂದ ಗಿಡ ತಂದು ನಮ್ಮ ತೋಟದಲ್ಲಿ ನೆಟ್ಟಂತೆಯೇ. ಹೋಲಿಕೆ ಸರಿಯಾಗಿಲ್ಲವೆ? ನರ್ಸರಿಯಿಂದ ತಂದು ನಮ್ಮ ತೋಟದಲ್ಲಿ ಗಿಡ ನೆಡುವ ಪ್ರಕ್ರಿಯೆ ಏನೇನನ್ನೆಲ್ಲ ಒಳಗೊಳ್ಳುತ್ತದೆ ನೋಡಿ: ಮೊದಲಾಗಿ ನರ್ಸರಿಯಲ್ಲಿ ತೋಟಗಾರನ ನಾಜೂಕಿನ ಆಸರೆಯಲ್ಲಿ, ಅವರಿತ್ತ ಸೂಕ್ತ ನೀರು-ಗೊಬ್ಬರದ ಆರೈಕೆಯಲ್ಲಿ ಬೆಳೆಯುತ್ತಿದ್ದ ಗಿಡವೊಂದನ್ನು ನಮಗಿಷ್ಟವಾಯ್ತೆಂದು ತರುತ್ತೇವೆ. ನಮ್ಮ ತೋಟದ ಮಣ್ಣು, ಗೊಬ್ಬರ, ನೆರಳು-ಬಿಸಿಲು, ನಮ್ಮ ಆರೈಕೆ, ನಾವು ನೀಡುವ ಗಮನ,

ಪೋಷಣೆ– ಎಲ್ಲವೂ ಅಲ್ಲಿನದಕ್ಕಿಂತ ಭಿನ್ನವಾಗಿರುತ್ತವೆ.

ನೆಲದಲ್ಲಿ ನೆಟ್ಟೆವು ಅಂದುಕೊಳ್ಳೋಣ, ಆ ಗಿಡ ತನ್ನ ಸುತ್ತಲ ಮಣ್ಣಿನಲ್ಲಿ ತನಗೆ ಬೇಕಾದ ರಾಸಾಯನಿಕಗಳನ್ನು ಹುಡುಕಿ ಬೇರಿಳಿಸಿ ಪಡೆದು ನೆಲೆಯೂರಬೇಕು. ನರ್ಸರಿಯಲ್ಲಿದ್ದಂತೆ ಸಣ್ಣ ಪ್ಲಾಸ್ಟಿಕ್ ತೊಟ್ಟೆಯ ಪರಿಸರ ದಾಟಿ ಹೊರಗಿನ ವಾತಾವರಣಕ್ಕೆ ಬೇರುಗಳನ್ನು ಹೊಂದಿಸಿಕೊಳ್ಳಬೇಕು. ಈ ಮಣ್ಣಿನಲ್ಲಿರುವ ಹುಳಹುಪ್ಪಟೆಗಳಿಗೆ ತನ್ನ ನೈಸರ್ಗಿಕ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಇವಕ್ಕೆಲ್ಲ ತಗಲುವ ಸಮಯಾವಧಿಯಲ್ಲಿ ನಾವೇನಾದರೂ ಸ್ವಲ್ಪ ನಿಗಾ ವಹಿಸದಿದ್ದರೆ, ಆ ಗಿಡದ ಹೊಂದಾಣಿಕೆಯಲ್ಲಿ ಏರುಪೇರಾಗುತ್ತದೆ. ಬೆಳವಣಿಗೆ ಕುಂಠಿತವಾಗುತ್ತದೆ. ಗಿಡ ಮುದುರುತ್ತದೆ. ನರ್ಸರಿಯಲ್ಲಿದ್ದಂತೆ ಚಂದದ ಹೂ ತೊಡುವ ಬದಲು ಎಲೆಗಳನ್ನು ಬಾಡಿಸಿ ಕಣ್ಣೀರಿಡುವಂತೆ ತಲೆತಗ್ಗಿಸಿ ನಿಲ್ಲುತ್ತದೆ. ಒಂದೊಮ್ಮೆ ಹಾಗೇನಾದರೂ ಆದರೆ, ಬೇಕಿತ್ತಾ ಈ ಗಿಡದ ಉಸಾಬರಿ ಅಂತ ನಮಗನ್ನಿಸುವಂತಾಗುತ್ತದೆ. ಬದಲಾಗಿ, ಮೊದಲ ದಿನದಿಂದಲೇ ಚೆನ್ನಾಗಿ ಕಾಳಜಿ ವಹಿಸಿ ಮುಂಜಾಗರೂಕತೆಯಿಂದ ಎಲ್ಲ ಪಾಲನೆ ಪೋಷಣೆ ನೀಡಿದರೆ, ಆಗ ಗಿಡವೂ ಸಂತೋಷದಿಂದಲೇ ನಳನಳಿಸುತ್ತದೆ. ಅಂತಹ ನಿಷ್ಠೆ ಮತ್ತು ಬದ್ಧತೆಯಿದ್ದಲ್ಲಿ ಮಾತ್ರ ಅದು ಸಾಧ್ಯ. ವಲಸೆಯೂ ಅಂತಹದ್ದೇ ನಿಷ್ಠೆ ಮತ್ತು ಬದ್ಧತೆಯನ್ನು ಅಪೇಕ್ಷಿಸುತ್ತವೆಯೆಂದು ನನ್ನ ಅಭಿಮತ.

ಹೀಗೆಯೇ, ಅಮೆರಿಕದಲ್ಲಿ ಕೆಲವಾರು ವರ್ಷ ಇದ್ದು, ಮಕ್ಕಳನ್ನು ಅಲ್ಲಿಯ ಪರಿಸರದಲ್ಲಿ ಅದಕ್ಕನುಗುಣವಾಗಿ ಬೆಳೆಸಿರುತ್ತೇವೆ. ಸಹಜವಾಗಿಯೇ ಮಕ್ಕಳು ಅಲ್ಲಿಗೆ ಹೊಂದಿಕೊಂಡು ಅದನ್ನೇ ತಮ್ಮ ಸ್ವಭಾವದಲ್ಲಿ ಅಳವಡಿಸಿಕೊಂಡಿರುತ್ತಾರೆ. ಭಾರತಕ್ಕೆ ಬರುವಾಗ ಅವರಿಗೆ, ಹಲವು ಬಾರಿ ಹಿರಿಯರಾದ ನಮಗೂ, ಇಲ್ಲಿನ ವಾತಾವರಣ ಅಪರಿಚಿತ ಅನಿಸಿಬಿಡುತ್ತದೆ. ಈ ಅಪರಿಚಿತತೆಯನ್ನು ನಿಷ್ಠೆಯಿಂದ ಪರಿಚಿತವಾಗಿಸುತ್ತಾ ಹೃದಯದ ಬಾಗಿಲು ತೆರೆದು ಇಚ್ಛೆಗೆ ಬದ್ಧರಾಗಿ ಬಾಳುವ ಪ್ರಯತ್ನ ಮಾಡಿದ್ದೇವೆ. ಬಾಳ ಪಯಣದಲ್ಲಿ ನಮ್ಮ ಪಾಲಿಗೊದಗಿದ ಪಂಚಾಮೃತ ಈ ಮರುವಲಸೆಯಿಂದ ಬದಲಾದ ವಾತಾವರಣದಲ್ಲಿ ನಮಗಾದ ಕೆಲವು ಪ್ರಸಂಗಾನುಭವಗಳನ್ನಷ್ಟೇ ಹಂಚಿಕೊಂಡಿದ್ದೇನೆ. ಯಾವುದೇ ಅಲಂಕಾರ ಆಡಂಬರಗಳಿಲ್ಲದೆ, ಉತ್ಪ್ರೇಕ್ಷೆಯಿಲ್ಲದೆ, ಕೇವಲ ಹೇಳಿಕೆಗಳನ್ನಷ್ಟೇ ದಾಖಲಿಸಿದ್ದೇನೆ. ಈಯೆಲ್ಲಾ ಅನುಭವಗಳು ನಮ್ಮಿಬ್ಬರ ಗ್ರಾಹ್ಯವಷ್ಟೇ.

ಅನುಬಂಧಗಳು

[illegible]

ಲೇಖಕರ ಪರಿಚಯ

1. ಡಾ. ಎಚ್. ಕೆ. ಚಂದ್ರಶೇಖರ್

ಮೈಸೂರು ಮೆಡಿಕಲ್ ಕಾಲೇಜಿನ ಪದವೀಧರರಾಗಿ ಇಂಗ್ಲೆಂಡಿನಲ್ಲಿ ಕಿವಿ ಮೂಗು ಗಂಟಲ ವೈದ್ಯವಿಭಾಗದಲ್ಲಿ ಪರಿಣತಿ ಗಳಿಸಿದ ನಂತರ 1969ರ ಜನವರಿಯಲ್ಲಿ ಪತ್ನಿ ಡಾ. ಶ್ರೀದೇವಿ ಮತ್ತು ಮಕ್ಕಳು ಸುಜನಾ, ಸುಮನಾ ಜತೆ ಅಮೆರಿಕಕ್ಕೆ ವಲಸೆ ಬಂದರು. ಇಲ್ಲಿಯೂ ಶಿಕ್ಷಣ ಮುಂದುವರೆಸಿ ನ್ಯೂಯಾರ್ಕ್ ವಿಶ್ವವಿದ್ಯಾಲಯ ವೈದ್ಯ ಸಂಸ್ಥೆಯಲ್ಲಿ 35 ವರ್ಷಗಳು ವೃತ್ತಿ ಉದ್ಯೋಗ ಮತ್ತು ಟೆನ್ಯೂರ್ಡ್ ಅಸೋಸಿಯೇಟ್ ಪ್ರೊಫೆಸರಾಗಿದ್ದು ಈಗ ನಿವೃತ್ತರಾಗಿದ್ದಾರೆ. ನ್ಯೂಯಾರ್ಕ್ ನಗರದ ಭಾರತೀಯ ಜನಾಂಗದ ಪ್ರಮುಖರಲ್ಲೊಬ್ಬರಾಗಿದ್ದು, ಅಲ್ಲಿಯ ವೈದ್ಯಕೀಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ. 1982ರಲ್ಲಿ ವಿಶಾಲ ನ್ಯೂಯಾರ್ಕ್ ನಗರಪ್ರದೇಶದ ಭಾರತೀಯ ಜನಾಂಗಗಳ ಒಕ್ಕೂಟದ ಅಧ್ಯಕ್ಷರಾಗಿದ್ದರು. ನಂತರದಲ್ಲಿ ಮೇಯರ್ ಎಡ್ ಕಾಚ್ ಅವರ ಜನಾಂಗ ಸಮಿತಿಯಲ್ಲಿ ಭಾರತವನ್ನು ಐದು ವರ್ಷಗಳು ಪ್ರತಿನಿಧಿಸಿ ನ್ಯೂಯಾರ್ಕ್ ನಗರದಲ್ಲಿ ಮಹಾತ್ಮ ಗಾಂಧಿಯವರ ಪ್ರತಿಮೆಯ ಸ್ಥಾಪನೆಗೆ ಕಾರಣರಾದರು. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಇವರ ಆಸಕ್ತಿ ಅಪಾರ. 1972ರಲ್ಲಿಯೇ ದೇಶದ ಪ್ರಥಮ ಕನ್ನಡ ಕೂಟವನ್ನು ಆರಂಭಿಸಿದ ಆದ್ಯರಲ್ಲಿ ಒಬ್ಬರಾದ ಇವರು ಮುಂದೆ ಹಲವು ವರ್ಷಗಳು ಅಧ್ಯಕ್ಷರಾಗಿದ್ದು ಕೆಲಸ ಮಾಡಿದರು. ವಿವಿಧ ಪ್ರಬಂಧ ಸಂಕಲನಗಳಲ್ಲಿ, ನಿಯತಕಾಲಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. 'ಭಾರತದ ಬೃಹತ್ ಬೇಲಿ' ಎಂಬ ಐತಿಹಾಸಿಕ ವಿಶಿಷ್ಟ ಗ್ರಂಥ ಇವರ ಪ್ರಕಟಿತ ಕೃತಿಗಳಲ್ಲಿ ಮುಖ್ಯವಾದದ್ದು.

2. ವೈಶಾಲಿ ಹೆಗಡೆ

ಊರು, ಪಿಯುಸಿವರೆಗಿನ ಓದು, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ. ಇವರ ಪ್ರಕಟಿತ ಪುಸ್ತಕ 'ಒದ್ದೆಹಿಮ... ಉಪ್ಪುಗಾಳಿ' ಪ್ರಬಂಧ ಸಂಕಲನ. ಹುಬ್ಬಳ್ಳಿಯ ಬಿ.ವಿ.ಬಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಇಲೆಕ್ಟ್ರೋನಿಕ್ಸ್ ಹಾಗೂ ಕಮ್ಯುನಿಕೇಶನ್ ಕ್ಷೇತ್ರದಲ್ಲಿ ಬಿ.ಇ. ಪದವಿ. ಯುನಿವರ್ಸಿಟಿ ಆಫ್ ಮ್ಯಸ್ಸಚುಸೆಟ್ಸ್‌ನಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಮಾಸ್ಟರ್ಸ್ ಪದವಿ. ಮಾಸ್ಟರ್ಸ್ ಥೀಸಿಸ್ ಪ್ರಬಂಧ ಲೇಖನ IEEE ಕಾನ್ಫರೆನ್ಸಿನಲ್ಲಿ ಮಂಡಿತವಾಗಿದೆ. ಪ್ರಸ್ತುತ ಸಾಫ್ಟವೇರ್ ಇಂಜಿನಿಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅಮೆರಿಕೆಯ ಬಾಸ್ಟನ್ ಸಮೀಪದ ವೆಸ್ಟ್‌ಫ಼ೋರ್ಡ್‌ನಲ್ಲಿ ವಾಸವಾಗಿದ್ದಾರೆ. ಅಮೆರಿಕೆಯ ಹವ್ಯಾಸಿ ಯಕ್ಷಗಾನ ತಂಡ 'ಯಕ್ಷಲೋಕ'ದ ಪಾತ್ರಧಾರಿಗಳಲ್ಲೊಬ್ಬರು. ಬರವಣಿಗೆಯ ಜೊತೆಯಲ್ಲಿ ಆಗಾಗ ನೃತ್ಯ, ನಾಟಕ, ರಂಗಪ್ರದರ್ಶನಗಳನ್ನು ಸಂಯೋಜಿಸುತ್ತ ಬಂದಿದ್ದಾರೆ. ಬಾಸ್ಟನ್ ಕನ್ನಡ ಕೂಟದಲ್ಲಿ ಮನರಂಜನ ಸಮಿತಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದಾರೆ. ನಾವಿಕ ಎರಡನೇ ವಿಶ್ವ ಸಮ್ಮೇಳನದ ಸಾಹಿತ್ಯ ಸಮಿತಿಯ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

3. ಸುಧೀಂದ್ರ ಬುಧ್ಯ

ಹುಟ್ಟಿದ್ದು ಬೆಳೆದದ್ದು ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ. ಬೇರುಗಳೆಲ್ಲಾ ದಕ್ಷಿಣ ಕನ್ನಡದ್ದು. ಅಪ್ಪ ಕೈ ಹಿಡಿದು ಲೈಬ್ರರಿಗೆ ಕರೆದುಕೊಂಡು ಹೋಗುತ್ತಿದ್ದ ದಿನಗಳಿಂದಲೂ ಪುಸ್ತಕ ಸಹವಾಸಿ. ಇಂಜಿನಿಯರಿಂಗ್ ಪದವಿಯ ನಂತರ ಅಮೇರಿಕಾ ಮೂಲದ ಸಾಫ್ಟ್‌ವೇರ್ ಕಂಪನಿಯಲ್ಲಿ ನೌಕರಿ. ಕಳೆದ ಎರಡು ವರ್ಷಗಳಿಂದ ಸಿನ್ಸಿನಾಟಿಯಲ್ಲಿ ವಾಸ. ಪತ್ರಿಕೋದ್ಯಮ ಆಸಕ್ತಿಯ ಕ್ಷೇತ್ರ. ವಿಜಯ ಕರ್ನಾಟಕ, ಪ್ರಜಾವಾಣಿ, ಸುಧಾ ಪತ್ರಿಕೆಗಳಲ್ಲಿ ಹಲವು ಲೇಖನಗಳು, ಪ್ರಬಂಧಗಳು ಪ್ರಕಟವಾಗಿವೆ. ಎರಡು ವರ್ಷಗಳಿಂದ ಪ್ರತಿ ಶನಿವಾರದ ಅಂಕಣ 'ಪರದೇಶಿ ಪರಪಂಚ' ಹೊಸದಿಗಂತದಲ್ಲಿ ಅಚ್ಚಾಗುತ್ತಿದೆ. ಕಂಡಿದ್ದು, ಓದಿದ್ದು, ತೋಚಿದ್ದನ್ನು ಹಂಚಿಕೊಳ್ಳಲು 'ಅರಳೀ ಕಟ್ಟೆ'ಯೆಂಬ ಬ್ಲಾಗಿದೆ. 'ನೀನೊಪ್ಪುವ ಹೆಣ್ಣು ಇಲ್ಲಿಲ್ಲ ಜೋಕೆ' ಎನ್ನುತ್ತಲೇ ಅಪ್ಪ ಅಮ್ಮ ಸೊಸೆಗಾಗಿ ಹುಡುಕುವುದು ನಡೆದಿದೆ.

4. ತ. ನಂ. ರಾಜಶೇಖರ್

ಹುಟ್ಟಿ ಬೆಳೆದದ್ದು ಬೆಂಗಳೂರು ಸಮೀಪದ ಆನೇಕಲ್ಲಿನಲ್ಲಿ. ಆನೇಕಲ್, ಬೆಂಗಳೂರು, ಮತ್ತು ತಿರುವನಂತಪುರಗಳಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಿಂದ ಪಿ.ಎಚ್.ಡಿ. ಪದವಿ ಗಳಿಸಿದರು. ಹಾಸನ, ಬೆಂಗಳೂರು, ಮತ್ತು ದಕ್ಷಿಣ ಅಮೆರಿಕದ ಸುರಿನಾಮಿನಲ್ಲಿ ವೃತ್ತಿಯಲ್ಲಿದ್ದು, ಈಗ ಸುಮಾರು 29 ವರ್ಷಗಳಿಂದ ಅಮೆರಿಕದಲ್ಲಿ ವೃತ್ತಿ ಜೀವನ ನಡೆಸುತ್ತಿದ್ದಾರೆ. ಕಳೆದ 14 ವರ್ಷಗಳಿಂದ ನ್ಯೂಜೆರ್ಸಿಯಲ್ಲಿ ವಾಸಿಸುತ್ತಿದ್ದು, ಇಲ್ಲಿನ ಕನ್ನಡ ಸಂಘ ತ್ರಿವೇಣಿ ಕಾರ್ಯಕಾರಿ ಸಮಿತಿಯ ಖಜಾಂಚಿ, ಉಪಾಧ್ಯಕ್ಷ, ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. 2006ರಲ್ಲಿ ತ್ರಿವೇಣಿ ಪ್ರಕಟಿಸಿದ ಕರ್ನಾಟಕ ಸುವರ್ಣ ಮಹೋತ್ಸವದ ವಿಶೇಷ ಸಂಚಿಕೆ ಹೇಮವಾಹಿನಿಯ ಪ್ರಧಾನ ಸಂಪಾದಕರಾಗಿದ್ದರು. 2004ರಲ್ಲಿ ಪ್ರಾರಂಭವಾದ ಅಮೆರಿಕದ ರಾಷ್ಟ್ರೀಯ ಸಂಸ್ಥೆ ಕನ್ನಡ ಸಾಹಿತ್ಯ ರಂಗದ ಸ್ಥಾಪಕ ಖಜಾಂಚಿಯಾಗಿದ್ದರು. ನ್ಯೂಜೆರ್ಸಿ ಮತ್ತು

ಸುತ್ತಮುತ್ತಲಿನ ಸಾಹಿತ್ಯಾಸಕ್ತರ ಬಳಗ ಪ್ರಸ್ತಾಪದ ಕಾರ್ಯಕ್ರಮಗಳಲ್ಲಿಯೂ ಉತ್ಸಾಹದಿಂದ ಭಾಗವಹಿಸುತ್ತಾರೆ. ವೈಚಾರಿಕ ಪ್ರಬಂಧಗಳು ಮತ್ತು ಜೀವನ ಚರಿತ್ರೆ ಪುಸ್ತಕಗಳನ್ನು ಓದುವುದರಲ್ಲಿ ವಿಶೇಷ ಆಸಕ್ತಿ. ಇವರ ಎಲ್ಲ ಚಟುವಟಿಕೆಗಳಿಗೆ ನಿಜವಾದ ಸ್ಫೂರ್ತಿ ಇವರ ಸಹಧರ್ಮಿಣಿ ಶಂಕರಿ ಅವರ ಸಹಕಾರ, ಬೆಂಬಲ, ಮತ್ತು ಪ್ರೋತ್ಸಾಹ!

ಮಿಂಚಂಚೆ ವಿಳಾಸ: rajashankari@gmail.com

5. ಗುಂಡೂ ಶಂಕರ್

ಪತ್ನಿ ಶೈಲಜ ಮತು ಇಬ್ಬರು ಮಕ್ಕಳೊಂದಿಗೆ ಫ್ರೀಹೋಲ್ಡ್, ನ್ಯೂಜರ್ಸಿಯಲ್ಲಿ ವಾಸ ಮಾಡುತ್ತಿದ್ದಾರೆ. B. Tech. ಡಿಗ್ರಿ Indian Institute of Science, Bangalore ಮತ್ತು Indian Institue of Management, Calcuttaನಿಂದ M.B.A. ಡಿಗ್ರಿ ಪಡೆದರು. ಈಗ management consultant ಆಗಿ ಕೆಲಸ ಮಾಡುತ್ತಿದ್ದಾರೆ. ಸಾಹಿತ್ಯ ಮತ್ತು ಕಲೆಯಲ್ಲಿ ಆಸಕ್ತಿ. ಕನ್ನಡ ಸಾಹಿತ್ಯ ರಂಗ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ.

6. ಎಮ್. ಎಸ್. ನಟರಾಜ್

ಮೂಲತಃ ಹಾಸನದವರು, ಮೇರೀಲ್ಯಾಂಡ್ ಸಂಸ್ಥಾನದ 'ಪೊಟೋಮೆಕ್' ಎಂಬ ಊರಿನಲ್ಲಿ ವಾಸವಾಗಿದ್ದಾರೆ. ಅಮೇರಿಕೆಯಲ್ಲಿ ನೆಲೆಸಿರುವ ಪ್ರಸಿದ್ಧ ಕನ್ನಡ ಬರಹಗಾರರಲ್ಲಿ ಒಬ್ಬರು. ಅಮೇರಿಕದ ಅಣುಶಕ್ತಿ ನಿಯಂತ್ರಣ ಆಯೋಗದಲ್ಲಿ ತಾಂತ್ರಿಕ ನಿಪುಣ. ಇವರು ಕನ್ನಡದಲ್ಲಿ ಏಳು ನಾಟಕಗಳನ್ನೂ (ಅದರಲ್ಲಿ ಒಂದು ಹಿಂದಿಯಿಂದ ಭಾಷಾಂತರಿಸಿದ್ದು), ಎರಡು ಕವನ ಸಂಕಲನಗಳನ್ನೂ ಮತ್ತು ಎರಡು ಅಂಕಣ ಬರಹಗಳ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. 2006ರಲ್ಲಿ ನಡೆದ ನಾಲ್ಕನೇ ಅಕ್ಕ ಸಮ್ಮೇಳನದ ಸಮಸ್ತ ಸಾಹಿತ್ಯಕ ಚಟುವಟಿಕೆಗಳಿಗೂ ಸೂತ್ರಧಾರರಾಗಿದ್ದು, ಅಲ್ಲಿ ಪ್ರಕಟವಾದ 'ಸುವರ್ಣವಾಹಿನಿ' ಸಂಪುಟಗಳ ಸಾರಥ್ಯವನ್ನು ವಹಿಸಿಕೊಂಡಿದ್ದು ಇವರ ಹೆಗ್ಗಳಿಕೆ. ಅಮೇರಿಕದಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಗಾಗಿಯೇ ಹುಟ್ಟಿದ 'ಕನ್ನಡ ಸಾಹಿತ್ಯ ರಂಗ'ದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದಲ್ಲದೆ, ಈ ಸಂಸ್ಥೆ ಇದುವರೆಗೆ ಹೊರತಂದಿರುವ ನಾಲ್ಕು ಸಾಹಿತ್ಯ-ಸಂಪುಟಗಳ ಸಂಪಾದಕವರ್ಗದಲ್ಲಿ ದುಡಿದಿದ್ದಾರೆ. ಇವರಿಗೆ ದೊರೆತಿರುವ ಹಲವಾರು ಪ್ರಶಸ್ತಿಗಳಲ್ಲಿ 2003ರಲ್ಲಿ ದೊರೆತ ಗೊರೂರು ಪ್ರತಿಷ್ಠಾನದ ಪ್ರಶಸ್ತಿ ಮುಖ್ಯವಾದುದು. ಸಂಸ್ಕೃತ ಭಾಷೆಯಲ್ಲಿ ಇವರು ರಚಿಸಿದ ಒಂಬತ್ತು ಕೃತಿಗಳು ('ನವರತ್ನಮಾಲಿಕಾ') ಮತ್ತು ಕನ್ನಡದಲ್ಲಿ ರಚಿಸಿರುವ 'ಸುಂದರಕಾಂಡ' ಕರ್ನಾಟಕ ಸಂಗೀತದ ಧ್ವನಿ ಸಂಪುಟಗಳಾಗಿ ಹೊರಬಂದಿವೆ.

7. ಶ್ರೀನಿವಾಸ ಭಟ್ ಕುಂಭಾಸಿ

ಕಳೆದ ಮೂವತ್ತಾರು ವರ್ಷಗಳಿಂದ ಅಮೇರಿಕದಲ್ಲಿ ವಾಸ. 2002 ವಿಶ್ವ ಕನ್ನಡ ಸಮ್ಮೇಳನದ ಸ್ಮರಣ ಸಂಚಿಕೆ, 'ಸ್ಪಂದನ'ದ ಮುಖ್ಯ ಸಂಪಾದಕ. ಹಲವಾರು ಕವನ, ಕಥೆಗಳನ್ನು ಭಾರತದ ಮತ್ತು ಅಮೇರಿಕಾದ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಪಂಪ ಕನ್ನಡ ಶಾಲೆಯನ್ನು ಹತ್ತು ವರ್ಷ ನಡೆಸಿದವರು. 'ಅಮೇರಿಕನ್ನಡ', 'ದಟ್ಸ್ ಕನ್ನಡ'ಗಳಲ್ಲಿ ಲೇಖನಗಳನ್ನು ಬರೆದುದಲ್ಲದೆ, ಮಧ್ವಾಚಾರ್ಯರ ಮತ್ತು ಶಿವರಾಮ ಕಾರಂತರ ಬಗ್ಗೆ ಬರೆದ ಪುಸ್ತಕಗಳ ಸಹ ಸಂಪಾದಕನಾಗಿದ್ದರು. 'ಅಮೇರಿಕನ್ನಡ'ದ ಮುಖ್ಯ ಸಲಹೆಗಾರರಾಗಿದ್ದರು. ಸತ್ಕಾರ್ಯ ಚಾರಿಟೇಬಲ್ ಸಂಸ್ಥೆಯ ಸ್ಥಾಪಕ ಹಾಗೂ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ' ಮತ್ತು 'ಸಮಾಜ ರತ್ನ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಈಗ ಸಿಯಾಟಲ್‌ನಲ್ಲಿ ವಾಸ ಮಾಡುತ್ತಿದ್ದಾರೆ.

8. ಸುಧಾ ಆಚಾರ್ಯ

ನಲವತ್ತಮೂರು ವರ್ಷಗಳಿಂದ ನ್ಯೂಯಾರ್ಕಿನಲ್ಲಿ ನೆಲೆಸಿದ್ದಾರೆ. ಇವರು ಮೈಸೂರಿನ ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಮತ್ತು ನ್ಯೂಯಾರ್ಕಿನ ಪೇಸ್ ವಿಶ್ವವಿದ್ಯಾನಿಲಯದಿಂದ ಎಂ.ಬಿ.ಎ. ಪದವಿಗಳನ್ನು ಪಡೆದಿದ್ದಾರೆ. ನ್ಯೂಯಾರ್ಕಿನ ಹಲವಾರು ಸಂಸ್ಥೆಗಳಲ್ಲಿ ಇವರು ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ. 1971ರಲ್ಲಿ ನ್ಯೂಯಾರ್ಕಿನಲ್ಲಿ ಮೊದಲನೇಬಾರಿ ಕೋಲಾಟವನ್ನೂ, ಕನ್ನಡಗೀತೆಗಳ ಸಾಮೂಹಿಕ ಗಾಯನವನ್ನೂ ಏರ್ಪಡಿಸಿದರು. ನಾಟಕದಲ್ಲಿ ಅಭಿರುಚಿ ಉಳ್ಳವರಾದ ಇವರು, ಹಲವಾರು ಕನ್ನಡ ಮತ್ತು ಇಂಗ್ಲಿಷ್ ನಾಟಕಗಳಲ್ಲಿ ಭಾಗವಹಿಸಿ, ನ್ಯೂಯಾರ್ಕಿನ ಕನ್ನಡ ಕೂಟದಲ್ಲಿ ಎಂಟು ಜನ ಹೆಂಗಸರೇ ಪಾತ್ರವಹಿಸಿದ 'ಪದ್ಮಶ್ರೀ ದುಂಡೀರಾಜ್' ನಾಟಕವನ್ನು ನಿರ್ದೇಶಿಸಿದರು. ಇವರು ವೆರೈಝನ್ ಕಂಪನಿಯಲ್ಲಿ ಇಪ್ಪತ್ತು ವರ್ಷ ಕೆಲಸ ಮಾಡಿ, ಈಗ ಸಮಾಜ ಸೇವೆ ಮಾಡುವ ಸ್ಯಾಕ್ಸ್ ಸಂಸ್ಥೆಯಲ್ಲಿ ಎಕ್ಸೆಕ್ಯುಟಿವ್ ಡಿರೆಕ್ಟರ್ ಆಗಿದ್ದಾರೆ. ಗಾಂಧಿ ಕಮ್ಯುನಿಟಿ ಅವಾರ್ಡ್, ಯೂನಿಯನ್ ಸ್ಕ್ವೇರ್ ಅವಾರ್ಡ್, ಸ್ವಾಮಿ ವಿವೇಕಾನಂದ ನ್ಯಾಷನಲ್ ಅವಾರ್ಡ್, ಸಮಾಜಸೇವೆಗೆ ಇಂಡಿಯ ಅಬ್ರಾಡ್ ಅವಾರ್ಡ್, ಮುಂತಾದುವು ಇವರು ಪಡೆದ ಕೆಲವು ಪ್ರಶಸ್ತಿಗಳು.

9. ಎಸ್. ಎನ್. ಶ್ರೀಧರ್

ಗೌರವಾನ್ವಿತ ಪ್ರಾಧ್ಯಾಪಕರು, ಸ್ಟೇಟ್ ಯುನಿವರ್ಸಿಟಿ ಆಫ್ ನ್ಯೂಯಾರ್ಕ್;

ನಿರ್ದೇಶಕರು, ಭಾರತೀಯ ಅಧ್ಯಯನ ಕೇಂದ್ರ, ಸ್ಟೋನಿಬ್ರೂಕ್ ವಿಶ್ವವಿದ್ಯಾಲಯ, ನ್ಯೂಯಾರ್ಕ್. ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನೂ

ಲೇಖನಗಳನ್ನೂ ಬರೆದು ಪ್ರಕಟಿಸಿದ್ದಾರೆ. ಅದೇ ವಿಷಯಕವಾಗಿ ಸಂಘಟನೆಗಳನ್ನೂ ಅಧ್ಯಯನ ಪೀಠಗಳನ್ನೂ ಸ್ಥಾಪಿಸಿ ನಡೆಸಿಕೊಂಡು ಬಂದಿದ್ದಾರೆ.

ಮಿಂಚಂಚೆ ವಿಳಾಸ: sn.sridhara@gmail.com

10. ತ್ರಿವೇಣಿ ಶ್ರೀನಿವಾಸರಾವ್

ಹುಟ್ಟೂರು ಚಿಕ್ಕಮಗಳೂರು ಜಿಲ್ಲೆಯ ಕಡೂರು. ಇಲಿನಾಯ್‌ನ ವಿದ್ಯಾರಣ್ಯ ಕನ್ನಡ ಕೂಟದ 'ಸಂಗಮ' ಸಂಪಾದಕಿಯ ಸ್ಥಾನವನ್ನು ಕೆಲವರ್ಷಗಳು ನಿರ್ವಹಿಸಿದ್ದು, ಕನ್ನಡ ಸಾಹಿತ್ಯರಂಗ 2011ರ ಸಮ್ಮೇಳನದಲ್ಲಿ ಹೊರತಂದಿರುವ 'ಮಥಿಸಿದಷ್ಟೂ ಮಾತು' ಲಲಿತ ಪ್ರಬಂಧ ಸಂಕಲನದ ಪ್ರಧಾನ ಸಂಪಾದಕರಾಗಿದ್ದರು. ಅಮೆರಿಕದ ಕನ್ನಡ ಸಾಹಿತ್ಯರಂಗ ಹೊರತಂದಿರುವ 'ಕುವೆಂಪು ಸಾಹಿತ್ಯ ಸಮೀಕ್ಷೆ', 'ನಗೆಗನ್ನಡಂ ಗೆಲ್ಗೆ', 'ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು' ಮುಂತಾದ ಗ್ರಂಥಗಳಲ್ಲಿಯೂ ಲೇಖನಗಳು ಪ್ರಕಟವಾಗಿವೆ. ಪ್ರಕಟಿತ ಕೃತಿಗಳು: ತುಳಸಿವನ (ಅಂಕಣ ಬರಹ ಸಂಕಲನ) ತಿಳಿ ನೀಲಿ ಪೆನ್ನು (ಕಥಾ ಸಂಕಲನ). ಪ್ರಸ್ತುತ, ಪತಿ ಶ್ರೀನಿವಾಸ ರಾವ್ ಮತ್ತು ಮಕ್ಕಳು ಸುರಭಿ, ಸುವ್ರತ್ ಇವರೊಡನೆ ಅಮೆರಿಕದ ಇಲಿನಾಯ್ ರಾಜ್ಯದ 'ಹ್ಯಾನೋವರ್ ಪಾರ್ಕ್' ಬಡಾವಣೆಯಲ್ಲಿ ನೆಲೆಸಿದ್ದಾರೆ.

ಮಿಂಚಂಚೆ ವಿಳಾಸ: sritri@gmail.com

Blog : http://www.tulasivana.com

11. ವಲ್ಲೀಶ ಶಾಸ್ತ್ರಿ

ಹಾಸನ ಜಿಲ್ಲೆಯ ಮತ್ತಿಗೋಡು ಗ್ರಾಮದಲ್ಲಿ ಬೆಳೆದು ಬೆಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ಮುಗಿಸಿ ಬೆಂಗಳೂರು, ಧಾರವಾಡ, ಹರಿಹರದಲ್ಲಿ ಅಲ್ಲದೇ ಸೌದಿ ಅರೇಬಿಯಾ, ದುಬೈ, ಇಟಲಿ, ಇಂಗ್ಲೆಂಡ್, ಫ್ರಾನ್ಸ್, ಸಿಂಗಪೂರವನ್ನು ಕರ್ಮಸ್ಥಳ ಮಾಡಿಕೊಂಡಿದ್ದ ಇವರು 1997ರಿಂದ ಅಮೆರಿಕೆಯಲ್ಲಿ ನೆಲೆಸಿದ್ದಾರೆ. ಕನ್ನಡದ ಕಂಪನ್ನು ಮರೆಯದೇ ಕನ್ನಡದ ಸೇವೆ ಮಾಡುತ್ತಿರುವ ಇವರು, ಕನ್ನಡ ಸಂಘಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಲ್ಲದೇ, ನಾವಿಕ ಸಂಸ್ಥೆಯ ಸಂಸ್ಥಾಪಕ ಉಪಾಧ್ಯಕ್ಷರಾಗಿಯೂ ಸಹ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡ ಸಾಹಿತ್ಯ ರಂಗ (ಯು.ಎಸ್.ಎ)ದ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಬೆಂಗಳೂರಿನ 'ಬೆನಕ' ತಂಡದಲ್ಲಿ ಪಳಗಿ ಹಲವಾರು ನಾಟಕಗಳನ್ನು ಬರೆದು ನಿರ್ದೇಶಿಸಿ, ನಟಿಸಿರುವ ಇವರಿಗೆ 'ಕರ್ನಾಟಕ ನಾಟಕ ಅಕಾಡೆಮಿ' ಪುರಸ್ಕರಿಸಿದೆ. ಇತ್ತೀಚೆಗೆ ಮೊಟ್ಟಮೊದಲ ಬಾರಿಗೆ ತಮ್ಮದೇ ಆದ 'ರಂಗಧ್ವನಿ' ಎಂಬ ಒಂದು ಪೂರ್ಣ ತಂಡವನ್ನು ಅಮೆರಿಕೆಯಿಂದ ಬೆಂಗಳೂರಿಗೆ

ಕರೆದುಕೊಂಡು ಹೋಗಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರದರ್ಶನವಿತ್ತು ಸೈ ಎನಿಸಿಕೊಂಡಿದ್ದಾರೆ. ಇವರು ಒಳ್ಳೆಯ ಸಂಘಟಕರೂ ಹೌದು.

12. ವತ್ಸ ಕುಮಾರ್

ಹ್ಯೂಸ್ಟನ್ ನಗರವಾಸಿ ವತ್ಸ ಕುಮಾರ್ ವೃತ್ತಿಯಲ್ಲಿ ಎಂಜಿನಿಯರ್ ಆದರೂ ಪ್ರವೃತ್ತಿಯಿಂದ ಸಾಂಘಿಕ ಚಟುವಟಿಕೆಗಳಲ್ಲಿ ಸದಾ ಮುಳುಗಿರುವ ಹಲವು ಮುಖಗಳ ವ್ಯಕ್ತಿತ್ವ ಉಳ್ಳವರು. ಸಂಗೀತ, ಶಿಲ್ಪ, ಸಾಹಿತ್ಯ ಮುಂತಾದ ಕಲೆಗಳಲ್ಲಿರುವ ಅವರ ಆಸಕ್ತಿ ಅವರನ್ನು ಹ್ಯೂಸ್ಟನ್ ಸುತ್ತಮುತ್ತಲ ಹಲವಾರು ಸಂಸ್ಥೆಗಳಲ್ಲಿ ತೊಡಗಿಸಿದೆ. ಹ್ಯೂಸ್ಟನ್ ನಗರದ ಏಶಿಯಾ ಸೊಸೈಟಿ, ಫೈನ್ ಆರ್ಟ್ಸ್ ಮ್ಯೂಸಿಯಮ್, ಸಂಗೀತ ನೃತ್ಯಗಳ ಸಂಸ್ಥೆಯಾದ 'ಸಂಸ್ಕೃತಿ' ಅಲ್ಲಿನ ವಿಶ್ವವಿದ್ಯಾಲಯದ ಫೌಂಡೇಶನ್ ಆಫ್ ಇಂಡಿಯಾ ಸ್ಟಡೀಸ್, ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಹ್ಯೂಸ್ಟನ್ ಕನ್ನಡ ವೃಂದ, ಹೀಗೆ ಹಲವು ಹತ್ತು ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಅನೇಕ ಸಮ್ಮೇಳನಗಳ ರೂವಾರಿಯಾಗಿ ದುಡಿದಿರುವುದು ವತ್ಸ ಕುಮಾರ್ ಅವರ ಹೆಗ್ಗಳಿಕೆ. ಸಾರ್ವಜನಿಕ ಸೇವೆಯಲ್ಲೇ ಸಾರ್ಥಕ್ಯವನ್ನು ಕಂಡುಕೊಂಡಿರುವ ವತ್ಸ ಕುಮಾರ್ ವೈಲಿನ್ ವಾದಕರೂ ಹೌದು. ನಗರದ ಮೀನಾಕ್ಷೀ ದೇಗುಲದ ಸಂಚಾಲಕರೂ ಆಗಿ ದುಡಿಯುತ್ತಿರುವ ವತ್ಸ ಕುಮಾರ್ 2013ರ ಕನ್ನಡ ಸಾಹಿತ್ಯ ರಂಗದ ವಸಂತ ಸಾಹಿತ್ಯೋತ್ಸವದ ಸಹಸಂಚಾಲಕರು.

13. ಶಶಿಕಲಾ ಚಂದ್ರಶೇಖರ್

ಮೂಲತಃ ತುಮಕೂರಿನವರು. ಈಗ ವಾಶಿಂಗ್ಟನ್ ಡಿ.ಸಿ. ಪ್ರದೇಶದಲ್ಲಿ ವಾಸ. ಹನಿಗವನ, ಕವನ, ಸಣ್ಣ ಕಥೆ ಬರೆಯುವ ಹವ್ಯಾಸ. ಪ್ರಕಟವಾಗಿರುವ ಸಣ್ಣಕಥಾ ಸಂಕಲನ 'ದೀಪವು ನಿನ್ನದೆ ಗಾಳಿಯು ನಿನ್ನದೆ'ಗೆ ಕನ್ನಡ ಸಾಹಿತ್ಯ ಪರಿಷತ್ತಿನ ರೇವಯ್ಯ ದತ್ತಿ ಪ್ರಶಸ್ತಿ ಬಂದಿದೆ.

14. ಶ್ರೀನಾಥ್ ಭಲ್ಲೆ

ಮಾರ್ಚ್ 2000ರಲ್ಲಿ ಅಮೇರಿಕಕ್ಕೆ ಆಗಮನ. ವರ್ಜೀನಿಯಾ ರಾಜ್ಯದ ರಿಚ್ಮಂಡ್ ನಗರದಲ್ಲಿ ವಾಸ. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ಹವ್ಯಾಸಿ ಬರಹಗಾರ. ಕನ್ನಡದ ವಿವಿಧ ಪ್ರಕಾರಗಳಾದ ನಗೆಹನಿ, ಚುಟುಕು, ಹಾಸ್ಯ ಕವನ, ಗಂಭೀರ ಕವನ, ಪತ್ತೇದಾರಿ ಸಣ್ಣ ಕಥೆಗಳು, ನಾಟಕ, ಪದರಂಗ ಇತ್ಯಾದಿಯಲ್ಲಿ ಪ್ರಯೋಗ. ನಾಟಕ ನಿರ್ದೇಶನ ಹಾಗೂ ನಟನೆಯಲ್ಲಿಯೂ ಸ್ವಲ್ಪ ಅನುಭವ. ರಿಚ್ಮಂಡ್ ಕನ್ನಡ ಸಂಘದ ಅಧ್ಯಕ್ಷರಾಗಿ ಎರಡು ವರ್ಷ ಸೇವೆ ಸಲ್ಲಿಕೆ. ಪತ್ನಿ ಸ್ನೇಹ ಹಾಗೂ ಪುತ್ರ ಶ್ರೇಯಸ್ ಜೊತೆಗಿನ ಪುಟ್ಟ ಸಂಸಾರದ ಸುಖ ಜೀವನ.

15. ಗುರುಪ್ರಸಾದ್ ಕಾಗಿನೆಲೆ

ಹುಟ್ಟಿದ್ದು ಶಿವಮೊಗ್ಗ. ಬೆಳೆದದ್ದು ಮೈಸೂರು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ. ಬಳ್ಳಾರಿಯ ಸರಕಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಎಂ.ಬಿ.ಬಿ.ಎಸ್. ಮತ್ತು ಎಂ.ಡಿ. ಪದವಿ ಪಡೆದು ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ. 1995ರಲ್ಲಿ ಅಮೆರಿಕೆಗೆ ವಲಸೆ. ಡೆಟ್ರಾಯ್ಟ್‌ನ ವೇಯ್ನ್‌ಸ್ಟೇಟ್ ವಿಶ್ವವಿದ್ಯಾನಿಲಯ ಹಾಗೂ ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯಗಳಲ್ಲಿ ತರಬೇತಿ. ಸದ್ಯಕ್ಕೆ ಮಿನೆಸೊಟಾ ರಾಜ್ಯದ ರಾಚೆಸ್ಟರ್‌ನಲ್ಲಿ ಪತ್ನಿ ಪದ್ಮ ಮತ್ತು ಮಕ್ಕಳಾದ ಪ್ರಣೀತ ಮತ್ತು ಪ್ರಭವರೊಂದಿಗೆ ವಾಸ. ನಾರ್ತ್ ಮೆಮೊರಿಯಲ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದಲ್ಲಿ ಎಮರ್ಜೆನ್ಸಿ ವೈದ್ಯನಾಗಿ ಕೆಲಸ.

ಪ್ರಕಟಿತ ಕೃತಿಗಳು: ನಿರ್ಗುಣ (2003), ಶಕುಂತಳಾ (2007)– ಕಥಾಸಂಕಲನಗಳು: ವೈದ್ಯ, ಮತ್ತೊಬ್ಬ (2005)– ಲೇಖನ ಸಂಗ್ರಹ. ಬಿಳಿಯ ಚಾದರ (2007) ಮತ್ತು ಗುಣ (2010)– ಕಾದಂಬರಿಗಳು. ಸಂಪಾದಿತ ಕಥಾಸಂಕಲನ– ಆಚೀಚೆಯ ಕಥೆಗಳು (2005). ಕೆಲವು ಕಥೆಗಳು ಮರಾಠಿ, ತೆಲುಗು ಮತ್ತು ಕೊಂಕಣಿ ಭಾಷೆಗಳಿಗೆ ಅನುವಾದವಾಗಿವೆ.

16. ಬಿ. ವಿ. ಜಗದೀಶ್

ತಂತ್ರಜ್ಞಾನ ಕ್ಷೇತ್ರದ ಯಶಸ್ವಿ ಉದ್ಯಮಿ, ಹೂಡಿಕೆದಾರ ಮತ್ತು ಕೊಡುಗೈದಾನಿ. 1993ರಲ್ಲಿ ಅವರು ಸಹಸ್ಥಾಪಕರಾಗಿ ಆರಂಭಿಸಿದ 'ಎಕ್ಸೊಡಸ್ ಕಮ್ಯುನಿಕೇಶನ್ಸ್' ಕಂಪನಿಯ ಮುಖ್ಯ ತಂತ್ರಜ್ಞಾನ ಅಧಿಕಾರಿಯಾಗಿ ಮುಂದುವರೆದಿದ್ದಾರೆ. 1998ರಲ್ಲಿ ಎಕ್ಸೊಡಸ್ ಕಂಪನಿಯನ್ನು ಸಾರ್ವಜನಿಕ ಕ್ಷೇತ್ರದ ಉದ್ಯಮವಾಗಿಸುವುದರಲ್ಲಿ ಜಗದೀಶ್ ಪ್ರಮುಖ ಪಾತ್ರ ವಹಿಸಿದ್ದಾರೆ. ಮೂಲಧನ ಒದಗಿಸಿ ಆರಂಭಿಸಿದ 'ನೆಟ್‌ಸ್ಕೇಲರ್' ಕಂಪನಿಯ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಯನ್ನೂ ಜಗದೀಶ್ ನಿರ್ವಹಿಸಿದ್ದಾರೆ. ನೆಟ್‌ಸ್ಕೇಲರ್ ಕಂಪನಿಯನ್ನು 'ಸಿಟ್ರಿಕ್ಸ್' ಕಂಪನಿಗೆ ವರ್ಗಾಯಿಸಿದ ನಂತರ ಆ ಕಂಪನಿಯ ಉಪಾಧ್ಯಕ್ಷ ಮತ್ತು ಮಹಾನಿರ್ದೇಶಕ ಸ್ಥಾನಗಳನ್ನೂ ಜಗದೀಶ್ ನಿರ್ವಹಿಸಿದ್ದಾರೆ. ತ್ರೀ–ಲೀಫ್ ಸಿಸ್ಟಂಸ್ ಕಂಪನಿಯ ಕಾರ್ಯಾಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದಾರೆ. ಪ್ರಸಕ್ತ ಜಗದೀಶ್ ಅವರು ಕೆವಿಎಜೆ ವೆಂಚರ್ಸ್ ಕಂಪನಿಯ ಪಾಲುದಾರರಾಗಿದ್ದಾರೆ. ಅಮೆರಿಕದ ಹಲವು ಕಂಪನಿಗಳಲ್ಲಿ ಅವರು ಬಂಡವಾಳ ಹೂಡಿಕೆ ಮಾಡಿ ಯಶಸ್ಸನ್ನು ಕಂಡಿದ್ದಾರೆ. ಬೆಂಗಳೂರು ಮತ್ತು ಅಹಮ್ಮದಾಬಾದ್‌ನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳಲ್ಲಿ ಗೌರವ ಉಪನ್ಯಾಸಗಳನ್ನೂ ಅವರು ಕೊಡುತ್ತಾರೆ. ಕ್ಯಾಲಿಫೋರ್ನಿಯಾದ ಸಿಲಿಕಾನ್ ಕಣಿವೆ ಪ್ರದೇಶದಲ್ಲಿ ವಾಸವಾಗಿರುವ ಜಗದೀಶ್ ಅಲ್ಲಿನ ಕನ್ನಡಸಂಘದ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಾರೆ. ಅಕ್ಷಯಪಾತ್ರೆ, ಇಂಡಿಯನ್

ಲಿಟರೆಸಿ ಪ್ರಾಜೆಕ್ಟ್, ಶಂಕರ ನೇತ್ರಚಿಕಿತ್ಸಾಲಯ, ಶಂಕರ ಕ್ಯಾನ್ಸರ್ ಆಸ್ಪತ್ರೆ – ಹೀಗೆ ಅಮೆರಿಕ ಮತ್ತು ಭಾರತದ ಕೆಲವಾರು ದತ್ತಿನಿಧಿ ಸಂಸ್ಥೆಗಳೊಡನೆ ನಿಕಟ ಸಂಪರ್ಕವಿಟ್ಟುಕೊಂಡಿರುವ ಜಗದೀಶ್ ಅವುಗಳ ಧನಸಂಗ್ರಹಕಾರ್ಯದಲ್ಲಿ ಪ್ರಮುಖ ದಾನಿ ಎಂದು ಮಾದರಿಯಾಗಿದ್ದಾರೆ.

17. ಎ. ಆರ್. ಚಾರ್

ಮೈಸೂರಿನಲ್ಲಿ ಹುಟ್ಟಿ ಬೆಳೆದು, ಅಮೇರಿಕಾಗೆ ವಲಸೆ ಬಂದಿದ್ದು 40+ ವರ್ಷಗಳ ಹಿಂದೆ. 1982–1984ರಲ್ಲಿ ಕೊಲಂಬಸ್, ಒಹಾಯೋದಲ್ಲಿ ವಿಂಧ್ಯಾ ಕಲಾ ಸಂಸ್ಥೆಯ ಅಧ್ಯಕ್ಷನಾಗಿಯೂ 1985ರಲ್ಲಿ ವಾಷಿಂಗ್ಟನ್ ಡಿ.ಸಿ. ಪ್ರದೇಶಕ್ಕೆ ಬಂದನಂತರ ಕಾವೇರೀ ಕನ್ನಡ ಸಂಸ್ಥೆಯ ಖಜಾಂಚಿ, ಉಪಾಧ್ಯಕ್ಷ, ಲೆಕ್ಕ ಪರಿಶೋಧಕ ಮತ್ತು ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದಾರೆ. ಸಂಗೀತ ವಿದುಷಿ ಉಷಾಳನ್ನು 1982ರಲ್ಲಿ ಮದುವೆ ಮಾಡಿಕೊಂಡು ಬಂದನಂತರ ಕೊಲಂಬಸ್ಸಿನಲ್ಲಿ ಹುಟ್ಟಿಕೊಂಡ ನಾದತರಂಗಿಣಿ ಕಲಾ ಸಮೂಹ ವಾಷಿಂಗ್ಟನ್ ಡಿ.ಸಿ. ಪ್ರದೇಶದಲ್ಲೂ ಬೆಳೆದು, ಕಳೆದ 25 ವರ್ಷಗಳಿಂದ ವಿವಿಧ ರೀತಿಯ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

18. ಎಚ್. ಕೆ. ಕೃಷ್ಣಪ್ರಿಯ

ಹಂಪಾಪುರದ ಕುರುಡು ಘನಪಾಠಿ ಕೃಷ್ಣಯ್ಯಂಗಾರ್‍ರ ಮನೆತನದವರು. ಅವರ ಶಿಷ್ಯರಾದ ತಮ್ಮ ತಾತ ನಾರಾಯಣಯ್ಯಂಗಾರ್‍ರಿಂದ ವಿದ್ಯೆ ಕಲಿತವರು. ಅವರು ಬೆಂಗಳೂರಿನಲ್ಲಿ ಬೆಳೆದು ಬೊಂಬಾಯಿ, ನ್ಯೂಯಾರ್ಕ್, ಅಯೋವಗಳ ಮೂಲಕ ಕಾಲಿಫ಼ೋರ್ನಿಯಕ್ಕೆ ಬಂದು ನೆಲಸಿದ್ದಾರೆ. ಇನ್ನು ಮುಂದೆ ಇದೇ ರೀತಿ ಮುಂದುವರಿದರೆ ಪುನಃ ಬೆಂಗಳೂರು ಸೇರುವ ಸಾಧ್ಯತೆ ಇದೆ. ಉದರನಿಮಿತ್ತವಾಗಿ ಇವರು ಹಾಕಿರುವ ವೇಷಗಳು– ಗಣಿತಾನ್ವೇಷಕ, ಗಣಿತಬೋಧಕ, ಆಸ್ಪತ್ರೆಯಲ್ಲಿ ಹೌಸ್‌ಕೀಪರ್ ಮತ್ತು ಟ್ರಾನ್ಸ್ಪೋರ್ಟೇಷನ್ ಅಸಿಸ್ಟಂಟ್, ಕಂಪ್ಯೂಟರ್ ಎಂಜಿನಿಯರ್. ಬರೆಯುವ ಹವ್ಯಾಸವಿರುವ ಸಂಸಾರದಲ್ಲಿ ಹುಟ್ಟಿ ಬೆಳೆದ ಇವರು ಈಚೆಗೆ ತಮ್ಮ ಕೆಲವು ರಚನೆಗಳನ್ನು ದಟ್ಸ್‌ಕನ್ನಡ.ಕಾಂನಲ್ಲಿ, ಉತ್ತರ ಕ್ಯಾಲಿಫ಼ೋರ್ನಿಯದ ವಾರ್ಷಿಕ ಸಂಚಿಕೆಯಾದ ಸ್ವರ್ಣಸೇತುವಿನಲ್ಲಿ, ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. 'ಕನ್ನಡದಮರಚೇತನ' ಎಂಬ ಮಾಸ್ತಿಯವರ ಜೀವನ, ಸಾಹಿತ್ಯದ ಮೇಲಿನ ಲೇಖನಗಳ ಸಂಕಲನದ ಸಹಸಂಪಾದಕರಾಗಿ ಕೆಲಸ ಮಾಡಿದ್ದಾರೆ.

19. ಎಚ್. ಎಸ್. ರಾಮಸ್ವಾಮಿ

ಸುಮಾರು 40 ವರ್ಷಗಳಿಂದ ನೃಪತುಂಗ ಕನ್ನಡ ಕೂಟದ ಬೆಳವಣಿಗೆಗಾಗಿ ಶ್ರಮಿಸುತ್ತಿರುವ ಹೊನ್ನವಳ್ಳಿ ನಾಡಿಗ ರಾಮಸ್ವಾಮಿಯವರು 7ನೇ ಅಕ್ಕ ಕನ್ನಡ ಸಮ್ಮೇಳನದ ಮುಖ್ಯ ಸಂಚಾಲಕರಾಗಿದ್ದರು. ಟುಲೇನ್ ವಿಶ್ವವಿದ್ಯಾಲಯದಲ್ಲಿ 1967ರಲ್ಲಿ ರಸಾಯನ ಶಾಸ್ತ್ರದಲ್ಲಿ ಡಾಕ್ಟೋರಲ್ ಪದವಿಯನ್ನು ಪಡೆದು, ಅನೇಕ ಸಂಸ್ಥೆಗಳಲ್ಲಿ ಸಂಶೋಧನೆ ನಡೆಸಿ 2010ರಲ್ಲಿ ನಿವೃತ್ತರಾದರು. ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ತಮ್ಮ ತೌರೂರಾದ ಹೊನ್ನವಳ್ಳಿಯ ಶಾಲೆಗಳಿಗೆ ವಿದ್ಯಾರ್ಥಿವೇತನ, ಶೌಚಾಲಯ ಮತ್ತು ಗ್ರಂಥಾಲಯ, ಶ್ರೀರಾಮ ಮಂದಿರ ಕಟ್ಟಡ ನಿರ್ಮಾಣ, ಊರಿನ ಜನತೆಗೆ ಉಪಯೋಗ ಬರುವ ಧರ್ಮ ಛತ್ರ ನಿರ್ಮಾಣ, ಶಾಲಾ ಮಕ್ಕಳಿಗೆ ಊಟದ ತಟ್ಟೆ-ಬಟ್ಟಲು ಮುಂತಾದ ಸೌಲಭ್ಯ ದೊರಕುವ ಆಯೋಜನೆಗಳಿಗೆ ಕರ್ತೃಗಳಾಗಿದ್ದಾರೆ. 2001 ನವೆಂಬರ್‌ನಲ್ಲಿ ರಕ್ಷಾ ಸ್ವಯಂಸೇವಕ ಸಂಸ್ಥೆಯು ರಾಮಸ್ವಾಮಿ ಮತ್ತು ಅವರ ಪತ್ನಿ ಇಂದಿರಾ ಅವರಿಗೆ Community Change Award ನೀಡಿ ಸನ್ಮಾನಿಸಿದೆ. ಅನೇಕ ಲೇಖಕರು, ಸಾಹಿತಿಗಳು ಮತ್ತು ಕಲಾವಿದರನ್ನು ಆಮಂತ್ರಿಸಿ ಅವರ ಪ್ರತಿಭೆಗಳನ್ನು ಸ್ಥಳೀಯರು ಅನುಭವಿಸಲು ಕಾರಣಕರ್ತರಾಗಿದ್ದಾರೆ. 1963ರಲ್ಲಿ ಕರ್ನಾಟಕದಿಂದ ವಲಸೆ ಬಂದ ಇವರ ಕನ್ನಡ ಅಭಿಮಾನ ಇಂದಿಗೂ ಅಷ್ಟೇ ಹಸಿರಾಗಿದೆ.

20. ಎಚ್. ವೈ. ರಾಜಗೋಪಾಲ್

1960ರ ದಶಕದಲ್ಲೇ ಅಮೆರಿಕಕ್ಕೆ ಬಂದ ಇವರು ಇಲ್ಲಿನ ಕನ್ನಡ ಸಮಾಜದೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. ಅಲ್ಲದೆ ಅನೇಕ ಭಾರತೀಯ ಸಂಸ್ಥೆಗಳ ಸ್ಥಾಪಕರೂ, ಕಾರ್ಯಮಂಡಲಿಯ ಸದಸ್ಯರೂ ಆಗಿ ಕೆಲಸ ಮಾಡಿದ್ದಾರೆ. ಕನ್ನಡ ಸಾಹಿತ್ಯಕ್ಕೇ ಮೀಸಲಾದ ಅಮೆರಿಕದ ಏಕೈಕ ರಾಷ್ಟ್ರೀಯ ಸಂಸ್ಥೆಯಾದ **ಕನ್ನಡ ಸಾಹಿತ್ಯ ರಂಗದ** ಸ್ಥಾಪಕ ಸದಸ್ಯರಲ್ಲೊಬ್ಬರೂ ಅದರ ಅಧ್ಯಕ್ಷರೂ ಆಗಿದ್ದಾರೆ. ಇವರ ಲೇಖನಗಳು ಇಲ್ಲಿನ ಹಾಗೂ ಕರ್ನಾಟಕದ ಹಲವಾರು ಸಂಕಲನಗಳಲ್ಲಿ, ಅಂತರ್ಜಾಲ ತಾಣಗಳಲ್ಲಿ ಪ್ರಕಾಶಗೊಂಡಿವೆ. ಅವರು ಸಹಸಂಪಾದಕರಾಗಿ ಹೊರತಂದ ಕೃತಿ 'ನಗೆಗನ್ನಡಂ ಗೆಲ್ಗೆ!' ಅನೇಕ ಓದುಗರ, ವಿದ್ವಾಂಸರ ಮೆಚ್ಚುಗೆ ಗಳಿಸಿದೆ. ಹೊರನಾಡ ಕನ್ನಡಿಗರಾಗಿ ಕನ್ನಡಕ್ಕೆ ಅವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸರ್ಕಾರ 2007ರಲ್ಲಿ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದೆ. ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನೀರಿಂಗ್, ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಮತ್ತು ಪೆನ್ಸಿಲ್ವೇನಿಯಾ ಸ್ಟೇಟ್ ಯೂನಿವರ್ಸಿಟಿಗಳಲ್ಲಿ ಇಂಜಿನೀರಿಂಗ್ ವಿಭಾಗದಲ್ಲಿ ಕ್ರಮವಾಗಿ B.E.,M.E., Ph.D. ಪದವಿಗಳನ್ನು ಪಡೆದು Raytheon Engineers & Constructors ಕಂಪೆನಿಯಲ್ಲಿ Consulting Engineer ಆಗಿಯೂ,

ವಿಲನೋವಾ ವಿಶ್ವವಿದ್ಯಾಲಯದಲ್ಲಿ Adjunct Professor ಆಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಲೇಖಕಿ, ಜಾನಪದ ಗಾಯಕಿ ಎಂದು ಹೆಸರು ಪಡೆದಿರುವ ಪತ್ನಿ ವಿಮಲಾ ರಾಜಗೋಪಾಲರೊಂದಿಗೆ ಮೀಡಿಯಾ, ಪೆನ್ಸಿಲ್ವೇನಿಯದಲ್ಲಿ ವಾಸವಾಗಿದ್ದಾರೆ.

ಮಿಂಚಂಚೆ ವಿಳಾಸ: hyrajagopal@gmail.com

21. ಕೆ. ಜಿ. ವಿ. ಕೃಷ್ಣ

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನಿಂದ ಅರ್ಥಶಾಸ್ತ್ರದ ಎಮ್.ಎ. ಪಡೆದು ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಆರು ವರ್ಷಗಳ ಅರ್ಥಶಾಸ್ತ್ರದ ಉಪನ್ಯಾಸಕನಾಗಿ ದುಡಿದು ಮುಂದಿನ ಹಲವಾರು ವರ್ಷಗಳನ್ನು ನೈರೋಬೀ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದರು. 1963–64ರ ಸಮಯದಲ್ಲಿ ಅಮೆರಿಕದ ಸಿರಕ್ಯೂಸ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕನಾಗಿ ಬಂದರು. ನಂತರದ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಅಮೆರಿಕದ ರಾಜಧಾನಿಯಲ್ಲಿರುವ ವಿಶ್ವ ಬ್ಯಾಂಕಿನಲ್ಲಿ ಉನ್ನತಾಧಿಕಾರಿಯಾಗಿ ಹಲವಾರು ಜವಾಬ್ದಾರಿಯುತ ಹುದ್ದೆಗಳಲ್ಲಿ ದುಡಿಯುತ್ತಾ ವಿಶ್ವದ ಹಲವಾರು ದೇಶಗಳಲ್ಲಿ ಬ್ಯಾಂಕಿನ ಕೆಲಸದ ಮೇಲೆ ಪರ್ಯಟನೆ ಮಾಡಿರುವ ಸಾಹಸಿ ಕೆ.ಜಿ.ವಿ ಕೃಷ್ಣ ಅವರು. ವಾಷಿಂಗ್‌ಟನ್ ಸುತ್ತಮುತ್ತಲ ಪ್ರದೇಶಗಳಲ್ಲಿ ಅತ್ಯಂತ ಹಿರಿಯ ಕನ್ನಡಿಗರಲ್ಲಿ ಒಬ್ಬರಾದ ಅವರು ತಾರುಣ್ಯದಲ್ಲಿ ಉತ್ತಮ ಕ್ರಿಕೆಟ್ಟಿಗರು, ನಂತರವೂ ಟೆನ್ನಿಸ್ ಆಟಗಾರರು. ಅಪ್ಪಟ ಕನ್ನಡಪ್ರೇಮಿ, ರಾಜಧಾನಿಯ ಕನ್ನಡಿಗರಿಗೆಲ್ಲ ಅತ್ಯಂತ ಪ್ರಿಯರು ಮತ್ತು ಮಾರ್ಗದರ್ಶಿಗಳು. ಪತ್ನಿ ಲೀಲಾ ಅವರೊಂದಿಗೆ ಮೇರೀಲ್ಯಾಂಡಿನ ಚೆವಿಚೇಸ್ ನಗರದಲ್ಲಿ ವಾಸವಾಗಿದ್ದಾರೆ.

22. ಆಹಿತಾನಲ (ನಾಗ ಐತಾಳ)

ಹುಟ್ಟೂರು, ಕರಾವಳಿಯ ಕೋಟ. ಶಿಕಾಗೋ ಯುನಿವರ್ಸಿಟಿಯಲ್ಲಿ 27 ವರ್ಷ ಸಂಶೋಧನಾ ಅಧ್ಯಾಪಕರಾಗಿ ಕೆಲಸ ಮಾಡಿ, 2001ರಲ್ಲಿ ನಿವೃತ್ತರಾಗಿದ್ದಾರೆ. ಪ್ರಸ್ತುತ, ದಕ್ಷಿಣ ಕ್ಯಾಲಿಫೋರ್ನಿಯದ, ಆರ್ಕೇಡಿಯದಲ್ಲಿ ಧರ್ಮಪತ್ನಿ ಲಕ್ಷ್ಮಿಯೊಡನೆ ತಮ್ಮ ನಿವೃತ್ತ ಜೀವನವನ್ನು ಅನುಭವಿಸುತ್ತಿದ್ದಾರೆ. ಹವ್ಯಾಸಕ್ಕೆಂದು ಅಷ್ಟಿಷ್ಟು ಬರಹದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಕೆಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವರ ಇತ್ತೀಚೆಗಿನ ಪ್ರಕಟಣೆ, 'ದೂರ ತೀರದಿಂದ ಹರಿದು ಬಂದ ಕತೆಗಳು' ಎಂಬ ಕಥಾಸಂಕಲನ. ಇವರು ಕನ್ನಡ ಸಾಹಿತ್ಯ ರಂಗದ ಸ್ಥಾಪಕ ಸದಸ್ಯರು.

ಮಿಂಚಂಚೆ ವಿಳಾಸ: nagaaithal@yahoo.com

23. ನಳಿನಿ ಮಯ್ಯ

ತಮ್ಮ ಪತಿ ಸುಬ್ರಾಯ ಮಯ್ಯ ಅವರೊಡನೆ ಶಿಕಾಗೊ ನಗರದ ಬಡಾವಣೆಯಾದ ಡೇರಿಯನ್‌ನಲ್ಲಿ ವಾಸಿಸುತ್ತಿದ್ದಾರೆ. ಇವರ ಲೇಖನ ಮತ್ತು ಕತೆಗಳು ಅಮೆರಿಕನ್ನಡ, ಶಿಕಾಗೊ ವಲಯದ ಕನ್ನಡ ಪತ್ರಿಕೆ ಸಂಗಮ ಹಾಗೂ ಕರ್ನಾಟಕದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಮರೀಚಿಕೆ ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಶಿಕಾಗೊ ಕನ್ನಡ ಪತ್ರಿಕೆ 'ಸಂಗಮ'ದ ಸಂಪಾದಕಿಯಾಗಿದ್ದರು. ಕನ್ನಡ ಸಾಹಿತ್ಯ ರಂಗ ಪ್ರಕಟಿಸಿರುವ ಎಲ್ಲ ಪುಸ್ತಕಗಳಿಗೂ ಸಹ ಸಂಪಾದಕಿಯಾದವರು. ಅಲ್ಲದೆ ಕನ್ನಡ ಸಾಹಿತ್ಯ ರಂಗದ ಆಡಳಿತ ಮಂಡಲಿಯ ಅಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ್ದಾರೆ.

24. ವಿ. ಎಸ್. ರಾಘವನ್

ಭಾರತ ಮತ್ತು ಅಮೆರಿಕದಲ್ಲಿ ವಾಣಿಜ್ಯ–ಹಣಕಾಸು ಸಂಸ್ಥೆಗಳ ಉನ್ನತ ಸ್ಥಾನಗಳನ್ನು ನಿರ್ವಹಿಸಿದ್ದಾರೆ. ವಾಷಿಂಗ್ಟನ್ ಮೆಟ್ರೋ ಪ್ರದೇಶದ ಶ್ರೀ ಶಿವವಿಷ್ಣು ದೇವಸ್ಥಾನ ಮತ್ತು ಮೇರಿಲ್ಯಾಂಡ್ ಹಿಂದೂ–ಜೈನ ದೇವಾಲಯಗಳ ಒಕ್ಕೂಟದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಪ್ರಸಕ್ತ ವಾಷಿಂಗ್ಟನ್‌ನ ಇಂಟರ್‌ಫೈತ್ ಕಾನ್ಫರೆನ್ಸ್ ಮತ್ತು ಹಿಂದೂ ಅಮೆರಿಕನ್ ಸಮುದಾಯಸೇವಾ ಸಂಸ್ಥೆಗಳ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮಿಂಚಂಚೆ ವಿಳಾಸ: vsraghavan@verizon.net

ನಿರುಪಮಾ ರಾಘವನ್

11 ವರ್ಷಗಳ ಕಾಲ ವಾಲ್‌ಮಾರ್ಟ್ ಕಂಪನಿಯಲ್ಲಿ ಮ್ಯಾನೇಜ್‌ಮೆಂಟ್ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಪ್ರಸಕ್ತ ಕಾಗ್ನಿಜೆಂಟ್ ಕಂಪನಿಯಲ್ಲಿ ಸೀನಿಯರ್ ಮ್ಯಾನೇಜರ್ ಸ್ಥಾನದಲ್ಲಿದ್ದಾರೆ. ಅರ್ಕನ್ಸಾಸ್ ಸಂಸ್ಥಾನದ ಹಿಂದೂ ಎಸೋಸಿಯೇಶನ್ ಆಫ್ ನಾರ್ತ್‌ವೆಸ್ಟ್‌ನ ಅಧ್ಯಕ್ಷೆಯಾಗಿದ್ದಾರೆ. ಅರ್ಕನ್ಸಾಸ್‌ನ ಬೆಂಟನ್‌ವಿಲ್‌ನಲ್ಲಿ ನಾರ್ತ್‌ವೆಸ್ಟ್ ಅರ್ಕನ್ಸಾಸ್ ಹಿಂದೂ ದೇವಾಲಯದ ನಿರ್ಮಾಣಕಾರ್ಯದಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಮಿಂಚಂಚೆ ವಿಳಾಸ: raghavannirupama@aol.com

25. ವಿಮಲಾ ರಾಜಗೋಪಾಲ್

ಆಕಾಶವಾಣಿ ಮತ್ತಿತರ ಮಾಧ್ಯಮಗಳ ಮೂಲಕ ಜಾನಪದ ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದ ಎಲ್.ಜಿ. ಸಹೋದರಿಯರಲ್ಲಿ ಒಬ್ಬರು. ಕನ್ನಡದ ಖ್ಯಾತ ಸಾಹಿತಿ ಶ್ರೀ

ಎಲ್. ಗುಂಡಪ್ಪನವರ ಮಗಳು. ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. (ಆನರ್ಸ್) ಪದವಿ. ಆಕಾಶವಾಣಿಯಲ್ಲಿ ಕೆಲಸ ಮಾಡಿದ ಅನುಭವ. ಕಳೆದ ನಾಲ್ಕು ದಶಕಗಳಿಂದ ಫಿಲಡೆಲ್ಫಿಯಾ ಬಳಿ ವಾಸ. ಅಮೆರಿಕದ Peace Corpsನಲ್ಲಿಯೂ, University of Pennsylvaniaದಲ್ಲೂ ಕನ್ನಡ ಕಲಿಸಿದ್ದಾರೆ. ಎಲ್ವಿನ್ ಸಂಸ್ಥೆಯಲ್ಲಿ Recreation/Music Therapist ಆಗಿ ಕೆಲಸ ಮಾಡಿದ್ದಾರೆ. ಇವರ ಲೇಖನಗಳು ಹಲವಾರು ಕಡೆ ಪ್ರಕಟವಾಗಿವೆ. ಇತ್ತೀಚಿನ ಮುಖ್ಯ ಲೇಖನಗಳು: 'ಮಳೆ ಬಿಟ್ಟರು ಮರದ ಹನಿ ಬಿಡದು...' (ಮಾಸ್ತಿ ಬಗ್ಗೆ) ಮತ್ತು 'ಮಾನವೀಯ ಮಾಯಾಲೋಕ ಮತ್ತು ಅಸಮಾನ ಬದುಕು'. ಕನ್ನಡಕ್ಕೆ ಸಲ್ಲಿಸಿದ ಸೇವೆಗಾಗಿ 2010 ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಪುರಸ್ಕಾರ ಗಳಿಸಿದ್ದಾರೆ.

26. ಟಿ. ಎನ್. ಕೃಷ್ಣರಾಜು

ಹುಟ್ಟಿದ್ದು, ಕೊಡವೂರು, ದಕ್ಷಿಣ ಕನ್ನಡ (ಈಗ ಉಡುಪಿ ಜಿಲ್ಲೆ). ಕಲಿತದ್ದು, ಪಿರಿಯಾಪಟ್ಟಣ, ಮೈಸೂರು, ಮುಂಬಯಿ, ಚಿಕಾಗೋ. ಪ್ರತ್ಯಕ್ಷ-ಪರೋಕ್ಷದಲ್ಲಿ ಕಲಿಸಿದವರು: ಅಪ್ಪ, ಅಮ್ಮ, ಅಜ್ಜ, ತಮ್ಮಂದಿರು, ಪತ್ನಿ, ಮಕ್ಕಳು, ಹಾಗೂ ಜಿ.ಎಚ್.ನಾಯಕ, ಕಾರಂತ, ಬೇಂದ್ರೆ, ಕುವೆಂಪು, ಅಡಿಗ, ಅನಂತಮೂರ್ತಿ, ಇತ್ಯಾದಿ, ಪುಟ ತುಂಬ ಬರೆಯಬಹುದಾದ ಧೀಮಂತ ಸಾಹಿತಿಗಳು. ವೃತ್ತಿ-ಮಕ್ಕಳ ತಜ್ಞ, ಕೆಲಸ, 2002ರ ವರೆಗೆ ಚಿಕಾಗೋದ ಇಲಿನಾಯ್ ಯೂನಿವರ್ಸಿಟಿಯಲ್ಲಿ ಪ್ರಾಧ್ಯಾಪಕ; ಸದ್ಯಕ್ಕೆ: ಮೇರಿಲ್ಯಾಂಡ್‌ನ ಬೆಥೆಸ್‌ಡದಲ್ಲಿರುವ National Institutes of Healthನಲ್ಲಿ ಮೆಡಿಕಲ್ ಆಫೀಸರ್. ಬರಹಗಳು: 'ಶನಿ ಹಿಡಿದದ್ದು' (ಕತೆಗಳು, ಸಾಕ್ಷಿ ಪ್ರಕಾಶನ 1981); 'ಪಶ್ಚಿಮಾಯಣ' (ಕಿರು ಕಾದಂಬರಿ, ಮನೋಹರ ಗ್ರಂಥಮಾಲೆ, 1983); 'ಕತೆಗಳು ಮತ್ತು ಕಾದಂಬರಿ' (ಸಂಗ್ರಹ, ಭಾವನ ಪ್ರಕಾಶನ 2011); 'ಸಾವಿರ ಪಕ್ಷಿಗಳು' (ಯಸುನಾರಿ ಕವಬಾಟ ಬರೆದ 'ಥೌಸಂಡ್ ಕ್ರೇನ್ಸ್' ಕಾದಂಬರಿಯ ಕನ್ನಡ ಅನುವಾದ, ಅಂಕಿತ ಪ್ರಕಾಶನ, 2009); "*Don't Stand in front of a Palace or Behind a Horse*" (ಕನ್ನಡ ಗಾದೆಗಳ ಇಂಗ್ಲಿಷ್ ಅನುವಾದ, ಆಥರ್ ಹೌಸ್ ಪಬ್ಲಿಷರ್ಸ್, 2002) ಮತ್ತು, *Poems and a Novella* (ಎ.ಕೆ. ರಾಮಾನುಜನ್‌ರ ಸಮಸ್ತ ಕನ್ನಡ ಬರಹಗಳ ಇಂಗ್ಲಿಷ್ ಅನುವಾದ, ಮಾಲಿ ಡ್ಯಾನಿಯಲ್ಸ್-ರಾಮಾನುಜನ್ ಮತ್ತು ಕೃಷ್ಣರಾಜು ಅನುವಾದಿಸಿದ್ದು, ಆಕ್ಸ್‌ಫರ್ಡ್ ವಿ.ವಿ. ಪ್ರಕಾಶನ, 2007). ಇದಲ್ಲದೇ, ವೈದ್ಯ ವೃತ್ತಿಯ ಇತಿಹಾಸದ ಬಗ್ಗೆ ಬರೆದ ಎರಡು ಇಂಗ್ಲಿಷ್ ಪುಸ್ತಕಗಳು.

27. ಡಾ. ತಾವರೆಕೆರೆ ಶ್ರೀಕಂಠಯ್ಯ (ಕಂಠಿ)

ಕಳೆದ 25 ವರ್ಷಗಳಿಂದಲೂ ವಾಷಿಂಗ್ಟನ್‌ನ ಭಾರತೀಯ ರಂಗಭೂಮಿ ಕ್ಷೇತ್ರದಲ್ಲಿ ವಿವಿಧ ಚಟುವಟಿಕೆಗಳಲ್ಲಿ, ಮುಖ್ಯವಾಗಿ ನಿರ್ದೇಶಕನಾಗಿ, ಮುಂಚೂಣಿಯಲ್ಲಿದ್ದಾರೆ.

ಅವರು ನಾಟಕಗಳನ್ನು ಬರೆದು, ನಿರ್ಮಿಸಿ, ನಟಿಸಿದ್ದಾರೆ. ವಾಷಿಂಗ್ಟನ್ ಮೆಟ್ರೋ ಪ್ರದೇಶದ 'ಕಾವೇರಿ' ಕನ್ನಡ ಸಂಘದ ಆಶ್ರಯದಲ್ಲಿ ಗಿರೀಶ್ ಕಾರ್ನಾಡರ 'ಹಯವದನ' (ಅಮೆರಿಕ ಮತ್ತು ಕೆನಡಾ ದೇಶದ ಬೇರೆಬೇರೆ ನಗರಗಳಲ್ಲಿ ಪ್ರದರ್ಶಿತ ನಾಟಕ) ಸೇರಿದಂತೆ ಹಲವು ಕನ್ನಡ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಕುವೆಂಪು ಅವರ 'ಬೆರಳ್ಗೆ ಕೊರಳ್' ನಾಟಕವೂ ಕಂಠಿ ನಿರ್ದೇಶನದಲ್ಲಿ ಕಸಾರಂ ಸಾಹಿತ್ಯೋತ್ಸವದಲ್ಲಿ ಮತ್ತು 'ಅಕ್ಕ' ವಿಶ್ವಕನ್ನಡ ಸಮ್ಮೇಳನದಲ್ಲಿ ಪ್ರದರ್ಶನಗೊಂಡಿದೆ. ನ್ಯೂಜೆರ್ಸಿಯ ಸೌತ್ ಏಶಿಯನ್ ಥಿಯೇಟರ್ ಉತ್ಸವದಲ್ಲಿ ಈ ನಾಟಕವು ಭಾರಿ ಮೆಚ್ಚುಗೆಯನ್ನು ಗಳಿಸಿದೆ. ಕೃಷ್ಣಮೂರ್ತಿ ಪುರಾಣಿಕರ 'ರಾಧೇಯ' ನಾಟಕವನ್ನೂ ಕಂಠಿ ಅವರು ಇಲ್ಲಿನ ಹಲವಾರು ನಗರಗಳಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ. 1983ರಲ್ಲಿ ಕಂಠಿ ಅವರು ಸ್ಥಾಪಕ ಅಧ್ಯಕ್ಷರಾಗಿ ಆರಂಭಿಸಿದ ವಾಷಿಂಗ್ಟನ್‌ನ 'ನಾಟ್ಯಭಾರತಿ' ಸಂಸ್ಥೆಯು ಉತ್ತಮ ಗುಣಮಟ್ಟದ ನಾಟಕಗಳನ್ನು ನಿರ್ಮಿಸಿ ಪ್ರದರ್ಶಿಸುತ್ತಿದೆ. 1993ರಲ್ಲಿ ಅವರು ಆರಂಭಿಸಿದ 'ಸಹಾರಾ' ಸಂಘವು ರಂಗಭೂಮಿ ಪ್ರದರ್ಶನಗಳಿಂದ ದತ್ತಿನಿಧಿಗಳಿಗೆ ಧನಸಹಾಯ ಸಲ್ಲಿಸುತ್ತಿದೆ. 'ಸಹಾರಾ' ಬ್ಯಾನರ್‌ನಡಿಯಲ್ಲಿ ಕಂಠಿ ಅವರು ಕೆಲವು ಇಂಗ್ಲಿಷ್ ನಾಟಕಗಳನ್ನೂ ನಿರ್ದೇಶಿಸಿ ಯಶಸ್ಸು ಕಂಡಿದ್ದಾರೆ. 2007ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಿಂದ ಪುರಸ್ಕೃತರಾಗಿದ್ದಾರೆ. ವೃತ್ತಿಯಲ್ಲಿ ಅವರು ಮೇರಿಲ್ಯಾಂಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

28. ಶಶಿಕಲಾ ನಿಂಬಾಳ್

ತವರೂರು ಕರ್ನಾಟಕದ ಧಾರವಾಡ. ಭೌತಶಾಸ್ತ್ರದಲ್ಲಿ ಪದವೀಧರೆಯಾಗಿದ್ದು, ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟದಲ್ಲಿ ಸ್ವಯಂ ಸೇವಕಿಯಾಗಿ, 'ಕನ್ನಡ ಕಲಿ' ತಂಡದಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದಾರೆ. 'ಸ್ವರ್ಣಸೇತು' ವಾರ್ಷಿಕ ಸಂಚಿಕೆಯ ಸಂಪಾದಕ ಸಮಿತಿಯ ಸದಸ್ಯೆಯಾಗಿ ಸಕ್ರಿಯ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಇವರು ಹಲವು ಹನಿಗವನಗಳನ್ನು ರಚಿಸಿ ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟಿಸಿದ್ದಾರೆ. ಮಿಂಚಂಚೆ ವಿಳಾಸ: shanti_1331@yahoo.com

29. ಮೀರಾ ಪಿ. ಆರ್.

ಭಾಷಾವಿಜ್ಞಾನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಮೀರಾ ಶಿಕ್ಷಕಿಯಾಗಿ ಹಾಗೂ ಮೈಸೂರು, ಬೆಂಗಳೂರು ಆಕಾಶವಾಣಿಯಲ್ಲಿ ಹಲವು ವರ್ಷ ಅರೆಕಾಲಿಕ ಉದ್ಘೋಷಕಿಯಾಗಿ ಕೆಲಸ ಮಾಡಿದ್ದಾರೆ. ಕನ್ನಡದ ಹಲವು ನಿಯತಕಾಲಿಕೆಗಳಲ್ಲಿ ಮತ್ತು ವೆಬ್ ಪೋರ್ಟಲ್ಗಳಲ್ಲಿ ಇವರ ಹಲವು ಕಥೆ, ಕವಿತೆ, ಪ್ರಬಂಧ, ವಿಮರ್ಶೆ, ಅಂಕಣ ಬರಹಗಳು ಪ್ರಕಟವಾಗಿವೆ. ಮಕ್ಕಳ ಸಾಹಿತ್ಯ ಇವರ

ವಿಶೇಷ ಪ್ರೀತಿ. 'ಅಕ್ಕ 2010'ರ ಅಂಗವಾಗಿ ಪ್ರಕಟಗೊಂಡ ಮಕ್ಕಳ ವಿಶೇಷ ಸಂಚಿಕೆ 'ಗುಬ್ಬಿಗೂಡು' ಪುಸ್ತಕದ ರೂವಾರಿ. ಮೀರಾ ಅವರು ತಮ್ಮ ಮನೆಯಲ್ಲಿ ಕರ್ನಾಟಕ ಶಾಸ್ತ್ರೀಯ ಮತ್ತು ಲಘು ಸಂಗೀತದ ತರಗತಿಗಳನ್ನು ನಡೆಸುತ್ತಿದ್ದಾರೆ. ಸಾಹಿತ್ಯ, ಸಂಗೀತ, ಚಿತ್ರಕಲೆ, ಸಿನಿಮಾ, ವೆಬ್‌ಡಿಸೈನಿಂಗ್ ಎಲ್ಲವೂ ಇವರ ಹತ್ತು ಹಲವು ಆಸಕ್ತಿಗಳಲ್ಲಿ ಸೇರಿವೆ. ಭಾರತದಿಂದ ಉತ್ತರ ಅಮೆರಿಕಾಗೆ ವರ್ಷ 2000ದಲ್ಲಿ ಬಂದ ಇವರು, ಸದ್ಯಕ್ಕೆ ನ್ಯೂಜೆರ್ಸಿಯ 'ಎಡಿಸನ್' ಎಂಬಲ್ಲಿ ತಮ್ಮ ಪತಿ ಹಾಗು ಮಗುವಿನ ಜೊತೆ ನೆಲೆಸಿದ್ದಾರೆ.

30. ಫಣೀಂದ್ರ ಮಂಕಾಲಿ

ವಾಷಿಂಗ್ಟನ್ ಡಿ.ಸಿ.ಯ ಕನ್ನಡಿಗರಿಗೆಲ್ಲಾ 'ಕನ್ನಡ ಕಲಿಸುವ ಮಾಸ್ತರ' ಎಂದು ಚಿರಪರಿಚಿತರಾದವರು. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಬಾಲ್ಯವನ್ನು ಕಳೆದು ಸುಮಾರು ಇಪತ್ತು ವರ್ಷಗಳಿಂದ ವಾಷಿಂಗ್ಟನ್ ಡಿ.ಸಿ. ಹತ್ತಿರದಲ್ಲಿಯ ಉತ್ತರ ವರ್ಜೀನಿಯದಲ್ಲಿ ಪತ್ನಿ ರಜನಿ ಮತ್ತು ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದಾರೆ. ಕನ್ನಡ ಭಾಷೆ, ನಡೆ, ನುಡಿ, ಸಾಹಿತ್ಯ ಮತ್ತು ಪರಂಪರೆಯ ಬಗ್ಗೆ ಅಭಿಮಾನವಲ್ಲದೇ, ಮಕ್ಕಳಿಗೆ ಕನ್ನಡ ಕಲಿಸುವಲ್ಲಿ ಅಪಾರ ಕಳಕಳಿ ಹೊಂದಿದ್ದಾರೆ. ಕಾವೇರಿಯ ಕನ್ನಡ ಕಲಿಯೋಣ ಕಾರ್ಯಕ್ರಮದ ಗುರುವಾಗಿ, ಸಂಸ್ಥಾಪಕರಾಗಿ, ನಿರ್ದೇಶಕರಾಗಿ ಕಳೆದ ಆರು ವರ್ಷದಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರು, 2011ರಲ್ಲಿ, ಬೆಂಗಳೂರಿನಲ್ಲಿ ನಡೆದ ನಾವಿಕ ಅಮೇರಿಕನ್ನಡೋತ್ಸವದ ಕನ್ನಡ–ಕಲಿ ವಿಭಾಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮಕ್ಕಳಿಗಾಗಿ ಸಣ್ಣ ಪದ್ಯಗಳು, ನಾಟಕಗಳನ್ನು ಬರೆದಿದ್ದಾರೆ. ಕನ್ನಡಕಲಿಕೆಗೆ ಉಪಯುಕ್ತವಾಗುವ ಅನುವಾದಗಳನ್ನು ಮಾಡಿದ್ದಾರೆ. ಕನ್ನಡಕಲಿಯೋಣದ ಗುರು ಪಡೆಯೊಂದಿಗೆ ನವೀನ ಕನ್ನಡಕಲಿಸುವ ಪದ್ಧತಿಗಳನ್ನು ಚರ್ಚಿಸುವುದೇಇವರ ವಾರಾಂತ್ಯದ ಪ್ರಿಯ ಹವ್ಯಾಸ.

31. ರವಿ ರವಿಶಂಕರ್

ಮೂಲತಃ ಮೈಸೂರಿನವರಾಗಿದ್ದು ಕಳೆದ 23 ವರ್ಷಗಳಿಂದ ಉತ್ತರ ಕೆರೊಲಿನದ, ಕೇರಿ ನಗರದಲ್ಲಿ ಪತ್ನಿ ಶ್ರೀಮತಿ ಸವಿತಾ ರವಿಶಂಕರರೊಡನೆ ನೆಲೆಸಿರುತ್ತಾರೆ. ವೃತ್ತಿಯಲ್ಲಿ Tekelec Telecommunication ಕಂಪನಿಯ Global Business Development Director ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ, ಬರವಣಿಗೆ ಹಾಗೂ ಭಾಷಾ ಶಿಕ್ಷಣದಲ್ಲಿ ಆಸಕ್ತಿಯನ್ನು ಹೊಂದಿದ್ದು ಕೇರಿ ನಗರದ ಮೊದಲ ಕನ್ನಡ ಮೇಷ್ಟರಾಗಿ ಮಕ್ಕಳಿಗೆ ಕನ್ನಡ ಕಲಿಸಿರುತ್ತಾರೆ. ಪ್ರಸ್ತುತ 'ಸಂಸ್ಕೃತ ಭಾರತಿ USA'ಯ ಸ್ಥಳೀಯ ಸಂಚಾಲಕರಾಗಿ ಹಾಗೂ ಸಂಸ್ಕೃತ ಭಾಷಾ ಶಿಕ್ಷಕರಾಗಿ ಸಂಸ್ಕೃತ ತರಗತಿಗಳನ್ನು ನಡೆಸುತ್ತಿದ್ದಾರೆ.

32. ಶಾಂತಲಾ ಭಂಡಿ

ಬೆಂಗಳೆ, ಶಿರಸಿಯವರಾದ ಇವರು ಪ್ರಸ್ತುತ ಕುಪರ್ಟಿನೊ, ಕ್ಯಾಲಿಫೋರ್ನಿಯದಲ್ಲಿ ವಾಸಿಸುತ್ತಿದ್ದಾರೆ. ಭೂಗೋಳಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹೊಂದಿದ್ದಾರೆ. ಪುರುಸೊತ್ತಾದಾಗ ಓದುವುದು, ಬರೆಯಬೇಕೆನಿಸಿದಾಗ ಬರೆಯುವುದು ಇವರ ಹವ್ಯಾಸ. ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟದ ಅಧ್ಯಕ್ಷೆಯಾಗಿ 2013ರ ವರ್ಷಕ್ಕೆ ಆಯ್ಕೆಯಾಗಿದ್ದಾರೆ. 'ಬೊಗಸೆಯಲ್ಲಿ ಬೆಳದಿಂಗಳು' ಕವನ ಸಂಕಲನ ಹಾಗೂ 'ಬೆಳದಿಂಗಳ ಬೇರು' ಕಥಾ ಸಂಕಲನ. ಪತ್ರಕರ್ತ, ದಟ್ಸ್ ಕನ್ನಡ, ಅವಧಿ, ಕೆಂಡಸಂಪಿಗೆ, ಸ್ವರ್ಣಸೇತು, ಉದಯವಾಣಿ, ಕನ್ನಡಪ್ರಭ, ಹವ್ಯಕ ಸಂಘ ಅಮೇರಿಕಾದ ವಾರ್ಷಿಕ ಸಂಚಿಕೆ, ಅಲೆವಾಣಿ, ಮತ್ತೂ ಹಲವೆಡೆ ಕಥೆ ಕವನ ಪ್ರಬಂಧಗಳು ಪ್ರಕಟವಾಗಿವೆ.

'ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು' ಕೃತಿಯಲ್ಲಿ ಪ್ರಬಂಧ, 'ಅನಂತಮುಖದ ಮೂರ್ತಿ' ಕೃತಿಯಲ್ಲಿ ಅನಂತಮೂರ್ತಿಯವರ ಎರಡು ಕಥೆಗಳ ಕುರಿತು ವಿಮರ್ಶೆ ಪ್ರಕಟವಾಗಿವೆ. 'ನೆನಪು ಕನಸುಗಳ ನಡುವೆ' ಎಂಬ ಬ್ಲಾಗಿನ ಒಡತಿ.

33. ಶ್ರೀಕಾಂತ್ ಬಾಬು

ಇವರು ನ್ಯೂಜೆರ್ಸಿಯಲ್ಲಿ ನೆಲೆಸಿದ್ದು, ನ್ಯೂಯಾರ್ಕ್‌ನ Credit Suisse Bankನಲ್ಲಿ IT Manager ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಹಾಗೂ ಭಾರತೀಯ ಸಂಗೀತದಲ್ಲಿ ತುಂಬಾ ಆಸಕ್ತಿ. ಆದರೆ ಸಾಹಿತ್ಯ ರಚನೆ ತಮ್ಮ ಹವ್ಯಾಸವಲ್ಲ, ಎನ್ನುತ್ತಲೇ ಉತ್ತಮ ಲೇಖನಗಳನ್ನು ಬರೆಯುತ್ತಿದ್ದಾರೆ.

ಮಿಂಚಂಚೆ ವಿಳಾಸ: svenkatesha@hotmail.com

34. ಪ್ರಕಾಶ್ ನಾಯಕ್

ಉತ್ತರ ಕನ್ನಡ ಜಿಲ್ಲೆಯವರು, ಸದ್ಯಕ್ಕೆ ಉತ್ತರ ಕ್ಯಾಲಿಫೋರ್ನಿಯದ ಸಾಂತಾ ಕ್ಲಾರಾದಲ್ಲಿನ ಮಾರ್ವೆಲ್ ಸಂಸ್ಥೆಯಲ್ಲಿ ಪ್ರಾಡಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಕಥೆ-ಕವನಗಳಲ್ಲಿನ ಆಸಕ್ತಿ ಕೆಲವೊಮ್ಮೆ ಬರೆಯುವಂತೆ ಮಾಡಿದ್ದೂ ಇದೆ. ಸ್ಥಳೀಯ ಕನ್ನಡ ಕೂಟದ ವಾರ್ಷಿಕ ಸಂಚಿಕೆಗಳಲ್ಲಿ ಮತ್ತು ದಟ್ಸ್‌ಕನ್ನಡ.ಕಾಮ್ ಪೋರ್ಟಲ್‌ನಲ್ಲಿ ಇವರ ಬರಹಗಳು ಪ್ರಕಟವಾಗಿವೆ.

ಮಿಂಚಂಚೆ ವಿಳಾಸ: phn66@yahoo.com

Blog : http://maatumuttu.blogspot.com

35. ಸಂಧ್ಯಾ ರವೀಂದ್ರನಾಥ್

ಸ್ಯಾನ್ ಫ್ರಾನ್ಸಿಸ್ಕೊ ಬೇ ಏರಿಯಾದಲ್ಲಿ ವಾಸಿಸುತ್ತಿರುವ ಸಂಧ್ಯಾ ಉತ್ತರ

ಅಮೇರಿಕಾಗೆ ಬಂದದ್ದು 1974ರಲ್ಲಿ. ಇಂಟೆಲ್ ಕಾರ್ಪೊರೇಶನ್‌ನಲ್ಲಿ 20ಕ್ಕೂ ಹೆಚ್ಚು ವರ್ಷ ಕೆಲಸ ಮಾಡಿದ ಇವರ ಹವ್ಯಾಸಗಳು ಸುಗಮ ಸಂಗೀತ ಹಾಡುಗಾರಿಕೆ ಮತ್ತು ನಾಟಕ, ಕಥೆ, ಕವನಗಳನ್ನು ಬರೆಯುವುದು. ಇವರ ಹಲವಾರು ಕವಿತೆಗಳಿಗೆ ಪತಿ ರವೀಂದ್ರನಾಥ್ ಸಂಗೀತ ನೀಡಿದ್ದು, 'ಸಂಧ್ಯಾ', 'ವಿಶ್ವಕನ್ನಡ', ಮತ್ತು 'ದಿವ್ಯ' ಎನ್ನುವ ಭಾವಗೀತೆ ಮತ್ತು ಭಕ್ತಿಗೀತೆಗಳ ಸಿ.ಡಿ.ಗಳನ್ನು ಹೊರತಂದಿದ್ದಾರೆ. ಇವರು ಬರೆದ ಸಣ್ಣ ಕಥೆಗಳ ಸಂಗ್ರಹ, 'ಮರಳಿ ಬರುವೆ ನಾ' 2003ರಲ್ಲಿ ಪ್ರಕಟವಾಯಿತು. 'ಆಟದೊಡನೆ ಪಾಠ' ಎಂಬ ಧ್ಯೇಯವನ್ನಿಟ್ಟುಕೊಂಡು ಇವರ ನೇತೃತ್ವದಲ್ಲಿ 2006ರಲ್ಲಿ ಪ್ರಾರಂಭಗೊಂಡ 'ಕನ್ನಡ ಕಲಿ' ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆದುಬಂದಿದೆ ಮತ್ತು ನೂರಾರು ಮಕ್ಕಳು ಬೇ ಏರಿಯಾದಲ್ಲಿ ಕನ್ನಡ ಕಲಿಯಲು ಸಾಧನವಾಗಿದೆ.

36. ಸವಿತಾ ರವಿಶಂಕರ್

'ಕೇರಿ', ನಾರ್ತ್ ಕೆರೊಲಿನಾದಲ್ಲಿ ಪತಿ ರವಿಶಂಕರರೊಡನೆ ವಾಸವಾಗಿದ್ದಾರೆ. ಮೈಸೂರಿನವರಾದ ಇವರು 'ಸಂಪಿಗೆ' ಕನ್ನಡ ಸಂಘದ ಅಧ್ಯಕ್ಷರಾಗಿ, ಕಲಾಸಂಘಟಕರಾಗಿ, 'ಹರಟೆಕಟ್ಟೆ' ಸಾಹಿತ್ಯ ಸಂಘದ ಮೂಲ ಸಂಸ್ಥಾಪಕ ಸದಸ್ಯರಾಗಿ ಹಾಗೂ ಪ್ರಸ್ತುತ 'ಕನ್ನಡ ಕಲಿ' ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸುವ ಉದ್ದೇಶವನ್ನಿಟ್ಟುಕೊಂಡು ಗೊಂಬೆಗಳ ದೃಶ್ಯ ಮಾಧ್ಯಮದಲ್ಲಿ ದಸರಾ ಗೊಂಬೆ ಪ್ರದರ್ಶನವನ್ನು ಪ್ರತಿವರ್ಷವೂ ಏರ್ಪಡಿಸುತ್ತಾರೆ. 'ಅಕ್ಕ' ಮತ್ತು 'ನಾವಿಕ' ವಿಶ್ವಕನ್ನಡ ಸಮ್ಮೇಳನಗಳಲ್ಲಿ ಹಾಗೂ ಸ್ಥಳೀಯ ಟೌನ್ ಹಾಲಿನಲ್ಲೂ ಗೊಂಬೆ ಪ್ರದರ್ಶನ ನೀಡಿದ್ದಾರೆ.

37. ಶಾಂತಾರಾಮ ಸೋಮಯಾಜಿ

ಸುರತ್ಕಲ್ ಮೂಲದ ಸೋಮಯಾಜಿಯವರು, ಅಲ್ಲಿನ ಕೆ.ಆರ್.ಇ.ಸಿ. (ಈಗ ಎನ್.ಐ.ಟಿ.ಕೆ.)ಯಲ್ಲಿ ಬಿ.ಇ. ಮುಗಿಸಿ, ಸೌತ್ ಡಕೋಟದ ಸ್ಕೂಲ್ ಆಫ಼್ ಮೈನಿಂಗ್ ಎಂಡ್ ಟೆಕ್ನಾಲಜಿಯಿಂದ ಎಂ.ಎಸ್. ಮತ್ತು ಯುನಿವರ್ಸಿಟಿ ಆಫ಼್ ಇಲಿನಾಯ್ (ಶಿಕಾಗೋ)ದಿಂದ ಪಿ.ಎಚ್.ಡಿ. ಡಿಗ್ರಿಗಳನ್ನು ಪಡೆದರು. ಈಗ ಉಡುಪಿ–ಮಣಿಪಾಲಗಳ ನಡುವಿನ ಹಯಗ್ರೀವ ನಗರದಲ್ಲಿ ನೆಲೆಸಿರುವ ಇವರು, ಕ್ಯಾಲಿಫ಼ೋರ್ನಿಯಾ ಸ್ಟೇಟ್ ಯುನಿವರ್ಸಿಟಿ (ಸ್ಯಾನ್ ಲೂಯಿ ಒಬಿಸ್ಪೋ)ಯಲ್ಲಿ ಹಲವಾರು ವರ್ಷ ಪ್ರಾಧ್ಯಾಪಕರಾಗಿದ್ದು, ಈಗ ಎಮ್ರಿಟಸ್ ಪ್ರೊಫ಼ೆಸರ್ ಆಗಿದ್ದಾರೆ. 1969ರಿಂದ ಕನ್ನಡದಲ್ಲಿ ಸಣ್ಣಕತೆಗಳನ್ನು ನಿರಂತರವಾಗಿ ಬರೆಯುತ್ತಿರುವ ಲೇಖಕರ ಇತ್ತೀಚಿನ ಕೆಲವು ಕೃತಿಗಳು: ಕುರುಡ ಕುರುಡಿ (ಕಾದಂಬರಿ), ಅಮೆರಿಕದ ಕಥೆಗಳು (ಸಣ್ಣ ಕತೆಗಳು), ಮೇರಿಯ ಕತೆ

(ಪತ್ನಿಯ ಕ್ಯಾನ್ಸರ್ ಸಂಘರ್ಷದ ಕತೆ), ದೇವರೆಂಬ ಸುಳ್ಳು-ಧರ್ಮವೆಂಬ ದ್ವೇಷ (ವೈಚಾರಿಕ), ಛೆ! ಇದೆಂತಾ ಪ್ರಜಾಪ್ರಭುತ್ವ? (ವೈಚಾರಿಕ), ಮುಳ್ಳುಬೇಲಿ ದಾಟಿ ಬದುಕಿ ಬಂದೆ (ಡಿವೋರ್ಸ್‌ನ ಕತೆ), ಜೇನುನೊಣದ ಕೆಮ್ಮು (ಮಕ್ಕಳಿಗಾಗಿ ವಿಚಾರ–ವಿಜ್ಞಾನ–ವಿನೋದ ಮಾಲೆ), ಇತ್ಯಾದಿ.

38. ಸುಪ್ತದೀಪ್ತಿ (ಜ್ಯೋತಿ ಮಹಾದೇವ್)

ದ.ಕ. ಜಿಲ್ಲೆಯಲ್ಲಿ ಹುಟ್ಟಿ ಬೆಳೆದು, ಕಾರ್ಕಳದಲ್ಲಿ ಬಿ.ಎಸ್ಸಿ. ವ್ಯಾಸಂಗ ಮುಗಿಸಿದ, 'ಸುಪ್ತದೀಪ್ತಿ' ಕಾವ್ಯನಾಮದ ಜ್ಯೋತಿ ಮಹಾದೇವ್, ಸಂಸಾರಸಹಿತ ಬೆಂಗಳೂರು– ಸನ್ನಿವೇಲ್– ಸ್ಯಾನ್ ಡಿಯಾಗೋ– ಕುಪರ್ಟಿನೊ– (ಕ್ಯಾಲಿಫ಼ೋರ್ನಿಯಾ, ಅಮೆರಿಕಾ) ಹಾಗೂ ಮೈಸೂರು ನಗರಗಳಲ್ಲಿ ಗುಳೇಎತ್ತಿ, ಈಗ ಮಣಿಪಾಲದಲ್ಲಿ ನೆಲೆಸಿದ್ದಾರೆ. ಕರ್ನಾಟಕ ಮುಕ್ತ ವಿ.ವಿ.ಯಿಂದ ಕನ್ನಡ ಎಂ.ಎ. ಪದವಿ ಪಡೆದವರು. ಪ್ರಕಟಿತ ಕೃತಿಗಳಲ್ಲಿ ನಾಲ್ಕು ಕವನ ಸಂಕಲನಗಳು (ಭಾವಲಹರಿ, ಭಾವಗಾನ, ಭಾವಬಿಂಬ, ಭಾವಲೋಕ), ಒಂದು ಕಥೆ–ಹರಟೆ ಸಂಕಲನ (ಭಾವಯಾನ). ತಮ್ಮ ಕವನಗಳ ಧ್ವನಿಮುದ್ರಿಕೆ– ಹೇಳು ಮನಸೇ– ಹೊರತಂದಿದ್ದಾರೆ. ಸ್ವರ್ಣಸೇತು, ಸಂಗಮ ಹಾಗೂ ಇನ್ನಿತರ ವಾರ್ಷಿಕ– ಸ್ಮರಣ ಸಂಚಿಕೆಗಳಲ್ಲಿ ಕಥೆ–ಕವನ–ಲೇಖನಗಳು ಪ್ರಕಟವಾಗಿವೆ. ಪ್ರಸ್ತುತ ಮಣಿಪಾಲದಲ್ಲಿ 'ಇನ್ನರ್‌ಲೈಟ್ ವೆಲ್‌ನೆಸ್ ಸೆಂಟರ್' ಸ್ಥಾಪಿಸಿ ಹಿಪ್ನೋಥೆರಪಿಸ್ಟ್ ಹಾಗೂ ಪರ್ಸನಲ್ ಫಿಟ್ನೆಸ್ ಟ್ರೈನರ್ ಆಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮಿಂಚಂಚೆ ವಿಳಾಸ: jyothimahadev@gmail.com

Blogs : http://suptadeepti.blogspot.com and
http://harivalahari.blogspot.com

ಕನ್ನಡ ಸಾಹಿತ್ಯ ರಂಗ

ನಮ್ಮ ಕನ್ನಡ ಸಾಹಿತ್ಯ ರಂಗದ ಮೂಲ ಉದ್ದೇಶ ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರ ಸಾಹಿತ್ಯಾಸಕ್ತಿಯನ್ನು ಪೋಷಿಸುವುದು, ಬೆಳಸುವುದು; ಅದರ ಸಾಧನೆಗಾಗಿ ಬೇಕಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳುವುದು. ಇಂಥ ಒಂದು ಸಂಸ್ಥೆ ಏಕೆ ಬೇಕು, ಈಗಾಗಲೇ ಬೇಕಾದಷ್ಟು ಕನ್ನಡ ಸಂಘಗಳೂ, ಕೂಟಗಳೂ ಇಲ್ಲವೆ ಎಂದು ನೀವು ಕೇಳಬಹುದು. ನಿಜ, ಅಮೆರಿಕದಲ್ಲಿ ಕನ್ನಡಿಗರ ಜನಸಂಖ್ಯೆ ಹೆಚ್ಚಿದಂತೆಲ್ಲ ಕನ್ನಡ ಕೂಟಗಳ ಸಂಖ್ಯೆಯೂ ಹೆಚ್ಚುತ್ತಿದೆ. ಅಮೆರಿಕಾದ್ಯಂತ ಮೂವತ್ತಕ್ಕೂ ಮೇಲ್ಪಟ್ಟು ಕನ್ನಡ ಸಂಘಗಳಿವೆ. ಆದರೆ ಅವೆಲ್ಲ ಬಹುಮಟ್ಟಿಗೆ ಸಾಂಸ್ಕೃತಿಕ ಸಂಘಗಳು. ಯುಗಾದಿಯಿಂದ ದೀಪಾವಳಿಯವರೆಗೆ ನಾನಾ ಹಬ್ಬಗಳನ್ನಾಚರಿಸಿ ಕನ್ನಡಿಗರ ಮನ ತಣಿಸುತ್ತವೆ, ಬಿಸಿಬೇಳೆ ಹುಳಿಯನ್ನದಿಂದ ಅವರ ಹೊಟ್ಟೆ ತುಂಬಿಸುತ್ತವೆ. ಅದೊಂದು ಸಂಭ್ರಮದ ವಾತಾವರಣ. ಅದು ಎಲ್ಲರಿಗೂ ಬೇಕು. ಇನ್ನು ಎರಡು ವರ್ಷಕ್ಕೊಮ್ಮೆ ಅಮೆರಿಕದ ವಿವಿಧ ಮುಖ್ಯ ಪಟ್ಟಣಗಳಲ್ಲಿ ನಡೆಯುವ ಅಕ್ಕ ವಿಶ್ವ ಕನ್ನಡ ಸಮ್ಮೇಳನಗಳ ಅದ್ದೂರಿಯನ್ನು ನೀವು ನೋಡೇ ಅರಿಯಬೇಕು. ಹೊರದೇಶವೊಂದರಲ್ಲಿ ನಾಲ್ಕಾರು ಸಾವಿರ ಕನ್ನಡಿಗರನ್ನು ಒಂದೇ ಚಾವಣಿಯ ಕೆಳಗೆ ನೋಡುವ ಸೌಭಾಗ್ಯ ಯಾರಿಗೆ ಬೇಡ? 2010ರಲ್ಲಿ ನಾವಿಕ ಎಂಬ ಹೊಸ ಸಂಸ್ಥೆ ಇದೇ ರೀತಿ ಒಂದು ದೊಡ್ಡ ಸಮ್ಮೇಳನವನ್ನು ಕ್ಯಾಲಿಫೋರ್ನಿಯಾದಲ್ಲಿ ನಡೆಸಿತು. ಅದೆಲ್ಲ ನಿಜವೆ ಸರಿ, ಆದರೆ ಅಂಥ ಹಬ್ಬದ ಸಂಭ್ರಮದಲ್ಲಿ ಸಾಹಿತ್ಯ ಚಿಂತನೆಯಂಥ ಗಂಭೀರ ಮನೋವ್ಯಾಪಾರಕ್ಕೆ ತಾವೆಲ್ಲಿ?–ಎಂಬ ಯೋಚನೆಯೂ ಸಾಹಿತ್ಯಾಸಕ್ತರಿಗೆ ಬಾರದೆ ಇರದು. ಅದರಿಂದಲೇ ಕನ್ನಡ ಸಾಹಿತ್ಯ ರಂಗದಂಥ ರಾಷ್ಟ್ರೀಯ ಸಂಸ್ಥೆಯೊಂದು ಹಲವರಿಗೆ ಬೇಕೆನಿಸಿತು; ಆ ಸಂಸ್ಥೆ 2003ರಲ್ಲಿ ಉದ್ಭವವಾಗಿ 2004ರಲ್ಲಿ ತನ್ನ ಮೊದಲ ವಸಂತ ಸಾಹಿತ್ಯೋತ್ಸವವನ್ನು ಅತ್ಯಂತ ಉತ್ಸಾಹದಿಂದ ಶ್ರದ್ಧೆಯಿಂದ ನೆರವೇರಿಸಿತು. ಈ ವರ್ಷ ನಮ್ಮ ರಂಗಕ್ಕೆ ಹತ್ತು ತುಂಬುತ್ತದೆ. ರಂಗದ ಇತಿಹಾಸದಲ್ಲಿ ಅದೊಂದು ಮೈಲಿಗಲ್ಲು.

ಅಂದಿನಿಂದ ಮೊದಲುಗೊಂಡು ಈ ಸಂಸ್ಥೆ ಹಲವಾರು ಉತ್ತಮ ಕಾರ್ಯಕ್ರಮಗಳನ್ನು ಕೈಗೂಡಿಸಿದೆ. ಐದು ವಸಂತ ಸಾಹಿತ್ಯೋತ್ಸವಗಳನ್ನು ನಡೆಸಿ ಈಗ ಆರನೆಯದಕ್ಕೆ ಸಿದ್ಧಗೊಳ್ಳುತ್ತಿದೆ: ಮೊದಲ ಸಮ್ಮೇಳನ ಫಿಲಡೆಲ್ಫಿಯಾ ಬಳಿಯ ವಿಲನೋವಾ ವಿಶ್ವವಿದ್ಯಾಲಯದಲ್ಲೂ, ಎರಡನೆಯದು ಕ್ಯಾಲಿಫೋರ್ನಿಯಾದ ಲಾಸ್ ಏಂಜಲಿಸ್ ನಗರದ ಬಳಿಯಲ್ಲೂ, ಮೂರನೆಯದು ಚಿಕಾಗೋ ನಗರದ ಬಳಿಯಲ್ಲೂ,

ನಾಲ್ಕನೆಯದು ಬಾಲ್ಟಿಮೋರ್-ವಾಷಿಂಗ್ಟನ್ ಬಳಿಯ ಮೇರಿಲ್ಯಾಂಡ್ ವಿಶ್ವವಿದ್ಯಾಲಯದಲ್ಲಿಯೂ, ಐದನೆಯದು ಸಾನ್ ಫ್ರಾನ್ಸಿಸ್ಕೋ ಬಳಿಯಲ್ಲೂ ನಡೆಯಿತು. ಆರನೆಯ ಸಮ್ಮೇಳನ ಈ ವರ್ಷ ಹ್ಯೂಸ್ಟನ್, ಟೆಕ್ಸಸ್‌ನಲ್ಲಿ ರೈಸ್ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿದೆ.

ಪ್ರತಿ ಸಮ್ಮೇಳನದ ಅಂಗವಾಗಿ ಒಂದೊಂದು ಗ್ರಂಥವನ್ನು ಹೊರತಂದಿದ್ದೇವೆ: 'ಕುವೆಂಪು ಸಾಹಿತ್ಯ ಸಮೀಕ್ಷೆ' (2004), 'ಆಚೀಚೆಯ ಕತೆಗಳು' (2005), 'ನಗೆಗನ್ನಡಂ ಗೆಲ್ಗೆ!' (2007), 'ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು...' (2009), ಮತ್ತು 'ಮಥಿಸಿದಷ್ಟೂ ಮಾತು' (2011). ಈ ವರ್ಷದ ಪುಸ್ತಕ 'ಬೇರು-ಸೂರು' ಒಂದು ಬಹು ಮುಖ್ಯವಾದ ವಿಷಯವನ್ನು ಕುರಿತದ್ದಾಗಿದೆ: ಅಮೆರಿಕದಲ್ಲಿ ನಮ್ಮ ಬದುಕು. ನಮ್ಮ ವಲಸೆಗಾರ ಜೀವನದ ನಾನಾ ಮುಖಗಳನ್ನು, ನಿಜ ಅನುಭವಗಳನ್ನು ದಾಖಲಿಸುವ 38 ಲೇಖನಗಳನ್ನೊಳಗೊಂಡ ಪುಸ್ತಕ ಇದು. ಇಂಥ ಪುಸ್ತಕ ಇದುವರೆಗೆ ಕನ್ನಡದಲ್ಲಿ ಬಂದಿಲ್ಲ.

ನಮ್ಮ ಪ್ರಕಟನೆಗಳ ಒಂದು ವೈಶಿಷ್ಟ್ಯವೆಂದರೆ ಸಾಧ್ಯವಾದ ಮಟ್ಟಿಗೂ ಎಲ್ಲ ಲೇಖನಗಳನ್ನೂ (ಮುನ್ನುಡಿ, ಇತ್ಯಾದಿ ಬಿಟ್ಟು) ಇಲ್ಲಿ ನೆಲೆಸಿರುವ ಕನ್ನಡಿಗರ ಕೈಯಲ್ಲೇ ಬರೆಸಿರುವುದು. ಈ ಮೂಲಕ ನಮ್ಮಲ್ಲಿರುವ ಸಾಹಿತ್ಯಾಸಕ್ತಿಯನ್ನು ಹೆಚ್ಚು ಕೃಷಿ ಮಾಡಿದಂತಾಗುತ್ತದೆ ಎಂಬುದು ನಮ್ಮ ಮೂಲ ನಂಬಿಕೆ.

ಈ ಮೇಲಿನ ಪ್ರಕಟಣೆಗಳೇ ಅಲ್ಲದೆ, ಕನ್ನಡ ಸಾಹಿತ್ಯ ರಂಗ ಕ್ಯಾಲಿಫೋರ್ನಿಯಾದ ಸಾಹಿತ್ಯಾಂಜಲಿ ಹೊರತಂದ 'ಕನ್ನಡದಮರ ಚೇತನ' (ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಾಹಿತ್ಯ ಸಮೀಕ್ಷೆ) ಪುಸ್ತಕದ ಪ್ರಕಾಶನಕ್ಕೂ, ಪೆನ್ಸಿಲ್ವೇನಿಯ, ನ್ಯೂ ಜೆರ್ಸಿ ಮತ್ತು ಡೆಲವೇರ್ ತ್ರಿರಾಜ್ಯಗಳ ಕನ್ನಡ ಸಂಸ್ಥೆ ತ್ರಿವೇಣಿ 2005ರಲ್ಲಿ ನಡೆಸಿದ ಪುತಿನ ಜನ್ಮ ಶತಮಾನೋತ್ಸವಕ್ಕೂ ಧನಸಹಾಯ ಮಾಡಿದೆ.

ಕನ್ನಡ ಸಾಹಿತ್ಯ ರಂಗ ಕೈಗೊಂಡ ಒಂದು ವಿಶಿಷ್ಟ ಕೆಲಸವೆಂದರೆ 2006ರಲ್ಲಿ ಅಮೆರಿಕಾದ್ಯಂತ ಒಂಭತ್ತು ಕಡೆ ಕನ್ನಡ ಸಾಹಿತ್ಯ ಶಿಬಿರವನ್ನು ನಡೆಸಿದ್ದು. ಶಿಲಾಶಾಸನಗಳಿಂದ ಹಿಡಿದು ನವೋದಯದವರೆಗೂ ನಮ್ಮ ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿಯಲ್ಲಿ ಮುಖ್ಯ ಮೈಲಿಗಲ್ಲುಗಳನ್ನು ಗುರುತಿಸಿ ಅವುಗಳನ್ನು ಪರಿಚಯಿಸುವ ಕಾರ್ಯಕ್ರಮವನ್ನು ಹೆಸರಾಂತ ಕವಿ ಮತ್ತು ಉಪನ್ಯಾಸಕಾರ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರಿಂದ ಏರ್ಪಡಿಸಿತ್ತು. ಎರಡು ದಿನದ ಈ ಶಿಬಿರದಲ್ಲಿ ಸುಮಾರು 200ಕ್ಕೂ ಹೆಚ್ಚು ಮಂದಿ ಭಾಗವಹಿಸಿದರು. ಅಮೆರಿಕದಲ್ಲಿ ಇಂಥ ಒಂದು ಶಿಬಿರ ಈ ಪ್ರಮಾಣದಲ್ಲಿ ನಡೆದದ್ದು ಅದೇ ಮೊದಲು.

ನಮ್ಮ ಸಮ್ಮೇಳನಗಳಲ್ಲಿ ಕರ್ನಾಟಕದಿಂದ ಹಲವಾರು ಉತ್ತಮ ಸಾಹಿತಿಗಳು

ಆಹ್ವಾನಿತರಾಗಿ ಬಂದು ಭಾಗವಹಿಸಿದ್ದಾರೆ, ಭಾಷಣಗಳನ್ನು ನೀಡಿದ್ದಾರೆ. ಡಾ. ಪ್ರಭುಶಂಕರರ 'ಕನ್ನಡ ಸಾಹಿತ್ಯ: ಒಂದು ಮಿಂಚು ನೋಟ' (2004), ಪ್ರೊ. ಬರಗೂರು ರಾಮಚಂದ್ರಪ್ಪನವರ 'ಕನ್ನಡ ಸಾಹಿತ್ಯ ಮತ್ತು ಸೃಜನಶೀಲ ಸ್ವಾತಂತ್ರ್ಯ' (2005), ಪ್ರೊ. ಅ.ರಾ. ಮಿತ್ರ ಅವರ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯಶೀಲತೆ' (2007), ಡಾ. ವೀಣಾ ಶಾಂತೇಶ್ವರ ಅವರ 'ಕನ್ನಡ ಕಾದಂಬರಿ ಕಳೆದ ಕಾಲು ಶತಮಾನದಲ್ಲಿ' (2009), ಮತ್ತು ಡಾ. ಸುಮತೀಂದ್ರ ನಾಡಿಗರ 'ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಪ್ರಕಾರ' (2011) –ಇವನ್ನು ರಂಗ ಪ್ರತ್ಯೇಕವಾಗಿ ತನ್ನ ಭಾಷಣಮಾಲೆಯಲ್ಲಿ ಮುದ್ರಿಸಿದೆ. ಇಲ್ಲಿ ನೆಲೆಸಿರುವ ಕನ್ನಡಿಗರ ಸಾಹಿತ್ಯಾಭಿಲಾಷೆ ಮತ್ತು ಅದರ ಅಭಿವ್ಯಕ್ತಿಯನ್ನು ಕುರಿತು 2007ರ ಸಮ್ಮೇಳನಕ್ಕೆ ವಿಶೇಷ ಅತಿಥಿಯಾಗಿ ಬಂದಿದ್ದ ಡಾ. ಎಚ್.ಎಸ್. ರಾಘವೇಂದ್ರ ರಾವ್ ಉಪನ್ಯಾಸ ಮಾಡಿದರು. 2009ರ ಸಮ್ಮೇಳನಕ್ಕೆ ಕನ್ನಡದ ಪ್ರಖ್ಯಾತ ಲೇಖಕಿ ಶ್ರೀಮತಿ ವೈದೇಹಿ ಅವರು ಬಂದು ತಮ್ಮ ಕೆಲ ಕತೆಗಳನ್ನೋದಿ, ಸಂವಾದಗಳಲ್ಲಿ ಭಾಗವಹಿಸಿ ಎಲ್ಲರ ಮನಸ್ಸನ್ನೂ ತಣಿಸಿದರು. 2011ರ ಸಮ್ಮೇಳನದಲ್ಲಿ ಖ್ಯಾತ ಹಾಸ್ಯ ಲೇಖಕಿ ಶ್ರೀಮತಿ ಭುವನೇಶ್ವರಿ ಹೆಗಡೆಯವರು ತಮ್ಮ ಹಿತವಾದ ಹಾಸ್ಯದ ಹೊನಲಿನಲ್ಲಿ ಸಭಿಕರನ್ನು ತೇಲಾಡಿಸಿದರು.

ಸಮ್ಮೇಳನದ ಅಂಗವಾಗಿ ನಾವು ನಡೆಸುವ ಎಲ್ಲ ಕಾರ್ಯಕ್ರಮಗಳಲ್ಲೂ ಇಲ್ಲಿನ ಕನ್ನಡಿಗರ ಸಾಹಿತ್ಯಾಸಕ್ತಿಯನ್ನು ಪ್ರಚೋದಿಸುವ, ಅವರ ಸಾಹಿತ್ಯ ಸಾಧನೆಗಳನ್ನು ಎತ್ತಿ ಹಿಡಿಯುವ ಆಶಯವಿರುತ್ತದೆ. ಈ ದಿಕ್ಕಿನಲ್ಲಿ, ಇಲ್ಲಿನ ಬರಹಗಾರರನ್ನೂ, ಅವರ ಕೃತಿಗಳನ್ನೂ ಜನರ ಮುಂದಿಡುವ 'ನಮ್ಮ ಬರಹಗಾರರು' ಕಾರ್ಯಕ್ರಮ, ಸಾಹಿತ್ಯ ಗೋಷ್ಠಿ, ಕನ್ನಡ ಕಲಿಯಲು ಮನೆಯಿಂದ ಹಿಡಿದು ಕಾಲೇಜಿನ ಮಟ್ಟದವರೆಗೂ ಇರುವ ಅವಕಾಶಗಳು, ಹಿರಿಯ ಸಾಹಿತಿಗಳ ಸ್ಮರಣೆ, ಇಲ್ಲಿನ ಬರಹಗಾರರ ಪುಸ್ತಕಗಳನ್ನು ಕೊಳ್ಳಲು ಅನುಕೂಲವಾದ ಒಂದು ಪುಸ್ತಕ ಭಂಡಾರ, ಇಲ್ಲಿನ ಕಲಾವಿದರಿಂದಲೇ ತಯಾರಾದ ಉತ್ತಮ ನಾಟಕ, ಭಾವಗೀತೆ ಮುಂತಾದ ಮನರಂಜನೆಯ ಕಾರ್ಯಕ್ರಮಗಳು – ನಮ್ಮ ಜನರಿಗೆ ಪ್ರಿಯವಾಗಿವೆ. ನಮ್ಮ ಪುಸ್ತಕಗಳಲ್ಲಿ ಬರೆಯುವ ಎಷ್ಟೋ ಮಂದಿ ಇಲ್ಲಿನ ಲೇಖಕರು ಇದೇ ತಮ್ಮ ಮೊಟ್ಟಮೊದಲ ಲೇಖನ ಎಂದು ಹಿಗ್ಗಿದ್ದಾರೆ. ರಂಗಕ್ಕೆ ಅದೊಂದು ತೃಪ್ತಿ.

ರಂಗದ ಇತ್ತೀಚಿನ ಕಾರ್ಯಕ್ರಮ KSR Book Club ನಡೆಸುವ ಕಥಾವಲೋಕನ ಕಾಯಕ್ರಮ. ತಿಂಗಳಿಗೊಮ್ಮೆ ನಡೆಯುವ ಈ ದೂರ–ವಾಣಿ–ಸಭೆಯಲ್ಲಿ, ಅಮೆರಿಕಾದ್ಯಂತ ಹರಡಿರುವ ಸದಸ್ಯರು, ಯಾವುದಾದರೊಂದು ಆಯ್ದ ಕತೆಯನ್ನು ಪೂರ್ವಭಾವಿಯಾಗಿ ಓದಿಕೊಂಡು, ಅದನ್ನು ಕುರಿತು ದೂರವಾಣಿಯ ಮೂಲಕ ಚರ್ಚಿಸುತ್ತಾರೆ, ಅಭಿಪ್ರಾಯ ಮಂಡಿಸುತ್ತಾರೆ. ಅಗತ್ಯವಿದ್ದಲ್ಲಿ, ಅದರದೇ ಮುಂದುವರಿಕೆಯಾಗಿ ಮಿಂಚಂಚೆ ಪತ್ರಗಳಲ್ಲೂ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ.

ಕನ್ನಡ ಸಾಹಿತ್ಯ ರಂಗ ಒಂದು ವಿಶಿಷ್ಟ ಸಂಸ್ಥೆ. ಅದಕ್ಕೆ ಒಂದು ನಿರ್ದಿಷ್ಟವಾದ

ಗುರಿಯಿದೆ, ಕಾರ್ಯಕ್ಷೇತ್ರವಿದೆ. ಸಾಹಿತ್ಯಕ ಮೌಲ್ಯವಿಲ್ಲದ ಕಾರ್ಯಕ್ರಮಗಳಲ್ಲಿ ಅದಕ್ಕೆ ಆಸಕ್ತಿಯಿಲ್ಲ. ಅದರ ಕಾರ್ಯಸಾಧನೆಗೆ ಸಾಹಿತ್ಯದಲ್ಲಿ ಒಲವುಳ್ಳ ಕನ್ನಡಿಗರೆಲ್ಲರ ಬೆಂಬಲ, ಪ್ರೋತ್ಸಾಹ, ಸಹಾಯ ಅಗತ್ಯ. ಅದು ಇದುವರೆಗೆ ಮಾಡಿರುವ ಕೆಲಸ ಅದರ ಬಗ್ಗೆ ನಿಮ್ಮಲ್ಲಿ ಭರವಸೆ ಮೂಡಿಸುವುದೆಂದು ನಂಬಿದ್ದೇವೆ. ಅದು ಒಂದು ಲಾಭೋದ್ದೇಶವಿಲ್ಲದ ಸಾಂಸ್ಕೃತಿಕ ಸಂಸ್ಥೆ (Non-profit organization) ಎಂದು ಅಮೆರಿಕದ Internal Revenue Service ಗುರುತಿಸಿದೆ. ನಮ್ಮಲ್ಲಿ ವಿಶ್ವಾಸ ತೋರಿ ನಮ್ಮ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಧನ ಸಹಾಯ ಮಾಡಿ ನಮ್ಮನ್ನು ಪ್ರೋತ್ಸಾಹಿಸಿರುವ ಎಲ್ಲ ಸಹೃದಯರಿಗೂ ರಂಗದ ಅನಂತ ವಂದನೆಗಳು.

ನಮ್ಮ ಸಮ್ಮೇಳನಗಳನ್ನು ನಡೆಸುವಲ್ಲಿ ಹಲವಾರು ಸ್ಥಳೀಯ ಕನ್ನಡ ಕೂಟಗಳು ನಮ್ಮೊಂದಿಗೆ ಸಹಕರಿಸಿವೆ, ನಮ್ಮ ಸಹಪ್ರಾಯೋಜಕರಾಗಿ ನೆರವಿತ್ತಿವೆ. ತ್ರಿವೇಣಿ, ದಕ್ಷಿಣ ಕ್ಯಾಲಿಫೋರ್ನಿಯಾದ ಕನ್ನಡ ಸಾಂಸ್ಕೃತಿಕ ಸಂಘ, ಅಂಜಲಿ, ಸಾನ್ ಡಿಯಾಗೋನ ಕಸ್ತೂರಿ, ಇಲಿನಾಯ್ ರಾಜ್ಯದ ವಿದ್ಯಾರಣ್ಯ, ಅಮೆರಿಕದ ರಾಜಧಾನಿ ವಾಷಿಂಗ್ಟನ್ ಪ್ರದೇಶದ ಕಾವೇರಿ ಕನ್ನಡ ಸಂಘ, ಉತ್ತರ ಕ್ಯಾಲಿಫೋರ್ನಿಯಾದ ಕನ್ನಡ ಕೂಟ –ಈ ಎಲ್ಲ ಸಂಸ್ಥೆಗಳಿಗೂ ನಮ್ಮ ಧನ್ಯವಾದಗಳು. ಈ ಆರನೆಯ ಸಮ್ಮೇಳನ ಟೆಕ್ಸಸ್‌ನ ಹ್ಯೂಸ್ಟನ್ ಕನ್ನಡ ವೃಂದದ ಸಹಯೋಗದಲ್ಲಿ ಮತ್ತು ಟೆಕ್ಸಸ್‌ನ ಇತರ ಹಲವಾರು ಕನ್ನಡ ಕೂಟಗಳ ಸಹಕಾರದಿಂದ ನಡೆಯುತ್ತಿರುವುದು ಒಂದು ಸಂತಸದ ಸಂಗತಿ.

ನಮ್ಮ ಪುಸ್ತಕ ಪ್ರಕಟನೆಯ ಕಾರ್ಯದಲ್ಲಿ ಅತ್ಯಂತ ವಿಶ್ವಾಸದಿಂದ ಮುತುವರ್ಜಿಯಿಂದ ನಮ್ಮೊಂದಿಗೆ ಸಹಕರಿಸಿರುವ ಬೆಂಗಳೂರಿನ ವಸಂತ ಪ್ರಕಾಶನ ಮತ್ತು ಅಭಿನವ ಸಂಸ್ಥೆಗಳಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ನಮ್ಮ ರಂಗದ ಯೋಜನೆಗಳನ್ನು ಕನ್ನಡ ಜನಕ್ಕೆ ತಿಳಿಸುವುದರಲ್ಲಿ ನಮಗೆ thatskannada.com ಅಂತರ್ಜಾಲ ತಾಣದ ಶ್ರೀ ಎಸ್.ಕೆ. ಶ್ಯಾಮಸುಂದರ ಬಹು ಕಾಲದಿಂದಲೂ ಬೆಂಬಲ ನೀಡಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ನಮ್ಮ ಹಿಂದಿನ ಪುಸ್ತಕಗಳಂತೆಯೇ ಇದೂ ಕನ್ನಡಿಗರ ಪ್ರೀತಿ ಗಳಿಸುವುದೆಂದು ನಂಬಿದ್ದೇವೆ.

– **ಎಂ.ಎಸ್. ನಟರಾಜ,** ಕಾರ್ಯಕಾರೀ ಸಮಿತಿಯ ಅಧ್ಯಕ್ಷ

– **ಎಚ್.ವೈ. ರಾಜಗೋಪಾಲ್,** ಆಡಳಿತ ಮಂಡಲಿಯ ಅಧ್ಯಕ್ಷ

ಬೇರು ಸೂರು

ನಮ್ಮ ಪ್ರಕಟಣೆಗಳು – ಅಭಿಪ್ರಾಯ ಸಂಗ್ರಹ

1. ಮಥಿಸಿದಷ್ಟೂ ಮಾತು (2011)

ಪ್ರಕಾಶನ:

ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.

ಹಾಗೂ

ಅಭಿನವ ಪ್ರಕಾಶನ, ಬೆಂಗಳೂರು.

ಪ್ರಧಾನ ಸಂಪಾದಕರು:

ತ್ರಿವೇಣಿ ಶ್ರೀನಿವಾಸ ರಾವ್.

'ಅಮೆರಿಕೆಯಲ್ಲಿ ಬಿಡಾರ ಹೂಡಿರುವ ಕನ್ನಡ ಪರಿಸರದ ಸ್ಥಾಯೀ ಮತ್ತು ಸಂಚಾರೀ ಭಾವಗಳ, ವೈವಿಧ್ಯಪೂರ್ಣ ಆಧುನಿಕ ಅಭಿವ್ಯಕ್ತಿಯ ವಿಶಿಷ್ಟ ಸೊಲ್ಲುಗಳ ಸಂಕಲನ ಇದು. ಕಾವ್ಯದ ಧ್ವನಿಶಕ್ತಿಯ ಜೊತೆಗೆ ಕಥನದ ಕುತೂಹಲವನ್ನೂ ಹೊಂದಿರುವ ಲಲಿತ ನಿಬಂಧಗಳು, ತಮ್ಮ ಅನುಭವಜನ್ಯ ವಿವರಗಳಲ್ಲಿ ಮೈದಾಳುತ್ತಲೇ, ಅದರಾಚೆಗೂ ಚಿಂತನಶೀಲವಾಗಿ ರೆಕ್ಕೆ ಬಿಚ್ಚುವ ರೀತಿ ಭಾವೋದ್ದೀಪಕವಾಗಿದೆ. ...ಇಲ್ಲಿನ ಹೆಚ್ಚಿನ ಬರಹಗಳು ಕನ್ನಡ ಸಂವೇದನೆಯನ್ನು ಹಿಗ್ಗಿಸುವಷ್ಟು ಸತ್ವಶಾಲಿಯಾಗಿವೆ.'

ಜಯಂತ ಕಾಯ್ಕಿಣಿ (ಬೆನ್ನುಡಿಯಲ್ಲಿ)

'ಈ ಸಂಕಲನದಲ್ಲಿರುವ ಬರಹಗಳನ್ನು ಸಂಪಾದಕರು ಸಲ್ಲಾಪ ಹರಟೆ ಚಿಂತನೆ ಎಂದು ಮೂರು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಆದರೆ ಅನುಭವ ಮತ್ತು ಚಿಂತನಾ ಪ್ರಧಾನವಾದ ಈ ಬರಹಗಳನ್ನು ಒಟ್ಟಾರೆಯಾಗಿ ಪ್ರಬಂಧಗಳು ಎನ್ನಬಹುದು. ಈ ಪ್ರಬಂಧಗಳನ್ನು ಓದುತ್ತ ನನಗೆ ಅಮೆರಿಕ ಕನ್ನಡಿಗರ ಬಾಳಿನ ಒಂದು ಮುಖದ ದರ್ಶನವಾದಂತಾಯಿತು. ಬೇರೆಬೇರೆ ಕ್ಷೇತ್ರದಲ್ಲಿ ಹಾಗೂ ಜ್ಞಾನಶಿಸ್ತಿನಲ್ಲಿ ಕೆಲಸ ಮಾಡುವ ಜನರು ಕನ್ನಡದೊಳಗೆ ಬರೆಯುವುದರಿಂದ ಕನ್ನಡ ಬರಹಕ್ಕೆ ಹೊಸಶಕ್ತಿಯ ಆವಾಹನೆಯಾಗುತ್ತದೆ ಎಂದು

ನಂಬಿದವನು ನಾನು. ಈ ಬರಹಗಳನ್ನು ಓದಿದ ಮೇಲೆ, ಬೇರೆಬೇರೆ ದೇಶಗಳಲ್ಲಿ ಇರುವ ಕನ್ನಡಿಗರು ಬರೆದಾಗಲೂ ಕನ್ನಡಕ್ಕೆ ಹೊಸ ಆಯಾಮದ ಕೂಡಿಕೆಯಾಗುತ್ತದೆ ಎಂದು ಅನಿಸುತ್ತಿದೆ. ಈ ಬರಹಗಳ ಹಿನ್ನೆಲೆಯಲ್ಲಿ ಅಮೆರಿಕಕ್ಕೆ ಹೋಗಿಬಂದವರು ಬರೆದ ಅನೇಕ ಪ್ರವಾಸಕಥನಗಳ ಮಿತಿಯೂ ಹೊಳೆಯುತ್ತಿದೆ.'

ರಹಮತ್ ತರಿಕೆರೆ

2. ಕನ್ನಡ ಕಾದಂಬರಿ ಲೋಕದಲ್ಲಿ...ಹೀಗೆ ಹಲವು... (2009)

ಪ್ರಕಾಶನ:

ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.

ಹಾಗೂ

ಅಭಿನವ ಪ್ರಕಾಶನ, ಬೆಂಗಳೂರು.

ಪ್ರಧಾನ ಸಂಪಾದಕರು:

ಎಂ.ಎಸ್. ನಟರಾಜ್.

'ಕಾದಂಬರಿ ಲೋಕದಲ್ಲಿ...' ಬಹಳ ವಿಶಿಷ್ಟವಾದ ಪ್ರಯತ್ನ. ನಾನು 1987ರಿಂದ ನೋಡುತ್ತಿದ್ದೇನೆ. ಅಮೆರಿಕದ ಕನ್ನಡಿಗರು ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ. ಇಂಥ ಪ್ರಯತ್ನವನ್ನು ನೋಡಿದಾಗ... (ಅವರು) ಕನ್ನಡದ ಕ್ಷಿತಿಜವನ್ನು ಹೆಚ್ಚಿಸಿದ್ದಾರೆನಿಸುತ್ತದೆ...

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ

('ಅಭಿನವ'ದ ಶ್ರೀ ರವಿಕುಮಾರ್ ಅವರೊಂದಿಗೆ
ನಡೆಸಿದ ದೂರವಾಣಿ ಸಂಭಾಷಣೆಯಲ್ಲಿ)

ಈ ಪುಸ್ತಕದಲ್ಲಿ ಎದ್ದು ಕಾಣುವ ಒಂದು ವೈಶಿಷ್ಟ್ಯವೆಂದರೆ ಇಲ್ಲಿ ಓದಿಗಾಗಿ ಆಯ್ದುಕೊಂಡ ಎಲ್ಲ ಕಾದಂಬರಿಗಳು... ಕಳೆದ ಮೂರು ದಶಕಗಳಲ್ಲಿ ಪ್ರಕಟವಾದವು. ಇವುಗಳಲ್ಲಿ ಬಹಳಷ್ಟು ಕೃತಿಗಳ ಬಗ್ಗೆ ವಿಶೇಷ ಚರ್ಚೆ ನಡೆದಿಲ್ಲ. ಅಷ್ಟೇ ಮಹತ್ವದ ಇನ್ನೊಂದು ವೈಶಿಷ್ಟ್ಯವೆಂದರೆ ಈ ಪುಸ್ತಕಕ್ಕೆ ಸೇರಿದ ಲೇಖನಗಳನ್ನು ಬರೆದವರಲ್ಲಿ ಹೆಚ್ಚಿನವರು

ಸಾಹಿತ್ಯ ಕ್ಷೇತ್ರಕ್ಕೆ ಹೊರಗಿನವರು... ಸಾಹಿತ್ಯೇತರ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದವರು, ಕನ್ನಡ ಓದುಗರಿಗೆ ಹೊಸಬರು. ಆದರೆ ಚೆನ್ನಾಗಿ ಬರೆಯಬಲ್ಲವರು. ಇವರನ್ನು ಒಳಗೊಳ್ಳುವ ಮೂಲಕ ಪುಸ್ತಕಕ್ಕೆ ತಾಜಾತನ ಹಾಗೂ ವೈವಿಧ್ಯ ಬಂದಿದೆ... ಈ ಪುಸ್ತಕದ ಲೇಖನಗಳಲ್ಲಿ ಹೆಚ್ಚಿನವು ಪರಿಚಯಾತ್ಮಕ ಬರಹಗಳು... ಆದರೆ ಕೃತಿಗಳೊಡನೆ ಇನ್ನೂ ಹೆಚ್ಚು ಗಂಭೀರವಾದ ತೊಡಗಿಕೊಳ್ಳುವಿಕೆಯನ್ನು ತೋರುವ ಹಲವಾರು ಲೇಖನಗಳೂ ಈ ಪುಸ್ತಕದಲ್ಲಿವೆಯೆನ್ನುವುದು ಮಹತ್ವದ್ದಾಗಿದೆ... ಆವರಣದ ವಿಶ್ಲೇಷಣೆ ಭೈರಪ್ಪನವರ ಈ ಕಾದಂಬರಿಯನ್ನು ಕುರಿತು ಬಂದ ಅತ್ಯುತ್ತಮ ಲೇಖನಗಳಲ್ಲೊಂದಾಗಿದೆ...

ಡಾ. ಜಿ.ಎಸ್. ಆಮೂರ (ಮುನ್ನುಡಿಯಲ್ಲಿ)

ಕನ್ನಡ ಸಾಹಿತ್ಯ ರಂಗ... ಕನ್ನಡದ ಕೆಲ ಮುಖ್ಯ ಕಾದಂಬರಿಗಳ ಕುರಿತು ಇಲ್ಲಿ ಅವಲೋಕನ ನಡೆಸಿದೆ. ಒಮ್ಮೆಗೇ ಒಟ್ಟಿಗೇ ತೆರೆದುಕೊಂಡ ಈ ರೀತಿಯ ಕಾದಂಬರೀ ಅವಲೋಕನವೂ ಚರ್ಚೆಯೂ ಕನ್ನಡ ಸಾಹಿತ್ಯದ ಮಟ್ಟಿಗೆ ಪ್ರಾಯಶಃ ಪ್ರಪ್ರಥಮ ಎನ್ನಿಸುತ್ತದೆ... 'ಸಹೃದಯ ವಿಮರ್ಶೆ' ಎಂಬುದಕ್ಕೆ ಈ ಹೊತ್ತಗೆ ಒಂದು ಉತ್ತಮ ಮಾದರಿಯೆನ್ನಬಹುದು. ಇಂಥ ಸಾರ್ಥಕ ಹೊಳವಿಗಾಗಿ ಅಮೆರಿಕದ ಕನ್ನಡ ಸಾಹಿತ್ಯ ರಂಗಕ್ಕೆ, ಅದರ ರೂವಾರಿಗಳಿಗೆ ನಮ್ಮೆಲ್ಲರ ಅಭಿನಂದನೆ ಜೊತೆಗೆ ಕೃತಜ್ಞತೆಯೂ ಸಲ್ಲಲೇ ಬೇಕು.

ವೈದೇಹಿ (ಬೆನ್ನುಡಿಯಲ್ಲಿ)

3. ನಗೆಗನ್ನಡಂ ಗೆಲ್ಗೆ! (2007)

ಪ್ರಕಾಶನ:

ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.
ಹಾಗೂ
ಅಭಿನವ ಪ್ರಕಾಶನ, ಬೆಂಗಳೂರು.

ಸಂಪಾದಕರು:

ಎಚ್.ಕೆ. ನಂಜುಂಡಸ್ವಾಮಿ ಮತ್ತು
ಎಚ್.ವೈ. ರಾಜಗೋಪಾಲ್.

ಬೇರು ಸೂರು

'...ಒಂದು ಸಾಹಿತ್ಯಕ ಚರಿತ್ರೆ ಮತ್ತು ಸಾಹಿತ್ಯದ ಹಾಸ್ಯ ಸಂಕಲನ ಎರಡೂ ಒಂದೆಡೆ ಸೇರಿ ರಮ್ಯಲೋಕವನ್ನು ಪ್ರಕಟಿಸಿಬಿಟ್ಟಿದ್ದೀರಿ...'

ಪ್ರೊ. ಜಿ. ವೆಂಕಟಸುಬ್ಬಯ್ಯ
('ಅಭಿನವ'ದ ಶ್ರೀ ರವಿಕುಮಾರ್ ಅವರಿಗೆ ಬರೆದ ಪತ್ರದಲ್ಲಿ)

'...ಈ ಕೃತಿಯಲ್ಲಿ ನಗೆಗನ್ನಡ ನಲಿದಿದೆ, ವಿಜೃಂಭಿಸಿದೆ. ಕನ್ನಡದ ಹಾಸ್ಯಾಸಕ್ತರೆಲ್ಲರೂ ಅಭಿಮಾನದಿಂದ ತಮ್ಮ ಮೆಚ್ಚಿನ ಹಿರಿಕಿರಿಯ ಹಾಸ್ಯಸಾಹಿತಿಗಳನ್ನು ಓದಿ, ಅವರ ಕುರಿತು ಪ್ರಬುದ್ಧ ಪರಿಚಯವನ್ನು ಮಾಡಿಕೊಂಡು ಕೃತಾರ್ಥಭಾವ ತಾಳುವಂತೆ ಪುಸ್ತಕ ಹೊರಬಂದಿದೆ... ಹೊರನಾಡ ಬಂಧುಗಳ ಕನ್ನಡ ಪ್ರೇಮ ಅನುಕರಣೀಯವಾದುದು...'

ಭುವನೇಶ್ವರಿ ಹೆಗಡೆ

(ವಾರ್ತಾ ಭಾರತಿ ಪತ್ರಿಕೆಯ ಅಂಕಣದಲ್ಲಿ)

4. ಆಚೀಚೆಯ ಕಥೆಗಳು (2005)

ಪ್ರಕಾಶನ:

ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.
ಹಾಗೂ
ಅಭಿನವ ಪ್ರಕಾಶನ, ಬೆಂಗಳೂರು.

ಪ್ರಧಾನ ಸಂಪಾದಕರು:

ಗುರುಪ್ರಸಾದ್ ಕಾಗಿನೆಲೆ

'ಆಚೀಚೆಯ ಕಥೆಗಳು' ಕನ್ನಡದಲ್ಲಿ ನಡೆದ ಇತ್ತೀಚಿನ ಆಕರ್ಷಕ ಪ್ರಯೋಗವಾಗಿದೆ. ತಾಯಿನೆಲದಿಂದ ದೂರವಾದ– ಕನ್ನಡದ ಜೀವಂತ ಸಂಪರ್ಕ ಅಸಾಧ್ಯವಾದ– ಜಾಗದಲ್ಲಿ ಕುಳಿತು ಕೇವಲ ತಮ್ಮ ಮಾತೃಭಾಷೆಯ ಪ್ರೀತಿಗಾಗಿ, 'ಎಂದೆಂದಿಗೂ ಕನ್ನಡವಾಗಿರುವ' ಹಠದಲ್ಲಿ ರಚಿಸಿದ ಈ ಕತೆಗಳು ಕನ್ನಡ ಕಥಾಸಾಹಿತ್ಯಕ್ಕೆ ಕಡಲಾಚೆಯ ಕನ್ನಡಿಗರಿತ್ತ ಅಪೂರ್ವ ಕೊಡುಗೆಯಾಗಿವೆ...'

ಯಶವಂತ ಚಿತ್ತಾಲ (ಬೆನ್ನುಡಿಯಿಂದ)

ಬೇರು ಸೂರು

5. ಕುವೆಂಪು ಸಾಹಿತ್ಯ ಸಮೀಕ್ಷೆ (2004)

ಪ್ರಕಾಶನ:

ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.

ಹಾಗೂ

ವಸಂತ ಪ್ರಕಾಶನ, ಬೆಂಗಳೂರು.

ಪ್ರಧಾನ ಸಂಪಾದಕರು:

ಆಹಿತಾನಲ

'...ಅನಿವಾಸಿ ಕನ್ನಡಿಗರ ಈ ಕೊಡುಗೆ ಕುವೆಂಪು ಅವರಿಗೆ ಅರ್ಪಿಸುವ ಒಂದು ದೊಡ್ಡ ನಮನ. ಕರ್ನಾಟಕದ ಸಮಕಾಲೀನ ಲೇಖಕರ ಮಟ್ಟಕ್ಕೇನೂ ಕಮ್ಮಿಯಿಲ್ಲದ ಲೇಖನಗಳು ಇಲ್ಲಿ ಹೊರಬಂದಿವೆ ಎನ್ನಲು ಹೆಮ್ಮೆಯಾಗುತ್ತದೆ.'

ಪ್ರಭುಶಂಕರ



ಇಲ್ಲಿನ ಲೇಖಕರಿಗೆ ಅಮೆರಿಕ ಕಾಣಿಸುವ ವಿಸ್ಮಯಗಳು ಹಲವು.... ಎಲ್ಲವೂ ಹೊಸನೆಲದಲ್ಲಿ ಹೊಸದಾಗಿಯೇ ಕಾಣಿಸುತ್ತದೆ. ಇದು ಎಲ್ಲಿದ್ದರೂ ಆಗುವ ಅನುಭವವೂ ಅಲ್ಲವೇ? ಎಲ್ಲಿದ್ದರೂ ಕಾಲದ ಪ್ರವಾಹದಲ್ಲಿ ನಮಗೊದಗುವ ಈ ಬೆರಗುಗಳು ಬದುಕು ಮೂಡಿಸುವ ಬೆರಗಲ್ಲವೇ? ಅಮೆರಿಕ ಕಾಣಿಸಿದ ಬೆರಗು ಮಾತ್ರವೇ? ಈ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳುವುದು ಸಾಧುವೇ ಆದರೂ, ಇಲ್ಲಿ ಜೀವಿಸಿರುವುದರಿಂದ ಮಾತ್ರ ನಮಗೆ ಇದನ್ನು ಬರೆಯಲು ಸಾಧ್ಯವಾಗಿದೆ. ಬೆರಗು ದೈನಿಕವಾಗುವ ರೂಪಾಂತರ ಕ್ರಿಯೆ ಅಮೆರಿಕ ನಮ್ಮೆಲ್ಲರಿಗೆ ಕಲಿಸುವ ದೊಡ್ಡ ಪಾಠ. ಸೂಕ್ಷ್ಮವಾಗಿ ಗಮನಿಸಿದಲ್ಲಿ ಇಲ್ಲಿನ ಬಹುತೇಕ ಲೇಖನಗಳಲ್ಲಿ ಈ ಕ್ರಿಯೆ ಪಕ್ಕಾಗಿ ಹಾಸುಹೊಕ್ಕಿರುವುದು ಕಾಣುತ್ತದೆ.

...ಕಾಲಾನುಕ್ರಮಣಿಕೆಯಲ್ಲಿ ಈ ಲೇಖನಗಳನ್ನು ಓದಿಕೊಂಡು ಬಂದಲ್ಲಿ ವಲಸೆಗಾರರಿಗೆ 'ಕನ್ನಡ' ಎಂಬುದು ಭಾಷೆಯಿಂದ ಪ್ರಜ್ಞೆಯಾಗುವುದು, ವೈಯಕ್ತಿಕ ನೆಲೆಯಿಂದ ಸಾಂಘಿಕವಾಗುವುದು, ಆ ದೆಸೆಯಿಂದ ಭೌಗೋಳಿಕ ಗೆರೆಗಳನ್ನು ಅಳಿಸಿ ನಿಜವಾದ 'ಡಯಸ್ಪೊರ'ವಾಗುವತ್ತ ಹೆಜ್ಜೆ ಹಾಕಿರುವುದನ್ನೂ ನಾವು ಕಾಣಬಹುದು. ಕನ್ನಡ ಡಯಸ್ಪೊರ ಬೆಳೆದಿರುವ ಈ ಮುಖ್ಯ ಕಾಲಘಟ್ಟದಲ್ಲಿ ವಲಸಿಗರು ಅಮೆರಿಕ ಎಂಬ ನಾಡಿನಲ್ಲಿ ಕನ್ನಡ ಎಂಬ ಪ್ರಜ್ಞೆಯನ್ನು ಬೆಳೆಸಿದ ಬಗೆ ಮುಂದೊಂದು ದಿನ ಆಸಕ್ತರಿಗೆ ಅಧ್ಯಯನಕ್ಕೆ ವಸ್ತುವೂ ಆಗಬಹುದು. ಅಂತೆಯೇ, ಈ ಅನುಭವ ಕಥನಗಳು ಕನ್ನಡಿಗರ ಲೇಖನಿಯಿಂದ ಬಂದ ಮಾತ್ರಕ್ಕೆ ಕನ್ನಡಿಗರಿಗೇ ಅನನ್ಯವಾಗಿರಬೇಕಾದ್ದಿಲ್ಲ. ಭಾರತದ ಯಾವುದೇ ವಲಸಿಗರಿಗೆ ಆಗಬಹುದಾದ, ಆಗಿರಬಹುದಾದ ಭಾವ-ಚಿಂತನ-ಸ್ಫುರಣಗಳಿಗೆ ಇಲ್ಲಿ ಅಕ್ಷರರೂಪ ಒದಗಿದೆಯಷ್ಟೇ.

...ಎಲ್ಲ ಸೇರಿ ಒಂದು ಕಾಲಘಟ್ಟದ ಕೊಲ್ಯಾಜನ್ನು ಕೊಟ್ಟಿದ್ದರೆ, ಆ ಮಟ್ಟದಲ್ಲಿ ಓದುಗರನ್ನು ಈ ಲೇಖನಗಳು ಮುಟ್ಟಿದ್ದರೆ, ನಮ್ಮ ಪ್ರಯತ್ನ ಸಾರ್ಥಕ.

ವಸಂತ ಪ್ರಕಾಶನ
ನಂ. 360, 10ನೇ 'ಬಿ'ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು - 560 011
ದೂರವಾಣಿ: 22443996
email: vasantha_prakashana@rediffmail.com

ಪ್ರಬಂಧಗಳು / Essays
ISBN 93-83052-15-5
ಬೆಲೆ : ₹ 380